–ಶ್ರೀಧರಃ ವಿಶ್ವನಾಥಃ ಶುಕದೇವಃ ವಲ್ಲಭಃ

ವಃ ಪಾಂಡವಾನಾಂ ಮಂತ್ರಕೃದ್ ದೌತ್ಯಕರ್ತಾ ಅಖಿಲೇಶ್ವರಃ ಯಮಃ ತದಂಶಭೂತೋ ಭಗವಾನ್ ವಿದುರಃ ಪೌರವೇಂದ್ರೋ ಧೃತರಾಷ್ಟ್ರಸ್ತಸ್ಯ ಪುರಂ ಹಿತ್ವಾ ತ್ಯಕ್ತ್ವಾ ಯದ್ವಾ ಯದಾ ವಾ ಪ್ರವಿವೇಶ ವನಮಿತಿ ಶೇಷಃ ತದಾ ಋದ್ಧಿಮತ್ ಸಂಪನ್ನಂ ಸ್ವಗೃಹಂ ತ್ಯಕ್ತ್ವಾ ವನಂ ಪ್ರವಿಷ್ಟೇನ । –ವೀರರಾಘವಃ

ಎಂದರ್ಥ. ಅಖಿಲೇಶ್ವರನಾದ ಭಗವಾನ್ ಯಮನೆ ವಿದುರನಾಗಿ ಜನಿಸಿ ಪಾಂಡವರಿಗೆ ದೂತನಾದ. ಅವನು ಯಾವಾಗ ಧೃತರಾಷ್ಟ್ರನ ಪುರವನ್ನು ತೊರೆದು ಕಾಡಿಗೆ ಹೋದನೋ ಆಗ ಅವನು ಮೈತ್ರೇಯರನ್ನು ಕಂಡ' ಎಂದು ವ್ಯಾಖ್ಯಾನ. ಆದರೆ ಶ್ರೀಧರವ್ಯಾಖ್ಯಾನದಲ್ಲಿ 'ವೈ' ಪ್ರಸಿದ್ಧ, ಎಂದು ವಿದುರನ ಮನೆ ಪ್ರಸಿದ್ಧವೆನ್ನಲು ಕಾರಣವಿಲ್ಲ. ಶ್ರೀಕೃಷ್ಣ ಅಲ್ಲಿಗೆ ಹೋದ ಮೇಲೆ ಅದು ಪ್ರಸಿದ್ಧವಾಗಬಹುದು. 'ವಿದುರನ ಮನೆ ತನ್ನ ಮನೆಯೇ ಎಂದು ಅಭಿಮಾನಪಟ್ಟು ಕೃಷ್ಣ ಪ್ರವೇಶಿಸಿದ ಬಳಿಕ ಪವಿತ್ರವಾದ ಆ ಮನೆಯನ್ನು ವಿದುರ ತೊರೆದನೆಂದರೆ ಔಚಿತ್ಯವೂ ಕಾಣುವುದಿಲ್ಲ. ವೀರರಾಘವ ವ್ಯಾಖ್ಯಾನದಲ್ಲಿಯೂ ಯಮನನ್ನು 'ಅಖಿಲೇಶ್ವರಃ' ಎಂದಿದ್ದು ಕೂಡುವುದಿಲ್ಲ. 'ಹಿತ್ವಾ ತ್ಯಕ್ತ್ವಾ' ಎನ್ನುವುದೂ, 'ಯದಾ ವನಂ ಪ್ರವಿವೇಶ ತದಾ ವನಂ ಪ್ರವಿಷ್ಟೇನ' ಎನ್ನುವುದೂ ವ್ಯರ್ಥ ಪುನರುಕ್ತಿ. ಪಾಠ ಅಶುದ್ಧ, ವ್ಯಾಖ್ಯಾನವೂ ಹಿತವಾಗಿಲ್ಲ.

'ಯದಾ ತ್ವಯಂ' ಎಂಬ ನಮ್ಮ ಪಾಠದಲ್ಲಿಯೂ ಶ್ರೀಕೃಷ್ಣ ಉಪಪ್ಲಾವ್ಯಕ್ಕೆ ಹೋದಾಗ ವಿದುರ ಕಾಡಿಗೆ ಹೋದನೆನ್ನುವುದು ಕೂಡುವುದಿಲ್ಲ. ಏಕೆಂದರೆ, ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ವಿದುರ ಕಾಡಿಗೆ ಹೋದನೆಂದರೆ ಯುದ್ಧಕಾಲದಲ್ಲಿ ಅವನಿರಲಿಲ್ಲ ಎಂದಂತಾಯಿತು. ಹಾಗಾದರೆ,

'ತತ್ರಾಸೀನಂ ಕುರುಪತಿಂ ಧೃತರಾಷ್ಟ್ರಂ ಸಹಾನುಜಮ್'

'ಯುದ್ಧಕಾಲದಲ್ಲಿ ಧೃತರಾಷ್ಟ್ರನನ್ನು ಸಂತೈಸಲು ಬಳಿಯಲ್ಲಿ ವಿದುರನಿದ್ದ' ಎಂದು ಹೇಳಿದುದು, ಮತ್ತು

ಆರುರೋಹ ರಥಂ ಕೈಶ್ಚಿತ್ ಪರಿಷ್ವಕ್ತೋಽಭಿವಂದಿತಃ ।
ಸುಭದ್ರಾ ದ್ರೌಪದೀ ಕುಂತೀ ವಿದುರೋಽಥ ಯುಧಿಷ್ಠಿರಃ ॥

ಎಂದು ಯುಧಿಷ್ಠಿರನ ಪಟ್ಟಾಭಿಷೇಕ ಮುಗಿಸಿ ದ್ವಾರಕೆಗೆ ಹೊರಟು ನಿಂತ ಶ್ರೀಕೃಷ್ಣನನ್ನು ಬೀಳ್ಕೊಟ್ಟವರಲ್ಲಿ ವಿದುರನೂ ಒಬ್ಬನಾಗಿದ್ದುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಸಮಾಧಾನ–

ಹರಿಃ ಓಂ ।

ಯುದ್ಧಕಾಲೇ ತು ವಿದುರಸ್ತೀರ್ಥಯಾತ್ರಾಂ ಗತೋಽಪಿ ಸನ್ ।
ಪ್ರಾಯ ಆಸ್ತೆ ಗಜಪುರೇ ಪಾಂಡವಾನಾಂ ವ್ಯಪೇಕ್ಷಯಾ ॥

ಇತಿ ಸ್ಕಾಂದೇ ।

'ಯುದ್ಧಕಾಲದಲ್ಲಿ ವಿದುರ ತೀರ್ಥಯಾತ್ರೆಗೆ ಹೊರಟು ಹೋಗಿದ್ದರೂ ಹಸ್ತಿನಾವತಿಯ ಸಮೀಪದಲ್ಲಿಯೆ ಸಂಚರಿಸುತ್ತಿದ್ದ. ಏಕೆಂದರೆ ಪಾಂಡವರ ಅಪೇಕ್ಷೆ ಹಾಗೇ ಇದ್ದಿತು,

ವಿದುರನಿಗೂ ಅವರ ವಿಜಯವನ್ನು ತಿಳಿಯುವ ಕುತೂಹಲವಿದ್ದಿತು' –ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಅದರಿಂದ ಯುದ್ಧಕಾಲದಲ್ಲಿ ಧೃತರಾಷ್ಟ್ರನ ಸಾಂತ್ವನಕ್ಕಾಗಿ ಆಗಾಗ ವಿದುರ ಬರುತ್ತಿದ್ದ. ಮತ್ತು ಯುಧಿಷ್ಠಿರನ ಪಟ್ಟಾಭಿಷೇಕಕಾಲದಲ್ಲಿಯೂ ಬಂದಿದ್ದ. ಅದರಿಂದ ಯುದ್ಧಪ್ರಾರಂಭಕ್ಕೆ ಮೊದಲೇ ಅವನು ತೀರ್ಥಯಾತ್ರೆಗೆಂದು ಹೊರಟು ಹೋಗಿದ್ದರೂ ಅನುಪಪತ್ತಿ ಏನೂ ಇಲ್ಲ

* * *

ವಿದುರ ತೀರ್ಥಯಾತ್ರೆಗೆ ಹೊರಡಲು ಕಾರಣವೇನಿತ್ತು? ಎಂದರೆ ಅದನ್ನು ಹೇಳುತ್ತಾರೆ–

ಶ್ರೀಶುಕ ಉವಾಚ-

ಯದಾ ತು ರಾಜಾ ಸ್ವಸುತಾನಸಾಧೂನ್
ಪುಷ್ಣನ್ನಧರ್ಮೇಣ ವಿನಷ್ಟದೃಷ್ಟಿಃ ।
ಭ್ರಾತುರ್ಯವಿಷ್ಠಸ್ಯ ಸುತಾನ್ ವಿಬಂಧೂನ್
ಪ್ರವೇಶ್ಯ ಲಾಕ್ಷಾಭವನೇ ದದಾಹ ॥ ೬ ॥

ಯದಾ ಸಭಾಯಾಂ ಕುರುದೇವದೇವ್ಯಾಃ
ಕೇಶಾಭಿಮರ್ಶಂ ಸುತಕರ್ಮ ಗರ್ಹ್ಯಮ್ ।
ನ ವಾರಯಾಮಾಸ ನೃಪಃ ಸ್ನುಷಾಯಾ
ಆಸ್ರೈರ್ಹರಂತ್ಯಾಃ ಕುಚಕುಂಕುಮಾನಿ ॥ ೭ ॥

ಶ್ರೀಶುಕಮುನಿ ನುಡಿದರು–
ಅನ್ಯಾಯಮಾರ್ಗದಲ್ಲಿ ನಡೆಯುವ ತನ್ನ ಮಕ್ಕಳಿಗೆ ಧೃತರಾಷ್ಟ್ರ ಪ್ರೋತ್ಸಾಹವನ್ನೆ ಕೊಟ್ಟ. ತಂದೆ ಇಲ್ಲದ ತನ್ನ ತಮ್ಮನ ಮಕ್ಕಳೇ ಆದ ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಿಸಲೂ ಯತ್ನಿಸಿದ. ಪಟ್ಟಾಭಿಷಿಕ್ತ ಮಹಿಷಿಯಾದ ತನ್ನ ಸೊಸೆಯಾದ ದ್ರೌಪದಿಯ ಕೇಶಪಾಶವನ್ನು ದುಃಶಾಸನ ಸೆಳೆದಾಗ ಅವಳ ಕಣ್ಣೀರು ಎದೆಯ ಮೇಲಿನ ಕುಂಕುಮವನ್ನು ತೊಳೆದಿತ್ತು. ಇಂಥ ನೀಚಕಾರ್ಯಗಳನ್ನು ಮಕ್ಕಳು ಮಾಡುತ್ತಿದ್ದರೂ ಧೃತರಾಷ್ಟ್ರ ಸುಮ್ಮನಿದ್ದ, ತಡೆಯಲಿಲ್ಲ. ಅವನ ಒಳಗಿನ ಕಣ್ಣೂ ಕುರುಡಾಗಿತ್ತು. ಅದರಿಂದ ವಿದುರ ಬೇಸತ್ತು ತೀರ್ಥಯಾತ್ರೆ ಕೈಗೊಂಡ.

ಇಲ್ಲಿ 'ಯದಾ' ಎಂಬ ಶಬ್ದ ಅನನ್ವಿತವಾದಂತೆ ಕಾಣುತ್ತದೆ. ಪಾಂಡವರನ್ನು ಯಾವಾಗ ಅರಗಿನ ಮನೆಯಲ್ಲಿ ಸುಡಿಸಿದನೋ, ಆಗಲೆ ದ್ರೌಪದಿಯ ಕೇಶಪಾಶವನ್ನು

ದುಃಶಾಸನ ಸೆಳೆದ. ಆಗಲೆ ಶ್ರೀಕೃಷ್ಣನ ಸಂಧಾನ ಮುರಿಯಿತು ಆಗಲೆ ವಿದುರ ಬಂದು ಬುದ್ಧಿ ಹೇಳಿದ. ಆಗಲೆ ಅವನನ್ನು ಕೌರವರು ದಾಸೀಪುತ್ರನೆಂದು ಅವಮಾನಿಸಿದರು ಆಗಲೆ ಅವನು ತೀರ್ಥಯಾತ್ರೆಗೆ ಹೊರಟ ಎಂದು 'ಯದಾ ತದಾ' ಶಬ್ದಗಳನ್ನು ಅನ್ವಯಿಸುವುದು ಅಸಂಗತವಾಗುವುದು. ಅದರಿಂದ 'ಯದಾ' ಎಂದರೆ 'ಯಾವಾಗ' ಎಂದರ್ಥವಲ್ಲ, 'ಯಾವ ಕಾರಣದಿಂದ' ಎಂದರ್ಥ.

ಯದಾ ದದಾಹ ತದಾ ಕೇಶಾಭಿಮರ್ಶಃ ಪ್ರಾಪ್ತ ಇತಿ ಯದಾಶಬ್ದೋ ಹೇತ್ವರ್ಥಃ ।'

ಯದಾ ಶಬ್ದಕ್ಕೆ ಇಲ್ಲಿ ಕಾಲಾರ್ಥತ್ವವಿಟ್ಟುಕೊಂಡರೆ ಯಾವಾಗ ಸುಡಿಸಿದನೊ ಆಗಲೆ ಕೇಶಪಾಶವನ್ನು ಸೆಳೆದುದು ಮುಂತಾದ ಎಲ್ಲ ಅನರ್ಥಗಳೂ ನಡೆದು ಹೋದುವೆಂದಾದೀತು. ಅದರಿಂದ ಇಲ್ಲಿ ಯದಾಶಬ್ದ ಹೇತ್ವರ್ಥಕ. ಸುಡಿಸಿದ್ದರಿಂದ, ಎಂದರ್ಥ.

ಸುಡಿಸಿದ್ದರಿಂದ, ಕೇಶಪಾಶವನ್ನು ಸೆಳೆವಾಗ ತಡೆಯದಿದ್ದುದರಿಂದ ಎಂದು ಮುಂತಾಗಿ ವಿದುರನ ತೀರ್ಥಯಾತ್ರೆಗೆ ಕಾರಣವಾದ ಅಂಶಗಳನ್ನು ಒಂದೊಂದಾಗಿ ಭಾಗವತವು ಹೇಳುತ್ತಿದೆ ಹೊರತು ಶ್ರೀಧರ ಮುಂತಾದ ವ್ಯಾಖ್ಯಾನಕಾರರೆಲ್ಲರೂ ಹೇಳುವಂತೆ ತೀರ್ಥಯಾತ್ರೆಯ ಕಾಲವನ್ನು ಹೇಳುತ್ತಿಲ್ಲ. ಇಲ್ಲಿಯೇ ಮುಂದೆ,

ನ ಯಾಚಿತೋಽದಾತ್ ಸಮಯೇನ ದಾಯಂ
ತಮೋ ಜುಷಾಣೋ ಯದಜಾತಶತ್ರೋಃ ।

ಜೂಜಿನ ಕಪಟದಿಂದ ಅಪಹರಿಸಿದ ರಾಜ್ಯವನ್ನು ಧರ್ಮರಾಜ ತಿರುಗಿ ಕೊಡೆಂದು ಬೇಡಿದರೂ 'ಯತ್ ನಾದಾತ್' 'ಕೊಡದಿದ್ದುದರಿಂದ' ವಿದುರ ಬೇಸತ್ತು ತೀರ್ಥಯಾತ್ರೆಗೆ ಹೊರಟನೆಂದು ಹೇಳಿದೆ. ಅದನ್ನೂ ಈ ವ್ಯಾಖ್ಯಾನಕಾರರು [೧]'ಯಾವಾಗ ಕೊಡಲಿಲ್ಲವೋ ಆಗ ವಿದುರ ತೀರ್ಥಯಾತ್ರೆಗೆ ಹೊರಟ' ಎಂದು ಬಲಾತ್ಕಾರವಾಗಿ ಅರ್ಥೈಸಿದ್ದಾರೆ. ಆದರೆ ಯದಾಶಬ್ದಕ್ಕೆ ಹೇತ್ವರ್ಥಕತ್ವ ಬಲಾತ್ಕಾರದಿಂದಲ್ಲ, ಕೋಶದಿಂದಲೇ ಅದು ಸಿದ್ಧವಾಗಿದೆ-

ಯದಾತದೇತಿ ಹೇತ್ವರ್ಥೇ ಕಾಲಾರ್ಥೇ ಚಾಪಿ ಭಣ್ಯತೇ ।
ಇತ್ಯಭಿಧಾನೇ ।

ಯದಾ ತದಾ ಶಬ್ದಗಳು ಹೇತ್ವರ್ಥದಲ್ಲಿಯೂ ಇವೆ, ಕಾಲಾರ್ಥದಲ್ಲಿಯೂ ಇವೆ ಎಂದು ಅಭಿಧಾನ ಎಂಬ ಕೋಶದಲ್ಲಿ ಹೇಳಿದೆ.

---

೧. ಯದ್ಯದಾ ನಾದಾನ್ನ ದದೌ ತದಾಯಾದಿತ್ಯರ್ಥಃ - ವೀರರಾಘವಃ

[೧]'ಸಂಪತ್ಸಮೃದ್ಧವಾಗಿದ್ದು ಬಿಡಲಾಗದಂತಿದ್ದ ಮನೆಯನ್ನು ವಿದುರ ಏಕೆ ಬಿಟ್ಟನೆಂದರೆ ಅದಕ್ಕೆ ಕೌರವರು ಮಾಡಿದ ಅಪರಾಧಗಳೇ ಕಾರಣ ಎಂದು 'ಯದಾ ತು ರಾಜಾ' ಎಂದು ಮುಂತಾಗಿ ಹನ್ನೊಂದು ಶ್ಲೋಕಗಳಲ್ಲಿ ಹೇಳುತ್ತಾರೆ' ಎಂದು ಶ್ರೀಧರಾದಿ ವ್ಯಾಖ್ಯಾನಗಳಲ್ಲಿ ಹೇಳಿದ್ದರಿಂದ ಹೇತ್ವರ್ಥವಿವಕ್ಷೆ ಅವರಿಗೂ ಬೇಕು. ಅದನ್ನೆ 'ಯದಾ' ಶಬ್ದದ ವಾಚ್ಯಾರ್ಥವೆಂದೇಕೆ ಇಟ್ಟುಕೊಂಡಿಲ್ಲ ಎನ್ನುವುದು ಅವರ ವ್ಯಾಖ್ಯಾನದಲ್ಲಿ ಕಂಡು ಬರುವ ಅನುಪಪತ್ತಿ.

* * *

ವಿದುರ ತೀರ್ಥಯಾತ್ರೆ ಮಾಡುತ್ತಿದ್ದಾಗ ಇತ್ತ ಧರ್ಮರಾಜ ರಾಜ್ಯಭಾರ ಮಾಡುತ್ತಿದ್ದ. ಆಗಲೆ ಯದುಕುಲ ವಿನಾಶ ಶಾಪದ ಸುದ್ದಿ ವಿದುರನಿಗೆ ಯಾತ್ರಿಕರ ಮುಖದಿಂದ ತಿಳಿದು ಬಂದಿತು.

ಇತ್ಥಂ ವ್ರಜನ್ ಭಾರತಮೇವ ವರ್ಷಂ
ಕಾಲೇನ ಯಾವದ್ ಗತವಾನ್ ಪ್ರಭಾಸಮ್ ।
ತಾವಚ್ಛಶಾಸ ಕ್ಷಿತಿಮೇಕಚಕ್ರಾಂ
ಏಕಾತಪತ್ರಾಮಜಿತೇನ ಪಾರ್ಥಃ ॥ ೨೦ ॥

ತತ್ರಾಥ ಶುಶ್ರಾವ ಸುಹೃದ್ವಿನಷ್ಟಿಂ
ವನಂ ಯಥಾ ವೇಣುಜವಹ್ನಿನಾಽಽಶ್ರಯಮ್ ।
ಸಂಸ್ಪರ್ಧಯಾ ದಗ್ಧಮಥಾನುಶೋಚನ್
ಸರಸ್ವತೀಂ ಪ್ರತ್ಯಗಿಯಾಯ ತೂಷ್ಣೀಮ್ ॥ ೨೧ ॥

ವಿದುರ ಹೀಗೇ ಭಾರತವರ್ಷದಲ್ಲಿ ಸಂಚರಿಸುತ್ತ ಪ್ರಭಾಸಕ್ಷೇತ್ರಕ್ಕೆ ಬಂದಿದ್ದಾಗ ಧರ್ಮರಾಜ ಶ್ರೀಕೃಷ್ಣನ ಸಹಾಯದಿಂದ ಏಕಛತ್ರಾಧಿಪತಿಯಾಗಿ ಭೂಮಿಯನ್ನಾಳುತ್ತಿದ್ದ. ಆಗಲೆ ವಿದುರನಿಗೆ ಒಂದು ಸುದ್ದಿ ತಿಳಿದು ಬಂದಿತು, ಬಿದಿರುಗಳ ಘರ್ಷಣೆಯಿಂದ ಉಂಟಾಗುವ ಬೆಂಕಿಯಲ್ಲಿ ಕಾಡು ಸುಟ್ಟುಹೋಗುವಂತೆ ಯಾದವರ ಅಂತಃಕಲಹದಿಂದ ಯದುಕುಲ ಪೂರ್ತಿ ನಾಶವಾಗಲಿದೆ, ಹಾಗೆ ಮುನಿಶಾಪವಿದೆ ಎಂದು. ಅದರಿಂದ ನೊಂದ ವಿದುರ ಪಶ್ಚಿಮವಾಹಿನಿಯಾದ ಸರಸ್ವತೀನದೀತೀರಕ್ಕೆ ನಡೆದ.

---

೧. ತ್ಯಾಗಾನರ್ಹಸ್ಯಾಪಿ ಗೃಹಸ್ಯ ತ್ಯಾಗೇ ಹೇತುತ್ವೇನ ಕೌರವಾಪರಾಧಾನಾಹ ಯದೇತ್ಯೇಕಾದಶಭಿಃ । —ಶ್ರೀಧರಃ

ಇಲ್ಲಿ 'ಸುಹೃದ್‌ವಿನಷ್ಟಿಂ ಶುಶ್ರಾವ' 'ಬಂಧುಮಿತ್ರರ ನಾಶದ ಸುದ್ದಿಯನ್ನು ಕೇಳಿದ' ಎಂದು ಮಾತ್ರ ಹೇಳಿದೆ. ಯಾರು ಆ ಬಂಧುಮಿತ್ರರು? 'ಕೌರವರು' ಎನ್ನುತ್ತವೆ ಶ್ರೀಧರ, ವೀರರಾಘವ, ವಲ್ಲಭಾಚಾರ್ಯ, ಶುಕದೇವ ಮುಂತಾದವರ ವ್ಯಾಖ್ಯಾನಗಳು. ಇದು ಸರಿಯಲ್ಲ, ಕೌರವರಲ್ಲಿ ವಿದುರನಿಗೆ ಬಂಧುಮಿತ್ರರೆಂಬ ಸೌಹಾರ್ದಭಾವನೆ ಇಲ್ಲ, ಅವರ ನಾಶವನ್ನು ಕೇಳಿ ನೊಂದುಕೊಳ್ಳುವವನೂ ಅವನಲ್ಲ. ಮತ್ತು ಯುದ್ಧಕಾಲದಲ್ಲಿ ಆಗಾಗ ಹಸ್ತಿನಾವತಿಗೆ ಬಂದು ಕೌರವರ ವಿನಾಶವನ್ನು ಅವನೆ ಸ್ವತಃ ತಿಳಿದಿದ್ದಾನೆ. ಮುಂದೆ ವಿದುರ ಯಮುನಾ ನದೀತೀರಕ್ಕೆ ಬಂದಾಗ ಉದ್ಧವನ ಮುಖದಿಂದ ಯಾದವರ ವಿನಾಶವಾರ್ತೆ ಕೇಳಿದುದಾಗಿ ಇಲ್ಲಿಯೆ ಮುಂದೆ ಭಾಗವತ ವರ್ಣಿಸುತ್ತದೆ. ಅದರಿಂದ ಬಂಧುಮಿತ್ರರೆಂದರೆ ಇಲ್ಲಿ ಯಾದವರೆಂದೇ ಇಟ್ಟುಕೊಳ್ಳಬೇಕು ಎಂದು ಜೀವಗೋಸ್ವಾಮಿ ವ್ಯಾಖ್ಯಾನ ವಿಶ್ವನಾಥಚಕ್ರವರ್ತಿ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ಇದೂ ಕೂಡುವುದಿಲ್ಲ. ವಿದುರ ಪ್ರಭಾಸಕ್ಕೆ ಬಂದಾಗ ಶ್ರೀಕೃಷ್ಣನ ಸಹಾಯದಿಂದ ಧರ್ಮರಾಜ ರಾಜ್ಯಭಾರ ಮಾಡುತ್ತಿದ್ದನೆಂದು ಸ್ಪಷ್ಟವಾಗಿ ಭಾಗವತ ಹೇಳುತ್ತಿದೆ. ಯಾದವರ ವಿನಾಶ ಆಗ ಆಗಿರಲು ಶಕ್ಯವಿಲ್ಲ. ಅದರಿಂದ ವಿದುರ ಪ್ರಭಾಸದಲ್ಲಿ ಕೇಳಿದ ವಾರ್ತೆ ಯಾದವರು ನಾಶ ಹೊಂದಿದರೆಂದಲ್ಲ, ಹೊಂದಲಿದ್ದಾರೆ, ಹಾಗೆ ಮುನಿಶಾಪವಿದೆ ಎಂದು.

ಹೀಗೆ ಹೇಳಿದಾಗಲೂ ಮುಂದೆ ಯಮುನಾತೀರದಲ್ಲಿ ವಿದುರ ಉದ್ಧವನಿಂದ ಈ ವಾರ್ತೆಯನ್ನು ಕೇಳಿದುದಾಗಿ ಭಾಗವತ ಹೇಳುವುದು ಸರಿಹೊಂದುವುದಿಲ್ಲ. ಅದಕ್ಕೆ ಹೀಗೆ ಹೇಳಬೇಕು, 'ಪ್ರಭಾಸದಲ್ಲಿ ವಿದುರ ಯದುಕುಲನಾಶವಾಗುವುದೆಂಬ ಶಾಪದ ಬಗ್ಗೆ ಸಂಕ್ಷೇಪವಾಗಿ ಯಾತ್ರಿಕರ ಮುಖದಿಂದ ಕೇಳಿದ್ದಾನೆ. ಹೆಚ್ಚಿನ ವಿವರಗಳನ್ನು ಯಮುನಾತೀರದಲ್ಲಿ ಉದ್ಧವನಿಂದ ಕೇಳಿ ತಿಳಿದಿದ್ದಾನೆ' ಎಂದು. ಮಹಾಭಾರತಕ್ಕೆ ಇದು ಅನುಗುಣವಾಗುತ್ತದೆ. ಇಲ್ಲದಿದ್ದರೆ, ವಿದುರ ಪ್ರಭಾಸಕ್ಕೆ ಬಂದಾಗಲೆ ಅತ್ತ ಯದುಕುಲ ನಾಶವಾಗಿಹೋಗಿತ್ತೆಂದು ಗ್ರಹಿಸಿದರೆ ಮಹಾಭಾರತವಿರೋಧ ಸ್ಪಷ್ಟ, ಸ್ಕಾಂದಪುರಾಣದ ವಿರೋಧವೂ ಬರುತ್ತದೆ.

ಸುಹೃದ್ವಿನಷ್ಟಿಂ ಯದುಕುಲವಿನಷ್ಟಿಮೇಷ್ಯಾಂ ।

ವಿದುರಸ್ತು ಪ್ರಭಾಸಸ್ಥಃ ಶಾಪಂ ಸಂಕ್ಷೇಪತೋಽಶೃಣೋತ್ ।
ಯದೂನಾಂ ವಿಸ್ತರಾತ್ ಪಶ್ಚಾದುದ್ಧವಾದ್ಯಮುನಾಮನು ॥

ಇತಿ ಸ್ಕಾಂದೇ । ಭಾರತವಿರೋಧಾಚ್ಚಾನ್ಯಥಾ ॥

'ಮಿತ್ರರ ನಾಶವನ್ನು' ಎಂದರೆ 'ಮುಂದೆ ಆಗಲಿರುವ ಯದುಕುಲದವರ ನಾಶದ ಶಾಪವನ್ನು' ವಿದುರ ಕೇಳಿತಿಳಿದನೆಂದರ್ಥ.

'ವಿದುರ ಪ್ರಭಾಸದಲ್ಲಿದ್ದಾಗ ಯಾದವರಿಗೆ ತಗುಲಿದ ಮುನಿಶಾಪವನ್ನು ಸಂಕ್ಷೇಪವಾಗಿ ಕೇಳಿತಿಳಿದ. ಬಳಿಕ ಯಮುನಾತೀರದಲ್ಲಿ ಉದ್ಧವನಿಂದ ಅದರ ವಿವರವನ್ನು ಕೇಳಿ ತಿಳಿದ' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ಹೀಗೆ ಹೇಳದೆ ಆಗಲೆ ಯದು ಕುಲನಾಶವಾಗಿತ್ತೆಂದು ಗ್ರಹಿಸಿದರೆ ಮಹಾಭಾರತವಿರೋಧವೂ ಬರುತ್ತದೆ.

* * *

ವಿದುರ ತೀರ್ಥಯಾತ್ರೆ ಮಾಡುತ್ತ ಸರಸ್ವತೀನದೀತೀರದಲ್ಲಿ ಅನೇಕ ವಿಷ್ಣುದೇವಾಲಯಗಳನ್ನು ಸಂದರ್ಶಿಸಿದ-

ಅನ್ಯಾನಿ ಚೇಹ ದ್ವಿಜದೇವದೇವೈಃ
ಕೃತಾನಿ ನಾನಾಯತನಾನಿ ವಿಷ್ಣೋಃ ।
ಪ್ರತ್ಯಂಕಮುಖ್ಯಾಂಕಿತಮಂದಿರಾಣಿ
ಯದ್ದರ್ಶನಾತ್ ಕೃಷ್ಣಮನುಸ್ಮರಂತಿ ॥ ೨೩ ॥

ತಮ್ಮ ಸಂದರ್ಶನದಿಂದ ಭಕ್ತರಿಗೆ ಹರಿಧ್ಯಾನ ಸಾಮರ್ಥ್ಯ ನೀಡಬಲ್ಲ, ವಿಷ್ಣು ಪ್ರತಿಮೆಗಳಿಂದ ಅಲಂಕೃತವಾದ ಇನ್ನೂ ಅನೇಕ ವಿಷ್ಣುದೇವಾಲಯಗಳನ್ನು ದೇವತೆಗಳೂ ಋಷಿಗಳೂ ಈ ಸರಸ್ವತೀನದೀತೀರದಲ್ಲಿ ನಿರ್ಮಿಸಿದ್ದರು. ಅವುಗಳನ್ನು ವಿದುರ ಸಂದರ್ಶಿಸಿದ.

[೧] ಇಲ್ಲಿ 'ಪ್ರತ್ಯಂಗಮುಖ್ಯಾಂಕಿತಮಂದಿರಾಣಿ' ಎಂದು ಪಾಠವಿಟ್ಟುಕೊಂಡು ಶ್ರೀಧರ, ವೀರರಾಘವ, ವಿಶ್ವನಾಥ, ವಲ್ಲಭಾಚಾರ್ಯ, ಶುಕದೇವ ಮುಂತಾದ ಎಲ್ಲ ವ್ಯಾಖ್ಯಾನಕಾರರೂ 'ದೇವಾಲಯಗಳ ಶಿಖರದ ಸುವರ್ಣಕಲಶಗಳು ಸುದರ್ಶನಚಕ್ರದಿಂದ ಅಲಂಕೃತವಾಗಿದ್ದು ನೋಡುವವರಿಗೆ ಹರಿಸ್ಮರಣೆ ಬರುವಂತೆ ಮಾಡುತ್ತಿದ್ದವು' ಎಂದು ವ್ಯಾಖ್ಯಾನಿಸಿದ್ದಾರೆ–

'ಪ್ರತ್ಯಂಗ' ಎಂದರೆ ಪ್ರತಿಯೊಂದು ಅಂಗದಲ್ಲಿ ಇರುವಂಥದ್ದು, ಅಂದರೆ ಆಯುಧಗಳು. ಅವುಗಳಲ್ಲಿ ಮುಖ್ಯವಾದುದು ಸುದರ್ಶನಚಕ್ರ. ಅದರಿಂದ ಅಲಂಕೃತವಾದುದು ದೇವಾಲಯ ಶಿಖರಗಳಲ್ಲಿರುವ ಸ್ವರ್ಣಕಲಶಗಳು.'' ಇವೆಲ್ಲ ಕ್ಲಿಷ್ಟಕಲ್ಪನೆಗಳು. ಪ್ರತಿಯೊಂದು ಅಂಗದಲ್ಲಿ ಆಯುಧ ಇರುವುದುಂಟೆ ? ಅದರಿಂದ ಹೀಗೆ ಹೇಳಬೇಕು-

---

೧. ಅಂಗಮಂಗಂ ಪ್ರತಿ ವರ್ತಂತ ಇತಿ ಪ್ರತ್ಯಂಗಾನ್ಯಾಯುಧಾನಿ । ತೇಷು ಮುಖ್ಯಂ ಚಕ್ರಮ್ । ತೇನಾಂಕಿತಾನಿ, ಮೂರ್ಧನಿ ಹೇಮಕುಂಭೇಷು ಚಿಹ್ನಿತಾನಿ ಮಂದಿರಾಣಿ ಯೇಷು ತಾನಿ । –ಶ್ರೀಧರಃ

ಪ್ರತ್ಯಂಕಮುಖ್ಯೋ ವಿಷ್ಣುಃ ।

ಬ್ರಹ್ಮಾ ಪ್ರತ್ಯಂಕವಾನ್, ವಿಷ್ಣುಃ ಸಮ್ಯಗ್‌ಲಕ್ಷಣವತ್ತಮಃ ॥

ಇತಿ ತಂತ್ರಮಾಲಾಯಾಮ್ ।

'ಪ್ರತ್ಯಂಕಮುಖ್ಯ'ನೆಂದರೆ ವಿಷ್ಣು. ಏಕೆಂದರೆ 'ಚೆನ್ನಾಗಿ ಮೂವತ್ತೆರಡು ಲಕ್ಷಣಗಳನ್ನು ಹೊಂದಿರುವವನು ಬ್ರಹ್ಮ, ಅವನಿಗಿಂತಲೂ ಇನ್ನೂ ಚೆನ್ನಾಗಿ ಎಲ್ಲ ಲಕ್ಷಣಗಳನ್ನು ಹೊಂದಿರುವವನು ವಿಷ್ಣು' ಎಂದು ತಂತ್ರಮಾಲಾ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ಪ್ರತಿ=ಪ್ರತಿಯೊಂದು ಅಂಗಉಪಾಂಗಗಳಲ್ಲಿ, ಪ್ರತಿ=ಚೆನ್ನಾಗಿ ಸ್ಪಷ್ಟವಾಗಿ ಪೂರ್ತಿಯಾಗಿ ಇರುವವುಗಳು ಅಂಕ= ಮೂವತ್ತೆರಡು ಶರೀರಲಕ್ಷಣಗಳು. ಅವುಗಳಿಂದ ಕೂಡಿದವನು ಚತುರ್ಮುಖ ಬ್ರಹ್ಮ 'ಪ್ರತ್ಯಂಕ'. ಅವನಿಗಿಂತಲೂ ಮುಖ್ಯವಾಗಿ ಆ ಲಕ್ಷಣಗಳನ್ನು ಹೊಂದಿದವನು ವಿಷ್ಣು 'ಪ್ರತ್ಯಂಕಮುಖ್ಯ'. ಈ ವಿವರಣೆ ಕಾಲ್ಪನಿಕವಲ್ಲ. ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

* * *

ಯಮುನಾತೀರದಲ್ಲಿ ವಿದುರನಿಗೆ ಉದ್ಧವನ ಭೇಟಿಯಾಯಿತು. ಆಗ ಅವನು ಉದ್ಧವನಲ್ಲಿ ಯಾದವರ ಕ್ಷೇಮಸಮಾಚಾರವನ್ನು ಕೇಳುತ್ತಾನೆ, ಮೊದಲಿಗೆ ಬಲರಾಮ ಕೃಷ್ಣರ ಬಗ್ಗೆ-

ಕಚ್ಚಿತ್ ಪುರಾಣೌ ಪುರುಷೌ ಸ್ವನಾಭ್ಯ-
ಪದ್ಮಾನುವೃತ್ತ್ಯೇಹ ಕಿಲಾವತೀರ್ಣೌ ।
ಆಸಾತ ಉರ್ವ್ಯಾಃ ಕುಶಲಂ ವಿಧಾಯ
ಕೃತಕ್ಷಣೌ ಕುಶಲಂ ಶೂರಗೇಹೇ ॥ ೨೬ ॥

ಉದ್ಧವ, ನಾರಾಯಣನ ನಾಭಿಕಮಲಸಂಭೂತನಾದ ಬ್ರಹ್ಮನ ಪ್ರಾರ್ಥನೆಯಂತೆ ಅವತರಿಸಿರುವ ರಾಮ ಕೃಷ್ಣರು ಲೋಕಕ್ಕೆ ಸುಖ ಉಂಟುಮಾಡಿ ಕುಶಲವಾಗಿರುವರೆ?

ಇಲ್ಲಿ 'ನಾಭ್ಯಪದ್ಮ' ಎಂದರೆ ನಾಭಿಯಲ್ಲಿರುವ ಕಮಲ, ಅದು ಜಡ. ರಾಮಕೃಷ್ಣರು ಭೂಮಿಯಲ್ಲಿ ಅವತರಿಸಬೇಕೆಂದು ಜಡವಾದ ನಾಭಿಕಮಲ ಪ್ರಾರ್ಥಿಸುವುದೆ? ಇದಕ್ಕೆ ಶ್ರೀಧರ ಮುಂತಾದ ಎಲ್ಲ ವ್ಯಾಖ್ಯಾನಕಾರರೂ 'ಸ್ವನಾಭ್ಯಪಾದ್ಮಾನುವೃತ್ತ್ಯಾ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಇಲ್ಲಿ ಬಹಳ ಅರ್ಥಕ್ಲೇಶವಿದೆ. 'ನಾಭ್ಯ' ನಾಭಿಯಲ್ಲಿ ಜನಿಸಿದವನು ಮತ್ತು 'ಪಾದ್ಮ' ಪದ್ಮದಲ್ಲಿ ಜನಿಸಿದವನು. ಅರ್ಥಾತ್ ನಾಭಿಯಲ್ಲಿ ಜನಿಸಿದ ಪದ್ಮದಲ್ಲಿ ಜನಿಸಿದವನು, ಬ್ರಹ್ಮ! ಅದಕ್ಕೆ 'ನಾಭೌ ಭವೇ

ಪದ್ಮೇ ಆವಿರ್ಭೂತೋ ಬ್ರಹ್ಮಾ ನಾಭ್ಯಪಾದ್ಮಃ' ಎಂದು ವಲ್ಲಭವ್ಯಾಖ್ಯಾನ[೧]. ಇದೂ ಏಕದೇಶಾನ್ವಯ ಕ್ಲಿಷ್ಟಕಲ್ಪನೆ. ಅದರಿಂದ ನಾಭ್ಯಪದ್ಮ ಎಂದೇ ಪಾಠ. ಪದ್ಮ ಎಂದರೆ ಬ್ರಹ್ಮ.

ಸಾಕ್ಷಾದ್ ಭಗವಂತನ ಅವತಾರರಾದ ರಾಮಕೃಷ್ಣರು ಸುಖವಾಗಿರುವರೆ? ಎಂದು ಕೇಳಿದರೆ ಅದಕ್ಕೆ ಏನರ್ಥ? ಅವರು ನಿತ್ಯಸುಖಿಗಳೇ ತಾನೆ? ಇಷ್ಟರವರೆಗೆ ಭೂಭಾರಹರಣ ಕಾರ್ಯದ ನಡುವೆ ಏನೂ ಸುಖವಿರಲಿಲ್ಲ, ಈಗ ಅದೆಲ್ಲ ಮುಗಿದಿರುವುದರಿಂದ ನಿಶ್ಚಿಂತೆಯಿಂದ ಆರಾಮವಾಗಿ ಸುಖ ಅನುಭವಿಸುತ್ತಿರುವನೆ? ಎಂದು ಪ್ರಶ್ನೆ ಮಾಡುವುದು ಭಗವಂತನ ವಿಷಯದಲ್ಲಿ ಅಸಂಗತವಾಗುತ್ತದೆ. [೧]ವಲ್ಲಭಾಚಾರ್ಯರ ವ್ಯಾಖ್ಯಾನದಲ್ಲಿ 'ಈಗ ನಿಶ್ಚಿಂತೆಯಿಂದ ಸ್ವಾನಂದಾನುಭವ ಅನುಭವಿಸುತ್ತಿರುವರೆ?' ಎಂದೇ ಹೇಳಿದೆ. ಭಗವಂತನಿಗೆ ಚಿಂತೆಯೆ? ವಿಶ್ವನಾಥ ವ್ಯಾಖ್ಯಾನದಲ್ಲಿ ಬೇರೆ ಉಪಾಯ ಕಾಣದೆ, [೨]''ಇದು ಕೇವಲ ಪ್ರೇಮದಿಂದ ಮಾಡಿದ ಪ್ರಶ್ನೆ. ಅದರ ಮೇಲೆ ಏನರ್ಥ ಎಂದು ಕೇಳಕೂಡದು'' ಎಂದಿದೆ–

---

[೩]ಜೀವಗೋಸ್ವಾಮಿ ವ್ಯಾಖ್ಯಾನ ಮಾತ್ರ ಇಲ್ಲಿ ಸರಿದಾರಿಯಲ್ಲಿದೆ. 'ಸುಖವಾಗಿ ಇರುವನೆ?' ಎಂದರೆ ತನಗೆ ಸುಖವಾಗುವಂತೆ ಇರುವನೆ? ಎಂದು ಅರ್ಥವಲ್ಲ, ಲೋಕಕ್ಕೆ ಸುಖವಾಗುವಂತೆ ಇರುವನೆ? ಎಂದರ್ಥ ಎನ್ನುತ್ತಾರೆ.

ಆದರೆ ಇದನ್ನು ಅವರಿಗಿಂತ ಹಿಂದೆಯೆ ಶ್ರೀಮದಾಚಾರ್ಯರು ಬಾದರಾಯಣರ ಪಾದ್ಮವಚನದ ಆಧಾರದೊಂದಿಗೇ ಸ್ಪಷ್ಟ ಹೇಳಿದ್ದಾರೆ. 'ಪದ್ಮ' ಎಂಬುದು ಬ್ರಹ್ಮನ ಒಂದು ಹೆಸರೆನ್ನುವುದನ್ನೂ ಬ್ರಹ್ಮಪುರಾಣದ ಆಧಾರದೊಂದಿಗೆ ತಿಳಿಸಿದ್ದಾರೆ–

ಪದ್ಮೋ ಬ್ರಹ್ಮಾ ಸಮುದ್ದಿಷ್ಟಃ ಪದ್ಮಾ ಶ್ರೀರಪಿ ಚೋಚ್ಯತೇ ।
ಇತಿ ಬ್ರಾಹ್ಮೇ ।

ಲೋಕಾನಾಂ ಸುಖಕರ್ತೃತ್ವಮಪೇಕ್ಷ್ಯ ಕುಶಲಂ ವಿಭೋಃ ।
ಪೃಚ್ಛ್ಯತೇ ಸತತಾನಂದಾತ್ ಕಥಂ ತಸ್ಯೈವ ಪೃಚ್ಛ್ಯತೇ ।
ಇತಿ ಪಾದ್ಮೇ ॥

---

೧. 'ನಿಶ್ಚಿಂತತಯಾ ಸ್ವಾನಂದಾನುಭವೇ ನಿರ್ಮಿತಕ್ಷಣೌ ವಾ?' -ವಲ್ಲಭಃ

೨. ತಯೋರ್ನಿತ್ಯಕುಶಲಿನೋರಪಿ ಕುಶಲಪ್ರಶ್ನಃ ಪ್ರೇಮ್ಣೈವ ಜ್ಞೇಯಃ । –ವಿಶ್ವನಾಥಃ

೩. ಕುಶಲಂ ಲೋಕಾನಾಂ ಮಂಗಲಂ ಯಸ್ಮಾತ್ ತದ್ಯಥಾ ಸ್ಯಾತ್ ।
–ಜೀವಗೋಸ್ವಾಮೀ

'ಪದ್ಮ' ಎಂದು ಬ್ರಹ್ಮನಿಗೂ 'ಪದ್ಮಾ' ಎಂದು ಲಕ್ಷ್ಮೀದೇವಿಗೂ ಹೆಸರಿದೆ ಎಂದು ಬ್ರಾಹ್ಮಪುರಾಣದಲ್ಲಿ ಉಕ್ತವಾಗಿದೆ. ಲೋಕಕ್ಕೆ ಸುಖ ಉಂಟುಮಾಡುತ್ತಿರುವನೆ ಎಂದು ಕೇಳುವ ವಿವಕ್ಷೆಯಿಂದಲೆ ಭಗವಂತನ ಕುಶಲವನ್ನು ಕೇಳುತ್ತಾರೆ. ಇಲ್ಲದಿದ್ದರೆ ಅವನು ಸದಾ ಕುಶಲಿಯೆ ಆಗಿರುವುದರಿಂದ ಅವನ ಕುಶಲವನ್ನು ಕೇಳುವುದು ಹೇಗೆ ಯುಕ್ತವಾದೀತು ಎಂದು ಪಾದ್ಮಪುರಾಣದಲ್ಲಿ ಉಕ್ತವಾಗಿದೆ.

* * *

ವಿದುರ ಉದ್ಧವನಲ್ಲಿ ವಸುದೇವನ ಕ್ಷೇಮಸಮಾಚಾರವನ್ನು ಕೇಳುತ್ತಾನೆ-

ಕಚ್ಚಿತ್ ಕುರೂಣಾಂ ಪರಮಃ ಸುಹೃನ್ನೋ
ಭಾಮಃ ಸ ಆಸ್ತೇ ಸುಖಮಂಗ ಶೌರಿಃ ।
ಯೋ ವೈ ಸ್ವಸ್ರೂಣಾಂ ಪಿತೃವದ್ ದದಾತಿ
ವರಾನ್ ವದಾನ್ಯೋ ವರತರ್ಪಣೇನ ॥ ೨೭ ॥

ತಂದೆಯಂತೆ ವಾತ್ಸಲ್ಯದಿಂದ ಸೋದರಿಯರಿಗೂ ಅವರ ಪತಿಗಳಿಗೂ ತೃಪ್ತಿ ಉಂಟುಮಾಡುತ್ತ ಅವರು ಬೇಡಿದ್ದನ್ನು ಕೊಡುವ ಆ ವಸುದೇವ, ಕುರುವಂಶಿಗಳಾದ ನಮಗೆ ಪರಮ ಸ್ನೇಹಿತನಾದ ಆ ವಸುದೇವ ಸುಖವಾಗಿರುವನೆ?

ಇಲ್ಲಿ 'ವರತರ್ಪಣೇನ ವರಾನ್ ದದಾತಿ' 'ವರಗಳಿಂದ ತೃಪ್ತಿಪಡಿಸುವ ಮೂಲಕ ವರಗಳನ್ನು ನೀಡುತ್ತಾನೆ' ಎಂದು ಹೇಳಿದಂತೆ ಕಾಣುತ್ತದೆ. 'ವರಗಳನ್ನು ನೀಡುವ ಮೂಲಕ ತೃಪ್ತಿಪಡಿಸುತ್ತಾನೆ' ಎನ್ನ ಬೇಕಾಗಿತ್ತು. ಈ ಸಮಸ್ಯೆಗೆ ಪರಿಹಾರ-

ವರತರ್ಪಣೇನ ಭರ್ತೃತರ್ಪಣೇನ ।

ಸೋದರಿಯರಿಗೆ, ಅವರ ಪತಿಗಳನ್ನು ತೃಪ್ತಿಪಡಿಸುವುದರೊಂದಿಗೆ, ಅವರ ಅಭೀಷ್ಟಗಳನ್ನೂ ಪೂರೈಸುತ್ತಾನೆ ವಸುದೇವ.

ಸೋದರಿಯರಿಗೂ ಅವರ ಪತಿಗಳಿಗೂ ತೃಪ್ತಿ ಉಂಟು ಮಾಡುತ್ತಾನೆ ಎಂದರ್ಥ.

* * *

ವಿದುರ ಉದ್ಧವನಲ್ಲಿ ಉಗ್ರಸೇನನ ಬಗ್ಗೆ ಕುಶಲಪ್ರಶ್ನೆ ಮಾಡುತ್ತಾನೆ-

ಕಚ್ಚಿತ್ ಸುಖಂ ಸಾತ್ವತವೃಷ್ಣಿಭೋಜ
ದಾಶಾರ್ಹಕಾಣಾಮಧಿಪಃ ಸ ಆಸ್ತೇ ।
ಯಮಭ್ಯಷಿಂಚತ್ ಶತಪತ್ರನೇತ್ರೋ
ನೃಪಾಸನಾಧಿಂ ಪರಿಹೃತ್ಯ ದೂರಾತ್ ॥ ೨೮ ॥

ರಾಜಸಿಂಹಾಸನ ನನ್ನದಾಗಲಿ ಎಂಬ ಮನೋಭಿಲಾಷೆಯನ್ನು ದೂರವಿರಿಸಿ ಶ್ರೀಕೃಷ್ಣ ಉಗ್ರಸೇನನಿಗೆ ಪಟ್ಟಾಭಿಷೇಕ ನಡೆಸಿದ. ಎಲ್ಲ ಯಾದವರ ದೊರೆಯಾದ ಆ ಉಗ್ರಸೇನ ಸುಖವಾಗಿರುವನೆ?

ಇಲ್ಲಿ 'ನೃಪಾಸನಾಧಿಂ' ಎಂದರೆ ರಾಜಸಿಂಹಾಸನ ತನಗೆ ಸಿಗಲಿಲ್ಲವೆಂಬ ಮನೋವ್ಯಥೆಯನ್ನು ಶ್ರೀಕೃಷ್ಣ ದೂರಮಾಡಿಕೊಂಡನೆಂದು ಹೇಳಿದಂತೆ ಕಾಣುತ್ತದೆ. ಭಗವಂತನಲ್ಲಿ ಯಾವ ಮನೊವ್ಯಥೆಗೂ ಅವಕಾಶವಿಲ್ಲದಿರುವಾಗ ಭಾಗವತ ಹೀಗೆ ಹೇಳುವುದು ಯುಕ್ತವಾದೀತೆ? ಶ್ರೀಧರ, ಶುಕದೇವ, ವಿಶ್ವನಾಥ ಮುಂತಾದ ವ್ಯಾಖ್ಯಾನಕಾರರು,

'ನೃಪಾಸನಾಶಾಂ ಪರಿಹೃತ್ಯ ದೂರಾತ್'

ಎಂಬ ಪಾಠವಿಟ್ಟುಕೊಂಡು ಉಗ್ರಸೇನ ಯಯಾತಿರಾಜನ ಶಾಪಪ್ರಯುಕ್ತ ಪ್ರಾಣಭಯದಿಂದ ತಾನುಳಿದರೆ ಸಾಕೆಂದು ಕೊಂಡು ರಾಜಸಿಂಹಾಸನದಾಸೆಯನ್ನು ದೂರದಲ್ಲಿ ಬಿಟ್ಟಿದ್ದ. ಅಂಥ ಉಗ್ರಸೇನನಿಗೆ ಶ್ರೀಕೃಷ್ಣ ಪಟ್ಟಾಭಿಷೇಕಗೈದನೆಂದು ವ್ಯಾಖ್ಯಾನಿಸಿದ್ದಾರೆ. ಪ್ರಾಣಭಯದಿಂದ ರಾಜ್ಯಸಿಂಹಾಸನದಾಸೆಯನ್ನು ತೊರೆಯುವ ಪ್ರಸಂಗ ಭಗವಂತನಿಗೆ ಎಂದೂ ಅಸಂಭಾವಿತವಾದ್ದರಿಂದ, ಉಗ್ರಸೇನನಿಗೇ,

'ನೃಪಾಸನಾಶಾಂ ದೂರಾತ್ ಪರಿಹೃತ್ಯ ಸ್ಥಿತಂ ಯಮಭ್ಯಷಿಂಚತ್'

ಎಂದು ಸ್ಥಿತಶಬ್ದಾಧ್ಯಾಹಾರ ಮಾಡಿ ಕ್ಲೇಶದಿಂದ ಅನ್ವಯ ಕೂಡಿಸಿದ್ದಾರೆ. 'ರಾಜಸಿಂಹಾಸನದಾಸೆಯನ್ನು 'ಪ್ರಾಣಭಯದಿಂದ' ದೂರವಿರಿಸಿ' ಎಂದೇಕೆ ಅರ್ಥೈಸಿದರೋ ತಿಳಿಯದು. ಶ್ರೀಧರವ್ಯಾಖ್ಯಾನದಲ್ಲಿ ಉಗ್ರಸೇನನಿಗೆ ಕಂಸನಿಂದ ಪ್ರಾಣಭಯ, ಶ್ರೀಕೃಷ್ಣನಿಗೂ ಯದುಕುಲಕ್ಕೆ ಸಿಂಹಾಸನಾಧಿಕಾರ ಇಲ್ಲವಾಗಲಿ ಎಂದು ಯಯಾತಿಶಾಪದಿಂದ ಭಯ ಎನ್ನಲಾಗಿದೆ. ಶ್ರೀಕೃಷ್ಣ ಶಾಪಭಯದಿಂದ ಸಿಂಹಾಸನದಾಸೆಯನ್ನು ದೂರವಿರಿಸಿ ಉಗ್ರಸೇನನಿಗೆ ಪಟ್ಟ ಕಟ್ಟಿದನೆಂದು ವ್ಯಾಖ್ಯಾನಿಸುವಾಗ ಅನ್ವಯಕ್ಲೇಶವಿಲ್ಲ, ನಿಜ. ಆದರೆ ಭಯಕೃದ್ ಭಯನಾಶನನಾದ ಭಗವಂತನಿಗೆ ಭಯ ಎನ್ನುವುದು ಅತ್ಯಂತ ಅಯುಕ್ತ. ಅದರಿಂದ ಸ್ವರಮಣನಾದ ಸರ್ವೇಶ್ವರನಾದ ಶ್ರೀಕೃಷ್ಣ ರಾಜಸಿಂಹಾಸನದಂಥ ಅಲ್ಪವೈಷಯಿಕಸುಖದಲ್ಲಿ ಸ್ವಾಭಾವಿಕವಾಗಿ ವಿರಕ್ತನಾದ್ದರಿಂದ ಸಿಂಹಾಸನದಾಸೆಯನ್ನು ದೂರವಿರಿಸಿ ಉಗ್ರಸೇನನಿಗೆ ಪಟ್ಟ ಕಟ್ಟಿದನೆನ್ನುವುದೇ ಸೂಕ್ತ. ಆದರೆ 'ನೃಪಾಸನಾಧಿಂ' ಎಂಬ ಪಾಠದಲ್ಲಿ ಹೀಗೆ ವ್ಯಾಖ್ಯಾನಿಸುವುದು ಹೇಗೆ ಎನ್ನುವುದು ಸಮಸ್ಯೆ. 'ನೃಪಾಸನಾಶಾಂ' ಎಂಬ ಪಾಠ ಅನುಕೂಲವಾಗಿದ್ದರೂ ಅದು ಅಪಪಾಠ. ಈ ಸಮಸ್ಯೆಗೆ ಶ್ರೀಮದಾಚಾರ್ಯರು ಹೀಗೆ ಪರಿಹಾರ ಹೇಳುತ್ತಾರೆ-

ಆಧಿರ್ಮನೋ ವರೂಥಂ ಚ ಆತ್ಮಾ ಖಮಿತಿ ಚೋಚ್ಯತೇ ।
ಇತ್ಯಭಿಧಾನೇ ।

ಆಧಿ ಮನಸ್ ವರೂಥ ಆತ್ಮ ಖ ಶಬ್ದಗಳು ಸಮಾನಾರ್ಥಗಳೆಂದು ಅಭಿಧಾನ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

'ನೃಪಾಸನಾಧಿಂ' ಎಂದೇ ಸರಿಯಾದ ಪಾಠ. ರಾಜಸಿಂಹಾಸನದಲ್ಲಿ ಸರ್ವಥಾ ಮನಸು ಮಾಡದೆ ಶ್ರೀಕೃಷ್ಣ ಉಗ್ರಸೇನನನ್ನೇ ರಾಜನನ್ನಾಗಿ ಮಾಡಿದ ಎಂದು ವಿವಕ್ಷಿತವಾಗಿದೆ. ಆದಕ್ಕೆ 'ಆಧಿ' ಎಂದರೆ ಮನಸು ಎಂದು ಅರ್ಥವಿಟ್ಟುಕೊಳ್ಳಬೇಕು. ಮನೋವ್ಯಥೆ ಎಂದಲ್ಲ. ಉಗ್ರಸೇನನ ಮನೋವ್ಯಥೆಯನ್ನು ಕಳೆದು, ಅಂದರೆ ಕಳೆಯುವುದಕ್ಕಾಗಿ ಅವನಿಗೆ ಪಟ್ಟ ಕಟ್ಟಿದನೆನ್ನಬಹುದು. ಆದರೂ 'ದೂರಾತ್ ಪರಿಹೃತ್ಯ' ದೂರದಲ್ಲಿ ಇರಿಸಿ ಎನ್ನುವುದು ಸಮಂಜಸವಾಗುವುದಿಲ್ಲ.

* * *

ವಿದುರ ಉದ್ಧವನಲ್ಲಿ ಭೀಮಸೇನನ ಕ್ಷೇಮಸಮಾಚಾರವನ್ನು ಕೇಳುತ್ತಾನೆ-

ಕಿಂ ವಾ ಕೃತಾಘೇಷ್ವಘಮತ್ಯಮರ್ಷೀ
ಭೀಮೋಽಹಿವದ್ ದೀರ್ಘತಮಂ ವ್ಯಮುಂಚತ್ ।
ಯಸ್ಯಾಂಘ್ರಿಪಾತಂ ರಣಭೂರ್ನ ಸೇಹೇ
ಮಾರ್ಗಂ ಗದಾಯಾಶ್ಚರತೋ ವಿಚಿತ್ರಮ್ ॥ ೩೭ ॥

ಪಾಪ ಮಾಡಿದ ಕೌರವರ ಬಗ್ಗೆ ಬಹು ಅಸಹನೆಯಿಂದ ಇದ್ದ ಭೀಮ ಹಾವಿನಂತೆ ದೀರ್ಘಕಾಲವಿದ್ದ ಪ್ರತೀಕಾರ ಭಾವನೆಯನ್ನು ತೀರಿಸಿಕೊಂಡನೆ? ಅವನು ಗದಾಯುದ್ಧದ ನಾನಾಬಗೆಯ ವರಸೆಯನ್ನು ತೋರುವಾಗ ಅವನಿಡುತ್ತಿದ್ದ ಒಂದೊಂದು ಹೆಜ್ಜೆಯನ್ನೂ ರಣಭೂಮಿ ತಾಳಲಾರದೆ ನಡುಗುತ್ತಿತ್ತು.

ಇಲ್ಲಿ 'ಅಘಂ ವ್ಯಮುಂಚತ್ ಕಿಂ ವಾ?' 'ಭೀಮ ಪಾಪಿಗಳಾದ ಕೌರವರಲ್ಲಿ ಅಘವನ್ನು ಬಿಟ್ಟನೆ?' ಎಂದಿದೆ. ಅಘವೆಂದರೆ ಪಾಪ ಅಥವಾ ಪಾಪಕರ್ಮ. ಎರಡನ್ನೂ ಎಂದೂ ಮಾಡದಿದ್ದ ಭೀಮಸೇನ ಅವುಗಳನ್ನು ಬಿಡುವುದೆಂದರೇನು? ಅಘ ಎಂದರೆ ವ್ಯಸನ, ಕ್ರೋಧಜನ್ಯ ಆಸಕ್ತಿ ಎನ್ನುತ್ತಾರೆ ಜೀವಗೋಸ್ವಾಮಿ ಮುಂತಾದವರು. ಇದು ಕ್ಲಿಷ್ಟಕಲ್ಪನೆ. ಅಘ ಎಂದರೆ ದಂಡ, ಶಿಕ್ಷೆ. ಅದನ್ನು 'ವ್ಯಮುಂಚತ್' ಕೊಟ್ಟನೆ? ಎಂದು ವಲ್ಲಭಾಚಾರ್ಯವ್ಯಾಖ್ಯಾನ ಹೇಳುತ್ತದೆ. ಆದರೆ ಶಿಕ್ಷೆ ಕೊಟ್ಟದ್ದು ವಿದುರನಿಗೆ ಗೊತ್ತೇ ಇದೆ. ಶಿಕ್ಷೆ ದೀರ್ಘಕಾಲವಿರುವುದೂ ಕೂಡಲಾರದು. ಕಾರಾಗೃಹವಾಸದಂಥ ಶಿಕ್ಷೆ ದೀರ್ಘಕಾಲವಿರಬಹುದಾದರೂ

ಶಸ್ತ್ರದಿಂದ ರಣರಂಗದಲ್ಲಿ ಹೊಡೆಯುವಂಥ ಶಿಕ್ಷೆ ದೀರ್ಘಕಾಲದ್ದಲ್ಲ. ಅದರಲ್ಲೂ ದೀರ್ಘತಮ, ಅತ್ಯಂತದೀರ್ಘಕಾಲದ್ದು ಎನಿಸುವುದು ಕೂಡಲಾರದು 'ಅಹಿವದ್ ದೀರ್ಘತಮ' 'ಹಾವಿನ ದ್ವೇಷದಂತೆ ದೀರ್ಘಕಾಲದ್ದು' ಎನ್ನುತ್ತಿರುವುದರಿಂದ ಇಲ್ಲಿ ಅಘವೆಂದರೆ ಸೇಡಿನ ಮನೋಭಾವ. ಬಾಲ್ಯದಿಂದಲೆ ವಿಷದ ಲಡ್ಡುಗೆ ತಿನಿಸುವುದು ಮುಂತಾದ ಅಪರಾಧಗಳ ಬಗ್ಗೆ ಭೀಮಸೇನನಲ್ಲಿ ದೀರ್ಘಕಾಲದಿಂದ ಬೆಳೆದುಬಂದಿದ್ದ ಸೇಡಿನ ಮನೋಭಾವ, ಅದರಿಂದ ಹೀಗೆ ಹೇಳಬೇಕು–

ಅಘಂ ವ್ಯಮುಂಚತ್ ಪುನರಪರಾಧಬುದ್ಧಿಂ ಹಿತ್ವಾऽऽಸ್ತೇ ।

'ಅಘಂ ವ್ಯಮುಂಚತ್' ಎಂದರೆ ಪ್ರತಿಯಾಗಿ ಅಪಕಾರ ಮಾಡುವ ಬುದ್ಧಿಯನ್ನು ಸೇಡಿನ ಮನೋಭಾವವನ್ನು ಬಿಟ್ಟು ಸಮಾಧಾನದಿಂದ ಇದ್ದಾನೆಯೆ? ಎಂದರ್ಥ.

ಅರ್ಥಾತ್ ರಣರಂಗದಲ್ಲಿ ಶತ್ರುಗಳಿಗೆ ತಕ್ಕ ಶಿಕ್ಷೆ ನೀಡಿ, ಸೇಡಿನ ಮನೋಭಾವ ಬಿಟ್ಟು ಈಗ ಸಮಾಧಾನದಿಂದ ಭೀಮಸೇನನಿದ್ದಾನೆಯೆ ಎಂದು ವಿದುರ ಕೇಳುತ್ತಿದ್ದಾನೆ, ಅವನಿಗೆ ತನ್ನಿಂದ ಆ ದುಷ್ಟ ಕೌರವರನ್ನು ಶಿಕ್ಷಿಸಲಾಗಲಿಲ್ಲ. ಭೀಮಸೇನ ಆ ಕೆಲಸ ಮಾಡಿದನೆಂದು ತೃಪ್ತಿ. ಅದರಿಂದ 'ಅಘ' ಎಂದರೆ ಪ್ರತೀಕಾರ ಎಂದು ಮುಖ್ಯಾರ್ಥ. ಪ್ರತೀಕಾರಬುದ್ಧಿ ಎಂದು ಲಾಕ್ಷಣಿಕಾರ್ಥ. ದೀರ್ಘಕಾಲದಿಂದ ಇದ್ದ ಪ್ರತೀಕಾರ ಬುದ್ಧಿಯನ್ನು ಬಿಡುವುದೆಂದರೆ ಧರ್ಮರಾಜನಂತೆ ಕ್ಷಮಾದಾನ ಮಾಡುವುದಲ್ಲ. ಹಾವಿನಂತೆ ಪ್ರತೀಕಾರ ಮಾಡಿದ ಬಳಿಕ ತೃಪ್ತಿಯಿಂದ ಸಮಾಧಾನದಿಂದ ಆ ಬುದ್ಧಿಯನ್ನು ಬಿಡುವುದೆಂದರ್ಥ.

* * *

ಭೂಭಾರಹರಣಕ್ಕಾಗಿ ಭೂಮಿಯಲ್ಲಿ ಅವತರಿಸಿದ ಶ್ರೀಕೃಷ್ಣನ ಸಮಾಚಾರವನ್ನು ತಿಳಿಯ ಬಯಸಿ ವಿದುರ ಉದ್ಧವನಿಗೆ ಶ್ರೀಕೃಷ್ಣನ ಜನ್ಮ ಕರ್ಮಗಳು ಅಲೌಕಿಕವೆನ್ನುತ್ತಾನೆ–

ಅಜಸ್ಯ ಜನ್ಮೋತ್ಪಥನಾಶನಾಯ
ಕರ್ಮಾಣ್ಯಕರ್ತುರ್ಗ್ರಹಣಾಯ ಪುಂಸಾಮ್ ।
ನ ತ್ವನ್ಯಥಾ ಕೋऽರ್ಹತಿ ದೇಹಯೋಗಂ
ಪರೋ ಗುಣಾನಾಮುತ ಕರ್ಮತಂತ್ರಮ್ ॥ ೪೪ ॥

ಶ್ರೀಕೃಷ್ಣನ ಜನ್ಮ ಭೂಭಾರಹರಣಕ್ಕಾಗಿ, ಹೊರತು ತನ್ನ ಪೂರ್ವಾರ್ಜಿತ ಕರ್ಮವನ್ನು ಉಣಲಿಕ್ಕಾಗಿ ಅಲ್ಲ. ಏಕೆಂದರೆ ಅವನಿಗೆ ಅಂಥ ಜನ್ಮವಿಲ್ಲ. ಅವನ ಕರ್ಮಾಚರಣೆಯೂ ಲೋಕಶಿಕ್ಷಣಕ್ಕಾಗಿ ಹೊರತು ಅವನು ಫಲದಾಸೆಯಿಂದ ಕರ್ಮಮಾಡುವವನಲ್ಲ.

ನಿತ್ಯಮುಕ್ತ ಗುಣಾತೀತನಾದವನು ಯಾರು ತಾನೆ ಪಾರ್ಥಿವಶರೀರದಿಂದ ಜನಿಸಿ ವಿಧಿಬದ್ಧನಾಗಿ ಕರ್ಮಾಚರಣೆ ಮಾಡುತ್ತಾನೆ?

ಇಲ್ಲಿ 'ಅಜಸ್ಯ ಜನ್ಮ, ಅಕರ್ತುಃ ಕರ್ಮಾಣಿ' ಹುಟ್ಟಿಲ್ಲದವನಿಗೆ ಹುಟ್ಟು, ಕರ್ಮಮಾಡದವನ ಕರ್ಮ' ಎನ್ನುವುದು ವಿರುದ್ಧ ಅಸಂಗತವೆನಿಸುವುದರಿಂದ ಇದಕ್ಕೆ ವಿವರಣೆ ಬೇಕು. ಸ್ವೇಚ್ಛೆಯಿಂದ ಜಡಶರೀರ ಧಾರಣೆಯೆ ಭಗವಂತನಿಗೆ ಜನ್ಮ ಎಂದು ವೀರರಾಘವವ್ಯಾಖ್ಯಾನ. [೧]ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ವಿದುರ ತನ್ನ ಅಜ್ಞಾನವನ್ನು ಪ್ರದರ್ಶಿಸುತ್ತಿದ್ದಾನೆ. ದುಷ್ಟನಿಗ್ರಹ ಶಿಷ್ಟಪರಿಪಾಲನೆಗಳ ಉದ್ದೇಶದಿಂದ ಭಗವಂತನಲ್ಲಿ ಇಂಥ ವಿರುದ್ಧ ಜನ್ಮಕರ್ಮಗಳು ನಡೆಯುತ್ತವೆ ಎನ್ನುತ್ತಿದ್ದಾನೆ. ಭಗವಂತ ಸ್ವೇಚ್ಛೆಯಿಂದ ಪ್ರಾಕೃತಶರೀರವನ್ನು ನಿರ್ಮಿಸಿ ಅದರೊಳಗೆ ಬೆಂಕಿಯಂತೆ ಪ್ರವೇಶಿಸುತ್ತಾನೆ. ಕಟ್ಟಿಗೆಯೂ ಅದರಲ್ಲಿ ಅಗ್ನಿಯ ಆವಿರ್ಭಾವವೂ ಎರಡೂ ಅನಿತ್ಯ. ಹಾಗೇ ಭಗವಂತನ ಶರೀರವೂ ಅದರಲ್ಲಿ ಅವನ ಆವಿರ್ಭಾವವೂ ಅನಿತ್ಯ. ಪತ್ನಿಯ ಶರೀರ ಪತಿಯ ಅಧೀನವಿದ್ದರೂ ಪತ್ನಿಜೀವದ ವಶವೆ ಇರುವಂತೆ ಭಗವಂತನ ಶರೀರವೂ ಒಬ್ಬ ಜೀವನ ಕರ್ಮಾಧೀನ ಎನ್ನುವುದು ವಿದುರನ ಅಭಿಪ್ರಾಯ. ಇದನ್ನು ಮುಂದೆ ಉದ್ಧವ 'ಆದಾಯಾಂತರಧಾತ್ ಯಸ್ತು ಸ್ವಬಿಂಬಂ ಲೋಕಲೋಚನಮ್'(ಭಾಗ.೩.೨.೧೧) ಎಂಬ ಶ್ಲೋಕದಲ್ಲಿ ನಿರಾಕರಣೆ ಮಾಡುತ್ತಾನೆ ಎಂದು ವಲ್ಲಭಾಚಾರ್ಯರು ಹೇಳುತ್ತಾರೆ. ಇದು ಮಹಾಜ್ಞಾನಿಯಾದ ವಿದುರನ ವ್ಯಕ್ತಿತ್ವಕ್ಕೆ ಮಾಡಿದ ಅಪಚಾರ. ಬಲರಾಮನಂತೆ ಕೃಷ್ಣನೂ ಆವೇಶಾವತಾರವೆಂದು ವಿದುರ ಹೇಳುತ್ತಾನೆಯೆ?

ಶ್ರೀಮದಾಚಾರ್ಯರು ಭಗವಂತನ ಜನ್ಮಕರ್ಮಗಳಲ್ಲಿ ವಿರೋಧವಿಲ್ಲವೆಂಬ ಸತ್ಯಾಂಶವನ್ನು ಅಗ್ನಿಪುರಾಣವಚನದ ಆಧಾರ ಕೊಟ್ಟು ಸಮರ್ಥಿಸುತ್ತಾರೆ-

ನ ದೇಹಯೋಗೋ ಹಿ ಜನಿರ್ವಿಷ್ಣೋರ್ವ್ಯಕ್ತಿರ್ಜನಿಃ ಸ್ಮೃತಾ ॥

ಇತ್ಯಾಗ್ನೇಯೇ ।

---

೧. ಅನೇನ ಸಾಧಾರಣಪಕ್ಷೇ ಜ್ಞಾಯತೇ ಸ್ವೇಚ್ಛಯಾ ಜನಿತೇ ದೇಹೇ ಅಗ್ನಿವತ್ ಭಗವದಾವೇಶ ಇತಿ । ದೇಹಮಾತ್ರಸ್ಯೈವ ಕರ್ಮಪರತಂತ್ರತ್ವಂ ಮನ್ಯತೇ । ಯಥಾ ಸರ್ವಮೇವ ಕಾಷ್ಠಮನಿತ್ಯಂ, ತತ್ರ ಪ್ರವಿಷ್ಟೋಽಗ್ನಿರಪಿ ಸುತರಾಮನಿತ್ಯಾ ವಿರ್ಭಾವೋ ಭವತೀತಿ ಭಾವಃ । ಯಥಾ ವಾ ಭಾರ್ಯಾದೇಹೋ ಭರ್ತೃವಶೋಽಪಿ ಭಾರ್ಯಾಜೀವಾಧೀನ ಏವ ತಥೇಶ್ವರಪರಿಗೃಹೀತೋಽಪಿ ದೇಹಃ ಕರ್ಮಾಧೀನ ಏವೇತಿ ಕೇಷಾಂಚಿನ್ಮತಮ್ । ತಥಾಯಮಪಿ ಮನ್ಯತೇ । ತದಗ್ರೇ ದೂಷಯತ್ಯುದ್ಧವಃ । – ವಲ್ಲಭಃ

ಹರಿಃ ಕರ್ತಾಪ್ಯಕರ್ತೇತಿ ಫಲಾಭಾವೇನ ಭಣ್ಯತೇ ॥

ಇತಿ ಚ ॥

'ಶ್ರೀಹರಿಗೆ ಪ್ರಾಕೃತವಿಗ್ರಹದ ಅಥವಾ ಶುದ್ಧಸತ್ವಮಯವಾದ ದಿವ್ಯವಿಗ್ರಹದ ಸಂಬಂಧವೆ ಜನ್ಮ ಎಂದು ತಿಳಿಯ ಬಾರದು. ಚಿನ್ಮಯಸ್ವರೂಪಶರೀರದಿಂದ ಅಭಿವ್ಯಕ್ತಿಯೆ ಜನ್ಮವೆನಿಸುತ್ತದೆ' ಎಂದು ಅಗ್ನಿಪುರಾಣದಲ್ಲಿ ಹೇಳಿದೆ. 'ಶ್ರೀಹರಿ ಕರ್ಮಮಾಡುತ್ತಿದ್ದರೂ ಅದಕ್ಕೆ ತನ್ನ ಪ್ರಯೋಜನದ ಉದ್ದೇಶವಿಲ್ಲದಿರುವುದರಿಂದ ಕರ್ಮಮಾಡದವನೆನಿಸುತ್ತಾನೆ.' ಎಂದೂ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಪ್ರಥಮೋಽಧ್ಯಾಯಃ ॥

—o—

ಅಧ್ಯಾಯ-೨

ಅಧ್ಯಾಯ ಸಾರಾಂಶ

ಉದ್ಧವ ಐದುವರ್ಷದ ಮಗುವಾಗಿದ್ದಾಗಿನಿಂದಲೂ ಮಹಾ ವಿಷ್ಣುಭಕ್ತ. ಶ್ರೀಹರಿಯ ಸೇವೆ ಮಾಡುತ್ತಲೇ ಮುದಿಯಾದವ. ಶ್ರೀಕೃಷ್ಣನ ಕ್ಷೇಮಸಮಾಚಾರ ಹೇಳಬೇಕೆಂದಾಗ ಆತನಿಗೆ ಗಂಟಲುಬ್ಬಿ ಮಾತೇ ಹೊರಡದಂತಾಯಿತು. ಸ್ವಲ್ಪ ಹೊತ್ತು ಶ್ರೀಕೃಷ್ಣನ ಪಾದಕಮಲ ಧ್ಯಾನಾಮೃತದಲ್ಲಿ ಮುಳುಗಿ ಆನಂದಬಾಷ್ಪ ಸುರಿಸಿದ. ನಿಧಾನ ಎಚ್ಚೆತ್ತು ಕಣ್ಣೊರಸಿಕೊಂಡು ಹೇಳುತ್ತಾನೆ. 'ಶ್ರೀಕೃಷ್ಣನೆಂಬ ಸೂರ್ಯನಿನ್ನೇನು ಅಸ್ತಮಿಸಲಿದ್ದಾನೆ, ಏನು ಕ್ಷೇಮ ಸಮಾಚಾರ ಹೇಳಲಿ? ಯಾದವರು ಅದೃಷ್ಟಹೀನರು. ಜ್ಞಾನಿಗಳಾಗಿದ್ದರೂ ಕೃಷ್ಣನ ಮಾಯೆಯಿಂದಾಗಿ ಅವನನ್ನು ಒಬ್ಬ ಶ್ರೇಷ್ಠಮಾನವನೆಂದೇ ತಿಳಿದಿದ್ದಾರೆ. ಅವನು ಪರಂಧಾಮಕ್ಕೆ ಹೋಗುವಾಗ ತನ್ನ ದಿವ್ಯ ಶರೀರದಿಂದಲೇ ಹೊರಟು ಹೋಗುತ್ತಾನೆ. ಕಂಸಜರಾಸಂಧಾದಿಗಳಿಗೆ ಭಯಪಟ್ಟಂತೆ ತೋರುವುದು ಕೇವಲ ನಟನೆ. ಭಕ್ತರು ಶಾಪಾದಿಪ್ರಭಾವದಿಂದ ಅಸುರಾವೇಶಕ್ಕೊಳಗಾಗಿ ಅಪರಾಧಗೈದಾಗ ಅವನು ಅವರ ತಪ್ಪನ್ನು ಮನ್ನಿಸಿ ಬಿಡುತ್ತಾನೆ. ಅವರು ಸಾಯುವಾಗ ಭಕ್ತಿಯಿಂದಲೇ ಅವನನ್ನು ಕಾಣುತ್ತಾರೆ. ಇದಕ್ಕೆ ಶಿಶುಪಾಲ ಪೂತನೆಯಂಥವರೇ ನಿದರ್ಶನ.'

ಉದ್ಧವನು ವಿದುರನಿಗೆ ಶ್ರೀಕೃಷ್ಣಾವತಾರ ಸಮಾಪ್ತಿಯಾಗುವ ಬಗೆಯನ್ನು ಹೇಳುತ್ತ ಶ್ರೀಕೃಷ್ಣನ ಶರೀರ ಸೌಂದರ್ಯವನ್ನು ಮುಗ್ಧಜನರು ಹೇಗೆ ಕಂಡು ಸವಿದರು ಎನ್ನುವುದನ್ನು ವರ್ಣಿಸುತ್ತಾನೆ-

ಯದ್ಧರ್ಮಸೂನೋರ್ಬತ ರಾಜಸೂಯೇ
ನಿರೀಕ್ಷ್ಯ ದೃಕ್ಸ್ವಸ್ತ್ಯಯನಂ ತ್ರಿಲೋಕಃ ।
ಕಾರ್ತ್ಸ್ನ್ಯೇನ ಚಾತ್ರ್ಯೋಪಗತಂ ವಿಧಾತು-
ರರ್ವಾಕ್ಸೃತೌ ಕೌಶಲಮಿತ್ಯಮನ್ಯತ ॥ ೧೩ ॥

ಧರ್ಮರಾಜನ ರಾಜಸೂಯ ಯಜ್ಞಮಂಟಪದಲ್ಲಿ ಎಲ್ಲರ ಕಣ್ಣುಗಳಿಗೆ ಹಬ್ಬವಾಗಿದ್ದ ಶ್ರೀಕೃಷ್ಣನ ಶ್ರೀಮೂರ್ತಿಯನ್ನು ಕಂಡು ಈ ಕೃಷ್ಣನ ಶರೀರನಿರ್ಮಾಣದಲ್ಲಿಯೆ ಬ್ರಹ್ಮನ ಸೃಷ್ಟಿಕಲಾನೈಪುಣ್ಯ ಪೂರ್ತಿಯಾಗಿ ಸಿದ್ಧಿಸಿರುವುದು ಕಂಡು ಬರುತ್ತದೆ ಎಂದು ಭ್ರಮಿಸಿದರು.

ದೇವಮಾನವ ಪಶು ಪಕ್ಷ್ಯಾದಿ ಸೃಷ್ಟಿಮಾಡುವಾಗ ಬ್ರಹ್ಮನಿಗಿನ್ನೂ ಸೃಷ್ಟಿಪಾಟವ ಪೂರ್ತಿ ಕರಗತವಾಗಿರಲಿಲ್ಲ. ಅದರಿಂದ ಆ ಸೃಷ್ಟಿಯಲ್ಲಿ ಸೌಂದರ್ಯ ಸಾಲದು. ಇದೀಗ ಕೃಷ್ಣನ ಶರೀರ ನಿರ್ಮಾಣಕಾಲಕ್ಕೆ ಪಾಟವ ಪೂರ್ತಿಯಾಗಿ ಸಿದ್ಧಿಸಿದೆ ಎಂದುಕೊಂಡರು. ವಸ್ತುತಃ ಕೃಷ್ಣನ ಶರೀರ ಬ್ರಹ್ಮನ ಸೃಷ್ಟಿಯಲ್ಲ. ಅನಾದಿನಿತ್ಯ. ಪ್ರಾಕೃತವಲ್ಲ, ಸಚ್ಚಿದಾನಂದಮಯ.

ಇಲ್ಲಿ 'ತ್ರಿಲೋಕಃ ಅಮನ್ಯತ' ಎಂದರೆ 'ಮೂಲೋಕದ ಎಲ್ಲ ಚೇತನರೂ ಹೀಗೆ ತಿಳಿದರು' ಎಂದು ಶ್ರೀಧರ ಮುಂತಾದವರ ವ್ಯಾಖ್ಯಾನ. 'ಬ್ರಹ್ಮ ಇಂದ್ರಾದಿ ದೇವತೆಗಳೂ ಹೀಗೇ ತಿಳಿದರು' ಎಂದು ವಿಶ್ವನಾಥವ್ಯಾಖ್ಯಾನ.[೧] ಹಾಗಾದರೆ ಜ್ಞಾನಿಗಳೂ ಹೀಗೆ ಭ್ರಮಿಸಿದರೆ ಎಂಬ ಪ್ರಶ್ನೆ ಬಂದರೆ,

'ಕೃಷ್ಣನ ಶರೀರ ಬ್ರಹ್ಮಸೃಷ್ಟಿಯಲ್ಲದಿದ್ದರೂ ಲೋಕದೃಷ್ಟಿಯಿಂದ ಹಾಗೆ ಹೇಳಿದೆ' ಎಂದು ಸಮಾಧಾನ. ಏಕೆ ಹೀಗೆ ಕ್ಲೇಶಪಡಬೇಕು? 'ತ್ರಿಲೋಕಃ' ಎಂದರೆ ಮೂಲೋಕದಲ್ಲಿರುವ ಅಜ್ಞಜನರು ಭ್ರಮಿಸಿದರು ಎಂದೇ ಏಕೆ ಅರ್ಥೈಸಬಾರದು? ಶುಕದೇವವ್ಯಾಖ್ಯಾನ[೨] ಹಾಗೇ ಹೇಳಿದೆ.

[೩]ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ 'ಕಾರ್ತ್ಸ್ನ್ಯೇನ ಚಾದ್ಯೇಹ ಗತಂ' ಎಂಬ ಅಪಪಾಠ ವಿಟ್ಟುಕೊಂಡು, 'ಸಂತೋಷದ ಸಂಗತಿ ಏನೆಂದರೆ ಮೂಲೋಕದ ಎಲ್ಲ ಜ್ಞಾನಿಗಳೂ ಕೃಷ್ಣಶರೀರವನ್ನು ಕಂಡು ಬ್ರಹ್ಮನ ಸಾಮರ್ಥ್ಯ ಇಲ್ಲಿ ಕೆಲಸಕ್ಕೆ ಬರಲಾರದು. ಇದು ಚಿನ್ಮಯ ಅನಾದಿ ಎಂದು ತಿಳಿದರು.' ಎಂದಿದೆ. ಆದರೆ ಇಲ್ಲಿ ಕೃಷ್ಣಶರೀರದ

---

೧. 'ತನ್ಮೂರ್ತೇರ್ವಿಧಾತುಃ ಸೃಜ್ಯತ್ವಾಭಾವೇಽಪಿ ಲೋಕದೃಷ್ಟಿರಿಯಮುಕ್ತಾ'
-ವಿಶ್ವನಾಥಃ

೨. ತ್ರಿಲೋಕಸ್ತ್ರಿಗುಣಜನೋ, ನತು ದಿವ್ಯದೃಷ್ಟಿರ್ನಾರದಾದಿಲೋಕಃ –ಶುಕದೇವಃ

೩ ಬತೇತಿ ಹರ್ಷೇ! ಸರ್ವೇಽಪಿ ಯದ್ ಭಗವದ್ರೂಪಂ ದೃಷ್ಟ್ವಾ ಏವಂ ಜ್ಞಾತವಂತಃ 'ಅರ್ವಾಕ್ ಸೃತಿಕೌಶಲೇನೇದಂ ಕರ್ತುಂ ನ ಶಕ್ಯತ' ಇತ್ಯಮನ್ಯತ । ಸತ್ವಸೃಷ್ಟ್ಯತಿರಿಕ್ತಮೇತಚ್ಚಿದ್ರೂಪಮಿತ್ಯರ್ಥಃ ।'
–ವಲ್ಲಭಃ

ಸೌಂದರ್ಯ ಪ್ರಶಂಸೆ ಇಲ್ಲ. ಚಿನ್ಮಯ ಅನಾದಿಯಾದ್ದರಿಂದ ಬ್ರಹ್ಮಸೃಷ್ಟಿಯಲ್ಲ ಎಂದಿದೆ ಹೊರತು 'ಇಂಥ ಸುಂದರಾಕಾರವನ್ನು ಬ್ರಹ್ಮ ಸೃಜಿಸಲಾರ' ಎಂದು ಹೊಗಳುವುದು ಕಾಣುವುದಿಲ್ಲ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ತ್ರಿಲೋಕಸ್ಯಾಜ್ಞಾನಂ ಬತ!

ಆನಂದರೂಪಂ ದೃಷ್ಟ್ವಾಽಪಿ ಲೋಕೋ ಭೌತಿಕಮೇವ ತು ।
ಮನ್ಯತೇ ವಿಷ್ಣುರೂಪಂ ಚ ಅಹೋ ಭ್ರಾಂತಿರ್ಬಹುಸ್ಥಿತಾ ॥
ಇತಿ ಸ್ಕಾಂದೇ ।

ಮೂಲೋಕದ ಎಲ್ಲ ಮುಗ್ಧಜೀವರಿಗೂ ಭ್ರಮ ಉಂಟಾಯಿತು, ಆಶ್ಚರ್ಯ!

ಸ್ಕಾಂದಪುರಾಣ ಹೇಳುತ್ತದೆ-'ಆನಂದರೂಪವಾದ ವಿಷ್ಣುಶರೀರವನ್ನು ಕಂಡೂ ಅಜ್ಞಲೋಕವೆಲ್ಲ ಭೌತಿಕವೆಂದು ಭ್ರಮಿಸುತ್ತದೆ. ಈ ಭ್ರಾಂತಿ ಕೆಲವರಿಗೆ ಮಾತ್ರವಲ್ಲದೆ ಬಹು ಮಂದಿಗೆ ಬರುವುದು ಆಶ್ಚರ್ಯ.'

'ಯದ್ಧರ್ಮಸೂನೋರ್ಬತ' ಎಂಬಲ್ಲಿ 'ಬತ' ಶಬ್ದ ಆಶ್ಚರ್ಯ ಎಂಬ ಅರ್ಥದಲ್ಲಿದೆ. ಭಗವಂತನ ಅಪರಿಮಿತ ಸೌಂದರ್ಯಕ್ಕೆ ಸಾಟಿ ಇಲ್ಲ. ಏಕೆಂದರೆ ಅದನ್ನು ಬ್ರಹ್ಮಸೃಷ್ಟಿ ಎಂದು ಭ್ರಮಿಸುವ ಅಜ್ಞಜನರೂ ಕೂಡ ಬ್ರಹ್ಮನ ಸೃಷ್ಟಿನೈಪುಣ್ಯವೆಲ್ಲವೂ ಇಲ್ಲಿ ಕಾಣಿಸುತ್ತದೆ. ಇದಕ್ಕಿಂತ ಹೆಚ್ಚು ಸುಂದರವಾದ ಶರೀರವನ್ನು ಬ್ರಹ್ಮ ನಿರ್ಮಿಸಲಾರ ಎಂದು ಪ್ರಶಂಸಿಸುತ್ತಾರೆ. ಈ ಪ್ರಶಂಸೆ ಭ್ರಮಮೂಲವಾಗಿದೆ. ಮೂಲೋಕದ ಎಲ್ಲ ಅಜ್ಞಜನರಿಗೂ ಇಂಥ ಭ್ರಮ ಬಂದುದು ಆಶ್ಚರ್ಯಕರ ಎಂದು 'ಬತ' ಶಬ್ದ ಹೇಳುತ್ತಿದೆ.

* * *

ದುಷ್ಟಸಂಸರ್ಗ ದೋಷದಿಂದ ಸಜ್ಜನರೂ ಹಾಳಾಗುವುದುಂಟು. ಆದರೆ ಭಗವಂತ ಅವರ ಸ್ವಾಭಾವಿಕವಾದ ಸಜ್ಜನಿಕೆಯನ್ನು ಗುರುತಿಸಿ ಅವರೆಷ್ಟೇ ದ್ವೇಷ ಮಾಡಿದರೂ ಸಹಿಸಿಕೊಂಡು ಅನುಗ್ರಹಿಸುತ್ತಾನೆ ಎನ್ನುತ್ತಾನೆ, ಉದ್ಧವ ವಿದುರನಿಗೆ-

ಮನ್ಯೇಽಸುರಾನ್ ಭಾಗವತಾಂಸ್ತ್ರ್ಯಧೀಶೇ
ಸಂರಂಭಮಾರ್ಗಾಭಿನಿವಿಷ್ಟಚಿತ್ತಾನ್ ।
ಯೇ ಸಂಯುಗೇಽಚಕ್ಷತ ತಾರ್ಕ್ಷ್ಯಪುತ್ರ-
ಸ್ಯಾಂಸೇ ಸುನಾಭಾಯುಧಮಾಪತಂತಮ್ ॥ ೨೪ ॥

ಅಸುರಯೋನಿಯಲ್ಲಿ ಹುಟ್ಟಿ ಅಸುರಾವೇಶದಿಂದ ಮೊದಲಿಗೆ ಭಗವಂತನನ್ನು ದ್ವೇಷಿಸುತ್ತಿದ್ದರೂ, ರಣರಂಗದಲ್ಲಿ ಗರುಡಾರೂಢನಾಗಿ ಚಕ್ರ ಹಿಡಿದು ನಿಂತ ಆ ಭಗವಂತನನ್ನು ಕಂಡಾಗ ಭಕ್ತಿಯಿಂದ ನೋಡುವ ಬಲಿಚಕ್ರವರ್ತಿ ಮುಂತಾದ ಅಸುರರನ್ನು ಭಗವದ್ಭಕ್ತರೆಂದೇ ನಾನು ತಿಳಿದಿದ್ದೇನೆ.

ಇಲ್ಲಿ ಶ್ರೀಧರ ಮುಂತಾದ ವ್ಯಾಖ್ಯಾನಕಾರರು ದ್ವೇಷದಿಂದ ಮುಕ್ತಿ ಸಾಧ್ಯ ಎನ್ನುತ್ತಾರೆ-

ತಸ್ಮಾತ್ ಕೇನಾಪ್ಯುಪಾಯೇನ ಮನಃ ಕೃಷ್ಣೇ ನಿವೇಶಯೇತ್ ।

ಎಂಬ ಭಾಗವತವಚನ ಅವರಿಗೆ ಆಧಾರ. 'ಅಸುರರು ಭಗವಂತನನ್ನು ದ್ವೇಷಿಸುತ್ತ ದ್ವೇಷದಿಂದಲೆ ಧ್ಯಾನಿಸುತ್ತ ರಣರಂಗದಲ್ಲಿ ಚಕ್ರ ಹಿಡಿದು ನಿಂತ ಅವನನ್ನು ಅಪರೋಕ್ಷವಾಗಿ ಕಾಣುತ್ತಾರೆ. ಭಗವದ್ಭಕ್ತರಂತೆ ಇವರೂ ಧ್ಯಾನಪೂರ್ವಕವಾಗಿ ಭಗವಂತನನ್ನು ಅಪರೋಕ್ಷವಾಗಿ ಕಾಣುವುದರಿಂದ ಭಗವದ್ಭಕ್ತರೆ'

ಹೀಗೆ 'ದ್ವೇಷಿಗಳೂ ಭಕ್ತರೇ' ಎನ್ನುವುದು 'ಬೆಂಕಿಯೂ ನೀರೇ' ಎಂಬಂತೆ ವ್ಯಾಹತವಾಗುತ್ತದೆ. ಅದರಿಂದ 'ಅಸುರಾನಪ್ಯಹಂ ಭಾಗವತಾನೇವ ಮನ್ಯೇ' ಎಂಬ ಈ ಭಾಗವತವಾಕ್ಯಕ್ಕೆ,

'ಭಗವಂತನಿಗೆ ದ್ವೇಷಿಗಳೂ ಭಕ್ತಿಯೋಗಿಗಳಂತೆಯೆ ಅನುಗ್ರಹಪಾತ್ರರು' ಎಂದು ವೀರರಾಘವ ವ್ಯಾಖ್ಯಾನ[೧] ಅರ್ಥ ಹೇಳುತ್ತದೆ. ದ್ವೇಷದಿಂದಲೂ ಭಗವಂತನ ಅನುಗ್ರಹ ಸಾಧ್ಯ ಎನ್ನುವ ತಪ್ಪು ಕಲ್ಪನೆಯಿಂದ ಆಡುವ ಮಾತು ಇದು. ವಸ್ತುತಃ ಭಗವದ್ಗೀತೆಯಲ್ಲಿ-

ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ।
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ॥
(ಗೀತಾ.೧೬.೧೯-೨೦)

'ತಮ್ಮ ಶರೀರಗಳಲ್ಲಿಯೂ ಪರರ ಶರೀರಗಳಲ್ಲಿಯೂ ನಾನು ಅಂತರ್ಯಾಮಿಯಲ್ಲವೆನ್ನುತ್ತ ದ್ವೇಷಿಸುವವರು ಕ್ರೂರ ನರಾಧಮರು. ಅವರನ್ನು ಪುನಃ ಪುನಃ ಅಸುರಜಾತಿಯಲ್ಲಿಯೆ ಹುಟ್ಟಿಸುತ್ತೇನೆ. ಅವರು ಜನ್ಮಜನ್ಮಗಳಲ್ಲಿ

೧. ಭಕ್ತಿಯೋಗನಿಷ್ಠತುಲ್ಯಾ ಏವ ದ್ವಿಷದಾದಯೋಽಪೀತಿ ಭಾವಃ । –ವೀರರಾಘವಃ

ಅಸುರರಾಗಿಯೆ ಹುಟ್ಟಿ ನನ್ನನ್ನು ದ್ವೇಷಿಸಿ ನನ್ನನ್ನು ಹೊಂದದೆಯೆ ಹೀನವಾದ ನಿತ್ಯನರಕವನ್ನು ಹೊಂದುತ್ತಾರೆ.' ಎಂದು ಹೇಳಿರುವುದರಿಂದ ನಿತ್ಯದ್ವೇಷಿಗಳಿಗೆ ನಿತ್ಯನರಕವನ್ನು ಒಪ್ಪಬೇಕು. ಪೂತನಾ ಕಂಸ ಮುಂತಾದವರ ಶರೀರದಲ್ಲಿ ಒಬ್ಬ ಸಾತ್ವಿಕ ಇನ್ನೊಬ್ಬ ತಾಮಸ ಎಂದು ಜೀವದ್ವಯಾವೇಶವಿರುವುದರಿಂದ ಅವರಿಗೆ ಮುಕ್ತಿಯನ್ನು ಹೇಳುವಲ್ಲೆಲ್ಲ ಅವರಲ್ಲಿರುವ ಸಾತ್ವಿಕ ಜೀವನಿಗೆ ಮಾತ್ರ ಮುಕ್ತಿ ಎಂದು ಹೇಳುವ ವಿವಕ್ಷೆ ಇದೆ.

ಇದನ್ನು ಒಪ್ಪದೆ [೧]ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ–'ಕೆಲವು ಜೀವರಿಗೆ ನಿತ್ಯನರಕವನ್ನು ಹೇಳಲಾಗದು. 'ಯಥಾಗ್ನೇಃ ಕ್ಷುದ್ರಾಃ ವಿಷ್ಫುಲಿಂಗಾಃ' , 'ಬಹು ಸ್ಯಾಂ ಪ್ರಜಾಯೇಯ' ಎಂದು ಮುಂತಾಗಿ ಶ್ರುತಿಗಳು ಹೇಳುವುದರಿಂದ ಎಲ್ಲ ಜೀವರೂ ಭಗವಂತನ ಅಂಶಗಳು. ಅವರಲ್ಲಿ ಕೆಲವು ಅಸುರರು ಸಾಕ್ಷಾದ್ ಭಗವಂತನನ್ನೇ ದ್ವೇಷದಿಂದ ಧ್ಯಾನಮಾಡಿ ಅಪರೋಕ್ಷ ಪಡೆದು ಮುಕ್ತರಾಗುತ್ತಾರೆ.

---

೧. ಯೇತು 'ಮಾಮಾತ್ಮ ಪರದೇಹೇಷು ಪ್ರದ್ವಿಷಂತ ಇತಿ ದ್ವೇಷಸಾಧನಾ ಭಗವತ್‌ಪ್ರಾಪ್ತಿಸಾಧ್ಯಾ ನಿರೂಪಿತಾಃ, ತೇ ಜಗದ್ರೂಪಮೇವ ಭಗವಂತಂ ದ್ವಿಷಂತಿ । ನತು ಸಾಕ್ಷಾತ್ ದ್ವಿಷಂತಿ । ಯೇತು ಸಾಕ್ಷಾದ್ ದ್ವಿಷಂತಿ ತೇ ಪ್ರಾಪ್ನುವಂತ್ಯೇವ । ಕೇನಚಿದಂತಃಕರಣಧರ್ಮೇಣ ತೇ ಭಗವತ್ಸಂಬಂಧಿನ ಇತಿ ಭಾಗವತಾಃ । ಯೇ ತು ಸಹಜಾ ದಾನವಾ 'ದಾನವಾಸ್ತು ತಮೋಲಯಾ' ಇತಿ ವೈಷ್ಣವೈರ್ನಿರೂಪಿತಾಃ ತೇ ವೇದೇಽಪಿ ದೇವಪ್ರತಿಪಕ್ಷತ್ವೇನ ನಿರೂಪಿತಾ ನ ಮುಚ್ಯಂತೇ ಇತಿ ಕೇಚಿತ್ । ತತಶ್ಚ ಮುಚ್ಯಮಾನೇಷು ಪೂತನಾದಿಷು ನ ಸಹಜಾಸುರತ್ವಂ, ಕಿಂತ್ವಸುರಾವೇಶಃ, ಸ ತು ಭಗವತ್ಸಂಬಂಧೇ ಗಚ್ಛತೀತಿ ತೇಷಾಂ ಮುಕ್ತಿರ್ಯುಕ್ತೇತಿ । ಏತದರ್ಥಂ ಭೇದವಾದಂ ವೈನಾಶಿಕೀಂ ಚ ಪ್ರಕ್ರಿಯಾಂ ಮೋಹಕವಾಕ್ಯವತ್ ಸ್ವವಿರುದ್ಧಂ ಭಗವದ್ವಾಕ್ಯಂ ವೇದವಾಕ್ಯಾನಿ ಚ ಮನ್ಯಂತೇ । ತೇ ಬಹುವಾಕ್ಯವಿರೋಧಾಚ್ಚಿಂತ್ಯಾಃ ।
– ವಲ್ಲಭಃ

ವಾಸ್ತವಭೇದ ವೈನಾಶಿಕಪ್ರಕ್ರಿಯಯೋರಂಗೀಕಾರೇ ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಂಗಾ ಇತಿ ಸರ್ವಲೋಕಪ್ರಾಣದೇವಾತ್ಮನಾಂ ಬ್ರಹ್ಮಣಃ ಸಕಾಶಾದ್ ವಿಭಾಗೇನ ವ್ಯುಚ್ಚರಣಭೋಧಕಾನಿ ಶ್ರುತಿವಾಕ್ಯಾನಿ, ಮಮೈವಾಂಶಃ, ಅಹಂ ಸರ್ವಸ್ಯ ಪ್ರಭವಃ, ವಿಶ್ವಂ ವೈ ಬ್ರಹ್ಮತನ್ಮಾತ್ರಂ, ಚತುಃಶ್ಲೋಕೀಪ್ರಭೃತಿವಾಕ್ಯಾನಿ, ಜೀವದ್ವಯ ಪ್ರವೇಶಾಂಗೀಕಾರೇ ಜಯವಿಜಯಶಾಪಬೋಧಕವಾಕ್ಯಾನಿ ಚ ವಿರುಧ್ಯೇರನ್ । ಉಕ್ತವಾಕ್ಯಾನಾಂ ಮೋಹಕವಾಕ್ಯತುಲ್ಯತ್ವಾಂಗೀಕಾರೇ ಯಥಾ ಹ್ಯೇವೈಷ ಏತಸ್ಮಿನ್ನುದರಮಂತರಂ ಕುರುತೇ ಅಥ ತಸ್ಯ ಭಯಂ ಭವತಿ ತತ್ತ್ವೇವ ಭಯಂ ವಿದುಷೋ ಮನ್ವಾನಸ್ಯ ಇತಿ, ಮಾಂ ವಿಧತ್ತೇಽಭಿ ಧತ್ತೇ ಮಾಂ ಇತ್ಯಾದೀನಿ ವಿರುಧ್ಯೇರನ್ । ಅತಶ್ಚಿಂತ್ಯಾ ಇತ್ಯರ್ಥಃ । –ಪುರುಷೋತ್ತಮಗೋಸ್ವಾಮೀ

ಇನ್ನು ಕೆಲವು ಅಸುರರು ಜಗದ್ರೂಪನಾದ ಭಗವಂತನನ್ನು ದ್ವೇಷಿಸಿ ಪುನಃ ಪುನಃ ಅಸುರಜಾತಿಯಲ್ಲಿ ಹುಟ್ಟಿ ನರಕಭಾಜನರಾಗುತ್ತಾರೆ. 'ಮಾಮಪ್ರಾಪ್ಯೈವ' ಎಂದು ಏವಕಾರವಿರುವುದರಿಂದ ಭಗವಂತನನ್ನು ಹೊಂದದಿದ್ದರೆ ಮಾತ್ರ ಅವರು ನರಕಕ್ಕೆ ಹೋಗುತ್ತಾರೆ ಹೊರತು ಸಾಕ್ಷಾದ್ ಭಗವಂತನನ್ನು ದ್ವೇಷಿಸಿ ಅವನನ್ನು ಹೊಂದಿದರೆ ಅವರೂ ಮುಕ್ತಿ ಹೊಂದುತ್ತಾರೆ. ಪೂತನಾದಿಗಳಲ್ಲಿ ಜೀವದ್ವಯಾವೇಶವೂ ಯುಕ್ತವಲ್ಲ. ಸಾತ್ವಿಕ ಜೀವರೇ ಶಾಪಪ್ರಯುಕ್ತವಾಗಿ ಅಸುರಜಾತಿಯಲ್ಲಿ ಹುಟ್ಟಿ ಭಗವಂತನನ್ನು ದ್ವೇಷಿಸುತ್ತಾರೆ.' ಎಂದು.

ಆದರೆ ಜೀವರು ಭಗವಂತನ ಭಿನ್ನಾಂಶರೇ ಹೊರತು, ಅಭಿನ್ನಾಂಶರಲ್ಲ. ಹಾಗೆ ಹೇಳಲು ಸ್ಪಷ್ಟ ಶ್ರುತಿವಚನಗಳಿಲ್ಲ. ಶ್ರುತ್ಯುಕ್ತವಾದ ಬೆಂಕಿಕಿಡಿ ದೃಷ್ಟಾಂತದಲ್ಲಿ ಅಭೇದವಿವಕ್ಷೆ ಇಲ್ಲ, ಕಿಂಚಿತ್ ಸಾದೃಶ್ಯ ಮಾತ್ರ ವಿವಕ್ಷೆ ಇದೆ. ಭಗವಂತ ಜಗದ್ರೂಪನೆನ್ನುವುದೇ ಅಶಕ್ಯವಾಗಿರುವಾಗ ಜಗದ್ರೂಪನಾದ ಪರಮಾತ್ಮನ ದ್ವೇಷ, ಸಾಕ್ಷಾತ್ ಪರಮಾತ್ಮನ ದ್ವೇಷ ಎಂದು ಭೇದಕಲ್ಪನೆಯೂ ಸರಿಯಲ್ಲ. ಸಾತ್ವಿಕ ಜೀವರು ಶಾಪಗ್ರಸ್ತರಾದರೂ ಅವರು ಭಗವಂತನನ್ನು ದ್ವೇಷಿಸಬೇಕಾದರೆ ಅಸುರಾವೇಶ ಬೇಕು. ನೀರು ಬಿಸಿಯಾಗಬೇಕಾದರೆ ಅಗ್ನಿಸ್ಪರ್ಶ ಬೇಕು. ಅದರಿಂದ ಪೂತನಾದಿಗಳು ದ್ವೇಷಿಸಲು ಕಾರಣ ಜೀವದ್ವಯಾವೇಶವೆನ್ನಲೇ ಬೇಕು. ಅದರಿಂದ ಅಸುರರು ಭಗವದ್ಭಕ್ತರೆನಿಸುವುದು ಮುಂತಾದುದು ಹೀಗೆ–

ಅಸುರಾ ಅಪಿ ಯೇ ವಿಷ್ಣುಂ ಶಂಖಚಕ್ರಗದಾಧರಮ್ ।
ಭಕ್ತಿಪೂರ್ವಮವೇಕ್ಷಂತೇ ಜ್ಞೇಯಾ ಭಾಗವತಾ ಇತಿ ॥

ವಿದ್ವಿಷಂತಿ ತು ಯೇ ವಿಷ್ಣುಂ ಋಷಿಪುತ್ರಾ ಅಪಿ ಸ್ಫುಟಮ್ ।
ಅಸುರಾಸ್ತೇಽಪಿ ವಿಜ್ಞೇಯಾ ಗಚ್ಛಂತಿ ಚ ಸದಾ ತಮಃ ॥

ಜೀವದ್ವಯಸಮಾಯೋಗಾದ್ಧಿರಣ್ಯಕಮುಖಾಃ ಪರೇ ।
ಭಕ್ತಿದ್ವೇಷಯುತಾಶ್ಚ ಸ್ಯುರ್ಗತಿಸ್ತೇಷಾಂ ಯಥಾನಿಜಮ್ ॥

ಕಂಸ ಪೂತನಿಕಾದ್ಯಾಶ್ಚ ಬಾಂಧವಾದಿಯುತಾ ಯತಃ ।
ಜೀವದ್ವಯಸಮಾಯೋಗಾದ್ ಗತಿದ್ವಯಜಿಗೀಷವಃ ॥

ಸರ್ವಥಾ ಭಕ್ತಿತೋ ಮುಕ್ತಿರ್ದ್ವೇಷಾತ್ ತಮ ಉದೀರಿತಮ್ ।
ನಿಯಮಸ್ತ್ವನಯೋರ್ನಿತ್ಯಂ ಮೋಹಾಯಾನ್ಯವಚೋ ಭವೇತ್ ॥

ಇತಿ ಬ್ರಾಹ್ಮೇ ।

ಶಂಖಚಕ್ರಗದಾಧರನಾದ ವಿಷ್ಣುವನ್ನು ಯಾರು ಭಕ್ತಿಯಿಂದ ಕಾಣುವರೋ ಅವರು ಅಸುರಜಾತಿಯವರಾದರೂ ಭಗವದ್ಭಕ್ತರೆಂದೇ ತಿಳಿಯಬೇಕು. ವಿಷ್ಣುದ್ವೇಷಿಗಳು ಋಷಿಕುಮಾರರೆ ಆಗಿದ್ದರೂ ಅವರನ್ನು ಅಸುರರೆಂದೇ ತಿಳಿಯಬೇಕು. ಅವರು ಸದಾ ತಮೋಭಾಗಿಗಳು. ಹಿರಣ್ಯಕಶಿಪುಮುಂತಾದ ಬೇರೆ ವರ್ಗದ ಜನರು ಜೀವದ್ವಯಾವೇಶದಿಂದ ಭಕ್ತಿದ್ವೇಷಗಳನ್ನು ಮಾಡುತ್ತಿದ್ದರೂ ತಮ್ಮ ಸ್ವರೂಪಯೋಗ್ಯತಾನುಸಾರ ಆಯಾ ಗತಿಗಳನ್ನು ಹೊಂದುತ್ತಾರೆ. ಕಂಸ ಪೂತನೆ ಮುಂತಾದವರು ತಮ್ಮ ಒಂದೇ ಶರೀರದಲ್ಲಿ ಸಾತ್ವಿಕತಾಮಸ ಜೀವರೊಡ ಗೂಡಿರುವುದರಿಂದ ಜೀವದ್ವಯಾವೇಶಪ್ರಯುಕ್ತ ಸದ್ಗತಿದುರ್ಗತಿ ಗಳೆರಡನ್ನು ಹೊಂದುತ್ತಾರೆ. ಅಂತೂ ಭಕ್ತಿಯಿಂದ ಮುಕ್ತಿ, ದ್ವೇಷದಿಂದ ತಮಸ್ಸು ಎಂಬ ನಿಯಮ ಶ್ರುತ್ಯಾದ್ಯುಕ್ತವಾಗಿರುವುದರಿಂದ ಅದೆಂದೂ ತಪ್ಪುವುದಿಲ್ಲ. 'ದ್ವೇಷಾಚ್ಚೈದ್ಯಾದಯೋ ನೃಪಾಃ' ಎಂದು ಮುಂತಾದ ವಚನಗಳು ಅಸುರ ಮೋಹಕವಾಗಿದ್ದು ಸಜ್ಜನರಲ್ಲಿ ಭಗವಂತನ ಕರುಣೆಯನ್ನು ಹೊಗಳುವ ಉದ್ದೇಶದಿಂದ ಹೊರಟಿವೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ದ್ವಿತೀಯೋಽಧ್ಯಾಯಃ

—o—

ಅಧ್ಯಾಯ-೩

ಅಧ್ಯಾಯಸಾರಾಂಶ

ಉದ್ಧವ ಮುಂದುವರಿದು ವಿದುರನಿಗೆ ಹೇಳುತ್ತಾನೆ. 'ಶ್ರೀಕೃಷ್ಣ ವೃಂದಾವನದಿಂದ ಮಧುರೆಗೆ ಬಂದು ಕಂಸನನ್ನು ವಧಿಸಿ, ಸಾಂದೀಪನಿಮುನಿಯ ಬಳಿ ಗುರುಕುಲವಾಸ ಮಾಡಿ, ಎಂದೋ ಗತಿಸಿದ್ದ ಗುರುಪುತ್ರನನ್ನು ತಿರುಗಿ ಬದುಕಿಸಿ ತಂದುಕೊಟ್ಟು ರುಗ್ಮಿಣೀ ಸ್ವಯಂವರ ನೀಲಾಸ್ವಯಂವರಗಳಲ್ಲಿ ಎಲ್ಲ ರಾಜರ ತೇಜೋವಧೆ ಮಾಡಿ ಕನ್ಯೆಯರನ್ನು ಅಪಹರಿಸಿ ತಂದು ಮದುವೆಯಾಗುತ್ತಾನೆ. ಸತ್ಯಭಾಮೆಗಾಗಿ ಸ್ವರ್ಗದಿಂದ ಪಾರಿಜಾತವೃಕ್ಷವನ್ನೇ ಭೂಮಿಗೆ ತರುತ್ತಾನೆ. ನರಕಾಸುರನ ಸೆರೆಯಲ್ಲಿದ್ದ ಹದಿನಾರು ಸಾವಿರ ರಾಜಕುಮಾರಿಯರನ್ನು ಮದುವೆಯಾಗಿ ಎಲ್ಲರಲ್ಲಿಯೂ ಹತ್ತುಹತ್ತೇ ಮಂದಿ ಮಕ್ಕಳನ್ನು ಪಡೆಯುತ್ತಾನೆ. ಭಕ್ತನಾದ ಮುಚುಕುಂದನಿಂದ ಕಾಲಯವನನನ್ನು ಭೀಮನಿಂದ ಜರಾಸಂಧನನ್ನು ಪಾಂಡವರಿಂದ ಕೌರವರನ್ನು ಕೊಲ್ಲಿಸಿ ಭೂಭಾರಹರಣ ಮಾಡುತ್ತಾನೆ. ಅಶ್ವತ್ಥಾಮಾಸ್ತ್ರದಿಂದ ಉತ್ತರೆಯ ಗರ್ಭವನ್ನು ಕಾಪಾಡುತ್ತಾನೆ. ಧರ್ಮರಾಜನಿಂದ ಅಶ್ವಮೇಧಯಾಗ ಮಾಡಿಸುತ್ತಾನೆ. ವಿಷಯ ಭೋಗದಿಂದ ತೃಪ್ತನಾಗಿ ವೈರಾಗ್ಯ ತಳೆದಂತೆಯೂ ತೋರಿಕೊಳ್ಳುತ್ತಾನೆ. ಮುಂದೆ ಅವನ ಸಂಕಲ್ಪದಂತೆ ಶಾಪಗ್ರಸ್ತರಾದ ಯಾದವರು ಇಪ್ಪತ್ತಾರುವರ್ಷಗಳು ಕಳೆದ ಬಳಿಕ ಕೊನೆ ಬಾರಿಗೆ ಪ್ರಭಾಸಕ್ಷೇತ್ರಕ್ಕೆ ಹೋಗಲಿದ್ದಾರೆ.

* * *

ಉದ್ಧವನು ವಿದುರನಿಗೆ ಶ್ರೀಕೃಷ್ಣನ ಅವತಾರ ಲೀಲೆಗಳನ್ನು ಹೇಳುತ್ತ ರುಕ್ಮಿಣೀಸ್ವಯಂವರದ ವಿಧಾನವನ್ನು ಹೇಳುತ್ತಾನೆ-

ಸಮಾಹುತಾ ಭೀಷ್ಮಕಕನ್ಯಯಾ ಯೇ
ಶ್ರಿಯಃ ಸವರ್ಣೇನ ಜಿಹೀರ್ಷಯೈಷಾಮ್ ।
ಗಾಂಧರ್ವವೃತ್ತ್ಯಾ ಮಿಷತಾಂ ಸ್ವಭಾಗಂ
ಜಹ್ರೇ ಪದಂ ಮೂರ್ಧ್ನಿ ದಧತ್ ಸುಪರ್ಣಃ ॥ ೩ ॥

ಎಲ್ಲ ರಾಜರುಗಳ ತೇಜಸ್ಸನ್ನು ಪರಾಭವಗೊಳಿಸುವ ಉದ್ದೇಶದಿಂದ ಶ್ರೀಕೃಷ್ಣನೆ ಭೀಷ್ಮಕರಾಜನ ಹೃದಯದಲ್ಲಿ ಅಂತರ್ಯಾಮಿಯಾಗಿ ನಿಂತು ಪ್ರೇರಿಸಿದಂತೆ ಆತ ರುಕ್ಮಿಣೀಸ್ವಯಂವರಕ್ಕಾಗಿ ಎಲ್ಲ ರಾಜರನ್ನೂ ಅವರು ಕ್ಷತ್ರಿಯರೆಂಬ ಕಾರಣದಿಂದ ಯೋಗ್ಯರೆಂದು ಕರೆಸಿಕೊಂಡಿದ್ದ. ಆ ರಾಜರೆಲ್ಲರೂ ನೋಡುತ್ತಿದ್ದಂತೆಯೆ ಶ್ರೀಕೃಷ್ಣ ಅವರನ್ನು ತೃಣೀಕರಿಸಿ ಗಾಂಧರ್ವವಿಧಿಯಿಂದ ತನಗೇ ಸೇರಬೇಕಾಗಿದ್ದ ದೇವಿಯನ್ನು ತಾನೇ ಅಪಹರಿಸಿ ತಂದ.

ಇಲ್ಲಿ 'ಭೀಷ್ಮಕಕನ್ಯಯಾ ಸಮಾಹುತಾಃ' ಎಂದರೆ ಸ್ವಯಂವರಕ್ಕೆ ರಾಜರುಗಳನ್ನು ರುಕ್ಮಿಣಿಯೇ ಕರೆಸಿಕೊಂಡಿದ್ದಳೆಂದು ಹೇಳಿದಂತೆ ಕಾಣುತ್ತದೆ. ಭೀಷ್ಮಕ ಕರೆಸಿಕೊಳ್ಳುತ್ತಾನೆ, ಸ್ವಯಂವರಕನ್ಯೆ ತಾನೆ ಕರೆಸಿಕೊಳ್ಳುವಳೆ? ಎಂಬ ಪ್ರಶ್ನೆ ಬಂದರೆ ಹೌದು, ಆದರೆ ರುಕ್ಮಿಯ ಮೂಲಕ ಕರೆಸಿಕೊಳ್ಳುತ್ತಾಳೆ ಎಂದು [೧]ಪುರುಷೋತ್ತಮವ್ಯಾಖ್ಯಾನ!' 'ಶ್ರಿಯಃ ಸವರ್ಣೇನ' ಅವಳಲ್ಲಿ ಲಕ್ಷ್ಮಿಯಂಥ ರೂಪಲಾವಣ್ಯವಿದ್ದಿತು. ಅದು ಅವರನ್ನು ಆಕರ್ಷಿಸಿ ಕರೆಸಿಕೊಂಡಿತು. ಅಥವಾ 'ಶ್ರಿಯಃ ಸವರ್ಣೇನ' ಲಕ್ಷ್ಮೀಸ್ವರೂಪಳಾದ ರುಕ್ಮಿಣಿಯ ಹೆಸರಿನಲ್ಲಿ ಮೊದಲ ಎರಡು ಅಕ್ಷರಗಳೆ ರುಕ್ಮಿಯ ಹೆಸರು. ಅಂಥ ರುಕ್ಮಿ ರಾಜರನ್ನು ಕರೆಸಿಕೊಂಡ. 'ಬುಭೂಷಯೈಷಾಂ' ಎಂದು ಪಾಠ. ಈ ರಾಜರಿಗೆ ಹಬ್ಬವಾಗಲಿ ಎಂಬ ಅಭಿಪ್ರಾಯದಿಂದ ರುಕ್ಮಿ ಕರೆಸಿಕೊಂಡ. ಅವರಲ್ಲಿ ಶಿಶುಪಾಲ ಮದುಮಗನಾಗಿ ಜರಾಸಂಧಾದಿರಾಜರು ದಿಬ್ಬಣಿಗರಾಗಿ ಹಬ್ಬ ಮಾಡಿ ಕೊಳ್ಳಲಿ, ಎಂದು. ಹೀಗೆ ಶ್ರೀಧರಾದಿ ವ್ಯಾಖ್ಯಾನಗಳು[೨] ಹೇಳುತ್ತವೆ. ಈ ವ್ಯಾಖ್ಯಾನದಲ್ಲಿ 'ಬುಭೂಷಯೈಷಾಂ' ಎಂಬ ಅಂಶ ಶ್ಲೋಕದಲ್ಲಿ ವ್ಯರ್ಥವಾಗುತ್ತದೆ. ಗಾಂಧರ್ವ ವಿವಾಹವಾಗುವ ಇಚ್ಛೆಯಿಂದ ಶ್ರೀಕೃಷ್ಣ ಅಪಹರಿಸಿದ ಎನ್ನುತ್ತಾರೆ. ಇದು ರಾಕ್ಷಸವಿವಾಹವಲ್ಲವೆ?

---

೧ ಭೀಷ್ಮಕಕನ್ಯಾಕರ್ತೃಕಾ ಯಾ ಏಷಾಂ ರಾಜ್ಞಾಂ ಪ್ರಾಪ್ತೀಚ್ಛಾ ತಯಾ ಸ್ವೋಟ್ಟಂಕಿತಯಾ ಹೇತುಭೂತಯಾ ರುಗ್ಮಿಣಾ ಸಮಾಹೂತಾ ಇತ್ಯರ್ಥೋ ಜ್ಞೇಯಃ ।
–ಪುರುಷೋತ್ತಮಃ

೨. ಶ್ರಿಯೋ ರುಗ್ಮಿಣ್ಯಾಃ ಸಮಾನಂ ವರ್ಣದ್ವಯಂ ವಾಚಕಂ ಯಸ್ಯ ಸ ಶ್ರಿಯಃ ಸವರ್ಣೋ ರುಗ್ಮೀ । ತೇನ ಸಮಾಹೂತಾಃ ಶಿಶುಪಾಲಾದಯಃ । ಕಿಮರ್ಥಂ ? ಭೀಷ್ಮಕಕನ್ಯಯಾ ಸಹ ತೇಷಾಂ ಬುಭೂಷಯಾ ಭೂತಿರ್ಭವತ್ವಿತ್ಯೇತದರ್ಥಂ । ತತ್ರ ಶಿಶುಪಾಲಸ್ಯಾಹ್ವಾನಂ ವರತ್ವೇನ ಬುಭೂಷಯಾ ಜರಾಸಂಧಾದೀನಾಂ ತು ತದ್ವಿವಾಹೋತ್ಸವೇನ । –ಶ್ರೀಧರಃ

ಎಂದರೆ[೧] ರುಕ್ಮಿಣಿಯ ವಿಷಯದಲ್ಲಿ ಗಾಂಧರ್ವ. ಇತರರ ವಿಷಯದಲ್ಲಿ ರಾಕ್ಷಸವೇ. ಎಲ್ಲ ರಾಜರೂ ಭಗವತ್‌ಸ್ವರೂಪರೇ ಆದ್ದರಿಂದ ರುಕ್ಮಿಣಿ ಯಾರನ್ನು ಬಯಸಿದರೂ ಪರ್ಯವಸಾನದಲ್ಲಿ ಕೃಷ್ಣನನ್ನೇ ಬಯಸಿದಂತಾಗುವುದರಿಂದ ಕೃಷ್ಣನ ವಿಷಯದಲ್ಲಿ ರುಕ್ಮಿಣಿಗೆ ಗಾಂಧರ್ವವೇ ಎಂದು ವಲ್ಲಭ ಹಾಗೂ ಪುರುಷೋತ್ತಮ ವ್ಯಾಖ್ಯಾನಗಳು! 'ಜೀಹೀರ್ಷಯೈಷಾಂ' ಎಂದೇ ಪಾಠವಿಟ್ಟುಕೊಂಡರೆ ಅದಕ್ಕೆ ಅನ್ವಯವಿಲ್ಲ. 'ಶ್ರಿಯಃ ಸವರ್ಣೇನ' ಎಂದರೆ ಶ್ರೀಶಬ್ದಕ್ಕೆ ಸಮಾನವಾದ ಶಬ್ದ ರುಕ್ಮಿಯ ಹೆಸರು ಎಂದಾಗುವುದು. 'ರುಕ್ಮಿಣಿ' ಶಬ್ದಕ್ಕೆ ಸಮಾನ ಎಂದಲ್ಲ. ಅದಕ್ಕೆ 'ಭೀಷ್ಮಕಕನ್ಯಯಾ' ಎಂದಿರುವುದರಿಂದ 'ತಸ್ಯಾಃ' 'ಅವಳ'ಹೆಸರಿಗೆ ಸಮಾನವಾದ ಹೆಸರೆನ್ನಬೇಕಾಗಿತ್ತು. 'ಶ್ರಿಯಃ' ಎನ್ನುವುದು ವ್ಯರ್ಥ.

ವಸ್ತುತಃ ರುಕ್ಮಿಣಿ ಕೃಷ್ಣನಿಗೆ ಸೇರಬೇಕಾದವಳು, ಸ್ವಭಾಗ. ಸಾತ್ವಿಕನಾದ ಭೀಷ್ಮಕರಾಜನಿಗೆ ಅವಳ ಸ್ವಯಂವರವೇರ್ಪಡಿಸಿ ಎಲ್ಲ ರಾಜರನ್ನು ಕರೆಸುವ ದುರ್ಬುದ್ಧಿ ಏಕೆ ಬಂತು? ಎಂದರೆ ಕೃಷ್ಣನೆ ಹಾಗೆ ಪ್ರೇರಿಸಿದ. ಅದು ಎಲ್ಲ ರಾಜರೂ ನೋಡುತ್ತಿದ್ದಂತೆ ತಾನು ಕನ್ಯೆಯನ್ನು ಅಪಹರಿಸಿ ಅವರ ತೇಜಸ್ಸನ್ನು ಪರಾಭವಗೊಳಿಸ ಬೇಕೆನ್ನುವ ಉದ್ದೇಶದಿಂದ ಎಂಬ ಅಪೂರ್ವಪ್ರಮೇಯ ಈ ಶ್ಲೋಕದಲ್ಲಿ ಗರ್ಭಿತವಾಗಿದೆ. ಹಾಗೆ ವ್ಯಾಖ್ಯಾನ ಮಾಡಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ-

ಭೀಷ್ಮಕಕನ್ಯಾಯಾ ಅರ್ಥೇ ಸವರ್ಣಮಾತ್ರತಯಾ ಆಹೂತಾಃ । ಏಷಾಂ ಶ್ರಿಯೋ ಜಿಹೀರ್ಷಯಾ ಆಹ್ವಾನಬುದ್ಧಿರ್ಭಗವತಾ ಕೃತಾ ।

ಸುಪರ್ಣಃ ಸುಪರಾನಂದಾತ್ ಕಾಕುತ್ಸ್ಥೋ ವಾಚಿ ಸಂಸ್ಥಿತೇಃ ॥

ಇತಿ ಪಾದ್ಮೇ ।

ರುಗ್ಮಿಣಿಗಾಗಿ ಅಂದರೆ ಅವಳ ಸ್ವಯಂವರಕ್ಕಾಗಿ ಎಲ್ಲ ರಾಜರೂ ಅವರು ಕ್ಷತ್ರಿಯರಾದ್ದರಿಂದ ಯೋಗ್ಯರೆಂದು ಆಹ್ವಾನಿತರಾಗಿದ್ದರು ಹೊರತು ರುಗ್ಮಿಣಿಯನ್ನು ಹೊಂದಲು ಯೋಗ್ಯರೆಂದಲ್ಲ. ಈ ರಾಜರ ತೇಜಸ್ಸನ್ನು ಪರಾಭವಗೊಳಿಸುವ

---

೧ ರುಗ್ಮಿಣ್ಯಂಶೇ ಗಾಂಧರ್ವತಾ । ಇತರವಿಷಯೇ ಪ್ರಸಹ್ಯ ಕನ್ಯಾಹರಣಾತ್ ರಾಕ್ಷಸತ್ವಮಿತಿ ಗಾಂಧರ್ವವೃತ್ತ್ಯಾ ಜಹ್ರೇ ಇತ್ಯುಕ್ತಂ । ಅನಿಯತತ್ವಾತ್ ಸರ್ವಪ್ರತಿರೂಪತಯಾ ಗಾಂಧರ್ವತ್ವಂ । –ವಲ್ಲಭಃ

ಅನಿಯತತ್ವಾತ್ ಇಚ್ಛಾಯಾ ಅನಿಶ್ಚಿತತ್ವಾತ್ ಭಗವತಃ ಸರ್ವಪ್ರತಿರೂಪತ್ವಾತ್ ಕುತ್ರಾಪೀಚ್ಛಾಭವನೇ ಭಗವತ್ಯೇವ ಪರ್ಯವಸಾನಾದ್ ವಿವಾಹಸ್ಯ ಗಾಂಧರ್ವತ್ವಮಿತ್ಯರ್ಥಃ । –ಪುರುಷೋತ್ತಮಃ

ಇಚ್ಛೆಯಿಂದ ಅವರನ್ನು ಕರೆಸಲು ಭೀಷ್ಮಕನಿಗೆ ಭಗವಂತನೆ ಬುದ್ಧಿಯನ್ನು ಪ್ರೇರಿಸಿದ್ದ. ಪದ್ಮಪುರಾಣ ಹೇಳುವಂತೆ ಶ್ರೀಕೃಷ್ಣ 'ಸು-ಪರ-ಣ' ಬಹಳ ಉತ್ತಮವಾದ ಆನಂದಸ್ವರೂಪನಾದ್ದರಿಂದ 'ಸುಪರ್ಣ'ನೆನಿಸುತ್ತಾನೆ. ವಾಗಿಂದ್ರಿಯ ದಲ್ಲಿರುವುದರಿಂದ 'ಕಾಕುತ್ಸ್ಥ' ಎಂದೂ ಕರೆಸಿಕೊಳ್ಳುತ್ತಾನೆ.

'ಭೀಷ್ಮಕಕನ್ಯಯಾ' ಎಂದರೆ ರುಕ್ಮಿಣಿನಿಮಿತ್ತವಾಗಿ, ರುಕ್ಮಿಣಿಸ್ವಯಂವರಕ್ಕಾಗಿ ಎಂದರ್ಥ. 'ಸವರ್ಣೇನ' ಎಂಬುದು ಭಾವಪ್ರಧಾನ ನಿರ್ದೇಶ. ಸಜಾತೀಯರು, ಕ್ಷತ್ರಿಯರು ಎಂದಿಷ್ಟೇ ಕಾರಣದಿಂದ ಹೊರತು ರುಗ್ಮಿಣಿಗೆ ಪತಿಗಳಾಗಲು ಯೋಗ್ಯರೆಂದಲ್ಲ ಎಂದರ್ಥ. 'ಶ್ರಿಯೋ ಜಿಹೀರ್ಷಯಾ' 'ರಾಜರ ತೇಜಸ್ಸನ್ನು ಅಪಹರಿಸುವ ಉದ್ದೇಶದಿಂದ' ಎಂದು ಎರಡೂ ಪದಗಳಿಗೆ ಸಾರ್ಥಕ್ಯ ಬರುತ್ತದೆ. 'ಆಹುತಾಃ' ಉಕಾರಹ್ರಸ್ವ ಆರ್ಷಪ್ರಯೋಗ. ರಾಜರು ಕರೆಸಲ್ಪಟ್ಟರು, ಯಾರಿಂದ? ಭೀಷ್ಮಕನಿಂದ ಎಂದೇ ಹೇಳಬೇಕು. ಆದರೆ ರಾಜರ ತೇಜಸ್ಸನ್ನು ಅಪಹರಿಸುವ ಉದ್ದೇಶದಿಂದ ಅವರನ್ನು ಭೀಷ್ಮಕ ಕರೆಸಿಕೊಂಡನೆ? ಇಲ್ಲ, ಭಗವಂತನಿಗೆ ಆ ಉದ್ದೇಶವಿದ್ದುದರಿಂದ ಅವನು ರಾಜರನ್ನು ಕರೆಸಿಕೊಳ್ಳಲು ಭೀಷ್ಮಕನನ್ನು ಪ್ರೇರಿಸಿದ.

'ಸುಪರ್ಣಃ' ಎಂದರೆ ಗರುಡ ಎಂದಿಟ್ಟುಕೊಂಡರೆ 'ಗರುಡ ತನಗೆ ಸೇರಬೇಕಾದ ಅಮೃತವನ್ನು ಅಪಹರಿಸಿದಂತೆ' ಎಂದು ಅನ್ವಯಿಸಬಹುದಿತ್ತು. ಹಾಗೇ ಎಲ್ಲ ವ್ಯಾಖ್ಯಾನಕಾರರು ಮಾಡಿರುತ್ತಾರೆ. ಆದರೆ 'ಇವ' ಶಬ್ದವಿಲ್ಲ. ಅಮೃತಶಬ್ದವೂ ಇಲ್ಲ. ಅದರಿಂದ 'ಸುಪರ್ಣ' ಎಂಬುದು ಮಹಾಯೋಗವೃತ್ತಿಯಿಂದ ಮುಖ್ಯವಾಗಿ ಭಗವಂತನ ನಾಮ ಎಂದಿಟ್ಟುಕೊಳ್ಳಬೇಕು. ಪರಮಾನಂದಸ್ವರೂಪ ಎಂದರ್ಥ. ಪರಮಾನಂದಸ್ವರೂಪನಾದ್ದರಿಂದ ಕೃಷ್ಣ ಅನಾಯಾಸವಾಗಿ ರಾಜರ ತೇಜಸ್ಸನ್ನು ಅಪಹರಿಸಿ, ಅವರನ್ನು ತೃಣೀಕರಿಸಿ ಕನ್ಯೆಯನ್ನು ಅಪಹರಿಸಿದ. '

೧'ಸುಪರ್ಣ' ಎಂದರೆ ಒಳ್ಳೆಯ ರಥ ಉಳ್ಳವನೆಂದು ವೀರರಾಘವವ್ಯಾಖ್ಯಾನ. ರುಗ್ಮಿಣಿಯ ಅನುಮತಿ ಇದ್ದುದರಿಂದ ಒಳ್ಳೆಯ ಗಮನ ಉಳ್ಳವನೆಂದು ಶುಕದೇವ ವ್ಯಾಖ್ಯಾನ. ಆದರೂ ಸುಪರ್ಣಶಬ್ದದ ಸಾರ್ಥಕತೆ 'ಪರಮಾನಂದರೂಪ' ಎಂಬ ಅರ್ಥವಿವಕ್ಷೆಯಲ್ಲಿಯೆ ಎನ್ನುವುದು ಸ್ಪಷ್ಟ. ಮತ್ತು ಈ ಅರ್ಥ ಪದ್ಮಪುರಾಣವಚನಸಿದ್ಧವೂ ಆಗಿದೆ. ಕೇವಲ ಕಾಲ್ಪನಿಕವಲ್ಲ.

* * *

ಶ್ರೀಕೃಷ್ಣ ಒಂದೇ ಮುಹೂರ್ತದಲ್ಲಿ ಹದಿನಾರು ಸಾವಿರದ ನೂರು ಮಂದಿ ರಾಜಕುಮಾರಿಯರನ್ನು ಬಹುರೂಪ ತಾಳಿ ವಿಧ್ಯುಕ್ತವಾಗಿ ವಿವಾಹವಾದ. ಬಳಿಕ

---

೧ ಸುಪರ್ಣಃ ಶೋಭಮಾನರಥಃ – ವೀರರಾಘವಃ

ಸುಪರ್ಣಃ ಶೋಭನಂ ರುಗ್ಮಿಣ್ಯನುಮತ್ಯಾ ಗಮನಂ ಯಸ್ಯ ಸಃ –ಶುಕದೇವಃ ।

ಅವರಲ್ಲಿ ಪ್ರತಿಯೊಬ್ಬರಲ್ಲಿಯೂ ಹತ್ತು ಹತ್ತು ಮಂದಿ ತನ್ನಂತೆಯೆ ಇರುವ ಮಕ್ಕಳನ್ನು ಪಡೆದ ಎಂದು ಉದ್ಧವ ವಿದುರನಿಗೆ ಹೇಳುತ್ತಾನೆ–

ತಾಸ್ವಪತ್ಯಾನ್ಯಜನಯದಾತ್ಮತುಲ್ಯಾನಿ ಸರ್ವತಃ ।
ಏಕೈಕಸ್ಯಾಂ ದಶದಶ ಪ್ರಕೃತೇರ್ವಿಬುಭೂಷಯಾ ॥ ೯ ॥

ತನ್ನ ಅವತಾರಕಾಲದಲ್ಲಿ ಜಡಪ್ರಕೃತಿಗೆ ಬಹುಸಂಖ್ಯೆಯಲ್ಲಿ ಸುಂದರ ಶರೀರಾಕಾರಗಳು ಬರಲಿ ಎಂಬ ಉದ್ದೇಶದಿಂದ ಶ್ರೀಕೃಷ್ಣ ಹದಿನಾರು ಸಾವಿರದ ನೂರು ಮಡದಿಯರಲ್ಲಿ ಪ್ರತಿಯೊಬ್ಬರಲ್ಲಿ ಹತ್ತು ಹತ್ತು ಮಂದಿ ತನ್ನಂತೆಯೆ ಇರುವ ಮಕ್ಕಳನ್ನು ಹುಟ್ಟಿಸಿದ.

ಇಲ್ಲಿ ಶ್ರೀಕೃಷ್ಣನ ಮಕ್ಕಳು ಶ್ರೀಕೃಷ್ಣನಿಗೆ ಎಲ್ಲ ವಿಧದಿಂದಲೂ ಸಮಾನರು ಎಂದು ಹೇಳಿದಂತೆ ಕಾಣುತ್ತದೆ. ಎಲ್ಲ ವ್ಯಾಖ್ಯಾನಕಾರರೂ ಹಾಗೇ ಅರ್ಥೈಸಿದ್ದಾರೆ. 'ಪ್ರಕೃತೇರ್ವಿಬುಭೂಷಯಾ' ಎಂದರೆ ಜಡಪ್ರಕೃತಿಗೆ ಬಹುರೂಪ ಬಂದೇನು ಫಲ? ಪ್ರಕೃತಿ ಎಂದರೆ ತನ್ನ ಸ್ವಭಾವ, ಸ್ವರೂಪ. 'ಪ್ರಕೃತೇಃ ಸ್ವರೂಪಸ್ಯೈವ ವೈಭವೇಚ್ಛಯಾ' ಶ್ರೀಕೃಷ್ಣ ತನ್ನ ಸ್ವರೂಪವನ್ನೆ ಬಹುವಾಗಿ ಮಾಡಿಕೊಳ್ಳುವ ಉದ್ದೇಶದಿಂದ ಪೂರ್ತಿಯಾಗಿ ತನ್ನಂತೆಯೆ ಇರುವ ಮಕ್ಕಳನ್ನು ಹುಟ್ಟಿಸಿದನೆಂದು ಶ್ರೀಧರ ಜೀವಗೋಸ್ವಾಮಿ ವಲ್ಲಭಾಚಾರ್ಯವ್ಯಾಖ್ಯಾನಗಳೆಲ್ಲವೂ ಹೇಳಿವೆ. ಆದರೆ ಭಗವಂತನಿಗೆ ಪೂರ್ತಿಸಮಾನ ಭಗವಂತನೆ ಹೊರತು ಇನ್ನೊಬ್ಬನಿರುವನೆಂದರೆ ಅದು ಪ್ರಮಾಣಬಾಧಿತ. ಕೃಷ್ಣನ ಮಕ್ಕಳೆಲ್ಲರೂ ಕೃಷ್ಣಸ್ವರೂಪರೆನ್ನುವುದೂ ಪ್ರಮಾಣಬಾಧಿತ. ಆದರಿಂದ 'ಸರ್ವತಃ ಆತ್ಮತುಲ್ಯಾನಿ' ಎಂಬಲ್ಲಿ ಸರ್ವಶಬ್ದಾರ್ಥ ಸಂಕೋಚ ಮಾಡಲೇ ಬೇಕೆಂದು ಅಗ್ನಿಪುರಾಣ ಹೇಳಿದೆ–

ಉತ್ತಮೈಃ ಸರ್ವತಃ ಸಾಮ್ಯಂ ಕಿಂಚಿತ್ ಸಾಮ್ಯಮುದೀರ್ಯತೇ ।
ಇತ್ಯಾಗ್ನೇಯೇ ।

ಅಧಮರಿಗೆ ಉತ್ತಮರಿಂದ ಸರ್ವಸಾಮ್ಯ ಹೇಳಿದರೆ ಅಲ್ಪಸಾಮ್ಯವೆ ವಿವಕ್ಷಿತ ವೆಂದಿಟ್ಟುಕೊಳ್ಳಬೇಕೆಂದು ಅಗ್ನಿಪುರಾಣದಲ್ಲಿ ಉಕ್ತವಾಗಿದೆ.

* * *

ಶ್ರೀಕೃಷ್ಣ ಪಾಂಡವರಿಗೆ ರಾಜ್ಯ ದೊರಕಿಸಿಕೊಟ್ಟು ಅವರಿಂದ ಅಶ್ವಮೇಧ ಯಾಗಗಳನ್ನು ಮಾಡಿಸಿ ದ್ವಾರಕೆಯಲ್ಲಿ ಸುಖವಾಗಿ ವಾಸಮಾಡಿದನೆಂದು ಉದ್ಧವ ವಿದುರನಿಗೆ ಹೇಳುತ್ತಾನೆ–

ಭಗವಾನಪಿ ವಿಶ್ವಾತ್ಮಾ ಲೋಕವೇದಪಥಾನುಗಃ ।
ಕಾಮಾನ್ ಸಿಷೇವೇ ದ್ವಾರ್ವತ್ಯಾಮಸಕ್ತಃ ಸಾಂಖ್ಯಮಾಸ್ಥಿತಃ ॥ ೧೯ ॥

ಸರ್ವಾಂತರ್ಯಾಮಿ ಶ್ರೀಕೃಷ್ಣ ಪ್ರಕೃತಿಸಂಪರ್ಕರಹಿತವಾದ ಸ್ವಾನಂದಾನು ಭವದಲ್ಲಿ ಮಗ್ನನಾಗಿದ್ದು ವಿಷಯಭೋಗದಲ್ಲಿ ವಿರಕ್ತನಾಗಿದ್ದರೂ ಲೋಕಾನು ಕರಣೆಗಾಗಿ ಲೌಕಿಕವೈದಿಕಮಾರ್ಗಗಳಲ್ಲಿ ನಡೆಯುತ್ತ ಸುಖ ಭೋಗಗಳನ್ನು ಸೇವಿಸಿದ.

ಇಲ್ಲಿ 'ಸಾಂಖ್ಯಂ' ಎಂದರೆ ಪ್ರಕೃತಿಪುರುಷವಿವೇಕ ಎಂದು ಶ್ರೀಧರ ಮುಂತಾದ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಜೀವರಿಗೆ ಪ್ರಕೃತಿಪುರುಷವಿವೇಕದಿಂದ ಮೋಕ್ಷ ಲಭಿಸುತ್ತದೆ. ಅನಂತರ ವಿಷಯಭೋಗವೆ ಇಲ್ಲ. ಪರಮಾತ್ಮನಿಗೂ ಹಾಗೇ ಏನು? ಅವನು ಭೋಗಿಸುತ್ತಾನೆ. ವಸ್ತುತಃ ಸಾಂಖ್ಯಶಾಸ್ತ್ರದಲ್ಲಿ ಹೇಳಿದ ಪ್ರಕೃತಿಪುರುಷವಿವೇಕವೆಂದರೆ ಪ್ರಕೃತಿ ಜೀವ ವಿವೇಕ. ಏಕೆಂದರೆ ಸಾಂಖ್ಯರು ನಿರೀಶ್ವರವಾದಿಗಳು. ಅವರಿಗೆ ಪುರುಷನೆಂದರೆ ಜೀವನೆ. ಈ ಪ್ರಕೃತಿಜೀವ ವಿವೇಕದಿಂದ ಭಗವಂತನಿಗೇನು ಉಪಯೋಗ? ಅನಾಸಕ್ತಿ ಬರುವುದೆ? ಭಗವಂತ ತಾನು ಜೀವನಾಗಿದ್ದು ಪ್ರಕೃತಿಗಿಂತ ಬೇರೆ ಎಂದು ತಿಳಿದಾಗಲೆ ಅದರಿಂದ ಅವನಿಗೆ ಉಪಯೋಗ. ಆದರೆ ಆತ ಜೀವನಲ್ಲ ತಾನೆ? ಹೀಗೆ ಸಾಂಖ್ಯಶಬ್ದಾರ್ಥ ಇಲ್ಲಿ ಅಸಂಗತವಾಗುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ-

ಕೇವಲಂ ಭಗವಜ್ಜ್ಞಾನಂ ಸಾಂಖ್ಯಮಿತ್ಯಭಿಧೀಯತೇ ।

ಇತ್ಯಧ್ಯಾತ್ಮೇ ।

ಪ್ರಕೃತಿಯನ್ನು ಗ್ರಹಿಸದೆ ಪ್ರಕೃತಿಸಂಪರ್ಕರಹಿತವಾದ ಮತ್ತು ಸರ್ವೋತ್ತಮವಾದ ಶುದ್ಧ ಸ್ವರೂಪಾನಂದವನ್ನು ಭಗವಂತ ಅನುಭವಿಸುವುದಕ್ಕೆ ಸಾಂಖ್ಯವೆಂದು ಹೆಸರು ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

ಭಗವಂತನಿಗೆ ತನ್ನ ಸ್ವರೂಪಾನಂದವೆ ಸರ್ವೋತ್ತಮವಾಗಿದ್ದು ಸಾಗರದಂತೆ ಅಪರಿಮಿತವಾಗಿರುವಾಗ ಕ್ಷುದ್ರವಾದ ವಿಷಯಸುಖದಲ್ಲಿ ಆಸಕ್ತಿ ಸಾಧ್ಯವೆ? ಅದರಿಂದ ಅವನು ವಿಷಯಭೋಗದಲ್ಲಿ ಅನಾಸಕ್ತಿ ತಾಳಿದ್ದನೆನ್ನುವುದು ಸಮಂಜಸವಾಗಿದೆ.

[೧]ಸಂಖ್ಯಾ ಎಂದರೆ ಜ್ಞಾನ. ಅದರಿಂದ ಸಾಂಖ್ಯವೆಂದರೆ ಜ್ಞಾನಗಮ್ಯ, ಅಂದರೆ ಮುಮುಕ್ಷುಗಳಿಗೆ ಉಪಾಸ್ಯವಾದ ಭಗವತ್‌ಸ್ವರೂಪ. ಅದರಲ್ಲಿ , ಅಂದರೆ ಸ್ವಾನಂದಾನುಭವದಲ್ಲಿ ಮಗ್ನ ಎಂದು ವೀರರಾಘವವ್ಯಾಖ್ಯಾನದಲ್ಲಿ ಬಹುಕ್ಲೇಶದಿಂದ ವ್ಯಾಖ್ಯಾನಿಸಿದ್ದಾರೆ. ಅದಕ್ಕಿಂತ ಅಧ್ಯಾತ್ಮಗ್ರಂಥದ ಆಧಾರದಿಂದ ವ್ಯಾಖ್ಯಾನಿಸುವುದೇ ಸುಲಭ, ಹೃದಯಂಗಮ.

* * *

೧. ಸಂಖ್ಯಾ ಬುದ್ಧಿಃ ತಯಾ ಗಮ್ಯಂ ಸಾಂಖ್ಯಂ ಮುಮುಕ್ಷೂಪಾಸ್ಯಂ ಸ್ವಾತ್ಮಾನಮಾಸ್ಥಿತಃ । ಸ್ವಾನಂದಮೇವಾನುಭವನ್ನಿತ್ಯರ್ಥಃ । —ವೀರರಾಘವಃ

ಶ್ರೀಕೃಷ್ಣ ತನ್ನ ಚೆಲುವಾದ ಮುಗಳುನಗೆ ನಡೆ ನುಡಿಗಳಿಂದ ಮೋಹಕ ಶರೀರಕಾಂತಿಯಿಂದ ಎಲ್ಲರನ್ನೂ ಆನಂದಪಡಿಸುತ್ತ ತಾನೂ ನಲಿಯುತ್ತ ಬಹುಕಾಲ ದ್ವಾರಕೆಯಲ್ಲಿ ವಾಸಮಾಡಿದನೆಂದೂ ಬಳಿಕ ಎಲ್ಲ ವಿಷಯ ಭೋಗಗಳಲ್ಲಿ ವೈರಾಗ್ಯ ತೋರಿದನೆಂದೂ ಉದ್ಧವ ವಿದುರನಿಗೆ ಹೇಳುತ್ತಾನೆ–

ತಸ್ಯೈತ್ಥಂ ರಮಮಾಣಸ್ಯ ಸಂವತ್ಸರಗಣಾನ್ ಬಹೂನ್ ।
ಗೃಹಮೇಧೇಷು ಯೋಗೇಷು ವಿರಾಗಃ ಸಮಜಾಯತ ॥ ೨೨ ॥

ಹೀಗೆ ಬಹುವರ್ಷಕಾಲ ವಿಷಯಸುಖ ಉಂಡು ಬಳಿಕ ಶ್ರೀಕೃಷ್ಣ ಗೃಹಸ್ಥ ಧರ್ಮಾಚರಣೆಗಳಲ್ಲಿಯೂ ವಿಷಯಭೋಗಸಾಧನಗಳಲ್ಲಿಯೂ ವೈರಾಗ್ಯ ಹೊಂದಿದವನಂತೆ ತೋರಿಕೊಂಡ.

ಇಲ್ಲಿ ಭಗವಂತನಿಗೆ ವಿಷಯವೈರಾಗ್ಯ ಬಂದಿತೆಂದು ಹೇಳಿದಂತೆ ಕಾಣುತ್ತದೆ. ಶ್ರೀಧರಾದಿ ವ್ಯಾಖ್ಯಾನಗಳು ಹಾಗೇ ಹೇಳಿವೆ. ವೈರಾಗ್ಯ ಬರಲು ಕಾರಣವೂ ಬಹುಕಾಲ ಅತಿಯಾಗಿ ವಿಷಯಭೋಗ ಮಾಡಿದ್ದರಿಂದ ಎಂದು ಈ ಶ್ಲೋಕದಲ್ಲಿ ಹೇಳಿದಂತೆ ಕಾಣುತ್ತದೆ. ವಲ್ಲಭವ್ಯಾಖ್ಯಾನ ಹಾಗೇ ಹೇಳಿದೆ–'ವೈರಾಗ್ಯ ಬರುವುದು ಎರಡು ಕಾರಣಗಳಿಂದ. ವಿಷಯದಲ್ಲಿ ಅಸಾರತೆ ಕಂಡು ಬೇಸರಪಡುವುದರಿಂದ ಮತ್ತು ಬಹಳವಾಗಿ ವಿಷಯಸುಖ ಉಂಡು ತೃಪ್ತಿಪಡುವುದರಿಂದ. ಇಲ್ಲಿ ಶ್ರೀಕೃಷ್ಣನಿಗೆ ವೈರಾಗ್ಯ ಬಂದಿರುವುದು ತೃಪ್ತಿಪಟ್ಟಿದ್ದರಿಂದ' ಎಂದು. ವಿಶ್ವನಾಥ ವ್ಯಾಖ್ಯಾನ ಇದನ್ನು ಒಪ್ಪುವುದಿಲ್ಲ. 'ಭಗವಂತನಿಗೆ ವಿಷಯವೈರಾಗ್ಯ ಸರ್ವಕಾಲದಲ್ಲಿ ಇರುವಂಥದ್ದೇ. ಆದರೆ ಅದು ಇಷ್ಟರ ವರೆಗೆ ಸ್ಪಷ್ಟವಿರಲಿಲ್ಲ, ಈಗ ಬಹಳ ಸ್ಪಷ್ಟವಾಯಿತು' ಎಂದು. ವಸ್ತುತಃ ಭಗವಂತನಿಗೆ ವಿಷಯವೈರಾಗ್ಯ ಎಲ್ಲ ಕಾಲಗಳಲ್ಲಿಯೂ ಸ್ಪಷ್ಟವಾಗಿಯೆ ಇರುತ್ತದೆ ಅದರಿಂದ ಹೀಗೆ ವ್ಯಾಖ್ಯಾನ ಮಾಡಬೇಕು–

ಸರ್ವದಾಽಪಿ ವಿರಕ್ತಃ ಸನ್ ಭಾಸಯೀತ ವಿರಾಗಿವತ್ ।
ಕಾದಾಚಿತ್ಕಃ ಕುತಸ್ತಸ್ಯ ಲೋಕಶಿಕ್ಷಾರ್ಥಮಿಷ್ಯತೇ ।
ಇತಿ ಪಾದ್ಮೇ ॥

ಭಗವಂತ ಸದಾ ವಿಷಯವಿರಕ್ತನೆ. ಕೆಲವೊಮ್ಮೆ ಅದನ್ನು ತೋರಿಸಿಕೊಳ್ಳುತ್ತಾನಷ್ಟೆ, ಕೆಲವೊಮ್ಮೆ ವೈರಾಗ್ಯ ಬರುತ್ತದೆ ಎನ್ನುವುದು ಹೇಗೆ ಯುಕ್ತವಾದೀತು? ಕೆಲವೊಮ್ಮೆ ಅದನ್ನು ತೋರಿಕೊಳ್ಳುವುದು ಲೋಕಶಿಕ್ಷಣಕ್ಕಾಗಿ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಅದರಿಂದ 'ವಿರಾಗಃ ಸಮಜಾಯತ' ಎಂದರೆ ವೈರಾಗ್ಯ ಉಂಟಾಯಿತೆಂದು ಅರ್ಥವಲ್ಲ. ಲೋಕಕ್ಕೆ ಅವನ ವೈರಾಗ್ಯ ಕಾಣಿಸಿತೆಂದರ್ಥ.

* * *

ಶ್ರೀಕೃಷ್ಣ ವಿಷಯವೈರಾಗ್ಯವನ್ನು ತೋರಿದ್ದರಿಂದ ಲೋಕಕ್ಕೆ ಜ್ಞಾನೋದಯವಾಯಿತು, ವಿಷಯಭೋಗದಲ್ಲಿ ಸಾರವಿಲ್ಲ ಎಂದು. ಹೀಗೆ ಉದ್ಧವ ವಿದುರನಿಗೆ ಹೇಳುತ್ತಾನೆ-

ದೈವಾಧೀನೇಷು ಕಾಮೇಷು ದೈವಾಧೀನಃ ಸ್ವಯಂ ಪುಮಾನ್ ।
ಕೋ ವಿಸ್ರಂಭೇತ ಯೋಗೇನ ಯೋಗೇಶ್ವರಮನುವ್ರತಃ ॥ ೨೩ ॥

ಭಗವಂತ ತಾನು ಸ್ವತಂತ್ರನಾಗಿದ್ದು ವಿಷಯಪದಾರ್ಥಗಳೆಲ್ಲವನ್ನೂ ತನ್ನ ವಶದಲ್ಲಿ ಇಟ್ಟುಕೊಂಡವನು. ಅಂಥ ಭಗವಂತನೂ ವಿಷಯವೈರಾಗ್ಯ ಹೊಂದಿರುವನೆಂದ ಮೇಲೆ ಅವನು ಉಪದೇಶಿಸಿದ ಯೋಗಮಾರ್ಗವನ್ನು ಅನುಸರಿಸುವ ಯಾವ ಸಜ್ಜನನು ತಾನೆ ವಿಷಯಾಸಕ್ತಿಯನ್ನಿರಿಸಿಕೊಳ್ಳುವನು? ಏಕೆಂದರೆ ಅವನು ತಾನೇ ಪರಾಧೀನ. ದೈವ ಅವನನ್ನು ಆಳುತ್ತದೆ. ವಿಷಯಪದಾರ್ಥಗಳೂ ಅವನ ವಶದಲ್ಲಿಲ್ಲ, ಎಲ್ಲವೂ ದೈವಾಧೀನ.

ಈ ಶ್ಲೋಕದಲ್ಲಿ 'ಅಸ್ವಂತ್ರನಾದ ಮಾನವನೆ ದೈವಾತ್ ಲಭಿಸುವ ವಿಷಯ ಪದಾರ್ಥಗಳಲ್ಲಿ ಮೋಹವಿಟ್ಟುಕೊಳ್ಳಲಾರ ಎಂದ ಮೇಲೆ ಭಗವಂತನಿಗೆ ವಿಷಯಪದಾರ್ಥಗಳಲ್ಲಿ ಮೋಹವಿಲ್ಲವೆಂದು ಬೇರೇನು ಹೇಳಬೇಕು? ಎಂದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ. ಅದರಿಂದ ಹಿಂದಿನ ಶ್ಲೋಕದಲ್ಲಿ ಭಗವಂತನಿಗೆ ವಿಷಯಪದಾರ್ಥಗಳಲ್ಲಿ ಮೋಹ ತೊಲಗಿತು, ವೈರಾಗ್ಯಮೂಡಿತು ಎಂದಿದೆ' ಎಂದು ವೀರರಾಘವವ್ಯಾಖ್ಯಾನ[೧] ಹೇಳಿದೆ. ಮೇಲುನೋಟಕ್ಕೆ ಇದೂ ಸರಿಯೆನಿಸುತ್ತದೆ. ಸಾಮಾನ್ಯ ಮಾನವನಲ್ಲಿಯೆ ಕಂಡು ಬರುವ ವೈರಾಗ್ಯವೆಂಬ ಸದ್ಗುಣ ಸರ್ವಗುಣಪೂರ್ಣನಾದ ಭಗವಂತನಲ್ಲಿ ಇಲ್ಲದಿದ್ದೀತೆ? ಎಂದು. ಆದರೆ ಭಗವಂತನಿಗೆ ಹಿಂದೆ ಯೌವನದಲ್ಲಿ ಇಲ್ಲದಿದ್ದ ವೈರಾಗ್ಯ ಈಗ ಇಳಿವಯಸ್ಸಿನಲ್ಲಿ ಬಂದಿತು ಎನ್ನುವುದೇ ತಪ್ಪು. ಮತ್ತು ಅಸ್ವತಂತ್ರನಾದ ಮಾನವನಿಗೆ ವಿಷಯ ಪದಾರ್ಥಸಂಪಾದನೆಯಲ್ಲಿ ಕ್ಲೇಶ ಕಾಣುವುದರಿಂದ ವೈರಾಗ್ಯ ಬಂದೀತು ಸ್ವತಂತ್ರನಾದ ಭಗವಂತನಿಗೇಕೆ ಬರುತ್ತದೆ? ವಸ್ತುತಃ ಭಗವಂತನಿಗೆ ಅಭಾವವೈರಾಗ್ಯವಲ್ಲ, ಅದು ಗುಣವಲ್ಲ. ಮಹತ್ತಾದ ಸ್ವರೂಪಾನಂದಮಗ್ನನಾದವನು ತುಚ್ಛವಾದ ವಿಷಯಸುಖದಲ್ಲಿ ಮೋಹವಿಟ್ಟುಕೊಳ್ಳಲಾರ. ಸದಾ ವಿರಕ್ತನೇ ಆಗಿರುತ್ತಾನೆ. ಅದರಿಂದ ಕೈಮುತ್ಯನ್ಯಾಯವನ್ನು ತಿರುವುಮುರುವಾಗಿ ಹೀಗೆ ಹೇಳಬೇಕು-

ತೇನಾಪಿ ವಿರಾಗಃ ಪ್ರದರ್ಶಿತಃ । ಅತಃ ಕೋಽನ್ಯೋ ವಿಸ್ರಂಭಂ ಕುರ್ಯಾತ್ ।

---

೧. ದೈವಾಧೀನಃ ದೈವಾಯತ್ತಃ ಕಃ ಪುಮಾನ್ ದೈವಾಯತ್ತೇಷು ಕಾಮೇಷು ವಿಸ್ರಂಭೇತ? ಕಿಮುತ ಭಗವಾನ್ ನ ವಿಶ್ವಸೇತ್ ಇತ್ಯಭಿಪ್ರಾಯಃ । —ವೀರರಾಘವಃ

ಶ್ರೀಕೃಷ್ಣನೇ ವೈರಾಗ್ಯವನ್ನು ತೋರಿದನೆಂದ ಮೇಲೆ ಇನ್ನಾರು ಕ್ಷುದ್ರವಿಷಯ ಭೋಗದಲ್ಲಿ ವಿಶ್ವಾಸ ಮಾಡಿಯಾನು?

ಹದಿನಾರುಸಾವಿರ ಮಂದಿ ಪತ್ನಿಯರು, ಸ್ವರ್ಗವನ್ನು ನಾಚಿಸುವಂಥ ಭೋಗಪದಾರ್ಥಗಳು ಎಲ್ಲವೂ ಕಣ್ಣ ಮುಂದೇ ಇದ್ದರೂ ಶ್ರೀಕೃಷ್ಣ ವಿರಕ್ತಿಯನ್ನು ತೋರಿದನೆಂದ ಮೇಲೆ ಬಲುಕಷ್ಟದಿಂದ ಅಲ್ಪ ಭೋಗಪದಾರ್ಥಗಳನ್ನು ಸಂಪಾದಿಸುವ ನಾವು ಅವುಗಳಲ್ಲಿ ವಿಶ್ವಾಸ ಮಾಡಬಹುದೆ? ಎಂದು ಜನರು ಎಚ್ಚೆತ್ತು ಕೊಂಡರು ಎಂದೇ ಕೈಮುತ್ಯನ್ಯಾಯ ಇಲ್ಲಿ ವಿವಕ್ಷಿತವಾಗಿದೆ.

* * *

ಉದ್ಧವನು ವಿದುರನಿಗೆ ದ್ವಾರಕೆಯಲ್ಲಿ ನಡೆದ ವಿದ್ಯಮಾನಗಳನ್ನು ಹೇಳುತ್ತ ಯಾದವರಿಗೆ ಮುನಿಗಳು ಶಾಪವಿತ್ತುದನ್ನು ಹೇಳಿ, ಮುಂದೆ ಯಾದವರು ಪ್ರಭಾಸಕ್ಷೇತ್ರಕ್ಕೆ ತೆರಳಿದ ವೃತ್ತಾಂತವನ್ನು ತಿಳಿಸುತ್ತಾನೆ-

ತತಃ ಕತಿಪಯೈರ್ಮಾಸೈರ್ವೃಷ್ಣಿಭೋಜಾಂಧಕಾದಯಃ ।
ಯಯುಃ ಪ್ರಭಾಸಂ ಸಂಹೃಷ್ಟಾ ರಥೈರ್ದೇವವಿಮೋಹಿತಾಃ ॥ ೨೫ ॥

ತತ್ರ ಸ್ನಾತ್ವಾ ಪಿತೄನ್ ದೇವಾನ್ ಋಷೀಂಶ್ಚೈವ ತದಂಭಸಾ ।
ತರ್ಪಯಿತ್ವಾಥ ವಿಪ್ರೇಭ್ಯೋ ಗಾವೋ ಬಹುಗುಣಾ ದದುಃ ॥ ೨೬ ॥

ಹಿರಣ್ಯಂ ರಜತಂ ಶಯ್ಯಾಂ ವಾಸಾಂಸ್ಯಜಿನಕಂಬಲಾನ್ ।
ಹಯಾನ್ ರಥಾನಿಭಾನ್ ಕನ್ಯಾಂ ಧರಾಂ ವೃತ್ತಿಕರೀಮಪಿ ॥ ೨೭ ॥

ಅನ್ನಂ ಚೋರುರಸಂ ತೇಭ್ಯೋ ದತ್ವಾ ಭಗವದರ್ಪಣಮ್ ।
ಗೋವಿಪ್ರಾರ್ಥಾಸವಃ ಶೂರಾಃ ಪ್ರಣೇಮುರ್ಭುವಿ ಮೂರ್ಧಭಿಃ ॥
॥ ೨೮ ॥

ಅನಂತರ ಕೆಲವು ತಿಂಗಳುಗಳಂತೆ ೨೬ ವರ್ಷಗಳು ಉರುಳಿದ ಮೇಲೆ ಭಗವಂತನಿಂದ ಮೋಹಿತರಾದ ವೃಷ್ಣಿ ಭೋಜ ಅಂಧಕ ಮುಂತಾದ ಪಂಗಡಗಳ ಎಲ್ಲ ಯಾದವರೂ ಉತ್ಸಾಹದಿಂದ ಪ್ರಭಾಸಕ್ಷೇತ್ರಕ್ಕೆ ತೆರಳುವರು. ಅಲ್ಲಿ ಸ್ನಾನ ಮಾಡಿ ಪಿತೃಗಳಿಗೂ ದೇವತೆಗಳಿಗೂ ಋಷಿಗಳಿಗೂ ತರ್ಪಣ ಕೊಟ್ಟು ಬ್ರಾಹ್ಮಣರಿಗೆ ಗೋವು ಸುವರ್ಣ ರಜತ ಶಯ್ಯೆ ವಸ್ತ್ರ ಚರ್ಮ ಕಂಬಳಿ ಕುದುರೆ ರಥ ಆನೆ ಕನ್ಯೆ ಭೂಮಿ ಷಡ್ರಸೋಪೇತವಾದ ಅನ್ನ ಇವುಗಳನ್ನು ನೀಡಿ ಕೃಷ್ಣಾರ್ಪಣವೆನ್ನುವರು. ತಲೆಬಾಗಿ ನಮಿಸುವರು. ಗೋಬ್ರಾಹ್ಮಣ ರಿಗಾಗಿ ಪ್ರಾಣವನ್ನೇ ತೆರುವ ಶೂರರು ಅವರು.

ಪ್ರತ್ಯಕ್ಷದರ್ಶಿಯೊಬ್ಬನು ತಾನು ಕಂಡ ವಿದ್ಯಮಾನಗಳ ವರದಿ ಒಪ್ಪಿಸುವಂತೆ ಉದ್ಧವನು ಯಾದವರ ಪ್ರಭಾಸಯಾತ್ರೆಯ ವಿವರಗಳನ್ನು ವಿದುರನ ಮುಂದೆ ಹೇಳುತ್ತಾನೆ.

ವಸ್ತುತಃ ಇದೆಲ್ಲ ನಡೆಯುವುದು ಮುಂದೆ ಇಪ್ಪತ್ತಾರು ವರ್ಷಗಳು ಕಳೆದ ಬಳಿಕ. ಬ್ರಾಹ್ಮಣರ ಶಾಪ ಹಾಗೆ ಇದ್ದಿತು. ಅದನ್ನು ತಿಳಿದೂ ಉದ್ಧವನು ಈಗಲೇ ನಡೆದು ಹೋದಂತೆ ಏಕೆ ಬಣ್ಣಿಸುತ್ತಾನೆ? ಇದಕ್ಕೆ ಮೂರು ಬಗೆಯ ಸಮಾಧಾನಗಳು ತಾತ್ಪರ್ಯದಲ್ಲಿ ಉಕ್ತವಾಗಿವೆ. ಬೇರೆ ಯಾವ ವ್ಯಾಖ್ಯಾನಕಾರರೂ ಈ ಸಮಸ್ಯೆಯನ್ನು ಗಮನಿಸಲೇ ಇಲ್ಲ.

ಏಷ್ಯತ್ತು ನಿಶ್ಚಿತಂ ಯತ್ತದ್ ಅತೀತತ್ವೇನ ಭಣ್ಯತೇ ।
ಚಕ್ರವತ್ ಪರಿವೃತ್ತೇರ್ವಾ ದುಷ್ಟಾನಾಂ ಮೋಹನಾಯ ವಾ ॥
ಇತಿ ಸ್ಕಾಂದೇ ॥

ಮುಂದೆ ಆಗಲಿರುವುದನ್ನೂ ಕೂಡ ಅದು ಆಗುವುದು ನಿಶ್ಚಿತವಾಗಿದ್ದರೆ, ಆದಂತೆಯೆ ವರ್ಣಿಸುವುದುಂಟು. ಅಥವಾ ಎಲ್ಲ ವಿದ್ಯಮಾನಗಳೂ ಪ್ರತಿಕಲ್ಪಗಳಲ್ಲಿ ಚಕ್ರದಂತೆ ತಿರುಗಿ ತಿರುಗಿ ಬರುವುದರಿಂದ ಹಿಂದಿನ ಕಲ್ಪದ ವೃತ್ತಾಂತವನ್ನು ದೃಷ್ಟಾಂತವಾಗಿ ತೋರಿಸುವ ಅಭಿಪ್ರಾಯದಿಂದ ಹೇಳುವುದುಂಟು. ಅಥವಾ ಮುಂದೆ ಆಗಲಿರುವುದನ್ನು ಹಿಂದೆಯೆ ನಡೆದಂತೆ ಕಾಲವ್ಯತ್ಯಾಸ ಮಾಡಿ ಹೇಳುವುದು ದುರ್ಜನರಿಗೆ ಪುರಾಣವನ್ನು ಅರ್ಥಮಾಡಿಕೊಳ್ಳುವಲ್ಲಿ ಗೊಂದಲ ಉಂಟಾಗಲಿ ಎಂಬ ಅಭಿಪ್ರಾಯದಿಂದ ಎಂದು ಸ್ಕಾಂದ ಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ತೃತೀಯೋಽಧ್ಯಾಯಃ

—o—

ಅಧ್ಯಾಯ-೪

ಅಧ್ಯಾಯಸಾರಾಂಶ

ಉದ್ಧವ ಮುಂದುವರಿದು ವಿದುರನಿಗೆ ಹೇಳುತ್ತಾನೆ– 'ಯಾದವರು ಪ್ರಭಾಸದಲ್ಲಿ ಉಂಡು ಮದ್ಯಪಾನ ಮಾಡಿ ಪರಸ್ಪರ ಜಗಳವಾಡಿ ನಾಶಹೊಂದುತ್ತಾರೆ. ಇದೆಲ್ಲವನ್ನೂ ಈಗಲೇ ಇಪ್ಪತ್ತಾರು ವರ್ಷಗಳಿಗೆ ಮೊದಲೇ ಯೋಚಿಸಿ ಶ್ರೀಕೃಷ್ಣ ಒಂದು ದಿನ ಸರಸ್ವತೀನದೀತೀರದಲ್ಲಿ ಒಂದು ಮರದ ಬುಡದಲ್ಲಿ ಕುಳಿತುದನ್ನು ನಾನು ಕಂಡೆ. ಆ ಕಾಲಕ್ಕೆ ಸರಿಯಾಗಿ ಅಲ್ಲಿಗೇ ವೇದವ್ಯಾಸರ ಮಿತ್ರರಾದ ಮೈತ್ರೇಯ ಮಹರ್ಷಿಗಳೂ ಬಂದರು. ಶ್ರೀಕೃಷ್ಣ ಆಗ 'ಹಿಂದೆ ನನ್ನ ನಾಭಿಕಮಲದಿಂದ ಜನಿಸಿದ ಬ್ರಹ್ಮನಿಗೆ ನಾನು ಉಪದೇಶಿಸಿದ್ದ ಭಾಗವತವನ್ನೇ ಈಗ ನಿಮಗೆ ಉಪದೇಶಿಸುತ್ತೇನೆ' ಎನ್ನುತ್ತ ಆ ಭಾಗವತವನ್ನು ಉಪದೇಶಿಸಿದ. ಮತ್ತು ನನಗೆ ಬದರಿಕಾಶ್ರಮಕ್ಕೆ ಹೋಗಿ ಅದನ್ನು ಉಪದೇಶಿಸಲು ಆದೇಶಿಸಿದ. ಅದರಂತೆ ನಾನು ಅಲ್ಲಿಗೆ ಹೋಗುತ್ತಿದ್ದೇನೆ. ಇಪ್ಪತ್ತಾರು ವರ್ಷಗಳು ಕಳೆದ ಬಳಿಕ ಇನ್ನೊಮ್ಮೆ ಹೀಗೆಯೇ ಶ್ರೀಕೃಷ್ಣ ನನಗೆ ಉಪದೇಶಿಸಿ ಬದರಿಗೆ ಕಳಿಸಲಿದ್ದಾನೆ.' ಎಂದು.

ವಿದುರ ಉದ್ಧವನಿಂದ ಭಾಗವತವನ್ನು ಕೇಳಲು ಬಯಸಿದ. ಆದರೆ ಉದ್ಧವ ಹೇಳುತ್ತಾನೆ. 'ನಿನಗೆ ಉಪದೇಶ ಮಾಡಲು ಶ್ರೀಕೃಷ್ಣ ಮೈತ್ರೇಯರಿಗೆ ಆದೇಶಿಸಿದ್ದಾನೆ.' ಎಂದು.

ಈ ನಡುವೆ ಪರೀಕ್ಷಿತ ಶುಕಮುನಿಯಲ್ಲಿ 'ಯಾದವರೆಲ್ಲರೂ ನಾಶ ಹೊಂದಿದರು, ಶ್ರೀಕೃಷ್ಣನೂ ಪರಂಧಾಮಕ್ಕೆ ತೆರಳಿದ. ಈ ಉದ್ಧವನೊಬ್ಬ ಹೇಗೆ ಉಳಿದು ಕೊಂಡ?' ಎಂದು ಕೇಳುತ್ತಾನೆ. ಅದಕ್ಕೆ ಶುಕಮುನಿ ಹೇಳುತ್ತಾರೆ. 'ಶ್ರೀಕೃಷ್ಣ ತನ್ನ ಅನಂತರದಲ್ಲಿ ಲೋಕಕ್ಕೆ ತತ್ತ್ವಜ್ಞಾನ ಉಪದೇಶಿಸಲು ಉದ್ಧವನೇ ಸರಿ ಎಂದು ಸಂಕಲ್ಪಿಸಿ ಅವನನ್ನು ಭೂಮಿಯಲ್ಲೇ ಇರಿಸಿದ' ಎಂದು. ಉದ್ಧವ ಹೊರಟು ಹೋದಾಗ ವಿದುರ ದುಃಖ ತಡೆಯಲಾರದೆ ಅತ್ತು ಬಿಟ್ಟ. ಬಳಿಕ ಅಲ್ಲಿಂದ ಮೈತ್ರೇಯರಿದ್ದ ಗಂಗಾತೀರಕ್ಕೆ ಪ್ರಯಾಣ ಬೆಳಸಿದ.

* * *

ಯಾದವರು ಪ್ರಭಾಸಕ್ಷೇತ್ರದಲ್ಲಿ ಸ್ನಾನ ತರ್ಪಣಗಳನ್ನು ಮಾಡಿ ಬ್ರಾಹ್ಮಣರಿಗೆ ಗೋಭೂಹಿರಣ್ಯಾದಿ ದಾನಮಾಡಿ ಭೋಜನವನ್ನು ನೀಡಿ ಅವರ ಅನುಜ್ಞೆ ಪಡೆದು ತಾವು ಉಂಡರು. ಬಳಿಕ ಮದ್ಯಪಾನ ಮಾಡಿ ಪರಸ್ಪರ ಹೊಡೆದುಕೊಂಡು ಮರಣಹೊಂದಿದರು. ಇದೆಲ್ಲವೂ ನಡೆಯುವುದಕ್ಕೆ ಇಪ್ಪತ್ತಾರು ವರ್ಷಗಳ ಮೊದಲೇ ಒಂದು ದಿನ ಶ್ರೀಕೃಷ್ಣ ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನ ಮಾಡಿ ಒಂದು ಮರದ ಬುಡದಲ್ಲಿ ಕುಳಿತು ಉದ್ಧವನಿಗೆ ಜ್ಞಾನೋಪದೇಶ ನೀಡಿ ಆ ಜ್ಞಾನವನ್ನು ಬದರಿಯಲ್ಲಿ ಮುನಿಗಳಿಗೆ ಪ್ರಸಾರಮಾಡಲು ಕಳಿಸಿದ್ದ. ಬಳಿಕ ಇಪ್ಪತ್ತಾರು ವರ್ಷಗಳು ಕಳೆದಾಗ ಯಾದವರು ಅಂತಃಕಲಹದಿಂದ ನಾಶವಾದರು. ಆಗಲೂ ಇನ್ನೊಮ್ಮೆ ಶ್ರೀಕೃಷ್ಣ ಉದ್ಧವನಿಗೆ ಜ್ಞಾನೋಪದೇಶನೀಡಿ ಬದರಿಗೆ ಕಳಿಸಿದ. ಹೀಗೆ ಎರಡು ಬಾರಿ ಉದ್ಧವನಿಗೆ ಶ್ರೀಕೃಷ್ಣನಿಂದ ಜ್ಞಾನೋಪದೇಶವಾಯಿತು. ಇದೀಗ ಮೊದಲನೆ ಜ್ಞಾನೋಪದೇಶ ವೃತ್ತಾಂತವನ್ನು ಉದ್ಧವ ವಿದುರನಿಗೆ ಹೇಳುತ್ತಿದ್ದಾನೆ–

ಭಗವಾನಾತ್ಮಮಾಯಾಯಾ ಗತಿಂ ತಾಮವಲೋಕ್ಯ ಸಃ ।
ಸರಸ್ವತೀಮುಪಸ್ಪೃಶ್ಯ ವೃಕ್ಷಮೂಲ ಉಪಾವಿಶತ್ ॥ ೩ ॥

ಅಹಂ ಚೋಕ್ತೋ ಭಗವತಾ ಪ್ರಪನ್ನಾರ್ತಿಹರೇಣ ಚ ।
ಬದರೀಂ ತ್ವಂ ಪ್ರಯಾಹೀತಿ ಸ್ವಕುಲಂ ಸಂಜಿಹೀರ್ಷುಣಾ ॥ ೪ ॥

ತನ್ನ ಕುಲವನ್ನು ನಾಶಮಾಡಲು ಬಯಸಿದ ಭಗವಾನ್ ಶ್ರೀಕೃಷ್ಣ ತನ್ನ ಸಾಮರ್ಥ್ಯದಿಂದ ಮುಂದೆ ಇಪ್ಪತ್ತಾರು ವರ್ಷಗಳಾದ ಬಳಿಕ ಯಾದವರ ವಿನಾಶ ಸಂಭವಿಸುವುದನ್ನು ಆಲೋಚಿಸಿ ಮೊರೆ ಹೊಕ್ಕಿರುವ ಬದರೀನಿವಾಸಿಗಳ ದುಃಖ ಪರಿಹಾರಕ್ಕಾಗಿ ಒಂದು ದಿನ ಪ್ರಭಾಸಕ್ಷೇತ್ರಕ್ಕೆ ಹೋಗಿ ಸರಸ್ವತೀ ನದಿಯಲ್ಲಿ ಸ್ನಾನಾದಿಗಳನ್ನು ತೀರಿಸಿ ಮರದ ಬುಡದಲ್ಲಿ ಕುಳಿತ. ಮತ್ತು ನನಗೆ ಜ್ಞಾನೋಪದೇಶ ನೀಡಿ 'ನೀನು ಬದರಿಗೆ ಹೋಗು, ನಾನು ಈಗ ಉಪದೇಶಿಸಿದ ಜ್ಞಾನವನ್ನು ಮುನಿಗಳಿಗೆ ನೀಡು' ಎಂದು ಆದೇಶಿಸಿದ.

ಇಲ್ಲಿ 'ಆತ್ಮಮಾಯಾ' ಎಂದರೆ ಅನಿರ್ವಚನೀಯ ಅವಿದ್ಯೆ ಇತರರನ್ನು ಮೋಹಗೊಳಿಸುವಂಥದ್ದೆಂದು ತಿಳಿಯುವ ಸಂಭವವಿದೆ, 'ಆತ್ಮ' ಎಂದು ವಿಶೇಷಣವಿರುವುದರಿಂದ. 'ಆತ್ಮಮಾಯೆ ಎಂದರೆ ತನ್ನ ಮಾಯೆ, ಅದು ತನ್ನನ್ನು ಮೋಹಗೊಳಿಸುವುದಿಲ್ಲ ಎಂದು ತಿಳಿಸುವುದಕ್ಕಾಗಿಯೆ ಹಾಗೆ ವಿಶೇಷಣ ನೀಡಲಾಗಿದೆ. ಯಾದವರು ದ್ವಾರಕೆಯಿಂದ ಪ್ರಭಾಸಕ್ಕೆ ಬಂದುದು, ಅಲ್ಲಿ ಮದ್ಯಪಾನ ಮಾಡಿ ಪರಸ್ಪರ ಹೊಡೆದುಕೊಂಡು ಸತ್ತುದು ಎಲ್ಲ ಬರಿ ಮಾಯೆ, ವಸ್ತುತಃ ಎಲ್ಲರೂ ದ್ವಾರಕೆಯಲ್ಲಿಯೆ ಇದ್ದರು. ಅವರೆಲ್ಲರೂ ಮುಕ್ತರು, ಅವರನ್ನು ಶ್ರೀಕೃಷ್ಣ ತನ್ನ ಜೊತೆಗೆ ನೇರವಾಗಿ ಪರಂಧಾಮಕ್ಕೆ ಕರೆದೊಯ್ದು ಹೊರತು ಪರಸ್ಪರ ಹೊಡೆದುಕೊಂಡು ಅವರು ಸಾಯಲಿಲ್ಲ. ಅವರಲ್ಲಿ ಆವಿಷ್ಟರಾಗಿದ್ದ ದೇವತೆಗಳು

ಹೊರಗೆ ಬಂದು ಕುಡಿದು ಹೊಡದುಕೊಂಡು ಕೃಷ್ಣನ ಅನುಜ್ಞೆಯಿಂದ ಸ್ವರ್ಗಕ್ಕೆ ತೆರಳಿದರು.' ಎನ್ನುತ್ತದೆ [1]ವಿಶ್ವನಾಥವ್ಯಾಖ್ಯಾನ. ಇದೆಲ್ಲವೂ ಅಪ್ರಾಮಾಣಿಕ. ಯಾದವರು ಮುಕ್ತರಲ್ಲ, ಜೀವನ್ಮುಕ್ತರು, ದೇವಾಂಶಸಂಭೂತರು ಮಹಾಬಲಿಷ್ಠರು. ಅವರಿಗೆ ಜನನಮರಣಗಳಿವೆ. ಶ್ರೀಕೃಷ್ಣ ಬಲಿಷ್ಠರಾದ ಬ್ರಾಹ್ಮಣಪ್ರಿಯರಾದ ಅವರನ್ನು ಬ್ರಾಹ್ಮಣಾವಮಾನಪ್ರಯುಕ್ತ ಶಾಪಗ್ರಸ್ತರನ್ನಾಗಿಸಿ ಪರಸ್ಪರ ಕಲಹದಿಂದ ಕೊಲ್ಲಿಸಿದ. ಇದು ಅವನ ಸಾಮರ್ಥ್ಯ. ಆತ್ಮಮಾಯೆ ಎಂದರೆ ತನ್ನ ಸಾಮರ್ಥ್ಯ ಎನ್ನುತ್ತಾರೆ ಶ್ರೀಮದಾಚಾರ್ಯರು.

'ಸ್ವಕುಲಂ ಸಂಜಿಹೀರ್ಷುಣಾ' 'ಮುಂದೆ ಯಾದವಕುಲವನ್ನು ನಾಶಮಾಡಲು ಬಯಸಿದ ಶ್ರೀಕೃಷ್ಣ' ಎಂದು ಹೇಳಿರುವುದರಿಂದ ಇಲ್ಲಿ ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸಿದುದು ಯದುಕುಲ ನಾಶಕ್ಕೆ ಮೊದಲೇ ಎಂದು ತಿಳಿಯುತ್ತದೆ. ಬೇರೆ ವ್ಯಾಖ್ಯಾನಕಾರರೂ ಹಾಗೆಯೇ ವ್ಯಾಖ್ಯಾನಮಾಡಿದ್ದಾರೆ. ಆದರೆ ಮುಂದೆ,(೩.೩೦)

ಸಂಹೃತ್ಯ ಸ್ವಕುಲಂ ನೂನಂ ತ್ಯಕ್ಷ್ಯನ್ ದೇಹಮಚಿಂತಯತ್ ।
ಅಸ್ಮಾಲ್ಲೋಕಾದುಪರತೇ ಮಯಿ ಜ್ಞಾನಂ ಮದಾಶ್ರಯಮ್ ।
ಅರ್ಹತ್ಯುದ್ಧವ ಏವಾದ್ಧಾ ಸಂಪ್ರತ್ಯಾತ್ಮವತಾಂ ವರಃ ॥

ಎಂದು ಯದುಕುಲ ನಾಶವಾದ ಬಳಿಕ ಶ್ರೀಕೃಷ್ಣ ಉದ್ಧವನಿಗೆ ಉಪದೇಶಮಾಡಿ ಬದರಿಗೆ ಕಳಿಸಿದ್ದು ಕೂಡಲಾರದು. ಬೇರೆ ವ್ಯಾಖ್ಯಾನಕಾರರು ಯಾರೂ ಈ ಸಮಸ್ಯೆಯನ್ನು ಎತ್ತಿಕೊಳ್ಳಲೇ ಇಲ್ಲ. ಇದಕ್ಕೂ ಸಮಾಧಾನವನ್ನು ಶ್ರೀಮದಾಚಾರ್ಯರು ಹೇಳುತ್ತಾರೆ-

ಆತ್ಮಮಾಯಾಯಾ ಆತ್ಮಸಾಮರ್ಥ್ಯಸ್ಯ ಗತಿಂ ಪೂರ್ವಮೇವಾವಲೋಕ್ಯ ।

ಜ್ಞಾತ್ವಾ ಕತಿಪಯೈರ್ವರ್ಷೈಃ ಪೂರ್ವಮೇವ ಜನಾರ್ದನಃ ।
ಮೌಸಲಂ ಜ್ಞಾನಸಂತತ್ಯಾ ಉದ್ಧವಂ ಬದರೀಂ ನಯತ್ ॥

---

೧. ಮಾಯಾಯಾ ಗತಿಂ ಚೇಷ್ಟಾಂ ಪ್ರದ್ಯುಮ್ನಾದ್ಯಾ ಯಾದವಾಃ ಪರಸ್ಪರವಧೇನ ಸದ್ಯ ಏವ ನಾಶಂ ಪ್ರಾಪುರಿತಿ ಸರ್ವಲೋಕಪ್ರತ್ಯಾಯನರೂಪಾಂ । ಸ್ವಾತ್ಮೇತಿ ನಹಿ ಯದೀಯಾ ಮಾಯಾ ತಮಪಿ ಸಾ ಮೋಹಯೇದಿತ್ಯರ್ಥಃ । ಮಾಯಾಯಾಃ ಸ್ವಾಶ್ರಯಾವ್ಯಾಮೋಹನಸ್ವಭಾವತ್ವಾತ್ । ತತಶ್ಚ ಭಗವತಾ ತ್ವೇವಂ ವಿಲೋಕಿತಂ । ನಿತ್ಯಭೂತಾ ಲೀಲಾಪರಿಕರಾಃ ಪ್ರದ್ಯುಮ್ನಾದಯೋ ಯಾದವಾ ದ್ವಾರಕಾಯಾಮೇವ ಸ್ಥಿತಾಃ । ತತ್ರವಿಷ್ಟಚರಾ ದೇವಾಸ್ತು ತತ್ತದಂಗೇಭ್ಯಃ ಪೃಥಕ್ಕೃತಾಃ ತದ್ರೂಪೇಣ ಪ್ರಭಾಸಮಾನೀತಾಃ ಭುಕ್ತ್ವಾ ಪೀತ್ವಾ ಸ್ವಲಬ್ಧಾನುಜ್ಞಾಃ ಸುಖೇನ ದಿವಂ ಯಯುರಿತಿ । —ವಿಶ್ವನಾಥಃ

ಸ ಜ್ಞಾನಂ ತತ್ರ ವಿಸ್ತೀರ್ಯ ಪುನರ್ದ್ವಾರವತೀಂ ಯಯೌ ।
ಪೂರ್ವಮೇವೋಪದಿಷ್ಟೋಽಪಿ ಹರಿಣಾ ಜ್ಞಾನಮುದ್ಧವಃ । ।

ಸ್ವರ್ಗಾರೋಹಣಕಾಲೇ ತು ಪುನಃ ಪಪ್ರಚ್ಛ ಕೇಶವಮ್ ।
ಪುನಃ ಶ್ರುತ್ವಾ ಬದರ್ಯಾಂ ತು ವರ್ಷತ್ರಯಮುವಾಸ ಹ ।
ಜ್ಞಾನಂ ಸಂಸ್ಥಾಪ್ಯ ಪಶ್ಚಾಚ್ಚ ಸ್ವೇಚ್ಛಯಾ ಸ್ವರ್ಗತಃ ಪ್ರಭುಃ ॥

ಇತಿ ಗಾರುಡೇ ।

'ಆತ್ಮಮಾಯಾಯಾಃ' ಯದುಕುಲವನ್ನು ನಾಶಗೊಳಿಸುವ ತನ್ನ ಸಾಮರ್ಥ್ಯದ 'ಗತಿಂ' ಮುಂದಿನ ಕಾರ್ಯತಂತ್ರವನ್ನು ಮೊದಲೇ ನಿರ್ಧರಿಸಿ ಎಂದರ್ಥ.

ಗರುಡಪುರಾಣದಲ್ಲಿ ಇದು ಸ್ಪಷ್ಟವಿದೆ–'ಕೆಲವು ವರ್ಷಗಳಿಗಿಂತ ಅಂದರೆ ಇಪ್ಪತ್ತಾರುವರ್ಷಗಳಿಗಿಂತ ಮೊದಲೆ ಶ್ರೀಕೃಷ್ಣ ಮುಂದೆ ತಾನು ನಡೆಸಬೇಕಾಗಿರುವ ಯದುಕುಲನಾಶ ಕಾರ್ಯವನ್ನು ನಿರ್ಧರಿಸಿ ಆಗಲೆ ಒಮ್ಮೆ ಉದ್ಧವನಿಗೆ ತತ್ತ್ವೋಪ ದೇಶ ಮಾಡಿ ಆ ತತ್ವಜ್ಞಾನಪ್ರಸಾರಕ್ಕಾಗಿ ಅವನನ್ನು ಬದರಿಗೆ ಕಳಿಸಿದ. ಅವನು ಅಲ್ಲಿ ಮುನಿಗಳಿಗೆ ಜ್ಞಾನಪ್ರಸಾರ ಮಾಡಿ ತಿರುಗಿ ದ್ವಾರಕೆಗೆ ಹಿಂತೆರಳಿದ. ಮುಂದೆ ಶ್ರೀಕೃಷ್ಣನ ಸ್ವರ್ಗಾರೋಹಣ ಕಾಲದಲ್ಲಿ ಉದ್ಧವ ಹಿಂದೊಮ್ಮೆ ಉಪದೇಶ ಪಡೆದಿದ್ದರೂ ತಿರುಗಿ ಶ್ರೀಕೃಷ್ಣನಲ್ಲಿ ಜ್ಞಾನೋಪದೇಶ ಹೊಂದಲು ಬಯಸಿದ. ಹಾಗೆ ಇನ್ನೊಮ್ಮೆ ಉಪದೇಶ ಪಡೆದು ಬದರಿಗೆ ಹೋಗಿ ಅಲ್ಲಿ ಮೂರುವರ್ಷಕಾಲ ವಾಸ ಮಾಡಿದ. ಮುನಿಗಳಲ್ಲಿ ತತ್ವಜ್ಞಾನವನ್ನು ನೆಲೆಗೊಳಿಸಿ ಬಳಿಕ ಸ್ವೇಚ್ಛೆಯಿಂದ ಸ್ವರ್ಗಕ್ಕೆ ತೆರಳಿದ' ಎಂದು. ಅದರಿಂದ ಪೂರ್ವೋತ್ತರವಿರೋಧವಿಲ್ಲ.

* * *

ವಿದುರನಿಗೆ ಉದ್ಧವ ತಾನು ಶ್ರೀಕೃಷ್ಣನಿಂದ ತತ್ತ್ವೋಪದೇಶ ಪಡೆದು ಬದರಿಗೆ ಹೋಗುತ್ತಿದ್ದೇನೆ. ಗಂಗಾತೀರದಲ್ಲಿ ಮೈತ್ರೇಯರು ಇದ್ದಾರೆ. ಅವರು ಶ್ರೀಕೃಷ್ಣನ ಆದೇಶದಂತೆ ನಿನಗೆ ತತ್ತ್ವೋಪದೇಶ ನೀಡುತ್ತಾರೆ. ಅಲ್ಲಿಗೆ ಹೋಗೆನ್ನುತ್ತ ತಾನು ಬದರಿಗೆ ಪ್ರಯಾಣ ಬೆಳೆಸಿದ. ಬದರಿಯಲ್ಲಿ ಮುನಿಗಳಿಗೆ ಶ್ರೀಕೃಷ್ಣ ನೀಡಿದ ತತ್ವಜ್ಞಾನವನ್ನು ಉಪದೇಶಿಸಿದ. ದ್ವಾರಕೆಗೆ ಹಿಂತಿರುಗಿದ. ಮುಂದೆ ಇಪ್ಪತ್ತಾರು ವರ್ಷಗಳಾದ ಬಳಿಕ ಯಾದವರು ಅಂತಃಕಲಹದಿಂದ ನಾಶಹೊಂದಿದಾಗ ಉದ್ಧವ ತಿರುಗಿ ಶ್ರೀಕೃಷ್ಣನಿಂದ ಉಪದೇಶ ಪಡೆದು ಬದರಿಗೆ ಪ್ರಯಾಣ ಬೆಳೆಸಿದ. ಇಲ್ಲಿ ಪರೀಕ್ಷಿದ್ರಾಜ ಶುಕಮುನಿಗಳಲ್ಲಿ ಪ್ರಶ್ನಿಸುತ್ತಾನೆ. ಯಾದವರೆಲ್ಲ ಮಡಿದರೂ ಉದ್ಧವನೊಬ್ಬ ಹೇಗೆ ಉಳಿದು ಕೊಂಡ ಎಂದು–

ರಾಜೋವಾಚ–

ನಿಧನಮುಪಗತೇಷು ವೃಷ್ಣಿಭೋಜೇ–
ಷ್ವಧಿರಥ ಯೂಥಪಯೂಥಪೇಷು ಮುಖ್ಯಃ ।
ಸ ತು ಕಥಮವಶಿಷ್ಟ ಉದ್ಧವೋ ಯ–
ದ್ಧರಿರಪಿ ತತ್ಯಜ ಆಕೃತಿಂ ತ್ರ್ಯಧೀಶಃ ॥ ೨೮ ॥

ವೃಷ್ಣಿ ಭೋಜ ಮುಂತಾದ ಎಲ್ಲ ಯಾದವರು ಮಡಿದಾಗಲೂ ಈ ಉದ್ಧವ ನೊಬ್ಬ ಹೇಗೆ ಉಳಿದ? ಯಾದವರು ಯೋಧರು ಯುದ್ಧಮಾಡಿ ಮಡಿದರು. ಉದ್ಧವ ಯೋಧನಲ್ಲ ಎಂದು ಹೇಳುವಂತಿಲ್ಲ. ಮಹಾಮಹಾಸೇನಾಧಿಪತಿಗಳಲ್ಲಿ ಈತ ಮುಖ್ಯ. ಬ್ರಾಹ್ಮಣಶಾಪವನ್ನು ಇದಿರಿಸಬಲ್ಲ ಶಕ್ತಿಯಿಂದ ಬದುಕಿ ಉಳಿದನೆಂದೂ ಹೇಳುವಂತಿಲ್ಲ. ಸಾಕ್ಷಾತ್ ಶ್ರೀಕೃಷ್ಣನೇ ಆ ಶಾಪಕ್ಕೆ ಮಾನ್ಯತೆ ನೀಡಿ ಭೂಲೋಕವನ್ನು ಬಿಟ್ಟನೆಂದರೆ ಉದ್ಧವ ಉಳಿಯಲು ಹೇಗೆ ಸಾಧ್ಯ?

ಇಲ್ಲಿ 'ಆಕೃತಿಂ ತತ್ಯಜೇ' ಶ್ರೀಕೃಷ್ಣ ಶರೀರತ್ಯಾಗ ಮಾಡಿದ ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರೂ ಹೇಳಿದ್ದಾರೆ. ಮನುಷ್ಯಾಕಾರವನ್ನು ಬಿಟ್ಟನೆಂದು ಶ್ರೀಧರವ್ಯಾಖ್ಯಾನ, ವೀರರಾಘವವ್ಯಾಖ್ಯಾನಗಳು ಹೇಳಿವೆ. ಯಾದವಾಕಾರವನ್ನು ಬಿಟ್ಟನೆಂದು ವಲ್ಲಭವ್ಯಾಖ್ಯಾನ. ಮನುಷ್ಯಲೀಲೆಯನ್ನು ತೊರೆದನೆಂದು ಗಿರಿಧರವ್ಯಾಖ್ಯಾನ. ತನ್ನ ದೇಹರೂಪವಾದ ವಿರಾಡಾಕಾರವನ್ನು ಅಂದರೆ ಪ್ರಪಂಚವನ್ನು ತೊರೆದನೆಂದು ರಾಧಾರಮಣವ್ಯಾಖ್ಯಾನ. ಭೂಮಿಯನ್ನು ಬಿಟ್ಟನೆನ್ನಬೇಕಾಗಿತ್ತು ಪ್ರಪಂಚವನ್ನೆ ಬಿಟ್ಟರೆ ಇನ್ನೆಲ್ಲಿಗೆ ಹೋಗುತ್ತಾನೆ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಇದೇ ಸಮಸ್ಯೆ ಮುಂದಿನ ಶ್ಲೋಕಗಳಲ್ಲಿಯೂ ಬರುತ್ತದೆ. ಅಲ್ಲಿಯೂ ಶ್ರೀಕೃಷ್ಣನ ದೇಹತ್ಯಾಗ ಉಕ್ತವಾಗಿದೆ–

ಶ್ರೀಶುಕ ಉವಾಚ–

ಬ್ರಹ್ಮಶಾಪಾಪದೇಶೇನ ಕಾಲೇನಾಮೋಘವಾಂಛಿತಃ ।
ಸಂಹೃತ್ಯ ಸ್ವಕುಲಂ ನೂನಂ ತ್ಯಕ್ಷ್ಯನ್ ದೇಹಮಚಿಂತಯತ್ ॥ ೨೯ ॥

ಸತ್ಯಸಂಕಲ್ಪನಾದ ಶ್ರೀಕೃಷ್ಣ ಬ್ರಾಹ್ಮಣಶಾಪವೆಂಬ ಮೃತ್ಯುವಿನಿಂದ ತನ್ನ ಕುಲವನ್ನು ನಾಶಮಾಡಲು ನಿಶ್ಚಯಿಸಿ ತಾನು ಭೂಲೋಕವನ್ನು ಬಿಡುವುದಕ್ಕೆ ಹೀಗೆ ಆಲೋಚನೆ ಮಾಡಿದನು.

ಈ ಶ್ಲೋಕದಲ್ಲಿಯೂ 'ದೇಹಂ ತ್ಯಕ್ಷ್ಯನ್' ಎಂಬುದು ಸಮಸ್ಯೆಯಾಗಿದೆ. ಅದಕ್ಕೆ ವಿಶ್ವನಾಥ ವ್ಯಾಖ್ಯಾನದಲ್ಲಿ 'ಸಂಹೃತ್ಯ ಸ್ವಕುಲಂ ಸ್ಫೀತಂ' ಎಂದು ಪಾಠವಿಟ್ಟುಕೊಂಡು 'ಸ್ಫೀತಂ ಸ್ವಕುಲಂ' ಎಂದು ಅನ್ವಯಿಸದೇ 'ಸ್ಫೀತಂ ದೇಹಂ' ದೊಡ್ಡಶರೀರವನ್ನು, ಅಂದರೆ ಮಾನವರಿಗೆ ಕಣ್ಣಿಗೆ ಕಾಣುವಂಥ ಸ್ಥೂಲಶರೀರವನ್ನು ಶ್ರೀಕೃಷ್ಣ ಬಿಟ್ಟ, ಅಂದರೆ ಶರೀರವನ್ನು ಕಣ್ಣಿಗೆ ಕಾಣಿಸದಂತೆ ಮಾಡಿದ, ಅದೃಶ್ಯನಾದ ಎಂದು ಕಷ್ಟದಿಂದ ವ್ಯಾಖ್ಯಾನ ಮಾಡಿದ್ದಾರೆ. ಹಾಗೆ ಮಾಡಿದರೂ ಮಾನವರ ದೃಷ್ಟಿಗೆ ಗೋಚರನಾಗದಂತೆ ದೂರ ಹೊರಟು ಹೋದ ಎಂದು ಹೇಳದೆ, ಅದೃಶ್ಯನಾದ ಯಾರಿಗೂ ಕಾಣದಾದ ಎನ್ನುವುದು ಸೂಕ್ತವಲ್ಲ. ವಸ್ತುತಃ ಮುಂದೆ ಏಕಾದಶಸ್ಕಂಧದಲ್ಲಿ ಶ್ರೀಕೃಷ್ಣ ಅದೃಶ್ಯನಾಗದೆ ಎಲ್ಲರೂ ನೋಡುತ್ತಿದ್ದಂತೆ ಪರಂಧಾಮಕ್ಕೆ ತೆರಳಿದನೆಂದಿದೆ. ಶುಕದೇವ ವ್ಯಾಖ್ಯಾನದಲ್ಲಿಯೂ ತ್ರಿಗುಣಾಭಿವ್ಯಕ್ತಿರೂಪವಾದ ತನ್ನ ಲೀಲೆಗೆ ರಂಗಸ್ಥಳವಾದ ಲೋಕವನ್ನೇ ಬ್ರಹ್ಮಾಂಡವನ್ನೇ ತೊರೆದನೆಂದು ಹೇಳಿದೆ. ಅದೂ ಅತ್ಯಂತ ಅನುಚಿತ. ಹೀಗೆ ಎಲ್ಲ ವ್ಯಾಖ್ಯಾನಕಾರರಿಗೂ ದೊಡ್ಡ ಸಮಸ್ಯೆಯಾಗಿರುವ ಪರಮಾತ್ಮನ 'ದೇಹತ್ಯಾಗ'ವನ್ನು ಶ್ರೀಮದಾಚಾರ್ಯರು ಸುಲಭವಾಗಿ ಹೀಗೆ ವ್ಯಾಖ್ಯಾನಿಸುತ್ತಾರೆ–

ಆಕೃತಿಂ ಪೃಥಿವೀಮ್ ।

ಶರೀರಮಾಕೃತಿರ್ದೇಹಃ ಕುಃ ಪೃಥ್ವೀ ಚ ಮಹೀ ತಥಾ ।
ಇತ್ಯಭಿಧಾನಮ್ ।

ಪೃಥಿವೀಲೋಕಸಂತ್ಯಾಗೋ ದೇಹತ್ಯಾಗೋ ಹರೇಃ ಸ್ಮೃತಃ ।
ನಿತ್ಯಾನಂದಸ್ವರೂಪತ್ವಾದನ್ಯನ್ನೈವೋಪಲಭ್ಯತೇ ॥

ದರ್ಶಯೇಜ್ಜನಮೋಹಾಯ ಸದೃಶೀಂ ಮೃತಕಾಕೃತಿಮ್ ।
ನಟವದ್ ಭಗವಾನ್ ವಿಷ್ಣುಃ ಪರಜ್ಞಾನಾಕೃತಿಃ ಸ್ವಯಮ್। ಇತಿ ಸ್ಕಾಂದೇ।

---

೧. ಸ್ಫೀತಂ ಸ್ವಮರ್ಯಾದಾತೋಽಪ್ಯತಿವಿಸ್ತೃತಂ ದೇಹಂ ತ್ಯಕ್ಷ್ಯನ್ ಅಚಿಂತಯತ್ । ತದ್ದೇಹಸ್ಯ ನಿಬಂಧನಂ ಪ್ರಾಪಂಚಿಕಲೋಕ ಚಕ್ಷುರ್ಗೋಚರೀಭೂತತ್ವಮೇವ ಸ್ಫೀತತ್ವಂ। ತತ್ರ ಸವಿಶೇಷಣೇ ಹಿ ವಿಧಿನಿಷೇಧೌ ವಿಶೇಷಣಮುಪಸಂಕ್ರಾಮತಃ ಸತಿ ವಿಶೇಷ್ಯಬಾಧ ಇತಿ ನ್ಯಾಯೇನ ತ್ಯಾಗಕ್ರಿಯಾ ವಿಶೇಷಣ ಏವಾನ್ವೇತಿ । ನತು ವಿಶೇಷ್ಯೇ । –ವಿಶ್ವನಾಥಃ

ಮನುಷ್ಯಾಕಾರಂ ತದ್ರೂಪತ್ವೇನ ರೂಪಿತಂ ವಿರಾಡಾಕಾರಂ ಪ್ರಪಂಚಂ । –ರಾಧಾರಮಣದಾಸಃ

ಆಕೃತಿಂ ತ್ರಿಗುಣಾಭಿವ್ಯಕ್ತಿರೂಪಂ ಲೋಕಂ। ದೇಹಂ ಲೀಲಾಯತನಂ ಬ್ರಹ್ಮಾಂಡಂ ತ್ಯಕ್ಷ್ಯನ್ –ಶುಕದೇವಃ

ರಾಜನ್ ಪರಸ್ಯ ತನುಭೃಜ್ಜನನಾಪ್ಯಯೇಹಾಂ
ಮಾಯಾವಿಡಂಬನಮವೈಹಿ ಯಥಾ ನಟಸ್ಯ । ಇತಿ ಚ ॥

'ಆಕೃತಿ' 'ದೇಹ' ಶಬ್ದಗಳು ಪೃಥಿವೀವಾಚಕಗಳಾಗಿರುವುದರಿಂದ ಇಲ್ಲಿ 'ಆಕೃತಿಂ' 'ದೇಹಂ' ಎಂದರೆ ಭೂಲೋಕವನ್ನು ಬಿಟ್ಟ, ಅಂದರೆ ಭೂಲೋಕದಿಂದ ಸ್ವರ್ಗಲೋಕಕ್ಕೆ ಸಶರೀರನಾಗಿ ತೆರಳಿದ ಎಂದರ್ಥ. ಶರೀರ ಆಕೃತಿ ದೇಹ ಕು ಪೃಥಿವೀ ಮಹೀ ಎಂಬ ಶಬ್ದಗಳು ಸಮಾನಾರ್ಥಕಗಳೆಂದು ಅಭಿಧಾನದಲ್ಲಿ ಹೇಳಿದೆ. ಭೂಲೋಕದಲ್ಲಿ ಶರೀರತ್ಯಾಗ ಮಾಡಿದನೆಂದೇಕೆ ಹೇಳಬಾರದೆಂದರೆ, ಹಾಗೆ ಹೇಳಿದರೆ ಸ್ಕಾಂದಪುರಾಣದ ವಿರೋಧ ಬರುತ್ತದೆ. ಅಲ್ಲಿ ಹೀಗೆ ಹೇಳಿದೆ–'ಶ್ರೀಹರಿಯ ದೇಹತ್ಯಾಗವೆಂದರೆ ಭೂಲೋಕತ್ಯಾಗವೆ ಹೊರತು ಶರೀರತ್ಯಾಗವಲ್ಲ. ಏಕೆಂದರೆ ನಿತ್ಯಾನಂದಸ್ವರೂಪನಾದ್ದರಿಂದ ಅವನು ಶರೀರ ತ್ಯಾಗ ಮಾಡುವುದು ಯೋಗಿಗಳಿಗೆ ಕಂಡಿಲ್ಲ. ಮನುಷ್ಯರಿಗೆ ಕಂಡರೂ ಅದು ಕೇವಲ ಭ್ರಮೆ. ಏಕೆಂದರೆ ನಟನು ತನ್ನದಲ್ಲದ ರೂಪವನ್ನು ಜನರಿಗೆ ತನ್ನದೆಂದು ತೋರಿಸುವಂತೆ ಶ್ರೀಹರಿಯೂ ತಾನು ಉತ್ತಮವಾದ ಚಿನ್ಮಯಶರೀರಿಯಾಗಿದ್ದು ತನ್ನದಲ್ಲದ, ತನಗೆ ಸದೃಶವಾದ ಮೃತದೇಹ ಒಂದನ್ನು ತತ್ಕಾಲದಲ್ಲಿ ಸೃಜಿಸಿ ಜನರಿಗೆ ಭ್ರಮೆ ಉಂಟಾಗಲು ತೋರಿಸುತ್ತಾನಷ್ಟೇ.' ಎಂದು. ಮುಂದೆ ಭಾಗವತಲ್ಲಿಯೂ (೧೧.೩೧.೧೧) ಇದನ್ನು ನಟನೆ ಎಂದು ಸ್ಪಷ್ಟ ಹೇಳಿದೆ– 'ರಾಜನೆ, ಪರಮಾತ್ಮನ ಜನನಮರಣರೂಪವ್ಯಾಪಾರವನ್ನು ಕೇವಲ ನಟನೆ ಎಂದು ತಿಳಿ.'

* * *

ಯಾದವರೆಲ್ಲರೂ ಅಂತಃಕಲಹದಿಂದ ನಾಶಹೊಂದಿದರೂ ಉದ್ಧವನೊಬ್ಬ ಉಳಿದುಕೊಳ್ಳಲು ಕಾರಣ ಶ್ರೀಕೃಷ್ಣನ ಸಂಕಲ್ಪ ಹಾಗಿತ್ತು ಎನ್ನುತ್ತಾರೆ, ಶುಕಮುನಿ ಪರೀಕ್ಷಿದ್ರಾಜನಿಗೆ-

ನೋದ್ಧವೋಽಣ್ವಪಿ ಮನ್ನ್ಯೂನೋ ಯದ್ಗುಣೈರ್ನಿರ್ಜಿತಃ ಪ್ರಭುಃ ।
ಅತೋ ಮದ್ವಯುನಂ ಲೋಕಂ ಗ್ರಾಹಯನ್ನಿಹ ತಿಷ್ಠತು ॥ ೩೧ ॥

ಸರ್ವಶಕ್ತನಾದ ನಾನೂ ಉದ್ಧವನ ಭಕ್ತ್ಯಾದಿಗುಣಗಳಿಗೆ ಮಾರುಹೋಗಿ ವಶೀಕೃತನಾಗಿದ್ದೇನೆ. ಅವನೊಬ್ಬನನ್ನಂತೆ ಒಳ್ಳೆಯ ತತ್ವಜ್ಞಾನೋಪದೇಶಕ ಗುರು. ನನ್ನಂತೆ ಅವನು ಮುಂದೆ ಲೋಕಕ್ಕೆ ಪುನಃ ಉಪದೇಶ ನೀಡುತ್ತ ಈ ಲೋಕದಲ್ಲಿ ಇರಲಿ.

ಇದು ಶ್ರೀಕೃಷ್ಣನ ಮಾತು. 'ನೋದ್ಧವೋಽಣ್ವಪಿ ಮನ್ನ್ಯೂನಃ' ಎನ್ನುವುದು ಮೇಲು ನೋಟಕ್ಕೆ ಅಸಂಗತವಾಗಿ ಕಾಣುತ್ತದೆ. ಭಗವಂತನಿಗೆ ಸಮಾನ ಭಗವಂತನೆ.

ಈ ಉದ್ಧವ ಶ್ರೀಕೃಷ್ಣನಿಗೆ ಅಣುಮಾತ್ರವೂ ಕಡಿಮೆಯವನಲ್ಲ ಎಂದು ಶ್ರೀಕೃಷ್ಣನೇ ಹೇಳುತ್ತಿದ್ದಾನೆ. ಇದು ಕೇವಲ ಪ್ರೀತಿಯಿಂದ ಪ್ರಶಂಸೆಗಾಗಿ ಹೇಳಿದ ಅತಿಶಯೋಕ್ತಿ ಎನ್ನುವುದು ಸ್ಪಷ್ಟ. ಆದರೂ ಶ್ರೀಮದಾಚಾರ್ಯರು ಬ್ರಹ್ಮತರ್ಕ ವಚನದ ಆಧಾರದೊಂದಿಗೆ ಅದರ ತಾತ್ಪರ್ಯವನ್ನು ಹೇಳುತ್ತಾರೆ. ಏಕೆಂದರೆ ಶ್ರೀಕೃಷ್ಣನಾಡಿದ ಈ ಮಾತು ವಾಸ್ತವವೆಂದೇ ಸ್ವೀಕರಿಸುವ ವ್ಯಾಖ್ಯಾನಕಾರರು ಬಹಳಮಂದಿ ಇದ್ದಾರೆ. ಉದಾ: ವಿಶ್ವನಾಥಚಕ್ರವರ್ತಿ ವ್ಯಾಖ್ಯಾನ ಹೇಳುತ್ತದೆ 'ಉದ್ಧವನು ಜ್ಞಾನಿಯಾದ್ದರಿಂದ ಶ್ರೀಕೃಷ್ಣನಂತೆ ಮಾಯೆಯನ್ನು ವಶೀಕರಿಸಿಕೊಂಡಿದ್ದಾನೆ. ಅದರಿಂದ ಶ್ರೀಕೃಷ್ಣನಿಗಿಂತ ಅವನೇನೂ ಕಡಿಮೆಯವನಲ್ಲ' ಎಂದು. ಹಾಗಾದರೆ ಅವನು ಶ್ರೀಕೃಷ್ಣನ ಸೇವೆ ಏಕೆ ಮಾಡಬೇಕು? ಅವನಿಂದ ತತ್ತ್ವೋಪದೇಶವೇಕೆ ಪಡೆಯಬೇಕು? ಶ್ರೀಧರಾದಿ ಎಲ್ಲ ವ್ಯಾಖ್ಯಾನಕಾರರೂ 'ಯದ್ಗುಣೈರ್ನಾರ್ದಿತಃ ಪ್ರಭುಃ' ಎಂದು ಪಾಠವಿಟ್ಟು ಕೊಂಡಿದ್ದಾರೆ. ಉದ್ಧವ ಗುಣಗಳಿಂದ ಅಂದರೆ ಸತ್ತ್ವಾದಿಗುಣಗಳಿಂದ ಪೀಡಿತನಾಗಿಲ್ಲ. ಅವನು ಗುಣಾತೀತ. ಅದರಿಂದ ಆತ ಶ್ರೀಕೃಷ್ಣನಿಗೆ ಸಮಾನ ಎಂದು ವ್ಯಾಖ್ಯಾನ. ವಿಶ್ವನಾಥ ಹೀಗೇ ವ್ಯಾಖ್ಯಾನ ಮಾಡಿದ. ಆದರೆ ಅದು ತನಗೇ ಸರಿಕಾಣಲಿಲ್ಲ. ಗುಣಾತೀತರಾದ ಜೀವನ್ಮುಕ್ತರು ಲೋಕದಲ್ಲಿ ಸಾವಿರಾರು ಮಂದಿ ಇರುವಾಗ ಉದ್ಧವನಲ್ಲೇನು ವಿಶೇಷ? ಅದಕ್ಕೆ ಗುಣಗಳೆಂದರೆ ಅಪ್ರಾಕೃತಬಲ ಬುದ್ಧಿಜ್ಞಾನವೈರಾಗ್ಯಾದಿಗಳು. ಅವುಗಳಿಂದ ಪೀಡಿತನಲ್ಲ ಎಂದರೆ ಅವುಗಳ ವೇಗವನ್ನು ತಡೆದುಕೊಂಡು ವ್ಯಕ್ತಮಾಡದಿದ್ದ, ಅಂತಹ ಪ್ರಭು, ನನ್ನಂತೆಯೆ ಮಾಯೆಯನ್ನು ವಶೀಕರಿಸಿಕೊಂಡವನು, ಎನ್ನುತ್ತಾನೆ ಶ್ರೀಕೃಷ್ಣ!

[1]ವಲ್ಲಭಾಚಾರ್ಯರು ಇನ್ನೂ ಮುಂದೆ ಹೋಗಿ ಉದ್ಧವ ಶ್ರೀಕೃಷ್ಣನ ಎಲ್ಲ ಗುಣಗಳನ್ನೂ ಹೊಂದಿದ್ದಾನೆ. ಅಣುಮಾತ್ರವೂ ಅವನಿಗಿಂತ ಕಡಿಮೆಯವನಲ್ಲ ಎಂದಿದ್ದಾರೆ. ಅದಕ್ಕೆ ಕಾರಣ ಇದು–ಉದ್ಧವ ತ್ರಿಗುಣಗಳಿಂದ ಎಂದೂ ಹೃದಯದಲ್ಲಿ ಕ್ಷೋಭೆಹೊಂದುವವನಲ್ಲ. ಚತುರ್ಮುಖ ಬ್ರಹ್ಮನೂ ಗುಣಕ್ಷೋಭಕ್ಕೊಳಗಾಗುತ್ತಾನೆ. ಈತ ಪ್ರಭು. ತನ್ನ ಕ್ಷತ್ರಿಯ ಜಾತಿಯ ಸ್ವಭಾವವನ್ನೂ ಗೆದ್ದು ತಾನು ಚಿಕ್ಕಪ್ಪನಾದರೂ ಅಲ್ಪನಾದ ಸೇವಕನಿಗಿಂತಲೂ ಅಲ್ಪನಾಗಿ ಶ್ರೀಕೃಷ್ಣನನ್ನು ಸೇವಿಸುತ್ತಾನೆ! ಹೀಗೆ

೧. ಗುಣಾ ಹಿ ಬಹುಧಾ ಹೃದಯೇ ಕ್ಷೋಭಮುತ್ಪಾದಯಂತಿ । ಕಿಂ ಬಹುನಾ? ತತ್ ಕ್ಷೋಭರಹಿತೋ ಬ್ರಹ್ಮಾಽಪಿ ನ ಭವತಿ । ಅತೋಽಯಮೇವ ಗುಣೈರ್ನಾರ್ದಿತಃ । ತತ್ರ ಹೇತುಮಾಹ ಪ್ರಭುರಿತಿ । ತಾದೃಶಶ್ಚೋದ್ಧವಃ । ಕ್ಷತ್ರಿಯಃ ಶೂರಃ ಸಂಬಂಧೀ ಪಿತೃವ್ಯೋಽಪಿ ಭೂತ್ವಾ ನೀಚಾದಪಿ ನೀಚಭಾವೇನೈವ ಸೇವತೇ । ಅಯಮೇವ ಹಿ ಸ್ವಭಾವಜಯಃ । ಇದಮೇವ ಪ್ರಭುತ್ವಂ ಭಗವದವಗತಂ ⊢ ವಲ್ಲಭಃ

ಸ್ವವ್ಯಾಹತ ಅಸಂಗತ ವ್ಯಾಖ್ಯಾನಗಳು ಬಂದೇ ಬರುತ್ತವೆ ಎಂದೇ ಶ್ರೀಮದಾಚಾರ್ಯರು ಹೇಳುತ್ತಾರೆ-

ಉತ್ತಮೈರಧಿಕತ್ವಂ ವಾ ಸಾಮ್ಯಂ ವಾ ವಿಜಯೋಽಪಿ ವಾ ।
ಉಚ್ಯತೇಽಪಿ ತು ನೀಚಾನಾಂ ಮೋಹಾರ್ಥಂ ವಾಪ್ಯಪೇಕ್ಷಯಾ ।
ಮೂಢದೃಷ್ಟ್ಯನುಸಾರಾದ್ವಾ ಕಿಂಚಿತ್ಸಾಮ್ಯೇನ ವಾ ಕ್ವಚಿತ್ ॥
ಇತಿ ಬ್ರಹ್ಮತರ್ಕೇ ।

ಕೆಳಗಿನವರಿಗೆ ಮೇಲಿನವರಿಗಿಂತ ಉತ್ತಮತ್ವವನ್ನಾಗಲಿ, ಅವರ ಸಾಮ್ಯವನ್ನಾಗಲಿ, ಅವರ ಮೇಲಿನ ವಿಜಯವನ್ನಾಗಲಿ ಹೇಳಿದರೆ ಅದನ್ನು ನಾಲ್ಕು ಬಗೆಯಿಂದ ಹೀಗೆ ಅರ್ಥೈಸಬೇಕು. ೧. ಅಯೋಗ್ಯರಿಗೆ ಮೋಹ ಉಂಟುಮಾಡುವ ಉದ್ದೇಶದಿಂದ ಹೇಳಿದ್ದು. ೨. ಕೆಳಗಿನವರಲ್ಲಿ ಇರುವ ಸಣ್ಣತನವನ್ನು ಮುಚ್ಚಿ ಪ್ರಶಂಸೆಗಾಗಿ ಅತಿಶಯೋಕ್ತಿಯನ್ನಾಡಿದ್ದು. ೩. ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಅಜ್ಞರಿಗೆ ಶ್ರೀಕೃಷ್ಣನ ಪೂರ್ತಿಸಾಮ್ಯ ಉದ್ಧವನಲ್ಲಿ ಕಾಣುತ್ತದೆ. ಇದು ಅದರ ಅನುವಾದ, ಅಂದರೆ ದರ್ಶನಭಾಷೆಯಿಂದ ಆಡಿದ್ದು. ೪. ಶ್ರೀಕೃಷ್ಣಲಕ್ಷ್ಮೀಬ್ರಹ್ಮಾದಿಗಳಿಗಿಂತ ಶ್ರೇಷ್ಠನಿರುವಂತೆ ಉದ್ಧವನೂ ತನಗಿಂತ ಕಡಿಮೆಯವರಾದ ಗುರುಗಳಿಗಿಂತ ಶ್ರೇಷ್ಠಗುರುವೇ ಎಂದು ಕಿಂಚಿತ್ ಸಾಮ್ಯವಿವಕ್ಷೆಯಿಂದ ಹೇಳಿದ್ದು. ಹೀಗೆ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಚತುರ್ಥೋಽಧ್ಯಾಯಃ

—o—

ಅಧ್ಯಾಯ-೫

ಅಧ್ಯಾಯಸಾರಾಂಶ

ಹರಿದ್ವಾರದ ಗಂಗಾತೀರದಲ್ಲಿ ವಿದುರ ಮೈತ್ರೇಯ ಮಹರ್ಷಿಗಳನ್ನು ಕಂಡು ಕೇಳಿಕೊಳ್ಳುತ್ತಾನೆ– 'ಮುನಿಯೆ, ಅಜ್ಞಮಾನವ ಸುಖಕ್ಕಾಗಿ ಯತ್ನ ಮಾಡಿಯೂ ದುಃಖವನ್ನೇ ಹೊಂದುತ್ತಾನೆ. ಈ ದುಃಖದಿಂದ ಅವನಿಗೆ ಬಿಡುಗಡೆ ಹೇಗೆ? ಪರಮಾತ್ಮ ಸೃಷ್ಟಿಸ್ಥಿತಿಲಯಗಳನ್ನೂ ಅವತಾರಗಳಲ್ಲಿ ಧರ್ಮರಕ್ಷಣೆಯನ್ನೂ ಹೇಗೆ ಮಾಡುತ್ತಾನೆ? ಇದನ್ನು ನಾನು ವೇದವ್ಯಾಸರ ಮುಖದಿಂದಲೇ ಅನೇಕಬಾರಿ ಮಹಾಭಾರತದಲ್ಲಿ ಕೇಳಿದ್ದೇನೆ. ಎಷ್ಟು ಕೇಳಿದರೂ ನನಗೆ ತೃಪ್ತಿಯಿಲ್ಲ. ಆದರೂ ಭಾಷಾತ್ರಯವನ್ನು ಅರಿತವರಿಗೆ ಮಾತ್ರ ಭಾರತ ಸುಗಮವಾದೀತು. ಅಜ್ಞಮಾನವರಿಗೆ ಅದು ದುರ್ಗಮ. ಅವರಿಗೂ ಸುಲಭವಾಗಿ ತಿಳಿಯುವಂತೆ ತಾವು ಭಾಗವತವನ್ನು ಹೇಳಬೇಕು.'

'ವಿದುರ, ಅಜ್ಞಮಾನವರ ಮೇಲಿನ ಈ ಅನುಕಂಪೆ ದೇವತೆಗಳ ಸ್ವಭಾವ. ಯಮದೇವಾಂಶ ಸಂಭೂತನಾದ ನಿನ್ನಲ್ಲಿ ಅದು ಕಂಡು ಬರುತ್ತಿದೆ. ಶ್ರೀಕೃಷ್ಣನ ಆದೇಶದಂತೆ ನಿನಗೆ ಆ ಭಾಗವತವನ್ನೇ ಉಪದೇಶಿಸುತ್ತೇನೆ' ಎನ್ನುತ್ತಾರೆ ಮೈತ್ರೇಯರು.

* * *

ಹರಿದ್ವಾರದಲ್ಲಿ ವಿದುರ ಮೈತ್ರೇಯಮಹರ್ಷಿಗಳ ಬಳಿಯಲ್ಲಿ ಕುಳಿತು ಕೇಳುತ್ತಾನೆ, 'ಪೂಜ್ಯರೆ, ಶ್ರೀಹರಿ ಜಗತ್ತಿನ ಸೃಷ್ಟಿಲಯಾದಿಗಳನ್ನು ಹೇಗೆ ನಡೆಸುತ್ತಾನೆ? ಹೇಳಿರಿ, ನಾನು ವೇದವ್ಯಾಸರ ಮುಖದಿಂದಲೇ ಮಹಾಭಾರತದಲ್ಲಿ ಅವೆಲ್ಲವನ್ನೂ ಕೇಳಿದ್ದೇನೆ, ಆದರೂ ಇನ್ನೂ ತೃಪ್ತಿ ಇಲ್ಲ–

ಪರಾವರೇಷಾಂ ಭಗವನ್ ಕೃತಾನಿ
ಶ್ರುತಾನಿ ಮೇ ವ್ಯಾಸಮುಖಾದಭೀಕ್ಷ್ಣಮ್ ।
ನ ತೃಪ್ನುಮಃ ಕರ್ಣಸುಖಾವಹಾನಾಂ
ತೇಷಾಮೃತೇ ಕೃಷ್ಣಕಥಾಮೃತೌಘಾತ್ ॥ ೧೦ ॥

ಪೂಜ್ಯರೆ, ದೇವ ಋಷಿ ಮುಂತಾದವರ ಮತ್ತು ರಾಜರುಗಳ ಚರಿತ್ರೆಗಳನ್ನು ನಾನು ವೇದವ್ಯಾಸರ ಮುಖದಿಂದ ಮಹಾಭಾರತದಲ್ಲಿ ಕೇಳಿದ್ದೇನೆ. ಹಾಗಿದ್ದರೂ ಮುಖ್ಯತಾತ್ಪರ್ಯವನ್ನು ಅರಿತರೆ ಎಲ್ಲವೂ ಶ್ರೀಹರಿಯ ಕಥಾಮೃತದ ಪೂರವೆಂದು ತಿಳಿಯುತ್ತದೆ. ಕೇಳಲು ಅವು ಕರ್ಣಾಮೃತವೇ ಅದರಿಂದ ನಮಗೆ ಇನ್ನೂ ತೃಪ್ತಿಯಿಲ್ಲ.

ಇಲ್ಲಿ 'ಅತೃಪ್ನುಮ ಕ್ಷುಲ್ಲಸುಖಾವಹಾನಾಂ' ಎಂದು ಅಪಪಾಠವಿಟ್ಟುಕೊಂಡು [೧]ದೇವರ್ಷಿಗಳ ರಾಜರ ಚರಿತ್ರೆಗಳೆಲ್ಲ ಕ್ಷುದ್ರಸುಖ ಅಂದರೆ, ಫಲತಃ ಅಲ್ಪಸುಖರೂಪ, ಸ್ವರೂಪತಃ ದುಃಖಾತ್ಮಕ. ಅದರಿಂದ ಅದನ್ನು ಕೇಳಿ ಸಾಕೆನಿಸಿದೆ. ಇನ್ನು ಕೇಳುವ ಆಸೆಯೆ ಇಲ್ಲ. ಆದರೆ ಎಲ್ಲಿಯೋ ಅಲ್ಪಸ್ವಲ್ಪ ಭಗವಂತನ ಚರಿತ್ರೆಯೂ ಭಾರತದಲ್ಲಿ ಇದೆ. ಅದನ್ನು ಕೇಳಿ ತೃಪ್ತಿಯಾಗಿಲ್ಲ ಎಂದು ವಲ್ಲಭಾಚಾರ್ಯವ್ಯಾಖ್ಯಾನ ಹೇಳುತ್ತದೆ.

ವಸ್ತುತಃ 'ಮನ್ವಾದಿ ಕೇಚಿದ್ ಬ್ರುವತೇ ಹ್ಯಾಸ್ತೀಕಾದಿ ತಥಾಽಪರೇ' ಎಂಬಂತೆ ದೇವಷ್ಯಾದಿ ಪರಮಭಗವದ್ಭಕ್ತರ ಚರಿತ್ರೆಯ ಶ್ರವಣದಿಂದ ಮೋಕ್ಷಸುಖವೆಂದು 'ಆಸ್ತೀಕಾದಿ' ಎಂಬಶಬ್ದದಿಂದ ಭಾರತವೇ ಹೇಳಿದೆ. ಅದರಿಂದ ಅದು ಕ್ಷುಲ್ಲಸುಖವೆನ್ನುವುದು ಉಚಿತವಲ್ಲ. 'ತಥೋಪರಿಚರಾದ್ಯನ್ಯೇ' ಪರಮ ಮುಖ್ಯತಾತ್ಪರ್ಯದಿಂದ ಆದ್ಯಂತ ಭಾರತವೆಲ್ಲ 'ನಾರಾಯಣಕಥಾ' ಎಂದು ಭಾರತವೆ ಹೇಳಿದೆ. ಆದರೂ ಸಮಾಧಿ ದರ್ಶನ ಗುಹ್ಯಭಾಷೆಗಳ ಪರಿಚಯವಿಲ್ಲದ ಸಾಮಾನ್ಯ ಓದುಗನಿಗೆ ಈ ತಾತ್ಪರ್ಯಜ್ಞಾನ ಸುಲಭವಲ್ಲ. ಅದರಿಂದ ನಮಗೆ ಅಂದರೆ ವಿದುರನಂಥ ಜ್ಞಾನಿಗಳಿಗೆ ತೃಪ್ತಿಯಿಲ್ಲ, ಸಾಮಾನ್ಯನಿಗೂ ತಿಳಿಯುವಂತಾಗಲೆಂದು ಆಸೆ. ಹೀಗಾಗಿ ಸಾಮಾನ್ಯನಿಗೂ ತಿಳಿಯುವಂತೆ ಸಮಾಧಿಭಾಷೆಯಿಂದಲೆ ಭಗವಂತನ ಚರಿತ್ರೆಯನ್ನು ಹೇಳಬೇಕೆಂದು ವಿದುರ ಮೈತ್ರೇಯರಲ್ಲಿ ಕೇಳಿಕೊಳ್ಳುತ್ತಾನೆ.

ಋತೇ ಅವಗಮೇ । ಋ ಗತಾವಿತಿ ಧಾತೋಃ । ತೇಷಾಂ
ತಾತ್ಪರ್ಯಾವಗಮೇ ಕೃಷ್ಣಕಥಾಮೃತೌಘ ಏವಾಸೌ ಯತಃ ॥

'ಋತೇ' ಎಂಬುದು 'ವಿನಾ' ಎಂಬ ಅರ್ಥದ ಅವ್ಯಯವಲ್ಲ. ಸಪ್ತಮ್ಯಂತಪದ. ತಿಳಿದಾಗ ಎಂದರ್ಥ. ಋ ಗತೌ ಎಂದು ಧಾತು, ಗತ್ಯರ್ಥಧಾತುಗಳು ಜ್ಞಾನಾರ್ಥಕವೂ

---

೧. ಉಪರಮೇ ಹೇತುಃ ಕ್ಷುಲ್ಲಸುಖಾವಹಾನಾಮಿತಿ । ಅಲ್ಪಮೇವ ಸುಖಮಾವಹಂತಿ । ತದ್ವತಃ ಶ್ರವಣೇನ ತಥಾ ಹೃದಯಭಾವನಾಯಾಮಂತತೋ ಗತ್ವಾ ತತ್ತ್ವಂ ಭವತಿ ತಸ್ಮಾದ್ವಾ ದೋಷಾದ್ ವಿಮುಚ್ಯತೇ । ಉಭಯಥಾಪ್ಯಲ್ಪಂ ಸುಖಂ ಫಲತಃ । ಸ್ವರೂಪತಸ್ತು ತದ್ದುಃಖಾತ್ಮಕಮೇವ । ಅತ ಉಕ್ತಂ ಕ್ಷುಲ್ಲಸುಖಮಾವಹಂತೀತಿ । ಅತಸ್ತೈಸ್ತೃಪ್ತಾ ಜಾತಾಃ । ಅತಃ ಪರಂ ತಚ್ಛ್ರವಣೇಚ್ಛಾ ನೋತ್ಪದ್ಯತ ಇತ್ಯರ್ಥಃ ।
—ವಲ್ಲಭಃ

ಆಗುವುದರಿಂದ 'ತೇಷಾಂ ಋತೇ' ಎಂದರೆ ಅವುಗಳ ತಾತ್ಪರ್ಯವನ್ನು ತಿಳಿದಾಗಲೇ ಅದು ಕೃಷ್ಣಕಥಾಮೃತಪೂರವೇ ಆಗಿದೆ ಎಂದು ತಿಳಿಯುವುದರಿಂದ ಭಾರತಗ್ರಂಥದಿಂದ ಆನಂದ ಪಟ್ಟಷ್ಟೂ ತಮಗೆ ತೃಪ್ತಿ ಇಲ್ಲ ಎಂದರ್ಥ.

* * *

ಮಹಾಭಾರತದಲ್ಲಿ ಕಾಣುವ ವಿಷಯಸುಖವರ್ಣನೆಗಳಿಗೆ ಕೃಷ್ಣಕಥಾಮೃತವರ್ಣನೆಯಲ್ಲಿಯೆ ಮುಖ್ಯತಾತ್ಪರ್ಯವೆನ್ನುವುದು ಆ ವರ್ಣನೆಗಳನ್ನು ಕಂಡಾಗ ಸರಿಯೆಂದು ಕಾಣುವುದಿಲ್ಲ ಎಂಬ ಶಂಕೆ ಬೇಡ. ವಿವೇಕಿಗಳಿಗೆ ಅದೇ ಸರಿ ಎಂದು ಕಾಣುತ್ತದೆ ಎನ್ನುತ್ತಾನೆ ವಿದುರ ಮೈತ್ರೇಯರ ಮುಂದೆ–

ಮುನಿರ್ವಿವಕ್ಷುರ್ಭಗವದ್ಗುಣಾನಾಂ
ಸಖಾಽಪಿ ತೇ ಭಾರತಮಾಹ ಕೃಷ್ಣಃ ।
ಯಸ್ಮಿನ್ ನೃಣಾಂ ಗ್ರಾಮ್ಯಸುಖಾನುವಾದೈ-
ರ್ಮತಿರ್ಗೃಹೀತಾ ನ ಹರೇಃ ಕಥಾಯಾಮ್ ॥ ೧೨ ॥

ನಿಮ್ಮ ಸ್ನೇಹಿತರಾದ ವೇದವ್ಯಾಸಮುನಿಗಳು ಭಗವಂತನ ಗುಣಗಳನ್ನು ಹೇಳುವ ವಿವಕ್ಷೆಯಿಂದಲೆ ಭಾರತವನ್ನು ರಚಿಸಿದರು. ವಿವೇಕಿಗಳಿಗೆ ಭಾರತದಲ್ಲಿ ಪೂರ್ವಾಪರಗಳನ್ನು ಕಂಡಾಗ ಹರಿಕಥಾಮೃತವೆ ಕಂಡು ಬರುತ್ತದೆ ಹೊರತು ಮೇಲು ನೋಟಕ್ಕೆ ಕಾಣುವ ವಿಷಯಸುಖವರ್ಣನೆಗೆ ಅವರ ಮನಸ್ಸು ಆಕರ್ಷಿತವಾಗುವುದಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಮತಿರ್ಗೃಹೀತಾ ನು' ಎಂದು ಅಪಪಾಠವಿಟ್ಟುಕೊಂಡು, ಮಹಾಭಾರತದಲ್ಲಿ ವಿಷಯಸುಖವರ್ಣನೆಯಿಂದ ಸಾಮಾನ್ಯಜನರನ್ನು ಆಕರ್ಷಿಸಿ ನಡುವೆ ಸ್ವಲ್ಪ ಕೃಷ್ಣಕಥೆಯನ್ನೂ ಹೇಳಿ ಅವರ ಮನಸ್ಸನ್ನು ಕೃಷ್ಣನ ಕಡೆಗೆ ಹರಿಸುವ ಪ್ರಯತ್ನವನ್ನು ವ್ಯಾಸರು ಮಾಡಿದ್ದಾರೆ. ಅದರಿಂದ ಭಾರತ ವಲ್ಲಭವ್ಯಾಖ್ಯಾನ[೧] ಹೇಳುವಂತೆ ಅನಧಿಕಾರಿಗಳಿಗಾಗಿ,

---

೧. ಅನಧಿಕಾರಿಣೋಽಪಿ ಭಗವದ್ಗುಣಶ್ರವಣಸಿದ್ಧ್ಯರ್ಥಂ ತೇ ಸಖಾಽಪಿ ಕೇವಲ ಭಗವದ್ಗುಣವಕ್ತಾಽಪಿ ನಾಮ್ನಾ ಕೃಷ್ಣೋಽಪಿ ಬಾರತಮಾಹ । ಯಸ್ಮಿನ್ ಭಾರತೇ ನೃಣಾಂ ಬುದ್ಧಿರುಪಾಯೇನಾಕೃಷ್ಟಾ ಭವತಿ । ತತ್ರ ತೇ ಸರ್ವೇ ಗ್ರಾಮ್ಯಕಥಾಸ್ವೇವಾವಿಷ್ಟಚಿತ್ತಾಃ । ಪ್ರವೃತ್ತಿಶ್ಚ ಸ್ವರುಚ್ಯೈವ । ಅತಸ್ತೇಷಾಂ ಬುದ್ಧಿಗ್ರಹಣಾರ್ಥಂ ಗ್ರಾಮ್ಯಕಥಾಸು ಭಗವತ್ಕಥಾಃ ಪ್ರವೇಶಿತಾಃ । ತಾಃ ಕಥಾ ಗ್ರಾಮ್ಯತ್ವೇನಾಪಿ ಗೃಹೀತಾಃ ಸ್ವಪ್ರಯೋಜನಂ ಕುರ್ವಂತೀತಿ ಪ್ರಯತ್ನಃ ಸಾರ್ಥಕೋ ಭವತಿ । —ವಲ್ಲಭಃ

[1]ಶುಕದೇವವ್ಯಾಖ್ಯಾನ ಹೇಳುವಂತೆ ಸಾಮಾನ್ಯ ಅಧಿಕಾರಿಗಳಿಗಾಗಿ ಇದೆ, ಉತ್ತಮಾಧಿಕಾರಿಗಳಿಗಾಗಿ ಭಾಗವತವನ್ನು ಹೇಳಬೇಕೆನ್ನುವುದು ವಿದುರನ ಆಶಯ. ಆದರೆ ವಿಷಯಸುಖವನ್ನೇ ಆದರಿಸುವ ಅನಧಿಕಾರಿ ಓದುಗರು ಕೃಷ್ಣಕಥೆಯನ್ನೂ ಲೌಕಿಕದೃಷ್ಟಿಯಿಂದಲೆ ಕಾಣುತ್ತಾರೆ ಹೊರತು ದಿವ್ಯ ಅದ್ಭುತವೆಂದು ಎಷ್ಟುಮಾತ್ರಕ್ಕೂ ಗ್ರಹಿಸುವುದಿಲ್ಲ. ಅದರಿಂದೇನು ಪ್ರಯೋಜನ? ಎಂದರೆ ಪ್ರಯೋಜನವಿದ್ದೇ ಇದೆ, ಪ್ರಯತ್ನ ಸಾರ್ಥಕವೇ ಆಗುತ್ತದೆ ಎನ್ನುತ್ತದೆ ವಲ್ಲಭವ್ಯಾಖ್ಯಾನ. ಉಳಿದ ಎಲ್ಲ ವ್ಯಾಖ್ಯಾನಕಾರರು[2] ಶಾಖಾಚಂದ್ರನ್ಯಾಯವನ್ನು ಮೊರೆ ಹೊಕ್ಕಿದ್ದಾರೆ. ಆದರೆ ಚಂದ್ರ ಯಾರೆಂದು ವಿಚಾರಿಸುವವನಿಗೆ ಮಾತ್ರ ಮೊದಲಿಗೆ ಮರದ ಶಾಖೆಯನ್ನು ತೋರಿಸಬಹುದು. ಭಗವಂತನ ವಿದ್ಯೆಯೆ ಬೇಡ ಎನ್ನುವ ಅನಧಿಕಾರಿಗೆ ವಿಷಯಸುಖವನ್ನು ವರ್ಣಿಸಿದರೆ ಅವನ ಮನಸ್ಸು ಅಲ್ಲೇ ಇದ್ದೀತು ಹೊರತು ಭಗವಂತನ ಕಡೆಗೆ ಆಕರ್ಷಿತವಾಗದು. ವಸ್ತುತಃ 'ಮತಿರ್ಗೃಹೀತಾ ನ' ಎಂದೇ ಪಾಠ. ಅದಕ್ಕೆ ತಾತ್ಪರ್ಯ ಇದು–

ಯಸ್ಮಿನ್ ಭಾರತೇ ಹರೇಃ ಕಥಾಯಾಂ ಗ್ರಾಮ್ಯಸುಖಾನುವಾದೈರ್ಮತಿರ್ನ ಗೃಹೀತಾ ।

ಭಾರತಾನ್ನಾಧಿಕಂ ವಿಷ್ಣೋರ್ಮಹಿಮಾವಾಚಕಂ ಕ್ವಚಿತ್ ।
ಭಾರತಾನ್ನ ವಿರಾಗಾಯ ಭಾರತಾನ್ನ ವಿಮುಕ್ತಯೇ ॥

ಇತಿ ಪಾದ್ಮೇ ॥

ವೇದವ್ಯಾಸರು ಹೇಳಿದ ಆ ಭಾರತದಲ್ಲಿ ಪೂರ್ವಾಪರವಿಮರ್ಶೆಯಿಂದ ಎಲ್ಲ ಕಥೆಗಳೂ ಹರಿಮಾಹಾತ್ಮ್ಯಸೂಚಕವೆಂದು ತಿಳಿದು ಬಂದಾಗ ಉತ್ತಮಾಧಿಕಾರಿಯ ಬುದ್ಧಿಯು ಮೇಲುನೋಟಕ್ಕೆ ಕಾಣುವ ವಿಷಯಸುಖವರ್ಣನೆಯಲ್ಲಿ ಮಾತ್ರವೆ ಸಿಲುಕುವುದಿಲ್ಲ.

---

೧. ಭಾರಃ ಬ್ರಹ್ಮಾದೀನಾಂ ನಾನಾ ಜೀವಾನಾಂ ಕಥಾವರ್ಣನರೂಪಃ ಅರ್ಥಧರ್ಮಕಾಮಮೋಕ್ಷವರ್ಣನರೂಪಶ್ಚ ವಿದ್ಯತೇ ಯಸ್ಮಿನ್ ತದ್ ಭಾರತಂ । ಮತ್ವರ್ಥೀಯಸ್ತಪ್ರತ್ಯಯಃ। ತದ್ ಭಾರತಮಾಹ ಯಸ್ಮಿನ್ ಭಾರತೇ ನೃಣಾಂ ಮತಿಃ ಗ್ರಾಮ್ಯಸುಖಾನುವಾದೈರ್ದ್ವಾರಭೂತೈಃ ನು ನಿಶ್ಚಿತಂ ಹರೇಃ ಕಥಾಯಾಂ ಗೃಹೀತಾ ನೀತಾ । ಅತೋ ಮಹಾಭಾರತಾದಿಕಥಾ ಸಾಮಾನ್ಯಾಧಿಕಾರಿವಿಷಯಾ । ಉತ್ತಮಾಧಿಕಾರಿವಿಷಯಾಂ ಕೇವಲಾಂ ಹರಿಕಥಾಂ ಕಥಯೇತಿ ಭಾವಃ ।
–ಶುಕದೇವಃ

೨. ಶಾಖಾಚಂದ್ರನ್ಯಾಯೇನ ಭಗವತ್ಕಥಾಯಾಂ ಬುದ್ಧ್ಯವತಾರಾರ್ಥಂ ಭಾರತೇ ಗ್ರಾಮ್ಯಸುಖಾನುವಾದಃ ಕೃತಃ । ನ ಹಿ ತಾವತಾ ತತ್ರೈವ ತಾತ್ಪರ್ಯಮಿತಿ ವಕ್ತುಂ ಯುಕ್ತಂ । –ವೀರರಾಘವಃ

“ಭಾರತಕ್ಕಿಂತ ಹೆಚ್ಚು ವಿಷ್ಣುಮಾಹಾತ್ಮ್ಯಪ್ರತಿಪಾದಕವಾದ ಗ್ರಂಥ ಇನ್ನೊಂದಿಲ್ಲ. ಭಾರತಕ್ಕಿಂತ ಹೆಚ್ಚಿನ ವೈರಾಗ್ಯಜನಕವಾದ ಗ್ರಂಥ ಇನ್ನೊಂದಿಲ್ಲ. ಭಾರತಕ್ಕಿಂತ ಹೆಚ್ಚು ಮೋಕ್ಷಸಾಧಕವಾದ ಗ್ರಂಥ ಇನ್ನೊಂದಿಲ್ಲ” ಎಂದು ಪದ್ಮಪುರಾಣ ಹೇಳಿದೆ.

ವಿಮರ್ಶಾತ್ಮಕಬುದ್ಧಿಯವರಿಗೆ ವಿಷಯಸುಖ ವರ್ಣನರೂಪವಾದ ಭಗವದ್ಭಕ್ತರ ಕಥೆ ಮಾತ್ರವಲ್ಲದೆ ಅದರೊಳಗೆಯೇ ಹರಿಕಥೆಯೂ ಭಾರತದಲ್ಲಿ ಎಲ್ಲೆಡೆ ಹಾಸುಹೊಕ್ಕಾಗಿರುವುದು ವಿದಿತವಾಗುತ್ತದೆ. ಆಸ್ತೀಕಾದಿ ಉಪರಿಚರಾದಿ ಎರಡೂ ಬಗೆಯ ಅರ್ಥ ಕಾಣುತ್ತದೆ. ಆಸ್ತೀಕಾದಿ ಅರ್ಥದಲ್ಲಿ ಅವಾಂತರ ತಾತ್ಪರ್ಯ, ಉಪರಿಚರಾದಿ ಅರ್ಥದಲ್ಲಿ ಮುಖ್ಯತಾತ್ಪರ್ಯ ಉತ್ತಮಾಧಿಕಾರಿಗಳಿಗೆ ತಿಳಿದಿರುತ್ತದೆ. ಅನಧಿಕಾರಿಗಳಿಗಾಗಿ ಭಾರತವನ್ನು ವ್ಯಾಸರು ಬರೆದೇ ಇಲ್ಲ. ಉತ್ತಮ ಅಧಿಕಾರಿಗಳಿಗಾಗಿಯೇ ಬರೆದಿದ್ದಾರೆ ಏಕೆಂದರೆ ಪದ್ಮಪುರಾಣ ಹಾಗೇ ಹೇಳುತ್ತದೆ.

* * *

ಮಹಾಭಾರತದಲ್ಲಿ ಭಗವಂತನ ಮಾಹಾತ್ಮ್ಯದೊಂದಿಗೆ ಭಗವದ್ಭಕ್ತರ ಭೋಗ ಭಾಗ್ಯವೂ ವರ್ಣಿತವಾಗಿರುವುದರಿಂದ ಉತ್ತಮಾಧಿಕಾರಿಗಳಿಗೆ ಅದರ ಅಧ್ಯಯನದಿಂದ ಭಕ್ತಿವೈರಾಗ್ಯಾದಿಗಳೂ ಮೋಕ್ಷವೂ ಕರಗತವಾಗುತ್ತದೆ ಎಂದು ವಿದುರ ಮೈತ್ರೇಯರ ಮುಂದೆ ಹೇಳುತ್ತಾನೆ–

ಸಾ ಶ್ರದ್ದಧಾನಸ್ಯ ವಿವರ್ಧಮಾನಾ
ವಿರಕ್ತಿಮನ್ಯತ್ರ ಕರೋತಿ ಪುಂಸಃ ।
ಹರೇಃ ಸದಾನುಸ್ಮೃತಿನಿರ್ವೃತಸ್ಯ
ಸಮಸ್ತದುಃಖಾಪ್ಯಯಮಾಶು ಧತ್ತೇ ॥ ೧೩ ॥

ಮಹಾಭಾರತವನ್ನು ಶ್ರದ್ಧೆಯಿಂದ ಪಠಿಸುವ ಉತ್ತಮಾಧಿಕಾರಿಗಳಿಗೆ ಅದರ ತಾತ್ಪರ್ಯ ತಿಳಿದಾಗ ಅವರ ಮನಸ್ಸು ವಿಷಯಸುಖವರ್ಣನೆಗಿಂತ ಹೆಚ್ಚಾಗಿ ವಿಷ್ಣು ಮಾಹಾತ್ಮ್ಯದಲ್ಲಿಯೆ ಆಸಕ್ತವಾಗುವದರಿಂದ ಆ ಆಸಕ್ತಿ ಇನ್ನೂ ಗಾಢವಾಗಿ ಬೆಳೆಯುತ್ತದೆ. ವಿಷಯವೈರಾಗ್ಯವನ್ನು ಉಂಟುಮಾಡುತ್ತದೆ. ಬಳಿಕ ಭಗವಂತನ ನಿರಂತರಧ್ಯಾನ, ಅದರಿಂದ ಸ್ವರೂಪಾನಂದದ ಅಭಿವ್ಯಕ್ತಿ ಸಮಸ್ತದುಃಖನಿವೃತ್ತಿಗಳೂ ಲಭಿಸುತ್ತವೆ.

ಇಲ್ಲಿ ‘ಸಾ ವಿವರ್ಧಮಾನಾ’ ಎಂದು ‘ಸಾ’ಶಬ್ದದಿಂದ ಹಿಂದಿನ ಶ್ಲೋಕದಲ್ಲಿ ಹೇಳಿದ ಮತಿಯನ್ನು ಇಟ್ಟುಕೊಳ್ಳಬೇಕೆ? ಅಥವಾ ಹರಿಕಥೆಯನ್ನೇ ಎಂದು ಸಂಶಯ ಬರುತ್ತದೆ. ಹರಿಕಥೆ ಬೆಳೆಯುತ್ತದೆಯೆ, ಅಥವಾ ಅದರಲ್ಲಿ ಮತಿ, ಅಂದರೆ ಆಸಕ್ತಿ ಬೆಳೆಯುತ್ತದೆಯೆ? ಆಸಕ್ತಿ ಬೆಳೆಯುತ್ತದೆ ಎನ್ನಬೇಕು. ಕಥೆ ಬೆಳೆಯುವುದಿಲ್ಲ ತಾನೆ?

ಪುನಃಪುನಃ ಶ್ರವಣದಿಂದ ಕಥೆ ಬೆಳೆಯುತ್ತದೆ ಎನ್ನುತ್ತಾರೆ ಬೇರೆ ಎಲ್ಲ ವ್ಯಾಖ್ಯಾನಕಾರರು. ಶ್ರೀಧರವ್ಯಾಖ್ಯಾನದಲ್ಲಿ ಹೀಗೆ ವ್ಯಾಖ್ಯಾನಿಸಿ ಅದು ಸರಿಯಲ್ಲವೆನಿಸಿ 'ಸಾ ಕಥಾ ಮತಿರ್ವಾ' ಸಾಶಬ್ದದಿಂದ ಕಥೆಯನ್ನು ಇಟ್ಟುಕೊಳ್ಳುವುದಕ್ಕಿಂತ ಮತಿಯನ್ನು ಇಟ್ಟುಕೊಂಡರೇ ಹೆಚ್ಚು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ವಲ್ಲಭವ್ಯಾಖ್ಯಾನದಲ್ಲಿ ಮತಿಯನ್ನೇ ಇಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ. ಆದರೆ ಕಥೆಯ ಪ್ರಸ್ತಾವ ಮಾಡಿ ಸಾ ಮತಿಃ ಎಂದಿದೆ. ಪಾಠದೋಷವಿರಬೇಕು. 'ಸಾ ಕಥಾ' ಎಂದೇ ಪಾಠವಿರಬೇಕು. ಗಿರಿಧರವ್ಯಾಖ್ಯಾನದಲ್ಲಿ 'ಕಥಾರತಿಃ' ಕಥೆಯಲ್ಲಿ ಆಸಕ್ತಿ ಎಂದು ಇಟ್ಟುಕೊಂಡಿದ್ದಾರೆ. ಏಕೆ ಈ ಗೊಂದಲ? ಹಿಂದಿನ ಶ್ಲೋಕದಲ್ಲಿ ಉಕ್ತವಾದ 'ಮತಿ'ಯನ್ನೇ ಏಕೆ ಇಟ್ಟುಕೊಳ್ಳಬಾರದು? ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ಯಾ ಗ್ರಾಮ್ಯಸುಖಾನುವಾದೈರ್ನ ಗೃಹೀತಾ ಹರೇಃ ಕಥಾಯಾಂ ವಿವರ್ಧಮಾನಾ ಮತಿಃ ॥

ವಿಷಯಸುಖವರ್ಣನೆಯಲ್ಲಿ ಮಾತ್ರವೇ ಸಿಲುಕದೆ ಇರುವ, ಹರಿಕಥೆಯಲ್ಲಿ ಬೆಳೆಯುವ ಆ ಮತಿ, ಅಂದರೆ ಆಸಕ್ತಿ ಎಂದರ್ಥ.

ಇತಿ ಶ್ರೀಮದಾಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಪಂಚಮೋಽಧ್ಯಾಯಃ

—o—

ಅಧ್ಯಾಯ-೬

ಅಧ್ಯಾಯಸಾರಾಂಶ

ಮೈತ್ರೇಯರು ವಿದುರನಿಗೆ ಪರಮಾತ್ಮನ ಸೃಷ್ಟಿಲೀಲೆಯನ್ನು ವರ್ಣಿಸುತ್ತಾರೆ. 'ಮೊದಲಿಗೆ ಪರಮಾತ್ಮ ಲಕ್ಷ್ಮಿಗೆ ಸೃಷ್ಟಿಕಾರ್ಯದಲ್ಲಿ ಪ್ರೇರಣೆ ನೀಡಿದ. ಪ್ರಕೃತಿಯಲ್ಲಿಯೂ ಮಹದಾದಿತತ್ವರೂಪದಿಂದ ಪರಿಣಮಿಸುವ ಶಕ್ತಿಯನ್ನು ಪ್ರೇರಿಸಿದ. ಅದರಿಂದ ಆ ತತ್ವಗಳೂ ಅಭಿಮಾನಿಗಳಾದ ಬ್ರಹ್ಮಾದಿದೇವತೆಗಳೂ ಜನಿಸಿದರು. ಮುಂದೆ ಅವರೆಲ್ಲ ಸೇರಿ ಬ್ರಹ್ಮಾಂಡ ಸೃಷ್ಟಿ ಮಾಡಬೇಕು. ಅದಕ್ಕೆ ತಕ್ಕ ಶಕ್ತಿಜ್ಞಾನಗಳನ್ನು ಭಗವಂತನೇ ಪ್ರೇರಿಸಬೇಕೆಂದು ಅವರೆಲ್ಲರೂ ಪ್ರಾರ್ಥಿಸುತ್ತಾರೆ ಸ್ತುತಿ ಮಾಡುತ್ತಾರೆ.

* * *

ಮೈತ್ರೇಯಮಹರ್ಷಿಗಳು ವಿದುರನಿಗೆ ಭಗವಂತನು ನಡೆಸುವ ಸೃಷ್ಟಿಕಾರ್ಯವನ್ನು ಹೇಳಲು ಪ್ರಾರಂಭಿಸುತ್ತಾರೆ-

ಮೈತ್ರೇಯ ಉವಾಚ-

ಭಗವಾನೇಕ ಆಸೇದಮಗ್ರ ಆತ್ಮಾಽಽತ್ಮನಾಂ ವಿಭುಃ ।
ಆತ್ಮೇಚ್ಛಾನುಗತೋ ಹ್ಯಾತ್ಮಾ ನಾನಾಶಕ್ತ್ಯುಪಲಕ್ಷಿತಃ ॥ ೧ ॥

ಈ ಸೃಷ್ಟಿಗೆ ಮೊದಲು ಪ್ರಳಯಕಾರಿಯಾದ ಭಗವಂತನೊಬ್ಬನೆ ಸ್ವತಂತ್ರನಾಗಿ ಇದ್ದ. ಅವನ ವಶದಲ್ಲಿ ಪ್ರಕೃತಿ, ಕಾಲ ಮುಂತಾದ ನಾನಾ ಸೃಷ್ಟಿಕಾರಣಗಳೂ ಇದ್ದುವು. ಅವುಗಳ ನಿಯಾಮಕಶಕ್ತಿ ಭಗವಂತನದು. ಜೀವರೂ ಹಾಗೇ ಅವನ ಅಧೀನರು, ಅವನಿಚ್ಛೆಯಂತೆಯೆ ಇರುವವರು. ಅವನೆ ಎಲ್ಲ ಜೀವರಿಗೆ ಅಧಿಪತಿ.

ಇಲ್ಲಿ 'ಆತ್ಮಾ' ಅಂದರೆ 'ಅತ್ತಿ' ಪ್ರಳಯಕಾರಿ. 'ಆತ್ಮನಾಂ ವಿಭುಃ' ಎಲ್ಲ ಜೀವರಿಗೂ ಅಧಿಪತಿ, ಸ್ವಾಮಿ ಎಂದರ್ಥ. ಆದರೆ ಶ್ರೀಧರವ್ಯಾಖ್ಯಾನದಲ್ಲಿ 'ಆತ್ಮನಾಂ ಆತ್ಮಾ' ಎಂದು ಅನ್ವಯಿಸಿ ಎಲ್ಲ ಜೀವರ ಸ್ವರೂಪ ಭಗವಂತ ಎಂದು ಅದ್ವೈತವನ್ನು ಹೇಳಿದ್ದಾರೆ. ಜೀವಗೋಸ್ವಾಮಿವ್ಯಾಖ್ಯಾನದಲ್ಲಿಯೂ ಪರಮಾತ್ಮ ಸೂರ್ಯ ಮಂಡಲದಂತೆ, ಜೀವರು ಅವನ ರಶ್ಮಿಗಳಂತೆ ಎಂದು ಅಭೇದವನ್ನೇ ಹೇಳಿದ್ದಾರೆ.

ವಲ್ಲಭವ್ಯಾಖ್ಯಾನದಲ್ಲಿಯೂ ಎಲ್ಲ ಜೀವರ ಸಮಷ್ಟಿರೂಪ ಭಗವಂತ ಎಂದಿದ್ದಾರೆ. ವಸ್ತುತಃ 'ಆತ್ಮನಾಂ ಆತ್ಮಾ' ಎಂದು ಅನ್ವಯವಲ್ಲ.

ಆತ್ಮನಾಂ ವಿಭುಃ ಜೀವಾಧಿಪತಿಃ ।

'ಆತ್ಮನಾಂ ವಿಭುಃ' ಎಂದು ಅನ್ವಯ. ಎಲ್ಲ ಜೀವರಿಗೆ ಅಧಿಪತಿ ಎಂದರ್ಥ.

* * *

ಸೃಷ್ಟಿಕರ್ತನಾದ ಭಗವಂತ ಸೃಷ್ಟಿಗೆ ಮೊದಲು ಪ್ರಪಂಚವೆಲ್ಲವೂ ಪ್ರಕೃತಿಯಲ್ಲಿ ಲೀನವಾಗಿದ್ದುದನ್ನು ಕಂಡ. ಸೃಷ್ಟಿಮಾಡಲು ಜೀವರು ಅಶಕ್ತರು. ಮಹಾಲಕ್ಷ್ಮಿಗೆ ಸೃಷ್ಟಿಮಾಡುವ ಬಯಕೆ ಬಂದಿಲ್ಲ. ಹೀಗಾಗಿ ತಾನೇ ಅವಳಿಗೆ ಬಯಕೆ ತಂದಿತ್ತು ಪ್ರಕೃತಿಯಿಂದ ಸೃಷ್ಟಿ ಮಾಡಿಸಬೇಕೆಂಬುದನ್ನು ಆಲೋಚಿಸಿದನೆಂದು ಮೈತ್ರೇಯ ಮಹರ್ಷಿಗಳು ವಿದುರನಿಗೆ ಉಪದೇಶಿಸುತ್ತಾರೆ–

ಸ ವಾ ಏಷ ತದಾ ದ್ರಷ್ಟಾ ನಾಪಶ್ಯದ್ ವಿಶ್ವಮೇಕರಾಟ್ ।
ಮೇನೇಽಸಂತಮಿವಾತ್ಮಾನಂ ಸುಪ್ತಶಕ್ತಿರಸುಪ್ತದೃಕ್ ॥ ೨ ॥

ಸ್ವತಂತ್ರವಾಗಿ ಸರ್ವದಾ ನೋಡಬಲ್ಲವನೇ ಆದ ಭಗವಂತ ತನಗಿಂತ ಬೇರೆ ಲಯಕಾಲದಲ್ಲಿ ಏನೂ ಇದ್ದಂತೆ ಕಾಣಲಿಲ್ಲ. ಜೀವರೆಲ್ಲ ಆಗ ಇದ್ದರೂ ಅಶಕ್ತರಾದ್ದರಿಂದ ಅವರು ಎಂದೂ ಇದ್ದೂ ಇಲ್ಲದಂತೆಯೆ. ಮಹಾಲಕ್ಷ್ಮಿಗೂ ಆಗ ಸೃಷ್ಟಿಯ ಬಯಕೆ ಇಲ್ಲದಿದ್ದುದರಿಂದ ಅವಳೂ ಇದ್ದೂ ಇಲ್ಲದಂತೆಯೆ. ಪ್ರಕೃತಿಗೂ ಬ್ರಹ್ಮಾಂಡವಾಗಿ ಪರಿಣಮಿಸುವ ಶಕ್ತಿ ವ್ಯಕ್ತವಾಗಿ ಇಲ್ಲದೆ ಇದ್ದುದರಿಂದ ಇದ್ದೂ ಇಲ್ಲದಂತೆಯೆ. ಅದರಿಂದ ಸೃಷ್ಟಿ ಮಾಡಲು ಬಯಸಿದ.

ಇಲ್ಲಿ 'ಆತ್ಮಾನಂ ಅಸಂತಮಿವ ಮೇನೇ' ಎಂದರೆ ದೃಶ್ಯ ಪ್ರಪಂಚವಿಲ್ಲದ್ದರಿಂದ ದ್ರಷ್ಟೃವಾದ ತಾನೇ ಇಲ್ಲದಂತೆ ಎಂದರ್ಥ. 'ಸುಪ್ತಶಕ್ತಿಃ' ಎಂದರೆ ಅವನ ಮಾಯಾದಿಶಕ್ತಿಗಳು ಸುಪ್ತವಾಗಿವೆ ಎಂದರ್ಥ ಎಂದು ಶ್ರೀಧರವ್ಯಾಖ್ಯಾನ[೧] ಹೇಳಿದೆ.

[೨]ಸಮಷ್ಟಿಜೀವ ತನ್ನಲ್ಲಿ ಸೂಕ್ಷ್ಮರೂಪದಿಂದ ಇದ್ದರೂ ಪ್ರಕಟನಾಗದಿದ್ದುದರಿಂದ ಇಲ್ಲವೆಂದೇ ತಿಳಿದ. ದೃಷ್ಟಿಯಿಂದಲೇ ಭೋಗ್ಯಳಾದ ಶಕ್ತಿ ಅಂದರೆ ಮಾಯೆ ಎಂಬ

---

೧. ಆತ್ಮಾನಮಸಂತಮಿವ ಮೇನೇ । ದೃಶ್ಯಾಭಾವೇ ದ್ರಷ್ಟೃತ್ವಾಭಾವಾತ್ । ತದಾಹ ಸುಪ್ತಾ ಮಾಯಾದ್ಯಾಃ ಶಕ್ತಯೋ ಯಸ್ಯ । ನ ತ್ವಸಂತಮೇವ ಮೇನೇ । ಯತೋಽಸುಪ್ತಾ ದೃಕ್ ಚಿಚ್ಛಕ್ತಿರ್ಯಸ್ಯೇತಿ । ಸುಪ್ತಶಕ್ತಿಃ ಸೂಕ್ಷ್ಮಾವಸ್ಥ ಚಿದಚಿದಾಖ್ಯ ಸ್ವಶಕ್ತಿಃ ।
–ಶ್ರೀಧರಃ

೨. ಆತ್ಮಾನಂ ಸ್ವಂ ವಿರಾಜಂತಮಪಿ ಅಸಂತಮಿವ ಮೇನೇ ಗೃಹಿಣೀಂ ವಿನಾ ಗೃಹಸ್ಥ ಇವೇತಿ ಕಾವ್ಯರೀತ್ಯೋಕ್ತಿಃ ಸುಪ್ತಾ ಸ್ವಾಪವತೀ ಶಕ್ತಿರ್ಮಾಯಾ ಯಸ್ಯ ಸಃ । ನಹಿ ಸ್ವಾಪವತೀ ಕಾಂತಾ ಸಂಭುಜ್ಯತ ಇತಿ ಭಾವಃ –ವಿಶ್ವನಾಥಃ

ತನ್ನ ಪ್ರೇಯಸಿ ಸುಪ್ತಳಾಗಿದ್ದರಿಂದ ಅವಳನ್ನು ಭೋಗಿಸುವಂತಿರಲಿಲ್ಲ ಎಂದು ವಿಶ್ವನಾಥವ್ಯಾಖ್ಯಾನ ಶುಕದೇವವ್ಯಾಖ್ಯಾನಗಳು.

[೧]'ನಾನು ಹಿಂದೆ ಸೃಷ್ಟಿಕಾಲದಲ್ಲಿ ದ್ರಷ್ಟೃ ಆಗಿದ್ದೆ. ದೃಶ್ಯಪ್ರಪಂಚವಿತ್ತು. ಈಗ ಲಯಕಾಲದಲ್ಲಿ ದೃಶ್ಯಪ್ರಪಂಚವಿಲ್ಲ' ಎನ್ನುತ್ತಾನೆ. ತನ್ನನ್ನೇ ತಾನು ನೋಡಬಹುದಿತ್ತು ಆದರೆ ಪೂರ್ವಸಂಸ್ಕಾರಬಲದಿಂದ ಬಹಿರ್ಮುಖವಾಗಿ ನೋಡಿ ಹೀಗೆ ಹೇಳುತ್ತಾನೆ. ತನಗಿಂತ ಬೇರೆ ದೃಶ್ಯವನ್ನೇ ಅರಸಿ ಕಾಣದೆ ದೃಶ್ಯವಿಲ್ಲದಿದ್ದರೆ ದೃಷ್ಟೃವೆ ಇಲ್ಲ, ತಾನು ದ್ರಷ್ಟನೆ ಅಲ್ಲ ಎಂದು ತಿಳಿಯುತ್ತಾನೆ ಎಂದು ವಲ್ಲಭವ್ಯಾಖ್ಯಾನ.

[೨]ಶಕ್ತಿ ಎಂದರೆ ಪರಮಾತ್ಮನ ಶರೀರಭೂತವಾದ ಚೇತನಾಚೇತನಾತ್ಮಕ ಪ್ರಪಂಚ. ಅದು ಲಯಕಾಲದಲ್ಲಿ ಸುಪ್ತವಾಗಿತ್ತು. ಅಂದರೆ, ಸೂಕ್ಷ್ಮವಾಗಿತ್ತು. ಅದರಿಂದ ತಾನು ನಾಮರೂಪ ರಹಿತನಾಗಿದ್ದು ವ್ಯವಹಾರಕ್ಕೆ ಅನರ್ಹನಾಗಿದ್ದರಿಂದ ಪರಮಾತ್ಮ ತನ್ನನ್ನು ಇದ್ದೂ ಇಲ್ಲದಂತೆ ಎಂದು ತಿಳಿದುಕೊಂಡನು ಎಂದು ವೀರರಾಘವವ್ಯಾಖ್ಯಾನ. ಇವೆಲ್ಲವೂ ಅಸಂಗತ, ಅಪ್ರಾಮಾಣಿಕ. ಪ್ರಮಾಣಗಳ ಆಧಾರದಿಂದ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ–

ಪರಮಾತ್ಮಾ ಯತೋ ಜೀವಂ ಮೇನೇಽಸಂತಮಶಕ್ತಿತಃ ।
ಅಸನ್ನಸಾವತೋ ನಿತ್ಯಂ ಸತ್ಯಜ್ಞಾನೋ ಯತೋ ಹರಿಃ ॥
ಇತ್ಯಾಗ್ನೇಯೇ ॥

ಶಕ್ಯತ್ವಾಚ್ಛಕ್ತಯೋ ಭಾರ್ಯಾಃ ಶಕ್ತಿಃ ಸಾಮರ್ಥ್ಯಮುಚ್ಯತೇ ।
ಇತಿ ಬ್ರಹ್ಮತರ್ಕೇ ।

---

೧. ಸ ಭಗವಾನ್ ತದಾ ಪುರ್ವಸಂಸ್ಕಾರೇಣ ದ್ರಷ್ಟಾ ಜಾತಃ । ಅಹಂ ದ್ರಷ್ಟೇತಿ ಪೂರ್ವಾವಸ್ಥಾಂ ಸ್ಮೃತವಾನ್ । ತದಾ ದ್ರಷ್ಟೃತ್ವನಿರ್ವಾಹಾರ್ಥಂ ದೃಶ್ಯಾಲೋಚನೇ ಕ್ರಿಯಮಾಣೇ ದೃಶ್ಯಂ ನಾಪಶ್ಯತ್ । ಯದ್ಯಪ್ಯಾತ್ಮನಮಪಿ ದ್ರಷ್ಟುಂ ಶಕ್ನೋತಿ । ತಥಾಪಿ ಪೂರ್ವವಾಸನಯಾ ಬಹುರ್ಮುಖ ಏವ ನಿರ್ಗತ ಇತಿ ಸ್ವಾತಿರಿಕ್ತಮೇವ ದೃಶ್ಯಮಾಲೋಚಯನ್ ತದಭಾವೇ ಆತ್ಮಾನಮೇವಾಸಂತಂ ಮೇನೇ । –ವಲ್ಲಭಃ

೨. ದೃಶ್ಯಂ ಕಾರ್ಯಂ ನಾಪಶ್ಯತ್ । ಕಿಂತು ಅಸಂತಂ ವ್ಯವಹಾರಾನರ್ಹಂ ನಾಮ ರೂಪರಹಿತಮಿತಿ ವಾ ಆತ್ಮಾನಂ ಮೇನೇ । ಇವಶಬ್ದೇನ ತಸ್ಯ ಸೂಕ್ಷ್ಮದರ್ಶಿತ್ವಾತ್ ಸ್ವಶರೀರಭೂತಸೂಕ್ಷ್ಮಾವಸ್ಥಚಿದಚಿದ್ವಿಷಯಜ್ಞಾನ ಸಂಪತ್ತಿಃ ಸೂಚ್ಯತೇ । –ವೀರರಾಘವಃ

ಸುಪ್ತಿಸ್ತು ಪ್ರಕೃತೇಃ ಪ್ರೋಕ್ತಾ ಅತೀವ ಭಗವದ್ರತಿಃ ।
ಅನಾಸ್ಥಾಽನ್ಯತ್ರ ಚ ಪ್ರೋಕ್ತಾ ವಿಷ್ಣೋಶ್ಚಕ್ಷುರ್ನಿಮೀಲನಮ್ ।
ಇತಿ ವ್ಯೋಮಸಂಹಿತಾಯಾಮ್ ।

ಆತ್ಮಾನಂ ಅಸಂತಂ ಮೇನೇ ಎಂದರೆ ಪರಮಾತ್ಮ ಜೀವಾತ್ಮನನ್ನು ಅವನು ಅಶಕ್ತನಾದ್ದರಿಂದ ಇದ್ದೂ ಇಲ್ಲದವನೆಂದು ತಿಳಿದಿದ್ದಾನೆ. ನಿತ್ಯವೂ ಹೀಗೇ ತಿಳಿದುದರಿಂದ ಜೀವಾತ್ಮ ನಿತ್ಯವೂ ಇದ್ದೂ ಇಲ್ಲದಂತೆಯೆ. ಏಕೆಂದರೆ ಹರಿಯ ಜ್ಞಾನ ಸದಾ ಸತ್ಯವೆ ಆಗಿರುತ್ತದೆ, ಮಿಥ್ಯೆಯಲ್ಲ, ಎಂದು ಅಗ್ನಿಪುರಾಣದಲ್ಲಿ ಹೇಳಿದೆ. ಪುರುಷರ ಅಂಕೆಗೆ ಒಳಪಟ್ಟಿರುವುದರಿಂದ ಪತ್ನಿಯರು ಶಕ್ತಿಗಳೆನಿಸುತ್ತಾರೆ. ಶಕ್ತಿ ಎಂದು ಸಾಮರ್ಥ್ಯವೂ ಕರೆಸಲ್ಪಡುತ್ತದೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಚಿತ್ಪ್ರಕೃತಿ ಮಹಾಲಕ್ಷ್ಮಿಗೆ ಸುಪ್ತಿ ಎಂದರೆ ಜೀವಾತ್ಮರಂತೆ ನಿದ್ರೆಯಲ್ಲ, ಜಗತ್ತಿನ ಸೃಷ್ಟ್ಯಾದಿಗಳ ಬಯಕೆ ಇಲ್ಲದೆ ಕೇವಲ ಭಗವಂತನ ಆಲಿಂಗನದಲ್ಲಿಯೆ ಅತ್ಯಂತ ಆಸಕ್ತಿ ಹೊಂದಿರುವುದೇ ಅವಳಿಗೆ ಸುಪ್ತಿ. ಅದರಿಂದ ಭಗವಂತನ ಶಕ್ತಿ ಅಂದರೆ ಪತ್ನೀರೂಪಳಾದ ಲಕ್ಷ್ಮಿ ಹೀಗೆ ಸುಪ್ತಳಾಗಿರುವುದರಿಂದ ಭಗವಂತ ಲಯಕಾಲದಲ್ಲಿ ಸುಪ್ತಶಕ್ತಿ ಎನಿಸುತ್ತಾನೆ. ಜಡಪ್ರಕೃತಿಗೆ ಸುಪ್ತಿ ಎಂದರೆ ಕಾರ್ಯರೂಪದಿಂದ ಪರಿಣಾಮವಿಲ್ಲದಿರುವಿಕೆ. ಶ್ರೀಹರಿಗೆ ಸುಪ್ತಿ ಕೆಲವೆಡೆ ಹೇಳಿದ್ದರೆ ಅದು ಕಣ್ಣು ಮುಚ್ಚಿಕೊಂಡಿರುವುದೇ ಹೊರತು ಬೇರೆ ನಿದ್ರೆಯಲ್ಲ ಎಂದು ವ್ಯೋಮ ಸಂಹಿತೆಯಲ್ಲಿ ಹೇಳಿದೆ.

* * *

ಮಹತ್ತತ್ತ್ವಾಭಿಮಾನಿ ಚತುರ್ಮುಖನು ಭಗವಂತನ ಕೃಪಾದೃಷ್ಟಿಗೆ ಗೋಚರನಾಗಿ ಮಹತ್ತತ್ತ್ವದಿಂದ ಅಹಂಕಾರತತ್ತ್ವವನ್ನು ಸೃಷ್ಟಿಮಾಡಲು ತೊಡಗಿದನೆಂದು ಮೈತ್ರೇಯ ಮಹರ್ಷಿ ವಿದುರನಿಗೆ ಹೇಳುತ್ತಾರೆ–

ಸೋಽಪ್ಯಂಶಗುಣಕಾಲಾತ್ಮಾ ಭಗವದ್‌ದೃಷ್ಟಿಗೋಚರಃ ।
ಆತ್ಮಾನಂ ವ್ಯಕರೋದಾತ್ಮಾ ವಿಶ್ವಸ್ಯಾಸ್ಯ ಸಿಸೃಕ್ಷಯಾ ॥ ೬ ॥

ಜೀವರು, ಸತ್ವಾದಿಗುಣಗಳು ಮತ್ತು ಸೃಷ್ಟಿಕಾಲ ಇವುಗಳಿಗೂ ಅಭಿಮಾನಿಯಾದ ಮಹತ್ತತತ್ವಾಭಿಮಾನಿ ಚತುರ್ಮುಖನು ಭಗವಂತನ ಕೃಪಾದೃಷ್ಟಿಗೋಚರನಾಗಿ ಸೃಷ್ಟಿ ಮಾಡುವ ಬಯಕೆಯಿಂದ ತನ್ನ ಮಹತ್ತತ್ವವನ್ನು ಅಹಂಕಾರತತ್ವವಾಗಿ ಪರಿಣಮಿಸುವಂತೆ ಮಾಡಿದ.

ಇಲ್ಲಿ 'ಸಃ ಸಿಸೃಕ್ಷಯಾ ಆತ್ಮಾನಂ ವ್ಯಕರೋತ್' ಎಂದರೆ ಸೃಷ್ಟಿಮಾಡುವ ಬಯಕೆ ಬ್ರಹ್ಮನಿಗೆ ಬರುವುದರಿಂದ ಬ್ರಹ್ಮನೆ 'ಆತ್ಮಾನಂ' ತನ್ನನ್ನು ಅಹಂಕಾರತತ್ವವಾಗಿ ಪರಿಣಮಿಸಿಕೊಂಡನೆಂದಾಗುವುದು. ಆದರೆ ಚೇತನನಾದ ಬ್ರಹ್ಮ ಅಚೇತನವಾದ

ಅಹಂಕಾರದ ರೂಪದಿಂದ ಪರಿಣಮಿಸಲಾರ. ಅದಕ್ಕೆ 'ಸಃ' ಎಂದರೆ 'ಮಹಾನ್' ಎಂದು ಕರೆಸುವ ಮಹತ್ತತ್ವವಿಟ್ಟುಕೊಳ್ಳಬೇಕು. ಅದು ತಾನೇ ಅಹಂಕಾರತತ್ವವಾಗಿ ಪರಿಣಮಿಸುತ್ತದೆ. 'ಸಿಸೃಕ್ಷಯಾ' ಎಂದರೆ ಸೃಷ್ಟಿಮಾಡುವ ಬಯಕೆಯಿಂದ ಎಂದರ್ಥವಲ್ಲ. 'ಕೂಲಂ ಪಿಪತಿಷತಿ' ಎಂದರೆ 'ನದಿಯ ದಡ ಬೀಳಲು ಬಯಸುತ್ತಿದೆ ಎಂದಲ್ಲ, ತೊಡಗುತ್ತಿದೆ' ಎನ್ನುವಂತೆ 'ಪರಿಣಮಿಸಲು ತೊಡಗಿರುವ ಅವಸ್ಥೆಯಿಂದ' ಎಂದರ್ಥ. ಜೀವಗೋಸ್ವಾಮಿವ್ಯಾಖ್ಯಾನದಲ್ಲಿ ಹೀಗೇ ಹೇಳಿದೆ.

''ಅಂಶ ಎಂದರೆ ಜೀವ, ಸೃಷ್ಟಿಗೆ ಕರ್ತೃ. ಗುಣ ಅಂದರೆ ಸತ್ವಾದಿಗುಣ, ಉಪಾದಾನ. ಕಾಲ, ಗುಣಗಳ ಕ್ಷೋಭಕ್ಕೆ ಕಾರಣ. ಈ ಮೂರಕ್ಕೆ ಆತ್ಮ, ಅಂದರೆ ಅಧೀನವಾಗಿ ಮಹತ್ತತ್ವವು ತಾನೇ ಅಹಂಕಾರವಾಗಿ ಪರಿಣಮಿಸಿತೆ''ಂದು ಶ್ರೀಧರವ್ಯಾಖ್ಯಾನ.

'ಮಹತ್ತತ್ವವು 'ಅಂಶ ಗುಣ ಕಾಲಾತ್ಮ' ಎಂದರೆ ಜೀವನಿಂದ ಗರ್ಭಿತವಾಗಿದೆ, ಗುಣಮಯವಾಗಿದೆ, ಕಾಲಾಧೀನವಾಗಿದೆ. ಇಂಥ 'ಆತ್ಮ' ಅಂದರೆ ಸ್ವರೂಪ ಉಳ್ಳದ್ದು. 'ಇದು ಆತ್ಮವಾಗಿದೆ' ಎಂದು ಶರೀರಶರೀರಿಗಳಿಗೆ ಅಭೇದವಿವಕ್ಷೆಯಿಂದ ಹೇಳಿದೆ. ಬ್ರಹ್ಮರೂಪವಾದ ಮಹತ್ತತ್ವ ಎಂದರ್ಥ. ಅದು ಅಹಂಕಾರವಾಗಿ ಪರಿಣಮಿಸಿತೆ'ಂದು ವೀರರಾಘವವ್ಯಾಖ್ಯಾನ. 'ಭಗವದ್ದೃಷ್ಟಿಗೋಚರಃ' ಎಂದರೆ ಭಗವಂತನ ಸಂಕಲ್ಪಕ್ಕೆ ಗೋಚರ ಎಂದು ಇವರೆಲ್ಲರೂ ನೀಡುವ ವಿವರಣೆ.

ವಸ್ತುತಃ 'ಭಗವಂತನ ಕೃಪಾದೃಷ್ಟಿಗೋಚರನಾದ ಬ್ರಹ್ಮ ತನ್ನನ್ನು ಅಂದರೆ ತನ್ನ ಶರೀರವಾದ ಮಹತ್ತತ್ವವನ್ನು ಪರಿಣಾಮಗೊಳಿಸಿದ. ಅವನು ರುದ್ರಾದಿಜೀವರಿಗೂ ತ್ರಿಗುಣಗಳಿಗೂ ಸೃಷ್ಟಿಕಾಲಕ್ಕೂ 'ಆತ್ಮ' ಅಂದರೆ ಅಭಿಮಾನಿ' ಎನ್ನುವುದು ಭಾಗವತದ ಅಭಿಪ್ರಾಯ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ-

ಅಂಶೋ ಜೀವಃ ।

ಕಾಲಜೀವಗುಣಾದೀನಾಮಭಿಮಾನೀ ಚತುರ್ಮುಖಃ ।
ಸರ್ವಜೀವಾಭಿಮಾನಿತ್ವಾದಂಶ ಇತ್ಯೇವ ಚೋಚ್ಯತೇ ॥

ಇತಿ ಬ್ರಾಹ್ಮೇ ॥

'ಅಂಶೋ ನಾನಾವ್ಯಪದೇಶಾತ್' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದಂತೆ ಪರಮಾತ್ಮನ ಭಿನ್ನಾಂಶರು ಜೀವರು. ಆದರಿಂದ ಈ ಶ್ಲೋಕದಲ್ಲಿ 'ಅಂಶ'ರೆಂದರೆ ರುದ್ರಾದಿಜೀವರು ವಿವಕ್ಷಿತರಾಗಿದ್ದಾರೆ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. 'ಅಂಶಗುಣಕಾಲಾತ್ಮಾ' ಎಂಬುದನ್ನು ಅಲ್ಲಿ 'ಕಾಲ ಜೀವಗುಣಾದೀನಾಮಭಿಮಾನೀ' ಎಂದು ವ್ಯಾಖ್ಯಾನಿಸಲಾಗಿದೆ. 'ಅಂಶ'ಶಬ್ದಕ್ಕೆ ಪರ್ಯಾಯವಾಗಿ 'ಜೀವ' ಎಂದಿದೆ. ಆದರೆ ಮುಂದೆ 'ಕಾಲಮಾಯಾಂಶಯೋಗೇನ' ಎಂದು ಮುಂತಾದ ಕಡೆಗಳಲ್ಲಿ

ಭಾಗವತದಲ್ಲಿ ಬರುವ 'ಅಂಶ'ಶಬ್ದಕ್ಕೆ ಅಂಶರಾದ ಸರ್ವಜೀವರ ಅಭಿಮಾನಿಯಾದ ಚತುರ್ಮುಖ ಎಂದರ್ಥ. 'ಅಭಿಮಾನಿ ವ್ಯಪದೇಶಸ್ತು....' ಎಂಬ ಬ್ರಹ್ಮಸೂತ್ರಕ್ಕೆ ಇದು ಅನುಸಾರಿಯಾಗಿದೆ.

ಹೀಗಾಗಿ 'ಸಃ' ಎಂದು ಭಾಗವತಶ್ಲೋಕದಲ್ಲಿ ಹೇಳುವುದು ಮಹತ್ತತ್ತ್ವವನ್ನಲ್ಲ, ಮಹತ್ತತ್ತ್ವಾಭಿಮಾನಿಯಾದ ಬ್ರಹ್ಮನನ್ನು ಎಂಬುದು ಬ್ರಹ್ಮಪುರಾಣದ ಅಭಿಪ್ರಾಯ.

* * *

ಆಕಾಶದಿಂದ ವಾಯುವಿನ ಉತ್ಪತ್ತಿಯನ್ನು ಮೈತ್ರೇಯರು ವಿದುರನಿಗೆ ವರ್ಣಿಸುತ್ತಾರೆ–

ಕಾಲಮಾಯಾಂಶಯೋಗೇನ ಭಗವದ್ವೀಕ್ಷಿತಂ ನಭಃ ।
ತಾಮಸಾನುಸೃತಂ ಸ್ಪರ್ಶಂ ವಿಕುರ್ವನ್ ನಿರ್ಮಮೇಽನಿಲಮ್ ॥೧೧॥

ತಾಮಸಾಹಂಕಾರ ಪರಿಣಾಮವಾದ ಆಕಾಶವು ಭಗವಂತನ ಕೃಪಾದೃಷ್ಟಿಗೆ ಗೋಚರವಾಗಿ ಪರಿಣಾಮಕಾಲ, ಚಿತ್ಪ್ರಕೃತಿ ಮತ್ತು ಹಿರಣ್ಯಗರ್ಭರ ಪರಸ್ಪರ ಮೇಲನದಿಂದ ಸ್ಪರ್ಶ ತನ್ಮಾತ್ರರೂಪವಾಗಿ ಪರಿಣಮಿಸಿ ಆ ಮೂಲಕ ವಾಯುವನ್ನು ನಿರ್ಮಿಸಿತು.

ತೇಜಸ್ಸಿನಿಂದ ಜಲದ ಉತ್ಪತ್ತಿಯನ್ನು ಮೈತ್ರೇಯರು ವಿದುರನಿಗೆ ವರ್ಣಿಸುತ್ತಾರೆ–

ಅನಿಲೇನಾನ್ವಿತಂ ಜ್ಯೋತಿರ್ವಿಕುರ್ವತ್ ಪರವೀಕ್ಷಿತಮ್ ।
ಆಧತ್ತಾಂಭೋ ರಸಮಯಂ ಕಾಲಮಾಯಾಂಶಯೋಗತಃ ॥ ೧೩ ॥

ವಾಯುವಿನ ಪರಿಣಾಮವಾದ ತೇಜಸ್ಸು ಭಗವಂತನ ಕೃಪಾದೃಷ್ಟಿಗೆ ಗೋಚರವಾಗಿ ಪರಿಣಾಮಕಾಲ, ಚಿತ್ಪ್ರಕೃತಿ ಮತ್ತು ಹಿರಣ್ಯಗರ್ಭರ ಪರಸ್ಪರ ಮೇಲನದಿಂದ ರಸತನ್ಮಾತ್ರಾಪರಿಣಾಮವಾದ ಜಲವನ್ನು ನಿರ್ಮಿಸಿತು.

ಜಲದಿಂದ ಪೃಥಿವಿಯ ಉತ್ಪತ್ತಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಜ್ಯೋತಿಷಾಽಂಭೋಽನುಸಂಸೃಷ್ಟಂ ವಿಕುರ್ವತ್ ಪರವೀಕ್ಷಿತಮ್ ।
ಮಹೀಂ ಗಂಧಗುಣಾಮಾಧಾತ್ ಕಾಲಮಾಯಾಂಶಯೋಗತಃ ॥ ೧೪ ॥

ತೇಜಸ್ಸಿನ ಪರಿಣಾಮವಾದ ಜಲವು ಭಗವಂತನ ಕೃಪಾದೃಷ್ಟಿಗೆ ಗೋಚರವಾಗಿ ಪರಿಣಾಮಕಾಲ, ಚಿತ್ಪ್ರಕೃತಿ ಮತ್ತು ಹಿರಣ್ಯಗರ್ಭರ ಪರಸ್ಪರ ಮೇಲನದಿಂದ ಗಂಧ ತನ್ಮಾತ್ರಾಪರಿಣಾಮವಾದ ಪೃಥಿವಿಯನ್ನು ನಿರ್ಮಿಸಿತು.

ಇಲ್ಲಿ 'ಮೂರು ಶ್ಲೋಕಗಳಲ್ಲಿ 'ಕಾಲ ಮಾಯಾ ಅಂಶ'ಗಳೆಂದರೇನು? ಹಿಂದೆ ಆರನೇ ಶ್ಲೋಕದಲ್ಲಿ ಹೇಳಿದ 'ಅಂಶಗುಣಕಾಲ'ಗಳೇ ಇಲ್ಲಿಯೂ ಉಕ್ತವಾಗಿವೆ. ಕ್ರಮಮಾತ್ರವೆ ಬೇರೆ ಎಂದು ಬೇರೆ ಎಲ್ಲ ವ್ಯಾಖ್ಯಾನಕಾರರು ಹೇಳುತ್ತಾರೆ. ಮಾಯಾ ಎಂದರೆ ಪ್ರಕೃತಿ. ಪ್ರಕೃತಿಯ ಗುಣಗಳನ್ನು ಹಿಂದೆ ಹೇಳಿದ್ದರಿಂದ ಇಲ್ಲಿಯೂ ಗುಣಗಳನ್ನೇ ಇಟ್ಟುಕೊಳ್ಳಬೇಕು ಎಂದು ವೀರರಾಘವವ್ಯಾಖ್ಯಾನದಲ್ಲಿ ವಿವರಣೆ ಇದೆ. ವಸ್ತುತಃ ಕಾಲ ಹಿಂದೆ ಹೇಳಿದ ಪರಿಣಾಮಕಾಲವೆ ಆಗಿದ್ದರೂ ಮಾಯೆ ಮತ್ತು ಅಂಶಗಳೆಂದು ಚಿತ್ಪ್ರಕೃತಿ ಮತ್ತು ಹಿರಣ್ಯಗರ್ಭರು ವಿವಕ್ಷಿತರಾಗಿದ್ದಾರೆ, ಜಡಪ್ರಕೃತಿ ಮತ್ತು ಜೀವರಲ್ಲ ಎನ್ನುತ್ತಾರೆ ಶ್ರೀಮದಾಚಾರ್ಯರು–

ಕಾಲಮಾಯಾಂಶಯೋಗತಃ । ಕಾಲಾತ್ ಪರಿಣಾಮಾತ್,

ಪ್ರಕೃತೇಃ, ಹಿರಣ್ಯಗರ್ಭಾಚ್ಚ ।

ಕಾಲಮಯಾಂಶಯೋಗತಃ ಎಂದರೆ ಪರಿಣಾಮಕಾಲದಿಂದ, ಚಿತ್ಪ್ರಕೃತಿಯಿಂದ ಮತ್ತು ಹಿರಣ್ಯಗರ್ಭನಿಂದ ಎಂದರ್ಥ. 'ಯೋಗತಃ' ಎಂದರೆ ಇವರು ಮೂವರು ಪರಸ್ಪರ ಸಹಕಾರಿಗಳಾಗಿ ಸೇರುವುದರಿಂದ ಎಂದರ್ಥ.

ಈ ಮೂರು ಶ್ಲೋಕಗಳ ಪೈಕಿ ಮೊದಲನೇ ಶ್ಲೋಕದಲ್ಲಿ 'ಕಾಲ ಮಾಯಾಂಶಯೋಗೇನ' ಎಂದಿದೆ. ಅದನ್ನು ಬಿಟ್ಟು ಮುಂದಿನ ಎರಡು ಶ್ಲೋಕಗಳಲ್ಲಿ ಬಂದ 'ಕಾಲಮಾಯಾಂಶಯೋಗತಃ' ಎಂಬುದನ್ನು ಪ್ರತೀಕ ವಾಗಿಟ್ಟುಕೊಂಡು ವ್ಯಾಖ್ಯಾನಿಸಿದ್ದು ಈ ವ್ಯಾಖ್ಯಾನ ಮೊದಲಿನ ಶ್ಲೋಕಕ್ಕೆ ಸಂಬಂಧಿಸಿದ್ದಲ್ಲ ಎನ್ನುವ ಅಭಿಪ್ರಾಯದಿಂದಲ್ಲ. ಮೊದಲಿನ ಶ್ಲೋಕಕ್ಕೆ ಮಾತ್ರವಲ್ಲ ಮುಂದಿನ ಎರಡು ಶ್ಲೋಕಗಳಿಗೂ ಇದು ಸಂಬಂಧಿಸಿದೆ ಎಂಬ ಅಭಿಪ್ರಾಯದಿಂದ.

* * *

ಈ ಮಹತ್ತತ್ವ ಅಹಂಕಾರತತ್ವ ಪಂಚತನ್ಮಾತ್ರ ಪಂಚಭೂತಗಳು ಕೇವಲ ಜಡವಲ್ಲ, ಅವುಗಳೊಂದಿಗೆ ಅವುಗಳ ಅಭಿಮಾನಿದೇವತೆಗಳೂ ಹುಟ್ಟಿದರು. ಅವರೆಲ್ಲ ಸೇರಿ ಬ್ರಹ್ಮಾಂಡವನ್ನು ಸೃಷ್ಟಿಸಲು ಬಯಸಿ ಶಕ್ತರಾಗದೆ ಭಗವಂತನನ್ನು ಸ್ತುತಿಸಿದರು ಎನ್ನುತ್ತಾರೆ ಮೈತ್ರೇಯರು ವಿದುರನಿಗೆ–

ಏತೇ ದೇವಾಃ ಕಲಾ ವಿಷ್ಣೋಃ ಕಾಲಮಾಯಾಂಶಲಿಂಗಿನಃ ।
ನಾನಾತ್ವಾತ್ ಸ್ವಕ್ರಿಯಾನೀಶಾಃ ಪ್ರೋಚುಃ ಪ್ರಾಂಜಲಯೋ ವಿಭುಮ್ ॥
॥ ೧೬ ॥

ಈ ತತ್ತ್ವಾಭಿಮಾನಿದೇವತೆಗಳು ಭಗವಂತನ ಭಿನ್ನಾಂಶರು. ಕಾಲಾಭಿಮಾನಿಯಾದ ಬ್ರಹ್ಮನ ಒಂದು ರೂಪ, ಪ್ರಕೃತ್ಯಭಿಮಾನಿನಿ ಮಹಾಲಕ್ಷ್ಮಿ ಮತ್ತು ಜೀವಾಭಿಮಾನಿಯಾದ ಬ್ರಹ್ಮನ ಇನ್ನೊಂದು ರೂಪ ಹೀಗೆ ಈ ಮೂವರು ಸೇರಿ ತತ್ತ್ವಾಭಿಮಾನಿದೇವತೆಗಳ ಶರೀರಗಳನ್ನು ಸೃಜಿಸಿಕೊಟ್ಟರು. ಆದರೆ ಆ ದೇವತೆಗಳು ಒಬ್ಬೊಬ್ಬರು ಪ್ರತ್ಯೇಕವಾಗಿ ಬ್ರಹ್ಮಾಂಡ ಸೃಷ್ಟಿಮಾಡಲು ಅಸಮರ್ಥರಾಗಿ ಭಗವಂತನಿಗೆ ಕೈ ಮುಗಿದು ಬೇಡಿಕೊಂಡರು.

ಇಲ್ಲಿ 'ಕಾಲಮಾಯಾಂಶಲಿಂಗಿನಃ' ಎಂದರೆ ಕಾಲಲಿಂಗ, ಮಾಯಾಲಿಂಗ ಅಂಶಲಿಂಗಗಳಿಂದ ಕೂಡಿದ ದೇವತೆಗಳೆಂದು ಶ್ರೀಧರೀಯವ್ಯಾಖ್ಯಾನ. ಕಾಲದ ಚಿಹ್ನೆ ಶರೀರದಲ್ಲಿ ಉಂಟಾಗುವ ವಿಕಾರಗಳು. ಮಾಯೆಯ ಚಿಹ್ನೆ ತ್ರಿಗುಣಗಳಿಂದಾಗುವ ಕ್ಷೋಭ. ಅಂಶ ಎಂದರೆ ಜೀವನ ಚಿಹ್ನೆ ಚೈತನ್ಯ ಎಂದು ಅವರ ವಿವರಣೆ. ವೀರರಾಘವವ್ಯಾಖ್ಯಾನದಲ್ಲಿ 'ಕಾಲಮಾಯಾಂಶಲಿಂಗಿನಃ' ಎಂಬುದು 'ವಿಷ್ಣೋಃ' ಎಂಬುದಕ್ಕೆ ವಿಶೇಷಣ. ಕಾಲ ಮಾಯೆ ಮತ್ತು ಅಂಶಗಳು ವಿಷ್ಣುವಿನ ಶರೀರಗಳು ಎಂದರ್ಥ. ಈ ಎರಡೂ ವ್ಯಾಖ್ಯಾನಗಳು ಅಸಂಗತ. ದೇವತೆಗಳಿಗೆ ಕಾಲಪ್ರಯುಕ್ತವಾಗಿ ದೈಹಿಕವಿಕಾರಗಳು ಜರೆ ಮರಣಗಳಿಲ್ಲ. 'ಅಮರಾ ನಿರ್ಜರಾ ದೇವಾಃ' ಆದರಿಂದ ಕಾಲಲಿಂಗಿಗಳೆನ್ನುವಂತಿಲ್ಲ. ತ್ರಿಗುಣಗಳಿಂದ ಕ್ಷೋಭವೂ ನಮ್ಮಂತೆ ಅವರಿಗೆ ಇಲ್ಲ. ಜೀವನ್ಮುಕ್ತರಾಗಿದ್ದು ಪ್ರಾರಬ್ಧವಶದಿಂದ ಕಾಮಕ್ರೋಧಾದಿಗಳಿಗೆ ಆಗಾಗ ವಶವಾಗಬಹುದು. ಅಂಶ ಚಿಹ್ನೆಯಾದ ಚೈತನ್ಯ ಅಂಶರೇ ಆದ ಅವರಲ್ಲಿ ಇದೆ ಎಂದು ಬೇರೆ ಹೇಳಬೇಕಾಗಿಲ್ಲ ಭಗವಂತನಿಗೆ ಪ್ರಾಕೃತ ಶರೀರವೆ ಇಲ್ಲದಿರುವುದರಿಂದ ಕಾಲ ಮಾಯೆ ಅಂಶಗಳು ಶರೀರಗಳೆನ್ನುವುದು ವಿರುದ್ಧ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ಕಾಲಮಾಯಾಂಶಲಿಂಗಿನಃ ತನ್ನಿಮಿತ್ತಶರೀರಾಃ । ಹಿರಣ್ಯಗರ್ಭಸ್ಯೈವ ಕಾಲಾಭಿಮಾನಿ ಜೀವಾಭಿಮಾನಿ ಚ ದ್ವಿವಿಧಂ ರೂಪಮ್ ।

ಕಾಲಜೀವಾಭಿಮಾನೇನ ರೂಪದ್ವಂದ್ವೀ ಚತುರ್ಮುಖಃ ।

ಇತಿ ಪಾದ್ಮೇ ।

'ಕಾಲಮಾಯಾಂಶಲಿಂಗಿನಃ' ಎಂದರೆ ಕಾಲ, ಮಾಯಾ ಮತ್ತು ಅಂಶಗಳಿಂದ ನಿರ್ಮಿತವಾದ ಶರೀರ ಉಳ್ಳ ತತ್ತ್ವಾಭಿಮಾನಿದೇವತೆಗಳೆಂದರ್ಥ. ಹಿರಣ್ಯಗರ್ಭನ ಕಾಲಾಭಿಮಾನಿರೂಪ ಮತ್ತು ಜೀವಾಭಿಮಾನಿರೂಪ ಎಂದು ಎರಡು ಬಗೆಯ ರೂಪಗಳೇ ಇಲ್ಲಿ ದೇವತಾಶರೀರಕರ್ತೃಗಳೆಂದು ವಿವಕ್ಷಿತವಾಗಿವೆ. ಹಿರಣ್ಯಗರ್ಭನಿಗೆ ಎರಡು ಬಗೆಯ ರೂಪಗಳಿವೆ ಎನ್ನಲು ಪದ್ಮಪುರಾಣವಚನವು ಆಧಾರವಾಗಿದೆ.

'ಕಾಲಗಳಿಗೂ ಜೀವರಿಗೂ ಅಭಿಮಾನಿಯಾದುದರಿಂದ ಎರಡು ಬಗೆಯ ರೂಪಗಳುಳ್ಳವನು ಚತುರ್ಮುಖ' ಎಂದು ಅಲ್ಲಿ ಉಕ್ತವಾಗಿದೆ.

* * *

'ಶ್ರೀಹರಿ, ನಿನ್ನ ಪಾದಕಮಲವನ್ನು ಆಶ್ರಯಿಸದೆ ಯಾರಿಗೂ ಸುಖವಿಲ್ಲ' ಎನ್ನುತ್ತ ತತ್ತ್ವಾಭಿಮಾನಿದೇವತೆಗಳು ಬ್ರಹ್ಮಾಂಡಸೃಷ್ಟಿಗೆ ಮುನ್ನ ಸ್ತುತಿಸುತ್ತಾರೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಋತೇ ಯದಸ್ಮಿನ್ ಭವ ಈಶ ಜೀವಾ-
ಸ್ತಾಪತ್ರಯೇಣಾಭಿಹತಾ ನ ಶರ್ಮ ।
ಆತ್ಮಂಲ್ಲಭಂತೇ ಭಗವಂಸ್ತವಾಂಘ್ರಿ-
ಚ್ಛಾಯಾಂಶವಿದ್ಯಾಮತ ಆಶ್ರಯೇಮ ॥ ೧೮ ॥

ಈ ಸಂಸಾರದಲ್ಲಿ ತಾಪತ್ರಯದಿಂದ ಬೆಂದ ಜೀವರು ನಿನ್ನ ಪಾದಕಮಲವನ್ನು ಸೇವಿಸದೆ ತಮ್ಮಲ್ಲಿ ಸುಖವನ್ನು ಹೊಂದಲಾರರು. ಅದರಿಂದ ನಾವು ನಮ್ಮ ಯೋಗ್ಯತಾನುಸಾರ ಸ್ವಲ್ಪವಾದರೂ ಬ್ರಹ್ಮವಿದ್ಯೆಯನ್ನು ಸೇವಿಸುವೆವು.

ಇಲ್ಲಿ 'ಅಂಘ್ರಿಚ್ಛಾಯಾಂ ಸವಿದ್ಯಾಂ' ಎಂದು ಪಾಠವಿಟ್ಟುಕೊಂಡು ಅಂಘ್ರಿಚ್ಛಾಯೆ ಬೇರೆ, ವಿದ್ಯೆ ಬೇರೆ ಎಂಬ ಅಭಿಪ್ರಾಯದಿಂದ ನಾನಾ ರೀತಿಯ ವ್ಯಾಖ್ಯಾನಗಳನ್ನು ಬೇರೆ ವ್ಯಾಖ್ಯಾನಕಾರರು ನೀಡಿದ್ದಾರೆ. ಅಂಘ್ರಿಛಾಯೆಯನ್ನು ಸೇವಿಸಿ ಅದರಿಂದ ವಿದ್ಯೆಯನ್ನು ಅಂದರೆ ಬ್ರಹ್ಮಜ್ಞಾನವನ್ನು ಪಡೆದು ಅಜ್ಞಾನಪ್ರಯುಕ್ತವಾದ ತಾಪತ್ರಯವನ್ನು ಕಳೆದುಕೊಳ್ಳುತ್ತೇವೆ ಎಂದು ಶ್ರೀಧರ ವ್ಯಾಖ್ಯಾನ. ವಿದ್ಯೆಯನ್ನು ಸಂಪಾದಿಸಿ ಅದರಿಂದ ಅಂಘ್ರಿಛಾಯೆಯನ್ನು ಅಂದರೆ ಮೋಕ್ಷವನ್ನು ಪಡೆಯುತ್ತೇವೆ ಎಂದು ವೀರರಾಘವವ್ಯಾಖ್ಯಾನ.

[೧]ಬಿಸಿಲಿಗೆ ಛತ್ರಹಿಡಿದಾಗ ನೆರಳು ಛತ್ರಿಯ ಅಡಿಯಲ್ಲಿಯೆ ಬೀಳದೆ ಕೆಲವೊಮ್ಮೆ ದೂರದಲ್ಲಿಯೂ ಬೀಳುತ್ತದೆ. ಅದರಿಂದ ಭಗವದಿಚ್ಛಾನುಸಾರವಾಗಿ ದೂರದಲ್ಲಿ

೧. ವಯಂ ಪ್ರಥಮತ ಏವ ಸಂಸಾರೇ ಪ್ರವೇಶಮಕೃತ್ವೈವ ತವಾಂಘ್ರೇಶ್ಛಾಯಾಮೇವಾಶ್ರಯೇಮ । ಛಾಯಯಾ ಬಹಿಸ್ತಾಪೋ ಗಚ್ಛತಿ, ಅಂತಸ್ತಾಪ ನಿವಾರಣಾರ್ಥಮಾಹ ಸವಿದ್ಯಾಮಿತಿ । ಯಥಾ ಸಜಲಂ ಛತ್ರಂ ಭವತಿ । ಛಾಯಾ ಪ್ರಾಧಾನ್ಯಂ ಭಗವದಭಿಪ್ರಾಯಪ್ರಾಧಾನ್ಯಾರ್ಥಂ । ಸೂರ್ಯಾದಿವಶಾತ್ ಕದಾಚಿಚ್ಛಾಯಾ ಚರಣಾರವಿಂದದೇಶಾದನ್ಯತ್ರ ಪತತಿ ತದಾಽನ್ಯತ್ರ

ನಿಂತು ಭಗವಂತನ ಗುಣಗಳನ್ನು ನೆನೆಯುವುದು ಭಕ್ತಿಮಾರ್ಗ. ಬಳಿಗೇ ಬಂದು ಪಾದಸೇವೆ ಮಾಡುವುದು ಪ್ರಪತ್ತಿಮಾರ್ಗ. ಈ ಎರಡೂ ಮಾರ್ಗ ಶಾಸ್ತ್ರಸಮ್ಮತವೆನ್ನಲು ಅಂಘ್ರಿಯ ಛಾಯೆಯನ್ನು ಭಾಗವತ ಹೇಳುತ್ತಿದೆ ಎಂದು ವಲ್ಲಭಾಚಾರ್ಯರ ವ್ಯಾಖ್ಯಾನ. ಆದರೆ ಇದರ ಹಿಂದಿನ ಪದ್ಯದಲ್ಲಿಯೆ

ನಮಾಮಿ ತೇ ದೇವ ಪದಾರವಿಂದಂ
ಪ್ರಪನ್ನತಾಪೋಪಶಮಾತಪತ್ರಮ್ ।

ಎಂದು ಭಗವಂತನ ಪಾದವನ್ನು ಛತ್ರಕ್ಕೆ ಹೋಲಿಸಿ ವರ್ಣಿಸಿಯಾಗಿದೆ. ತಿರುಗಿ ಇಲ್ಲಿ ಹಾಗೇ ವರ್ಣಿಸುವುದು ಪುನರುಕ್ತಿಯಾಗುವುದು. ಮತ್ತು ಪಾದಸೇವನವು ಭಕ್ತಿಯ ಒಂಬತ್ತು ಲಕ್ಷಣಗಳಲ್ಲಿ ಒಂದಾಗಿರುವುದು ಮುಂದೆ ಸಪ್ತಮಸ್ಕಂಧದಲ್ಲಿ ಬರುತ್ತದೆ. ಅಂಥಹ ಪಾದಸೇವನವನ್ನು ಭಕ್ತಿಗಿಂತ ವಿಲಕ್ಷಣವಾದ ಪ್ರಪತ್ತಿಮಾರ್ಗ ಎಂದು ಗ್ರಹಿಸುವುದು ಭಾಗವತಕ್ಕೆ ಸಮ್ಮತವಾಗಲಾರದು.

ಅದರಿಂದ ಇಲ್ಲಿ ಹೇಳಿದ 'ಅಂಘ್ರಿಚ್ಛಾಯೆ' ಹಿಂದೆ ಹೇಳಿದ ಪಾದಾರವಿಂದವೆಂಬ ಆತಪತ್ರದ ಛಾಯೆಯಲ್ಲ. 'ಭಗವದ್ಭಕ್ತರಲ್ಲಿ ಇರುವ ಬ್ರಹ್ಮವಿದ್ಯೆ ಎಂದರ್ಥ. ಇದಕ್ಕೆ ಪ್ರಮಾಣ ಬ್ರಹ್ಮಪುರಾಣವಚನ. ಹಾಗಾದರೆ ಅಂಘ್ರಿಚ್ಛಾಯೆಯೆನಿಸಿದ ಬ್ರಹ್ಮವಿದ್ಯೆ ತಿರುಗಿ 'ಸವಿದ್ಯಾಂ' ವಿದ್ಯೆಯಿಂದ ಕೂಡಿರುವುದು ಹೇಗೆ ಎಂದರೆ 'ಸವಿದ್ಯಾಂ' ಎಂಬ ಪಾಠವೇ ತಪ್ಪು 'ಅಂಘ್ರಿಚ್ಛಾಯಾಂಶವಿದ್ಯಾಂ' ಎಂದು ಪಾಠ. ಅದರಲ್ಲಿ ಯಾವ ಅನುಪಪತ್ತಿಯೂ ಇಲ್ಲ.

ಬ್ರಹ್ಮವಿದ್ಯಾ ಹರೇಶ್ಛಾಯಾ ತದಂಶೋ ಹಿ ಸುರೇಷ್ವಪಿ ।
ಸರ್ವವಿದ್ಯಾಃ ಶ್ರಿಯಃ ಪ್ರೋಕ್ತಾಃ ಪ್ರಧಾನಾಂಶಶ್ಚತುರ್ಮುಖೇ ॥
ಇತಿ ಬ್ರಾಹ್ಮೇ ॥

'ಹರೇಃ' ಎಂದರೆ ಹರಿಯಲ್ಲಿರುವ ಸ್ವರೂಪಭೂತವಾದ ತನ್ನ ಬಗೆಗಿನ ಜ್ಞಾನಕ್ಕೆ, ಛಾಯೆಯಂತೆ ಸಾಕ್ಷಾತ್ ಪ್ರತಿಬಿಂಬಭೂತವಾದ ಬ್ರಹ್ಮವಿದ್ಯೆಯಲ್ಲಿ ಕೆಲವೇ ಅಂಶಗಳು

ಸ್ಥಿತ್ವೈರೇವಾಶ್ರಯಃ ಕರ್ತವ್ಯ ಇತಿ । ಅಂಘ್ರ್ಯಧಸ್ತಾತ್ತು ಘರ್ಮ ಏವ ಭವತಿ । ನಿಕಟೇ ನ ಸ್ಥಾತವ್ಯಮಿತಿ ಭಗವದಿಚ್ಛಾಯಾಂ ನಿಕಟೇ ನ ಸ್ಥಾತವ್ಯಮಿತಿ ಭಾವಃ । ಭಗವದ್ಗುಣಾನುಸಂಧಾನೇನ ವಾ ಭಗವತ್ಪರಿಚರ್ಯಯಾ ವಾ ಕ್ವಚಿತ್ ಸ್ಥಾತವ್ಯಮಿತ್ಯರ್ಥಃ । ಏವಂ ಸಾಕ್ಷಾದ್ ಭಗವತ್ಸಂಬಂಧೇ ಭಕ್ತಿಪ್ರಪತ್ತೀ ನಿರೂಪಿತೇ
– ವಲ್ಲಭಃ ।

ದೇವತೆಗಳಲ್ಲಿ ಇರುತ್ತವೆ. ಋಷಿಗಳು ಮುಂತಾದ ಸಾತ್ವಿಕಜೀವರಲ್ಲಿಯೂ ಇರುತ್ತವೆ. ಅವರವರ ಯೋಗ್ಯತಾನುಸಾರವಾಗಿ. ಈ ದೇವಾದಿಗಳ ಎಲ್ಲ ಬ್ರಹ್ಮವಿದ್ಯೆಗೂ ಬಿಂಬರೂಪವಾದ ವಿದ್ಯೆ ಇರುವುದು ಮಹಾಲಕ್ಷ್ಮೀದೇವಿಯಲ್ಲಿಯೆ ಎಂದು ಆಗಮಗಳಲ್ಲಿ ಉಕ್ತವಾಗಿದೆ. ಪ್ರತಿಬಿಂಬರೂಪವಾದ ವಿದ್ಯೆ ಸರಸ್ವತೀ ರುದ್ರಾದಿಗಳೆಲ್ಲರಿಗಿಂತ ಹೆಚ್ಚಾಗಿ ಚತುರ್ಮುಖನಲ್ಲಿ ಇದೆ' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಅದರಿಂದ ಶ್ರೀಹರಿ, ನಿನ್ನನ್ನು ಪೂರ್ತಿ ತಿಳಿದವನು ನೀನೊಬ್ಬನೆ. ನಾವೆಲ್ಲ ದೇವತೆಗಳು ನಮ್ಮ ಯೋಗ್ಯತಾನುಸಾರ ಸ್ವಲ್ಪವೆ ತಿಳಿಯ ಬಲ್ಲೆವು. ಅಂಥಹ ನಿನ್ನ ತತ್ವಜ್ಞಾನವನ್ನು ನಮಗೆ ನೀಡಿ ಆ ಮೂಲಕ ಮೋಕ್ಷ ನೀಡು ಎಂದು ದೇವತೆಗಳು ಬೇಡಿಕೊಳ್ಳುತ್ತಿದ್ದಾರೆ. 'ಅಂಘ್ರಿ' ಎಂದರೆ ಇಲ್ಲಿ ಹರಿಯ ಸ್ವರೂಪಭೂತವಾದ ಜ್ಞಾನ ವಿವಕ್ಷಿತ. ಅದರ ಛಾಯೆ ಎಂದರೆ ಲಕ್ಷ್ಮಿಯಲ್ಲಿರುವ ಬ್ರಹ್ಮಜ್ಞಾನ. ಅದರ ಭಿನ್ನಾಂಶರೂಪವಾದ ಬ್ರಹ್ಮಜ್ಞಾನವೇ ಬ್ರಹ್ಮಾದಿಗಳಲ್ಲಿ ಇರುವ ಜ್ಞಾನ ಎಂದರ್ಥ.

ಇಲ್ಲಿ 'ಸರ್ವವಿದ್ಯಾಶ್ರಯಃ ಪ್ರೋಕ್ತಃ' ಎಂದು ಇನ್ನೊಂದು ಪಾಠವಿದೆ. ವಿಜಯಧ್ವಜೀಯದಲ್ಲಿ ಇದು ಕಾಣುತ್ತದೆ. ಛಲಾರಿಟಿಪ್ಪಣಿಯಲ್ಲಿ ಈ ಪಾಠವನ್ನೇ ಆಧರಿಸಿ ವ್ಯಾಖ್ಯಾನ ಮಾಡಿದ್ದಾರೆ-

'ಭಾಗವತದ ಅಂಘ್ರಿಚ್ಛಾಯೆ, ತಾತ್ಪರ್ಯದ ಹರಿಚ್ಛಾಯೆ ಎರಡಕ್ಕೂ ಹರಿಮಾಹಾತ್ಮ್ಯಪ್ರತಿಪಾದಕವಾದ ವಿದ್ಯೆ ಎಂದರ್ಥ. ಬಿಸಿಲಿನಲ್ಲಿ ಛಾಯೆ ನೆರಳು ತಂಪು ಕೊಡುವಂತೆ ಸಂಸಾರದ ಬೇಗೆಯಲ್ಲಿ ಬ್ರಹ್ಮವಿದ್ಯೆಯೇ ತಂಪು ಕೊಡಬೇಕು. ಅದರಿಂದ ಛಾಯೆ ಎಂದರೆ ವಿದ್ಯೆ. ಅದು ಹರಿಯಲ್ಲಿ ಇದೆ. ಹರಿವಿಷಯಕವಾಗಿದೆ. ಅದರಿಂದ ಹರಿಯ ಛಾಯೆ ಎನಿಸುತ್ತದೆ. ಆ ಹರಿಯೆ 'ಸರ್ವವಿದ್ಯಾಶ್ರಯಃ ಪ್ರೋಕ್ತಃ ' ಸರ್ವವಿದ್ಯೆಗಳಿಗೂ ಆಶ್ರಯನಾಗಿದ್ದಾನೆ. ಅಂದರೆ, ಲಕ್ಷ್ಮೀ ಬ್ರಹ್ಮಾದಿಳಲ್ಲಿರುವ ಎಲ್ಲ ಬ್ರಹ್ಮವಿದ್ಯೆಗಳಿಗೂ ಅವನೇ ಆಶ್ರಯ. ಅದರ ಅಂಶಮಾತ್ರ ಬ್ರಹ್ಮಾದಿದೇವತೆಗಳಲ್ಲಿ ಇದೆ. ಅವರಲ್ಲಿಯೂ ಎಲ್ಲರಿಗಿಂತ ಅಧಿಕಾಂಶವಿರುವುದು ಚತುರ್ಮುಖನಲ್ಲಿ.' 'ಪ್ರಧಾನಾಂಶಶ್ಚತುರ್ಮುಖಃ' ಎಂದು ಇಲ್ಲಿ ಪಾಠ. ವಿಜಯಧ್ವಜೀಯದಲ್ಲಿಯೂ ಹಾಗೇ ಕಾಣುತ್ತದೆ. ಈ ಪಾಠದಲ್ಲಿ 'ಪ್ರಧಾನಾಂಶಃ' ಎಂದು ಬಹುವ್ರೀಹಿ. ಅರ್ಥದಲ್ಲಿ ವ್ಯತ್ಯಾಸವಿಲ್ಲ.

* * *

ತತ್ವಜ್ಞಾನಪ್ರಾಪ್ತಿಗೆ ಶ್ರವಣಾದಿಗಳೇ ಸಾಧನವೆಂದು ತತ್ವಾಭಿಮಾನಿದೇವತೆಗಳು ಬ್ರಹ್ಮಾಂಡಸೃಷ್ಟಿಗೆ ಮುನ್ನ ಭಗವಂತನನ್ನು ಸ್ತುತಿಸುತ್ತಾರೆ. ಇದನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಮಾರ್ಗಂತಿ ಯತ್ತೇ ಮುಖಪದ್ಮನೀಡೈ-
ಶ್ಛಂದಃಸುಪರ್ಣೈರ್ಋಷಯೋ ವಿವಿಕ್ತೇ ।
ಯಚ್ಛಾಘಮಷೋರ್ ದ್ಯುಸರಿದ್ಧರಾಯಾಃ
ಪರಂ ಪದಂ ತೀರ್ಥಪದಃ ಪ್ರಪನ್ನಾಃ ॥ ೧೯ ॥

ಮುನಿಗಳು ಏಕಾಂತದಲ್ಲಿ ಕುಳಿತು ನಿನ್ನ ಮುಖಕಮಲಗಳೆಂಬ ಗೂಡುಗಳಿಂದ ಹೊರ ಬಂದ ವೇದಮಂತ್ರಗಳೆಂಬ ಪಕ್ಷಿಗಳಿಂದ ನಿನ್ನ ಪಾದವನ್ನೇ ಅರಸುತ್ತಿದ್ದಾರೆ. ಪವಿತ್ರಪಾದನಾದ ನಿನ್ನಪಾದ ಭಕ್ತರ ಪಾಪಗಳನ್ನುಕಳೆಯುತ್ತದೆ ಎಂದೂ ಅದು ಗಂಗೆಗೂ ಧರೆಗೂ ಆಶ್ರಯಸ್ಥಾನವೆಂದೂ ಧ್ಯಾನಿಸುತ್ತಾರೆ.

ಇಲ್ಲಿ 'ಯಸ್ಯಾಘಮಷೋರ್ದಸರಿದ್ವರಾಯಾಃ' ಎಂಬ ಪಾಠವಿಟ್ಟುಕೊಂಡು 'ಪಾಪಗಳನ್ನು ಕಳೆವ ಗಂಗೆಗೆ ಆಶ್ರಯಸ್ಥಾನ' ಎಂದು ಬೇರೆ [1]ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ. ವೇದಾರ್ಥಶ್ರವಣ ಹೇಗೆ ಭಗವತ್ಪ್ರಾಪ್ತಿಗೆ ಸಾಧನವೋ ಹಾಗೆ ಗಂಗಾಸ್ನಾನವೂ ಭಗವತ್ಪ್ರಾಪ್ತಿಗೆ ಇನ್ನೊಂದು ಸಾಧನ, ಪಾಪನಾಶವು ಅದರ ಆನುಷಂಗಿಕ ಫಲಮಾತ್ರ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಸರಿಯಲ್ಲ, ಗಂಗಾಸ್ನಾನಕ್ಕೆ ಪಾಪನಾಶವೆ ಮುಖ್ಯಫಲ. ಅದರಿಂದ ಅಂತಃಕರಣಶುದ್ಧಿಯಾದಾಗ ವೇದಶಾಸ್ತ್ರಶ್ರವಣದಿಂದ ಭಗವತ್ಪ್ರಾಪ್ತಿ ಎನ್ನಬೇಕು. ವಲ್ಲಭಾಚಾರ್ಯರು ಇನ್ನೂ ಮುಂದು ವರಿದು, ವೇದವು ಭಗವಂತನ ಪಾದವನ್ನು ತಿಳಿಸೀತಷ್ಟೆ. ಗಂಗೆ ನಮ್ಮನ್ನು

೧. ಕೈರ್ಮಾರ್ಗಂತಿ? ಛಂದಃ ಸುಪರ್ಣೈಃ ವೇದಪಕ್ಷಿಭಿಃ । ತ್ವನ್ಮುಖಾದುದ್ಗತಾನಾಂ ಪುನಸ್ತ್ವಯ್ಯೇವ ಪರ್ಯವಸಿತಾನಾಂ ವೇದಾನಾಂ ತಾತ್ಪರ್ಯಮವಧಾರ್ಯ ತೇನೈವ ತ್ವಾಂ ಭಜಂತಸ್ತ್ವಾಂ ಪ್ರಾಪ್ನುವಂತೀತ್ಯೇಕಂ ಸೋಪಾನಮುಕ್ತ್ವಾ ದ್ವಿತೀಯಂ ಸೋಪಾನಮಾಹುಃ । ಅತೋ ಗಂಗಾಮನುಸೇವಮಾನಾ ಅಪಿ ತದುದ್ಗಮಸ್ಥಾನಂ ತ್ವತ್ಪದಂ ಪ್ರಾಪ್ನುವಂತೀತ್ಯರ್ಥಃ । —ವಿಶ್ವನಾಥಃ

ವೇದಾ ಹಿ ಗರುಡಪ್ರಾಯಾಃ ಪಕ್ಷಿಣಃ । ತೇಷಾಂ ಮೂಲಸ್ಥಾನಂ ಭಗವತೋ ಮುಖಪದ್ಮಮೇವ, ಸುಪರ್ಣಪದೇನ ಚ ಗರುಡರೂಪತಯಾ ಭಗವತ್ಸಮಾರೂಢಾ ಏವ ತೇ ಲೋಕೇ ಪ್ರಚರಂತಿ । ಯಜ್ಞರೂಪಂ ಭಗವಂತಂ ಲೋಕೇ ಬೋಧಯಂತೀತಿ । ಏವಂಪ್ರಕಾರೇಣ ಗಂಗಾತೀರೇ ಸ್ಥಿತೌ ಭಗವಾನ್ ಸ್ವಪದಂ ಪ್ರಾಪಯಿಷ್ಯತೀತಿ । ಗಂಗಾತೀರೇ ತೀರೇ ಗಮನೇ ಪದಪರ್ಯಂತಂ ಗಚ್ಛತಿ । ವೇದಾನಾಂ ಚ ಪುನಸ್ತಾತ್ಪರ್ಯೇ ವಿಚಾರ್ಯಮಾಣೇ ಭಗವತ್ಪದಂ ಜಾನಂತಿ । ಜಲೇನ ಪಾಪನಾಶನಮಾನುಷಂಗಿಕಫಲತ್ವೇನೋಕ್ತಂ । ಚರಣಾದನ್ಯತ್ರ ಗಚ್ಛಂತ್ಯಪಿ ಗಂಗಾ ವೇದವತ್ ಪುನಸ್ತತ್ರೈವ ಪ್ರವೇಕ್ಷ್ಯತೀತಿ ವೇದಾನಾಂ ದೃಷ್ಟಾಂತಾರ್ಥೇ ನಿರೂಪಿತಮ್ । —ವಲ್ಲಭಃ

ಪಾದಕ್ಕೇ ಕೊಂಡೊಯ್ಯುತ್ತದೆ ಎನ್ನುತ್ತಾರೆ. ಇದು 'ನಾನ್ಯಃ ಪಂಥಾ' ಎಂದು ಘೋಷಿಸುವ ವೇದಕ್ಕೇ ವಿರುದ್ಧ.

ವಸ್ತುತಃ ಈ ಪಾಠವೇ ತಪ್ಪು. 'ಯಚ್ಛಾಘಮರ್ಷೋ ದ್ಯುಸರಿದ್ಧರಾಯಾಃ' ಎಂದೇ ಪಾಠ. ಈ ಪಾಠದಲ್ಲಿ ಗಂಗೆಗೂ ಧರೆಗೂ ಪರಮಾತ್ಮನ ಪಾದ ಆಶ್ರಯ ಎನ್ನುವುದರಿಂದ ವೇದಶ್ರವಣಕ್ಕೆ ಸಮಾನವಾಗಿ ಗಂಗಾಸ್ನಾನವೂ ಭಗವತ್ಪ್ರಾಪ್ತಿಗೆ ಸಾಧನವೆಂದು ಅಪಾರ್ಥಮಾಡಲು ಅವಕಾಶವಿಲ್ಲ. 'ದ್ಯುಸರಿ ದ್ಧರಾಯಾಃ' ಎಂದು ಏಕವಚನವಿರುವುದರಿಂದ ಷಷ್ಠೀಸಮಾಸ ವಿರಬಹುದೆಂಬ ಭ್ರಮೆಗೆ ಅವಕಾಶವಿದೆ. ಅದರಿಂದ ದ್ಯುಸರಿತ್ಸಹಿತವಾದ ಧರೆ ಎಂದು ಮಧ್ಯಮಪದಲೋಪಿ ಸಮಾಸಮಾಡಬೇಕೆಂದು ಸೂಚಿಸುತ್ತ ಹೀಗೆ ವ್ಯಾಖ್ಯಾನ ಮಾಡುತ್ತಾರೆ ಶ್ರೀಮದಾಚಾರ್ಯರು-

ದ್ಯುಸರಿತೋ ಧರಾಯಾಶ್ಚ ।

ಗಂಗೆಗೂ ಧರೆಗೂ ಆಶ್ರಯ ಭಗವಂತನ ಪಾದ ಎಂದರ್ಥ.

ಇಲ್ಲಿ ಧರೆ ಎಂದರೆ ಭೂದೇವಿ ಎಂದರೆ ತಪ್ಪಿಲ್ಲ. 'ಭೂಃ ಪಾದೌ ಯಸ್ಯ' ಎಂದು ಮುಂತಾಗಿ ವಿಷ್ಣುಪಾದವು ಭೂಮಿಗೆ ಆಶ್ರಯ ಎಂದು ಹೇಳಿದ್ದುಂಟು. ಛಲಾರಿ ವ್ಯಾಖ್ಯಾನದಲ್ಲಿ ಧರೆ ಎಂದರೆ ಧಾರೆ, ದೀರ್ಘ ಹ್ರಸ್ವವಾಗಿರುವುದು ಛಾಂದಸ ಎನ್ನುತ್ತ ತ್ರಿವಿಕ್ರಮಪಾದನಖದಿಂದ ಒಡೆದ ಬ್ರಹ್ಮಾಂಡ ಕಟಾಹದ ಸಂದಿನಿಂದ ಸುರಿದ ಬಾಹ್ಯಜಲಧಾರೆಗೂ ಗಂಗೆಗೂ ಪಾದ ಆಶ್ರಯವಾಯಿತು ಎಂಬ ಅಭಿಪ್ರಾಯ ಉಕ್ತವಾಗಿದೆ.

* * *

ಶ್ರೀಹರಿ, ನಿನ್ನ ಪ್ರಾಪ್ತಿಗೆ ನಿರಂತರ ಶಾಸ್ತ್ರಶ್ರವಣವೇ ಸಾಧನವಾಗಬಲ್ಲುದು. ಆದರೆ ಹೆಚ್ಚಿನವರು ಯೋಗಸಮಾಧಿಯನ್ನು ಆಶ್ರಯಿಸುತ್ತಾರೆ. ವ್ಯರ್ಥವಾಗಿ ಅಧಿಕಶ್ರಮ ಮಾಡುತ್ತಾರೆ ಎನ್ನುತ್ತಾರೆ ತತ್ತ್ವಾಭಿಮಾನಿದೇವತೆಗಳು-

ತಥಾಽಪರೇ ತ್ವಾತ್ಮ ಸಮಾಧಿಯೋಗ-
ಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್ ।
ತ್ವಾಮೇವ ಧೀರಾಃ ಪುರುಷಂ ವಿಶಂತಿ
ತೇಷಾಂ ಶ್ರಮಃ ಸ್ಯಾನ್ನ ತು ಸೇವಯಾ ತೇ ॥ ೨೫ ॥

ಇನ್ನು ಕೆಲವರು ಆತ್ಮಸಮಾಧಿಯೋಗದ ಬಲದಿಂದ ಬಲಿಷ್ಠವಾದ ಪ್ರಕೃತಿಯನ್ನು ಗೆದ್ದು ಅಪರೋಕ್ಷ ಹೊಂದಿ ನಿನ್ನನ್ನು ಪ್ರವೇಶಿಸುತ್ತಾರೆ. ಆದರೆ ಅವರಿಗೆ ಆಗುವಷ್ಟು ಶ್ರಮ ನಿನ್ನ ಶ್ರವಣಾದಿರೂಪ ಸೇವೆ ಮಾಡುವ ಜ್ಞಾನಯೋಗಿಗಳಿಗೆ ಆಗುವುದಿಲ್ಲ.

ಇಲ್ಲಿ 'ಪ್ರಕೃತಿಂ ಜಿತ್ವಾ' ಎಂದು ಪ್ರಕೃತಿಜಯವನ್ನೂ 'ಯೋಗ'ಶಬ್ದದಿಂದ ವಾಯುಜಯವನ್ನೂ ಹೇಳಿದ್ದಾರೆ. ಪ್ರಕೃತಿ ಎಂದರೆ ಭಗವಂತನ ಮಾಯೆ. ಅದನ್ನು ಗೆದ್ದು ಎಂದು ವೀರರಾಘವವ್ಯಾಖ್ಯಾನ. ಯೋಗವೆಂದರೆ ಅಷ್ಟಾಂಗಯೋಗವೆಂದು ವಿಶ್ವನಾಥವ್ಯಾಖ್ಯಾನ. ಅಷ್ಟಾಂಗಯೋಗದಲ್ಲಿ ಪ್ರಾಣಾಯಾಮವೆಂದರೆ ವಾಯುಜಯ. ಸರ್ವಚೇಷ್ಟಕ, ಸರ್ವಬಲದಾತನಾದ ವಾಯುವನ್ನು ಕೇವಲ ಶ್ವಾಸ ನಿರೋಧದಿಂದ ಗೆಲ್ಲಲು ಸಾಧ್ಯವೆ? ಪ್ರಕೃತಿ ಎಂದರೆ ಬಂಧಕವಾದ ಭಗವಂತನ ಮಾಯೆ, ಎಂದರೆ ಅವನ ಇಚ್ಛೆ, ಅದನ್ನು ಗೆಲ್ಲುವುದು ಶಕ್ಯವೆ? ಮತ್ತು ಜಡಪ್ರಕೃತಿಗೆ ಅಭಿಮಾನಿನಿಯಾದ ದುರ್ಗಾದೇವಿ ಜೀವರಿಗೆ ಬಂಧಕಳಾದ ಮಾಯೆಯೆನಿಸುತ್ತಾಳೆ. ಅವಳನ್ನು ಗೆಲ್ಲುವುದು ಸಾಧ್ಯವೆ? ಬೇರೆ ವ್ಯಾಖ್ಯಾನಕಾರರು ಇದರ ಬಗ್ಗೆ ವಿಚಾರ ಮಾಡಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ-

ವಾಯೋಶ್ಚ ಪ್ರಕೃತೇರ್ವಿಷ್ಣೋರ್ಜಯೋ ಭಕ್ತ್ಯೈವ ನಾನ್ಯಥಾ ।
ಇತಿ ದತ್ತಾತ್ರೇಯಯೋಗೇ ।

'ವಾಯುದೇವನನ್ನು ಜಯಿಸುವುದಾಗಲಿ, ಬಂಧಕಪ್ರಕೃತಿಯ ಅಭಿಮಾನಿ ನಿಯಾದ ದುರ್ಗೆಯನ್ನು ಜಯಿಸುವುದಾಗಲಿ, ವಿಷ್ಣುಮಾಯೆಯನ್ನು ದಾಟುವುದಾಗಲಿ ಕೇವಲ ಭಕ್ತಿಯಿಂದಲೇ ಹೊರತು ಬೇರಾವ ಉಪಾಯದಿಂದಲೂ ಶಕ್ಯವಿಲ್ಲ' ಎಂದು ದತ್ತಾತ್ರೇಯನು ರಚಿಸಿದ ಯೋಗಶಾಸ್ತ್ರದಲ್ಲಿ ಹೇಳಿದೆ.

ಪತಂಜಲಿಯ ಯೋಗಶಾಸ್ತ್ರ ಪ್ರಮಾಣವಲ್ಲ. 'ಏತೇನ ಯೋಗಃ ಪ್ರತ್ಯುಕ್ತಃ' ಎಂದು ಬ್ರಹ್ಮಸೂತ್ರದಲ್ಲಿ ಅದನ್ನು ನಿರಾಕರಿಸಲಾಗಿದೆ. ದತ್ತಾತ್ರೇಯ ರಚಿಸಿದ ಯೋಗಶಾಸ್ತ್ರ ಪ್ರಮಾಣ. ಅದರಲ್ಲಿ ಮೇಲಿನಂತೆ ಉಕ್ತವಾಗಿದೆ.

* * *

ಶ್ರೀಹರಿ, ನೀನು ನಮ್ಮನ್ನು ಬ್ರಹ್ಮಾಂಡಸೃಷ್ಟಿಗಾಗಿ ಹುಟ್ಟಿಸಿದಿ. ಆದರೆ ನಾವು ಬ್ರಹ್ಮಾಂಡಸೃಷ್ಟಿಗೆ ಅಸಮರ್ಥರಾಗಿದ್ದೇವೆ ಎನ್ನುತ್ತಾರೆ ತತ್ತ್ವಾಭಿಮಾನಿ ದೇವತೆಗಳು-

ತತ್ತೇ ವಯಂ ಲೋಕಸಿಸೃಕ್ಷಯಾಽದ್ಯ
ತ್ವಯಾ ವಿಸೃಷ್ಟಾಸ್ತ್ರಿಭಿರಾತ್ಮಭಿರ್ಯೇ ।
ಸರ್ವೇ ವಿಯುಕ್ತಾಃ ಸ್ವವಿಹಾರತಂತ್ರಂ
ನ ಶಕ್ನುಮಸ್ತತ್ ಪ್ರತಿಕರ್ತವೇ ತೇ ॥ ೨೬ ॥

ಶ್ರೀಹರಿ, ಕಾಲಾಭಿಮಾನಿ ಬ್ರಹ್ಮರೂಪ, ಚಿತ್ಪ್ರಕೃತಿ ಮತ್ತು ಜೀವಾಭಿಮಾನಿ ಬ್ರಹ್ಮರೂಪ ಈ ಮೂವರಿಂದ ನೀನು ಬ್ರಹ್ಮಾಂಡಸೃಷ್ಟಿಗಾಗಿ ನಮ್ಮನ್ನು ಸೃಷ್ಟಿಸಿರುವಿ. ಆದರೆ ನಾವು ಜೊತೆ ಸೇರದೆ ಬೇರೆಯಾಗಿರುವುದರಿಂದ ಬ್ರಹ್ಮಾಂಡ ಸೃಷ್ಟಿಗೆ ಸಮರ್ಥರಾಗಿಲ್ಲ.

ತ್ರಿಭಿರಾತ್ಮಭಿಃ ಎಂದರೆ ಸತ್ವರಜಸ್ತಮೋಗುಣಗಳಿಂದ ಈ ದೇವತೆಗಳು ಹುಟ್ಟಿದ್ದಾರೆ, ಹೀಗಾಗಿ ವಿರುದ್ಧಸ್ವಭಾವದವರಾದ ಅವರು ಜೊತೆಗೆ ಸೇರದೆ ಬೇರೆಬೇರೆಯಾಗಿರುವುದರಿಂದ ಬ್ರಹ್ಮಾಂಡಸೃಷ್ಟಿಗೆ ಅಶಕ್ತರೆನಿಸಿದರು ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳಿದ್ದಾರೆ. [೧]ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಈ ದೇವತೆಗಳು ತಮ್ಮ ತಮ್ಮ ಅಭಿಮಾನಗಳಿಂದ ಕುರುಡರಾಗಿ ಭಗವಂತನ ಆದೇಶ ಪಾಲಿಸದೆ ಹೋದುದರಿಂದ ಭಕ್ತರಾದರೂ ಇವರು ತಾಮಸಮಧ್ಯಮರು. ಅದೂ ಭಗವಂತನೆ ಸೃಷ್ಟಿಸಿದ್ದರಿಂದ. ಬೇರೇ ಯಾರಾದರೂ ಸೃಷ್ಟಿಸಿದ್ದರೆ ತಾಮಸಾಧಮರೇ ಆಗಿರುತ್ತಿದ್ದರು' ಎಂದಿದೆ.

ವಸ್ತುತಃ ಸಾತ್ವಿಕರಾದರೂ ಭಗವಂತನ ಪ್ರವೇಶವಿಲ್ಲದಿದ್ದರೆ ಭಗವಂತನ ಆದೇಶವನ್ನು ನಡೆಸುವುದು ಯಾರಿಂದಲೂ ಆಗಲಾರದು. ಆದ್ದರಿಂದ ಇವು 'ತ್ರಿಭಿರಾತ್ಮಭಿಃ' ಎಂಬುದಕ್ಕೆ ಸರಿಯಾದ ವ್ಯಾಖ್ಯಾನಗಳಲ್ಲ, ಮತ್ತು ಹಿಂದೆ ಅನೇಕಬಾರಿ ಪ್ರಸ್ತುತವಾದ ಕಾಲ ಮಾಯಾ ಅಂಶಗಳನ್ನು ಬಿಟ್ಟು ತ್ರಿಗುಣಗಳನ್ನು ಗ್ರಹಿಸುವುದು ಉಚಿತವೂ ಅಲ್ಲ. ಮತ್ತು 'ಆತ್ಮ' ಎಂಬ ಶಬ್ದ ತ್ರಿಗುಣಗಳಿಗೆ ಯುಕ್ತವೂ ಆಗುವುದಿಲ್ಲ. ಕಾಲ ಮಾಯಾ ಅಂಶಗಳನ್ನು ಇಟ್ಟುಕೊಂಡರೆ, ಆತ್ಮಶಬ್ದದಿಂದ ಈ ಮೂವರು ಚೇತನರೆಂದು ಸಿದ್ಧವಾಗುತ್ತದೆ. ಅದರಿಂದ ಹಿಂದೆ ೧೬ನೇ ಶ್ಲೋಕದಲ್ಲಿ 'ಕಾಲಮಾಯಾಂಶಲಿಂಗಿನಃ' ಎಂಬುದಕ್ಕೆ ಆಚಾರ್ಯರು ಮಾಡಿದ ವ್ಯಾಖ್ಯಾನ ಅತ್ಯಂತ ಸೂಕ್ತವೆನಿಸುತ್ತದೆ. ಅಲ್ಲಿ ಮೂವರು ಚೇತನರೆಂದೇ ವ್ಯಾಖ್ಯಾನಿಸಿದ್ದಾರೆ.

ತ್ರಿಭಿರಾತ್ಮಭಿಃ ಕಾಲಮಾಯಾಂಶೈಃ ।

'ತ್ರಿಭಿರಾತ್ಮಭಿಃ' ಎಂದರೆ ಕಾಲಾಭಿಮಾನಿ ಬ್ರಹ್ಮರೂಪ, ಚೇತನಪ್ರಕೃತಿ ಮತ್ತು ಜೀವಾಭಿಮಾನಿ ಬ್ರಹ್ಮರೂಪ ಈ ಮೂರು ಚೇತನರಿಂದ ತತ್ವಾಭಿಮಾನಿಗಳ ಶರೀರನಿರ್ಮಾಣವೆಂದರ್ಥ.

* * *

ನೀವು ಲಕ್ಷ್ಮೀನಾರಾಯಣರು ನಮಗೆ ತಾಯಿ ತಂದೆಗಳಾಗಿ ಜನ್ಮ ಕೊಟ್ಟಿರುವಿರಿ. ನಿಮಗೆ ಅಪೇಕ್ಷಿತವಾದ ಬ್ರಹ್ಮಾಂಡಸೃಷ್ಟಿಯಲ್ಲಿ ಮಾತ್ರ ನಾವು ಅಸಮರ್ಥರಾಗಿದ್ದೇವೆ.

---

೧. ತಾಮಸಭೇದಾನ್ ಸ್ವಾನ್ ಮನ್ಯಮಾನಾ ಆತ್ಮನ ಏವ ತ್ರಿವಿಧಾನಾಹುಃ ತತ್ತೇ ವಯಮಿತಿ । ತಾಮಸಮಧ್ಯಮಾ ಏತೇ । ಯದರ್ಥಂ ಭಗವತಾ ಸೃಷ್ಟಾಸ್ತೇ ಸರ್ವೇ ದುರಾತ್ಮಾನಃ ಸ್ವಸ್ವಾಭಿಮಾನೇನ ನಷ್ಟಾ ಭಗವತ್ಕಾರ್ಯಮಕೃತ್ವಾಪಿ ಸ್ಥಿತಾ ಇತ್ಯೇತಾದೃಶಾ ಭಕ್ತಾಸ್ತಾಮಸಮಧ್ಯಮಾಃ । ಭಗವತಾ ಭಿನ್ನತಯಾ ಸೃಷ್ಟಾ ಇತಿ ತೇಷಾಂ ಮಧ್ಯಮತ್ವಂ । ಅನ್ಯಥಾ ಅಧಮಾ ಏವ ಸ್ಯುಃ । —ವಲ್ಲಭಃ

ಅದಕ್ಕೆ ನಮಗೆ ತಕ್ಕ ಜ್ಞಾನಾದಿಗಳನ್ನು ನೀಡಿರಿ ಎಂದು ತತ್ತ್ವಾಭಿಮಾನಿಗಳು ಬೇಡಿಕೊಳ್ಳುತ್ತಿದ್ದಾರೆ ಹೀಗೆ ಮೈತ್ರೇಯರು ವಿದುರನಿಗೆ ಉಪದೇಶಿಸಿದುದಾಗಿ ಶುಕಮುನಿ ಪರೀಕ್ಷಿದ್ರಾಜನಿಗೆ ಹೇಳಿದ್ದಾಗಿ ಸೂತರು ಶೌನಕರಿಗೆ ಹೇಳುತ್ತಿದ್ದಾರೆ–

ತತೋ ವಯಂ ಸತ್ತ್ರಮುಖಾ ಯದರ್ಥೇ
ಬಭೂವಿಮಾತ್ಮನ್ ಕರವಾಮ ಕಿಂ ತೇ ।
ತ್ವಂ ನಃ ಸ ಚಕ್ಷುಃ ಪರಿದೇಹಿ ಶಕ್ತ್ಯಾ
ದೇವ ಕ್ರಿಯಾರ್ಥೇ ಯದನುಗ್ರಹೇಣ ॥ ೩೦ ॥

ಪ್ರಭು, ನಾವು ಮಹದಾದಿತತ್ತ್ವಾಭಿಮಾನಿಗಳು ಯಾವ ಕಾರ್ಯಕ್ಕೆಂದು ಜನಿಸಿರುವೆವೋ ನಿನ್ನ ಆ ಕಾರ್ಯವನ್ನು ನಾವೇನು ಮಾಡಬಲ್ಲೆವು? ಅದರಿಂದ ನಿನ್ನ ಅನುಗ್ರಹದಿಂದ ನಾವು ಬ್ರಹ್ಮಾಂಡನಿರ್ಮಾಣಕಾರ್ಯಕ್ಕೆ ಶಕ್ತರಾಗಬೇಕು. ಅದಕ್ಕೆ ಬೇಕಾದ ಜ್ಞಾನವನ್ನು ನಮಗೆ ನೀಡು.

ಇಲ್ಲಿ 'ಸತ್ತ್ರಮುಖಾಃ' ಎಂದರೆ ಮಹದಾದಿಗಳೆಂದು ಪ್ರಾಯಃ ಎಲ್ಲ ವ್ಯಾಖ್ಯಾನಕಾರರೂ ವ್ಯಾಖ್ಯಾನಿಸಿದ್ದಾರೆ. ವಲ್ಲಭಾಚಾರ್ಯರು ಸಾತ್ವಿಕಾಂಹಂಕಾರಾದಿಗಳೆಂದಿದ್ದಾರೆ. ವೀರರಾಘವವ್ಯಾಖ್ಯಾನದಲ್ಲಿ ಮಾತ್ರ ಸಮಷ್ಟಿ ಪುರುಷ ಮುಂತಾದವರು ಎಂದಿದ್ದಾರೆ. ವಸ್ತುತಃ ಸಮಷ್ಟಿಪುರುಷಸೃಷ್ಟಿ ಇನ್ನೂ ಆಗಿಲ್ಲ. ಮಹದಾದಿ ತತ್ತ್ವಾಭಿಮಾನಿಗಳ ಶರೀರ ಸೃಷ್ಟಿಯಾಗಿರುವುದರಿಂದ 'ಏತೇ ದೇವಾಃ ಕಲಾ ವಿಷ್ಣೋಃ' ಈ ದೇವತೆಗಳು ಸ್ತೋತ್ರಮಾಡಿದರೆಂದು ಹಿಂದೆ ೧೬ ಶ್ಲೋಕದಲ್ಲಿ ಹೇಳಿದ್ದರಿಂದ ಅವರೇ ತಮ್ಮನ್ನು 'ಸತ್ತ್ರಮುಖಾಃ ವಯಂ' ಎನ್ನುತ್ತಿರುವುದರಿಂದ ಮಹದಾದಿಗಳೆಂದು ಅರ್ಥವನ್ನು ಗ್ರಹಿಸುವುದೇ ಸೂಕ್ತ. ಅದರಿಂದ ಹೇಳುತ್ತಾರೆ-

ಸತ್ತ್ರಮುಖಾ ಮಹದಾದಯಃ ।

ಸತ್ತ್ರಮುಖರೆಂದರೆ ಮಹದಾದಿತತ್ತ್ವಾಭಿಮಾನಿ ದೇವತೆಗಳು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಷಷ್ಠೋಽಧ್ಯಾಯಃ

—೦—

ಅಧ್ಯಾಯ-೭

ಅಧ್ಯಾಯಸಾರಾಂಶ

'ಪ್ರಳಯಕಾಲದಲ್ಲಿದ್ದ ನಾರಾಯಣನೆ ವಾಸುದೇವ ಎಂಬ ಮೊದಲನೇ ಪುರುಷಾವತಾರ ಮಾಡಿ ಮಹದಾದಿ ತತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಜಿಸಿದ. ಅವನೇ ಎರಡನೇ ಪುರುಷಾವತಾರ ತಾಳಿ ಬ್ರಹ್ಮಾಂಡದೊಳಗೆ ಘನೋದಕದಲ್ಲಿ ಒಂದು ಸಾವಿರ ವರ್ಷಕಾಲ ಶೇಷಶಾಯಿಯಾಗಿ ಮಲಗಿದ. ಬ್ರಹ್ಮಾಂಡವ್ಯಾಪ್ತವಾದ ಬ್ರಹ್ಮನ ವಿರಾಟ್‌ಶರೀರವನ್ನು ಸೃಜಿಸಿದ. ಬಳಿಕ ಮೂರನೇ ಪುರುಷಾವತಾರ ಮಾಡಿ ಆ ವಿರಾಟ್ ಶರೀರದಲ್ಲಿ ನಿಯಾಮಕನಾಗಿ ನೆಲೆಸಿದ. ಅಧ್ಯಾತ್ಮ ಅಧಿಭೂತ ಅಧಿದೈವಗಳಲ್ಲಿ, ಪ್ರಾಣಾದಿ ದಶವಾಯುಗಳಲ್ಲಿ, ಮತ್ತು ಹೃದಯದಲ್ಲಿ ಹೀಗೆ ಮೂರು ಬಗೆಯಿಂದ ವಿರಾಡ್‌ದೇಹದಲ್ಲಿ ನೆಲೆಸಿದ. ಅಲ್ಲಿ ಇಂದ್ರಿಯಗೋಲಕಗಳನ್ನು ನಿರ್ಮಿಸಿ ಅವುಗಳಲ್ಲಿ ಇಂದ್ರಿಯ ಮತ್ತು ಅವುಗಳ ಅಭಿಮಾನಿಗಳನ್ನು ನಿಲ್ಲಿಸಿದ. ಇದು ಅಧ್ಯಾತ್ಮ. ಇಂದ್ರಿಯವಿಷಯ ಹಾಗೂ ಅವುಗಳ ಅಭಿಮಾನಿಗಳು ಅಧಿಭೂತ. ಸ್ವರ್ಗಾದಿಲೋಕಗಳಲ್ಲಿ ದೇವತೆಗಳು ಅಧಿದೈವ. ಈ ಮೂರನ್ನೂ ಸೃಜಿಸಿ ನಿಯಾಮಕನಾಗಿ ನೆಲೆಸಿದ. ತಲೆಯಿಂದ ಸ್ವರ್ಗಲೋಕ, ನಾಭಿಯಿಂದ ಅಂತರಿಕ್ಷ, ಪಾದದಿಂದ ಭೂಲೋಕಸೃಷ್ಟಿ, ಮುಖ ಬಾಹು ತೊಡೆ ಕಾಲುಗಳಿಂದ ಚತುರ್ವರ್ಣಾಭಿಮಾನಿಗಳ ಸೃಷ್ಟಿ. ಪರಮಾತ್ಮನ ಈ ಮಹಿಮೆಯನ್ನು ಪೂರ್ತಿ ವರ್ಣಿಸಲು ಹೊರಡುವುದೇ ತಪ್ಪು. ಅದು ರಮಾಬ್ರಹ್ಮಾದಿಗಳಿಗೂ ಅಶಕ್ಯ. ಕೇವಲ ವಾಕ್ಶುದ್ಧಿಗಾಗಿ ಸ್ವಲ್ಪವೇ ಹೇಳಿದ್ದೇನೆ' ಎಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ.

* * *

ತತ್ವಾಭಿಮಾನಿದೇವತೆಗಳು ೧೩ಶ್ಲೋಕಗಳಲ್ಲಿ ಮಾಡಿದ ಸ್ತೋತ್ರವನ್ನು ಶ್ರೀಹರಿ ಆಲಿಸಿದನೆನ್ನುತ್ತಾರೆ ಮೈತ್ರೇಯರು ವಿದುರನಿಗೆ-

ಋಷಿರುವಾಚ

ಇತಿ ತಾಸಾಂ ಸ್ವಶಕ್ತೀನಾಂ ಅಸತೀನಾಂ ಸಮೇತ್ಯ ಸಃ ।
ಪ್ರಸುಪ್ತಲೋಕತಂತ್ರಾಣಾಂ ನಿಶಮ್ಯ ಗಿರಮೀಶ್ವರಃ ॥ ೧ ॥

ತನಗೆ ಅಧೀನರಾದ ಮಹದಾದಿತತ್ತ್ವಾಭಿಮಾನಿಗಳು ಜೊತೆ ಸೇರದೆ ಇದ್ದ ಪ್ರಯುಕ್ತ ಅವರ ಬ್ರಹ್ಮಾಂಡ ಸೃಷ್ಟಿಸಾಮರ್ಥ್ಯವಿನ್ನೂ ಸುಪ್ತವಾಗಿದ್ದುದರಿಂದ ತನ್ನನ್ನು ಸ್ತೋತ್ರ ಮಾಡಿದರು. ಅದನ್ನು ಹರಿ ಆಲಿಸಿ......

(ಮುಂದೇನು ಮಾಡಿದನೆಂದು ಮುಂದಿನ ಶ್ಲೋಕದಲ್ಲಿ ಹೇಳುತ್ತಾರೆ.)

ಇಲ್ಲಿ ಸ್ವಶಕ್ತಿ ಎಂದರೆ ಭಗವಂತನ ಸ್ವಸಾಮರ್ಥ್ಯ ಎಂದು ವಲ್ಲಭಾಚಾರ್ಯರ ವ್ಯಾಖ್ಯಾನ. ಲೋಕತಂತ್ರವೆಂದರೆ ಲೋಕಸೃಷ್ಟಿ, ಅದು ಸುಪ್ತವಾಗಿದೆ. ಅಥವಾ ಲೋಕ ಎಂದರೆ ಲೋಕದ ಜನರ ಅದೃಷ್ಟ. ಅದು ಸುಪ್ತವಾಗಿದೆ. ಅಂಥ ಅದೃಷ್ಟಕ್ಕೆ ಅಧೀನರು ಮಹದಾದಿಗಳು ಎಂದೂ ಅಲ್ಲಿ ಹೇಳಿದೆ. ವಸ್ತುತಃ ಭಗವಂತನ ಸ್ವಸಾಮರ್ಥ್ಯ ಅವನ ಸ್ವರೂಪಭೂತ, ಚಿನ್ಮಯ. ಜಡವಾದ ಮಹದಾದಿಗಳು ಅವನ ಸಾಮರ್ಥ್ಯವಲ್ಲ, ಸಾಮರ್ಥ್ಯಕ್ಕೆ ಅಧೀನ. ಮತ್ತು ಲೋಕಸೃಷ್ಟಿ ಸುಪ್ತವಾಗುವುದಿಲ್ಲ. ಲೋಕಸೃಷ್ಟಿಕಾರಣವಾದ ಶಕ್ತಿ ಸುಪ್ತವಾಗಿರುತ್ತದೆ. ಸುಪ್ತವಾದ ಅದೃಷ್ಟಕ್ಕೂ ಮಹದಾದಿಗಳು ಅಧೀನವಿರುವುದಿಲ್ಲ. ಎಚ್ಚೆತ್ತ ಅದೃಷ್ಟಕ್ಕೆ ಅಧೀನವಾಗಬಹುದು. ಈ ಯಾವ ಅನುಪಪತ್ತಿಗಳಿಗೂ ಅವಕಾಶವಿಲ್ಲದಂತೆ ಹೀಗೆ ಹೇಳುತ್ತಾರೆ, ಶ್ರೀಮದಾಚಾರ್ಯರು–

ಶಕ್ಯತ್ವಾಚ್ಛಕ್ತಯೋ ವಿಷ್ಣೋರ್ಮಹದಾದ್ಯಾ ರಮಾ ತಥಾ ।
ಸ್ವರೂಪಶಕ್ತಿಃ ಶಕ್ತಿತ್ವಾನ್ಮುಖ್ಯಶಕ್ತಿರ್ಹಿ ಸಾ ಯತಃ ॥
ಇತಿ ಬ್ರಹ್ಮತರ್ಕೇ ।

ಸಮೇತ್ಯ ಅಸತೀನಾಂ । ಪ್ರಸುಪ್ತಲೋಕತಂತ್ರಾಣಾಂ ಅನಾವಿರ್ಭೂತ ಲೋಕಸೃಷ್ಟಿಶಕ್ತೀನಾಂ ।

ತನುತೇ ಯೇನ ಕಾರ್ಯಂ ಯತ್ ತಂತ್ರಂ ಸಾಧನಮುಚ್ಯತೇ ।
ಕಾರಣಾನಾಂ ಸ್ವಶಕ್ತಿರ್ವಾ ಪ್ರಧಾನಂ ಸಾಧನಂ ಯತಃ ॥
ಇತಿ ಬ್ರಹ್ಮತರ್ಕೇ ॥

ಇಲ್ಲಿ ಮಹದಾದಿಗಳನ್ನು 'ಸ್ವಶಕ್ತಿ' ಎನ್ನಲು ಕಾರಣ ಅವು ವಿಷ್ಣುವಿಗೆ ಶಕ್ಯ ಅಂದರೆ ಅಧೀನವಿರುವುದರಿಂದ ಹೊರತು ತನ್ನ ಸಾಮರ್ಥ್ಯಸ್ವರೂಪವೆಂದಲ್ಲ. ಮುಂದಿನ ಶ್ಲೋಕದಲ್ಲಿ 'ಬಿಭ್ರಚ್ಛಕ್ತಿಂ' ಎಂದು ರಮಾದೇವಿಯನ್ನು ಶಕ್ತಿ ಎಂದು ಕರೆದುದೂ ಅವಳೂ

ವಿಷ್ಣುವಿಗೆ ಶಕ್ಯ ಅಂದರೆ ಅಧೀನಳಾಗಿರುವುದರಿಂದ. ವಿಷ್ಣುವಿನ ಸ್ವರೂಪಶಕ್ತಿ ಮುಖ್ಯವಾಗಿ ಶಕ್ತಿಶಬ್ದವಾಚ್ಯವಾಗಿದೆ. ಏಕೆಂದರೆ ಅದು ಶಕ್ತತ್ವ ಉಳ್ಳದ್ದಾದ್ದರಿಂದ ಶಕ್ತಿ ಎನಿಸುತ್ತದೆ ಹೊರತು, ವಿಷ್ಣುವಿಗೆ ಅಧೀನವಾಗಿದೆ ಎಂದಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

'ಅಸತೀನಾಂ ಸಮೇತ್ಯ ಸಃ' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಸತೀನಾಮಸಮೇತ್ಯ ಸಃ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. 'ಜೊತೆಯಾಗಿ ಸೇರಿಕೊಂಡಿಲ್ಲ' ಎಂದರೂ 'ಬೇರೆಬೇರೆ ಇದ್ದಾರೆ' ಎಂದರೂ ಅರ್ಥದಲ್ಲಿ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ, ನಿಜ. ಆದರೆ 'ಬೇರೆಬೇರೆ ಇದ್ದಾರೆ' ಎನ್ನುವಾಗ ಹಾಗೆ ಇರುವ ಸ್ವಾತಂತ್ರ್ಯ ಪ್ರತೀತವಾಗುತ್ತದೆ. 'ಜೊತೆಯಾಗಿ ಸೇರಿಕೊಂಡಿಲ್ಲ' ಎನ್ನುವಾಗ ಸೇರಿಕೊಳ್ಳುವ ಸ್ವಾತಂತ್ರ್ಯವಿಲ್ಲ ಎಂದಂತಾಗುತ್ತದೆ. ಸ್ವಾತಂತ್ರ್ಯವಿಲ್ಲದಿರುವುದರಿಂದಲೆ ಜೊತೆ ಸೇರಿಸಲು ಅವರು ಭಗವಂತನ್ನು ಬೇಡುತ್ತಿದ್ದಾರೆ ತಾನೆ? ಹೀಗೆ ಅಪಪಾಠಕ್ಕಿಂತ ಶುದ್ಧಪಾಠದಲ್ಲಿ ಸ್ವಾರಸ್ಯವಿದೆ. ಇದೇ ಶುದ್ಧಪಾಠ ಎಂದು ಸೂಚಿಸುತ್ತ ಶ್ರೀಮದಾಚಾರ್ಯರು 'ಸಮೇತ್ಯ ಅಸತೀನಾಂ' 'ಜೊತೆಗೆ ಸೇರಿಕೊಂಡಿಲ್ಲ' ಎಂದು ಅನ್ವಯವನ್ನು ಹೇಳುತ್ತಾರೆ.

'ಪ್ರಸುಪ್ತಲೋಕತಂತ್ರಾಣಾಂ' ಎಂದರೆ ಮಹದಾದ್ಯಭಿಮಾನಿದೇವತೆಗಳಲ್ಲಿ ಇರುವ ಲೋಕಸೃಷ್ಟಿಮಾಡುವ ಶಕ್ತಿ ಆವಿರ್ಭೂತವಾಗಿಲ್ಲ, ಸುಪ್ತವಾಗಿದೆ ಎಂದರ್ಥ. ತಂತ್ರಶಬ್ದಕ್ಕೆ ಶಕ್ತಿ ಎಂಬ ಅರ್ಥ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ–'ಯಾವ ಸಾಧನದಿಂದ ಕರ್ತನು ಕಾರ್ಯವನ್ನು ಮಾಡುವನೋ ಆ ಸಾಧನವು 'ತನುತೇಽನೇನ' ಎಂಬ ವ್ಯುತ್ಪತ್ತಿಯಿಂದ 'ತಂತ್ರ' ಎನಿಸುತ್ತದೆ. ಹೀಗೆ ಸಾಮಾನ್ಯವಾಗಿ ತಂತ್ರ ಎಂದರೆ ಸಾಧನ. ಅಥವಾ 'ತಂತ್ರ' ಎಂದರೆ ಸಾಧನಗಳಲ್ಲಿರುವ ಶಕ್ತಿ. ಏಕೆಂದರೆ ಸಾಧನವು ಸಾಧನವೆನಿಸುವುದು ಅದರಲ್ಲಿ ಕಾರ್ಯ ಉತ್ಪಾದಿಸುವ ಶಕ್ತಿ ಇದ್ದರೆ ಮಾತ್ರ. ಆ ಶಕ್ತಿಯೂ ಕುಂಠಿತವಾಗದೆ ಸುಸ್ಥಿತಿಯಲ್ಲಿ ಇದ್ದರೆ ಮಾತ್ರ. ಅದರಿಂದ ಮುಖ್ಯವಾಗಿ ಸಾಧನವು ಶಕ್ತಿಯೇ. ಆದರಿಂದ ಶಕ್ತಿಯೇ ತಂತ್ರಶಬ್ದದ ಮುಖ್ಯಾರ್ಥ.

* * *

ತತ್ತ್ವಾಭಿಮಾನಿಗಳ ಪ್ರಾರ್ಥನೆಯನ್ನು ಕೇಳಿ ಅವರಲ್ಲಿರುವ ಬ್ರಹ್ಮಾಂಡ ಸೃಷ್ಟಿ ಸಾಮರ್ಥ್ಯವನ್ನು ವ್ಯಕ್ತಗೊಳಿಸುವುದಕ್ಕಾಗಿ ಶ್ರೀಹರಿ ರಮಾಸಮೇತನಾಗಿ ಅವರಲ್ಲಿ ಆವೇಶಗೊಂಡನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಕಾಲಸಂಜ್ಞಾಂ ತದಾ ದೇವೀಂ ಬಿಭ್ರಚ್ಛಕ್ತಿಮುರುಕ್ರಮಃ ।
ತ್ರಯೋವಿಂಶತಿ ತತ್ತ್ವಾನಾಂ ಗಣಂ ಯುಗಪದಾವಿಶತ್ ॥ ೨ ॥

ಕಾಲ' ಎಂದೂ 'ಶಕ್ತಿ' ಎಂದೂ ಕರೆಸಿಕೊಳ್ಳುವ ರಮಾದೇವಿಯೊಂದಿಗೆ ಶ್ರೀಹರಿ ಇಪ್ಪತ್ತಮೂರು ತತ್ತ್ವಗಳ ಸಮೂಹವನ್ನು ಒಮ್ಮೆಲೆ ಪ್ರವೇಶಿಸಿದ.

[1]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕಾಲಸಂಜ್ಞಾಂ' ಎಂದರೆ ಕಾಲದಿಂದ ಉದ್ಬೋಧಗೊಳ್ಳುವ ಪ್ರಕೃತಿ ಎಂದಿದ್ದಾರೆ. ವಲ್ಲಭಾಚಾರ್ಯರು 'ಕಾಲವೆಂಬ ಶಕ್ತಿಯೊಂದಿಗೆ ಇಪ್ಪತ್ತಮೂರು ಶಕ್ತಿಗಳನ್ನು ಭಗವಂತ ಕೂಡಿಕೊಂಡ. ಕಾಲವನ್ನು ಶಕ್ತಿ ಎಂದು ಸ್ತ್ರೀಲಿಂಗಶಬ್ದದಿಂದ ಕರೆಯಲು ಕಾರಣ ಏನೆಂದರೆ ಕಾಲ ಎಂಬ ಪುಲ್ಲಿಂಗ ಶಬ್ದವಾಚ್ಯನಾದ ಕಾಲಪುರುಷನೂ ಭಗವಂತನೂ ಎಂದು ಇಬ್ಬರು ಪುರುಷರು ಸ್ತ್ರೀರೂಪರಾದ ಇಪ್ಪತ್ತಮೂರು ಶಕ್ತಿಗಳನ್ನು ಕೂಡಿದರೆ ರಸಾಭಾಸ ಉಂಟಾದೀತು' ಎನ್ನುತ್ತಾರೆ!

ವಸ್ತುತಃ ರಮಾನಾರಾಯಣರು ತತ್ತ್ವತತ್ತ್ವಾಭಿಮಾನಿಗಳಲ್ಲಿ ಆವಿಷ್ಟರಾಗುವ ಪ್ರಸಂಗವಿದು. ಅದರಲ್ಲಿ ಶೃಂಗಾರ ಪ್ರಸಕ್ತಿಯೇ ಇಲ್ಲ. ಮತ್ತು 'ಕಾಲಸಂಜ್ಞಾ' ಎಂದರೆ ಕಾಲದಿಂದ ಉದ್ಬೋಧಗೊಳ್ಳುವ ಪ್ರಕೃತಿ ಎಂದು ಅರ್ಥ ಕ್ಲೇಶಪಡುವುದೂ ಬೇಕಾಗಿಲ್ಲ. ಪ್ರಕೃತಿಗೇ ಕಾಲ ಎಂದು ಹೆಸರಿದೆ.

ಕಾಲವೆಂಬ ಶಕ್ತಿಯನ್ನು ಒಳಗೆ ಪ್ರವೇಶಿಸಿ ಧರಿಸುತ್ತ ಎಂದು ವೀರರಾಘವವ್ಯಾಖ್ಯಾನ. ಅದು ಪ್ರಕೃತಕ್ಕೆ ಅನಾವಶ್ಯಕ. ಪ್ರಾರ್ಥನೆ ಸಲ್ಲಿಸಿದ ಮಹದಾದಿ ಇಪ್ಪತ್ತಮೂರು ತತ್ತ್ವಗಳಲ್ಲಿ ಕಾಲದೊಂದಿಗೆ ಭಗವಂತ ಪ್ರವೇಶಿಸಿದರೆ ಸಾಕು. ಕಾಲ ತನ್ನ ಅಶಕ್ತಿಯನ್ನೇನೂ ಹೇಳಿಕೊಂಡಿಲ್ಲ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ ಕಾಲಾಭಿಮಾನಿಯಾದ್ದರಿಂದ ಕಾಲ ಎಂಬ ಹೆಸರಿನವಳು ಇಲ್ಲಿ ರಮೆಯೆ ಎಂದು.

ಇಪ್ಪತ್ತಮೂರು ತತ್ತ್ವಗಳು ಯಾವುವು? ಅವುಗಳಲ್ಲಿ ಭಗವಂತನ ಪ್ರವೇಶವೆಂದರೆ ಅವುಗಳ ಅಭಿಮಾನಿಗಳಲ್ಲಿ ಪ್ರವೇಶವಿಲ್ಲವೆ? ಇದ್ದರೆ 'ಇಪ್ಪತ್ತಮೂರರ ಸಮುದಾಯ'ವನ್ನು ಪ್ರವೇಶಿಸಿದನೆನ್ನುವುದು ಹೇಗೆ? ಇಪ್ಪತ್ತನಾಲ್ಕನೆಯ ತತ್ತ್ವವಾದ ಪ್ರಕೃತಿಯನ್ನೇಕೆ ಬಿಟ್ಟಿದ್ದಾರೆ? ಕೆಲವೆಡೆ ಇಪ್ಪತ್ತೈದು ಇಪ್ಪತ್ತಾರು ಇಪ್ಪತ್ತೇಳು ತತ್ತ್ವಗಳೆಂದು ನಾನಾ ಬಗೆಯ ಹೇಳಿಕೆಗಳಿವೆ. ಅವುಗಳಿಗೆ ಏನರ್ಥ? ಇತ್ಯಾದಿ ಪ್ರಶ್ನೆಗಳಿಗೂ ಉತ್ತರ ನೀಡುತ್ತಾರೆ–

ಶಬ್ದಾದ್ಯಾ ನಭ ಆದ್ಯಾಶ್ಚ ಮನೋಯುಕ್ತೇಂದ್ರಿಯಾಣಿ ಚ ।
ಅಹಂಕಾರೋ ಮಹಾಂಶ್ಚೈವ ತ್ರಯೋವಿಂಶತಿಕೋ ಗಣಃ ॥

---

೧. ಕಾಲ ಇತಿ ಸಂಜ್ಞಾ ಯಸ್ಯಾಃ । ಕಾಲೋಽಪ್ಯೇಕಾ ಭಗವಚ್ಛಕ್ತಿಃ । ಅನ್ಯಥಾ ಪುರುಷದ್ವಯಪ್ರವೇಶೇ ಶಕ್ತಿಷು ರಸಾಭಾಸಃ ಸ್ಯಾತ್ । ತಯಾ ಸಹ ಭಗವದ್ದರ್ಶನೇನ ತಾಸಾಂ ಮಾತ್ಸರ್ಯಂ ಮಾ ಭವತ್ವಿತಿ ದೇವೀಮಿತ್ಯುಕ್ತಂ । ಸಾ ಹಿ ದೇವತಾರೂಪಾ ಅತಿಸೂಕ್ಷ್ಮಾ । ತಯಾ ವಿನಾ ಕರ್ಮ ಪ್ರಬೋಧೋ ದುರ್ಘಟಃ –ವಲ್ಲಭಃ

ದೇವತೇಂದ್ರಿಯಯೋರೈಕ್ಯಾನ್ನ ಪೃಥಗ್ ಗ್ರಹಣಂ ತಯೋಃ ।
ಪ್ರಕೃತಿಸ್ತು ಚತುರ್ವಿಂಶಾ ಪಂಚವಿಂಶೋ ಹರಿಃ ಸ್ವಯಮ್ ॥
ಯದಾ ಜಡಾಂಶಸ್ವೀಕಾರೋ ಜೀವಸ್ತತ್ ಪಂಚವಿಂಶಕಃ ।
ಷಡ್ವಿಂಶಕೋ ಮಹಾವಿಷ್ಣುಃ ಶ್ರಿಯಾ ವಾ ಸಪ್ತವಿಂಶಕಃ ॥
ಇತಿ ತತ್ವನಿರ್ಣಯೇ ।

ತ್ರಯೋವಿಂಶತಿ ತತ್ವಾನಿ ಪ್ರಾವಿಶದ್ ರಮಯಾ ಸಹ ।
ಕಾಲಾಖ್ಯಯಾ ಸ್ವಯಾ ವಿಷ್ಣುಃ ಶಕ್ಯತ್ವಾಚ್ಛಕ್ತಿರೂಪಯಾ ॥

ಶಬ್ದಾದಿ ಪಂಚ ತನ್ಮಾತ್ರೆಗಳು, ಆಕಾಶಾದಿ ಪಂಚಭೂತಗಳು, ಮನಸ್ಸು, ಹತ್ತು ಇಂದ್ರಿಯಗಳು ಅಹಂಕಾರ ಮಹತ್ತತ್ವಗಳೆಂದು ಒಟ್ಟು ಇಪ್ಪತ್ತಮೂರು ತತ್ವಗಳು ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದ್ದುವು. ಇಂದ್ರಿಯಾದಿ ತತ್ವಗಳನ್ನೂ ಅವುಗಳ ಅಭಿಮಾನಿದೇವತೆಗಳನ್ನೂ ಒಂದೇ ಹೆಸರಿನಿಂದ ಕರೆಯುವುದರಿಂದ ಒಂದಾಗಿ ಗ್ರಹಿಸಿದ್ದಾರೆ ಹೊರತು ಬೇರೆಯಾಗಿ ಅಲ್ಲ. ಆದರಿಂದ ಅಭಿಮಾನಿಗಳಲ್ಲಿಯೂ ಪ್ರವೇಶವಿದೆ, ಇಪ್ಪತ್ತಮೂರು ಎಂಬ ಸಂಖ್ಯೆಯೂ ಯುಕ್ತವಾಗುತ್ತದೆ. ಚೇತನ ಅಚೇತನ ಎಂದು ಎರಡು ಬಗೆಯಾದ ಪ್ರಕೃತಿಯನ್ನು ಸಕಲಕಾರ್ಯಜನನಿ ಯಾದ್ದರಿಂದ ಪ್ರತ್ಯೇಕವಾಗಿ 'ದೇವೀಂ ಬಿಭ್ರತ್' ಎಂದು ಹೇಳಲಾಗಿದೆ. ಆದರಿಂದ ಇಪ್ಪತ್ತನಾಲ್ಕನೆಯ ತತ್ವವೂ ಉಕ್ತವಾಯಿತು. ಇಪ್ಪತ್ತೈದನೆಯ ತತ್ವವಾದ ಭಗವಂತ ಸ್ವತಃ ತತ್ವಗಳಲ್ಲಿ ಪ್ರವೇಶಿಸಿ ಬ್ರಹ್ಮಾಂಡೋತ್ಪತ್ತಿಯಲ್ಲಿ ಕರ್ತನೆನಿಸುತ್ತಾನೆ. ಕಾಲಾಭಿಮಾನಿನಿಯಾದ ಪ್ರಕೃತಿ ದೇವಿ ಸಹಕಾರಿ ಕಾರಣಳು. ಬೇರೆ ತತ್ವಗಳು ಉಪಾದಾನಕಾರಣಗಳು. ಪ್ರಕೃತಿ ಮಹತ್ತತ್ವಮುಂತಾದ ಶಬ್ದಗಳಿಂದ ಕೇವಲ ಜಡವನ್ನಿಟ್ಟುಕೊಂಡಾಗ ಅಭಿಮಾನಿಗಳೆಲ್ಲರ ಒಂದು ವರ್ಗ ಇಪ್ಪತ್ತೈದನೆಯ ತತ್ವ, ಭಗವಂತ ಇಪ್ಪತ್ತಾರನೆಯ ತತ್ವ, ಅಭಿಮಾನಿಗಳಲ್ಲಿ ಪ್ರಕೃತ್ಯಭಿಮಾನಿನಿ ರಮೆಯನ್ನು ಪ್ರತ್ಯೇಕವಾಗಿ ಗ್ರಹಿಸಿದರೆ ಅವಳು ಇಪ್ಪತ್ತಾರನೆಯ ತತ್ವ, ಭಗವಂತ ಇಪ್ಪತ್ತೇಳನೆಯ ತತ್ವ, ಹೀಗೆ ತತ್ವನಿರ್ಣಯವೆಂಬ ವೇದವ್ಯಾಸರ ಗ್ರಂಥದಲ್ಲಿ ಹೇಳಿದೆ.

ಈಗ ಭಾಗವತಶ್ಲೋಕದ ಅಭಿಪ್ರಾಯ ಇದು-'ಕಾಲಕ್ಕೆ ಅಭಿಮಾನಿನಿಯಾದ್ದರಿಂದ ಕಾಲ ಎಂದೂ ಹರಿಗೆ ಅಧೀನಳಾದ್ದರಿಂದ ಅವನ ಶಕ್ತಿ ಎಂದೂ ಕರೆಸಿಕೊಳ್ಳುವ ರಮಾದೇವಿಯೊಂದಿಗೆ, ಸ್ವತಂತ್ರನಾದ ವಿಷ್ಣು ಇಪ್ಪತ್ತಮೂರು ತತ್ವಗಳಲ್ಲಿಯೂ ಅವುಗಳ ಅಭಿಮಾನಿಗಳಲ್ಲಿಯೂ ಪ್ರವೇಶಿಸಿದನು' ಎಂದು.

* * *

ಮಹದಾದಿತತ್ವಗಳಲ್ಲಿ ಆವಿಷ್ಟನಾದ ಭಗವಂತ ಅವುಗಳನ್ನು ಒಂದುಗೂಡಿಸಿ ಅವುಗಳ ಶಕ್ತಿಯನ್ನು ವ್ಯಕ್ತಮಾಡಿದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಸೋಽನುಪ್ರವಿಷ್ಟೋ ಭಗವಾನ್ ಚೇಷ್ಟಾರೂಪೇಣ ತಂ ಗಣಮ್ ।
ಭಿನ್ನಂ ಸಂಯೋಜಯಾಮಾಸ ಸುಪ್ತಂ ಕರ್ಮ ಪ್ರಬೋಧಯನ್ ॥ ೩ ॥

ಭಗವಂತ ಪ್ರವರ್ತಕರೂಪದಿಂದ ತತ್ತ್ವಗಳಲ್ಲಿ ಆವೇಶಗೊಂಡು ಅವುಗಳ ಶಕ್ತಿಯನ್ನೂ ಜೀವರ ಅದೃಷ್ಟವನ್ನೂ ಉದ್ಬೋಧಗೊಳಿಸಿ ಆ ತತ್ತ್ವಗಳ ಒಂದೊಂದು ಅಂಶಗಳನ್ನು ಬೇರೆಯಾಗಿ ತೆಗೆದು ಪರಸ್ಪರ ಜೊತೆಯಾಗಿ ಸೇರಿಸಿದನು.

ಇಲ್ಲಿ ಚೇಷ್ಟಾರೂಪೇಣ ಎಂದರೆ ಜ್ಞಾನೇಚ್ಛಾಪ್ರಯತ್ನರೂಪದಿಂದ ಅಥವಾ ಕೇವಲ ಪ್ರಯತ್ನರೂಪದಿಂದ ಭಗವಂತ ತತ್ವಗಳಲ್ಲಿ ಪ್ರಶೇಶಿಸಿದನೆಂದು ವಲ್ಲಭಾಚಾರ್ಯರ ವ್ಯಾಖ್ಯಾನ. ಜ್ಞಾನೇಚ್ಛಾಪ್ರಯತ್ನರೂಪದಿಂದಲ್ಲ, ಅವುಗಳನ್ನು ಉದ್ಬೋಧಗೊಳಿಸುವ ಸ್ವಸಾಮರ್ಥ್ಯರೂಪದಿಂದ ಎನ್ನಬೇಕು. ಚೇಷ್ಟಾರೂಪೇಣ ಎಂದರೆ ಕಾಲರೂಪೇಣ ಎಂದು ಜೀವಗೋಸ್ವಾಮಿ ವ್ಯಾಖ್ಯಾನ. ಈ ಕಾಲರೂಪದಿಂದ ಪ್ರವೇಶವನ್ನು ಹಿಂದಿನ ಶ್ಲೋಕದಲ್ಲಿಯೆ ಹೇಳಿಯಾಗಿದೆ. ಅದರಿಂದ ಹೇಳುತ್ತಾರೆ-

ಸರ್ವಚೇಷ್ಟಕರೂಪೇಣ ಸ್ವಸಾಮರ್ಥ್ಯೇನ ಕೇಶವಃ ।
ತಾನಿ ಭಿನ್ನಾನಿ ತತ್ತ್ವಾನಿ ಯೋಜಯಾಮಾಸ ಚಾಂಶತಃ ॥ ಇತಿ ಚ ।

'ಚೇಷ್ಟಾರೂಪೇಣ' ಎಂದರೆ, ಚೇಷ್ಟಕವಾದ ಸ್ವಸಾಮರ್ಥ್ಯರೂಪದಿಂದ, ಶ್ರೀಹರಿ ಬೇರೆಬೇರೆ ತತ್ತ್ವಗಳಿಂದ ಒಂದೊಂದು ಅಂಶಗಳನ್ನು ತೆಗೆದು ಅವುಗಳನ್ನು ಒಂದುಗೂಡಿಸಿದ ಎಂದರ್ಥ.

ಚೇಷ್ಟಕರೂಪವೆಂದರೆ ಸುಪ್ತವಾದ ಜ್ಞಾನೇಚ್ಛಾಪ್ರಯತ್ನರೂಪವಾದ ಜೀವರ ಚೇಷ್ಟೆಯನ್ನು ಉದ್ಬೋಧಗೊಳಿಸುವ ಸ್ವತಃ ಚೇಷ್ಟಾರೂಪವಾದ ಭಗವಂತನ ರೂಪ. ಕೇವಲ ಚೇಷ್ಟೆಯ ರೂಪದಿಂದಲೇ ಭಗವಂತ ಪ್ರವೇಶಿಸಿದನೆಂದರೆ ಜೀವರಿಗೆ ಬೇರೆ ಚೇಷ್ಟೆಯೇ ಇಲ್ಲ, ಭಗವಂತನ ಚೇಷ್ಟೆಯೇ ಎಂದಾದೀತು.

* * *

ಭಗವಂತನ ಆವೇಶದಿಂದ ಸಶಕ್ತವಾದ ತತ್ತ್ವಗಳು ಭಗವಂತನ ಪ್ರೇರಣೆಯಿಂದಲೇ ಬ್ರಹ್ಮಾಂಡವನ್ನು ನಿರ್ಮಿಸಿದುವೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಪ್ರಬುದ್ಧಕರ್ಮಾ ದೈವೇನ ತ್ರಯೋವಿಂಶತಿಕೋ ಗಣಃ ।
ಪ್ರೇರಿತೋಽಜನಯತ್ ಸ್ವಾಭಿರ್ಮಾತ್ರಾಭಿರಧಿಪೂರುಷಮ್ ॥ ೪ ॥

ಭಗವಂತನ ಆವೇಶದಿಂದ ತಮ್ಮ ಶಕ್ತಿ ಜಾಗೃತವಾದೊಡನೆ ಆ ಇಪ್ಪತ್ತಮೂರು ತತ್ತ್ವಗಳು ಅವನ ಪ್ರೇರಣೆಯಿಂದಲೆ ಒಂದೊಂದಂಶದಿಂದ ಬ್ರಹ್ಮಾಂಡವನ್ನು ನಿರ್ಮಿಸಿದುವು.

ಹಿಂದಿನ ಶ್ಲೋಕದಲ್ಲಿ 'ಭಿನ್ನಂ ಸಂಯೋಜಯಾಮಾಸ' ಎಂದರೆ ಬೇರೆ ಎಲ್ಲ ವ್ಯಾಖ್ಯಾನಕಾರರೂ 'ಬೇರೆ ಬೇರೆಯಾಗಿದ್ದ ಎಲ್ಲ ತತ್ವಗಳನ್ನೂ ಒಂದುಗೂಡಿಸಿದ'ನೆಂದು ವಿವರಣೆ ನೀಡಿದ್ದಾರೆ. ಅದು ಸರಿಯಲ್ಲ. ತತ್ವಗಳನ್ನು ಒಂದುಗೂಡಿಸಿದ್ದಲ್ಲ. ಅವುಗಳ ಅಂಶಗಳನ್ನು ತೆಗೆದು ಆ ಅಂಶಗಳನ್ನು ಪರಸ್ಪರ ಒಂದುಗೂಡಿಸಿದನೆನ್ನಬೇಕಾಗಿತ್ತು. ಅದನ್ನು ಮೂಲಶ್ಲೋಕವು ಸ್ಪಷ್ಟ ಹೇಳದಿದ್ದರೂ 'ಯೋಜಯಾಮಾಸ ಚಾಂಶತಃ' ಎಂದು ಪ್ರಮಾಣಶ್ಲೋಕ ಹೇಳಿದೆ. ಇದು ಮೂಲಶ್ಲೋಕಕ್ಕೂ ಸಂಮತವೆ. ಏಕೆಂದರೆ ಅದರ ಮುಂದಿನ ಶ್ಲೋಕದಲ್ಲಿಯೆ 'ಮಾತ್ರಾಭಿರಧಿಪೂರುಷಂ' ಅಂಶಗಳಿಂದ ಬ್ರಹ್ಮಾಂಡಸೃಷ್ಟಿ ಎಂದಿದೆ. ಅಂಶಗಳಿಂದ ಬ್ರಹ್ಮಾಂಡಸೃಷ್ಟಿಯಾಗಬೇಕಾದರೆ ಅಂಶಗಳನ್ನೇ ಒಂದುಗೂಡಿಸಿರಬೇಕು ತಾನೆ? 'ಮಾತ್ರಾಭಿರಧಿಪೂರುಷಂ' ಎಂಬಲ್ಲಿ ಮಾತ್ರಾ ಎಂದರೆ ಪಂಚ ತನ್ಮಾತ್ರೆಗಳಲ್ಲ, ಅಂಶವೇ ತಾನೆ? ಇದು ಬೇರೆ ಎಲ್ಲ ವ್ಯಾಖ್ಯಾನಕಾರರಿಗೂ ಸಮ್ಮತವೇ. ಇದನ್ನು ಶ್ರೀಮದಾಚಾರ್ಯರು ಸೂಚಿಸುತ್ತಾರೆ–

ಮಾತ್ರಾಭಿರಂಶೈಃ ।

ಈ ಶ್ಲೋಕದಲ್ಲಿ 'ಮಾತ್ರಾಭಿಃ' ಎಂದರೆ ಅಂಶಗಳಿಂದ ಬ್ರಹ್ಮಾಂಡಸೃಷ್ಟಿ ಉಕ್ತವಾದ್ದರಿಂದ ಹಿಂದೆ ಹೇಳಿದ ತತ್ವಗಳ ಸಂಯೋಜನವೂ ಅವುಗಳ ಅಂಶಗಳ ಸಂಯೋಜನವೇ ಆಗಿದೆ.

* * *

ಬ್ರಹ್ಮಶರೀರರೂಪವಾದ ಬ್ರಹ್ಮಾಂಡಸೃಷ್ಟಿಯಾದ ಬಳಿಕ ಆ ಬ್ರಹ್ಮಾಂಡಾಂತರ್ಗತನಾದ ಭಗವಂತ ಬ್ರಹ್ಮನ ಹೃದಯದಲ್ಲಿ ಒಂದು ರೂಪದಿಂದ, ಹತ್ತು ಪ್ರಾಣನಿಯಾಮಕ ರೂಪಗಳಿಂದ, ಮೂರು ಅಧ್ಯಾತ್ಮಾದಿರೂಪಗಳಿಂದ ಪ್ರತಿಯೊಂದು ರೂಪದಲ್ಲಿಯೂ ಪ್ರಭುತ್ವ ಕ್ರಿಯಾಶಕ್ತಿ ಪ್ರಕೃತಿಗಳಿಂದ ಯುಕ್ತನಾಗಿ ಇರುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಸ ವೈ ವಿಶ್ವಸೃಜಾಂ ಗರ್ಭೋ ದೈವಕರ್ಮಾತ್ಮಶಕ್ತಿಮಾನ್ ।
ವಿಬಭಾಜಾತ್ಮನಾಽಽತ್ಮಾನಂ ಏಕಧಾ ದಶಧಾ ತ್ರಿಧಾ ॥ ೭ ॥

ಬ್ರಹ್ಮಾಂಡಕಾರಣವಾದ ತತ್ವಗಳನ್ನು ಉದರದಲ್ಲಿಟ್ಟುಕೊಂಡಿರುವ ಭಗವಂತ ಪ್ರಭುತ್ವ ಕ್ರಿಯಾಶಕ್ತಿ ಪ್ರಕೃತಿ ಈ ಮೂವರಿಂದ ಕೂಡಿಕೊಂಡು ಸದಾ ಇರುತ್ತಾನೆ. ಅವನು ಬ್ರಹ್ಮನ ವಿರಾಟ್ ಶರೀರವನ್ನು ನಿರ್ಮಿಸಿ ಬಳಿಕ ತನ್ನನ್ನು ಆ ಬ್ರಹ್ಮನ ಶರೀರದಲ್ಲಿ ಹೃದಯಸ್ಥವಾದ ಒಂದು ರೂಪ, ಪ್ರಾಣನಿಯಾಮಕ ದಶರೂಪ ಹಾಗೂ ಅಧ್ಯಾತ್ಮಾದಿ ಮೂರು ರೂಪಗಳಿಂದ ವಿಭಾಗಿಸಿಕೊಂಡನು.

ಇಲ್ಲ ದೈವಶಕ್ತಿ ಕರ್ಮಶಕ್ತಿ ಆತ್ಮಶಕ್ತಿಗಳೆಂದರೆ ಜ್ಞಾನಶಕ್ತಿ, ಕ್ರಿಯಾಶಕ್ತಿ, ಭೋಕ್ತೃಶಕ್ತಿಗಳೆಂದು ಶ್ರೀಧರವ್ಯಾಖ್ಯಾನ. ಭಗವತ್ಸಂಕಲ್ಪ ಮತ್ತು ಕರ್ಮರೂಪವಾದ ಆತ್ಮಶಕ್ತಿ ಎಂದು ವೀರರಾಘವವ್ಯಾಖ್ಯಾನ. ಜೀವ, ಪ್ರಾಣ ಮತ್ತು ಆಧ್ಯಾತ್ಮಿಕಾದಿಶಕ್ತಿಗಳೆಂದು ವಿಶ್ವನಾಥ ವ್ಯಾಖ್ಯಾನ. ಭಗವಂತ, ಕರ್ಮ, ಜೀವ ರೂಪವಾದ ಶಕ್ತಿಗಳೆಂದು ಶುಕದೇವವ್ಯಾಖ್ಯಾನ. ಎಲ್ಲರೂ ಬ್ರಹ್ಮಾಂಡ ಶರೀರಿಯಾದ ಸಮಷ್ಟಿಪುರುಷ ಈ ಮೂರುಶಕ್ತಿಗಳಿಂದ ಒಂದು ಹತ್ತು ಮತ್ತು ಮೂರು ರೂಪಗಳಿಂದ ವಿಭಾಗಗೊಂಡ ಎಂದಿದ್ದಾರೆ. ಇದು ಸರಿಯಲ್ಲ. ಸಮಷ್ಟಿಪುರುಷ ತನ್ನನ್ನೆ ತಾನು ವಿಭಾಗಿಸಿಕೊಳ್ಳುವುದು ಅಸಂಭಾವಿತ. ಮತ್ತು 'ಸ ವೈ' ಎಂದು ಹಿಂದೆ ಬ್ರಹ್ಮಾಂಡದ ಗರ್ಭೋದಕದಲ್ಲಿ ಸಾವಿರವರ್ಷ ಮಲಗಿದ್ದ ಭಗವಂತನನ್ನೇ ಹೇಳುವುದರಿಂದ ಸಮಷ್ಟಿಪುರುಷನನ್ನು ಗ್ರಹಿಸುವುದೂ ಅಸಂಗತವೇ ಆಗುತ್ತದೆ. ಅದರಿಂದ ದೈವಶಕ್ತಿ ಎಂದರೆ ಬ್ರಹ್ಮನ ವಿರಾಡ್‌ದೇಹದ ಹೃದಯದಲ್ಲಿ ನಿಯಾಮಕವಾದ ಭಗವಂತನ ರೂಪ. ದೈವವೆಂದರೆ ಭಗವಂತ. ಕರ್ಮಶಕ್ತಿ ಎಂದರೆ ಅವನ ಕ್ರಿಯಾಶಕ್ತಿ. ಆತ್ಮಶಕ್ತಿ ಎಂದರೆ ಪರಮಾತ್ಮನ ಭಾರ್ಯೆಯಾದ ಚೇತನಪ್ರಕೃತಿ ಮಹಾಲಕ್ಷ್ಮಿ. ಈ ಮೂವರಿಂದ ಯುಕ್ತನಾಗಿಯೆ ಭಗವಂತ ಸದಾ ಬ್ರಹ್ಮನ ಶರೀರದಲ್ಲಿ ಇರುತ್ತಾನೆ. ಅಲ್ಲಿ ಒಂದು ಹತ್ತು ಮೂರು ರೂಪಗಳನ್ನು ತಾಳುತ್ತಾನೆ ಎನ್ನಬೇಕು.

ಈಶ್ವರೋ ದೈವಮುದ್ದಿಷ್ಟಂ ಸರ್ವಸ್ಯಾಪಿ ಪ್ರಭುತ್ವತಃ ।

ಇತಿ ಚ ।

ಆತ್ಮಶಕ್ತಿಃ ಪ್ರಕೃತಿಃ ।

ಎಲ್ಲರಿಗೂ ಪ್ರಭುವಾಗಿ ಹೃದಯದಲ್ಲಿ ನೆಲೆಸಿರುವುದರಿಂದ ಭಗವಂತನೇ ದೈವಶಕ್ತಿ. ಎಂದೂ ಹೇಳಿದೆ. ಆತ್ಮಶಕ್ತಿ ಎಂದರೆ ಪ್ರಕೃತಿ.

ಎಲ್ಲ ದೇವತೆಗಳಿಗೂ ಅಂದರೆ ಚೇತನರಿಗೂ ಅಚೇತನಗಳಿಗೂ ಸ್ವಾಮಿ ಎಂಬ ಅರ್ಥದಲ್ಲಿ ದೇವಶಬ್ದದ ಮೇಲೆ ಅಣ್‌ಪ್ರತ್ಯಯ ಬಂದು 'ದೈವ' ಎಂಬ ರೂಪವಾಗುತ್ತದೆ. ಅದರಿಂದ ಸರ್ವಸ್ವಾಮಿ ಎಂದರ್ಥ. ಬ್ರಹ್ಮದೇವರ ಹೃದಯದಲ್ಲಿ ನೆಲೆಸಿದ ಈ ಸರ್ವಸ್ವಾಮಿ ಭಗವದ್ರೂಪ ಅವರನ್ನು ಮಾತ್ರವಲ್ಲದೆ ಅವರ ಅಧೀನದಲ್ಲಿರುವ ಸರ್ವಪ್ರಪಂಚವನ್ನೂ ಆಳುತ್ತದೆ ಎಂದು ಹೇಳಿದಂತಾಗುವುದು.

* * *

ವಾಸುದೇವನು ಮಾಯಾದೇವಿಯಲ್ಲಿ ಮಹದಾದಿ ತತ್ವಗಳನ್ನು ಹುಟ್ಟಿಸಿ, ಆ ತತ್ವಗಳಿಂದ ಬ್ರಹ್ಮಾಂಡವನ್ನು ಸೃಜಿಸಿ ಅದರೊಳಗೆ ಇನ್ನೊಂದು ರೂಪದಿಂದ ಒಂದು ಸಾವಿರ ವರ್ಷಕಾಲ ಮಲಗಿದ. ಪ್ರಳಯಜಲಶಾಯಿಯ ಮೊದಲನೆ ಪುರುಷಾ

ವತಾರವೆ ಈ ವಾಸುದೇವ. ಎರಡನೆ ಪುರುಷಾವತಾರ ಈ ಬ್ರಹ್ಮಾಂಡ ಗರ್ಭೋದಕಶಾಯಿರೂಪ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಏಷ ಹ್ಯಶೇಷಸತ್ವಾನಾಮಾತ್ಮಾಽಂಶಃ ಪರಮಾತ್ಮನಃ ।
ಆದ್ಯೋಽವತಾರೋ ಯತ್ರಾಸೌ ಭೂತಗ್ರಾಮೋ ವಿಭಾವ್ಯತೇ ॥ ೮ ॥

ಸರ್ವಸ್ವಾಮಿಯಾದ, ಪರಮಾತ್ಮನ ಅಂಶಭೂತನಾದ, ಅವನ ಮೊದಲನೆ ಪುರುಷಾವತಾರನಾದ ಯಾವ ವಾಸುದೇವನಿಂದ ಮಹದಾದಿತತ್ವಗಳಿಂದಾರಂಭಿಸಿ ಬ್ರಹ್ಮಾಂಡಪರ್ಯಂತ ಸೃಷ್ಟಿಯಾಯಿತೋ ಅವನೇ ಈ ಎರಡನೇ ಪುರುಷಾವತಾರ ತಾಳಿ ಗರ್ಭೋದಕದಲ್ಲಿ ಮಲಗಿದ.

ಇಲ್ಲಿ 'ಏಷ ಹಿ' ಎಂದರೆ ಸಮಷ್ಟಿಜೀವ, ಅಂದರೆ ಜೀವಸಮೂಹ. ಅದು ಪರಮಾತ್ಮನ ಅಂಶ. ಅದರಲ್ಲಿ ಪರಮಾತ್ಮನ ಪ್ರಾದುರ್ಭಾವವಾಗುವುದರಿಂದ ಅದೇ ಮೊದಲನೆ ಅವತಾರ ಎಂದು ಶ್ರೀಧರ ವ್ಯಾಖ್ಯಾನ. ಯೋಗಿಗಳು ಜೀವನನ್ನು ಅಂತರ್ಯಾಮಿ ಪರಮಾತ್ಮನೆಂದು ಐಕ್ಯೋಪಾಸನೆ ಮಾಡುವುದರಿಂದ ಈ ಸಮಷ್ಟಿಜೀವನೆ ಮೊದಲನೇ ಅವತಾರ ಎಂದು ವಿಶ್ವನಾಥಚಕ್ರವರ್ತಿವ್ಯಾಖ್ಯಾನ. ಆವೇಶಾವತಾರವೆಂದು ವೀರರಾಘವವ್ಯಾಖ್ಯಾನ. ಎಲ್ಲ ವ್ಯಾಖ್ಯಾನಕಾರರೂ ಬ್ರಹ್ಮಾಂಡಶರೀರನಾದ ಈ ಚತುರ್ಮುಖನನ್ನು ಎಲ್ಲ ಜೀವರ ಸಮೂಹರೂಪವೆಂದೇ ತಿಳಿದಿದ್ದಾರೆ. ಪ್ರತಿಯೊಬ್ಬ ಜೀವನು ಮರದಂತೆ, ಚತುರ್ಮುಖ ಎಲ್ಲ ಮರಗಳ ಸಮೂಹರೂಪವಾದ ಕಾಡಿನಂತೆ ಎಂದು ಅವರ ಅಭಿಪ್ರಾಯ. ಈ 'ಏಷ' ಶಬ್ದಾರ್ಥ ಪ್ರಮಾಣವಿರುದ್ಧವೆಂದು ಶ್ರೀಮದಾಚಾರ್ಯರು ಹೇಳುತ್ತಾರೆ–

ಪುರುಷೇಣಾತ್ಮಭೂತೇನೇತಿ ಯೋಽಂಡಮಸೃಜತ್ ಸ ಏಷ ಇತ್ಯುಕ್ತಃ ।
ಆದ್ಯೋಽವತಾರೋ ವಿಷ್ಣೋಸ್ತು ಪುರುಷೋ ನಾಮ ಕೀರ್ತಿತಃ ।
ಅಸೃಜತ್ ಸ ಮಹತ್ತತ್ತ್ವಂ ಸ ಏವಾಂಡಂ ಸಮಾವಿಶತ್ ।
ಸ ಬ್ರಹ್ಮಣೋ ಹೃದಿಸ್ಥತ್ವಾತ್ ಹೃದಯಂ ಚೇತಿ ಕೀರ್ತ್ಯತೇ ॥
ಇತಿ ಚ ॥

'ಏಷಃ' ಎಂದರೆ ಬ್ರಹ್ಮಾಂಡಗರ್ಭೋದಕಶಾಯಿಯಾದ ಎರಡನೇ ಪುರುಷಾವತಾರ. ಹಿಂದೆ ಪುರುಷೇಣಾತ್ಮಭೂತೇನ (ಭಾಗ.೩.೬.೪) ಎಂದು ವರ್ಣಿತನಾದವನು ಮಹದಾದಿಗಳನ್ನು ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದ ವಾಸುದೇವನೆಂಬ ಮೊದಲನೆ ಪುರುಷಾವತಾರ. ಅವನೇ ಈ ಎರಡನೆ ಪುರುಷಾವತಾರ ಎಂದು ಉಕ್ತನಾಗಿದ್ದಾನೆ ಏಕೆಂದರೆ ಇಬ್ಬರಲ್ಲಿ ಭೇದವಿಲ್ಲ, ಇಬ್ಬರೂ ಲಯೋದಕದಲ್ಲಿ ಮಲಗಿದ ಪರಮಾತ್ಮನ ಸ್ವರೂಪಾವತಾರಭೂತರು. ಇದಕ್ಕೆ ಪ್ರಮಾಣ ಹೀಗಿದೆ–'ವಿಷ್ಣುವಿನ ಮೊದಲನೆ

ಅವತಾರ ಪುರುಷನೆನಿಸಿದ್ದಾನೆ. ಅವನೇ ಮಹದಾದಿ ತತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಜಿಸಿದ್ದಾನೆ. ಅವನೇ ಎರಡನೆ ಪುರುಷಾವತಾರ ತಾಳಿ ಬ್ರಹ್ಮಾಂಡವನ್ನು ಪ್ರವೇಶಿಸಿ ಗರ್ಭೋದಕದಲ್ಲಿ ಮಲಗಿದ. ಮತ್ತು ಅವನೇ ಚತುರ್ಮುಖಬ್ರಹ್ಮನ ವಿರಾಟ್ ಶರೀರದ ಹೃದಯಲ್ಲಿ ಮೂರನೇ ಪುರುಷಾವತಾರ ತಾಳಿ ನೆಲೆಸಿದ್ದಾನೆ. ಹೃದಯದಲ್ಲಿ ಇರುವುದರಿಂದ ಅವನಿಗೆ 'ಹೃದಯ' ಎಂದೂ ಹೆಸರಿದೆ' ಎಂದು.

ಮೂಲಶ್ಲೋಕದಲ್ಲಿ 'ಏಷಃ ಆದ್ಯೋಽವತಾರಃ' ಎಂದರೆ ಗರ್ಭೋದಕ ಶಾಯಿರೂಪವೆ ಮೊದಲನೆ ಪುರುಷಾವತಾರವೆಂದು ತಪ್ಪಾಗಿ ತಿಳಿಯುವ ಸಂಭವವಿದೆ. 'ಪ್ರಥಮಂ ಮಹತಃ ಸೃಷ್ಟೃ ದ್ವಿತೀಯಂ ತ್ವಂಡಸಂಸ್ಥಿತಂ' ಎಂದು ಮುಂತಾದ ವಚನಗಳಿಗೆ ಇದು ವಿರುದ್ಧ. ಅದರಿಂದ 'ಏಷಃ ಅವತಾರಃ ಆದ್ಯಃ' ಎಂದರೆ ಈ ಎರಡನೇ ಅವತಾರವೂ ಆ ಮೊದಲನೆ ಅವತಾರವೂ ಒಂದೇ ಎಂದರ್ಥ. ಎರಡೂ ಪುರುಷಾವತಾರಗಳಲ್ಲಿ ಭೇದವಿಲ್ಲ ಎನ್ನುವಲ್ಲಿ ತಾತ್ಪರ್ಯ ಹೊರತು ಈ ಅವತಾರವೇ ಮೊದಲನೆಯದು ಎನ್ನುವುದಲ್ಲ.

'ಸ ಬ್ರಹ್ಮಣೋ ಹೃದಿಸ್ಥತ್ವಾತ್ ಹೃದಯಂ ಚೇತಿ ಕೀರ್ತ್ಯತೇ' ಎನ್ನುವುದು ಈ ಶ್ಲೋಕಕ್ಕೆ ಸಂಬಂಧಿಸಿರದಿದ್ದರೂ ಮುಂದಿನ ಶ್ಲೋಕದಲ್ಲಿ 'ಏಕಧಾ ಹೃದಯೇನ ಚ' ಎಂಬ ಅಂಶಕ್ಕೆ ವ್ಯಾಖ್ಯಾನರೂಪ ವಾಗುವುದರಿಂದ ವ್ಯರ್ಥವಲ್ಲ. ಮತ್ತು ಈ ಶ್ಲೋಕದಲ್ಲಿ ಎರಡನೆ ಅವತಾರವನ್ನು ಹೇಳಿದಾಗ ಮೂರನೆ ಅವತಾರಜಿಜ್ಞಾಸೆ ಉಂಟಾಗುವುದರಿಂದ ಹೃದಯಸ್ಥರೂಪವೆ ಮೂರನೆ ಅವತಾರವೆಂದು ಪ್ರಾಸಂಗಿಕವಾಗಿ ಹೇಳುವುದೂ ಉಚಿತವೆ.

* * *

ಬ್ರಹ್ಮನ ವಿರಾಟ್ ಶರೀರದಲ್ಲಿ ಶ್ರೀಹರಿ ಅಧ್ಯಾತ್ಮಾದಿ ಮೂರುರೂಪಗಳಿಂದಲೂ ಪ್ರಾಣಾಪಾನಾದಿ ದಶಪ್ರಾಣನಿಯಾಮಕವಾದ ಹತ್ತು ರೂಪ ಗಳಿಂದಲೂ ಮತ್ತು ಹೃದಯನಿಯಾಮಕವಾದ ಒಂದು ರೂಪದಿಂದಲೂ ನಿಯಾಮಕನಾಗಿ ನೆಲೆಸಿ ದನೆಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ–

ಸಾಧ್ಯಾತ್ಮಂ ಸಾಧಿದೈವಂ ಚ ಸಾಧಿಭೂತಮಿತಿ ತ್ರಿಧಾ ।
ವಿರಾಟ್ ಪ್ರಾಣೋ ದಶವಿಧ ಏಕಧಾ ಹೃದಯೇನ ಚ ॥ ೯ ॥

ವಿರಾಟ್‌ಬ್ರಹ್ಮಶರೀರದಲ್ಲಿ ನಿಯಾಮಕವಾದ ಭಗವದ್ರೂಪಗಳು ಅಧ್ಯಾತ್ಮ ಅಧಿದೈವ ಅಧಿಭೂತಗಳಲ್ಲಿರುವ ತತ್ವಾಭಿಮಾನಿಗಳೊಂದಿಗೆ ಇರುವುದಾಗಿ ಮೂರು ಬಗೆಯವುಗಳು. ಪ್ರಾಣಾಪಾನಾದಿಗಳು ಹತ್ತು ಬಗೆಯಾದ್ದರಿಂದ ಅವುಗಳಿಗೆ ನಿಯಾಮಕವಾಗಿ ಹತ್ತು ಬಗೆಯವುಗಳು ಮತ್ತು ಹೃದಯದಲ್ಲಿ ನಿಯಾಮಕವಾದ ಒಂದು ಬಗೆಯವುಗಳೆಂದು ವಿಭಾಗವಾಗಿ ಇರುತ್ತವೆ.

ಇಲ್ಲಿ ಅಧ್ಯಾತ್ಮವೆಂದರೆ ಇಂದ್ರಿಯಗಳು, ಅಧಿದೈವವೆಂದರೆ ಇಂದ್ರಿಯ ದೇವತೆಗಳು, ಅಧಿಭೂತವೆಂದರೆ ಇಂದ್ರಿಯಗಳ ಅಧಿಷ್ಠಾನ ಹಾಗೂ ವಿಷಯಗಳು, ಹೀಗೆ ಮೂರು ಬಗೆಯಾಗಿ ಸಮಷ್ಟಿಜೀವನಿಂದ ಅಭಿಮತವಾದ ವಿರಾಡ್ ದೇಹವು ತನ್ನನ್ನು ಮೂರುವಿಧವಾಗಿ ವಿಭಾಗಿಸಿಕೊಂಡಿತು ಎಂದು ಶ್ರೀಧರಾದಿವ್ಯಾಖ್ಯಾನ. ಅಧ್ಯಾತ್ಮ ಎಂದರೆ ವ್ಯಷ್ಟಿಜೀವರ ಸಮೂಹ. ಅಧಿದೈವವೆಂದರೆ ಇಂದ್ರಿಯ, ಇಂದ್ರಿಯದೇವತೆಗಳು ಮತ್ತು ಇಂದ್ರಿಯಾಧಿಷ್ಠಾನಗಳು, ಅಧಿಭೂತವೆಂದರೆ ಇಂದ್ರಿಯವಿಷಯಗಳು. ಹೀಗೆ ಸಮಷ್ಟಿಜೀವನು ತನ್ನನ್ನು ಅಂದರೆ ತನ್ನ ವಿರಾಟ್ ಶರೀರವನ್ನು ಮೂರಾಗಿ ವಿಭಾಗಿಸಿ ಕೊಂಡನೆಂದು ವೀರರಾಘವವ್ಯಾಖ್ಯಾನ. ದಶವಿಧ ಪ್ರಾಣ ಎಂದರೆ ಪ್ರಾಣವಾಯುವಿನ ದಶವಿಧ ವೃತ್ತಿಗಳೆಂದು ಶ್ರೀಧರಾದಿವ್ಯಾಖ್ಯಾನ. ಇವರಪ್ರಕಾರ 'ಹೃದಯೇನ ಏಕಧಾ' ಎಂದರೆ ಹೃದಯಾವಚ್ಛಿನ್ನ ಜೀವಚೈತನ್ಯರೂಪದಿಂದ ಒಂದು ಬಗೆ. ವೀರರಾಘವ ವ್ಯಾಖ್ಯಾನದಲ್ಲಿ ದಶಧಾ ಏಕಧಾ ಒಟ್ಟಿಗೆ ಹನ್ನೊಂದು ಇಂದ್ರಿಯಗಳೆಂದು ಹಿಂದೆ ಹೇಳಿದ ಅಧಿದೈವವನ್ನೇ ವಿಭಾಗಮಾಡಿ ಹೇಳಿದೆ. ಆದರಿಂದ ಒಂದು ಮೂರು ಹತ್ತು ಎಂಬುದು ವಾಸ್ತವದಲ್ಲಿ ಮೂರೇ ಅದರೊಳಗೇ ಒಂದು ಹತ್ತರ ಸೇರ್ಪಡೆ.

ಇಲ್ಲಿ ದಶವಿಧಪ್ರಾಣಗಳೆಂದರೆ ಪ್ರಾಣಾಪಾನಾದಿ ದಶವಾಯುಗಳೆನ್ನುವುದು ತಾತ್ಪರ್ಯಕಾರರಿಗೂ ಸಮ್ಮತವೆ. ಆದರೆ ದಶವಾಯುಗಳೇ ಅಲ್ಲ. ಅವುಗಳ ಅಭಿಮಾನಿಯಾದ ಮುಖ್ಯಪ್ರಾಣನ ಪ್ರಾಣಾಪಾನಾದಿ ಐದುರೂಪಗಳು ಮತ್ತು ನಾಗ ಕೂರ್ಮ ಕೃಕಲ ದೇವದತ್ತ ಧನಂಜಯ ಎಂಬ ಐದು ರೂಪಗಳು ಮತ್ತು ಈ ಹತ್ತುಮಂದಿಗೆ ನಿಯಾಮಕವಾದ ಭಗವಂತನ ಹತ್ತು ರೂಪಗಳು ಇವೆಲ್ಲವೂ ದಶಧಾವಿಭಾಗದಲ್ಲಿ ಸೇರುತ್ತವೆ ಎಂದು ತಾತ್ಪರ್ಯಕಾರರು ಹೇಳುತ್ತಾರೆ. ದಶಧಾ ಏಕಧಾ ಎಂದು ಹನ್ನೊಂದು ಇಂದ್ರಿಯಗಳನ್ನು ಪರಿಗಣಿಸುವುದೂ ತಾತ್ಪರ್ಯಕ್ಕೆ ವಿರುದ್ಧವೇನಲ್ಲ. ಆದರೆ ತಾತ್ಪರ್ಯದಲ್ಲಿ ಹೇಳಿಲ್ಲ. ವಿಜಯಧ್ವಜೀಯದಲ್ಲಿ ಹೇಳಿದೆ. ಶ್ರೀಧರಾದಿಗಳು ಹೃದಯವೆಂದರೆ ಹೃದಯಾವಚ್ಛಿನ್ನ ಜೀವ ಚೈತನ್ಯ ವೆಂದಿಟ್ಟುಕೊಂಡಿದ್ದರೂ ತಾತ್ಪರ್ಯಕಾರರು ಭಗವಂತನ ತೃತೀಯಪುರುಷಾ ವತಾರವಾದ 'ಹೃದಯ' ಎಂಬ ರೂಪವಿಟ್ಟುಕೊಂಡಿದ್ದಾರೆ.

ಅಧ್ಯಾತ್ಮವೆಂದರೆ ಇಂದ್ರಿಯಗಳಲ್ಲ, ಇಂದ್ರಿಯ ದೇವತೆಗಳು. ಅಧಿದೈವವೆಂದರೂ ಇಂದ್ರಿಯದೇವತೆಗಳ ಬೇರೆ ರೂಪಗಳು ಸ್ವರ್ಗಾದಿಲೋಕನಿಯಾಮಕಗಳು ವಿವಕ್ಷಿತವಾಗಿವೆ. ಹಾಗೇ ಅಧಿಭೂತವೆಂದರೂ ಪಂಚಭೂತಗಳಿಗೆ ನಿಯಾಮಕವಾದ ಆ ದೇವತೆಗಳ ಬೇರೆ ರೂಪಗಳು. ಎಲ್ಲ ತತ್ವಾಭಿಮಾನಿಗಳಿಗೂ ಅವರಲ್ಲಿ ನಿಯಾಮಕವಾದ ಭಗವದ್ರೂಪಗಳಿಗೂ ಹೀಗೆ ಶರೀರದಲ್ಲಿ, ಲೋಕಗಳಲ್ಲಿ ಹಾಗೂ

ಪಂಚ ಭೂತಗಳಲ್ಲಿ ಎಂದು ಮೂರು ಬಗೆಯ ರೂಪಗಳಿವೆ ಎಂದು 'ಅಧ್ಯಾತ್ಮಾದಿ ತ್ರಿಧಾ ಅಖಿಲಾಃ' ಎಂಬ ತಾತ್ಪರ್ಯದಲ್ಲಿ ಹೇಳಿದ ವ್ಯೋಮಸಂಹಿತಾವಚನ ಹೇಳುತ್ತದೆ.

ಪ್ರಾಣಾದಿಪಂಚಕಂ ಚೈವ ತಥಾ ನಾಗಾದಿಪಂಚಕಮ್ ।
ಸನಾಗಕೂರ್ಮಕೃಕಲದೇವದತ್ತಧನಂಜಯಾಃ ।
ಏವಂ ತು ದಶಧಾ ಪ್ರಾಣ ಅಧ್ಯಾತ್ಮಾದಿತ್ರಿಧಾಽಖಿಲಾಃ ॥
ಇತಿ ಚ ವ್ಯೋಮಸಂಹಿತಾಯಾಮ್ ॥

ಪ್ರಾಣಾದಿ ಪಂಚವಾಯುಗಳು ಮತ್ತು ನಾಗಾದಿ ಪಂಚವಾಯುಗಳು ಹೀಗೆ ಪ್ರಾಣವಾಯು ಹತ್ತು ಬಗೆಯದಾಗಿದೆ. ನಾಗನೊಂದಿಗೆ ಕೂರ್ಮ ಕೃಕಲ ದೇವದತ್ತ ಧನಂಜಯರೇ ನಾಗಾದಿಪಂಚವಾಯುಗಳು. ಇನ್ನು ಅಧ್ಯಾತ್ಮಾದಿ ಮೂರುವಿಧ ಯಾರೆಂದರೆ 'ಅಖಿಲಾಃ' ಎಲ್ಲ ತತ್ತ್ವಾಭಿಮಾನಿಗಳು ಮತ್ತು ಅವರಿಗೆ ನಿಯಾಮಕನಾದ ಭಗವಂತ. ' ಎಂದು ವ್ಯೋಮಸಂಹಿತೆಯಲ್ಲಿ ಉಕ್ತವಾಗಿದೆ.

ಇಲ್ಲಿ ಪ್ರಾಣಾದಿಪಂಚವಾಯುಗಳೆಂದರೆ ಪ್ರಾಣ ಅಪಾನ ವ್ಯಾನ ಉದಾನ ಸಮಾನ ಎಂಬುದು ಪ್ರಸಿದ್ಧವೆಂದು ಅದನ್ನು ಹೇಳದೆ, ನಾಗಾದಿ ಪಂಚಕಕ್ಕೆ ಮಾತ್ರ ಸನಾಗಕೂರ್ಮ ಎಂದು ಮುಂತಾಗಿ ವಿವರಣೆ ನೀಡಲಾಗಿದೆ. ಅದರಲ್ಲಿ ಪಾಠಭೇದವಿದೆ. ಕೆಲವೆಡೆ 'ತನ್ನಾಗಕೂರ್ಮಕೃಕಲದೇವದತ್ತಧನಂಜಯಾಃ' ಎಂದು ಪಾಠ. 'ತತ್' ಆ ನಾಗಾದಿಪಂಚಕ ಏನೆಂದರೆ ನಾಗ ಕೂರ್ಮ ಕೃಕಲ ದೇವದತ್ತ ಧನಂಜಯರು ಎಂದರ್ಥ. ಹೃಷೀಕೇಶತೀರ್ಥೀಯಪಾಠದಲ್ಲಿ ಈ ಪಂಕ್ತಿಯೇ ಕಾಣುವುದಿಲ್ಲ.

* * *

ಬ್ರಹ್ಮನ ವಿರಾಟ್ ಶರೀರದಲ್ಲಿ ಇಂದ್ರಿಯಗೋಲಕಗಳನ್ನು ಶ್ರೀಹರಿ ವ್ಯಕ್ತ ಮಾಡಿದ. ಇಂದ್ರಿಯದೇವತೆಗಳು ಇಂದ್ರಿಯಗಳೊಂದಿಗೆ ಅಲ್ಲಿ ಆಶ್ರಯ ಪಡೆದರು. ಆ ದೇವತೆಗಳಲ್ಲಿ ಲೋಕಪಾಲಕನಾದ ವಾಯುವೂ ಒಬ್ಬ. ಅವನು ತ್ವಗಿಂದ್ರಿಯಕ್ಕೆ ಅಭಿಮಾನಿ. ತ್ವಗಭಿಮಾನಿರೂಪದಿಂದ ತ್ವಗಿಂದ್ರಿಯಸಮೇತನಾಗಿ ಬ್ರಹ್ಮಶರೀರದಲ್ಲಿ ತ್ವಗಿಂದ್ರಿಯಗೋಲಕವಾದ ಚರ್ಮವನ್ನು ಪ್ರವೇಶಿಸುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ನಿರ್ಭಿನ್ನಾನ್ಯಥ ಚರ್ಮಾಣಿ ಲೋಕಪಾಲೋಽನಿಲೋಽವಿಶತ್ ।
ಪ್ರಾಣೇನಾಂಶೇನ ಸಂಸ್ಪರ್ಶಂ ಯೇನಾಸೌ ಪ್ರತಿಪದ್ಯತೇ ॥ ೧೬ ॥

ಬ್ರಹ್ಮನ ವಿರಾಟ್ ಶರೀರದಲ್ಲಿ ತ್ವಗಿಂದ್ರಿಯ ಸ್ಥಾನವಾದ ಚರ್ಮಗಳು ವ್ಯಕ್ತವಾದುವು. ಅವುಗಳಲ್ಲಿ ಲೋಕಪಾಲಕನಾದ ವಾಯುವು ತ್ವಗಿಂದ್ರಿಯಾಭಿಮಾನಿ ಪ್ರಾಣನಾಮಕರೂಪದಿಂದ ತ್ವಗಿಂದ್ರಿಯದೊಂದಿಗೆ ಪ್ರವೇಶಿಸಿದನು. ಆದರಿಂದ ಸ್ಪರ್ಶಜ್ಞಾನವನ್ನು ವಿರಾಡ್ ಬ್ರಹ್ಮ ಪಡೆಯುತ್ತಾನೆ.

ಕೋಣವಾಯು ವಾಯುವಿನ ಅಧಿದೈವರೂಪ. ಪ್ರಾಣ ಅಧ್ಯಾತ್ಮರೂಪ, ಸ್ಪರ್ಶಾದ್ಯಭಿಮಾನಿ ಅಪಾನಾದಿ ಅಧಿಭೂತರೂಪ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಇಂದ್ರಿಯ ಅಧ್ಯಾತ್ಮ, ವಿಷಯ ಅಧಿಭೂತ, ದೇವತೆ ಅಧಿದೈವವೆಂದಿದ್ದಾರೆ. ಇಂದ್ರಿಯದಲ್ಲಿ ಅಭಿಮಾನಿಯಾಗಿ ಅಧ್ಯಾತ್ಮರೂಪ, ವಿಷಯದಲ್ಲಿ ಅಭಿಮಾನಿಯಾಗಿ ಅಧಿಭೂತರೂಪ, ದೇವಲೋಕದಲ್ಲಿ ಪ್ರತ್ಯೇಕವಾಗಿ ಅಧಿದೈವರೂಪ ಎನ್ನಬೇಕು. ಇಲ್ಲದಿದ್ದರೆ 'ತ್ರಿಧಾ' ಮೂರುವಿಧ ಎನ್ನುವುದು ಕೂಡಲಾರದು. ಮೂರು ಬೇರೆಬೇರೆ ವಸ್ತುಗಳೆಂದಾಗುವುದು. ದಶವಿಧಪ್ರಾಣ ಎಂದರೆ ಪ್ರಾಣವಾಯುವಿನ ಹತ್ತು ವೃತ್ತಿಗಳೆಂದೂ ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ತಾತ್ಪರ್ಯದಲ್ಲಿ ಪ್ರಾಣದೇವನ ಹತ್ತುರೂಪಗಳು ಆ ವೃತ್ತಿಗಳಿಗೆ ಅಭಿಮಾನಿಗಳಾಗಿವೆ ಎನ್ನುತ್ತಾರೆ. ತ್ವಗಿಂದ್ರಿಯದೊಂದಿಗೆ ವಾಯುದೇವ ಚರ್ಮದಲ್ಲಿ ಪ್ರವೇಶಮಾಡಿದನೆಂದರೆ ವಾಯುದೇವನ ಶಕ್ತಿಯೆ ತ್ವಗಿಂದ್ರಿಯವೆಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ವೀರರಾಘವ ಮತ್ತು ಶುಕದೇವ ವ್ಯಾಖ್ಯಾನಗಳಲ್ಲಿ ಮಾತ್ರ ಇಂದ್ರಿಯ ಅಧಿಷ್ಠೇಯ, ದೇವತೆ ಅಧಿಷ್ಠಾತೃ ಎಂದು ಹೇಳಿದೆ. ತ್ವಗಿಂದ್ರಿಯಕ್ಕೆ ಪ್ರಾಣ ಎಂಬ ಹೆಸರು, ಪ್ರಾಣವಾಯುವಿನಂತೆ ಶರೀರ ವ್ಯಾಪಿಯಾದ್ದರಿಂದ ಬಂದಿದೆ ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳಿದ್ದಾರೆ. ಆದರೂ ಹಿಂದೆ ಹೇಳಿದ ದಶವಿಧವಾಯುವೂ ಇಲ್ಲಿ ಹೇಳುವ ತ್ವಗಿಂದ್ರಿಯರೂಪ ವಾಯುವೂ ಒಂದೆಯೋ ಅಥವಾ ಬೇರೆಯೋ ಎಂದು ವಿಚಾರಮಾಡಿಲ್ಲ. ಅದಕ್ಕೆ ತಾತ್ಪರ್ಯದಲ್ಲಿ ಹೇಳುತ್ತಾರೆ–

ಪ್ರಾಣಃ ಪ್ರಥಮಜೋ ಯಸ್ತು ಪ್ರಧಾನೋ ವಾಯುರೀರಿತಃ ।
ತ್ವಗಾತ್ಮಾದ್ಯಾಸ್ತು ತತ್ಪುತ್ರಾ ದ್ವಿಧಾಭೂತಮುದಾಹೃತಮ್ ॥
ಇತಿ ತತ್ವನಿರ್ಣಯೇ ॥

ದಶವಿಧವಾಯು ಎನಿಸಿದ ಪ್ರಾಣನು ಮೊದಲು ಹುಟ್ಟಿದ ಪ್ರಧಾನವಾಯುವೆ. ತ್ವಗಿಂದ್ರಿಯ ಸ್ಪರ್ಶಾದಿಗಳಿಗೆ ಅಭಿಮಾನಿಗಳಾದ ವಾಯುಗಳು ಅವನ ಪುತ್ರರು. ಹೀಗೆ ಪ್ರಾಣಾದಿಗಳು ಪ್ರಧಾನ ಮತ್ತು ಅವನ ಪುತ್ರರೆಂದು ಎರಡು ವಿಧವಾಗಿದ್ದಾರೆ ಎಂದು ತತ್ವನಿರ್ಣಯದಲ್ಲಿ ಹೇಳಿದೆ.

* * *

ಮನಸ್ಸೆಂಬ ಒಂದು ಇಂದ್ರಿಯವು ಮನಸ್ ಬುದ್ಧಿ ಅಹಂಕಾರ ಚಿತ್ತ ಎಂದು ನಾಲ್ಕು ವಿಧವಾಗಿದೆ. ಅವುಗಳಿಗೆ ಕ್ರಮವಾಗಿ ಚಂದ್ರ, ಬೃಹಸ್ಪತಿ, ರುದ್ರ, ಬ್ರಹ್ಮರು ಅಭಿಮಾನಿಗಳು. ಹೃದಯ, ಆತ್ಮನಾಡಿ, ಅಹಂನಾಡಿ, ಸತ್ವನಾಡಿಗಳು ಈ ಮನಃಪ್ರಭೇದಗಳಿಗೆ ಗೋಲಕಗಳು. ಈ ಗೋಲಕಗಳು ಬ್ರಹ್ಮನ ವಿರಾಡ್ ದೇಹದಲ್ಲಿ ವ್ಯಕ್ತವಾದಾಗ ಮನಃಪ್ರಭೇದಗಳೊಂದಿಗೆ ಈ ದೇವತೆಗಳು ಪ್ರವೇಶಿಸಿದರೆಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ.

ಆತ್ಮಾನಂ ಚಾಸ್ಯ ನಿರ್ಭಿಣ್ಣಂ ವಾಚಸ್ಪತಿರಥಾವಿಶತ್ ।
ಬುದ್ಧ್ಯಾ ಸ್ವಾಂಶೇನ ಯೇನಾಸೌ ನಿಶ್ಚಯಂ ಪ್ರತಿಪದ್ಯತೇ ॥ ೨೪ ॥

ಅಹಂ ಚಾಸ್ಯ ವಿನಿರ್ಭಿಣ್ಣಮಭಿಮಾನೋಽವಿಶತ್ ಪದಮ್ ।
ಕರ್ತ್ರಾ ಸ್ವಾಂಶೇನ ಯೇನಾಸೌ ಕರ್ತವ್ಯಂ ಪ್ರತಿಪದ್ಯತೇ ॥ ೨೫ ॥

ಸತ್ತ್ವಂ ಚಾಸ್ಯ ವಿನಿರ್ಭಿಣ್ಣಂ ಮಹಾನ್ ಧಿಷ್ಣ್ಯಮುಪಾವಿಶತ್ ।
ಚಿತ್ತೇನಾಂಶೇನ ಯೇನಾಸೌ ವಿಜ್ಞಾನಂ ಪ್ರತಿಪದ್ಯತೇ ॥ ೨೬ ॥

ಆತ್ಮನಾಡಿ ವ್ಯಕ್ತವಾದಾಗ ಅದನ್ನು ಬೃಹಸ್ಪತಿಯು ಒಂದು ಅಂಶದಿಂದ ಬುದ್ಧಿಯೊಂದಿಗೆ ಪ್ರವೇಶಿಸಿದನು. ಅದರಿಂದ ಇದು ಹೀಗೆಯೆ ಎಂಬ ನಿಶ್ಚಯರೂಪವಾದ ಜ್ಞಾನ ಉಂಟಾಗುವುದು. ಅಹಂನಾಡಿ ವ್ಯಕ್ತವಾದಾಗ ಅದನ್ನು ರುದ್ರನು ಒಂದಂಶದಿಂದ ಅಹಂಕಾರದೊಂದಿಗೆ ಪ್ರವೇಶಿಸಿದನು. ಅದರಿಂದ ನಾನಿದನ್ನು ಮಾಡಬೇಕು ಎಂಬ ಜ್ಞಾನ ಉಂಟಾಗುತ್ತದೆ. ಸತ್ವನಾಡಿ ವ್ಯಕ್ತವಾದಾಗ ಅದನ್ನು ಬ್ರಹ್ಮನು ಒಂದಂಶದಿಂದ ಚಿತ್ತದೊಂದಿಗೆ ಪ್ರವೇಶಿಸಿದನು. ಅದರಿಂದ ವಿಶೇಷತತ್ವಜ್ಞಾನ ಉಂಟಾಗುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಆತ್ಮಾನಂ ಚಾಸ್ಯ ನಿರ್ಭಿಣ್ಣಂ' ಎಂದಾದ ಬಳಿಕ 'ಅಭಿಮಾನೋಽವಿಶತ್ ಪದಂ' ಎನ್ನುತ್ತ ನಡುವಿನ ಭಾಗವನ್ನೆ ಬಿಟ್ಟಿದ್ದಾರೆ. 'ಸತ್ವ ಚಾಸ್ಯ ವಿನಿರ್ಭಿಣ್ಣಂ' ಎಂಬ ಶ್ಲೋಕದಲ್ಲಿಯೇ ಸತ್ವವೆಂದರೆ ಬುದ್ಧಿ ಚಿತ್ತಗಳಿಗೆರಡಕ್ಕೆ ಆಶ್ರಯವಾದ ಹೃದಯದ ಎರಡು ಭಾಗಗಳೆಂದಿಟ್ಟುಕೊಂಡಿದ್ದಾರೆ. ವಸ್ತುತಃ ಸತ್ವ ಅಹಂ ಆತ್ಮ ಎಂದು ನಾಡಿಗಳ ಹೆಸರುಗಳು. ಹೃದಯಭಾಗಗಳಲ್ಲ.

ಅಹಂ ಸತ್ವಮಿತಿ ದ್ವೇಧಾ ಬ್ರಹ್ಮನಾಡ್ಯಾ ಅವಾಂತರಮ್ ।
ಕರ್ತೃನಾಮಾ ಹ್ಯಹಂಕಾರಸ್ತ್ವಹಂನಾಡ್ಯಾಂ ವ್ಯವಸ್ಥಿತಃ ।
ಸತ್ವನಾಡ್ಯಾಂ ತಥಾ ಚಿತ್ತಂ, ಅಭಿಮಾನೋ ಹರಸ್ತಥಾ ॥

ಅಹಂನಾಡ್ಯಾಂ, ಸತ್ವನಾಡ್ಯಾಂ ಬ್ರಹ್ಮಾ ಚೈವ ವ್ಯವಸ್ಥಿತಃ ।
ಆತ್ಮನಾಡ್ಯಾಂ ತಥಾ ಬುದ್ಧಿಸ್ತತ್ರಸ್ಥಶ್ಚ ಬೃಹಸ್ಪತಿಃ ॥ ಇತಿ ॥

ಅಹಂನಾಡಿ ಸತ್ವನಾಡಿ ಎಂದು ಬ್ರಹ್ಮನಾಡಿಯ ಪ್ರಭೇದಗಳು. ಅಹಂಕಾರವು ನಾನೇ ಕರ್ತನೆಂದು ಅಭಿಮಾನ ಉಂಟುಮಾಡುವುದರಿಂದ ಅಹಂಕಾರಕ್ಕೆ ಕರ್ತೃ ಎಂದು ಇನ್ನೊಂದು ಹೆಸರು. ಈ ಅಹಂಕಾರ ಅಹಂಕಾರತತ್ವವಲ್ಲ, ಮನಸ್ಸಿನ ಪ್ರಭೇದ. ಇದು ಅಹಂನಾಡಿಯಲ್ಲಿರುತ್ತದೆ. ಸತ್ವನಾಡಿಯಲ್ಲಿ ಚಿತ್ತ ಎಂಬ ಮನಸ್ಸಿನ ಪ್ರಭೇದವಿದೆ. ಅಹಂನಾಡಿಯಲ್ಲಿರುವ ಅಭಿಮಾನ ಎಂದರೆ ರುದ್ರ, ಅಹಂಕಾರಾಭಿಮಾನಿ. ಸತ್ವನಾಡಿಯಲ್ಲಿರುವ ಚಿತ್ತಕ್ಕೆ ಅಭಿಮಾನಿ ಬ್ರಹ್ಮ. ಆತ್ಮನಾಡಿಯಲ್ಲಿರುವುದು ಬುದ್ಧಿ ಎಂಬ ಮನಃಪ್ರಭೇದ. ಅದರಲ್ಲಿ ಅಭಿಮಾನಿಯಾಗಿರುವವನು ಬೃಹಸ್ಪತಿ ಎಂದು ಹೇಳಿದೆ.

ಇಲ್ಲಿ 'ಕರ್ತೃನಾಮಾ ಹ್ಯಹಂಕಾರಃ' ಅಹಂಕಾರಕ್ಕೆ ಕರ್ತೃ ಎಂದು ಹೆಸರು ಎಂದಿರುವುದರಿಂದ ಬೇರೆ ವ್ಯಾಖ್ಯಾನಕಾರರು 'ಕರ್ತ್ರಾ ಸ್ವಾಂಶೇನ' ಎಂಬಲ್ಲಿ 'ಕರ್ಮಣಾಂಶೇನ' ಎಂದು ಪಾಠವಿಟ್ಟುಕೊಂಡಿರುವುದು ಸರಿಯಲ್ಲ ಎನ್ನುವುದು ಸ್ಪಷ್ಟ.

* * *

ಬ್ರಾಹ್ಮಣಾದಿ ವರ್ಣಗಳ ಅಭಿಮಾನಿ ದೇವತೆಗಳು ವಿರಾಡ್ ಬ್ರಹ್ಮನ ಶರೀರದಿಂದ ಹುಟ್ಟಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ಮುಖತೋಽವರ್ತತ ಬ್ರಹ್ಮ ಪುರುಷಸ್ಯ ಕುರೂದ್ವಹ ।
ಯತ್ರೋನ್ಮುಖತ್ವಾದ್ ವರ್ಣಾನಾಂ ಮುಖ್ಯೋಽಭೂದ್ ಬ್ರಾಹ್ಮಣೋ ಗುರುಃ ॥ ೩೦ ॥

ಬಾಹುತೋಽವರ್ತತ ಕ್ಷತ್ರಂ ಕ್ಷತ್ರಿಯಸ್ತದನುವ್ರತಃ ।
ಯೋ ಜಾತಸ್ತ್ರಾಯತೇ ವರ್ಣಾನ್ ಪುರುಷಾನ್ ಕಂಟಕಕ್ಷತಾತ್ ॥ ೩೧ ॥

ವಿಶೋಽವರ್ತಂತ ತಸ್ಯೋರ್ವೋರ್ಲೋಕವೃತ್ತಿಕರೀರ್ವಿಭೋಃ ।
ವೈಶ್ಯಸ್ತದುದ್ಭವೋ ವಾರ್ತಾಂ ನೃಣಾಂ ಯಃ ಸಮವರ್ತಯತ್ ॥ ೩೨ ॥

ಪದ್ಭ್ಯಾಂ ಭಗವತೋ ಜಜ್ಞೇ ಶುಶ್ರೂಷಾ ಕರ್ಮಸಿದ್ಧಯೇ ।
ತಸ್ಯಾಂ ಜಾತಃ ಪುರಾ ಶೂದ್ರೋ ಯದ್‌ವೃತ್ತ್ಯಾ ತುಷ್ಯತೇ ಹರಿಃ ॥ ೩೩ ॥

ವಿದುರ, ವಿರಾಡ್ ಬ್ರಹ್ಮನ ಮುಖದಿಂದ ಬ್ರಾಹ್ಮಣಜಾತ್ಯಭಿಮಾನಿಯಾದ ಭೃಗು ಮುನಿ ಹುಟ್ಟಿದ, ಮತ್ತು ವೇದಾಭ್ಯಾಸವೆಂಬ ಬ್ರಾಹ್ಮಣವೃತ್ತಿಯೂ ವ್ಯಕ್ತವಾಯಿತು ವೇದಾಭ್ಯಾಸಕ್ಕೆ ಬ್ರಾಹ್ಮಣ ಎಲ್ಲವರ್ಣಗಳಿಗೂ ಮುಖ್ಯಗುರು. ಏಕೆಂದರೆ ಅವನು ಮುಖದ ವ್ಯಾಪಾರವಾದ ವೇದಾಧ್ಯಾಪನವನ್ನೇ ವೃತ್ತಿಯನ್ನಾಗಿ ಮಾಡಿಕೊಂಡವನು. ವಿರಾಡ್‌ಬ್ರಹ್ಮನ ಬಾಹುಗಳಿಂದ ಕ್ಷತ್ರಿಯ ಜಾತ್ಯಭಿಮಾನಿ ಸ್ವಾಯಂಭುವ ಮನುವೂ

ಕ್ಷಾತ್ರವೃತ್ತಿಯೂ ಉಂಟಾಯಿತು. ಬಾಹುವಿನಿಂದ ಹುಟ್ಟಿದ್ದರಿಂದ ಅವನು ಮೂರು ವರ್ಣದವರನ್ನೂ ಶತ್ರುರೂಪ ಕಂಟಕಗಳಿಂದಾಗುವ ಕ್ಷತಿಯಿಂದ ತ್ರಾಣ, ರಕ್ಷಣ ಮಾಡುತ್ತಾನೆ. ಅದರಿಂದ ಕ್ಷತ್ರವನ್ನು ಅಂದರೆ ಕ್ಷಾತ್ರವೃತ್ತಿಯನ್ನನುಸರಿಸುವುದರಿಂದ ಕ್ಷತ್ರಿಯನೆನಿಸುತ್ತಾನೆ. ವಿರಾಡ್‌ಬ್ರಹ್ಮನ ತೊಡೆಗಳಿಂದ ವೈಶ್ಯಜಾತ್ಯಭಿಮಾನಿಯಾದ ವಾಸ್ತುದೇವನೂ ಲೋಕದ ಬದುಕಿಗೆ ಕಾರಣವಾದ ಕೃಷ್ಯಾದಿವೃತ್ತಿಯೂ ಉಂಟಾಯಿತು. ತೊಡೆಗಳಿಂದ ಹುಟ್ಟಿದ್ದರಿಂದ ಕೈಗಳಿಗೂ ತೊಡೆಗಳಿಗೂ ಸಾಮೀಪ್ಯವಿರುವುದರಿಂದ ಕೈಗಳಿಂದ ಮಾಡುವ ವ್ಯಾಪಾರ ವಾಣಿಜ್ಯ ಕೃಷಿ ಮುಂತಾದುವನ್ನು ವೃತ್ತಿಯಾಗಿ ಮಾಡಿಕೊಂಡನು. ವಿಟ್ ಎಂದರೆ ಕೃಷ್ಯಾದಿವ್ಯಾಪಾರ. ಅದನ್ನು ಮಾಡುವುದರಿಂದ ವೈಶ್ಯನೆನಿಸಿದನು. ವಿರಾಡ್‌ಬ್ರಹ್ಮನ ಪಾದಗಳಿಂದ ಶೂದ್ರಜಾತ್ಯಭಿಮಾನಿಯಾದ ಕೃತಿದೇವನೂ, ತ್ರಿವರ್ಣದವರ ಸೇವಾರೂಪವಾದ ವೃತ್ತಿಯೂ ಉಂಟಾಯಿತು. ಹರಿಗೆ ಸಂತೋಷ ಉಂಟುಮಾಡುವ ಈ ಸೇವಾಕರ್ಮದಿಂದಲೆ ಶೂದ್ರಜನ್ಮಕ್ಕೆ ಕಾರಣವಾದ ಪೂರ್ವ ಪುಣ್ಯ ಕರ್ಮಕ್ಕೆ ಸಫಲತೆ ಉಂಟಾಗುತ್ತದೆ.

ಇಲ್ಲಿ ಬ್ರಾಹ್ಮಣ ಹುಟ್ಟಿದ, ಕ್ಷತ್ರಿಯ ಹುಟ್ಟಿದ, ಎಂದು ಮುಂತಾಗಿ ಹೇಳುವುದಾದರೆ

ಯಾವ ಬ್ರಾಹ್ಮಣ ಯಾವ ಕ್ಷತ್ರಿಯ ಹುಟ್ಟಿದ ಎಂದು ಪ್ರಶ್ನೆ ಬರುತ್ತದೆ. ಎಲ್ಲ ಬ್ರಾಹ್ಮಣರೂ ಎಲ್ಲ ಕ್ಷತ್ರಿಯರೂ ಒಮ್ಮೆಲೆ ಹುಟ್ಟುವುದಂತೂ ಅಶಕ್ಯ. ಬೇರೆ ವ್ಯಾಖ್ಯಾನಕಾರರು ಯಾರೂ ಈ ಪ್ರಶ್ನೆಯನ್ನು ಎತ್ತಿಕೊಂಡೇ ಇಲ್ಲ. ಅದಕ್ಕೆ ಬ್ರಾಹ್ಮಣಾದಿಜಾತ್ಯಭಿಮಾನಿ ಹುಟ್ಟಿದನೆಂದು ಹೇಳಬೇಕು. ಇನ್ನೊಂದು ಪ್ರಶ್ನೆ, ಇಲ್ಲಿ ಪುರುಷಸ್ಯ, ಭಗವತಃ ಎಂದು ಭಗವಂತನಿಂದ ಬ್ರಾಹ್ಮಣಾದಿ ಉತ್ಪತ್ತಿಯನ್ನು ಹೇಳಿದೆ. ಆದರೆ ಇದು ವಿರಾಡ್ ಬ್ರಹ್ಮನ ಅವಯವಗಳಿಂದ ಉತ್ಪತ್ತಿಯನ್ನು ಹೇಳುವ ಸಂದರ್ಭ. ಅದರಿಂದ ಅಸಂಗತಿ. ಪುರುಷ ಭಗವತ್ ಶಬ್ದಗಳಿಂದ ಬ್ರಹ್ಮನನ್ನೇ ಇಟ್ಟುಕೊಂಡರೂ ಪುರುಷಸೂಕ್ತದಲ್ಲಿ ಪರಮಾತ್ಮನ ಅವಯವಗಳಿಂದ ಉತ್ಪತ್ತಿ ಹೇಳಿದ್ದು ಕೂಡಲಾರದು. ಮತ್ತು ಬೇರೆ ಪುರಾಣಗಳಲ್ಲಿ ರುದ್ರದೇವನಿಂದಲೂ ವಾಯುದೇವನಿಂದಲೂ ಹೀಗೆ ಉತ್ಪತ್ತಿ ಹೇಳಿದ್ದಿದೆ. ಈ ಪ್ರಶ್ನೆಗಳನ್ನು ಬೇರೆ ವ್ಯಾಖ್ಯಾನಕಾರರು ಎತ್ತಿಕೊಂಡಿಲ್ಲ. ಎಲ್ಲಕ್ಕೂ ಹೀಗೆ ಉತ್ತರ-

ಬ್ರಹ್ಮಾಭಿಮಾನೀ ತು ಭೃಗುರಜನಿ ಬ್ರಹ್ಮಣೋ ಮುಖಾತ್ ।
ಕ್ಷತ್ರಾಭಿಮಾನೀ ತು ಮನುರ್ಬ್ರಹ್ಮಬಾಹ್ವೋರಜಾಯತ ।
ಊರ್ವೋರ್ವಿಡಭಿಮಾನೀ ಚ ವಾಸ್ತುಃ ಪಾದಾತ್ ಕೃತಿಸ್ತಥಾ ॥

ಏತೇ ಪೂರ್ವಂ ಹರೇರ್ಜಾತಾ ಬ್ರಹ್ಮಣಸ್ತದನಂತರಮ್ ।
ಏವಂ ರುದ್ರಾಚ್ಚ ವಾಯೋಶ್ಚ ತದಂತಸ್ಥಹರೇರ್ಯತಃ ॥

ಇತಿ ಷಾಡ್ಗುಣ್ಯೇ ॥

ಬ್ರಹ್ಮನ ಮುಖದಿಂದ ಬ್ರಾಹ್ಮಣಜಾತ್ಯಭಿಮಾನಿ ಭೃಗುಮುನಿ ಹುಟ್ಟಿದನು. ಬ್ರಹ್ಮನ ಬಾಹುಗಳಿಂದ ಕ್ಷತ್ರಿಯಜಾತ್ಯಭಿಮಾನಿಯಾದ ಸ್ವಾಯಂಭುವ ಮನು ಜನಿಸಿದನು. ಬ್ರಹ್ಮನ ತೊಡೆಗಳಿಂದ ವೈಶ್ಯಜಾತ್ಯಭಿಮಾನಿ ವಾಸ್ತುದೇವನೂ ಪಾದದಿಂದ ಶೂದ್ರಜಾತ್ಯಭಿಮಾನಿ ಕೃತಿ ದೇವನೂ ಜನಿಸಿದರು. ಇವರೆಲ್ಲರೂ ಹಿಂದೆ ಹರಿಯಿಂದ ಹೀಗೇ ಹುಟ್ಟಿದ್ದರು, ಬಳಿಕ ಬ್ರಹ್ಮನಿಂದಲೂ ಜನಿಸಿದರು. ಹೀಗೇ ರುದ್ರನಿಂದಲೂ ವಾಯುದೇವನಿಂದಲೂ ಹುಟ್ಟಿದರು. ಬೇರೆ ಬೇರೆ ರೂಪಗಳಿಂದ ಅನೇಕ ಬಾರಿ ಹುಟ್ಟುವುದರಿಂದ ವಿರೋಧವಿಲ್ಲ. ಮತ್ತು ಬ್ರಹ್ಮಾದಿಗಳಿಂದ ಉತ್ಪತ್ತಿಯನ್ನು ಹೇಳಿದರೂ ಅದು ಬ್ರಹ್ಮಾದಿಗಳ ಒಳಗಿರುವ ಹರಿಯೊಬ್ಬನಿಂದಲೆ ಉತ್ಪತ್ತಿ. ಅದರಿಂದಲೂ ವಿರೋಧವಿಲ್ಲ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಉಕ್ತವಾಗಿದೆ.

* * *

ಭಗವಂತನು ಬ್ರಹ್ಮಾಂಡ ಸೃಷ್ಟಿಮಾಡಿ ಅದರೊಳಗೆ ಬ್ರಹ್ಮನ ಶರೀರದಿಂದ ಎಲ್ಲವನ್ನೂ ಸೃಷ್ಟಿ ಮಾಡಿದ ವೈಖರಿಯನ್ನು ಪೂರ್ತಿಯಾಗಿ ತಿಳಿಯುವುದೇ ಅಶಕ್ಯ, ಇನ್ನು ಅದನ್ನು ಪೂರ್ತಿ ವರ್ಣಿಸಲು ಹೊರಡುವುದಂತೂ ಅತ್ಯಂತ ಅಶಕ್ಯವೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಏತತ್ ಕ್ಷತ್ತರ್ಭಗವತೋ ದೈವಕರ್ಮಾತ್ಮರೂಪಿಣಃ ।
ಕಃ ಶ್ರದ್ದಧ್ಯಾದುದಾಹರ್ತುಂ ಯೋಗಮಾಯಾಬಲೋದಯಮ್ ॥
॥ ೩೫ ॥

ವಿದುರ, ಪ್ರಪಂಚನಿರ್ಮಾಣಕಾರ್ಯದಲ್ಲಿ ಸರ್ವದೇವೋತ್ತಮ, ಪ್ರಪಂಚದ ಮೂಲಕರ್ತ, ಸರ್ವತ್ರವ್ಯಾಪಕನಾದ ಭಗವಂತನ ಇಚ್ಛಾಶಕ್ತಿಯ ಪ್ರಸರಣವನ್ನು ಪೂರ್ತಿ ಹೇಳಲು ಯಾರು ಮನಸ್ಸು ಮಾಡಿಯಾನು?

ಇಲ್ಲಿ 'ದೈವಕರ್ಮಾತ್ಮರೂಪಿಣಃ' ಎಂದರೇನು? ದೈವವೆಂದರೆ ಕಾಲ, ಕರ್ಮವೆಂದರೆ ಜೀವರ ಅದೃಷ್ಟ, ಆತ್ಮ ಎಂದರೆ ಅವರ ಸ್ವಭಾವ ಇವೆಲ್ಲವೂ ಭಗವಂತನ ಅಧೀನವಾದ್ದರಿಂದ ಅವನ ರೂಪಗಳೆನಿಸುತ್ತವೆ. ಅಂಥ ರೂಪ ಉಳ್ಳ ಭಗವಂತ ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಾರೆ. ವೀರರಾಘವ ವ್ಯಾಖ್ಯಾನದಲ್ಲಿ ಕಾಲ ಕರ್ಮ ಸ್ವಭಾವಗಳು ಭಗವಂತನ ಶರೀರಗಳು ಅಂಥ ಶರೀರ ಉಳ್ಳವನೆಂದಿದ್ದಾರೆ. ಆದರೆ ಹಾಗೆ ಹೇಳಲು ಪ್ರಮಾಣದ ಆಧಾರವಿಲ್ಲ. ಅದರಿಂದ ಹೀಗೆ ಹೇಳಬೇಕು–

ಅಧಿಕತ್ವಾದ್ ದೇವಶಬ್ದೋ ದೈವತೇಷ್ವಧಿಕೋ ಯತಃ ।
ದೈವಂ ಹರಿಃ ಕರ್ಮ ಮೂಲಕೃತಿರಿತ್ಯೇವ ಭಣ್ಯತೇ ।
ವ್ಯಾಪ್ತತ್ವಾದಾತ್ಮಶಬ್ದಶ್ಚ ಶ್ರೀಪತಿತ್ವಾಚ್ಚ ಮಾಧವಃ ॥ ಇತಿ ಚ ।

ದೇವತೆಗಳು ಋಷ್ಯಾದಿಗಳಿಗಿಂತ ಶ್ರೇಷ್ಠರಾದ್ದರಿಂದ ಅವರಿಗೆ 'ದೇವ' ಎಂದು ಹೆಸರು. ಅಂಥಹ ದೇವತೆಗಳಲ್ಲಿಯೂ ಶ್ರೇಷ್ಠನಾದ್ದರಿಂದ ಹರಿ ದೈವ ಎನಿಸುತ್ತಾನೆ. ಮೂಲಕರ್ತನಾದ್ದರಿಂದ ಕರ್ಮ ಎಂದೂ ಕರೆಸಿಕೊಳ್ಳುತ್ತಾನೆ. ಸರ್ವತ್ರ ವ್ಯಾಪಕನಾದ್ದರಿಂದ ಆತ್ಮ ಎಂದೂ ಹೆಸರು. ಶ್ರೀಪತಿಯಾದ್ದರಿಂದ ಮಾಧವನೆಂದೂ ಕರೆಸಿಕೊಳ್ಳುತ್ತಾನೆ ಎಂದು ಹೇಳಿದೆ.

ದೇವಶಬ್ದದ ಮೇಲೆ ಅಧಿಕ, ಶ್ರೇಷ್ಠ ಎಂಬ ಅರ್ಥದಲ್ಲಿ ಅಣ್ ಪ್ರತ್ಯಯ. ಎಲ್ಲರಿಗಿಂತ ಶ್ರೇಷ್ಠರಾದ್ದರಿಂದಲೆ ದೇವತೆಗಳಿಗೆ ದೇವಶಬ್ದವೆಂದ ಮೇಲೆ ದೇವರುಗಳಿಗಿಂತ ಶ್ರೇಷ್ಠನೆಂದರೆ ಸರ್ವೋತ್ತಮ ಎಂದಂತಾಯಿತು. ಮೂಲಂ ಮೂಲಭೂತಾ ಕೃತಿಃ ಕರ್ತೃತ್ವಂ ಯಸ್ಯ ಸಃ ಮೂಲಕೃತಿಃ ಎಂದು ಬಹುವ್ರೀಹಿಸಮಾಸದಿಂದ ಮೂಲಕರ್ತನೆಂದು ಅರ್ಥ. ಯೋಗಮಾಯೆ ಎಂದರೆ ಯೋಗ ಉಪಾಯ, ಪ್ರಪಂಚನಿರ್ಮಾಣಸಾಧನ, ಅದು ಮಾಯೆ ಇಚ್ಛೆ. ಅದರ ಬಲೋದಯವನ್ನು ಶಕ್ತಿಪ್ರಸರಣವ್ಯಾಪ್ತಿಯನ್ನು ಯಾರಿಗೂ ಪೂರ್ತಿಯಾಗಿ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲವೆಂದ ಮೇಲೆ ಪೂರ್ತಿ ಹೇಳಲುಯಾರು ತಾನೆ ಮನಸ್ಸು ಮಾಡಿಯಾನು? ಏಕೆಂದರೆ ಬೇರೆ ವ್ಯಾಖ್ಯಾನಕಾರರು ಹೇಳುವ ಕಾಲ ಅದೃಷ್ಟ ಸ್ವಭಾವ ನಿಯಾಮಕತ್ವ ಬೇರೆ ದೇವತೆಗಳಿಗೂ ಇರಬಹುದು. ಸರ್ವೋತ್ತಮತ್ವ ಮೂಲಕರ್ತೃತ್ವ ಬೇರಾರರಲ್ಲಿಯೂ ಬರಲಾರದು.

* * *

ಪರಮಾತ್ಮನ ಮಹಿಮೆಯನ್ನು ಪೂರ್ತಿಯಾಗಿ ತಿಳಿಯುವುದು ಆ ಪರಮಾತ್ಮನಿಗೊಬ್ಬನಿಗೇ ಸಾಧ್ಯ. ಬ್ರಹ್ಮರುದ್ರಾದಿಗಳೇ ತಿಳಿಯಲಾರರೆಂದಮೇಲೆ ಉಳಿದವರ ಪಾಡೇನು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಅತೋ ಭಗವತೋ ಮಾಯಾ ಮಾಯಿನಾಮಪಿ ಮೋಹಿನೀ ।
ಯತ್ ಸ್ವಯಂ ಚಾತ್ಮವರ್ತ್ಮಾಽಽತ್ಮಾ ನ ವೇದ ಕಿಮುತಾಪರೇ ॥ ೩೯ ॥

ಯತೋಽಪ್ರಾಪ್ಯ ನಿವರ್ತಂತೇ ವಾಚಶ್ಚ ಮನಸಾ ಸಹ ।
ಅಹಂ ಚಾನ್ಯ ಇಮೇ ದೇವಾಸ್ತಸ್ಮೈ ಭಗವತೇ ನಮಃ ॥ ೪೦ ॥

ಸ್ವಯೋಗ್ಯಗುಣಪೂರ್ಣನೇ ಆದ ಬ್ರಹ್ಮ ಇತರರಿಗಿಂತ ಹೆಚ್ಚಾಗಿ ಪರಮಾತ್ಮನನ್ನು ತಿಳಿದುಕೊಂಡಿದ್ದರೂ, ಜ್ಞಾನಿಗಳಿಗೂ ಸ್ವಯೋಗ್ಯತೆಗಿಂತ ಅಧಿಕ ತಿಳಿಯಲಾಗದಂತೆ ಬುದ್ಧಿಗೆ ಮಂಕು ಕವಿಯುವಂತೆ ಮಾಡುವ ಭಗವಂತನ ಮಹಿಮೆಯನ್ನು ಪೂರ್ತಿ ತಿಳಿದಿಲ್ಲವೆಂದ ಮೇಲೆ ಬೇರೆ ರುದ್ರಾದಿದೇವತೆಗಳು ತಿಳಿಯರೆಂದು ಬೇರೇನು ಹೇಳಬೇಕು? ವೇದಾಭಿಮಾನಿಗಳೂ ಚಿತ್ತಾಭಿಮಾನಿ ಬ್ರಹ್ಮನೂ ಭಗವಂತನ ಗುಣಗಳ

ಎಲ್ಲಿ ಕಾಣದೆ ಅವುಗಳನ್ನು ಪೂರ್ತಿ ಬಣ್ಣಿಸುವ ಯತ್ನವನ್ನು ಕೈಬಿಟ್ಟಿದ್ದಾರೆ. ರುದ್ರಾದಿ ತತ್ವದೇವತೆಗಳೂ ಸುಮ್ಮನಾಗಿದ್ದಾರೆ, ಅಂಥ ಭಗವಂತನಿಗಿದೋ ನಮಸ್ಕಾರ.

ಇಲ್ಲಿ ' ಆತ್ಮವರ್ತ್ಮಾತ್ಮಾ' ಎಂದರೆ ಆತ್ಮಾ–ಪರಮಾತ್ಮನು, ಆತ್ಮವರ್ತ್ಮ–ತನ್ನ ಮಾಯೆಯ ಶಕ್ತಿಯನ್ನು 'ನ ವೇದ' ತಿಳಿದಿಲ್ಲ, ಏಕೆಂದರೆ ಅದು ಅನಂತ, ಅಪರಿಮಿತ. ಅಪರಿಮಿತವಾಗಿರುವುದಕ್ಕೆ ಇಷ್ಟೇ ಎಂದು ಪರಿಮಿತಿಯನ್ನು ಪರಮಾತ್ಮನು ತಿಳಿಯುವುದಿಲ್ಲ. ಇಲ್ಲದ ಪರಿಮಿತಿಯನ್ನು ತಿಳಿಯದಿದ್ದಮಾತ್ರಕ್ಕೆ ಅವನ ಸರ್ವಜ್ಞತ್ವಕ್ಕೆ ಭಂಗವೂ ಬರುವುದಿಲ್ಲ ಎಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ಪರಿಮಿತಿ ಇಲ್ಲದಿರುವುದು ವಾಸ್ತವಸಂಗತಿ, ಅದನ್ನು ಪರಮಾತ್ಮನಂತೆ ಉಳಿದವರೂ ತಿಳಿಯುತ್ತಾರೆ. ತಿಳಿಯಲೇ ಬೇಕು. ಹೀಗಿರುವಾಗ 'ಪರಮಾತ್ಮನೇ ಪರಿಮಿತಿಯನ್ನು ತಿಳಿಯಲಿಲ್ಲವೆಂದ ಮೇಲೆ ಉಳಿದವರ ಪಾಡೇನು?' ಎನ್ನುವ ಕೈಮುತ್ಯನ್ಯಾಯಕ್ಕೆ ಅವಕಾಶವಿಲ್ಲ. ಕೈಮುತ್ಯನ್ಯಾಯವನ್ನು 'ಕಿಮುತಾಪರೇ? ಎಂದು ಭಾಗವತ ಹೇಳುತ್ತಿದೆ. ಅದರಿಂದ ತನ್ನ ಮಾಯಾಶಕ್ತಿಯನ್ನು ಪೂರ್ತಿಯಾಗಿ ಪರಮಾತ್ಮನೇ ತಿಳಿದಿಲ್ಲ ವೆಂದ ಮೇಲೆ ಉಳಿದವರ ಪಾಡೇನು? ಎನ್ನೋಣವೆ? ಹಾಗೆ ಹೇಳಿದರೆ ಪರಮಾತ್ಮ ಸರ್ವಜ್ಞನಲ್ಲವೆಂದಾದೀತು. ಅದಕ್ಕೆ ಆತ್ಮವರ್ತ್ಮ–ಪರಮಾತ್ಮನನ್ನು ಸ್ವಯೋಗ್ಯತಾನುಸಾರ ತಿಳಿದಿರುವ ಎಲ್ಲರಿಗೂ ಉಪದೇಶಿಸುತ್ತಿರುವ ಆತ್ಮಾ–ಬ್ರಹ್ಮನೂ ಪೂರ್ತಿ ತಿಳಿದಿಲ್ಲವೆಂದ ಮೇಲೆ ಉಳಿದವರ ಪಾಡೇನು? ಎಂದೇ ವ್ಯಾಖ್ಯಾನಿಸಬೇಕು.

'ಅಹಂ ಚಾನ್ಯೇ ಇಮೇ ದೇವಾಃ' ಎಂಬಲ್ಲಿ 'ಅಹಂ' ಎಂದರೆ ಅಹಂನಾಮಕನಾದ ಭಗವಂತ ತನ್ನನ್ನು ತಾನು ತಿಳಿದಿಲ್ಲ ಇತರರೂ ತಿಳಿದಿಲ್ಲ. ಅದರಿಂದ ತಿಳಿಯುವ ಪ್ರಯತ್ನವನ್ನೇ ಕೈ ಬಿಟ್ಟು ಕೇವಲ ನಮಸ್ಕಾರವನ್ನೇ ಮಾಡಬೇಕು. ಆ ನಮಸ್ಕಾರ ಹೀಗೆ–

ಯಾದೃಶೋಽಸಿ ಹರೇ ಕೃಷ್ಣ ತಾದೃಶಾಯ ನಮೋ ನಮಃ ।
ಯಾದೃಶೋಽಸ್ಮಿ ಹರೇ ಕೃಷ್ಣ ತಾದೃಶಂ ಮಾಂ ಹಿ ಪಾಲಯ ॥

'ಹರೇ, ಕೃಷ್ಣ, ನೀನು ಹೇಗಿರುವೆಯೋ ಹಾಗೆ ಇರು, ನಿನಗೆ ನಮಸ್ಕಾರ. ನಾನು ಹೇಗಿರುವೆನೋ ಹಾಗೆ ಇರುವೆನು. ನನ್ನನ್ನು ಕಾಪಾಡು' ಎಂದು ವಲ್ಲಭಾಚಾರ್ಯವ್ಯಾಖ್ಯಾನ. ಆದರೆ ಭಗವಂತನ ಗುಣಗಳನ್ನು ಪೂರ್ತಿ ತಿಳಿಯಲಾಗದಿದ್ದರೂ ಸ್ವಯೋಗ್ಯತೆಗನುಗುಣವಾಗಿ ಪೂರ್ತಿ ತಿಳಿಯಲು ಯತ್ನಿಸಲೇ ಬೇಕು. ಅದನ್ನೂ ಬಿಟ್ಟರೆ ಮೋಕ್ಷ ಸಾಧನೆ ಇನ್ನೇನಿದೆ? ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ಆತ್ಮಾ ಬ್ರಹ್ಮಾ ನ ವೇದ । ಅಹಂ ರುದ್ರಃ ।

ಗುಣಪೂರ್ತೇರಾತ್ಮಶಬ್ದೋ ಬ್ರಹ್ಮಾಽಹೀನತ್ವತೋ ಹರಃ ।
ಅಹಂಶಬ್ದಸ್ತಥಾಽಪ್ಯೇತೌ ನ ಜಾನೀತೋ ಹರಿಂ ಪರಮ್ ॥
ಇತಿ ಬ್ರಾಹ್ಮೇ ॥

ಭಗವತೋ ಮಾಯಾಂ ಮಹಿಮಾನಮ್ ।

ಮಾಯಾ ತು ಮಹಿಮಾ ಪ್ರೋಕ್ತಾ ಪ್ರಾಚುರ್ಯೇ ತು ಮಯಡ್ ಯತಃ । ಇತಿ ಪಾದ್ಮೇ ।

ಆತ್ಮವರ್ತ್ಮಾ ಪರಮಾತ್ಮಗತಿಃ ।

'ನ ವೇದ' 'ಭಗವಂತನು ತಿಳಿದಿಲ್ಲ' ಎನ್ನುವುದು ಬಾಧಿತವಾಗುವುದರಿಂದ ಇಲ್ಲಿ ಆತ್ಮ ಎಂದರೆ ಬ್ರಹ್ಮ. ಮುಂದಿನ ಶ್ಲೋಕದಲ್ಲಿ 'ಅಹಂ' ಎಂದರೆ ಮೈತ್ರೇಯರು 'ನಾನು' ಎನ್ನುತ್ತಿಲ್ಲ, 'ಅಹಂ' ಎಂದು ಮಕಾರಾಂತ ಅವ್ಯಯ, ರುದ್ರ ಎಂದರ್ಥ. ಅಹಂಕಾರ ತತ್ತ್ವಾಭಿಮಾನಿಯಾದ್ದರಿಂದ. ಹೀಗೆ ವ್ಯಾಖ್ಯಾನಿಸುವುದು ಬ್ರಹ್ಮಪುರಾಣಕ್ಕೆ ಸಮ್ಮತ. ಅಲ್ಲಿ ಹೇಳಿದೆ, 'ಸ್ವಯೋಗ್ಯಗುಣಪೂರ್ಣನಾದ್ದರಿಂದ ಬ್ರಹ್ಮ ಆತ್ಮ ನೆನಿಸುತ್ತಾನೆ. 'ಆಪ್ನೋತಿ ಸ್ವಯೋಗ್ಯಗುಣಾನ್' ಎಂದು ವ್ಯುತ್ಪತ್ತಿ. ಇಂದ್ರಾದಿದೇವತೆಳಿಗೆ ತತ್ತ್ವಜ್ಞಾನೋಪದೇಶಕ ಗುರು ರುದ್ರನಾದ್ದರಿಂದ ಅವನನ್ನು ಅವರು ಬಿಡುವಂತಿಲ್ಲ. ಅಹೇಯ, ಆದ್ದರಿಂದ ಅಹಂ ಎನಿಸುತ್ತಾನೆ. ಹೀಗಿದ್ದರೂ ಬ್ರಹ್ಮರುದ್ರರೂ ಕೂಡ ಹರಿಯನ್ನು ಪೂರ್ತಿ ತಿಳಿಯುವುದಿಲ್ಲ.'

ಭಗವಂತನ ಮಾಯೆಯನ್ನು ಅಂದರೆ ಗುಣಪೂರ್ಣತ್ವವನ್ನು ಎಂದರ್ಥ. 'ಪ್ರಾಚುರ್ಯ ಎಂಬ ಅರ್ಥದಲ್ಲಿ ಮಯಟ್ ಪ್ರತ್ಯಯವಿದೆ. ಅದಕ್ಕೆ ಸಮಾನಾರ್ಥವಾದ ಮಯಶಬ್ದಕ್ಕೆ ಸ್ವಾರ್ಥೇ ಅಣ್ ಪ್ರತ್ಯಯ. ಅದರಿಂದ ಗುಣಪ್ರಚುರನಾಗಿದ್ದಾನೆ ಎನ್ನುವ ಎಂದೇ ಮಾಯಾ ಶಬ್ದ ಹೇಳುತ್ತದೆ ಎಂದು ಪದ್ಮಪುರಾಣ ಹೇಳಿದೆ.

ಆತ್ಮವರ್ತ್ಮಾ ಎಂದರೆ ಪರಮಾತ್ಮನ ಗತಿಯನ್ನು ಅಂದರೆ ಜ್ಞಾನವನ್ನು ತಾನು ಹೊಂದಿದ್ದಾನೆ, ಪರರಿಗೆ ಉಪದೇಶಿಸುತ್ತಾನೆ, ಬ್ರಹ್ಮ ಎಂದರ್ಥ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಸಪ್ತಮೋಽಧ್ಯಾಯಃ

—o—

ಅಧ್ಯಾಯ-೮

ಅಧ್ಯಾಯಸಾರಾಂಶ

'ಪ್ರಕೃತಿ ಬಂಧವಿಲ್ಲದ ಪರಮಾತ್ಮ ಪ್ರಕೃತಿಯಿಂದ ಪ್ರಪಂಚನಿರ್ಮಾಣ ಏಕೆ ಮಾಡುತ್ತಾನೆ? ಅದು ಲೀಲೆಯೆ? ಪೂರ್ಣಾನಂದ ತೃಪ್ತನಿಗೇಕೆ ಲೀಲೆ? ಇದೆಲ್ಲವೂ ಭ್ರಾಂತಿ ಎನ್ನುವಂತಿಲ್ಲ. ಶ್ರುತ್ಯಾದಿ ಪ್ರಮಾಣ ಸಿದ್ಧವಾಗಿದೆ. ಪರಮಾತ್ಮ ದುಃಖಿಜೀವರ ಶರೀರದಲ್ಲಿದ್ದಾನೆ ಎಂದ ಮೇಲೆ ಅವನಿಗೂ ದುಃಖವಿದೆ ಎನ್ನಬೇಕು. ಆದರೆ ಅವನು ನಿರ್ದುಃಖನೆಂದು ಹೇಳುತ್ತಿದೆ. ಈ ವಿರೋಧವನ್ನು ಹೇಗೆ ಪರಿಹರಿಸಬೇಕು?' ಹೀಗೆ ವಿಧುರ ಕೇಳಿದಾಗ ಮೈತ್ರೇಯರು ಹೇಳಿದರು–

'ದುಃಖಿಗಳ ಶರೀರದಲ್ಲಿ ನಿಯಾಮಕನಾಗಿ ಪರಮಾತ್ಮನಿದ್ದರೂ ಅವನಿಗೆ ದುಃಖವಿಲ್ಲ. ಇದು ಅವನ ಮಹಿಮೆಗೆ. ಮತ್ತು ಜೀವರಿಗೆ ದುಃಖ ಬರಲು ಅವರಿಗೆ ಶರೀರಾದಿಗಳಲ್ಲಿರುವ ಸ್ವಾತಂತ್ರ್ಯಭ್ರಮ ಕಾರಣ. ಅದು ಪರಮಾತ್ಮನಿಗಿಲ್ಲ. ಪರಮಾತ್ಮ ಜೀವರಿಗೆ ಈ ಭ್ರಮವನ್ನು ಕಳೆದು ದುಃಖದಿಂದ ಬಿಡುಗಡೆ ಮಾಡುತ್ತಾನೆ. ಅದಕ್ಕೆ ಅವರು ಅವನನ್ನು ಪ್ರತ್ಯಕ್ಷ ಕಂಡು ಭಕ್ತಿ ಮಾಡಬೇಕು.' ವಿದುರ ಇನ್ನೂ ಒಂದು ಪ್ರಶ್ನೆ ಮಾಡುತ್ತಾನೆ, ತಾನೇ ಸಮಾಧಾನ ಹೇಳಿಕೊಳ್ಳುತ್ತಾನೆ–

'ಅವತಾರಗಳಲ್ಲಿ ಪರಮಾತ್ಮನಿಗೆ ಜಡದೇಹ ಕಾಣುತ್ತದೆ. ವಸ್ತುತಃ ಜಡದೇಹದಿಂದ ಅವನಿಗೇನಾಗಬೇಕಾಗಿಲ್ಲ. ಈ ಸಮಸ್ಯೆಗೆ ಏನು ಪರಿಹಾರ? ಎಂದರೆ, ಶ್ರೀಕೃಷ್ಣ ಅವತಾರವೆಂದು ತಿಳಿಯುವುದು ಶಾಸ್ತ್ರದಿಂದ. ಅದೇ ಶಾಸ್ತ್ರ ಪರಮಾತ್ಮನಿಗೆ ಜಡಶರೀರವಿಲ್ಲ ವೆನ್ನುತ್ತಿರುವುದರಿಂದ ಮಹಾಮಹಿಮನಾದ ಅವನಿಗೆ ಜಡ ಶರೀರದಿಂದ ಪ್ರಯೋಜನವೂ ಇಲ್ಲದಿರುವುದರಿಂದ ಕಣ್ಣಿಗೆ ಜಡಶರೀರ ಕಾಣುವುದು ಭ್ರಮ ಎಂದು ನಿಮ್ಮ ಅನುಗ್ರಹದಿಂದ ತಿಳಿಯುತ್ತೇನೆ. ಮುನಿಯೆ, ಇನ್ನೂ ಮುಂದೆ ಹೇಳಿ, ಪ್ರಜಾಪತಿಗಳ ಸೃಷ್ಟಿ, ಮನುಗಳು ಮನ್ವಂತರಗಳು, ಮೇಲೆ ಕೆಳಗಿನ ಲೋಕಗಳು, ಪರಮಾತ್ಮನ ಅವತಾರಗಳು ವರ್ಣಾಶ್ರಮ

ವಿಭಾಗಗಳು, ಜ್ಞಾನಿಗಳ ಜನ್ಮ ಕರ್ಮಗಳು, ವೇದವಿಭಾಗ, ತತ್ತ್ವಗಳ ಲಯ, ಮುಕ್ತರ ಸ್ವರೂಪ, ಜ್ಞಾನಭಕ್ತಿವೈರಾಗ್ಯಗಳು ಇತ್ಯಾದಿ ಪ್ರಮೇಯಗಳನ್ನೂ ತಿಳಿಸಿ' ಎಂದು. ಮೈತ್ರೇಯರು ಹರಿಕಥೆಯನ್ನು ಹೇಳುವ ಅವಕಾಶ ತಮಗೆ ಲಭಿಸಿತೆಂದು ಹೊಂಪುಳಿ ಹೊದರು.

* * *

ಪ್ರಕೃತಿಬಂಧರಹಿತನಾದ ಪರಮಾತ್ಮ ಪ್ರಕೃತಿಯನ್ನು ಸ್ವೀಕರಿಸಿ ಅದರಿಂದ ಪ್ರಪಂಚ ನಿರ್ಮಾಣವನ್ನೇಕೆ ಮಾಡುತ್ತಾನೆ? ಕ್ರೀಡೆ ಎನ್ನುವಂತಿಲ್ಲ. ಪೂರ್ಣಾನಂದ ತೃಪ್ತನಾದವನಿಗೆ ಕ್ರೀಡೆಯಿಂದ ಸುಖ ಬರಬೇಕಾಗಿಲ್ಲ ತಾನೆ? ಎಂದು ವಿದುರ ಮೈತ್ರೇಯರಲ್ಲಿ ಕೇಳುತ್ತಾನೆ-

ಕ್ರೀಡಾಯಾ ಮುದ್ ಯತೋಽರ್ಹಸ್ಯ ಕಾಮಂ ಚಿಕ್ರೀಡಿಷಾಽನ್ಯತಃ ।
ಸ್ವತಸ್ತೃಪ್ತಸ್ಯ ತು ಕಥಂ ನಿರ್ವೃತಸ್ಯ ಸದಾಽಽತ್ಮನಃ ॥ ೩ ॥

ಕ್ರೀಡೆಯಿಂದ ಸಂತೋಷವು ಆ ಸಂತೋಷಕ್ಕೆ ಯೋಗ್ಯನಾದ ಅಪೂರ್ಣ ಸುಖಿಯಾದ ಬಾಲಕನಿಗೆ ಸಹಜ. ಸ್ವತಃ ಪೂರ್ಣಾನಂದತೃಪ್ತನಾದ ಭಗವಂತನಿಗೆ ಕ್ರೀಡೆಯಿಂದ ಸಂತೋಷ ಹೇಗೆ? ಮತ್ತು ಯಥೇಚ್ಛವಾಗಿ ಕ್ರೀಡಿಸುವ ಬಯಕೆಯು ಬೇಜಾರಾದವನಿಗೆ ಬರುತ್ತದೆ. ಸದಾ ಸುಖಿಯಾದ ಪರಮಾತ್ಮನಿಗೆ ಕ್ರೀಡೆಯ ಬಯಕೆ ಏಕೆ ಬರುತ್ತದೆ?

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕ್ರೀಡಾಯಾಮುದ್ಯಮೋಽರ್ಭಸ್ಯ ಕಾಮಶ್ಚಿಕ್ರೀಡಿಷಾನ್ಯತಃ । ..... 'ನಿವೃತ್ತಸ್ಯ ಸದಾನ್ಯತಃ' ಎಂದು ಪಾಠವಿಟ್ಟುಕೊಂಡು 'ಬಾಲಕನಿಗೆ ಅನ್ಯತಃ ಚಿಕ್ರೀಡಿಷಾ ಮತ್ತೊಬ್ಬರೊಡನೆ ಆಟವಾಡುವ ಬಯಕೆಯುಂಟಾಗುವುದು ಸಹಜ. ಮತ್ತು ಇನ್ನೊಂದು ಆಟದ ಸಾಮಗ್ರಿ ಇದ್ದರೆ ಅದರಿಂದ ಆಟವಾಡಲು ಬಯಸುತ್ತಾನೆ. ಆದರೆ 'ಅನ್ಯತೋ ನಿವೃತ್ತಸ್ಯ' ಇನ್ನೊಂದು ಆಟದ ಸಾಮಗ್ರಿಯಿಲ್ಲ, ಇನ್ನೊಬ್ಬ ಆಟದ ಜೊತೆಗಾರನೂ ಇಲ್ಲ, ಹೇಗೆ ಪರಮಾತ್ಮನಿಗೆ ಆಟವಾಡುವ ಬಯಕೆ ಸಾಧ್ಯ?' ಎಂದು ವಿದುರನ ಪ್ರಶ್ನೆ ಎನ್ನುತ್ತಾರೆ. ಆದರೆ ಸೃಷ್ಟಿಯ ಆಟಕ್ಕೆ ಬ್ರಹ್ಮಾದಿಜೀವರು ಜೊತೆಗಾರರಿದ್ದಾರೆ, ಪ್ರಕೃತಿ ಕಾಲ ಅದೃಷ್ಟಮುಂತಾದ ಆಟದ ಸಾಮಗ್ರಿಗಳೂ ಇವೆ. ಆಟದ ಬಯಕೆ ಏಕೆ ಬರಲಾರದು? ಅದ್ವೈತರೀತಿಯಿಂದ ಪರಮಾತ್ಮನೊಬ್ಬನೆ, ಬೇರೆ ಜೀವಜಡಗಳಿಲ್ಲ ಎನ್ನುವುದಾದರೆ ಅವಿದ್ಯೆ ಇದೆ ತಾನೆ, ಅದರಿಂದ ಎಲ್ಲ ಆಟವನ್ನೂ ನಡೆಸಬಹುದು. ಹೀಗಾಗಿ ವಿದುರನ ಪ್ರಶ್ನೆಗೆ ಸರಿಯಾದ ಕಾರಣವಿಲ್ಲ. 'ಪರಮೇಶ್ವರನು ಆತ್ಮಾರಾಮ ತನ್ನಲ್ಲೆ ತಾನು ಸುಖಿಸುವವನು ಅದರಿಂದ ಇನ್ನೊಬ್ಬ ಈಶ್ವರನಿಲ್ಲದಿರುವಾಗ ಹೇಗೆ ಆಟದ

ಬಯಕೆ?' ಎಂದು ವಿಶ್ವನಾಥವ್ಯಾಖ್ಯಾನದಲ್ಲಿ ವಿದುರನ ಪ್ರಶ್ನೆ. ತನಗಿಂತ ಬೇರೆ ಸ್ವತಂತ್ರವಾದ ಕ್ರೀಡೋಪಕರಣ, ಸ್ವತಂತ್ರನಾದ ಇನ್ನೊಬ್ಬ ಆಟಗಾರನಿಲ್ಲದಿರುವುದರಿಂದ ಆಟದ ಬಯಕೆ ಅಶಕ್ಯ ಎಂದು ವೀರರಾಘವವ್ಯಾಖ್ಯಾನ. ಆದರೆ ಇನ್ನೊಬ್ಬ ಈಶ್ವರನೇ ಏಕೆ ಬೇಕು ತನಗೆ ಅಧೀನರಾದ ಜೀವರೊಂದಿಗೆ ತನಗೆ ಬೇಕಾದಂತೆ ಆಟವಾಡಲು ಸಾಧ್ಯ ತಾನೆ? ತನ್ನ ಅಧೀನವಾದ ಆಟದ ಉಪಕರಣದಿಂದಲೆ ಆಟವಾಡಬಹುದು ತಾನೆ? ಅದರಿಂದ 'ಕ್ರೀಡಾಯಾ ಮುದ್ಯಮೋಽರ್ಭಸ್ಯ........' ನಿವೃತ್ತಸ್ಯ ಸದಾನ್ಯತಃ' ಎಂಬ ಪಾಠವೆ ಅಶುದ್ಧ. 'ಕ್ರೀಡಾಯಾ ಮುದ್ಯತೋಽರ್ಹಸ್ಯ ನಿರ್ವೃತಸ್ಯ ಸದಾಽಽತ್ಮನಃ' ಎಂದು ಪಾಠ. ಹೀಗೆ ವ್ಯಾಖ್ಯಾನ–

ಕ್ರೀಡಾಯಾ ಮುತ್ । ಅರ್ಹಸ್ಯಾಪೂರ್ಣಸುಖಸ್ಯ । ಅನ್ಯತಃ ಅರತೇಃ ।

'ಕ್ರೀಡಾಯಾಮುದ್ಯತೋಽರ್ಹಸ್ಯ' ಎಂಬಲ್ಲಿ 'ಕ್ರೀಡಾಯಾಃ ಮುದ್ ಯತಃ ಅರ್ಹಸ್ಯ' ಎಂದು ಪದ ವಿಭಾಗ. ಕ್ರೀಡೆಯಿಂದ ಸಂತೋಷವು ಅದಕ್ಕೆ ಯೋಗ್ಯನಾದವನಿಗೆ ಮಾತ್ರ ಸಾಧ್ಯ. ಅಪೂರ್ಣಸುಖಿಯಾದ ವ್ಯಕ್ತಿಯೆ ಕ್ರೀಡೆಯಿಂದ ಸಂತೋಷ ಹೊಂದಲು ಯೋಗ್ಯನಾಗಿರುತ್ತಾನೆ. 'ಅನ್ಯತಃ ಚಿಕ್ರೀಡಿಷಾ' ಎಂದರೆ ಸಂತೋಷವಿಲ್ಲದಿರುವಾಗ, ಬೇಜಾರಾಗಿರುವಾಗ ಅದನ್ನು ಕಳೆಯಲು ಆಟದ ಬಯಕೆ ಸಹಜ ಎಂದರ್ಥ. ಕ್ರೀಡಾಯಾಃ ಮುತ್' ಎಂದು ಕ್ರೀಡೆಯಿಂದಾಗುವ ಸಂತೋಷ ಪ್ರಸ್ತುತವಾಗಿದೆ. 'ಅನ್ಯ' ಎಂದರೆ ಅದರಿಂದ ಬೇರೆಯಾದ, ಅದಕ್ಕೆ ವಿರುದ್ಧವಾದ ಬೇಜಾರು ಎಂದರ್ಥ.

* * *

ಪರಮಾತ್ಮ ದುಃಖಿಜೀವರ ಶರೀರದಲ್ಲಿರುವುದರಿಂದ ಅವನಿಗೂ ದುಃಖವಿದೆ ಎಂದಂತಾಯಿತು. ನಿರ್ದುಃಖನಾದ ಪರಮಾತ್ಮನಿಗೆ ಅದು ಕೂಡುವುದಿಲ್ಲ. ಈ ವಿರೋಧ ಪರಿಹಾರ ಹೇಗೆ? ಎಂದು ವಿದುರ ಮೈತ್ರೇಯರಲ್ಲಿ ಪ್ರಶ್ನೆ ಮಾಡುತ್ತಾನೆ-

ಭಗವಾನೇಷ ಏವೈಕಃ ಸರ್ವಕ್ಷೇತ್ರೇಷ್ವವಸ್ಥಿತಃ ।
ಅಮುಷ್ಯ ದುರ್ಭಗತ್ವಂ ವಾ ಕ್ಲೇಶೋ ವಾ ಕರ್ಮಭಿಃ ಕುತಃ ॥ ೬ ॥

ಭಗವಂತನೊಬ್ಬನೇ ಎಲ್ಲರ ಶರೀರದಲ್ಲಿರುವುದರಿಂದ ಅವರ ಕರ್ಮಗಳಿಂದ ಅವರಿಗೆ ಉಂಟಾಗುವ ದೌರ್ಭಾಗ್ಯ ಕ್ಲೇಶಗಳು ಅವನಿಗೂ ಬರಬೇಕಾಯಿತು. ಆದರೆ ಇದು ಹೇಗೆ ಸಾಧ್ಯ? ನಿರನಿಷ್ಟೋ ನಿರವದ್ಯಃ ಎಂದು ಮುಂತಾಗಿ ಶ್ರುತಿಗಳು ಅದನ್ನು ವಿರೋಧಿಸುತ್ತವೆ. ಹೀಗಾಗಿ ದುಃಖಿಗಳ ಶರೀರದಲ್ಲಿರುವುದರಿಂದ ಭಗವಂತನಿಗೆ ದುಃಖ ಬರ ಬೇಕೆ? ಶ್ರುತಿವಿರೋಧದಿಂದಾಗಿ ಬಾರದಿರಬೇಕೆ ಎಂದು ಸಂದೇಹ.

ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ 'ಎಲ್ಲ ಶರೀರಗಳಲ್ಲಿರುವ ಜೀವರೂ ಬ್ರಹ್ಮಸ್ವರೂಪರೇ ಆಗಿರುವುದರಿಂದ ಅವರಿಗೆ ಕರ್ಮಸಂಬಂಧವಿಲ್ಲ, ಇರುವುದಾದರೆ ಈಶ್ವರನಿಗೂ ಕರ್ಮಸಂಬಂಧ ಬರಬೇಕಾದೀತು ಎಂಬುದು ವಿದುರನ ಪ್ರಶ್ನೆ. ಆದರೆ ಹಿಂದಿನ ಶ್ಲೋಕದಲ್ಲಿ ಬ್ರಹ್ಮಸ್ವರೂಪನೇ ಆದ ಜೀವನಿಗೆ ಅವಿದ್ಯೆ ಹೇಗೆ ಕೂಡುತ್ತದೆ ಎಂಬ ಪ್ರಶ್ನೆ ಮಾಡಿಯಾಗಿದೆ. ಆ ಅವಿದ್ಯೆಯಿಂದಲೆ ಕರ್ಮಸಂಬಂಧ ಎನ್ನುವುದು ಸ್ಪಷ್ಟ. ಅದರಿಂದ ಈ ಶ್ಲೋಕ ವ್ಯರ್ಥ. ವಿಶ್ವನಾಥವ್ಯಾಖ್ಯಾನದಲ್ಲಿ ಮತ್ತು ಶುಕದೇವವ್ಯಾಖ್ಯಾನದಲ್ಲಿ ಎಲ್ಲರನ್ನೂ ಕಾಪಾಡುವ ಭಗವಂತ ಜೀವರ ಶರೀರದಲ್ಲಿ ಅಂತರ್ಯಾಮಿಯಾಗಿ ಇರುವಾಗ ಜೀವರಿಗೆ ಕಷ್ಟಕಾರ್ಪಣ್ಯಗಳೇಕೆ? ಎಂದು ವಿದುರನ ಪ್ರಶ್ನೆ. ಆದರೆ 'ಕರ್ಮಭಿಃ' ಎಂದು ಅಲ್ಲಿಯೆ ಉತ್ತರವಿದೆ. ಕರ್ಮಮಾಡಿಸಿ ಅದಕ್ಕನುಗುಣವಾಗಿ ಸುಖದುಃಖ ಉಣಿಸುವುದಕ್ಕಾಗಿಯೆ ಭಗವಂತ ಅಂತರ್ಯಾಮಿಯಾಗಿ ಇದ್ದಾನೆ ತಾನೆ? ಅದರಿಂದ ವಿದುರನ ಪ್ರಶ್ನೆ ಇದು–

ದುರ್ಭಗಕ್ಲೇಶಿಶರೀರಸ್ಥತ್ವಾತ್ ತಸ್ಯಾಪಿ ಭಾವ್ಯಮ್ । ನ ಚ ತದ್ ಯುಜ್ಯತೇ ।

ದುರ್ಭಾಗ್ಯಶಾಲಿಗಳಾದ ಕ್ಲೇಶಪಡುತ್ತಿರುವ ಜೀವರ ಶರೀರದಲ್ಲಿ ಭಗವಂತನಿರುವುದರಿಂದ ಭಗವಂತನಿಗೂ ಕೂಡ ದುರ್ಭಾಗ್ಯ ಕ್ಲೇಶಗಳು ಬರಬೇಕು. ಆದರೆ ಅದು ಶ್ರುತಿವಿರೋಧವಿರುವುದರಿಂದ ಯುಕ್ತವಾಗುವುದಿಲ್ಲ. ಅದರಿಂದ ಸಂದೇಹ.

'ಭಾವ್ಯಂ' ಎಂಬಲ್ಲಿ 'ತೇನ' ಎಂದು ಸೇರಿಸಿ ಕೊಳ್ಳಬೇಕು. ದುರ್ಭಗತ್ವಾದಿ ಇರಬೇಕಾಗುವುದೆಂದರ್ಥ.

* * *

ವಿದುರನ ಪ್ರಶ್ನೆಗೆ ಉತ್ತರ ಕೊಡುತ್ತ ಮೈತ್ರೇಯರು ಹೇಳುತ್ತಾರೆ. ದುಃಖಿಗಳ ಶರೀರದಲ್ಲಿ ಭಗವಂತನಿದ್ದರೂ ಅವನಿಗೆ ಅವರ ದುಃಖದ ಸ್ಪರ್ಶ ಇಲ್ಲ. ಏಕೆಂದರೆ ಅದು ಅವನ ಮಹಿಮೆ-

ಮೈತ್ರೇಯ ಉವಾಚ–

ಸೇಯಂ ಭಗವತೋ ಮಾಯಾ ನ್ಯಾಯ್ಯಂ ಯೇನ ವಿರುಧ್ಯತೇ ।
ಈಶ್ವರಸ್ಯ ವಿಮುಕ್ತಸ್ಯ ಕಾರ್ಪಣ್ಯಮುತ ಬಂಧನಮ್ ॥ ೯ ॥

ಸರ್ವಶಕ್ತನಿಗೆ ದುರ್ಭಾಗ್ಯ, ನಿತ್ಯಮುಕ್ತನಿಗೆ ಸಂಸಾರಬಂಧ ಎನ್ನುವುದು ಪ್ರಮಾಣವಿರುದ್ಧವಾಗುವುದರಿಂದ, ವಿದುರ, ಅದು ಕೂಡುವುದಿಲ್ಲವೆಂದು ನೀನೇನು

ಹೇಳಿದಿ, ಅದು ನ್ಯಾಯವೆ. ಏಕೆಂದರೆ ಭಗವಂತ ದುಃಖಿಗಳ ಶರೀರದಲ್ಲಿದ್ದರೂ ಅವನಿಗೆ ದುಃಖಸ್ಪರ್ಶವಿಲ್ಲದಿರುವುದು ಅವನ ಮಹಿಮೆಯಿಂದಾಗಿ ಕೂಡುತ್ತದೆ. ಮನೆ ಸುಡುತ್ತಿದ್ದರೂ ಒಳಗಿರುವವನು ಅಗ್ನಿಸ್ತಂಭನ ಸಾಮರ್ಥ್ಯ ಉಳ್ಳವನಾದರೆ ಸುಡದಿರಬಹುದು. ಹಾಗೇ ಇದು. ಅದರಿಂದ ಶ್ರುತಿಯು ಹೇಳುವಂತೆ ಭಗವಂತ ದುಃಖರಹಿತನೇ.

[೧]ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ ಮೈತ್ರೇಯರು ನೀಡುವ ಉತ್ತರ ಹೀಗೆ, 'ಜೀವ ಬ್ರಹ್ಮಸ್ವರೂಪನೇ ಆದರೂ ಅವನಿಗೆ ಅವಿದ್ಯೆಯಿಂದ ಕರ್ಮಬಂಧನ ದುಃಖಾದಿಗಳು ಹೇಗೆ ಬಂದುವು? ಇದು ಯುಕ್ತಿವಿರುದ್ಧ ತಾನೆ? ಎಂದರೆ ಹೌದು ಆದರೆ ಇದು ಭಗವಂತನ ಅಚಿಂತ್ಯಶಕ್ತಿಯಿಂದ ಕೂಡುತ್ತದೆ. ಇದಕ್ಕೆ ಉದಾಹರಣೆ ಜೀವ ಸ್ವಪ್ನದಲ್ಲಿ ತನ್ನ ಶಿರಶ್ಛೇದವನ್ನು ಇಲ್ಲದಿರುವುದನ್ನೇ ತಾನು ಕಾಣುವುದು ಎಂದು ಮುಂದೆ ಹೇಳುತ್ತಾರೆ' ಎಂದು. ಆದರೆ ಇದು ಸರಿಯಲ್ಲ. ಅವಿದ್ಯೆ ಉಪಾಧಿ, ಪ್ರತಿಬಿಂಬದ ಪಕ್ಷಪಾತಿ. ಬಿಂಬನಾದ ಈಶ್ವರನಲ್ಲಿ ತನ್ನ ಕಾರ್ಯವನ್ನು ತೋರದೆ ಪ್ರತಿಬಿಂಬನಾದ ಜೀವನಲ್ಲಿಯೇ ತೋರುತ್ತದೆ. ಮುಂದೆ, 'ನೀರಲ್ಲಿ ಚಂದ್ರನ ಪ್ರತಿಬಿಂಬ ಚಲಿಸುತ್ತದೆ, ಆಕಾಶದಲ್ಲಿ ಚಂದ್ರ ಚಲಿಸುವುದಿಲ್ಲ ಹೇಗೋ ಹಾಗೆ' ಎಂದು ಉದಾಹರಣ ಇದೆ. ಅದರಿಂದ ಭಗವಂತನ ಅಚಿಂತ್ಯಶಕ್ತಿಯಲ್ಲ. ಅನಿರ್ವಚನೀಯವಾದ ಅವಿದ್ಯೆಯ ಅಘಟಿತ ಘಟನಾ ಶಕ್ತಿ ಎನ್ನಬೇಕು. ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. 'ಭಗವಂತನ ಅಚಿಂತ್ಯಶಕ್ತಿ ಎನ್ನುವ ಸಮಾಧಾನ ವಾಸ್ತವವಾಗಿದ್ದರೂ ತ್ರಿವರ್ಣಬಾಹ್ಯನಾದ ವಿದುರನಿಗೆ ಅದನ್ನು ಉಪದೇಶಿಸಲಾಗದು' ಎಂದು ಅಲ್ಲಿ ಹೇಳಿದೆ. ಮತ್ತು ಜೀವ ಭಗವಂತನ ಸ್ವರೂಪನಾದರೂ ಅವನಲ್ಲಿ ಈಶ್ವರತ್ವ ಕಾರ್ಪಣ್ಯಗಳು ವಿಮುಕ್ತಿ-ಬಂಧನಗಳೆಂದು ವಿರುದ್ಧಕಾರ್ಯಗಳನ್ನು ಭಗವಂತನ ಮಾಯೆಯೆ ಮಾಡುತ್ತದೆ ಎಂದಿದ್ದಾರೆ. ವಸ್ತುತಃ ಜೀವನಿಗೆ ಕಾರ್ಪಣ್ಯ ಕರ್ಮಬಂಧನಗಳಿಗೆ ಕಾರಣ ಅವನಿಗೆ ದೇಹಾದಿಗಳ ಬಗ್ಗೆ ಇರುವ ಸ್ವಾತಂತ್ರ್ಯಭ್ರಮ. ಪರಮಾತ್ಮ ಜೀವಶರೀರದಲ್ಲಿದ್ದೂ ದುಃಖರಹಿತನಾಗಿರಲು ಕಾರಣ ಅವನ ಅಚಿಂತ್ಯಶಕ್ತಿ ಎನ್ನಬೇಕು-

---

೧. ಅವಿಕೃತ ಏವ ಭಗವಾನ್ ಸರ್ವಂ ಕರೋತಿ । ತಾದೃಶಮೇವ ಭಗವತ್‌ಸ್ವರೂಪಂ । ಶ್ರುತಿಪ್ರಾಮಾಣ್ಯಾತ್ । ಯಾದೃಶೇ ಅಂಗೀಕ್ರಿಯಮಾಣೇ ಸರ್ವಸಮಾಧಾನಂ ಭವತಿ । ತಸ್ಮಾತ್ ತತ್ರ ನ ಮಾಯಾದಿಕಲ್ಪನಾ । ಸ ಪಕ್ಷೋಽತ್ರೈವರ್ಣಿಕಾಯ ಸರ್ವಥಾ ನ ವಕ್ತವ್ಯ ಇತಿ । ದೈವ್ಯೋ ವೈ ವರ್ಣೋ ಬ್ರಾಹ್ಮಣಃ ಆಸುರ್ಯಃ ಶೂದ್ರ ಇತಿ ಶ್ರುತೇಃ । ಮಾಯೇತ್ಯಸುರಾ ಇತಿ ಚ । ಉಪಕ್ರಮೇಽಪಿ ಅಥ ತೇ ಭಗವಲ್ಲೀಲಾ ಯೋಗಮಾಯೋಪಬೃಂಹಿತಾ ಇತಿ ಪ್ರತಿಜ್ಞಾನಾತ್ ಅತ್ರಾಪಿ ಮಾಯಯೈವ ಸಮಾಧಾನಮಾಹ ಸೇಯಂ ಭಗವತೋ ಮಾಯೇತಿ । – ವಲ್ಲಭಃ

ಸೇಯಂ ಭಗವತೋ ಮಾಯಾ । ಅಯಂ ಹಿ ಭಗವನ್ಮಹಿಮಾ । ತಸ್ಯ ಕಾರ್ಪಣ್ಯಂ ಬಂಧನಾದಿ ನ ಯುಜ್ಯತ ಇತಿ ಯದುಕ್ತಂ ತತ್ ನ್ಯಾಯ್ಯಮೇವ । ದುರ್ಭಗಾದಿಶರೀರಸ್ಥಸ್ಯಾಪಿ ತದ್ದೋಷಾಸ್ಪರ್ಶ ಏವ ತನ್ಮಹಿಮೇತ್ಯರ್ಥಃ ।

ದುಃಖಿಜೀವರ ಶರೀರದಲ್ಲಿದ್ದರೂ ದುಃಖಲೇಪ ರಹಿತನಾಗಿರುವುದು ಭಗವಂತನ ಮಾಯೆ, ಅಂದರೆ ಇದು ಅವನ ಮಹಿಮೆ. ಭಗವಂತನಿಗೆ ಕಾರ್ಪಣ್ಯ, ಕರ್ಮಬಂಧನ ಕ್ಲೇಶಗಳು ಕೂಡುವುದಿಲ್ಲ ಎಂದು ನೀನು ಏನು ಹೇಳಿರುವೆಯೋ ಅದು ಯುಕ್ತವೇ. ದುರ್ಭಗದುಃಖಿಶರೀರದಲ್ಲಿದ್ದರೂ ಭಗವಂತನಿಗೆ ಅಲ್ಲಿ ಇರುವ ದೋಷದ ಸಂಪರ್ಕವೇ ಇಲ್ಲ. ಅದು ಅವನ ಮಹಿಮೆ ಎಂದರ್ಥ.

ಸತ್ವಾದಿಗುಣರಹಿತನಾದ ಭಗವಂತ ಆ ಗುಣಗಳನ್ನು ಹೇಗೆ ಸ್ವೀಕರಿಸುತ್ತಾನೆ? ವಿಕಾರವಿಲ್ಲದವನು ಕ್ರಿಯೆಗಳನ್ನು ಹೇಗೆ ಮಾಡುತ್ತಾನೆ? ಎಂದೂ ವಿದುರ ಕೇಳಿದ್ದಾನೆ. ಈ ಪ್ರಶ್ನೆಗಳಿಗೂ ಭಗವಂತನ ಮಹಿಮೆ ಎಂದೇ ಉತ್ತರ. ಗುಣಗಳನ್ನು ಸ್ವೀಕರಿಸಿದರೂ ತತ್ಪ್ರಯುಕ್ತ ದೋಷಸ್ಪರ್ಶವಿಲ್ಲದ್ದರಿಂದ ಗುಣರಹಿತನೆನಿಸುತ್ತಾನೆ. ಸೃಷ್ಟ್ಯಾದಿ ಕ್ರಿಯೆಗಳನ್ನು ಮಾಡಿದರೂ ಅದರಿಂದ ಕ್ಲೇಶಾದಿಗಳಿಲ್ಲದ್ದರಿಂದ ವಿಕಾರ ರಹಿತನೆನಿಸುತ್ತಾನೆ, ಎಂದು ಇದನ್ನು ಸೂಚಿಸಲೆಂದೇ ಶ್ರೀಮದಾಚಾರ್ಯರು ದುರ್ಭಗತ್ವಾದಿಸ್ಪರ್ಶವಿಲ್ಲ ಎನ್ನದೆ ದೋಷಸ್ಪರ್ಶವಿಲ್ಲ ಎಂದು ಸಾಮಾನ್ಯವಾಗಿ ಹೇಳಿದ್ದಾರೆ.

* * *

ಜೀವಶರೀರಗಳಲ್ಲಿ ಜೀವೇಶ್ವರರು ಇಬ್ಬರೂ ಇದ್ದರೂ ಈಶ್ವರನಿಗೆ ದುಃಖಾದಿಗಳಿಲ್ಲ, ಜೀವರಿಗಿದೆ, ಏನು ಕಾರಣ ಎಂದರೆ ಶರೀರಾದಿಗಳಲ್ಲಿ ಜೀವರಿಗೆ ಸ್ವಾತಂತ್ರ್ಯಭ್ರಮವಿರುವುದೇ ಅದಕ್ಕೆ ಕಾರಣ ಎನ್ನುತ್ತ ಅದಕ್ಕೆ ದೃಷ್ಟಾಂತವನ್ನೂ ತೋರಿಸುತ್ತಾರೆ ಮೈತ್ರೇಯರು-

ಯಥಾಽರ್ಥೇನ ವಿನಾಽಮುಷ್ಯ ಪುಂಸ ಆತ್ಮವಿಪರ್ಯಯಃ ।
ಪ್ರತೀಯತ ಉಪದ್ರಷ್ಟುಃ ಸ್ವಶಿರಶ್ಛೇದನಾದಿಕಃ ॥ ೧೦ ॥

ಸ್ವಪ್ನದಲ್ಲಿ ತನಗೆ ಬಾಹ್ಯ ವಾಸ್ತವ ಶಿರಶ್ಛೇದವಿಲ್ಲದಿದ್ದರೂ ವಾಸನಾಮಯ ಶಿರಶ್ಛೇದವಾಗುವುದು ಬಾಹ್ಯ ವಾಸ್ತವವೆಂದು ಭ್ರಾಂತಿಯಿಂದ ಕಾಣುವಂತೆ ಅಸ್ವಂತ್ರನಾದ ಜೀವನಿಗೆ ಅದಕ್ಕೆ ವಿಪರೀತವಾಗಿ ತನ್ನ ಶರೀರಾದಿಗಳಲ್ಲಿ ಸ್ವಾತಂತ್ರ್ಯವು ಭ್ರಾಂತಿಯಿಂದ ಕಾಣುತ್ತದೆ. ಈ ಭ್ರಾಂತಿಯಿಂದಾಗಿಯೆ ಜೀವನಿಗೆ ಸತ್ಯವಾದ ಸಂಸಾರ.

ಸ್ವಾತಂತ್ರ್ಯಪ್ರತೀತಿ ಭ್ರಾಂತಿಯಾದರೂ ದುಃಖಾದಿಪ್ರತೀತಿ ರೂಪವಾದ ಸಂಸಾರ ಅದರಂತೆ ಭ್ರಾಂತಿಯಲ್ಲ, ವಾಸ್ತವವೇ ಎನ್ನುತ್ತಾರೆ-

ಯಥಾ ಜಲೇ ಚಂದ್ರಮಸಃ ಕಂಪಾದಿಸ್ತತ್ಕೃತೋ ಗುಣಃ ।
ದೃಶ್ಯತೇ ಸನ್ನಪಿ ದ್ರಷ್ಟುರಾತ್ಮನೋऽನಾತ್ಮನೋ ಗುಣಃ ॥ ೧೧ ॥

ನೀರಲ್ಲಿ ಬೀಳುವ ಚಂದ್ರಪ್ರತಿಬಿಂಬದಲ್ಲಿ ನೀರಿನಿಂದಾದ ಸತ್ಯವಾದ ಚಲನೆಯೇ ಕಂಡು ಬರುತ್ತದೆ. ಹಾಗೆಯೆ ದುಃಖಾದಿಗಳನ್ನು ಸಾಕ್ಷ್ಯನುಭವದಿಂದ ಕಾಣುವ ಜೀವನಲ್ಲಿ ಅಂತಃಕರಣದಿಂದಾದ ಸತ್ಯವಾದ ದುಃಖಾದಿಗಳೇ ಕಾಣುತ್ತವೆ. ಅವು ಸತ್ಯವೆನ್ನುವಲ್ಲಿ ಸಾಕ್ಷ್ಯನುಭವವೇ ಪ್ರಮಾಣ.

ಸಂಸಾರದುಃಖಾದಿಗಳು ಸತ್ಯವೇ ಆದರೆ ಅವುಗಳ ನಿವೃತ್ತಿ ಹೇಗೆ? ಸತ್ಯಕ್ಕೆ ನಿವೃತ್ತಿ ಇಲ್ಲ ತಾನೆ ಎಂದರೆ, ಸಂಸಾರಕಾರಣವಾದ ಸ್ವಾತಂತ್ರ್ಯಭ್ರಾಂತಿ ಪರಮಾತ್ಮ ತತ್ವಜ್ಞಾನದಿಂದ ನಾಶವಾದಾಗ ಸಂಸಾರವೂ ಪರಮಾತ್ಮನ ಅನುಗ್ರಹದಿಂದ ನಿವೃತ್ತಿ ಹೊಂದುತ್ತದೆ ಎನ್ನುತ್ತಾರೆ-

ಸ ವೈ ನಿವೃತ್ತಿಧರ್ಮೇಣ ವಾಸುದೇವಾನುಕಂಪಯಾ ।
ಭಗವದ್ಭಕ್ತಿಯೋಗೇನ ತಿರೋಧತ್ತೇ ಶನೈರಿಹ ॥ ೧೨ ॥

ನಿಷ್ಕಾಮಕರ್ಮದಿಂದ ಲಭಿಸುವ ಭಗವದ್ಭಕ್ತಿಯೋಗದಿಂದ ಹರಿಯ ಅನುಗ್ರಹ ಉಂಟಾದಾಗ ಸಂಸಾರ ನಿಧಾನವಾಗಿ ಮರೆಯಾಗುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಸ್ವಪ್ನದಲ್ಲಿ ಸ್ವಶಿರಶ್ಛೇದ ಕಾಣುವುದು ಹೇಗೆ ಭ್ರಾಂತಿಯೋ ಹಾಗೇ ಜೀವನಿಗೆ ಸಂಸಾರಾನುಭವವೂ ಭ್ರಾಂತಿ, ಎಂದಿದ್ದಾರೆ. ಆದರೆ ಸ್ವಪ್ನದಲ್ಲಿ ಕಾಣುವ ಶಿರಶ್ಛೇದ ಸುಳ್ಳಲ್ಲ, ವಾಸನಾಮಯವಾಗಿದ್ದು ಸತ್ಯವೇ ಆಗಿದೆ. ಅದರಲ್ಲಿ ಬಾಹ್ಯತ್ವಮಾತ್ರ ಭ್ರಮ. ಚಿಪ್ಪಿನಲ್ಲಿ ಬೆಳ್ಳಿಯಂತೆ, ಹಗ್ಗದಲ್ಲಿ ಹಾವಿನಂತೆ ಸುಳ್ಳೆಂದು ಉದಾಹರಣೆ ಕೊಡಬೇಕಾಗಿತ್ತು. ಮುಂದಿನ ಶ್ಲೋಕದಲ್ಲಿ ನೀರಿನಲ್ಲಿ ಬೀಳುವ ಚಂದ್ರನ ಪ್ರತಿಬಿಂಬದಲ್ಲಿ ಸುಳ್ಳಾದ ಚಲನೆ ಕಾಣುತ್ತದೆ, ಬಿಂಬನಾದ ಆಕಾಶದ ಚಂದ್ರನಲ್ಲಿ ಕಾಣುವುದಿಲ್ಲ, ಹಾಗೆ ಸುಳ್ಳಾದ ಸಂಸಾರ ಪ್ರತಿಬಿಂಬನಾದ ಜೀವನಲ್ಲಿ ಕಾಣುತ್ತದೆ, ಬಿಂಬನಾದ ಈಶ್ವರನಲ್ಲಿ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನೀರಿನಲ್ಲಿ ಪ್ರತಿಬಿಂಬವೂ ಸತ್ಯ. ಅದರಲ್ಲಿ ಚಲನೆಯೂ ಸತ್ಯ. ಅದರಿಂದ ದೃಷ್ಟಾಂತ ಸರಿಯಿಲ್ಲ.

ವಸ್ತುತಃ ಸಂಸಾರ ಸತ್ಯವೆನ್ನುವಲ್ಲಿಯೇ, ಅದು ಪ್ರತಿಬಿಂಬನಾದ ಜೀವನಲ್ಲಿ ಮಾತ್ರ, ಹೊರತು ಬಿಂಬನಾದ ಈಶ್ವರನಲ್ಲಿ ಇಲ್ಲ ಎನ್ನುವಲ್ಲಿಯೇ ಈ ದೃಷ್ಟಾಂತ ಸರಿಹೊಂದುತ್ತದೆ. ಸಂಸಾರ ಸತ್ಯವೆ, ಅದಕ್ಕೆ ಕಾರಣವು ದೇಹಾದಿಗಳ ವಿಷಯದಲ್ಲಿ

ಜೀವನಿಗೆ ಸ್ವಾತಂತ್ರ್ಯಭ್ರಮ ಎನ್ನಲು ಸ್ವಪ್ನದೃಷ್ಟಾಂತ. ಅಲ್ಲಿ ಬಾಹ್ಯತ್ವಭ್ರಮವಿದೆ. ಅದರಂತೆ ಜೀವನಿಗೆ ಸ್ವಾತಂತ್ರ್ಯಭ್ರಮ. ಹಗ್ಗದಲ್ಲಿ ಹಾವಿನ ಭ್ರಮ ಬಂದಾಗ ಮೈಯಲ್ಲಿ ಸತ್ಯವೇ ಆದ ನಡುಕ ಉಂಟಾಗುವಂತೆ ಸ್ವಾತಂತ್ರ್ಯಭ್ರಮದಿಂದ ಸತ್ಯವೇ ಆದ ದುಃಖಾದಿರೂಪ ಸಂಸಾರ ಜೀವನಲ್ಲಿದೆ

ಸತ್ಯವಾದ ಸಂಸಾರ ಬಂಧನ ಹೋಗಬೇಕಾದರೆ ಪರಮಾತ್ಮನ ಅನುಗ್ರಹ ಬೇಕು. ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಸಂಸಾರ ಸುಳ್ಳಾಗಿದ್ದರೆ ತತ್ವಜ್ಞಾನದಿಂದ ಹಗ್ಗದಲ್ಲಿ ಕಂಡ ಹಾವಿನಂತೆ ಸ್ವತಃ ಮಾಯವಾಗಬೇಕಾಗುತ್ತದೆ, ಯಾರ ಅನುಗ್ರಹವೂ ಬೇಕಾಗಿಲ್ಲ. ಪರಮಾತ್ಮನ ಅನುಗ್ರಹದಿಂದ ತತ್ವಜ್ಞಾನ, ಅದರಿಂದ ಸಂಸಾರಭ್ರಮ ತೊಲಗುತ್ತದೆ, ಸತ್ಯವಾದ ಬ್ರಹ್ಮಹತ್ಯಾಪಾಪವೂ, ಸೇತುದರ್ಶನರೂಪವಾದ ಜ್ಞಾನದಿಂದ ಪರಿಹಾರವಾಗುವಂತೆ ಸತ್ಯವಾದ ಸಂಸಾರವೇ ಪರಮಾತ್ಮ ತತ್ವಜ್ಞಾನದಿಂದ ತೊಲಗುತ್ತದೆ ಎನ್ನಲಡ್ಡಿ ಇಲ್ಲ. 'ಸ್ವಾತಂತ್ರ್ಯಭ್ರಮದಿಂದ ಜೀವನಲ್ಲಿರುವ ಸತ್ಯವಾದ ಸಂಸಾರವೇ ಪರಮಾತ್ಮತತ್ವಜ್ಞಾನದಿಂದ ನಾಶವಾಗುತ್ತದೆ' ಎಂದು ಸ್ಪಷ್ಟವಾಗಿ ಬ್ರಹ್ಮಾಂಡಪುರಾಣ ವಚನವಿದೆ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ ಮತ್ತು

ಇಷ್ಟರವರೆಗೆ ಭಾಗವತದಲ್ಲಿ ವಿದುರ ಏನು ಪ್ರಶ್ನೆ ಮಾಡಿದ್ದಾನೆ, ಅದಕ್ಕೆ ಮೈತ್ರೇಯರು ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ಭಾಲ್ಲವೇಯಶ್ರುತಿಯೆ ಹೇಳಿದೆ ಎಂದು ಅದನ್ನೂ ಉದಾಹರಿಸುತ್ತಾರೆ-

ಕಥಂ ದೇಹೇ ಪರೋ ದೇವೋ ನ ಲಿಪ್ಯೇತೇಹ ಬಂಧನೈಃ ।
ಕಥಂ ನ ದುಃಖೀ ಸ ಭವೇದ್ ದುಃಖೀ ಚೇದೀಶ್ವರಃ ಕುತ ॥

ಮಹಿಮಾ ಪರಮಸ್ಯೈಷ ಯದ್ ದೇಹಸ್ಥೋ ನ ಬಾಧ್ಯತೇ ।
ಯದದುಃಖೀ ಸ ಈಶಾನೋ ಮಾಯೇತಿ ಮಹಿಮೋಚ್ಯತೇ ॥

ಪ್ರಧಾನಂ ಮಯ ಇತ್ಯಾಹುಃ ಪ್ರಾಧಾನ್ಯಾನ್ಮಯತಾ ಭವೇತ್ ।
ಅತೋ ಮಾಯಾಮಯಂ ಪ್ರಾಹುರ್ಮಹಾಮಾಯಮನಾಮಯಮ್॥
ಇತಿ ಭಾಲ್ಲವೇಯಶ್ರುತಿಃ ॥

ಅಲುಪ್ತಬೋಧರೂಪತ್ವಾನ್ನಾಸೌ ಪ್ರಾಕೃತದೇಹವಾನ್ ।
ನ ಚ ಸೃಷ್ಟ್ಯಾದಿಕಂ ಭ್ರಾಂತಿರ್ಭ್ರಾಂತಿವಾದಾ ಹಿ ದಾನವಾಃ ॥

ಅತೋ ಭ್ರಾಂತ್ಯಾ ಹಿ ಸಂಬಂಧೋ ನಾಸ್ಯ ಕ್ವಚನ ಯುಜ್ಯತೇ ।
ಭ್ರಾಂತ್ಯಾ ಜೀವಸ್ಯ ಸಂಸಾರ ಈಶಜ್ಞಾನಾದ್ ವಿಲೀಯತೇ ।
ಭ್ರಾಂತಿರ್ದೇಹಾದ್ಯಭಿಮತಿರತೋ ಜ್ಞಾನಾದ್ ವಿನಶ್ಯತಿ ॥
ಇತಿ ಬ್ರಹ್ಮಾಂಡೇ ॥

ದುಃಖಿಜೀವರ ಶರೀರದಲ್ಲಿದ್ದರೂ ಪರಮಾತ್ಮನು ಜೀವರ ಕರ್ಮಬಂಧನದಿಂದ ಲೇಪ ಹೊಂದದಿರಲು ಹೇಗೆ ಸಾಧ್ಯ? ಲೇಪ ಹೊಂದಿದರೆ ದುಃಖಿಯಾಗದಿರಲು ಹೇಗೆ ಸಾಧ್ಯ? ದುಃಖಿಯಾದರೆ ಪರಮಾತ್ಮನೆನಿಸಲು ಹೇಗೆ ಸಾಧ್ಯ? ಅವನು ಪರಮಾತ್ಮನೇ. ಅದರಿಂದ ದುಃಖವಿಲ್ಲದ್ದರಿಂದ ಕರ್ಮಬಂಧನ ಅವನಿಗಿಲ್ಲ ಎಂದೇ ಹೇಳಬೇಕು. ಆದರೆ ದುಃಖಿಜೀವರ ಶರೀರದಲ್ಲಿರುವುದರಿಂದ ಜೀವನಂತೆ ಕರ್ಮಬಂಧನವಿದೆ ಎಂದೇ ಯುಕ್ತಿಯಿಂದ ಸಿದ್ಧವಾಗುತ್ತಿದೆ. ಅದರಿಂದ ನನಗೆ ಸಂಶಯ ಎಂದು ವಿದುರನು ಕೇಳುತ್ತಾನೆ.

ಮೈತ್ರೇಯರು ಹೇಳುತ್ತಾರೆ– ಪರಮಾತ್ಮ ದುಃಖಿಜೀವರ ಶರೀರದಲ್ಲಿದ್ದರೂ ಶರೀರ ಬದ್ಧನಲ್ಲ. ದುಃಖಿಯಲ್ಲ. ದುಃಖಿಯಲ್ಲದಿರುವುದಕ್ಕೆ ಅವನ ಮಹಿಮೆ ಕಾರಣ. ಮಹಿಮೆ ಇಲ್ಲದಿರುತ್ತಿದ್ದರೆ ಮಾತ್ರ ದುಃಖಕರ್ಮಬಂಧನಗಳು ಇರುತ್ತಿದ್ದುವು. ಮಹಿಮೆ ಇದ್ದರೂ ಕರ್ಮಬಂಧನವಿರುತ್ತಿದ್ದರೆ ದುಃಖಿಯಾಗುತ್ತಿದ್ದ, ಅಂಥವನು ಈಶ್ವರನೆನಿಸುತ್ತಿರಲಿಲ್ಲ. ಆದರೆ ಅವನು ಈಶ್ವರ, ದುಃಖರಹಿತ. ಅದರಿಂದ ಕರ್ಮಬಂಧನವೂ ಅವನಿಗಿಲ್ಲ. ಅದಕ್ಕೆ ಕಾರಣ ಅವನ ಮಹಿಮೆ ಎಂದೇ ಹೇಳಬೇಕು. ಈ ಮಹಿಮಯನ್ನೇ ಮೈತ್ರೇಯರು ಮಾಯೆ ಎಂದಿದ್ದಾರೆ.

ಭಗವಂತನನ್ನು ಶ್ರುತಿಗಳು ಕೆಲವೆಡೆ ಮಾಯಾಮಯನೆಂದು ಕರೆದ ಮಾತ್ರಕ್ಕೆ ಅವನು ಮಿಥ್ಯೆಯಾಗುವುದಿಲ್ಲ. ಏಕೆಂದರೆ ದೊಡ್ಡವಸ್ತುವನ್ನು ಮಯ ಎನ್ನುತ್ತಾರೆ. ಮಹತ್ವವಿರುವಲ್ಲಿ ಮಯಶಬ್ದವ್ಯವಹಾರ. ಅದರಿಂದ ಮಹಾಮಹಿಮೆ ಉಳ್ಳ ಭಗವಂತನನ್ನು ಮಾಯಾಮಯ ಎನ್ನುತ್ತಾರೆ. ಮಯ-ಮಹತ್ತಾದ, ಮಾಯಾ–ಮಹಿಮೆ ಉಳ್ಳವನು, 'ಅಗ್ನ್ಯಾಹಿತ' ಮುಂತಾದಶಬ್ದಗಳಂತೆ ಪರನಿಪಾತ. ಅದರಿಂದ ಮಹಾಮಹಿಮ ಎಂದರ್ಥ. ಮಿಥ್ಯೆ ಎಂದರ್ಥ ಏಕೆ ಅಲ್ಲ ಎಂದರೆ ಅವನು ಅನಾಮಯ, ಅವಿದ್ಯಾದಿದೋಷರಹಿತ ಎಂದು ಭಾಲ್ಲವೇಯಶ್ರುತಿ ಹೇಳಿದೆ.

ಅವನ ಸಾಕ್ಷಾತ್ಕಾರವೇ ಜೀವರಿಗೆ ದೇಹಬಂಧವನ್ನು ಕಳೆಯುವಂಥದ್ದು. ಅಂಥ ಬಂಧವಿರೋಧಿಯಾದ ಅವನ ಸಾಕ್ಷಾತ್ಕಾರ ಅವನಿಗೆ ಸದಾ ಮರೆಯಾಗದೆ ಇರುವುದರಿಂದ ಅವನಿಗೆ ಪ್ರಾಕೃತದೇಹಬಂಧವಿಲ್ಲ. ಗುಣರಹಿತನಾದ ಭಗವಂತನಿಗೆ ಗುಣಸಂಬಂಧ, ಅವಿಕಾರಿಯಾದ ಅವನಿಗೆ ಸೃಷ್ಟ್ಯಾದಿಕ್ರಿಯೆ ಎಲ್ಲವೂ ಭ್ರಾಂತಿಕಲ್ಪಿತ ಎಂದೇಕೆ ಹೇಳಬಾರದೆಂದರೆ ಎಲ್ಲವೂ ಭ್ರಾಂತಿಕಲ್ಪಿತವೆನ್ನುವವರು ದಾನವರು. ಅದರಿಂದ ಪ್ರಪಂಚ ಭ್ರಾಂತಿಕಲ್ಪಿತವೆಂದು ಅದಕ್ಕೆ ಭ್ರಾಂತಿಸಂಬಂಧವನ್ನು ಹೇಳುವುದು ಎಂದೂ ಯುಕ್ತವಾಗುವುದಿಲ್ಲ. ಏಕೆಂದರೆ ಸತ್ಯತ್ವವು ಶ್ರುತಿಸಿದ್ಧವಾಗಿದೆ.

ಜ್ಞಾನಸ್ವರೂಪಿಯಾದ ಜೀವನಿಗೆ ಪ್ರಾಕೃತದೇಹಬಂಧವು ಆ ದೇಹಾದಿಗಳ ವಿಷಯದಲ್ಲಿ ಅವನಿಗಿರುವ ಸ್ವಾತಂತ್ರ್ಯಭ್ರಮ ಪ್ರಯುಕ್ತವಾಗಿದೆ. ಸತ್ಯವಾಗಿದೆ. ಅದು

ಪರಮಾತ್ಮತತ್ವಜ್ಞಾನದಿಂದ ದೂರವಾಗುತ್ತದೆ. ದೇಹದಲ್ಲಿ ಸ್ವಾತಂತ್ರ್ಯಭ್ರಮವೆಂದರೆ ದೇಹಾಭಿಮಾನ. ಇದು ನನ್ನದೆಂಬ ಸ್ವಾತಂತ್ರ್ಯಾಭಿಮಾನ. ಅದರಿಂದ ಅದು ಪರಮಾತ್ಮತತ್ವಜ್ಞಾನದಿಂದ ನಾಶವಾಗುತ್ತದೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

* * *

ಎಲ್ಲ ದುಃಖಗಳ ಶಾಶ್ವತಪರಿಹಾರ ಪರಮಾತ್ಮನ ಅಪರೋಕ್ಷದಿಂದ ಮೋಕ್ಷ ದೊರಕಿದಾಗಲೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಯದೇಂದ್ರಿಯೋಪರಾಮಾರ್ಥೋ ದೃಷ್ಟಾತ್ಮನಿ ಪರೇ ಹರೌ ।
ವಿಲೀಯಂತೇ ತದಾ ಕ್ಲೇಶಾಃ ಸಂಸುಪ್ತಸ್ಯೇವ ಕೃತ್ಸ್ನಶಃ ॥ ೧೩ ॥

ಪರಮಾತ್ಮನ ಅಪರೋಕ್ಷವಾದ ಬಳಿಕ ಶಾಶ್ವತವಾಗಿ ಇಂದ್ರಿಯಗಳಿಂದ ಬಿಡುಗಡೆಯಾಗಿ ಮುಕ್ತಿ ಎಂಬ ಪುರುಷಾರ್ಥ ಲಭಿಸಿದಾಗಲೆ ಎಲ್ಲ ದುಃಖಗಳು ಶಾಶ್ವತವಾಗಿ ಪರಿಹಾರವಾಗುತ್ತವೆ, ಗಾಢನಿದ್ರೆಯಲ್ಲಿ ತಾತ್ಕಾಲಿಕವಾಗಿ ಇಂದ್ರಿಯಗಳಿಂದ ಬಿಡಿಗಡೆಯಾಗಿ ಎಲ್ಲ ದುಃಖ ಮರೆಯಾಗುವಂತೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಯದೇಂದ್ರಿಯೋಪರಾಮೋಽಥ ದ್ರಷ್ಟಾತ್ಮನಿ ಪರೇ ಹರೌ' ಎಂದು ಪಾಠವಿಟ್ಟುಕೊಂಡು 'ಇಂದ್ರಿಯಗಳು ಪರಮಾತ್ಮನಲ್ಲಿ ನೆಟ್ಟಾಗ ಎಲ್ಲ ಕ್ಲೇಶಪರಿಹಾರ' ಎಂದಿದ್ದಾರೆ. ಆದರೆ ಗಾಢನಿದ್ರೆ ದೃಷ್ಟಾಂತ. ಪ್ರಾಕೃತವಾದ ಇಂದ್ರಿಯಗಳು ಗಾಢನಿದ್ರೆಯಲ್ಲಿ ಪರಮಾತ್ಮನಲ್ಲಿ ಎಂದೂ ನೆಲೆಗೊಳ್ಳುವುದಿಲ್ಲ. ಅದರಿಂದ ಗಾಢನಿದ್ರೆಯ ದೃಷ್ಟಾಂತ ಸರಿ ಹೊಂದುವುದಿಲ್ಲ. ಕೇವಲ ಸಕಲ ದುಃಖನಿವೃತ್ತಿಯ ಅಂಶದಲ್ಲಿ ದೃಷ್ಟಾಂತವೆನ್ನಬೇಕಾಗುತ್ತದೆ. ಅದಕ್ಕಿಂತಲೂ ಅಪರೋಕ್ಷವಾದಾಗ ಪರಮಾತ್ಮನ ಅನುಗ್ರಹದಿಂದ ಶಾಶ್ವತವಾಗಿ ಇಂದ್ರಿಯಗಳಿಂದ ಬಿಡುಗಡೆ. ಅದೇ ಮೋಕ್ಷ, ಆಗಲೆ ಕ್ಲೇಶಪರಿಹಾರ. ಗಾಢನಿದ್ರೆಯಲ್ಲಿ ತಾತ್ಕಾಲಿಕವಾಗಿ ಯಾದರೂ ಇಂದ್ರಿಯಗಳಿಂದ ಬಿಡುಗಡೆ ಇದೆ. ಅದರಿಂದ ದೃಷ್ಟಾಂತ ಸರಿಯಾಗುತ್ತದೆ.

ಇಂದ್ರಿಯೋಪರಾಮಾಖ್ಯಃ ಪುರುಷಾರ್ಥೋ ಮುಕ್ತಿಃ ।

ಇಂದ್ರಿಯೋಪರಾಮವಾಗಬೇಕು, ಅಂದರೆ, ಎಲ್ಲ ಜಡ ಇಂದ್ರಿಯಗಳು ನಾಶ ಹೊಂದಬೇಕು. ಸ್ವರೂಪೇಂದ್ರಿಯಗಳು ಭಗವಂತನಲ್ಲಿ ನೆಲೆಗೊಳ್ಳಬೇಕು. ಅದೇ ಅರ್ಥ. ಅಂದರೆ ಪುರುಷಾರ್ಥ, ಮುಕ್ತಿ, ಅದು ದೊರೆತಾಗಲೆ ಸಕಲಕ್ಲೇಶಪರಿಹಾರ.

* * *

ದುಃಖಿ ಜೀವರ ಶರೀರದಲ್ಲಿ ಹರಿ ಇದ್ದರೂ ಅವನಿಗೆ ದುಃಖಲೇಶವಿಲ್ಲ ಎಂಬ ವಿಷಯದಲ್ಲಿ ನನಗೆ ಸಂದೇಹ ಪರಿಹಾರವಾಯಿತು. ಆದರೆ ಅವತಾರಗಳಲ್ಲಿ ಹರಿಗೆ ಜಡದೇಹ ಪ್ರತ್ಯಕ್ಷ ಕಾಣುತ್ತದೆ. ಅದನ್ನು ನಂಬಬೇಕೆ ಬೇಡವೆ ಎಂಬ ಸಂದೇಹ ಬರುತ್ತದೆ ಎಂದು ವಿದುರ ಮೈತ್ರೇಯರಲ್ಲಿ ಕೇಳುತ್ತಾನೆ–

ವಿದುರ ಉವಾಚ–

ಸಂಛಿನ್ನಃ ಸಂಶಯೋ ಮಹ್ಯಂ ತವ ಸೂಕ್ತಾಸಿನಾ ವಿಭೋ ।
ಉಭಯತ್ರಾಪಿ ಭಗವನ್ ಮನೋ ಮೇ ಸಂಪ್ರಧಾವತಿ ॥ ೧೫ ॥

ಸಾಧು ತದ್ ವ್ಯಾಹೃತಂ ವಿದ್ವನ್ನಾತ್ಮಮಾಯಾಯನಂ ಹರೇಃ ।
ಆಭಾತ್ಯಪಾರ್ಥಂ ನಿರ್ಮೂಲಂ ವಿಶ್ವಮೂಲಂ ನ ಯದ್ ಬಹಿಃ॥ ೧೬ ॥

ದುಃಖಿಜೀವರ ಶರೀರದಲ್ಲಿದ್ದರೂ ಹರಿಗೆ ದುಃಖವಿಲ್ಲವೆಂಬ ವಿಷಯದಲ್ಲಿ ನನಗೆ ಇದ್ದ ಸಂಶಯ ತಮ್ಮ ಮಾತೆಂಬ ಖಡ್ಗದಿಂದ ಹರಿದು ಹೋಯಿತು. ಆದರೂ ಇನ್ನೊಂದು ವಿಷಯದಲ್ಲಿ ನನ್ನ ಮನಸ್ಸು ದೋಲಾಯಮಾನಸ್ಥಿತಿಗೆ ಬಂದಿದೆ. ಅದೇನೆಂದರೆ, ದುಃಖಿಜೀವರ ದುಃಖ ಭಗವಂತನಿಗೆ ಲೇಪವಾಗದು ಎನ್ನುವುದು ಅವನ ಮಹಿಮೆ ಎಂದು ನೀವು ಹೇಳಿದ್ದು ಸರಿಯೆ. ಆದರೂ ಅವತಾರಗಳಲ್ಲಿ ಹರಿಗೆ ಜಡದೇಹ ಪ್ರತ್ಯಕ್ಷ ಕಾಣುತ್ತದೆ. ಯದ್ಯಪಿ ಜೀವನಿಗಿರುವಂತೆ ಹರಿಗೆ ಜಡದೇಹದಿಂದ ಸುಖಾನುಭವವಾಗಬೇಕಿಲ್ಲ, ಅವನು ಪೂರ್ಣಾನಂದ. ಮತ್ತು ಜೀವನಿಗಿರುವಂತೆ ಹರಿಗೆ ಜಡದೇಹಸಂಬಂಧಕಾರಣವಾದ ಭ್ರಾಂತ್ಯಾದಿಗಳೂ ಇಲ್ಲ. ಹಾಗಿದ್ದರೂ ಜಡ ದೇಹವಿರುವುದು ಸ್ಪಷ್ಟ ಕಣ್ಣಿಗೆ ಕಾಣಿಸುತ್ತದೆ. ಅದನ್ನು ಒಪ್ಪದಿರಲು ಶಕ್ಯವಿಲ್ಲ. ಆದರೆ ಹರಿ ಪ್ರಪಂಚಕ್ಕೇ ಮೂಲಕಾರಣ ಎಂದ ಮೇಲೆ ಅವನ ಜಡಶರೀರಕ್ಕೆ ಇನ್ನೊಬ್ಬರು ಕಾರಣವಿರಲೂ ಶಕ್ಯವಿಲ್ಲ ಎಂಬುದನ್ನೂ ಆಲೋಚಿಸಲೇ ಬೇಕಾಗುತ್ತದೆ. ಹೀಗೆ ನನ್ನ ಮನಸ್ಸು ಎರಡೂ ಕಡೆ ಹೊಯ್ದಾಡುತ್ತ ದೋಲಾಯಮಾನವಾಗಿದೆ.

ಇಲ್ಲಿ 'ಉಭಯತ್ರಾಪಿ ಮನೋ ಮೇ ಸಂಪ್ರಧಾವತಿ' ಎರಡೂ ಕಡೆ ನನ್ನ ಮನಸ್ಸು ಡೋಲಾಯಮಾನವಾಗಿ ಧಾವಿಸುತ್ತದೆ ಎಂದರೆ ಸಂಶಯಗ್ರಸ್ತವಾಗುತ್ತದೆ ಎಂಬ ಅರ್ಥ ಸ್ಪಷ್ಟವಾಗಿ ಹೊರಡುತ್ತದೆ. ಮುಂದಿನ ಶ್ಲೋಕದಲ್ಲಿ 'ಕ್ಲಿಶ್ಯತ್ಯಂತರಿತೋ ಜನಃ' ಪೂರ್ತಿ ತಿಳಿದೂ ಇಲ್ಲ ತೀರ ಅಜ್ಞಾನವೂ ಇಲ್ಲದಂಥ ಸಂದೇಹಾವಸ್ಥೆಯವರು ದುಃಖಪಡುತ್ತಾರೆ ಎಂದು ವಿದುರ ತನ್ನ ಅವಸ್ಥೆಯನ್ನು ಹೇಳಿಕೊಳ್ಳುವುದರಿಂದಲೂ ಅವನಿಗಿನ್ನೂ ಸಂಶಯವಿದೆ ಎನ್ನುವುದು ವ್ಯಕ್ತವಾಗುತ್ತದೆ. ಹಾಗಿದ್ದರೂ ಬೇರೆ ವ್ಯಾಖ್ಯಾನಕಾರರು ಇಲ್ಲಿ ' ಉಭಯತ್ರಾಪಿ' ಎರಡು ವಿಷಯಗಳನ್ನು, ಅಂದರೆ ಪರಮಾತ್ಮ ಸ್ವತಂತ್ರ, ಜೀವ ಪರತಂತ್ರ ಎಂಬ ವಿಷಯಗಳನ್ನು ಮನಸ್ಸು

ಅವಗಾಹನಮಾಡುತ್ತದೆ ಎಂದು ಶ್ರೀಧರಸ್ವಾಮಿ ಶುಕದೇವ ವ್ಯಾಖ್ಯಾನಗಳಲ್ಲಿ, ಹರಿಕಥಾಶ್ರವಣ ಗುರುಶುಶ್ರೂಷೆ ಎರಡನ್ನೂ ಮನಸ್ಸು ಬಯಸುತ್ತದೆ ಎಂದು ವೀರರಾಘವವ್ಯಾಖ್ಯಾನದಲ್ಲಿ, ಜ್ಞಾನ ಭಕ್ತಿಗಳನ್ನು ಬಯಸುತ್ತದೆ ಎಂದು ಜೀವಗೋಸ್ವಾಮಿ ಹಾಗೂ ವಿಶ್ವನಾಥಚಕ್ರವರ್ತಿವ್ಯಾಖ್ಯಾನಗಳಲ್ಲಿ ಹೇಳಿದ್ದು ಸ್ವರಸವಲ್ಲ. 'ಆಭಾತ್ಯಪಾರ್ಥಂ ನಿರ್ಮೂಲಂ' ಎಂಬಲ್ಲಿ ಸಂಸಾರದುಃಖ ಸುಳ್ಳು ಅದಕ್ಕೆ ಅವಿದ್ಯೆ ಹೊರತು ಬೇರೆ ಮೂಲವೂ ಇಲ್ಲ ಎಂದು ಗೊತ್ತಿದೆ. ಆದರೂ ಅನುಭವಕ್ಕೆ ಬರುತ್ತಲೇ ಇದೆ. ಗುರುಗಳ ಅನುಗ್ರಹದಿಂದ ಅದನ್ನು ನಿವಾರಣೆ ಮಾಡಿ ಕೊಳ್ಳುತ್ತೇನೆ ಎನ್ನುವುದು ವಿದುರನ ಅಭಿಪ್ರಾಯ ಎನ್ನುತ್ತಾರೆ. ಆದರೆ 'ವಿಶ್ವಮೂಲಂ ನ ಯದ್ ಬಹಿಃ' ಪ್ರಪಂಚಕ್ಕೆ ಮೂಲವಾದ ಅವಿದ್ಯೆ ಹೊರತು ಬೇರೆ ಮೂಲವಿಲ್ಲ ಎಂದು ಅದೇ ವಾಕ್ಯದಲ್ಲಿ ಹೇಳುವುದು ಪುನರುಕ್ತಿ. ವಿಶ್ವಮೂಲಂ-ಸ್ವಾಜ್ಞಾನಂ, ಬಹಿಃ–ವಿನಾ, ನಾಸ್ತಿ ಎಂದು ಅವರವ್ಯಾಖ್ಯಾನ. ಅದರಿಂದ ಹೀಗೆ ವ್ಯಾಖ್ಯಾನಿಸಬೇಕು.

ಸ್ವರೂಪಸಾಮರ್ಥ್ಯಾಶ್ರಯಂ । ಯದ್ ವ್ಯಾಹೃತಂ ।

ಅಪಾರ್ಥಂ ನಿರ್ಮೂಲಂ ಚ ದೇಹಸಂಬಂಧಿತ್ವಾದ್ವ್ಯಾಭಾತಿ, ವಿಶ್ವ ಮೂಲಂ ಬ್ರಹ್ಮ ಚ ಯತ್ ಮಮ ಜ್ಞಾನಾದ್ ಬಹಿರ್ನ ಭವತಿ, ತಸ್ಮಾತ್ ಉಭಯತ್ರ ಧಾವತಿ ।

'ಆತ್ಮ ಮಾಯಾ ಅಯನಂ' ಎಂದರೆ 'ಸ್ವರೂಪ-ಸಾಮರ್ಥ್ಯ-ಆಶ್ರಯಂ' ದುಃಖಿಜೀವರ ದುಃಖದ ಲೇಪ ಭಗವಂತನಿಗಾಗದಿರುವುದು ಅವನ ಮಹಿಮೆ. ಎಂದರ್ಥ, 'ಸಾಧು ತದ್ ವ್ಯಾಹೃತಂ' ಎಂದರೆ 'ಯದ್ ವ್ಯಾಹೃತಂ ತತ್ ಸಾಧು' ನೀವು ಏನು ಹೇಳಿದಿರೊ ಅದು ಸರಿ ಎಂದರ್ಥ.

ಭಗವಂತನಿಗೆ ಅವತಾರಗಳಲ್ಲಿ ಜಡದೇಹ ಸಂಬಂಧವು ಅಪಾರ್ಥಂ-ಪ್ರಯೋಜನಶೂನ್ಯ ಮತ್ತು ನಿರ್ಮೂಲಂ- ನಿಷ್ಕಾರಣವೂ ಆಗಿದ್ದರೂ ಆಭಾತಿ-ಸ್ಪಷ್ಟವಾಗಿ ಪ್ರತ್ಯಕ್ಷಗೋಚರವಾಗುತ್ತದೆ. ಯತ್–ಯಾವಕಾರಣದಿಂದ ವಿಶ್ವಮೂಲಂ-ಪ್ರಪಂಚಕ್ಕೆ ಮೂಲಕಾರಣವಾದ ಪರಮಾತ್ಮನೂ ನನ್ನ ಜ್ಞಾನದ ವ್ಯಾಪ್ತಿಯಿಂದ ಹೊರಗಿಲ್ಲ, ಅಂದರೆ ಅದೂ ಗೊತ್ತು, ಆಕಾರಣದಿಂದ ಉಭಯತ್ರ ಧಾವತಿ–ನನ್ನ ಮನಸ್ಸು ಎರಡು ಕಡೆಗೆ ಹೊಯ್ದಾಡುತ್ತಿದೆ ಸಂಶಯಗ್ರಸ್ತವಾಗಿದೆ.

* * *

ಪರಮಾತ್ಮನ ಬಗ್ಗೆ ಏನೂ ತಿಳಿಯದವನೂ ಆ ವಿಷಯದಲ್ಲಿ ಪಾರಂಗತ ನಾದವನೂ ಇಬ್ಬರೂ ಏನೂ ಯೊಚನೆ ಇಲ್ಲದೆ ಸುಖವಾಗಿಯೇ ಇರುತ್ತಾರೆ.

ನಡುವೆ ಇರುವವನು ಮಾತ್ರ ಸಂಶಯದಿಂದ ದುಃಖಪಡುತ್ತಾನೆ. ನಾನೂ ಅದೇ ಸ್ಥಿತಿಯಲ್ಲಿದ್ದೇನೆ. ಆದರೂ ಪರಮಾತ್ಮನಿಗೆ ಅವತಾರಗಳಲ್ಲಿ ಜಡ ದೇಹ ಒಪ್ಪಿದರೆ ಅದರಿಂದ ಪ್ರಯೋಜನವಿಲ್ಲ, ಅದಕ್ಕೆ ಕಾರಣವೂ ಇಲ್ಲ ಎಂಬುದನ್ನು ಮನಸಿಗೆ ತಂದುಕೊಂಡು ಜಡದೇಹ ಪ್ರತ್ಯಕ್ಷದಲ್ಲಿ ಕಾಣುವುದೇ ಭ್ರಮೆಯೆಂದು ನಿಮ್ಮ ಅನುಗ್ರಹದಿಂದ ಸಂಶಯ ಪರಿಹಾರ ಮಾಡಿಕೊಳ್ಳುತ್ತೇನೆ ಎನ್ನುತ್ತಾನೆ ವಿದುರ–

ಯಶ್ಚ ಮೂಢತಮೋ ಲೋಕೇ ಯಶ್ಚ ಬುದ್ಧೇಃ ಪರಂ ಗತಃ ।
ತಾವುಭೌ ಸುಖಮೇಧೇತೇ ಕ್ಲಿಶ್ಯತ್ಯಂತರಿತೋ ಜನಃ ॥ ೧೭ ॥

ಅರ್ಥಾಭಾವಂ ವಿನಿಶ್ಚಿತ್ಯ ಪ್ರತೀತಸ್ಯಾಪ್ಯನಾತ್ಮನಃ ।
ತಾಂ ಚಾಪಿ ಯುಷ್ಮಚ್ಚರಣಸೇವಯಾಽಹಂ ಪರಾಣುದೇ ॥ ೧೮ ॥

ಯಾರು ಏನೂ ಅರಿಯದ ಮೂಢನೋ ಯಾರು ಬ್ರಹ್ಮಜ್ಞಾನ ಪಾರಂಗತನೋ ಇವರಿಬ್ಬರೂ ಲೋಕದಲ್ಲಿ ಯಾವ ಯೋಚನೆಯೂ ಇಲ್ಲದೆ ಸುಖವಾಗಿರುತ್ತಾರೆ. ಆದರೆ ಈ ಎರಡೂ ವರ್ಗಕ್ಕೆ ಸೇರದ ಮಧ್ಯವರ್ತಿ ಜನರು ಮಾತ್ರ ಸಂಶಯಚಿತ್ತರಾಗಿ ಕ್ಲೇಶಪಡುತ್ತಾರೆ.

ಅದರಿಂದ ನಾನು ನನ್ನ ಸಂಶಯವನ್ನು ನಿಮ್ಮ ಪಾದಸೇವೆಯ ಬಲದಿಂದ ಪರಿಹಾರ ಮಾಡಿಕೊಳ್ಳುತ್ತೇನೆ. ಹೇಗೆಂದರೆ ಪರಮಾತ್ಮನಿಗೆ ಅವತಾರದಲ್ಲಿ ಕಂಡ ಶರೀರಸಂಬಂಧಕ್ಕೆ ಪ್ರಯೋಜನವಿಲ್ಲ, ಕಾರಣವಿಲ್ಲ ಎಂಬುದನ್ನು ನಿಮ್ಮ ಉಪದೇಶದ ಬಲದಿಂದ ನಿರ್ಧರಿಸಿ ಶರೀರಸಂಬಂಧ ಕಣ್ಣಿಗೆ ಕಾಣುವುದು ಭ್ರಮವೆಂದೇ ನಿಶ್ಚಯಿಸುತ್ತೇನೆ.

ಶ್ರೀಕೃಷ್ಣನಿಗೆ ಜಡಶರೀರವಿದ್ದಮಾತ್ರಕ್ಕೆ ಪರಮಾತ್ಮನಿಗೆ ಜಡಶರೀರವಿದೆ ಎನ್ನುವುದು ಹೇಗೆ ಎಂಬ ಪ್ರಶ್ನೆ ಬಂದರೆ ಶ್ರೀಕೃಷ್ಣ ಪರಮಾತ್ಮನ ಅವತಾರವೆಂದು ಶಾಸ್ತ್ರದಿಂದ ತಿಳಿದು ಬಂದಿದೆ ಎನ್ನಬೇಕು. ಆ ಶಾಸ್ತ್ರವನ್ನು ಒಪ್ಪುವುದಾದರೆ ಅದೇ ಶಾಸ್ತ್ರ ಪರಮಾತ್ಮನಿಗೆ ಜಡಶರೀರವಿಲ್ಲವೆನ್ನುವುದರಿಂದ ಅದನ್ನೂ ಒಪ್ಪಬೇಕು ಹೀಗಾಗಿ ಕಣ್ಣಿಗೆ ಜಡ ಶರೀರವಿದ್ದಂತೆ ಕಾಣುವುದು ಭ್ರಮವೆಂದೇ ಸಿದ್ಧವಾಗುವುದು.

ಇಲ್ಲಿ ಅರ್ಥಾಭಾವ ಎಂದರೆ ಪರಮಾರ್ಥಸತ್ಯತ್ವಾಭಾವ. ಪ್ರತೀತವಾದ ಸಂಸಾರದುಃಖಕ್ಕೆ ವಾಸ್ತವತ್ವವಿಲ್ಲವೆಂದು ನಿಶ್ಚಿತವಾದರೂ ಅನುಭವದಲ್ಲಿ ಕಾಣುತ್ತಲೇ ಇದೆ. ಅದನ್ನೂ ಗುರುಸೇವೆಯಿಂದ ದೂರಮಾಡಿಕೊಳ್ಳುತ್ತೇನೆ ಎಂದು ಶ್ರೀಧರ ರಾಧಾರಮಣದಾಸ ವಿಶ್ವನಾಥ ವಲ್ಲಭರ ವ್ಯಾಖ್ಯಾನಗಳು ಹೇಳಿವೆ. ಅರ್ಥಶಬ್ದವನ್ನು ಅರ್ಥತ್ವ ಎಂಬ ಅರ್ಥದಲ್ಲಿ ಬಲಾತ್ಕಾರವಾಗಿ ಎಳೆದಿವೆ. ವೀರರಾಘವ ಶುಕದೇವವ್ಯಾಖ್ಯಾನಗಳಲ್ಲಿ ಅರ್ಥಾಭಾವ ಎಂದರೆ ಆತ್ಮತ್ವಾಭಾವ, ಶರೀರದಲ್ಲಿ

ಆತ್ಮತ್ವಾಭಾವನನ್ನು ನಿಶ್ಚಯಿಸಿ ಆತ್ಮತ್ವಪ್ರತೀತಿಯನ್ನು ದೂರಮಾಡಿ ಕೊಳ್ಳುವೆನೆಂದರ್ಥ. ಈ ವ್ಯಾಖ್ಯಾನವೂ ಸ್ವರಸವಲ್ಲ. ಅರ್ಥವೆಂದರೆ ಆತ್ಮತ್ವವೆಂದು ಬಲಾತ್ಕಾರದಿಂದ ಅರ್ಥೈಸಬೇಕಾಗುತ್ತದೆ. ಅದರಿಂದ ಅರ್ಥ ಎಂದರೆ ಪ್ರಯೋಜನವೆಂದು ವ್ಯಾಖ್ಯಾನಿಸುವುದೇ ಸೂಕ್ತ. ಪೂರ್ಣಕಾಮನಾದ ಪರಮಾತ್ಮನಿಗೆ ಜಡದೇಹವನ್ನೊಪ್ಪಿದರೆ ಆ ದೇಹದಿಂದ ಅವನಿಗೇನು ಪ್ರಯೋಜನವೆಂಬ ಪ್ರಶ್ನೆ ಬರುವುದರಿಂದ ಜಡದೇಹವನ್ನು ಒಪ್ಪಬಾರದು. ಹೀಗೆ 'ಜಡದೇಹವಿರಬಹುದೆ?' ಎಂಬ ಸಂಶಯಪರಿಹಾರವೇ ಈ ಶ್ಲೋಕದ ಅರ್ಥ.

ಅದರಿಂದ 'ಕ್ಲಿಶ್ಯತ್ಯಂತರಿತೋ ಜನಃ' ನಾನು ಹಿಂದೆ ಸಂಶಯಕ್ಕೊಳಗಾಗಿ ಕ್ಲೇಶಪಡುತ್ತಿದ್ದೆ, ಈಗ ಇಲ್ಲ. ಆದರೂ ಸಾಂಸಾರಿಕ ದುಃಖ ಸುಳ್ಳೆಂದು ತಿಳಿದಮೇಲೂ ದುಃಖ ಅನುಭವಕ್ಕೆ ಬರುತ್ತಿದೆ, ಅದನ್ನೂ ಕಳೆದು ಕೊಳ್ಳುವೆನೆಂ'ದು ಬೇರೆ ವ್ಯಾಖ್ಯಾನಕಾರರು ಹೇಳುವುದು ಸರಿಯಲ್ಲ 'ಉಭಯತ್ರಾಪಿ ಮನೋ ಧಾವತಿ' ಈಗ ಸಂಶಯವಿದೆ ಎಂದೇ ಹೇಳಿದಂತೆ ಸ್ಪಷ್ಟ ಕಾಣುತ್ತಿದೆ. ಆ ಸಂಶಯವನ್ನೇ ಪರಿಹರಿಸಿಕೊಳ್ಳುತ್ತೇನೆ ಎಂದು 'ತಾಂ ಚಾಪಿ ಪರಾಣುದೇ' ಎಂಬ ಮಾತು ಹೇಳುತ್ತಿದೆ ಎನ್ನಬೇಕು–

ತಸ್ಮಾದಂತರಿತೋಽಸ್ಮಿ । ತಥಾಪಿ ತಾಂ ಪ್ರತೀತಿಂ ಪರಾಣುದೇ ।

ಅದರಿಂದ, ಅಂದರೆ, ಪ್ರತ್ಯಕ್ಷದಲ್ಲಿ ಭಗವಂತನಿಗೆ ಜಡಶರೀರ ಗೋಚರವಾಗುತ್ತಿರುವುದರಿಂದ ಅದು ಇಲ್ಲವೆಂಬ ವಿಷಯದಲ್ಲಿ ಸಂಶಯಗ್ರಸ್ತನಾಗಿದ್ದೇನೆ. ಆದರೂ 'ಸೇಯಂ ಭಗವತೋ ಮಾಯಾ' ಎಂದು ನಿಮ್ಮ ಪಾದಸೇವೆಯಿಂದ ಲಬ್ಧವಾದ ಉಪದೇಶದ ಬಲದಿಂದ ಆ ಪ್ರತ್ಯಕ್ಷಪ್ರತೀತಿಯನ್ನೂ ನಿರಾಕರಿಸುತ್ತೇನೆ. ಅಂದರೆ, 'ಜಡಶರೀರವಿಲ್ಲ' ವೆನ್ನುವ ಆಗಮದ ಮುಂದೆ, 'ಇದೆ' ಎನ್ನುವ ಪ್ರತ್ಯಕ್ಷ ಪ್ರತೀತಿ ದುರ್ಬಲವಾಗಿದ್ದು ಸಂದೇಹಕ್ಕೆ ಕಾರಣವಾಗು ವುದಿಲ್ಲವೆಂದು ನಿರ್ಧರಿಸುತ್ತೇನೆ ಎಂದರ್ಥ.

* * *

ನಿಮ್ಮಂಥ ಜ್ಞಾನಿಗಳ ಪಾದಸೇವೆ ನನಗೆ ಸಿಗಬೇಕಾದರೆ ನಾನು ಬಹಳ ಪುಣ್ಯ ಮಾಡಿರಬೇಕು. ಕಡಿಮೆ ಪುಣ್ಯಮಾಡಿದವನಿಗೆ ಅದು ದುರ್ಲಭ ಎಂದು ವಿದುರ ಮೈತ್ರೇಯರನ್ನು ಪ್ರಶಂಸಿಸುತ್ತಾನೆ–

ದುರಾಪಾ ಹ್ಯಲ್ಪತಪಸಾಂ ಸೇವಾ ವೈಕುಂಠವರ್ತ್ಮಸು ।
ಯತ್ರೋಪಗೀಯತೇ ನಿತ್ಯಂ ದೇವದೇವೋ ಜನಾರ್ದನಃ ॥ ೨೦ ॥

ನಿಮ್ಮ ಬಳಿ ಸದಾ ದೇವದೇವನಾದ ಹರಿಯ ಗುಣಗಾನವೇ ನಡೆಯುತ್ತದೆ. ಪರಮಾತ್ಮನನ್ನು ಸೇರುವ ದಾರಿ ತೋರುವ ನಿಮ್ಮ ಸೇವೆ ಅಲ್ಪಪುಣ್ಯವಂತರಿಗೆ ದುರ್ಲಭ.

ಇಲ್ಲಿ ವಿದುರ 'ನಾನು ಅಜ್ಞಾನಿ, ಅಲ್ಪ ಪುಣ್ಯವಂತ, ನಿಮ್ಮ ಉಪದೇಶ ಪಡೆಯಲು ಬಹಳ ಪುಣ್ಯಮಾಡಿರಬೇಕು' ಎಂದು ಹೇಳುತ್ತಿರುವುದು, ಹಿಂದಿನ ಶ್ಲೋಕದಲ್ಲಿ 'ನಾನು ಸಂದೇಹಕ್ಕೊಳಗಾಗಿ ಕ್ಲೇಶಪಡುತ್ತಿದ್ದೆ' ಎಂದು ಮುಂತಾಗಿ ಹೇಳಿದ್ದು, ಮುಂದೆಯೂ ೪೦ನೇ ಶ್ಲೋಕದಲ್ಲಿ 'ನಾನು ತತ್ವಮಾರ್ಗದಲ್ಲಿ ಕಣ್ಣಿಲ್ಲದ ಕುರುಡ' ಎಂದು ಮುಂತಾಗಿ ಹೇಳುವುದು ಇವೆಲ್ಲವೂ ಯಮಾಂಶಸಂಭೂತನಾದ ಜ್ಞಾನಿಯಾದ ವಿದುರನಿಗೆ ಒಪ್ಪುವುದಿಲ್ಲ. ಹೀಗೆ ಸುಳ್ಳು ಹೇಳಿದರೆ ಪಾಪ ಬರುವುದಿಲ್ಲವೆ? ಎಂಬ ಸಂದೇಹಕ್ಕೆ ಅವಕಾಶವಿದೆ. ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆ ಎತ್ತಿಕೊಳ್ಳಲಿಲ್ಲ. [೧]ರಾಧಾರಮಣದಾಸ ವ್ಯಾಖ್ಯಾನಪ್ರಕಾರ ವಿದುರ ಭಗವಂತನ ಪರಿವಾರಕ್ಕೆ ಸೇರಿದ ಒಬ್ಬ ನಿತ್ಯಮುಕ್ತಚೇತನ. ಇದೆಲ್ಲವೂ ಕೇವಲ ಲೀಲೆ, ನಾಟಕ. ಅವನಲ್ಲಿ ಯಮನ ಆವೇಶದಿಂದಾಗಿ ಅವನನ್ನೇ ಯಮಾಂಶ ಎಂದು ವ್ಯವಹರಿಸುತ್ತಾರಷ್ಟೆ. ಅವನು ಶೂದ್ರನೂ ಅಲ್ಲ, ಶೂದ್ರನೆಂದೂ ಭಗವದ್ಭಕ್ತನಲ್ಲ ಎಂದಿದ್ದಾರೆ (ಭಾಗ.೩.೫.೨೦) ಆದರೆ ವಿದುರ ನಾಟಕವಾಡುತ್ತಿದ್ದರೂ 'ಸುಳ್ಳು ಹೇಳುವುದು ತಪ್ಪಲ್ಲ' ಎಂದು ಲೋಕಕ್ಕೆ ಉಪದೇಶಿಸುವಂತೆ ನಡೆದು ಕೊಳ್ಳಬಹುದೆ? ಅದಕ್ಕೆ ಶ್ರೀಮದಾಚಾರ್ಯರು ವಿದುರನ ಮಾತು ಸುಳ್ಳಾದರೂ ತಪ್ಪಲ್ಲ ಎನ್ನುತ್ತಾರೆ-

ಆತ್ಮನಸ್ತು ಗುಣಾಭಾವಂ ವದತೋ ನ ತ್ವಸತ್ಯತಾ ।
ಅಪೃಷ್ಟಸ್ಯ ದಮಾರ್ಥಂ ಚ ಗುಣಾಯೈವ ಭವತ್ಯಪಿ ॥
ಇತಿ ವ್ಯಾಸಸ್ಮೃತೇಃ ।

ವಿದ್ಯಮಾನಮಪ್ಯನುಭವಮನ್ಯಥಾ ವದತಿ ವಿದುರಃ ।

ದ್ರೋಣದ್ರೌಣಿಕೃಪಾಃ ಪಾರ್ಥಾ ಭೀಷ್ಮೋ ವಿದುರಸಂಜಯೌ ।
ಯೇ ಚಾನ್ಯೇ ತತ್ರ ದೇವಾಂಶಾಃ ಸಮ್ಯಕ್ ತತ್ತ್ವಾಪರೋಕ್ಷಿಣಃ ॥
ಇತಿ ಸ್ಕಾಂದೇ ।

---

೧. ಮಹಾಭಾಗವತೋ ಯಮ ಏವ ತ್ವಂ । ನ ಶೂದ್ರಃ । ಯತಃ 'ನ ಶೂದ್ರಾ ಭಗವದ್ಭಕ್ತಾಸ್ತೇ ತು ಭಾಗವತಾಃ ಸ್ಥಿತಾಃ । ಸರ್ವವರ್ಣೇಷು ತೇ ಶೂದ್ರಾ ಯೇ ನ ಭಕ್ತಾ ಜನಾರ್ದನೇ ಇತಿ । ವಸ್ತುತಸ್ತು ಭಗವತ್ಪರಿಕರೋಽಯಂ ವಿದುರೋ ನಿತ್ಯಸಿದ್ಧ ಏವ । ತತ್ರ ಯಮಸ್ಯ ಪ್ರಕಟಲೀಲಾಯಾಂ ಪ್ರವೇಶಾದಭೇದ ವ್ಯವಹಾರ ಇತಿ ಜ್ಞೇಯಂ । – ರಾಧಾರಮಣದಾಸಃ

ತನ್ನಲ್ಲಿ ಜ್ಞಾನಾದಿಗುಣಗಳಿಲ್ಲವೆಂದು ದೇವಾಂಶಸಂಭೂತರಾದ ವಿದುರ ಮುಂತಾದವರು ಹೇಳಿದರೂ ಅವರಿಗೆ ಸುಳ್ಳು ಹೇಳಿದ ಪಾಪ ಬರುವುದಿಲ್ಲ. ಏಕೆಂದರೆ ಜಿಜ್ಞಾಸೆಯಿಂದ ಕೇಳುವವರಿಗೇ ತತ್ತ್ವೋಪದೇಶಮಾಡಬೇಕೆಂದು ವಿಧಿ ಇರುವುದರಿಂದ ವಿದುರ ತಾನು ಅಜ್ಞ, ಜಿಜ್ಞಾಸುವಾಗಿದ್ದೇನೆ ಎನ್ನದಿರುತ್ತಿದ್ದರೆ ಮೈತ್ರೇಯರು ಜಿಜ್ಞಾಸುವಲ್ಲದವರಿಗೆ ಉಪದೇಶಿಸಿ ಪಾಪಭಾಗಿಯಾಗುತ್ತಿದ್ದರು. ಅದಕ್ಕೆ ಅವಕಾಶವಾಗಬಾರದೆಂದು ವಿದುರ ಜಿಜ್ಞಾಸುವಾಗಿ ಕೇಳಿದ್ದಾನೆ. ಅದರಿಂದ ಲೋಕಕ್ಕೆ ಉಪಕಾರವಾಗಲಿ ಎಂಬುದು ವಿದುರನ ಆಶಯ. ತನಗೂ ಜ್ಞಾನದಾರ್ಢ್ಯ, ವಿಶೇಷ ಜ್ಞಾನಲಾಭವೆಂಬ ಪ್ರಯೋಜನವಿದೆ. ಅದರಿಂದ ತನಗೆ ಜ್ಞಾನವಿದ್ದರೂ ಇಲ್ಲವೆನ್ನುತ್ತಿದ್ದಾನೆ, ವಿದುರ, ಹೊರತು ಅವನನ್ನು ಅಜ್ಞಾನಿ ಎಂದು ತಿಳಿಯಬಾರದು. ಏಕೆಂದರೆ ಸ್ಕಾಂದಪುರಾಣ ಹೇಳಿದೆ–'ದ್ರೋಣ, ಅಶ್ವತ್ಥಾಮ, ಕೃಪ, ಪಾಂಡವರು ಭೀಷ್ಮ, ವಿದುರ, ಸಂಜಯರು, ಬೇರೆ ಅಭಿಮನ್ಯು ಮುಂತಾದವರು ದೇವಾಂಶ ಸಂಭೂತರು ಯಾರಾರು ಕುರುವಂಶದಲ್ಲಿ ಬಂದಿರುವರೋ ಅವರೆಲ್ಲರೂ ಪರಮಾತ್ಮತತ್ತ್ವವನ್ನು ಚೆನ್ನಾಗಿ ಅಪರೋಕ್ಷದಿಂದ ಕಂಡವರೇ ಎಂದು.

* * *

''ಶ್ರೀಹರಿ ಮಹದಾದಿ ತತ್ತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಷ್ಟಿ ಮಾಡಿದ ಮೇಲೆ ಬ್ರಹ್ಮಾಂಡಾಂತರ್ಗತವಾದ ವಿರಾಡ್ ಬ್ರಹ್ಮನ ಶರೀರವನ್ನು ಸೃಷ್ಟಿಸಿ ಪ್ರವೇಶಿಸಿದನೆಂದು ನೀವು ಹೇಳಿದ್ದೀರಿ'' ಎಂದು, ವಿದುರ ಮುಂದೆ ಬೇರೆ ಪ್ರಶ್ನೆಮಾಡುವುದಕ್ಕಾಗಿ ಮೊದಲಿಗೆ ಮೈತ್ರೇಯರು ಹೇಳಿದ್ದನ್ನು ಅನುವಾದ ಮಾಡುತ್ತಾನೆ-

ಸೃಷ್ಟ್ವಾಽಗ್ರೇ ಮಹದಾದೀನಿ ಸವಿಕಾರಾಣ್ಯನುಕ್ರಮಾತ್ ।
ತೇಭ್ಯೋ ವಿರಾಜಮುದ್ಧೃತ್ಯ ತಮನು ಪ್ರಾವಿಶದ್ ವಿಭುಃ ॥ ೨೧ ॥

ಶ್ರೀಹರಿ ಮೊದಲಿಗೆ ಮಹತ್ತತ್ತ್ವದಿಂದಾರಂಭಿಸಿ ಎಲ್ಲ ತತ್ತ್ವಗಳನ್ನೂ ಬ್ರಹ್ಮಾಂಡವನ್ನೂ ಕ್ರಮವಾಗಿ ಸೃಷ್ಟಿಸಿ ಅವುಗಳಿಂದ ವಿರಾಡ್‌ಬ್ರಹ್ಮನ ಶರೀರ ನಿರ್ಮಾಣ ಮಾಡಿ ಅದನ್ನು ಪ್ರವೇಶಿಸಿದನು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ವಿಕಾರ ಎಂದರೆ ಇಂದ್ರಿಯಗಳೆಂದಿಟ್ಟುಕೊಂಡು ವಿರಾಡ್ ಎಂದರೆ ಬ್ರಹ್ಮಾಂಡವೆಂದು ವ್ಯಾಖ್ಯಾನಿಸಿದ್ದಾರೆ. ವಸ್ತುತಃ ವಿಕಾರ ಎಂದರೆ ಬ್ರಹ್ಮಾಂಡ. ವಿರಾಡ್‌ಎಂದರೆ ಬ್ರಹ್ಮಾಂಡಾಂತರ್ಗತ ವಿರಾಟ್ ನಾಮಕ ಬ್ರಹ್ಮ ಶರೀರ. ಹೀಗೆ ಹೇಳದಿದ್ದರೆ ಬ್ರಹ್ಮಪುರಾಣ ಗರುಡಪುರಾಣಗಳ ವಿರೋಧ.

ವಿರಾಜಂ ಬ್ರಹ್ಮಾಣಂ ।

ಬ್ರಹ್ಮಾಣಂ ಪ್ರಾವಿಶದ್ ವಿಷ್ಣುಃ ಸಹಸ್ರಾಕ್ಷಃ ಸಹಸ್ರಪಾತ್ ।

ಇತಿ ಬ್ರಾಹ್ಮೇ ।

ಅನುಪ್ರವಿಶ್ಯ ಬ್ರಹ್ಮಾಣಂ ಪ್ರಾಣಂ ದಶವಿಧಂ ತಥಾ ।
ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ವರ್ಣಾಂಶ್ಚೈವಾಸೃಜದ್ಧರಿಃ ॥
ಇತಿ ಗಾರುಡೇ ॥

'ವಿರಾಜಂ' ಎಂದರೆ ವಿರಾಡ್ ಎಂಬ ಹೆಸರಿನ ಬ್ರಹ್ಮಾಂಡಾಂತರ್ಗತ ಬ್ರಹ್ಮಶರೀರವನ್ನು ಹರಿ ಪ್ರವೇಶಿಸಿದನೆಂದರ್ಥ. ಏಕೆಂದರೆ ಬ್ರಹ್ಮಪುರಾಣದಲ್ಲಿ ಹೇಳಿದೆ–'ಸಹಸ್ರಾಕ್ಷ ಸಹಸ್ರಪಾದನಾದ ವಿಷ್ಣು ವಿರಾಡ್ ಎಂಬ ಬ್ರಹ್ಮನ ಶರೀರವನ್ನು ಪ್ರವೇಶಿಸಿದನು' ಎಂದು. ಗರುಡಪುರಾಣದಲ್ಲಿಯೂ ಹೇಳಿದೆ–'ಶ್ರೀಹರಿಯು ವಿರಾಡ್‌ಬ್ರಹ್ಮಶರೀರವನ್ನು ಪ್ರವೇಶಿಸಿ ಅದರಲ್ಲಿ ದಶವಿಧ ಪ್ರಾಣನನ್ನೂ ಇಂದ್ರಿಯಗಳನ್ನೂ ಇಂದ್ರಿಯವಿಷಯಗಳನ್ನೂ ಬ್ರಾಹ್ಮಣಾದಿ ನಾಲ್ಕು ವರ್ಣಗಳನ್ನೂ ಸೃಷ್ಟಿಸಿದನು'

* * *

ವರ್ಣಾಶ್ರಮ ವಿಭಾಗಗಳನ್ನೂ ಋಷಿಗಳ ಜನ್ಮಕರ್ಮಗಳನ್ನೂ ವೇದಗಳ ಶಾಖಾಭೇದ ವಿಭಾಗವನ್ನೂ ಹೇಳಿರೆಂದು ವಿದುರನು ಮೈತ್ರೇಯರನ್ನು ಕೇಳಿಕೊಳ್ಳುತ್ತಾನೆ–

ವರ್ಣಾಶ್ರಮವಿಭಾಗಾಂಶ್ಚ ರೂಪಶೀಲಸ್ವಭಾವತಃ ।
ಋಷೀಣಾಂ ಜನ್ಮಕರ್ಮಾಣಿ ವೇದಸ್ಯ ಚ ವಿಕರ್ಷಣಮ್ ॥ ೨೯ ॥

ಇಲ್ಲಿ ವರ್ಣಾಶ್ರಮ ವಿಭಾಗಗಳನ್ನೂ ರೂಪಶೀಲ ಸ್ವಭಾವಾನುಸಾರವಾಗಿ ಋಷಿಗಳ ಜನ್ಮಕರ್ಮಗಳನ್ನೂ ವೇದ ವಿಭಾಗವನ್ನೂ ಹೇಳಿರಿ 'ವೇದಸ್ಯ ಚ ವಿಕರ್ಷಣಂ' ಎನ್ನುವುದರ ಅರ್ಥ ಸ್ಪಷ್ಟವಿಲ್ಲ. ಅದಕ್ಕೆ ಹೇಳುತ್ತಾರೆ-

ವಿಕರ್ಷಣಂ ವಿಭಾಗಃ ।

ವಿಕರ್ಷಣವೆಂದರೆ ಶಾಖಾಭೇದದಿಂದ ವೇದಗಳನ್ನು ವಿಭಾಗಮಾಡುವುದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಅಷ್ಟಮೋಽಧ್ಯಾಯಃ

—o—

ಅಧ್ಯಾಯ-೮

ಅಧ್ಯಾಯಸಾರಾಂಶ

ಪಾತಾಳಲೋಕದಲ್ಲಿ ಶೇಷದೇವನಿಂದ ಸನತ್ಕುಮಾರ ಭಾಗವತ ಉಪದೇಶ ಪಡೆದು ಸಾಂಖ್ಯಾಯನರಿಗೆ ಉಪದೇಶಿಸಿದ. ಸಾಂಖ್ಯಾಯನ ಪರಾಶರ ಬೃಹಸ್ಪತಿಗಳಿಗೆ ಉಪದೇಶಸಿದ. ಪರಾಶರರಿಂದ ಮೈತ್ರೇಯರು ಉಪದೇಶ ಪಡೆದು ವಿದುರನಿಗೆ ಉಪದೇಶಿಸುತ್ತಿದ್ದಾರೆ. 'ಪ್ರಳಯಜಲದಲ್ಲಿ ಶೇಷನ ಮೇಲೆ ಪವಡಿಸಿದ ನಾರಾಯಣನ ಉದರದೊಳಗಿನ ಗರ್ಭೋದಕ ಹೆಪ್ಪುಗಟ್ಟಿ ಪೃಥಿವಿಯಾಗಿ ನಾಭಿಯ ಮೂಲಕ ಹೊರಗೆ ಕಮಲ ದಾಕಾರದಲ್ಲಿ ವ್ಯಕ್ತವಾಯಿತು. ಆ ಕಮಲದಲ್ಲಿ ಚತುರ್ಮುಖ ಜನಿಸಿ ಹೊರಗೆ ಎಲ್ಲಿಯೂ ಹರಿಯನ್ನು ಕಾಣದೆ ಕಮಲನಾಳದ ಒಳಗೂ ಕಾಣದೆ ಧ್ಯಾನದಿಂದ ಸಾಕ್ಷಾತ್ಕರಿಸಿಕೊಂಡ. ಅವನನ್ನು ಸ್ತುತಿಸಲು ತೊಡಗಿದ.' ಎಂದು ಮೈತ್ರೇಯರು ವಿದುರನಿಗೆ, ಶುಕಮುನಿ ಪರೀಕ್ಷಿತನಿಗೆ, ಸೂತರು ಶೌನಕರಿಗೆ ಹೇಳುತ್ತಿದ್ದಾರೆ.

* * *

ವಿದುರನ ಪ್ರಶ್ನೆಗಳಿಗೆ ಉತ್ತರವಾಗಿ ಮೈತ್ರೇಯರು ಸನಕಾದಿ ಮುನಿಗಳಿಗೆ ಶೇಷನು ಉಪದೇಶಿಸಿದ ಭಾಗವತವನ್ನೇ ಹೇಳುತ್ತೇನೆ ಎನ್ನುತ್ತ ಪಾತಾಳಲೋಕದಲ್ಲಿ ಕುಳಿತ ಶೇಷನನ್ನು ವರ್ಣಿಸುತ್ತಾರೆ–

ಸ್ವಮೇವ ಧಿಷ್ಣ್ಯಂ ಬಹುಮಾನಯಂತಂ
ಯಂ ವಾಸುದೇವಾಭಿಧಮಾಮನಂತಿ ।
ಪ್ರತ್ಯಗ್ ಧೃತಾಕ್ಷಾಂಬುಜ ಕೋಶಮೀಷದ್
ಉನ್ಮೀಲಯಂತಂ ವಿಬುಧೋದಯಾಯ ॥ ೪ ॥

ಶೇಷದೇವನು ಆಗ ತನಗೆ ಆಶ್ರಯನಾದ ಸಂಕರ್ಷಣಮೂರ್ತಿಯನ್ನು ಬಹುವಾಗಿ ಆರಾಧಿಸುತ್ತಿದ್ದ. ವೇದಗಳು ಯಾರನ್ನು ವಾಸುದೇವನೆಂಬ ಹೆಸರಿನಿಂದ ಕರೆಯುತ್ತವೆಯೋ ಆ ವಾಸುದೇವನಿಂದ ಅತ್ಯಂತ ಅಭಿನ್ನ ಈ ಸಂಕರ್ಷಣಮೂರ್ತಿ.

ಅವನ ಧ್ಯಾನದಲ್ಲಿ ಅಂತರ್ಮುಖವಾಗಿ ಮುಚ್ಚಿರುವ ಕಣ್ಣುಗಳನ್ನು ದೇವತೆಗಳ ಅಭ್ಯುದಯಕ್ಕಾಗಿ ಸ್ವಲ್ಪ ತೆರೆದ ಶೇಷದೇವ.

ಇಲ್ಲಿ ಧಿಷ್ಣ್ಯ ಶಬ್ದಕ್ಕೆ ಆಶ್ರಯ ಎಂಬ ಅರ್ಥವನ್ನು ಕೋಶದ ಆಧಾರದೊಂದಿಗೆ ತೋರಿಸುತ್ತಾರೆ-

ಆಧಾರ ಆಶ್ರಯೋ ಧಿಷ್ಣ್ಯಂ ನಿಧಾನಂ ಚಾಭಿಧೀಯತೇ ।
ಇತ್ಯಭಿಧಾನಮ್ ।

ಆಧಾರವು ಆಶ್ರಯ ಧಿಷ್ಣ್ಯ ನಿಧಾನ ಎಂದು ಕರೆಯಲ್ಪಡುತ್ತದೆ ಎಂದು ಅಭಿಧಾನ ಗ್ರಂಥ ಹೇಳಿದೆ.

* * *

ನಾರಾಯಣನ ನಾಭಿಕಮಲ ಉತ್ಪತ್ತಿಯಾದ ಬಗೆಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

---

ತಸ್ಯಾತ್ಮಸೂಕ್ಷ್ಮಾಭಿನಿವಿಷ್ಟದೃಷ್ಟೇ-
ರಂತರ್ಗತೋಽರ್ಥೋ ರಜಸಾಽತನೀಯಾನ್ ।
ಗುಣೇನ ಕಾಲಾನುಗತೇನ ವಿದ್ಧಃ
ಶುಷ್ಯಂಸ್ತದಾಽಭಿದ್ಯತ ನಾಭಿದೇಶಾತ್ ॥ ೧೩ ॥

ಸೃಷ್ಟಿಕಾಲ ಬಂದಾಗ ಜೀವರ ಸೂಕ್ಷ್ಮಶರೀರಗಳನ್ನು ಸ್ಥೂಲವಾಗಿಸಲು ಬಯಸಿದ ನಾರಾಯಣನ ಉದರದೊಳಗಿನ ಮಹಾಗರ್ಭೋದಕವು ಕಾಲಾನುಸಾರವಾಗಿ ರಜೋಗುಣದಿಂದ ಕ್ಷೋಭೆಗೊಂಡು ವಾಯುವಿನಿಂದ ಪೃಥಿವಿಯಾಗಿ ಕಮಲದ ಆಕಾರದಲ್ಲಿ ನಾಭಿರಂಧ್ರದಿಂದ ಹೊರಗೆ ವ್ಯಕ್ತವಾಯಿತು.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಶುಷ್ಯಂಸ್ತದಾ' ಎಂಬಲ್ಲಿ 'ಸೂಷ್ಯಂಸ್ತದಾ' ಎಂದು ಪಾಠ. 'ಸೂಷ್ಯನ್' ಎಂದರ 'ಪ್ರಸೋಷ್ಯನ್' ಉದ್ಭವಿಷ್ಯನ್' 'ಹುಟ್ಟುತ್ತ' ಎಂದು ವ್ಯಾಖ್ಯಾನ. ಇದು ಸ್ವರಸವಲ್ಲ. ಪ್ರಸವ ಎಂದರೆ ಹುಟ್ಟುವುದಲ್ಲ, ಹಡೆಯುವುದು. ಅದಕ್ಕೆ ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ಸ್ವಕಾರ್ಯವನ್ನು ಹುಟ್ಟಿಸುತ್ತ' ಎಂದು ಕಷ್ಟದಿಂದ ವ್ಯಾಖ್ಯಾನಿಸಲಾಗಿದೆ. 'ಅಂತರ್ಗತವಾದ ಅರ್ಥ' ಯಾವುದೆನ್ನುವಲ್ಲಿ ಒಮ್ಮತವಿಲ್ಲ. ಭೂತಸೂಕ್ಷ್ಮ ಎಂದು ವೀರರಾಘವ. ಪ್ರಾಕೃತಪದಾರ್ಥವೆಂದು ವಿಶ್ವನಾಥ. ಚೇತನಾಚೇತನಗಳೆಂದು ವಲ್ಲಭಾಚಾರ್ಯ. ಮೂಲೋಕದ ಜೀವರ ಲಿಂಗಶರೀರ ಸಮೂಹವೆಂದು ರಾಧಾರಮಣದಾಸ. ಈ

ಪದ್ಮ ನಾರಾಯಣನ ನಾಭಿಕಮಲವಲ್ಲ, ಬೇರೆ, ಎಂದು ಜೀವಗೋಸ್ವಾಮಿ. ಇವೆಲ್ಲವೂ ಪ್ರಮಾಣವಿರುದ್ಧ, ಪಾಠವೂ ತಪ್ಪೆಂದು ಪದ್ಮಪುರಾಣದಿಂದಲೆ ಸಿದ್ಧವಾಗುತ್ತದೆ.

ಉದಕಂ ವಾಯುನಾ ಶುಷ್ಕಂ ಭಿನ್ನಂ ಪದ್ಮಮಭೂದ್ಧರೇಃ ।

ಇತಿ ಪಾದ್ಮೇ ।

ಪರಮಾತ್ಮನ ಉದರದೊಳಗಿದ್ದ ಗರ್ಭೋದಕವು ವಾಯುವಿನಿಂದ ಗಟ್ಟಿ ಪೃಥಿವಿಯಾಗಿ ನಾಭಿದೇಶದಿಂದ ಹೊರಗೆ ಪದ್ಮವಾಯಿತು ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

* * *

ಹುಟ್ಟಿದ ನಾಭಿಕಮಲ ಬೆಳೆದ ಬಗೆಯನ್ನು ಮೈತ್ರೇಯರು ವಿದುರನಿಗೆ ಬಣ್ಣಿಸುತ್ತಾರೆ-

ಸ ಪದ್ಮಕೋಶಃ ಸಹಸೋದತಿಷ್ಠತ್
ಕಾಲೇನ ಕರ್ಮಪ್ರತಿಬೋಧಿತೇನ ।
ಸ್ವರೋಚಿಷಾ ತತ್ ಸಲಿಲಂ ವಿಶಾಲಂ
ವಿದ್ಯೋತಯನ್ನರ್ಕ ಇವಾತ್ಮಯೋನಿಃ ॥ ೧೪ ॥

ನಾರಾಯಣನಿಂದ ಜನಿಸಿದ ಆ ಪದ್ಮಕೋಶವು ಅದೃಷ್ಟವಶದಿಂದ ಎಚ್ಚೆತ್ತ ಕಾಲದ ಪ್ರಭಾವದಿಂದ, ಕಣ್ಣಿಗೆ ಕಾಣುವ ಕಾರಣವಿಲ್ಲದೆ, ಬೆಳೆದು ನಿಂತಿತು. ತನ್ನ ಕಾಂತಿಯಿಂದ ಸೂರ್ಯನಂತೆ ಪ್ರಳಯಜಲವನ್ನು ಬೆಳಗಿತು.

ಇಲ್ಲಿ 'ಆತ್ಮಯೋನಿ' ಎಂದರೆ, ಜೀವಾತ್ಮರಿಗೆ ಉತ್ಪತ್ತಿಕಾರಣ ಅಥವಾ ತನಗೆ ತಾನೇ ಕಾರಣ ಎಂದು ಅರ್ಥವಲ್ಲ.

ಆತ್ಮಾ ವಿಷ್ಣುರಸ್ಯ ಯೋನಿಃ ।

ವಿಷ್ಣು ಈ ಕಮಲಕ್ಕೆ ಉತ್ಪತ್ತಿಕಾರಣ ಎಂದರ್ಥ.

* * *

ವಿಷ್ಣು ತನ್ನ ನಾಭಿಕಮಲವನ್ನು ತಾನೇ ಪ್ರವೇಶಿಸಿದ. ಬಳಿಕ ಕಮಲದಿಂದ ಚತುರ್ಮುಖ ಬ್ರಹ್ಮನ ಉತ್ಪತ್ತಿ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ತಲ್ಲೋಕಪದ್ಮಂ ಸ ಉ ಏವ ವಿಷ್ಣುಃ
ಪ್ರಾವೀವಿಶತ್ ಸರ್ವಗುಣಾವಭಾಸಮ್ ।
ತಸ್ಮಿನ್ ಸ್ವಯಂ ವೇದಮಯೋ ವಿಧಾತಾ
ಸ್ವಯಂಭುವಂ ಯಂ ಪ್ರವದಂತಿ ಸೋಽಭೂತ್ ॥ ೧೫ ॥

ಲೋಕಾತ್ಮಕವಾದ ಪಾರ್ಥಿವವಾದ ಆ ನಾಭಿಕಮಲವನ್ನು ವಿಷ್ಣು ತಾನೇ ಅಂತರ್ಯಾಮಿಯಾಗಿ ಪ್ರವೇಶಿಸಿದ. ಕಮಲದಲ್ಲಿ ಅಂತರ್ಗತನಾದ ಅವನಿಂದ ಕಮಲದಲ್ಲಿ ಸಕಲವೇದದ್ರಷ್ಟಾರನಾದ ಬ್ರಹ್ಮ ಜನಿಸಿದ. ಅವನು ಸರ್ವೋತ್ತಮನಾದ ಹರಿಯಿಂದ ಜನಿಸಿದ್ದರಿಂದಲೆ ಸ್ವಯಂಭು ಎನಿಸಿದ.

ಇಲ್ಲಿ 'ಸ್ವಯಂ ವಿಧಾತಾ ಅಭೂತ್' ಬ್ರಹ್ಮ ತಾನೇ ಹುಟ್ಟಿದ. ಅವನಿಗೆ ಜನಕ ಯಾರೂ ಇಲ್ಲ. ಪೂರ್ವಕಲ್ಪದಲ್ಲಿದ್ದ ಬ್ರಹ್ಮ ಪ್ರಳಯಕಾಲದಲ್ಲಿ ನಾರಾಯಣನೊಡನೆ ಐಕ್ಯಹೊಂದಿ ಮಲಗಿದ್ದ. ಸೃಷ್ಟಿಕಾಲದಲ್ಲಿ ನಾರಾಯಣ ಎಚ್ಚೆತ್ತಾಗ ಬ್ರಹ್ಮ ಅವನಿಂದ ಬೇರೆಯಾಗಿ ಪದ್ಮದಿಂದ ತಾನೇ ಅಭಿವ್ಯಕ್ತನಾದ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. 'ಸ್ವಯಂ' ಎಂದರೆ ಭಗವಂತನು ತಾನೇ ಬ್ರಹ್ಮನಾಗಿ ಜನಿಸಿದ, ಬ್ರಹ್ಮವಿಷ್ಣುರುದ್ರರಿಗೆ ಭೇದವಿಲ್ಲದಿರುವುದರಿಂದ ಎಂದು ವಲ್ಲಭಾಚಾರ್ಯರು ಹೇಳಿ, ಈ ಬ್ರಹ್ಮ ಎಲ್ಲ ಜೀವರ ಸಮುದಾಯರೂಪನೆಂದೂ ಹೇಳುತ್ತಾರೆ. ಅಭೇದವು ಸಕಲ ಪ್ರಮಾಣವಿರುದ್ಧವಾದ್ದರಿಂದ 'ತಸ್ಮಿನ್' ಆ ಪದ್ಮದಲ್ಲಿ ಅಂತರ್ಗತನಾದ 'ಸ್ವಯಂ' ಸರ್ವೋತ್ತಮನಾದ ಭಗವಂತನಿಂದ 'ತಸ್ಮಿನ್' ಆ ಪದ್ಮದಲ್ಲಿ ಬ್ರಹ್ಮ ಜನಿಸಿದ ಎಂದು ಅನ್ವಯ ಹೇಳಬೇಕು. ಆದರಿಂದ 'ಸ್ವಯಂಭು' ಎಂದರೆ ಜನಕನಿಲ್ಲದೆ ಜನಿಸಿದವನೆಂದರ್ಥವಲ್ಲ.

'ಸರ್ವಗುಣಾವಭಾಸಂ' ಲೋಕಾತ್ಮಕವಾದ ಆ ಪದ್ಮದಲ್ಲಿ ಜೀವರಿಗೆ ಭೋಗ್ಯವಾದ ಸಕಲ ಪದಾರ್ಥಗಳು ವ್ಯಕ್ತವಾಗುತ್ತವೆ ಎಂದು ಶ್ರೀಧರವ್ಯಾಖ್ಯಾನ. ಗುಣಕಾರ್ಯವಾದ ಜೀವಭೋಗ್ಯ ಸ್ವರ್ಗನರಕಾದಿಗಳು ವ್ಯಕ್ತವಾಗುತ್ತವೆ ಎಂದು ವಿಶ್ವನಾಥವ್ಯಾಖ್ಯಾನ. ಭಗವಂತನ ಗುಣಗಳಿಗೆ ವ್ಯಂಜಕವಾದ ಕಾರ್ಯವಸ್ತುಗಳು ವ್ಯಕ್ತವಾಗುತ್ತವೆ ಎಂದು ವಲ್ಲಭವ್ಯಾಖ್ಯಾನ.

ಆದರೆ ಮಹಾಭಾರತ ಮೋಕ್ಷಧರ್ಮಪರ್ವದಲ್ಲಿ ಸರಸಿಜಾಸನನಾದ ಬ್ರಹ್ಮನಿಗೆ ಆಸನವು ಪೃಥಿವೀರೂಪದ ಪದ್ಮ ಎನ್ನಲಾಗಿದೆ. ಅಂದರೆ ಈ ಪದ್ಮ ಪೃಥಿವೀಮಯವೆನ್ನಬೇಕು. 'ಸರ್ವಗುಣಾವಭಾಸ'ವೂ ಪೃಥಿವಿ ಎನ್ನಬೇಕು. ಇದರಲ್ಲಿ ಕ್ಲೇಶವೇನಿಲ್ಲ. ಏಕೆಂದರೆ ಪಂಚಭೂತಗಳ ಪೈಕಿ, ಶಬ್ದಾದಿಸರ್ವಗುಣಗಳು ವ್ಯಕ್ತವಾಗುವುದು ಪೃಥಿವಿಯಲ್ಲಿಯೆ ತಾನೆ? 'ಸ್ವಯಂ' ಎಂದರೆ ಉತ್ತಮ ಎಂಬ ಅರ್ಥವೂ, ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ.

ಪದ್ಮಸಂಸ್ಥಾದ್ಧರೇಸ್ತತ್ರ, ಬ್ರಹ್ಮಾಽಜನಿ ಚತುರ್ಮುಖಃ । ಇತಿ ಚ ।

ಸರ್ವಗುಣಾವಭಾಸಂ ಪೃಥಿವ್ಯಾತ್ಮಕಂ । ಪೃಥಿವ್ಯಾಂ ಹಿ ಸರ್ವೇ ಶಬ್ದಾದಯೋ ಗುಣಾಃ ಅವಭಾಸಂತೇ ।

ತಸ್ಯಾಸನವಿಧಾನಾರ್ಥಂ ಪೃಥಿವೀ ಪದ್ಮಮುಚ್ಯತೇ ।
ಇತಿ ಮೋಕ್ಷಧರ್ಮೇ ।

ಪ್ರಧಾನವಾಚಕಸ್ತ್ವೇಕಶ್ಚಾನನ್ಯ ಕೇವಲಃ ಸ್ವಯಮ್ ।
ಇತಿ ಬ್ರಾಹ್ಮೇ ।

ಪದ್ಮದಲ್ಲಿ ಅಂತರ್ಗತನಾದ ಹರಿಯಿಂದ ಪದ್ಮದಲ್ಲಿ ಚತುರ್ಮುಖಬ್ರಹ್ಮ ಜನಿಸಿದನೆಂದೂ ಉಕ್ತವಾಗಿದೆ.

ಸರ್ವಗುಣಾವಭಾಸಂ ಎಂದರೆ ಪೃಥಿವೀಪರಿಣಾಮರೂಪವಾದ ಪದ್ಮ ಎಂದರ್ಥ. ಏಕೆಂದರೆ ಪೃಥಿವಿಯಲ್ಲಿಯೆ ಶಬ್ದಸ್ಪರ್ಶರೂಪರಸಗಂಧ ಎಂಬ ಎಲ್ಲ ಐದೂ ಗುಣಗಳು ಅನುಭವಕ್ಕೆ ಬರುತ್ತವೆ.

ಮೋಕ್ಷಧರ್ಮದಲ್ಲಿ, ಚತುರ್ಮುಖನಿಗೆ ಆಸನಕ್ಕಾಗಿ ಪೃಥಿವೀಪರಿಣಾಮವಾದ ಪದ್ಮವಿದೆ ಎನ್ನಲಾಗಿದೆ ಎಂದು ಹೇಳಿದೆ.

ಸ್ವಯಂ ಎಂದರೆ ಪ್ರಧಾನ, ಸರ್ವೋತ್ತಮ ಎಂದರ್ಥ. ಏಕೆಂದರೆ ಬ್ರಹ್ಮಪುರಾಣದಲ್ಲಿ ಏಕ ಅನನ್ಯ ಕೇವಲ ಸ್ವಯಂ ಈ ಶಬ್ದಗಳು ಪ್ರಧಾನ ಎಂಬ ಅರ್ಥವನ್ನು ಹೇಳುತ್ತವೆ ಎಂದಿದೆ.

* * *

ಶ್ರೀಹರಿಯ ನಾಭಿಕಮಲದಲ್ಲಿ ಜನಿಸಿದಾಗ ಬ್ರಹ್ಮ ತನಗೂ ಪದ್ಮಕ್ಕೂ ಜನಕನಾರು? ಬೇರಾರೂ ಇಲ್ಲ, ಶ್ರೀಹರಿಯೆ ಇರಬೇಕು ಎಂದು ಊಹಿಸುತ್ತಾನೆ–

ಕ ಏಷ ಯೋಽಸಾವಹಮಬ್ಜಪೃಷ್ಠ
ಏತತ್ ಕುತೋ ವಾಽಬ್ಜಮನನ್ಯದಪ್ಸು ।
ಅಸ್ತಿ ಹ್ಯಧಸ್ತಾದಿಹ ಕಿಂಚನೈತದ್
ಅಧಿಷ್ಠಿತಂ ಯತ್ರ ಸತಾ ನು ಭಾವ್ಯಮ್ ॥ ೧೮ ॥

ನಾನು ಯಾರು? ಯಾರಿಂದ ಜನಿಸಿದ್ದೇನೆ? ನಾನೀ ಕಮಲದಲ್ಲಿದ್ದೇನೆ. ಈ ಕಮಲವೂ ಯಾರಿಂದ ಹುಟ್ಟಿತು? 'ಅನನ್ಯತ್' ಯಾರೂ ಕಾಣುವುದಿಲ್ಲ. ನೀರಲ್ಲಿ ಕೆಳಗೆ ಯಾರೋ ಇದ್ದಾರೆ. ಅವನಿಂದಲೆ ಈ ಕಮಲ ಹುಟ್ಟಿರಬೇಕು. ಅವನು 'ಸತಾ ಭಾವ್ಯಂ' ಶ್ರೀಹರಿಯೇ ಇರಬೇಕು ಇನ್ನಾರೂ ಅಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸತಾ ನು ಭಾವ್ಯಂ' 'ಇರಲೇಬೇಕು' ಅಂದರೆ, ಆಶ್ರಯ ಯಾವುದೋ ಒಂದು ಇರಲೇ ಬೇಕು ಎಂದು ವ್ಯಾಖ್ಯಾನಮಾಡಿದ್ದಾರೆ.

'ಅಸ್ತಿ ಹ್ಯಧಸ್ತಾತ್' ಈ ಪದ್ಮಕ್ಕೆ ಆಶ್ರಯ ಒಂದು ಇರಲೇ ಬೇಕು. ಏಕೆಂದರೆ ಎಲ್ಲ ವಸ್ತುಗಳಿಗೂ, 'ಸತಾ ನು ಭಾವ್ಯಂ' ಆಶ್ರಯವಿರಲೇಬೇಕು ಎಂದು ವಿವರಣೆ. ಇದಕ್ಕೆ ಶ್ರೀಧರವ್ಯಾಖ್ಯಾನದಲ್ಲಿ ಕೊಟ್ಟ ಪ್ರಮಾಣವಚನ–'ಸೋಽಪಶ್ಯತ್ ಪುಷ್ಕರಪರ್ಣೇ ತಿಷ್ಠನ್ ಸೋಽಮನ್ಯತ ಅಸ್ತಿ ವೈ ತದ್ ಯಸ್ಮಿನ್ನಿದಮಧಿತಿಷ್ಠತಿ' 'ಬ್ರಹ್ಮನು ಕಮಲದಳದಲ್ಲಿ ನಿಂತು ಆಲೋಚಿಸಿದ, ಈ ಕಮಲಕ್ಕೆ ಆಧಾರವಾಗಿ ಒಂದು ವಸ್ತುವಿದೆ ಎಂದು ಊಹಿಸಿದ' ಎಂದು. ಆದರೆ ಶ್ರೀಮದಾಚಾರ್ಯರು ಹೇಳುವ ಇನ್ನೊಂದು ಶ್ರುತಿವಾಕ್ಯ ಆಧಾರವಸ್ತು ಯಾವುದೆಂದು ಇನ್ನೂ ಸ್ಪಷ್ಟವಾಗಿ 'ಶ್ರೀಹರಿಯಿಂದ ಈ ಕಮಲ ಹುಟ್ಟಿದೆ ಎಂದು ತೀರ್ಮಾನಕ್ಕೆ ಬಂದ' ಎಂದು ಹೇಳುತ್ತದೆ. ಅದರಿಂದ 'ಸತಾ ಭಾವ್ಯಂ' ಎಂದರೆ 'ಇರಲೇ ಬೇಕು' ಎಂದರ್ಥವಲ್ಲ, ಆ ಕಾರಣವಾದ ವಸ್ತು 'ಸತಾ ಭಾವ್ಯಂ' ಸತ್‌ಶಬ್ದವಾಚ್ಯನಾದ ಶ್ರೀಹರಿಯೇ ಇರಬೇಕು ಎಂದರ್ಥ. ಏಕೆಂದರೆ ಪದ್ಮಕ್ಕೆ ಕಾರಣ ಬೇರಾರೂ ಕಾಣುತ್ತಿಲ್ಲ. ಎಂದು ಬ್ರಹ್ಮ ಊಹಿಸಿದ್ದಾನೆ-

ಸತಾ ಬ್ರಹ್ಮಣಾ ।

ಸ ಬ್ರಹ್ಮಾಽಚಿಂತಯತ್, ಕುತೋ ನು ಪದ್ಮಂ? ಬ್ರಹ್ಮಣಃ ಸ್ಯಾದಿತಿ ।
ಇತಿ ಮೈತ್ರಾಯಣಶ್ರುತಿಃ ।

'ಸತ್' ಎಂದರೆ ವಿದ್ಯಮಾನ, ಯಾವುದೋ ಒಂದು ಇರುವ ವಸ್ತು ಎಂದಿಷ್ಟೇ ಅರ್ಥವಲ್ಲ, ಪರಬ್ರಹ್ಮ, ಶ್ರೀಹರಿ ಎಂದರ್ಥ ಏಕೆಂದರೆ ಶ್ರೀಹರಿಯೇ ಜನಕನಿರಬೇಕೆಂದು ಬ್ರಹ್ಮ ಊಹಿಸಿದ್ದಾನೆ ಎಂದು ಈ ಮೈತ್ರಾಯಣಶ್ರುತಿವಾಕ್ಯ ಹೇಳುತ್ತಿದೆ, 'ಆ ಬ್ರಹ್ಮನು ಆಲೋಚಿಸಿದ, ಪದ್ಮ ಯಾರಿಂದ ಜನಿಸಿತು? ಎಂದು. ಬಳಿಕ ಶ್ರೀಹರಿಯಿಂದಲೆ ಜನಿಸಿರಬೇಕು ಎಂದು ತೀರ್ಮಾನಕ್ಕೆ ಬಂದ' ಎಂದು.

* * *

ಬ್ರಹ್ಮ ಕಮಲನಾಳದಲ್ಲಿ ಕೆಳಗಿಳಿದೂ ಭಗವಂತನನ್ನು ಕಾಣದೆ ಬಳಿಕ ಧ್ಯಾನಮಾಡಿ ಹೃದಯದಲ್ಲಿ ಕಂಡುಕೊಂಡ. ಆ ಹರಿಯ ಪಾದಕಮಲ ಹೀಗೆ ಇತ್ತು-

ಪುಂಸಾಂ ಸ್ವಕಾಮಾಯ ವಿವಿಕ್ತಮಾರ್ಗೈ-
ರಭ್ಯರ್ಚತಾಂ ಕಾಮದುಘಾಂಘ್ರಿಪದ್ಮಮ್ ।
ಪ್ರದರ್ಶಯಂತಂ ಕೃಪಯಾ ನಖೇಂದು–
ಮಯೂಖಭಿನ್ನಾಂಗುಲಿಚಾರುಪತ್ರಮ್ ॥ ೨೬ ॥

ತಮ್ಮ ಅಭೀಷ್ಟಸಿದ್ಧಿಗಾಗಿ ಪಾಷಂಡಮಾರ್ಗವನ್ನು ಅನುಸರಿಸದೆ ಅದಕ್ಕಿಂತೆ ವಿಲಕ್ಷಣವಾದ ವೇದೋಕ್ತಮಾರ್ಗದಿಂದಲೆ ತನ್ನನ್ನು ಆರಾಧಿಸುವವರಿಗೆ ಶ್ರೀಹರಿ ನಖಚಂದ್ರಕಾಂತಿಯಿಂದ ಸರ್ವವಿಲಕ್ಷಣವಾದ, ಬೆರಳುಗಳೆಂಬ ದಳಗಳಿಂದ ಯುಕ್ತವಾದ, ಬೇಡಿದ್ದನ್ನು ಸಲಿಸುವ ಪಾದಕಮಲವನ್ನು ಕೃಪೆಯಿಂದ ತೋರುತ್ತಾನೆ.

ಇಲ್ಲಿ 'ನಖೇಂದುಮಯೂಖಭಿನ್ನಾಂಗುಲಿಚಾರುಪತ್ರಮ್' ಎಂಬಲ್ಲಿ 'ಭಿನ್ನ' ಎಂದರೆ ಸಂಭಿನ್ನ, ವ್ಯಾಪ್ತ, ನಖಚಂದ್ರಕಿರಣಗಳಿಂದ ಬೆರಳುಗಳೆಂಬ ಪಾದಕಮಲದಳಗಳು ವ್ಯಾಪ್ತವಾಗಿವೆ ಎಂದು ಶ್ರೀಧರವ್ಯಾಖ್ಯಾನ ವೀರರಾಘವ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ಹೀಗೆ ಸಾಮಾನ್ಯಸುಂದರಾಕಾರದ ಪುರುಷನನ್ನೂ ವರ್ಣಿಸಬಹುದು. ಲೋಕದಲ್ಲಿ ನಖವನ್ನು ಚಂದ್ರನಿಗೂ, ಬೆರಳುಗಳನ್ನು ಕಮಲದಳಗಳಿಗೂ ಹೋಲಿಸುವುದುಂಟು. ವಾಸ್ತವ ನಖಚಂದ್ರಕಿರಣಗಳಿಂದ ಬೆರಳುಗಳೆಂಬ ಕಮಲದಳಗಳು ವ್ಯಾಪ್ತವೇ ಆಗಿವೆ. ಕೇವಲ ನಖಸೌಂದರ್ಯದಿಂದ ಬೆರಳುಗಳ ಸೌಂದರ್ಯ ಹೆಚ್ಚಿದೆ ಎಂದಲ್ಲ, ಹೀಗಾಗಿ ಈ ಪಾದಕಮಲ ಲೋಕವಿಲಕ್ಷಣವೆ ಮತ್ತು 'ಭಿನ್ನ' ಎಂದರೆ ಅರಳಿದ ಎಂದೂ ಅರ್ಥ. ಚಂದ್ರಕಿರಣಗಳಿಂದ ಕಮಲದಳಗಳು ಅರಳುವುದು ಲೋಕವಿಲಕ್ಷಣ. ಹೀಗೆ ಭಿನ್ನಶಬ್ದ ಅರ್ಥಪೂರ್ಣವೇ ಆಗಿದೆ ಎಂದೂ ಇಲ್ಲಿ ವಿವರಣೆ ನೀಡಬಹುದು. ವಿಶ್ವನಾಥವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. ಆದರೆ ಹೀಗೆ ಅರ್ಥಾತ್ ಲೋಕವಿಲಕ್ಷಣ ಎಂದೇಕೆ ತಿಳಿಯಬೇಕು? ಸ್ಪಷ್ಟವಾಗಿ 'ಭಿನ್ನ'ಶಬ್ದವೆ 'ಲೋಕವಿಲಕ್ಷಣ' ಎನ್ನಲಾರದೆ? ಎನ್ನುತ್ತಾರೆ, ಶ್ರೀಮದಾಚಾರ್ಯರು. ಹಾಗಾದರೆ 'ಭಿನ್ನಾಂಗುಲಿ' ಲೋಕವಿಲಕ್ಷಣವಾದ ಬೆರಳು ಎಂದಂತಾಯಿತು. ಪಾದವು ಲೋಕವಿಲಕ್ಷಣವೆಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆ ಬಂದೀತು. ಅದಕ್ಕೆ ಭಿನ್ನಂ ಅಂಗುಲಿಚಾರುಪತ್ರಂ, 'ಪಾದಕಮಲವು ಲೋಕವಿಲಕ್ಷಣವಾಗಿದೆ, ಬೇರಳುಗಳೇ ಅದಕ್ಕೆ ದಳಗಳು' ಎಂದು ಅನ್ವಯ. ಇದನ್ನು ಸೂಚ್ಯವಾಗಿ ಹೇಳುವುದಕ್ಕೆ 'ಭಿನ್ನಂ' ಎಂದು ಶಬ್ದವನ್ನೆತ್ತಿಕೊಂಡು 'ಅನ್ಯೇಭ್ಯೋ ವಿಲಕ್ಷಣಂ' ಎಂದು ವ್ಯಾಖ್ಯಾನ ಮಾಡುತ್ತಾರೆ.

ಭಿನ್ನಂ ಅನ್ಯೇಭ್ಯೋ ವಿಲಕ್ಷಣಮ್ ।

ಹರಿಯ ಪಾದಕಮಲವು 'ನಖೇಂದುಮಯೂಖೈಃ' ನಖಚಂದ್ರನ ಕಾಂತಿಗಳಿಂದ 'ಭಿನ್ನಂ' ಬೇರೆ ಪಾದಕಮಲಗಳಿಂದ ವಿಲಕ್ಷಣವಾಗಿದೆ.

'ಭಿನ್ನಂ' ಎಂಬಲ್ಲಿ ನಪುಂಸಕಲಿಂಗವಿವಕ್ಷೆ ಮಾಡದೆ 'ಭಿನ್ನ' ಶಬ್ದಾರ್ಥಮಾತ್ರ ಉಕ್ತವಾಗಿದೆ ಎಂದಿಟ್ಟುಕೊಂಡರೆ ವಿಜಯಧ್ವಜೀಯದಲ್ಲಿ ಹೇಳಿದಂತೆ 'ಭಿನ್ನ' ಶಬ್ದವನ್ನು ಅಂಗುಲಿಗಳಿಗೂ ವಿಶೇಷಣ ಮಾಡಬಹುದು. ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಭಿನ್ನ ಎಂದರೆ 'ಸರ್ವದೇಹವಿಲಕ್ಷಣ' 'ದೇಹದ ಬೇರೆ ಅವಯವಗಳಿಗಂತ

ವಿಲಕ್ಷಣ ಬೆರಳುಗಳು' ಎಂದು ಅನ್ವಯ ಮಾಡಿ, ಇದರಿಂದ ಪಾದವು ಭಗವಂತನ ಸರ್ವ ಅವಯವಗಳಿಗಿಂತ ವಿಲಕ್ಷಣ ಎಂದಂತಾಗಿ ಪಾದಭಕ್ತಿಯೇ ಎಲ್ಲ ಸಾಧನಗಳಿಗಿಂತ ಶ್ರೇಷ್ಠವೆಂದು ಹೇಳಿದಂತಾಯಿತು ಎಂದಿದ್ದಾರೆ. ಇದು ಬಹಳ ಕ್ಲಿಷ್ಟಕಲ್ಪನೆ 'ಭಿನ್ನ' ಎಂಬುದನ್ನು ಪಾದಕಮಲಕ್ಕೇ ವಿಶೇಷಣ ಮಾಡಿದ್ದರೆ ಈ ಅರ್ಥ ಬೇಗನೆ ಹೊಳೆಯಲು ಸಾಧ್ಯವಿದ್ದಿತು ಮತ್ತು ಭಗವಂತನ ರೂಪ ಅವಯವಾದಿಗಳಲ್ಲಿ ವೈಲಕ್ಷಣ್ಯವನ್ನು ತಿಳಿಯುವುದೂ ಅನರ್ಥಕರ.

* * *

ನಾಭಿಕಮಲದಲ್ಲಿ ಕುಳಿತು ಬ್ರಹ್ಮನು ಧ್ಯಾನದಿಂದ ಹೃದಯದಲ್ಲಿ ಕಂಡ ಶ್ರೀಹರಿಯ ವರ್ಣನೆ, ಶ್ರೀಗಂಧದ ಮರದಂತೆ ಶ್ರೀಹರಿ. –

ಪರಾರ್ಧ್ಯಕೇಯೂರಮಣಿಪ್ರವೇಕ
ಪರ್ಯಸ್ತದೋರ್ದಂಡಸಹಸ್ರಶಾಖಮ್ ।
ಅವ್ಯಕ್ತಮೂಲಂ ಭುವನಾಂಘ್ರಿಪೇಂದ್ರಂ
ಅಹೀಂದ್ರಭೋಗೈರಧಿವೀತವಲ್ಕಮ್ ॥ ೨೯ ॥

ಬೆಲೆಬಾಳುವ ಕೇಯೂರದಲ್ಲಿರುವ ಶ್ರೇಷ್ಠರತ್ನಗಳಿಂದ ವ್ಯಾಪ್ತವಾದ ದೀರ್ಘಬಾಹುಗಳೇ ಸಾವಿರಶಾಖೆಗಳು ಶ್ರೀಹರಿ ಎಂಬ ಚಂದನ ವೃಕ್ಷಕ್ಕೆ. ವೃಕ್ಷವು ಅವ್ಯಕ್ತಮೂಲ. ಬೇರು ಮೇಲೆ ಕಾಣುವುದಿಲ್ಲ. ಶ್ರೀಹರಿಯೂ ಅವ್ಯಕ್ತಮೂಲ, ಅವ್ಯಕ್ತ ಎಂದರೆ ತ್ರಿಗುಣಾತ್ಮಕವಾದ ಪ್ರಕೃತಿಗೆ ಉತ್ಪತ್ತಿಕಾರಣ. ಹದಿನಾಲ್ಕು ಲೋಕಗಳೆಂಬ ಮರಗಳಿಗಿಂತ ಈ ಮರ ಶ್ರೇಷ್ಠ. ಗಂಧದ ಮರವನ್ನು ಹಾವುಗಳು ಸುತ್ತಿರುತ್ತವೆ. ಈ ಗಂಧದ ಮರವನ್ನು ಆದಿಶೇಷನ ಮೈ ಸುತ್ತಿದೆ.

ಇಲ್ಲಿ 'ಅವ್ಯಕ್ತಮೂಲಂ' ಎಂದರೆ ಈಶ್ವರ ಅವ್ಯಕ್ತಕ್ಕೆ ಕಾರಣವಲ್ಲ. ಅವ್ಯಕ್ತವೇ ಈಶ್ವರನಿಗೆ ಕಾರಣ. ಆದರೆ ಅದು ಮೂಲ, ಅಂದರೆ ಅಧೋಭಾಗ. ಅಂದರೆ ಅವಿದ್ಯೆ ಎಂಬ ಅವ್ಯಕ್ತ ಈಶ್ವರತತ್ವಕ್ಕೆ ಕಾರಣವಾಗಿದ್ದರೂ ಅದು ಅವನ ವಶದಲ್ಲಿದೆ. ಅವನಿಗೆ ಭ್ರಾಂತಿ ಹುಟ್ಟಿಸುವುದಿಲ್ಲ, ಜೀವರಿಗೆ ಮಾತ್ರ ಭ್ರಾಂತಿ ಹುಟ್ಟಿಸುತ್ತದೆ ಎಂದು, ಅಥವಾ ಅವ್ಯಕ್ತವೆಂದರೆ ಕಣ್ಣಿಗೆ ಕಾಣದ ಶುದ್ಧಬ್ರಹ್ಮ. ಅದರ ಅಭಿವ್ಯಕ್ತಿ ಈಶ್ವರರೂಪದಿಂದಾಗುತ್ತದೆ, ಅದರಿಂದ ಅವ್ಯಕ್ತವೆ ಮೂಲ, ಈಶ್ವರನಿಗೆ ಎಂದು [೧]ಶ್ರೀಧರವ್ಯಾಖ್ಯಾನ [೨]ರಾಧಾರಮಣದಾಸ ವ್ಯಾಖ್ಯಾನಗಳು. [೩]ಜೀವಗೋಸ್ವಾಮಿಯ ವ್ಯಾಖ್ಯಾನದಲ್ಲಿ ಅವ್ಯಕ್ತ ಎಂದರೆ ಶಾಸ್ತ್ರವೇತ್ತರ ಮಾತುಗಳಲ್ಲಿ ವ್ಯಕ್ತವಾಗದಿರುವ,

---

೧. ಅವ್ಯಕ್ತಂ ಪ್ರಧಾನಂ ಮೂಲಮಧೋಭಾಗೋ ಯಸ್ಯ । ಯದ್ವಾ ಅವ್ಯಕ್ತಂ ಬ್ರಹ್ಮ ಮೂಲಂ ಯಸ್ಯ । ಬ್ರಹ್ಮಾಭಿವ್ಯಕ್ತಿರೂಪತ್ವಾತ್ । –ಶ್ರೀಧರಃ

ಅಂದರೆ ವಾಸ್ತವವಾಗಿ ಇಲ್ಲದೇ ಇರುವ ಎಂದರ್ಥ. ಬೇರೆ ಕಾರಣ ಅವನಿಗಿಲ್ಲ, ಅವನಿಗೆ ಅವನೇ ಕಾರಣ ಎಂದು ಹೇಳಿದಂತಾಯಿತು. ಈ ಎಲ್ಲ ವ್ಯಾಖ್ಯಾನಗಳೂ ಪ್ರಮಾಣವಿರುದ್ಧ. ಈಶ್ವರನಿಗೆ ಕಾರಣ ಅವಿದ್ಯೆ ಎನ್ನುವುದು, ಅವನು ಶುದ್ಧಬ್ರಹ್ಮನ ಅಭಿವ್ಯಕ್ತಿರೂಪವೆನ್ನುವುದು ಅಪ್ರಾಮಾಣಿಕ. ಶಾಸ್ತ್ರಗಳಲ್ಲಿ ಭಗವಂತನಿಗೆ ಒಂದು ಬೇರೆ ಕಾರಣ ಹೇಳಿಲ್ಲ, ಅವನಿಗೆ ಅವನೇ ಕಾರಣ ಎನ್ನುವ ಅಭಿಪ್ರಾಯದಲ್ಲಿ 'ಅಮೂಲಂ' ಬೇರೆ ಕಾರಣವಿಲ್ಲದವನೆಂದೇ ಹೇಳಬಹುದಿತ್ತು.

ಅದರಿಂದ 'ಅವ್ಯಕ್ತಮೂಲಂ' ಎಂದರೆ ಅವ್ಯಕ್ತಕ್ಕೆ ತ್ರಿಗುಣಾತ್ಮಕ ಪ್ರಕೃತಿಗೆ ಮೂಲ ಕಾರಣ ಪರಮಾತ್ಮ ಎಂದು ಪರಮಾತ್ಮಪಕ್ಷದಲ್ಲಿ ಅರ್ಥ. ಬೇರು ಮೇಲೆ ಕಣ್ಣಿಗೆ ಕಾಣಿಸುವುದಿಲ್ಲ ಎಂದು ವೃಕ್ಷಪಕ್ಷದಲ್ಲಿ ಅರ್ಥ. ಶಬ್ದಸಾಮ್ಯದಿಂದ ಉಪಮಾನ ನೀಡಲಾಗಿದೆ. ಪರಮಾತ್ಮ ಪ್ರಕೃತಿಗೆ ಕಾರಣ ಎನ್ನುವುದು ಮಹಾಭಾರತ ಮೋಕ್ಷಧರ್ಮಪರ್ವದಲ್ಲಿ ಉಕ್ತವಾಗಿದೆ.

ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ ।

ಇತಿ ಮೋಕ್ಷಧರ್ಮೇ ।

'ಪರಮಾತ್ಮನಿಂದ ತ್ರಿಗುಣಾತ್ಮಕ ಪ್ರಕೃತಿ ಉತ್ಪನ್ನವಾಯಿತು' ಎಂದು ಮೋಕ್ಷಧರ್ಮದಲ್ಲಿ ಉಕ್ತವಾಗಿದೆ.

* * *

---

೨ ಪ್ರಧಾನಸ್ಯ ತನ್ನಿಯಮ್ಯತ್ವೇನ ತದಧೋಭಾಗತ್ವಂ । ಕಾರಣತ್ವೇನ ಮೂಲಸ್ಥಾನೀಯತ್ವಂ । ಭಗವತೋಽಪ್ರಾಕೃತತ್ವಾದಿತ್ಯರುಚೌ ಯದ್ವೇತಿ । ಬ್ರಹ್ಮಣೋ ನಿರ್ವಿಕಲ್ಪಕಜ್ಞಾನಮಾತ್ರತ್ವೇನ ವಿಶೇಷ್ಯತ್ವಾತ್ ಮೂಲಸ್ಥಾನೀಯತ್ವಂ। ಯತೋ ನಿರ್ವಿಕಲ್ಪಕಸಾಕ್ಷಾತ್ಕೃತೇಃ ಪ್ರಾಥಮಿಕತ್ವಾತ್ ಸವಿಕಲ್ಪಕಭಗವತೋ ಬ್ರಹ್ಮಾಭಿವ್ಯಕ್ತಿರೂಪತ್ವಂ । –ರಾಧಾರಮಣದಾಸಃ

೩ ನ ವ್ಯಜ್ಯತೇ ಶಾಸ್ತ್ರವಿದ್ಭಿರ್ನ ಕಥ್ಯತೇ ಮೂಲಂ ಯಸ್ಯ ತಂ । ಸರ್ವಮೂಲತ್ವೇನ ಮೂಲಾಂತರರಹಿತಮಿತ್ಯರ್ಥಃ । ಅವ್ಯಕ್ತಃ ಸ್ವಯಂ ಭಗವಾನ್ ತನ್ಮೂಲಮಿತಿ ವಾ । –ಜೀವಗೋಸ್ವಾಮೀ ।

ಅವ್ಯಕ್ತಂ ವ್ಯಂಜನಯಾಪಿ ಕೈರಪಿ ನೋಕ್ತಂ ಮೂಲಮನಾದಿತ್ವಾತ್ ಯಸ್ಯ – ವಿಶ್ವನಾಥಃ ।

ಅವ್ಯಕ್ತಂ ಸ್ವಸ್ವರೂಪಲಕ್ಷಣಂ ಮೂಲಂ ಯಸ್ಯ ತಂ । ವಿಗ್ರಹಸ್ಯ ಸ್ವರೂಪಾಶ್ರಯತ್ವಾತ್ –ಶುಕದೇವಃ

ಬ್ರಹ್ಮನು ಧ್ಯಾನದಿಂದ ಹೃದಯದಲ್ಲಿ ಕಂಡ ಪರಮಾತ್ಮ ಮುಕ್ತರಾದ ಸೂರ್ಯಚಂದ್ರಾದಿದೇವತೆಗಳಿಂದ ಪರಿವೃತನಾಗಿದ್ದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ನಿವೀತಮಾಮ್ನಾಯಮಧುವ್ರತಾಶ್ರಯ-
ಸ್ವಕೀರ್ತಿಮಯ್ಯಾ ವನಮಾಲಯಾ ಹರಿಮ್ ।
ಸೂರ್ಯೇಂದುವಾಯ್ವಗ್ನ್ಯಗಮತ್ರಿಧಾಮಭಿಃ
ಪರಿಕ್ರಮತ್ಪ್ರಾಧನಿಕೈರ್ದುರಾಸದಮ್ ॥ ೩೧ ॥

ವೇದಗಳೆಂಬ ದುಂಬಿಗಳಿಗೆ ಆಶ್ರಯವಾದ ತನ್ನ ಕೀರ್ತಿಯೆಂಬ ವನಮಾಲೆಯಿಂದ ಯುಕ್ತನಾಗಿದ್ದಾನೆ ಹರಿ. ಅವನನ್ನು ಬಿಟ್ಟು ಬೇರೆಡೆ ಎಂದೂ ಹೋಗದೆ ಸೂರ್ಯ ಚಂದ್ರ ಪ್ರವಹವಾಯು ಅಗ್ನಿ ಮುಂತಾದವರು ಯೋಧರಾಗಿ ಅಂಗರಕ್ಷಕರಾಗಿ ಸುತ್ತಲೂ ಸಂಚರಿಸುವುದರಿಂದ ಬೇರೆ ಯಾರೂ ಹರಿಯ ಬಳಿಗೆ ಹೋಗಲು ಸಾಧ್ಯವಿರಲಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸೂರ್ಯೇಂದು ವಾಯ್ವಗ್ನ್ಯಗಮಂ' ಎಂದು ಪಾಠವಿಟ್ಟು ಕೊಂಡು 'ಸೂರ್ಯಚಂದ್ರ ವಾಯು ಅಗ್ನಿಗಳೂ ಕೂಡ ತಮ್ಮ ಪ್ರಕಾಶಾದಿಗಳಿಂದ ಹರಿಯನ್ನು ವಶೀಕರಿಸಿ ಕೊಳ್ಳಲಾರರು, ಮತ್ತು ಮೂಲೋಕದಲ್ಲಿ ಪ್ರಭಾವವುಳ್ಳ, ಮೂರು ಕಾಲಗಳಲ್ಲಿಯೂ ನಿತ್ಯವಾಗಿ ಶರೀರಗಳುಳ್ಳ, ಸತ್ ಚಿತ್ ಆನಂದರೂಪವಾದ ಮೂರು ಸ್ವರೂಪವುಳ್ಳ ಸುದರ್ಶನಾದಿಯೋಧರು ಹರಿಗೆ ರಕ್ಷಕರಾಗಿ ಸುತ್ತಲೂ ತಿರುಗುವುದರಿಂದ ಅನ್ಯರಿಗೆ ಹರಿ ದುರ್ಲಭ' ಎಂದು ವ್ಯಾಖ್ಯಾನಿಸಿದ್ದಾರೆ.

ಆದರೆ 'ತ್ರಿಧಾಮ' ಶಬ್ದವು ಶ್ವೇತದ್ವೀಪ ಅನಂತಾಸನ ವೈಕುಂಠವೆಂಬ ಮೂರು ಧಾಮಗಳಲ್ಲಿರುವ ಹರಿಯ ನಾಮ. ಅದನ್ನು ಕಷ್ಟದಿಂದ ಸುದರ್ಶನಾದಿ ಯೋಧರಿಗೆ ಅನ್ವಯಿಸುವುದು ಉಚಿತವಲ್ಲ. ಮತ್ತು 'ಸೃಷ್ಟಿಕರ್ತನಾದ ಬ್ರಹ್ಮ ಹರಿಯ ಬಳಿಯಲ್ಲಿ ಮುಕ್ತರಾದ ಸುರ್ಯಚಂದ್ರಾದಿಗಳನ್ನು ಕಂಡು ಅಮುಕ್ತರಾದ ಸೂರ್ಯಚಂದ್ರಾದಿಗಳನ್ನು ಸೃಷ್ಟಿಮಾಡಲು ಬಯಸಿದನೆ'ಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿರುವುದರಿಂದ ಮುಂದಿನ ಉಪಯೋಗದ ದೃಷ್ಟಿಯಿಂದ ಹರಿಯ ಬಳಿಯಲ್ಲಿ ಮುಕ್ತರಾದ ಸೂರ್ಯಚಂದ್ರಾದಿಗಳನ್ನು ಬ್ರಹ್ಮ ಕಂಡಂತೇ ಭಾಗವತ ವರ್ಣಿಸುವುದು ಸಹಜ. ಆದರಿಂದ ಈ ಶ್ಲೋಕಕ್ಕೆ ಮುಕ್ತಸೂರ್ಯಾದಿಗಳು ತ್ರಿಧಾಮನಾದ ಹರಿಯನ್ನು ಬಿಡದೆ ಓಲೈಸುತ್ತಿದ್ದಾರೆ ಎಂದೂ, ಅವರೇ ಹರಿಯ ಬಳಿ ಅಂಗರಕ್ಷಕರಾಗಿ ತಿರುಗುತ್ತಿದ್ದಾರೆ ಎಂದೂ ಅರ್ಥ ಹೇಳುವುದು ಉಚಿತ. ಬೇರೆ ವ್ಯಾಖ್ಯಾನಕಾರರ ವ್ಯಾಖ್ಯಾನ ಸರಿಯಲ್ಲ, ಅವರ ಪಾಠವೂ ಅಶುದ್ಧ.

ಸೂರ್ಯೇಂದು ವಾಯ್ವಗ್ನ್ಯಾದಿಭಿಸ್ತ್ರಿಧಾಮ್ನೋ ವಿಷ್ಣೋರಗಚ್ಛದ್ಭಿಃ ಪ್ರಾಧನಿಕೈಃ ।

ಮುಕ್ತವಾಯ್ವಾದಿಭಿರ್ವಿಷ್ಣುಂ ವೃತಂ ಬ್ರಹ್ಮಾ ದದರ್ಶ ಹ ।
ತದನ್ಯಾಭಾವತೋ ನಾನ್ಯದತಸ್ತತ್ ಸ್ರಷ್ಟುಮೈಚ್ಛತ ॥

ಇತಿ ಬ್ರಹ್ಮಾಂಡೇ ।

'ಸೂರ್ಯೇಂದುವಾಯ್ವಗ್ನ್ಯಗಮತ್ರಿಧಾಮಭಿಃ' ಎಂದರೆ 'ಅಗಮ ತ್ರಿಧಾಮ'ರು, ತ್ರಿಧಾಮನಾದ ವಿಷ್ಣುವನ್ನು ಬಿಟ್ಟು ಬೇರೆಡೆ ಹೋಗದವರು ಮುಕ್ತರಾದ ಸೂರ್ಯಚಂದ್ರಅಗ್ನಿ ವಾಯು ಮುಂತಾದವರು ಎಂದರ್ಥ. ಇದು ಪ್ರಾಧನಿಕೈಃ ಎಂಬುದಕ್ಕೆ ವಿಶೇಷಣ. ಸೂರ್ಯಾದಿಗಳು ಯೋಧರಾಗಿ ತಿರುಗುತ್ತಾರೆ ಎಂದರ್ಥ. ಭಾಗವತಕ್ಕೆ ಹೀಗೆ ಅರ್ಥ ಹೇಳಿದರೆ ಬ್ರಹ್ಮಾಂಡಪುರಾಣದ ಸಹಮತಿಯೂ ಸಿಗುತ್ತದೆ. 'ಮುಕ್ತರಾದ ವಾಯು ಮುಂತಾದವರಿಂದ ಪರಿವೃತನಾದ ವಿಷ್ಣುವನ್ನು ಬ್ರಹ್ಮ ಕಂಡ. ಮುಕ್ತರನ್ನೇ ಕಂಡ, ಏಕೆಂದರೆ ಅಮುಕ್ತರು ಆಗ ಇರಲಿಲ್ಲ. ಹೀಗಾಗಿ ಅಮುಕ್ತ ಪ್ರವಹ ವಾಯ್ವಾದಿಗಳನ್ನು ಸೃಷ್ಟಿ ಮಾಡಲು ಬ್ರಹ್ಮ ಸಂಕಲ್ಪಿಸಿದ ಎಂದು ಬ್ರಹ್ಮಾಂಡಪುರಾಣ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ನವಮೋಽಧ್ಯಾಯಃ

—o—

ಅಧ್ಯಾಯ-೧೦

ಅಧ್ಯಾಯಸಾರಾಂಶ

'ಶ್ರೀಹರಿ, ಬಹುಕಾಲದ ತಪಸ್ಸಿನ ಫಲವಾಗಿ ನಾ ನಿನ್ನ ಕಂಡೆ. ಅಂದರೆ ನೀನೆಂದೂ ಕಾಣಲಾಗದವನಲ್ಲ. ರಾಗಾದಿ ದೋಷಮುಕ್ತರಾದರೆ ಜೀವರು ನಿನ್ನನ್ನು ಕಾಣಬಲ್ಲರು. ನಿನ್ನಿಂದ ಹೊರತಾಗಿ ಬೇರೆ ಪರಬ್ರಹ್ಮ ಎಂಬ ವಸ್ತು ಇಲ್ಲ. ನೀನೇ ಸೃಷ್ಟಿಕರ್ತ. ನಿನ್ನ ಈ ರೂಪ ನಿನ್ನೆಲ್ಲ ಅವತಾರಗಳಿಂದ ಏಕೀಭೂತವಾಗಿದೆ. ನೀನು ವಿಷಯಾಸಕ್ತರ ಪೂಜೆಯನ್ನು ಒಲ್ಲದವ. ಭಕ್ತಿಪಾಶಕ್ಕೆ ಕಟ್ಟು ಬಿದ್ದು ಹೃದಯದಲ್ಲಿ ನಿಲ್ಲುವವ. ಆದರೂ ನಿನ್ನನ್ನು ಒಲಿಸದೆ ಕೆಡುವವರನ್ನು ಕಂಡರೆ ನನಗೆ ಬೇಸರ ಉಂಟಾಗುತ್ತದೆ. ಭಕ್ತರ ಪ್ರತಿಯೊಂದು ಕರ್ಮವನ್ನು ನೀನೇ ಅವರಲ್ಲಿ ನಿಂತು ಮಾಡಿಸುವೆ ಎಂದು ಅರಿತಾಗಲೆ ಅವರ ಸಂಸಾರ ನಾಶವಾಗುವುದು. ಮರಣಕಾಲದಲ್ಲಿ ನಿನ್ನ ನಾಮಸ್ಮರಣೆ ಮಾಡಿದ ಮಾತ್ರಕ್ಕೆ ಮುಕ್ತಿ ಕರಗತವಾಗುವುದೆಂದ ಮೇಲೆ ಸದಾ ಧ್ಯಾನ ಮಾಡಿದವರಿಗೆ ಮುಕ್ತಿ ಸುಲಭವೆಂದು ಬೇರೇನು ಹೇಳಬೇಕು? ನನ್ನಲ್ಲಿ ಬ್ರಹ್ಮರೂಪದಿಂದಿದ್ದು ಸೃಷ್ಟಿ ಮಾಡುವಿ. ಶಿವನಲ್ಲಿ ಶಿವರೂಪದಿಂದಿದ್ದು ಲಯಗೈಯುವಿ. ಬೇರೆ ವಿಷ್ಣುರೂಪದಿಂದ ಪಾಲನೆ ಮಾಡುವಿ. ಇಂಥ ನಿನ್ನನ್ನು ಆರಾಧಿಸದೆ ನಿಷಿದ್ಧಕರ್ಮಾಚರಣೆಯಿಂದ ಅಜ್ಞರು ತಮ್ಮ ಆಯುಷ್ಯವನ್ನು ವ್ಯರ್ಥಗೊಳಿಸುತ್ತಾರೆ. ಸೂಕ್ಷ್ಮಕಾಲವನ್ನು ನೋಡಬಲ್ಲ ನಿತ್ಯಜ್ಞಾನದೃಷ್ಟಿಯುಳ್ಳ ನಿನಗೆ ಅನಿಮಿಷ ಎಂಬ ಹೆಸರು ಸಾರ್ಥಕ. ನೀನು ನಮ್ಮನ್ನು ಅನುಗ್ರಹಿಸಿ ಸೃಷ್ಟಿಸಂಹಾರಕಾರ್ಯಗಳಲ್ಲಿ ಸಹಕಾರಿಗಳನ್ನಾಗಿ ಮಾಡಿಕೊಂಡಿರುವಿ. ನೀನೇ ನನಗೆ ಜ್ಞಾನ ನೀಡಬೇಕು. ಆಗ ಜಗತ್ತನ್ನು ಸೃಷ್ಟಿಸ ಬಲ್ಲೆ. ನಾನು ಸೃಷ್ಟಿಕಾರ್ಯದಲ್ಲಿ ಮಗ್ನನಾದಾಗಲೂ ನನ್ನ ಮನಸ್ಸು ನಿನ್ನಲ್ಲಿಯೆ ನೆಲೆಸುವಂತೆ ಅನುಗ್ರಹಿಸಬೇಕು. ಶೇಷಶಯನದಿಂದ ಎದ್ದೇಳು. ಮುಗುಳು ನಗು ನಗುತ್ತ ಬಿಟ್ಟ ಕಣ್ಣುಗಳಿಂದ ನೋಡುತ್ತ ಮನಮೋಹಕ ನುಡಿಗಳಿಂದ ನನಗೆ ಅಭಯ ನೀಡು' ಹೀಗೆ ಬ್ರಹ್ಮನು ಮಾಡಿದ ಸ್ತುತಿಗೆ ಒಲಿದು ಶ್ರೀಹರಿ ಅವನಿಗೆ ಸೃಷ್ಟಿಕಾರ್ಯದಲ್ಲಿ ಸದಾ ತನ್ನ ಸ್ಮರಣೆಯನ್ನೂ ನೀಡಿದ. ಇನ್ನೂ ತಪಗೈಯಲು ತನ್ನ ಉದರದಲ್ಲಿ ನಿದ್ರಿಸುತ್ತಿರುವ ಜೀವರನ್ನು ಸೃಷ್ಟಿಸಲು ಆದೇಶವನ್ನೂ ನೀಡಿ ಕಣ್ಮರೆಯಾದ.

* * *

ಬ್ರಹ್ಮನು ನೀರಲ್ಲಿ ನಾಭಿಕಮಲದಲ್ಲಿದ್ದ ತನ್ನನ್ನೂ ಮೇಲೆ ಆಕಾಶವನ್ನೂ ವಾಯುವನ್ನೂ ನೋಡಿದ. ಇನ್ನೇನೂ ಇರಲಿಲ್ಲ. ಅದರಿಂದ ಸೃಷ್ಟಿಮಾಡಲು ಬಯಸಿ ಭಗವದನುಗ್ರಹಕ್ಕಾಗಿ ಅವನನ್ನು ಸ್ತುತಿಸಲು ತೊಡಗಿದ–

ಬ್ರಹ್ಮೋವಾಚ–

ಜ್ಞಾತೋಽಸಿ ಮೇಽದ್ಯ ಸುಚಿರಾನ್ನನು ದೇಹಭಾಜಾಂ
ನ ಜ್ಞಾಯತೇ ಭಗವತೋ ಗತಿರಿತ್ಯವದ್ಯಮ್ ।
ನಾನ್ಯತ್ ತ್ವದಸ್ತಿ ಭಗವನ್ನಪಿ ತತ್ತ್ವಶುದ್ಧಂ
ಮಾಯಾಗುಣವ್ಯತಿಕರಾದ್ ಯದುರುರ್ವಿಭಾಸಿ ॥ ೧ ॥

ಬ್ರಹ್ಮನು ಸ್ತುತಿಸಿದನು–'ಹರಿ, ಬಹುಕಾಲದ ಧ್ಯಾನಾನಂತರ ನೀನು ನನಗೆ ಗೋಚರಿಸಿರುವಿ. ದೇಹಿಗಳಿಗೆ ನಿನ್ನ ಸ್ವರೂಪ ಕಾಣುವುದೇ ಇಲ್ಲ ಎನ್ನುವುದು ತಪ್ಪು. ನಿನ್ನ ಅನುಗ್ರಹವಿಲ್ಲದಿದ್ದರೆ ಮಾತ್ರ ಕಾಣುವುದಿಲ್ಲ. ಕಾಣುವವರು ಬೇರೆ ಇಲ್ಲದ್ದರಿಂದ ನೀನು ಗೋಚರಿಸುವುದಿಲ್ಲ ಎನ್ನುವುದೂ ತಪ್ಪು, ಸ್ವತಂತ್ರವಾಗಿ ಕಾಣುವವರು ನಿನ್ನಿಂದ ಬೇರೆ ಇಲ್ಲವಷ್ಟೆ, ಕಾಣುವವರೂ ರಾಗಾದಿ ದೋಷಮುಕ್ತರಾಗಿಲ್ಲದ್ದರಿಂದ ಕಾಣುತ್ತಿಲ್ಲ. ನಿನ್ನಿಂದ ಬೇರೆಯವರೆಲ್ಲ ನಿನ್ನ ಅಧೀನರೆಂದ ಮಾತ್ರಕ್ಕೆ ನಿನ್ನ ರೂಪಗಳೂ ಬೇರೆಯಾಗಿ ನಿನಗೆ ಅಧೀನ ಎಂದೂ ಹೇಳಲಾಗದು. ಪ್ರಕೃತಿಯ ಗುಣಕಾರ್ಯವಾದ ಪ್ರಂಚಕ್ಕೆ ನಿಯಾಮಕವಾಗಿರುವ ನಿನ್ನ ಬಹುರೂಪಗಳು ಬೇರೆ ಬೇರೆ ಸ್ಥಾನಗಳಲ್ಲಿ ಬೇರೆ ಬೇರೆ ಎಂದು ಕಾಣುವುದು ವಾಸ್ತವವಲ್ಲ.

ಇಲ್ಲಿ 'ನಾನ್ಯತ್ ತ್ವದಸ್ತಿ' ಎಂದರೆ 'ವಾಸ್ತವದಲ್ಲಿ ನಿನಗಿಂತ ಬೇರೆಯಾದ ವಸ್ತುವೇ ಇಲ್ಲ. ಇರುವ ಏಕೈಕ ವಸ್ತುವಾದ ನಿನ್ನನ್ನು ತಿಳಿಯದ ದೇಹಿಗಳ ಪಾಡು ಶೋಚನೀಯ. ಬೇರೆ ವಸ್ತುಗಳು ಕಾಣುತ್ತವೆ ತಾನೆ? ಎಂದರೆ ಅದು ಮಾಯೆಯಿಂದ ನೀನೆ ಬಹುವಾಗಿ ಕಾಣುವುದಷ್ಟೇ ಹೊರತು ಬೇರೆ ಶುದ್ಧವಸ್ತುಗಳೇ ಇಲ್ಲ.' ಎಂದು ಶ್ರೀಧರಾದಿಗಳ ವ್ಯಾಖ್ಯಾನ. ಅನಿರ್ವಚನೀಯವಾದ ಮಿಥ್ಯೆಯಾದ ಮಾಯೆ ಅಪ್ರಾಮಾಣಿಕವಾದ್ದರಿಂದ ಈ ವ್ಯಾಖ್ಯಾನ ಸರಿಯಲ್ಲ. ಮತ್ತು ಭಗವಂತನಿಗಿಂತ ಬೇರೆಯಾದ ವಸ್ತುವೆಲ್ಲವೂ ಅಶುದ್ಧ ಎಂದರೆ ಈಗ ಪ್ರಸ್ತುತರಾದವರು ಬೇರೆ ಜ್ಞಾತೃಗಳು, ಅವರು ಅಶುದ್ಧರು, ರಾಗಾದಿದೋಷಯುಕ್ತರು ಎನ್ನುವುದೇ ಸ್ವರಸ. ಬೇರೆ ವಸ್ತು ಎಲ್ಲವೂ 'ಅಶುದ್ಧ' ಎಂದರೆ ಅವಾಸ್ತವ ಎಂದು ಅರ್ಥೈಸುವುದೂ ಕ್ಲಿಷ್ಟ. ಹಗ್ಗದಲ್ಲಿ ಭ್ರಾಂತಿಯಿಂದ ಹಾವು ಕಂಡಾಗ ಹಗ್ಗ ಶುದ್ಧ, ಹಾವು ಅಶುದ್ಧವೆಂದು ವ್ಯವಹಾರವಿಲ್ಲ.ಅದರಿಂದ ಹೀಗೆ ವ್ಯಾಖ್ಯಾನಿಸಬೇಕು-

ಸ್ವತೋ ನಾಸ್ತಿ । ತದಧೀನಂ ವಿದ್ಯಮಾನಮಪ್ಯಶುದ್ಧಮ್ । ಯಚ್ಚ ಸ್ವನಾನಾತ್ವಂ ತದಪಿ ಸ್ಥಾನಭೇದಾದಸದೇವ ಭಾತಿ ।

ಏಕೋಽಪಿ ಸ್ಥಾನನಾನಾತ್ವಾನ್ನಾನೇವ ಹರಿರೀಯತೇ ।
ಸರ್ವಾಂತರ್ಯಾಮಿಣಸ್ತಸ್ಯ ನ ಭೇದೋ ವಿದ್ಯತೇ ಕ್ವಚಿತ್ ॥
ಇತಿ ಬ್ರಹ್ಮವೈವರ್ತೇ ॥

'ನಾನ್ಯತ್ ತ್ವದಸ್ತಿ' ಎಂದರೆ ನಿನಗಿಂತ ಬೇರೆ ದೃಷ್ಟ್ಯಗಳು ವಾಸ್ತವದಲ್ಲಿ ಇಲ್ಲ ಎಂದರ್ಥವಲ್ಲ. ಇದ್ದಾರೆ ಆದರೆ ಸ್ವತಂತ್ರವಾಗಿ ಇಲ್ಲ. ಅಸ್ವಂತತ್ರರಾಗಿ ಇದ್ದರೂ ಇಲ್ಲದಂತೆಯೆ ಎಂದರ್ಥ. 'ತತ್ತು ಅಶುದ್ಧಂ' ಎಂದರೆ ನಿನಗೆ ಅಧೀನರಾಗಿ ಇರುವವರೂ ನಿನ್ನನ್ನು ಕಾಣುತ್ತಿಲ್ಲ. ಏಕೆಂದರೆ ಅವರು ಅಶುದ್ಧರು, ರಾಗಾದಿ ಮಲಯುಕ್ತರು. ರಾಗಾದಿಮುಕ್ತರಾದವರಿಗೆ ಮಾತ್ರ ನೀನು ಗೋಚರಿಸುವಿ ಎಂದರ್ಥ. ನಿನ್ನ ಬಹುರೂಪಗಳು ನಿನ್ನಿಂದಲೂ ಪರಸ್ಪರವಾಗಿಯೂ ಬೇರೆಯಾಗಿ ಕಾಣುವುದು ವಾಸ್ತವವಲ್ಲ. ಸ್ಥಾನಭೇದಪ್ರಯುಕ್ತ ಭ್ರಾಂತಿ.

'ಶ್ರೀಹರಿ ಒಬ್ಬನೆ ಸರ್ವಾಂತರ್ಯಾಮಿ. ಆದರೂ ಸ್ಥಾನಭೇದಪ್ರಯುಕ್ತವಾಗಿ ಬೇರೆ ಬೇರೆ ಎಂದು ಭ್ರಾಂತಿ ಬರುತ್ತದೆ. ಒಬ್ಬನೆ ಸರ್ವಾಂತರ್ಯಾಮಿಯಾದು ದರಿಂದ ಅವನ ರೂಪಗಳಲ್ಲಿ ಎಲ್ಲಿಯೂ ಭೇದವಿಲ್ಲ' ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ.

* * *

ಬ್ರಹ್ಮ ತಾನು ಕಂಡ ವಿಷ್ಣುವೇ ಪರಬ್ರಹ್ಮ ಹೊರತು ಬೇರೆ ಶುದ್ಧವಾದ ಉತ್ತಮವಾದ ಪರಬ್ರಹ್ಮ ಎಂಬ ವಸ್ತುವಿಲ್ಲ ಎನ್ನುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ರೂಪಂ ಯದೇತದವಬೋಧರಸೋದಯೇನ
ಶಶ್ವನ್ನಿವೃತ್ತತಮಸಃ ಸದನುಗ್ರಹಾಯ ।
ಆದೌ ಗೃಹೀತಮವತಾರಶತೈಕಬೀಜಂ
ಯನ್ನಾಭಿಪದ್ಮಭವನಾದಹಮಾವಿರಾಸಮ್ ॥ ೨ ॥

ನಾತಃ ಪರಂ ಪರಮ ಯದ್ ಭವತಃ ಸ್ವರೂಪಂ
ಆನಂದಮಾತ್ರಮವಿಕಾರಮವಿದ್ಧವರ್ಚಃ ।
ಪಶ್ಯಾಮಿ ವಿಶ್ವಸೃಜಮೇಕಮವಿಶ್ವಮಾದ್ಯಂ
ಭೂತೇಂದ್ರಿಯಾತ್ಮಕಮದಸ್ತ ಉಪಾಶ್ರಿತೋಽಸ್ಮಿ ॥ ೩ ॥

ಶ್ರೇಷ್ಠವಾದ ಜ್ಞಾನದ ಆವಿರ್ಭಾವದಿಂದ ಅಜ್ಞಾನವನ್ನು ಸದಾ ದೂರೀಕರಿಸಿ ಕೊಂಡಿರುವ ನಿನ್ನ ಈ ರೂಪ ಸಜ್ಜನರ ಮೇಲಿನ ಅನುಗ್ರಹಕ್ಕಾಗಿ ಅನಾದ್ಯನಂತ ಕಾಲದಲ್ಲಿ ವ್ಯಕ್ತಗೊಳಿಸಲ್ಪಟ್ಟಿದೆ. ಮತ್ಸ್ಯಾದಿ ನೂರಾರು ಅವತಾರಗಳಿಗೆ ಇದೇ ಮೂಲ. ಇದರ ನಾಭಿಕಮಲದಿಂದ ನಾನು ಆವಿರ್ಭವಿಸಿದ್ದೇನೆ. ಕೇವಲ ಜ್ಞಾನಾನಂದಸ್ವರೂಪ, ಅವಿಕಾರಿ, ಎಂದೂ ಮರೆಯಾಗದ ಪ್ರಕಾಶ ಉಳ್ಳದ್ದು. ಅದರಿಂದ ಇದು ನಿನ್ನ ಸ್ವರೂಪವೆ ಹೊರತು ಬೇರೆಯಲ್ಲ. ಇದೇ ಪ್ರಪಂಚಸೃಷ್ಟಿ ಮಾಡುವಂಥದ್ದು, ಇನ್ನೊಬ್ಬ ಸೃಷ್ಟಿಕರ್ತನಿಲ್ಲ. ಪ್ರಪಂಚವಿಲಕ್ಷಣ, ಎಲ್ಲಕ್ಕೂ ಆದಿಕಾರಣ. ಭೂತಇಂದ್ರಿಯಗಳಲ್ಲಿ ವ್ಯಾಪ್ತವಾದುದು. ಈ ನಿನ್ನ ರೂಪವನ್ನು ನಾನು ಆಶ್ರಯಿಸಿದ್ದೇನೆ. ಇದಕ್ಕಿಂತ ಬೇರೆ ನಿರುಪಾಧಿಕ ಉತ್ತಮ ವಸ್ತು ಎಂಬುದಿಲ್ಲ.

[೧]ಇಲ್ಲಿ 'ನಾತಃ ಪರಂ' ಎಂದರೆ ಬ್ರಹ್ಮನು ಈಗ ಕಂಡ ವಿಷ್ಣು ಎಂಬ ವಿಶಿಷ್ಟಬ್ರಹ್ಮಕ್ಕಿಂತ ಬೇರೆ ಶುದ್ಧಬ್ರಹ್ಮ ಇಲ್ಲ ಎಂದು ಶ್ರೀಧರಾದಿ ವ್ಯಾಖ್ಯಾನಗಳೂ ಹೇಳುತ್ತವೆ ಆದರೆ ಶುದ್ಧಬ್ರಹ್ಮ, ಅಂದರೆ ನಿರ್ಗುಣಬ್ರಹ್ಮ ಎಂಬುದೇ ಇಲ್ಲ ಎಂದು ಅವರು ಹೇಳುತ್ತಿಲ್ಲ. ಇದೆ, ಆದರೆ ಆ ನಿರ್ಗುಣವೂ ಈ ಸಗುಣವೂ ಬೇರೆಯಲ್ಲ, ನಿರ್ಗುಣವೆ ಅವಿದ್ಯಾವಶದಿಂದ ಸಗುಣವಾಗಿ ಪರಿಣಾಮ ಹೊಂದುತ್ತದೆ. ಹಗ್ಗ ಭ್ರಾಂತಿಯಲ್ಲಿ ಹಾವಾಗುವಂತೆ. ಹಾವು ಹಗ್ಗಕ್ಕಿಂತ ಬೇರೆಯಲ್ಲ, ಹಗ್ಗವೇ ಎಂದು. ಆದರೆ ಸತ್ಯಮಿಥ್ಯೆಗಳಿಗೆ ಭೇದವನ್ನು ಅವರೂ ಒಪ್ಪುತ್ತಾರೆ. ಸತ್ಯವಾದ ನಿರ್ಗುಣ, ಮಿಥ್ಯವಾದ ಸಗುಣಗಳೊಳಗೆ ಭೇದವಿದೆ. ನಿರ್ಗುಣಕ್ಕಿಂತ ಬೇರೆಯಾಗಿ ಸಗುಣವಿಲ್ಲದಿದ್ದರೂ ಸಗುಣಕ್ಕಿಂತ ಬೇರೆಯಾಗಿ ನಿರ್ಗುಣವಿದೆ ಎಂದು ಅವರ ಸಿದ್ಧಾಂತ. ಇದನ್ನೇ ನಿತ್ಯಾನಿತ್ಯ ವಸ್ತುವಿವೇಕ; ಅಂದರೆ ಸತ್ಯಮಿಥ್ಯೆಗಳಲ್ಲಿರುವ ಭೇದ ಎನ್ನುತ್ತಾರೆ. ಭಾಗವತಶ್ಲೋಕದಲ್ಲಿ 'ನಾತಃ ಪರಂ' ನಾನು ಕಂಡ ಈ ಸಗುಣಕ್ಕಿಂತ ಬೇರೆ ನಿರ್ಗುಣವಿಲ್ಲ ಎಂದು ಹೇಳಲಾಗಿದೆ. ಇದು ಅದ್ವೈತಸಿದ್ಧಾಂತಕ್ಕೆ ವಿರುದ್ಧವಾಗುವುದು. ರಾಧಾರಮಣದಾಸ ವ್ಯಾಖ್ಯಾನ ವಿರುದ್ಧವಾಗಿಯೇ ಹೇಳಿದೆ 'ಈ ಸಗುಣವೇ ಆ ನಿರ್ಗುಣ ಹೊರತು ಆ ನಿರ್ಗುಣ ಸಗುಣವಲ್ಲ' ಎಂದು.

---

೧. ಹೇ ಪರಮ ಅವಿದ್ಧವರ್ಚೋಽನಾವೃತಪ್ರಕಾಶಂ ಅತೋಽವಿಕಲ್ಪಂ ನಿರ್ಭೇದಂ ಅತ ಏವಾನಂದಮಾತ್ರಂ ಏವಂಭೂತಂ ಯದ್ ಭವತಃ ಸ್ವರೂಪಂ ತದತೋ ರೂಪಾತ್ ಪರಂ ಭಿನ್ನಂ ನ ಪಶ್ಯಾಮಿ । ಕಿಂತ್ವಿದಮೇವ ತತ್ । —ಶ್ರೀಧರಃ

ಅತೋ ರೂಪಾತ್ ಶ್ರೀವಿಗ್ರಹಲಕ್ಷಣಾತ್ । ಇದಮೇವ ಶ್ರೀವಿಗ್ರಹಲಕ್ಷಣಂ ವಸ್ತ್ವೇವ ತದ್ ಬ್ರಹ್ಮ । ನ ತು ಬ್ರಹ್ಮೈವೋಪಹಿತಂ ಶ್ರೀವಿಗ್ರಹ ಇತಿ ।

—ರಾಧಾರಮಣದಾಸಃ

'ಆದೌ ಗೃಹೀತಂ' ಎಂದರೆ ಸೃಷ್ಟಿಯ ಆದಿಯಲ್ಲಿ ಸ್ವೀಕೃತವಾದ ರೂಪ, ಆದರೆ ಸದನುಗ್ರಹಾಯ ಸಜ್ಜನ ರಕ್ಷಣೆಗಾಗಿ ಸ್ವೀಕೃತವಾಗಿದೆ ಹೊರತು ಜೀವರಂತೆ ಕರ್ಮಾಧೀನ ಸುಖದುಃಖಭೋಗಕ್ಕಾಗಿ ಅಲ್ಲ ಎಂದು ವೀರರಾಘವವ್ಯಾಖ್ಯಾನ. ಇವರು ಅವತಾರರೂಪಗಳಿಗೆ ಉತ್ಪತ್ತಿನಾಶಗಳನ್ನು ಒಪ್ಪಿ ಜೀವವೈಲಕ್ಷಣ್ಯವನ್ನು ಹೇಳುತ್ತಾರೆ. ಇದು ಸರಿಯಲ್ಲ. ಅನಾದಿನಿತ್ಯವಾದ ರೂಪಗಳನ್ನೇ ಆಗಾಗ ಜನರಿಗೆ ತೋರುತ್ತಾನೆ ಮರೆಮಾಡುತ್ತಾನೆ ಎನ್ನಬೇಕು. ಅದರಿಂದ ಅನಾದಿಕಾಲದಲ್ಲಿ ಸ್ವೀಕೃತವಾದ ರೂಪವನ್ನೇ ಆದೌ ಸೃಷ್ಟಿಯ ಆದಿಯಲ್ಲಿ ತೋರಿದ್ದಾನೆ ಎಂದರ್ಥ. ಸ್ವೀಕರಿಸಿದ್ದಾನೆ ಎಂದಲ್ಲ.

'ಭೂತೇಂದ್ರಿಯಾತ್ಮಕಂ' ಎಂದರೆ ಭೂತಇಂದ್ರಿಯಗಳಿಗೆ ಕಾರಣನಾಗಿದ್ದು ಅವುಗಳ ಮೂಲ ಸ್ವರೂಪವೆನಿಸಿದ್ದಾನೆ ಎಂದು ಶ್ರೀಧರ, ರಾಧಾರಮಣ, ವಲ್ಲಭವ್ಯಾಖ್ಯಾನಗಳು ಹೇಳುತ್ತವೆ. ಇದು ಪರಮಾತ್ಮ ಜಡಪದಾರ್ಥವಾಗಿ ಪರಿಣಮಿಸುತ್ತಾನೆ ಎಂಬ ವಾದ. ಇದು ಅಪ್ರಾಮಾಣಿಕ. ಅದರಿಂದ ಇಲ್ಲಿ ಆತ್ಮ ಶಬ್ದಕ್ಕೆ ಸ್ವರೂಪ ಎಂದರ್ಥವಲ್ಲ. ವ್ಯಾಪಕ, ಸ್ವಾಮಿ, ನಾಶಕ ಎಂದು ಆತ್ಮಶಬ್ದಕ್ಕೆ ಅನೇಕ ಅರ್ಥಗಳಿವೆ ಅವುಗಳನ್ನು ಇಲ್ಲಿ ಇಟ್ಟುಕೊಳ್ಳಬಹುದು.

ಯನ್ನಾಭಿಪದ್ಮಭವನಾದಹಮಾವಿರಾಸಂ, ಯಚ್ಚೇದಂ ಭಗವತ್ಸ್ವರೂಪ ಮಾನಂದಮಾತ್ರಂ ಪಶ್ಯಾಮಿ, ಯಚ್ಚಾಶ್ರಿತೋಽಸ್ಮಿ, ಅತಃ ಪರಂ ನಾಸ್ತಿ । ಅತೋ ನ ಜ್ಞಾಯತ ಇತ್ಯವದ್ಯಮಿತಿ ಉತ್ತಮಾಪೇಕ್ಷಯಾ । ಅನಾದಿಗೃಹೀತಮೇವ ಗೃಹ್ಯತೇ ।

ಯತ್ತದ್ ದಿವ್ಯಂ ಹರೇ ರೂಪಂ ಕ್ಷೀರಸಾಗರಮಧ್ಯಗಮ್ ।
ಸಜ್ಞಾನಾನಂದೈಕಮಾತ್ರಂ ನ ತತಃ ಪರಮಂ ಕ್ವಚಿತ್ ।
ಅನಾದಿನಿತ್ಯಾದವ್ಯಕ್ತಾತ್ ತಸ್ಮಾಜ್ಜಜ್ಞೇ ಚತುರ್ಮುಖಃ ॥

ಇತ್ಯಧ್ಯಾತ್ಮೇ ॥

ಭೂತೇಂದ್ರಿಯಾಣಾಮಾತ್ಮಕಂ ಯಚ್ಛಾಪ್ನೋತೀತ್ಯಾದೇಃ ।

ಯಾರ ನಾಭಿಕಮಲದಿಂದ ನಾನು ಆವಿರ್ಭವಿಸಿದೆನೋ, ಯಾವ ಈ ಭಗವತ್ಸ್ವರೂಪವನ್ನು ಆನಂದಮಾತ್ರಸ್ವರೂಪವೆಂದು ಕಾಣುತ್ತಿರುವೆನೋ, ಯಾವ ಈ ರೂಪವನ್ನು ನಾನು ಆಶ್ರಯಿಸಿರುವೆನೋ ಅದಕ್ಕಿಂತ ಬೇರೆ ಉತ್ತಮವಾದ ಸರ್ವಥಾ ಯಾರೂ ಕಾಣಲಾಗದ ಒಂದು ಪರಬ್ರಹ್ಮವಸ್ತು ಇಲ್ಲ. ಅದರಿಂದ 'ಪರಬ್ರಹ್ಮ ಯಾರಿಗೂ ಕಾಣಲಾಗದುದು ಎನ್ನುವುದು ತಪ್ಪೆಂದು ಹೇಳಿದ್ದು ಉತ್ತಮವಾದ ಪರಬ್ರಹ್ಮ ವಸ್ತುವಿನ ಬಗ್ಗೆಯೆ ಹೊರತು ಕೇವಲ ಔಪಾಧಿಕವಾದ

ಗೌಣಬ್ರಹ್ಮನ ಬಗ್ಗೆ ಅಲ್ಲ. 'ಆದೌ ಗೃಹೀತಂ' ಎಂದರೆ ಅನಾದಿಕಾಲದಿಂದ ಸ್ವೀಕೃತವಾದುದು ಆದಿಸೃಷ್ಟಿಕಾಲದಲ್ಲಿ ಕೇವಲ ವ್ಯಕ್ತ ಮಾಡಲ್ಪಡುತ್ತದೆ ಎಂದರ್ಥ.

ನಿರ್ದುಷ್ಟ ಜ್ಞಾನ ಆನಂದಬಲಾದಿಸ್ವರೂಪವಾದ ದಿವ್ಯವಾದ ಯಾವ ಹರಿಯ ರೂಪ ಕ್ಷೀರಸಾಗರ ಮಧ್ಯದಲ್ಲಿದೆಯೋ ಅದಕ್ಕಿಂತ ಉತ್ತಮವಾದ, ಯಾರಿಗೂ ಎಂದೂ ಕಾಣಲಾಗದ ನಿರ್ಗುಣಬ್ರಹ್ಮ ಎಂಬುದು ಇಲ್ಲವೇ ಇಲ್ಲ. ಅದು ಅನಾದಿನಿತ್ಯ. ತನ್ನ ಅನುಗ್ರಹವಾಗದಿದ್ದರೆ ವ್ಯಕ್ತವಾಗದುದು. ಇಂಥ ಭಗವದ್ರೂಪದಿಂದ ಚತುರ್ಮುಖ ಜನಿಸಿದನೆಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ

'ಭೂತೇಂದ್ರಿಯಾತ್ಮಕಂ' ಎಂದರೆ ಭೂತಇಂದ್ರಿಯಗಳಲ್ಲಿ ವ್ಯಾಪಕ, ಅವುಗಳಿಗೆ ಸ್ವಾಮಿ ಮತ್ತು ಅವುಗಳ ನಾಶಕ ಎಂದರ್ಥ. ಆತ್ಮಶಬ್ದಕ್ಕೆ ಈ ಅರ್ಥಗಳು.

ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।
ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಭಣ್ಯತೇ ॥

(ವಿಷಯಪದಾರ್ಥಗಳಲ್ಲಿ ವ್ಯಾಪಿಸುವುದರಿಂದ, ತನ್ನ ವಶಕ್ಕೆ ತೆಗೆದು ಕೊಳ್ಳುವುದರಿಂದ, ನಾಶಮಾಡುವುದರಿಂದ, ನಿಯಾಮಕವಾಗಿ ನಿತ್ಯ ನೆಲೆಸಿ ರುವುದರಿಂದ ಪರಮಾತ್ಮ 'ಆತ್ಮ' ಎಂದು ಕರೆಸಿಕೊಳ್ಳುತ್ತಾನೆ) ಎಂಬ ವಚನದಿಂದ ಸಿದ್ಧವಾಗುತ್ತವೆ.

* * *

ವಿಷಯಾಸಕ್ತಿಯನ್ನು ತೊರೆದು ನಿನ್ನನ್ನು ಶ್ರವಣಾದಿಗಳಿಂದ ಆರಾಧಿಸಿ ಸಾಕ್ಷಾತ್ಕಾರ ಪಡೆದರೆ ಭಕ್ತಿವಶನಾಗಿ ನೀನು ಹೃದಯದಲ್ಲಿ ಸದಾ ನೆಲೆಸುವಿ ಎಂದು ಬ್ರಹ್ಮನು ಪರಮಾತ್ಮನಲ್ಲಿ ಹೇಳಿದ್ದನ್ನು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ–

ಯೇ ತು ತ್ವದೀಯಚರಣಾಂಬುಜಕೋಶಗಂಧಂ
ಜಿಘ್ರಂತಿ ಕರ್ಣವಿವರೈಃ ಶ್ರುತಿವಾತನೀತಮ್ ।
ಭಕ್ತ್ಯಾ ಗೃಹೀತಚರಣಃ ಪರಯಾ ಚ ತೇಷಾಂ
ನಾಪೈಷಿ ನಾಥ ಹೃದಯಾಂಬುರುಹಾತ್ ಸ್ವಪುಂಸಾಮ್ ॥ ೫ ॥

ಪ್ರಭು, ಹೃದಯ ಕರ್ಣರಂಧ್ರಗಳ ಮೂಲಕ ಶ್ರವಣವೆಂಬ ಗಾಳಿ ಒಯ್ದು ತರುವ ನಿನ್ನ ಪಾದಕಮಲದ ಸುಗಂಧವನ್ನು ಯಾರು ಸಾಕ್ಷಾತ್ಕರಿಸಿ ಆಸ್ವಾದಿಸುವರೋ ಆ ನಿನ್ನ ಭಕ್ತರ ಹೃದಯಕಮಲದಿಂದ ನೀನು ಎಂದೂ ಆಚೆ ಹೋಗುವುದಿಲ್ಲ. ಏಕೆಂದರೆ ಅವರು ಪರಾಭಕ್ತಿ ಎಂಬ ಪಾಶದಿಂದ ನಿನ್ನ ಕಾಲು ಕಟ್ಟಿ ಹಾಕಿರುತ್ತಾರೆ ತಾನೆ?

ಇಲ್ಲಿ 'ಚರಣಾಂಬುಜ ಕೋಶಗಂಧಂ' ಎಂದರೆ ಪಾದಕಮಲದ ಸುಗಂಧವನ್ನು ಕರ್ಣರಂಧ್ರಗಳಿಂದ ಆಘ್ರಾಣಿಸುತ್ತಾರೆ ಎಂದು ಹೇಳುವುದು ಅಸಂಗತವಾಗಿ ಕಾಣುತ್ತದೆ. ಶ್ರವಣೇಂದ್ರಿಯಕ್ಕೆ ಗಂಧವನ್ನು ಆಘ್ರಾಣಿಸುವ ಶಕ್ತಿ ಇಲ್ಲ ತಾನೆ? [೧]ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಗಂಧ ಎಂದರೆ ಯಶಸ್ಸು. 'ಪುಣ್ಯಸ್ಯ ಕರ್ಮಣೋ ದೂರಾದ್ ಗಂಧೋ ವಾತಿ' ಎಂದು ಮಹಾನಾರಾಯಣೋಪನಿಷತ್ತಿನಲ್ಲಿ ಪುಣ್ಯಕರ್ಮದಿಂದ ಬರುವ ಯಶಸ್ಸು ಹೂವಿನಿಂದ ಬರುವ ಗಂಧ ಎಂದು ಆಲಂಕಾರಿಕವಾಗಿ ಹೇಳಿದೆ. ಹಾಗೇ ಇಲ್ಲಿಯೂ, ಎಂದು ಒಂದು ಸಮಾಧಾನವನ್ನು ಹೇಳಿ, ಭಗವಂತನ ಮಾಹಾತ್ಮ್ಯಶ್ರವಣಮಾಡುವ ಶ್ರೋತ್ರೇಂದ್ರಿಯ ಸಾಮಾನ್ಯವಲ್ಲ, ದೇವತಾರೂಪ, ಅದರಿಂದ ಅದು ಗಂಧವನ್ನು ಆಘ್ರಾಣಿಸಲೂ ಸಮರ್ಥ ಎಂದು ಇನ್ನೊಂದು ಸಮಾಧಾನ ಹೇಳಿದ್ದಾರೆ.

ವಸ್ತುತಃ ಇಲ್ಲಿ ಚರಣಾಂಬುಜವೆಂದರೆ ಕ್ಷೀರಾಬ್ಧಿಶಾಯಿಯಾದ ಸರ್ವಾವತಾರಮೂಲವಾದ ಭಗವದ್ರೂಪ. ಅದು ನೀರಲ್ಲಿ ಇರುವ ಕಾರಣ ಕಮಲ ಎಂದಿದೆ. 'ಚರಣ' ಎಂದು ಶಬ್ದ ಉತ್ತಮರ ಸ್ವರೂಪವನ್ನು ಹೇಳುತ್ತದೆ, ಗುರುಚರಣ, ಪಿತೃಚರಣ ಎನ್ನುವಂತೆ. ಅದರಿಂದ ಚರಣವು ಕಮಲವೆಂದ ಬಳಿಕ ಅದರ ಅಂಶವನ್ನು ಗಂಧ ಎನ್ನಲೇ ಬೇಕು. ಅದರ ಅನುಭವವೂ ಕೂಡ ಆಘ್ರಾಣನವೇ ಆಗಬೇಕು ಆದರೆ ಪ್ರಕೃತ ಈ ಗಂಧಾನುಭವ ಮೂಗಿನಿಂದ ಸಾಧ್ಯವಿಲ್ಲ. ಕಿವಿಯಿಂದ ಶ್ರವಣಮೂಲಕವೇ ಆಗಬೇಕು ಎಂಬ ಅಭಿಪ್ರಾಯದಿಂದ 'ಕರ್ಣವಿವರೈಃ ಜಿಘ್ರಂತಿ' ಕಿವಿಯ ರಂಧ್ರಗಳಿಂದ ಆಘ್ರಾಣಿಸುತ್ತಾರೆ ಎನ್ನಲಾಗಿದೆ. ವಸ್ತುತಃ ಕಿವಿಯಿಂದ ಆಘ್ರಾಣನವೂ ಅಲ್ಲ, ಕಿವಿಯ ದ್ವಾರದಿಂದ ಹೃದಯಕ್ಕೆ ಬಂದುದನ್ನು ಹೃದಯದಿಂದಲೆ ಸಾಕ್ಷಾತ್ಕಾರದಿಂದ ಅನುಭವಿಸಬೇಕು. ಹೃದಯಕ್ಕೆ ಬಂದ ಈ ಗಂಧವನ್ನು ಯಶಸ್ಸು ಪ್ರಭಾವವೆಂದರೆ ತಪ್ಪಿಲ್ಲ. ಆದರೂ ಹೃದಯದಲ್ಲಿ ಬಂದು ವ್ಯಕ್ತವಾಗುವ ಭಗವದ್ರೂಪಕ್ಕೆ 'ಗಂಧ' ಎಂದೇ ಹೆಸರಿದೆ. ಮುಖ್ಯಾರ್ಥವಾದ ಅದನ್ನು ಬಿಟ್ಟು ಯಶಸ್ಸು ಎಂದು ಗೌಣಾರ್ಥ ಹೇಳುವುದು ಉಚಿತವಲ್ಲ.

---

೧. ಇಂದ್ರಿಯಾಣಾಂ ಭಗವದೀಯವಿಷಯಗ್ರಹಣಾರ್ಥಮನ್ಯಥಾತ್ವಂ ಜಾಯತೇ । ಗಂಧೋ ಹಿ ಚಿತ್ತಕ್ಷೋಭಕಃ । ಅಂತಃ ಪ್ರವೇಶಸಮರ್ಥತ್ವಾತ್ । ಶಬ್ದಸ್ತು ನ ತಥಾ । ತತಃ ಶ್ರವಣೇಽಪಿ ಗಂಧಾನುಭವತ್ವಮುಚ್ಯತೇ । ಅಂತಃ ಪ್ರವಿಶ್ಯ ಕ್ಷೋಭಾರ್ಥಂ । ಅತ್ರ ಯಶೋವಾಚೀ ಗಂಧಶಬ್ದಃ । ಪುಣ್ಯಸ್ಯ ಕರ್ಮಣೋ ಗಂಧ ಇವ । ಭಗವನ್ಮಾಹಾತ್ಮ್ಯಶ್ರೋತ್ರ್ಯಾಣಾಂ ಶ್ರವಣಂ ದೇವತಾರೂಪಮಿತಿ ಗಂಧೋಽಪ್ಯಸ್ತಿ ।
—ವಲ್ಲಭಃ

ಯಾರು ನಿನ್ನ ಒಂದು ಅಂಶವನ್ನು ಹೃದಯದಲ್ಲಿ ಕಾಣುತ್ತಾರೆ ಅವರ ಹೃದಯದಿಂದ ನೀನು ಆಚೆ ಹೋಗುವುದಿಲ್ಲ ಎನ್ನುವುದೇ ಹೇಗೆ? ನೀನು ಹೃದಯಕ್ಕೆ ಹೋಗಿಲ್ಲ, ನಿನ್ನ ಅಂಶ ಮಾತ್ರ ಹೋಗಿದೆ ತಾನೆ? ಎಂದರೆ ನಿನಗೂ ನಿನ್ನ ಅಂಶಕ್ಕೂ ಭೇದವಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ–

ಹೃದಿ ವ್ಯಕ್ತಂ ತು ಯದ್ರೂಪಂ ಹರೇರ್ಗಂಧಃ ಸ ಉಚ್ಯತೇ ।
ಗಂಧಗಂಧವತೋರ್ಯಸ್ಮಾನ್ನ ಭೇದಃ ಕ್ವಚನೇಷ್ಯತೇ ।
ಇತಿ ಬ್ರಹ್ಮತರ್ಕೇ ।

ಹೃದಯದಲ್ಲಿ ವ್ಯಕ್ತವಾಗುವ ಭಗವದ್ರೂಪವು ಭಗವಂತನ ಗಂಧ ಎನಿಸುತ್ತದೆ. ಗಂಧಕ್ಕೂ ಗಂಧ ಉಳ್ಳ ಭಗವಂತನಿಗೂ ಎಲ್ಲಿಯೂ ಭೇದವು ಸಮ್ಮತವಾಗಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ.

ಇಲ್ಲಿ 'ಗಂಧಗಂಧವತೋಃ' ಎನ್ನುವುದಕ್ಕೆ ಮೊದಲು,

ಉತ್ತಮಾನಾಂ ತು ಪಾದೇನ ಸರ್ವಂ ರೂಪಂ ತು ಭಣ್ಯತೇ ।

'ಉತ್ತಮರ ಪೂರ್ಣಸ್ವರೂಪವನ್ನೇ ಪಾದಶಬ್ದವು ಹೇಳುತ್ತದೆ' ಎಂದು ಅರ್ಧಶ್ಲೋಕ ಪಾಠ ಕೆಲವೆಡೆ ಕಾಣುತ್ತದೆ. ಛಲಾರೀ ನಾರಾಯಣಾಚಾರ್ಯರ ಪ್ರಬೋಧಿನೀ ಟೀಕೆಯಲ್ಲಿ ಈ ಪಾಠವನ್ನು ಸ್ವೀಕರಿಸಿ ವ್ಯಾಖ್ಯಾನಿಸಿದ್ದಾರೆ. 'ಪಾದೇನ' ಎಂದರೆ 'ಪಾದಶಬ್ದದಿಂದ' ಎಂದು ಅರ್ಥ ಹೇಳಿದ್ದಾರೆ. ಆದರೆ ಯಾದುಪತ್ಯದಲ್ಲಿ ಇದನ್ನು ತಾತ್ಪರ್ಯವಚನವೆಂದು ಗ್ರಹಿಸಿದಂತೆ ಕಾಣುವುದಿಲ್ಲ. ಮತ್ತು ಸ್ವಲ್ಪ ವ್ಯತ್ಯಾಸವಾಗಿ,

ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ'

ಎಂದು ಉದಾಹರಿಸಲಾಗಿದೆ. ಈ ಪಕ್ಷದಲ್ಲಿ ಪಾದಶಬ್ದಕ್ಕೆ ಪಾದಶಬ್ದ ಎಂದರ್ಥ ಹೇಳುವ ಪ್ರಸಂಗವಿಲ್ಲ.

* * *

ಜನರು ತಾವು ಇಂದ್ರಿಯಗಳಿಂದ ಮಾಡುವ ಎಲ್ಲ ಕೆಲಸಗಳನ್ನು ನಿನ್ನ ಇಚ್ಛಾಬಲದಿಂದಲೇ ಮಾಡುತ್ತಿದ್ದೇವೆ ಎಂದು ತಿಳಿದರೆ ಸಂಸಾರ ಬಂಧನ ತೊಲಗುವುದು, ಇಲ್ಲದಿದ್ದರೆ ಇಲ್ಲ ಎಂದು ಬ್ರಹ್ಮನು ಶ್ರೀಹರಿಯ ಮುಂದೆ ಹೇಳುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ–

ಯಾವತ್ ಪೃಥಕ್ತ್ವಮಿದಮಾತ್ಮನ ಇಂದ್ರಿಯಾರ್ಥಂ
ಮಾಯಾಬಲಂ ಭಗವತೋ ಜನ ಈಶ ಪಶ್ಯೇತ್ ।

ತಾವಚ್ಚ ಸಂಸೃತಿರಸೌ ಪ್ರತಿಸಂಕ್ರಮೇತ
ವ್ಯರ್ಥಾಽಪಿ ದುಃಖನಿವಹಂ ವಹತೀ ಕ್ರಿಯಾರ್ಥಾ ॥ ೯ ॥

ಸಜ್ಜನರು ಯಾವಾಗ ತಾವು ವಿಷಯಭೋಗಕ್ಕಾಗಿ ನಮ್ಮ ಇಂದ್ರಿಯಗಳಿಂದ ನಾವು ಕೆಲಸ ಮಾಡುತ್ತೇವೆ ಎನ್ನುವ ಕರ್ತೃತ್ವಾನುಭವವನ್ನು ಭಗವಂತನ ಇಚ್ಛಾಬಲದಿಂದ ಲಭ್ಯವಾದುದೆಂದು ಶ್ರವಣಾದಿಗಳಿಂದ ತಿಳಿಯುವರೋ ಆಗಲೇ ಶಾಶ್ವತಸುಖವನ್ನು ತಾರದ, ಯಜ್ಞಾದಿಗಳಿಂದ ಸ್ವರ್ಗಾದಿ ನಶ್ವರಸುಖವನ್ನೇ ತರುವ ಮತ್ತು ಹೆಚ್ಚಾಗಿ ದುಃಖವನ್ನು ಉಣಿಸುವ ಈ ಸಂಸಾರ ನಾಶವಾದೀತು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ತಾವನ್ನ ಸಂಸೃತಿರಸೌ ಪ್ರತಿಸಂಕ್ರಮೇತ' ಅಲ್ಲಿಯವರೆಗೆ ಸಂಸಾರನಾಶವಾಗದೆ ಹಾಗೇ ಇರುತ್ತದೆ' ಎಂದು ಪಾಠವಿಟ್ಟುಕೊಂಡಿದ್ದಾರೆ. ಅದಕ್ಕನುಗುಣವಾಗಿ 'ಪೃಥಕ್ತ್ವಂ' ಎಂದರೆ ಆತ್ಮನ ನಿಜವಾದ ಸ್ವರೂಪಕ್ಕೆ ವ್ಯತಿರಿಕ್ತವಾದ 'ಈ ದೇಹ ಇಂದ್ರಿಯಾದಿಗಳೇ ನಾನು' ಎನ್ನುವ ದೇಹಾದಿರೂಪತ್ವವೆಂದು ಶ್ರೀಧರವ್ಯಾಖ್ಯಾನ. ಆತ್ಮನಿಗೆ ಶರೀರ ಕರ್ಮಾಧೀನವಾಗಿ ದೇವಮನುಷ್ಯಾದಿ ನಾನಾ ಬಗೆಯದಾಗಿರುತ್ತದೆ. ಈ ನಾನಾತ್ವವನ್ನು ಆತ್ಮನಲ್ಲಿಯೇ ತಿಳಿಯುವುದು ಪೃಥಕ್ತ್ವವೆಂದು ವೀರರಾಘವ ವ್ಯಾಖ್ಯಾನ. ನಾನು ಭಗವಂತನ ಅಧೀನನಲ್ಲ ಸ್ವತಂತ್ರನಾಗಿದ್ದೇನೆ ಎನ್ನುವ ಸ್ವಾಂತಂತ್ರ್ಯವೇ ಪೃಥಕ್ತ್ವವೆಂದು ಜೀವಗೋಸ್ವಾಮಿ ವ್ಯಾಖ್ಯಾನ.

ಆದರೆ 'ತಾವಚ್ಚ ಸಂಸೃತಿರಸೌ' ಎಂದೇ ಶುದ್ಧಪಾಠ. ಏಕೆಂದರೆ ಭಾಗವತವು ಹೇಳುವ ಪೃಥಕ್ತ್ವವೂ ಷಾಡ್ಗುಣ್ಯಎಂಬ ಗ್ರಂಥವು ಹೇಳುವ ವಿಭಕ್ತತ್ವವೂ ಒಂದೇ ಎಂಬ ಅಭಿಪ್ರಾಯದಿಂದ ತಾತ್ಪರ್ಯದಲ್ಲಿ ವಿಭಕ್ತತ್ವವೆಂದರೇನೆಂದು ವಿವರಣೆ ನೀಡುತ್ತಾರೆ. ವಿಭಕ್ತತ್ವವೆಂದರೆ 'ಧ್ಯಾಯೇ ಮಂಸ್ಯೇ' ಆಲೋಚಿಸುತ್ತೇನೆ ತಿಳಿಯುತ್ತೇನೆ

---

೧. ಆತ್ಮನ ಇದಂ ಪೃಥಕ್ತ್ವಂ ದೇಹಾದಿಭಾವಂ । —ಶ್ರೀಧರಃ

ಕ್ಷುದಾದಿಭಿಃ ಪೀಡಾರೂಪಾಯಾಃ ಸಂಸೃತೇರಪರಮಾರ್ಥತ್ವಾತ್ ಪ್ರಾತೀತಿಕತ್ವೇನ ಮಿಥ್ಯಾರೂಪತ್ವಾತ್ । ಆತ್ಮನೋ ಜೀವಸ್ಯ ಬ್ರಹ್ಮಭಾವಾತ್ ಪೃಥಕ್ತ್ವಂ ದೇಹಾದಿಭಾವಂ ಅಧ್ಯಾಸೇನ ದೇಹೇಂದ್ರಿಯಾದಿತಾದಾತ್ಮ್ಯಂ । —ರಾಧಾರಮಣದಾಸಃ

ಪೃಥಕ್ತ್ವಂ ದೇವಮನುಷ್ಯಾದಿದೇಹಗತಪೃಥಕ್ತ್ವಂ ಆತ್ಮನಃ ಆತ್ಮಸಂಬಂಧಿತಯಾ ಜನೋ ಯಾವತ್ ಪಶ್ಯೇತ್ । —ವೀರರಾಘವಃ

ಭಗವತಃ ಸಕಾಶಾದಾತ್ಮನಃ ಪೃಥಕ್ತ್ವಂ ಸ್ವಾತಂತ್ರ್ಯಂ ಯಾವತ್ ಪಶ್ಯೇತ್ ।
ಜೀವಗೋಸ್ವಾಮೀ

ಎಂದು ಮುಂತಾಗಿ ಜೀವನಿಗೆ ಆಯಾ ಇಂದ್ರಿಯವ್ಯಾಪಾರಗಳಲ್ಲಿ ಕರ್ತೃತ್ವ, ವಿಷಯಭೋಗಕ್ಕಾಗಿ ಪರಮಾತ್ಮ ಕೊಟ್ಟಿದ್ದು: ಇದು ಮುಕ್ತಿಯಲ್ಲಿಯೂ ಜೀವನಿಗೆ ಇದೆ, 'ಚಶಬ್ದಾನ್ಮುಕ್ತಾವಪಿ' ಎನ್ನುತ್ತ ವಿಜಯಧ್ವಜೀಯವು ಮುಕ್ತಿಯಲ್ಲಿಯೂ ಜೀವನಿಗಿರುವ ಪರಾಧೀನಕರ್ತೃತ್ವವನ್ನೇ ಪೃಥಕ್ತ್ವವೆಂದು ಹೇಳುತ್ತಿದೆ. ಭಗವಂತ ಕೊಟ್ಟಿರುವ ಈ ಪೃಥಕ್ತ್ವವನ್ನು ಭಗವಂತ ಕೊಟ್ಟಿದ್ದೆಂದು ತಿಳಿದಾಗಲೆ ಸಂಸಾರನಿವೃತ್ತಿ ಎಂದು ಭಾಗವತ ಹೇಳುತ್ತಿದೆ. ಅದರಿಂದ 'ತಾವಚ್ಚ' ಎಂಬ ಪಾಠವೇ ಸರಿ. '

'ತಾವನ್ನ' ಎಂಬ ಪಾಠದಲ್ಲಿಯೂ ಶ್ರೀಧರಾದಿವ್ಯಾಖ್ಯಾನ ಸಮರ್ಪಕವಲ್ಲ. ಶ್ರೀಧರವ್ಯಾಖ್ಯಾನವು ಹೇಳುವ ದೇಹಾಧ್ಯಾಸವಾಗಲಿ, ವೀರರಾಘವವ್ಯಾಖ್ಯಾನ ಹೇಳುವ ದೇಹಧರ್ಮಾಧ್ಯಾಸವಾಗಲಿ ಸುಳ್ಳು, ತಾನು ಬೇರೆ ತನ್ನ ದೇಹ ಬೇರೆ ಎಂಬ ವಿವೇಕ ಸಾಮಾನ್ಯಜನರಿಗೂ ಇದೆ ಎಂದು ಅನುಭವಸಿದ್ಧವಾಗಿದೆ. ಜೀವಗೋಸ್ವಾಮಿಯು ಹೇಳುವ ಸ್ವಾತಂತ್ರ್ಯಬುದ್ಧಿ ಸಂಸಾರಕ್ಕೆ ಕಾರಣವೆನ್ನುವುದು ನಿಜ ಆದರೆ ಅದು ಪೃಥಕ್ತ್ವಶಬ್ದಾರ್ಥವೆನ್ನುವಲ್ಲಿ ಪ್ರಮಾಣವಿಲ್ಲ. ಶ್ಲೋಕದಲ್ಲಿ 'ಮಾಯಾಬಲಂ' ಎಂದರೆ ಶ್ರೀಧರಾದಿವ್ಯಾಖ್ಯಾನಗಳು ಹೇಳುವ ಅನಿರ್ವಚನೀಯ ಅವಿದ್ಯಾಬಲವಲ್ಲ. ಅಂಥ ಒಂದು ಅವಿದ್ಯೆ ಇದೆ ಎನ್ನುವಲ್ಲಿ ಪ್ರಮಾಣವಿಲ್ಲ. ಭಗವಂತನ ಇಚ್ಛೆ, ಲಕ್ಷ್ಮೀದೇವಿ, ಜಡಪ್ರಕೃತಿ, ಬಂಧಕಪ್ರಕೃತಿಗಳೆ ಮಾಯೆ ಎನಿಸುತ್ತವೆ ಎಂದು ಬ್ರಹ್ಮತರ್ಕ ಹೇಳಿದೆ–

ಮಾಯಾಬಲಂ ಭಗವದಿಚ್ಛಾಬಲಮ್ ।

ಜ್ಞೇಯತ್ವಂ ದುರ್ಘಟಸ್ಯಾಪಿ ಘಟನಾಽಧಿಕಶಕ್ತಿತಾ ।
ಅಭೇದ ಈಶ್ವರೇಣಾಪಿ ಸೃಷ್ಟ್ಯಾದಾವಂತರಂಗತಾ ॥

ಉಚ್ಯೇತ ಯಸ್ಯಾಃ ಸಾ ಮಾಯಾ ಹರೇರಿಚ್ಛಾಽಥವಾ ಬಲಮ್ ।
ಭಗವತ್ತಂತ್ರತಾ ಯಸ್ಯಾಸ್ತದ್ಭಾರ್ಯಾತ್ವಂ ಸುರೂಪತಾ ॥

ಉಚ್ಯೇತ ಮಾಯಾ ಸಾ ತು ಶ್ರೀರ್ದೋಷಯುಕ್ತಾ ಜಡಾ ಸ್ಮೃತಾ ।
ಪರಿಣಾಮಿನೀ ಚ ಯಸ್ಯಾಸ್ತು ದೋಷಾಶ್ಚೇತನತಾ ತಥಾ ।
ಶೈವಲೀ ನಾಮ ಸಾ ಮಾಯಾ ಜಗದ್ಬಂಧಾತ್ಮಿಕಾ ಸದಾ ॥

ಇತಿ ಬ್ರಹ್ಮತರ್ಕೇ ।

ಧ್ಯಾಯೇ ಮಂಸ್ಯೇ ತಥಾ ಪಶ್ಯೇ ಶೃಣೋಮೀತಿ ವಿಭಕ್ತತಾ ।
ಜೀವಸ್ಯ ತು ಹರೇರಿಚ್ಛಾಬಲಾದಿಂದ್ರಿಯಭುಕ್ತಯೇ ॥

ಇತಿ ಷಾಡ್ಗುಣ್ಯೇ ।

ಇಂದ್ರಿಯಾಣಾಂ ಭೋಗಾರ್ಥಂ । ವ್ಯರ್ಥಾಽಪಿ ಯಜ್ಞಾದಿಕ್ರಿಯಾರ್ಥಾ ।

'ಮಾಯಾಬಲಂ' ಎಂದರೆ ಭಗವಂತನ ಇಚ್ಛೆಯ ಬಲದಿಂದ ಇರುವಂಥದ್ದು ಎಂದರ್ಥ.

ಈ ಶ್ಲೋಕದಲ್ಲಿ ಹೇಳಿದ ಮಾಯೆ ಭಗವಂತನ ಇಚ್ಛೆಯೇ ಏಕೆಂದರೆ 'ಪಶ್ಯೇತ್' ಮೋಕ್ಷಲಾಭಕ್ಕಾಗಿ ತಿಳಿಯಬೇಕಾದ ಉತ್ತಮಪ್ರಮೇಯ ಎಂದು ಹೇಳಿದ್ದರಿಂದ ಅಂಥ ಪ್ರಮೇಯ ಭಗವಂತನ ಇಚ್ಛೆಯೇ. 'ಬಲಂ' ಎಂದು ಹೇಳಿದ ಅಘಟಿತಘಟನಾಶಕ್ತಿಯೂ ಭಗವಂತನ ಇಚ್ಛೆಗೇ ಇರುತ್ತದೆ. ಭಗವಂತನಿಂದ ಅಭಿನ್ನವಾಗಿರುವುದೂ ಸೃಷ್ಟ್ಯಾದಿಕಾರ್ಯಗಳಲ್ಲಿ ಪ್ರಧಾನಕಾರಣವಾಗಿರುವುದೂ ಭಗವಂತನ ಇಚ್ಛೆಯ ಲಕ್ಷಣ. ಅನಿರ್ವಚನೀಯ ಮಾಯೆಯದ್ದಲ್ಲ. ಇಂಥ ಲಕ್ಷಣಗಳನ್ನು ಹೇಳಿದಲ್ಲೆಲ್ಲ ಮಾಯೆ ಎಂದರೆ ಭಗವಂತನ ಇಚ್ಛೆ ಅಥವಾ ಬಲ ಎಂದು ತಿಳಿಯಬೇಕು. ಎಲ್ಲಿ ಮಾಯೆ ಭಗವಂತನ ಅಧೀನಳು, ಅವನ ಪತ್ನಿ, ಸುಂದರಿ ಎಂದು ಉಕ್ತಳಾಗುವಳೋ ಅಲ್ಲಿ ಮಾಯೆ ಎಂದರೆ ಲಕ್ಷ್ಮೀದೇವಿ. ಯಾವ ಮಾಯೆ ದೋಷಯುಕ್ತ, ಪರಿಣಾಮ ಹೊಂದುವಂಥದ್ದು ಎಂದು ಉಕ್ತವಾಗುವುದೋ ಅದು ಜಡಪ್ರಕೃತಿ, ದೋಷಯುಕ್ತಳೂ ಚೇತನಳೂ ಎನಿಸುವ ಮಾಯೆ ಶೈವಲೀ ಎಂಬವಳು, ಸಂಸಾರಬಂಧನಕ್ಕೆ ಸಾಧನವಾಗಿರುವವಳು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಆಲೋಚಿಸುತ್ತೇನೆ ತಿಳಿಯುತ್ತೇನೆ, ನೋಡುತ್ತೇನೆ ಕೇಳುತ್ತೇನೆ ಎಂದು ಜೀವರಲ್ಲಿರುವ ಇಂದ್ರಿಯವ್ಯಾಪಾರಕರ್ತೃತ್ವಾನುಭವವು ವಿಭಕ್ತತಾ ಅಥವಾ ಪೃಥಕ್ತ್ವವೆನಿಸುತ್ತದೆ. ಇದು ಇಂದ್ರಿಯಗಳಿಂದ ಜೀವರಿಗೆ ವಿಷಯಭೋಗ ಉಂಟಾಗುವುದಕ್ಕಾಗಿ ಭಗವಂತನ ಇಚ್ಛೆಯಿಂದ ಇರುತ್ತದೆ ಎಂದು ಷಾಡ್ಗುಣ್ಯಗ್ರಂಥದಲ್ಲಿ ಹೇಳಿದೆ.

'ಇಂದ್ರಿಯಾರ್ಥಂ' ಎಂದರೆ ಇಂದ್ರಿಯಗಳಿಂದಾಗುವ ವಿಷಯಭೋಗಕ್ಕಾಗಿ ಎಂದು ಮಧ್ಯಮಪದಲೋಪಿ ಸಮಾಸ. 'ವ್ಯರ್ಥಾಽಪಿ ಕ್ರಿಯಾರ್ಥಾ' ಎಂದರೆ ಶಾಶ್ವತಸುಖ ಕೊಡದಿರುವುದರಿಂದ ವ್ಯರ್ಥವಾದರೂ ಯಜ್ಞಾದಿಕ್ರಿಯೆಗಳಿಂದ ಸ್ವರ್ಗಾದಿ ನಶ್ವರ ಸುಖಕ್ಕೆ ಸಾಧನವಾಗುವುದು ಸಂಸಾರ ಎಂದರ್ಥ.

* * *

ಶ್ರವಣಾದಿಗಳನ್ನು ನಡೆಸದೆ ಕೇವಲ ವಿಷಯಭೋಗಗಳಲ್ಲಿ ಆಸಕ್ತರಾಗಿರುವವರು ಸಂಸಾರಬದ್ಧರಾಗಿಯೇ ಇರುತ್ತಾರೆ ಎಂದು ಬ್ರಹ್ಮನು ಭಗವಂತನ ಮುಂದೆ ಹೇಳುವುದನ್ನು ಮೈತ್ರೇಯರು ವಿದುರನಿಗೆ ನಿರೂಪಿಸುತ್ತಾರೆ–

ಅಧ್ಯಾಹೃತಾರ್ಥಕರಣಾ ನಿಶಿ ನಿಶ್ಶಯಾನಾ
ನಾನಾಮನೋರಥಧಿಯಃ ಕ್ಷಣಭಗ್ನನಿದ್ರಾಃ ।
ದೈವಾದ್ಧತಾರ್ಥರಚನಾ ಋಷಯೋಽಪಿ ದೇವ
ಯುಷ್ಮತ್ಪ್ರಸಂಗವಿಮುಖಾ ಇಹ ಸಂಸರಂತಿ ॥ ೧೦ ॥

ನಿತ್ಯ ಸಂಸಾರಿಗಳು ಜ್ಞಾನಿಗಳ ವಂಶದಲ್ಲಿ ಜನಿಸಿದರೂ ಶ್ರವಣಾದಿರೂಪ ಭಗವದಾರಾಧನೆಗೆ ವಿಮುಖರಾಗಿ ತತ್ವಜ್ಞಾನಶೂನ್ಯರಾಗಿ ಇಂದ್ರಿಯಗಳನ್ನು ವಿಷಯಪದಾರ್ಥಗಳ ಕಡೆಗೆ ಹರಿಯಲು ಬಿಟ್ಟು ಮನಸ್ಸಿನಲ್ಲಿ ನಾನಾ ಬಯಕೆಗಳನ್ನು ತುಂಬಿಕೊಂಡು ನಿದ್ದೆ ಮಾಡಲೂ ಸಮಯವಿಲ್ಲದವರಾಗಿ ತಮ್ಮ ಕೆಲಸಗಳೆಲ್ಲವೂ ಭಗವಂತನ ಇಚ್ಛೆಯಿಂದ ಕೆಡುವುದನ್ನು ಕಾಣುತ್ತ ಸ್ವರ್ಗಭೂಮಿನರಕಗಳಲ್ಲಿ ಸಂಚರಿಸುತ್ತಲೇ ಇರುತ್ತಾರೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಭಕ್ತಿಯ ಮಾಹಾತ್ಮ್ಯವನ್ನು ಹೇಳಲು ಹೊರಟು ಜ್ಞಾನವನ್ನು ನಿಂದಿಸುತ್ತಾರೆ. ಋಷಯೋಽಪಿ ಎಂದರೆ ವಿವೇಕಿಗಳೂ, ಜ್ಞಾನಿಗಳೂ ಕೂಡ ಎಂದು ಶ್ರೀಧರಾದಿ ವ್ಯಾಖ್ಯಾನ. ಮಂತ್ರದ್ರಷ್ಟಾರರೂ ಕೂಡ ಎಂದು ವಲ್ಲಭವ್ಯಾಖ್ಯಾನ. ಮಂತ್ರದ್ರಷ್ಟಾರರಾದರೂ ವೇದವಾಕ್ಯದ ಅರ್ಥವನ್ನು ಮಾತ್ರ ವಿಚಾರಿಸುತ್ತಾರೆ, ಅದರ ತಾತ್ಪರ್ಯವನ್ನು ತಿಳಿಯುವುದಿಲ್ಲ, ಅದಕ್ಕೆ ಜೀವ ಬ್ರಹ್ಮನಾಗುವ ಬಗೆ ಹೇಗೆ ಎಂದು ಉಪಪತ್ಯಾದಿಗಳನ್ನು ವಿಚಾರಿಸುವುದಿಲ್ಲ. ಇಂಥ ಜ್ಞಾನಿಗಳಿಗೆ ಬ್ರಹ್ಮಲೋಕ, ಅಪುನರಾವೃತ್ತಿ ಮಾತ್ರ ಫಲ. ಅದು ಬೇಡವೆಂದರೆ ಮಾನಸಿಕವಾಗಿ ಇಲ್ಲವೆ ಯೋಗಬಲದಿಂದ ಸಂಸಾರವನ್ನೇ ನಡೆಸುತ್ತಾರೆ ಎನ್ನುತ್ತಾರೆ ವಲ್ಲಭಾಚಾರ್ಯರು. ಅವರಿಗೆ 'ಅಹ್ನ್ಯಾಪೃತಾರ್ತಕರಣಾಃ' ಎಂದು ಪಾಠ. ಭಕ್ತಿ ಇಲ್ಲದ ಕೇವಲ ಜ್ಞಾನಿಗಳು ಹಗಲೆಲ್ಲ ಹೊಟ್ಟೆ ಪಾಡಿಗಾಗಿ ದುಡಿಯುತ್ತಾರೆ. ಆಗ ವಿಷಯಭೋಗವಿಲ್ಲ, ರಾತ್ರಿಯಲ್ಲಿ ಮಲಗಿರುತ್ತಾರೆ, ಆಗಲೂ ವಿಷಯಭೋಗಗಳಿಲ್ಲ. ನಿದ್ರೆಯಾದರೂ ಉಂಟೆ? ಎಂದರೆ ಅದೂ ಇಲ್ಲ. ನಾನಾ ಮನೋರಥಧಿಯಾ ಕ್ಷಣಭಗ್ನನಿದ್ರಾಃ' ನಾನಾಸ್ವಪ್ನಗಳಿಂದ ನಿದ್ರಾಭಂಗ ಕ್ಷಣಕ್ಷಣ ಆಗುತ್ತಿರುತ್ತದೆ.

---

೧. ಭವತ್ವೇವಮವಿವೇಕಿನಾಂ । ವಿವೇಕಿನಸ್ತು ಮುಕ್ತಾ ಏವೇತಿ ಕಿಂ ತೇಷಾಂ ಭಕ್ತ್ಯಾಕೃತ್ಯಂ ಅತ ಆಹ । ರಾತ್ರೌ ವಿಷಯಸುಖಲವೋಽಪಿ ನಾಸ್ತಿ । ಯತೋ ನಿಶಿ ನಿಃಶಯಾನಾಃ ಸ್ವಪ್ನದರ್ಶನೇನ ಚ ಕ್ಷಣೇಕ್ಷಣೇ ಭಗ್ನನಿದ್ರಾಃ । —ಶ್ರೀಧರಃ

ಕರ್ಮಿ ಮೂಢ ಜ್ಞಾನಿ ಭೇದೇನ ತ್ರಿವಿಧಾ ಅಪಿ ಜೀವಾ ಭಗವದ್ವಿಮುಖಾಃ ಸಂಸರಂತ್ಯೇವೇತಿ ಕ್ರಮೇಣ 'ದೈವೇನ ತ' ಇತ್ಯನೇನ, 'ಕ್ಷುತ್ತೃಡಿ'ತ್ಯನೇನ, 'ಅಹ್ನ್ಯಾಪೃತೇ'ತ್ಯನೇನ ಚ ನಿರ್ದಿಷ್ಟಂ — ರಾಧಾರಮಣದಾಸಃ

ಮನೋರಥ ಬೇರೆ ಸ್ವಪ್ನ ಬೇರೆ ಆದರೂ ಮನೋರಥದಿಂದಾಗಿ ಸ್ವಪ್ನಗಳು ಬರುತ್ತವೆ ಎಂದು ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ. ಆದರೆ 'ನಿಶಿ ನಿಶ್ಶಯಾನಾಃ ಕ್ಷಣಭಗ್ನನಿದ್ರಾಃ' ರಾತ್ರಿ ಚೆನ್ನಾಗಿ ನಿದ್ದೆ ಮಾಡುತ್ತಾರೆ. ಕ್ಷಣಕ್ಷಣಕ್ಕೂ ನಿದ್ರಾಭಂಗ. ಇವೆರಡೂ ವಿರುದ್ಧ. ರಾತ್ರಿಯಲ್ಲಿ ನಿದ್ದೆ ಮಾಡುವುದಿಲ್ಲ ಏಕೆಂದರೆ ಸ್ವಪ್ನಗಳಿಂದ ನಿದ್ರಾಭಂಗವಾಗುತ್ತದೆ ಎನ್ನಬೇಕಾಗಿತ್ತು.

ಈ ವಿರೋಧ ಪರಿಹಾರಕ್ಕೆ 'ನಿಶಿ ನಿಃಶಯಾನಾ' ಎಂಬುದಕ್ಕೆ ಸ್ಕಂದಪುರಾಣದಲ್ಲಿ ಹೇಳಿದಂತೆ ಅಜ್ಞಾನದಲ್ಲಿ ಮುಳುಗಿರುತ್ತಾರೆ ಎಂದು ಅರ್ಥ ಹೇಳಬೇಕು. ಆಗ 'ಋಷಯೋಽಪಿ' ಎಂದರೆ ಜ್ಞಾನಿಗಳಾಗಿದ್ದರೂ ಎಂದರ್ಥವಲ್ಲ, ಜ್ಞಾನಿಗಳ ಕುಲದಲ್ಲಿ ಜನಿಸಿದವರು 'ಪಂಡಿತಪುತ್ರ'ರು ಎಂದರ್ಥ. ಹೀಗಾಗಿ ಜ್ಞಾನದ ನಿಂದೆ ಇಲ್ಲಿ ಇಲ್ಲ. ಅಜ್ಞಾನದ ನಿಂದೆ ಇದೆ, ಜ್ಞಾನಿಗಳಿಗೆ ಭಕ್ತಿ ಇಲ್ಲ ಎನ್ನುವುದೂ ಸರಿಯಲ್ಲ. ಅದ್ವೈತಜ್ಞಾನಿಗೆ ದೇವರೇ ಸುಳ್ಳೆಂಬ ಬಾವನೆಯಿಂದ ಭಕ್ತಿ ಇಲ್ಲದಿರಬಹುದು. ಆದರೆ ದ್ವೈತಜ್ಞಾನವೇ ನಿಜವಾದ ಜ್ಞಾನ. ಈ ಜ್ಞಾನವಿರುವಲ್ಲಿ ಭಕ್ತಿ ಇದ್ದೇ ಇರುತ್ತದೆ. ಅದರಿಂದ ಬೇರೆ ವ್ಯಾಖ್ಯಾನಕಾರರೆಲ್ಲರೂ ಜ್ಞಾನನಿಂದೆಗೆ ವ್ಯರ್ಥಪ್ರಯತ್ನ ನಡೆಸಿದ್ದಾರೆ ಎನ್ನಬೇಕಾಗುತ್ತದೆ. ಮಂತ್ರದ್ರಷ್ಟಾರರಾದ ಋಷಿಗಳೂ ಭಕ್ತಿ ಇಲ್ಲದವರೆನಿಸುವುದು ಅತ್ಯಂತ ಅಸಂಭಾವಿತ.

ಅರ್ಥೈರಧ್ಯಾಹೃತಾನಿ ಕರಣಾನಿ ಯೇಷಾಂ ।

ಅಜ್ಞಾನಂ ತು ನಿಶಾ ಪ್ರೋಕ್ತಾ ದಿವಾ ಜ್ಞಾನಮುದೀರ್ಯತೇ ।

ಇತಿ ಸ್ಕಾಂದೇ ।

'ಅಧ್ಯಾಹೃತಾರ್ಥಕರಣಾಃ' ಎಂದೇ ಪಾಠ, ವಿಷಯಪದಾರ್ಥಗಳಿಂದ ಆಕೃಷ್ಟವಾದ ಇಂದ್ರಿಯಗಳುಳ್ಳವರು ಎಂದು ಅರ್ಥ. 'ಅರ್ಥ'ಶಬ್ದಕ್ಕೆ ಸಮಾಸದಲ್ಲಿ ಪರನಿಪಾತ.

ಋಷಯೋ ಮಂತ್ರದ್ರಷ್ಟಾರಃ । ಭಗವಾಂಸ್ತಾದೃಶೇಭ್ಯಃ ಪ್ರಸನ್ನೋ ಭೂತ್ವಾ ಸತ್ಯಾದಿಲೋಕೇಷ್ವಿಹ ವಾ ಕಿಂಚಿತ್ಪ್ರಸಾದಂ ಪ್ರಯಚ್ಛತಿ । ತೇ ಹಿ ಬಾಲಾ ವಾಕ್ಯಾರ್ಥಮೇವ ವಿಚಾರಯಂತಿ, ನ ತಸ್ಯೋಪಪತ್ತ್ಯಾದಿಕಂ, ಕಥಮಸ್ಯ ಜೀವಸ್ಯ ಬ್ರಹ್ಮಭಾವೋ ಭವತೀತಿ । ವಾಕ್ಯಾನಾಂ ತಾತ್ಪರ್ಯಾಜ್ಞಾನಾತ್ । ವೇದವ್ಯಾಸಃ ಸಕಲವೇದಾರ್ಥಾಭಿಜ್ಞೋ ಜ್ಞಾನಫಲತ್ವೇನ ಸದ್ಯೋ ಮುಕ್ತಿಂ ನೋಕ್ತವಾನ್ ಕಿಂತು ಬ್ರಹ್ಮಲೋಕೇ ಸ್ಥಿತಿರೇವ ಫಲತ್ವೇನೋಕ್ತಾ ಅಪುನರಾವೃತ್ತಿಶ್ಚ । ತದೇವ ಫಲಂ ಭಗವದ್ದತ್ತಂ । ತದನಂಗೀಕಾರೇ ಮನಸಾ ಯೋಗೇನ ವಾ ಸಂಸೃತಿರೇವ ಭವತಿ ।

—ವಲ್ಲಭಾಚಾರ್ಯಃ

'ನಿಶಿ ನಿಃಶಯಾನಾ' ಎಂಬಲ್ಲಿ 'ನಿಶಿ' ಎಂದರೆ ಅಜ್ಞಾನದಲ್ಲಿ ಮುಳುಗಿದವರು ಎಂದರ್ಥ. 'ಅಜ್ಞಾನವು 'ನಿಶಾ' ರಾತ್ರಿ ಎಂದೂ ಜ್ಞಾನವು 'ದಿವಾ' ಹಗಲು ಎಂದೂ ಉಕ್ತವಾಗುತ್ತವೆ' ಎನ್ನುತ್ತದೆ ಸ್ಕಾಂದಪುರಾಣ.

* * *

ಸಜ್ಜನರು ಶ್ರವಣಾದಿಗಳಿಂದ ಭಗವಂತನನ್ನು ಆರಾಧಿಸುತ್ತ ಭಗವಂತನ ಯಾವ ರೂಪವನ್ನು ಉಪಾಸನೆ ಮಾಡುತ್ತಾರೋ ಆ ರೂಪಕ್ಕೆ ಸದೃಶವಾದ ಸಜ್ಜನರ ಸ್ವರೂಪಶರೀರವನ್ನೇ ಮುಕ್ತಿಯಲ್ಲಿ ಅವರಿಗೆ ವ್ಯಕ್ತಮಾಡಿಕೊಡುತ್ತಾನೆ ಭಗವಂತ ಎನ್ನುತ್ತಾರೆ ಬ್ರಹ್ಮದೇವರು–

ತ್ವದ್ಭಾವಯೋಗಪರಿಭಾವಿತಹೃತ್ಸರೋಜಾ
ಯೇ ಸಚ್ಛ್ರುತೇಕ್ಷಿತ ಪಥಾ ನನು ನಾಥ ಪುಂಸಾಮ್ ।
ಯದ್‌ಯದ್ ಧಿಯಾ ತ ಉರುಗಾಯ ವಿಭಾವಯಂತಿ
ತತ್ತದ್ ವಪುಃ ಪ್ರಣಯಸೇ ತದನುಗ್ರಹಾಯ ॥ ೧೧ ॥

ಹೇ ಪುರುಷೋತ್ತಮ, ಮಹಾತ್ಮರಿಂದ ಸ್ತುತಿಸಿ ಕೊಳ್ಳುವವನೆ, ಉತ್ತಮ ಗುರುಗಳಿಂದ ಮೋಕ್ಷಮಾರ್ಗವನ್ನು ತಿಳಿದು ಭಕ್ತಿಯೋಗದಿಂದ ಹೃದಯಕಮಲವನ್ನು ಸುಗಂಧಭರಿತವಾಗಿಸಿ, ಬಿಂಬರೂಪಿಯಾದ ನಿನ್ನ ಯಾವ ಯಾವ ರೂಪಗಳನ್ನು ಜ್ಞಾನಿಗಳು ಧ್ಯಾನಮಾಡುವರೋ ಆ ರೂಪಗಳನ್ನು ತೋರುವಿ ಮತ್ತು ಆ ರೂಪಗಳಿಗೆ ಸದೃಶವಾದ ಅವರ ಸ್ವರೂಪಶರೀರಗಳನ್ನು ಅವರಿಗೆ ಅನುಗ್ರಹಮಾಡಲು ಮುಕ್ತಿಯಲ್ಲಿ ವ್ಯಕ್ತ ಮಾಡಿ ಕೊಡುವಿ.

[೧]ಇಲ್ಲಿ ಶ್ರೀಧರಾದಿವ್ಯಾಖ್ಯಾನಗಳು ಹೇಳುತ್ತವೆ– ಭಕ್ತರು ಶ್ರವಣಮಾಡಿದರೆ ಭಗವಂತ ಅವರ ಹೃದಯದಲ್ಲಿ ನಿಲ್ಲುತ್ತಾನೆ. ಶ್ರವಣಮಾಡದಿದ್ದರೂ ತಮಗೆ ತೋಚಿದಂತೆ ಯಾವುದಾದರೂ ರೂಪವನ್ನು ಅವರು ಧ್ಯಾನ ಮಾಡಿದರೂ ಆ ರೂಪವನ್ನು ಭಗವಂತ ತೋರುತ್ತಾನೆ, ಅಂದರೆ ವೀರರಾಘವವ್ಯಾಖ್ಯಾನ ಹೇಳುವಂತೆ ಆ ರೂಪವೆ ಭಗವಂತನಿಗೆ ಬರುತ್ತದೆ. ವಿಶ್ವನಾಥವ್ಯಾಖ್ಯಾನಪ್ರಕಾರ ಭಕ್ತ ತನಗೆ

೧. ಶ್ರವಣಂ ವಿನಾಪಿ ತ್ವದ್ಭಕ್ತಾ ಮನಸಾ ಯದ್ಯತ್ ತವ ವಪೂ ರೂಪಂ ಸ್ವೇಚ್ಛಯಾ ಧ್ಯಾಯಂತಿ ತತ್ತತ್ ಪ್ರಣಯಸೇ ಪ್ರಕಟಯಸಿ । –ಶ್ರೀಧರಃ

ಯಾದೃಶವಿಗ್ರಹವಿಶಿಷ್ಟಂ ತ್ವಾಂ ವಿಶೇಷತೋ ಭಾವಯಂತಿ ತಾದೃಶವಿಗ್ರಹವಿಶಿಷ್ಟೋ ಭವಸೀತ್ಯರ್ಥಃ । ಅನೇನ ಸೌಲಭ್ಯಮುಕ್ತಂ । –ವೀರರಾಘವಃ

ಯಾವ ಶರೀರ ಬೇಕೆಂದು ಧ್ಯಾನಮಾಡುವನೋ ಅಂಥ ಸಿದ್ಧದೇಹವನ್ನು ಅವನಿಗೆ ಭಗವಂತ ಕೊಡುತ್ತಾನೆ ಇದರಿಂದ ಭಗವಂತ ಭಕ್ತನ ಬಯಕೆಯಂತೆ ತಾನೂ ಜಡಶರೀರವನ್ನು ಧರಿಸುತ್ತಾನೆ. ಭಕ್ತನಿಗೂ ಅವನು ಬಯಸಿದ ಜಡಶರೀರವನ್ನು ಕೊಡುತ್ತಾನೆ ಎಂದು ಹೇಳಿದಂತಾಯಿತು. ಆದರೆ ಇದೇನೂ ಮಹಾಪುರುಷಾರ್ಥವಲ್ಲ ಮತ್ತು ಭಗವಂತನಿಗೆ ಜಡಶರೀರವಿಲ್ಲ ಅದರಿಂದ ಹೀಗೆ ಹೇಳಬೇಕು– ಜ್ಞಾನಿ ತನ್ನ ಯೋಗ್ಯತೆಗನುಸಾರವಾಗಿ ಬಿಂಬರೂಪಿಯಾದ ಭಗವಂತನ ಯಾವ ಗುಣ ರೂಪಕ್ರಿಯೆಗಳನ್ನು ಧ್ಯಾನ ಮಾಡುವನೋ ಆ ರೂಪಗುಣಕ್ರಿಯೆಗಳನ್ನು ತೋರುತ್ತಾನೆ ಮತ್ತು ಆ ಗುಣರೂಪಕ್ರಿಯೆಗಳಿಗೆ ಅನುರೂಪವಾಗಿ ಜ್ಞಾನಿಯ ಸ್ವರೂಪ ಗುಣಕ್ರಿಯೆಗಳನ್ನು ಮುಕ್ತಿಯಲ್ಲಿ ವ್ಯಕ್ತಿಮಾಡಿ ಕೊಡುತ್ತಾನೆ, ಇದೇ ಪರಮಪುರುಷಾರ್ಥ ಎಂದು.

ತತ್ತದ್ ವಪುಸ್ತೇಷಾಂ ಪ್ರಣಯಸೇ ।

ಯಾದೃಶೋ ಭಾವಿತಸ್ತ್ವೀಶಸ್ತಾದೃಶೋ ಜೀವ ಆಭವೇತ್ ।

ಇತಿ ತಂತ್ರಸಾರೇ ॥

ತಂ ಯಥಾಯಥೋಪಾಸತೇ ತದೇವ ಭವತಿ । ಇತಿ ಚ ।

'ತತ್ತದ್ ವಪುಃ ಪ್ರಣಯಸೇ' ಎಂದರೆ ಭಕ್ತರಿಗೆ ನೀನು ನಿನ್ನ ಆ ರೂಪಗಳನ್ನು ತೋರುವಿ ಮತ್ತು ಸದೃಶವಾದ ಸ್ವರೂಪಶರೀರಗಳನ್ನು ಮುಕ್ತಿಯಲ್ಲಿ ವ್ಯಕ್ತಮಾಡುತ್ತಿ ಎಂದರ್ಥ. ತಂತ್ರಸಾರದಲ್ಲಿ ಹೀಗೆ ಹೇಳಿದೆ, ಭಗವಂತನನ್ನು ಯಾವ ಆಕಾರದಲ್ಲಿ ಧ್ಯಾನಿಸುವನೋ ಆ ಆಕಾರಕ್ಕೆ ಸದೃಶವಾದ ತನ್ನ ಸ್ವರೂಪಭೂತ ಆಕಾರವನ್ನೆ ಜೀವ ಮುಕ್ತಿಯಲ್ಲಿ ವ್ಯಕ್ತ ಮಾಡಿಕೊಳ್ಳುತ್ತಾನೆ' ಎಂದು. ಶ್ರುತಿಯೂ ಕೂಡ 'ಭಕ್ತ ಭಗವಂತನ ಯಾವ ಆಕಾರವನ್ನು ಧ್ಯಾನಿಸುವನೋ ಅಂಥ ಆಕಾರವನ್ನೆ ಮುಕ್ತಿಯಲ್ಲಿ ಪಡೆಯುತ್ತಾನೆ' ಎನ್ನುತ್ತದೆ.

* * *

ಪರಮಾತ್ಮನು ಒಲಿದು ಮುಕ್ತಿ ನೀಡಬೇಕಾದರೆ ನಿಷ್ಕಾಮ ಕರ್ಮದಿಂದ ಅವನನ್ನು ಆರಾಧಿಸಬೇಕು ಎಂದು ಬ್ರಹ್ಮದೇವರು ಹೇಳುತ್ತಾರೆ–

ತೇ ಸಾಧಕಭಕ್ತಾಃ ಸ್ವಸ್ವಭಾವಾನುರೂಪಂ ಯದ್ಯದ್ ಧಿಯಾ ಭಾವಯಂತಿ ತತ್ತದೇವ ವಪುಸ್ತೇಷಾಂ ಸಿದ್ಧದೇಹಂ ಪ್ರಣಯಸೇ ಪ್ರಕರ್ಷೇಣ ತಾನ್ ಪ್ರಾಪಯಸಿ

–ವಿಶ್ವನಾಥಃ

ನಾತಿಪ್ರಸೀದಸಿ ತಥೋಪಚಿತೋಪಚಾರೈ-
ರಾರಾಧಿತಃ ಸುರಗಣೈರ್ಹೃದಿ ಬದ್ಧಕಾಮೈಃ ।
ಯಃ ಸರ್ವಭೂತದಯಯಾಽಸದಲಭ್ಯಯೈಕೋ
ನಾನಾಜನೇಷ್ವವಹಿತಃ ಸುಹೃದಂತರಾತ್ಮಾ ॥ ೧೨ ॥

ಅಂತರ್ನಿಯಾಮಕನಾಗಿ ಅನಿಮಿತ್ತಬಂಧುವಾಗಿ ನಾನಾವಿಧ ಜೀವಿಗಳೊಳಗಿರುವ ನಿನ್ನನ್ನು ಅಸುರರಿಗೆ ದೊರಕದ ಸರ್ವಭೂತದಯಾಜ್ಞಾನಭಕ್ತ್ಯಾದಿಗುಣಗಳಿಂದ ದೇವಸಮೂಹಗಳು ಹೃದಯದಲ್ಲಿ ಆರಾಧಿಸುತ್ತಾರೆ. ಅದರಿಂದ ಹೃದಯದಲ್ಲಿ ನಾನಾ ಕಾಮನೆಗಳನ್ನು ತುಂಬಿಕೊಂಡ ಜನರು ಆಯಾ ಕಾಮನೆಗಳಿಗನುಸಾರವಾಗಿ ದೊಡ್ಡ ದೊಡ್ಡ ಯಾಗಾದಿಕರ್ಮಗಳಿಂದ ಆರಾಧಿಸಿದರೂ ನೀನು ಹೆಚ್ಚು ಸಂತುಷ್ಟನಾಗುವುದಿಲ್ಲ. ಏಕೆಂದರೆ ದೇವತೆಗಳ ಆ ಆರಾಧನೆಗೆ ಹೋಲಿಸಿದರೆ ಈ ಜನರ ಆರಾಧನೆ ಅತ್ಯಲ್ಪವೆನಿಸುತ್ತದೆ.

[೧]ಇಲ್ಲಿ 'ಸುರಗಣೈರ್ಹೃದಿಬದ್ಧಕಾಮೈಃ' ದೇವತೆಗಳು ಹೃದಯದಲ್ಲಿ ಕಾಮನೆಗಳನ್ನು ತುಂಬಿಕೊಡಿದ್ದಾರೆ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಎಲ್ಲರೂ ಹಾಗೇ ವ್ಯಾಖ್ಯಾನಿಸಿದ್ದಾರೆ. ದೇವತೆಗಳು ದೈತ್ಯವಧಕಾಮನೆಯಿಂದಲೆ ಭಗವಂತನನ್ನು ಆರಾಧಿಸುತ್ತಾರೆ. ಅದಕ್ಕೆ ಭಗವಂತ ದೈತ್ಯವಧವನ್ನಷ್ಟೇ ಮಾಡುತ್ತಾನೆ, ಹೆಚ್ಚಿನ ಪ್ರೀತಿ ತೋರುವುದಿಲ್ಲ ಎಂದು ವಲ್ಲಭಾಚಾರ್ಯವ್ಯಾಖ್ಯಾನ. ದೇವತೆಗಳು ಹೃದಯದಲ್ಲಿ ಕಾಮನೆಗಳನ್ನು ತುಂಬಿಕೊಡಿರುವುದರಿಂದ ಇತರರಲ್ಲಿ ಸ್ಪರ್ಧೆ ಅಸೂಯೆ ಉಳ್ಳವರಾಗಿದ್ದಾರೆ. ಭಗವಂತ ಕೇವಲ ಸರ್ವಭೂತದಯೇ ಉಳ್ಳ ಬೇರೆ ಜನರಿಗೇ ಹೆಚ್ಚು ಒಲಿಯುತ್ತಾನೆ ಎಂದು ಜೀವಗೋಸ್ವಾಮಿವ್ಯಾಖ್ಯಾನ. ಆದರೆ ವೀರರಾಘವ

೧. ಸಾಧನಭಕ್ತೌ ದೇವಾ ಮುಖ್ಯಾಧಿಕಾರಿಣಃ । ದಿವ್ಯಾನಿ ಚ ಪುಷ್ಪಾದೀನಿ ಸಾಧನಾನಿ । ತೈರ್ನ ಪ್ರಸೀದತಿ । ಪ್ರಸನ್ನೋಽಪಿ ತೇಭ್ಯಃ ಕಾಮಿತಂ ಫಲಂ ಪ್ರಯಚ್ಛನ್ನಪಿ ಅತ್ಯಂತಂ ನ ಪ್ರಸೀದತಿ । ಪ್ರಸಾದಸ್ತು ಯದಿ ಭಗವಾನ್ ತದ್ಧೃದಯೇ ಸಮಾಗತ್ಯ ತಿಷ್ಠತಿ ತಾಂಶ್ಚ ಸ್ವಕೀಯಾನ್ ಮನ್ಯತೇ, ತದಾ ಭವತಿ । ತತ್ರ ತೈರ್ಹೃದಯೇ ಭಗವತ್ಸ್ಥಾನೇ ಕಾಮ ಏವ ಬಲಾದ್ ಬದ್ಧೋ ವರ್ತತೇ । ಅತೋ ದೈತ್ಯಾನಾಂ ವಧೇಚ್ಛಯಾ ಪೂಜಿತೋ ಭಗವಾನ್ ದೈತ್ಯವಧಂ ಕೃತ್ವಾಪಿ ನ ಪ್ರಸನ್ನೋ ಭವತಿ ।
—ವಲ್ಲಭಾಚಾರ್ಯಃ

ಯಥಾ ಸರ್ವಭೂತದಯಯಾ ಸಾಧಾರಣೈರಪಿ ಜನೈರಾರಾಧಿತೋ ಭವಾನತಿಪ್ರಸೀದತಿ ತಥಾ ಬಹುಭಿರುಪಚಾರೈಃ ಸುರಗಣೈರಪ್ಯಾರಾಧಿತೋ ನಾತಿ ಪ್ರಸೀದತಿ । ಸುರಗಣೈಃ ಕಥಂಭೂತೈಃ । ಹೃದಿ ಬದ್ಧಕಾಮತ್ವಾತ್ ತತ್ರ ತತ್ರ ಸ್ಪರ್ಧಾಸೂಯಾಯುಕ್ತೈರಿತ್ಯರ್ಥಃ । —ಜೀವಗೋಸ್ವಾಮೀ

ವ್ಯಾಖ್ಯಾನದಲ್ಲಿ ಸುರಗಣೈಃ ಎಂದರೆ ಭಕ್ತಸಮೂಹಗಳಿಂದ ಎಂದಿಷ್ಟೇ ಅರ್ಥ. ವಿಷ್ಣುಭಕ್ತಿಪರನು ದೇವನೆನಿಸುತ್ತಾನೆ, ಹಾಗಲ್ಲದವನು ಅಸುರನೆನಿಸುತ್ತಾನೆ ಎಂದು ವಚನವಿದೆ. ಸಕಾಮಭಕ್ತಿಯೂ ಕೂಡ ಆಸುರಸ್ವಭಾವದವರಿಗೆ ಬರುವುದಿಲ್ಲ ಎಂದಿದೆ ಹೀಗೆ ಎಲ್ಲರೂ ಸರ್ವಭೂತದಯಯಾ ಸುರಗಣೈಃ, ಹೃದಿಬದ್ಧಕಾಮೈಃ (ಜನೈಃ) ಎನ್ನುವುದನ್ನು ತಿರುವು ಮುರುವು ಮಾಡಿ ಶ್ಲೋಕಕ್ಕೆ ಅಪಾರ್ಥಮಾಡಿದ್ದಾರೆ. ಇದು ಸತ್ಯಸಂಹಿತಾವಚನಕ್ಕೆ ವಿರುದ್ಧ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ–

ಸರ್ವಭೂತದಯಯಾ ಸುರಗಣೈರ್ಹೃದ್ಯಾರಾಧಿತಸ್ತ್ವಂ ಬದ್ಧಕಾಮೈ-ರ್ಜನೈರುಪಚಿತೋಪಚಾರೈರ್ನಾತಿಪ್ರಸೀದಸಿ ।

ಆರಾಧಿತೋ ಯೋ ಬ್ರಹ್ಮಾದ್ಯೈರ್ಭಕ್ತಿಜ್ಞಾನದಯಾದಿಭಿಃ ।
ಕಿಂ ತಸ್ಯ ಕಾಮುಕಜನೈಃ ಕೃತಯಾ ಪರಿಚರ್ಯಯಾ ॥
ಇತಿ ಸತ್ಯಸಂಹಿತಾಯಾಮ್ ।

ಸರ್ವಭೂತದಯಾದಿಗುಣಗಳಿಂದ ದೇವಸಮೂಹಗಳು ಹೃದಯದಲ್ಲಿ ನಿನ್ನನ್ನು ಆರಾಧಿಸುತ್ತಿದ್ದಾರೆ. ಹೀಗಿರುವಾಗ ಹೃದಯದಲ್ಲಿ ಕಾಮನೆಗಳನ್ನು ತುಂಬಿಕೊಂಡ ಜನರು ದೊಡ್ಡ ಯಾಗಾದಿ ಕರ್ಮಗಳಿಂದ ಆರಾಧಿಸಿದರೂ ನೀನು ಹೆಚ್ಚು ಸಂತುಷ್ಟನಾಗಲು ಶಕ್ಯವಿಲ್ಲ. ಸತ್ಯಸಂಹಿತಾದಲ್ಲಿ ಹೀಗೆ ಹೇಳಿದೆ. 'ಬ್ರಹ್ಮಾದಿದೇವತೆಗಳು ಭಕ್ತಿಜ್ಞಾನದಯಾದಿಗಳಿಂದ ಭಗವಂತನನ್ನು ಆರಾಧಿಸುತ್ತಿರುವಾಗ ಕಾಮನೆಗಳಿಂದ ಕೂಡಿದ ಜನರು ಮಾಡುವ ಆರಾಧನೆಯಿಂದ ಅವನಿಗೇನು ಸಂತೋಷವಾದೀತು' ಎಂದು.

* * *

ಪರಮಾತ್ಮನ ಆರಾಧನೆಯಲ್ಲಿ ಭೇದಮೋಹ ಪರಿತ್ಯಾಗವೂ ಒಂದು ಅಂಶ ಎಂದು ಬ್ರಹ್ಮದೇವರು ಹೇಳುತ್ತಾರೆ–

ಶಶ್ವತ್ ಸ್ವರೂಪಮಹಸೈವ ನಿಪೀತಭೇದ–
ಮೋಹಾಯ ಬೋಧಧಿಷಣಾಯ ನಮಃ ಪರಸ್ಮೈ ।
ವಿಶ್ವೋದಯಸ್ಥಿತಿಲಯೇಷು ನಿಮಿತ್ತಲೀಲಾ–
ರಾಮಾಯ ತೇ ನಮ ಇದಂ ಚಕೃಮೇಶ್ವರಾಯ ॥ ೧೪ ॥

ಸದಾ ತನ್ನ ಸ್ವರೂಪಜ್ಞಾನದಿಂದಲೆ, ಪರೋಪದೇಶಾಪೇಕ್ಷೆ ಇಲ್ಲದೆಯೆ ಭೇದಮೋಹಗಳನ್ನು ದೂರಮಾಡಿಕೊಂಡಿರುವವನು ಬೇರೆ ಸಜ್ಜನರಿಗೂ ಭೇದಮೋಹ ಕಳೆವ ತತ್ವಜ್ಞಾನ ಉಂಟುಮಾಡುವ ಬುದ್ಧಿ ಉಳ್ಳವನು ಸರ್ವಶಕ್ತ ನೀನು. ನಿನಗೆ

ನಮಸ್ಕಾರ. ಪ್ರಪಂಚದ ಸೃಷ್ಟಿಸ್ಥಿತಿಸಂಹಾರಗಳಿಗೆ ಕೇವಲ ನಿನ್ನ ಲೀಲೆ ನಿಮಿತ್ತ. ನಿನಗೆ ಅದರಿಂದ ಯಾವ ಪ್ರಯೋಜನವೂ ಆಗಬೇಕಾಗಿಲ್ಲ. ಅಂಥ ನಿನ್ನ ಈ ದರ್ಶನಕ್ಕಾಗಿ ನಾನು ಪೂರ್ವಜನ್ಮದಲ್ಲಿ ಅವಶ್ಯ ನಿನ್ನನ್ನು ನಮಿಸಿದ್ದೇನೆ. ಅದರ ಪುಣ್ಯರಾಶಿಯ ಫಲವಾಗಿ ನನಗೆ ಈಗ ನಿನ್ನ ದರ್ಶನ ಲಭಿಸಿದೆ.

[೧]ಇಲ್ಲಿ 'ಭೇದಮೋಹ'ವೆಂದರೇನು? ಪರಮಾತ್ಮನಿಗೆ ಜೀವಜಡಗಳಿಂದ ಭೇದವಿದೆ ಎಂಬ ಮೋಹ, ಭ್ರಮ ಎಂದು ಶ್ರೀಧರ, ರಾಧಾರಮಣ, ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ. ಭೇದವಿಲ್ಲವೆಂಬ ಭ್ರಮವೆಂದು ಜೀವಗೋಸ್ವಾಮಿ ವ್ಯಾಖ್ಯಾನ. ದೇವಮನುಷ್ಯಾದಿ ಶರೀರಭೇದ ಮತ್ತು ಆತ್ಮನಲ್ಲಿ ಶರೀರೈಕ್ಯಭ್ರಮನಿಮಿತ್ತವಾದ ಅಜ್ಞಾನ ಎಂದು ವೀರರಾಘವ ವ್ಯಾಖ್ಯಾನ. ಭೇದ ಮತ್ತು ಮೋಹ ಎಂದು ವಲ್ಲಭವ್ಯಾಖ್ಯಾನ. ಹೇಗೆ ನಿರ್ಣಯ ಮಾಡಬೇಕು? ಸ್ಕಾಂದಪುರಾಣದಲ್ಲಿ ಆರು ಬಗೆಯ ಭೇದಮೋಹಗಳನ್ನು ಹೇಳಿದ್ದಾರೆ. ಪ್ರಸಿದ್ಧವಾದ ಆ ಭೇದಮೋಹಗಳನ್ನೇ ಇಲ್ಲಿ ಇಟ್ಟುಕೊಳ್ಳುವುದರಿಂದ ವಿವಾದಕ್ಕೆ ಅವಕಾಶವಿಲ್ಲ. ವಸ್ತುವಿನ ಯಥಾರ್ಥಸ್ವರೂಪಕ್ಕಿಂತ ಬೇರೆಯಾದ ಆಕಾರವೇ ಭೇದ–

ಈಶಸ್ಯಾಪೂರ್ಣತಾಜ್ಞಾನಂ ವಿಷ್ಣೋರನ್ಯಸ್ಯ ಚೇಶತಾ ।
ಭೇದಸ್ತಸ್ಯಾವತಾರೇಷು ಜೀವಸ್ಯೇಶತ್ವಮೇವ ಚ ॥
ತಥಾ ಜೀವತ್ವಮೀಶಸ್ಯ ಜಡಾಭೇದಸ್ತಯೋರಪಿ ।
ಭೇದಮೋಹ ಇತಿ ಪ್ರೋಕ್ತಃ ಸ ಸದಾ ನ ಹರೌ ಕ್ವಚಿತ್ ।
ಅನ್ಯೇಷಾಂ ತತ್ಪ್ರಸಾದೇನ ಶನೈರ್ಯಾತಿ ಸತಾಮಪಿ ॥

ಇತಿ ಸ್ಕಾಂದೇ ॥

---

೧. ನಿರಸ್ತಃ ಸಜಾತೀಯವಿಜಾತೀಯಭೇದಭ್ರಮೋ ಯಸ್ಮಿಂಸ್ತಥಾಭೂತಾಯ
– ರಾಧಾರಮಣದಾಸಃ

ನಿಪೀತೋ ದೂರೀಕೃತೋ ಜೀವಾದಿಭಿಃ ತವ ಭೇದಮೋಹಸ್ತೈಃ ಸಹ ಭೇದೋ ನ ಸಂಭವತೀತಿ ಭ್ರಮೋ ಯೇನ ತ್ವಯಾ ತಸ್ಮೈ । ತದ್ವೈಲಕ್ಷಣ್ಯೇನ ತೇಭ್ಯೋ ಭಿನ್ನತಯಾ ನಿಶ್ಚಿತಾಯೇತ್ಯರ್ಥಃ । –ಜೀವಗೋಸ್ವಾಮೀ

ಭೇದಃ ದೇವಮನುಷ್ಯಾದಿಭೇದಃ । ಮೋಹಃ ದೇಹಾತ್ಮಭ್ರಮಾದಿನಿಮಿತ್ತಮಜ್ಞಾನಂ । ಆದಿಶಬ್ದೇನ ತತ್ಪ್ರಯುಕ್ತಶೋಕಾದಯೋ ವಿವಕ್ಷಿತಾಃ । ಪ್ರಕೃತಿವಿವಿಕ್ತಾತ್ಮಸ್ವರೂಪಜ್ಞಾನೇನೈವ ನಿರಸ್ತಾ ಭೇದಾದಯೋ ಯೇಷಾಂ ಯೋಗಿನಾಂ ತೇಷು ಯೋಽವಬೋಧಃ । –ವೀರರಾಘವಃ

ದ್ವಯಮೇವ ಜೀವತ್ವಸಾಧಕಂ ಭೇದೋ ಮೋಹಶ್ಚ । ಭಿನ್ನಶ್ಚ ಜೀವೋ ಭವತಿ ಮುಗ್ಧಶ್ಚ । –ವಲ್ಲಭಃ

ಭಗವಂತ ಅಪೂರ್ಣನೆಂದು, ಹರಿಗಿಂತ ಅನ್ಯನೇ ಭಗವಂತನೆಂದು, ಹರಿಯ ಅವತಾರಗಳಲ್ಲಿ ಭೇದವಿದೆ ಎಂದು, ಜೀವನು ಭಗವಂತನೇ ಎಂದು, ಭಗವಂತನು ಜೀವನೇ ಎಂದು ಮತ್ತು ಭಗವಂತ ಜೀವರಿಬ್ಬರೂ ಜಡರೆಂದು ತಿಳಿಯುವುದು ಭೇದಮೋಹ ಎನಿಸುವುದು. ಅದು ಹರಿಯಲ್ಲಿ ಎಂದೂ ಎಲ್ಲಿಯೂ ಇಲ್ಲ. ಬೇರೆ ಸಜ್ಜನರಿಗೂ ಅದು ಅವನ ಅನುಗ್ರಹದಿಂದ ನಿಧಾನವಾಗಿ ದೂರವಾಗುವುದು ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಇಲ್ಲಿಯೂ 'ಬೋಧಧಿಷಣಾಯ' ಎಂದಿದೆ. ಮೇಲುನೋಟಕ್ಕೆ ಪುನರುಕ್ತಿ. ಬೋಧ, ಧಿಷಣ ಎರಡೂ ಜ್ಞಾನಾರ್ಥಕ. ಭೇದಮೋಹನಿವರ್ತಕವಾದ ಬೋಧವನ್ನು ಜೀವರಿಗೆ ಕೊಡುವ ಧಿಷಣ ಉಳ್ಳವನು ಭಗವಂತ ಎಂದು ಅರ್ಥೈಸಿದಾಗ ಸ್ಕಾಂದಪುರಾಣದ ಮಾತನ್ನೇ ಇಲ್ಲಿಯೂ ಹೇಳಿದಂತಾಗುವುದು.

* * *

ಜ್ಞಾನಿಗಳು ಚರಮಶರೀರತ್ಯಾಗಕಾಲದಲ್ಲಿ ಭಕ್ತಿಯಿಂದ ಭಗವನ್ನಾಮೋಚ್ಚಾರಣ ಮಾಡಿದ ಮಾತ್ರಕ್ಕೆ ಎಲ್ಲ ಪಾಪಗಳಿಂದ ಮುಕ್ತರಾಗಿ ಪರಮಾತ್ಮನನ್ನು ಸೇರುತ್ತಾರೆ ಎಂದ ಮೇಲೆ ಧ್ಯಾನಾದಿಗಳು ಮೋಕ್ಷಕಾರಣ ಎಂದು ಬೇರೇನು ಹೇಳಬೇಕು ಎನ್ನುತ್ತಾರೆ ಬ್ರಹ್ಮದೇವರು–

ಯಸ್ಯಾವತಾರಗುಣಕರ್ಮವಿಡಂಬನಾನಿ
ನಾಮಾನಿ ಯೇಽಸುವಿಗಮೇ ವಿವಶಾ ಗೃಣಂತಿ ।
ತೇ ನೈಕಜನ್ಮಶಮಲಂ ಸಹಸೈವ ಹಿತ್ವಾ
ಸಂಯಾಂತ್ಯಪಾವೃತಮೃತಂ ತಮಜಂ ಪ್ರಪದ್ಯೇ ॥ ೧೫ ॥

ಪ್ರಾಣೋತ್ಕ್ರಮಣಕಾಲದಲ್ಲಿ ಪರಮಾತ್ಮನ ಅವತಾರರೂಪ ಗುಣಕರ್ಮಗಳನ್ನು ಹೇಳುವ ನಾಮಗಳನ್ನು ಭಕ್ತಿಯಿಂದ ಉಚ್ಚರಿಸುವ ಜ್ಞಾನಿಗಳು ಅನೇಕಜನ್ಮಗಳ ಪಾಪಗಳನ್ನೂ ಒಮ್ಮೆಗೇ ದೂರ ಮಾಡಿಕೊಂಡು ಜೀವಾಚ್ಛಾದಕವನ್ನೂ ನಾಶಪಡಿಸಿಕೊಂಡು ಜ್ಞಾನಸ್ವರೂಪನಾದ ಪರಮಾತ್ಮನನ್ನು ಹೊಂದುತ್ತಾರೆ. ಅಂಥ ಪರಮಾತ್ಮನನ್ನು ಶರಣುಹೊಂದುತ್ತೇನೆ.

ಇಲ್ಲಿ 'ವಿವಶಾಃ' ಎಂದರೆ ಕೇವಲ ವಿವಶತೆಯಿಂದ ನಾಮೋಚ್ಚಾರಣ ಮಾಡಿದರೂ ಸಾಕು, ಅದರ ಅರ್ಥಜ್ಞಾನ ಬೇಕಾಗಿಲ್ಲ. ಮತ್ತು 'ವಶ ಕಾಂತೌ' ಉಚ್ಚಾರಣೇಚ್ಛೆಯಿಲ್ಲದೆಯೂ ಆಕಸ್ಮಿಕವಾಗಿ, ಅಥವಾ ಅಜಾಮಿಲಾದಿಗಳಂತೆ ಯಾವುದೋ ಒಂದು ಬೇರೆ ಕಾರಣದಿಂದ ಉಚ್ಚಾರ ಮಾಡಿದರೂ ಸರಿಯೆ,

ಭಗವಂತನ ಪ್ರಾಪ್ತಿಯಾಗುತ್ತದೆ ಎಂದು ಎಲ್ಲ ಬೇರೆ ವ್ಯಾಖ್ಯಾನಕಾರರು[೧] ಹೇಳುತ್ತಾರೆ. ಇದು ಪ್ರಮಾಣವಿರುದ್ಧ. ಅರ್ಥಜ್ಞಾನಪೂರ್ವಕ ಭಕ್ತಿಯಿಂದ ನಾಮೋಚ್ಚಾರಣೆ ಮಾಡಿದರೆ ಮಾತ್ರ ಫಲ. ಉಚ್ಚಾರಣಮಾತ್ರ ಸಾಕೆಂದರೆ ಅರ್ಥಜ್ಞಾನ ಭಕ್ತಿ ಬೇಕಾಗಿಲ್ಲ ಎಂದರ್ಥವಲ್ಲ, ತದೇಕಚಿತ್ತದಿಂದ ಧ್ಯಾನವಿಲ್ಲದಿದ್ದರೂ ನಾಮೋಚ್ಚಾರಣೆಗೆ ಫಲವಿದೆ. ಅದರಿಂದ 'ವಿವಶಾ' ಎಂದರೆ 'ಭಕ್ತಿಪರವಶರಾಗಿ' ಎಂದರ್ಥ. ವ್ಯೋಮಸಂಹಿತೆಯಲ್ಲಿ ಹಾಗೇ ಹೇಳಿದೆ.

ಭಕ್ತಿವಿವಶಾಃ ।

ಯೇ ಭಕ್ತಿವಿವಶಾ ವಿಷ್ಣೋರ್ನಾಮಮಾತ್ರೈಕಜಲ್ಪಕಾಃ ।
ತೇಽಪಿ ಮುಕ್ತಿಂ ವ್ರಜಂತ್ಯಾಶು ಕಿಮು ತದ್‌ಧ್ಯಾಯಿನಃ ಸದಾ ॥
ಇತಿ ವ್ಯೋಮಸಂಹಿತಾಯಾಮ್ ।

'ವಿವಶಾಃ' ಎಂದರೆ ಬೇರಾವುದೋ ವಿಷಯದಲ್ಲಿ ಆಲೋಚನಾಪರವಶರಾಗಿ, ಅರಿವಿಲ್ಲದೆ, ಎಂದರ್ಥವಲ್ಲ, ಭಕ್ತಿಪರವಶರಾಗಿ ಎಂದರ್ಥ.

'ಯಾರು ಭಕ್ತಿಪರವಶರಾಗಿ ವಿಷ್ಣುವಿನ ನಾಮಮಾತ್ರ ಉಚ್ಚರಿಸುವರೋ ಅವರೂ ಬೇಗನೆ ಮುಕ್ತಿ ಹೊಂದುತ್ತಾರೆ, ಎಂದ ಮೇಲೆ ಅವನನ್ನು ಸದಾ ಧ್ಯಾನಿಸುವವರ ಬಗ್ಗೆ ಏನು ಹೇಳಬೇಕು?' ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ.

* * *

ಸೃಷ್ಟಿಕರ್ತ ಬ್ರಹ್ಮ, ಪ್ರಳಯಕಾರಿ ರುದ್ರ ಎಂದು ಪ್ರಸಿದ್ಧಿ. ಸೃಷ್ಟಿ ಸ್ಥಿತಿ ಪ್ರಳಯ ಮೂರಕ್ಕೂ ವಿಷ್ಣು ಕರ್ತನೆಂದು 'ಶಶ್ವತ್ ಸ್ವರೂಪಮಹಸೈವ' ಎಂಬ ಹಿಂದಿನ ಶ್ಲೋಕದಲ್ಲಿ ಹೇಳಿದ್ದು ಹೇಗೆ ಎಂದರೆ ಬ್ರಹ್ಮದೇವರು ಹೇಳುತ್ತಾರೆ. ತನ್ನಲ್ಲಿ ಅಂತರ್ಯಾಮಿಯಾಗಿ ಸೃಷ್ಟಿಯನ್ನೂ ರುದ್ರನಲ್ಲಿ ಅಂತರ್ಯಾಮಿಯಾಗಿ ಲಯವನ್ನೂ ಸ್ವತಃ ಸ್ಥಿತಿಯನ್ನೂ ಮಾಡುವವನು ವಿಷ್ಣುವೇ ಎಂದು–

ಯೋ ವಾ ಅಹಂ ಚ ಗಿರಿಶಶ್ಚ ವಿಭುಃ ಸ್ವಯಂ ಚ
ಸ್ಥಿತ್ಯುದ್ಭವಪ್ರಲಯಹೇತವ ಆತ್ಮಮೂಲಾಃ ।
ಭೂತ್ವಾ ತ್ರಿಪಾದ್ ವವೃಧ ಏಕ ಉರುಪ್ರರೋಹ–
ಸ್ತಸ್ಮೈ ನಮೋ ಭಗವತೇ ಭುವನದ್ರುಮಾಯ ॥ ೧೬ ॥

೧. 'ವಶಃ ಕಾಂತೌ' ಇತ್ಯಮರಸಿಂಹಾತ್ ತದಿಚ್ಛಾರಹಿತಾ ಅಪಿ ಅಜಾಮಿಲಾದಿವತ್ ಕೇನಚಿತ್ ಕಾರಣಾಂತರೇಣಾಪೀತ್ಯರ್ಥಃ । ಅತ ಏವ ಕೇವಲಮುಚ್ಚಾರಯಂತಿ ನ ತು ತದರ್ಥಮಾಧುರ್ಯಾದಿಗ್ರಹಃ । –ರಾಧಾರಮಣದಾಸಃ

ಅನಂತಾಸನ ವೈಕುಂಠ ಶ್ವೇತದ್ವೀಪಗಳಲ್ಲಿರುವ ಸಾಕ್ಷಾದ್ ವಿಷ್ಣು, ನನ್ನಲ್ಲಿ ಅಂತರ್ಯಾಮಿಯಾಗಿರುವ ಅವನ ಬ್ರಹ್ಮನಾಮಕ ರೂಪ, ಶಿವಾಂತರ್ಯಾಮಿಯಾಗಿರುವ ಶಿವರೂಪ– ಹೀಗೆ ಮೂರು ರೂಪಗಳಿಂದ ಅವತರಿಸಿ ಪ್ರಪಂಚದ ಸ್ಥಿತಿ ಸೃಷ್ಟಿ ಲಯಗಳಿಗೆ ಕಾರಣನಾಗಿರುವವನು ಶ್ರೀಹರಿ ಒಬ್ಬನೇ ಆದರೂ, ಒಂದು ಮರದ ನಾನಾಶಾಖೆಗಳಂತೆ ಪ್ರಪಂಚದ ನಾನಾಪದಾರ್ಥಗಳಿಗೆ ನಿಯಾಮಕವಾದ ನಾನಾರೂಪದವನಾಗಿ ಬೆಳೆದಿರುವ ಲೋಕವ್ಯಾಪ್ತವಾದ ವೃಕ್ಷ ಅವನು. ಅದಕ್ಕೆ ಮೂಲ, ಬೇರೂ ಅವನೇ. ಅಂಥ ಭಗವಂತನಿದೋ ನಮಸ್ಕಾರ.

[1]ಇಲ್ಲಿ ಬೇರೆ ವ್ಯಾಖ್ಯಾನಕಾರರು ವಿಷ್ಣುವು ಬ್ರಹ್ಮ ವಿಷ್ಣು ಶಿವ ಮೂರು ರೂಪಗಳಿಂದ ಜಗದ್ವೃಕ್ಷಕ್ಕೆ ಮೂರು ಕೊಂಬೆಗಳಾಗಿದ್ದಾನೆ, ತ್ರಿಪಾತ್ ಎಂದರೆ ಮೂರು ಕೊಂಬೆಗಳುಳ್ಳ ವೃಕ್ಷ ಎಂದು ವ್ಯಾಖ್ಯಾನಿಸಿದ್ದಾರೆ. ವೀರರಾಘವವ್ಯಾಖ್ಯಾನದಲ್ಲಿ ಮಾತ್ರ ಬ್ರಹ್ಮರುದ್ರರು ಜೀವರು, ಅವರಲ್ಲಿ ಒಳಗೆ ನಿಯಾಮಕನಾಗಿ ವಿಷ್ಣು ಸೃಷ್ಟಿ, ಪ್ರಳಯ ಮಾಡುತ್ತಾನೆ ಎನ್ನಲಾಗಿದೆ. ಇವರೂ 'ತ್ರಿಪಾತ್' ಎಂದರೆ ಬ್ರಹ್ಮ ವಿಷ್ಣು ಶಿವ ಎಂಬ ಮೂರು ರೂಪಗಳುಳ್ಳವನು ಎಂದೇ ಹೇಳಿದ್ದಾರೆ. ವಸ್ತುತಃ ತ್ರಿಪಾತ್ ಎಂದರೆ ಅನಂತಾಸನ ವೈಕುಂಠ ಶ್ವೇತದ್ವೀಪಗಳಲ್ಲಿರುವ ಮೂರು ರೂಪಗಳಿಂದ ಅವತರಿಸಿದವನು. ಮತ್ತು ಬ್ರಹ್ಮರುದ್ರರೂಪದಿಂದ ಅವತರಿಸುವುದೆಂದರೆ ಅವರೊಳಗೆ ನಿಯಾಮಕವಾದ ಬ್ರಹ್ಮರುದ್ರರೂಪಗಳಿಂದ ಅವತರಿಸುವುದೆಂದರ್ಥ. ಹೊರತು ಒಬ್ಬನೆ ಪರಬ್ರಹ್ಮ ಸತ್ವರಜಸ್ತಮೋಗುಣ ಸಂಪರ್ಕದಿಂದ ವಿಷ್ಣು ಬ್ರಹ್ಮ ಶಿವ ರೂಪನಾಗುವುದು ಅದ್ವೈತಮತ. ಇದು ವಾಮನಪುರಾಣಕ್ಕೆ ವಿರುದ್ಧವಾಗುವುದು–

ಬ್ರಹ್ಮಾದಿಭಾವೋ ವಿಷ್ಣೋಸ್ತು ತನ್ನಿಯಾಮಕತಾ ಭವೇತ್ ।
ಮತ್ಸ್ಯಾದಿತಾ ಸ್ವಭಾವಸ್ತು ನಾನ್ಯಥಾ ಕ್ವಚಿದಿಷ್ಯತೇ ॥
ಇತಿ ವಾಮನೇ ।

ಅನಂತಾಸನ ವೈಕುಂಠ ಕ್ಷೀರಾಬ್ಧಿಸ್ಥೋ ಹರಿಸ್ತ್ರಿಪಾತ್ ।
ಇತಿ ಚ ॥

ವಿಷ್ಣುವು ಬ್ರಹ್ಮರುದ್ರರೂಪದಿಂದ ಅವತರಿಸುವುದೆಂದರೆ ಬ್ರಹ್ಮರುದ್ರರೊಳಗೆ ನಿಯಾಮಕರೂಪದಿಂದ ಅವತರಿಸುವುದೆಂದರ್ಥ. ಬ್ರಹ್ಮರುದ್ರರೆಂಬ ಜೀವರ ಅಭೇದವಲ್ಲ, ಮತ್ಸ್ಯಮುಂತಾಗಿ ಅವತರಿಸುವುದು ಮಾತ್ರ ಮತ್ಸ್ಯಮುಂತಾದವರ

೧. ತ್ರಿಪಾತ್ ತ್ರಯೋ ಬ್ರಹ್ಮಾದಯಃ ಪಾದಾಃ ಸ್ಕಂಧಾ ಯಸ್ಯ ।
–ಶ್ರೀಧರಃ ಶುಕದೇವಃ

ಸ್ವಯಮಿತ್ಯನೇನ ಸ್ಥಿತಿಂ ಸ್ವಾವತಾರರೂಪೇಣ ಸೃಷ್ಟಿಸಂಹಾರೌ ಬ್ರಹ್ಮರುದ್ರಾಖ್ಯಜೀವಾಂತಃಪ್ರವೇಶೇನ ಕರೋತೀತಿ ದ್ಯೋತಿತಂ । –ವೀರರಾಘವಃ

ಅಭೇದವೆ ಹೊರತು ಅವರೊಳಗೆ ನಿಯಾಮಕನಾಗುವುದಲ್ಲ. ಈ ವೈಲಕ್ಷಣ್ಯ ಎಲ್ಲಿಯೂ ವ್ಯತ್ಯಾಸವಾಗುವುದಿಲ್ಲ, ಎಂದು ವಾಮನ ಪುರಾಣದಲ್ಲಿ ಹೇಳಿದೆ. ಅನಂತಾಸನ ವೈಕುಂಠ ಕ್ಷೀರಸಾಗರಗಳಲ್ಲಿರುವ ಮೂರು ರೂಪಗಳಿಂದಿರುವ ಹರಿ ತ್ರಿಪಾತ್ ಎನಿಸುತ್ತಾನೆ ಎಂದೂ ಹೇಳಿದೆ.

* * *

ಭಗವಂತನ ಉಪಾಸನೆ ಮಾಡಬೇಕು. ನಿಷಿದ್ಧಕರ್ಮವನ್ನು ತೊರೆದು ವಿಹಿತಕರ್ಮವನ್ನೇ ಮಾಡುತ್ತಿರಬೇಕು. ಇಲ್ಲದಿದ್ದರೆ ಜನ್ಮ ವ್ಯರ್ಥವಾಗುವುದು ಎಂದು ಬ್ರಹ್ಮದೇವರು ಹೇಳುತ್ತಾರೆ–

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ ೧೭ ॥

ಲೋಕದಲ್ಲಿ ಜನರು ನಿಷಿದ್ಧಕರ್ಮಗಳಲ್ಲಿ ಆಸಕ್ತರಾಗಿರುತ್ತಾರೆ. ನೀನು ದತ್ತ ಕಪಿಲ ವ್ಯಾಸಾದಿರೂಪಗಳಿಂದ ಬೋಧಿಸಿರುವ ಸ್ವವರ್ಣಾಶ್ರಮೋಚಿತವಾದ ನಿನ್ನ ಆರಾಧನಾರೂಪವಾದ ವಿಹಿತಕರ್ಮಗಳಲ್ಲಿ ಮನಸ್ಸು ಮಾಡುವುದಿಲ್ಲ. ಆದರೆ ಅವರ ಬದುಕುವ ಆಸೆಯನ್ನು ಬಲಿಷ್ಠನಾದ ಕಾಲಾಂತರ್ಗತನಾದ ಭಗವಂತ ಒಡನೆ, ಅನಿರೀಕ್ಷಿತವಾಗಿ ಚಿವುಟಿ ಹಾಕಿ ಬಿಡುತ್ತಾನೆ. ಅಂಥ ಪರಮಾತ್ಮನಿಗೆ ನಮಸ್ಕಾರ.

ನಾನು ಸಾವಿರಾರು ವರ್ಷ ಬದುಕುತ್ತೇನೆ. ಅದರಿಂದ ಎಂದಾದರೂ ಪುಣ್ಯಕರ್ಮ ಮಾಡಿದರಾಯಿತು, ಈಗಲೆ ಏಕೆ ಎಂದುಕೊಂಡು ಪಾಪಕರ್ಮನಿರತನಾಗುವ ವ್ಯಕ್ತಿ ತನಗೆ ಅರಿವಿಲ್ಲದಂತೆ ಬೇಗನೆ ಸಾವನ್ನಪ್ಪುತ್ತಾನೆ. ಕಾಲಾಂತರ್ಗತ ಪರಮಾತ್ಮ ಅವನನ್ನೊಯ್ಯುತ್ತಾನೆ. ಅದರಿಂದ ಈಗಲೆ ಪುಣ್ಯಕರ್ಮ ನಿರತನಾಗಬೇಕು. ಪಾಪಕರ್ಮಮಾಡುತ್ತಿದ್ದರೆ ಆಯುಷ್ಯ ಹ್ರಾಸವಾಗುವುದು.

[೧]ಇಲ್ಲಿ ಕಾಲವನ್ನು 'ಅನಿಮಿಷ' ಎಂದು ಕರೆಯಲಾಗಿದೆ. ಇಂಥ ಜಡವಾದ ಕಾಲವನ್ನು ಭಗವಂತನ ಸ್ವರೂಪವೆಂದು, ಭಗವಂತನನ್ನು ಕಾಲಸ್ವರೂಪನೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ ವೀರರಾಘವವ್ಯಾಖ್ಯಾನದಲ್ಲಿ ಹಾಗೆ

---

೧. ತಸ್ಯೈವ ತತ್ ಕಾಲಾಖ್ಯಂ ರೂಪಂ । ಅನಿಮಿಷಾಯ ಕಾಲಾಯ । –ಶ್ರೀಧರಃ

ವಿಶ್ವನಿಯಂತೃಕಾಲರೂಪತ್ವೇನ ಪ್ರಣಮತಿ । –ವಿಶ್ವನಾಥಃ

ಹೇಳದಿದ್ದರೂ ಕಾಲವು ಭಗವಂತನ ಶರೀರ ಎನ್ನುತ್ತಾರೆ. ಅದ್ವೈತದಲ್ಲಿ ಜಡಪದಾರ್ಥಗಳು ಬ್ರಹ್ಮಸ್ವರೂಪ. ವಿಶಿಷ್ಟಾದ್ವೈತದಲ್ಲಿ ಬ್ರಹ್ಮನಿಗೆ ಶರೀರ. ಅದರಿಂದ 'ಅನಿಮಿಷಾಯ' ಕಾಲಸ್ವರೂಪನಾದ ಅಥವಾ ಕಾಲಶರೀರಿಯಾದ ಭಗವಂತನಿಗೆ ನಮಸ್ಕಾರ ಎಂದು ಹೇಳುತ್ತಾರೆ. ಆದರೆ 'ಅನಿಮಿಷ' ಎಂದರೆ ನಿಮಿಷ ಕಣ್ಣುಮುಚ್ಚುವುದು ಇಲ್ಲದ್ದು, ಎಂದೂ ಕಣ್ಣುಮುಚ್ಚದೆ ಎಚ್ಚರವಾಗಿದ್ದು ನೋಡುವಂಥದ್ದು ಎಂದು ಗಿರಿಧರವ್ಯಾಖ್ಯಾನದಲ್ಲಿ ಹೇಳಿದೆ. ಜಡವಾದ ಕಾಲಕ್ಕೆ ಈ ನೋಡುವ ಶಕ್ತಿ ಇಲ್ಲ. ಅದು ಪರಮಾತ್ಮನಿಗೆ ಮಾತ್ರ. ಕಾಲ ನೋಡುವುದಿಲ್ಲ. ಕಾಲವನ್ನು ಭಗವಂತ ನೋಡುತ್ತಾನೆ. ಹೀಗಾಗಿ 'ಅನಿಮಿಷ' ಎನಿಸುವವನು ಇಲ್ಲಿ ಭಗವಂತನೆ. ಕೆಲವೆಡೆ ಕಾಲಕ್ಕೂ ಅನಿಮಿಷ ಎಂದು ವ್ಯವಹಾರವಿದೆ. ಅದು ಭಗವಂತ ಅತ್ಯಂತ ಸೂಕ್ಷ್ಮವಾದ ಕಾಲವನ್ನೂ ಕೂಡ ಸದಾ ಎಚ್ಚರದಿಂದ ನೋಡುತ್ತಾನೆ ಎಂಬ ಅಭಿಪ್ರಾಯದಿಂದ. ಅದರಿಂದ ಇಲ್ಲಿ 'ಅನಿಮಿಷ' ಎಂದಿದ್ದು ಎಚ್ಚರದಿಂದ ಸದಾ ನೋಡುವ ಕಾಲನಾಮಕ ಭಗವಂತನನ್ನು ಹೊರತು ಜಡ ಕಾಲರೂಪಿಯಾದ ಅಥವಾ ಜಡ ಕಾಲಶರೀರಿಯಾದ ಭಗವಂತನನ್ನಲ್ಲ. ಜಡಕಾಲವೇ ಅನಿಮಿಷ ಎಂದಾಗಿದ್ದರೆ ಆಗ ಮಾತ್ರ ಅನಿಮಿಷ ಶಬ್ದದಿಂದ ಭಗವಂತನನ್ನು ಹೇಳಬೇಕೆಂದರೆ ಕಾಲರೂಪಿ ಅಥವಾ ಕಾಲಶರೀರಿ ಎಂದೇ ಹೇಳಬೇಕಾಗಿ ಬರುತ್ತಿತ್ತು.

ನಿತ್ಯಜ್ಞಾನದೃಶಾ ನಿತ್ಯಂ ಲವಕಾಲಮಪೀಶ್ವರಃ ।
ಪಶ್ಯೇತ್ ತಾತ್ಕಾಲಿಕಂ ಚೈವ ತಸ್ಮಾದನಿಮಿಷೋ ಹರಿಃ ।
ಕಾಲಸ್ಯಾನಿಮಿಷತ್ವಂ ಚ ಲವಾದೇರ್ನಿತ್ಯವೀಕ್ಷಣಾತ್ ॥
ಇತಿ ತಂತ್ರಸಾರೇ ॥

ಅತಿಸೂಕ್ಷ್ಮವಾದ ಲವಕಾಲವನ್ನು ಕೂಡ ಮತ್ತು ಲವಕಾಲಮಾತ್ರವಿರುವ ವಸ್ತುವನ್ನೂ ಕೂಡ ಹರಿಯು ನಿತ್ಯವಾದ ಜ್ಞಾನದ ಕಣ್ಣಿಂದ ನಿತ್ಯ ನೋಡುತ್ತಾನೆ. ಅದರಿಂದ ಅವನು ಅನಿಮಿಷ ಎನಿಸುತ್ತಾನೆ. ಕಾಲವೂ ಅನಿಮಿಷ ಎನಿಸುತ್ತದೆ ಏಕೆಂದರೆ ಲವ ಮುಂತಾದ ಕಾಲವನ್ನು ಹರಿ ನಿತ್ಯ ನೋಡುತ್ತಾನೆ, ಎಂದು ತಂತ್ರಸಾರದಲ್ಲಿ ಹೇಳಿದೆ.

ಇದರ ಅಭಿಪ್ರಾಯ ಹೀಗೆ– ಅನಿಮಿಷ ಎಂದರೆ ನಿಮಿಷ ಇಲ್ಲದ್ದು. ನಿಮಿಷವೆಂದರೆ ಆಗಾಗ ಕಣ್ಣುಮುಚ್ಚುತ್ತ, ಸದಾ ನೋಡದೆ, ತಾತ್ಕಾಲಿಕವಾಗಿ ಮಾತ್ರ

ಅಭಕ್ತಲೋಕಸ್ಯ ಜೀವಿತಾಶಾಂ ಜೀವನೇಚ್ಛಾಂ ಕಾಲಶರೀರಕೋ ಯೋ ಭಗವಾನ್ ಛಿನತ್ತಿ । –ವೀರರಾಘವಃ

ಅನಿಮಿಷಾಯ ನಿಮೇಷರಹಿತಾಯ ಸಾವಧಾನಾಯ ಕಾಲರೂಪಾಯ ।–ಗಿರಿಧರಃ

ನೋಡುವುದೆಂದರ್ಥ. ನಿತ್ಯವಾದ ಜ್ಞಾನದ ಕಣ್ಣು ಹರಿಗೆ ಇರುವುದರಿಂದ ಅವನು ತಾತ್ಕಾಲಿಕವಾಗಿ ನೊಡುವುದಿಲ್ಲ. ಆದರಿಂದ ಅನಿಮಿಷ. ಕಾಲವೂ ಅನಿಮಿಷ ಏಕೆಂದರೆ ಅದೂ ನಿಮಿಷ ಇಲ್ಲದ್ದು. ಅದನ್ನು ಭಗವಂತ ನಿತ್ಯ ನೋಡುವುದರಿಂದ. ನ ವಿದ್ಯತೇ ನಿಮಿಷೋ ಯಸ್ಯ ಸಃ ಅನಿಮಿಷಃ' ಎಂದು ವಿಗ್ರಹ. ಇಲ್ಲಿ 'ಯಸ್ಯ' ಎಂಬಲ್ಲಿ ಕರ್ತರಿ ಷಷ್ಠಿ ಇಟ್ಟುಕೊಂಡರೆ ಭಗವಂತ, ಕರ್ಮಣಿ ಷಷ್ಠಿ ಇಟ್ಟುಕೊಂಡರೆ ಕಾಲ 'ಅನಿಮಿಷ' ವಾಗುತ್ತದೆ.

* * *

ಶ್ರೀಹರಿ ಧರ್ಮರಕ್ಷಣೆಗಾಗಿ ಅವತರಿಸುವಾಗಲೂ ನಿತ್ಯಾನಂದಮಯನಾಗಿಯೇ ವಿಷಯಗಳನ್ನು ಭೋಗಿಸುತ್ತಾನೆ ಹೊರತು ಇತರ ಜೀವರಂತೆ ಅಲ್ಲ ಎಂದು ಬ್ರಹ್ಮದೇವರು ಹೇಳುತ್ತಾರೆ–

ತಿರ್ಯಙ್ಮನುಷ್ಯವಿಬುಧಾದಿಷು ಜೀವಯೋನಿ–
ಷ್ವಾತ್ಮೇಚ್ಛಯಾಽತ್ಮಕೃತಸೇತುಪರೀಪ್ಸಯಾ ಯಃ ।
ರೇಮೇಽನಿರಸ್ತರತಿರಪ್ಯುಪಲಬ್ಧಕಾಷ್ಠ–
ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ ೧೯ ॥

ಪ್ರಾಣಿ ಮಾನವ ದೇವ ಮೊದಲಾದ ಜೀವಯೋನಿಗಳಲ್ಲಿ ನೀನು ನಿನ್ನಿಚ್ಛೆಯಿಂದಲೇ, ನೀನು ಮಾಡಿರುವ ಧರ್ಮನಿಯಮರಕ್ಷಣೆಗಾಗಿ ಅವತರಿಸಿದಾಗ ನಿತ್ಯಾನಂದ ನಾಗಿದ್ದರೂ ವಿಷಯಗಳನ್ನು ಭೋಗಿಸಿರುವಿ. ನೀನು ನಿತ್ಯವಾದ ಮಹಾ ಆನಂದ ಉಳ್ಳವನೆಂಬುದು, ಆನಂದತಾರತಮ್ಯದ ಕೊನೆಯಲ್ಲಿರುವವನೆಂಬುದು ಶ್ರುತಿಸಿದ್ಧ. ಆದರಿಂದ ನೀನು ಪುರುಷರಲ್ಲೆಲ್ಲ ಉತ್ತಮ. ಬೇರೆ ಪುರುಷರಂತಲ್ಲ ಅಂಥ ಭಗವಂತನಿಗೆ ನಮಸ್ಕಾರ.

ಇಲ್ಲಿ 'ರೇಮೇನಿರಸ್ತರತಿಃ' ಎಂಬಲ್ಲಿ 'ರೇಮೇ ಅನಿರಸ್ತರತಿಃ' ಎಂದು ಪದವಿಭಾಗ. ಬೇರೆ ವ್ಯಾಖ್ಯಾನಕಾರರೆಲ್ಲರೂ 'ನಿರಸ್ತರತಿಃ' ಎಂದೇ ವಿಭಾಗ ಮಾಡಿದ್ದಾರೆ. ಆದರೆ 'ನಿರಸ್ತರತಿಃ' ಎಂದರೆ ವಿಷಯಪದಾರ್ಥಗಳಿಂದ ಸುಖ ಅನುಭವಿಸುವವನಲ್ಲ ಎಂದರ್ಥ. 'ರೇಮೇ' ಎಂದರೆ 'ಸುಖ ಅನುಭವಿಸಿದ್ದಾನೆ' ಎಂದರ್ಥ. ಇದು ಪರಸ್ಪರ ವಿರುದ್ಧ. 'ಸುಖ ಅನುಭವಿಸುವವನಲ್ಲವಾದರೂ ಸುಖವನುಭವಿಸಿದ' ಹೇಗೆ ಎಂದು ಮಾತ್ರ ಯಾರೂ ಹೇಳಿಲ್ಲ. [೧]ವಿಶ್ವನಾಥ

೧. ಸ್ರಗಾದೀನಾಂ ಪ್ರಾಕೃತವಿಷಯತ್ವೇಽಪಿ ಭಗವದರ್ಥವಿನಿಯುಕ್ತತ್ವೇ ಸತಿ ತತ್ಕ್ಷಣ ಏವಾಪ್ರಾಕೃತತ್ವಂ ಸ್ಯಾದಿತ್ಯೇಕಾದಶೇ ವ್ಯಕ್ತೀಭವಿಷ್ಯತಿ । –ವಿಶ್ವನಾಥಃ

ವ್ಯಾಖ್ಯಾನದಲ್ಲಿ ಮಾತ್ರ 'ಪತ್ರಂ ಪುಷ್ಪಂ ಫಲಂ ತೋಯಂ' 'ಭಕ್ತರು ನೀಡುವ ಪತ್ರಪುಷ್ಪಫಲಾದಿಗಳನ್ನು ನಾನು ಉಣ್ಣುತ್ತೇನೆ' ಎಂದು ಶ್ರೀಕೃಷ್ಣ ಹೇಳಿರುವುದರಿಂದ ಭಕ್ತರು ನೀಡುವ ಪ್ರಾಕೃತ ಫಲಾದಿಗಳನ್ನು ಒಡನೆ ಅಪ್ರಾಕೃತವನ್ನಾಗಿ ಮಾಡಿ ಉಣ್ಣುತ್ತಾನೆ ಎಂದಿದೆ. ಆದರೆ ಇದು ಸರಿಯಲ್ಲ. ಜಡ ಎಂದೂ ಚೇತನವಾಗುವುದಿಲ್ಲ. ಅದರಿಂದ ಪ್ರಾಕೃತವನ್ನು ಅಪ್ರಾಕೃತವನ್ನಾಗಿ ಹರಿ ಮಾಡುವುದಿಲ್ಲ. 'ಅನಿರಸ್ತರತಿಃ' ನಾಶವಾಗದ ನಿತ್ಯವಾದ ಆನಂದ ಉಳ್ಳವನಾದರೂ ಲೀಲೆಯಿಂದ ಆನಂದವನ್ನು ಅಂದರೆ ಪ್ರಾಕೃತವಾದ ವಿಷಯಪದಾರ್ಥಗಳಲ್ಲಿರುವ ಸ್ವರೂಪಭೂತ ಆನಂದವನ್ನು ಉಣ್ಣುತ್ತಾನೆ ಎನ್ನಬೇಕು.

ಅನಿರಸ್ತರತಿಃ ನಿತ್ಯರತಿಃ ।

'ಅನಿರಸ್ತರತಿಃ' ಎಂದೇ ಪದವಿಭಾಗ ಮಾಡಬೇಕು. ಅದಕ್ಕೆ ನಿತ್ಯಾನಂದ ಉಳ್ಳವನೆಂದರ್ಥ

* * *

ಬ್ರಹ್ಮದೇವರು ತಾನು ಸೃಷ್ಟಿಕಾರ್ಯ ಮಾಡುವಾಗ ಭಗವಂತನ ಪ್ರೇರಣೆಯಿಂದಲೆ ಎಲ್ಲ ಮಾಡುತ್ತಿದ್ದೇನೆ ಎನ್ನುವ ಪ್ರಜ್ಞೆ ಮರೆಯಾಗದಿರಲಿ ಎಂದು ಭಗವಂತನಲ್ಲಿ ಕೇಳಿಕೊಳ್ಳುತ್ತಾರೆ–

ಏಷ ಪ್ರಪನ್ನವರದೋ ರಮಯಾಽಽತ್ಮಶಕ್ತ್ಯಾ
ಯದ್ಯತ್ ಕರಿಷ್ಯತಿ ಗೃಹೀತಗುಣಾವತಾರಃ ।
ತಸ್ಮಿನ್ ಸ್ವವಿಕ್ರಮ ಇದಂ ಸೃಜತೋಽಪಿ ಚೇತೋ
ಯುಂಜೀತ ಕರ್ಮ ಶಮಲಂ ಚ ಯಥಾ ವಿಜಹ್ಯಾಮ್ ॥ ೨೩ ॥

ಶರಣುಬಂದವರಿಗೆ ವರ ನೀಡುವ ಶ್ರೀಹರಿ ರಮೆಯೊಂದಿಗೆ ತನ್ನ ಸಾಮರ್ಥ್ಯದಿಂದ ಸೃಷ್ಟ್ಯಾದಿಗಳನ್ನು ಮಾಡಲು ತಾನು ಸ್ವೀಕರಿಸಿದ ಗುಣಗಳಿಗೆ ಪ್ರೇರಕನಾಗಿ ಅವತರಿಸುತ್ತಾನೆ. ನಾನು ಈ ಸೃಷ್ಟಿ ಮಾಡುವಾಗ ನನ್ನ ಮನಸ್ಸು ಶ್ರೀಹರಿಯ ಮಹಾವ್ಯಾಪಾರವನ್ನು ಮರೆಯದಿರಲಿ. ಪಾಪಿ ಅಸುರರ ಸೃಷ್ಟಿಕರ್ಮದಿಂದ ನನಗೆ ಪಾಪವೂ ಬಾರದಿರಲಿ.

[೧]ಇಲ್ಲಿ 'ರಮಯಾತ್ಮಶಕ್ತ್ಯಾ' ಎಂದರೆ ತನ್ನ ಸ್ವರೂಪಶಕ್ತಿಯೆ ರಮೆ, ಹೊರತು ಬೇರೆ ಮಾಯಾಶಕ್ತಿಯಲ್ಲ ಎಂದು ಲಕ್ಷ್ಮೀನಾರಾಯಣರಿಗೆ ಅಭೇದವನ್ನು ಬೇರೆ

೧. ರಮಾಖ್ಯಯಾ ಸ್ವರೂಪಶಕ್ತ್ಯಾ। –ಜೀವಗೋಸ್ವಾಮೀ

ಆತ್ಮನಃ ಸ್ವಸ್ಯಾಪೃಥಕ್ಸಿದ್ಧ ವಿಶೇಷಣಭೂತಯಾ ಲಕ್ಷ್ಮ್ಯಾ ಸಾಕಂ –ವೀರರಾಘವಃ

ವ್ಯಾಖ್ಯಾನಕಾರರು ಹೇಳುತ್ತಾರೆ. ವೀರರಾಘವವ್ಯಾಖ್ಯಾನದಲ್ಲಿ ರಮೆ ನಾರಾಯಣನಿಗೆ ಅಪೃಥಕ್ ಸಿದ್ಧ ವಿಶೇಷಣಭೂತಳು, ಅಂದರೆ ಇಬ್ಬರಿಗೂ ಸೂರ್ಯ ಮತ್ತು ಅವನ ಪ್ರಕಾಶಗಳಿಗಿರುವಂಥ ಅವಿಭಾಜ್ಯ ಸಂಬಂಧವಿದೆ' ಎನ್ನುತ್ತಾರೆ. ಎರಡೂ ಸರಿಯಲ್ಲ. ಹರಿ ಸ್ವಸಾಮರ್ಥ್ಯದಿಂದಲೆ ಎಲ್ಲ ಕಾರ್ಯ ಮಾಡುತ್ತಾನೆ. ಹೆಚ್ಚಾಗಿ ರಮೆಯ ಮೇಲೆ ಅನುಗ್ರಹಮಾಡುವುದಕ್ಕಾಗಿ ಅವಳನ್ನೂ ಜೊತೆಗೆ ಇರಿಸಿಕೊಂಡು ಕಾರ್ಯ ಮಾಡುತ್ತಾನೆ. ಕೆಲವೊಮ್ಮೆ ಅವಳನ್ನು ಬಿಟ್ಟು ಕಾರ್ಯಮಾಡುವುದುಂಟು ಎಂದು ನಾರದಪುರಾಣದಲ್ಲಿ ಹೇಳಿರುವುದರಿಂದ ರಮೆ ಹರಿಗೆ ಅಭಿನ್ನಳೂ ಅಲ್ಲ, ಅಪೃಥಕ್‌ಸಿದ್ಧಳೂ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸ್ವಸಾಮರ್ಥ್ಯಾತ್ ಸ್ವಕರ್ಮಾಣಿ ರಮಯಾ ಸಹ ಕೇಶವಃ ।
ಕುರುತೇ ಸ್ವಯಮೇವೈಷ ಕಾನಿಚಿತ್ ಪುರುಷೋತ್ತಮಃ ॥
ಇತಿ ನಾರದೀಯೇ ।

ಶ್ರೀಹರಿ ತನ್ನ ಕಾರ್ಯಗಳನ್ನು ರಮೆಯೊಂದಿಗೆ ಮಾಡಿದರೂ ಸ್ವಸಾಮರ್ಥ್ಯದಿಂದಲೆ ಮಾಡುತ್ತಾನೆ. ಏಕೆಂದರೆ ಕೆಲವು ಕಾರ್ಯಗಳನ್ನು ತಾನೊಬ್ಬನೇ ಮಾಡುತ್ತಾನೆ. ಮತ್ತು ಅವನು ಪುರುಷೋತ್ತಮ. ಅಕ್ಷರಪುರುಷ ಎನಿಸಿದ ಲಕ್ಷ್ಮಿಗಿಂತ ಉತ್ತಮ. ಆದರಿಂದ ಅವಳೊಂದಿಗೆ ಕಾರ್ಯಗಳನ್ನು ಮಾಡಿದ ಮಾತ್ರಕ್ಕೆ ಅವನ ಸ್ವಸಾಮರ್ಥ್ಯಕ್ಕೆ ಚ್ಯುತಿಯಿಲ್ಲ, ಎಂದು ನಾರದಪುರಾಣ ಹೇಳಿದೆ.

* * *

ಲೋಕಸೃಷ್ಟಿಮಾಡಲು ಬೇಕಾಗುವ ಜ್ಞಾನ ತನಗೆ ಸಾಲದೆಂದು ಖೇದಗೊಂಡ ಬ್ರಹ್ಮನನ್ನು ಸಮಾಧಾನ ಮಾಡುತ್ತ ಶ್ರೀಹರಿ ನುಡಿದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಲೋಕಸಂಸ್ಥಾನವಿಜ್ಞಾನ ಆತ್ಮನಃ ಪರಿಖಿದ್ಯತಃ ।
ತಮಾಹಾಗಾಧಯಾ ವಾಚಾ ಕಶ್ಮಲಂ ಶಮಯನ್ನಿವ ॥ ೨೮ ॥

ಲೋಕಸೃಷ್ಟಿಗೆ ಬೇಕಾಗುವ ಜ್ಞಾನ ತನಗೆ ಸಾಲದೆಂದುಕೊಂಡ ಬ್ರಹ್ಮನ ಮನೋವಿಷಾದವನ್ನು ಕಳೆಯಲೆಂಬಂತೆ ಗಂಭೀರವಾದ ಮಾತಿನಿಂದ ಹರಿ ನುಡಿದ.

ಇಲ್ಲಿ 'ಆತ್ಮನಃ' ಎಂದರೆ ತನಗೆ ಎಂದರ್ಥ. ಹಿಂದೆ 'ರಮಯಾ ಆತ್ಮಶಕ್ತ್ಯಾ' ಎಂಬಲ್ಲಿಯೂ 'ಆತ್ಮ' ಎಂದರೆ 'ತನ್ನ' ಎಂದರ್ಥ. ಅದಕ್ಕಿಂತಲೂ ಹಿಂದೆ 'ಸೋಽಯಂ ಸಮಸ್ತ ಜಗತಾಂ ಸುಹೃದೇಕ ಆತ್ಮಾ' ಎಂಬ ೨೨ನೇ ಶ್ಲೋಕದಲ್ಲಿ 'ಸಮಸ್ತ ಜಗತಾಂ ಆತ್ಮಾ' ಎಂದರೆ ಸಕಲಲೋಕಗಳಿಗಿಂತ ಉತ್ತಮನಾದ ಹರಿ

ಎಂದರ್ಥ. ಮುಂದೆ 'ತತ ಆತ್ಮನಿ ಯೋಗೇನ ಭಕ್ತಿಯುಕ್ತಃ ಸಮಾಹಿತಃ' ಎಂಬ ೩೧ನೇ ಶ್ಲೋಕದಲ್ಲಿ 'ಆತ್ಮನಿ' ಎಂದರೆ 'ಜೀವಶರೀರದಲ್ಲಿ' ಎಂದರ್ಥ. ಅಲ್ಲಿಯೇ 'ಮಯಿ ಲೋಕಾಂಸ್ತ್ವಮಾತ್ಮನಿ' ಎಂಬಲ್ಲಿ ಆತ್ಮನಿ ಎಂದರೆ 'ಜೀವನಲ್ಲಿ' ಎಂದರ್ಥ. ಮುಂದೆ 'ಜ್ಞಾತ್ವೋಽಹಂ ಭವತಾ ತ್ವದ್ಯ' ಎಂಬ ೩೯ನೇ ಶ್ಲೋಕದಲ್ಲಿ 'ಭೂತೇಂದ್ರಿಯಗುಣಾತ್ಮಭಿಃ' ಎನ್ನುವ ಆತ್ಮಶಬ್ದಕ್ಕೆ ಮನಸ್ಸು ಬುದ್ಧಿಗಳೆಂದರ್ಥ. ಹೀಗೆ ಇಲ್ಲಿ ಎಲ್ಲ ಕಡೆ ಆತ್ಮಶಬ್ದಪ್ರವೃತ್ತಿ ಒಂದೇ ರೀತಿಯಲ್ಲ. ಹರಿಯಲ್ಲಿ ಮುಖ್ಯ. ಉಳಿದವರಲ್ಲಿ ಅಮುಖ್ಯ. ಅಮುಖ್ಯರಲ್ಲಿಯೂ ಪುನಃ ಮುಖ್ಯಅಮುಖ್ಯ ಎಂಬ ತಾರತಮ್ಯ ಉಂಟೆಂಬುದು ಪ್ರಕಾಶಸಂಹಿತಾವಚನದಿಂದ ತಿಳಿದು ಬರುತ್ತದೆ.

> ಆತ್ಮಶಬ್ದಸ್ಯ ಮುಖ್ಯಾರ್ಥೋ ವಿಷ್ಣುರೇಕಃ ಸನಾತನಃ ।
> ಸಂದೇಹ ದೇಹ ಮನಸೋ ಬುದ್ಧಿ ಜೀವಾಃ ಸ್ವಯಂ ತಥಾ ।
> ಬ್ರಹ್ಮಾಽಪ್ಯಮುಖ್ಯಾಃ ಕ್ರಮಶ ಉತ್ಕರ್ಷೋ ಹ್ಯಾತ್ಮತಾ ಭವೇತ್ ॥
> ಇತಿ ಪ್ರಕಾಶಸಂಹಿತಾಯಾಮ್ ॥

'ಆತ್ಮಶಬ್ದಕ್ಕೆ ಸರ್ವೋತ್ತಮನಾದ ಸನಾತನನಾದ ವಿಷ್ಣುವೆ ಮುಖ್ಯಾರ್ಥ. ದೇಹದ ಮಧ್ಯಭಾಗ, ಇಡೀದೇಹ, ಮನಸ್ಸು ಬುದ್ಧಿ ಜೀವ ತಾನು ಮತ್ತು ಬ್ರಹ್ಮ ಇವರು ಅಮುಖ್ಯಾರ್ಥರು. ಅವರಲ್ಲಿಯೂ ಕ್ರಮವಿದೆ. ದೇಹಮಧ್ಯಭಾಗಕ್ಕಿಂತ ದೇಹ ಮನಸ್ಸು ಬುದ್ಧಿ ಮುಂತಾದವು ಕ್ರಮವಾಗಿ ಹೆಚ್ಚು ಹೆಚ್ಚು ಉತ್ತಮವಾದ ಮುಖ್ಯವಾದ ಅರ್ಥಗಳು. ಏಕೆಂದರೆ ಆತ್ಮಶಬ್ದದ ಪ್ರವೃತ್ತಿನಿಮಿತ್ತವಾದ ಆತ್ಮತ್ವವೆಂದರೆ ಉತ್ತಮತ್ವವೇ ಆಗಿದೆ' ಎಂದು ಪ್ರಕಾಶಸಂಹಿತೆ ಹೇಳಿದೆ.

ಆತ್ಮಶಬ್ದ ಆ ಉಪಸರ್ಗಪೂರ್ವಕ ತನು ವಿಸ್ತಾರೇ ಧಾತುನಿಷ್ಪನ್ನವಾಗಿರುವುದರಿಂದ ವಿಸ್ತಾರ, ವ್ಯಾಪ್ತಿ ಎಂದರ್ಥ. ವಾಪ್ತಿಯು ಗುಣದಿಂದ ಎಂದಿಟ್ಟುಕೊಂಡರೆ ಹೆಚ್ಚು ಹೆಚ್ಚು ಗುಣ ಉಳ್ಳದ್ದು, ಅಂದರೆ ಉತ್ತಮ ಎಂದಂತಾಗುವುದು. ದೇಹದ ಒಂದು ಅವಯವವಾದ ಮಧ್ಯಭಾಗಕ್ಕಿಂತ ಇಡಿ ದೇಹ ಉತ್ತಮ. ಅದಕ್ಕಿಂತ ಮನಸ್ಸು ಬುದ್ಧಿ ಮುಂತಾದವು. ಎಲ್ಲಕ್ಕಿಂತ ಚತುರ್ಮುಖಬ್ರಹ್ಮ ಅಮುಖ್ಯಾರ್ಥಗಳಲ್ಲಿ ಅತ್ಯಂತ ಉತ್ತಮ. ಅವನಿಗಿಂತಲೂ ಮುಖ್ಯಾರ್ಥನಾದವನು ಹರಿಯೆ ಎಂದು ಹೇಳಿದಂತಾಗುವುದು.

* * *

ಸೃಷ್ಟಿ ಮಾಡಲು ಜ್ಞಾನಸಾಲದೆಂದುಕೊಂಡು ಇನ್ನು ತಡಮಾಡಬೇಡ. ನಾನು ನಿನ್ನ ಮೂಲಕ ಸೃಷ್ಟಿ ಮಾಡಿಸುತ್ತೇನೆ, ಜ್ಞಾನ ನೀಡೆಂದು ನೀನು ಪ್ರಾರ್ಥಸಿದ್ದೂ ನನ್ನ ಪ್ರೇರಣೆಯಿಂದಲೆ ತಾನೆ? ಎನ್ನುತ್ತಾನೆ ಭಗವಂತ–

ಶ್ರೀಭಗವಾನುವಾಚ–

ಮಾ ವೇದಗರ್ಭ ಗಾಸ್ತಂದ್ರೀಂ ಸರ್ಗ ಉದ್ಯಮಮಾವಹ ।
ತನ್ಮಯಾ ಚೋದಿತಂ ಹ್ಯಗ್ರೇ ಯನ್ಮಾಂ ಪ್ರಾರ್ಥಯತೇ ಭವಾನ್॥ ೨೯ ॥

ವೇದಪ್ರತಿಪಾದ್ಯನಾದ ಬ್ರಹ್ಮನೆ! ಜ್ಞಾನ ಸಾಲದೆಂದು ಕೊರಗುತ್ತ ಸುಮ್ಮನೆ ಕೂಡಬೇಡ. ಸೃಷ್ಟಿಗೆ ಪ್ರಾರಂಭ ಮಾಡು. ಅದಕ್ಕೆ ಸರಿಯಾಗಿ ನಾನು ನಿನಗೆ ಪ್ರೇರಣೆ ನೀಡುತ್ತೇನೆ. ಜ್ಞಾನಕ್ಕಾಗಿ ನೀನು ಪ್ರಾರ್ಥನೆ ಮಾಡಿದ್ದೂ ನನ್ನ ಪ್ರರಣೆಯಿಂದಲೇ ತಾನೆ?

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ತನ್ಮಯಾಽಽಪಾದಿತಂ ಹ್ಯಗ್ರೇ' ಎಂದು ಪಾಠವಿಟ್ಟುಕೊಂಡು 'ನೀನು ಕೇಳಿದ ಜ್ಞಾನವನ್ನು ನಾನು ನಿನಗೆ ಕೊಟ್ಟಿದ್ದೇನೆ' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಇದರ ಮುಂದಿನ ಶ್ಲೋಕದಲ್ಲಿಯೆ 'ಇನ್ನೂ ತಪಸ್ಸು ಮಾಡು. ಆಗ ನಿನಗೆ ಜ್ಞಾನ ಬರುತ್ತದೆ' ಎಂದು ಭಗವಂತ ಹೇಳುವುದು ವಿರುದ್ಧವಾಗುತ್ತದೆ. ಅದರಿಂದ 'ತನ್ಮಯಾ ಚೋದಿತಂ ಹ್ಯಗ್ರೇ' 'ನೀನು ಜ್ಞಾನಕ್ಕಾಗಿ ಪ್ರಾರ್ಥನೆ ಮಾಡಿದ್ದೂ ನನ್ನ ಪ್ರೇರಣೆಯಿಂದ' ಎಂದು ಅರ್ಥ ಹೇಳುವುದೇ ಸೂಕ್ತ–

ಪ್ರಾರ್ಥನಮಪಿ ಮತ್ಪ್ರೇರಣಮೇವ ।

ನೀನು ಜ್ಞಾನಕ್ಕಾಗಿ ನನ್ನಲ್ಲಿ ಪ್ರಾರ್ಥನೆ ಮಾಡಿದ್ದೂ ನನ್ನ ಪ್ರೇರಣೆಯಿಂದಲೇ.

* * *

ಬ್ರಹ್ಮದೇವರು ತನಗೆ ಬೇಕಾಗಿರುವ ಜ್ಞಾನವನ್ನು ಹೇಗೆ ಪಡೆಯಬೇಕೆಂದು ಭಗವಂತ ಹೇಳುತ್ತಾನೆ–

ಭೂಯಶ್ಚ ತಪ ಆತಿಷ್ಠ ವಿದ್ಯಾಂ ಚೈವ ಮದಾಶ್ರಯಾಮ್ ।
ತಾಭ್ಯಾಮಂತರ್ಹೃದಿ ಬ್ರಹ್ಮನ್ ಲೋಕಾನ್ ದ್ರಕ್ಷ್ಯಸ್ಯಪಾವೃತಾನ್ ॥
॥ ೩೦ ॥

ಬ್ರಹ್ಮನೆ, ಇನ್ನೂ ತಪಸ್ಸು ಮಾಡು, ನನ್ನಲ್ಲಿ ಭಕ್ತಿ ಮಾಡು. ಆಗ ಅವುಗಳ ಪ್ರಭಾವದಿಂದ ಹೃದಯದೊಳಗೇ ಆವರಣಮುಕ್ತವಾದ ಲೋಕಗಳನ್ನು ನೋಡುವೆ.

ಇಲ್ಲಿ ತಪಸ್ಸೆಂದರೆ ಕರ್ಮಯೋಗ. ವಿದ್ಯೆ ಎಂದರೆ ಜ್ಞಾನಯೋಗವೆಂದು ವೀರರಾಘವ ವ್ಯಾಖ್ಯಾನ. ತಪಸ್ಸು ಪ್ರಾಣಾಯಾಮಾದಿಗಳು. ವಿದ್ಯೆ ಮಂತ್ರೋಪಾಸನೆ ಎಂದು ರಾಧಾರಮಣದಾಸ ವ್ಯಾಖ್ಯಾನ. ತಪಸ್ಸು ಚಿತ್ತೈಕಾಗ್ರ್ಯತೆ. ವಿದ್ಯೆ ಮಂತ್ರೋಪಾಸನೆ ಎಂದು ವಿಶ್ವನಾಥ ವ್ಯಾಖ್ಯಾನ. ಯಾರೂ ಅದಕ್ಕೆ ಪ್ರಮಾಣ ಕೊಟ್ಟಿಲ್ಲ.

ತಪ ಆಲೋಚನಂ ಪ್ರೋಕ್ತಂ ವಿದ್ಯಾ ನಿಷ್ಠಾ ಪ್ರಕೀರ್ತಿತಾ ।
ಇತಿ ಚ ಕಪಿಲಸಂಹಿತಾಯಾಮ್ ।

ತಪಸ್ಸೆಂದರೆ ಭಗವಂತನ ಗುಣಗಳನ್ನು ಧ್ಯಾನ ಮಾಡುವುದು. ವಿದ್ಯೆ ಎಂದರೆ ಅವನಲ್ಲಿ ಭಕ್ತಿಪೂರ್ವಕವಾದ ಶ್ರದ್ಧೆ ಎಂದು ಕಪಿಲಸಂಹಿತೆಯಲ್ಲಿ ಹೇಳಿದೆ.

* * *

ಧ್ಯಾನಭಕ್ತಿಗಳಿಂದ ಲೋಕಗಳು ಕಾಣುವ ಬಗೆ ಹೀಗೆ–

ತತ ಆತ್ಮನಿ ಯೋಗೇನ ಭಕ್ತಿಯುಕ್ತಃ ಸಮಾಹಿತಃ ।
ದ್ರಷ್ಟಾಸಿ ಮಾಂ ತತಂ ಬ್ರಹ್ಮನ್ ಮಯಿ ಲೋಕಾಂಸ್ತ್ವಮಾತ್ಮನಿ ॥ ೩೧ ॥

ಭಕ್ತಿಯುಕ್ತನಾಗಿ ತದೇಕಚಿತ್ತದಿಂದ ಧ್ಯಾನಮಾಡಿದಾಗ ಎಲ್ಲ ಶರೀರದಲ್ಲಿಯೂ ವ್ಯಾಪ್ತನಾದ ನನ್ನನ್ನು ಕಾಣುವಿ. ಎಲ್ಲ ಜೀವರಲ್ಲಿರುವ ನನ್ನಲ್ಲಿ ಲೋಕಗಳನ್ನೂ ಕಾಣುವಿ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ತತ ಆತ್ಮನಿ ಲೋಕೇ ಚ' ಎಂದೂ 'ಮಯಿ ಲೋಕಾಂಸ್ತ್ವಮಾತ್ಮನಃ' ಎಂದೂ ಪಾಠವಿಟ್ಟುಕೊಂಡು 'ನೀನು ನಿನ್ನಲ್ಲಿಯೂ ಲೋಕದಲ್ಲಿಯೂ ಇರುವ ನನ್ನನ್ನು ಮತ್ತು ನನ್ನಲ್ಲಿರುವ ಲೋಕಗಳನ್ನೂ ಜನರನ್ನೂ ನೋಡುವಿ' ಎಂದು ವ್ಯಾಖ್ಯಾನಿಸಿದ್ದಾರೆ. ಮತ್ತು ಇದು ಸೃಷ್ಟಿಯಾದ ಬಳಿಕ ಬ್ರಹ್ಮನಿಗೆ ಲಭ್ಯವಾಗುವ ದರ್ಶನವೆಂದೂ ಹೇಳಿದ್ದಾರೆ. ಸೃಷ್ಟಿಮಾಡಲು ಬೇಕಾಗುವ ಜ್ಞಾನಬೇಕೆಂದು ಪ್ರಾರ್ಥನೆ ಮಾಡುವ ಬ್ರಹ್ಮನಿಗೆ ಸೃಷ್ಟ್ಯನಂತರದಲ್ಲಿ ಲಭಿಸುವ ದರ್ಶನವನ್ನು ವರವಾಗಿ ಈಗ ಅನುಗ್ರಹಿಸುವುದು ಸಂದರ್ಭಕ್ಕೆ ಅನುಗುಣವಾಗಿಲ್ಲ. ಸೃಷ್ಟಿಯ ಅನಂತರ ಭಗವಂತನ ವಿಸ್ಮರಣೆಯಾಗದಿರಲೆಂದು ಈ ವರ ಉಚಿತವೇ ಎಂದರೂ ಹಿಂದಿನ ಶ್ಲೋಕದಲ್ಲಿ 'ಹೃದಯದಲ್ಲಿ ಲೋಕಗಳನ್ನು ಕಾಣುವಿ' ಎಂದು ಭಗವಂತ ಹೇಳಿದ್ದಾನೆ. ಆದರೆ ಅಲ್ಪವಾದ ಹೃದಯದೇಶದಲ್ಲಿ ಮಹತ್ತಾದ ಲೋಕಗಳು ಹೇಗೆ ಇರಲು ಸಾಧ್ಯ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಈ ಶ್ಲೋಕದಲ್ಲಿ ಉತ್ತರ ಹೇಳಿದಂತಾಗಿಲ್ಲ. ವಸ್ತುತಃ ಇಲ್ಲಿ ಉತ್ತರವನ್ನು ಭಗವಂತ ಹೇಳುತ್ತಾನೆ 'ಹೃದಯದಲ್ಲಿ ಅಂಗುಷ್ಠಪರಿಮಾಣದಿಂದ ನಾನಿದ್ದೇನೆ. ಅಚಿಂತ್ಯಶಕ್ತಿಯಿಂದ ಅಣೋರಣೀಯನಾದ ನಾನೇ ಮಹತೋ ಮಹೀಯನೂ ಆಗಿರುವುದರಿಂದ ಅಂಗುಷ್ಠಪರಿಮಾಣನಾದ ನಾನು ನಿನ್ನ ಹೃದಯದ ಅಲ್ಪದೇಹದಲ್ಲಿದ್ದು ಮಹತ್ತಾದ ಲೋಕಗಳನ್ನು ಧರಿಸುತ್ತೇನೆ.

---

೧. ಸೃಷ್ಟಿಸಮಯೇಽಪಿ ಭಕ್ತಿಯುಕ್ತಃ ಸಮಾಹಿತಶ್ಚ ಸನ್ ಆತ್ಮನಿ ಸ್ವಮನಸಿ ಬಹಿರ್ಲೋಕೇ ಚ ಮಾಂ ದ್ರಷ್ಟಾಸಿ । ತತೋ ಮಯಿ ಲೋಕಾನ್ ಭೂರಾದೀನ್ ಆತ್ಮನೋ ಜೀವಾಂಶ್ಚ ಮೃದ್ಭಕ್ಷಣಲೀಲಾಯಾಂ ಯಶೋದೇವ ದ್ರಷ್ಟಾಸಿ । –ವಿಶ್ವನಾಥಃ

ಮಯ್ಯಾತ್ಮನೀತಿ ಸಾಮಾನಾಧಿಕರಣ್ಯಂ । –ವೀರರಾಘವಃ

ಅದರಿಂದ ನಿನಗೆ ನಿನ್ನ ಹೃದಯದಲ್ಲಿ ಲೋಕಗಳು ಕಾಣುವುದು ಅಶಕ್ಯವೇನಲ್ಲ ಎಂದು ಉತ್ತರ ನೀಡವ ಅಭಿಪ್ರಾಯವನ್ನು ಶ್ರೀಮದಾಚಾರ್ಯರು ಹೇಳುತ್ತಾರೆ. ಬೇರೆ ವ್ಯಾಖ್ಯಾನಕಾರರ ಪ್ರಕಾರ ನೋಡಿದರೆ ಈ ಶ್ಲೋಕ ಅಸಂಗತ ಮತ್ತು ವ್ಯರ್ಥ.

'ಮಯಿ ಲೋಕಾಂಸ್ತ್ವಮಾತ್ಮನಿ' ಎಂದೂ ಪಾಠವನ್ನು ವೀರರಾಘವ ವ್ಯಾಖ್ಯಾನದಲ್ಲಿ ಒಪ್ಪಿ 'ಆತ್ಮನಿ ಮಯಿ' 'ಆತ್ಮನಾದ ನನ್ನಲ್ಲಿ' ಲೋಕಗಳಿವೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಆಗ ಲೋಕವು ಶರೀರ, ಭಗವಂತ ಶರೀರಿಯಾದ ಆತ್ಮ ಎಂಬ ವಿಶಿಷ್ಟಾದ್ವೈತ ಪ್ರಮೇಯ ತಿಳಿದು ಬರುತ್ತದೆ ಎಂದು ಅವರ ಅಭಿಪ್ರಾಯ. ಆದರೆ ಈ ಪ್ರಮೇಯವೇ ಸರಿಯಲ್ಲ. 'ಆತ್ಮನಿ' ಎಂದರೆ ಅಂತರ್ಯಾಮಿಯಾದ ನನ್ನಲ್ಲಿ ಎಂದು ಅರ್ಥವಿಟ್ಟುಕೊಂಡರೆ ಅದು ವ್ಯರ್ಥ. 'ನಿನ್ನಲ್ಲಿಯೂ ಲೋಕದಲ್ಲಿಯೂ ನಾನು ಅಂತರ್ಯಾಮಿಯಾಗಿ ಇದ್ದೇನೆ' ಎಂದು ಹೇಳಿಯಾಗಿದೆ. ಅದರಿಂದ 'ಆತ್ಮನಿ' ಎಂದರೆ ಜೀವನಲ್ಲಿ ಎಂದರ್ಥ. ಹಿಂದಿನ ಆತ್ಮಶಬ್ದಕ್ಕೆ ದೇಹದಲ್ಲಿ ಎಂದರ್ಥ. ಜೀವನಲ್ಲಿರುವ ಮತ್ತು ದೇಹದಲ್ಲಿರುವ ನನ್ನಲ್ಲಿ ಲೋಕಗಳನ್ನು ಕಾಣುವಿ ಎಂದು ಹೇಳಿದಂತಾಗುವುದು.

ದೇಹೇದೇಹೇ ಹರಿಸ್ತಸ್ಮಿನ್ ಲೋಕಾಃ ಸರ್ವೇ ಪ್ರತಿಷ್ಠಿತಾಃ ।
ಅಂಗುಷ್ಠಮಾತ್ರೇಽಪಿ ಪರೇ ಪರಶಕ್ತಿರ್ಯತೋ ವಿಭುಃ ॥

ಇತಿ ಚ ॥

ಆತ್ಮನಿ ಸ್ಥಿತೇ ಮಯಿ ॥

ಪ್ರತಿದೇಹದಲ್ಲಿಯೂ ನಿಯಾಮಕನಾಗಿ ಅಂಗುಷ್ಠಪ್ರಮಾಣದಿಂದ ಹರಿ ಇದ್ದಾನೆ. ಅವನು ಅಂಗುಷ್ಠಮಾತ್ರ ಪರಿಮಾಣ ಉಳ್ಳವನಾಗಿದ್ದರೂ ಅವನಲ್ಲಿ ಎಲ್ಲ ಲೋಕಗಳೂ ಆಶ್ರಯ ಪಡೆದಿವೆ. ಅದು ಹೇಗೆಂದರೆ ಅವನು ಅಚಿಂತ್ಯಶಕ್ತಿ ಉಳ್ಳವನಾಗಿದ್ದು ಅಣೋರಣೀಯನೂ ಮಹತೋ ಮಹೀಯನೂ ಆಗಿರುತ್ತಾನೆ ಎಂದೂ ಹೇಳಿದೆ. 'ಮಯಿ ಲೋಕಾಂಸ್ತ್ವಮಾತ್ಮನಿ' ಎಂಬಲ್ಲಿ 'ಆತ್ಮನಿ ಸ್ಥಿತೇ ಮಯಿ' ಎಂದು ಅಧ್ಯಾಹಾರಪೂರ್ವಕ ಅನ್ವಯ. 'ಜೀವನಲ್ಲಿರುವ ನನ್ನಲ್ಲಿ ಲೋಕಗಳಿವೆ' ಎಂದರ್ಥ.

* * *

ಜೀವನು ತನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿಯುವುದೂ ಮೋಕ್ಷ ಸಾಧನ ಎಂದು ಶ್ರೀಹರಿ ಬ್ರಹ್ಮನಿಗೆ ಹೇಳುತ್ತಾನೆ–

ಯದಾ ರಹಿತಮಾತ್ಮಾನಂ ಭೂತೇಂದ್ರಿಯಗುಣಾಶಯೈಃ ।
ಸ್ವರೂಪೇಣ ಮಯೋಪೇತಂ ಪಶ್ಯನ್ ಸ್ವಾರಾಜ್ಯಮೃಚ್ಛತಿ ॥ ೩೩ ॥

ಪಂಚಭೂತಗಳು, ಜಡವಾದ ಇಂದ್ರಿಯಗಳು, ಶಬ್ದಾದಿ ಗುಣಗಳು, ಜಡವಾದ ಅಂತಃಕರಣ ಇವುಗಳಲ್ಲಿ ಅಭಿಮಾನವನ್ನು ತೊರೆದು ಹೃದಯದಲ್ಲಿ ತನ್ನನ್ನು ತನ್ನ ಸ್ವರೂಪದಿಂದಲೇ ಭಗವಂತನೊಂದಿಗೆ ಕಂಡಾಗಲೇ ಮೋಕ್ಷ ಲಭಿಸುವುದು.

[೧]ಇಲ್ಲಿ 'ಸ್ವರೂಪೇಣ ಮಯಾ ಉಪೇತಂ' ಎಂದರೆ ಜೀವನು ತನ್ನ ಶುದ್ಧ ಚಿತ್ಸ್ವರೂಪದಿಂದ ಪರಮಾತ್ಮನೊಂದಿಗೆ ಕೂಡಿದ್ದಾನೆ ಎಂದರೆ ಐಕ್ಯಹೊಂದಿದ್ದಾನೆ ಎಂದು ಶ್ರೀಧರವ್ಯಾಖ್ಯಾನ. ಆದರೆ 'ಉಪೇತಂ' ಕೂಡಿದನೆಂದರೆ ಭೇದ ವಿರಲೇಬೇಕು. ತನ್ನೊಂದಿಗೆ ತಾನು ಕೂಡುವುದಿಲ್ಲ. ಆದರಿಂದ ಈ ವ್ಯಾಖ್ಯಾನ ಸರಿಯಲ್ಲ. ವಿಶ್ವನಾಥವ್ಯಾಖ್ಯಾನದಲ್ಲಿ 'ಸ್ವರೂಪೇಣ' ಎಂದರೆ ಜೀವನು ತನ್ನ ಸ್ವರೂಪನೇ ಆದ ಪರಮಾತ್ಮನೊಂದಿಗೆ ಉಪೇತಂ, ಉಪ–ಸಮೀಪಕ್ಕೆ ಸೇವೆಗಾಗಿ, ಇತಂ– ಬಂದಿರುವವನು ತಾನೆಂದು ತಿಳಿದವನು 'ಸ್ವೇನ ಸಹ ರಾಜತೇ ಇತಿ ಸ್ವರಾಟ್'– ತನ್ನ ಪ್ರಭುವಾದ ಪರಮಾತ್ಮನೊಂದಿಗೆ ಅವನ ಸೇವಕನಾಗಿ ಇರುತ್ತಾನೆ, ಅಂದರೆ ಮೋಕ್ಷವನ್ನು ಪಡೆಯುತ್ತಾನೆ ಎಂದಿದೆ. ಇಲ್ಲಿ ಪರಮಾತ್ಮ ಜೀವನ ಸ್ವರೂಪನೇ ಆಗಿದ್ದಾನೆ ಸೇವ್ಯನೂ ಆಗಿದ್ದಾನೆ ಎನ್ನುವುದು ವ್ಯಾಹತ. ವೀರರಾಘವವ್ಯಾಖ್ಯಾನದಲ್ಲಿ 'ಸ್ವರೂಪೇಣ ಮಯಾ' ಶ್ರುತ್ಯುಕ್ತಸ್ವರೂಪನಾದ ಪರಮಾತ್ಮನೊಂದಿಗೆ 'ಉಪೇತಂ' ಎಂದರೆ ಶರೀರಾತ್ಮಭಾವದಿಂದ ಕೂಡಿದವನು ಜೀವ ಎಂದಿದೆ. ಇಲ್ಲಿ 'ಶರೀರಾತ್ಮಭಾವದಿಂದ' ಎಂಬುದು ಶ್ಲೋಕದಲ್ಲಿ ಕಾಣುವುದಿಲ್ಲ. 'ಮಯಾ ಆತ್ಮನಾ' ಎಂದು ಆತ್ಮಶಬ್ದ ಅಧ್ಯಾಹಾರ ಮಾಡಬೇಕಾಗುತ್ತದೆ.

ಅದರಿಂದ ಜೀವನು ತನ್ನ ಸ್ವರೂಪದಿಂದ, ಅಂದರೆ, ದೇಹದ ಬೇರೆ ಅವಯವಗಳಲ್ಲಿ ಪ್ರಕಾಶರೂಪದಿಂದ ಮಾತ್ರ ಇರುತ್ತಾನೆ, ಹೃದಯದಲ್ಲಿ ಸ್ವರೂಪದಿಂದಲೇ ಇರುತ್ತಾನೆ, ಅಂಥ ಸ್ವರೂಪದಿಂದ, ಅಲ್ಲಿಯೇ ಹೃದಯದಲ್ಲಿರುವ ಬಿಂಬರೂಪಿಯಾದ ಪರಮಾತ್ಮನೊಂದಿಗೆ, ಅವನ ಪಾದಕಮಲವನ್ನಾಶ್ರಯಿಸಿ ಇರುತ್ತಾನೆ ಎನ್ನುವ ಅರ್ಥವೇ ಸ್ವರಸ.

---

೧. ಆತ್ಮಾನಂ ಜೀವಂ ಶುದ್ಧತ್ವಂಪದಾರ್ಥಸ್ವರೂಪೇಣ ಸ್ವಸ್ಯಾತ್ಮಭೂತೇನ ಮಯಾ ತತ್ಪದಾರ್ಥೇನ ಉಪೇತಮೇಕೀಭೂತಂ ಪಶ್ಯನ್ ಭವತಿ । –ಶ್ರೀಧರಃ

ಆತ್ಮಾನಂ ಸ್ವಂ ಸ್ವರೂಪೇಣೈವ, ನ ತು ಸ್ವೀಯೇನೇತ್ಯರ್ಥಃ, ಮಯಾ ಸೇವ್ಯೇನ ಪರಮೇಶ್ವರೇಣ ಸಹ ಉಪ ಸಮೀಪ ಏವ ಇತಂ ಸೇವಾರ್ಥಂ ಪ್ರಾಪ್ತಂ ಪಶ್ಯನ್ ಭವತಿ । –ವಿಶ್ವನಾಥಃ

ಸ್ವರೂಪೇಣ ಸತ್ಯಂ ಜ್ಞಾನಮನಂತಮಿತಿ ಶ್ರುತ್ಯುಕ್ತಸ್ವರೂಪೇಣ ಮಯಾ ಆತ್ಮನಾ ಧಾರಕೇಣೋಪೇತಂ ವ್ಯಾಪ್ತಮಾತ್ಮೀಯಂ ಧಾರ್ಯಮಾತ್ಮಾನಂ ಜೀವಾತ್ಮನಃ ಪಶ್ಯನ್ । –ವೀರರಾಘವಃ

ಸ್ವರೂಪೇಣ ಮಯೋಪೇತಂ । ಹೃದಿಸ್ಥಂ ಜೀವರೂಪಂ ಹಿ ಪರಮೇಶ್ವರಸಹಿತಂ ಭವತಿ ।

ತ್ಯಕ್ತ್ವಾ ದೇಹಾದ್ಯಾತ್ಮಭಾವಂ ಜೀವರೂಪೇ ಹೃದಿ ಸ್ಥಿತೇ ।
ದೃಷ್ಟ್ವಾಽಽತ್ಮಭಾವಂ ತಂ ಚಾಪಿ ಹರಿಪಾದಾಬ್ಜಸಂಸ್ಥಿತಮ್ ।
ಯದಾ ಪಶ್ಯತ್ಯಾಪರೋಕ್ಷ್ಯಾತ್ ತದಾ ಮುಕ್ತಿಂ ವ್ರಜತ್ಯಸೌ ॥
ಇತಿ ದತ್ತಾತ್ರೇಯಯೋಗೇ ॥

'ಸ್ವರೂಪೇಣ ಮಯೋಪೇತಂ' ಎಂದು ಹೇಳಿದ್ದು ಯುಕ್ತವೇ. ಏಕೆಂದರೆ ಹೃದಯದಲ್ಲಿರುವ ಜೀವನ ಸಮಗ್ರರೂಪವು ಅಲ್ಲಿಯೆ ಇರುವ ಬಿಂಬರೂಪಿಯಾದ ಪರಮಾತ್ಮನಿಂದ ಕೂಡಿಕೊಂಡಿರುತ್ತದೆ. 'ಜೀವನು ದೇಹಾದಿಗಳಲ್ಲಿ ತನ್ನವೆಂಬ ಅಭಿಮಾನವನ್ನು ತೊರೆದು, ಹೃದಯದಲ್ಲಿರುವ ತನ್ನ ಸ್ವರೂಪದಲ್ಲಿ ಜೀವತ್ವವನ್ನು ಕಂಡು, ಆ ಜೀವನನ್ನು ಅಂದರೆ ತನ್ನನ್ನು ಬಿಂಬರೂಪಿ ಹರಿಯ ಪಾದಕಮಲ ವನ್ನಾಶ್ರಯಿಸಿರುವಂತೆ ಅಪರೋಕ್ಷದಿಂದ ಕಂಡಾಗ ಅವನು ಮುಕ್ತಿಯನ್ನು ಹೊಂದುತ್ತಾನೆ' ಎಂದು ದತ್ತಾತ್ರೇಯಯೋಗ ಎಂಬ ಗ್ರಂಥದಲ್ಲಿ ಹೇಳಿದೆ.

* * *

ಬ್ರಹ್ಮದೇವರು ಪರಮಾತ್ಮನನ್ನು ಸರಿಯಾಗಿಯೇ ತಿಳಿದಿದ್ದಾರೆ ಎಂದು ಪರಮಾತ್ಮನೆ ಹೇಳುತ್ತಾನೆ–

ಜ್ಞಾತೋಽಹಂ ಭವತಾ ತ್ವದ್ಯ ದುರ್ವಿಜ್ಞೇಯೋಽಪಿ ದೇಹಿನಾಮ್ ।
ಯನ್ಮಾಂ ತ್ವಂ ಮನ್ಯಸೇ ಯುಕ್ತಂ ಭೂತೇಂದ್ರಿಯಗುಣಾತ್ಮಭಿಃ ॥ ೩೬ ॥

ದೇಹಿಗಳಿಗೆ ನನ್ನನ್ನು ತಿಳಿಯುವುದು, ಅಂದರೆ ಸಾಕ್ಷಾತ್ಕರಿಸುವುದು ಬಲು ಕಷ್ಟ. ಆದರೂ ನೀನೀಗ ನನ್ನನ್ನು ಸಾಕ್ಷಾತ್ಕರಿಸಿಕೊಂಡಿರುವಿ. ಏಕೆಂದರೆ ನನ್ನಲ್ಲಿ ನನ್ನ ವಶದಲ್ಲಿ ಪಂಚಭೂತಗಳು, ಇಂದ್ರಿಯಗಳು, ತ್ರಿಗುಣಗಳು ಮನಸ್ಸು ಬುದ್ಧಿ ಮುಂತಾದವುಗಳಿವೆ ಎಂದು ನೀನು ಧ್ಯಾನ ಮಾಡಿರುವಿ.

ಇಲ್ಲಿ ಬೇರೆ ಎಲ್ಲ ವ್ಯಾಖ್ಯಾನಕಾರರು 'ಮನ್ಯಸೇ ಅಯುಕ್ತಂ' ಎಂದು ಪದವಿಭಾಗ ಮಾಡಿ ಪ್ರಾಕೃತ ಭೂತೇಂದ್ರಿಯಾದಿಗಳಿಂದ ಭಗವಂತ ಯುಕ್ತನಾಗಿಯೇ ಇಲ್ಲ, ಅಪ್ರಾಕೃತ ಭೂತೇಂದ್ರಿಯಾದಿಗಳಿಂದ ಮಾತ್ರ ಯುಕ್ತನಾಗಿದ್ದಾನೆ ಎಂದಿದ್ದಾರೆ. ಆದರೆ ಪ್ರಾಕೃತ ಭೂತೇಂದ್ರಿಯಾದಿಗಳಿಂದ ಯುಕ್ತನಲ್ಲ ಎನ್ನುವುದು ತಪ್ಪು. ಅವುಗಳಿಗೆ ನಿಯಾಮಕ ಎಂದ ಮೇಲೆ ನಿಯಾಮಕನು ನಿಯಮ್ಯದಿಂದ ಯುಕ್ತನಾಗದಿದ್ದರೆ ನಿಯಾಮಕನೆನಿಸುವುದು ಹೇಗೆ? ಅಪ್ರಾಕೃತ ಭೂತಾದಿಗಳಿಂದ ಯುಕ್ತನೆನ್ನುವುದೂ

ತಪ್ಪು. ಪರಮಾತ್ಮನಿಗೆ ಸ್ವರೂಪಭೂತವಾದ ದೇಹೇಂದ್ರಿಯಾದಿಗಳೇ ಹೊರತು ಬೇರೆ ಜಡವಾದವುಗಳು ಪ್ರಾಕೃತವಿರಲಿ ಅಪ್ರಾಕೃತವೇ ಇರಲಿ ಯಾವುದೂ ಇಲ್ಲ.

ಭೂತೇಂದ್ರಿಯಮನೋಬುದ್ಧಿತ್ರಿಗುಣಾದಿಷು ಸರ್ವಶಃ ।
ಯುಕ್ತಂ ನಿಯಾಮಕತಯಾ ಪಶ್ಯನ್ ಜಾನಾತಿ ಕೇಶವಮ್ ॥
ಇತಿ ಚ ॥

ಪಂಚಭೂತ ಇಂದ್ರಿಯ ಮನಸ್ಸು ಬುದ್ಧಿ ತ್ರಿಗುಣ ಮುಂತಾದವುಗಳಲ್ಲಿ ಎಲ್ಲಡೆ ನಿಯಾಮಕನಾಗಿರುವುದಿಂದ ಭಗವಂತನು ಅವುಗಳಿಂದ ಯುಕ್ತನೆಂದು ಉಪಾಸನೆ ಮಾಡುವವನು ಅವನ ಸಾಕ್ಷಾತ್ಕಾರ ಪಡೆಯುತ್ತಾನೆ ಎಂದೂ ಹೇಳಿದೆ.

* * *

ಬ್ರಹ್ಮನು ಮಾಡಿದ ಸ್ತೋತ್ರಕ್ಕೆ ಭಗವಂತ ಮೆಚ್ಚಿಗೆ ವ್ಯಕ್ತ ಪಡಿಸುತ್ತಾನೆ–

ಪ್ರೀತೋಽಹಮಸ್ತು ಭದ್ರಂ ತೇ ಲೋಕಾನಾಂ ವಿಜಯೇಚ್ಛಯಾ ।
ಯದಸ್ತೌಷೀದ್ ಗುಣಮಯಂ ನಿರ್ಗುಣಂ ಮಾಽನುವರ್ಣಯನ್
॥ ೩೯ ॥

ಲೋಕಸೃಷ್ಟಿಕಾರ್ಯ ಕೈಗೂಡುವ ಬಯಕೆಯಿಂದ ನನ್ನನ್ನು ಸರ್ವಜ್ಞತ್ವಾದಿ ಗುಣಪೂರ್ಣನೆಂದೂ ತ್ರಿಗುಣವರ್ಜಿತನೆಂದೂ ನೀನು ಸ್ತುತಿಸಿರುವುದರಿಂದ ನಾನು ಸಂತುಷ್ಟನಾಗಿದ್ದೇನೆ. ನಿನಗೆ ಶುಭವಾಗಲಿ.

ಇಲ್ಲಿ 'ಗುಣಮಯಂ ನಿರ್ಗುಣಂ' ಎಂದರೆ ಗುಣಮಯನೆಂದು ಕಂಡರೂ ನಿರ್ಗುಣನೇ ಎಂದು ಶ್ರೀಧರವ್ಯಾಖ್ಯಾನ. ಇದು ಅದ್ವೈತವಾಗುವುದರಿಂದ ಗ್ರಾಹ್ಯವಲ್ಲ. ಪ್ರಾಕೃತಗುಣ ಉಳ್ಳವನೆಂದು ಅಜ್ಞರಿಗೆ ಕಂಡರೂ ಸ್ವತಃ ಪ್ರಾಕೃತಗುಣರಹಿತ, ಅಪ್ರಾಕೃತ ಸ್ವರೂಪಭೂತ ಗುಣ ಉಳ್ಳವನೆಂದು ರಾಧಾ ರಮಣದಾಸ ವ್ಯಾಖ್ಯಾನ ಗ್ರಾಹ್ಯವಾಗುತ್ತದೆ. ಗುಣಮಯ ಎಂದರೆ ಕಲ್ಯಾಣ ಗುಣಗಳಿಂದ ಪೂರ್ಣ ಎಂದು ವೀರರಾಘವವ್ಯಾಖ್ಯಾನ ಹೇಳುತ್ತಿದ್ದರೂ ಆ ಕಲ್ಯಾಣ ಗುಣಗಳು ಅವನ ಸ್ವರೂಪವೆಂದು ಅವರು ಒಪ್ಪದಿರುವುದರಿಂದ ಅವರ ವ್ಯಾಖ್ಯಾನವೂ ಗ್ರಾಹ್ಯವಾಗುವುದಿಲ್ಲ. ತನ್ನ ಸ್ವರೂಪಭೂತವಾದ ಗುಣಗಳಿಂದಲೇ ಭಗವಂತ ಪೂರ್ಣ ಎನ್ನಬೇಕು.

'ವಿಜಯೇಚ್ಛಯಾ' ಎಂದರೆ ತನಗೆ ವಿಜಯವಾಗಲಿ ಎಂಬ ಇಚ್ಛೆಯಿಂದ ಎಂದು ವ್ಯಾಖ್ಯಾನಿಸಿದರೆ ಬ್ರಹ್ಮನು ಮಾಡುವ ಭಕ್ತಿ ಸಕಾಮವಾಗುತ್ತದೆ ಎಂಬ ಭೀತಿಯಿಂದ 'ತಾನು ಸೃಜಿಸುವ ಲೋಕದ ಜನರಿಗೆ ವಿಜಯವಾಗಲಿ' ಎಂಬ

ಇಚ್ಛೆಯಿಂದ ಎಂದು ವಿಶ್ವನಾಥವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ವಲ್ಲಭವ್ಯಾಖ್ಯಾನದಲ್ಲಿ ಲೋಕವನ್ನು ತನ್ನ ವಶಕ್ಕೆ ತಂದುಕೊಳ್ಳುವ ಅಭಿಲಾಷೆಯಿಂದ ಎಂದಿದೆ. ವೀರರಾಘವವ್ಯಾಖ್ಯಾನದಲ್ಲಿ ವಿಜಯೇಚ್ಛೆ ಎಂದರೆ ಲೋಕವನ್ನು ಸೃಷ್ಟಿಸುವ ಬಯಕೆ ಎಂದಿದೆ.

ಎಲ್ಲ ವ್ಯಾಖ್ಯಾನಕಾರರೂ ಹಿಂದೆ 'ನಾತಿಪ್ರಸೀದಸಿ' ಎಂಬ ೧೨ನೇ ಶ್ಲೋಕದಲ್ಲಿ ಸುರಗಣದವರೆಲ್ಲರೂ ಹೃದಯದಲ್ಲಿ ಕಾಮನೆಗಳನ್ನು ತುಂಬಿಕೊಂಡಿದ್ದಾರೆ. ಅವರ ಆರಾಧನೆಗೆ ಭಗವಂತ ಹೆಚ್ಚು ಸಂತುಷ್ಟನಾಗುವುದಿಲ್ಲ ಎಂದಿದ್ದಾರೆ.

ವಸ್ತುತಃ ಲೋಕಸೃಷ್ಟ್ಯಾದಿಗಳನ್ನು ಮಾಡುವ ಅಧಿಕಾರಸ್ಥಾನದಲ್ಲಿ ಭಗವಂತನಿಂದ ನಿಯುಕ್ತರಾದ ಈ ದೇವತೆಗಳು ತಮ್ಮ ಅಧಿಕಾರವನ್ನೂ ಆ ಅಧಿಕಾರದಲ್ಲಿದ್ದು ಕಾರ್ಯ ನಿರ್ವಹಿಸುವದರಲ್ಲಿ ಯಶಸ್ಸನ್ನೂ ವಿಜಯವನ್ನೂ ಬಯಸುವುದು ಆವಶ್ಯಕ. ಆ ಬಯಕೆಗೇ ಭಗವಂತ ಸುಪ್ರೀತನಾಗುತ್ತಾನೆ ಎಂಬ ವಿಶೇಷಾಂಶವನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಗಮನಿಸಿಲ್ಲ.

ಸಾರ್ವಜ್ಞ್ಯಾದಿಗುಣೈರ್ಯುಕ್ತಂ ಸತ್ತ್ವಾದಿಗುಣವರ್ಜಿತಮ್ ।
ಯೋ ಜಾನಾತಿ ಹರಿಂ ತಸ್ಯ ಪ್ರೀತೋ ಭವತಿ ಕೇಶವಃ ॥
ಇತಿ ವ್ಯೋಮಸಂಹಿತಾಯಾಮ್ ।

ಆಧಿಕಾರಿಕದೇವಾನಾಂ ಸ್ವಾಧಿಕಾರಾಭಿಕಾಮನಮ್ ।
ಭವತಿ ಪ್ರೀತಯೇ ವಿಷ್ಣೋರ್ಭಕ್ತ್ಯಾದೇರಪಿ ಯತ್ ಸದಾ ॥
ಇತಿ ಚ ॥

ಸರ್ವಜ್ಞತ್ವಾದಿ ಗುಣಯುಕ್ತನೆಂದೂ ಸತ್ವಾದಿಗುಣರಹಿತನೆಂದೂ ಹರಿಯನ್ನು ಯಾರು ತಿಳಿಯುವನೋ ಅವನಿಗೆ ಹರಿ ಒಲಿಯುತ್ತಾನೆ ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ಮತ್ತು ಅಧಿಕಾರದಲ್ಲಿ ನಿಯುಕ್ತರಾದ ದೇವತೆಗಳು ತಮ್ಮ ಅಧಿಕಾರಕ್ಕೆ ಸಂಬಂಧಿಸಿದ್ದನ್ನು ಬಯಸುವುದೂ ಸದಾ ಭಕ್ತಿಜ್ಞಾನಾದಿಗಳನ್ನು ಬಯಸುವುದೂ ಹರಿಗೆ ಪ್ರೀತಿಕರವೆನಿಸುತ್ತದೆ ಎಂದೂ ಹೇಳಿದೆ.

* * *

ಉತ್ತಮಾಧಿಕಾರಿಗಳು ಯಜ್ಞಾದಿಗಳಿಂದ ಮೋಕ್ಷದಲ್ಲಿಯೂ ಭಗವಂತನ ಪ್ರೀತಿಯನ್ನೇ ಬಯಸುತ್ತಾರೆ, ಮೋಕ್ಷವೂ ಅವನ ಪ್ರೀತಿಗಾಗಿ ಎಂದು ಶ್ರೀಹರಿ ಬ್ರಹ್ಮನಿಗೆ ಹೇಳುತ್ತಾನೆ–

ಪೂರ್ತೇನ ತಪಸಾ ಯಜ್ಞೈರ್ದಾನೈರ್ಯೋಗೈಃ ಸಮಾಧಿನಾ ।
ರಾದ್ಧಂ ನಿಃಶ್ರೇಯಸಂ ಪುಂಸಾಂ ಮತ್ಪ್ರೀತಿಸ್ತತ್ತ್ವವಿನ್ಮತಮ್ ॥ ೪೧ ॥

ಉತ್ತಮಾಧಿಕಾರಿಗಳು ತಟಾಕಾದಿ ನಿರ್ಮಾಣ ತಪಸ್ಸು ಯಜ್ಞ ದಾನ ಯೋಗ ಸಮಾಧಿಗಳಿಂದ ಮೋಕ್ಷದಲ್ಲಿಯೂ ನನ್ನ ಪ್ರೀತಿಯನ್ನೇ ಬಯಸುತ್ತಾರೆ ಎಂಬುದು ತತ್ವಜ್ಞಾನಿಗಳ ಮತ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ರಾದ್ಧಂ ನಿಃಶ್ರೇಯಸಂ' ಎಂದು ಪಾಠವಿಟ್ಟುಕೊಂಡಿದ್ದಾರೆ. 'ಪೂರ್ತಾದಿಗಳಿಂದ ಸಿದ್ಧವಾಗುವ ಮೋಕ್ಷವೆಂದರೆ ಭಕ್ತನಿಗೆ ಭಗವಂತನ ಪ್ರೀತಿಯೇ. ಅಂದರೆ ಪ್ರೀತಿ ಇಲ್ಲದಿದ್ದರೆ ಮೋಕ್ಷವೂ ಮೋಕ್ಷವೆನಿಸುವುದಿಲ್ಲ. ಅದರಲ್ಲಿ ಸುಖವಿಲ್ಲ. ನಿರ್ವಿಶೇಷಬ್ರಹ್ಮಜ್ಞಾನಿಗೆ ಬ್ರಹ್ಮನಲ್ಲಿ ಪ್ರೀತಿ ಇರುವುದಿಲ್ಲ. ಮಾಯೆಯಿಂದ ಪ್ರೀತಿ ಆವೃತವಾಗಿರುತ್ತದೆ. ಹೀಗಾಗಿ ಅವನಿಗೆ ನಿರ್ವಿಶೇಷಬ್ರಹ್ಮಭಾವರೂಪ ಮೋಕ್ಷ ಕೊಟ್ಟು ಬ್ರಹ್ಮ ಉದಾಸೀನನಾಗುತ್ತಾನೆ. ಇದಕ್ಕೆ ಉದಾರಹಣೆ, ಬೆಳಕಿನಿಂದ ಕಣ್ಣಿಗೆ ಉಪಕಾರಕನಾದ ಸೂರ್ಯನಲ್ಲಿಯೂ ಜನರಿಗೆ ಪ್ರೀತಿ ಇರುವುದಿಲ್ಲ. ಅದರಿಂದ ಅವನು ಉದಾಸೀನನಾಗಿರುತ್ತಾನೆ. ಭಕ್ತಿಯಿಂದ ಆರಾಧಿಸಿದರೆ ಮಾತ್ರ ಪ್ರೀತಿ ಮಾಡಿ ವರ ನೀಡುತ್ತಾನೆ. ಅದರಿಂದ ಜ್ಞಾನಿಯ ಈ ಪ್ರೀತಿರಹಿತವಾದ ಮೋಕ್ಷ ಭಕ್ತನಿಗೆ ಬೇಡ. ಅವನಿಗೆ ಮೋಕ್ಷವೆಂದರೆ ಭಗವಂತನ ಪ್ರೀತಿಯೆ' ಎಂದು. ಇದು ಅದ್ವೈತವಾಗುವುದರಿಂದ ಈ ವಿಶ್ವನಾಥವ್ಯಾಖ್ಯಾನ ಗ್ರಾಹ್ಯವಲ್ಲ. ವಲ್ಲಭವ್ಯಾಖ್ಯಾನದಲ್ಲಿಯೂ ಹೀಗೇ ಹೇಳಿದೆ. ವೈಷಯಿಕ ಸುಖನಿವರ್ತಕವಾದ ಆ ಮೋಕ್ಷವನ್ನು ಯಾರೂ ಬಯಸುವುದಿಲ್ಲ

---

೧. ಯಥಾ ಶೀತಾದ್ಯಾರ್ತಿಹರೇ ಚಕ್ಷುಃಪ್ರಕಾಶಸುಖಪ್ರದೇಽಪಿ ಸೂರ್ಯೇ ಸಾಕ್ಷಾದನುಭೂತೇಽಪಿ ಕೇಽಪಿ ಯತ್ ನಾನುರಜ್ಯಂತಿ ತತ್ರ ಮಮತ್ವಾಭಾವ ಏವ ಹೇತುಃ । ಸೂರ್ಯಶ್ಚ ತತ್ಸುಖಪ್ರದೋಽಪಿ ತೇಷೂದಾಸ್ತ ಏವ । ಏವಂ ಜ್ಞಾನಿಜನಾಃ ಖಲ್ವಜ್ಞಾನತಮೋಹಂತರಿ ಸ್ವಾನುಭವಸುಖಪ್ರದೇಽಪಿ ಬ್ರಹ್ಮಣಿ ಮಮತ್ವಾಭಾವಾನ್ನಾನುರಜ್ಯಂತಿ । ಬ್ರಹ್ಮಾಪಿ ಸ್ವಂ ನಿರ್ವಿಶೇಷಮೇವ ಅನುಭಾವಯತ್ ತೇಷೂದಾಸ್ತ ಏವ । —ವಿಶ್ವನಾಥಃ

ಮೋಕ್ಷಸ್ಯಾಪಿ ಸರ್ವಾಭಿಲಷಿತತ್ವಾಭಾವಾತ್ ವೈಷಯಿಕಸುಖನಿವರ್ತಕತ್ವೇನ ನ ತತ್ ಫಲಮೇವ । ಯಥಾ ವೈಷಯಿಕಾಣಾಂ ಗಾಥಾ—

ಅಪಿ ವೃಂದಾವನೇ ಶೂನ್ಯೇ ಶೃಗಾಲತ್ವಂ ಸ ಇಚ್ಛತಿ ।
ನ ತು ನಿರ್ವಿಷಯಂ ಮೋಕ್ಷಂ ಕದಾಚಿದಪಿ ಗೌತಮ ಇತಿ ॥ —ವಲ್ಲಭಃ

ಎಂದಿದ್ದಾರೆ. ವೀರರಾಘವವ್ಯಾಖ್ಯಾನದಲ್ಲಿ 'ಮೋಕ್ಷವು ಭಗವಂತನ ಪ್ರೀತಿಯೇ' ಎಂದರೆ 'ಮೋಕ್ಷವು ಭಗವಂತನ ಪ್ರೀತಿಯಿಂದಲೇ'. ಯಜ್ಞಾದಿಗಳಿಂದ ಉಂಟಾಗುವ ಭಗವಂತನ ಪ್ರೀತಿಯಿಂದಲೇ ಭುಕ್ತಿ ಮುಕ್ತಿಗಳೆರಡೂ ಲಭಿಸುವುವು ಎಂದರ್ಥ ಎಂದಿದೆ. ಆದರೆ 'ತತ್ವವಿನ್ಮತಂ' ಎಂಬುದು ಕೂಡುವುದಿಲ್ಲ. ಉತ್ತಮರಾದ ತತ್ವಜ್ಞಾನಿಗಳು ಭಗವಂತನ ಪ್ರೀತಿಯಿಂದ ಭುಕ್ತಿ ಮುಕ್ತಿಗಳು ದೊರಕಲಿ ಎಂಬ ಅಭಿಪ್ರಾಯದಿಂದ ಯಜ್ಞಾದಿಗಳನ್ನು ನಡೆಸುವುದಿಲ್ಲ. ಯಜ್ಞಾದಿಗಳಿಂದ ಭುಕ್ತಿ ಮುಕ್ತಿಗಳು ಬಂದರೆ ಭಗವಂತನ ಆಜ್ಞೆ ಎಂದು ಸ್ವೀಕರಿಸುತ್ತಾರೆ, ಯಜ್ಞಾದಿಗಳ ಫಲವೆಂದಲ್ಲ, ಉದ್ದಿಷ್ಟಫಲ ಭಗವಂತನ ಪ್ರೀತಿಯೇ. ಭುಕ್ತಿ ಮುಕ್ತಿಗಳಿಂದಲೂ ಭಗವಂತನ ಪ್ರೀತಿಯನ್ನೇ ಸಂಪಾದಿಸಲು ಅವರು ಬಯಸುತ್ತಾರೆ. ಇದು ವಾಮನ ಪುರಾಣದಲ್ಲಿ ಸ್ಪಷ್ಟವಿದೆ.

'ನಿಃಶ್ರೇಯಸಂ ರಾಜ್ಯಂ' ಮೋಕ್ಷೇಽಪಿ ರಂಜನೀಯಾ ಮತ್ಪ್ರೀತಿರೇವ ।
ಮುಕ್ತಸ್ಯಾಪಿ ಹರೇಃ ಪ್ರೀತಿಃ ಸರ್ವತೋಽಪ್ಯನುರಜ್ಯತೇ ॥
ಇತಿ ವಾಮನೇ ॥

'ನಿಃಶ್ರೇಯಸಂ ರಾಜ್ಯಂ ಮತ್ಪ್ರೀತಿಃ' ಎಂದು ಅನ್ವಯ. ಮೋಕ್ಷದಲ್ಲಿಯೂ ಉತ್ತಮಾಧಿಕಾರಿಗಳು ಬಯಸುವುದು ಭಗವಂತನ ಪ್ರೀತಿಯನ್ನೇ ಎಂದರ್ಥ. ಏಕೆಂದರೆ ವಾಮನ ಪುರಾಣದಲ್ಲಿ ಹೇಳಿದೆ– 'ಮುಕ್ತನೂ ಕೂಡ ತಾನು ಹಿಂದೆ ಮಾಡಿದ ಯಜ್ಞಾದಿ ಎಲ್ಲ ಕರ್ಮಗಳಿಂದ ಹರಿಪ್ರೀತಿಯೇ ಫಲವಾಗಿ ದೊರಕಬೇಕೆಂದು ಬಯಸುತ್ತಾನೆ, ಮೋಕ್ಷವನ್ನು ಫಲವಾಗಿ ಬಯಸುವುದಿಲ್ಲ.' ಎಂದು.

'ನಿಃಶ್ರೇಯಸಂ ಮತ್ಪ್ರೀತಿಃ' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರೂ 'ಮತ್ಪ್ರೀತ್ಯಾ' ಎಂದು ವಿಭಕ್ತಿವ್ಯತ್ಯಾಸಮಾಡಲೇ ಬೇಕು. 'ಭಗವಂತನ ಪ್ರೀತಿಯಿಂದ ಮೋಕ್ಷಫಲ' ಎನ್ನಬೇಕು. ಆದರೆ ಅದು ಉತ್ತಮಜ್ಞಾನಿಗಳ ಮತವಲ್ಲ. 'ನಿಃಶ್ರೇಯಸೇ' ಎಂದು ವಿಭಕ್ತಿವ್ಯತ್ಯಾಸ ಮಾಡಿ, 'ಮುಕ್ತಿಯಲ್ಲಿಯೂ ಉತ್ತಮಾಧಿಕಾರಿ ಆ ಮುಕ್ತಿಯನ್ನು ಯಜ್ಞಾದಿಗಳ ಫಲವೆಂದುಕೊಳ್ಳುವುದಿಲ್ಲ, ಭಗವಂತನ ಪ್ರೀತಿಗಾಗಿಯೆ ನಾವು ಆ ಕರ್ಮ ಮಾಡಿದೆವೆಂದುಕೊಳ್ಳುತ್ತಾರೆ ಎನ್ನುವುದು ಜ್ಞಾನಿಗಳ ಮತ' ಎನ್ನಬೇಕು. 'ರಾಜ್ಯಂ' ಎಂದರೆ ರಾಜ್ಯಭೋಗವಲ್ಲ, 'ರಂಜ ರಾಗೇ' ಧಾತುವಿನಿಂದ ರಂಜನೀಯ, ಬಯಸ ಬೇಕಾದುದು, ಭಗವಂತನ ಪ್ರೀತಿ ಎಂದರ್ಥ.

* * *

ಜೀವಾತ್ಮ ತನಗೆ ತಾನು ಪ್ರಿಯ. ಅದರಿಂದ ದೇಹಾದಿಗಳು ತನಗೆ ಪ್ರಿಯ. ಅದರೆ ತನಗೆ ತಾನೇಕೆ ಪ್ರಿಯ ಎಂದರೆ ಅವನಲ್ಲಿ ಭಗವಂತನಿದ್ದಾನೆ. ಎಲ್ಲಕ್ಕಿಂತ ಪ್ರಿಯನಾದ ಭಗವಂತನ ಸನ್ನಿಧಾನದಿಂದಲೆ ತಾನು ತನಗೆ ಪ್ರಿಯನಾಗಿದ್ದಾನೆ. ಎಂದ ಮೇಲೆ ಅವನಲ್ಲಿ ಪ್ರೀತಿ ಮಾಡಲೇ ಬೇಕು ಎಂದು ಭಗವಂತ ಬ್ರಹ್ಮನಿಗೆ ಹೇಳುತ್ತಾನೆ–

ಅಹಮಾತ್ಮಾಽಽತ್ಮನಾಂ ಧಾತಃ ಪ್ರೇಷ್ಠಃ ಸನ್ ಪ್ರೇಯಸಾಮಪಿ ।
ಅತೋ ಮಯಿ ರತಿಂ ಕುರ್ಯಾದ್ ದೇಹಾದಿರ್ಯತ್ಕೃತೇ ಪ್ರಿಯಃ
॥ ೪೨ ॥

ಬ್ರಹ್ಮನೆ, ದೇಹಾದಿಗಳು ಯಾರ ಸಂಬಂಧದಿಂದಾಗಿ ಪ್ರಿಯವೆನಿಸುವುವೋ, ದೇಹಾದಿಗಳಿಗಿಂತಲೂ ಅತಿಪ್ರಿಯರಾದ ಆ ಜೀವಾತ್ಮರಿಗೂ ಪ್ರಿಯತ್ವವನ್ನು ಉಂಟುಮಾಡುತ್ತ ಇನ್ನೂ ಹೆಚ್ಚು ಪ್ರಿಯನೆನಿಸಿ ನಾನು ಅವರ ಅಂತರ್ಯಾಮಿ ಯಾಗಿರುತ್ತೇನೆ. ಅದರಿಂದ ನನ್ನಲ್ಲಿ ಅವರು ಪ್ರೀತಿ ಮಾಡಬೇಕು.

[೧]ಇಲ್ಲಿ ವಿಶ್ವನಾಥವ್ಯಾಖ್ಯಾನ ಹೇಳುತ್ತದೆ– 'ದೇಹಾದಿಗಳು ಜೀವಾತ್ಮಸಂಬಂಧದಿಂದ ಪ್ರಿಯವೆನಿಸುತ್ತವೆ. ಜೀವಾತ್ಮರು ಪರಮಾತ್ಮಸಂಬಂಧದಿಂದ ಪ್ರಿಯರೆನಿಸುತ್ತಾರೆ. ಅದರಿಂದ ಪರಮಾತ್ಮನಲ್ಲಿ ಪ್ರಿತಿಯೇ ಸ್ವಾಭಾವಿಕ. ಜೀವಾತ್ಮನಲ್ಲಿ ಪ್ರೀತಿ ಔಪಚಾರಿಕ. ಇದಕ್ಕೆ ಕಾರಣ ಜೀವಾತ್ಮರಿಗೆ ಆತ್ಮನಾಗಿದ್ದಾನೆ ಪರಮಾತ್ಮ. ಅದರಿಂದ ಅವನಲ್ಲಿ ಪ್ರೀತಿ ಮಾಡಬೇಕು. ಜ್ಞಾನಿಗಳು ಪರಮಾತ್ಮನಲ್ಲಿ ಪ್ರೀತಿಮಾಡುವುದಿಲ್ಲ. ಅದರಿಂದ ಅವರಿಗೆ ಬರಿ ನಿರ್ಗುಣಮುಕ್ತಿ .ಭಕ್ತರು ಪ್ರೀತಿ ಮಾಡುತ್ತಾರೆ. ಆ ಪ್ರೀತಿಗಾಗಿ, ಪ್ರೀತಿಯಿಂದ ಸೇವೆ ಮಾಡುವುದಕ್ಕಾಗಿ ಅದಕ್ಕೆ ಸಾಧನವಾದ ದೇಹಾದಿಗಳಲ್ಲಿಯೂ ಪ್ರೀತಿ ಭಕ್ತನಿಗೆ ಉಂಟಾಗುತ್ತದೆ, ಅದರಿಂದ ದೇಹಾದಿಗಳನ್ನು ತೊರೆದು ನಿರ್ಗುಣಮೋಕ್ಷವನ್ನು ಹೊಂದಲು ಭಕ್ತ ಬಯಸುವುದಿಲ್ಲ,' ಎಂದು. ಆದರೆ ಪ್ರಾಕೃತದೇಹಾದಿಗಳನ್ನು ತೊರೆದು ಮೋಕ್ಷ ಪಡೆವಾಗ ಅಪ್ರಾಕೃತದೇಹಾದಿಗಳಿರುತ್ತವೆ ಅದರಿಂದ, 'ಪ್ರೀತಿಗಾಗಿ ಪ್ರಾಕೃತದೇಹವನ್ನು ಬಯಸುತ್ತಾನೆ, ಪ್ರಾಕೃತದೇಹವಿಲ್ಲದ ಮೋಕ್ಷ ಬೇಡವೆನ್ನುತ್ತಾನೆ' ಎನ್ನುವುದು ಸರಿಯಲ್ಲ. ಜೀವಾತ್ಮರ ಆತ್ಮನು ಪರಮಾತ್ಮ ಎಂಬುದು ಹೇಗೆಂದೂ ಇವರು ಹೇಳಿಲ್ಲ. ಜ್ಞಾನಿಗಳಿಗೆ ಅವನಲ್ಲಿ ಪ್ರೀತಿ ಏಕಿಲ್ಲ ಎಂದೂ ಹೇಳಿಲ್ಲ.

೧. ಅತ ಉಕ್ತಯುಕ್ತೇರೇವ ಹೇತೋರ್ಮಯಿ ರತಿಂ ಕುರ್ಯಾತ್ ಯಸ್ಯಾ ರತೇಃ ಕೃತೇ ದೇಹಾದಾವಪ್ರೀತಿಮತೋಽಪಿ ವಿವೇಕಿನೋ ದೇಹಾದಿಃ ಪ್ರಿಯೋ ಭವತಿ । ದೇಹೇಂದ್ರಿಯಾದಿಭಿರೇವ ಪರಿಚರ್ಯಾಕೀರ್ತನಾದಿಭಕ್ತಿಸಿದ್ಧಿರಿತಿ ನೈವ ತೇ ಮೋಕ್ಷಾಕಾಂಕ್ಷಿಣಃ ಸ್ಯುರಿತಿ ಭಾವಃ । –ವಿಶ್ವನಾಥಃ

ಸರ್ವತೋಽಪಿ ಪ್ರಿಯೋ ಹ್ಯಾತ್ಮಾ ತಸ್ಯಾಪಿ ಪ್ರಿಯತಾಂ ಹರಿಃ ।
ಆಪಾದಯತಿ ಯತ್ ತಸ್ಮಾತ್ ಸ್ವಾತ್ಮನೋಽಪಿ ಪ್ರಿಯೋ ಹರಿಃ ॥
ಇತಿ ಬ್ರಹ್ಮವೈವರ್ತೇ ।

ತನಗೆ ದೇಹಾದಿಗಳೆಲ್ಲಕ್ಕಿಂತ ಪ್ರಿಯ ತಾನೇ. ತನಗೂ ಪ್ರಿಯತ್ವವನ್ನು ವ್ಯಕ್ತಮಾಡಿಕೊಡುವವನು ಹರಿ. ಆದರಿಂದ ತನಗೆ ತನಗಿಂತಲೂ ಹರಿಯೆ ಪ್ರಿಯನಾಗಬೇಕು, ಹರಿಯಲ್ಲಿ ಪ್ರೀತಿಮಾಡಬೇಕು ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ.

ಆತ್ಮನಿಗೆ ಪ್ರಿಯತ್ವವನ್ನು ತಂದು ಕೊಡುವ ಪರಮಾತ್ಮನಲ್ಲಿಯೆ ಆತ್ಮ ಹೆಚ್ಚು ಪ್ರೀತಿ ಮಾಡಬೇಕು. ಹಾಗೆ ಆತ್ಮನಿಗೆ ಪರಮಪ್ರೀತಿಯೋಗ್ಯನಾಗಿ ಅಂತರ್ಯಾಮಿ ಯಾಗಿದ್ದಾನೆ ಎನ್ನುವುದೇ 'ಆತ್ಮನಿಗೆ ಆತ್ಮ' ಎನ್ನುವುದರ ಭಾವ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ದಶಮೋಽಧ್ಯಾಯಃ ॥

—o—

ಅಧ್ಯಾಯ–೧೧

ಅಧ್ಯಾಯಸಾರಾಂಶ

ಶ್ರೀಹರಿಯ ನಾಭಿಕಮಲದಲ್ಲಿ ಜನಿಸಿದ ಚತುರ್ಮುಖ ಹರಿಯಾಜ್ಞೆಯಂತೆ ಸೃಷ್ಟಿಮಾಡುವುದಕ್ಕಾಗಿ ನೂರು ವರ್ಷಕಾಲ ತಪಸ್ಸು ಮಾಡಿ, ಪ್ರಳಯ ಜಲವಾಯುಗಳನ್ನು ಪಾನ ಮಾಡಿ, ಕಮಲವನ್ನು ಮೂರು ಲೋಕವಾಗಿಯೂ ಹದಿನಾಲ್ಕು ಲೋಕವಾಗಿಯೂ ವಿಭಾಗ ಮಾಡಿದ ಎಂದು ಮೈತ್ರೇಯರು ವಿದುರನಿಗೆ ಹೇಳಿ, ಪರಮಾತ್ಮನು ನಡೆಸುವ ಮೂರು ಬಗೆಯ ಲಯವನ್ನೂ ಹತ್ತು ಬಗೆಯ ಸೃಷ್ಟಿಗಳನ್ನೂ ಹೇಳುತ್ತಾರೆ. ಕಾಲ ದ್ರವ್ಯ ಗುಣ ನಿಮಿತ್ತಕವೆಂದು ಲಯ ಮೂರು ವಿಧ. ಮಹತ್ತ್ವ, ಅಹಂಕಾರ, ಪಂಚಭೂತ, ಇಂದ್ರಿಯ, ದೇವ, ಅವಿದ್ಯೆಗಳ ಆರು ಪ್ರಾಕೃತಸೃಷ್ಟಿಗಳೂ, ಸ್ಥಾವರ ತಿರ್ಯಕ್ ಮನುಷ್ಯರ ಮೂರು ವೈಕೃತಸೃಷ್ಟಿಗಳೂ, ಅಷ್ಟವಿಧ ಉಪದೇವತೆಗಳ ಉಭಯಸೃಷ್ಟಿಯೂ ಸೇರಿ ಸೃಷ್ಟಿ ಹತ್ತು ವಿಧ ಎನ್ನುತ್ತಾರೆ.

* * *

ತಪಸ್ಸು ಮಾಡಿ ಪ್ರಪಂಚ ಸೃಷ್ಟಿಮಾಡೆಂದು ಪರಮಾತ್ಮ ಬ್ರಹ್ಮನಿಗೆ ಆದೇಶ ನೀಡಿ ಅಂತರ್ಧಾನನಾದಾಗ ಬ್ರಹ್ಮ ಮೊದಲಿಗೆ ತಪಸ್ಸು ಮಾಡಿದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಮೈತ್ರೇಯ ಉವಾಚ–

ವಿರಿಂಚೋಽಪಿ ತದಾ ಚಕ್ರೇ ದಿವ್ಯಂ ವರ್ಷಶತಂ ತಪಃ ।
ಆತ್ಮನ್ಯಾತ್ಮಾನಮಾವೇಶ್ಯ ಯಥಾಽಽಹ ಭಗವಾನಜಃ ॥ ೪ ॥

ಭಗವಂತನು ಹೇಳಿದಂತೆ ಬ್ರಹ್ಮನು ಭಗವಂತನಲ್ಲಿ ಮನಸ್ಸಿಟ್ಟು ದೇವಮಾನದ ನೂರುವರ್ಷಗಳಷ್ಟು ಕಾಲ ತಪಸ್ಸು ಮಾಡಿದ.

ಇಲ್ಲಿ ಆತ್ಮನಲ್ಲಿ ಆತ್ಮನನ್ನು ಇಡುವುದೆಂದರೆ–

ಆತ್ಮನಿ ಪರಮೇಶ್ವರೇ ಮನ ಆವೇಶ್ಯ ।

ಆತ್ಮನಿ= ಪರಮಾತ್ಮನಲ್ಲಿ, ಆತ್ಮಾನಂ=ಮನಸ್ಸನ್ನು ಇಟ್ಟು ಎಂದರ್ಥ.

* * *

ಬ್ರಹ್ಮದೇವರು ಹದಿನಾಲ್ಕು ಲೋಕ ಸೃಷ್ಟಿ ಮಾಡಿದರು. ಈ ಮಹತ್ಕಾರ್ಯ ಅವರಿಂದಾದುದು ಅವರು ಭಗವದರ್ಪಣಬುದ್ಧಿಯಿಂದ ಮಾಡಿದ ಸತ್ಕರ್ಮದ ಫಲ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಏತಾವಾನ್ ಜೀವಲೋಕಸ್ಯ ಸಂಸ್ಥಾಭೇದಃ ಸಮಾಸತಃ ।
ಧರ್ಮಸ್ಯ ಹ್ಯನಿಮಿತ್ತಸ್ಯ ವಿಪಾಕಃ ಪರಮೇಷ್ಠಿನಃ ॥೯॥

ಜೀವರು ವಾಸಮಾಡಲು ಯೋಗ್ಯವಾದ ಲೋಕದ ವಿಸ್ತಾರವಿಷ್ಟೆ. ಅದರಿಂದ ಬ್ರಹ್ಮದೇವರು ಮೂಲೋಕ ಹದಿನಾಲ್ಕು ಲೋಕಗಳಾಗಿ ಬ್ರಹ್ಮಾಂಡವನ್ನು ವಿಭಾಗ ಮಾಡಿದರು. ಅವರು ಮಾಡಿದ ಈ ಮಹತ್ ಕಾರ್ಯ ಅವರು ಹಿಂದೆ ಹರಿಪ್ರೀತಿಯ ಉದ್ದೇಶದಿಂದ ಮಾಡಿದ ಸತ್ಕರ್ಮದ ಫಲರೂಪವಾಗಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಅನಿಮಿತ್ತ' ಎಂದರೆ ಬ್ರಹ್ಮದೇವರು ಮಾಡಿದ ಕರ್ಮಕ್ಕೆ ಏನೂ ನಿಮಿತ್ತವಿರಲಿಲ್ಲ. ಯಾವುದೇ ಫಲದ ಸಂಕಲ್ಪವಿಲ್ಲದೆ ಸ್ವಾಭಾವಿಕವಾಗಿ ಮಾಡಿದ್ದಾರೆ, ನಿಷ್ಕಾಮಕರ್ಮ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದು ಪೂರ್ವೋತ್ತರವಿರುದ್ಧ. 'ಲೋಕಾನಾಂ ವಿಜಯೇಚ್ಛಯಾ' ಲೋಕಸೃಷ್ಟಿ ಮಾಡಬೇಕು, ಲೋಕವನ್ನು ಅಧೀನಕ್ಕೆ ತಂದುಕೊಳ್ಳಬೇಕು ಎಂಬ ಉದ್ದೇಶದಿಂದ ಹರಿಯನ್ನು ಸ್ತೋತ್ರಮಾಡಿದ್ದಾಗಿ ಹಿಂದೆ(೩.೧೦.೩೯) ಹೇಳಿದೆ. ಅದರಿಂದ ಫಲದ ಉದ್ದೇಶವಿರಲಿಲ್ಲ ಎನ್ನಬಾರದು. ಆಧಿಕಾರಿಕ ಪುರುಷರಾದ್ದರಿಂದ ಆ ಅಧಿಕಾರಕ್ಕೆ ಸಂಬಂಧಿಸಿದ ಫಲವನ್ನು ಸಂಕಲ್ಪಿಸಿದರೆ ದೋಷವಿಲ್ಲ. ಹರಿಗೆ ಪ್ರೀತಿಯೆ ಆಗುತ್ತದೆ ಅದರಿಂದ ಫಲವನ್ನು ಸಂಕಲ್ಪಿಸಿದ್ದಾರೆ . ಆದರೆ ಆ ಫಲವನ್ನೂ ಹರಿಪ್ರೀತಿಯ ಉದ್ದೇಶದಿಂದ ಸಂಕಲ್ಪಿಸಿದ್ದಾರೆ ಎಂದು ಈ ಶ್ಲೋಕ ಹೇಳುತ್ತಿದೆ.

ಅನಿಮಿತ್ತಸ್ಯ ಬ್ರಹ್ಮಾರ್ಪಣಬುದ್ಧ್ಯಾ ಕೃತಸ್ಯ । ಅಃ ಇತಿ ಬ್ರಹ್ಮೇತಿ ಶ್ರುತೇಃ ।

'ಅನಿಮಿತ್ತಸ್ಯ' ಎಂದರೆ ಪರಮಾತ್ಮನಿಗೆ ಅರ್ಪಿತವಾಗಲಿ ಎಂಬ ಬುದ್ಧಿಯಿಂದ ಮಾಡಿದ ಎಂದರ್ಥ. 'ಅ' ಎಂಬುದು ಪರಮಾತ್ಮನ ನಾಮ ಎಂದು ಶ್ರುತಿ ಹೇಳುತ್ತಿರುವುದರಿಂದ.

'ಅ–ನಿಮಿತ್ತ' ಎಂದರೆ ನಿಮಿತ್ತವಿಲ್ಲದ್ದು, ಫಲೋದ್ದೇಶವಿಲ್ಲದ್ದು ಎಂದರ್ಥವಲ್ಲ. 'ಅ' ಎಂದರೆ ಪರಮಾತ್ಮ ಏಕೆಂದರೆ 'ಅ' ಎಂಬುದು ಪರಮಾತ್ಮನ ಒಂದು ನಾಮ ಎಂದು ಶ್ರುತಿಯಿದೆ. ಪರಮಾತ್ಮ ಎಂದರೆ ಇಲ್ಲಿ ಲಕ್ಷಣಯಾ ಪರಮಾತ್ಮನಿಗೆ ಅರ್ಪಣ ಮಾಡುವಬುದ್ಧಿ. ಆ ನಿಮಿತ್ತವಾಗಿ ಬ್ರಹ್ಮದೇವರು ಕರ್ಮಮಾಡಿದ್ದಾರೆ ಎಂದರ್ಥ.

* * *

ಹಿಂದೆ 'ಯೋ ವಾ ಅಹಂ ಚ ಗಿರಿಶಶ್ಚ'(೩.೧೦.೧೬) ಎಂದು ಮುಂತಾಗಿ ಭಗವಂತ ಬಹುರೂಪಿ ಎಂದೂ 'ಅನಿಮಿಷಾಯ ನಮೋಽಸ್ತು ತಸ್ಮೈ'(೩.೧೦.೧೭) ಎಂದು ಭಗವಂತ ಕಾಲರೂಪನೆಂದೂ ಬ್ರಹ್ಮನು ಮಾಡಿದ ಸ್ತುತಿಯನ್ನು ವಿದುರನಿಗೆ ಮೈತ್ರೇಯರು ವರ್ಣಿಸಿದ್ದರು. ಅದರಿಂದ ಬಹುರೂಪನಾದ ಹರಿಯ ರೂಪಗಳಲ್ಲಿ ಒಂದಾದ ಕಾಲ ಎಂಬ ರೂಪವನ್ನು ವಿವರವಾಗಿ ಹೇಳಿರೆಂದು ವಿದುರ ಕೇಳಿಕೊಳ್ಳುತ್ತಾನೆ–

ವಿದುರ ಉವಾಚ–

ಯದಾತ್ಥ ಬಹುರೂಪಸ್ಯ ಹರೇರದ್ಭುತಕರ್ಮಣಃ ।
ಕಾಲಾಖ್ಯಂ ಲಕ್ಷಣಂ ಬ್ರಹ್ಮನ್ ಯಥಾ ವರ್ಣಯ ನಃ ಪ್ರಭೋ ॥ ೧೦ ॥

ವಿದುರ ಹೇಳಿದನು– ಬ್ರಹ್ಮಜ್ಞಾನಿಗಳಾದ ಮೈತ್ರೇಯರೆ, ಅದ್ಭುತಕಾರ್ಯಗಳನ್ನು ಮಾಡುವ ಹರಿ ಬಹುರೂಪನೆಂದೂ, ಕಾಲ ಎಂಬ ರೂಪವೂ ಅವನಿಗಿದೆ ಎಂದೂ ಹೇಳಿದಿರಿ. ಆ ಬಹುರೂಪವನ್ನೂ ಕಾಲ ಎಂಬ ರೂಪವನ್ನೂ ನನಗೆ ಬಣ್ಣಿಸಿ ಹೇಳಿರಿ.

ಇಲ್ಲಿ 'ಬಹುರೂಪನಾದ ಹರಿಯ ಕಾಲವೆಂಬ ಲಕ್ಷಣ' ಎಂದರೆ ಕಾಲವೆಂಬ ರೂಪವೆನ್ನುವುದು ಸ್ಪಷ್ಟ. ಬಹುರೂಪನೆಂದು ಹೇಳಿ ಕಾಲವೆಂಬ ರೂಪ ಎಂದೇ ಶ್ಲೋಕದಲ್ಲಿ ಹೇಳಬೇಕಾಗಿತ್ತು. ಲಕ್ಷಣದ ಪ್ರಸಕ್ತಿ ಬಂದಿರಲಿಲ್ಲ. ಆದರೂ ಲಕ್ಷಣವೆಂದರೆ ರೂಪ ಎಂದೇ ಅರ್ಥ ವಿವಕ್ಷಿತ. ಹಾಗೇ ಶ್ರೀಧರಾದಿ ವ್ಯಾಖ್ಯಾನಗಳಲ್ಲಿ ಹೇಳಿದೆ. ಶುಕದೇವವ್ಯಾಖ್ಯಾನದಲ್ಲಿ ಮಾತ್ರ ಕಾಲ ಎಂಬುದು ಭಗವಂತನ ಶಕ್ತಿ. ಶಕ್ತಿಯು ಶಕ್ತಿ ಉಳ್ಳ ವಸ್ತುವಿನ ಲಕ್ಷಣವಾಗುತ್ತದೆ ಎಂದಿದೆ. ವಸ್ತುತಃ ಭಗವಂತನ ಅನೇಕರೂಪಗಳಲ್ಲಿ ಕಾಲ ಎಂದು ಒಂದು ರೂಪ. ಬೇರೆ ಅಖಂಡವಾದ ಜಡಕಾಲ ಒಂದಿಲ್ಲ. ಅದರಿಂದ ಭಗವಂತನಿಗೆ ಕಾಲ ಲಕ್ಷಣವಲ್ಲ. [೧]ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ ಕಾಲ ಭಗವಂತನ ಅಸಾಧಾರಣಧರ್ಮ. ಏಕೆಂದರೆ ಅವನ ಜಗತ್ಕರ್ತೃತ್ವವೆಂದರೆ ಜಗದುತ್ಪತ್ತಿಕಾಲವೆ. ಅಥವಾ ಕಾಲ ಎಂದರೆ ಆಕಲನ, ಗ್ರಹಣ ಜ್ಞಾನ. ಅದು ಅವನ ಲಕ್ಷಣ ಎಂದಿದ್ದಾರೆ. ಆದರೆ ಘಟಕರ್ತೃತ್ವ ಕುಂಬಾರನ ಲಕ್ಷಣ. ಕಾಲ ಅವನಲ್ಲಿಯೂ ಇರುವುದರಿಂದ ಹರಿಯ ಲಕ್ಷಣ ಹೇಗೆ? ಪ್ರಪಂಚದ ಎಲ್ಲ ವಸ್ತುಧರ್ಮಗಳೂ ಭಗವಂತನಲ್ಲಿದ್ದರೆ ಅವು ಅವನ ಅಸಾಧಾರಣ ಧರ್ಮ

೧. ಕಾಲೋ ಹಿ ಭಗವತೋ ಲಕ್ಷಣಮಸಾಧಾರಣೋ ಧರ್ಮಃ । ಜಗತ್‌ಕರ್ತೃತ್ವಂ ನಾಮ ಜಗತ ಉತ್ಪತ್ತಿಕಾಲ ಇತ್ಯರ್ಥಃ । ತಲ್ಲಕ್ಷಣಸಹಿತೋ ಯ ಆತ್ಮಾ ಸ ಭಗವಾನ್ । ಕಲಯತೀತಿ ಕಾಲಃ ಕಲನಂ ವಾ । ಸರ್ವಸ್ಯಾಪಿ ವಸ್ತುನಃ ಆಕಲನಂ ಗ್ರಹಣಂ ಜ್ಞಾನಂ ವಾ ಭಗವದ್ಧರ್ಮೋ ಭವತ್ಯೇವ । - ವಲ್ಲಭಾಚಾರ್ಯಃ

ವಾಗಬಹುದೆ? ಶ್ಲೋಕದಲ್ಲಿ ಬಹುಲಕ್ಷಣಸ್ಯ ಎನ್ನದೆ ಬಹುರೂಪಸ್ಯ ಎಂದಿರುವುದೂ ಸ್ವರಸವಲ್ಲ. ಹಾಗಾದರೆ ಕಾಲಾಖ್ಯಂ 'ರೂಪಂ' ಎನ್ನದೆ 'ಲಕ್ಷಣಂ' ಎಂದಿದ್ದೇಕೆ ಎನ್ನಬಹುದು. ಲಕ್ಷಣಶಬ್ದಕ್ಕೆ ರೂಪ ಎಂದು ಅರ್ಥ ಕೋಶದಲ್ಲಿರುವುದರಿಂದ ರೂಪಶಬ್ದ ಪರ್ಯಾಯವಾದ ಲಕ್ಷಣಶಬ್ದ ಶ್ಲೋಕದಲ್ಲಿದ್ದರೆ ಅನುಪಪತ್ತಿ ಇಲ್ಲ.

ಲಕ್ಷಣಂ ಲಕ್ಷ್ಯಮಾತ್ಮಾ ಚ ಸ್ವರೂಪಮಿತಿ ಕಥ್ಯತೇ ।
ಇತ್ಯಭಿಧಾನಮ್ ।

ಸ್ವರೂಪವು ಲಕ್ಷಣ ಲಕ್ಷ್ಯ ಆತ್ಮ ಎಂಬ ಶಬ್ದಗಳಿಂದಲೂ ಹೇಳಲ್ಪಡುತ್ತದೆ ಎಂದು ಅಭಿಧಾನವಿದೆ.

* * *

ವಿದುರನ ಅಪೇಕ್ಷೆಯಂತೆ ಮೈತ್ರೇಯರು ಕಾಲವೆಂಬ ಭಗವದ್ರೂಪವನ್ನು ಹೇಳುವುದಕ್ಕೆ ಮೊದಲು, ಪ್ರಪಂಚಸೃಷ್ಟಿಕಾರಣವಾದ ಗುಣತ್ರಯನಿಯಾಮಕ ವಿಷ್ಣುಬ್ರಹ್ಮರುದ್ರ ರೂಪಗಳನ್ನು ಭಗವಂತ ವ್ಯಕ್ತಮಾಡಿದನೆಂದು ಹೇಳುತ್ತಾರೆ–

ಮೈತ್ರೇಯ ಉವಾಚ–

ಗುಣವ್ಯತಿಕರಾಕಾರೋ ನಿರ್ವಿಶೇಷೋಽಪ್ರತಿಷ್ಠಿತಃ ।
ಪುರುಷಸ್ತದುಪಾದಾನಂ ಆತ್ಮಾನಂ ಲೀಲಯಾಽಸೃಜತ್ ॥ ೧೧ ॥

ಮೈತ್ರೇಯರು ಹೇಳಿದರು–
ಭಗವಂತ ಸರ್ವೋತ್ತಮ, ತನಗಿಂತ ಉತ್ತಮ ಇನ್ನೊಬ್ಬ ಇಲ್ಲದವನು, ವಿಕಾರರಹಿತ ಮತ್ತು ತನ್ನಲ್ಲಿ ತಾನು ಇರುವವನು ಹೊರತು ಇನ್ನೊಂದು ಆಶ್ರಯವಿಲ್ಲದವನು. ಅವನು ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಉದ್ದೇಶದಿಂದ ಗುಣತ್ರಯಗಳನ್ನು ನೋಡಿ ಅವುಗಳಿಗೆ ನಿಯಾಮಕವಾದ ಬ್ರಹ್ಮವಿಷ್ಣುರುದ್ರ ರೂಪಗಳನ್ನು ಲೀಲೆಯಿಂದ ವ್ಯಕ್ತ ಮಾಡಿದ.

ಗುಣವ್ಯತಿಕರವೆಂದರೆ ಗುಣವೈಷಮ್ಯರೂಪವಾದ ಸೃಷ್ಟಿ. ಆಕಾರ ಎಂದರೆ ಮಾಡುವವನು. ಮಾಡುವ ರೂಪವನ್ನು ಇನ್ನೂ ವ್ಯಕ್ತ ಮಾಡುವುದಕ್ಕೆ ಮೊದಲು ಇರುವ ಮೂಲರೂಪವು ಸೃಷ್ಟಿ ಮಾಡುವ ಆಲೋಚನೆಯನ್ನು ಮಾಡಿದೆ ಎಂಬ ಅಭಿಪ್ರಾಯದಿಂದ ಗುಣವ್ಯತಿಕರಾಕಾರವು ಮೂಲರೂಪವೆನ್ನಬಹುದು. ಇದು ನಿರ್ವಿಶೇಷ ಅಂದರೆ ಸರ್ವೋತ್ತಮ, ನಿರ್ವಿಕಾರ. ಅಪ್ರತಿಷ್ಠಿತಃ = ಸ್ವೇ ಮಹಿಮ್ನಿ ಪ್ರತಿಷ್ಠಿತಃ ಎಂದು ಶ್ರುತಿ ಇರುವುದರಿಂದ ತನ್ನಲ್ಲೆ ತಾನಿದೆ. ಬೇರೆಡೆ ಅಪ್ರತಿಷ್ಠಿತ. ತದುಪಾದಾನಂ- ಆ ಗುಣಗಳನ್ನು ಸೃಷ್ಟ್ಯಾದಿಗಳ ಉದ್ದೇಶದಿಂದ ನಿಯಮಿಸುವ

ಮೂರು ರೂಪಗಳಿಂದ, ಆತ್ಮಾನಂ ಲೀಲಯಾಽಸೃಜತ್– ತನ್ನನ್ನು ಲೀಲೆಯಿಂದ ವ್ಯಕ್ತಮಾಡಿಕೊಂಡ.

ಇಲ್ಲಿ ಕಾಲದ ಬಗ್ಗೆ ಮೊದಲಿಗೆ ಏನೂ ಹೇಳುತ್ತಿಲ್ಲ. ಮುಂದೆ ಹೇಳುತ್ತಾರೆ. ಆದರೆ [೧]ಬೇರೆ ವ್ಯಾಖ್ಯಾನಕಾರರು ಕಾಲಪರವಾಗಿ ಶ್ಲೋಕದ ಪೂರ್ವಾರ್ಧವನ್ನು ವ್ಯಾಖ್ಯಾನಿಸಿದ್ದಾರೆ. ಗುಣವ್ಯತಿಕರ ಅಂದರೆ ಸೃಷ್ಟಿ ಎಂಬುದು ಕಾಲದ ಆಕಾರ, ಲಕ್ಷಣ. ಆದರೆ ಸ್ವತಃ ನಿರ್ವಿಶೇಷ, ನಿರಾಕಾರವಾಗಿದೆ. ಅಪ್ರತಿಷ್ಠಿತ ಎಂದರೆ ಕೊನೆಯಿಲ್ಲದ್ದು, ಆದ್ಯಂತಶೂನ್ಯ. ಪುರುಷನು 'ತದುಪಾದಾನಮಾತ್ಮಾನಂ' ಆ ಕಾಲವನ್ನು ನಿಮಿತ್ತವಾಗಿ ಇಟ್ಟುಕೊಂಡು ತಾನೇ ತನ್ನನ್ನು ಪ್ರಪಂಚರೂಪವಾಗಿ ಪರಿಣಾಮಮಾಡಿಕೊಳ್ಳುತ್ತಾನೆ. ತನ್ನನ್ನು ಪ್ರಪಂಚರೂಪವಾಗಿ ಪರಿಣಮಿಸಿಕೊಂಡನೆಂಬ ಅಂಶ ಕೇವಲ ವಸ್ತುಸ್ಥಿತಿಯನ್ನು ಹೇಳಿದ್ದಷ್ಟೆ. ಪ್ರಕೃತಕ್ಕೆ ಬೇಕಾಗಿರುವುದು ಕಾಲವು ಸೃಷ್ಟಿಗೆ ನಿಮಿತ್ತ ಎಂದಿಷ್ಟು ಮಾತ್ರ. ಇದು ಶ್ರೀಧರ ವ್ಯಾಖ್ಯಾನ. ಇಲ್ಲಿ 'ಆತ್ಮಾನಮಸೃಜತ್' ಎಂದರೆ ತನ್ನ ಮೂರು ರೂಪಗಳನ್ನು ಭಗವಂತ ವ್ಯಕ್ತಮಾಡಿದನೆಂದು ಮುಂದೆ ತಾತ್ಪರ್ಯದಲ್ಲಿ ಹೇಳುವ ಸೌಕರಾಯಣಶ್ರುತಿ ಸ್ಪಷ್ಟ ಹೇಳುತ್ತಿದೆ. ಭಗವಂತ ಜಗತ್ತಾಗಿ ಪರಿಣಮಿಸುವುದು ವಸ್ತುಸ್ಥಿತಿಯೂ ಅಲ್ಲ. ಗುಣವ್ಯತಿಕರ ಕಾಲದ ಲಕ್ಷಣವೂ ಅಲ್ಲ. ಅದಕ್ಕೆ ಕಾಲ ನಿಮಿತ್ತಮಾತ್ರ. ನಿಮಿತ್ತತ್ವವು ಲಕ್ಷಣವೆಂದರೆ ಅದೇ ವಿಶೇಷವಾಗುವುದರಿಂದ ನಿರ್ವಿಶೇಷತ್ವ ಇಲ್ಲವಾದೀತು. ಪ್ರತಿಯೊಂದು ಕಾಲಕ್ಕೂ ಪ್ರತಿಷ್ಠಿತತ್ವ, ಆದ್ಯಂತ ಇದೆ. ಕಾಲ ಪ್ರವಾಹಕ್ಕೆ ಮಾತ್ರ ಇಲ್ಲ. ವಸ್ತುತಃ ಜಡಕಾಲದ ವಿಚಾರವನ್ನೇ ಇಲ್ಲಿ ಹೇಳುತ್ತಿಲ್ಲ. ಮೋಕ್ಷಶಾಸ್ತ್ರವಾದ ಭಾಗವತ ಕಾಲವೆಂಬ ಭಗವದ್ರೂಪವನ್ನು ವರ್ಣಿಸುತ್ತಿದೆ.

[೨]ವೀರರಾಘವವ್ಯಾಖ್ಯಾನದಲ್ಲಿ ಗುಣವ್ಯತಿಕರವೆಂದರೆ ಪ್ರಕೃತಿ. ಪ್ರಕೃತ್ಯಾಕಾರ= ಪ್ರಕೃತಿಶರೀರಿಯಾದ ಭಗವಂತನು 'ತದುಪಾದಾನಂ ಆತ್ಮಾನಂ' ಉಪಾದಾನವಾದ ಪ್ರಕೃತಿಯಿಂದ ಕೂಡಿದ ತನ್ನನ್ನು ತಾನು ಪ್ರಪಂಚರೂಪವಾಗಿ ಸೃಷ್ಟಿಸಿದ ಎಂದು

೧. ಸ್ವತಸ್ತು ನಿರ್ವಿಶೇಷಃ, ಅಪ್ರತಿಷ್ಠಿತಃ ಕ್ವಾಪ್ಯಪರ್ಯವಸಿತಃ ಆದ್ಯಂತಶೂನ್ಯ ಇತ್ಯರ್ಥಃ। ಉಪಾದೀಯತೇ ನಿಮಿತ್ತತಯಾ ಸ್ವೀಕ್ರಿಯತ ಇತ್ಯುಪಾದಾನಂ। ಸ ಕಾಲ ಉಪಾದಾನಂ ನಿಮಿತ್ತಂ ಯಸ್ಮಿಂಸ್ತಮಾತ್ಮಾನಮೇವ ವಿಶ್ವರೂಪೇಣಾಸೃಜತ್ । ಸ್ವವ್ಯತಿರೇಕೇಣ ಸೃಜ್ಯಸ್ಯಾಭಾವಾತ್ । ಏತಚ್ಚ ವಸ್ತುಕಥನಮಾತ್ರಂ। ಕಾಲೇನ ನಿಮಿತ್ತೇನ ಚಾಸೃಜತ್ ಇತ್ಯೇತಾವದೇವ ವಿವಕ್ಷಿತಂ। –ಶ್ರೀಧರಃ

೨. ಗುಣೈರ್ವ್ಯತಿಕರಃ ಪರಿಣಾಮೋ ಯಸ್ಯ ತದ್ ಗುಣವ್ಯತಿಕರಂ ಪ್ರಧಾನಂ । ತದಾಕಾರೋ ರೂಪಂ ಶರೀರಂ ಯಸ್ಯ ಸ ತಥೋಕ್ತಃ । ತದ್ ಉಪಾದಾನಂ ಉಪಾದಾನಭೂತಂ ಯಸ್ಯೇತಿ ಬಹುವ್ರೀಹಿಃ । ಉಪಾದಾನಭೂತೇನ ತೇನ ಪ್ರಧಾನೇನ ವಿಶಿಷ್ಟಮಾತ್ಮಾನಂ ಜಗದ್ರೂಪೇಣಾಸೃಜದಿತ್ಯರ್ಥಃ। –ವೀರರಾಘವಃ

ಹೇಳಿದೆ. ಆದರೆ 'ತದುಪಾದಾನಂ' ಎಂದಾಗ ಪ್ರಕೃತಿಯ ವಿಕಾರ ಭಗವಂತ ಎಂದು ಅಪಾರ್ಥವೆ ಸ್ವರಸವಾಗಿ ತೋರುತ್ತದೆ. 'ತದ್ ಉಪಾದಾನಂ ಯಸ್ಯ' ಎಂದು ವಿಗ್ರಹವನ್ನೇ ಹೇಳಿದ್ದಾರೆ. ಮತ್ತು ತದುಪಾದಾನಂ ಎಂಬ ಶಬ್ದವು ವ್ಯರ್ಥ. ಪ್ರಕೃತಿಶರೀರಿಯಾದ ಭಗವಂತ ಪ್ರಪಂಚರೂಪವಾಗಿ ಪರಿಣಮಿಸಿದನೆಂದರೆ ಪ್ರಕೃತಿಯೇ ಉಪಾದಾನವೆಂದು ಸ್ಪಷ್ಟ ತಿಳಿಯುತ್ತದೆ. ಪ್ರಕೃತಿ ಭಗವಂತನ ಶರೀರವೂ ಅಲ್ಲ, ಅವನು ಜಗದ್ರೂಪವಾಗಿ ಪರಣಮಿಸುವುದೂ ಅಪ್ರಾಮಾಣಿಕ.

ಗುಣವ್ಯತಿಕರಮಾಕರೋತಿ ತದ್ದ್ರಷ್ಟಾ । ಅಪ್ರತಿಷ್ಠಿತೋಽನ್ಯತ್ರ । 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' ಇತಿ ಶ್ರುತಿಃ । ತದುಪಾದಾನಂ ಗುಣವ್ಯತಿಕರೋಪಾದಾನಕರ್ತಾರಂ । ಸೃಷ್ಟ್ಯಾದ್ಯರ್ಥತ್ವೇನ ತಸ್ಯ ಪುರುಷಸ್ಯ ಬ್ರಹ್ಮಾ ವಿಷ್ಣುರೀಶ್ವರ ಇತಿ ತ್ರೀಣಿ ರೂಪಾಣ್ಯಾತ್ಮನಾ ಸೃಷ್ಟಾನಿ ।

'ಗುಣವ್ಯತಿಕರಾಕಾರಃ' 'ಸೃಷ್ಟಿಯನ್ನು ಮಾಡುತ್ತಾನೆ' ಎಂದರೆ, ಮಾಡಲು ಆಲೋಚಿಸುತ್ತಾನೆ ಎಂದರ್ಥ. 'ತಾಂ ನಾರಾಯಣಃ ಪರ್ಯಪಶ್ಯತ್' ಎಂದು ಸೌಕರಾಯಣಶ್ರುತಿ ಹಾಗೇ ಹೇಳುತ್ತದೆ. 'ಅಪ್ರತಿಷ್ಠಿತ' ಎಂದರೆ ಇನ್ನೊಂದು ಆಶ್ರಯವನ್ನು ಆಶ್ರಯಿಸದವನು. 'ಭಗವಂತ ಯಾರಲ್ಲಿ ಆಶ್ರಯ ಪಡೆದಿದ್ದಾನೆ? ಯಾರಲ್ಲಿಯೂ ಅಲ್ಲ, ತನ್ನಲ್ಲೆ ತಾನಿದ್ದಾನೆ,' ಎಂದು ಶ್ರುತಿ ಇದೆ. 'ತದುಪಾದಾನಂ' ಎಂದರೆ ಆ ಗುಣವ್ಯತಿಕರವನ್ನು, ಸೃಷ್ಟಿಯನ್ನು, ಉಪಲಕ್ಷಣವಾಗಿ ಸ್ಥಿತಿಸಂಹಾರಗಳನ್ನೂ ಉದ್ದೇಶಿಸುವವನು. ಸೃಷ್ಟ್ಯಾದಿಯ ಉದ್ದೇಶದಿಂದ ಆ ಪರಮಪುರುಷನ ಬ್ರಹ್ಮವಿಷ್ಣುಮಹೇಶ್ವರ ಎಂಬ ಮೂರು ರೂಪಗಳು ತನ್ನಿಂದಲೆ ವ್ಯಕ್ತಮಾಡಲ್ಪಟ್ಟವು ಎಂದರ್ಥ.

* * *

ಸೃಷ್ಟ್ಯಾದಿಗಳಿಗಾಗಿ ಭಗವಂತ ವ್ಯಕ್ತ ಮಾಡಿದ ಮೂರು ರೂಪಗಳಲ್ಲಿ ಯಾವ ರೂಪ ಯಾವ ಕರ್ಮ ಮಾಡುತ್ತದೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ವಿಶ್ವಂ ವೈ ಬ್ರಹ್ಮತನ್ಮಾತ್ರಂ ಸಂಸ್ಥಿತಂ ವಿಷ್ಣುಮಾಯಯಾ ।
ಈಶ್ವರೇಣ ಪರಿಚ್ಛಿನ್ನಂ ಕಾಲೇನಾವ್ಯಕ್ತಮೂರ್ತಿನಾ ॥ ೧೨ ॥

ಬ್ರಹ್ಮಾಂತರ್ಗತವಾದ ಭಗವಂತನ ಬ್ರಹ್ಮರೂಪ ಪ್ರಪಂಚಸೃಷ್ಟಿ ಮಾಡುತ್ತದೆ. ವಿಷ್ಣುರೂಪದ ಸಾಮರ್ಥ್ಯವು ಪಾಲನ ಮಾಡುತ್ತದೆ. ರುದ್ರಾವಿಷ್ಟವಾದ ರುದ್ರರೂಪ ನಾಶ ಮಾಡುತ್ತದೆ. ಇವುಗಳಲ್ಲಿ ಸಂಹಾರ ಮಾಡುವ ರೂಪವೆ ಕಾಲ ಎಂಬ ಹೆಸರಿನಿಂದ ರುದ್ರನಲ್ಲಿ ಅವ್ಯಕ್ತವಾಗಿರುತ್ತದೆ.

೧ಇಲ್ಲಿ ಬ್ರಹ್ಮ ವಿಷ್ಣು ಈಶ್ವರ ಎಂಬ ತ್ರಿಮೂರ್ತಿಗಳ ಹೆಸರು ಸ್ಪಷ್ಟ ಕಾಣಿಸುತ್ತಿದ್ದರೂ ಅದರ ಸ್ವಾರಸ್ಯವನ್ನು ಕಡೆಗಣಿಸಿ 'ವಿಶ್ವವು ಬ್ರಹ್ಮಸ್ವರೂಪವಾಗಿದೆ. ಮಾಯೆಯಿಂದ ಅದು ಲಯ ಹೊಂದುತ್ತದೆ. ಕಾಲನಿಮಿತ್ತವಾಗಿ ನಿರ್ಗುಣನಾದ ಭಗವಂತ ಅದನ್ನು ತನ್ನಿಂದ ಬೇರೆಯಾಗಿ ತೋರುತ್ತಾನೆ. ಅಂದರೆ ಸೃಷ್ಟಿಕಾಲ ಬಂದಾಗ ಸೃಷ್ಟಿ ಮಾಡುತ್ತಾನೆ' ಎಂದು ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡಿದ್ದಾರೆ. ಅದ್ವೈತದಲ್ಲಿ ಮಾಯೆ ಅನೇಕ ಇಲ್ಲ. ಅದರಿಂದ ವಿಷ್ಣುಮಾಯೆ ಎಂಬಲ್ಲಿ ವಿಷ್ಣುಶಬ್ದ ಅನಾವಶ್ಯಕ. ಮಾಯೆಯಿಂದ ಸೃಷ್ಟಿ ಎನ್ನದೆ ಕಾಲದಿಂದ ಸೃಷ್ಟಿ ಎನ್ನುವುದು, ಕಾಲದಿಂದ ಸೃಷ್ಟಿ, ಮಾಯೆಯಿಂದ ಲಯ ಎನ್ನುವುದು ಎಲ್ಲ ಅಸ್ವರಸ.

ವೀರರಾಘವವ್ಯಾಖ್ಯಾನದಲ್ಲಿ 'ಬ್ರಹ್ಮತನ್ಮಾತ್ರಂ ಸಂಸ್ಥಿತಂ' ಎಂದರೆ ವಿಷ್ಣುಮಾಯೆಯಿಂದ- ತನ್ನ ಸಂಕಲ್ಪದಿಂದ, ವಿಶ್ವಾಕಾರವಾಗಿರುವ ಬ್ರಹ್ಮವೇ ತನ್ನ ಸಂಕಲ್ಪದಿಂದ ಬ್ರಹ್ಮಮಾತ್ರವಾಗಿ ಸಂಹಾರಹೊಂದುತ್ತದೆ. ಕಾಲ ನಿಮಿತ್ತವಾಗಿ ಈ ಸಂಹಾರ. ಈ ಕಾಲ ಅವ್ಯಕ್ತಮೂರ್ತಿ, ಅಂದರೆ ಪ್ರತ್ಯಕ್ಷಕ್ಕೆ ಅಗೋಚರ ಕೇವಲ ಅನುಮಾನವೇದ್ಯ ಎಂದಿದ್ದಾರೆ. ಇಲ್ಲಿ ಬ್ರಹ್ಮತನ್ಮಾತ್ರಂ ಎಂದರೆ ಸೂಕ್ಷ್ಮಚಿದ ಚಿದ್ವಿಶಿಷ್ಟಬ್ರಹ್ಮ ಎಂದೂ, ವಿಶ್ವವೆಂದರೆ ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮ ಎಂದೂ ಅರ್ಥವನ್ನು ಹೇಳುವುದು ಸ್ವರಸವಲ್ಲ. 'ಈಶ್ವರೇಣ ಸ್ವಮಾಯಯಾ' ಎನ್ನದೆ ಈಶ್ವರೇಣ ವಿಷ್ಣುಮಾಯಯಾ ಎಂದುದೂ ಸ್ವರಸವಲ್ಲ. ಕಾಲ ಸಾಕ್ಷಿಪ್ರತ್ಯಕ್ಷದಿಂದ ವೇದ್ಯ. ಅದನ್ನು ಅನುಮೇಯ, ಅವ್ಯಕ್ತಮೂರ್ತಿ ಎಂದುದೂ ಸರಿಯಲ್ಲ. 'ಸಂಸ್ಥಿತಂ' ಎಂದರೂ 'ಪರಿಚ್ಛಿನ್ನಂ' ಎಂದರೂ ಲಯಮಾಡಲ್ಪಟ್ಟಿದ್ದು ಎಂದೇ ಅರ್ಥ. ಅದರಿಂದ ಪುನರುಕ್ತಿ.

ವಸ್ತುತಃ ಹಿಂದಿನ ಶ್ಲೋಕಕ್ಕೆ ಈ ಶ್ಲೋಕ ವಿವರಣೆಯಾಗಿದೆ. ಎರಡೂ ಸೌಕರಾಯಣಶ್ರುತಿಯ ಅರ್ಥಾನುವಾದರೂಪವಾಗಿದೆ. ಅದರಿಂದ ಬೇರೆ ವ್ಯಾಖ್ಯಾನಗಳು ನಿರಾಧಾರ.

---

೧. ವಿಷ್ಣುಮಾಯಯಾ ಸಂಸ್ಥಿತಂ ಸಂಹೃತಂ ಬ್ರಹ್ಮತನ್ಮಾತ್ರಂ ಸದ್ವಿಶ್ವಂ ಈಶ್ವರೇಣ ಕರ್ತ್ರಾ ಕಾಲೇನ ನಿಮಿತ್ತೇನ ಪರಿಚ್ಛಿನ್ನಂ ಪೃಥಕ್ಪ್ರಕಾಶಿತಂ। —ಶ್ರೀಧರಃ

ವಿಶ್ವಂ ವಿಶ್ವಾಕಾರಂ ಬ್ರಹ್ಮ ತನ್ಮಾತ್ರಂ ಪ್ರಕೃತ್ಯವಸ್ಥಾಮಾತ್ರವಿಶಿಷ್ಟಂ ಸಂಸ್ಥಿತಂ ಸಂಹೃತಂ, ನ ತು ಮಹದಾದ್ಯವಸ್ಥಾವಿಶಿಷ್ಟಂ । ವಿಷ್ಣುಮಾಯಯಾ ಭಗವತ್ಸಂಕಲ್ಪೇನ । ಯತ್ ಕಾರ್ಯಾವಸ್ಥಾಯಾಂ ಸ್ಥೂಲಚಿದಚಿದ್ವಿಶಿಷ್ಟಂ ಬ್ರಹ್ಮ ವಿಶ್ವಾಕಾರಂ ತತ್ ಸಂಹಾರವಿಷಯಸ್ವಕೀಯಸಂಕಲ್ಪೇನ ಪ್ರಕೃತಿತ್ವಾವಸ್ಥಾಮಾತ್ರಾವ ಶೇಷಿತತ್ವೇನೋಪಸಂಹೃತಮಿತ್ಯರ್ಥಃ । ಪ್ರತ್ಯಕ್ಷೇಣ ನ ವ್ಯಜ್ಯತ ಇತ್ಯವ್ಯಕ್ತಂ ಮೂರ್ತಿಃ ರೂಪಂ ಯಸ್ಯ ತೇನಾನುಮೇಯೇನ ಕಾಲೇನ ಪರಿಚ್ಛಿನ್ನಂ ಪ್ರಳಯದಶಾಯಾಂ ಸೂಕ್ಷ್ಮಚಿದಚಿದ್ವಿಶಿಷ್ಟಂ ಕಾಲಪರಿಚ್ಛಿನ್ನಂ ಸದೇವ ಸ್ಥಿತಮಿತ್ಯರ್ಥಃ । —ವೀರರಾಘವಃ

ಬ್ರಹ್ಮನಿರ್ಮಾತೃಕಂ । ಮಾಯಯಾ ಸಾಮರ್ಥ್ಯೇನ । ತತ್ರ ಯತ್ ಸಂಹರ್ತ್ರೀಶ್ವರಾಖ್ಯಂ ರೂಪಂ ತತ್ ಕಾಲಾಖ್ಯಂ । ಕಲ ಚ್ಛೇದನೇ ಇತಿ ಧಾತೋಃ ।

> ಅಥ ತ್ರಯೀ ವಾವ ಪ್ರಕೃತಿಃ ಸತ್ವಂ ರಜಸ್ತಮ ಇತಿ । ತಾಂ ನಾರಾಯಣಃ ಪರ್ಯಪಶ್ಯತ್ ಅನನ್ಯಪ್ರತಿಷ್ಠಃ । ತಂ ವಾ ಏತಮಾಹುಃ ಪುರುಷ ಇತಿ ಪೂರ್ಣೋ ಹ್ಯೇಷ ಭವತಿ । ಸ ತ್ರೇಧಾ ಬಭೂವೈಷಾಂ ಗುಣಾನಾಮುಪಾದಾನಾಯ । ವಿಷ್ಣುರ್ವಾವ ಸತ್ವಸ್ಯ । ರಜಸೋ ಬ್ರಹ್ಮೇಶೋ ನಾಮ ತಮಸಃ । ಸ ಆವಿವೇಶ । ಬ್ರಹ್ಮಾ ಬ್ರಹ್ಮಾಣಂ ನಾಮ ಚತುರ್ಮುಖಂ । ಈಶ ಈಶಾನಂ ನಾಮ ಪಂಚಮುಖಂ । ಯೋ ವಾ ಈಶ ಈಶಾನಮಾವಿವೇಶ ತಂ ವಾ ಏನಂ ಕಾಲ ಇತ್ಯಾಚಕ್ಷತೇ ಕಾಲ ಇತ್ಯಾಚಕ್ಷತೇ ॥
>
> ಇತಿ ಸೌಕರಾಯಣಶ್ರುತಿಃ ॥

ಬ್ರಹ್ಮತನ್ಮಾತ್ರಂ ಎಂದರೆ ಬ್ರಹ್ಮನಲ್ಲಿ ವ್ಯಾಪ್ತವಾದ ಬ್ರಹ್ಮರೂಪವು ಪ್ರಪಂಚದ ನಿರ್ಮಾಪಕ ಎಂದರ್ಥ. ಮಾಯಯಾ ಎಂದರೆ ಸಾಮರ್ಥ್ಯದಿಂದ. ಈ ಬ್ರಹ್ಮ ವಿಷ್ಣುಮಹೇಶ್ವರ ರೂಪಗಳಲ್ಲಿ ಸಂಹಾರಕವಾದ ಈಶ್ವರವೆಂಬ ಭಗವದ್ರೂಪವೇ ಕಾಲನಾಮಕವಾಗಿದೆ. ಏಕೆಂದರೆ ಕಾಲ ಶಬ್ದವು ಛೇದನ, ಅಂದರೆ ಸಂಹಾರಾರ್ಥಕವಾದ ಕಲ ಧಾತು ನಿಷ್ಪನ್ನವಾಗಿದೆ.

ಸೌಕರಾಯಣಶ್ರುತಿ ಹೇಳುತ್ತದೆ– 'ಪ್ರಕೃತಿಯು ಸತ್ವರಜಸ್ ತಮಸ್ ಎಂದು ಮೂರು ಬಗೆಯಾಗಿದೆ. ಈ ಮೂರು ಗುಣಗಳ ಕಾರ್ಯವಾದ ಸ್ಥಿತಿ ಸೃಷ್ಟಿ ಸಂಹಾರಗಳನ್ನು ಆ ಗುಣಗಳಿಗೆ ನಿಯಾಮಕನಾಗಿ ಮುಂದೆ ಮಾಡಬೇಕೆಂದು ನಾರಾಯಣ ಆಲೋಚಿಸಿದನು. (ಇದನ್ನೇ ಭಾಗವತ 'ಗುಣವ್ಯತಿಕರಾಕಾರಃ' ಎಂದಿದೆ) ನಾರಾಯಣ ಇನ್ನೊಬ್ಬರ ಆಶ್ರಯದಲ್ಲಿಲ್ಲ. ತನಗೆ ತಾನೇ ಆಶ್ರಯ. (ಇದನ್ನು ಭಾಗವತ 'ಅಪ್ರತಿಷ್ಠಿತಃ' ಎಂದಿದೆ.) ಅವನನ್ನು ಪುರುಷ ಎನ್ನುತ್ತಾರೆ. (ಇದನ್ನು ಭಾಗವತವೂ 'ಪುರುಷಃ' ಎಂದಿದೆ.) ಏಕೆಂದರೆ ಅವನು ಗುಣಪೂರ್ಣನಾಗಿರುತ್ತಾನೆ. ಅವನು ಈ ಮೂರು ಗುಣಗಳಿಂದ ಸೃಷ್ಟ್ಯಾದಿಗಳನ್ನು ಮಾಡಲು ಉದ್ದೇಶಿಸಿ ಮೂರು ರೂಪಗಳನ್ನು ವ್ಯಕ್ತಮಾಡಿದ. (ಇದನ್ನೇ ಭಾಗವತ 'ತದುಪಾದಾನಂ ಆತ್ಮಾನಂ' ಎಂದಿದೆ. ಇಲ್ಲಿ ಆತ್ಮಾನಂ ಎಂದು ಸಮುದಾಯೈಕ ವಚನ. ಮೂರು ರೂಪಗಳೆಂದರ್ಥ.) ವಿಷ್ಣುರೂಪವು ಸ್ವತಃ ಸತ್ವಗುಣಕಾರ್ಯ ಮಾಡುತ್ತದೆ. (ಇದನ್ನೇ 'ವಿಷ್ಣುಮಾಯಯಾ ಸಂಸ್ಥಿತಂ' ಎಂದಿದೆ. ವಿಷ್ಣು ಸ್ವಸಾಮರ್ಥ್ಯದಿಂದ ಸತ್ವಗುಣಕಾರ್ಯವಾದ ಸಮ್ಯಕ್ ಸ್ಥಿತಿ, ಎಂದರೆ

ಪಾಲನೆಯನ್ನು ಮಾಡುತ್ತಾನೆ ಎಂದರ್ಥ.) ರಜೋಗುಣಕಾರ್ಯಕ್ಕೆ ಬ್ರಹ್ಮರೂಪವೂ ತಮೋಗುಣಕಾರ್ಯಕ್ಕೆ ಈಶ ರೂಪವೂ ನಿಯಾಮಕ (ಇದನ್ನೇ ಬ್ರಹ್ಮ ತನ್ಮಾತ್ರಂ, ಈಶ್ವರೇಣ ಪರಿಚ್ಛಿನ್ನಂ' ಎಂದಿದೆ.) ಬ್ರಹ್ಮರೂಪಿಯಾದ ನಾರಾಯಣ ಚತುರ್ಮುಖ ಬ್ರಹ್ಮನನ್ನೂ ಈಶರೂಪಿಯಾದ ನಾರಾಯಣ ಪಂಚಮುಖ ಶಿವನನ್ನೂ ಪ್ರವೇಶಿಸಿದನು. ('ಬ್ರಹ್ಮ ತತ್ ಮಾತ್ರಂ ಯಸ್ಯ' ಎಂಬಲ್ಲಿ 'ಬ್ರಹ್ಮನಲ್ಲಿ ಆವೇಶಗೊಂಡು ವ್ಯಾಪಿಸಿದ' ಎಂದು 'ಬ್ರಹ್ಮತತ್' ಶಬ್ದದ ಅರ್ಥ.) ಈಶ್ವರನಲ್ಲಿ ಆವಿಷ್ಟವಾದ ಈಶ್ವರ ಎಂಬ ಭಗವದ್ರೂಪವನ್ನು ಲಯಕಾರಕವಾದ್ದರಿಂದ ಕಾಲ ಎಂದು ಕರೆಯುತ್ತಾರೆ, ಕಾಲ ಎಂದು ಕರೆಯುತ್ತಾರೆ'

—ಹೀಗೆ ಸೌಕರಾಯಣಶ್ರುತಿ ಹೇಳಿದ್ದನ್ನೇ ಭಾಗವತ ಅನುವಾದ ಮಾಡುತ್ತಿರುವುದರಿಂದ ಅದಕ್ಕೆ ಅನುಗುಣವಾಗಿಯೇ ಭಾಗವತ ಶ್ಲೋಕಕ್ಕೆ ವಿವರಣೆ ನೀಡಬೇಕು.

* * *

'ಬ್ರಹ್ಮತನ್ಮಾತ್ರಂ' ಎಂದರೆ ಬ್ರಹ್ಮಸ್ವರೂಪವೇ ಪ್ರಪಂಚ, ಅದಕ್ಕೆ ಪ್ರತ್ಯೇಕ

ಅಸ್ತಿತ್ವವಿಲ್ಲ ಎಂದು ಅದ್ವೈತಿಗಳಂತೆ ಅರ್ಥ ಗ್ರಹಿಸಬಾರದು. ಪ್ರಪಂಚ ಮೂರು ಕಾಲದಲ್ಲಿಯೂ ಇದೆ. ಮೂರು ಕಾಲದಲ್ಲೂ ಇಲ್ಲ ಎನ್ನಬಾರದು ಎನ್ನುತ್ತಾರೆ ಮೈತ್ರೇಯರು. ಮತ್ತು 'ಬಹುರೂಪಸ್ಯ ಹರೇಃ' ಎಂದಂತೆ ಬ್ರಹ್ಮವಿಷ್ಣುಮಹೇಶ್ವರ ರೂಪಗಳನ್ನು ಹೇಳಿ , ಈಗ ಎಲ್ಲ ಪದಾರ್ಥಸೃಷ್ಟಿಮಾಡಿ ಅವುಗಳಲ್ಲಿ ಬಹು ರೂಪದಿಂದ ಪ್ರವೇಶಿಸಿದ್ದನ್ನೂ ವರ್ಣಿಸುತ್ತಾರೆ—

ಯಥೇದಾನೀಂ ತಥಾಽಗ್ರೇ ಚ ಪಶ್ಚಾದಪ್ಯೇತದೀದೃಶಮ್ ।
ಸರ್ಗೋ ನವವಿಧಸ್ತಸ್ಯ ಪ್ರಾಕೃತೋ ವೈಕೃತಶ್ಚ ಯಃ ॥ ೧೩ ॥

ಪ್ರಪಂಚ ಈಗ ಹೇಗೋ ಹಾಗೇ ಹಿಂದೆಯೂ ಇದ್ದಿತು. ಮುಂದೆಯೂ ಹೀಗೇ ಇರುತ್ತದೆ. ಅದರಿಂದ ಸತ್ಯವೆ ಆಗಿದೆ. ಈ ಪ್ರಪಂಚದ ಸೃಷ್ಟಿ ಪ್ರಾಕೃತ ವೈಕೃತವೆಂದು ಎರಡು ಬಗೆ. ಮತ್ತು ಮಹತತ್ತ್ವಸೃಷ್ಟಿ ಅಹಂಕಾರತತ್ವಸೃಷ್ಟಿ ಎಂದು ಮುಂತಾಗಿ ಒಂಬತ್ತು ಬಗೆ.

ಸೃಷ್ಟಿಶ್ಚ ಪ್ರಲಯಶ್ಚೈವ ಸಂಹಾರೋ ಮುಕ್ತಿರೇವ ಚ ।
ದೇವಾ ಋಷಿಪ್ರಭೃತಯೋ ಲೋಕಾ ಭೂರಾದಯಸ್ತಥಾ ॥

ಅನಾದ್ಯನಂತಕಾಲೀನಾಃ ಸರ್ವದೈಕಪ್ರಕಾರತಃ ।
ಜಗತ್ಪ್ರವಾಹಃ ಸತ್ಯೋಽಯಂ ನೈವ ಮಿಥ್ಯಾ ಕಥಂಚನ ॥

ಯೇ ತ್ವೇತದನ್ಯಥಾ ಬ್ರೂಯುಃ ಸರ್ವಹಂತಾರ ಏವ ತೇ ।
ದೇವೈರ್ಬ್ರಹ್ಮಾದಿಭಿಃ ಶಪ್ತಾ ಋಷಿಭಿರ್ಮಾನುಷಾದಿಭಿಃ ॥

ಸೇತಿಹಾಸೈಸ್ತಥಾ ವೇದೈಃ ಸರ್ವೇ ಯಾಂತ್ಯಧರಂ ತಮಃ ।
ಸರ್ವಬ್ರಹ್ಮತ್ವವೇತ್ತಾರೋ ಜೀವಬ್ರಹ್ಮತ್ವವೇದಿನಃ ॥

ಅನ್ಯಸಾಮ್ಯವಿದೋ ವಿಷ್ಣೋರ್ವಿಷ್ಣುದ್ವೇಷ್ಟಾರ ಏವ ಚ ।
ಸರ್ವೇ ಯಾಂತಿ ತಮೋ ಘೋರಂ ನ ತೇಷಾಮುತ್ಥಿತಿಃ ಕ್ವಚಿತ್ ॥

ಇತಿ ಸ್ಕಾಂದೇ ।

ಪ್ರಪಂಚದ ಸೃಷ್ಟಿ ನಾಶ ಸಂಸಾರ ಮೋಕ್ಷಗಳು, ದೇವತೆಗಳು ಋಷಿಗಳು ಮುಂತಾದವರು, ಭೂಲೋಕ ಮುಂತಾದ ಲೋಕಗಳು, ಅನಾದಿ ಅನಂತ ಕಾಲಗಳಲ್ಲಿ ಸದಾ ಏಕಪ್ರಕಾರವಾಗಿಯೆ ಇರುತ್ತವೆ. ಜಗತ್ಪ್ರವಾಹ ಸತ್ಯವೆ, ಸರ್ವಥಾ ಮಿಥ್ಯೆಯಲ್ಲ ಎಂದು ಶ್ರುತ್ಯಾದಿಪ್ರಮಾಣಗಳಿಂದ ಸಿದ್ಧವಾಗಿದೆ. ಇದಕ್ಕೆ ವಿಪರೀತವಾಗಿ ಎಲ್ಲವನ್ನೂ ಮಿಥ್ಯೆ ಎನ್ನುವವರು ಎಲ್ಲರನ್ನೂ ಕೊಂದ ಪಾಪಕ್ಕೆ ಗುರಿಯಾಗುತ್ತಾರೆ. ಅದರಿಂದ ಬ್ರಹ್ಮಾದಿ ದೇವತೆಗಳು ಋಷಿಗಳು ಮನುಷ್ಯಾದಿಗಳು ಇತಿಹಾಸವೇದಾಭಿಮಾನಿಗಳು ಇವರೆಲ್ಲರಿಂದ ಶಾಪಗ್ರಸ್ತರಾಗಿ ಅಂಧಂತಮಸ್ಸನ್ನು ಹೊಂದುತ್ತಾರೆ. ಎಲ್ಲವೂ ಬ್ರಹ್ಮವೆಂದು, ಜೀವರು ಬ್ರಹ್ಮರೆಂದು, ವಿಷ್ಣುವಿಗೆ ಸದೃಶರಾದವರೂ ಉತ್ತಮರೂ ಅನ್ಯರಿರುವರೆಂದು ತಿಳಿಯುವವರು ವಿಷ್ಣುದ್ವೇಷಿಗಳೆನಿಸಿ ಭಯಂಕರವಾದ ತಮಸ್ಸನ್ನು ಹೊಂದುತ್ತಾರೆ. ಹಿಂದೆ ಎಂದೂ ಬರುವುದಿಲ್ಲ ಎಂದೂ ಸ್ಕಾಂದ ಪುರಾಣ ಹೇಳಿದೆ.

* * *

ಮುಂದೆ ಮೈತ್ರೇಯರು ಜಗತ್ಸಂಹಾರ ಮೂರು ಬಗೆ ಹೇಗೆ ಎಂದೂ ಪ್ರಾಕೃತಸೃಷ್ಟಿ ಏನೆಂಬುದನ್ನೂ ಹೇಳುತ್ತಾರೆ–

ಕಾಲದ್ರವ್ಯಗುಣೈರಸ್ಯ ತ್ರಿವಿಧಃ ಪ್ರತಿಸಂಕ್ರಮಃ ।
ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯಮಾತ್ಮನಃ ।
ದ್ವಿತೀಯಸ್ತ್ವಹಮಸ್ತತ್ರ ದ್ರವ್ಯಜ್ಞಾನಕ್ರಿಯಾದಯಃ ॥ ೧೪ ॥

ಪ್ರಪಂಚ ನಾಶವು ಕಾಲನಿಮಿತ್ತಕ, ದ್ರವ್ಯನಿಮಿತ್ತಕ ಮತ್ತು ಗುಣನಿಮಿತ್ತಕ ಎಂದು ಮೂರು ವಿಧ. ಚತುರ್ಮುಖನ ಅಭಿಮಾನಕ್ಕೊಳಪಟ್ಟ ಗುಣವೈಷಮ್ಯವೆಂಬ ಮಹತ್ತತ್ವಕ್ಕೂ ಅವನ ಶರೀರಕ್ಕೂ ಭಗವಂತನಿಂದಾಗುವ ಸೃಷ್ಟಿಯು ಪ್ರಾಕೃತಸೃಷ್ಟಿಗಳಲ್ಲಿ ಮೊದಲನೆಯ ಸೃಷ್ಟಿ, ಎರಡನೆಯದು ಅಹಂಕಾರಸೃಷ್ಟಿ, ಅಹಂಕಾರತತ್ವದಿಂದ ಪಂಚಭೂತಗಳೆಂಬ ದ್ರವ್ಯಗಳು,

ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಮನಸ್ಸು ಇವುಗಳ ಅಭಿಮಾನಿಗಳು ಹುಟ್ಟುತ್ತಾರೆ.

ತಾಮಸಸ್ಯ ಪದಾರ್ಥಸ್ಯ ಸತ್ತ್ವಂ ಹಿ ಲಯಕಾರಣಮ್ ।
ಸಾತ್ವಿಕಸ್ಯ ತಮಶ್ಚೈವ ತಯೋರಪಿ ರಜಃ ಕ್ವಚಿತ್ ॥

ಗುಣತೋಽಯಂ ಲಯಃ ಪ್ರೋಕ್ತೋ ದ್ರವ್ಯತಸ್ತು ವಿರೋಧಿನಾ ।
ಕಾಲತಃ ಕಾಲಸಂಖ್ಯಾಜೋ ಲಯಃ ಸರ್ವಸ್ಯ ವಸ್ತುನಃ ॥

ಇತಿ ಬ್ರಹ್ಮತರ್ಕೇ ।

ತಾಮಸವಾದ ದುಃಖಮೋಹಾದಿಗಳಿಗೆ ಅಭಿವೃದ್ಧವಾದ ಸತ್ವಗುಣ ನಾಶಕ. ಸಾತ್ವಿಕವಾದ ಜ್ಞಾನಾನಂದಾದಿಗಳಿಗೆ ಅಭಿವೃದ್ಧವಾದ ತಮೋಗುಣ ನಾಶಕ. ತಾಮಸಸಾತ್ವಿಕಗಳೆರಡಕ್ಕೂ ಅಭಿವೃದ್ಧವಾದ ರಜೋಗುಣ ನಾಶಕ. ಇದು ಗುಣನಿಮಿತ್ತಕವಾದ ಲಯ. ಪ್ರಕಾಶದಿಂದ ಕತ್ತಲೆಗೆ, ಪಿತ್ಥದಿಂದ ಕಫಕ್ಕೆ ಹೀಗೆ ಒಂದು ದ್ರವ್ಯಕ್ಕೆ ವಿರೋಧಿಯಾದ ಇನ್ನೊಂದು ದ್ರವ್ಯದಿಂದ ಉಂಟಾಗುವ ನಾಶವು ದ್ರವ್ಯನಿಮಿತ್ತಕವಾದ ಲಯ. ಮನುಷ್ಯನಿಗೆ ನೂರು ವರ್ಷ ಆಯುಷ್ಯ ಎಂದು ಮುಂತಾಗಿ ಕಾಲಸಂಖ್ಯಾಪ್ರಯುಕ್ತವಾದ ಲಯವು ಚೇತನಾಚೇತನಾತ್ಮಕ ಸಕಲವಸ್ತುಗಳಿಗೆ ಉಂಟಾಗುತ್ತದೆ. ಇದು ಕಾಲನಿಮಿತ್ತಕವಾದ ಲಯ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ತಮಸೋ ರಜಸ್ತು ದ್ವಿಗುಣಂ ರಜಸಃ ಸತ್ವಮೇವ ಚ ।
ಪರಿಮಾಣತ ಏವಂ ಸ್ಯುಸ್ತ್ರಯಃ ಪ್ರಕೃತಿಜಾ ಗುಣಾಃ ॥

ತತ್ರ ಸತ್ವಂ ಕೇವಲಂ ಸ್ಯಾದ್ ರಜಸ್ಯಪಿ ಶತಾಧಿಕಮ್ ।
ಸತ್ವಂ ರಜಃ ಶತಾಂಶಂ ತು ತಮಸ್ತತ್ರ ಪ್ರಕೀರ್ತಿತಮ್ ॥

ತಮಸ್ಯಪಿ ತಥಾ ಸತ್ವಂ ತಮಸಸ್ತು ದಶೋತ್ತರಮ್ ।
ತದ್ದಶಾಂಶೇನ ತು ರಜೋ ಮೂಲಜಂ ಯದ್ರಜಸ್ತು ತತ್ ॥

ವಿಲಯೇ ದಶಾಂಶತಃ ಸತ್ವ ಏಕಾಂಶೇನ ತಮಸ್ಯಪಿ ।
ಮಿಶ್ರಿತಂ ಭವತಿ ಹ್ಯೇತಾಂ ಸಾಮ್ಯಾವಸ್ಥಾಂ ವಿದುರ್ಬುಧಾಃ ॥

ಯದಾ ತು ತದ್ರಜಃ ಸರ್ವಂ ತಮಸಾ ಸಹ ಸಂಗತಮ್ ।
ತದಾ ತ್ವಾಹುರ್ಮಹತ್ತತ್ವಂ ತಚ್ಚತುರ್ಭಾಗಸಂಭವಮ್ ॥

ತತ್ರ ತ್ರಿಭಾಗೋ ರಜಸ ಏಕೋಽಂಶಸ್ತಮಸಸ್ತಥಾ ।
ತದಾಹುರ್ಬ್ರಹ್ಮಣೋ ರೂಪಂ ಗುಣವೈಷಮ್ಯನಾಮಕಮ್ ॥

ತದೇವ ಕೇವಲಂ ಸತ್ತ್ವಮಿತರಾಪೇಕ್ಷಯಾ ಭವೇತ್ ।
ಶ್ರೀಮೂರ್ಲಸತ್ತ್ವಂ ವಿಜ್ಞೇಯಾ ಭೂಮೂರ್ಲರಜ ಉಚ್ಯತೇ ॥

ಮೂಲಂ ತಮಸ್ತಥಾ ದುರ್ಗಾ ಮಹಾಲಕ್ಷ್ಮೀಸ್ತ್ರಿಮೂಲಿಕಾ ।
ಗುಣೇಭ್ಯೋ ಗುಣಮೂಲಾಚ್ಚ ಯೋಽತೀತಃ ಸ ಜನಾರ್ದನಃ ॥

ಯದ್ ರಜೋ ಮೂಲರಜಸಿ ಮೂಲೇ ತಮಸಿ ಯದ್ ರಜಃ ।
ತಮಶ್ಚ ಮೂಲೇ ತಮಸಿ ಮಹತ್ತತ್ತ್ವಂ ತದಾತ್ಮಕಮ್ ॥

ದಶಾಂಶಾಸ್ತತ್ರ ಸತ್ತ್ವಂ ಸ್ಯಾದ್ ಏಕೋ ರಜಸ ಏವ ಚ ।
ತದ್ದಶಾಂಶಂ ತಮೋ ಜ್ಞೇಯಂ ಅಹಂಕಾರಸ್ತದಾತ್ಮಕಃ ॥

ಸ ರುದ್ರಸ್ತಾಮಸೋ ಜ್ಞೇಯೋ ವಿರಿಂಚಾಪೇಕ್ಷಯೈವ ತು ।
ಇತರಾಪೇಕ್ಷಯಾ ಸತ್ತ್ವಂ ಸತ್ತ್ವಾದ್ಯಾಸ್ತದ್ವದಸ್ಯ ಚ ॥

ತತ್ತಮೋಽಂಶಾತ್ ಸಾತ್ತ್ವಿಕಾಂಶೋ ಮನಆದ್ಯಾಃ ಪ್ರಕೀರ್ತಿತಾಃ ।
ರಾಜಸೋಽಂಶಸ್ತ್ವಿಂದ್ರಿಯಾಣಿ ತಾಮಸೋಽಂಶಶ್ಚ ಖಾದಯಃ ॥
ಇತ್ಯಾದಿ ತತ್ತ್ವವಿವೇಕೇ ॥

ತ್ರಿಗುಣಾತ್ಮಕ ಮೂಲಪ್ರಕೃತಿಯಿಂದ ಬಂದ ತ್ರಿಗುಣರಾಶಿಯಲ್ಲಿ ತಮೋಗುಣಕ್ಕಿಂತ ರಜೋಗುಣವೂ ರಜೋಗುಣಕ್ಕಿಂತ ಸತ್ತ್ವಗುಣವೂ ಪರಿಮಾಣದಲ್ಲಿ ಇಮ್ಮಡಿ ಇರುತ್ತದೆ. ಇವುಗಳಲ್ಲಿ ಸತ್ತ್ವರಾಶಿಯು ರಜೋಗುಣ ತಮೋಗುಣಗಳಿಂದ ಮಿಶ್ರಿತವಾಗಿರುವುದಿಲ್ಲ. ರಜೋರಾಶಿಯಲ್ಲಿ ರಜೋಗುಣ ಕ್ಕಿಂತ ನೂರುಪಾಲು ಅಧಿಕವಾಗಿ ಸತ್ತ್ವಗುಣವಿರುತ್ತದೆ. ರಜೋಗುಣದ ನೂರರಲ್ಲಿ ಒಂದಂಶದಷ್ಟು ತಮೋಗುಣವಿರುತ್ತದೆ. ತಮೋರಾಶಿಯಲ್ಲಿ ತಮೋಗುಣಕ್ಕಿಂತ ಹತ್ತುಪಾಲು ಅಧಿಕವಾಗಿ ಸತ್ತ್ವಗುಣವಿರುತ್ತದೆ. ತಮೋಗುಣದ ಹತ್ತನೇ ಒಂದರಷ್ಟು ರಜೋಗುಣ. (ಈ ರಜೋರಾಶಿ ತಮೋರಾಶಿಗಳಲ್ಲಿ ಸತ್ತ್ವಗುಣವೇ ಅಧಿಕವಾಗಿದ್ದರೂ ರಜಸ್ತಮೋಗುಣಗಳ ಪೈಕಿ ರಜೋಗುಣ ಅಧಿಕವಿದ್ದರೆ ಅದು ರಜೋರಾಶಿ, ತಮೋಗುಣ ಅಧಿಕವಿದ್ದರೆ ತಮೋರಾಶಿ ಎನಿಸುತ್ತದೆ.) ಇದು ತ್ರಿಗುಣಗಳ ವೈಷಮ್ಯಾವಸ್ಥೆ.

ತ್ರಿಗುಣಗಳ ಸಾಮ್ಯಾವಸ್ಥೆ ಹೀಗೆ— ಮಹತ್ತತ್ವದಲ್ಲಿ ಸೇರಿರುವ ಮೂಲರಜೋರಾಶಿಯಿಂದ ಬಂದಿರುವ ರಜೋಗುಣವು ಹನ್ನೆರಡು ಭಾಗಗಳಾಗಿ ವಿಭಾಗಗೊಂಡು ಹತ್ತುಭಾಗಗಳು ಸತ್ವರಾಶಿಯಲ್ಲಿಯೂ ಒಂದು ಭಾಗ ತಮೋ ರಾಶಿಯಲ್ಲಿಯೂ ಬಂದು ಸೇರುತ್ತದೆ. ಇನ್ನೊಂದು ಭಾಗ ರಜೋರಾಶಿಯಲ್ಲಿ ಇರುತ್ತದೆ. ಹೀಗೆ ಪ್ರಳಯದಲ್ಲಿ ಮೂರುರಾಶಿಗಳಲ್ಲಿಯೂ ಗುಣತ್ರಯ ಮಿಶ್ರಣವಿರುವುದರಿಂದ ಸಾಮ್ಯವೇ ಇದೆ. ಇದೇ ಸಾಮ್ಯಾವಸ್ಥೆ. (ಮುಂದೆ ಈ ರಾಶಿಗಳೂ ಮೂಲಪ್ರಕೃತಿಯಲ್ಲಿ ಲೀನವಾದಾಗ ಗುಣತ್ರಯರೂಪದಿಂದ ಸಾಮ್ಯಾ ವಸ್ಥೆಯಲ್ಲಿಯೇ ಇರುತ್ತವೆ. ಸೃಷ್ಟಿಕಾಲದಲ್ಲಿ ಸತ್ವರಾಶಿ ಶುದ್ಧಸತ್ವಾತ್ಮಕ. ರಜಸ್ತಮೋರಾಶಿಗಳು ಗುಣತ್ರಯಮಿಶ್ರಸ್ವರೂಪವೆಂದು ವೈಷಮ್ಯವಿರುತ್ತದೆ. ಗುಣಗಳ ಸಂಖ್ಯೆಯಿಂದ ಸಾಮ್ಯವೈಷಮ್ಯಗಳಲ್ಲ.)

ಸೃಷ್ಟಿಕಾಲ ಬಂದಾಗ ಗುಣತ್ರಯಸೃಷ್ಟಿಯ ಅನಂತರ ಮಹತ್ತತ್ವದ ಹನ್ನೆರಡು ಭಾಗಗಳಲ್ಲಿ ಹತ್ತು ಭಾಗ ತಿರುಗಿ ಸತ್ವರಾಶಿಯಿಂದ ಬಂದು ರಜೋರಾಶಿಯಲ್ಲಿರುವ ಇನ್ನೊಂದು ಭಾಗದೊಂದಿಗೆ ಸೇರುತ್ತದೆ. ಒಂದು ಭಾಗ ತಮೋರಾಶಿಯಲ್ಲಿ ಸೇರುತ್ತದೆ. ಆ ತಮೋರಾಶಿಯ ಒಂದು ಭಾಗ ಮತ್ತು ರಜೋರಾಶಿಯ ಮೂರುಭಾಗ ಎಂದು ನಾಲ್ಕು ಭಾಗಗಳಿಂದ ಮಹತ್ತತ್ವ ಉತ್ಪತ್ತಿಯಾಗುತ್ತದೆ. ಈ ಮಹತ್ತತ್ವವು ಚತುರ್ಮುಖನಿಗೆ ಶರೀರದಂತಿರುತ್ತದೆ. ಅದರಲ್ಲಿರುವ ಭಾಗಗಳಲ್ಲಿ ಗುಣಗಳು ವಿಷಮ ಸಂಖ್ಯೆಯಲ್ಲಿರುವುದರಿಂದ ಅದು ಗುಣವೈಷಮ್ಯವೆನಿಸುತ್ತದೆ. ಮತ್ತು ಸತ್ವರಾಶಿ ಶುದ್ಧಸತ್ವಾತ್ಮಕ, ರಜಸ್ತಮೋರಾಶಿಗಳು ಮಿಶ್ರವೆಂಬ ವೈಷಮ್ಯವಿರುವುದರಿಂದಲೂ ಮಹತ್ತತ್ವವು ಗುಣವೈಷಮ್ಯವೆನಿಸುತ್ತದೆ. ಅಹಂಕಾರಾದಿಗಳಿಗಿಂತ ಮಹತ್ತತ್ವದಲ್ಲಿ ಸತ್ವ ಅಧಿಕವಾಗಿರುವುದರಿಂದ ಅದಕ್ಕೆ ಶುದ್ಧಸತ್ವಾತ್ಮಕವೆಂದು ವ್ಯವಹಾರ.

ಶ್ರೀದೇವಿ ಮೂಲಸತ್ವವೆನಿಸುತ್ತಾಳೆ, ಭೂದೇವಿ ಮೂಲರಜವೆನಿಸುತ್ತಾಳೆ. ದುರ್ಗಾದೇವಿ ಮೂಲತಮವೆನಿಸುತ್ತಾಳೆ. ಅವಳಿಂದ ಅಭಿಮನ್ಯಮಾನವಾದ ಪ್ರಯುಕ್ತ ಗುಣಗಳೂ ಮೂಲಸತ್ವಾದಿನಾಮಗಳಿಂದ ಕರೆಸಿಕೊಳ್ಳುತ್ತವೆ. ಹೀಗೆ ಮೂರು ಮೂಲಗಳು ಮಹಾಲಕ್ಷ್ಮಿಯ ಅಂಶಗಳಾದ್ದರಿಂದ ಅವಳು 'ತ್ರಿಮೂಲಿಕಾ' ಎನಿಸುತ್ತಾಳೆ ಗುಣಗಳಿಗಿಂತಲೂ ಮಹಾಲಕ್ಷ್ಮಿಗಿಂತಲೂ ಶ್ರೇಷ್ಠ ಶ್ರೀಹರಿ.

ಮಹತ್ತತ್ವಕ್ಕೆ ಉಪಾದಾನಗಳು ಮೂಲರಜಸ್ಸೆನಿಸುವ ರಜೋರಾಶಿಯಿಂದ ಬಂದ ಹನ್ನೊಂದು ಭಾಗಗಳು ಮತ್ತು ಮೂಲತಮಸ್ಸೆನಿಸುವ ತಮೋರಾಶಿಯಿಂದ ಬಂದ ರಜೋಗುಣ, ತಮೋಗುಣ ಗಳು. (ಅಂದರೆ ಮಹತ್ತತ್ವದ ನಾಲ್ಕು ಭಾಗಗಳಲ್ಲಿ ಒಂದಾದ ತಮೋಭಾಗಕ್ಕೆ ತಮೋರಾಶಿಯ ತಮೋಗುಣ ಉಪಾದಾನ. ಉಳಿದ ಮೂರು ಭಾಗಗಳಲ್ಲಿ ಒಂದು ಭಾಗಕ್ಕೆ ತಮೋರಾಶಿಯ ರಜೋಗುಣ ಉಪಾದಾನ. ಉಳಿದ

ಎರಡು ಭಾಗಗಳಿಗೆ ರಜೋರಾಶಿಯ ರಜೋಗುಣ ಉಪಾದಾನ. ಅವುಗಳಲ್ಲಿಯೂ ಒಂದು ಭಾಗ ಹಿಂದೆ ಪ್ರಳಯದಲ್ಲಿ ಸತ್ವರಾಶಿಯಲ್ಲಿ ಸೇರಿದ್ದು ಸೃಷ್ಟಿಕಾಲದಲ್ಲಿ ರಜೋರಾಶಿಗೆ ಬಂದು ಸೇರಿದ ಭಾಗವೇ ಆಗಿದೆ.) ಅದರಿಂದ ಮಹತ್ತತ್ವದಲ್ಲಿ ಸತ್ವಗುಣ ಹತ್ತು ಭಾಗ, ರಜೋಗುಣ ಒಂದು ಭಾಗ, ಅದರ ಹತ್ತನೆ ಒಂದಂಶ ತಮೋಗುಣ. (ಹೀಗೆ ಗುಣಗಳ ಪರಿಮಾಣದಲ್ಲಿ ವೈಷಮ್ಯವಿರುವುದರಿಂದ 'ಗುಣವೈಷಮ್ಯ'ವೆನಿಸಿರುವ ಮಹತ್ತತ್ವದ ಸೃಷ್ಟಿಯೆ ಪ್ರಾಕೃತಸೃಷ್ಟಿಯಲ್ಲಿ ಮೊದಲನೆಯದು.)

ಅಹಂಕಾರತತ್ವಕ್ಕೆ ಮಹತ್ತತ್ವದಲ್ಲಿ ಸೇರಿದ ತಮೋಭಾಗ ಉಪಾದಾನಕಾರಣ. ಇದಕ್ಕೆ ಅಭಿಮಾನಿ ರುದ್ರ. ಇವನಲ್ಲಿ ಇಂದ್ರಾದಿಗಳಿಗಿಂತ ಹೆಚ್ಚು ಸತ್ವವಿದ್ದರೂ ಚತುರ್ಮುಖನಿಗಿಂತ ಹೆಚ್ಚು ತಮಸ್ಸು ಇರುವುದರಿಂದ ತಾಮಸನೆನಿದ್ದಾನೆ. ಈ ಅಹಂಕಾರದಲ್ಲಿಯೂ ಮಹತ್ತತ್ವದಂತೆಯೇ ಸತ್ವಾದಿಗುಣಗಳು ತಾರತಮ್ಯದಿಂದಿರುತ್ತವೆ. ಅದರ ತಮೋಂಶವು ಸಾತ್ವಿಕ ರಾಜಸ ತಾಮಸ ಎಂದು ಮೂರು ವಿಧ. ಸಾತ್ವಿಕಾಂಶದಿಂದ ಮನಸ್ಸು ಮತ್ತು ಇಂದ್ರಿಯಾಭಿಮಾನಿಶರೀರಗಳು ಹುಟ್ಟುತ್ತವೆ. ರಾಜಸಾಂಶದಿಂದ ಇಂದ್ರಿಯಗಳು, ಮತ್ತು ಬುದ್ಧಿ ಪ್ರಾಣರು, ತಾಮಸಾಂಶದಿಂದ ತನ್ಮಾತ್ರೆಗಳು ಮತ್ತು ಪಂಚಭೂತಗಳು ಹುಟ್ಟುವುವೆಂದು ಮುಂತಾಗಿ ತತ್ವವಿವೇಕಗ್ರಂಥದಲ್ಲಿ ಉಕ್ತವಾಗಿದೆ.

* * *

ಪ್ರಾಕೃತಸೃಷ್ಟಿಯಲ್ಲಿ ಮೂರನೆ ನಾಲ್ಕನೆ ಮತ್ತು ಐದನೆ ಸೃಷ್ಟಿಗಳನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಭೂತಸರ್ಗಸ್ತೃತೀಯಸ್ತು ತನ್ಮಾತ್ರದ್ರವ್ಯಶಕ್ತಿಮಾನ್ ।
ಚತುರ್ಥ ಐಂದ್ರಿಯಃ ಸರ್ಗೋ ಯಸ್ತು ಜ್ಞಾನಕ್ರಿಯಾತ್ಮಕಃ ।
ವೈಕಾರಿಕೋ ದೇವಸರ್ಗಃ ಪಂಚಮೋ ಯನ್ಮಯಂ ಮನಃ ॥ ೧೬ ॥

ಮೂರನೆಯ ಸೃಷ್ಟಿ ಆಕಾಶಾದಿಪಂಚಭೂತಗಳ ಸೃಷ್ಟಿ. ಈ ಪಂಚಭೂತಗಳಲ್ಲಿ ತನ್ಮಾತ್ರಶಕ್ತಿಯೂ ದ್ರವ್ಯಶಕ್ತಿಯೂ ಇದೆ. ನಾಲ್ಕನೆಯದು ಇಂದ್ರಿಯಸೃಷ್ಟಿ. ಇಂದ್ರಿಯಗಳು ಜ್ಞಾನೇಂದ್ರಿಯ ಕರ್ಮೇಂದ್ರಿಯರೂಪಗಳಾಗಿವೆ. ಐದನೆಯದು ಜ್ಞಾನ ಕ್ರಿಯಾಜನಕರಾದ ಇಂದ್ರಿಯಾಭಿಮಾನಿದೇವತೆಗಳ ಮತ್ತು ಮನಸ್ಸಿನ ಸೃಷ್ಟಿ.

ಭೂತಾನಿ ದ್ರವ್ಯಶಕ್ತೀನಿ ಭೂತೇಷು ದ್ರವಣಂ ಯತಃ ।
ತಥಾ ತನ್ಮಾತ್ರಶಕ್ತೀನಿ ಶಬ್ದಾದ್ಯಾತ್ಮಕತಾ ಯತಃ ॥

ಕ್ರಿಯಾಶಕ್ತೀನಿ ವಾಗಾದ್ಯಾನೀಂದ್ರಿಯಾಣೀತರಾಣಿ ತು ।
ಜ್ಞಾನಶಕ್ತೀನಿ ಮನಸಾ ದೇವಾಶ್ಚ ಜ್ಞಾನಶಕ್ತಯಃ ॥

ಏತೇಷಾಂ ಮೂಲಭೂತತ್ವಾದಹಂಕಾರಸ್ತ್ರಿಶಕ್ತಿಮಾನ್ ।
ಮಾನುಷಾಪೇಕ್ಷಯಾ ದೇವಾಃ ಸಾತ್ವಿಕಾಃ ಪರಿಕೀರ್ತಿತಾಃ ॥

ತತ್ರಾಪಿ ಸಾತ್ವಿಕಾಃ ಪ್ರೋಕ್ತಾಸ್ತಾತ್ವಿಕಾ ಯಾಸ್ತು ದೇವತಾಃ ।
ತತ್ರಾಪಿ ಸಾತ್ವಿಕೋ ರುದ್ರಸ್ತತ್ರಾಪಿ ತು ಚತುರ್ಮುಖಃ ॥

ಅವಿಕಾರೌ ಬ್ರಹ್ಮರುದ್ರೌ ದೇಹಭೇದಾದಿಸಂಭವೇ ।
ವಿಕಾರವಂತ ಇಂದ್ರಾದ್ಯಾಸ್ತಸ್ಮಾದ್ ವೈಕಾರಿಕಾ ಮತಾಃ ॥

ತ ಏವೇಂದ್ರಿಯರೂಪೇಣ ಯತಸ್ತ್ವತಿವಿಕಾರಿಣಃ ।
ಜ್ಞಾನಮಾತ್ರಗುಣೋದ್ರಿಕ್ತಾಸ್ತಸ್ಮಾತ್ ತೈಜಸನಾಮಕಾಃ ॥

ಅವಿಕಾರಿತ್ವಯೋಗ್ಯತ್ವಂ ನಿವೃತ್ತಂ ಹೀಂದ್ರಿಯೇಷು ತು ।
ವೈಕಾರಿಕತ್ವನಾಮಾಪಿ ತತಸ್ತೇಷಾಂ ನ ವಿದ್ಯತೇ ॥

ಯಥಾ ವಿಪ್ರಕುಲೇ ಮೂರ್ಖೋ ಮೂರ್ಖ ಇತ್ಯಭಿಧೀಯತೇ ।
ವಿದ್ಯಾಯೋಗ್ಯತ್ವತಃ ಶೂದ್ರೋ ನ ಮೂರ್ಖೋ ಮೂರ್ಖ ಏವ ಸನ್ ॥

ತಾಮಸಾನಿ ಹಿ ಭೂತಾನಿ ಕಿಂಚಿದ್ ವ್ಯವಹಿತತ್ವತಃ ।
ಜ್ಞಾನಸ್ಯ ಸುಷ್ಠುಜ್ಞತ್ವೇಽಪಿ ಪೂರ್ಣಜ್ಞಾನೋ ಹರಿಃ ಸ್ವಯಮ್ ॥
ಇತಿ ಚ ॥

ಪಂಚಭೂತಗಳನ್ನು ಜನರು ಸ್ಪರ್ಧೆಯಿಂದ ಧಾವಿಸಿ ಸ್ಪರ್ಶಿಸಬಲ್ಲರು. ಆದರಿಂದ ಅವು ದ್ರವಣಪ್ರಾಪ್ಯವಾಗಿದ್ದು ದ್ರವ್ಯಶಕ್ತಿ ಉಳ್ಳವುಗಳೆನಿಸುತ್ತವೆ. ಅವುಗಳೇ ತನ್ಮಾತ್ರೆಗಳಾದ ಶಬ್ದಾದಿಗಳ ಪರಿಣಾಮರೂಪವಾದ್ದರಿಂದ ತನ್ಮಾತ್ರಾಶಕ್ತಿ ಉಳ್ಳವುಗಳೆನಿಸುತ್ತವೆ. ವಾಗಾದಿ ಕರ್ಮೇಂದ್ರಿಯಗಳು ಕ್ರಿಯಾಜನಕವಾಗುವು ದರಿಂದ ಕ್ರಿಯಾತ್ಮಕಗಳೆನಿಸುವುವು. ಚಕ್ಷುರಾದಿ ಇಂದ್ರಿಯಗಳು ಜ್ಞಾನಜನಕ ಗಳಾದ್ದರಿಂದ ಜ್ಞಾನಾತ್ಮಕವೆನಿಸುತ್ತವೆ. ಇಂದ್ರಿಯಾಭಿಮಾನಿದೇವತೆಗಳು ಮತ್ತು ಮನಸ್ಸು ಜ್ಞಾನಕ್ರಿಯಾಜನಕಗಳೇ ('ಜ್ಞಾನಕ್ರಿಯಾತ್ಮಕಃ' ಎಂಬುದನ್ನು ಇಂದ್ರಿಯಸರ್ಗದಂತೆ ದೇವಸರ್ಗಕ್ಕೂ ಅನ್ವಯಿಸಬೇಕು ಎಂದರ್ಥ.) ಅಹಂಕಾರ ತತ್ವದಲ್ಲಿ 'ಯತ್ರ ದ್ರವ್ಯಜ್ಞಾನಕ್ರಿಯಾದಯಃ' ಎಂದು ಹೇಳಿದ್ದು ಭೂತ ಇಂದ್ರಿಯ ದೇವ ಜನಕ ಶಕ್ತಿ ಉಳ್ಳದ್ದೆಂಬ ಅಭಿಪ್ರಾಯದಿಂದ.

ಮನುಷ್ಯರಿಗಿಂತ ಅತಾತ್ವಿಕ ದೇವತೆಗಳು ಹೆಚ್ಚು ಸಾತ್ವಿಕರು. ಅವರಿಗಿಂತ ತತ್ವಾಭಿಮಾನಿ ಇಂದ್ರಾದಿಗಳು, ಅವರಿಗಿಂತ ರುದ್ರ, ಅವನಿಗಿಂತಲೂ ಚತುರ್ಮುಖ ಹೆಚ್ಚು ಸಾತ್ವಿಕರು. ದೇಹವಿಶೇಷಗಳಿಂದ ಅಭಿಮಾನಿರೂಪಗಳಿಂದ ಹುಟ್ಟುವಾಗಲೂ ಬ್ರಹ್ಮರುದ್ರಗರುಡರು ಮಾತ್ರವಿಕಾರರಹಿತರು.

ಇಂದ್ರಾದಿದೇವತೆಗಳು ವಿಕಾರ ಉಳ್ಳವರೇ. ಆದರಿಂದ ಅವರು ವೈಕಾರಿಕರೆನಿಸುತ್ತಾರೆ. ಅವರೇ ಪುನಃ ಇಂದ್ರಿಯಾಭಿಮಾನಿಗಳಾಗಿ ಜನಿಸಿದಾಗ ಇನ್ನೂ ಹೆಚ್ಚು ವಿಕಾರ ಉಳ್ಳವರೇ ಆದರೂ ವೈಕಾರಿಕರೆಂಬ ಹೆಸರು ಆಗ ಇಲ್ಲ. ಹಿಂದಿನಂತೆ ಜ್ಞಾನರೂಪವಾದ ಗುಣ ಚೆನ್ನಾಗಿಯೇ ಇರುವುದರಿಂದ ತೈಜಸರೆಂಬ ಹೆಸರೇ ಬರುತ್ತದೆ. ಹೆಚ್ಚು ವಿಕಾರವಿದ್ದರೂ ವೈಕಾರಿಕರೆಂಬ ಹೆಸರು ಏಕೆ ಇಲ್ಲ ಎಂದರೆ ಮೊದಲು ಅವರು ವೈಕಾರಿಕಾಹಂಕಾರದಿಂದ ಹುಟ್ಟಿದಾಗ ಅವಿಕಾರಿತ್ವಯೋಗ್ಯತೆ ಇದ್ದೂ ವಿಕಾರಹೊಂದಿದ್ದರಿಂದ ವೈಕಾರಿಕರೆಂಬ ಹೆಸರು ಇದ್ದಿತು. ಅವರೇ ಇಂದ್ರಿಯಾಭಿಮಾನಿಗಳಾಗಿ ಹುಟ್ಟಿದಾಗ ಅವಿಕಾರಿತ್ವ ಯೋಗ್ಯತೆಯೇ ಇರುವುದಿಲ್ಲ. ಏಕೆಂದರೆ ಹಿಂದಿನ ಜನ್ಮದಲ್ಲಿ ವಿಕಾರ ಬಂದಿದೆ. ಅವಿಕಾರಿತ್ವಯೋಗ್ಯತೆ ಇದ್ದೂ ವಿಕಾರ ಹೊಂದಿದರೆ ಮಾತ್ರ ವೈಕಾರಿಕರೆಂಬ ಹೆಸರು ನ್ಯಾಯ. ಇದಕ್ಕೆ ಉದಾಹರಣೆ– ಬ್ರಾಹ್ಮಣಕುಲದಲ್ಲಿ ಹುಟ್ಟಿ ವೈದಿಕಜ್ಞಾನಯೋಗ್ಯತೆ ಪಡೆದಿದ್ದೂ ಜ್ಞಾನಸಂಪಾದಿಸದಿದ್ದರೆ ಅವನನ್ನು ಮೂರ್ಖನೆಂದು ಕರೆಯುತ್ತಾರೆ. ಶೂದ್ರನಿಗೆ ವೈದಿಕಜ್ಞಾನಯೋಗ್ಯತೆಯೆ ಇಲ್ಲದ್ದರಿಂದ ಅವನು ಜ್ಞಾನ ಸಂಪಾದಿಸದಿದ್ದರೂ ಮೂರ್ಖನೆನಿಸುವುದಿಲ್ಲ. ಹಾಗೇ ಇದು. ಭೂತಾಭಿಮಾನಿ ಗಳಾಗಿರುವಾಗಲೂ ದೇವತೆಗಳು ಚೆನ್ನಾಗಿ ಜ್ಞಾನಿಗಳೇ ಆಗಿದ್ದರೂ ಇಂದ್ರಿಯಾ ಭಿಮಾನಿಗಳಾಗಿ ಇರುವಾಗಿನಷ್ಟು ಜ್ಞಾನ ಇಲ್ಲ ವಾದ್ದರಿಂದ ತಾಮಸರೆಂದು ಆಗ ಹೆಸರು. ತೈಜಸ ಎಂದಲ್ಲ. ಶ್ರೀಹರಿಯೊಬ್ಬನೇ ಸದಾ ಪೂರ್ಣಜ್ಞಾನ ಉಳ್ಳವನು' ಎಂದೂ ಹೇಳಿದೆ.

* * *

ಪ್ರಾಕೃತಸೃಷ್ಟಿಯಲ್ಲಿ ಕೊನೆಯದಾದ ನವವಿಧಸೃಷ್ಟಿಯಲ್ಲಿ ಆರನೆಯದಾದ ಅವಿದ್ಯಾಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಷಷ್ಠಸ್ತು ತಮಸಃ ಸರ್ಗೋ ಯಸ್ತ್ವಬುದ್ಧಿಕೃತಃ ಪ್ರಭೋಃ ।
ಷಡಿಮೇ ಪ್ರಾಕೃತಾಃ ಸರ್ಗಾ ವೈಕೃತಾನಪಿ ಮೇ ಶೃಣು ॥ ೧೭ ॥

ಭಗವಂತನ ವಿಶೇಷಧ್ಯಾನ ಮಾಡಿ ಭೂತದಲ್ಲಿರುವ ತಮೋಭಾಗದಿಂದ ಚತುರ್ಮುಖನು ಅವಿದ್ಯೆಯನ್ನು ಹುಟ್ಟಿಸಿದ. ಇದು ಆರನೇ ಸೃಷ್ಟಿ. ಹೀಗೆ ಆರು ಪ್ರಾಕೃತಸೃಷ್ಟಿಗಳು. ಇನ್ನು ವೈಕೃತಸೃಷ್ಟಿಗಳನ್ನೂ ಹೇಳುತ್ತೇನೆ ಕೇಳು.

[೧]ಇಲ್ಲಿ 'ಅಬುದ್ಧಿಕೃತಃ' ಎಂದರೆ ಜೀವರಿಗೆ ಆವರಣ ವಿಕ್ಷೇಪಗಳನ್ನು ಮಾಡುವ ಅವಿದ್ಯೆಯ ಸೃಷ್ಟಿ ಆರನೆಯದು ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಬ್ರಹ್ಮನಿಗೆ ಅರಿವಿಲ್ಲದಂತೆಯೇ ಅಂತರ್ಯಾಮಿ ಹರಿಯ ಸಂಕಲ್ಪದಂತೆ ಪ್ರಕೃತಿ ಮಂಡಲಾತ್ಮಕವಾದ ಬ್ರಹ್ಮಾಂಡದ ಸೃಷ್ಟಿ ಆರನೆಯದೆಂದು ವೀರರಾಘವವ್ಯಾಖ್ಯಾನ. ಮತ್ತು 'ಅಬುದ್ಧಿಕೃತಃ ಎಂಬುದಕ್ಕೆ ಶ್ರೀಧರವ್ಯಾಖ್ಯಾನ ಸರಿಯಿಲ್ಲ, ಬ್ರಹ್ಮನಿಗೆ ಅರಿವಿಲ್ಲದೆಯೆ ಸ್ಥಾವರಾದಿಸೃಷ್ಟಿಯಾಯಿತೆಂದು ವಿಷ್ಣುಪುರಾಣ ಹೇಳುವುದರಿಂದ ಹಾಗೇ ವ್ಯಾಖ್ಯಾನ ಮಾಡಬೇಕು' ಎನ್ನುತ್ತದೆ ವೀರರಾಘವವ್ಯಾಖ್ಯಾನ. ತಮಸ್ಸೆಂದರೆ ಅಂಧತಾಮಿಸ್ರಾದಿ ಪಂಚಪರ್ವ ಅವಿದ್ಯೆಯಲ್ಲ, ಅದು ಅಜ್ಞಾನಮೋಹಿತರಾದ ಜೀವರ ಸ್ವಭಾವಸೂಚಕವಾದ್ದರಿಂದ ವೈಕೃತಸರ್ಗದಲ್ಲಿ ಸೇರುತ್ತದೆ. ಅದರಿಂದ ಬ್ರಹ್ಮಾಂಡ ಸೃಷ್ಟಿಯೆ ಆರನೆಯದೆಂದು ಶುಕದೇವವ್ಯಾಖ್ಯಾನ. ಇವೆಲ್ಲವೂ ತಾತ್ಪರ್ಯದಲ್ಲಿ ಹೇಳಿದ ಪ್ರಮಾಣಗಳಿಗೆ ವಿರುದ್ಧ.

'ಪ್ರಭೋಃ' ಎಂದು ಭಾಗವತದಲ್ಲಿ, 'ಮಹಾತ್ಮನಃ' ಎಂದು ತಾತ್ಪರ್ಯದಲ್ಲಿ ಹೇಳಿದೆ. ಸರ್ವಜ್ಞನಾದ ಚತುರ್ಮುಖನಿಂದ ಎಂದರ್ಥ. ಸರ್ವಜ್ಞನಿಂದ ತನಗರಿವಿಲ್ಲದೇ ಅನವಧಾನದಿಂದ ಸೃಷ್ಟಿ ಎನ್ನುವುದು ವ್ಯಾಹತ. ಬುದ್ಧಿಪೂರ್ವಕವಲ್ಲದ ಶ್ವಾಸಾದಿಕಾರ್ಯಗಳಂತೆ ಅನಾಯಾಸವಾಗಿ ಬ್ರಹ್ಮ ಅವಿದ್ಯಾ ಸೃಷ್ಟಿಮಾಡಿದ. ಮತ್ತು 'ಅ' ಎಂದರೆ ಪರಮಾತ್ಮ. ಅವನಲ್ಲಿ ಬುದ್ಧಿ. ಪರಮಾತ್ಮಧ್ಯಾನಪೂರ್ವಕವಾಗಿ ಎಂದೂ ಅರ್ಥ. ಅವಿದ್ಯಾಭಿಮಾನಿ ದುರ್ಜೀವಸೃಷ್ಟಿ ಪಾಪಕರವಾದ್ದರಿಂದ

---

೧. ಅಬುದ್ಧಿರ್ಜೀವಾನಾಮಾವರಣಂ ವಿಕ್ಷೇಪಶ್ಚ । ತಾಂ ಕರೋತೀತ್ಯಬುದ್ಧಿಕೃತ್ । ತಸ್ಯ ।
–ಶ್ರೀಧರಃ

ಅಬುದ್ಧಿರ್ಜೀವಾನಾಮಾವರಣಂ ವಿಕ್ಷೇಪಶ್ಚತಾಂ ಕರೋತೀತ್ಯಬುದ್ಧಿಕೃತ್ ತಸ್ಯ ತಮಸಃ ಪಂಚಪರ್ವಣೋ ಯಃ ಸರ್ಗಃ ಷಷ್ಠ ಇತ್ಯರ್ಥವರ್ಣನಂ ತ್ವಯುಕ್ತಂ । ವಿಷ್ಣುಪುರಾಣೇ ಸ್ಥಾವರಾದಿಸೃಷ್ಟೇಶ್ಚಚತುರ್ಮುಖಾಬುದ್ಧಿಕೃತತ್ವದರ್ಶನೇನ ಇಹಾಪಿ ತದೈಕಾರ್ಥ್ಯಸ್ಯ ನ್ಯಾಯ್ಯತ್ವಾಚ್ಚತುರ್ಮುಖಾಬುದ್ಧಿಕೃತತ್ವಮೇವೇಷ್ಟವ್ಯಂ । ತಮಃಶಬ್ದೇನ ಪ್ರಕೃತಿಮಂಡಲಾತ್ಮಕಮಂಡಮುಚ್ಯತೇ । ತದ್ವಿಷಯಃ ಸರ್ಗಸ್ತಾಮಸಃ ಷಷ್ಠಃ । ತಾಮಸಸ್ಯಾಬುದ್ಧಿಕೃತತ್ವಕಥನಂ ಪೂರ್ವೇಷಾಮಪ್ಯುಪಲಕ್ಷಣಂ । ಷಣ್ಣಾಮಪಿ ಚತುರ್ಮುಖಸೃಷ್ಟೇಃ ಪ್ರಾಕ್ತನತ್ವೇನ ಚತುರ್ಮುಖಬುದ್ಧಿಪೂರ್ವಕತ್ವಾಭಾವಾತ್ ।
–ವೀರರಾಘವಃ

ಕೇಚಿತ್ತು ವಕ್ಷ್ಯಮಾಣಾಂಧತಾಮಿಸ್ರಾದಿಸರ್ಗಂ ಷಷ್ಠಮಾಹುಃ । ತಚ್ಚಿಂತ್ಯಂ । ತಸ್ಯಾನಾದ್ಯಜ್ಞಾನವಿಮೋಹಿತಸೃಜ್ಯಮಾನಜೀವಸ್ವಭಾವಸೂಚಕತ್ವೇನ ವೈಕೃತಸರ್ಗೇಂತರ್ಭಾವಾತ್ । –ಶುಕದೇವಃ

ಪಾಪಪರಿಹಾರಕ್ಕಾಗಿ ವಿಶೇಷವಾಗಿ ಹರಿಧ್ಯಾನ ಮಾಡಿದ್ದಾನೆ. ಮತ್ತು ಆ ಅವಿದ್ಯೆಯಿಂದ ಅಸುರಾದಿಗಳು ಮೋಹಗೊಂಡು ಪಾಪಮಾಡಲಿ. ಈ ರೀತಿ ಅವಿದ್ಯಾಸೃಷ್ಟಿ ಪರಮಾತ್ಮನ ಪೂಜೆಯಾಗಲಿ ಎಂದು ಆಲೋಚನೆ ಮಾಡಿದ್ದಾನೆ. ಹೊರತು ಅವಿದ್ಯಾಸೃಷ್ಟಿ ತನಗರಿವಿಲ್ಲದೇ ಅನವಧಾನದಿಂದಾಗಿ ತನ್ನಿಂದ ನಡೆಯಿತೆನ್ನಬಾರದು. ವೀರರಾಘವವ್ಯಾಖ್ಯಾನದಲ್ಲಿ ಈ ಆರನೇ ಸೃಷ್ಟಿಮಾತ್ರವಲ್ಲ, ಹಿಂದಿನ ಮಹದಾದಿಸೃಷ್ಟಿಗಳೂ ಮುಂದಿನ ಸ್ಥಾವರಾದಿ ಸೃಷ್ಟಿಗಳೂ ಬ್ರಹ್ಮನಿಗೆ ಅರಿವಿಲ್ಲದೆಯೇ ನಡೆಯಿತೆಂದೂ ಬ್ರಹ್ಮನಿನ್ನೂ ಹುಟ್ಟಿಯೆ ಇರಲಿಲ್ಲ ಎಂದೂ ಹೇಳಿರುವುದಂತೂ ನಿರಾಧಾರ. ಭಾಗವತದಲ್ಲಿ ಎಲ್ಲಿಯೂ ಹಾಗೆ ಹೇಳಿಲ್ಲ. ವಿಷ್ಣುಪುರಾಣದಲ್ಲಿ ಸ್ಥಾವರಾದಿ ಸೃಷ್ಟಿಗೆ ಅಬುದ್ಧಿಪೂರ್ವಕತ್ವ ಹೇಳಿದ್ದರೂ ಅದಕ್ಕೆ ಹೀಗೇ ವ್ಯಾಖ್ಯಾನ ಮಾಡಬೇಕು.

ಅಬುದ್ಧಿಪೂರ್ವಮಿವ ತು ಬ್ರಹ್ಮಣೋ ಹರಿಬುದ್ಧಿತಃ ।
ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥

ತಾಮಸಾನಾಂ ತು ಭೂತಾನಾಂ ಸಹಸ್ರಂ ಸತ್ತ್ವಭಾಗಿನಾಮ್ ।
ಶತಾಂಶರಜಸಾಮೇಕತಮಸಾಂ ಸರ್ವವೇದಿನಾಮ್ ॥

ಕೇವಲಸ್ತಮಸೋ ಯೋಽಂಶಃ ಸಾಽವಿದ್ಯಾ ಪಂಚಪರ್ವಿಕಾ ।
ಜಾತಾಽತಿದುಷ್ಟಾ ತದ್ದೇಹಾದ್ ದೈತ್ಯರಕ್ಷಃಪಿಶಾಚಕಾಃ ॥

ಯದ್ ರಜೋ ಭೌತಿಕಂ ತೇನ ಮಾನುಷಾಣಾಂ ಸದಾ ಜನಿಃ ।
ತಮೋಗೂಢೇನ ರಜಸಾ ತ್ವಿತರಸ್ಥಾಸ್ನುಚಾರಿಣಾಮ್ ॥

ಭೌತಿಕೇನ ತು ಸತ್ತ್ವೇನ ಗೂಢಂ ಬ್ರಹ್ಮಣ ಆಂಡಜಮ್ ।
ರೂಪಂ ತತ್ರಾಪಿ ತು ತಮಃ ಶತಾಂಶೇನ ಪ್ರಕೀರ್ತಿತಮ್ ॥

ತಜ್ಜೋ ರುದ್ರಸ್ತತಸ್ತ್ವೇವಮಿಂದ್ರಾದೀನಾಂ ಪುನರ್ಜನಿಃ ।
ಗೂಹಿತಂ ಭೂತರಜಸಾ ತತ್ ಸತ್ತ್ವಂ ಮಾನುಷಾ ಯದಾ ॥

ದೇವಾ ಏವಂ ಗುಣಾಸ್ತ್ವೇತೇ ಸರ್ವಂ ವ್ಯಾಪ್ಯ ವ್ಯವಸ್ಥಿತಾಃ ।
ಗುಣಾತೀತಂ ಚ ಯದ್ರೂಪಂ ಬ್ರಹ್ಮಾದೀನಾಂ ಸುಖಾತ್ಮಕಮ್ ॥

ಚಿದ್ರೂಪಂ ತಚ್ಚ ಸತ್ತ್ವಸ್ಯೈವೋತ್ಕರ್ಷೋ ಯತ್ರ ವಿದ್ಯತೇ ।
ತಚ್ಚೋತ್ಕೃಷ್ಟಂ ತಮೋ ಯತ್ರ ಹೀನಂ ತತ್ರ ಸ್ವಭಾವತಃ ॥

ಉಪಗೂಹನೇ ತು ನೈವಾಸ್ತಿ ವಿಶೇಷೋ ನಿತ್ಯಚಿನ್ಮಯೀ ।
ಪ್ರಕೃತೇರ್ಗುಣರೂಪಾಯಾ ಮೂಲಿಕಾಯಾಶ್ಚ ನ ಕ್ವಚಿತ್ ।
ವಿಶೇಷಃ ಪರಮೇ ತತ್ವೇ ವಾಸುದೇವೇ ಕುತಃ ಪುನಃ ॥ ಇತಿ ಚ ॥

ಅವ್ಯಕ್ತಾದ್ಯಾಃ ಪೃಥಿವ್ಯಂತಾಃ ಸರ್ವಾಃ ಪ್ರಕೃತಯಃ ಸ್ಮೃತಾಃ ।
ತದುಪಾದಾನಕಃ ಸರ್ಗಃ ಪ್ರಾಕೃತಃ ಪರಿಪಠ್ಯತೇ ॥

ಅಂಡಂ ತು ವಿಕೃತಂ ಜ್ಞೇಯಂ ತಜ್ಜೋ ವೈಕೃತ ಉಚ್ಯತೇ ।
ಪಂಚಪರ್ವಾ ತ್ವವಿದ್ಯಾ ತು ಭೂತೇಭ್ಯೋ ಹರಿಣಾ ಪುರಾ ॥

ಉದ್ಧೃತ್ಯ ಬ್ರಹ್ಮಣಿ ಕ್ಷಿಪ್ತಾ ಸಾ ಪುನಸ್ತೇನ ನಿಃಸೃತಾ ।
ತತ್ಸ್ರಷ್ಟೃತ್ವಜ್ಞಾಪನಾಯ ತಸ್ಮಾತ್ ಸಾ ಪ್ರಾಕೃತಾ ಮತಾ ॥
ಇತಿ ಚ ॥

ಸರ್ವಜ್ಞನಾದ ಚತುರ್ಮುಖನು ವಿಶೇಷವಾಗಿ ಹರಿಧ್ಯಾನ ಮಾಡುತ್ತ ಬುದ್ಧಿಪೂರ್ವಕವಲ್ಲದ ಶ್ವಾಸಾದಿಕಾರ್ಯಗಳಂತೆ ನಿರಾಯಾಸವಾಗಿ ಪಂಚಪರ್ವವಾದ ಅವಿದ್ಯೆಯನ್ನು ಪ್ರಾದುರ್ಭಾವಗೊಳಿಸಿದ. (ಮೂಲಶ್ಲೋಕದಲ್ಲಿ ತಮಸಃ ಎಂದು ಷಷ್ಠೀ ವಿಭಕ್ತಿ. ಅವಿದ್ಯೆಯ ಸೃಷ್ಟಿ ಎಂದರ್ಥ. 'ತಮಸಃ' ಎಂಬುದನ್ನು ಆವೃತ್ತಿ ಮಾಡಿಕೊಂಡು ಪಂಚಮೀವಿಭಕ್ತಿ ಇಟ್ಟುಕೊಂಡಾಗ ತಮಸ್ಸಿನಿಂದ ಅಂದರೆ ತಮೋಗುಣದಿಂದ ಅವಿದ್ಯಾಸೃಷ್ಟಿ ಎಂದಾಗುತ್ತದೆ) ಪಂಚಭೂತಗಳಲ್ಲಿ ತ್ರಿಗುಣಗಳ ಪ್ರಮಾಣ ಹೀಗೆ– ಸಾವಿರ ಭಾಗ ಸತ್ವ, ನೂರುಭಾಗ ರಜಸ್, ಒಂದು ಭಾಗ ತಮಸ್ಸು. ಹೀಗೆ ಸತ್ವಗುಣ ತಮೋಗುಣಕ್ಕಿಂತ ಸಾವಿರಪಾಲು ಇರುವುದರಿಂದ ಪಂಚಭೂತಗಳು ಅಹಂಕಾರತತ್ವದ ತಮೋಭಾಗದಿಂದ ಜನಿಸಿ ತಾಮಸ ಎನಿಸಿದರೂ ಅವುಗಳ ಅಭಿಮಾನಿಗಳು ಸರ್ವಜ್ಞರಾಗಿರುತ್ತಾರೆ. ಭೂತಗಳಲ್ಲಿರುವ ಸತ್ವರಜಸ್ಸುಗಳ ಸಂಪರ್ಕವಿಲ್ಲದೆ ಕೇವಲ ತಮೋಭಾಗದಿಂದಲೆ ಪಂಚಪರ್ವವಾದ ಅವಿದ್ಯೆ ಹುಟ್ಟಿತು ಎಂಬ ಅಭಿಪ್ರಾಯದಿಂದ 'ತಮಸಃ ಸರ್ಗಃ' ಎನ್ನಲಾಗಿದೆ. ಈ ಅವಿದ್ಯೆ ಬಹಳ ದುಷ್ಟ, ದುಷ್ಟಜೀವರಿಂದ ಅಭಿಮನ್ಯಮಾನ. ಆದರೂ ಅದರಿಂದ ದೈತ್ಯರು ರಾಕ್ಷಸರು ಪಿಶಾಚರು ಹುಟ್ಟಿದರು. ಬ್ರಹ್ಮನ ಪಾಲಿಗೆ ಅದು ಹರಿಸೇವೆಯಾಯಿತು. ಭೂತಗಳಲ್ಲಿರುವ ರಜೋಗುಣದಿಂದ ಮನುಷ್ಯರು ಹುಟ್ಟುತ್ತಾರೆ. ಭೂತಗಳಲ್ಲಿರುವ ರಜೋಗುಣವು ತಮೋಗುಣದ ಪ್ರಭಾವದಿಂದ ಶಕ್ತಿಹೀನವಾದಾಗ ಅದರಿಂದ ಸ್ಥಾವರಾದಿ ಸೃಷ್ಟಿ.

ಸತ್ವಗುಣಪ್ರಭಾವದಿಂದ ಬಲಗುಂದಿದ ರಜೋಗುಣದಿಂದ ಚತುರ್ಮುಖನಿಗೆ ಬ್ರಹ್ಮಾಂಡದೊಳಗೆ ಶರೀರ ಉಂಟಾಯಿತು. ಅದರಲ್ಲಿಯೂ ರಜೋಗುಣದ ನೂರನೆ

ಒಂದಂಶದಷ್ಟು ತಮೋಗುಣವಿದೆ. ಆದರೆ ಅದೂ ಸತ್ವಗುಣಪ್ರಭಾವದಿಂದ ಬಲಗುಂದಿರುತ್ತದೆ. ಅದರಿಂದ ರುದ್ರಶರೀರ ಉತ್ಪನ್ನವಾಗುತ್ತದೆ. ಹೀಗೆ ಇಂದ್ರಾದಿಗಳೂ ಬ್ರಹ್ಮಾಂಡದೊಳಗೆ ಪುನಃ ಹುಟ್ಟುತ್ತಾರೆ. ದೇವತೆಗಳು ಮನುಷ್ಯರಾಗಿ ಹುಟ್ಟುವಾಗ ಅವರ ಭೌತಿಕಸತ್ವವು ರಜೋಗುಣದಿಂದ ಶಕ್ತಿಗುಂದಿರುತ್ತದೆ. ಹೀಗೆ ಭೂತಗಳಲ್ಲಿರುವ ಗುಣಗಳು ಎಲ್ಲೆಡೆ ವ್ಯಾಪಿಸಿರುತ್ತವೆ.

ದೇವತೆಗಳ ಚೈತನ್ಯಸ್ವರೂಪ ಕೇವಲ ಸುಖಾತ್ಮಕ. ಸತ್ವಾದಿಗುಣಗಳ ಸಂಬಂಧವಿಲ್ಲ.

(ಅಧಮರ ಸ್ವರೂಪವೂ ಹಾಗೇ ಸತ್ವಾದಿಸಂಬಂಧವಿಲ್ಲದೆ ದುಃಖಾತ್ಮಕ, ಮಧ್ಯಮರ ಸ್ವರೂಪವೂ ಹಾಗೇ ಕೇವಲ ಸುಖದುಃಖಮಿಶ್ರರೂಪ.) ಅದರಿಂದ ಸತ್ವಗುಣಕಾರ್ಯವಾದ ಜ್ಞಾನಸುಖಾದಿಗಳು ಅಧಿಕವಿರುವವರು ಉತ್ತಮರು. ತಮೋಗುಣ ಕಾರ್ಯವಾದ ದ್ವೇಷಾದಿಗಳು ಹೆಚ್ಚಿರುವವರು ಅಧಮರು, ರಜೋಗುಣಕಾರ್ಯ ಹೆಚ್ಚು ಇರುವವರು ಮಧ್ಯಮರೆಂದು ಜೀವರಲ್ಲಿ ತಾರತಮ್ಯವನ್ನು ತಿಳಿಯಬಹುದು. ಜೀವರು ಮನುಷ್ಯರಾಗಿ ಹುಟ್ಟಿದಾಗ ಅವರ ಸ್ವಾಭಾವಿಕಗುಣಗಳು ಭೌತಿಕಗುಣಗಳ ಪ್ರಭಾವದಿಂದ ಬಲಗುಂದಿದರೂ ನಾಶವಾಗದೇ ಹಾಗೇ ಇರುತ್ತದೆ. ಆಗ ತಾರತಮ್ಯ ಜ್ಞಾಪಕ ಇರುವುದಿಲ್ಲ, ತಾರತಮ್ಯವಿದ್ದೇ ಇದೆ. ಪ್ರಕೃತಿಯ ಸತ್ವಾದಿ ಗುಣಾಭಿಮಾನಿನಿಯರಾದ ಶ್ರೀಭೂದುರ್ಗೆ ಯರಿಗೂ ಮೂಲ ಪ್ರಕೃತ್ಯಭಿಮಾನಿನಿಯಾದ ಲಕ್ಷ್ಮಿಗೂ ಯಾವ ಅವತಾರಗಳಲ್ಲಿಯೂ ಸತ್ವಾದಿಗುಣಸಂಬಂಧದಿಂದ ಸ್ವರೂಪದಲ್ಲಿ ಯಾವ ವಿಶೇಷವೂ ಉಂಟಾಗುವುದಿಲ್ಲ. ಇನ್ನು ಪರತತ್ವವಾದ ವಾಸುದೇವನಲ್ಲಿ ಅದು ಇಲ್ಲವೆಂದು ಬೇರೆ ಹೇಳಬೇಕೇನು? ಎಂದೂ ಹೇಳಿದೆ.

ಅವ್ಯಕ್ತವನ್ನಾರಂಭಿಸಿ ಪೃಥಿವೀಪರ್ಯಂತ ಎಲ್ಲ ಪದಾರ್ಥಗಳೂ ಪ್ರಕೃತಿಗಳೆಸುತ್ತವೆ. ಅವುಗಳ ಪರಿಣಾಮರೂಪವಾದ ಮಹದಾದಿಸೃಷ್ಟಿ ಪ್ರಾಕೃತವೆನಿಸುತ್ತದೆ. ಇಪ್ಪತ್ತನಾಲ್ಕು ತತ್ವಗಳ ಪರಿಣಾಮರೂಪವಾದ ಬ್ರಹ್ಮಾಂಡವು ವಿಕೃತ ಎನಿಸುತ್ತದೆ. ಅದರಲ್ಲಿ ಹುಟ್ಟಿದ್ದೆಲ್ಲ ವೈಕೃತ ಎನಿಸುತ್ತದೆ. (ಹೀಗಾಗಿ ಬ್ರಹ್ಮಾಂಡದ ಹೊರಗಿನ ಸೃಷ್ಟಿಗಳೂ ಬ್ರಹ್ಮಾಂಡಸೃಷ್ಟಿಯೂ ಪ್ರಾಕೃತ ಸೃಷ್ಟಿ, ಬ್ರಹ್ಮಾಂಡದೊಳಗಿನ ಸೃಷ್ಟಿ ವೈಕೃತಸೃಷ್ಟಿಯೆನಿಸುತ್ತದೆ.) ಪಂಚಪರ್ವ ಅವಿದ್ಯೆಯ ಸೃಷ್ಟಿ ಬ್ರಹ್ಮಾಂಡದೊಳಗೆ ಬ್ರಹ್ಮನಿಂದ ಆಗಿರುವುದರಿಂದ ಅದೂ ವೈಕೃತವಾಗ ಬೇಕಲ್ಲವೆ? ಎಂದರೆ ವಸ್ತುತಃ ಅವಿದ್ಯೆಯು ಪಂಚಭೂತಗಳಲ್ಲಿರುವ ತಮೋಗುಣದಿಂದ ಭಗವಂತನಿಂದಲೆ ಬ್ರಹ್ಮಾಂಡದ ಹೊರಗೆ ಒಮ್ಮೆ ಸೃಷ್ಟವಾಗಿತ್ತು, ಅದರಿಂದ ಪ್ರಾಕೃತವೆ. ಅದನ್ನೇ ಅವನು ಬ್ರಹ್ಮಾಂಡದೊಳಗೆ ಬ್ರಹ್ಮ ವೈಕೃತಸೃಷ್ಟಿಮಾಡುವ ಕಾಲದಲ್ಲಿ ಅವನ ಶರೀರದಲ್ಲಿಟ್ಟು ಹೊರಗೆ ಬರುವಂತೆ ಮಾಡಿದ. ಇದು ಅವಿದ್ಯೆಯನ್ನು ಬ್ರಹ್ಮ

ಸೃಜಿಸಿದನೆಂಬ ಪ್ರಸಿದ್ಧಿ ಬರಲಿ ಎಂಬ ಉದ್ದೇಶದಿಂದ. ಅಷ್ಟುಮಾತ್ರಕ್ಕೆ ಅವಿದ್ಯಾಸೃಷ್ಟಿ ವೈಕೃತವೆನಿಸುವುದಿಲ್ಲ. ಎಂದೂ ಹೇಳಿದೆ.

* * *

ನವವಿಧಸೃಷ್ಟಿಯಲ್ಲಿ ಏಳನೆಯದಾದ ಮುಖ್ಯಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ರಜೋಭಾಜೋ ಭಗವತೋ ಲೀಲೇಯಂ ಹರಿಮೇಧಸಃ ।
ಸಪ್ತಮೋ ಮುಖ್ಯಸರ್ಗಸ್ತು ಷಡ್ವಿಧಸ್ತಸ್ಥುಷಾಂ ಚ ಯಃ ॥ ೧೮ ॥

ವನಸ್ಪತ್ಯೋಷಧಿಲತಾತ್ವಕ್ಸಾರಾ ವೀರುಧೋ ದ್ರುಮಾಃ ।
ಉತ್ಸ್ರೋತಸಸ್ತಮಃಪ್ರಾಯಾ ಅಂತಃಸ್ಪರ್ಶಾ ವಿಶೇಷಿಣಃ ॥ ೧೯ ॥

ಸೂರ್ಯನಂತೆ ತಮೋನಿವರ್ತಕಜ್ಞಾನಪೂರ್ಣನಾದ ಭಗವಂತನಿಗೆ ರಜಸ್ತಮಃಸತ್ವಗುಣಗಳನ್ನು ಸ್ವೀಕರಿಸಿ ಸೃಷ್ಟಿಮಾಡುವುದು ಸಜ್ಜನರ ಒಳಿತಿಗಾಗಿ ಕೇವಲ ಲೀಲೆ. ಆರು ಬಗೆಯಾದ ಸ್ಥಾವರಸೃಷ್ಟಿ ಏಳನೆಯದಾದ ಮುಖ್ಯಸೃಷ್ಟಿ ಎನಿಸುತ್ತದೆ. ವನಸ್ಪತಿ ಓಷಧಿ ಲತೆ ತ್ವಕ್ಸಾರ ವೀರುತ್ ದ್ರುಮ ಎಂದು ಆರು ಬಗೆಯಾದ ಈ ಸ್ಥಾವರಗಳು ಎತ್ತರಕ್ಕೆ ಬೆಳೆಯುತ್ತವೆ. ಅವುಗಳಿಗೆ ಹೆಚ್ಚು ಅಜ್ಞಾನ. ಅಪ್ರಯತ್ನವಾಗಿ ಏನು ತಿಳಿದು ಬರುವುದೋ ಅದನ್ನು ಮಾತ್ರ ತಿಳಿಯುವ ಸಾಮರ್ಥ್ಯ. ಛೇದನ ಮಾಡಿದರೆ ಒಣಗುತ್ತವೆ.

ವನಸ್ಪತಿ–ಹೂವಿಲ್ಲದೆ ಫಲಬಿಡುವ ಅಶ್ವತ್ಥಾದಿಗಳು. ಓಷಧಿ–ಫಲ ಕೊಟ್ಟ ಮೇಲೆ ಒಣಗುವ ಬತ್ತ ಮೊದಲಾದ ಪೈರು. ಲತಾ–ಬಳ್ಳಿ, ತ್ವಕ್ಸಾರ–ಬಲವಾದ ತೊಗಟೆ ಉಳ್ಳ ಬಿದಿರು ಮುಂತಾದುದು. ವೀರುತ್– ಪೊದೆ. ದ್ರುಮ–ಹೂ ಹಣ್ಣುನೀಡುವ ಮಾವು ಮುಂತಾದವು.

ಏತೇ ಗುಣಾ ಹರೇಃ ಸಮ್ಯಕ್ ಸ್ವಾತಂತ್ರ್ಯವಿಷಯಾಃ ಸದಾ ।
ಸ್ವತಂತ್ರಾಃ ಪ್ರಕೃತೇಶ್ಚಾಪಿ ಬ್ರಹ್ಮಣೋಽನ್ಯೇಷು ತು ಕ್ರಮಾತ್ ।
ದೇವೇಷ್ವೇವ ತದನ್ಯೇಷು ಪರತಂತ್ರಾ ಹಿ ತೇ ಮತಾಃ । ಇತಿ ಚ ॥

ಸ್ಥಾಸ್ನುಭಿರ್ನಿಯಮಾನ್ಮುಖ್ಯಾ ಸ್ಥಿತೇರ್ಗತಿರವಾಪ್ಯತೇ ।
ಪ್ರಾಯಃ ಪರೋಪಕರ್ತೃತ್ವಾತ್ ತೇ ಮುಖ್ಯಸ್ರೋತಸಃ ಸ್ಮೃತಾಃ ॥

ನಾಧೋ ನೋರ್ಧ್ವಂ ತಿರಶ್ಚಾಂ ತು ಪುನಸ್ತತ್ರೈವ ಯಜ್ಜನಿಃ ।
ಯಜ್ಞೋಪಯೋಗಂ ಚ ಸತಾಮುಪಕಾರಂ ವಿನಾಽಪಿ ಚ ॥

ತಿರ್ಯಕ್ಸ್ರೋತಸ ಇತ್ಯೇವ ಪ್ರೋಚ್ಯಂತೇ ಜ್ಞಾನಿಭಿಸ್ತತಃ ।
ಪ್ರಾಯೋಽಧೋ ಗಮನಂ ಯಸ್ಮಾತ್ ಪ್ರಯತ್ನೇನ ವಿನಾ
ಭವೇತ್ ॥

ಅರ್ವಾಕ್ಸ್ರೋತಸ ಇತ್ಯೇವ ಮಾನುಷಾಃ ಪರಿಕೀರ್ತಿತಾಃ ।
ನಿಯಮಾದೂರ್ಧ್ವಗಂತಾರೋ ದೇವಾ ಮೋಕ್ಷೈಕಭಾಗಿನಃ ।
ಊರ್ಧ್ವಸ್ರೋತಸ ಇತ್ಯೇವ ತಸ್ಮಾತ್ ತೇ ಪರಿಕೀರ್ತಿತಾಃ ॥
ಇತಿ ಬ್ರಾಹ್ಮೇ ।

ತಿರಶ್ಚಾಂ ಸ್ಥಾವರಾಣಾಂ ಚ ಬುದ್ಧಿಪೂರ್ವಪ್ರವರ್ತಿನಾಮ್ ।
ಅಸುರಾಣಾಂ ರಕ್ಷಸಾಂ ವಾ ಪಿಶಾಚಾನಾಂ ತಥೈವ ಚ ।
ಅರ್ವಾಕ್ಸ್ರೋತಸ್ತ್ವಮುದ್ದಿಷ್ಟಂ ನಿಯಮಾದಸುರಾದಿನಾಮ್ ॥
ಇತಿ ಚ ॥

ಮುಖ್ಯಸ್ರೋತಸ ಇತ್ಯಸ್ಯಾರ್ಥಃ ಉತ್ಸ್ರೋತಸ ಇತಿ ॥

ಊರ್ಧ್ವ ಇತ್ಯೇವ ಯಸ್ತೂಚ್ಚತಮ ಏವಾಭಿಧೀಯತೇ ।
ಊರ್ಧ್ವಸ್ರೋತಸ ಏತಸ್ಮಾದ್ ದೇವಾ ಏವ ನ ತತ್ಪರೇ ।
ಉಚ್ಚಬ್ದ ಉಚ್ಚಮಾತ್ರೇಽಪಿ ತಸ್ಮಾತ್ ಸ್ಥಾಸ್ನುಷು ಭಣ್ಯತೇ ॥
ಇತಿ ಚ ॥

ತಿರಶ್ಚೀನಾಃ ಸ್ಥಾವರಾಶ್ಚ ಅಂತಃಸ್ಪರ್ಶಾ ಇತೀರಿತಾಃ ।
ಯತ್ ಪ್ರತ್ಯಕ್ಷಾನುಮಾನಾಭ್ಯಾಂ ಹೃದ್ಗಜ್ಞಾನಂ ನ ಶಾಸ್ತ್ರತಃ ॥
ಇತಿ ಪಾದ್ಮೇ ॥

ಯದಪ್ರಯತ್ನಾದ್ ಹೃದಯಂಗಮಂ ತದೇವ ಜಾನಂತಿ, ನೋ ಶಾಸ್ತ್ರ ಯುಕ್ತಿಭ್ಯಾಮಿತ್ಯರ್ಥಃ ॥

'ಸೃಷ್ಟ್ಯಾದಿಕಾರ್ಯಗಳಿಗಾಗಿ ಭಗವಂತನು ಸ್ವೀಕರಿಸುವ ರಜಸ್ತಮಸ್ಸತ್ವಗುಣಗಳು ಅವನಿಗೆ ಸದಾ ಅಧೀನವಿರುತ್ತವೆ. ಹಾಗೆಯೆ ಲಕ್ಷ್ಮಿಗೂ ಬ್ರಹ್ಮನಿಗೂ ಇತರ ದೇವತೆಗಳಿಗೂ ತಾರತಮ್ಯಾನುಸಾರ ಅವು ಅಧೀನವಿರುತ್ತವೆ. ಅವರೆಲ್ಲರೂ ಪರಮಾತ್ಮನಿಗೆ ಅಧೀನರಾದ್ದರಿಂದ ಅವರಿಗೆ ಇರುವ ಗುಣ ನಿಯಾಮಕತ್ವ ಪರಮಾತ್ಮನಂತೆ ಮುಖ್ಯವಲ್ಲ' ಎಂದೂ ಹೇಳಿದೆ.

ವೃಕ್ಷಾದಿ ಸ್ಥಾವರಜೀವರು ಪ್ರಾಯಶಃ ಲೋಕೋಪಕಾರಕ್ಕಾಗಿಯೆ ಬದುಕುವುದರಿಂದ 'ಮುಖ್ಯ' ವಾದ ಅಂದರೆ ಉತ್ಕೃಷ್ಟವಾದ ಗತಿಯನ್ನೇ ತಪ್ಪದೆ ಹೊಂದುತ್ತಾರೆ. ಅದರಿಂದ ಅವರು ಮುಖ್ಯಸ್ರೋತಸರೆನಿಸುತ್ತಾರೆ. ತಿರ್ಯಕ್–ಪ್ರಾಣಿಗಳು ಪ್ರಾಯಃ ಅಧೋಗತಿಯಾಗಲಿ ಊರ್ಧ್ವಗತಿಯಾಗಲಿ ಇಲ್ಲದವುಗಳು. ಪುನಃ ಭೂಮಿಯಲ್ಲಿಯೆ ಹುಟ್ಟುವವುಗಳು. ಆದರೆ ಇದು, ಯಜ್ಞಕ್ಕೆ ಉಪಯೋಗಿಗಳಾಗದಿದ್ದರೆ, ಸಜ್ಜನರಿಗೆ ಉಪಕಾರ ಮಾಡದೇ ಇದ್ದರೆ ಮಾತ್ರ. ಅದರಿಂದ ತಿರ್ಯಕ್‌ಪ್ರಾಣಿಗಳನ್ನು ಜ್ಞಾನಿಗಳು ತಿರ್ಯಕ್‌ಸ್ರೋತಸರೆಂದು ಹೇಳುತ್ತಾರೆ. ಭಗವಂತನ ಆರಾಧನೆಗೆ ಸಜ್ಜನರ ಉಪಕಾರಕ್ಕೆ ಯತ್ನ ಮಾಡದ ಮನುಷ್ಯಾಧಮರು ಪ್ರಾಯಃ ಕೆಳಗಿನ ನರಕಾದಿಗಳಿಗೇ ಹೋಗುವುದರಿಂದ ಅರ್ವಾಕ್‌ಸ್ರೋತಸರೆನಿಸುತ್ತಾರೆ. ಮೋಕ್ಷಭಾಗಿಗಳಾದ ದೇವತೆಗಳು ತಪ್ಪದೆ ಊರ್ಧ್ವ ಲೋಕಗಳಿಗೇ ಅಂದರೆ ಅತ್ಯುತ್ತಮಲೋಕಗಳಿಗೇ ಹೋಗುವುದರಿಂದ ಅವರು ಊರ್ಧ್ವಸ್ರೋತಸರೆನಿಸುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

'ಬುದ್ಧಿಪೂರ್ವಕವಾಗಿ ಪಾಪಕರ್ಮದಲ್ಲಿ ಪ್ರವೃತ್ತಿಮಾಡುವ ತಿರ್ಯಕ್‌ಪ್ರಾಣಿಗಳೂ ಸ್ಥಾವರಗಳೂ ಅಸುರರಾಕ್ಷಸಪಿಶಾಚಗಳೂ ಅರ್ವಾಕ್ ಸ್ರೋತಸರೆನಿಸುತ್ತಾರೆ. ಅವರಲ್ಲಿ ತಿರ್ಯಕ್‌ಪ್ರಾಣಿಸ್ಥಾವರಗಳು ಪಾಪಕರ್ಮ ಪ್ರಯುಕ್ತವಾಗಿ ಕೆಲವೊಮ್ಮೆ ನರಕಭಾಗಿಗಳಾಗುತ್ತಾರೆ ಅಸುರಾದಿಗಳು ಮಾತ್ರ ಹಾಗಲ್ಲ. ಪಾಪ ಮಾಡಿ ನರಕಕ್ಕೆ ಹೋಗುವುದು ಅವರಿಗೆ ಸ್ವಭಾವ ಸಿದ್ಧವಾಗಿದೆ' ಎಂದೂ ಹೇಳಿದೆ.

'ಮುಖ್ಯಸರ್ಗಸ್ತು' ಎಂದು ಭಾಗವತ ಹೇಳಿದ್ದನ್ನೇ ಬ್ರಹ್ಮಪುರಾಣವು 'ಮುಖ್ಯಸ್ರೋತಸಃ' ಎಂದಿದೆ. ಇದಕ್ಕೆ ಭಾಗವತವು ಮುಂದಿನ ಶ್ಲೋಕದಲ್ಲಿ 'ಉತ್‌ಸ್ರೋತಸಃ' ಎಂದು ವಿವರಣೆ ನೀಡಿದೆ. ಉತ್ ಎಂದರೆ ಉತ್ಕೃಷ್ಟ, ಮುಖ್ಯ ಎಂದರೂ ಅದೇ ಅರ್ಥ.

ಆದರೆ 'ಉತ್‌ಸ್ರೋತಸಃ' 'ಊರ್ಧ್ವಸ್ರೋತಸಃ'ಗಳಿಗೆ ಭೇದವಿದೆ. ಊರ್ಧ್ವ ಎಂದರೆ ಉತ್ಕೃಷ್ಟಮಾತ್ರವಲ್ಲ, ಅತಿ ಉತ್ಕೃಷ್ಟ, ಅದರಿಂದ ದೇವತೆಗಳೇ ಊರ್ಧ್ವಸ್ರೋತಸರು. ಸ್ಥಾವರಗಳಲ್ಲ. ಸ್ಥಾವರಗಳು ಕೇವಲ ಉತ್‌ಸ್ರೋತಸರು. 'ಉತ್' ಎಂದರೆ ಉತ್ಕೃಷ್ಟ ಎಂದಿಷ್ಟೇ ಅರ್ಥ. ಎಂದೂ ಹೇಳಿದೆ.

ತಿರ್ಯಕ್ ಪ್ರಾಣಿಗಳೂ ಸ್ಥಾವರಗಳೂ ಅಂತಃಸ್ಪರ್ಶರೆನಿಸುತ್ತಾರೆ. ಏಕೆಂದರೆ ಅವರು ಪ್ರತ್ಯಕ್ಷ ಅನುಮಾನಗಳಿಂದ 'ಅಂತಃ' ಹೃದಯದೊಳಗೆ ತಿಳಿದು ಬರುವ ವಿಷಯಗಳನ್ನು ಮಾತ್ರ 'ಸ್ಪರ್ಶ' ತಿಳಿಯಬಲ್ಲರು ಶಾಸ್ತ್ರದಿಂದಲ್ಲ, ಎಂದು ಪದ್ಮಪುರಾಣದಲ್ಲಿ ಹೇಳಿದೆ. ಇದರ ಅಭಿಪ್ರಾಯ ಹೀಗೆ– ಏನೂ ಪ್ರಯತ್ನವಿಲ್ಲದೆ, ತಿಳಿದು ಬರುವ ಸಾಮಾನ್ಯ

ವಿಷಯಗಳನ್ನು ಮಾತ್ರ ತಿರ್ಯಕ್‌ಪ್ರಾಣಿಗಳು ಸ್ಥಾವರಗಳು ತಿಳಿಯಬಲ್ಲರು, ಹೊರತು ಪ್ರಯತ್ನದಿಂದ ಶಾಸ್ತ್ರಯುಕ್ತಿಗ್ಳ ಮೂಲಕ ತಿಳಿದು ಬರುವ ರಹಸ್ಯಪ್ರಮೇಯಗಳನ್ನು ತಿಳಿಯಲಾರರು ಎಂದು.

* * *

ನವವಿಧ ಸೃಷ್ಟಿಯಲ್ಲಿ ಎಂಟನೆಯದಾದ ತಿರ್ಯಕ್‌ಪ್ರಾಣಿಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ತಿರಶ್ಚಾಮಷ್ಟಮಃ ಸರ್ಗಃ ಸೋಽಷ್ಟಾವಿಂಶದ್ವಿಧೋ ಮತಃ ।
ಅವಿದೋ ಭೂರಿತಮಸೋ ಘ್ರಾಣಜ್ಞಾ ಹೃದ್ಯವೇದಿನಃ ॥ ೨೦ ॥

ಗೌರಜೋ ಮಹಿಷಃ ಕೃಷ್ಣಃ ಸೂಕರೋ ಗವಯೋ ರುರುಃ ।
ದ್ವಿಶಫಾಃ ಪಶವಶ್ಚೇಮೇ ಅವಿರುಷ್ಟ್ರಶ್ಚ ಸತ್ತಮ ॥ ೨೧ ॥

ಖರೋಽಶ್ವೋಽಶ್ವತರೋ ಗೌರಃ ಶರಭಶ್ಚಮರೀ ತಥಾ ।
ಏತೇ ಚೈಕಶಫಾಃ ಕ್ಷತ್ತಃ ಶೃಣು ಪಂಚನಖಾನ್ ಪಶೂನ್ ॥ ೨೨ ॥

ಶ್ವಾ ಸೃಗಾಲೋ ವೃಕೋ ವ್ಯಾಘ್ರೋ ಮಾರ್ಜಾರಃ ಶಶಶಲ್ಯಕೌ ।
ಸಿಂಹಃ ಕಪಿರ್ಗಜಃ ಕೂರ್ಮೋ ಗೋಧಾ ಚ ಮಕರಾದಯಃ ॥೨೩ ॥

ಕಂಕಗೃಧ್ರಬಳಶ್ಯೇನಾ ಭಾಸವಲ್ಲೂರಬರ್ಹಿಣಃ ।
ಹಂಸಸಾರಸಚಕ್ರಾಹ್ವಾಃ ಕಾಕೋಲೂಕಾದಯಃ ಖಗಾಃ ॥ ೨೪ ॥

ತಿರ್ಯಕ್‌ಪ್ರಾಣಿಗಳ ಸೃಷ್ಟಿ ಎಂಟನೆಯದು. ಅವುಗಳು ಇಪ್ಪತ್ತೆಂಟು ಬಗೆಯಾಗಿವೆ. ಎಲ್ಲವೂ ಶಾಸ್ತ್ರಯುಕ್ತಿಜ್ಞಾನವಿಲ್ಲದವುಗಳು. ಹೆಚ್ಚು ತಮೋಗುಣ ಉಳ್ಳವುಗಳು. ಎಲ್ಲವನ್ನೂ ಮೂಸಿಯೆ ತಿಳಿಯುವವುಗಳು. ಪ್ರಯತ್ನವಿಲ್ಲದೆ ಸುಲಭವಾಗಿ ತಿಳಿಯ ಬಹುದಾದುದನ್ನೇ ತಿಳಿಯ ಬಲ್ಲವುಗಳು.

ಹಸು, ಆಡು, ಕೋಣ, ಜಿಂಕೆ, ಹಂದಿ, ಕಾಡು ಹಸು, ದುಪ್ಪಿ, ಕುರಿ, ಒಂಟೆ ಇವು ಒಂಬತ್ತು ಎರಡು ಸೀಳಾದ ಗೊರಸುಗಳುಳ್ಳ ಪ್ರಾಣಿಗಳು. ಕತ್ತೆ, ಕುದುರೆ, ಹೇಸರಗತ್ತೆ, ಗೌರಮೃಗ, ಎಂಟುಕಾಲಿನ ಮೃಗ, ಚಮರಿಮೃಗ ಇವು ಆರು ಒಂದು ಗೊರಸುಳ್ಳ ಪ್ರಾಣಿಗಳು. ನಾಯಿ, ನರಿ, ತೋಳ , ಹುಲಿ, ಬೆಕ್ಕು ಮೊಲ ಮುಳ್ಳುಹಂದಿ, ಸಿಂಹ, ಕೋತಿ, ಆನೆ, ಆಮೆ, ಹಲ್ಲಿಜಾತಿ ಇವುಗಳಲ್ಲಿ ಆಮೆಯೊಂದನ್ನು ಬಿಟ್ಟು ಉಳಿದವು ಐದು ಉಗುರಿನ ಪ್ರಾಣಿಗಳು. (ಆಮೆಗೆ ಐದು ಉಗುರುಗಳಿವೆ ಎಂದು ತಿಳಿಸಲು ಈ ಗುಂಪಿನಲ್ಲಿ ಹೇಳಿದ್ದರೂ ವಸ್ತುತಃ ಅದು ಜಲಚರವರ್ಗಕ್ಕೇ ಸೇರುತ್ತದೆ.) ಆದರಿಂದ

ಆಮೆ ಮೊಸಳೆ ಮುಂತಾದ ಜಲಚರಗಳದ್ದು ಒಂದು ಗುಂಪು. ರಣಹದ್ದು ಹದ್ದು, ಗಿಡುಗ, ಹದ್ದಿನ ಇನ್ನೊಂದು ಜಾತಿ, ಕುಣಿಯುವ ಪಕ್ಷಿ, ನವಿಲು, ಹಂಸ, ಕೊಕ್ಕರೆ, ಚಕ್ರವಾಕ ಕಾಗೆ ಗೂಬೆ ಮುಂತಾದ ಹಕ್ಕಿಗಳದು ಇನ್ನೊಂದು ಗುಂಪು. ಹೀಗೆ ತಿರ್ಯಕ್‌ಪ್ರಾಣಿಗಳು ಪಕ್ಷಿಗಳು ಒಟ್ಟು ಇಪ್ಪತ್ತೆಂಟು ಗುಂಪುಗಳಾಗಿವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಆಮೆಯನ್ನು ಐದು ಉಗುರುಳ್ಳ ಪ್ರಾಣಿಗಳಲ್ಲಿ ಒಂದು ಗುಂಪಾಗಿ ಪರಿಗಣಿಸಿ ಒಟ್ಟು ಗುಂಪುಗಳ ಸಂಖ್ಯೆ ಇಪ್ಪತ್ತೊಂಬತ್ತಾದಾಗ ಜಲಚರಗಳನ್ನೂ ಪಕ್ಷಿಗಳನ್ನೂ ಜೊತೆ ಸೇರಿಸಿ ಭೂಚರವ್ಯತಿರಿಕ್ತಗಳ ಒಂದು ಗುಂಪು ಮಾಡಿ ಇಪ್ಪತ್ತೆಂಟು ಗುಂಪುಗಳನ್ನು ಸಮರ್ಥಿಸಿದ್ದಾರೆ. ವಸ್ತುತಃ ಆಮೆ ಐದು ಉಗುರುಳ್ಳದ್ದಾದರೂ ಜಲಚರವಾಗಿರುವುದರಿಂದ ಅದನ್ನು ಜಲಚರಗುಂಪಿನಲ್ಲಿ ಸೇರಿಸುವ ಅಭಿಪ್ರಾಯ ಬ್ರಹ್ಮಾಂಡಪುರಾಣದಲ್ಲಿ ಕಾಣುತ್ತದೆ. ಅಲ್ಲಿ ಆಮೆಯ ಉಲ್ಲೇಖವೇ ಇಲ್ಲ. ಜಲಚರದಲ್ಲಿ ಸೇರುತ್ತದೆ ಎಂದು ಕೈ ಬಿಡಲಾಗಿದೆ. ಹಾಗಾದರೆ ಭಾಗವತ ಆಮೆಯನ್ನು ಪ್ರತ್ಯೇಕ ಹೇಳಿದ್ದೇಕೆ ಎಂದರೆ ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ 'ಕೂರ್ಮೋ ಜಲಚರೋಽಪ್ಯಂಡಜತ್ವಾಭಾವಾತ್ ಪೃಥಗ್ ಗಣಿತಃ' 'ಆಮೆ ಮೊಟ್ಟೆ ಇಡುವುದಿಲ್ಲ. ಮೊಸಳೆ ಮುಂತಾದ ಜಲಚರಗಳೆಲ್ಲ ಮೊಟ್ಟೆ ಇಡುತ್ತವೆ. ಅದರಿಂದ ಆಮೆಯನ್ನು ಪ್ರತ್ಯೇಕ ಹೇಳಿದೆ' ಎಂದು. ವಸ್ತುತಃ ಆಮೆ ಮೊಟ್ಟೆ ಇಡುತ್ತದೆ.

ಎರಡು ಗೊರಸು, ಒಂದು ಗೊರಸು ,ಐದುಉಗುರು, ಜಲಚರಗಳು ,ಪಕ್ಷಿಗಳು ಎಂದು ಲಕ್ಷಣಗಳನ್ನು ಹೇಳಿದ್ದೇಕೆ? ಆಮೆಗೆ ಐದು ಉಗುರೆಂದು ಏಕೆ ಹೇಳಬೇಕಾಗಿತ್ತು? ಅದು ಎಲ್ಲರಿಗೂ ತಿಳಿದಿದೆ ತಾನೆ? ಎಂಬ ಪ್ರಶ್ನೆಯನ್ನು ಬೇರೆ ಯಾವ ವ್ಯಾಖ್ಯಾನಕಾರರೂ ಎತ್ತಿಕೊಳ್ಳಲಿಲ್ಲ. ಹಾವುಗಳು ಕೃಮಿ ಕೀಟಗಳು ಮುಂತಾದ ಪ್ರಾಣಿಗಳನ್ನು ಇಲ್ಲಿ ಏಕೆ ಹೇಳಿಲ್ಲ ಎನ್ನುವ ಪ್ರಶ್ನೆಯೂ ಯಾರಿಗೂ ಬರಲಿಲ್ಲ. ತಾತ್ಪರ್ಯದಲ್ಲಿ ಎಲ್ಲಕ್ಕೂ ಸಮಾಧಾನವಿದೆ–

ಅಷ್ಟಾವಿಂಶದ್ ವಿಶೇಷೇಣ ಯಜ್ಞೇಷೂಪಕೃತಂ ಯತಃ ।
ತಿರಶ್ಚಾಂ ತಾವದ್ ಏತಸ್ಮಾದ್ ಗಣ್ಯತೇ ಶಾಸ್ತ್ರವೇದಿಭಿಃ ॥

ಗೌರಜೋ ಮಹಿಷಃ ಕೃಷ್ಣಃ ಸೂಕರೋ ಗವಯೋ ರುರುಃ ।
ಅವ್ಯುಷ್ಟ್ರೌ ಚ ಖರಾಶ್ವೌ ಚ ತಥೈವಾಶ್ವತರೋಽಪರಃ ॥

ಗೌರಶ್ವ ಶರಭಶ್ಚೈವ ಚಮರೀ ಶ್ವಸೃಗಾಲಕೌ ।
ವೃಕೋ ವ್ಯಾಘ್ರಶ್ಚ ಮಾರ್ಜಾರೋ ಹರಿಶ್ಚ ಶಶಶಲ್ಯಕೌ ।
ಕಪಿರ್ಗಜಶ್ಚ ಗೋಧಾದ್ಯಾ ಜಲಜಾಃ ಪಕ್ಷಿಣಸ್ತಥಾ ॥

ಇತಿ ಬ್ರಹ್ಮಾಂಡೇ ॥

ಕೂರ್ಮೋ ಜಲಜತ್ವೇನಾಷ್ಟಾವಿಂಶತ್ಸ್ವಂತರ್ಭೂತೋಽಪಿ ಪಂಚನಖತ್ವ ಪ್ರದರ್ಶನಾರ್ಥಂ ಪೃಥಗುಕ್ತಃ ।

ತತ್ತದಾಕಾರಸಂಯುಕ್ತಾನ್ ಸೃಜ್ಯಾನ್ ಸ್ರಷ್ಟಾರಮೇವ ಚ ।
ಯಃ ಸದಾ ಸಂಸ್ಮರೇದ್ ಯೋಗೀ ನ ಸ ಭೂಯೋಽಭಿಜಾಯತೇ ।

ಇತಿ ಸ್ಕಾಂದವಚನಾತ್ ಪ್ರಸಿದ್ಧಾನಾಮಪಿ ದ್ವಿಶಫಾದೀನಾಂ ಸ್ಮರಣ-ವಿಧಾನಾರ್ಥಮುಕ್ತಿಃ ।

ಉಚ್ಯತೇ ಸುಪ್ರಸಿದ್ಧಂ ಚ ಸ್ಮರಣಾರ್ಥಂ ಚ ಕುತ್ರಚಿತ್ ।
ಅಪ್ರಸಿದ್ಧಜ್ಞಾಪನಾರ್ಥಂ ದ್ವಿಧಾ ಶಾಸ್ತ್ರವಚಃ ಸ್ಮೃತಮ್ ॥

ಇತಿ ಷಾಡ್ಗುಣ್ಯೇ ॥

ವಲ್ಲೂರೋ ನೃತ್ತಪಕ್ಷೀ ಚ ಸ ವಲ್ಲೂಕಶ್ಚ ಕಥ್ಯತೇ ॥ ಇತ್ಯಭಿಧಾನೇ ।

ಅಷ್ಟಾವಿಂಶತ್ ಪ್ರಧಾನಾಸ್ತು ತಿರಶ್ಚಾಂ ಯಾಸ್ತು ಜಾತಯಃ ।
ಯೋ ಯಸ್ಯ ಸದೃಶಸ್ತ್ವನ್ಯಃ ಸ ತತ್ರಾಂತರ್ಗತೋ ಭವೇತ್ ॥

ಜಲಜಾಂತರ್ಗತಾಃ ಸರ್ಪಾಃ ಕೀಟಾದ್ಯಾ ಯಾಶ್ಚ ಜಾತಯಃ ।
ತೇಷಾಂ ಜಲಪ್ರಧಾನತ್ವಾಚ್ಛರೀರಸ್ಯ ತು ಸರ್ವಶಃ ॥

ಇತಿ ಸತ್ಯಸಂಹಿತಾಯಾಮ್ ॥

ತಿರ್ಯಕ್‌ಪ್ರಾಣಿಗಳಲ್ಲಿ ವಿಶೇಷವಾಗಿ ಯಾಗಗಳಲ್ಲಿ ಉಪಯುಕ್ತವಾದ ಜಾತಿಗಳು ಇಪ್ಪತ್ತೆಂಟು. ಅದರಿಂದ ಅಷ್ಟನ್ನೇ ಶಾಸ್ತ್ರಜ್ಞರು ಪರಿಗಣಿಸುತ್ತಾರೆ. ಹಸು, ಆಡು, ಕೋಣ, ಜಿಂಕೆ, ಹಂದಿ, ಕಾಡುಹಸು, ದುಪ್ಪಿ, ಕುರಿ, ಒಂಟೆ, ಕತ್ತೆ, ಕುದುರೆ, ಹೇಸರಗತ್ತೆ, ಗೌರಮೃಗ, ಎಂಟುಕಾಲಿನ ಮೃಗ, ಚಮರಿಮೃಗ, ನಾಯಿ, ನರಿ, ತೋಳ, ಹುಲಿ, ಬೆಕ್ಕು, ಸಿಂಹ, ಮೊಲ ಕಣೆಹಂದಿ, ಕೋತಿ, ಆನೆ, ಹಲ್ಲಿಜಾತಿ (ಉಡ) ಮೊದಲಾದವುಗಳೆಂದು ಇಪ್ಪತ್ತಾರು ಜಾತಿಗಳು, ಜಲಚರ ಹಾಗೂ ಪಕ್ಷಿಗಳೆಂದು ಎರಡು ಜಾತಿಗಳು ಹೀಗೆ ಒಟ್ಟು ಇಪ್ಪತ್ತೆಂಟು ಜಾತಿಗಳು ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಆಮೆ ಜಲಚರ ವಾಗಿರುವುದರಿಂದ ಇಪ್ಪತ್ತೆಂಟಜಾತಿಗಳಲ್ಲಿ ಜಲಚರಜಾತಿಯಲ್ಲಿ ಸೇರಿದ್ದರೂ ಅದಕ್ಕೆ ಐದು ಉಗುರುಗಳಿವೆ ಎಂದು ತಿಳಿಸುವುದಕ್ಕಾಗಿ ಪ್ರತ್ಯೇಕ ಹೇಳಲಾಗಿದೆ. ''ಆಯಾ ಆಕಾರಗಳೊಂದಿಗೆ ಸೃಜ್ಯಪದಾರ್ಥಗಳನ್ನೂ ಸೃಷ್ಟಿಕರ್ತನನ್ನೂ ಯೋಗಿ ಸದಾ ಸ್ಮರಿಸಬೇಕು. ಅದರಿಂದ ಅಪುನರಾವೃತ್ತಿರೂಪವಾದ ಮೋಕ್ಷ

ಲಭಿಸುತ್ತದೆ'' ಎಂದು ಸ್ಕಾಂದಪುರಾಣವಚನವಿರುವುದರಿಂದ ಎರಡು ಗೊರಸು ಒಂದು ಗೊರಸು ಮುಂತಾದ ಎಲ್ಲರಿಗೂ ತಿಳಿದಿರುವ ಅಂಶಗಳನ್ನೂ ಸ್ಮರಣವಿಧಾನ ಮಾಡುವುದಕ್ಕಾಗಿ ಹೇಳಲಾಗಿದೆ.

ಷಾಡ್ಗುಣ್ಯ ಎಂಬ ಗ್ರಂಥದಲ್ಲಿಯೂ ಹಾಗೆ ಹೇಳಿದೆ 'ಎಲ್ಲರಿಗೂ ತಿಳಿದ ಅಂಶವನ್ನು ಕೆಲವೆಡೆ ಸ್ಮರಣವಿಧಿಗಾಗಿ ಹೇಳುತ್ತಾರೆ, ಕೆಲವೆಡೆ ತಿಳಿಯದಿದ್ದುದನ್ನು ತಿಳಿಸಲು ದೃಷ್ಟಾಂತರೂಪದಿಂದ ಹೇಳುತ್ತಾರೆ. ಹೀಗೆ ಎರಡು ಬಗೆ ಶಾಸ್ತ್ರಗಳಲ್ಲಿ ನಿರೂಪಣೆ ಇದೆ' ಎಂದು.

ವಲ್ಲೂರ ಎಂದರೆ ಒಂದು ಕುಣಿಯುವ ಪಕ್ಷಿ, ಅದಕ್ಕೆ ವಲ್ಲೂಕ ಎಂದೂ ಹೆಸರಿದೆ ಎಂದು ಅಭಿಧಾನಗ್ರಂಥದಲ್ಲಿ ಹೇಳಿದೆ.

ತಿರ್ಯಕ್ ಪ್ರಾಣಿಗಳಲ್ಲಿ ಇಪ್ಪತ್ತೆಂಟು ಜಾತಿಗಳನ್ನು ಮಾತ್ರ ಪರಿಗಣಿಸಲು ಕಾರಣ ಆ ಜಾತಿಗಳೇ ಯಾಗಗಳಲ್ಲಿ ವಿಶೇಷ ಉಪಯುಕ್ತವಾಗುವ ದೃಷ್ಟಿಯಿಂದ ಪ್ರಧಾನವಾಗಿವೆ. ಬೇರೆ ಯಾವುದು ಯಾವುದಕ್ಕೆ ಸದೃಶವಾಗಿರುವುದೋ ಅದು ಅದರಲ್ಲಿ ಸೇರಿಹೋಗುತ್ತದೆ. ಉದಾಹರಣೆಗೆ, ಸರ್ಪಗಳು ಕೀಟಗಳು ಮುಂತಾದ ಬೇರೆ ಜಾತಿಗಳು ಜಲಚರಜಾತಿಯಲ್ಲಿ ಸೇರುತ್ತವೆ ಏಕೆಂದರೆ ಅವೆಲ್ಲವುಗಳ ಶರೀರದಲ್ಲಿ ನೀರಿನ ಅಂಶ ಅಧಿಕವಾಗಿರುತ್ತದೆ ಎಂದು ಸತ್ಯಸಂಹಿತೆಯಲ್ಲಿಯೂ ಹೇಳಿದೆ.

* * *

ನವವಿಧ ಸೃಷ್ಟಿಯಲ್ಲಿ ಕೊನೆಯದಾದ ಅರ್ವಾಕ್‌ಸ್ರೋತಸರ ಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಅರ್ವಾಕ್‌ಸ್ರೋತಸ್ತು ನವಮಃ ಕ್ಷತ್ತರೇಕವಿಧೋ ನೃಣಾಮ್ ।
ರಜೋಽಧಿಕಾಃ ಕರ್ಮಪರಾ ದುಃಖೇ ಚ ಸುಖಮಾನಿನಃ ॥ ೨೫ ॥

ಅಧೋಗತಿ ಹೊಂದುವವರ ಸೃಷ್ಟಿ ಒಂಬತ್ತನೆಯದು. ಭೌತಿಕರಜೋಗುಣದಿಂದ ಹುಟ್ಟಿ ಅಧಿಕ ರಜೋಗುಣ ಉಳ್ಳವರು ಕಾಮ್ಯಕರ್ಮಪರರು ಮನುಷ್ಯರು. ಇವರದು ಒಂದು ವರ್ಗ. ಭೌತಿಕಲಮೋಗಣದಿಂದ ಹುಟ್ಟಿ ದುಃಖಸಾಧನದಲ್ಲಿ ಸುಖಸಾಧನವೆಂಬ ಭ್ರಮಕ್ಕೊಳಗಾಗುವವರು ಅಸುರರು. ಅವರದೂ ಒಂದು ವರ್ಗ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಅರ್ವಾಕ್‌ಸ್ರೋತಸ್ ಶಬ್ದಕ್ಕೆ 'ಉಂಡ ಆಹಾರ ಗಂಟಲಲ್ಲಿ ಕೆಳಗಿಳಿಯುತ್ತದೆ' ಎಂಬ ಅರ್ಥವಿಟ್ಟುಕೊಂಡು ಅವರು ಮಾನವರೆಂದೂ

೧. ಅಧ ಆಹಾರಸಂಚಾರೋ ಯಸ್ಯ ಸೋಽರ್ವಾಕ್‌ಸ್ರೋತಾಃ ।
–ಶ್ರೀಧರಃ ವಿಶ್ವನಾಥಃ ಶುಕದೇವಃ

ಮಾನವರಲ್ಲಿ ಒಂದೇ ಜಾತಿ. ಹಸುಕುದುರೆ ಎಂದು ಮುಂತಾಗಿ ಪ್ರಾಣಿಗಳಲ್ಲಿರುವಂತೆ ಜಾತಿಭೇದವಿಲ್ಲ, ಎಲ್ಲರೂ ರಜೋಗುಣದಿಂದ ತುಂಬಿದವರು, ಸಾತ್ವಿಕರೂ ಅಲ್ಲ, ತಾಮಸರೂ ಅಲ್ಲ, ಎಂದು ಹೇಳಿದ್ದಾರೆ. ಭಗವದ್ಭಕ್ತರಾದ ಮಾನವರು ಗುಣಾತೀತರು ದೇವತೆಗಳ ವರ್ಗದಲ್ಲಿ ಸೇರುತ್ತಾರೆ ಎಂದು [೧]ವಲ್ಲಭಾಚಾರ್ಯರು ಹೇಳುತ್ತಾರೆ. ಅವರೂ ಅರ್ವಾಕ್‌ಸ್ರೋತಸರಲ್ಲವೆ?

ವಸ್ತುತಃ ಭಾಗವತದಲ್ಲಿ ಅರ್ವಾಕ್‌ಸ್ರೋತಸರು ಒಂದೇ ವರ್ಗವೆಂದು ಹೇಳಿದಂತೆ ಕಂಡರೂ ತಾತ್ಪರ್ಯದಲ್ಲಿ ಹೇಳಿದ ವ್ಯೋಮಸಂಹಿತಾವಚನದಲ್ಲಿ ಎರಡು ವರ್ಗಗಳಿವೆ ಎಂದು ಸ್ಪಷ್ಟ ಹೇಳಿದೆ. ಅದಕ್ಕನುಗುಣವಾಗಿ ಭಾಗವತದಲ್ಲಿ 'ನೃಣಾಮೇಕವಿಧಃ' ಮನುಷ್ಯರದು ಒಂದು ವರ್ಗ ಎಂದ ಬಳಿಕ ಚಕಾರದಿಂದ 'ಅಸುರಾಣಾಂ ಚೈಕವಿಧಃ' ಅಸುರರದೂ ಒಂದು ವರ್ಗ ಎಂದು ವ್ಯಾಖ್ಯಾನಿಸಲು ಶಕ್ಯವಿದೆ. ಏಕೆಂದರೆ ರಜೋಗುಣ ಪ್ರಭಾವದಿಂದ ಯಾಗಾದಿ ಕಾಮ್ಯಕರ್ಮ ಮಾಡುವರೆಂದು ಹೇಳಿ, ಒಡನೆ ತಮೋಗುಣಪ್ರಭಾವದಿಂದ ದುಃಖಸಾಧನವನ್ನು ಸುಖಸಾಧನವೆಂದು ಭ್ರಮಿಸುವರೆಂದೂ ಹೇಳಿದೆ. ಈ ಸ್ವಭಾವ ಭೇದದಿಂದ ಎರಡು ವರ್ಗಗಳು ಬೇರೇ ಆಗಿವೆ ಎನ್ನುವುದು ಭಾಗವತಕ್ಕೆ ಸಮ್ಮತ. ಅರ್ವಾಕ್‌ಸ್ರೋತಸರೆಂದರೆ ಉಂಡ ಅನ್ನ ಗಂಟಲಲ್ಲಿ ಕೆಳಗಿಳಿಯುತ್ತದೆ ಎಂದು ಹೇಳಿದರೆ ದೇವತೆಗಳಿಗೂ ಉಂಡ ಅನ್ನ ಹಾಗೇ ಕೆಳಗೆ ಇಳಿಯುವುದರಿಂದ ಅವರೂ ಅರ್ವಾಕ್ ಸ್ರೋತಸರೆನ್ನಬೇಕಾದೀತು. ಅದರಿಂದ ಹಿಂದೆ ತಾತ್ಪರ್ಯದಲ್ಲಿ ಹೇಳಿದಂತೆ ಕೆಳಗಿನ ನರಕಗಳಿಗೆ ಇಳಿಯುವವರು ಅರ್ವಾಕ್ ಸ್ರೋತಸರು. ಅವರು ಮನುಷ್ಯರೆಂದೂ ಅಸುರರೆಂದೂ ಎರಡು ವರ್ಗದವರೆಂದೇ ಗ್ರಹಿಸಬೇಕು.

ರಜೋನಿಷ್ಠಾಸ್ತಮೋನಿಷ್ಠಾ ದ್ವೇಧಾಽರ್ವಾಕ್‌ಸ್ರೋತಸಃ ಸ್ಮೃತಾಃ ।
ಅಸುರಾದ್ಯಾಸ್ತಮೋನಿಷ್ಠಾ ಮಾನುಷಾಸ್ತು ರಜೋಽಧಿಕಾಃ ॥
ಇತಿ ವ್ಯೋಮಸಂಹಿತಾಯಾಂ ।

ದುಃಖೇ ಚ ಸುಖಮಾನಿನೋಽಸುರಾಃ ।

ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥
ಇತಿ ವಚನಾತ್ ।

---

೧. ಅರ್ವಾಗೇವ ಸ್ರೋತ ಆಹಾರ ಸಂಚಾರೋ ಯಸ್ಯ ಸ ನೃಣಾಂ ಸರ್ಗ ಏಕವಿಧ ಏವ । ರಜೋಗುಣ ಏವ ತೇಷಾಮಧಿಕಃ । ನ ಸಾತ್ವಿಕಾ ನಾಪಿ ತಾಮಸಾ ಇತಿ । ಯೇ ಪುನರ್ಭಗವದೀಯಾಃ ತೇ ಗುಣಾತೀತಾ ದೇವಾ ಏವ ನ ನರಾಃ ।
—ವಲ್ಲಭಾಚಾರ್ಯಃ

ಸುಖೇ ಸುಖೈಕಭಾವಾಸ್ತು ದೇವಾ ನೈವಂ ತು ದಾನವಾಃ ॥
ಇತಿ ಷಾಡ್ಗುಣ್ಯೇ ।

''ಭೌತಿಕ ರಜೋಗುಣದಿಂದ ಹುಟ್ಟಿದವರು, ಭೌತಿಕ ತಮೋಗುಣದಿಂದ ಹುಟ್ಟಿದವರೆಂದು ಅರ್ವಾಕ್ ಸ್ರೋತಸರು ಎರಡು ಬಗೆಯಾಗಿದ್ದಾರೆ. ಅಸುರರಾಕ್ಷಸ ಪಿಶಾಚಾದಿಗಳು ತಮೋಗುಣದಿಂದ ಹುಟ್ಟಿ ತಮೋಗುಣಕಾರ್ಯದಲ್ಲಿ ಆಸಕ್ತರು. ಮನುಷ್ಯರು ರಜೋಗುಣದಿಂದ ಹುಟ್ಟಿ ರಜೋಗುಣಕಾರ್ಯಪರರಾಗಿರುತ್ತಾರೆ'' ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ಭಾಗವತದಲ್ಲಿಯೂ 'ದುಃಖಸಾಧನವಾದ ವಿಷ್ಣುದ್ವೇಷಾದಿಗಳಲ್ಲಿ ಸುಖಸಾಧನತ್ವಭ್ರಮಉಳ್ಳವರೆ'ಂದು ಹೇಳಿದೆ. ಇವರು ಮನುಷ್ಯರಲ್ಲ. ಅಸುರರೇ ಎನ್ನುವುದು 'ಎಲ್ಲ ಪದಾರ್ಥಗಳನ್ನೂ ವಿಪರೀತವಾಗಿ ತಿಳಿಯುವುದು ತಾಮಸಬುದ್ಧಿ' ಎನ್ನುವ ಗೀತಾವಚನದಿಂದ ಸಿದ್ಧವಾಗುತ್ತದೆ. 'ಸುಖಸಾಧನದಲ್ಲಿಯೇ ಸುಖಸಾಧನವೆಂದು ಯಥಾರ್ಥಜ್ಞಾನ ಉಳ್ಳವರು ದೇವತೆಗಳು. ದಾನವರು ಹೀಗಲ್ಲ' ಎಂದು ಷಾಡ್ಗುಣ್ಯದಲ್ಲಿಯೂ ಹೇಳಿದೆ.

ಆದರಿಂದ ಭಾಗವತದಲ್ಲಿ ಮಾನವರ ಒಂದು ವರ್ಗವನ್ನು ಹೇಳಿದ್ದು ಉಪಲಕ್ಷಣ. ದಾನವರ ಇನ್ನೊಂದು ವರ್ಗವನ್ನೂ ಇಟ್ಟುಕೊಳ್ಳಬೇಕು. ಆಗ 'ದುಃಖೇ ಚ ಸುಖಮಾನಿನಃ' ಎಂಬುದು ಆ ದಾನವರ ವಿಷಯದಲ್ಲಿ ಕೂಡುತ್ತದೆ.

* * *

ಆರು ಪ್ರಾಕೃತಸೃಷ್ಟಿಗಳು ಮತ್ತು ಮೂರು ವೈಕೃತಸೃಷ್ಟಿಗಳೆಂದು ನವವಿಧಸೃಷ್ಟಿಯನ್ನು ಹೇಳಿ ಹತ್ತನೆಯದಾದ ದೇವಸೃಷ್ಟಿಯೊಂದಿದೆ. ಅದು ಪ್ರಾಕೃತವೂ ಹೌದು, ವೈಕೃತವೂ ಹೌದು ಎನ್ನುತ್ತಾರೆ ಮೈತ್ರೇಯರು–

ವೈಕೃತಾಸ್ತ್ರಯ ಏವೈತೇ ದೇವಸರ್ಗಶ್ಚ ಸತ್ತಮ ।
ವೈಕಾರಿಕಶ್ಚ ಯಃ ಪ್ರೋಕ್ತಃ ಕೌಮಾರಸ್ತೂಭಯಾತ್ಮಕಃ ॥ ೨೬ ॥

ಸ್ಥಾವರ ತಿರ್ಯಕ್ ಮನುಷ್ಯ ಎಂಬ ಈ ಮೂವರೆ ವೈಕೃತರು, ಪ್ರಾಕೃತಸೃಷ್ಟಿಯಲ್ಲಿ ವೈಕಾರಿಕವೆಂದು ಹಿಂದೆ ಹೇಳಿದ ದೇವಸೃಷ್ಟಿಯೆ ಕೌಮಾರ ಸೃಷ್ಟಿಯಲ್ಲಿ ವೈಕೃತವೂ ಆಗುವುದರಿಂದ ಅದು ಪ್ರಾಕೃತ ವೈಕೃತ ಎರಡೂ ಆಗಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ದೇವಸರ್ಗಶ್ಚ ವೈಕೃತಃ' ಸ್ಥಾವರಾದಿಗಳ ಸೃಷ್ಟಿ ಮಾತ್ರವಲ್ಲ ಅಷ್ಟವಿಧ ದೇವಸೃಷ್ಟಿಯೂ ವೈಕೃತ ಎಂದು ಚಕಾರದಿಂದ ಅನ್ವಯ

೧. ಏತೇ ತ್ರಯೋ ವೈಕೃತಾ ಏವ । ನ ಕೌಮಾರವದುಭಯಾತ್ಮಕಾಃ । ದೇವಸರ್ಗಶ್ಚ ವೈಕೃತ ಇತ್ಯನುಷಂಗಃ । ವೈಕಾರಿಕಸ್ತು ದೇವಸರ್ಗಃ ಪ್ರಾಕೃತೇಷು ಪೂರ್ವಮೇವ

ಹೇಳುತ್ತಾರೆ. ಆದರೆ 'ತ್ರಯ ಏವ' ಸ್ಥಾವರಾದಿಗಳು ಮೂರು ಮಾತ್ರ ವೈಕೃತ ಎಂದು ಏವಕಾರ ಕೂಡುವುದಿಲ್ಲ. [1]"ಹಿಂದೆ ವೈಕಾರಿಕದೇವಸೃಷ್ಟಿಯನ್ನು ಪ್ರಾಕೃತಸೃಷ್ಟಿಯ ಮಧ್ಯದಲ್ಲಿ ಹೇಳಿದೆ. ಈಗ ಹೇಳುವ ಅಷ್ಟವಿಧ ದೇವಸೃಷ್ಟಿ ವೈಕೃತ. ಆದರೂ ದೇವಸೃಷ್ಟಿಯಾದ್ದರಿಂದ ಹಿಂದಿನ ಪ್ರಾಕೃತದೇವಸೃಷ್ಟಿಯಲ್ಲಿಯೇ ಸೇರುತ್ತದೆ. ಕೌಮಾರಸೃಷ್ಟಿಮಾತ್ರ ಬೇರೆಯೆ ಏಕೆಂದರೆ ಅದು ಪ್ರಾಕೃತ ವೈಕೃತ ಉಭಯಾತ್ಮಕ. ಸನತ್ಕುಮಾರಾದಿಗಳು ದೇವತೆಗಳೂ ಆಗಿದ್ದಾರೆ ಮನುಷ್ಯರೂ ಆಗಿದ್ದಾರೆ. ದೇವತೆಗಳಾದ್ದರಿಂದ ಪ್ರಾಕೃತರು. ಮನುಷ್ಯರಾದ್ದರಿಂದ ವೈಕೃತರು' ಎಂದು ಶ್ರೀಧರವ್ಯಾಖ್ಯಾನ. [2]ಶುಕದೇವವ್ಯಾಖ್ಯಾನ ಅದನ್ನು ನಿರಾಕರಿಸುತ್ತದೆ. 'ಕುಮಾರರು ಭಗವಂತನ ಅವತಾರಭೂತರು ಅವರು ಮನುಷ್ಯರೆಂದು ಯಾರೂ ಕಂಡಿಲ್ಲ, ಕೇಳಿಲ್ಲ. ಅದರಿಂದ ಅವರು ಪ್ರತಿಕಲ್ಪದಲ್ಲೂ ಜ್ಞಾನಭಕ್ತಿಸಂಪ್ರದಾಯ ಪ್ರವರ್ತಕರಾಗಿ ಚಿರಸ್ಥಾಯಿಗಳಾದ್ದರಿಂದ ಪ್ರಾಕೃತದೇವತೆಗಳಿಗೆ ತುಲ್ಯರು. ಬ್ರಹ್ಮಸೃಷ್ಟಿಯಲ್ಲಿ ಪ್ರಾದುರ್ಭೂತರಾದ್ದರಿಂದ ವೈಕೃತರು. ಹೀಗೆ ಉಭಯಾತ್ಮಕರು' ಎನ್ನುತ್ತದೆ. ಭಗವಂತನ ಧ್ಯಾನ ಮಾಡಿ ಪವಿತ್ರವಾದ ಮನಸಿನಿಂದ ಕುಮಾರರನ್ನು ಬ್ರಹ್ಮಸೃಷ್ಟಿಸಿದ. ಅದರಿಂದ ಬ್ರಹ್ಮಸೃಷ್ಟಿಯಾದ್ದರಿಂದ ವೈಕೃತ, ಭಗವಂತನ ಧ್ಯಾನದಿಂದ ಹುಟ್ಟಿದ್ದರಿಂದ 'ಭಗವಂತನ ಸೃಷ್ಟಿ ಎಂದು ಪ್ರಾಕೃತ. ಹೀಗೆ ಉಭಯಾತ್ಮಕ' ಎನ್ನುತ್ತದೆ

ಪ್ರೋಕ್ತಃ । ಅಯಂ ತು ತತೋ ನ್ಯೂನತ್ವಾತ್ ವೈಕೃತಃ । ದೇವಸರ್ಗತ್ವಾತ್ ತದಂತರ್ಭೂತಶ್ಚ । ಸನತ್ಕುಮಾರಾದೀನಾಂ ಸರ್ಗಸ್ತು ಪ್ರಾಕೃತೋ ವೈಕೃತಶ್ಚ । ದೇವತ್ವೇನ ಮನುಷ್ಯತ್ವೇನ ಚ ಸೃಜ್ಯತ ಇತ್ಯರ್ಥಃ । –ಶ್ರೀಧರಃ

೨. ಯತ್ತು ದೇವತ್ವೇನ ಮನುಷ್ಯತ್ವೇನ ಚ ಸೃಜ್ಯತ ಇತ್ಯರ್ಥ ಇತಿ ತದಯುಕ್ತಂ । ಕುಮಾರಾಣಾಂ ಭಗವದವತಾರಾಣಾಮಿಹಾನ್ಯತ್ರ ಚ ಮನುಷ್ಯತ್ವಸ್ಯಾದೃಷ್ಟತ್ವಾದಶ್ರುತತ್ವಾಚ್ಚ । ಸಿದ್ಧಶಿರೋಮಣೀನಾಂ ಕೌಮಾರಃ ಸರ್ಗಃ ವೈಕೃತಃ । ಸರ್ವೇಷು ಕಲ್ಪೇಷು ಜ್ಞಾನಭಕ್ತಿಸಂಪ್ರದಾಯಪ್ರವರ್ತಕತ್ವೇನಾ ನುವರ್ತಮಾನಾನಾಂ ತೇಷಾಂ ಪ್ರತ್ಯಹಂ ಪ್ರಾದುರ್ಭಾವಾಭಾವಾತ್ ಚಿರಸ್ಥಾಯಿತ್ವೇನ ಚಿರಸ್ಥಾಯಿಷು ಪ್ರಾಕೃತೇಷು ಗಣನಾತ್ ಪ್ರಾಕೃತಶ್ಚೇತ್ಯೇವಮುಭಯಾತ್ಮಕ ಇತ್ಯರ್ಥಃ । –ಶುಕದೇವಃ

ಬ್ರಹ್ಮಸೃಷ್ಟತ್ವಾದ್ ವೈಕೃತಃ । ಭಗವದ್ಧ್ಯಾನಜನ್ಯತ್ವೇನ ಭಗವಜ್ಜನ್ಯತ್ವಾಚ್ಚ ಪ್ರಾಕೃತಃ । –ವಿಶ್ವನಾಥಃ

ಕುಮಾರಾಣಾಮಾದಾವೇವ ಬ್ರಹ್ಮಣಾ ಸೃಷ್ಟತ್ವಾತ್ ಪ್ರಾಕೃತಾಂತರ್ಭಾವಃ । ಕುಮಾರೇಷ್ವಂತರ್ಭೂತೋ ನೀಲಲೋಹಿತಸ್ತು ಸನಕಾದಿಭಿಃ ಸಹ ಸೃಷ್ಟೋಽಪಿ ಪ್ರತಿಕಲ್ಪಂ ಸೃಜ್ಯತೇ । ತತಸ್ತಸ್ಯ ವೈಕೃತತ್ವಮಿತ್ಯುಭಯಾತ್ಮಕಃ । –ವೀರರಾಘವಃ

ವಿಶ್ವನಾಥವ್ಯಾಖ್ಯಾನ. 'ಕುಮಾರರನ್ನು ಬ್ರಹ್ಮ ಆದಿಯಲ್ಲಿಯೇ ಸೃಷ್ಟಿಸಿದ್ದರಿಂದ ಪ್ರಾಕೃತ. ಅವರಲ್ಲಿ ನೀಲಲೋಹಿತ ರುದ್ರನೂ ಕುಮಾರರೊಂದಿಗೇ ಉತ್ಪನ್ನನಾಗಿದ್ದರೂ ಪ್ರತಿಕಲ್ಪದಲ್ಲಿ ಅವನಿಗೆ ಸೃಷ್ಟಿ ಇರುವುದರಿಂದ ವೈಕೃತ. ಹೀಗೆ ಉಭಯಾತ್ಮಕ' ಎಂದು ವೀರರಾಘವವ್ಯಾಖ್ಯಾನ. ಇವೆಲ್ಲ ಕಲ್ಪನೆಗಳು ಪ್ರಮಾಣ ವಿರುದ್ಧವಾಗಿವೆ–

> ಕುಮಾರಂತೀತಿ ಕೌಮಾರೋ ದೇವಾನಾಮಂಡಜೋದ್ಭವಃ ।
> ವೈಕಾರಿಕಾಣಾಂ ಜನನಾತ್ ಪ್ರಾಕೃತೋ ವೈಕೃತಶ್ಚ ಸಃ ॥
>
> ವೈಕಾರಿಕೇಷ್ವೇವಾನ್ಯೇಷಾಮೀಷದ್‌ಭೋಗಿತ್ವಹೇತುತಃ ।
> ಉಭಯಾತ್ಮಕತ್ವೇನೈವ ಪ್ರೋಚ್ಯಂತೇಽಷ್ಟಗಣಾ ಅಪಿ ॥ ಇತಿ ಚ ।

ದೇವಸರ್ಗಶ್ಚೇತಿ ಚಕಾರಾರ್ಥ ಉಭಯಾತ್ಮಕ ಇತಿ । ವೈಕಾರಿಕಸ್ತು ದೇವಸರ್ಗಃ ಪ್ರಾಕೃತತ್ವೇನೋಕ್ತಃ ।

'ಕೌಮಾರಸೃಷ್ಟಿ ಎಂದರೆ ಕುಮಾರರಿಗೆ ಸಂಬಂಧಿಸಿದ ಸೃಷ್ಟಿ. ಕು–ಮಾ–ಅರಂತಿ ಭೂಮಿಯಲ್ಲಿ ನಿರ್ಮಾಣವನ್ನು ಹೊಂದುತ್ತಾರೆ, ಅವರು ಕುಮಾರರು. 'ಕೌ ಮಾಂ' ಎಂದು ಸಪ್ತಮೀ ದ್ವಿತೀಯಾ ವಿಭಕ್ತಿಗಳಿಗೆ ಛಾಂದಸಲೋಪ. 'ಅರಂತಿ' ಎಂಬುದು ಋ ಗತೌ ಧಾತು, ಋಚ್ಛ ಆದೇಶ ಮಾಡಿಲ್ಲ. ಇದರಿಂದ ಬ್ರಹ್ಮಾಂಡದ ಹೊರಗೆ ಪ್ರಾಕೃತಸೃಷ್ಟಿಯಲ್ಲಿ ಹುಟ್ಟಿದ ವೈಕಾರಿಕ ದೇವತೆಗಳೇ ತಿರುಗಿ ವೈಕೃತರಾಗಿ ಬ್ರಹ್ಮಾಂಡದೊಳಗೆ 'ಕೌ' ಭೂಮಿಯಲ್ಲಿ 'ಮಾಂ' ನಿರ್ಮಾಣವನ್ನು ಅಂದರೆ ಸೃಷ್ಟಿಯನ್ನು ಹೊಂದುವುದರಿಂದ ಕುಮಾರರೆನಿಸುತ್ತಾರೆ. ಇದು ಕ್ಲಿಷ್ಟಕಲ್ಪನೆ ಎನ್ನಬಾರದು, ಪ್ರಮಾಣಸಿದ್ಧವಾಗಿದೆ. ಅದರಿಂದ ಸನತ್ಕುಮಾರರೆಂಬ ಅರ್ಥವಿಟ್ಟು ಕೊಂಡು ಅವರಿಗೆ ಪ್ರಾಕೃತವೈಕೃತ ಉಭಯಾತ್ಮಕತ್ವವನ್ನು ಉಪಪಾದನೆ ಮಾಡಲು ಕ್ಲೇಶಪಡುವುದೇ ಅನುಚಿತ. ಪಿತೃ ಅಸುರ ಮುಂತಾದ ಅಷ್ಟವಿಧ ದೇವತೆಗಳಿಗೆ ಪ್ರಾಕೃತಸೃಷ್ಟಿಯನ್ನು ಹಿಂದೆ ಹೇಳದಿದ್ದರೂ ಅವರೂ ಯಜ್ಞಾದಿಗಳಲ್ಲಿ ಆಹುತಿ ಸ್ವೀಕರಿಸಲು ಅರ್ಹರಾದ್ದರಿಂದ ವೈಕಾರಿಕದೇವತೆಗಳಲ್ಲಿಯೇ ಸೇರುತ್ತಾರೆ. ಅದರಿಂದ ಹಿಂದೆ ಅವರಿಗೆ ಪ್ರಾಕೃತಸೃಷ್ಟಿ ಉಕ್ತವಾದಂತೆಯೇ. ಈಗ ತಿರುಗಿ ಭೂಮಿಯಲ್ಲಿ ವೈಕೃತಸೃಷ್ಟಿ ಹೊಂದುವುದರಿಂದ ಉಭಯಾತ್ಮಕರೆನಿಸುತ್ತಾರೆ' ಎಂದು ಹೇಳಿದೆ.

ದೇವಸರ್ಗಶ್ಚ ಎಂದು ಚಕಾರವು ವೈಕೃತ ಎಂದು ಹೇಳಿದ್ದರ ಸಮುಚ್ಚಯ ಮಾಡುವುದಿಲ್ಲ. ಮುಂದೆ ಹೇಳುವ ಉಭಯಾತ್ಮಕಃ ಎಂಬುದನ್ನು ಸಮುಚ್ಚಯ ಮಾಡುತ್ತದೆ. ಹೇಗೆಂದರೆ ವೈಕಾರಿಕದೇವಸೃಷ್ಟಿ ಹಿಂದೆ ಪ್ರಾಕೃತವೆಂದು ಉಕ್ತವಾಗಿದೆ. ಈಗ ಕೌಮಾರಶಬ್ದದಿಂದ ವೈಕೃತವೆಂದೂ ಉಕ್ತವಾಗಿದೆ. ಹೀಗೆ ಉಭಯಾತ್ಮಕ ಎಂದು.

* * *

ಅಷ್ಟವಿಧ ದೇವಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ದೇವಸರ್ಗಶ್ಚಾಷ್ಟವಿಧೋ ವಿಬುಧಾಃ ಪಿತರೋಽಸುರಾಃ ।
ಗಂಧರ್ವಾಪ್ಸರಸಃ ಸಿದ್ಧಾ ಯಕ್ಷರಕ್ಷಾಂಸಿ ಚಾರಣಾಃ ॥ ೨೭ ॥

ಭೂತಪ್ರೇತಪಿಶಾಚಾಶ್ಚ ವಿದ್ಯಾಧ್ರಾಃ ಕಿನ್ನರಾದಯಃ ।
ದಶೈತೇ ವಿದುರಾಖ್ಯಾತಾಃ ಸರ್ಗಾಸ್ತೇ ವಿಸ್ವಸೃಕ್ಕೃತಾಃ ॥ ೨೮ ॥

ದೇವತೆಗಳ ಸೃಷ್ಟಿ ಎಂಟು ಬಗೆ. ಎಲ್ಲ ದೇವತೆಗಳು, ಪಿತೃಗಳು, ಅಸುರರು, ಗಂಧರ್ವಅಪ್ಸರೆಯರು, ಸಿದ್ಧರು, ಯಕ್ಷರಾಕ್ಷಸರು, ಚಾರಣರು ಮತ್ತು ಭೂತಪ್ರೇತಪಿಶಾಚ ವಿದ್ಯಾಧರ ಕಿನ್ನರ ಮುಂತಾದವರು ಎಂದು. ಹೀಗೆ ವಿದುರ, ಹತ್ತು ಸೃಷ್ಟಿಗಳನ್ನು ಸೃಷ್ಟಿಕರ್ತ ಹೇಗೆ ಮಾಡಿದನೆಂದು ನಿನಿಗೆ ಹೇಳಿದ್ದೇನೆ.

ಇಲ್ಲಿ ಶ್ರೀಧರ ವ್ಯಾಖ್ಯಾನಪ್ರಕಾರ ವಿಬುಧರು, ಪಿತೃಗಳು, ಅಸುರರು, ಗಂಧರ್ವಾಪ್ಸರರು, ಯಕ್ಷರಾಕ್ಷಸರು, ಭೂತಪ್ರೇತಪಿಶಾಚರು, ಸಿದ್ಧಚಾರಣ ವಿದ್ಯಾಧರರು, ಕಿನ್ನರಕಿಂಪುರುಷಾದಿಗಳು ಎಂದು ಎಂಟು ದೇವಸರ್ಗಗಳು. ವೀರರಾಘವವ್ಯಾಖ್ಯಾನಪ್ರಕಾರ ವಿಬುಧಪಿತೃಗಳು, ಅಸುರರು, ಗಂಧರ್ವಾಪ್ಸರರು, ಸಿದ್ಧರು, ಯಕ್ಷರಾಕ್ಷಸರು, ಚಾರಣವಿದ್ಯಾಧರರು, ಭೂತಪ್ರೇತಪಿಶಾಚರು, ಕಿಂನರಕಿಂಪುರುಷಾದಿಗಳೆಂದು ಎಂಟು ವರ್ಗಗಳು. ಶುಕದೇವವ್ಯಾಖ್ಯಾನವೂ ಹಾಗೇ ಹೇಳುತ್ತದೆ. ವಿಬುಧರು, ಪಿತೃಅಸುರರು, ಗಂಧರ್ವಅಪ್ಸರರು, ಸಿದ್ಧರು, ಯಕ್ಷರಾಕ್ಷಸರು, ಚಾರಣರು, ಭೂತಪ್ರೇತಪಿಶಾಚವಿದ್ಯಾಧರರು, ಕಿನ್ನರ ಕಿಂಪುರುಷಾದಿಗಳು ಎಂದು ವಲ್ಲಭವ್ಯಾಖ್ಯಾನ. ಯಾರೂ ತಾವು ಹೇಳಿದ ವಿಭಾಗಕ್ಕೆ ಪ್ರಮಾಣದ ಆಧಾರ ನೀಡಿಲ್ಲ. ರಾಧಾರಮಣವ್ಯಾಖ್ಯಾನದಲ್ಲಿ ಮಾತ್ರ ಶ್ರೀಧರವ್ಯಾಖ್ಯಾನದಲ್ಲಿ ಹೇಳಿದ ವಿಭಾಗವನ್ನು ಸಮರ್ಥಿಸಲು ಹೀಗೆ ಹೇಳಿದೆ– ವಿಬುಧ ಪಿತೃ ಅಸುರರ ಸೃಷ್ಟಿಗೆ ಬ್ರಹ್ಮದೇವರು ಕ್ರಮವಾಗಿ ಅಹಸ್ ಪರೋಕ್ಷ ಸಂಧ್ಯಾ ಎಂಬ ಶರೀರಗಳನ್ನು ಸಂಗ್ರಹಿಸಿದರು. ಗಂಧರ್ವಾಪ್ಸರಸೃಷ್ಟಿಗೆ ಕಾಂತಿ ಎಂಬ ಶರೀರವನ್ನು ಯಕ್ಷರಾಕ್ಷಸ ಸೃಷ್ಟಿಗೆ ರಾತ್ರಿ ಎಂಬ ಶರೀರವನ್ನೂ ಭೂತಪ್ರೇತಪಿಶಾಚ ಸೃಷ್ಟಿಗೆ ತಂದ್ರಿ ಎಂಬ ಶರೀರವನ್ನು, ಸಿದ್ಧಚಾರಣವಿದ್ಯಾಧರ ಸೃಷ್ಟಿಗೆ ತಿರೋಧಾನಶಕ್ತಿಯನ್ನೂ, ಕಿನ್ನರಕಿಂಪುರುಷರ, ಸೃಷ್ಟಿಗೆ ಪ್ರತಿಬಿಂಬವನ್ನೂ, ಪರಿಗ್ರಹಿಸಿದರು. ಅದರಿಂದ ಎಂಟು ವಿಭಾಗ ಸರಿ ಎಂದು. ಆದರೆ ಒಂದು ಶರೀರದಿಂದ ಒಂದು ವಿಭಾಗದ ದೇವತೆಗಳನ್ನೇ ಸೃಷ್ಟಿಸಬೇಕೆಂದು ನಿಯಮಕ್ಕೆ ಆಧಾರವಿಲ್ಲ. ಒಂದೇ ವಿಭಾಗದಲ್ಲಿ ಬರುವ ಸಿದ್ಧ ಚಾರಣ ವಿದ್ಯಾಧರರನ್ನು ಶ್ಲೋಕದಲ್ಲಿ ಜೊತೆಗೆ ಹೇಳದಿರಲು ಕಾರಣವಿಲ್ಲ. ಮತ್ತು ಇಲ್ಲಿ ಸೃಷ್ಟರಾದ

ಯಕ್ಷರಾಕ್ಷಸರು ಮುಂತಾದವರು ಮೂಢರೆಂದು ಭಾಗವತವೇ ಹೇಳುವುದರಿಂದ ಅವರು ದೇವತೆಗಳೆ ಅಲ್ಲ. ತಾತ್ಪರ್ಯದಲ್ಲಿ ಹೇಳಿದ ತತ್ತ್ವವಿವೇಕವಚನದಲ್ಲಿ ಯಕ್ಷರಾಕ್ಷಸರು ಮುಂತಾದವರಲ್ಲಿ ಕೆಲವರೇ ಊರ್ಧ್ವ ಸ್ರೋತಸರು ಎಂದು ಅವರ ಸಂಖ್ಯೆಯನ್ನು ನಿರ್ದೇಶಿಸಿದ್ದಾರೆ. ಅವರು ಮಾತ್ರ ದೇವತೆಗಳು.

ಪ್ರೋಕ್ತಾ ಅಷ್ಟವಿಧಾ ದೇವಾ ವಿಬುಧಾಃ ಸರ್ವ ಏವ ತು ।
ಪಿತೄಣಾಂ ಶತಮೇವಾತ್ರ ಅಸುರಾಸ್ತ್ರಿಂಶದೇವ ಚ ॥

ಗಂಧರ್ವಾಪ್ಸರಸಾಂ ಚೈವ ದ್ವಿಶತಂ ಪರಿಕೀರ್ತಿತಮ್ ।
ಸಪ್ತತಿರ್ಯಕ್ಷರಕ್ಷಃಸು ತ್ರಿಂಶಚ್ಚಾರಣಜಾತಿಷು ॥

ಶತಂ ಸಿದ್ಧಾಸ್ತಥಾಽನ್ಯಾಸು ಸಪ್ತತಿಃ ಸರ್ವಜಾತಿಷು ।
ಊರ್ಧ್ವಸ್ರೋತಸ ಏವೈತೇ ಅನ್ಯೇಽರ್ವಾಕ್‌ಸ್ರೋತಸಃ ಸ್ಮೃತಾಃ ॥

ವೈಕಾರಿಕೇಷು ದೇವೇಷು ಏತೇ ವೈ ಮುಗ್ಧಭೋಗಿನಃ ।
ಅಭೋಗಿನಸ್ತದನ್ಯೇ ತು ದೇವಾ ಏತೇ ತತಃ ಸ್ಮೃತಾಃ ॥

ಸರ್ವಜ್ಞಾಸ್ತೈಃ ಸಹಾರಾಧ್ಯಾ ಭಕ್ತಾಸ್ತೇಷ್ವಂತರೇವ ಚ ।
ನೃತ್ತಗಾನಾದಿಕರ್ತಾರೋ ವಹನಾದಿಕೃತಸ್ತಥಾ ॥

ಸಿದ್ಧಸಿದ್ಧೇತಿ ವಕ್ತಾರಶ್ಚಾರಾಶ್ಚೈಷಾಂ ಕ್ವಚಿತ್‌ಕ್ವಚಿತ್ ।
ಸೇವಾಕರಾ ಇತಿ ಹ್ಯೇತೈರ್ಭೇದೈರಷ್ಟವಿಧಾ ಮತಾಃ ॥

ಅನ್ಯೇ ಚ ಯೇ ತು ಸರ್ವಜ್ಞಾ ವಿಬುಧಾಸ್ತೇ ಪ್ರಕೀರ್ತಿತಾಃ ।
ತಥಾನ್ಯೇ ಕರ್ಮಭಿಸ್ತೈಸ್ತೈರಷ್ಟಭೇದಾಂತರಂ ಗತಾಃ ॥

ಇತಿ ತತ್ತ್ವವಿವೇಕೇ ।

ಯದಿ ದೇವಾದಯೋ ದೋಷಾಜ್ಜಾಯೇರನ್ ಮಾನುಷಾದಿಷು ।
ತಥಾಪಿ ದೇವಾ ವಿಜ್ಞೇಯಾ ಅಸುರಾದ್ಯಾಸ್ತಥಾ ಧ್ರುವಮ್ ॥

ಇತಿ ಚ ॥

ಎಂಟು ಬಗೆಯ ದೇವಸೃಷ್ಟಿ ಹೀಗೆ ೧. ಎಲ್ಲದೇವತೆಗಳು ೨. ನೂರುಮಂದಿ ಪಿತೃಗಳು ೩. ಮೂವತ್ತು ಮಂದಿ ಅಸುರರು ೪. ನೂರುಮಂದಿ ಗಂಧರ್ವರು ಮತ್ತು ನೂರು ಮಂದಿ ಅಪ್ಸರೆಯರೆಂದು ಒಟ್ಟು ಇನ್ನೂರು, ೫. ಎಪ್ಪತ್ತು ಮಂದಿ ಯಕ್ಷರಾಕ್ಷಸರು,

೬. ಮೂವತ್ತು ಮಂದಿ ಚಾರಣಜಾತಿಯವರು, ೭. ನೂರು ಮಂದಿ ಸಿದ್ಧರು, ೮. ಎಪ್ಪತ್ತು ಮಂದಿ ಭೂತಪ್ರೇತಪಿಶಾಚವಿಧ್ಯಾಧರಕಿನ್ನರಾದಿಗಳ ಬೇರೆ ವರ್ಗದವರು ಎಂದು. ಇವರೆಲ್ಲರೂ ಊರ್ಧ್ವಸ್ರೋತಸರು. ಅತ್ಯುತ್ತಮಗತಿ ಹೊಂದಲು ಯೋಗ್ಯರು.

ಉಳಿದ ಪಿತ್ರಾದಿಗಳು ಅರ್ವಾಕ್‌ಸ್ರೋತಸರು, ನರಕಭಾಗಿಗಳು. ಊರ್ಧ್ವಸ್ರೋತಸರು ವೈಕಾರಿಕದೇವತೆಗಳಲ್ಲಿ ಸೇರುತ್ತಾರೆ. ಏಕೆಂದರೆ ಅವರೂ ಇಂದ್ರಾದಿದೇವತೆಗಳಂತೆ ಯಜ್ಞಗಳಲ್ಲಿ ಹವಿರಾದಿಸ್ವಲ್ಪಸಾರವನ್ನು ಭೋಗಿಸುತ್ತಾರೆ. ಬೇರೆಯವರು ಅದನ್ನೂ ಭೋಗಿಸಲು ಅರ್ಹರಲ್ಲ. ಅದರಿಂದ ಅವರು ಮಾತ್ರ ದೇವತೆಗಳು.

ಅವರು ಜಾತಿಯಿಂದ ಮಾತ್ರವಲ್ಲದೆ ಗುಣಕರ್ಮಗಳ ದೃಷ್ಟಿಯಿಂದಲೂ ಎಂಟು ವರ್ಗದವರಾಗಿ ವಿಭಾಗಕ್ಕೆ ಯೋಗ್ಯರು. ಹೇಗೆಂದರೆ ೧. ಮೊದಲನೆ ವರ್ಗದವರಾದ ದೇವತೆಗಳು ಸರ್ವಜ್ಞರು. ೨. ಪಿತೃಗಳು ಶ್ರಾದ್ಧದಲ್ಲಿ ವಿಶ್ವೇದೇವತೆಗಳೊಂದಿಗೆ ಪೂಜ್ಯರು. ೩. ಅಸುರರು ಹೊರಗೆ ದೇವತೆಗಳಲ್ಲಿ ದ್ವೇಷ ತೋರಿದರೂ ಹೃದಯದಲ್ಲಿ ಭಕ್ತಿ ಉಳ್ಳವರು ೪. ಗಂಧರ್ವಅಪ್ಸರೆಯರು ದೇವತೆಗಳ ಸಂತೋಷಕ್ಕಾಗಿ ಗಾನನಾಟ್ಯಗಳನ್ನು ನಡೆಸುತ್ತಾರೆ. ೫. ಯಕ್ಷರಾಕ್ಷಸರು ದೇವತೆಗಳಿಗೆ ವಾಹನಸೇವೆಯನ್ನು ಯುದ್ಧಗಳಲ್ಲಿ ಸಹಾಯವನ್ನು ಮಾಡುತ್ತಾರೆ. ೬. ಸಿದ್ಧರು ದೇವಕಾರ್ಯಗಳನ್ನು ಯಾವಾಗಲೂ 'ಸಿದ್ಧವಾಯಿತು ಸಿದ್ಧವಾಯಿತು' ಎನ್ನುತ್ತಾರೆ. ೭. ಚಾರಣರು ದೇವತೆಗಳಿಗೆ ದೂತರಾಗಿ ಕೆಲಸಮಾಡುತ್ತಾರೆ. ೮. ಭೂತಪ್ರೇತಮುಂತಾದವರು ಬೇರೆ ಬೇರೆ ಕಾರ್ಯಗಳಲ್ಲಿ ದೇವತೆಗಳಿಗೆ ಸೇವೆ ಮಾಡುವರು.

ವಸಿಷ್ಠ ಮುಂತಾದ ಸರ್ವಜ್ಞಾನಿಗಳಾದ ಋಷಿಮುನಿಗಳೂ ಕೂಡ ಮೊದಲನೆ ವರ್ಗದಲ್ಲಿ ದೇವತೆಗಳಲ್ಲಿಯೇ ಸೇರುತ್ತಾರೆ. ದೇವತೆಗಳೊಂದಿಗೆ ಪೂಜ್ಯರೆನಿಸುವುದು ಮುಂತಾದ ಲಕ್ಷಣಗಳುಳ್ಳವರು ಬೇರೆಯವರಿದ್ದರೆ ಅವರೂ ಆಯಾ ಲಕ್ಷಣದ ಎಂಟು ವರ್ಗಗಳಲ್ಲಿಯೇ ಸೇರುತ್ತಾರೆಂದು ತತ್ವವಿವೇಕದಲ್ಲಿ ಹೇಳಿದೆ.

ದೈತ್ಯರು ಮನುಷ್ಯಾದಿಗಳಲ್ಲಿ ಹುಟ್ಟಿದರೂ ದೈತ್ಯರಾಗಿಯೇ ಇರುವಂತೆ ದೇವತೆಗಳು ಪಿತೃಗಳು ಮುಂತಾದವರು ಶಾಪಾದಿ ದೋಷವಶದಿಂದ ಮನುಷ್ಯ ಪಶು ಪಕ್ಷಿ ಮುಂತಾದವರಾಗಿ ಹುಟ್ಟಿದಾಗಲೂ ದೇವ ಪಿತೃ ಮುಂತಾದವರಾಗಿಯೇ ಇರುತ್ತಾರೆ ಎಂದು ತಿಳಿಯಬೇಕು. ಅವರ ದೇವಪಿತೃಮುಂತಾದ ಜಾತಿ ಹೊರಟು ಹೋಗುವುದಿಲ್ಲ ಎಂದೂ ಅಲ್ಲಿ ಹೇಳಿದೆ.

* * *

ಸೃಷ್ಟಿಕಾರ್ಯದಲ್ಲಿ ಬ್ರಹ್ಮಾದಿಗಳು ನಿಮಿತ್ತಮಾತ್ರರು. ಶ್ರೀಹರಿಯೇ ಸ್ವತಂತ್ರನಾಗಿ ಎಲ್ಲವನ್ನೂ ಸೃಜಿಸಿ ಎಲ್ಲದರೊಳಗೂ ನಿಯಾಮಕನಾಗಿ ತಾನೂ ಬಹುರೂಪಗಳನ್ನು ಸೃಜಿಸಿಕೊಳ್ಳುತ್ತಾನೆ ಎನ್ನುತ್ತಾರೆ ಮೈತ್ರೇಯರು–

ಏವಂ ರಜಃಪ್ಲುತಃ ಸ್ರಷ್ಟಾ ಕಲ್ಪಾದಿಷ್ವಾತ್ಮಭೂರ್ಹರಿಃ ।
ಸೃಜತ್ಯಮೋಘಸಂಕಲ್ಪ ಆತ್ಮೈವಾತ್ಮಾನಮಾತ್ಮನಾ ॥ ೨೯ ॥

ಹೀಗೆ ಸರ್ವಸ್ವತಂತ್ರ, ಸತ್ಯಸಂಕಲ್ಪನಾದ ಸೃಷ್ಟಿಕರ್ತನಾದ ಶ್ರೀಹರಿ ಕಲ್ಪಗಳ ಆದಿಯಲ್ಲಿ ರಜೋಗುಣಪ್ರವರ್ತಕನಾಗಿ ತಾನೇ ಜೀವರನ್ನು ದೇವಮನುಷ್ಯಾದಿ ರೂಪದಿಂದ ಸೃಜಿಸುತ್ತಾನೆ. ಅವರಿಗೆ ಪ್ರಕೃತಿಯ ಪರಿಣಾಮವಾದ ದೇಹಗಳನ್ನಿತ್ತು ಅವುಗಳಿಗೆ ನಿಯಾಮಕನಾಗಿ ತಾನೂ ಬಹುರೂಪಗಳನ್ನು ಸೃಜಿಸಿ ಕೊಳ್ಳುತ್ತಾನೆ.

[೧]ಇಲ್ಲಿ ವೀರರಾಘವ ವ್ಯಾಖ್ಯಾನಪ್ರಕಾರ 'ರಜೋಗುಣಬದ್ಧನಾದ ಬ್ರಹ್ಮ ಹರಿಗೆ ಶರೀರ. ಅದರಿಂದ ಬ್ರಹ್ಮನ ಮೂಲಕ ಹರಿಯೇ ರಜೋಗುಣದ ಉದ್ರೇಕದಿಂದ ತನ್ನನ್ನೇ ತಾನು ಪರಿಣಾಮಗೊಳಿಸಿಕೊಳ್ಳುತ್ತಾನೆ. ಏಕೆಂದರೆ ಅವನು ಸತ್ಯಸಂಕಲ್ಪ. ಇದು ಉಪಲಕ್ಷಣ. ಸರ್ವಶಕ್ತ, ಸರ್ವಜ್ಞನಾಗಿದ್ದಾನೆ ಎಂದರ್ಥ. ಲೋಕದಲ್ಲಿ ಮಣ್ಣಿಗೆ ಜ್ಞಾನವಿಲ್ಲ, ಕುಂಬಾರನಿಗೆ ಶಕ್ತಿ ಇಲ್ಲ. ಹೀಗಾಗಿ ಮಣ್ಣು ಕೇವಲ ಪರಿಣಾಮಿಕಾರಣ, ಕುಂಬಾರ ನಿಮಿತ್ತಕಾರಣ. ಹರಿಯಲ್ಲಿ ಜ್ಞಾನವಿರುವುದರಿಂದ ನಿಮಿತ್ತಕಾರಣನೂ ಶಕ್ತಿ ಇರುವುದರಿಂದ ಪರಣಾಮಿಕಾರಣನೂ ಒಬ್ಬನೇ ಆಗುತ್ತಾನೆ.'

ಆದರೆ ಈ ವಾದ ಸರಿಯಲ್ಲ. ಶಕ್ತಿ ಇದ್ದರೂ ನಿರ್ವಿಕಾರನಾದ್ದರಿಂದ ಹರಿ ಪರಿಣಾಮಿ ಎನಿಸಲಾರ. ಜ್ಞಾನವಿರುವುದರಿಂದ ನಿಮಿತ್ತ ಮಾತ್ರ. ಹಾಗಾದರೆ 'ಆತ್ಮೈವಾತ್ಮಾನಮಾತ್ಮನಾ' ಎಂದು ಕರ್ತೃಕರ್ಮಕರಣಗಳಿಗೆ ಅಭೇದವನ್ನು ಹೇಳಿದ್ದು ಹೇಗೆ ಎಂದರೆ ಅದು ಪರಮಾತ್ಮ ತಾನು ಸೃಜಿಸಿದ ಬಹುಪದಾರ್ಥಗಳಲ್ಲಿ ನಿಯಾಮಕನಾಗಿ ಬಹುರೂಪಗಳನ್ನು ಸ್ವೀಕರಿಸುತ್ತಾನೆ. ಆಗ ಆ ರೂಪಗಳನ್ನು ವ್ಯಕ್ತಮಾಡುವಲ್ಲಿ ಕರ್ತೃಕರ್ಮಕರಣಗಳೆಲ್ಲವೂ ತಾನೇ, ಅವನು ಇನ್ನೊಬ್ಬರ ಅಧೀನನಲ್ಲ ಎಂದರ್ಥ. 'ರಜಃಪ್ಲುತಃ' ಎಂದರೆ ನಿಯಾಮಕನಾಗಿ ರಜೋಗುಣದಲ್ಲಿ ಅಂತರ್ಗತನಾದವನು ಹರಿ ಎಂದರ್ಥ.

---

೧. ಆತ್ಮಭೂರ್ಹರಿಃ ಚತುರ್ಮುಖಶರೀರಕೋ ಹರಿಃ ರಜೋವೃತಶ್ಚತುರ್ಮುಖದ್ವಾರಾ ರಜಉದ್ರೇಕಃ ಆತ್ಮಾನಮಾತ್ಮನ್ಯೈವ ಸೃಜತಿ । ಕುಲಾಲಸ್ಯಾಸರ್ವಶಕ್ತಿತ್ವಾನ್ನೋಪಾದಾನತ್ವಂ । ಮೃದಸ್ತ್ವಜ್ಞತ್ವಾನ್ನ ನಿಮಿತ್ತತ್ವಂ । ಇಹ ತ್ವಸ್ಮಿನ್ನೇವೋಭಯೋಃ ಪ್ರತಿಪನ್ನತ್ವಾನ್ನ ಕರ್ತ್ರಂತರ ಕರ್ಮಾಂತರಾಪೇಕ್ಷೇತಿ ಭಾವಃ । –ವೀರರಾಘವಃ

ವಲ್ಲಭ ಶುಕದೇವರ ವ್ಯಾಖ್ಯಾನಗಳು ಪರಮಾತ್ಮನೆ ತನ್ನ ಸ್ವರೂಪವೇ ಆದ ರಜೋಗುಣದಿಂದ ವ್ಯಾಪ್ತನಾಗಿ, ತಾನೇ ರಜೋವ್ಯಾಪ್ತನಾದ ಚತುರ್ಮುಖನಾಗಿ ತಾನೇ ಜಗತ್ತಾಗಿ ಪರಣಮಿಸುತ್ತಾನೆ ಎಂದಿವೆ.

ಗುಣಾಪ್ಲುತೋ ಹರಿರ್ನಿತ್ಯಂ ಗುಣಾನಾಂ ಮಧ್ಯಗೋ ಯತಃ ।
ಅನಹಂವೇದನಾತ್ ತಸ್ಯ ಗುಣಾಸಂಸ್ಪರ್ಶ ಏವ ಚ ॥ ಇತಿ ಚ ॥

ಸೃಷ್ಟ್ವಾ ದೇವಾದಿದೇಹಾನ್ ಸ ಆತ್ಮಾನಂ ಬಹುಧಾಽಕರೋತ್ ।
ತನ್ನಿಯಂತೃತಯಾಽಽತ್ಮಾನಂ ಪ್ರಕೃತಿಂ ದೇಹಭೇದತಃ ॥
ಇತಿ ನಾರದೀಯೇ ॥

ಕರ್ತಾ ಚ ಕರಣಂ ಚೈವ ಕರ್ಮ ಚೈವ ಸ್ವಯಂ ಹರಿಃ ।
ಆತ್ಮನೋ ಬಹುಧಾಭಾವೇ ಪ್ರಕೃತೇಸ್ತು ಸ್ವತಂತ್ರತಾ ॥
ಇತ್ಯಾಗ್ನೇಯೇ ॥

ಶ್ರೀಹರಿ ತ್ರಿಗುಣಗಳಿಗೆ ಪ್ರೇರಕನಾಗಿ ಅವುಗಳೊಳಗೆ ಸದಾ ಇರುವುದರಿಂದ ಗುಣಾಪ್ಲುತನೆನಿಸುತ್ತಾನೆ. (ಗುಣಬದ್ಧನಾದ್ದರಿಂದ ಅಲ್ಲ. ಗುಣಬದ್ಧರಾದ ಜೀವರು ಅವನ ಶರೀರವೆಂದೂ ಅಲ್ಲ.) ಎಂದೂ ಹೇಳಿದೆ. ಭಾಗವತದಲ್ಲಿ ಆತ್ಮಾನಮಾತ್ಮನಾ ಎಂದು ಹೇಳಿದುದು ಎರಡರ್ಥದಲ್ಲಿ. ಆತ್ಮಾನಂ ಜೀವನನ್ನು ಆತ್ಮಾನಂ ತನ್ನನ್ನು ಎಂದು. ದೇವಾದಿದೇಹಗಳನ್ನು ಸೃಜಿಸಿ ಜೀವನನ್ನು ಊರ್ಧ್ವರೇತಸ ಮುಂತಾದ ಜಾತಿಭೇದದಿಂದ ಬಹುವಾಗಿ ಸೃಷ್ಟಿಮಾಡಿದ್ದಾನೆ. ಅವರಿಗೆ ನಿಯಾಮಕನಾಗಿ ತನ್ನನ್ನೂ ಬಹುರೂಪಗಳಿಂದ ವ್ಯಕ್ತಮಾಡಿಕೊಂಡಿದ್ದಾನೆ. ಪ್ರಕೃತಿಯನ್ನೂ ದೇಹರೂಪದಿಂದ ಬಹುವಾಗಿ ಸೃಷ್ಟಿ ಮಾಡಿದ್ದಾನೆ. ಎಂದು ನಾರದೀಯ ಪುರಾಣದಲ್ಲಿ ಹೇಳಿದೆ. ತನ್ನ ಬಹುರೂಪ ನಿರ್ಮಾಣಕಾರ್ಯದಲ್ಲಿ ಹರಿ ತಾನೇ ಕರ್ತೃಕರಣಕರ್ಮ ಎಲ್ಲವೂ ಆಗಿರುತ್ತಾನೆ. ಸ್ವತಂತ್ರನಾದ್ದರಿಂದ ಇನ್ನೊಬ್ಬರ ಅಪೇಕ್ಷೆ ಇಲ್ಲ. ಆದರೆ ಪ್ರಕೃತಿಯನ್ನು ದೇಹಾದಿಭೇದದಿಂದ ನಿರ್ಮಾಣಮಾಡುವಾಗ ಪ್ರಕೃತಿಗಿಂತ ಭಿನ್ನವಾದ ಕರ್ತೃಕರಣಾದಿಗಳಿಗೆ ನಿಯಾಮಕನಾಗುತ್ತಾನೆ ಹೊರತು ಕರ್ತೃಕರ್ಮಕರಣ ಎಲ್ಲವೂ ತಾನಾಗುವುದಿಲ್ಲ ಎಂದು ಅಗ್ನಿಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ಏಕಾದಶೋಽಧ್ಯಾಯಃ

—o—

ಅಧ್ಯಾಯ–೧೨

ಅಧ್ಯಾಯಸಾರಾಂಶ

ಮೈತ್ರೇಯರು ವಿದುರನಿಗೆ ಸೂಕ್ಷ್ಮವಾದ ಪರಮಾಣು ಮುಂತಾದ ಕಾಲಗಳಿಂದ ತೊಡಗಿ ಸ್ಥೂಲವಾದ ಯುಗ ಮನ್ವಂತರ ಕಲ್ಪ ಮುಂತಾದ ಕಾಲಗಳ ವರೆಗೆ ಎಲ್ಲ ಕಾಲಗಳ ನಿಯಾಮಕ ಭಗವದ್ರೂಪಗಳ ಲಕ್ಷಣಗಳನ್ನು ಕ್ರಮವಾಗಿ ಹೇಳುತ್ತಾರೆ. ಐವತ್ತು ಕೋಟಿ ಯೋಜನ ವಿಸ್ತಾರದ ಬ್ರಹ್ಮಾಂಡವನ್ನು ಪೃಥಿವ್ಯಾದಿ ಆವರಣಗಳೊಂದಿಗೆ ರೋಮಕೂಪದಲ್ಲಿ ಅಡಗಿಸಿಟ್ಟುಕೊಳ್ಳುವ ಶೂನ್ಯನಾಮಕಹರಿ ದೇಶಕಾಲಗುಣಗಳಲ್ಲಿ ಪರಿಮಿತಿ ಇಲ್ಲದವನಾಗಿ ಪರಮಮಹದ್ ದ್ರವ್ಯವೆನಿಸಿ ಪರಮಮಹತ್ಕಾಲಕ್ಕೆ ದೃಷ್ಟಾಂತರೂಪನಾಗುವನೆಂದು ವರ್ಣಿಸುತ್ತಾರೆ.

* * *

ಮೈತ್ರೇಯರು ವಿದುರನಿಗೆ ಮನ್ವಂತರಾದಿ ಕಾಲಗಳ ಬಗ್ಗೆ ವಿವರಣೆ ನೀಡಲು ಮೊದಲಿಗೆ ಪರಮಾಣ್ವಾದಿ ಕಾಲರೂಪಿ ಪರಮಾತ್ಮನ ನಿರೂಪಣೆಗೆ ದೃಷ್ಟಾಂತವಾಗಿ ಪರಮಾಣುದ್ರವ್ಯದ ಪರಿಮಾಣವನ್ನು ಹೇಳುತ್ತಾರೆ–

ಮೈತ್ರೇಯ ಉವಾಚ–

ಚರಮಸ್ತು ವಿಶೇಷಾಣಾಂ ಅನೇಕಾಸಂಯುತಸ್ತು ಯಃ ।
ಪರಮಾಣುಃ ಸ ವಿಜ್ಞೇಯೋ ನೃಣಾಮೈಕ್ಯಭ್ರಮೋ ಯತಃ ॥ ೧ ॥

ಪಾರ್ಥಿವಸೂಕ್ಷ್ಮಪದಾರ್ಥಗಳಲ್ಲಿ ಕೊನೆಯದು, ಅನೇಕ ಅಂಶಗಳಿಂದ ಚೆನ್ನಾಗಿ ಯುಕ್ತವಾಗಿದ್ದರೂ ಮನುಷ್ಯರು ನಿರಂಶವೆಂದು ತಿಳಿದಿದ್ದಾರೆ. ಅದನ್ನು ಪರಮಾಣುವೆಂದು ತಿಳಿಯಬೇಕು. ಮತ್ತು ಸ್ವರ್ಗಲೋಕ ಹೊಂದಿರುವ ಮಾನವರಿಗೆ ಯಾವುದನ್ನು ಕಂಡಾಗ ಅದು ಒಂದೇ ನಿರಂಶವಾದ ಅಂಶವೆಂಬ ಭ್ರಮ ಬರುತ್ತದೆಯೋ ಅದನ್ನು ಪರಮಾಣು ಎಂದಿಟ್ಟುಕೊಳ್ಳಬೇಕು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಪಾರ್ಥಿವಪದಾರ್ಥಗಳ ಕೊನೆಯ ಅಂಶವೆಂದರೆ ಅದು ನಿರಂಶ ಎಂದು ಹೇಳಿದ್ದಾರೆ. ಮತ್ತು 'ಅನೇಕಪರಮಾಣುಗಳು ಜೊತೆಗೆ ಸೇರಿದರೂ ಆ ಸಮೂಹವನ್ನು ಒಂದು ನಿರಂಶಪದಾರ್ಥವೆಂದು ಜನರು

---

೧. ಸತಃ ಕಾರ್ಯಸ್ಯ ವಿಶೇಷಾಣಾಮಂಶಾನಾಂ ಯಶ್ಚರಮೋಽಂತ್ಯೋ ಯಸ್ಯಾಂಶೋ ನಾಸ್ತಿ ಅನೇಕಃ ಕಾರ್ಯಾವಸ್ಥಾಮಪ್ರಾಪ್ತಃ ಅಸಂಯುತಃ ಸಮುದಾಯಾವಸ್ಥಾಂ ಚಾಪ್ರಾಪ್ತಃ ಸ ಪರಮಾಣುರ್ಜ್ಞೇಯಃ । —ಶ್ರೀಧರಃ

ಪರಮಾಣುರ್ವಿಜ್ಞೇಯಃ ಏವ । ನ ತು ದೃಶ್ಯತ ಇತ್ಯರ್ಥಃ । ನನು ತರ್ಹಿ ತಸ್ಯ ಸತ್ವೇ ಕಿಂ ಪ್ರಮಾಣಂ ತತ್ರಾಹ ಯತೋ ಯೇಭ್ಯಃ ಸಮುದಿತೇಭ್ಯಃ ನೃಣಾಮೈಕ್ಯಮಿತಿ ಭ್ರಮೋ ಭವತಿ । ಸೂರ್ಯರಶ್ಮಿಯುಕ್ತೇ ಗವಾಕ್ಷರಂಧ್ರೇ ಯೇ ಭ್ರಮಂತೋಽತಿಸೂಕ್ಷ್ಮಾಃ ಪಾರ್ಥಿವಕಣಾ ದೃಶ್ಯಂತೇ ತೇಷ್ವಯಮೇಕೋಽತಿಸೂಕ್ಷ್ಮ ಏಕ ಏವ ಕಣ ಇತಿ ಬುದ್ಧಿರ್ಭವತೀತ್ಯರ್ಥಃ । ತಸ್ಯ ಷಷ್ಠೋಽಂಶ ಏವ ಪರಮಾಣುಃ । ಸ ತ್ವದೃಶ್ಯ ಏವೇತ್ಯರ್ಥಃ । —ವಿಶ್ವನಾಥಃ

ಯೇಭ್ಯಃ ಸಮುದಿತೇಭ್ಯಃ ನೃಣಾಂ ವ್ಯವಹರ್ತೄಣಾ ಮೇವೈಕ್ಯಭ್ರಮೋಽವಯವಿಬುದ್ಧಿಃ । —ಶ್ರೀಧರಃ

ನೃಣಾಂ ಜೀವಾನಾಂ ಯೈಃ ಪರಮಾಣುಭಿಃ ಕೃತ್ವಾ ಆತ್ಮನಾ ಸಹ ದೇಹಸ್ಯೈಕ್ಯಭ್ರಮೋ ಭವತಿ । ಐಕ್ಯಭ್ರಮಹೇತವಃ ಪರಮಾಣವ ಏವ । ತೇ ಹ್ಯತಿಸೂಕ್ಷ್ಮಾ ಧರ್ಮಾಧರ್ಮಾಭ್ಯಾಂ ಸಂಸ್ಕೃತಾ ಜೀವೇ ಸಂಬಧ್ಯಂತೇ । ತದಾ ದೇಹಭಾವಮಾಪದ್ಯಂತೇ । ಅತ ಏವ ತೇ ದುಷ್ಟಾಃ ಕಾಲಸ್ಯೋಪಾಧಿಭೂತಾಃ । ತತ್ಸಂಬಂಧೇ ಜೀವಸ್ಯ ನಾಶ ಏವ । ಅತ ಏವ ತೇಷಾಂ ಭ್ರಮಜನಕತ್ವಂ ಪುಂಜಾತ್ಪುಂಜೋತ್ಪತ್ತಿಪಕ್ಷಮಾಶ್ರಿತ್ಯ ಭ್ರಮಾತ್ ಕೇಚಿದಾಹುಃ । ತತ್ ಸೋಢವ್ಯಂ । —ವಲ್ಲಭಃ

ಏವಂನಿರುಕ್ತಂ(ಭಾಗ.೫.೧೨.೯) ಇತಿ ಶ್ಲೋಕೇನ ಪುಂಜಾತ್ ಪುಂಜೋತ್ಪತ್ತಿ ರಾಶ್ರಿತೇತ್ಯವಯವಿಭ್ರಮಜನಕತ್ವಂ ಯದ್ಯಪ್ಯಾಪಾತತ ಆಯಾತಿ । ಪೀವೇತಿ ರಾಶೌ ನ ವಿದಾಂ ಪ್ರವಾದಃ (ಭಾಗ.೫.೧೦.೯) ಇತಿ ಕಥನಾತ್ । ತಥಾಪಿ ತತ್ರ ತಸ್ಯ ನ ತಾತ್ಪರ್ಯಂ । ಪರಮಾಣೂನಾಮಪ್ಯವಿದ್ಯಾಕಲ್ಪಿತತ್ವೋಕ್ತ್ಯಾ ಭ್ರಮವಿಷಯತ್ವಾಂಗೀಕಾರೇಣ ವಿಶೇಷಭ್ರಮಸ್ಯಾತ್ರ ವಿವಕ್ಷಿತತ್ವಾತ್ । ಸ್ತ್ರಿಯಃ ಪ್ರವಿಷ್ಟ ಉದರಂ ಪುಂಸೋ ರೇತಃ ಕಣಾಶ್ರಯಃ ಇತಿ ವಾಕ್ಯಾದ್ ಯದಾ ಜೀವೋ ಗರ್ಭೇ ಪ್ರವಿಶತಿ ತದಾ ಅನ್ಯದಾ ವಾ ಸ್ವಸ್ಯ ಪಿತ್ರಾದೇಶ್ಚ ಧರ್ಮಾಧರ್ಮಾಭ್ಯಾಂ ಸಂಸ್ಕೃತಾಃ ತೇಽಪಿ ತತ್ರಾಹಾರಾದಿಭಿಃ ಪ್ರವಿಶ್ಯ ಜೀವೇ ಸ್ವರೂಪೇಣ ಸಂಬಧ್ಯಂತೇ । ರಜಸ್ವಲಮಿವ ತಂ ಕುರ್ವಂತಿ । ತದಾ ಜೀವಾ ದೇಹಮಾಪದ್ಯಂತೇ । ದೇಹಮಧ್ಯಾಸ್ಯಂತಿ । ತೇನ ತೇಷಾಂ ತಥಾತ್ವಮಿತ್ಯರ್ಥಃ । —ಪುರುಷೋತ್ತಮಃ

ಭ್ರಮಿಸುತ್ತಾರೆ ಪರಮಾಣು ಕಾಣಿಸುವುದೇ ಇಲ್ಲ. ಆದರೂ ಅನೇಕಪರಮಾಣುಗಳು ಸೇರಿದಾಗ ಕಾಣುತ್ತವೆ. ಬಿಸಿಲು ಕೋಲಿನಲ್ಲಿ ಕಾಣುವ ಸೂಕ್ಷ್ಮವಾದ ತೇಲುವ ಪಾರ್ಥಿವ ಕಣವನ್ನು ಒಂದು ನಿರಂಶ ಪದಾರ್ಥವೆಂದು ಜನರು ಹೇಳುತ್ತಾರೆ ವಸ್ತುತಃ ಅದರ ಆರನೇ ಒಂದಂಶವೆ ಪರಮಾಣು'ವೆಂದು ವಿಶ್ವನಾಥ ವ್ಯಾಖ್ಯಾನ. 'ಪರಮಾಣು ಸಮೂಹವನ್ನು ಅದರಿಂದ ಹುಟ್ಟಿದ ಬೇರೆಯೆ ಅವಯವಿ ಪದಾರ್ಥವೆಂದು ಜನರು ಭ್ರಮಿಸುತ್ತಾರೆ. ವಸ್ತುತಃ ಅದು ಪರಮಾಣುಸಮೂಹವಷ್ಟೇ. ಬೇರೆ ಪದಾರ್ಥವಲ್ಲ' ಎಂದು ಶ್ರೀಧರವ್ಯಾಖ್ಯಾನ. 'ಅದ್ವೈತಪ್ರಕಾರ ಪರಮಾಣುವೂ ವಸ್ತುತಃ ಇಲ್ಲ, ಕೇವಲ ಭ್ರಮೆ. ಅದರಿಂದ ಪರಮಾಣು ಸಿದ್ಧವಾಗುವುದಿಲ್ಲ ಪರಮಾಣುವಿನ ಸಮೂಹದಲ್ಲಿ ಅವಯವಿ ಎಂದು ಭ್ರಮವನ್ನು ವಿಶೇಷವಾಗಿ ಹೇಳಿ ಏನು ಪ್ರಯೋಜನ?' ಎನ್ನುತ್ತ 'ಜೀವಾತ್ಮ ತಾಯಿಯ ಗರ್ಭಕೋಶದಲ್ಲಿ ಸೇರಿದೊಡನೆ ಆಹಾರರೂಪದ ಪರಮಾಣುಗಳೊಡಗೂಡಿ ತನ್ನನ್ನು ಅವುಗಳೊಡನೆ ಒಂದಾಗಿ ಭಾವಿಸುತ್ತಾನೆ' ಎಂದು ವಲ್ಲಭ ಪುರುಷೋತ್ತಮ ವ್ಯಾಖ್ಯಾನಗಳಲ್ಲಿ ಹೇಳಿದೆ. ಈ ಎಲ್ಲ ವ್ಯಾಖ್ಯಾನಗಳು ಭ್ರಮವನ್ನು ಹೇಳುವುದು ತತ್ವವಿವೇಕವೆಂಬ ಗ್ರಂಥಕ್ಕೆ ವಿರುದ್ಧವೆನ್ನುತ್ತಾರೆ ಶ್ರೀಮದಾಚಾರ್ಯರು–

ಕಾಲಪರಿಮಾಣಂ ದರ್ಶಯಿತುಂ ದ್ರವ್ಯಪರಿಮಾಣಂ ದೃಷ್ಟಾಂತತ್ವೇನ ದರ್ಶಯತಿ ।

ಮನುಷ್ಯಾ ದೇವಲೋಕೇಽಪಿ ವಿಶೇಷೇಣೈವ ದರ್ಶನೇ ।
ಅಂಶಾಂಶಿತ್ವವಿಶೇಷಂ ತು ಯಸ್ಯ ದ್ರಷ್ಟುಂ ನ ಶಕ್ನುಯುಃ ॥

ಚರಮೋ ವಿಶೇಷ ಇತಿ ತಂ ಮುನಯೋ ಬ್ರೂಯುರಂಜಸಾ ।
ಪರಮಾಣುಃ ಸ ವಿಜ್ಞೇಯಃ ಕಣಾದಾದ್ಯಾ ನಿರಂಶಿನಮ್ ॥

ಅನಂತಾಂಶಯುತತ್ವೇಽಪಿ ಯಂ ಬ್ರೂಯುರ್ಭ್ರಾಂತಿದರ್ಶನಾತ್ ।
ತತೋಽಪಿ ಪರಮಾಣುತ್ವಂ ತದಂಶಾನಾಂ ತು ಯದ್ಯಪಿ ।
ಅನಂತತ್ವಾದ್ ವಿವೇಕಾರ್ಥಮಸ್ಯೋಕ್ತಾ ಪರಮಾಣುತಾ ॥

ಇತಿ ತತ್ವವಿವೇಕೇ ॥

ಅನೇಕಾಂಶೈರಾ ಸಮಂತಾದ್ ಯುತಃ ।

ಕಾಲಪರಮಾಣುವಿನ ಮತ್ತು ಪರಮಮಹತ್ಕಾಲದ ಪರಿಮಾಣವನ್ನು ತೋರಿಸಲು ದ್ರವ್ಯಪರಮಾಣುವಿನ ಮತ್ತು ಪರಮಮಹದ್‌ದ್ರವ್ಯದ ಪರಿಮಾಣವನ್ನು ದೃಷ್ಟಾಂತವಾಗಿ ಈ ಎರಡು ಶ್ಲೋಕಗಳಲ್ಲಿ ತೋರಿಸುತ್ತಾರೆ.

ಮೊದಲನೇ ಶ್ಲೋಕದಲ್ಲಿ ದ್ರವ್ಯಪರಮಾಣುವಿಗೆ ಎರಡು ಲಕ್ಷಣಗಳನ್ನು ಹೇಳುತ್ತಾರೆ. ಮೊದಲನೆ ಲಕ್ಷಣವಿದು– ''ಮನುಷ್ಯರು ಪುಣ್ಯಕರ್ಮಮಾಡಿ ಸ್ವರ್ಗಕ್ಕೆ ಹೋದಾಗ ಅವರು ಎಲ್ಲ ವಸ್ತುಗಳ ಎಲ್ಲ ಸೂಕ್ಷ್ಮವಿವರಗಳನ್ನೂ ಕಣ್ಣಿಂದ ನೋಡಬಲ್ಲರು. ಈ ವಸ್ತುವಿನಲ್ಲಿ ಇಷ್ಟು ಅಂಶಗಳಿವೆ ಎಂದು ಸುಲಭವಾಗಿ ಕಂಡು ಹೇಳಬಲ್ಲರು. ಆದರೂ ಯಾವ ವಸ್ತುವಿನಲ್ಲಿ ಅನೇಕ ಅಂಶಗಳಿದ್ದರೂ ಅವುಗಳನ್ನು ನೋಡಲು ಅವರೂ ಶಕ್ತರಾಗುವುದಿಲ್ಲವೋ ಆ ವಸ್ತುವನ್ನು ಮುನಿಗಳು ಪಾರ್ಥಿವ ಸೂಕ್ಷ್ಮ ಪದಾರ್ಥಗಳಲ್ಲಿ ಕೊನೆಯದು ಎನ್ನುತ್ತಾರೆ. ಅದನ್ನೇ ಪರಮಾಣು ಎಂದು ತಿಳಿಯಬೇಕು'' ಎಂದು.

ಎರಡನೇ ಲಕ್ಷಣ ಇದು– ''ಕಣಾದ ಗೌತಮ ಮುಂತಾದ ಮನುಷ್ಯರು ಭ್ರಾಂತಿಯಿಂದ ಯಾವ ವಸ್ತುವಿಗೆ ಅನೇಕಅಂಶಗಳಿದ್ದರೂ ಇಲ್ಲವೆನ್ನುತ್ತಾರೋ ಅದನ್ನು ಪರಮಾಣುವೆಂದು ತಿಳಿಯಬೇಕು'' ಎಂದು. ವಸ್ತುತಃ ಅದೇ ಪರಮಾಣು ಅಂದರೆ ಪರಮ ಅಣುವಲ್ಲ. ಅದಕ್ಕಿಂತಲೂ ಅದರ ಅಂಶ, ಮತ್ತು ಅದಕ್ಕಿಂತಲೂ ಅದರ ಅಂಶ ಎಂದು ಅನಂತ ಅಂಶಗಳು ಒಂದಕ್ಕಿಂತ ಒಂದು ಪರಮ ಅಣುಗಳೇ. ಆದರೂ ವ್ಯವಹಾರದಲ್ಲಿ ಪರಮಾಣು ದ್ವ್ಯಣುಕ ಮುಂತಾದವುಗಳ ವಿವೇಕಜ್ಞಾನಕ್ಕಾಗಿ ಮತ್ತು ಪರಮಾತ್ಮನ ಕಾಲಪರಮಾಣು ರೂಪದ ಪರಿಜ್ಞಾನಕ್ಕಾಗಿ ಕಣಾದಾದಿಗಳು ನಿರಂಶವೆಂದು ಹೇಳಿದ್ದನ್ನೇ ಪರಮಾಣುವೆಂದು ಮುನಿಗಳು ಹೇಳುತ್ತಾರೆ ಎಂದು ತತ್ವವಿವೇಕದಲ್ಲಿ ಹೇಳಿದೆ.

ಶ್ಲೋಕದಲ್ಲಿ 'ಅನೇಕಾಸಂಯುತಃ' ಎಂದರೆ ಅನೇಕ ಅಂಶಗಳಿಂದ ಆ ಚೆನ್ನಾಗಿ ಸಂಯುತ ಕೂಡಿದ್ದು ಎಂದರ್ಥ.

ಬೇರೆ ವ್ಯಾಖ್ಯಾನಕಾರರು 'ಅನೇಕೋಽಸಂಯುತಃ' ಎಂದು ಪಾಠವಿಟ್ಟು ಕೊಂಡು ಹೇಳುತ್ತಾರೆ– 'ಅನೇಕ–ಇತರ ಅಂಶಗಳೊಡನೆ ಸೇರಿ ಒಂದು ಅವಯವಿಯಾಗಿ ಪರಿಣಾಮ ಹೊಂದದಿರುವ ಮತ್ತು ಅಸಂಯುತಃ– ಇತರಾಂಶದ ಜೊತೆಗೆ ಸೇರಿ ಸಮುದಾಯರೂಪವಾಗಿಯೂ ಇಲ್ಲದ ಅಂಶವೇ ಪರಮಾಣು. ಅಂದರೆ, ಅವಯವಿಯಾಗಿರುವ ಅವಸ್ಥೆ, ಸಮುದಾಯವಾಗಿರುವ ಅವಸ್ಥೆ ಎರಡೂ ಇಲ್ಲದಿದ್ದಾಗಲೂ ಸದಾ ಇರುವ ವಸ್ತುವೇ ಪರಮಾಣು' ಎಂದು. ಅನೇಕಾಸಂಯುತಃ' ಎಂಬ ಪಾಠದಲ್ಲಿಯೂ ಇದೇ ವಿವರಣೆ ನೀಡಲು ಸಾಧ್ಯವಿದೆ. ಆದರೆ ಪರಮಾಣುಗಳು ತನ್ಮಾತ್ರಾಕಾರ್ಯವಾದ್ದರಿಂದ ಕಾರ್ಯಾವಸ್ಥೆ ಸಮುದಾಯಾವಸ್ಥೆ ಇಲ್ಲದಿದ್ದಾಗಲೂ ಇರುವುದೆಂಬ ಪರಮಾಣು ಲಕ್ಷಣಕ್ಕೆ ಅಸಂಭವದೋಷವಿದೆ. ಅದರಿಂದ ವ್ಯರ್ಥ.

ತಾತ್ಪರ್ಯದಲ್ಲಿ ನೀಡಿದ ವಿವರಣೆ ಸಾರ್ಥಕ. ಏಕೆಂದರೆ ಪರಮಾಣು ವೆಂದರೆ ನಿರಂಶವೆಂದು ಎಲ್ಲ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಅದೂ ಅಸಂಭವಿ, ಅನೇಕ ಅಂಶಗಳಿಂದ ಚೆನ್ನಾಗಿಯೇ ಯುಕ್ತವಾಗಿದೆ. ಅವು ದೇವಾದಿಗಳಿಗೆ, ಸೂಕ್ಷ್ಮದೃಷ್ಟಿಯವರಿಗೆ ಗೋಚರವೇ. ಆದರೆ ಮನುಷ್ಯರಿಗೆ ಯಾವುದರಲ್ಲಿ ಅಂಶ ಕಾಣಿಸುವುದಿಲ್ಲವೋ ಅದನ್ನು ಪರಮಾಣು ಎನ್ನಬೇಕು ಎಂಬ ಅಭಿಪ್ರಾಯದಿಂದ ಅನೇಕಾಂಶಯುಕ್ತ ಎಂದಿದೆ. ಆದರೂ ಭೂಲೋಕದ ಮನುಷ್ಯರಿಗೆ ಬಿಸಿಲುಕೋಲಿನಲ್ಲಿ ತೇಲುತ್ತ ಬರುವ ತ್ರ್ಯಣುಕವೇ ನಿರಂಶವಾಗಿ ಕಾಣಬಹುದು. ಅದರಿಂದ ದೇವಲೋಕಕ್ಕೆ ಹೋಗಿ ದಿವ್ಯಶರೀರ ಪಡೆದಿರುವ ಮನುಷ್ಯರಿಗೆ ಈ ತ್ರ್ಯಣುಕದಲ್ಲಿಯೂ ಅಂಶಗಳು ಕಾಣುತ್ತವೆ. ದ್ವ್ಯಣುಕದಲ್ಲಿಯೂ ಕಾಣುತ್ತವೆ. ಪರಮಾಣುವಿನಲ್ಲಿ ಮಾತ್ರ ಕಾಣುವುದಿಲ್ಲ. ಈ ದೃಷ್ಟಿಯಿಂದ ಚರಮ ವಿಶೇಷವಾದ ಈ ವಸ್ತುವೇ ಪರಮಾಣು ಎಂದು ಒಂದು ಲಕ್ಷಣ. ಇನ್ನೊಂದು ಲಕ್ಷಣ– ಕಣಾದಾದಿಗಳು ನಿರಂಶತ್ವಭ್ರಮದಿಂದ ಯಾವುದನ್ನು ಪರಮಾಣುವೆಂದು ಕರೆಯುವರೋ ಅದು ಪರಮಾಣು ಎಂದು.

* * *

ಪರಮ ಮಹತ್ತಾದ ಕಾಲರೂಪಿ ಭಗವಂತನ ನಿರೂಪಣೆಗೆ ದೃಷ್ಟಾಂತವಾಗಿ ಪರಮಮಹದ್ದ್ರವ್ಯರೂಪನಾದ ಭಗವಂತನ ಪರಿಮಾಣವನ್ನು ಮೈತ್ರೇಯರು ಹೇಳುತ್ತಾರೆ–

ಸತ ಏವ ಪದಾರ್ಥಸ್ಯ ಸ್ವರೂಪಾವಸ್ಥಿತಸ್ಯ ಯತ್ ।
ಕೈವಲ್ಯಂ ಪರಮಮಹಾನ್ ಅವಿಶೇಷೋ ನಿರಂತರಃ ॥ ೨ ॥

ಸತ್ ಪದದ ಮುಖ್ಯವಾಚ್ಯನಾದ, ಜಗತ್ತಿನೊಳಗೆ ಪ್ರವಿಷ್ಟವಲ್ಲದೆ, ಜಗತ್ತಿಗೆ ಆವರಕವೂ ಆಗಿರದೆ ಸ್ವರೂಪದಿಂದಿರುವ ಪರಮಾತ್ಮನ ಶೂನ್ಯನಾಮಕ ನಾರಾಯಣ ಎಂಬ ಮೂಲರೂಪವು ಪರಮಮಹಾನ್ ಎನಿಸುತ್ತದೆ. ಪರಿಮಿತ ಪರಿಮಾಣದಲ್ಲಿ ಕಾಣುವ ರೂಪವಾಗಲಿ, ಅವಯವರೂಪವಾಗಲಿ ಪರಮಮಹತ್ತೆನಿಸುವುದಿಲ್ಲ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಇಡಿ ಪ್ರಪಂಚವೆ ಪರಮಮಹಾನ್. ಯದ್ಯಪಿ ಪ್ರಪಂಚದ ಯಾವ ಪದಾರ್ಥವನ್ನು ನೋಡಿದರೂ ಅದು ಪರಮಮಹತ್ತಲ್ಲ. ಆದರೂ ಪದಾರ್ಥಗಳನ್ನು ಬಿಡಿಬಿಡಿಯಾಗಿ ನೋಡದೆ ಅವುಗಳಲ್ಲಿರುವ

೧. ಅವಿಶೇಷೋ ವಿಶೇಷವಿವಕ್ಷಾರಹಿತೋ ನಿರಂತರೋ ಭೇದವಿವಕ್ಷಾರಹಿತಶ್ಚ ಸರ್ವೋಽಪಿ ಪ್ರಪಂಚಃ ಪರಮಮಹಾನಿತ್ಯರ್ಥಃ । –ಶ್ರೀಧರಃ

ಪರಸ್ಪರಭೇದವನ್ನು ವಿವಕ್ಷೆ ಮಾಡದೆ ಸೂರ್ಯಪ್ರಕಾಶ ಎಲ್ಲೆಲ್ಲಿ ಬೀಳುತ್ತದೆ ಆ ಎಲ್ಲ ಪ್ರಪಂಚವನ್ನು ಸಮಗ್ರವಾಗಿ ನೋಡಿದರೆ ಅದು ಪರಮಮಹಾನ್ ಎನಿಸುತ್ತದೆ ಎಂದು ಶ್ರೀಧರ ವೀರರಾಘವ ವಲ್ಲಭ ಮುಂತಾದ ವ್ಯಾಖ್ಯಾನಗಳಲ್ಲಿ ಹೇಳುತ್ತಾರೆ. ಆದರೆ ಪ್ರಪಂಚದ ಆಚೆಯೂ ವ್ಯಾಪಿಸಿರುವ ಭಗವಂತನನ್ನು ಪರಮಮಹಾನ್ ಎನ್ನುವುದೇ ಸಂಗತ, ಪ್ರಮಾಣಪ್ರಮಿತ. ಮತ್ತು ಪರಮಮಹತ್ವವೆಂದರೆ ದೇಶತಃ ವ್ಯಾಪ್ತಿ ಎಂದೇ ಈ ವ್ಯಾಖ್ಯಾನಕಾರರು ಗ್ರಹಿಸಿದ್ದಾರೆ. ದೇಶ ಕಾಲ ಗುಣಗಳಿಂದ ಎಂದು ಮೂರು ಬಗೆಯಿಂದ ಪರಮಮಹತ್ವವಿದೆ. ಅದು ಭಗವಂತನಲ್ಲಿಯೇ ಇರುವುದರಿಂದ ಈ ಕಾಲರೂಪಿ ಭಗವಂತನ ಲಕ್ಷಣಕ್ಕೆ ಎಲ್ಲಿಯೂ ಅತಿವ್ಯಾಪ್ತಿ ಇಲ್ಲ. ದೇಶತಃ ವ್ಯಾಪ್ತಿ ಮಾತ್ರ ಇಟ್ಟುಕೊಂಡರೆ ಅದು ಕಾಲಾಕಾಶಾದಿಗಳಲ್ಲಿಯೂ ಇರುವುದರಿಂದ ಅತಿವ್ಯಾಪ್ತಿ ಇದೆ.

ಕಾಲತೋ ದೇಶತೋ ಗುಣತಶ್ಚ ಪರಮಮಹತ್ವಂ ಸತಃ ಪರಬ್ರಹ್ಮಣ ಏವ । ಸಚ್ಚಬ್ದೋಽನ್ಯತ್ರಾಪ್ಯುಪಚಾರತೋ ಭವತೀತ್ಯತಃ ಪದಾರ್ಥಸ್ಯೇತಿ । ಸತ್ವದಸ್ಯ ಯೋ ಮುಖ್ಯಾಭಿಧೇಯಸ್ತಸ್ಯ ।

ಮುಖ್ಯಾಭಿಧೇಯಸ್ತ್ವರ್ಥಃ ಸ್ಯಾದ್ ವಾಚ್ಯಮನ್ಯಚ್ಚ ಭಣ್ಯತೇ ।
ಅಮುಖ್ಯೇಷ್ವರ್ಥಶಬ್ದಸ್ತು ನೀಚೋಪರಿಹಿತೋ ಭವೇತ್ ॥

ಇತಿ ಬ್ರಹ್ಮತರ್ಕೇ ।

ಯದ್ವೇವ ಸಮಃ ಪ್ಲುಷಿಣೇತ್ಯಾದಿನಾಽನ್ಯತ್ರ ಸ್ಥಿತಸ್ಯ ತತ್ಪರಿಮಾಣತ್ವಮಪ್ಯಸ್ತೀತ್ಯತಃ ಸ್ವರೂಪಾವಸ್ಥಿತಸ್ಯೇತಿ । ಜಗದಾವರಕಸ್ಯ ರೂಪಸ್ಯ ತತಃ ಕಿಂಚಿನ್ಮಹತ್ತ್ವಮಿತ್ಯತಃ ಕೈವಲ್ಯಮಿತಿ । ತತ್ರಾಪಿ ಬಹುವಿಧಾನಿ ರೂಪಾಣಿ ತಸ್ಯ ಸಂತೀತ್ಯವಿಶೇಷ ಇತಿ । ಸರ್ವಗತೇ ಪ್ರಾದೇಶಮಾತ್ರಮಪಿ ವಿದ್ಯತ ಇತ್ಯತೋ ನಿರಂತರ ಇತಿ । ಪರಬ್ರಹ್ಮಣೋ ಯಃ ಕೇವಲಭಾವಃ, ಅಂಡಾದ್ಯಂತಃಪ್ರವಿಷ್ಟಂ ತದಾವರಕಂ ತಸ್ಯೈವ ಪರಮಪುರುಷಾದಿ ರೂಪಾಂತರಂ, ತದೇಕದೇಶಂ ಚ ವಿನಾ ಯತ್ ಸರ್ವಗತಂ ರೂಪಂ ತದೇವ ಪರಮಮಹಾನ್ ॥

ವಿಶೇಷವಿವಕ್ಷಾ ವ್ಯಕ್ತಿಭೇದಕೃತಭೇದವಿವಕ್ಷಾ । ಭೇದವಿವಕ್ಷಾ ಜಾತಿಭೇದಕೃತಭೇದವಿವಕ್ಷಾ । —ರಾಧಾರಮಣದಾಸಃ

ಸರ್ವೋಽಪಿ ಪದಾರ್ಥಃ ಸರ್ವತ್ರ ನೈಕಬುದ್ಧ್ಯಾರೂಢೋ ವಿಶೇಷಕಲ್ಪನಾಶೂನ್ಯಃ ಪ್ರಮಾತ್ರಪೇಕ್ಷಭೇದಶೂನ್ಯೋಽಪಿ ಯಾವಾನ್ ಸೂರ್ಯೇಣ ಪ್ರಕಾಶ್ಯತೇ ಸ ಸರ್ವೋ ಮಿಲಿತಃ ಪರಮಮಹಾನ್ । —ವಲ್ಲಭಃ

'ಸದೇವ ಸೋಮ್ಯೇದಮಗ್ರ ಆಸೀತ್' ಇತ್ಯಾದಿಶ್ರುತಿಗಳಲ್ಲಿ ಹೇಳಿದ 'ಸತ್' ನಾಮಕನಾದ ಭಗವಂತನಿಗೇನೇ ಕಾಲತಃ ದೇಶತಃ ಗುಣತಃ ಪರಮಮಹತ್ವ 'ಸತ್'ಎಂದರೆ ನಿರ್ದುಷ್ಟ, ವಿಷ್ಣುವ್ಯತಿರಿಕ್ತರಲ್ಲಿಯೂ ಅಮುಖ್ಯವಾಗಿ ಈ ಶಬ್ದಪ್ರಯೋಗವಿರುವುದರಿಂದ ಪದಾರ್ಥಸ್ಯ ಎಂದು ವಿಶೇಷಣ. ಸತ್ ಪದದ ಅರ್ಥ ಭಗವಂತನೇ ಎಂದು ಅಭಿಪ್ರಾಯ. ಏಕೆಂದರೆ 'ಮುಖ್ಯವಾದ ಅರ್ಥವನ್ನೇ 'ಅರ್ಥ' ಎನ್ನಬೇಕು. ಅಮುಖ್ಯಾರ್ಥವನ್ನು 'ವಾಚ್ಯ' ಎನ್ನುತ್ತಾರೆ. ಅಮುಖ್ಯಾರ್ಥಗಳನ್ನು 'ಅರ್ಥ' ಎಂದು ಕರೆಯುವುದು ನೀಚರ ತಲೆಗೆ ಕಿರೀಟವಿಡುವಂತೆ ಅನುಚಿತವಾಗುವುದು' ಎಂದು ಬ್ರಹ್ಮತರ್ಕದಲ್ಲಿದೆ.

'ಬಿಂದುವಿನಲ್ಲಿ ಬಿಂದುವಿನಾಕಾರದಲ್ಲಿ ನೊಣದಲ್ಲಿ, ನೊಣದ ಆಕಾರದಲ್ಲಿ ಭಗವಂತನಿದ್ದಾನೆ' ಎಂದು ಬೃಹದಾರಣ್ಯಕ ಶ್ರುತಿ ಇರುವುದರಿಂದ ಬೇರೆ ಕಡೆ ಇರುವ ರೂಪಗಳಲ್ಲಿ ಪರಮಾತ್ಮನಿಗೆ ಆಯಾ ವಸ್ತುವಿನಷ್ಟು ಪರಿಮಾಣವೂ ಇರುವುದರಿಂದ ಬ್ರಹ್ಮಾಂಡಾಂತರ್ಗತರೂಪಕ್ಕೆ ಬ್ರಹ್ಮಾಂಡಪರಿಮಾಣವೇ ಯೋಗಿಗಳಿಗೆ ಸ್ಪಷ್ಟ ಕಾಣುತ್ತದೆ. ಪರಮಮಹತ್ ಪರಿಮಾಣ ಕಾಣುವುದಿಲ್ಲ. ಅದರಿಂದ 'ಸ್ವರೂಪಾವಸ್ಥಿತಸ್ಯ' ಎಂದು ವಿಶೇಷಣ. ತನ್ನ ಸ್ವರೂಪದಲ್ಲಿಯೆ ಇದೆ ಹೊರತು ಬೇರೆ ಕಡೆಯಲ್ಲ, ಅಂಥ ರೂಪ ಎಂದರ್ಥ. ಅದರಿಂದ ಬ್ರಹ್ಮಾಂಡದಲ್ಲಿರುವ ಬ್ರಹ್ಮಾಂಡಪರಿಮಾಣದ ರೂಪ ವ್ಯಾವೃತ್ತವಾಯಿತು. ಸ್ವರೂಪದಲ್ಲಿಯೇ ಇರುವ ಬ್ರಹ್ಮಾಂಡಾವರಕರೂಪವೂ ಪರಮಮಹತ್ತಲ್ಲ, ಅದು ಬ್ರಹ್ಮಾಂಡಕ್ಕಿಂತ ಸ್ವಲ್ಪ ಹೆಚ್ಚು ಪರಿಮಾಣ ಉಳ್ಳದ್ದು. ಅದರಿಂದ ಅದನ್ನು ವ್ಯಾವೃತ್ತಿಮಾಡಲು 'ಕೈವಲ್ಯಂ' ಎಂದಿದೆ. ಕೇವಲ, ಅಂದರೆ ಬ್ರಹ್ಮಾಂಡಾವರಕವೂ ಆಗದಿರುವ ರೂಪ ಪರಮಮಹತ್ ಎಂದಂತಾಯಿತು.

ಬ್ರಹ್ಮಾಂಡಾವರಕವೂ ಅಲ್ಲದ ಅಲ್ಪಪರಿಮಾಣದ ಬೇರೆ ಅನಂತ ರೂಪವಿಶೇಷಗಳೂ ಬ್ರಹ್ಮಾಂಡದಾಚೆ ಇರುವುದರಿಂದ ಅವುಗಳ ವ್ಯಾವೃತ್ತಿಗಾಗಿ 'ಅವಿಶೇಷಃ' ಎಂದು ವಿಶೇಷಣ. ಅಂಥ ರೂಪವಿಶೇಷವೂ ಅಲ್ಲ ಎಂದರ್ಥ. ಸರ್ವವ್ಯಾಪ್ತವಾದ ರೂಪದಲ್ಲಿಯೂ ಚೋಟುದ್ದದ ಭಾಗಗಳಿವೆ. ಅವು ಪರಮಮಹತ್ತಲ್ಲ. ಅವುಗಳ ವ್ಯಾವೃತ್ತಿಗಾಗಿ 'ನಿರಂತರಃ' ಎಂದು ವಿಶೇಷಣ. ವ್ಯಾಪ್ತವಾಗಿಯೆ ಕಾಣುವ ರೂಪ ಎಂದರ್ಥ. ಒಟ್ಟಿಗೆ ಇಷ್ಟು ಹೇಳಿದಂತಾಯಿತು– ಬ್ರಹ್ಮಾಂಡಾಂತರ್ಗತವಲ್ಲದ, ಬ್ರಹ್ಮಾಂಡಾವರಕವೂ ಅಲ್ಲದ, ಬೇರೆ ಪರಿಮಿತ ಪರಿಮಾಣದ ರೂಪವಿಶೇಷವೂ ಅಲ್ಲದ, ವ್ಯಾಪ್ತರೂಪದ ಭಾಗಗಳೂ ಅಲ್ಲದ, ಸರ್ವತ್ರ ವ್ಯಾಪ್ತವಾದ ಭಗವದ್ರೂಪವೆ ಪರಮಮಹಾನ್ ಎಂದು. ಈ ಎಲ್ಲ ವಿಷಯದಲ್ಲಿ ಪ್ರಮಾಣಗಳು–

ಕಾಲಕೋಟಿವಿಹೀನತ್ವಂ ಕಾಲಾನಂತ್ಯಂ ವಿದುರ್ಬುಧಾಃ ।
ದೇಶಕೋಟಿವಿಹೀನತ್ವಂ ದೇಶಾನಂತ್ಯಂ ತಥೈವ ಚ ॥

ಗುಣಾನಾಮಪ್ರಮೇಯತ್ವಂ ವಸ್ತ್ವಾನಂತ್ಯಂ ವಿದೋ ವಿದುಃ ।
ಆನಂತ್ಯಂ ತ್ರಿವಿಧಂ ನಿತ್ಯಂ ಹರೇರ್ನಾನ್ಯಸ್ಯ ಕಸ್ಯಚಿತ್ ॥

ತಸ್ಯ ಸರ್ವಸ್ವರೂಪೇಷ್ವಪ್ಯಾನಂತ್ಯಂ ತು ತ್ರಿಲಕ್ಷಣಮ್ ।
ತಥಾಪಿ ದೇಶತಸ್ತಸ್ಯ ಪರಿಚ್ಛೇದೋಽಪಿ ಯುಜ್ಯತೇ ॥

ತಸ್ಯಾಚಿಂತ್ಯಾದ್ಭುತೈಶ್ವರ್ಯಾದ್ ವ್ಯವಹಾರಾರ್ಥಮೇವ ಚ ।
ಗುಣತಃ ಕಾಲತಶ್ಚೈವ ಪರಿಚ್ಛೇದೋ ನ ಕುತ್ರಚಿತ್ ॥

ವ್ಯಾಪ್ತತ್ವಂ ದೇಶತೋಽಪ್ಯಸ್ತಿ ಸರ್ವರೂಪೇಷು ಯದ್ಯಪಿ ।
ನ ಚ ಭೇದಃ ಕ್ವಚಿತ್ ತೇಷಾಮಣುಮಾತ್ರೋಽಪಿ ವಿದ್ಯತೇ ॥

ತಥಾಪಿ ವಿದ್ಯತೇಽಣುತ್ವಂ ಯಸ್ಮಾದೈಶ್ವರ್ಯಯೋಗತಃ ।
ತಸ್ಮಾದ್ ಬುದ್ಧ್ಯವತಾರಾರ್ಥಮವ್ಯಾಪ್ತತ್ವಂ ಚ ಭಣ್ಯತೇ ॥

ಯತ್ ತಸ್ಯ ವ್ಯಾಪಕಂ ರೂಪಂ ಪರಂ ನಾರಾಯಣಾಭಿಧಮ್ ।
ಶೂನ್ಯಂ ಬ್ರಹ್ಮೇತಿ ತತ್ ಪ್ರಾಹುರ್ದ್ವಿತೀಯಂ ಸ್ರಷ್ಟೃ ಯತ್ತತಃ ॥

ಪರಮಃ ಪುರುಷೋ ನಾಮ ಮಿತಂ ತದ್ ದೇಶತೋ ವಿಭೋಃ ॥

ತೃತೀಯಂ ವಾಸುದೇವಾಖ್ಯಂ ಜಗದಾವರಕಂ ಮಿತಮ್ ।
ದೇಶತೋ ಜಗದಾವಿಷ್ಟಂ ತುರೀಯಂ ವಿಷ್ಣುನಾಮಕಮ್ ॥

ಇತಿ ಬ್ರಹ್ಮತರ್ಕೇ ।

ಸರ್ವಗತಸ್ಯಾಪಿ ಬ್ರಹ್ಮರೂಪಸ್ಯ ಕಾಲಾದಿರೂಪಯಾ ಪ್ರಕೃತ್ಯಾ ಸಮವ್ಯಾಪ್ತಾವಪಿ ದಾರ್ಷ್ಟಾಂತಿಕಾಂತರ್ಭಾವಾತ್ ತದನ್ಯಸ್ಮಿನ್ನನವಸ್ಥಾನಾಚ್ಚ ಸ್ವರೂಪಾವಸ್ಥಿತಸ್ಯೇತ್ಯುಕ್ತಮ್ ।

ದೇವ್ಯಾಂ ಕಾಲಾದಿರೂಪಿಣ್ಯಾಂ ಸ್ಥಿತಂ ಬ್ರಹ್ಮಾಪಿ ಸರ್ವಗಮ್ ।
ಉಚ್ಯತೇಽನನ್ಯಗಂ ಯಸ್ಮಾದಾತ್ಮವತ್ ಸಾ ಹರೇರ್ವಿಭೋಃ ।
ಮಹದಾದಿಗತಂ ಯತ್ತು ತದನ್ಯಗತಮುಚ್ಯತೇ ॥

ಇತಿ ಬ್ರಾಹ್ಮೇ ।

ಕಾಲದಲ್ಲಿ ಮಿತಿ ಇಲ್ಲದಿರುವುದು ಕಾಲತಃ ಪರಮಮಹತ್ವವೆನಿಸುವುದು. ದೇಶದಲ್ಲಿ ಮಿತಿ ಇಲ್ಲದಿರುವುದು ದೇಶತಃ ಪರಮಮಹತ್ವ, ಗುಣಗಳಿಗೆ ಮಿತಿ ಇಲ್ಲದಿರುವುದು ವಸ್ತುತಃ ಪರಮಮಹತ್ವ. ಈ ಮೂರು ಬಗೆಯ ಪರಮಮಹತ್ವವೂ ಸದಾ ಇರುವುದು ಹರಿಯಲ್ಲಿಯೇ ಹೊರತು ಬೇರೆ ಯಾರಲ್ಲಿಯೂ ಇಲ್ಲ. ಅವನ ಎಲ್ಲ ರೂಪಗಳಲ್ಲಿಯೂ ಮೂರು ಬಗೆಯ ಪರಮಮಹತ್ವ ಇದ್ದೇ ಇದೆ. ಆದರೂ ದೇಶತಃ ಪರಿಮಿತಿಯೂ ಜೊತೆಗೆ ಇದೆ. ಈ ಪರಿಮಿತಿಯೂ ಪರಮಮಹತ್ವವೂ ಜೊತೆಗೆ ಇರುವುದು ಅವನ ಅಚಿಂತ್ಯ ಅದ್ಭುತಶಕ್ತಿಯಿಂದಾಗಿ ಕೂಡುತ್ತದೆ. ಶ್ರೀಕೃಷ್ಣ ಬಂದ, ನಡೆದ ಎಂದು ಮುಂತಾಗಿ ವ್ಯವಹಾರ ಕೂಡಬೇಕಾದರೆ ಇದು ಬೇಕು. ಆದರೆ ಗುಣತಃ ಕಾಲತಃ ಪರಿಮಿತಿಗಳು ಅವನಿಗೆ ಎಲ್ಲಿಯೂ ಇಲ್ಲ. ದೇಶತಃ ಪರಮಮಹತ್ವ ವಸ್ತುತಃ ಅವನ ಎಲ್ಲರೂಪಗಳಲ್ಲಿಯೂ ಇದೆ. ಯಾವ ರೂಪವೂ ಲಕ್ಷಣದಲ್ಲಿ ವಿಶೇಷಣಗಳಿಂದ ವ್ಯಾವೃತ್ತವಾಗಬೇಕಾಗಿಲ್ಲ. ಅವುಗಳಿಗೆ ಲಕ್ಷ್ಯವಾದ ಶೂನ್ಯನಾಮಕ ಪರಮಮಹದ್ರೂಪದಿಂದ ಕಿಂಚಿತ್ತೂ ಭೇದವಿಲ್ಲ. ಆದರೂ ಅಚಿಂತ್ಯಶಕ್ತಿಪ್ರಯುಕ್ತವಾಗಿ ದೇಶಪರಿಮಿತಿಯೂ ಸ್ಪಷ್ಟವಾಗಿ ಅವುಗಳಲ್ಲಿ ಕಾಣುತ್ತದೆ. ಅದರಿಂದ ಶ್ರುತಿಸ್ಮೃತಿಗಳಲ್ಲಿ ಪರಿಮಿತಿಯನ್ನೇ ಹೇಳುವುದುಂಟು. ಇದು ಲಕ್ಷ್ಯವಾದ ವ್ಯಾಪಕರೂಪ ಹೇಗಿರುತ್ತದೆ ಎಂಬ ಕಲ್ಪನೆ ಬರುವುದಕ್ಕಾಗಿ ಎಂದು ತಿಳಿಯಬೇಕು. ಈ ವ್ಯಾಪಕವಾದ ರೂಪ ನಾರಾಯಣ ಎಂಬುದು ಶೂನ್ಯ ಎಂದೂ ಬ್ರಹ್ಮ ಎಂದೂ ಕರೆಯಲ್ಪಡುತ್ತದೆ. ಎರಡನೆಯದು, ಪರಮಪುರುಷ ಎಂಬ ರೂಪ, ಶುದ್ಧಸೃಷ್ಟಿ ಮಾಡುತ್ತದೆ. ಇದು ದೇಶಪರಿಮಿತಿ ಉಳ್ಳದ್ದು. ಮೂರನೆಯದು ವಾಸುದೇವ ಎಂಬ ರೂಪ, ಬ್ರಹ್ಮಾಂಡವನ್ನು ಆವರಿಸುತ್ತ ದೇಶದಲ್ಲಿ ಪರಿಮಿತವಾಗಿದೆ. ನಾಲ್ಕನೆಯದು ಬ್ರಹ್ಮಾಂಡಾಂತರ್ಗತವಾದ ವಿಷ್ಣು ಎಂಬ ರೂಪ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಲಕ್ಷ್ಯವಾದ ನಾರಾಯಣ ಎಂಬ ರೂಪ ಸರ್ವಗತ, ಅಂದರೆ ಪ್ರಕೃತ್ಯಾದಿ ಗಳಲ್ಲಿಯೂ ಇದೆ. ಸ್ವರೂಪದಲ್ಲಿಯೇ ಇರಬೇಕು, ಬೇರೆಡೆ ಇರಕೂಡದು ಎನ್ನುವ ಸ್ವರೂಪಾವಸ್ಥಿತತ್ವವಿಶೇಷಣ ಹೇಗೆ ಕೂಡುತ್ತದೆ? ಮತ್ತು ಕಾಲಾದಿಗಳ ಅಭಿಮಾನಿನಿಯಾದ ಲಕ್ಷ್ಮಿಗೆ ಸಮವ್ಯಾಪಕವಾಗಿರುವುದರಿಂದ ಲಕ್ಷ್ಮಿಯನ್ನೂ ಕಾಲ ಆಕಾಶ ಮುಂತಾದುವನ್ನೂ ಪರಮಹತ್ ಎಂದು ತೋರಿಸಲು ಶಕ್ಯವಿರುವಾಗ ವ್ಯಾಪಕ ಭಗವದ್ರೂಪವನ್ನೇ ದೃಷ್ಟಾಂತವಾಗಿ ಏಕೆ ವಿಚಾರಮಾಡಬೇಕು? ಎಂಬ ಪ್ರಶ್ನೆಗಳು ಬರಬಹುದು. ಆದರೆ ಇಲ್ಲಿ ಕಾಲದೊಂದಿಗೆ ಆಕಾಶ ಪ್ರಕೃತಿ ಲಕ್ಷ್ಮಿ ಮುಂತಾದ ಪದಾರ್ಥಗಳೂ ಕೂಡ ಹೇಗೆ ಪರಮಮಹತ್ತೆಂಬುದನ್ನು ತಿಳಿಸಲು ವ್ಯಾಪಕ ಭಗವದ್ರೂಪ ದೃಷ್ಟಾಂತ. ಕಾಲಾದಿಗಳು ಎಲ್ಲವೂ ದಾರ್ಷ್ಟಾಂತಿಕ. ಅದರಿಂದ ದೃಷ್ಟಾಂತವಾಗಿ ಭಗವದ್ರೂಪವನ್ನೇ ಪರಮಮಹತ್ತೆಂದು ತೋರಿಸಬೇಕು. ಸರ್ವಗತವಾದ ಈ ಭಗವದ್ರೂಪವು ಪರಮಮಹತ್ತೇ ಆದ ಕಾಲ ಆಕಾಶಾದಿಗಳಲ್ಲಿ

ಲಕ್ಷ್ಮಿಯಲ್ಲಿ ಇದೆ ಹೊರತು ಪರಿಮಿತವಾದ ಮಹತ್ತತ್ತ್ವ ಮುಂತಾದವುಗಳಲ್ಲಿ ಅಲ್ಲ. 'ಸ್ವರೂಪಾವಸ್ಥಿತಸ್ಯ' ಎಂಬ ವಿಶೇಷಣಕ್ಕೆ ಇಷ್ಟೇ ಅಭಿಪ್ರಾಯ. ಅದರಿಂದ ಆ ವಿಶೇಷಣ ಕೂಡುತ್ತದೆ. ಬ್ರಹ್ಮಪುರಾಣದಲ್ಲಿ ಹೀಗೆ ಹೇಳಿದೆ– 'ಸರ್ವಗತವಾದ ಭಗವದ್ರೂಪವು ಕಾಲಾದ್ಯಭಿಮಾನಿನಿಯಾದ ಲಕ್ಷ್ಮೀದೇವಿಯಲ್ಲಿದ್ದರೂ ಅವಳು ತನ್ನಂತೆಯೇ ಸ್ವಗತಳಾದ್ದರಿಂದ ಮತ್ತು ತನಗೆ ಅತ್ಯಂತ ಆಪ್ತಳಾದ್ದರಿಂದ ತನ್ನಲ್ಲೇ ಇದ್ದಂತಾಗುವುದು, ಬೇರೆ ಕಡೆ ಇದ್ದಂತಲ್ಲ. ಅದರಿಂದ ಅದನ್ನು ಸ್ವರೂಪಾವಸ್ಥಿತ ವೆಂದೇ ಹೇಳುತ್ತಾರೆ. ಮಹದಾದಿ ಬೇರೆ ಪರಿಮಿತ ವಸ್ತುಗಳಲ್ಲಿ ಇರುವ ಭಗವದ್ರೂಪವು ಮಾತ್ರ ಬೇರೆ ಕಡೆ ಇರುವಂಥದ್ದು, ಸ್ವರೂಪಾವಸ್ಥಿತ ಅಲ್ಲ ಎನಿಸುತ್ತದೆ' ಎಂದು.

* * *

ದೃಷ್ಟಾಂತರೂಪವಾಗಿ ದ್ರವ್ಯರೂಪವಾದ ಪರಮಾಣು ಪರಮಮಹತ್ತುಗಳನ್ನು ಹೇಳಿದ್ದಾಯಿತು. ಈಗ ಆ ದೃಷ್ಟಾಂತದಿಂದ ಕಾಲ ರೂಪವಾದ ಪರಮಾಣು ಪರಮಮಹತ್ತುಗಳನ್ನು ತಿಳಿಯುವ ಬಗೆಯನ್ನು ಹೇಳುತ್ತಾರೆ–

ಏವಂ ಕಾಲೋಽಪ್ಯನುಮಿತಃ ಸೌಕ್ಷ್ಮ್ಯೇ ಸ್ಥೌಲ್ಯೇ ಚ ಸತ್ತಮ ।
ಸಂಸ್ಥಾನ ಭುಕ್ತ್ಯಾ ಭಗವಾನವ್ಯಕ್ತೋ ವ್ಯಕ್ತಭುಗ್ ವಿಭುಃ ॥ ೩ ॥

ಸ ಕಾಲಃ ಪರಮಾಣುರ್ವೈ ಯೋ ಭುಂಕ್ತೇ ಪರಮಾಣುತಾಮ್ ।
ಸತೋಽವಿಶೇಷಭುಗ್ ಯಸ್ತು ಕಾಲಃ ಸ ಪರಮೋ ಮಹಾನ್ ॥ ೪ ॥

ದ್ರವ್ಯಪರಮಾಣು ಮತ್ತು ವ್ಯಾಪಕಭಗವದ್ರೂಪಗಳಂತೆ ಕಾಲಾಂತರ್ಗತ ಕಾಲನಾಮಕ ಹರಿಯೂ ಕೂಡ ಪರಮಾಣುತ್ವ ಪರಮಮಹತ್ವ ಎಂಬ ಎರಡೂ ವಿಷಯಗಳಲ್ಲಿ ಶಾಸ್ತ್ರಯುಕ್ತಿಗಳಿಂದ ಯಥಾರ್ಥವಾಗಿ ತಿಳಿದು ಬಂದಿದ್ದಾನೆ. ಅದು ಹೇಗೆಂದರೆ ಅವನು ಅಣು ಆಕಾರದ ಮತ್ತು ಬೃಹದಾಕಾರದ ಎರಡೂ ಕಾಲಗಳಲ್ಲಿ ಅಂತರ್ಗತನಾಗಿದ್ದು ನಮಗೆ ಅವ್ಯಕ್ತನಾಗಿದ್ದರೂ ಪರಮಾಣುತ್ವವಿಷಯದಲ್ಲಿ (ಅವ್ಯಕ್ತಭುಕ್) ನಮಗೆ ಕಾಣಿಸದ ಪರಮಾಣು ದ್ರವ್ಯದ ಸಾಮ್ಯವನ್ನು ಹೊಂದಿದ್ದಾನೆ. ಪರಮಮಹತ್ವವಿಷಯದಲ್ಲಿ (ವ್ಯಕ್ತಭುಕ್) ವ್ಯಾಪಕನಾಗಿಯೇ ಯೋಗಿಗಳಿಗೆ ವ್ಯಕ್ತನಾಗುವ ವ್ಯಾಪಕ ನಾರಾಯಣನ ಸಾಮ್ಯವನ್ನು ಹೊಂದಿದ್ದಾನೆ. ಇದನ್ನು ಇನ್ನೂ ವಿಶದವಾಗಿ ಹೇಳಬೇಕೆಂದರೆ ಅದು ಹೀಗೆ– ಪರಮಾಣು ಕಾಲಾಂತರ್ಯಾಮಿ ಕಾಲನಾಮಕ ಪರಮಾತ್ಮ ಪರಮಾಣು ಎಂದು ಕರೆಸಿ ಕೊಳ್ಳುತ್ತಾನೆ. ಏಕೆಂದರೆ ಅವನು ದ್ರವ್ಯಪರಮಾಣುವಿನ ಸಾಮ್ಯ ಹೊಂದಿದ್ದಾನೆ. ಅವನೆ ಪರಮಮಹತ್ತಾದ ಕಾಲಪ್ರವಾಹಾಂತರ್ಗತನಾಗಿ ಪರಮಮಹತ್ ಎನಿಸುತ್ತಾನೆ. ಏಕೆಂದರೆ ಅವನು

(ಸತೋಽವಿಶೇಷಭುಕ್) ವ್ಯಾಪಕನಾರಾಯಣನ ಅಖಂಡರೂಪವೆಂಬ ಸಾಮ್ಯವನ್ನು ಹೊದಿದ್ದಾನೆ.

ಸ್ವರ್ಗವನ್ನು ಹೊಂದಿ ಸೂಕ್ಷ್ಮದೃಷ್ಟಿಶಕ್ತಿ ಹೊಂದಿದ ಮನುಷ್ಯನು ಯಾವ ಸೂಕ್ಷ್ಮಪಾರ್ಥಿವಕಣವನ್ನು ನಿರಂಶ ಎನ್ನುವನೋ (ದೇವತೆಗಳು ಇನ್ನೂ ಸೂಕ್ಷ್ಮದೃಷ್ಟಿಯವರು ಅದರಲ್ಲಿಯೂ ಅಂಶವನ್ನು ಕಾಣುತ್ತಾರೆ.) ಅದು ದ್ರವ್ಯಪರಮಾಣು ಎಂದು ಶಾಸ್ತ್ರ ಹೇಳುತ್ತದೆ. ಹಾಗೆಯೇ ಯಾವ ಕಾಲಾಂಶವನ್ನು ಅವನೇ ನಿರಂಶ ಎನ್ನುವನೋ ಅದೇ ಕಾಲಪರಮಾಣು ಎಂದೂ ಶಾಸ್ತ್ರವೇ ಹೇಳುತ್ತದೆ. ಬ್ರಹ್ಮಾಂಡಾವರಕವಾದ ಭಗವದ್ರೂಪಕ್ಕೂ ಆಚೆ ಎಲ್ಲೆಡೆ ವ್ಯಾಪ್ತವಾದ ಶೂನ್ಯನಾಮಕ ಭಗವದ್ರೂಪವಿದೆ. ಅದು ದೇಶಕಾಲಗುಣಗಳಿಂದ ಮಿತಿ ಇಲ್ಲದ ಪರಮ ಮಹತ್ತೆಂದು ಶಾಸ್ತ್ರ ಹೇಳುತ್ತದೆ. ಹಾಗೆಯೇ ಆದ್ಯಂತ ಶೂನ್ಯವಾದ ಕಾಲಪ್ರವಾಹ ದೊಳಗೆ ನಿಯಾಮಕವಾದ ದೇಶಕಾಲಗುಣಪರಿಮಿತಿ ಇಲ್ಲದ ಕಾಲನಾಮಕ ಭಗವದ್ರೂಪವು ಪರಮಮಹತ್ತೆಂದೂ ಶಾಸ್ತ್ರ ಹೇಳುತ್ತದೆ. ಇದೇ ರೀತಿ ಅನು ಮಾನದಿಂದಲೂ 'ಇದು ಕಾಲಪರಮಾಣು ಎನಿಸುತ್ತದೆ, ದ್ರವ್ಯಪರಮಾಣುವಿನ ಸಾಮ್ಯ ಹೊಂದಿರುವುದರಿಂದ. ಇದು ಪರಮಹತ್ ಕಾಲವೆನಿಸುವುದು, ಪರಮಮಹತ್ತಾದ ಭಗವದ್ರೂಪದ ಸಾಮ್ಯ ಹೊಂದಿರುವುದರಿಂದ' ಎಂದು ಪರಮಾಣು ಕಾಲಾಂತರ್ಗತಭಗವದ್ರೂಪಕ್ಕೂ ಪರಮಮಹತ್ಕಾಲಾಂತರ್ಗತ ಭಗವದ್ರೂಪಕ್ಕೂ ಆ ಹೆಸರುಗಳಿಂದ ವ್ಯವಹಾರವನ್ನು ಸಿದ್ಧಮಾಡಬಹುದು. ಹೀಗೆ ಶಾಸ್ತ್ರ ಮತ್ತು ಯುಕ್ತಿಗಳಿಂದ ಭಗವಂತನ ಪರಮಾಣುಕಾಲ ಪರಮಮಹತ್ಕಾಲರೂಪಗಳನ್ನು ತಿಳಿಯಬಹುದೆಂದು 'ಏವಂ ಕಾಲೋಽಪ್ಯ ನುಮಿತಃ' ಎನ್ನುತ್ತದೆ ಭಾಗವತ. 'ಅನುಮಿತಃ' ಎಂದರೆ ಕೇವಲ ಅನುಮಾನದಿಂದ ತಿಳಿಯುವುದೆಂದರ್ಥವಲ್ಲ, ಶಾಸ್ತ್ರಯುಕ್ತಿಗಳಿಂದ ಯಥಾರ್ಥಜ್ಞಾನ ಪಡೆಯು ವುದೆಂದರ್ಥ. ಜಡವಾದ ಕಾಲವನ್ನು ಸಾಕ್ಷಿಯಿಂದ, ಅದರೊಳಗೆ ನಿಯಾಮಕನಾದ ಕಾಲರೂಪಿ ಭಗವಂತನನ್ನು ಶಾಸ್ತ್ರದಿಂದ ತಿಳಿಯಬೇಕೇ ಹೊರತು ಅನುಮಾನದಿಂದ ಅಲ್ಲ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ– ಸೂರ್ಯನು ಆಕಾಶದಲ್ಲಿ ಒಂದು ಪರಮಾಣುವನ್ನು ಅತಿಕ್ರಮಿಸುವ ಕಾಲವು ಪರಮಾಣುಕಾಲ. ದ್ವಾದಶರಾಶಿರೂಪವಾದ ಸಮಸ್ತಲೋಕವನ್ನು ಸುತ್ತುವ ಕಾಲ, ಅಂದರೆ, ಒಂದು

೧. ಸೂರ್ಯೋ ಯಾವತಾ ಪರಮಾಣುದೇಶಮತಿಕ್ರಾಮತಿ ತಾವಾನ್ ಕಾಲಃ ಪರಮಾಣುಃ । ಯಾವತಾ ಚ ದ್ವಾದಶರಾಶ್ಯಾತ್ಮಕಂ ಸರ್ವಂ ಭುವನ ಕೋಶಮತಿಕ್ರಾಮತಿ ಸ ಪರಮಮಹಾನ್ ಸಂವತ್ಸರಾತ್ಮಕಃ ಕಾಲಃ । –ಶ್ರೀಧರಃ

ವರ್ಷವು ಪರಮಮಹಾನ್ ಕಾಲವೆನಿಸುತ್ತದ ಎಂದು. ವಿಶ್ವನಾಥ ವ್ಯಾಖ್ಯಾನ್ ಮತ್ತು ಜೀವಗೋಸ್ವಾಮಿ ವ್ಯಾಖ್ಯಾನಗಳಲ್ಲಿ ಪ್ರಪಂಚ ಸೃಷ್ಟಿಯಿಂದಾರಂಭಿಸಿ ಸಂಹಾರದ ಪರ್ಯಂತ ಕಾಲ ಅಂದರೆ ದ್ವಿಪರಾರ್ಧವೇ ಪರಮಮಹತ್ಕಾಲ ಎಂದಿದೆ. ಇವೆಲ್ಲವೂ ಬ್ರಹ್ಮತರ್ಕಪ್ರಮಾಣಕ್ಕೆ ವಿರುದ್ಧವಾಗಿದೆ.

ಅನುಮಿತಃ ಶಾಸ್ತ್ರಲೋಕಾನುಸಾರೇಣ ಜ್ಞಾತಃ ।

ಅನುಮೇತಿ ದ್ವಯಂ ಪ್ರಾಹುರ್ಯಥಾಜ್ಞಾನಂ ಚ ಲಿಂಗಜಮ್ ।

ಇತ್ಯಭಿಧಾನಮ್ ।

ಯಾವಂತಂ ದೇವಲೋಕಸ್ಥೋ ಮಾನುಷಸ್ತ್ವವಧಾರಯೇತ್ ।
ಮಹಾಪ್ರಾಜ್ಞೋ ದೇವಜೂಕಃ ಸ ಕಾಲಃ ಪರಮಾಣುಕಃ ॥

ಸರ್ಗಾದ್ಯೈರನವಚ್ಛಿನ್ನಸ್ತದನಂತರ ಇತ್ಯಪಿ ।
ತಥೈವ ಪರಮಾಣ್ವಾದಿವಿಶೇಷಾತ್ಮಾಽಽಪಿ ನೋ ಭವೇತ್ ।
ಪೂರ್ವಾಪರಾದಿಭೇದೋನಃ ಸ ಕಾಲಃ ಪರಮೋ ಮಹಾನ್ ॥

ಇತಿ ಬ್ರಹ್ಮತರ್ಕೇ ।

ಸ್ವರೂಪಾವಸ್ಥಿತಸ್ಯ, ಕೈವಲ್ಯಂ, ಅವಿಶೇಷಃ, ನಿರಂತರ ಇತ್ಯೇತಾನಿ ವಿಶೇಷಣಾನಿ ಕ್ರಮೇಣ ಪರಮಮಹತಃ ಕಾಲಸ್ಯಾಪ್ಯತ್ರೋಕ್ತಾನಿ ।

ದೇಶತಃ ಕಾಲತಶ್ಚೈವ ವಸ್ತುತಶ್ಚ ತ್ರಿಧಾ ಹರೇಃ ।
ಯಥಾಽಽನಂತ್ಯಂ ನ ಚಾನ್ಯಸ್ಯ, ಪ್ರಕೃತೇರ್ದೇಶಕಾಲತಃ ॥

ತಥಾ ಶಬ್ದಸ್ಯ ಕಾಲಸ್ಯ ದೇಶಾನಂತ್ಯಂ ಚ ಕಾಲತಃ ।
ಕಾಲಶಬ್ದಾತ್ಮಿಕಾ ಸೈವ ತಥಾಪಿ ತು ಹರೇಃ ಸದಾ ॥

ನಾಸ್ಯಾಃ ಸಾಮರ್ಥ್ಯಲೇಶೋಽಪಿ ಜ್ಞಾನಾನಂದಗುಣೇಷ್ವಪಿ ।
ಜ್ಞೇಯಸ್ತದವರೋ ವಾಯುಃ ಶೇಷವೀಂದ್ರಹರಾಸ್ತತಃ ।
ಅವರಾಸ್ತತ ಇಂದ್ರಾದ್ಯಾ ಗುಣೈಃ ಸರ್ವೈರ್ನ ಸಂಶಯಃ ॥

ಇತಿ ಬ್ರಹ್ಮವೈವರ್ತೇ ।

---

೧. ಸತಃ ಕಾಲಸ್ಯ ಪರಮಾಣುತಾಂ ಪರಮಾಣುಸ್ವರೂಪಂ ಯಃ ಕಾಲೋ ಭುಂಕ್ತೇ ಸೂರ್ಯರೂಪೇಣಾತಿಕ್ರಾಮ್ಯತಿ ಸ ಪರಮಾಣುಃ । ಸರ್ವಮೇವ ಪ್ರಪಂಚಂ ಭುಂಕ್ತೇ ವತ್ಸರಯುಗಾದ್ಯಾವೃತ್ತ್ಯಾ ಸೂರ್ಯರೂಪೀ ಯಃ ಕಾಲಃ ಸ ಪರಮಮಹಾನ್ । ಸೃಷ್ಟಿಮಾರಭ್ಯ ಪ್ರಪಂಚಸ್ಯ ಸಂಹಾರಪರ್ಯಂತಂ ಯಾವಾನ್ ಕಾಲಃ ತಾವಾನ್ ಸರ್ವ ಏವ ಪರಮಮಹಾನಿತ್ಯರ್ಥಃ । —ವಿಶ್ವನಾಥಃ

ಅಣ್ವಾದಿಕಾಲಸಂಸ್ಥಾನಭೋಕ್ತೃತ್ವಾತ್ ಪರಮೇಶ್ವರಃ ।
ಅಣ್ವಾದಿನಾಮವಾಚ್ಯೋಽಸೌ ಕಾಲಶ್ಚೇತ್ಯಭಿಧೀಯತೇ ॥
ಇತಿ ಚ ॥

ಸತೋ ಬ್ರಹ್ಮಣಃ ಅವಿಶೇಷಂ ಸ್ವರೂಪಂ ಯಃ ಕಾಲಃ ಕಾಲಾಂತರ್ಯಾಮೀ ತದೇವ ಬ್ರಹ್ಮ ಭುಂಕ್ತೇ । ತದಪಿ ಬ್ರಹ್ಮರೂಪಂ ಪರಮಮಹಾನ್ । ತಸ್ಯಾಪಿ ತ್ರಿಧಾ ಪರಿಚ್ಛೇದಾಭಾವಾತ್ ॥

ಸರ್ವಂ ಸರ್ವತ್ರ ಭೋಕ್ತಾಽಪಿ ವಿಶೇಷಾದೇಕಭೋಕ್ತೃವತ್ ।
ಸ್ಥಿತೋ ಹರಿರಚಿಂತ್ಯಾತ್ಮಾ ನಿಜೈಶ್ವರ್ಯಾದಜೋ ವಿಭುಃ ॥
ಇತಿ ಬ್ರಹ್ಮತರ್ಕೇ ।

ಏವಂ ಕಾಲೋಽಪ್ಯನುಮಿತಃ ಎಂಬಲ್ಲಿ 'ಅನುಮಿತಃ' ಎಂದರೆ ಅನು– ಶಾಸ್ತ್ರಾನುಸಾರವಾಗಿ ಮತ್ತು ಲೋಕಾನುಸಾರವಾಗಿ, ಅಂದರೆ ಶಾಸ್ತ್ರಸಿದ್ಧವಾದ ಲೋಕಸಿದ್ಧವಾದ ದೃಷ್ಟಾಂತಗಳಿಂದ ವ್ಯಾಪ್ತಿನಿಶ್ಚಯ ಉಳ್ಳ ಅನುಮಾನಾನುಸಾರವಾಗಿ ಮಿತಃ– ತಿಳಿದದ್ದು ಎಂದರ್ಥ. ಅಭಿಧಾನದಲ್ಲಿ ಹೀಗೆ ಹೇಳಿದೆ– 'ಅನುಮಾನ ಎಂದರೆ ಎರಡು ಬಗೆಯ ಜ್ಞಾನ. ಶಾಸ್ತ್ರಾನುಸಾರವಾಗಿ ಸರಿಯಾಗಿ ತಿಳಿಯುವುದು ಮತ್ತು ಯುಕ್ತಿಯಿಂದ ಸರಿಯಾಗಿ ತಿಳಿಯುವುದು ಎಂದು'

'ಯಜ್ಞಾದಿಗಳಿಂದ ದೇವತಾನುಗ್ರಹ ಪಡೆದು ದೇವಲೋಕದಲ್ಲಿ ವಾಸಮಾಡುವ ಮಹಾಪ್ರಾಜ್ಞನಾದ ಮನುಷ್ಯನು ಯಾವ ಕಾಲಾಂಶವನ್ನು, ಅದು ಸಾಂಶವಾಗಿದ್ದರೂ ಅಂಶಗಳನ್ನು ನೋಡಲು ಶಕ್ತನಾಗದೆ, ನಿರಂಶವೆಂದು ತಿಳಿಯುವನೋ ಅದನ್ನು ಪರಮಾಣುಕಾಲವೆಂದು ತಿಳಿಯಬೇಕು. ಸೃಷ್ಟಿಕಾಲ ಸ್ಥಿತಿಕಾಲ ಲಯಕಾಲ ಎಂದು ಮುಂತಾಗಿ ಹೇಳಲಾಗದಿರುವ, ಈ ಕಾಲತ್ರಯಕ್ಕಿಂತ ಸ್ವಲ್ಪ ಅಧಿಕವೆಂದೂ ಹೇಳಲಾಗದ, ಪರಮಾಣ್ವಾದಿಗಳ ವಿಶೇಷದಿಂದ ಭಿನ್ನವಾದ, ಇನ್ನೊಂದು ಕಾಲಕ್ಕೆ ಅಂಶರೂಪವೂ ಆಗದಿರುವ ಅಪರಿಮಿತವಾದ ಕಾಲಪ್ರವಾಹವೇ ಪರಮಮಹಾನ್ ಕಾಲವೆನಿಸುತ್ತದೆ' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಸ್ವರೂಪಾವಸ್ಥಿತಸ್ಯ, ಅಂದರೆ 'ಇನ್ನೊಂದರಲ್ಲಿ ಇರದೆ ತನ್ನಲ್ಲೇ ಇರುವ.' ಎಂದು ಭಾಗವತದಲ್ಲಿ ಪರಮಮಹದ್ದ್ರವ್ಯಕ್ಕೆ ಕೊಟ್ಟಿರುವ ವಿಶೇಷಣವನ್ನೇ ಬ್ರಹ್ಮತರ್ಕವಚನದಲ್ಲಿ 'ಸೃಷ್ಟಿಕಾಲ ಸ್ಥಿತಿಕಾಲ ಲಯಕಾಲ ಎಂದು ಮುಂತಾಗಿ ಹೇಳಲಾಗದಿರುವ' ಎಂದು ಪರಮಮಹತ್ಕಾಲಕ್ಕೆ ವಿವರಿಸಲಾಗಿದೆ. 'ಕೈವಲ್ಯಂ' ಕೇವಲ ಅಂದರೆ ಬ್ರಹ್ಮಾಂಡಾವರಕವೂ ಅಲ್ಲದ ಎಂಬ ವಿಶೇಷಣವನ್ನು ಇಲ್ಲಿ ಕಾಲತ್ರಯಕ್ಕಿಂತ

ಅಧಿಕ ಎನ್ನಲಾಗದ ಎಂದು ವಿವರಿಸಿದೆ. 'ಅವಿಶೇಷಃ' ಅಲ್ಪಪರಿಮಾಣದ ಬೇರೆ ರೂಪವಿಶೇಷವಲ್ಲದ ಎಂಬುದನ್ನು ಇಲ್ಲಿ ಪರಮಾಣ್ವಾದಿಕಾಲವಿಶೇಷದಿಂದ ಭಿನ್ನವಾದ ಎಂದು ವಿವರಿಸಲಾಗಿದೆ. 'ನಿರಂತರಃ' ಒಂದು ರೂಪದ ಅವಯವವೂ ಆಗದಿರುವ ಎಂಬುದನ್ನು ಇಲ್ಲಿ ಇನ್ನೊಂದು ಕಾಲಕ್ಕೆ ಅಂಶರೂಪವಾಗದಿರುವ ಎಂದು ವಿವರಿಸಿಲಾಗಿದೆ. ಹೀಗೆ ಭಾಗವತದಲ್ಲಿ ಪರಮಹದ್ದ್ರವ್ಯಕ್ಕೆ ಹೇಳಿದ ಲಕ್ಷಣ ಬ್ರಹ್ಮತರ್ಕದ ಪ್ರಕಾರ ಪರಮಮಹತ್ಕಾಲಕ್ಕೂ ಅರ್ಥಾತ್ ಬರುತ್ತದೆ ಎಂದು ಅಭಿಪ್ರಾಯದಿಂದ 'ಏವಂ' ಹೀಗೆಯೇ ಕಾಲವು ಅನುಮಿತ ಎಂದು ಭಾಗವತ ಹೇಳಿದೆ.

'ಏವಂ ಕಾಲೋಽಪ್ಯನುಮಿತಃ' ಎಂಬಲ್ಲಿ 'ಕಾಲ'ವೆಂದರೆ ಕಾಲಾಂತರ್ಗತನಾದ ಭಗವಂತ ವಿವಕ್ಷಿತ. ಜಡವಾದ ಕಾಲವಾಗಲಿ ಅದರ ಅಭಿಮಾನಿಗಳಾದ ಲಕ್ಷ್ಮ್ಯಾದಿದೇವತೆಗಳಾಗಲಿ ವಿವಕ್ಷಿತವಲ್ಲ. ಪರಮಮಹತ್ತಾದ ದ್ರವ್ಯದ ಸಾಮ್ಯವನ್ನು ಅಂಥ ಕಾಲದಲ್ಲಿ ಹೇಳಬೇಕು. ಪರಮಮಹದ್‌ದ್ರವ್ಯವೆಂದರೆ ಭಗವಂತನ ಶೂನ್ಯನಾಮಕ ರೂಪ. ಅದು ದೇಶಕಾಲಗುಣಗಳಿಂದ ಅಪರಿಮಿತ. ಅದರ ಸಾಮ್ಯ ಭಗವಂತನ ಪರಮಹತ್ಕಾಲಾಂತರ್ಗತರೂಪಕ್ಕೆ ಅಲ್ಲದೆ ಇನ್ನಾವುದಕ್ಕೂ ಬರಲಾರದು ಎಂದು ಬ್ರಹ್ಮವೈವರ್ತ ಪುರಾಣವು ಹೇಳುತ್ತಿದೆ– 'ಶ್ರೀಹರಿಗೆ ದೇಶಕಾಲಗುಣಗಳಿಂದ ಪರಮಮಹತ್ವ ಹೇಗಿದೆಯೋ ಹಾಗೆ ಇತರರಿಗೆ ಇಲ್ಲ. ಚೇತನಪ್ರಕೃತಿಗೆ ದೇಶಕಾಲಗಳಿಂದ ಮಾತ್ರ ಪರಮಮಹತ್ವ. ವರ್ಣಾತ್ಮಕಶಬ್ದ ಮತ್ತು ಕಾಲಪ್ರವಾಹಗಳಿಗೂ ಹಾಗೆಯೇ ದೇಶಕಾಲಗಳಿಂದ ಮಾತ್ರ ಪರಮಮಹತ್ವ ಗುಣಗಳಿಂದ ಪರಮಮಹತ್ವವಿಲ್ಲ. ಜಡವಾದ ಶಬ್ದಕಾಲಪ್ರವಾಹಗಳಿಗೆ ಜ್ಞಾನಾದಿಗುಣಪ್ರಸಕ್ತಿಯೇ ಇಲ್ಲ. ಕಾಲಶಬ್ದಾದಿಗಳ ಅಭಿಮಾನಿನಿಯಾದ ಲಕ್ಷ್ಮಿಗೆ ಜ್ಞಾನಾದಿಗುಣಗಳು ಯುಕ್ತವೆ. ಆದರೂ ಅವಳಿಗೆ ಶ್ರೀಹರಿಯ ಒಂದು ಲೇಶದಷ್ಟೂ ಸಾಮರ್ಥ್ಯವಿಲ್ಲ. ಜ್ಞಾನಾನಂದಾದಿಗುಣಗಳಲ್ಲಿಯೂ ಸಾಮ್ಯವಿಲ್ಲ. ಇನ್ನು ಮಹಾಮಹಿಮರೆನಿಸಿದ ವಾಯುದೇವರೂ ಜ್ಞಾನಾನಂದಾದಿಗುಣಗಳಲ್ಲಿ ಲಕ್ಷ್ಮಿಗಿಂತ ಕಡಿಮೆಯವರು, ಅವರಿಗಿಂತ ಕಡಿಮೆ ಶೇಷಗರುಡರುದ್ರರು. ಅವರಿಗಿಂತಲೂ ಕಡಿಮೆ ಇಂದ್ರಾದಿದೇವತೆಗಳು' ಎಂದು

ಈ ಶ್ಲೋಕಗಳ ತಾತ್ಪರ್ಯವನ್ನು ಪ್ರಮಾಣವಚನವೇ ಹೀಗೆ ಹೇಳುತ್ತಿದೆ– 'ಪರಮಾಣುಕಾಲ ಪರಮಮಹತ್ಕಾಲಗಳ ಅವಸ್ಥೆಗಳಲ್ಲಿದ್ದು ಆ ಅವಸ್ಥೆಗಳಿಗೆ ನಿಯಾಮಕನಾಗಿ ಅವೇ ಅವಸ್ಥೆಗಳಿಂದಿರುವುದರಿಂದ ಪರಮಾಣುಕಾಲ ಪರಮಮಹತ್ಕಾಲ ಎನಿಸುವವನು ಪರಮಾತ್ಮನೇ' ಎಂದು.

'ಸತೋಽವಿಶೇಷಭುಗ್ ಯಸ್ತು ಸ ಕಾಲಃ ಪರಮೋ ಮಹಾನ್' ಎಂದರೆ 'ಸದೇವ ಸೋಮ್ಯ' ಎಂಬಲ್ಲಿ ಸತ್ ಶಬ್ದದಿಂದ ಹೇಳಿದ ಶೂನ್ಯನಾಮಕ ಪರಮಾತ್ಮನು

ಪರಮಮಹಾನ್. ಅವನ ಅವಿಶೇಷವಾದ, ಅಖಂಡಸ್ವರೂಪವನ್ನು ಪರಮಮಹತ್ಕಾಲಾಂತರ್ಗತನಾದ ಆ ಪರಮಾತ್ಮನೇ ಭುಂಕ್ತೇ ಪಡೆದಿರುತ್ತಾನೆ ('ಯಸ್ತು' ಎಂದು ತು ಶಬ್ದದಿಂದ ಭಗವಂತನ ಎರಡೂ ರೂಪಗಳಿಗೆ ಭೇದವಿಲ್ಲವೆಂಬ ವಿಶೇಷಪ್ರಮೇಯ ಸೂಚಿತವಾಗಿದೆ.) ಅದರಿಂದ ಅವನೂ ಕೂಡ ಪರಮಮಹಾನ್ ಆಗಿದ್ದಾನೆ. ಏಕೆಂದರೆ ಅವನೂ ದೇಶಕಾಲಗುಣ ಈ ಮೂರರಿಂದ ಪರಿಮಿತಿ ಇಲ್ಲದವನು.

ಪರಮಮಹದ್ದ್ರವ್ಯರೂಪನಾದ ಭಗವಂತನ ಸಾಮ್ಯವು ಪರಮ ಮಹತ್ಕಾಲಾಂತರ್ಗತನಲ್ಲಿರುವುದರಿಂದ ಅವನು ಪರಮಮಹಾನ್ ಎನಿಸುವುದಾದರೆ, ಅವನಿಂದ ಅಭಿನ್ನನೇ ಆದ ಪರಮಾಣುಕಾಲಾಂತರ್ಗತನೂ ಆ ಸಾಮ್ಯದಿಂದ ಪರಮಮಹಾನ್ ಎನಿಸಬೇಕಾದೀತು ಎಂದರೆ, ಬ್ರಹ್ಮತರ್ಕದಲ್ಲಿ ಇದಕ್ಕೆ ಸಮಾಧಾನ ಹೀಗಿದೆ– 'ಎಲ್ಲೆಡೆ ಎಲ್ಲ ಗುಣಗಳನ್ನು ಭಗವಂತ ಹೊಂದಿದ್ದರೂ ತನ್ನ ಅಚಿಂತ್ಯಶಕ್ತಿಯಿಂದ ಒಂದೊಂದು ಕಡೆ ಒಂದೊಂದು ಗುಣ ಉಳ್ಳವನಂತಿರುತ್ತಾನೆ' ಎಂದು. ಅದರಿಂದ ಪರಮಮಹತ್ಕಾಲದಲ್ಲಿರುವ ಭಗವದ್ರೂಪವು ಸಾಮ್ಯ ಪಡೆದು ಪರಮಮಹತ್ತೇ ಆಗಿರುತ್ತದೆ, ಪರಮಾಣುಕಾಲದಲ್ಲಿರುವ ಭಗವದ್ರೂಪ ಪರಮಾಣುವೇ ಆಗಿರುತ್ತದೆ, ಸಾಮ್ಯ ಪಡೆದಿಲ್ಲ. ಅಂದರೆ, ಸಾಮ್ಯ ಪಡೆಯದಂತೆ ಇರುತ್ತದೆ.

* * *

ಪರಮಾಣು ಪರಮಮಹತ್ಕಾಲಗಳ ನಡುವೆ ಬರುವ ದ್ವ್ಯಣುಕ ತ್ರ್ಯಣುಕ ಕಾಲಗಳ ಸ್ವರೂಪ ಮತ್ತು ನಾಮಗಳನ್ನು ದ್ರವ್ಯದೃಷ್ಟಾಂತದಿಂದ ವರ್ಣಿಸುತ್ತಾರೆ ಮೈತ್ರೇಯರು–

ಅಣುರ್ದ್ವೌ ಪರಮಾಣೂ ಸ್ಯಾತ್ ತ್ರಸರೇಣುಸ್ತ್ರಯಃ ಸ್ಮೃತಃ ।
ಜಾಲಾರ್ಕರಶ್ಮ್ಯವಗತಃ ಖಮೇವಾನುಪತನ್ನಗಾತ್ ॥ ೫ ॥

ಎರಡು ಪರಮಾಣು ಸೇರಿ ಒಂದು ದ್ವ್ಯಣುಕವಾಗುವುದು. ಮೂರು ದ್ವ್ಯಣುಕಗಳು ಸೇರಿ ಒಂದು ತ್ರ್ಯಣುಕವಾಗುವುದು. ತ್ರ್ಯಣುಕವು ಕಿಟಕಿಯ ಮೂಲಕ ಬರುವ ಬಿಸಿಲು ಕೋಲಿನಲ್ಲಿ ಕಣ್ಣಿಂದ ಕಾಣಲು ಯೋಗ್ಯವಾಗಿ ಆಕಾಶದಲ್ಲಿ ಸಂಚರಿಸುತ್ತಲೇ ಕಣ್ಣಿಗೆ ಕಾಣುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಖಮೇವಾನುಪತನ್ನಗಾಂ' ಎಂದೂ ಪಾಠವಿಟ್ಟುಕೊಂಡು 'ಖಮೇವ ಅನುಪತನ್, ನ ಗಾಂ' 'ಆಕಾಶದಲ್ಲಿಯೆ 'ಸಂಚರಿಸುತ್ತ ಕಾಣುತ್ತದೆ, ಭೂಮಿಯಲ್ಲಿ ಅಲ್ಲ' ಎಂದು ಅರ್ಥ ಗ್ರಹಿಸುತ್ತಾರೆ. ಆದರೆ

'ಖಮೇವಾನುಪತನ್ನಗಾತ್' ಎಂದೇ ಪಾಠ. ಆದರೂ 'ನಗಾತ್' ಎಂದು ಪದಚ್ಛೇದ ಮಾಡಿ ಬೆಟ್ಟದಿಂದ ಆಕಾಶಕ್ಕೆ ಹಾರುತ್ತದೆ ಎಂದು ಅರ್ಥ ಮಾಡಿದರೆ ಅಸಂಗತವಾಗುತ್ತದೆ. ಬೆಟ್ಟದಿಂದ ಆಕಾಶಕ್ಕೆ ಹಾರುವ ತ್ರ್ಯಣುಕವನ್ನು ಕಿಟಕಿಯ ಬಿಸಿಲು ಕೋಲಿನ ಮೂಲಕ ಕಾಣಲು ಸಾಧ್ಯವಿಲ್ಲ ತಾನೆ? ಅದರಿಂದ ಹಾಗೆ ಪದಚ್ಛೇದವಿರಬಹುದೆ ಎಂಬ ಶಂಕೆಗೇ ಅವಕಾಶವಿಲ್ಲ. 'ಅಗಾತ್' ಎಂದೇ ಪದಚ್ಛೇದ. ಈ ಪಾಠವನ್ನೂ ಪದಚ್ಛೇದವನ್ನೂ ಒಪ್ಪಿಯೂ [1]ಬೇರೆ ವ್ಯಾಖ್ಯಾನಕಾರರು 'ಅಗಾತ್' ಚಲಿಸುತ್ತದೆ' 'ಹೊರಟುಹೋಗುತ್ತದೆ' ಎಂದು ಅರ್ಥ ಮಾಡುತ್ತಾರೆ. ಆದರೆ ಈ ಅರ್ಥದಲ್ಲಿ ಶಬ್ದ ವ್ಯರ್ಥವಾಗುತ್ತದೆ. ಗತ್ಯರ್ಥಕ ಧಾತು ಜ್ಞಾನಾರ್ಥಕವಾಗುವುದರಿಂದ 'ಅಗಾತ್' ತಿಳಿದು ಬರುತ್ತದೆ. ಅಂದರೆ ಕಣ್ಣಿಗೆ ಕಾಣುತ್ತದೆ ಎಂದು ಹೇಳಿದರೆ ಪ್ರಕೃತಕ್ಕೆ ಉಪಯೋಗವಿದೆ. 'ಜಾಲಾರ್ಕರಶ್ಮ್ಯವಗತಃ' ಎಂಬಲ್ಲಿ 'ಅವಗತಃ' ಎಂಬ ಶಬ್ದವಿರುವುದರಿಂದ ಪುನರುಕ್ತಿ ಎನ್ನಬಾರದು. 'ಅವಗತಃ' ಎಂದರೆ 'ಬಿಸಿಲು ಕೋಲಿನಲ್ಲಿ ಮಾತ್ರ ಧೂಳಿನ ಕಣ ಕಣ್ಣಿಗೆ ಕಾಣಲು ಯೋಗ್ಯವಾಗಿ 'ಅಗಾತ್' ಎಂದರೆ 'ಕಣ್ಣಿಗೆ ಕಾಣುತ್ತದೆ' ಎಂದರ್ಥ.

'ಅಗಾತ್' ದೃಷ್ಟಿವಿಷಯಂ ಪ್ರಾಪ್ಯ ಜ್ಞಾತ ಇತ್ಯರ್ಥಃ ।

'ಅಗಾತ್' ಎಂದು ಪದಚ್ಛೇದ. ಅದರಿಂದ 'ಬಿಸಿಲು ಕೋಲಿನಲ್ಲಿ ದೃಷ್ಟಿಯೋಗ್ಯತೆಯನ್ನು ಹೊಂದಿ ಕಣ್ಣಿಗೆ ಕಾಣುತ್ತದೆ' ಎಂದರ್ಥವಾಗುತ್ತದೆ.

* * *

ಘಳಿಗೆ, ಮುಹೂರ್ತ, ಪ್ರಹರ ಯಾಮಗಳ ಪರಿಮಾಣಗಳನ್ನು ಹೇಳುತ್ತಾರೆ–

ಲಘೂನಿ ವೈ ಸಮಾಮ್ನಾತಾ ದಶ ಪಂಚ ಚ ನಾಡಿಕಾ ।
ತೇ ದ್ವೇ ಮುಹೂರ್ತಂ ಪ್ರಹರಃ ಷಡ್ ಯಾಮಃ ಸಪ್ತ ವಾ ನೃಣಾಮ್ ॥ ೮ ॥

ಹದಿನೈದು ಲಘುಗಳು ಸೇರಿದರೆ ಒಂದು ಘಳಿಗೆಯಾಗುವುದು. ಎರಡು ಘಳಿಗೆ ಒಂದು ಮುಹೂರ್ತ. ಆರು ಗಳಿಗೆಗಳು ಒಂದು ಪ್ರಹರ. ಇದು ಹಗಲಿನ ಐದನೆ ಒಂದು

---

೧. ಗವಾಕ್ಷಪ್ರವಿಷ್ಟೇಷ್ವರ್ಕರಶ್ಮಿಷ್ವವಗತಃ । ಕೋಽಸೌ ? ಯೋಽತಿಲಘುತ್ವೇನ ಖಮೇವಾನುಪತನ್ನಗಾತ್ ಗತಃ । ಪಾಠಾಂತರೇ ಖಮೇವಾನುಪತನ್ನವಗತೋ ನ ತು ಗಾಂ ಪೃಥ್ವೀಂ। –ಶ್ರೀಧರಃ

ಅಗಾದಿತಿ ಪಾಠೇ ತಥಾಭೂತಶ್ಚಲತೀತ್ಯರ್ಥಃ। –ವಿಶ್ವನಾಥಃ

ಗಾಂ ಪೃಥ್ವೀಂ ಪತಂಸ್ತು ನಾವಗತೋ ಭವತೀತ್ಯರ್ಥಃ। –ಗಿರಿಧರಃ

ಭಾಗ. ಏಳು ಅಥವಾ ಎಂಟು ಗಳಿಗೆಗಳು ಯಾಮವೆನಿಸುತ್ತದೆ. ಇದು ಹಗಲಿನ ನಾಲ್ಕನೆ ಒಂದು ಭಾಗ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಪ್ರಹರವೆಂದರೂ ಯಾಮ ವೆಂದರೂ ಒಂದೇ ಅರ್ಥ. ಹಗಲಿನ ನಾಲ್ಕನೆ ಒಂದು ಭಾಗ ಹಗಲಿನ ಪ್ರಮಾಣ ಹ್ರಾಸವಾಗುವಾಗ ಆರು ಗಳಿಗೆ, ವೃದ್ಧಿಯಾಗುವಾಗ ಏಳು ಗಳಿಗೆಗಳೇ ಯಾಮವೆನಿಸುತ್ತದೆ. ಹಗಲಿನಲ್ಲಿ ಪ್ರಾತಃ ಸಂಧ್ಯೆಯ ಒಂದು ಮುಹೂರ್ತವನ್ನೂ ಸಾಯಂಸಂಧ್ಯೆಯ ಒಂದು ಮುಹೂರ್ತವನ್ನೂ ಬಿಟ್ಟು ಈ ಯಾಮದ ಪ್ರಮಾಣವನ್ನು ಹೇಳಲಾಗಿದೆ' ಎನ್ನುತ್ತಾರೆ. ವಲ್ಲಭಾಚಾರ್ಯರು ಇದನ್ನು ಒಪ್ಪುವುದಿಲ್ಲ. ಸಂಧ್ಯಾಮುಹೂರ್ತಗಳನ್ನು ಬಿಟ್ಟು ಹಗಲನ್ನು ಸ್ವೀಕರಿಸಿದರೆ ಮನುಷ್ಯರ ಆಯುರ್ಮಾನವನ್ನು 'ಸಂವತ್ಸರಶತಂ ನೃಣಾಂ ಪರಮಾಯುರ್ನಿರೂಪಿತಂ' 'ಮಾನವರ ಆಯುಷ್ಯ ನೂರು ವರ್ಷ' ಎಂದು ಮುಂದೆ ಹೇಳುವಂತೆ ಗಣನೆ ಮಾಡಲು ಶಕ್ಯವಾಗಲಾರದು. ಮುಂದೆ ೧೦ನೆ ಶ್ಲೋಕದಲ್ಲಿ 'ಯಾಮಾಶ್ಚತ್ವಾರಶ್ಚತ್ವಾರಃ' ಎಂಟು ಯಾಮಗಳು ಎರಡು ರಾತ್ರಿ ಹಗಲುಗಳಾಗುತ್ತವೆ ಎನ್ನುವುದರ ಬದಲು 'ಚತ್ವಾರೋ ಯಾಮಾ ಮುಹೂರ್ತದ್ವಯಂ ಚಾಹನೀ' ನಾಲ್ಕು ಯಾಮಗಳು ಮತ್ತು ಸಂಧ್ಯೆಯ ಎರಡು ಮುಹೂರ್ತಗಳು ಸೇರಿ ಎರಡು ರಾತ್ರಿಹಗಲುಗಳೆನ್ನಬೇಕಾದೀತು ಅದರಿಂದ ಗಳಿಗೆ ಬೇರೆ ನಾಡಿಕೆ ಬೇರೆ. ಗಳಿಗೆಗಿಂತ ನಾಡಿಕೆ ಹೆಚ್ಚಿನದು. ಒಂದು ದಿನಕ್ಕೆ ಅರವತ್ತು ಗಳಿಗೆಯಾದರೆ ನಾಡಿಕೆಗಳು ಐವತ್ತೆರಡೇ. ಹೀಗಾಗಿ ಹಗಲು ಕಡಿಮೆ ಇರುವಾಗ ಒಂದು ಯಾಮ ಆರು ನಾಡಿಕೆ. ಹಗಲು ಉದ್ದವಿರುವಾಗ ಒಂದು ಯಾಮ ಏಳು ನಾಡಿಕೆ ಎನ್ನುವುದು ಸರಿ.'' ಎಂದು ಹೇಳುತ್ತಾರೆ. ಇದೂ ನಿರಾಧಾರ. ಅದರಿಂದ ಆರು ಅಥವಾ ಏಳು ಗಳಿಗೆಯಲ್ಲ. ಏಳು ಅಥವಾ ಎಂಟು ಗಳಿಗೆ ಯಾಮ ಎನ್ನಬೇಕು.

---

೧. ಹ್ರಾಸೇ ಷಟ್, ವೃದ್ಧೌ ಸಪ್ತ। ಸಂಧ್ಯಾಂಶಮುಹೂರ್ತದ್ವಯಂ ವಿನೇತಿ ಜ್ಞಾತವ್ಯಂ। —ಶ್ರೀಧರಃ

ಯನ್ನಾಡಿಕಾ ಘಟಿಕಾಪೇಕ್ಷಯಾ ಸ್ಥೂಲಾ ತೇನ ಕಥಮಪಿ ವೃದ್ಧಾ ರಾತ್ರಿರ್ದಿನಂ ವಾ। ತಸ್ಯ ಚತುರ್ಥೋ ಭಾಗಃ ಸಪ್ತನಾಡ್ಯಾತ್ಮಕಃ। ಹ್ರಾಸೇ ತು ಷಣ್ನಾಡ್ಯಾತ್ಮಕಃ। ಯೇ ತು ಸಂಧ್ಯಾದ್ವಯಪರಿತ್ಯಾಗೇನಾಹುಃ ತೈಃ 'ಯಾಮಾಶ್ಚತ್ವಾರಶ್ಚತ್ವಾರಃ' ಇತಿ ವಾಕ್ಯಮನುಸಂಧೇಯಂ। ಅಥ ಯದಿ ಪ್ರಾತಃಸಂಧ್ಯಾ ದಿವಸೇ, ಸಾಯಂ ಸಂಧ್ಯಾ ರಾತ್ರೌ ಇತಿ, ಘಟಿಕಾಚತುಷ್ಟಯಂ ನ ಗಣಿತಮಿತಿ। ತಥಾ ಗಣನಾಯಾಂ ಪ್ರಯೋಜನಾಭಾವಾತ್। ಸಂಧ್ಯಾಸಂಧ್ಯಾಂಶವ್ಯತಿರೇಕೇಣ ಮಧ್ಯೇ ಧರ್ಮಾರ್ಥಮಿತಿ ಚೇತ್। ಏವಮಪ್ಯಾಯುರ್ನಿರೂಪಕತ್ವೇನ ತತ್ತ್ಯಾಗೇ ಪ್ರಯೋಜನಾಭಾವಾತ್। —ವಲ್ಲಭಃ

ರಾಶಿಭೇದಾದೂನಾತಿರೇಕಾತ್ ಸಪ್ತ ವೇತಿ ।

ರಾಶಿಭೇದದಿಂದ ಅಂದರೆ ಸಂಕ್ರಮಣವ್ಯತ್ಯಾಸಗಳಿಂದ ಯಾಮ ಪರಿಮಾಣವು ಸ್ವಲ್ಪ ಕಡಿಮೆ ಅಥವಾ ಹೆಚ್ಚಾಗುವುದರಿಂದ 'ಸಪ್ತ ವಾ' ಏಳು ಅಥವಾ ಅದಕ್ಕಿಂತ ಹೆಚ್ಚು ಗಳಿಗೆಗಳು ಯಾಮವೆನಿಸುತ್ತದೆ.

ಕರ್ಕಾಟಕ ಸಂಕ್ರಮಣದಿಂದ ತೊಡಗಿ ಧನುಃಸಂಕ್ರಮಣದವರೆಗೆ ಹಗಲಿನ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತ ಧನುಃ ಸಂಕ್ರಮಣ ಸಮಯದಲ್ಲಿ ಹಗಲಿನ ನಾಲ್ಕನೆ ಒಂದಂಶವಾದ ಯಾಮಕ್ಕೆ ಏಳುಗಳಿಗೆ ಮಾತ್ರವಿರುತ್ತದೆ. ಮಕರ ಸಂಕ್ರಮಣದಿಂದಾರಂಭಿಸಿ ಮಿಥುನಸಂಕ್ರಮಣಪರ್ಯಂತ ಹಗಲಿನ ಪ್ರಮಾಣ ಕ್ರಮೇಣ ವೃದ್ಧಿಯಾಗುತ್ತ ಮಿಥುನಸಂಕ್ರಮಣಕಾಲದಲ್ಲಿ ಯಾಮಕ್ಕೆ ಎಂಟು ಗಳಿಗೆ ಇರುತ್ತದೆ. ಮೇಷ ತುಲಾಮಾಸಗಳಲ್ಲಿ ಹಗಲು ರಾತ್ರಿ ಸಮಪ್ರಮಾಣವಿರುವುದರಿಂದ ಯಾಮವು ಆಗ ಏಳೂವರೆ ಗಳಿಗೆಯಾಗಿರುತ್ತದೆ. ಈ ಅಂಶಗಳನ್ನು ತಿಳಿಸುವುದಕ್ಕಾಗಿ 'ಸಪ್ತ ವಾ' ಎಂದು ವಾಕಾರ ಹಾಕಿದ್ದಾರೆ. 'ಷಟ್ ಸಪ್ತ ವೇತಿ' ಎನ್ನದೆ ಅಂದರೆ ಊನ ಮತ್ತು ಅತಿರೇಕಗಳಲ್ಲಿ ಯಾಮವು ಆರು ಅಥವಾ ಏಳುಗಳಿಗೆ ಎನ್ನದೆ ಕೇವಲ 'ಸಪ್ತ ವೇತಿ' ಎಂದಿದ್ದರಿಂದ ಆರು ಅಥವಾ ಏಳುಗಳಿಗೆಗಳ ಪಕ್ಷ ತಾತ್ಪರ್ಯಕ್ಕೆ ಸಮ್ಮತವಲ್ಲವೆಂದು ಕಾಣುತ್ತದೆ.

* * *

ಗಳಿಗೆಯನ್ನು ತಿಳಿಯಲು ಪ್ರಾಚೀನರ ಗಳಿಗೆಬಟ್ಟಲು ತಯಾರಿ ಹೇಗೆಂಬುದನ್ನು ಹೇಳುತ್ತಾರೆ.

ದ್ವಾದಶಾರ್ಧಪಲೋನ್ಮಾನಂ ಚತುರ್ಭಿಶ್ಚತುರಂಗುಲೈಃ ।
ಸ್ವರ್ಣಮಾಷೈಃ ಕೃತಚ್ಛಿದ್ರಂ ಯಾವತ್ ಪ್ರಸ್ಥಜಲಂ ಪಿಬೇತ್ ॥ ೯ ॥

ನಾಲ್ಕು ಮಾಷ ತೂಕದ ಬಂಗಾರವನ್ನು ನಾಲ್ಕು ಅಂಗುಲ ಉದ್ದದ ಕಡ್ಡಿಯಾಗಿ ಮಾಡಿದರೆ ಎಷ್ಟು ದಪ್ಪವಾಗಿರಬಹುದೋ ಅಷ್ಟೇ ಪ್ರಮಾಣದ ಒಂದು ರಂಧ್ರವುಳ್ಳ ಆರು ಪಲ ಭಾರದ, ಒಂದು ಪ್ರಸ್ಥ ನೀರಿನ ಅಳತೆಯ ತಾಮ್ರಪಾತ್ರೆಯನ್ನು ನೀರಲ್ಲಿ ತೇಲಿಬಿಟ್ಟಾಗ ಅದು ರಂಧ್ರಗಳ ಮೂಲಕ ಪೂರ್ತಿನೀರು ತುಂಬಿಕೊಂಡು ಮುಳುಗುವ ಹೊತ್ತು ಒಂದು ಗಳಿಗೆ ಎನಿಸುತ್ತದೆ.

ಇಲ್ಲಿ 'ದ್ವಾದಶಾರ್ಧಪಲ' ಎಂದರೆ ದ್ವಾದಶ ಮತ್ತು ಅರ್ಧ, ಹನ್ನೆರಡುವರೆ ಪಲ ಭಾರದ ಪಾತ್ರೆ ಎಂದು ವಿಷ್ಣುಪುರಾಣಾನುಸಾರಿ ವೀರರಾಘವವ್ಯಾಖ್ಯಾನ. 'ಚತುರ್ಭಿಃ ಸ್ವರ್ಣಮಾಷೈಃ' ಎಂದರೆ ಮಾಷತೂಕದ ನಾಲ್ಕು ಅಂಗುಲ ಉದ್ದದ ನಾಲ್ಕು

ಕಡ್ಡಿಗಳನ್ನು ಜೊತೆಗೆ ಸೇರಿಸಿ ತೂರಿಸುವಷ್ಟು ರಂಧ್ರ ಮಾಡಬೇಕೆಂದು ವಲ್ಲಭವ್ಯಾಖ್ಯಾನ. ಇದೆಲ್ಲವೂ ಪದ್ಮಪುರಾಣವಚನಕ್ಕೆ ವಿರುದ್ಧವಾಗುತ್ತದೆ.

ಕಾಕಣಿಕಾಚತುಷ್ಕಂ ತು ವಿಂಶಾಂಶೇತ್ಯಭಿಧೀಯತೇ ।
ಕೃಷ್ಣಲೇತ್ಯಪಿ ತಂ ಬ್ರೂಯುಸ್ತೈಶ್ಚತುರ್ಭಿಸ್ತು ಮಾಷಕಮ್ ॥

ಚತುರಂಗುಲದೀರ್ಘೇ ತು ಕೃತೇ ಮಾಷಚತುಷ್ಟಯೇ ।
ಯಾವತ್ ಸ್ಯಾತ್ ಪರಿಣಾಹೇನ ತಾವದ್ ದ್ವಾರಂ ವಿಧೀಯತೇ ॥

ಪ್ರಸ್ಥಸ್ಯ ನಾಡೀಪಾತ್ರಸ್ಯ ಷಟ್‌ಪಲಸ್ಯ ಶುಭೇ ಜಲೇ ।
ಭಾರಾಧಿಕ್ಯೇನೋದಕೇನ ಕ್ಷಿಪ್ರಂ ಪೂರ್ತಿರ್ಭವಿಷ್ಯತಿ ॥

ಅತಿಶೈತ್ಯೇ ಕಲಂಕೇ ಚ ಮಾಂದ್ಯೇ ನೈವ ತು ಪೂರಣಮ್ ।
ತಸ್ಮಾದ್ ವಸಂತಕಾಲೇ ತು ಪ್ರಯಾಗಸ್ಥೋದಕೇನ ತು ।
ನಾಡೀಶುದ್ಧಿಪರೀಕ್ಷಾ ಸ್ಯಾತ್ ಅನ್ಯಥಾ ನ ಸಮಂ ಭವೇತ್ ॥

ಇತಿ ಪಾದ್ಮೇ ॥

ನಿರ್ಮಲೇನ ಸಮೋಷ್ಣೇನ ನಿತ್ಯಸೂರ್ಯಾಂಶುವಾರಿಣಾ ।
ಪ್ರವಾಹಗೇನ ಕಾರ್ಯಾ ಸ್ಯಾತ್ ಕಾಲಶುದ್ಧಿಃ ಸದೈವ ತು ॥

ಇತಿ ಬ್ರಹ್ಮಾಂಡೇ ॥

'ನಾಲ್ಕು ಕಾಕಣಿಕೆಗಳು ಒಂದು ವಿಂಶಾಂಶವಾಗುವುದು. ಅದನ್ನು ಕೃಷ್ಣಲ ಎಂದೂ ಕರೆಯುತ್ತಾರೆ. ನಾಲ್ಕು ಕೃಷ್ಣಲಗಳು ಒಂದು ಮಾಷ. ನಾಲ್ಕು ಮಾಷ ತೂಕದ ಬಂಗಾರದಿಂದ ನಾಲ್ಕು ಅಂಗುಲ ಉದ್ದದ ಕಡ್ಡಿಯನ್ನು ಮಾಡಿ ಅದು ತೂರುವಷ್ಟು ನಾಡೀಪಾತ್ರೆಯಲ್ಲಿ ಛಿದ್ರಮಾಡಬೇಕು. ನಾಡೀಪಾತ್ರೆ ಆರುಪಲ ತೂಕ ತಾಮ್ರದಿಂದ ಮಾಡಿದ್ದಾಗಿರಬೇಕು ಮತ್ತು ಒಂದು ಪ್ರಸ್ಥ(ಬಳ್ಳ)ನೀರು ಮಾತ್ರ ತುಂಬುವಷ್ಟಿರಬೇಕು. ಇದನ್ನು ಶುದ್ಧವಾದ ನೀರಲ್ಲಿ ತೇಲಿ ಬಿಡಬೇಕು. ಶುದ್ಧನೀರೆಂದರೆ ನೀರು ಅಧಿಕ ಭಾರವಾಗಿರಕೂಡದು ಅತಿಯಾಗಿ ತಣ್ಣಗಿರಬಾರದು ಕೊಳಕಾಗಿರಬಾರದು. ಭಾರಾಧಿಕ್ಯದೋಷ ಇದ್ದರೆ ಬೇಗನೆ ಗಳಿಗೆ ಬಟ್ಟಲು ನೀರಿಂದ ತುಂಬಿಹೋಗುತ್ತದೆ. ಒಂದು ಗಳಿಗೆಗೆ ಮೊದಲೇ ನೀರಲ್ಲಿ ಮುಳುಗುತ್ತದೆ. ಅತಿಶೈತ್ಯಾದಿದೋಷವಿದ್ದರೆ ಬಲುನಿಧಾನವಾಗಿ ಮುಳುಗುತ್ತದೆ. ಅದರಿಂದ ವಸಂತಕಾಲದಲ್ಲಿ ಪ್ರಯಾಗಕ್ಷೇತ್ರದ ಜಲದಿಂದ ಗಳಿಗೆಯನ್ನು ನಿರ್ಧರಿಸಬೇಕು. ಇಲ್ಲದಿದ್ದರೆ ಗಳಿಗೆಯ ಪ್ರಮಾಣ ಸರಿಯಾಗದು' ಎಂದು ಪದ್ಮಪುರಾಣದಲ್ಲಿ ಹೇಳಿದೆ. ಬ್ರಹ್ಮಾಂಡಪುರಾಣದಲ್ಲಿಯೂ ಹೀಗೆ ಹೇಳಿದೆ. 'ಪ್ರಯಾಗಜಲ ಸಿಗದಿದ್ದ ಪಕ್ಷದಲ್ಲಿ ನಿರ್ಮಲವಾದ

ಸಮಶೀತೋಷ್ಣವಾದ, ಸದಾ ಬಿಸಿಲು ಬೀಳುವ ಪ್ರವಾಹದಲ್ಲಿ ಹರಿವ ನೀರಿಂದಲೆ ಗಳಿಗೆಯನ್ನು ಪರೀಕ್ಷಿಸಬೇಕು' ಎಂದು.

* * *

ದಿನ ಪಕ್ಷಗಳ ಪರಿಮಾಣಗಳನ್ನು ಹೇಳುತ್ತಾರೆ–

ಯಾಮಾಶ್ಚತ್ವಾರಶ್ಚತ್ವಾರೋ ಮರ್ತ್ಯಾನಾಮಹನೀ ಉಭೇ ।
ಪಕ್ಷಃ ಪಂಚದಶಾಹಾನಿ ಶುಕ್ಲಃ ಕೃಷ್ಣಶ್ಚ ಮಾನದ ॥ ೧೦ ॥

ಮನುಷ್ಯರಿಗೆ ನಾಲ್ಕು ನಾಲ್ಕು ಯಾಮಗಳು ಹಗಲು ರಾತ್ರಿಗಳ ಒಂದು ದಿನವಾಗುತ್ತದೆ. ಹದಿನೈದು ದಿನಗಳು ಪಕ್ಷವೆನಿಸುತ್ತವೆ. ಪಕ್ಷವು ಶುಕ್ಲಪಕ್ಷ ಕೃಷ್ಣಪಕ್ಷ ಎಂದು ಎರಡು ವಿಧ.

ಇಲ್ಲಿ 'ಅಹನೀ ಉಭೇ' ಎಂಬಲ್ಲಿ 'ಅಹನೀ' ಎಂದು ದ್ವಿವಚನವಿರುವಾಗ ಪುನಃ 'ಉಭೇ' ಎಂಬ ಶಬ್ದವೇಕೆ? ಎಂಬ ಪ್ರಶ್ನೆ ಬರುತ್ತದೆ. ವಲ್ಲಭವ್ಯಾಖ್ಯಾನದಲ್ಲಿ ಆವೃತ್ತಿಪರಿಹಾರಕ್ಕಾಗಿ 'ಉಭೇ' ಎಂಬ ಶಬ್ದವಿದೆ ಎಂದಿದ್ದಾರೆ. 'ದ್ವಿವಚನ ಬಲದಿಂದ ಎರಡು ಹಗಲುಗಳ ಆವೃತ್ತಿ ಎಂದರ್ಥವಾದೀತು, ಎರಡು ರಾತ್ರಿಗಳ ಆವೃತ್ತಿ ಎಂದರ್ಥವೂ ಆದೀತು. ಒಂದು ರಾತ್ರಿ ಒಂದು ಹಗಲೆಂದಾಗಲಾರದು' ಎಂದು ಅಭಿಪ್ರಾಯವಿರಬಹುದು. ಆದರೆ ಉಭೇಶಬ್ದದಿಂದ ಆ ಆವೃತ್ತಿಪರಿಹಾರ ಹೇಗೆ ಎಂಬ ಪ್ರಶ್ನೆ ಬರುತ್ತದೆ.

ಯತ್ರೋಭಯೋಃ ಸಶಬ್ದಃ ಸ್ಯಾತ್ ತತ್ರ ದ್ವಿವಚನೇಽಪ್ಯುಭೇ ॥
ಇತ್ಯಭಿಧಾನಮ್ ।

ಎರಡು ವಿಜಾತೀಯ ವಸ್ತುಗಳಿಗೆ ಸಮಾನಶಬ್ದದಿಂದ ವ್ಯವಹಾರವಿರುವಲ್ಲಿ ಆ ಎರಡೂ ವಸ್ತುಗಳನ್ನು ತಿಳಿಸಲು ದ್ವಿವಚನವಿದ್ದರೂ ಉಭಶಬ್ದವೂ ಬೇಕಾಗುತ್ತದೆ ಎಂದು ಅಭಿಧಾನದಲ್ಲಿದೆ.

ಹಗಲು ರಾತ್ರಿಗಳು ಎರಡು ವಿಜಾತೀಯ ವಸ್ತುಗಳು. ಎರಡಕ್ಕೂ ಅಹಃಶಬ್ದ ವ್ಯವಹಾರವಿದೆ. ಅದರಿಂದ ಅಹನೀ ಎಂದು ದ್ವಿವಚನವಿದ್ದರೂ ಅಹಃಶಬ್ದಕ್ಕೆ ಹಗಲು ರಾತ್ರಿ ಎಂಬ ಎರಡೂ ಕಾಲವಿವಕ್ಷಿತವಾದ್ದರಿಂದ ಈ ವಿವಕ್ಷೆಯನ್ನು ಸೂಚಿಸಲು 'ಉಭೇ' ಎಂಬ ಶಬ್ದವಿದೆ. ಅದಿಲ್ಲದಿರುತ್ತಿದ್ದರೆ ಎರಡು ಹಗಲುಗಳೆಂದೋ ಎರಡು ರಾತ್ರಿಗಳೆಂದೋ ಅರ್ಥವಾಗುತ್ತಿತ್ತು. ಒಂದು ಹಗಲು ಒಂದು ರಾತ್ರಿ ಹೀಗೆ ಎರಡು ಕಾಲಗಳೆಂದಲ್ಲ.

* * *

ಪರಮಾಣುಕಾಲ ಅಣುಕಾಲ ತ್ರ್ಯಣುಕಕಾಲ ತ್ರುಟಿ ವೇಧ ಲವ ಮುಂತಾದ ಕಾಲವಾಚಕಶಬ್ದಗಳಿಂದ ತದಂತರ್ಗತನಾದ ಪರಮಾತ್ಮನೆ ಕರೆಸಿಕೊಳ್ಳುತ್ತಾನೆ ಎನ್ನಲು ಇನ್ನೊಂದು ರೀತಿಯಿಂದ ಸಮರ್ಥನೆಯನ್ನು ತೋರಿಸುತ್ತಾರೆ, ಸಂವತ್ಸರ ಪರಿವತ್ಸರ ಇತ್ಯಾದಿ ಕಾಲನಾಮಗಳೂ ಭಗವಂತನವು. ಅದರಂತೆ ಪರಮಾಣುಕಾಲ ಮುಂತಾದ ಶಬ್ದಗಳೂ ಹರಿನಾಮಗಳೇ ಆಗಬೇಕು ಎಂದು–

ಗ್ರಹರ್ಕ್ಷತಾರಾಚಕ್ರಸ್ಥಃ ಪರಮಾಣ್ವಾದಿನಾ ಜಗತ್ ।
ಸಂವತ್ಸರಾವಸಾನೇನ ಪರ್ಯೇತ್ಯನಿಮಿಷೋ ವಿಭುಃ ॥ ೧೩ ॥

ಸಂವತ್ಸರಃ ಪರಿವತ್ಸರ ಇಡಾವತ್ಸರ ಏವ ಚ ।
ಅನುವತ್ಸರೋ ವತ್ಸರಶ್ಚ ವಿದುರೈವಂ ಪ್ರಭಾಷ್ಯತೇ ॥ ೧೪ ॥

ಆದಿತ್ಯಾದಿ ಜ್ಯೋತಿರ್ಮಂಡಲಗಳಾಗಲಿ ಪರಮಾಣ್ವಾದಿ ಕಾಲಗಳಾಗಲಿ ತಾವೇ ಮಾನವರ ಆಯುಷ್ಯವನ್ನು ನಿಯಂತ್ರಿಸುತ್ತವೆ ಎನ್ನಬಾರದು. ಗ್ರಹಗಳ ಅಶ್ವಿನ್ಯಾದಿನಕ್ಷತ್ರಗಳ ಧ್ರುವಮೊದಲಾದ ತಾರೆಗಳ ಮಂಡಲಗಳಲ್ಲಿದ್ದು ಪರಮಾಣು ಮುಂತಾದ ವರ್ಷಪರ್ಯಂತ ಕಾಲಗಳಿಂದ ಮನುಷ್ಯರ ಆಯುಷ್ಯವನ್ನು ಎಚ್ಚರದಿಂದ ನಿಯಂತ್ರಿಸುತ್ತ ಸದಾ ಸಂಚರಿಸುವುದರಿಂದ ಪರಮಾತ್ಮನೇ 'ಅನಿಮಿಷ' ಎನಿಸುತ್ತಾನೆ. ಅವನಿಗೇ ಸಂವತ್ಸರ ಪರಿವತ್ಸರ ಇಡಾವತ್ಸರ ಅನುವತ್ಸರ ವತ್ಸರ ಎಂದು ಹೆಸರುಗಳು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಸೌರಮಾನದಲ್ಲಿ ಸಂವತ್ಸರ, ಬಾರ್ಹಸ್ಪತ್ಯದಲ್ಲಿ ಪರಿವತ್ಸರ, ಸಾವನದಲ್ಲಿ ಇಡಾವತ್ಸರ, ಚಾಂದ್ರದಲ್ಲಿ ಅನುವತ್ಸರ, ನಾಕ್ಷತ್ರದಲ್ಲಿ ವತ್ಸರ ಎಂದು ವ್ಯವಹಾರ ಎನ್ನುತ್ತಾರೆ. ವಲ್ಲಭವ್ಯಾಖ್ಯಾನದಲ್ಲಿ ಚಾಂದ್ರಮಾನದಲ್ಲಿ ಸಂವತ್ಸರ, ಸಾವನದಲ್ಲಿ ಪರಿವತ್ಸರ, ಸೌರದಲ್ಲಿ ಇಡಾವತ್ಸರ ನಾಕ್ಷತ್ರದಲ್ಲಿ ಅನುವತ್ಸರ, ಬಾರ್ಹಸ್ಪತ್ಯದಲ್ಲಿ ವತ್ಸರ ಎಂದು ವ್ಯವಹಾರ ಎನ್ನುತ್ತಾರೆ. ಪ್ರಮಾಣದ ಆಧಾರ ಕೊಟ್ಟಿಲ್ಲ.

ಇಡಾವತ್ಸರನಾಮಾಸೌ ನಕ್ಷತ್ರದ್ವಾದಶೇ ಸ್ಥಿತಃ ।
ತಿಥೀನಾಂ ದ್ವಾದಶಾವರ್ತೇ ಯೋ ಹರಿಃ ಸೋಽನುವತ್ಸರಃ ॥

ವತ್ಸರೋ ಯಃ ಸ್ಥಿತಸ್ತ್ವಹ್ನಾಂ ಷಷ್ಟ್ಯುತ್ತರಶತತ್ರಯೇ ।
ಗುರ್ವಾವರ್ತದ್ವಾದಶಾಂಶೇ ಯಃ ಸ್ಥಿತಃ ಪರಿವತ್ಸರಃ ॥

ಸೌರದ್ವಾದಶಕೇ ಮಾಸೇ ಯಃ ಸ್ಥಃ ಸಂವತ್ಸರೋ ಹರಿಃ ।
ಏವಂ ಸ ಕಾಲನಾಮಾಪಿ ಕಾಲಸ್ಥಃ ಪರಮೇಶ್ವರಃ ॥

ಇತಿ ಬ್ರಹ್ಮತರ್ಕೇ ॥

ಸರ್ವದಾ ದರ್ಶನಾತ್ ತಸ್ಯಾನಿಮಿಷತ್ವಂ ವಿದುರ್ಬುಧಾಃ ।
ಸತತಂ ಗಮನಾದ್ ವಾಪಿ ಕಾಲಸ್ಥಸ್ಯ ಮಹಾತ್ಮನಃ ॥ ಇತಿ ಚ ॥

ಸಂವತ್ಸರ ಮುಂತಾದ ಶಬ್ದಗಳಿಂದ ಯಾವ ಮಾನದ ವರ್ಷಗಳಲ್ಲಿರುವ ಪರಮಾತ್ಮ ಕರೆಸಿಕೊಳ್ಳುತ್ತಾನೆ ಎಂಬುದನ್ನು ಬ್ರಹ್ಮತರ್ಕವೆಂಬ ಗ್ರಂಥ ಹೀಗೆ ವಿವರಿಸಿದೆ– 'ಅಶ್ವಿನಿ ಭರಣಿ ಮುಂತಾದ ಇಪ್ಪತ್ತೇಳು ನಕ್ಷತ್ರಗಳು ಹನ್ನೆರಡು ಬಾರಿ ತಿರುಗಲು ಬೇಕಾಗುವ ನಾಕ್ಷತ್ರಮಾನದ ವರ್ಷದಲ್ಲಿ ಇಡಾವತ್ಸರ ನಾಮದಿಂದ ಹರಿ ಇದ್ದಾನೆ. ಶುಕ್ಲಪ್ರತಿಪದೆಯಿಂದ ಅಮಾವಾಸ್ಯಾಪರ್ಯಂತ ಮೂವತ್ತು ತಿಥಿಗಳು ಹನ್ನೆರಡು ಬಾರಿ ಉರುಳಿದಾಗ ಆಗುವ ಚಾಂದ್ರಮಾನದ ವರ್ಷದಲ್ಲಿ ಅನುವತ್ಸರ ನಾಮದಿಂದ ಹರಿ ಇದ್ದಾನೆ. ಮುನ್ನೂರ ಅರವತ್ತು ದಿನಗಳಿಂದಾಗುವ ಸಾವನಮಾನದ ವರ್ಷದಲ್ಲಿ ವತ್ಸರನಾಮದಿಂದ ಹರಿ ಇದ್ದಾನೆ. ಗುರುಗ್ರಹದ ದ್ವಾದಶರಾಶಿ ಭ್ರಮಣದಲ್ಲಿ ಹನ್ನೆರಡನೇ ಒಂದಂಶವೆನಿಸುವ ಬಾರ್ಹಸ್ಪತ್ಯಮಾನದ ವರ್ಷದಲ್ಲಿ ಪರಿವತ್ಸರ ನಾಮದಿಂದ ಹರಿ ಇದ್ದಾನೆ. ಸೌರಮಾನದ ಹನ್ನೆರಡು ತಿಂಗಳು ಗಳಿಂದಾಗುವ ವರ್ಷದಲ್ಲಿ ಸಂವತ್ಸರ ಎಂಬ ನಾಮದಿಂದ ಹರಿ ಇದ್ದಾನೆ. ಕಾಲದಲ್ಲಿ ಕಾಲನಾಮದಿಂದ ಹರಿ ಇದ್ದಾನೆ' ಎಂದು. 'ಎಲ್ಲವನ್ನೂ ಸದಾ ನೋಡುವುದರಿಂದ ಮತ್ತು ಕಾಲಪ್ರವಾಹದಲ್ಲಿದ್ದು ಸದಾ ಹರಿಯುವುದರಿಂದ ಹರಿ ಅನಿಮಿಷನೆನಿಸುತ್ತಾನೆ' ಎಂದೂ ಹೇಳಿದೆ.

ಹರಿಗೇ ಮುಖ್ಯವಾಗಿ ಇಡಾವತ್ಸರಮುಂತಾದ ನಾಮಗಳು. ಅವನ ಸನ್ನಿಧಾನವಿರುವುದರಿಂದ ಇಡಾವತ್ಸರಾದಿವರ್ಷಗಳಿಗೆ ಆ ಹೆಸರುಗಳು.

* * *

ಸಂವತ್ಸರಾದಿ ಪಂಚಕಾಲಾಂತರ್ಗತ ಕಾಲನಿಯಾಮಕ ಹರಿ ಎಲ್ಲರಿಗೂ ಪರಮೋಪಕಾರಿ. ಎಲ್ಲರೂ ಅವನನ್ನು ಆರಾಧಿಸಬೇಕು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಯಃ ಸೃಜ್ಯಶಕ್ತಿಮುರುಧೋಚ್ಛ್ವಸಯನ್ ಸ್ವಶಕ್ತ್ಯಾ
ಪುಂಸೋಽಭ್ರಮಾಯ ದಿವಿ ಧಾವತಿ ಭೂತಭೇದಃ ।
ಕಾಲಾಖ್ಯಯಾ ಗುಣಮಯೀಂ ಕ್ರತುಭಿರ್ವಿತನ್ವನ್
ತಸ್ಮೈ ಬಲಿಂ ಹರತ ವತ್ಸರಪಂಚಕಾಯ ॥ ೧೫ ॥

ಸಂವತ್ಸರಾದಿ ಪಂಚಕಾಲಾಂತರ್ಗತನಾದ ಶ್ರೀಹರಿ ತನ್ನ ಕಾಲ ಎಂಬ ಶಕ್ತಿಯಿಂದಲೂ ಬುದ್ಧಿ ಬಲದಿಂದಲೂ ಆಯಾ ಕಾಲದಲ್ಲಿ ಆಗಬೇಕಾದ ಪ್ರಕೃತಿಯ

ಗುಣಗಳ ಉದ್ಬೋಧವನ್ನೂ ಸಸ್ಯ ಪ್ರಾಣಿ ಮುಂತಾದವುಗಳ ಉತ್ಪತ್ತಿಯನ್ನೂ ಪ್ರೇರಿಸುತ್ತಾನೆ. ಕರ್ಮಾಚರಣ ನಿರತರಾದವರಿಗೆ ಕರ್ಮಾಂಗಕಾಲದ ವಿಷಯದಲ್ಲಿ ಭ್ರಮೆ ಬಾರದಂತೆ ಆಕಾಶದಲ್ಲಿ ಜ್ಯೋತಿಶ್ಚಕ್ರಾಂತರ್ಗತನಾಗಿ ವೇಗವಾಗಿ ಸಂಚರಿಸುತ್ತಾನೆ. ವಯಸ್ಸಿನಲ್ಲಿ ಹಿರಿಯರು ಕಿರಿಯರು ಯಾರೆನ್ನುವುದನ್ನು ತೋರಿಸುತ್ತಾನೆ. ಇಂಥ ಪರಮಾತ್ಮನಿಗೆ ಎಲ್ಲರೂ ಪೂಜೆ ಸಲ್ಲಿಸಿರಿ.

[೧]ಇಲ್ಲಿ 'ಭೂತಭೇದಃ' ಎಂದರೆ ಪಂಚಭೂತಗಳಲ್ಲಿ ಒಂದಾದ ತೇಜೋವಿಶೇಷ ಸೂರ್ಯಮಂಡಲವೇ ಆಕಾಶದಲ್ಲಿ ಸಂಚರಿಸುತ್ತ ಮಾನವರ ಆಯುಷ್ಯವನ್ನು ಅಳೆಯುತ್ತ ಮಾನವರಿಗೆ ವಿಷಯಾಸಕ್ತಿಯನ್ನು ಕಳೆಯುತ್ತದೆ. ಕಾಮ್ಯಕರ್ಮಿಗಳಿಗೆ (ಗುಣಮಯಂ-ಎಂದುಪಾಠ) ತ್ರಿಗುಣಾತ್ಮಕವಾದ ಸ್ವರ್ಗಾದಿಫಲಕ್ಕಾಗಿ ಯಜ್ಞಾದಿಗಳನ್ನು ಮಾಡಿಸುತ್ತದೆ. ಸಂವತ್ಸರಾದಿಪಂಚಕಾಲಪ್ರವರ್ತಕವಾದ ಆ ಸೂರ್ಯಮಂಡಲಕ್ಕೆ ಎಲ್ಲರೂ ಪೂಜೆ ಸಲ್ಲಿಸಿರಿ ಎಂದು ಶ್ರೀಧರವ್ಯಾಖ್ಯಾನ. ಬೇರೆ ವ್ಯಾಖ್ಯಾನಕಾರರು ಕೂಡ 'ಭೂತಭೇದ' ಶಬ್ದವನ್ನು ಸೂರ್ಯ ಸೂರ್ಯಾಂತರ್ಗತ ಪರಮಾತ್ಮಪರವಾಗಿಯೆ ತೆಗೆದುಕೊಂಡು ಎಲ್ಲರೂ ಸಂವತ್ಸರಾದಿ ಪಂಚಕಾಲ ಪ್ರವರ್ತಕನು ಸೂರ್ಯ ಎಂದಿದ್ದಾರೆ. ಅವರೇ ಚಂದ್ರಬೃಹಸ್ಪತಿ ನಕ್ಷತ್ರಗಳು ಅನುವತ್ಸರ ಪರಿವತ್ಸರ ವತ್ಸರಗಳಿಗೆ ಪ್ರವರ್ತಕರೆಂದೂ ಹೇಳಿದ್ದಾರೆ. ಸೂರ್ಯನೇ ಕಾಲ ಎಂದಿದ್ದಾರೆ. ಇವೆಲ್ಲವೂ ವ್ಯಾಹತ. ಯಾವುದಕ್ಕೂ ಪ್ರಮಾಣದ ಆಧಾರವಿಲ್ಲ.

ಅಭ್ರಮಾಯ । ಭೂತಭೇದಕಃ । ಕ್ರತುಬಿಃ ಸ್ವಪ್ರಜ್ಞಾಭಿಃ ।

ಭೂತಾನಾಂ ಜ್ಯೈಷ್ಠ್ಯಕಾನಿಷ್ಠ್ಯಜ್ಞಪ್ತ್ಯೈ ಯಜ್ಞಾದಿವೃತ್ತಯೇ ।
ಬೋಧಯನ್ ಸೃಜ್ಯಶಕ್ತಿಂ ಚ ಕಾಲಸ್ಥೋ ವರ್ತತೇ ಹರಿಃ ॥
ಇತಿ ತಂತ್ರಪ್ರಕಾಶಿಕಾಯಾಮ್ ।

ಪುಂಸೋಭ್ರಮಾಯ ಎಂಬಲ್ಲಿ 'ಭ್ರಮಾಯ 'ಭ್ರಮೆ ಉಂಟುಮಾಡುವುದಕ್ಕಾಗಿ ಎಂದು ಪದವಿಭಾಗವಲ್ಲ. 'ಅಭ್ರಮಾಯ' ಭ್ರಮೆಬಾರದಿರುವುದಕ್ಕಾಗಿ, ಸಂಧ್ಯಾಕಾಲ

---

೧. ಭೂತಭೇದೋ ಮಹಾಭೂತವಿಶೇಷಸ್ತೇಜೋಮಂಡಲರೂಪೀ ಸೂರ್ಯಃ । ತಸ್ಮೈ ವತ್ಸರಪಂಚಕಪ್ರವರ್ತಕಾಯ ಪೂಜಾಂ ಕುರುತ । —ಶ್ರೀಧರಃ

ಸೂರ್ಯಶರೀರಕಾಯ ವತ್ಸರಪಂಚಕಾತ್ಮನೇ ಬಲಿಂ ಹರತ ಪೂಜಾಂ ಕುರುತ । —ವೀರರಾಘವಃ

ಏವಂ ಫಲಸಾಧಕಃ ಪ್ರವರ್ತಕೋ ಭಗವಾನ್ ವತ್ಸರಪಂಚಕಪ್ರವರ್ತಕಃ ತಾದೃಶಾಯ ಕಾಲಾತ್ಮನೇ ಸೂರ್ಯಾಯ ಬಲಿಂ ಹರತ । —ವಲ್ಲಭಃ

ಯಾವುದು ಪ್ರಾತಃಕಾಲ ಯಾವುದು ಎಂದು ಮುಂತಾಗಿ ನಿಶ್ಚಯಜ್ಞಾನ ಉಂಟುಮಾಡುವುದಕ್ಕಾಗಿ ಜ್ಯೋತಿರ್ಮಂಡಲಾಂತರ್ಗತನಾದ ಹರಿ ಅಂತರಿಕ್ಷದಲ್ಲಿ ಸಂಚರಿಸುತ್ತಾನೆ ಎಂದರ್ಥ. 'ಭೂತಭೇದಃ' ಎಂಬಲ್ಲಿ ಪಂಚಭೂತವಿಶೇಷ ಎಂದು ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಅರ್ಥವಲ್ಲ. ಭೂತಗಳಲ್ಲಿ ಪ್ರಾಣಿಮನುಷ್ಯರಲ್ಲಿ 'ಭೇದಕಃ' ವಯಸ್ಸಿನಿಂದ ಯಾರು ಹಿರಿಯರು ಯಾರು ಕಿರಿಯರೆನ್ನುವುದನ್ನು ಗ್ರಹನಕ್ಷತ್ರಾದಿಗಳಲ್ಲಿದ್ದು ಸಂಚರಿಸುವ ಮೂಲಕ ತಿಳಿಸುವವನೆಂದರ್ಥ. 'ಕ್ರತುಭಿಃ' ಎಂದರೆ ಯಜ್ಞಗಳಿಂದ, 'ಗುಣಮಯಂ' ಸ್ವರ್ಗಾದಿಫಲವನ್ನು ಉಂಟು ಮಾಡುವವನೆಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ 'ಗುಣಮಯಂ' ಎಂಬುದು ಅಪಪಾಠ. ಗುಣಮಯೀಂ ಎಂದೇ ಪಾಠ. ಅದರಿಂದ ಕ್ರತುಭಿಃ ಎಂದರೆ ತನ್ನ ಬುದ್ಧಿಬಲದಿಂದ ಎಂದರ್ಥ.

ಈ ಶ್ಲೋಕದಲ್ಲಿ ಹೇಳಿದ್ದು ಸೂರ್ಯ ಅಥವಾ ಸೂರ್ಯಾಂತರ್ಗತನನ್ನಲ್ಲ. ಕಾಲಾಂತರ್ಗತನಾದ ಹರಿಯನ್ನು ಎಂಬ ಅಂಶವನ್ನೂ, ಅಭ್ರಮಾಯ, ಭೂತಭೇದಃ ಮುಂತಾದ ಶಬ್ದಗಳನ್ನೂ ವಿವರಿಸುತ್ತದೆ ತಂತ್ರಪ್ರಕಾಶಿಕಾ ಎಂಬ ಗ್ರಂಥ. '(ಭೂತಭೇದಃ) ಜನರಲ್ಲಿ ಹಿರಿಯರು ಕಿರಿಯರು ಯಾರೆಂದು ತಿಳಿಸಲು (ಅಭ್ರಮಾಯ) ಯಜ್ಞಾಂಗಕಾಲ ನಿರ್ಣಯಮೂಲಕ ಯಜ್ಞಾದಿಪ್ರವೃತ್ತಿ ಮಾಡಿಸಲು ಸೃಜ್ಯಶಕ್ತಿಮುಚ್ಛ್ವಸಯನ್ ಆಯಾ ಕಾಲದಲ್ಲಿ ಉತ್ಪನ್ನವಾಗುವ ಸಸ್ಯಪ್ರಾಣಿಗಳ ಉತ್ಪತ್ತಿಶಕ್ತಿಯನ್ನು ವ್ಯಕ್ತಮಾಡುತ್ತ ಹರಿ ಕಾಲಾಂತರ್ಗತನಾಗಿ ಕಾಲ ನಿಯಾಮಕನಾಗಿದ್ದಾನೆ' ಎಂದು.

* * *

ಭೂಮ್ಯಂತರಿಕ್ಷಸ್ವರ್ಗಗಳಿಗೆ ಬ್ರಹ್ಮದೇವರ ಪ್ರತಿದಿನದಲ್ಲಿ ಸೃಷ್ಟಿಪ್ರಲಯಗಳಿವೆ ಎನ್ನುತ್ತಾರೆ ಮೈತ್ರೇಯರು ವಿದುರನಿಗೆ–

ನಿಶಾವಸಾನ ಆರಬ್ಧೋ ಲೋಕಕಲ್ಪೋऽನುವರ್ತತೇ ।
ಯಾವದ್ ದಿನಂ ಭಗವತೋ ಮನೂನ್ ಭುಂಜಂಶ್ಚತುರ್ದಶ ॥ ೨೩ ॥

ಬ್ರಹ್ಮದೇವರ ರಾತ್ರಿಯ ಕೊನೆಯಲ್ಲಿ ಮೂಲೋಕದ ಸೃಷ್ಟಿ. ಹಗಲಿನಲ್ಲಿರುವ ಭಗವಂತ ಹದಿನಾಲ್ಕು ಮನ್ವಂತರಗಳನ್ನು ಭೋಗಿಸುವಷ್ಟು ಕಾಲ ಈ ಸೃಷ್ಟಿ ಇರುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಮೂಲೋಕಸೃಷ್ಟಿ ಒಂದು ಹಗಲಿನಷ್ಟು ಕಾಲ ಹದಿನಾಲ್ಕು ಮನುಗಳನ್ನು ವ್ಯಾಪಿಸುತ್ತದೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಮುಂದಿನ ಶ್ಲೋಕದಲ್ಲಿ ಮನು ತನ್ನ ಕಾಲವನ್ನು ವ್ಯಾಪಿಸುತ್ತಾನೆ ಎಂದಿದೆ. ದಿನವು

ಮನುಗಳನ್ನು, ಮನುಗಳು ತಮ್ಮ ತಮ್ಮ ಕಾಲಗಳನ್ನು ವ್ಯಾಪಿಸುತ್ತಾರೆ ಎನ್ನುವುದೇ ಸ್ವರಸ. ಮತ್ತು ಮೂಲೋಕಸೃಷ್ಟಿ ಒಂದುದಿನಕಾಲ ಮನುಗಳನ್ನು 'ಭುಂಕ್ತೇ' ವ್ಯಾಪಿಸುತ್ತದೆ ಎಂದಿದ್ದರೆ ಸಾಕಾಗಿತ್ತು, ಯಾವದ್ ದಿನಂ ಮನೂನ್ ಭುಂಜನ್ ಅನುವರ್ತತೇ' ಎನ್ನುವುದಕ್ಕಿಂತ 'ಯಾವದ್ ದಿನಂ ಮನೂನ್ ಭುಂಕ್ತೇ' ಎಂದಿದ್ದರೆ 'ಸ್ವಂ ಸ್ವಂ ಕಾಲಂ ಮನುರ್ಭುಂಕ್ತೇ' ಎಂದು ಮುಂದಿನ ಶ್ಲೋಕದ ಶೈಲಿಗನುಗುಣ ವಾಗುತ್ತಿತ್ತು. 'ಅನುವರ್ತತೇ'ಶಬ್ದವ್ಯರ್ಥ ಮತ್ತು ಕಾಲಾಂತರ್ಗತ ಪರಮಾತ್ಮನ ಮಹಿಮೆಯನ್ನು ಹೇಳುವ ಸಂದರ್ಭದಲ್ಲಿ ದಿನಾಂತರ್ಗತನು ಮನುಗಳನ್ನು ವ್ಯಾಪಿಸುತ್ತಾನೆ ಎಂದು ಹೇಳುವುದೇ ಉಚಿತವಾಗುತ್ತದೆ.

'ದಿನಂ' ಎಂದು ನಪುಂಸಕ, ಭುಂಜನ್ ಎಂಬುದು ಪುಲ್ಲಿಂಗ. ಈ ವ್ಯತ್ಯಾಸವೇಕೆ ಎನ್ನಬಾರದು. ದಿನಶಬ್ದದಿಂದ ದಿನಕಾಲ ವಿವಕ್ಷಿತವಲ್ಲ. ದಿನಾಂತರ್ಗತನಾದ ಭಗವಂತ ವಿವಕ್ಷಿತ ಎಂದು ಸೂಚಿಸಲು ಪುಲ್ಲಿಂಗ ಪ್ರಯೋಗ.

ದಿನಸ್ಥೋ ಭಗವಾನ್ ಭೋಕ್ತಾ ।

'ಯಾವದ್ ದಿನಂ ಮನೂನ್ ಭುಂಜನ್ ಸ್ಯಾತ್ ತಾವತ್ ಲೋಕ ಕಲ್ಪೋಽನುವರ್ತತೇ' ಎಂದು 'ದಿನಂ ಭುಂಜನ್' ಎಂಬ ವಿಲಕ್ಷಣಪ್ರಯೋಗ ಏಕೆ ಮಾಡಿದ್ದೆಂದರೆ ಇಲ್ಲಿ ದಿನಶಬ್ದದಿಂದ ದಿನಾಂತರ್ಗತನಾದ ಭಗವಂತ ಭೋಕ್ತೃ ಎಂದು ಸೂಚನೆ ಮಾಡುವುದು ಉದ್ದೇಶ.

* * *

ಒಂದೊಂದು ಮನ್ವಂತರಕಾಲವೆಷ್ಟೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸ್ವಂಸ್ವಂ ಕಾಲಂ ಮನುರ್ಭುಂಕ್ತೇ ಸಾಧಿಕಾ ಹ್ಯೇಕಸಪ್ತತಿಃ ।
ಮನ್ವಂತರೇಷು ಮನವಸ್ತದ್ವಂಶ್ಯಾ ಋಷಯಃ ಸುರಾಃ ।
ಭವಂತಿ ಚೈತೇ ಯುಗಪತ್ ಸುರೇಶಾಶ್ಚಾನು ಯೇ ಚ ತಾನ್ ॥ ೨೪ ॥

ಪ್ರತಿಯೊಬ್ಬ ಮನುವು ಎಪ್ಪತ್ತೊಂದು ಚತುರ್ಯುಗ ಮತ್ತು ಹದಿನೆಂಟುವರೆ ಲಕ್ಷ ವರ್ಷಗಳಷ್ಟು ದೀರ್ಘವಾದ ತನ್ನ ಕಾಲವನ್ನು ಅನುಭವಿಸುತ್ತಾನೆ. ಈ ಮನ್ವಂತರ ಕಾಲದಲ್ಲಿ ಮನು ಅವನ ವಂಶದ ರಾಜರು, ಋಷಿಗಳು, ದೇವತೆಗಳು, ಇಂದ್ರ,ಗಂಧರ್ವಾದಿಗಳೂ ಪ್ರತ್ಯೇಕ ಇರುತ್ತಾರೆ. ಭಗವಂತನೂ ಪ್ರತಿಮನ್ವಂತರದಲ್ಲಿ ಅವತರಿಸುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಯಾರೂ 'ಸಾಧಿಕಾಃ' ಎಪ್ಪತ್ತೊಂದು ಮಹಾಯುಗ ಗಳೊಂದಿಗೆ ಸೇರಿಸಬೇಕಾಗಿರುವ ಹೆಚ್ಚಿನ ಕಾಲಪರಿಮಾಣವೆಷ್ಟು ಎಂದು ಹೇಳಿಲ್ಲ. ತಾತ್ಪರ್ಯದಲ್ಲಿ ಹೇಳಿದ್ದಾರೆ–

ಯುಗೈಕಸಪ್ತತೇರೂರ್ಧ್ವಂ ಸಾರ್ಧಾಷ್ಟಾದಶಲಕ್ಷಕಮ್ ।
ವತ್ಸರಾಣಾಂ ಮನೋರ್ಭುಕ್ತಿಃ ಸಹಸ್ರಂ ಚತುರುತ್ತರಮ್ ॥

ಶತಾನಾಂ ಪ್ರಲಯಶ್ಚೈವ ಪಂಚೋತ್ತರಮಥಾಪಿ ಚ ।
ಆದ್ಯೇಷು ಷಟ್ಸು ಪ್ರಥಮೇ ದ್ವಿಸಾಹಸ್ರಂ ಪ್ರಕೀರ್ತಿತಮ್ ।
ವತ್ಸರಾಣಾಂ ಮನೋರಂತರೇವಮಿಂದ್ರಾದೀನಾಂ ಭವೇತ್ ॥

ಇತಿ ಮಹಾವಾರಾಹೇ ॥

ಎಪ್ಪತ್ತೊಂದು ಯುಗಗಳಾದ ಬಳಿಕ ಹದಿನೆಂಟುವರೆ ಲಕ್ಷ ವರ್ಷಗಳವರೆಗೆ ಮನ್ವಂತರಕಾಲವಿರುತ್ತದೆ. ಸಾಮಾನ್ಯವಾಗಿ ಒಂದುಸಾವಿರದ ನಾನ್ನೂರು ವರ್ಷಗಳು ಮನುಪ್ರಲಯಕಾಲ. ಆದರೆ ಮೊದಲ ಆರು ಮನ್ವಂತರಗಳಲ್ಲಿ ಮೊದಲನೆಯ ಮನ್ವಂತರ ಪ್ರಲಯಕಾಲ ಎರಡುಸಾವಿರ ವರ್ಷ. ಎರಡನೆ ಮನ್ವಂತರ ಪ್ರಳಯಕಾಲ ಒಂದು ಸಾವಿರದೈನೂರು ವರ್ಷ. ಮೂರನೇ ಮನ್ವಂತರ ಪ್ರಳಯಕಾಲ ಒಂದು ಸಾವಿರದ ನಾನೂರು. ಇತರ ಮೂರು ಮನ್ವಂತರಗಳ ಪ್ರಳಯಕಾಲ ಒಂದುಸಾವಿರ ಮುನ್ನೂರು ವರ್ಷಗಳು. ಹೀಗೆಯೇ ಇಂದ್ರಾದಿದೇವತೆಗಳಿಗೂ ಋಷ್ಯಾದಿಗಳಿಗೂ ಮನ್ವಂತರಭುಕ್ತಿ ಪ್ರಳಯ ಕಾಲಗಳಿರುತ್ತವೆ.

'ಪಂಚೋತ್ತರಮಥಾಪಿ ಚ' ಎಂಬಲ್ಲಿ 'ಅಥಾಪಿ ಚ' ಎಂಬುದು ಸಾವಿರದೈನೂರು ಸಾವಿರದ ನಾನೂರರ ಅನಂತರದ ಸಂಖ್ಯೆಯಾದ ಸಾವಿರದ ಮುನ್ನೂರನ್ನು ಸಮುಚ್ಚಯ ಮಾಡುತ್ತದೆ. ಇದು ಯಾದುಪತ್ಯವ್ಯಾಖ್ಯಾನದ ಅಭಿಪ್ರಾಯ. ಪ್ರಬೋಧಿನೀಕಾರರು 'ದ್ವಿಸಾಹಸ್ರಂ' ಎಂದರೆ ಎರಡು ನೂರರಿಂದ ಕೂಡಿದ ಸಾವಿರ ಅಂದರೆ ಒಂದು ಸಾವಿರದ ಇನ್ನೂರೆಂದು ಅರ್ಥೈಸಿ ಪ್ರಥಮಮನ್ವಂತರಪ್ರಳಯ ಒಂದು ಸಾವಿರದ ಇನ್ನೂರು ವರ್ಷಗಳು, ಮುಂದಿನ ಏಳು ಮನುಪ್ರಳಯಗಳು ಪ್ರತಿಯೊಂದೂ ಒಂದುಸಾವಿರನಾನೂರು ವರ್ಷಗಳು, ಕೊನೆಯ ಆರುಮನ್ವಂತರಪ್ರಳಯಗಳು ಪ್ರತಿಯೊಂದು ಒಂದುಸಾವಿರದೈನೂರು ವರ್ಷಗಳೆಂದು ವ್ಯಾಖ್ಯಾನಿಸಿದ್ದಾರೆ.

ಪ್ರತಿಯೊಂದು ಮನ್ವಂತರದ ಕಾಲ ಎಪ್ಪತ್ತೊಂದು ಮಹಾಯುಗ ಮತ್ತು ಹದಿನೆಂಟುವರೆ ಲಕ್ಷ ವರ್ಷಗಳೆಂದರೆ ಹದಿನಾಲ್ಕು ಮನ್ವಂತರಗಳು ಸೇರಿದರೂ ಬ್ರಹ್ಮದೇವರ ಹಗಲಿನಲ್ಲಿ ಇಪ್ಪತ್ತು ಸಾವಿರವರ್ಷಗಳು ಇನ್ನೂ ಇವೆ. ಅವನ್ನು ಮನುಪ್ರಳಯಕಾಲವೆಂದಿಟ್ಟುಕೊಂಡು ಹದಿನಾಲ್ಕು ಮನ್ವಂತರಗಳಿಗೆ ಹಂಚುವುದು ಒಂದು ರೀತಿ. ಯಾದುಪತ್ಯ ಪ್ರಬೋಧಿನೀ ಸತ್ಯಾಭಿನವೀಯ ವ್ಯಾಖ್ಯಾನಗಳಲ್ಲಿ ಈ ರೀತಿಯನ್ನು ಅನುಸರಿಸಿದ್ದಾರೆ.

ಯಾದುಪತ್ಯ–

ಪ್ರಥಮ ಮನುಲಯಕಾಲ	೨೦೦೦ವರ್ಷಗಳು	
ದ್ವಿತೀಯ ಮನುಲಯಕಾಲ	೧೫೦೦ ವರ್ಷಗಳು	
ತೃತೀಯ ಮನುಲಯಕಾಲ	೧೪೦೦ವರ್ಷಗಳು	
ಮುಂದಿನ ಮೂರು ಮನುಲಯಗಳು	೩೯೦೦ವರ್ಷಗಳು	(೧೩೦೦x೩)
ಇನ್ನುಳಿದ ಎಂಟು ಮನುಲಯಗಳು	೧೧೨೦೦ವರ್ಷಗಳು	(೧೪೦೦x೮)
	ಒಟ್ಟು ೨೦,೦೦೦ವರ್ಷಗಳು	

ಪ್ರಬೋಧಿನೀ–

ಪ್ರಥಮಮನುಲಯಕಾಲ	೧೨೦೦ವರ್ಷಗಳು	
ಮುಂದಿನ ಏಳು ಮನುಲಯಕಾಲ	೯೮೦೦ವರ್ಷಗಳು	(೧೪೦೦x೭)
ಇನ್ನುಳಿದ ಆರು ಮನುಲಯಗಳು	೯೦೦೦ವರ್ಷಗಳು	(೧೫೦೦x೬)
ಒಟ್ಟು	೨೦,೦೦೦ ವರ್ಷಗಳು.	

ಸತ್ಯಾಭಿನವೀಯ–

ಪ್ರಥಮ ಮನುಲಯಕಾಲ	೨೦೦೦ ವರ್ಷಗಳು	
ಮುಂದಿನ ಐದು ಮನುಲಯಕಾಲ	೭೦೦೦ವರ್ಷಗಳು	(೧೪೦೦x೫)
ಅಲ್ಲಿಂದ ಮುಂದಿನ ಆರು ಮನುಲಯಕಾಲ	೯೦೦೦ ವರ್ಷಗಳು	(೧೫೦೦x೬)
ಹದಿಮೂರನೆ ಮನುಲಯಕಾಲ	೧೨೦೦ವರ್ಷಗಳು	
ಹದಿನಾಲ್ಕನೆ ಮನುಲಯಕಾಲ	೮೦೦ ವರ್ಷಗಳು	
	ಒಟ್ಟು ೨೦,೦೦೦ ವರ್ಷಗಳು	

ಮನುಪ್ರಳಯಕಾಲ ೨೦.೦೦೦ವರ್ಷಗಳೆಂದು ಎಲ್ಲಿಯೂ ಸ್ಪಷ್ಟ ಹೇಳಿಲ್ಲ. ಊಹೆ ಮಾತ್ರ. ಆದ್ದರಿಂದ ಪ್ರತಿಯೊಂದು ಮನ್ವಂತರಕ್ಕೆ ಹದಿನೆಂಟುವರೆ ಲಕ್ಷವರ್ಷಗಳನ್ನು ಸೇರಿಸಬೇಕೆಂದು ತಾತ್ಪರ್ಯದಲ್ಲಿ ಹೇಳಿ ಈ ಚಿಲ್ಲರೆಸಂಖ್ಯೆಯನ್ನು ಹೇಳದೆ ಬಿಟ್ಟಿರುವುದು ವಚನಸೌಕರ್ಯಕ್ಕಾಗಿ ಎಂದಿಟ್ಟುಕೊಂಡು ಅದನ್ನು ಪ್ರತಿಯೊಬ್ಬ ಮನುವಿಗೆ ಸಮನಾಗಿ ಹಂಚಬೇಕು ೧೪೨೮ ವರ್ಷ೬ತಿಂಗಳು ೨೫ದಿನ ೧೭ತಾಸು

೨೧ಪಲ ಎಂದು. ಈಗ ಮನುಪ್ರಳಯಕಾಲಗಳೆಲ್ಲ ಸೇರಿದಾಗ ೨೦,೦೦೦ ವರ್ಷಗಳೇ ಆಗಬೇಕೆಂದಿಲ್ಲ. ತಾತ್ಪರ್ಯವಚನಕ್ಕೆ ಅನುಗುಣವಾಗಿ ಸ್ವಲ್ಪ ಹೆಚ್ಚಾದರೂ ಚಿಂತೆ ಇಲ್ಲ. ಈ ಅಭಿಪ್ರಾಯದಿಂದ ದೀಪಿಕಾವ್ಯಾಖ್ಯಾನ ಸುಳಾದಿಗಳಲ್ಲಿ ಹೀಗೆ ಹೇಳಿದೆ–

ಪ್ರಥಮಮನುಪ್ರಳಯಕಾಲ	೨೦೦೦ವರ್ಷಗಳು	
ಮುಂದಿನ ಐದು ಮನುಲಯಕಾಲ	೭೫೦೦ವರ್ಷಗಳು	(೧೫೦೦x೫)
ಇನ್ನುಳಿದ ಎಂಟು ಮನುಲಯಕಾಲ	೧೧೨೦೦ವರ್ಷಗಳು	(೧೪೦೦x೮)
	ಒಟ್ಟು ೨೦,೭೦೦ ವರ್ಷಗಳು	

ವಿಜಯದಾಸರ ಸುಳಾದಿ–

ಮೊದಲ ಮನುವಿಗೆ ಎರಡು ಸಾವಿರ ಹಯನ
ಅದರ ತರುವಾಯದಲಿ ಐದು ಮನುಗಳಿಗೆ
ಹದಿನಾಲ್ಕು ನೂರು ವತ್ಸರ ಪ್ರಕಾರ
ಇದನೆ ಗುಣಿಸಲಾಗಿ ಏಳು ಸಾವಿರವಾ
ದುದು ಕಾಣೋ ಉಳಿದೆಂಟು ಮನುಗಳ ಸಂಧಿ
ಹದಿನೈದು ನೂರಬ್ದದಂತೆ ಉಗ್ಗಡಿಸೆ
ಹದಿನೆರಡು ಸಾವಿರವಾದುವೆನ್ನಿ.... ।

ಈ ಸುಳಾದಿಯ ಪ್ರಕಾರ ಮನುಗಳ ಲಯಕಾಲ ಹೀಗಿದೆ–

ಪ್ರಥಮ ಮನುಲಯ	೨೦೦೦ವರ್ಷಗಳು	
ಮುಂದಿನ ಐದು ಮನುಲಯ	೭೦೦೦ ವರ್ಷಗಳು	(೧೪೦೦x೫)
ಇನ್ನುಳಿದ ಎಂಟು ಮನುಲಯ	೧೨೦೦೦ವರ್ಷಗಳು	(೧೫೦೦x೮)
	ಒಟ್ಟು ೨೧,೦೦೦ ವರ್ಷಗಳು	

* * *

ಬ್ರಹ್ಮನ ದಿನ ಪ್ರಳಯದ ಕಾಲದಲ್ಲಿ ಬ್ರಹ್ಮನೊಂದಿಗೆ ವಿಷ್ಣುವೂ ಮಲಗುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ತಮೋಮಾತ್ರಾಮುಪಾದಾಯ ಪ್ರತಿಸಂರುದ್ಧವಿಕ್ರಮಃ ।
ಕಾಲೇನಾನುಗತಃ ಶೇಷ ಆಸ್ತೇ ತೂಷ್ಣೀಂ ದಿನಾತ್ಯಯೇ ॥ ೨೭ ॥

ಬ್ರಹ್ಮನ ಹಗಲು ಕಳೆದಾಗ ರಾತ್ರಿಯಲ್ಲಿ ಶ್ರೀಹರಿ ತಮೋಗುಣದಿಂದ ಅದರ ಕಾರ್ಯವಾದ ಲಯ ಮಾಡಿಸಿ ತನ್ನ ಪಾಲನಕಾರ್ಯವನ್ನು ಸ್ಥಗಿತಗೊಳಿಸಿ ಕಾಲನಾಮಕನಾದ ಬ್ರಹ್ಮನೊಡನೆ ಶೇಷನ ಮೇಲೆ ಮಲಗುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಕಾಲಕ್ಕನುಗುಣವಾಗಿ ಬ್ರಹ್ಮದೇವರು ತಮ್ಮ ಸೃಷ್ಟಿಕಾರ್ಯ ನಿಲ್ಲಿಸಿ ಮೂಲೋಕದ ಅಶೇಷ ಜೀವಸಮೂಹವನ್ನು ಹೊಟ್ಟೆಯಲ್ಲಿಟ್ಟು ಕೊಂಡು ಸುಮ್ಮನಿರುತ್ತಾನೆ ಎಂದಿದ್ದಾರೆ. ಕಾಲವೆಂದರೆ ಜಡವಾದ ಕಾಲವೆಂದೇ ತಿಳಿದಿದ್ದಾರೆ. ಇಷ್ಟರವರೆಗೆ ಕಾಲಾಂತರ್ಗತ ಕಾಲನಾಮಕ ಭಗವಂತನ ಮಹಿಮೆಯನ್ನು ಹೇಳುತ್ತ ಕೊನೆಗೆ ಜಡಕಾಲಕ್ಕೆ ಅಧೀನನಾಗಿ ಬ್ರಹ್ಮ ಸುಮ್ಮನಿದ್ದಾನೆ ಎನ್ನುವುದು ಯುಕ್ತವಲ್ಲ. ಜಡವಾದ ಕಾಲವನ್ನು 'ದಿನಾತ್ಯಯೇ' ಪ್ರಲಯಕಾಲದಲ್ಲಿ ಎಂದು ಹೇಳಿಯಾಗಿದೆ. ಪುನಃ 'ಕಾಲೇನ' ಪ್ರಳಯಕಾಲದಿಂದ ಪ್ರೇರಿತನಾಗಿ ಎಂದು ಹೇಳುವುದು ಪುನರುಕ್ತಿಯೂ ಆಗುವುದು. ಬೇರೆ ವ್ಯಾಖ್ಯಾನಕಾರರ ಪಾಠವೂ ಸರಿಯಲ್ಲ. 'ಕಾಲೇನಾನುಗತಾಶೇಷಃ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಕಾಲೇನಾನುಗತಃ ಶೇಷೇ ಎಂದು ಸರಿಯಾದ ಪಾಠ. ಆಗ ಶೇಷನಲ್ಲಿ ಮಲಗುವವನು ವಿಷ್ಣು ಬ್ರಹ್ಮನಲ್ಲ. ಕಾಲೇನ ಎಂದರೂ ಜಡಕಾಲವಲ್ಲ, ಕಾಲಾಭಿಮಾನಿ ಬ್ರಹ್ಮನನ್ನು ಇಟ್ಟುಕೊಳ್ಳಬೇಕು. ಇದಕ್ಕೆ ಬ್ರಹ್ಮಪುರಾಣ ವಚನದ ಸಮ್ಮತಿ ಇದೆ–

ಬ್ರಹ್ಮಣಾ ಕಾಲನಾಮ್ನಾ ತು ಸಹ ಶೇತೇ ಹರಿರ್ನಿಶಿ ।

ಇತಿ ಬ್ರಾಹ್ಮೇ ।

ಕಾಲಾಭಿಮಾನಿಯಾದ ಕಾಲನಾಮಕ ಬ್ರಹ್ಮನೊಂದಿಗೆ ರಾತ್ರಿಯಲ್ಲಿ ಶ್ರೀಹರಿ ಮಲಗುತ್ತಾನೆ' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

* * *

ಬ್ರಹ್ಮದೇವರ ಆಯುಷ್ಯವೆಷ್ಟೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಏವಂವಿಧೈರಹೋರಾತ್ರೈಃ ಕಾಲಗತ್ಯುಪಲಕ್ಷಿತೈಃ ।
ಅಪೇಕ್ಷಿತಮಿವಾಸ್ಯಾಪಿ ಪರಮಾಯುರ್ವಯಃ ಶತಮ್ ॥ ೩೨ ॥

ಕಾಲಗತಿಯಿಂದ ತಿಳಿದುಬರುವ ಇಂಥಹ ಹಗಲು ರಾತ್ರಿಗಳಿಂದ ನೂರುವರ್ಷಗಳ ಪರನಾಮಕವಾದ ಆಯುಷ್ಯವು ಬ್ರಹ್ಮದೇವರಿಗೆ ಅಪೇಕ್ಷಿತವಾದಂತಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಕೂಡ 'ಅಸ್ಯ' ಎಂದರೆ ಈ ಬ್ರಹ್ಮದೇವರಿಗೆ ಎಂದೇ ವ್ಯಾಖ್ಯಾನಿಸಿದ್ದಾರೆ. ಆದರೆ ಇದರ ಹಿಂದಿನ ಶ್ಲೋಕದಲ್ಲಿ ಅನಂತಾಸನನಾದ

ಹರಿಯ ಯೋಗನಿದ್ರೆ ವರ್ಣಿತವಾಗಿದೆ. ಬ್ರಹ್ಮನ ಪ್ರಸ್ತಾವವಿಲ್ಲ. ಅದರಿಂದ 'ಅಸ್ಯ' ಎಂದು ಬ್ರಹ್ಮನನ್ನು ಹೇಳುವುದು ಹೇಗೆ ಎಂಬ ಪ್ರಶ್ನೆಗೆ ಸಮಾದಾನ ಹೇಳಿಲ್ಲ.

ಅಸ್ಯ ಬ್ರಹ್ಮಣಃ । ಬ್ರಹ್ಮಣೋ ದಿನಮಿತ್ಯುಕ್ತತ್ವಾತ್ ।

ಅಸ್ಯ ಎಂದರೆ ಈ ಬ್ರಹ್ಮನಿಗೆ ಎಂದರ್ಥ. ಏಕೆಂದರೆ ಹಿಂದೆ ೨೨ನೇ ಶ್ಲೋಕದಲ್ಲಿ 'ಬಹಿರಾ ಬ್ರಹ್ಮಣೋ ದಿನಮ್' ಎಂದೂ ೨೩ ನೇ ಶ್ಲೋಕದಲ್ಲಿ 'ಭಗವತೋ ದಿನಂ' ಎಂದೂ ಬ್ರಹ್ಮದೇವರ ದಿನ ಪ್ರಸ್ತುತವೇ ಇದೆ.

* * *

ಪರಮಾತ್ಮನಿಗೆ ಕಾಲ ದೇಶ ಗುಣ ಈ ಮೂರರಿಂದಲೂ ಪರಿಮಿತಿ ಇಲ್ಲವೆಂದು ಹಿಂದೆ ಹೇಳಿದೆ. ಈಗ ಕಾಲಪರಿಮಿತಿ ಇಲ್ಲ ಎಂಬುದನ್ನು ಸಮರ್ಥಿಸುತ್ತಿದ್ದಾರೆ ಮೈತ್ರೇಯರು–

ಕಾಲೋಽಯಂ ದ್ವಿಪರಾರ್ಧಾಖ್ಯೋ ನಿಮೇಷ ಉಪಚರ್ಯತೇ ।
ಅವ್ಯಾಕೃತಸ್ಯಾನಂತಸ್ಯ ಹ್ಯನಾದೇರ್ಜಗದಾತ್ಮನಃ ॥ ೩೭ ॥

ಎರಡು ಪರಾರ್ಧರೂಪವಾದ ಈ ಕಾಲವೂ ಕೂಡ ಭಗವಂತನಿಗೆ ಒಂದು ನಿಮೇಷ ಅಂದರೆ ಮೂರು ಲವದಷ್ಟು ಕಾಲ. ಅದೂ ವಾಸ್ತವವಾಗಿ ಮೂರು ಲವವಲ್ಲ. ಅಜ್ಞಜನರಿಗೆ ಬೇರೆ ರೀತಿ ತಿಳಿಸಲು ಶಕ್ಯವಿಲ್ಲವೆಂದು ಹಾಗೆ ಹೇಳಿದೆ. ಏಕೆಂದರೆ ಭಗವಂತ ಜಗದಂತರ್ಯಾಮಿ, ಅವನಿಗೆ ಆದಿ ಮಧ್ಯ ಅಂತ್ಯಗಳಿಲ್ಲ.

ಇಲ್ಲಿ ವೀರರಾಘವ ವ್ಯಾಖ್ಯಾನಪ್ರಕಾರ ಭಗವಂತ ಜಗತ್ತಿನ ಆತ್ಮ. ಆತ್ಮನಿಗೆ ಸ್ವತಃ ಉತ್ಪತ್ತಿನಾಶವಿಲ್ಲದಿದ್ದರೂ ಶರೀರದಿಂದ ಉತ್ಪತ್ತಿನಾಶವಿದೆ ಎಂದು ಎಲ್ಲ ವೇದಾಂತಿಗಳೂ ಒಪ್ಪುತ್ತಾರೆ. ಭಗವಂತನಿಗೆ ಜಗತ್ತು ಶರೀರವೆಂದ ಮೇಲೆ ನಶ್ವರವಾದ ಜಗತ್ತೆಂಬ ಶರೀರದಿಂದ ಭಗವಂತನಿಗೆ ಕಾಲದ ಪರಿಮಿತಿ ಬರುತ್ತದೆ. ಆದರೂ ಸ್ವತಃ ಕಾಲಪರಿಮಿತಿ ಇಲ್ಲವೆಂದು ಸಮಾಧಾನ ಹೇಳಿದ್ದಾರೆ. ಆದರೆ ಜೀವಾತ್ಮರಿಗೂ ಹೀಗೇ ಸ್ವತಃ ಕಾಲಪರಿಮಿತಿ ಇಲ್ಲದ್ದರಿಂದ ಭಗವಂತನಲ್ಲಿ ಏನು ವಿಶೇಷ? ಎಂಬ ಶಂಕೆ ಬರಬಹುದು. ವಲ್ಲಭವ್ಯಾಖ್ಯಾನದಲ್ಲಿ ಹಾಗೇ ಕಾಲವೂ ಪರಮಾತ್ಮನಿಗೆ ಶರೀರ, ಆತ್ಮನೂ ಅವನಿಗೆ ಶರೀರ ಅದರಿಂದ ಭಗವಂತನಿಗೆ ಕಾಲಪರಿಮಿತಿ ಇಲ್ಲ ಎಂದಿದೆ. ವಸ್ತುತಃ ಕಾಲಪ್ರವಾಹ ಅನಾದಿನಿತ್ಯವಾದರೂ ಎಲ್ಲ ಕಾಲವೂ ಉತ್ಪತ್ತಿನಾಶ ಉಳ್ಳದ್ದೇ. ಅದರಿಂದ ಕಾಲಶರೀರಿಯಾದ ಭಗವಂತನಿಗೂ ಉತ್ಪತ್ತಿನಾಶಗಳನ್ನು ಒಪ್ಪಬೇಕಾದೀತು. ಆತ್ಮ ಸ್ವರೂಪತಃ ನಿತ್ಯವಾದರೂ ಶರೀರದಿಂದ ಅನಿತ್ಯನಾದ್ದರಿಂದ ಆತ್ಮಶರೀರಿಯಾದ ಭಗವಂತನೂ ಅನಿತ್ಯನಾಗಬೇಕಾಯಿತು.

ನಾಯುರ್ಮಾನಂ ಭಗವತಃ ಕಸ್ಮಿನ್ ರೂಪೇಽಪಿ ವಿದ್ಯತೇ ।
ಅನಾದಿತ್ವಾದಮಧ್ಯತ್ವಾದನಂತತ್ವಾಚ್ಚ ಸೋಽವ್ಯಯಃ ॥
ಇತಿ ಹರಿವಂಶೇಷು ॥

'ಶ್ರೀಹರಿ ಆದಿ ಮಧ್ಯ ಅಂತ ರಹಿತನಾದ್ದರಿಂದ ಯಾವ ರೂಪದಲ್ಲಿಯೂ ಅವನಿಗೆ ಆಯುಸ್ಸಿನ ಪರಿಮಿತಿ ಇಲ್ಲ. ಎಲ್ಲರೂಪಗಳಲ್ಲಿಯೂ ಅವನು ಕಾಲಮಿತಿರಹಿತನು' ಎಂದು ಹರಿವಂಶದಲ್ಲಿ ಹೇಳಿದೆ.

* * *

ಕಾಲಪರಿಮಿತಿ ಭಗವಂತನಿಗಿಲ್ಲ ಮಾತ್ರವಲ್ಲ ಕಾಲಾಧೀನತ್ವವೂ ಅವನಿಗಿಲ್ಲ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಕಾಲೋಽಯಂ ಪರಮಾಣ್ವಾದಿರ್ದ್ವಿಪರಾರ್ಧಾಂತ ಈರಿತಃ ।
ನೈವೇಷ್ಟೇ ಸ ಪ್ರಭುರ್ಭೂಮ್ನ ಈಶ್ವರೋ ಧಾಮಮಾನಿನಾಮ್ ॥ ೩೮ ॥

ಪರಮಾಣುವಿನಿಂದಾರಂಭಿಸಿ ದ್ವಿಪರಾರ್ಧವರೆಗಿನ ಈ ಕಾಲಕ್ಕೆ ಅಭಿಮಾನಿನಿಯಾದ ದುರ್ಗಾದೇವಿ ಲೋಕಪಾಲಕರನ್ನೂ ಆಳುವವಳಾಗಿದ್ದರೂ ಶ್ರೀಹರಿಯನ್ನು ಆಳಲು ಸಮರ್ಥಳಾಗಿಲ್ಲ. ಏಕೆಂದರೆ ಅವನು ಪೂರ್ಣನಾಗಿದ್ದು ಅವನೇ ದುರ್ಗೆಯನ್ನಾಳುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜಡವಾದ ಕಾಲವೇ ಮನುಷ್ಯಾದಿ ಚತುರ್ಮುಖ ಪರ್ಯಂತ ಎಲ್ಲ ಶರೀರಾದ್ಯಭಿಮಾನಿಗಳನ್ನೂ ಆಳುತ್ತದೆ ಎಂದಿದ್ದಾರೆ. ಕಾಲವು ಪರಮಾತ್ಮನ ಶರೀರವಾದ್ದರಿಂದ ಎಂದು ವೀರರಾಘವವ್ಯಾಖ್ಯಾನದಲ್ಲಿ ಸಮರ್ಥನೆ. ಚೇತನಸಹಾಯವಿಲ್ಲದ ಜಡವಸ್ತು ಬ್ರಹ್ಮಾದಿಗಳನ್ನು ಆಳುವುದಾದರೆ ಒಂದು ದೂಳಿನ ಕಣವೂ ಇಡಿ ಪ್ರಪಂಚವನ್ನಾಳಬೇಕಾದೀತು. ಅದೂ ಕೂಡ ಭಗವಂತನ ಶರೀರವೇ ತಾನೆ? ಅದರಿಂದ ಕಾಲಾಭಿಮಾನಿಯನ್ನೇ ಇಲ್ಲಿ ಕಾಲಪದದಿಂದ ಗ್ರಹಿಸಬೇಕು. ಯಾರು ಈ ಕಾಲಾಭಿಮಾನಿ? ಯಾರಿಗೆ ಬ್ರಹ್ಮಾದಿಗಳನ್ನಾಳುವ ಸಾಮರ್ಥ್ಯ? ಅದು ದುರ್ಗಾದೇವಿಗೆ ಮಾತ್ರ. ಅವಳೂ ಕೂಡ ಪರಮಾತ್ಮನನ್ನು ಆಳಲು ಸಮರ್ಥಳಲ್ಲ. ಏಕೆಂದರೆ ಆತ ಅವಳ ಪತಿ.

ಯಮಃ ಕಾಲೋ ಮಾನುಷಾಣಾಂ ತಸ್ಯ ಕಾಲಃ ಸುದರ್ಶನಃ ।
ತಸ್ಯಾಪಿ ರುದ್ರಸ್ತತ್ಕಾಲೋ ಬ್ರಹ್ಮಾ ದುರ್ಗಾಪಿ ತಸ್ಯ ತು ॥

ಸಾ ಬ್ರಹ್ಮಪ್ರಳಯೇ ದೇವೀ ವರ್ತತೇ ಚಕ್ರರೂಪಿಣೀ ।
ಸಂಹರಂತೀ ಸದಾ ಲೋಕಾನ್ ಸೈವ ಬ್ರಹ್ಮಾದಿಷು ಸ್ಥಿತಾ ॥

ತಸ್ಯಾ ನಿಯಾಮಕೋ ವಿಷ್ಣುಃ ಪರಃ ಕಾಲಃ ಸ ಉಚ್ಯತೇ ।
ಕಾಲಾಭಿಮಾನಿನೀ ಸೈವ ಪ್ರಭುರ್ನ ಜಗದೀಶಿತುಃ ।
ತಸ್ಯಾಃ ಪ್ರಭುಃ ಸ ಏವೈಕೋ ವಿಷ್ಣುಃ ಸರ್ವೇಶ್ವರೇಶ್ವರಃ ॥
ಇತಿ ಚ ॥

ಮನುಷ್ಯರಿಗೆ ಯಮನು ಕಾಲ, ಸಂಹಾರಕ. ಯಮನಿಗೆ ವಿಷ್ಣು ಚಕ್ರಾಭಿಮಾನಿಯಾದ ಮನ್ಮಥ. ಮನ್ಮಥನಿಗೆ ರುದ್ರ, ರುದ್ರನಿಗೆ ಬ್ರಹ್ಮ, ಬ್ರಹ್ಮನಿಗೆ ದುರ್ಗೆ ಸಂಹಾರಕಳು. ಆ ದುರ್ಗೆ ಲಯಕಾಲದಲ್ಲಿ ಚಕ್ರರೂಪದಿಂದ ಎಲ್ಲ ಲೋಕಗಳನ್ನು ಲಯ ಮಾಡುತ್ತಾಳೆ. ಅವಳೇ ಬ್ರಹ್ಮಾದಿಗಳಲ್ಲಿ ಪ್ರೇರಕಳಾಗಿ ನಿಂತಿದ್ದಾಳೆ. ಅವಳಿಗೂ ನಿಯಾಮಕನಾದ ಕಾಲನೆಂದರೆ ವಿಷ್ಣು. ಕಾಲಾಭಿಮಾನಿನಿಯಾಗಿ ಬ್ರಹ್ಮಾದಿಗಳಲ್ಲಿರುವ ದುರ್ಗೆಯೂ ಜಗದೀಶ್ವರನಾದ ಹರಿಯನ್ನಾಳಲು ಸಮರ್ಥಳಲ್ಲ. ಸರ್ವ ನಿಯಾಮಕರಾದ ಬ್ರಹ್ಮಾದಿಗಳಿಗೂ ನಿಯಾಮಕನಾದ ಹರಿಯೇ ಸರ್ವಸಂಹಾರಕಳಾದ ದುರ್ಗೆಗೂ ನಿಯಾಮಕ ಎಂದೂ ಹೇಳಿದೆ.

---

* * *

ಹರಿಗೆ ಕಾಲ ಪರಿಮಿತಿ ಇಲ್ಲವೆಂದು ಹೇಳಿದ ಮೇಲೆ ಈಗ ದೇಶಪರಿಮಿತಿಯೂ ಅವನಿಗೆ ಇಲ್ಲವೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ವಿಕಾರೈಃ ಷೋಡಶೈರ್ಯುಕ್ತೋ ವಿಶೇಷಾದಿಭಿರಾವೃತಃ ।
ಆಂಡಕೋಶೋ ಬಹಿರಯಂ ಪಂಚಾಶತ್ಕೋಟಿವಿಸ್ತೃತಃ ॥ ೩೯ ॥

ದಶೋತ್ತರಾಧಿಕೈರ್ಯತ್ರ ಪ್ರವಿಷ್ಟಃ ಪರಮಾಣುವತ್ ।
ಲಕ್ಷ್ಯಂತೇಽಂತರ್ಗತಾಶ್ಚಾನ್ಯೇ ಕೋಟಿಶೋ ಹ್ಯಂಡರಾಶಯಃ ॥ ೪೦ ॥

ಹನ್ನೊಂದು ಇಂದ್ರಿಯಗಳು ಮತ್ತು ಪಂಚಭೂತಗಳೆಂಬ ಹದಿನಾರು ವಿಕಾರಗಳಿಂದ ಕೂಡಿದ ಈ ಐವತ್ತು ಕೋಟಿಯೋಜನ ವಿಸ್ತೀರ್ಣವಾದ ಬ್ರಹ್ಮಾಂಡ ಹೊರಗೆ ಇಮ್ಮಡಿವಿಸ್ತಾರದ ಪೃಥಿವೀ, ಹತ್ತು ಹತ್ತು ಮಡಿ ಅಧಿಕವಿಸ್ತಾರದ ಅಪ್ ಅಗ್ನಿ ವಾಯು ಆಕಾಶ ಅಹಂಕಾರ ಮಹತ್ತತ್ತ್ವ ಪ್ರಕೃತಿಗಳೆಂಬ ಆವರಣಗಳಿಂದ ಆವೃತವಾಗಿದೆ. ಈ ಆವರಕಸಹಿತವಾದ ಬ್ರಹ್ಮಾಂಡವೂ ಹರಿಯ ರೋಮಕೂಪದಲ್ಲಿ ಪರಮಾಣುವಿನಂತೆ ಅಡಗಿರುತ್ತದೆ. ಹೀಗೆ ಕೋಟಿಗಟ್ಟಲೆ ಬ್ರಹ್ಮಾಂಡಸಮೂಹಗಳು ಹರಿಯ ಶರೀರದಲ್ಲಿ ಬ್ರಹ್ಮನಿಗೆ ಕಂಡು ಬರುತ್ತವೆ.

ಇಲ್ಲಿ ವಿಕಾರಗಳೆಂದರೆ ಪಂಚ ಕರ್ಮೇಂದ್ರಿಯಗಳ ವ್ಯಾಪಾರಗಳು, ಪಂಚ ಪ್ರಾಣಗಳು, ಮತ್ತು ಸಂಕಲ್ಪಾದಿ ಮನೋವಿಕಾರ ಒಂದು ಹೀಗೆ ಹದಿನಾರು

ವಿಕಾರಗಳಿಂದ ಕೂಡಿದ್ದು ಬ್ರಹ್ಮಾಂಡ ಎಂದು ವೀರರಾಘವವ್ಯಾಖ್ಯಾನ. ಏಕಾದಶೇಂದ್ರಿಯಗಳು ಪಂಚತನ್ಮಾತ್ರಗಳೆಂದು ಹದಿನಾರು ವಿಕಾರಗಳು ಎನ್ನುತ್ತದೆ ವಲ್ಲಭವ್ಯಾಖ್ಯಾನ. ಮತ್ತು ಬ್ರಹ್ಮಾಂಡಕ್ಕೆ ಆವರಣವಾಗಿ ಪೃಥಿವಿಯು ಬ್ರಹ್ಮಾಂಡದ ವಿಸ್ತಾರವಾದ ಐವತ್ತುಕೋಟಿ ಯೊಜನಕ್ಕಿಂತ ಹತ್ತು ಪಾಲು ಅಧಿಕವಾಗಿದೆ ಎಂದೂ ವಲ್ಲಭವ್ಯಾಖ್ಯಾನ ಹೇಳುತ್ತದೆ. ವಿಶೇಷಾದಿಭಿಃ ಎಂಬಲ್ಲಿ ಅತದ್ಗುಣ ಸಂವಿಜ್ಞಾನಬಹುವ್ರೀಹಿ ಇಟ್ಟುಕೊಂಡು ಜಲಾದಿಗಳೇ ಆವರಣ, ಪೃಥಿವೀ ಆವರಣವೆ ಅಲ್ಲ ಬ್ರಹ್ಮಾಂಡವೆ ಪೃಥಿವ್ಯಾತ್ಮಕ ಎಂದು ಪಕ್ಷಾಂತರವನ್ನೂ ಅದೇ ವ್ಯಾಖ್ಯಾನ ಹೇಳುತ್ತದೆ. ಇನ್ನು ಎಲ್ಲ ವ್ಯಾಖ್ಯಾನಕಾರರು ಏಕಕಾಲದಲ್ಲಿ ಅನಂತಬ್ರಹ್ಮಾಂಡಗಳು ಪರಮಾತ್ಮನ ರೋಮಕೂಪಗಳಲ್ಲಿ ಇವೆ ಎಂದೇ ಗ್ರಹಿಸಿದ್ದಾರೆ. ಪ್ರಕೃತಿಯಲ್ಲಿ ಅನಂತ ಬ್ರಹ್ಮಾಂಡಗಳಿವೆ ಎಂದು ವೀರರಾಘವವ್ಯಾಖ್ಯಾನ. ಇದೆಲ್ಲವೂ ಪ್ರಮಾಣ ವಿರುದ್ಧ.

ದಶೇಂದ್ರಿಯಾಣಿ ಚ ಮನೋ ಭೂತಾನ್ಯಂಡಗತಾನಿ ತು ।
ವಿಕಾರಾ ಇತಿ ವಿಜ್ಞೇಯಾ ಭೂತಾಹಂಮಹತಃ ಪರೇ ॥ ಇತಿ ಚ ॥

ಪೃಥಿವೀಂ ವಿಶೇಷ ಇತ್ಯಾಹುಃ ಶಬ್ದಾದೀನಾಂ ಬಹುತ್ವತಃ ।
ಸಾ ಸೂಕ್ಷ್ಮತ್ವಾದ್ ವೃಣೋತ್ಯಂಡಂ ದ್ವಿಗುಣಾ ತು ದಶೋತ್ತರಾಃ ।
ಅಬಾದಯಃ ಪ್ರಕೃತ್ಯಂತಾ ಅಷ್ಟ ಪ್ರಕೃತಯಃ ಸ್ಮೃತಾಃ ॥ ಇತಿ ಚ ॥

ಅಂತರ್ಗತಾಃ ಶರೀರಾಣಿ ।

ಶರೀರಾಣಾಂ ಬಹುತ್ವೇನ ಅತೀತಾನಾಗತೈಸ್ತಥಾ ।
ಅಸ್ಯೈವ ದೇವಕಾರ್ಯೇಷು ಪ್ರತಿಪ್ರತಿ ಚ ದರ್ಶನಾತ್ ।
ವಿಷ್ಣುಸಾಮರ್ಥ್ಯತೋಽಂಡಾನಾಂ ಬಹುತ್ವಂ ನಾನ್ಯಥಾ ಭವೇತ್ ॥
ಇತಿ ಬ್ರಹ್ಮತರ್ಕೇ ।

ಏಕಮಂಡಂ ಬಹುತ್ವೇನ ಪ್ರತ್ಯೇಕಂ ರೋಮಕೂಪಗಮ್ ।
ಬ್ರಹ್ಮಾಽಪಶ್ಯತ್ ತಥಾಽಽತ್ಮಾನಂ ಹರೇಸ್ತೇಷು ಪೃಥಕ್ಪೃಥಕ್ ॥
ಇತಿ ಬ್ರಹ್ಮಾಂಡೇ ॥

ಬೃಹದಂಡಮಭೂದೇಕಮ್ ॥ ಇತಿ ಚ ಭಾರತೇ ॥

ಹತ್ತು ಇಂದ್ರಿಯಗಳು ಮನಸ್ಸು ಮತ್ತು ಪಂಚ ಭೂತಗಳು ಬ್ರಹ್ಮಾಂಡದೊಳಗೆ ಅದಕ್ಕೆ ಉಪಾದಾನವಾಗಿದ್ದುವಿಕಾರಗಳೆನಿಸುತ್ತವೆ.ಪಂಚಭೂತಗಳುಅಹಂಕಾರಮಹತತ್ತ್ವಗಳು ಬ್ರಹ್ಮಾಂಡಕ್ಕೆ ಉಪಾದಾನಗಳಾಗದೆ ಇರುವವುಗಳು ಬ್ರಹ್ಮಾಂಡದ ಹೊರಗೆ ಅದಕ್ಕೆ

ಆವರಣಗಳಾಗಿರುತ್ತವೆ. ಎಂದು ಹೇಳಿದೆ. ವಿಶೇಷ ಎಂದರೆ ಪೃಥಿವಿ. ಶಬ್ದಸ್ಪರ್ಶ ಮುಂತಾದ ಐದು ಗುಣಗಳೂ ಕೂಡ ಪೃಥಿವಿಯಲ್ಲಿವೆ. ಜಲಾದಿಗಳಲ್ಲಿ ಗಂಧ ಮುಂತಾದ ಒಂದೊಂದು ಗುಣ ಕಡಿಮೆಯಾಗುತ್ತವೆ. ಆಕಾಶದಲ್ಲಿ ಶಬ್ದಮಾತ್ರವಿದೆ. ಹೀಗಾಗಿ ಆಕಾಶಾದಿ ನಾಲ್ಕು ಭೂತಗಳಿಗಿಂತ ಪೃಥಿವೀ ವಿಶಿಷ್ಟ, ಉತ್ತಮವಾದ್ದರಿಂದ 'ವಿಶೇಷ' ಎನಿಸುತ್ತದೆ. ಈ ಪೃಥಿವಿಯು ಐವತ್ತು ಕೋಟಿ ಯೋಜನ ವಿಸ್ತೀರ್ಣವಾದ ಬ್ರಹ್ಮಾಂಡಕಟಾಹಕ್ಕಿಂತ ಇಮ್ಮಡಿ ವಿಸ್ತೀರ್ಣವಾಗಿದ್ದು ಬ್ರಹ್ಮಾಂಡಕ್ಕೆ ಆವರಣ ವಾಗಿದೆ. ಏಕೆಂದರೆ ಅದಕ್ಕೆ ಹೋಲಿಸಿದಾಗ ಬ್ರಹ್ಮಾಂಡಸೂಕ್ಷ್ಮವೆನಿಸುತ್ತದೆ. ಪೃಥಿವ್ಯಾವರಣ ಬ್ರಹ್ಮಾಂಡಕ್ಕೆ ಹೋಲಿಸಿದಾಗ ಅಸೂಕ್ಷ್ಮ, ಮಹತ್ತಾಗುತ್ತದೆ. ಜಲಾದಿ ತ್ರಿಗುಣಗಳ ಪರ್ಯಂತ ಎಲ್ಲವೂ ಹತ್ತು ಹತ್ತು ಪಾಲು ಅಧಿಕವಿಸ್ತಾರದಿಂದ ಆವರಣಗಳಾಗಿವೆ. ಇವನ್ನೇ ಬೇರೆಕಡೆ ಅಷ್ಟಪ್ರಕೃತಿಗಳೆಂದಿದ್ದಾರೆ ಎಂದೂ ಹೇಳಿದೆ.

'ಅಂತರ್ಗತಾಃ' ಎಂಬಲ್ಲಿ 'ಶರೀರಾಣಿ' ಎಂದು ಅಧ್ಯಾಹಾರ ಮಾಡಬೇಕು. ಪರಮಾತ್ಮನ ಶರೀರದೊಳಗೆ ಸೇರಿಕೊಂಡಿವೆ, ಬ್ರಹ್ಮಾಂಡರಾಶಿಗಳೆಂದರ್ಥ.

ಒಂದು ಬ್ರಹ್ಮಕಲ್ಪದಲ್ಲಿ ಒಂದೇ ಬ್ರಹ್ಮಾಂಡವನ್ನು ಪರಮಾತ್ಮ ಸೃಜಿಸುತ್ತಾನೆ. ಅನಂತ ಕೋಟಿ ಬ್ರಹ್ಮಾಂಡಗಳು ಒಮ್ಮೆಲೇ ಅವನ ಶರೀರದಲ್ಲಿ ಹೇಗೆ ಕಾಣುತ್ತದೆ ಎಂದರೆ ಬ್ರಹ್ಮತರ್ಕದಲ್ಲಿ ಮತ್ತು ಬ್ರಹ್ಮಾಂಡಪುರಾಣದಲ್ಲಿ ಇದಕ್ಕೆ ಸಮಾಧಾನ ಉಕ್ತವಾಗಿದೆ. 'ಭಗವಂತನ ಶರೀರಗಳು ಅನಂತ. ಪ್ರತಿಯೊಂದು ಶರೀರ ಬ್ರಹ್ಮಾಂಡಾಧಾರವೆನಿಸಬೇಕಾದರೆ ಒಂದು ಬ್ರಹ್ಮಾಂಡವು ಪರಮಾತ್ಮನ ಅಚಿಂತ್ಯಶಕ್ತಿಯಿಂದ ಅನಂತವಾಗಲೇ ಬೇಕು. ಮತ್ತು ಭೂತಭವಿಷ್ಯತ್ಕಲ್ಪಗಳ ಅನಂತ ಬ್ರಹ್ಮಾಂಡಗಳೊಂದಿಗೆ ಈಗಿನ ಕಲ್ಪದ ಬ್ರಹ್ಮಾಂಡವನ್ನು ಭಗವಂತನ ಶರೀರಗಳಲ್ಲಿ ಈಗಲೇ ಬ್ರಹ್ಮ ಕಾಣಬಲ್ಲ. ಅದರಿಂದಲೂ ಅನಂತಬ್ರಹ್ಮಾಂಡಗಳು ಒಮ್ಮೆಗೆ ಕಾಣುತ್ತವೆ. ಹೊರತು ಬ್ರಹ್ಮಾಂಡ ಪ್ರತಿಕಲ್ಪದಲ್ಲಿಯೂ ಒಂದೇ ಇರುತ್ತದೆ ಎಂದು ಬ್ರಹ್ಮತರ್ಕ ಹೇಳಿದೆ.

ಹರಿಯ ಅನಂತ ಶರೀರಗಳಲ್ಲಿ ಮಾತ್ರವಲ್ಲದೆ ಪ್ರತಿಯೊಂದು ಶರೀರದ ಅನಂತ ರೋಮಕೂಪಗಳಲ್ಲಿಯೂ ಬ್ರಹ್ಮದೇವರು ಒಂದು ಬ್ರಹ್ಮಾಂಡವನ್ನೂ ಜೊತೆಗೆ ತನ್ನನ್ನೂ ಅನಂತವಾಗಿ ಕಂಡರೆಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ವಸ್ತುತಃ ಒಂದೇ ಒಂದು ಬ್ರಹ್ಮಾಂಡ ಅನಂತವಾಯಿತೆಂದು ಮಹಾಭಾರತಲ್ಲಿಯೂ ಉಕ್ತವಾಗಿದೆ. ಅದರಿಂದ ಅನಂತಬ್ರಹ್ಮಾಂಡಗಳಿದ್ದರೂ ಅವು ಪರಸ್ಪರ ಅಭಿನ್ನವಾದ ಬ್ರಹ್ಮಾಂಡಗಳೇ ಹೊರತು ಭಿನ್ನವಾಗಿಲ್ಲ.

* * *

ಕಾಲದಿಂದಲೂ ದೇಶದಿಂದಲೂ ಪರಿಮಿತಿ ಇಲ್ಲವೆಂದು ಹೇಳಿ ಈಗ ಗುಣದಿಂದಲೂ ಹರಿಗೆ ಪರಿಮಿತಿ ಇಲ್ಲ ಎನ್ನುತ್ತಾರೆ ಮೈತ್ರೇಯರು-

ಯಮಾಹುರಕ್ಷರಂ ಬ್ರಹ್ಮ ಸರ್ವಕಾರಣಕಾರಣಮ್ ।
ವಿಷ್ಣೋರ್ಧಾಮ ಪರಂ ಸಾಕ್ಷಾತ್ ಪುರುಷಸ್ಯ ಮಹಾತ್ಮನಃ ॥೪೧॥

ದೇಹನಾಶರಹಿತನಾದ, ಸರ್ವಕಾರಣವಾದ ಬ್ರಹ್ಮಾಂಡಕ್ಕೂ ಕಾರಣನಾದ ಯಾವ ವಿಷ್ಣುವನ್ನು ಗುಣಪೂರ್ಣನೆನ್ನುವರೋ ಆ ಮಹಾಪುರುಷನಿಗೆ ಬ್ರಹ್ಮಾಂಡ ರಾಶಿಗಳು ಮನೆಗಳೂ ಆಗಿವೆ.

ಇಲ್ಲಿ ಯಾವ ಮೂಲಪ್ರಕೃತಿಯಲ್ಲಿ ಬ್ರಹ್ಮಾಂಡರಾಶಿಗಳು ಕೋಟಿಗಟ್ಟಲೆ ಪರಮಾಣುಗಳಂತೆ ಆಶ್ರಯ ಪಡೆದಿವೆಯೋ ಅಂಥ ಸರ್ವಕಾರಣಕಾರಣವಾದ ಮೂಲಪ್ರಕೃತಿ ವಿಷ್ಣುವಿಗೆ ಶರೀರವಾಗಿದೆ ಎಂದು ವೀರರಾಘವವ್ಯಾಖ್ಯಾನ. ಅಕ್ಷರ ಬ್ರಹ್ಮ ವಿಷ್ಣುವಿನ ಸ್ವರೂಪ, ಅಂದರೆ ಮೂಲರೂಪವೆಂದು ಶ್ರೀಧರವ್ಯಾಖ್ಯಾನ. ವಿಷ್ಣುವಿನ ಧಾಮ ಅಂದರೆ ಸ್ಥಾನವೂ ಕೂಡ ಪರಂ ಎಂದರೆ ಪೂರ್ಣವಾಗಿದೆ. ಎಂದು ಶುಕದೇವವ್ಯಾಖ್ಯಾನ. ಸರ್ವಕಾರಣನಾದ ಮಹಾಪುರುಷನಿಗೂ ಕಾರಣವಾದ ವಿಷ್ಣುವಿನ ಪರಂಧಾಮ ಅಂಶಿರೂಪವಾದ ತತ್ವವೇ ಅಕ್ಷರಬ್ರಹ್ಮ ನಿತ್ಯಾವಿರ್ಭೂತ ಪರಿಪೂರ್ಣ ಪರಮಾತ್ಮತತ್ವ. ಮಹಾಪುರುಷನು 'ಯದ್ಯಪಿ ನಿಮೇಷ ಉಪಚರ್ಯತೇ' ಎಂದು ಹಿಂದೆ ಹೇಳಿದಂತೆ ಕಾಲಾಧೀನನಲ್ಲ. ಆದರೂ ಆವಿರ್ಭಾವ ತಿರೋಭಾವ ಲೀಲೆ ತೋರುತ್ತಾನೆ. ಆದರೆ ಅವನಿಗೂ ಅಂಶಿರೂಪವಾದ ಪರಮಾತ್ಮತತ್ವ ಸದಾ ಆವಿರ್ಭೂತವಾಗಿರುತ್ತದೆ ಎಂದು ಜೀವಗೋಸ್ವಾಮಿ ವ್ಯಾಖ್ಯಾನ. ಈ ವ್ಯಾಖ್ಯಾನಗಳಲ್ಲಿ ವೀರರಾಘವವ್ಯಾಖ್ಯಾನ ಪರಮಾತ್ಮನಿಗೆ ಜಡಶರೀರವನ್ನು ಹೇಳುವುದರಿಂದ ಅಯುಕ್ತ. ಶ್ರೀಧರವ್ಯಾಖ್ಯಾನದಲ್ಲಿ ಸಗುಣನಿಗೆ ನಿರ್ಗುಣವು ಸ್ವರೂಪ ಎಂಬ ಅದ್ವೈತವಿವಕ್ಷೆ ಇರುವುದರಿಂದ ಅಯುಕ್ತ. ಶುಕದೇವ ವ್ಯಾಖ್ಯಾನದಲ್ಲಿ ವಿಷ್ಣುವಿನ ಸ್ಥಾನವಾದ ವೈಕುಂಠವೂ ಪೂರ್ಣ ಎಂದಿದೆ. ಭಗವಂತನೊಬ್ಬನೆ ಪೂರ್ಣನಾದ್ದರಿಂದ ಈ ವ್ಯಾಖ್ಯಾನ ಅಯುಕ್ತ. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ತದೇವ ಅಕ್ಷರಂ' ವಿಷ್ಣುವಿನ ಮೂಲರೂಪಮಾತ್ರವೆ ಅಕ್ಷರ ಪರಿಪೂರ್ಣ ಪರಮಾತ್ಮತತ್ವ ಎಂದು ರೂಪಗಳಲ್ಲಿ ತಾರತಮ್ಯ ಹೇಳಿದ್ದು ಅಯುಕ್ತ. ಅದರಿಂದ ಹಿಂದಿನ ಶ್ಲೋಕದಲ್ಲಿ ಪ್ರಸ್ತುತವಾದ ಬ್ರಹ್ಮಾಂಡಸಮೂಹಗಳು ವಿಷ್ಣುವಿಗೆ ಮನೆಯಂತೆ ಇವೆ, ಅಂದರೆ ಬ್ರಹ್ಮಾಂಡದ ಹೊರಗೆ ಮಾತ್ರವಲ್ಲ, ಒಳಗೂ ಅವನಿದ್ದಾನೆ ಎನ್ನುವುದು ಈ ಶ್ಲೋಕದ ತಾತ್ಪರ್ಯವೆನ್ನಬೇಕು. ಹಿಂದೆ ಪ್ರಕೃತವಾದ

'ಅಂಡರಾಶಯಃ' ಎಂಬುದನ್ನು ಈ ಶ್ಲೋಕಕ್ಕೂ ಅನ್ವಯಿಸಿ ಅಂಡರಾಶಿಗಳು ವಿಷ್ಣುವಿನ ಮನೆಗಳೆಂದು ಅನ್ವಯ ಹೇಳಬೇಕು.

ಧಾಮ ಗೃಹಂ ಅಂಡರಾಶಯಃ ।

ಅಂಡಸಮೂಹಗಳು ಪರಮಾತ್ಮನ ಧಾಮ, ಅಂದರೆ, ಮನೆಗಳಂತಿವೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ದ್ವಾದಶೋಽಧ್ಯಾಯಃ ॥ ೧೨ ॥

—೦—

ಅಧ್ಯಾಯ–೧೩

ಅಧ್ಯಾಯಸಾರಾಂಶ

ಚತುರ್ಮುಖ ಬ್ರಹ್ಮನ ಸೃಷ್ಟಿಯನ್ನು ಮೈತ್ರೇಯರು ಹೇಳುತ್ತಾರೆ. ಮೊದಲಿಗೆ ಪಂಚಪರ್ವ ಅವಿದ್ಯಾಸೃಷ್ಟಿ. ಬಳಿಕ ಮನಸ್ಸಿನಿಂದ ಸನಕಾದಿ ಮುನಿಗಳನ್ನು ಸೃಷ್ಟಿಸಿದ. ಅವರು ಸೃಷ್ಟಿಯನ್ನು ಮುಂದುವರಿಸಲು ಒಪ್ಪದಿದ್ದಾಗ ಕೋಪದಿಂದ ರುದ್ರನನ್ನು ಸೃಷ್ಟಿಸಿದ. ರುದ್ರನೂ ಭಯಂಕರ ಪ್ರೇತಪಿಶಾಚಾದಿಸೃಷ್ಟಿ ಮಾಡಿದಾಗ ಸಾಕೆಂದು ತಡೆದು ತನ್ನ ಅವಯವಗಳಿಂದ ನಾರದಾದಿಗಳನ್ನು ಸೃಷ್ಟಿಸಿದ. ಮುಖದಿಂದ ಮಾನುಷ ವಾಗಭಿಮಾನಿ ದೇವತೆಯನ್ನು ಸೃಷ್ಟಿಸಿ, ಅಸುರ ಮೋಹನಕ್ಕಾಗಿ ಮಗಳಾದ ಆಕೆಯನ್ನು ಬಯಸಿದಂತೆ ಬಳಿಕ ನಾಚಿಬಿಟ್ಟಂತೆ ತೋರಿಕೊಂಡ. ನಾಲ್ಕು ಮುಖಗಳಿಂದ ನಾಲ್ಕು ವೇದ ನಾಲ್ಕು ಉಪವೇದ ನಾಲ್ಕು ಆಶ್ರಮಧರ್ಮ ಮುಂತಾದುವನ್ನು ಸೃಷ್ಟಿಸಿದ. ತನ್ನ ಮಕ್ಕಳಾದ ಮರೀಚಿ ಮುಂತಾದವರು ಮಾಡಿದ ಸೃಷ್ಟಿಯೂ ಏನೂ ಸಾಲದೆಂದು ಕೊಂಡು ತನ್ನ ಶರೀರವನ್ನು ಸ್ತ್ರೀ ಪುರುಷ ಎಂದು ಎರಡಾಗಿ ವಿಭಾಗಿಸಿ ಸ್ವಾಯಂಭುವಮನು ಶತರೂಪಾದೇವಿಯರನ್ನು ಹುಟ್ಟಿಸಿದ.

* * *

ಹನ್ನೊಂದನೆ ಅಧ್ಯಾಯದಲ್ಲಿ ಹೇಳಿದ ಅವಿದ್ಯಾಸೃಷ್ಟಿಯ ವಿವರವನ್ನು ಮೊದಲಿಗೆ ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸಸರ್ಜಾಗ್ರೇಽಂಧತಾಮಿಸ್ರಮಥ ತಾಮಿಸ್ರಮಾದಿಕೃತ್ ।
ಮಹಾಮೋಹಂ ಚ ಮೋಹಂ ಚ ತಮಶ್ಚಾಜ್ಞಾನವೃತ್ತಯಃ ॥ ೨ ॥

ಚತುರ್ಮುಖನು ವೈಕಾರಿಕ ಸೃಷ್ಟಿಗಿಂತ ಮೊದಲು ಭಾವರೂಪ ಅಜ್ಞಾನದ ಕಾರ್ಯಗಳಾದ ಅಂಧತಾಮಿಸ್ರ, ತಾಮಿಸ್ರ, ಮಹಾಮೋಹ, ಮೋಹ ಮತ್ತು ತಮಸ್ಸುಗಳನ್ನು ಸೃಷ್ಟಿಸಿದನು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಪಂಚಪರ್ವ ಅವಿದ್ಯೆಯನ್ನು ವಿಷ್ಣುಪುರಾಣದ ಆಧಾರದಿಂದ ಹೀಗೆ ಹೇಳಿದ್ದಾರೆ–

ತಮೋऽವಿವೇಕೋ ಮೋಹಃ ಸ್ಯಾದ್ ಅಂತಃಕರಣವಿಭ್ರಮಃ ।
ಮಹಾಮೋಹಸ್ತು ವಿಜ್ಞೇಯೋ ಗ್ರಾಮ್ಯಭೋಗಸುಖೈಷಣಾ ॥

ಮರಣಂ ಹ್ಯಂಧತಾಮಿಸ್ರಂ ತಾಮಿಸ್ರಃ ಕ್ರೋಧ ಉಚ್ಯತೇ ।
ಅವಿದ್ಯಾಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥

'ಜೀವನ ಸ್ವರೂಪ ಪ್ರಕಾಶಿಸದಿರುವುದು ತಮಸ್ಸು. ದೇಹಾದಿಗಳಲ್ಲಿ ನಾನೆಂಬ ಬುದ್ಧಿಯೆ ಮೋಹ. ವಿಷಯಭೋಗಾಭಿಲಾಷೆ ಮಹಾಮೋಹ. ಅದಕ್ಕೆ ಅಡ್ಡಿ ಬಂದಾಗ ಬರುವ ಸಿಟ್ಟು ತಾಮಿಸ್ರ. ವಿಷಯಭೋಗಪದಾರ್ಥ ನಾಶವಾದಾಗ ತಾನೇ ಸತ್ತೆನೆನ್ನುವ ಬುದ್ಧಿ ಅಂಧತಾಮಿಸ್ರ' ಎಂದು ವಿವರಣೆ ನೀಡಿದ್ದಾರೆ. ಆದರೆ ಜೀವನಿಗೆ 'ನಾನು' ಎಂದು, ನಾನು ಅಜ್ಞ, ದುಃಖಿ, ಅಲ್ಪಶಕ್ತ ಎಂದು ಮುಂತಾಗಿ ಸ್ವರೂಪಜ್ಞಾನವಿದೆ. ನಾನೇ ಬ್ರಹ್ಮ ಎಂಬ ಸ್ವರೂಪಜ್ಞಾನವಿಲ್ಲ ಎನ್ನುವುದು ಸರಿಯಲ್ಲ. ಜೀವ ಬ್ರಹ್ಮಸ್ವರೂಪನಲ್ಲ. ಅದರಿಂದ ನಾನು ಅಸ್ವತಂತ್ರ ,ಎಂಬ ಪರಿಜ್ಞಾನವಿಲ್ಲದಿರುವುದು ತಮಸ್ಸೆನ್ನಬೇಕು. ಇದೇ ಅವಿವೇಕ ಅಂದರೆ ನಾನು ಅಸ್ವಂತ್ರ ಪರಮಾತ್ಮ ಸ್ವತಂತ್ರ ಎಂಬ ವಿವೇಕವಿಲ್ಲದಿರುವುದೆಂದು ವಿಷ್ಣುಪುರಾಣ ಹೇಳಿದೆ. ದೇಹ ಅಂತಃಕರಣಾದಿಗಳು ನಾನೆಂಬ ಬುದ್ಧಿ ಯಾರಿಗೂ ಇಲ್ಲ. ನನ್ನ ದೇಹ, ನನ್ನ ಅಂತಃಕರಣ ಎಂದೇ ಬುದ್ಧಿ ಇರುತ್ತದೆ. ಅದರಿಂದ ಅಂತಃಕರಣದಲ್ಲಿ ನಾನು ಸ್ವತಂತ್ರ ಸ್ವಾಮಿ ಎಂಬ ಮಿಥ್ಯಾಜ್ಞಾನವೇ ಮೋಹ ಎನ್ನಬೇಕು. ಮಹಾ ಮೋಹವೆಂದರೆ ವಿಷಯಭೋಗಾಭಿಲಾಷೆ ಎನ್ನುವುದು ಸರಿಯಲ್ಲ. ಇದು ಅಜ್ಞಾನ ಕಾರ್ಯವಲ್ಲ. ಅಭಿಮಾನಪ್ರಯುಕ್ತ ವಿಷಯಭೋಗದಿಂದ ಸುಖ ಸಿಗುತ್ತದೆ. ಅದರಿಂದ ಅಭಿಲಾಷೆ. ಇದರಲ್ಲಿ ಅಜ್ಞಾನದ ಪಾತ್ರವೇನಿಲ್ಲ. ಹಾಗೇ ವಿಷಯಭೋಗಕ್ಕೆ ಅಡ್ಡಿ ಬಂದಾಗ ಬರುವ ಕೋಪವೂ ಅಜ್ಞಾನಕಾರ್ಯವಲ್ಲ. ವಿಷಯಪದಾರ್ಥ ನಷ್ಟವಾದಾಗ ತಾನೇ ನಷ್ಟನಾದೆನೆಂಬ ಬುದ್ಧಿ ಯಾರಿಗೂ ಇಲ್ಲ. ಅಭಿಮಾನದಿಂದ ಔಪಚಾರಿಕವಾಗಿಯೆ ನಾನು ಸತ್ತೆನೆನ್ನುತ್ತಾರಷ್ಟೆ. ಅದರಿಂದ ವಿಷ್ಣುಪುರಾಣದಲ್ಲಿ 'ಗ್ರಾಮ್ಯಭೋಗಸುಖೈಷಣಾ' ಎನ್ನುವುದಕ್ಕೆ ಬೇರೆಯೆ ವಿವರಣೆ ನೀಡಬೇಕಾಗುತ್ತದೆ. ಕೇವಲ ವಿಷಯಭೋಗೇಚ್ಛೆ ತಪ್ಪಲ್ಲ. ಅದು ಗ್ರಾಮ್ಯವಾಗಿರಕೂಡದು. ಗ್ರಾಮ್ಯವೆಂದರೆ ನಿಷಿದ್ಧವಾದ, ತಾನೇ ಸ್ವತಂತ್ರವಾಗಿ ಭೋಗಿಸಬೇಕೆಂಬ ಇಚ್ಛೆಯಾಗಿರಕೂಡದು. ಹರಿಪ್ರೀತಿಯಾಗಲಿ ಎಂದು ವಿಷಯಸೇವನೆ ಮಾಡಬೇಕು. ತಾನು ಸ್ವತಂತ್ರ ಎಂಬ ಮಿಥ್ಯಾಜ್ಞಾನದಲ್ಲಿ ಆಗ್ರಹದಿಂದ ಕೋಪಮಾಡುವುದು ತಾಮಿಸ್ರ. ಆ ಕೋಪದಲ್ಲಿ ತನ್ಮಯತೆಯಿಂದ ಮರಣಕಾಲದ ಮೂರ್ಛೆಯಂಥ

ಅವಸ್ಥೆ ಹೊಂದುವುದು ಅಂಧತಾಮಿಸ್ರ ಎಂದು ವಿವರಣೆ ನೀಡಬೇಕು. ಅದರಿಂದ ಸ್ಪಷ್ಟವಾದ ಭಾರತ ಹರಿವಂಶ ವಾಕ್ಯಗಳನ್ನು ತಾತ್ಪರ್ಯದಲ್ಲಿ ತೋರಿಸುತ್ತಾರೆ–

ತಮಸ್ತು ಶಾರ್ವರಂ ಪ್ರೋಕ್ತಂ ಮೋಹಶ್ಚೈವ ವಿಪರ್ಯಯಃ ।
ತದಾಗ್ರಹೋ ಮಹಾಮೋಹಸ್ತಾಮಿಸ್ರಃ ಕ್ರೋಧ ಉಚ್ಯತೇ ।
ಮರಣಂ ತ್ವಂಧತಾಮಿಸ್ರಂ ಅವಿದ್ಯಾ ಪಂಚಪರ್ವಿಕಾ ॥
ಇತಿ ಭಾರತೇ ॥

ತಮೋಽಜ್ಞಾನಂ ವಿಪರ್ಯಾಸೋ ಮೋಹೋಽನ್ಯೇ ತು ತದಾಗ್ರಹಾಃ ।
ಇತಿ ಹರಿವಂಶೇಷು ॥

ತಮಸ್ಸೆಂದರೆ ರಾತ್ರಿಯ ಕತ್ತಲಿನಂತೆ ಇರುವ ಅಜ್ಞಾನ, ತಾನು ಅಸ್ವತಂತ್ರ ಎಂಬ ಪರಿಜ್ಞಾನವಿಲ್ಲದಿರುವುದು. ಮೋಹವೆಂದರೆ ತಾನು ಸ್ವತಂತ್ರ ಎಂಬ ಮಿಥ್ಯಾಜ್ಞಾನ. ಅದರಲ್ಲಿ ಆಗ್ರಹವೇ ಮಹಾಮೋಹ. ಅದಕ್ಕೆ ವಿರೋಧ ಬಂದಾಗ ಕೋಪ ಬರುವುದೇ ತಾಮಿಸ್ರ. ವಿರೋಧ ಹೆಚ್ಚಾದಾಗ ಉಂಟಾಗುವ ತನ್ಮಯತೆ, ಮೂರ್ಛೆಯಂಥ ಮನಃಸ್ಥಿತಿಯೇ ಅಂಧತಾಮಿಸ್ರ. ಹೀಗೆ ಅಜ್ಞಾನದ ಕಾರ್ಯಗಳು ಐದು ಎಂದು ಮಹಾಭಾರತದಲ್ಲಿ ಹೇಳಿದೆ. ತಮಸ್ಸೆಂದರೆ ಜ್ಞಾನವಿಲ್ಲದಿರುವುದು, ಮೋಹವೆಂದರೆ ವಿಪರೀತಜ್ಞಾನ ಬೇರೆ ಮಹಾಮೋಹ ಮುಂತಾದವು ಈ ವಿಪರೀತಜ್ಞಾನದಲ್ಲಿ ಆಗ್ರಹರೂಪವಾಗಿವೆ ಎಂದು ಹರಿವಂಶದಲ್ಲಿ ಹೇಳಿದೆ.

* * *

ಬ್ರಹ್ಮದೇವರು ಸನಕಾದಿಗಳನ್ನು ಮನಸ್ಸಿನಿಂದ ಸೃಷ್ಟಿಸಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ದೃಷ್ಟ್ವಾ ಪಾಪೀಯಸೀಂ ಸೃಷ್ಟಿಂ ನಾತ್ಮಾನಂ ಬಹ್ವಮನ್ಯತ ।
ಭಗವದ್ಧ್ಯಾನಪೂತೇನ ಮನಸಾಽನ್ಯಾಂಸ್ತತೋಽಸೃಜತ್ ॥ ೩ ॥

ಸನಕಂ ಚ ಸನಂದಂ ಚ ಸನಾತನಮಥಾತ್ಮಭೂಃ ।
ಸನತ್ಕುಮಾರಂ ಚ ಮುನಿಂ ನಿಷ್ಕ್ರಿಯಾನೂರ್ಧ್ವರೇತಸಃ ॥ ೪ ॥

ಪಾಪಕ್ಕೆ ಕಾರಣವಾದ ಅವಿದ್ಯಾಸೃಷ್ಟಿ ಮಾಡಿದ ಮೇಲೆ ಬ್ರಹ್ಮದೇವರು ತಾನು ಒಳ್ಳೆಯ ಸೃಷ್ಟಿಮಾಡಿದಂತಾಗಲಿಲ್ಲವೆಂದು ಬಗೆದು ಹರಿಧ್ಯಾನದಿಂದ ಪುನೀತವಾದ ತನ್ನ ಮನಸ್ಸಿನಿಂದ ಸನಕ, ಸನಂದ, ಸನಾತನ, ಸನತ್ಕುಮಾರರೆಂಬ ನಾಲ್ವರು ಬ್ರಹ್ಮಚರ್ಯನಿಷ್ಠರಾದ ಸನ್ಯಾಸಿಗಳನ್ನು ಸೃಷ್ಟಿಸಿದರು.

ಇಲ್ಲಿ ಮೊದಲಿಗೆ ಸನಕಾದಿಗಳ ಉತ್ಪತ್ತಿಯನ್ನು ಹೇಳಿದ್ದಾರೆ. ಮುಂದೆ ಏಳನೇ ಶ್ಲೋಕದಲ್ಲಿ ರುದ್ರದೇವರ ಸೃಷ್ಟಿಯನ್ನು ಹೇಳುತ್ತಾರೆ. ತಾರತಮ್ಯದಲ್ಲಿ ಉತ್ತಮರಾದ ರುದ್ರದೇವರ ಸೃಷ್ಟಿಯನ್ನು ಮೊದಲಿಗೆ ಹೇಳಬೇಕಾಗಿತ್ತು. ಏಕೆ ವ್ಯತ್ಯಾಸ ಮಾಡಿದರು ಎಂದು ಪ್ರಶ್ನೆ ಬಂದರೆ ''ಪರಮಾತ್ಮ ಮಾಡಿದ ಆದಿಸೃಷ್ಟಿಯೆ ತಾರತಮ್ಯಕ್ಕೆ ಅನುಗುಣವಾಗಿರುತ್ತದೆ. ಬ್ರಹ್ಮದೇವರು ಮಾಡಿದ ಈ ಸೃಷ್ಟಿ ತಾರತಮ್ಯಕ್ಕೆ ಅನುಗುಣವಲ್ಲ'' ಎನ್ನುವ ಅಭಿಪ್ರಾಯದಿಂದ ತಾತ್ಪರ್ಯದಲ್ಲಿ ದೇವತಾತಾರತಮ್ಯ ಮುಂತಾದುವನ್ನು ಹೇಳುತ್ತಾರೆ–

ಕಾಲತೋ ಬಲತಶ್ಚೈವ ಜ್ಞಾನಾನಂದಾದಿಕೈರಪಿ ।
ಸರ್ವೈರ್ಗುಣೈರ್ವಿಷ್ಣುರೇವ ಶ್ರೇಷ್ಠಸ್ತದವಮಾ ರಮಾ ॥

ಅನಂತಾಂಶೇನ ಕಾಲಾತ್ತು ಸಮಾ ತಸ್ಯಾಶ್ಚತುರ್ಮುಖಃ ।
ಅವರೋ ಬಹುಲಾಂಶೇನ ತತ್ಸಮೋ ವಾಯುರುಚ್ಯತೇ ॥

ನಿಯಮಾದ್ ವಾಯುರೇವೈಕೋ ಬ್ರಹ್ಮತ್ವಂ ಯಾತಿ ನಾಪರಃ ।
ತಸ್ಮಾತ್ ಸಮಾನತಾ ಮುಕ್ತೌ ವಾಯುತ್ವೇ ಕಿಂಚಿದೂನತಾ ॥

ದಶವರ್ಷಂ ತು ತತ್ಪಶ್ಚಾಜ್ಜನನಂ ತತ್ಸ್ತ್ರಿಯೋರಪಿ ।
ಆನಂದಾದಿಸ್ತದ್ದಶಾಂಶಃ ಕಾಲಃ ಸಂವತ್ಸರಾತ್ ಪರಃ ॥

ಯಾವತ್ ಪಶ್ಚಾಜ್ಜನಿಸ್ತಾವತ್ ಪೂರ್ವಂ ದೇಹಕ್ಷಯೋ ಭವೇತ್ ।
ಬ್ರಹ್ಮವಾಯ್ವೋಸ್ತು ಯೇ ದೇವ್ಯೌ ತದ್ದಶಾಂಶಃ ಸುಖಾದಿಕಃ ॥

ಶೇಷಸ್ಯ ಗರುಡಸ್ಯಾಪಿ ಕಾಲೋ ದಿವ್ಯಸಹಸ್ರಕಃ ।
ಶೇಷರುದ್ರೌ ಬ್ರಹ್ಮವಾಯೂ ಯಥಾ ತದ್ವತ್ ಪರಸ್ಪರಮ್ ॥

ತದ್ದೇವ್ಯಸ್ತದ್ದಶಾಂಶಾಃ ಸ್ಯುಸ್ತತಸ್ತ್ವಿಂದ್ರಾದಯೋ ಮತಾಃ ।
ಏವಂ ಮುಕ್ತೌ ಚ ಪೂರ್ವಂ ಚ ನಾನ್ಯಥಾ ಕ್ವಚಿದಿಷ್ಯತೇ ॥

ಅನ್ಯಥೋಕ್ತಿರ್ಯತ್ರ ಚ ಸ್ಯಾತ್ ತನ್ಮೋಹಾರ್ಥಂ ಭವಿಷ್ಯತಿ ।
ಪೂರ್ವಾಪರವಿಪರ್ಯಾಸೋ ಬಹುರೂಪತ್ವಹೇತುತಃ ॥

ಇತಿ ವಿಷ್ಣುಕೃತೇ ತತ್ವವಿವೇಕೇ ।

ಅಥಾತ ಆನಂದಸ್ಯ ಮೀಮಾಂಸಾ । ದೇವಾಸುರೇಭ್ಯೋ ಮಘವಾನ್ ಪ್ರಧಾನಃ ಇತ್ಯಾದಿ ಚ ।

ಇಂದ್ರಾದ್ಯಾಃ ಸನಕಾದ್ಯಾಶ್ಚ ದಕ್ಷಾದ್ಯಾ ಯೇಽಪಿ ಚಾಪರೇ ।
ಋಷಯೋ ಮನವೋ ದೇವಾಸ್ತದ್ವಶಾ ಯೇ ಚ ಕೇಚನ ॥

ಉಮಾಯಾ ಅವರಾಃ ಸರ್ವೇ ಗುಣೈಃ ಸರ್ವೈರ್ನ ಸಂಶಯಃ ।
ತತ್ಸಮೋ ನ ಭವಿಷ್ಯೋ ವಾ ನ ಭೂತೋಽದ್ಯತನೋಽಪಿ ವಾ ॥

ಋತೇ ಹರಿಬ್ರಹ್ಮವಾಯುಶೇಷವೀಂದ್ರಾನ್ ಸಭಾರ್ಯಕಾನ್ ॥
ಶಂಕರಂ ಚೇತಿ ವೇತ್ತವ್ಯಮನ್ಯನ್ಮೋಹಾರ್ಥಮುಚ್ಯತೇ ।

ಇತಿ ವಿಷ್ಣುಕೃತೇ ತತ್ವನಿರ್ಣಯೇ ।

ಕಾಲದಿಂದ ಬಲದಿಂದ ಜ್ಞಾನಾನಂದಾದಿ ಸರ್ವಗುಣಗಳಿಂದ ಶ್ರೀಹರಿಯೆ ಸರ್ವೋತ್ತಮ. ಅವನಿಗಿಂತ ಅನಂತಾಂಶದಷ್ಟು ಕಡಿಮೆಯವಳು ಲಕ್ಷ್ಮೀದೇವಿ. ಕಾಲದೇಶ ವ್ಯಾಪ್ತಿಗಳಿಂದ ಅವನಿಗೆ ಸಮಾನಳು. ಲಕ್ಷ್ಮಿಗಿಂತ ಕೋಟಿಗುಣಗಳಿಂದ ಬ್ರಹ್ಮ ಕಡಿಮೆಯವನು. ಅವನಿಗೆ ಮುಖ್ಯಪ್ರಾಣ ಸಮಾನ. ಮುಖ್ಯಪ್ರಾಣನೇ ತಪ್ಪದೆ ಬ್ರಹ್ಮಪದವಿ ಹೊಂದುತ್ತಾನೆ. ಬೇರೆ ಯಾರೂ ಅಲ್ಲ. ಅದರಿಂದ ಮುಕ್ತಿಯಲ್ಲಿ ಬ್ರಹ್ಮನ ಸಾಮ್ಯವೆ ಅವನಿಗಿರುತ್ತದೆ. ವಾಯುಪದವಿಯಲ್ಲಿರುವಾಗ ಸ್ವಲ್ಪಮಾತ್ರ ಕಡಿಮೆಯಾಗಿರುತ್ತಾನೆ. ಆದಿಸೃಷ್ಟಿಯಲ್ಲಿ ಬ್ರಹ್ಮ ಹುಟ್ಟಿ ಅವನ ಹತ್ತುವರ್ಷಗಳ ಬಳಿಕ ವಾಯು ಹುಟ್ಟುತ್ತಾನೆ. ಬ್ರಹ್ಮವಾಯುಗಳ ಪತ್ನಿಯರಾದ ಸರಸ್ವತೀ ಭಾರತಿಯರಿಗೆ ಅವರ ಆನಂದಾದಿಗಳಿಗಿಂತ ಹತ್ತು ಅಂಶ ಕಡಿಮೆ ಆನಂದಾದಿಗಳು. ವಾಯು ಹುಟ್ಟಿದ ಬಳಿಕ ಬ್ರಹ್ಮನ ಒಂದು ವರ್ಷ ಕಳೆದಾಗ ಸರಸ್ವತೀಭಾರತಿಯರು ಹುಟ್ಟುತ್ತಾರೆ. ಆದಿಸೃಷ್ಟಿಯ ಉತ್ಪತ್ತಿಕ್ರಮದಂತೆ ಲಯಕ್ರಮವೂ ತಾರತಮ್ಯಕ್ಕೆ ಅನುಗುಣವಾಗಿರುತ್ತದೆ. ಯಾರು ಯಾರಿಗಿಂತ ಎಷ್ಟು ಕಾಲವಾದ ಮೇಲೆ ಹುಟ್ಟುವರೋ ಅವರು ಅವರಿಗಿಂತ ಅಷ್ಟು ಕಾಲ ಮೊದಲಿಗೇ ದೇಹನಾಶ ಹೊಂದುತ್ತಾರೆ.

ಶೇಷಗರುಡರಿಗೆ ಸರಸ್ವತೀಭಾರತಿಯರ ಆನಂದಾದಿಗಳಿಗಿಂತ ನೂರು ಪಾಲು ಕಡಿಮೆ ಆನಂದಾದಿಗಳು. ಭಾರತೀಸರಸ್ವತಿಯರು ಹುಟ್ಟಿ ದೇವಮಾನದ ಸಾವಿರವರ್ಷಗಳು ಕಳೆದ ಮೇಲೆ ಶೇಷಗರುಡರ ಜನನ. ಬ್ರಹ್ಮವಾಯುಗಳು ಪರಸ್ಪರ ಸಮಾನರಾದರೂ ವಾಯು ವಾಯುಪದವಿಯಲ್ಲಿ ಸ್ವಲ್ಪಕಡಿಮೆಯಾಗಿರುವಂತೆ ಶೇಷರುದ್ರರು ಸಮಾನರಾಗಿದ್ದರೂ ಶೇಷಗರುಡರು ಹುಟ್ಟಿ ದೇವತೆಗಳ ಹತ್ತುವರ್ಷ ಕಳೆದ ಮೇಲೆ ರುದ್ರಹುಟ್ಟುತ್ತಾನೆ. ರುದ್ರಪದವಿಯಲ್ಲಿ ಸ್ವಲ್ಪ ಕಡಿಮೆಯವನೂ ಆಗಿರುತ್ತಾನೆ. ಶೇಷಗರುಡರುದ್ರರ ಪತ್ನಿಯರಾದ ವಾರುಣೀ ಸೌಪರ್ಣೀ ಪಾರ್ವತಿಯರು ತಮ್ಮ ಪತಿಗಳಿಗಿಂತ ನೂರು ಪಾಲು ಕಡಿಮೆ ಆನಂದಾದಿಗಳುಳ್ಳವರು. ಅವರಿಗಿಂತ ನೂರು ಪಾಲು ಕಡಿಮೆ ಆನಂದಾದಿಗಳುಳ್ಳವರು ಇಂದ್ರಾದಿಗಳು.

ಹೀಗೆಯೇ ಮುಕ್ತಿಯಲ್ಲಿಯೂ ಸಂಸಾರದಲ್ಲಿಯೂ ದೇವತಾ ತಾರತಮ್ಯ ವಿರುವುದೆಂದು ತಿಳಿಯಬೇಕು. ಇದು ಎಲ್ಲಿಯೂ ಯಾವ ಕಾಲದಲ್ಲಿಯೂ ವ್ಯತ್ಯಾಸವಾಗುವುದಿಲ್ಲ. ದೇವತೆಗಳಲ್ಲಿ ತಾರತಮ್ಯವಿಲ್ಲ ಎನ್ನುವ ಮಾತು ಮೋಹಕ್ಕಾಗಿ ಇರುತ್ತದೆ.

ಆದಿಸೃಷ್ಟಿಯಲ್ಲಿ ಉತ್ತಮರು ಮೊದಲು ಹುಟ್ಟುತ್ತಾರೆ. ಬೇರೆ ಸೃಷ್ಟಿಗಳಲ್ಲಿ ವ್ಯತ್ಯಾಸವೂ ಇದೆ. ಉತ್ತಮರಿಗೆ ಬಹುರೂಪಗಳಿರುವುದರಿಂದ ರೂಪಾಂತರದಿಂದ ತಿರುಗಿ ಅನಂತರ ಹುಟ್ಟುತ್ತಾರೆ. ಆದಿಸೃಷ್ಟಿಕ್ರಮವೇ ತಾರತಮ್ಯಕ್ಕೆ ಜ್ಞಾಪಕವಾಗುವ ಕಾರಣ ತಾರತಮ್ಯಕ್ಕೆ ಎಂದೂ ಭಂಗವಿಲ್ಲ, ಎಂದು ವಿಷ್ಣುಕ್ತತ ತತ್ವವಿವೇಕದಲ್ಲಿ ಹೇಳಿದೆ.

'ಅಥಾತ ಆನಂದಸ್ಯ ಮೀಮಾಂಸಾ ಭವತಿ' ಇತ್ಯಾದಿ ಶ್ರುತಿಯೂ ದೇವತಾ ತಾರತಮ್ಯವನ್ನು ತಿಳಿಸುತ್ತದೆ. ಭಾಗವತದಲ್ಲಿ–

ದೇವಾಸುರೇಭ್ಯೋ ಮಘವಾನ್ ಪ್ರಧಾನೋ
ದಕ್ಷಾದಯೋ ಬ್ರಹ್ಮಸುತಾಶ್ಚ ತೇಷಾಮ್ ।
ಭವಃ ಪರಃ ಸೋಽಥ ವಿರಿಂಚವೀರ್ಯಃ
ಸ ಮತ್ಪರೋಽಹಂ ದ್ವಿಜದೇವದೇವಃ ॥ (೫.೫.೨೨)

ದೇವಾಸುರರಿಗಿಂತ ಇಂದ್ರ, ದಕ್ಷಾದಿಗಳು, ಬ್ರಹ್ಮಪುತ್ರರು ಶ್ರೇಷ್ಠರು. ಇಂದ್ರನಿಗಿಂತ ರುದ್ರ ಶ್ರೇಷ್ಠ. ಅವನಿಗಿಂತ ಬ್ರಹ್ಮ, ಬ್ರಹ್ಮನಿಗಿಂತ ನಾನು ಶ್ರೇಷ್ಠಎಂದು ಋಷಭದೇವನು ತನ್ನ ಮಕ್ಕಳಿಗೆ ಉಪದೇಶ ಮಾಡುವಲ್ಲಿಯೂ ದೇವತಾತಾರತಮ್ಯ ಉಕ್ತವಾಗಿದೆ.

ಇಂದ್ರಾದಿಗಳು ಸನಕಾದಿಗಳು, ದಕ್ಷಾದಿಗಳು, ಋಷಿಗಳು ಮನುಗಳು ದೇವತೆಗಳು ಅವರ ಅನುಚರರು ಎಲ್ಲರೂ ಎಲ್ಲ ಗುಣಗಳಿಂದ ಪಾರ್ವತಿಗಿಂತ ಕಡಿಮೆಯವರು. ಇದರಲ್ಲಿ ಸಂದೇಹವಿಲ್ಲ. ಹರಿ ಬ್ರಹ್ಮವಾಯುಶೇಷಗರುಡರು ಅವರ ಪತ್ನಿಯರು ಮತ್ತು ರುದ್ರ ಇವರನ್ನು ಬಿಟ್ಟರೆ ಪ್ರಪಂಚದಲ್ಲಿ ಪಾರ್ವತಿಗೆ ಸಮಾನರು ಮುಂದೆ ಬರುವುದಿಲ್ಲ, ಹಿಂದೆ ಇರಲಿಲ್ಲ ಈಗಲೂ ಇಲ್ಲ ಎಂದು ತಿಳಿಯಬೇಕು. ಇದಕ್ಕೆ ವ್ಯತಿರಿಕ್ತವಾಗಿ ಏನು ಹೇಳಿದರೂ ಅದು ಮೋಹಕ್ಕಾಗಿ ಎಂದು ತಿಳಿಯಬೇಕು ಎಂದು ವಿಷ್ಣುಕ್ತತ ತತ್ವನಿರ್ಣಯದಲ್ಲಿ ಹೇಳಿದೆ. ಅದರಿಂದ ಸನಕಾದಿಗಳು ಪಾರ್ವತಿಗಿಂತಲೂ ಕಡಿಮೆಯವರೆಂದ ಬಳಿಕ ರುದ್ರನಿಗಿಂತ ಕಡಿಮೆಯವರೆಂದು ಬೇರೆ ಹೇಳಬೇಕಾಗಿಲ್ಲ.

*   *   *

ಬ್ರಹ್ಮದೇವರು ಅಸುರಮೋಹಕ್ಕಾಗಿ ಮಗಳನ್ನು ಕಾಮಿಸಿದಂತೆ ತೋರಿಕೊಂಡಾಗ ಬ್ರಹ್ಮಪುತ್ರರಾದ ಮರೀಚಿ ಮುಂತಾದ ಮುನಿಗಳು ನಟನೆ ಸಾಕೆಂದು ಬೇಡಿಕೊಂಡರು. ಆಗ ಬ್ರಹ್ಮದೇವರು ಆಕೆಯನ್ನು ಬಿಟ್ಟರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸ ಇತ್ಥಂ ಗೃಣತಃ ಪುತ್ರಾನ್ ಪುರೋ ದೃಷ್ಟ್ವಾ ಪ್ರಜಾಪತೀನ್ ।
ಪ್ರಜಾಪತಿಪತಿಸ್ತನ್ವಿಂ ತತ್ಯಾಜ ವ್ರೀಡಿತಸ್ತದಾ ।
ತಾಂ ದಿಶೋ ಜಗೃಹುರ್ಘೋರಾಂ ನೀಹಾರಂ ಯದ್ ವಿದುಸ್ತಮಃ
॥ ೩೩ ॥

ಮರೀಚಿ ಮುಂತಾದ ಮಕ್ಕಳ ಮಾತನ್ನು ಕೇಳಿ ಬ್ರಹ್ಮ ನಾಚಿ ಆ ಕನ್ಯೆಯನ್ನು ಬಿಟ್ಟು ಬಿಟ್ಟ. ಅವಳನ್ನು ದಿಕ್ಕುಗಳಲ್ಲಿರುವ ಜನರು ಸ್ವೀಕರಿಸಿದರು. ಅವಳಿಗೆ ಕತ್ತಲು ಶರೀರ.

ಬೇರೆ ವ್ಯಾಖ್ಯಾನಕಾರರು 'ಪ್ರಜಾಪತಿಪತಿಸ್ತನ್ವಂ ತತ್ಯಾಜ ವ್ರೀಡಿತಸ್ತದಾ' ಎಂದು ಅಪಪಾಠವಿಟ್ಟುಕೊಂಡು ''ಬ್ರಹ್ಮದೇವರು ತಾವು ಮಗಳನ್ನು ಕಾಮಿಸಿದ ದೋಷ ಪರಿಹಾರಕ್ಕಾಗಿ ದೇಹಾಂತ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತ 'ತನ್ವಂ ತತ್ಯಾಜ' ಶರೀರವನ್ನು ತೊರೆದರು. ದ್ವಿಪರಾರ್ಧ ಆಯುಷ್ಯವಿರುವಾಗ ಇದು ಹೇಗೆ ಸಾಧ್ಯ? ಎಂದರೆ ತನುತ್ಯಾಗ ಮಾಡಿಲ್ಲ, ಕಾಮಭಾವನೆಯನ್ನು ತ್ಯಾಗಮಾಡಿದ್ದಾರೆ. ಕಾಮಭಾವನೆ ಏಕೆ ಬಂದಿತು? ಎಂದರೆ ಇದು ಯಾವುದೋ ಹಿಂದಿನ ಕಲ್ಪದ ಕಥೆ. ಚತುಃಶ್ಲೋಕೀ ಭಾಗವತೋಪದೇಶ ಪಡೆಯುವುದಕ್ಕೆ ಮುನ್ನ ಇದು ನಡೆದಿತ್ತು, ಹೊರತು ಉಪದೇಶ ಪಡೆದ ಮೇಲಲ್ಲ, 'ಏತನ್ಮತಂ ಮಮಾತಿಷ್ಠ ಪರಮೇಣ ಸಮಾಧಿನಾ । ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್' ಎಂದು ಭಗವಂತ ವರನೀಡಿದ್ದರಿಂದ ಇದು ಅಶಕ್ಯ'' ಎಂದು ಹೇಳಿದ್ದಾರೆ. ತನುತ್ಯಾಗ ಮಾಡಲಿಲ್ಲ, ಭಾವತ್ಯಾಗ ಮಾತ್ರ ಮಾಡಿದರೆಂದು ರಾಧಾರಮಣದಾಸ ವೀರರಾಘವ ಹಾಗೂ ವಿಶ್ವನಾಥರ ವ್ಯಾಖ್ಯಾನಗಳು ಹೇಳಿವೆ. ಶ್ರೀಧರ ಶುಕದೇವರು ತನುತ್ಯಾಗವನ್ನೇ ಒಪ್ಪಿದ್ದಾರೆ. ವಸ್ತುತಃ 'ಪ್ರಜಾಪತಿಪತಿಸ್ತನ್ವಿಂ ತತ್ಯಾಜ' ಎಂದೇ ಪಾಠ. ಅದರಿಂದ ತನುತ್ಯಾಗದ ಪ್ರಶ್ನೆಯೆ ಬರುವುದಿಲ್ಲ.

'ತನ್ವೀ' ಎಂದರೆ ಇಲ್ಲಿ ವಾಗ್ದೇವತೆ, ಅವಳು ಬ್ರಹ್ಮನ ಪತ್ನಿ. ಅವಳನ್ನು ಬ್ರಹ್ಮದೇವರು ಹೇಗೆ ತ್ಯಾಗಮಾಡಿದರೆಂಬ ಪ್ರಶ್ನೆ ಬರುತ್ತದೆ. ಯಾವುದೋ ಹಿಂದಿನ ಕಲ್ಪದಲ್ಲಿ ಮಗಳ ಮೇಲೆ ಮೋಹ ಉಂಟಾಗಿತ್ತೆಂದೂ ಅದಕ್ಕೆ ದೇಹಾಂತಪ್ರಾಯಶ್ಚಿತ್ತ ಮಾಡಿಕೊಂಡರೆಂದೂ, ಹಾಗೆ ಮಾಡಲಿಲ್ಲ, ಭಾವತ್ಯಾಗಮಾಡಿದರೆಂದೂ ವ್ಯಾಹತವಾಗಿ ಹೇಳುವುದಕ್ಕಿಂತ 'ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್' ಎಂಬ ಭಗವಂತನ ವಚನದಂತೆ ಬ್ರಹ್ಮನಿಗೆ ಮೋಹ ಬರಲಿಲ್ಲ. ಬಂದಂತೆ

ನಟಿಸಿದರೆಂದು ವಿವರಣೆ ಏಕೆ ನೀಡಬಾರದು? ಪತ್ನಿಯಾದ ವಾಗ್ದೇವತೆಯನ್ನು ಬಿಡಲು ಏನು ಕಾರಣ ಎಂಬ ಪ್ರಶ್ನೆಗೂ ಅವರಲ್ಲಿ ಉತ್ತರವಿಲ್ಲ. ಹೀಗೇ ಉತ್ತರ ನೀಡಬೇಕು–

ಯಾಂ ತತ್ಯಾಜ ವಿಭುರ್ಬ್ರಹ್ಮಾ ಮಾನುಷೀ ವಾಕ್ತು ಸಾ ಸ್ಮೃತಾ ।
ಸರಸ್ವತೀ ನಿಜಾ ಭಾರ್ಯಾ ದೈವೀಂ ವಾಚಂ ತು ತಾಂ ವಿದುಃ ॥
ಇತಿ ಚ ।

'ಬ್ರಹ್ಮನು ತ್ಯಜಿಸಿದನೆನ್ನಲಾದ ವಾಗ್ದೇವತೆ ಮಾನುಷೀ ವಾಕ್ಕಿಗೆ, ಕಣಾದಾದಿ ಮನುಷ್ಯನಿರ್ಮಿತ ದುಃಶಾಸ್ತ್ರಗಳಿಗೆ ಅಭಿಮಾನಿನಿ ಹೊರತು ನಿಯತ ಪತ್ನಿಯಾದ ಸರಸ್ವತಿಯಲ್ಲ. ಅವಳು ದೈವೀವಾಣಿಯಾದ ವೇದಾದಿಗಳಿಗೆ ಅಭಿಮಾನಿನಿ' ಎಂದೂ ಹೇಳಿದೆ.

* * *

ಬ್ರಹ್ಮದೇವರು ನಡೆಸಿದ ವೇದಾದಿ ಸೃಷ್ಟಿಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಕದಾಚಿದ್ ಧ್ಯಾಯತಃ ಸ್ರಷ್ಟುರ್ವೇದಾ ಆಸನ್ ಚತುರ್ಮುಖಾತ್ ।
ಕಥಂ ಸ್ರಕ್ಷ್ಯಾಮ್ಯಹಂ ಲೋಕಾನ್ ಸಮವೇತಾನ್ ಯಥಾ ಪುರಾ ॥
॥ ೩೪ ॥

ಚಾತುರ್ಹೋತ್ರಂ ಕರ್ಮತಂತ್ರಂ ಉಪವೇದನಯೈಃ ಸಹ ।
ಧರ್ಮಸ್ಯ ಪಾದಾಶ್ಚತ್ವಾರಸ್ತಥೈವಾಶ್ರಮ ವೃತ್ತಯಃ ॥ ೩೫ ॥

ಋಗ್ಯಜುಃಸಾಮಾಥರ್ವಾಖ್ಯಾನ್
ವೇದಾನ್ ಪೂರ್ವಾದಿಭಿರ್ಮುಖೈಃ ।
ಶಸ್ತ್ರಮಿಜ್ಯಾಂ ಸ್ತುತಿಸ್ತೋಮಂ
ಪ್ರಾಯಶ್ಚಿತ್ತಂ ವ್ಯಧಾತ್ ಕ್ರಮಾತ್ ॥ ೩೭ ॥

ಆಯುರ್ವೇದಂ ಧನುರ್ವೇದಂ ಗಾಂಧರ್ವಂ ವೇದಮಾತ್ಮನಃ ।
ಸ್ಥಾಪತ್ಯಂ ಚಾಸೃಜದ್ ವೇದಂ ಕ್ರಮಾತ್ ಪೂರ್ವಾದಿಭಿರ್ಮುಖೈಃ
॥ ೩೮ ॥

ಇತಿಹಾಸಪುರಾಣಂ ಚ ಪಂಚಮಂ ವೇದಮೀಶ್ವರಃ ।
ಸರ್ವೇಭ್ಯಃ ಏವ ವಕ್ತ್ರೇಭ್ಯಃ ಸಸೃಜೇ ಸರ್ವದರ್ಶನಃ ॥ ೩೯ ॥

ಷೋಳಶ್ಯುಕ್ಥೌ ಪೂರ್ವವಕ್ತ್ರಾತ್ ಪುರೀಷ್ಯಗ್ನಿಷ್ಟುತಾವಥ ।
ಆಪ್ತೋರ್ಯಾಮಾತಿರಾತ್ರೌ ಚ ವಾಜಪೇಯಂ ಸಗೋಸವಮ್
॥ ೪೦ ॥

ತಪಃ ಶೌಚಂ ದಯಾ ಸತ್ಯಂ ಧರ್ಮಸ್ಯೇತಿ ಪದಾನಿ ಚ ।
ಆಶ್ರಮಾಂಶ್ಚ ಯಥಾಸಂಖ್ಯಮಸೃಜತ್ ಸಹ ವೃತ್ತಿಭಿಃ ॥ ೪೧ ॥

ಒಮ್ಮೆ ಬ್ರಹ್ಮದೇವರು ಆಲೋಚಿಸಿದರು. ಸಜ್ಜನರು ವೇದೋಕ್ತಕರ್ಮ ನಿಷ್ಠರಾಗುವಂತೆ ಹೇಗೆ ಮಾಡಲಿ ಎಂದು. ಆಗ ಅವರ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಉಂಟಾದುವು. ಹೋತೃಮುಂತಾದ ನಾಲ್ಕು ಋತ್ವಿಜರು ನಡೆಸುವ ಯಜ್ಞಪ್ರಕ್ರಿಯೆಯೂ ಗಾಂಧರ್ವಾದಿ ಉಪವೇದಗಳೂ ನೀತಿ ಶಾಸ್ತ್ರಗಳೂ ಧರ್ಮದ ನಾಲ್ಕು ಪಾದಗಳನ್ನು ಮತ್ತು ಬ್ರಹ್ಮಚರ್ಯಾದಿ ಆಶ್ರಮಧರ್ಮಗಳನ್ನು ಬೋಧಿಸುವ ಶಾಸ್ತ್ರಗಳೂ ಉಂಟಾದುವು. ಋಗ್ವೇದ ಯಜುರ್ವೇದ ಸಾಮವೇದ ಅಥರ್ವವೇದಗಳನ್ನು ಮತ್ತು ಋಗ್ವೇದದ ಶಸ್ತ್ರಮಂತ್ರ, ಯಜುರ್ವೇದದ ಇಜ್ಯಾ ಮಂತ್ರ, ಸಾಮವೇದದ ಸ್ತುತಿಸ್ತೋಮಮಂತ್ರ, ಅಥರ್ವವೇದದ ಪ್ರಾಯಶ್ಚಿತ್ತ ಮಂತ್ರಗಳನ್ನೂ ಕ್ರಮವಾಗಿ ಪೂರ್ವಾದಿ ಮುಖಗಳಿಂದ ವ್ಯಕ್ತ ಮಾಡಿದರು. ಹಾಗೇ ಪೂರ್ವಾದಿ ನಾಲ್ಕು ಮುಖಗಳಿಂದ ಕ್ರಮವಾಗಿ ಆಯುರ್ವೇದ ವೈದ್ಯಶಾಸ್ತ್ರ ಧನುರ್ವೇದ, ಯುದ್ಧವಿದ್ಯೆ, ಗಾಂಧರ್ವ ವೇದ ನಾಟ್ಯಶಾಸ್ತ್ರ , ಸ್ಥಾಪತ್ಯವೇದ ಶಿಲ್ಪಶಾಸ್ತ್ರಗಳನ್ನೂ ವ್ಯಕ್ತಮಾಡಿದರು. ಪಂಚಮವೇದವೆನಿಸಿದ ಇತಿಹಾಸಪುರಾಣಗಳನ್ನು ಎಲ್ಲ ಮುಖಗಳಿಂದಲೂ ವ್ಯಕ್ತಮಾಡಿದರು. ಹಾಗೆಯೇ ಷೋಡಶೀ–ಉಕ್ಥ, ಪುರೀಷಿ–ಅಗ್ನಿಷ್ಟುತ್, ಅಪ್ತೋರ್ಯಾಮ–ಅತಿರಾತ್ರ, ವಾಜಪೇಯ–ಗೋಸವ ಎಂಬ ಎರಡೆರಡು ಯಾಗಗಳನ್ನು ಬೋಧಿಸುವ ಶಾಸ್ತ್ರಗಳನ್ನು ಕ್ರಮವಾಗಿ ಪೂರ್ವಾದಿ ಮುಖಗಳಿಂದ ವ್ಯಕ್ತಮಾಡಿದರು, ಹಾಗೆಯೇ ತಪಸ್ಸು ಶೌಚ ದಯಾ ಸತ್ಯ ಎಂಬ ಧರ್ಮದ ನಾಲ್ಕು ಪಾದಗಳನ್ನೂ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಧರ್ಮಗಳನ್ನೂ, ಬೋಧಿಸುವ ಶಾಸ್ತ್ರಗಳನ್ನೂ ಕ್ರಮವಾಗಿ ಪೂರ್ವಾದಿ ನಾಲ್ಕುಮುಖಗಳಿಂದ ವ್ಯಕ್ತ ಮಾಡಿದರು.

ಇಲ್ಲಿ ಅಪೌರುಷೇಯವಾದ ವೇದಗಳಿಗೆ ಉತ್ಪತ್ತಿ ಹೇಗೆ? ಇತಿಹಾಸ ಪುರಾಣಗಳನ್ನು ಶ್ರೀಹರಿಯೆ ಮೂಲರೂಪವ್ಯಾಸರೂಪಗಳಿಂದ ರಚಿಸಿರುವುದರಿಂದ ಬ್ರಹ್ಮ ಅವುಗಳನ್ನು ಸೃಜಿಸಿದನೆನ್ನುವುದೂ ಹೇಗೆ? ಯಜ್ಞ ತಪಸ್ಸು ಶೌಚ ಆಶ್ರಮಧರ್ಮಗಳು ಇವುಗಳನ್ನೆಲ್ಲ ಮುಖದಿಂದ ಸೃಜಿಸುವುದು ಹೇಗೆ? ಎಂದು ಮುಂತಾದ ಪ್ರಶ್ನೆಗಳು ಬರುತ್ತವೆ. ಬೇರೆ ವ್ಯಾಖ್ಯಾನಕಾರರು ಯಾರೂ ಈ ವಿಚಾರ ಮಾಡಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

ಅಭಿಮಾನಿತಃ ಶಬ್ದತಶ್ಚ ಬ್ರಹ್ಮಾ ವೇದಾನ್ ಸಸರ್ಜ ಹ ।
ಯಜ್ಞಾದೀಂಶ್ಚಕ್ಷುಷೇ ವಾಚಾ ತಥಾ ಸರ್ವಾಭಿಮಾನಿನಃ ॥

ಇತಿಹಾಸಪುರಾಣೇ ತು ಶ್ರುತ್ವಾ ಹರಿಮುಖಾತ್ ಸ್ವಯಮ್ ।
ಭಾರತಾದೀನ್ ವಿನಾ ಪಶ್ಚಾದ್ ಹರಿಣಾಽನ್ಯೈಶ್ಚ ನಿರ್ಮಿತಾನ್ ।
ಇತಿ ।

ಬ್ರಹ್ಮ ವೇದಗಳನ್ನು ಸೃಜಿಸಿದನೆಂದರೆ ವೇದಾಭಿಮಾನಿಗಳನ್ನು ಸೃಜಿಸಿದನೆಂದರ್ಥ. ಮತ್ತು ಶಬ್ದರೂಪದಲ್ಲಿಯೂ ಅಪೌರುಷೇಯವಾದ ವರ್ಣಕ್ರಮಕ್ಕೆ ಅನುಗುಣವಾಗಿಯೆ ತನ್ನ ಬುದ್ಧಿಯಲ್ಲಿರುವ ವರ್ಣಕ್ರಮದಿಂದ ವೇದಗಳನ್ನು ಉಚ್ಚರಿಸಿದನೆಂದೂ ಅರ್ಥ. (ಭಗವಂತನ ನಿತ್ಯಜ್ಞಾನದಲ್ಲಿ ಸದಾ ಗೋಚರಿಸುವ ವರ್ಣಕ್ರಮ ನಿತ್ಯವಾದ್ದರಿಂದ ವೇದ ಅಪೌರುಷೇಯ ಅನಾದಿ ನಿತ್ಯವೇ. ಆದರೂ ಆ ಕ್ರಮಕ್ಕೆ ಅನುಗುಣವಾಗಿ ಬ್ರಹ್ಮದೇವರ ಬುದ್ಧಿಯಲ್ಲಿಯೂ ವರ್ಣಕ್ರಮವು ಭಗವಂತನ ಉಪದೇಶದಿಂದ ಉಂಟಾಗುತ್ತದೆ. ಅದರಿಂದ ವೇದನಿತ್ಯತ್ವಕ್ಕೆ ಇದು ಬಾಧಕವಲ್ಲ.) ಮುಖಗಳಿಂದ ಯಜ್ಞಾದಿ ನಿರ್ಮಾಣವೆಂದರೆ 'ವಾಚಾ'– ಅವುಗಳನ್ನು ಬೋಧಿಸುವ ಶಾಸ್ತ್ರ ನಿರ್ಮಾಣಮಾಡಿದರೆಂದರ್ಥ. ಮತ್ತು ಯಜ್ಞಾದಿಗಳ ಅಭಿಮಾನಿದೇವತೆಗಳನ್ನು ಹುಟ್ಟಿಸುವುದೂ ಯಜ್ಞಾದಿನಿರ್ಮಾಣವೇ.

ಇತಿಹಾಸಪುರಾಣಗಳನ್ನು ಬ್ರಹ್ಮದೇವರು ಭಗವಂತನ ಮುಖದಿಂದಲೇ ಉಪದೇಶ ಪಡೆದು ಅವುಗಳನ್ನೇ ರುದ್ರಾದಿದೇವತೆಗಳಿಗೆ ಉಪದೇಶಿಸುತ್ತಾರೆ. ಇದೇ ಇತಿಹಾಸಪುರಾಣ ರಚನೆ ಎಂದು ಇಲ್ಲಿ ವಿವಕ್ಷಿತವಾಗಿದೆ. ಮೂಲರೂಪದಿಂದಲೂ ವೇದವ್ಯಾಸರೂಪದಿಂದಲೂ ಬೇರೆಯಾಗಿ ಭಾರತಾದಿ ಇತಿಹಾಸಗಳನ್ನೂ ಭಾಗವತಾದಿ ಪುರಾಣಗಳನ್ನೂ ಹರಿ ನಿರ್ಮಿಸುತ್ತಾನೆ. ಅವುಗಳಲ್ಲಿ ಮುಂದೆ ವೇದವ್ಯಾಸರೂಪದಿಂದ ಹರಿಯೂ ಬೇರೆ ಮುನಿಗಳೂ ರಚಿಸುವ ಭಾರತ ರಾಮಾಯಣ ಮನುಸ್ಮೃತಿ ಮುಂತಾದುವನ್ನು ಬಿಟ್ಟು, ಸಾಕ್ಷಾದ್ ಮೂಲರೂಪದಿಂದ ಹರಿ ತಮಗೆ ಉಪದೇಶಿಸುವ ಭಾರತಾದಿಗಳನ್ನು ಬ್ರಹ್ಮದೇವರು ಪುನಃ, ಅಪೌರುಷೇಯವೇದಗಳನ್ನು ನಿರ್ಮಿಸಿದಂತೆ, ನಿರ್ಮಿಸುತ್ತಾರೆ ಅಂದರೆ ಉಪದೇಶಿಸುತ್ತಾರೆ ಎಂದು ಹೇಳಿದೆ.

* * *

ನಾಲ್ಕು ಬಗೆ ಬ್ರಹ್ಮಚರ್ಯ ಮತ್ತು ನಾಲ್ಕು ಬಗೆ ಗೃಹಸ್ಥಧರ್ಮ ಬೋಧಕವಾದ ಶಾಸ್ತ್ರಗಳನ್ನು ಬ್ರಹ್ಮದೇವರು ನಿರ್ಮಿಸಿದರೆಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ–

ಸಾವಿತ್ರಂ ಪ್ರಾಜಾಪತ್ಯಂ ಚ ಬ್ರಾಹ್ಮಂ ಚಾಥ ಬೃಹತ್ ತಥಾ ।
ವಾರ್ತಾಽಸಂಚಯಶಾಲೀನಂ ಶಿಲೋಂಛ ಇತಿ ವೈ ಗೃಹೇ ॥ ೪೨ ॥

ಸಾವಿತ್ರ ಅಂದರೆ ಉಪನಯನವಾದ ಬಳಿಕ, ಗುರುಕುಲದಲ್ಲಿ ಹನ್ನೆರಡು ವರ್ಷಪರ್ಯಂತ ಅಧ್ಯಯನ ಮಾಡುವುದಕ್ಕೆ ಮೊದಲು, ಮೂರು ದಿನ ಗಾಯತ್ರೀ ಮಂತ್ರದ ಅಧ್ಯಯನ ಮಾಡುವುದು, ಪ್ರಾಜಾಪತ್ಯ ಅಂದರೆ ಗೃಹಸ್ಥನು ಒಬ್ಬಳೇ ಹೆಂಡತಿಯೊಡನೆ ಋತುಕಾಲದಲ್ಲಿ ಸಂಗ ಮಾಡುವ ನಿಯಮ, ಬ್ರಾಹ್ಮವೆಂದರೆ ಹನ್ನೆರಡು ವರ್ಷ ಗುರುಕುಲದಲ್ಲಿ ಬ್ರಹ್ಮಚಾರಿಯಾಗಿ ಅಧ್ಯಯನ ನಡೆಸುವುದು. ಬೃಹತ್ ಎಂದರೆ ಜೀವನಪೂರ್ತಿ ಬ್ರಹ್ಮಚಾರಿಯಾಗಿರುವುದು. ವಾರ್ತಾ ಎಂದರೆ ಗೃಹಸ್ಥನು ಸದ್ಗೃಹಸ್ಥರ ಮನೆ ಮನೆಗಳಿಗೆ ಹೋಗಿ ಯಾಯಾವರವೆಂಬ ಒಂದುವಿಧದ ಭಿಕ್ಷಾಟನೆ ಮಾಡುವುದು. ಅಸಂಚಯವೆಂದರೆ ಅಂದು ಸಂಪಾದಿಸಿದ ಧಾನ್ಯಾದಿಗಳನ್ನು ಅಂದೇ ವ್ಯಯ ಮಾಡುತ್ತ ಮರುದಿನಕ್ಕಾಗಿ ಕೂಡಿಡದಿರುವುದು. ಶಾಲೀನ ಎಂದರೆ ಒಂದು ವರ್ಷ ಪರ್ಯಂತ ಸಾಕಾಗುವಷ್ಟು ಮಾತ್ರ ಧಾನ್ಯಾದಿಸಂಗ್ರಹ. ಶಿಲ ಎಂದರೆ ಬೇಸಾಯಗಾರರು ಹೊಲಗಳಲ್ಲಿ ಬೆಳೆಗಳನ್ನು ಕೊಯ್ದು ಕೊಂಡೊಯ್ದ ಬಳಿಕ ಅಲ್ಲಿ ಬಿದ್ದಿರುವ ಧಾನ್ಯತೆನೆಗಳನ್ನು ಹೆಕ್ಕಿ ಅದರಿಂದ ಜೀವಿಸುವುದು. ಉಂಛ ಎಂದರೆ ಧಾನ್ಯದ ಕಾಳುಗಳನ್ನು ಹೆಕ್ಕಿ ಬದುಕುವುದು. ಎರಡೂ ಸೇರಿ ಶಿಲೋಂಛವಾಗುತ್ತದೆ.

ಇಲ್ಲಿ 'ಪ್ರಾಜಾಪತ್ಯ'ವೆಂದರೆ ಉಪನಯನವಾಗಿ ಮೂರು ದಿನಗಳ ಸಾವಿತ್ರ ಬ್ರಹ್ಮಚರ್ಯವ್ರತ ಮುಗಿಸಿದ ಬಳಿಗ ಒಂದು ವರ್ಷಕಾಲ ನಡೆಸುವ ಬ್ರಹ್ಮಚರ್ಯವೆಂದೂ, 'ವಾರ್ತಾ' ಎಂದರೆ ಅನಿಷಿದ್ಧ ಕೃಷಿ ಮುಂತಾದ ವೃತ್ತಿ ಎಂದೂ, ಸಂಚಯವೆಂದು ಪದವಿಭಾಗ ಮಾಡಿ 'ಸಂಚಯ'ವೆಂದರೆ ಯಜನಾದಿಗಳಿಂದ ದ್ರವ್ಯಸಂಪಾದಿಸುವುದೆಂದೂ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. 'ಶಾಲೀನ'ವೆಂದರೆ ಯಾಯಾವರ ವೃತ್ತಿ ಎಂದು ವಲ್ಲಭವ್ಯಾಖ್ಯಾನ ಹೇಳುತ್ತದೆ. ಶ್ರೀಮದಾಚಾರ್ಯರು ಪ್ರಮಾಣದ ಆಧಾರದೊಂದಿಗೆ ಬೇರೆಯೇ ಅರ್ಥಗಳನ್ನು ಹೇಳುತ್ತಾರೆ–

ಪ್ರಾಜಾಪತ್ಯಬ್ರಹ್ಮಚರ್ಯಮೇಕಭಾರ್ಯರ್ತುಗಾಮಿತಾ ॥
ಇತಿ ವ್ಯಾಸಸ್ಮೃತೌ ।

ವಾರ್ತಾ ಯಾಯಾವರಂ ಜ್ಞೇಯಮೇಕಾಹಿತ್ವಮಸಂಚಯಃ ॥
ಇತಿ ಚ ।

ಗೃಹಸ್ಥನು ಒಬ್ಬಳೆ ಹೆಂಡತಿಯಲ್ಲಿ ಋತುಕಾಲದಲ್ಲಿಯೇ ಸಂಗ ಮಾಡುವ ನಿಯಮವು ಪ್ರಾಜಾಪತ್ಯಬ್ರಹ್ಮಚರ್ಯವೆನಿಸುತ್ತದೆ ಎಂದು ವ್ಯಾಸಸ್ಮೃತಿಯಲ್ಲಿ ಹೇಳಿದೆ. ವಾರ್ತಾ ಎಂದರೆ ಮನೆ ಮನೆಗೆ ಹೋಗಿ ಯಾಯಾವರ ಮಾಡಿ ಬದುಕುವುದು. 'ಅಸಂಚಯಃ' ಎಂದು ಪದವಿಭಾಗ. ಅಂದು ಸಂಪಾದಿಸಿದ ಧಾನ್ಯಾದಿಗಳನ್ನು ಅಂದೇ ವ್ಯಯ ಮಾಡುತ್ತ ಮರುದಿನಕ್ಕಾಗಿ ಕೂಡಿಡದೇ ಇರುವುದು ಎಂದೂ ಹೇಳಿದೆ.

* * *

ವಾನಪ್ರಸ್ಥದಲ್ಲಿಯೂ ಸನ್ನ್ಯಾಸದಲ್ಲಿಯೂ ನಾಲ್ಕು ಬಗೆಗಳಿವೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ವೈಖಾನಸಾ ವಾಲಖಿಲ್ಯೋದುಂಬರಾಃ ಫೇನಪಾ ವನೇ ।
ನ್ಯಾಸೇ ಕುಟೀಚಕಃ ಪೂರ್ವಂ ಬಹೂದೋ ಹಂಸನಿಷ್ಕ್ರಿಯೌ ॥ ೪೩ ॥

ವಾನಪ್ರಸ್ಥರು ನಾಲ್ಕು ಬಗೆ– ಗಡ್ಡೆಗೆಣಸು ಮಾತ್ರ ತಿಂದು ಬದುಕುವವರು, ಗಡ್ಡೆಗೆಣಸು ಹಣ್ಣುಹಂಪಲು ಎಲ್ಲವನ್ನೂ ಉಣ್ಣುವವರು, ಹಣ್ಣುಹಂಪಲು ಮಾತ್ರ ತಿನ್ನುವವರು, ಕರು ತಾಯಿಹಸುವಿನ ಹಾಲು ಕುಡಿದಾಗ ಬಾಯಿಂದ ಬೀಳುವ ನೊರೆಯನ್ನು ಮಾತ್ರ ಸ್ವೀಕರಿಸುವವರು ಎಂದು. ಸನ್ನ್ಯಾಸಿಗಳು ನಾಲ್ಕು ಬಗೆ– ತನ್ನ ಮನೆಯಲ್ಲಿಯೇ ವಾಸ ಮಾಡುವವನು, ಸದಾ ಸಂಚರಿಸುವ ತ್ರಿದಂಡಿ, ಏಕದಂಡಿ ಯಜ್ಞೋಪವೀತಿ ಮತ್ತು ಏಕದಂಡಿ ಯಜ್ಞೋಪವೀತರಹಿತ ಎಂದು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ– ವೈಖಾನಸರೆಂದರೆ ಬೇಸಾಯವಿಲ್ಲದೆ ತಾನಾಗಿ ಬೆಳೆದ ಧಾನ್ಯಾದಿಗಳಿಂದ ಬದುಕುವವರು. ವಾಲಖಿಲ್ಯರೆಂದರೆ ಹೊಸ ಧಾನ್ಯ ಸಿಕ್ಕಿದಾಗ ಹಿಂದೆ ಸಂಗ್ರಹಿಸಿದ್ದ ಧಾನ್ಯವನ್ನು ಬಿಡುವವರು. ಔದುಂಬರರೆಂದರೆ ಬೆಳಿಗ್ಗೆ ಎದ್ದಾಗ ಮುಖವು ಯಾವ ದಿಕ್ಕಿಗೆ ಇರುವುದೋ ಅದೇ ದಿಕ್ಕಿನಿಂದ ಹಣ್ಣು ಮುಂತಾದುವನ್ನು ತಂದು ಜೀವನ ನಿರ್ವಹಿಸುವವರು. ಫೇನಪರೆಂದರೆ ತಾವಾಗಿ ಮರದಿಂದ ಉದುರಿದ ಹಣ್ಣು ಮುಂತಾದವುಗಳಿಂದ ಜೀವಿಸುವವರು ಎಂದು. ವಲ್ಲಭವ್ಯಾಖ್ಯಾನ ಇನ್ನೊಂದು ಬಗೆಯಿಂದ ವಿವರಣೆ ನೀಡುತ್ತದೆ– ವಿಖನಸ್ ಎಂದರೆ ಬ್ರಹ್ಮ. ವೈಖಾನಸಸೂತ್ರದಲ್ಲಿ ಅವನು ಹೇಳಿರುವಂತೆ ಭಗವದಾರಾಧನೆಯನ್ನು ಅರಣ್ಯದಲ್ಲಿ ನಡೆಸುವವರು ವೈಖಾನಸರು. ಪಂಚಾಗ್ನಿಗಳ ನಡುವೆ ತಪಸ್ಸು ಮಾಡುತ್ತ ಬಿಸಿಲಲ್ಲಿ ಬೆಂದ ಅನ್ನ ಉಣ್ಣುತ್ತ ಕಾಡಿನಲ್ಲಿ ಬೆಳೆದುದರಿಂದಲೆ ಜೀವನ ನಿರ್ವಹಣೆ ಮಾಡುವವರು ವಾಲಖಿಲ್ಯರು. ಶರೀರದಲ್ಲಿ ಉಗುರು ರೋಮ ಮುಂತಾದವನ್ನೂ ಮಲವನ್ನೂ ಧರಿಸುತ್ತ ಹಣ್ಣುಹಂಪಲುಗಳನ್ನು ತಿನ್ನುತ್ತ ಬದುಕುವವರು ಔದುಂಬರರು.

ಕಾಡಿನಲ್ಲಿದ್ದು ಗಾಳಿ ನೀರು ಮಾತ್ರ ಸೇವಿಸುವವರು ಫೇನಪರು ಎಂದು. ಇಲ್ಲಿ ನಿರ್ಣಯವನ್ನು ಪ್ರಮಾಣಪೂರ್ವಕವಾಗಿ ನಿರ್ಣಯದಲ್ಲಿಯೇ ಕಾಣಬೇಕು–

ವೈಖಾನಸಾ ಮೂಲಭಕ್ಷಾಃ ಫಲಭಕ್ಷಾ ಉದುಂಬರಾಃ ।
ವಾಲಖಿಲ್ಯಾಃ ಸರ್ವಭಕ್ಷಾಃ ಫೇನಪಾ ವತ್ಸಫೇನಪಾಃ ॥ ಇತಿ ಚ ।

ವೈಖಾನಸರು ಗಡ್ಡೆ ಗೆಣಸು ತಿಂದು ಬದುಕುವವರು. ಉದುಂಬರರು ಹಣ್ಣುಹಂಪಲು ತಿಂದು ಬದುಕುವವರು. ವಾಲಖಿಲ್ಯರು ಗಡ್ಡೆಗೆಣಸು ಹಣ್ಣು ಹಂಪಲುಗಳೆಲ್ಲವನ್ನೂ ಉಣ್ಣುವವರು. ಫೇನಪರು ಕರುವಿನ ಬಾಯಿಂದ ಬೀಳುವ ಹಾಲಿನ ನೊರೆ ಉಣ್ಣುವವರು ಎಂದೂ ಹೇಳಿದೆ.

* * *

ಬ್ರಾಹ್ಮಣಾದಿ ವರ್ಣದವರ ಜೀವನವೃತ್ತಿಯನ್ನು ಹೇಳುವ ಶಾಸ್ತ್ರವನ್ನೂ ಪ್ರಣವ ವ್ಯಾಹೃತಿಗಳನ್ನೂ ಬ್ರಹ್ಮದೇವರು ಮುಖದಿಂದ ಸೃಜಿಸಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಆನ್ವೀಕ್ಷಿಕೀ ತ್ರಯೀ ವಾರ್ತಾ ದಂಡನೀತಿಸ್ತಥೈವ ಚ ।
ಏವಂ ವ್ಯಾಹೃತಯಶ್ಚಾಸನ್ ಪ್ರಣವೇನಾಸ್ಪದಂ ಗತಾಃ ॥ ೪೪ ॥

ತರ್ಕಶಾಸ್ತ್ರ ವೇದಗಳು, ವಾಣಿಜ್ಯಶಾಸ್ತ್ರ ರಾಜನೀತಿಶಾಸ್ತ್ರ ಮತ್ತು ತ್ರೈವರ್ಣಿಕ ಸೇವಾಪರಗ್ರಂಥಗಳು ಬ್ರಹ್ಮನ ಮುಖಗಳಿಂದ ಹುಟ್ಟಿದವು. ಹಾಗೇ ಪ್ರಣವ ವ್ಯಾಹೃತಿಗಳೂ ವ್ಯಕ್ತವಾದುವು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಆನ್ವೀಕ್ಷಿಕಿಯು ಮೋಕ್ಷಶಾಸ್ತ್ರ , ತ್ರಯಿಯು ಧರ್ಮಶಾಸ್ತ್ರ ಸ್ವರ್ಗಫಲಕ, ವಾರ್ತಾ ಕಾಮಶಾಸ್ತ್ರ ಅಂದರೆ ವಿಷಯ ಪದಾರ್ಥಸಂಪಾದಕ, ದಂಡನೀತಿ ಅರ್ಥಶಾಸ್ತ್ರ ಇವುಗಳಲ್ಲಿ ಆನ್ವೀಕ್ಷಿಕಿ ಬ್ರಾಹ್ಮಣರಿಗೆ, ತ್ರಯಿ ಕ್ಷತ್ರಿಯರಿಗೆ, ವೇದಾನುಸಾರವಾಗಿ ಯಾಗಾದಿಗಳನ್ನು ಅವರು ಮಾಡಬೇಕು. ವಾರ್ತಾ ಎಂದರೆ ಕೃಷಿ ಗೋರಕ್ಷಣೆ ಮುಂತಾದವು ವೈಶ್ಯರಿಗಾಗಿ ಇರುವುದು. ದಂಡನೀತಿ ರಾಜಧರ್ಮವಾದರೂ ಶೂದ್ರರಲ್ಲಿಯೇ ಅದರ ಉಪಯೋಗ ಎಂದು ಹೇಳಿದ್ದಾರೆ. ವ್ಯಾಹೃತಿಗಳು ಒಂದೊಂದಾಗಿ ಮತ್ತು ಒಟ್ಟಿಗೆ ಎಂದು ನಾಲ್ಕು ಮುಖಗಳಿಂದ ಹುಟ್ಟಿದುವು. ಅಥವಾ ಮೂರು ವ್ಯಾಹೃತಿಗಳೂ ಮಹಃ ಎಂಬುದಾಗಿ ನಾಲ್ಕನೇ ವ್ಯಾಹೃತಿಯೂ ನಾಲ್ಕು ಮುಖಗಳಿಂದ ಹುಟ್ಟಿದುವು. ಪ್ರಣವವು ಹೃದಯದಿಂದ ಹುಟ್ಟಿತು ಎಂದಿದ್ದಾರೆ. ಪ್ರಣವೋ ಹ್ಯಸ್ಯ ದಹ್ರತಃ, ಹೃತ್ಖತಃ, ಹೃದ್ಗತಃ ಎಂದು ಬೇರೆ ಬೇರೆ ಅಪಪಾಠಗಳನ್ನಿಟ್ಟುಕೊಂಡು ವ್ಯಾಖ್ಯಾನಿಸಿದ್ದಾರೆ. ಹೃದಯದಿಂದ

ಹೊರಟರೂ ಮುಖದಿಂದಲೆ ಹೊರಕ್ಕೆ ಬರಬೇಕು ತಾನೆ? ಎಂದರೆ ವಲ್ಲಭವ್ಯಾಖ್ಯಾನ ಹೇಳುತ್ತದೆ ಬ್ರಹ್ಮದೇವರ ಹೃದಯದಿಂದ ಪ್ರಣವ ತಾನಾಗಿ ಹೊರಬಂದಿತು. 'ಕಂಠಂ ಭಿತ್ವಾ ವಿನಿರ್ಯಯೌ' ಹೊರತು ಅವರು ಉಚ್ಚಾರಮಾಡಿಲ್ಲ ಎಂದು. ಈ ಎಲ್ಲ ಕಲ್ಪನೆಗಳು ಪ್ರಮಾಣವಿರುದ್ಧವಾಗಿವೆ–

ಆನ್ವೀಕ್ಷಿಕೀ ತಂತ್ರವಿದ್ಯಾ ಸಾ ಚ ವೇದಾನುಸಾರಿಣೀ ।
ವಿಷ್ಣುಪ್ರೋಕ್ತಾ ಶಿವಾದ್ಯುಕ್ತಾ ಜ್ಞೇಯಾ ವೇದಬಹಿಷ್ಕೃತಾ ॥

ದಂಡನೀತೀ ರಾಜಧರ್ಮಸ್ತ್ರಯೀ ವೇದಾಃ ಪ್ರಕೀರ್ತಿತಾಃ ।
ವಾರ್ತಾ ವಾಣಿಜ್ಯಕಾದಿಃ ಸ್ಯಾದ್ ಏತಾಭಿರ್ಯತ್ತು ಜೀವನಮ್ ।
ತದಾನ್ವೀಕ್ಷಿಕ್ಯಾದಿನಾಮ ಬ್ರಹ್ಮಣಾ ನಿರ್ಮಿತಂ ಪುರಾ ॥ ಇತಿ ಚ ॥

ಪ್ರಣವಃ ಪೂರ್ವವಕ್ತ್ರಾತ್ ।

ಪ್ರಣವಃ ಪೂರ್ವವಕ್ತ್ರೇಣ ಭೂರಾದ್ಯಾಶ್ಚ ಮುಖತ್ರಯಾತ್ ।
ಪ್ರದಕ್ಷಿಣಮವರ್ತಂತ ವೇದಾಶ್ಚೈವಾಶ್ರಮಾಸ್ತಥಾ ॥
ಇತಿ ಬ್ರಾಹ್ಮೇ ॥

ಆನ್ವೀಕ್ಷಿಕೀ ಎಂದರೆ ಬ್ರಹ್ಮತರ್ಕ ಬ್ರಹ್ಮಮೀಮಾಂಸಾ ಮುಂತಾದವು ವಿಷ್ಣು ಪ್ರೋಕ್ತವಾಗಿದ್ದು ವೇದಾನುಸಾರಿಯಾದವುಗಳು. ಶಿವಾದಿಗಳು ಹೇಳಿದವುಗಳು ವೇದವಿರೋಧಿಯಾಗಿವೆ. ದಂಡನೀತಿ ಎಂದರೆ ರಾಜಧರ್ಮ. ತ್ರಯೀ ಎಂದರೆ ವೇದಗಳು. ವಾರ್ತಾ ಎಂದರೆ ವಾಣಿಜ್ಯಾದಿಗಳು. ಇವುಗಳಿಂದ ಜೀವಿಸುವುದೇ ಬ್ರಹ್ಮನು ಉಪದೇಶಿಸಿದ ಆನ್ವೀಕ್ಷಿಕೀ ಮುಂತಾದವುಗಳೆನಿಸಿವೆ. ವಾಣಿಜ್ಯಾದಿಗಳೆಂಬಲ್ಲಿ ಆದಿ ಪದದಿಂದ ತ್ರೈವರ್ಣಿಕಸೇವಾರೂಪವಾದ ಶೂದ್ರಧರ್ಮವನ್ನೂ ಗ್ರಹಿಸಬೇಕು.

'ಪ್ರಣವೇನಾಸ್ಪದಂ ಗತಾಃ' ಎಂದೇ ಪಾಠ. ಪ್ರಣವದೊಂದಿಗೆ ವ್ಯಾಹೃತಿಗಳು ಬ್ರಹ್ಮನ ಮುಖಗಳಲ್ಲಿ ಆಶ್ರಯ ಪಡೆದುವು, ಎಂದರೆ ಮುಖಗಳಿಂದ ವ್ಯಕ್ತವಾದುವು ಎಂದರ್ಥ. ವ್ಯಾಹೃತಿಗಳಿಗಿಂತ ಮೊದಲಿಗೆ ಪ್ರಣವವು ಪೂರ್ವಮುಖದಿಂದ ವ್ಯಕ್ತವಾಯಿತೆಂದು ತಿಳಿಯಬೇಕು. ಬ್ರಹ್ಮಪುರಾಣದಲ್ಲಿ ಹಾಗೇ ಹೇಳಿದೆ– 'ಪ್ರಣವವು ಪೂರ್ವಮುಖದಿಂದಲೂ ಭೂರ್ಭುವಃ ಸ್ವಃ ಎಂಬ ಮೂರು ವ್ಯಾಹೃತಿಗಳು ಉಳಿದ ಮೂರು ಮುಖಗಳಿಂದಲೂ ಪ್ರದಕ್ಷಿಣಾಕಾರವಾಗಿ ವ್ಯಕ್ತವಾದುವು. ಹಾಗೇ ವೇದಗಳೂ ಆಶ್ರಮಗಳೂ ವ್ಯಕ್ತವಾದುವು' ಎಂದು.

* * *

ಸ್ಪರ್ಶ ಸ್ವರ ಊಷ್ಮ ಅಂತಸ್ಥಗಳೆಂಬ ವರ್ಣಗಳು ಬ್ರಹ್ಮದೇವರ ಅಂಗಗಳಿಂದ ವ್ಯಕ್ತವಾದ ಬಗೆಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸ್ಪರ್ಶಾಸ್ತಸ್ಯಾಭವನ್ ಜೀವಾತ್ ಸ್ವರೋ ದೇಹ ಉದಾಹೃತಃ ।
ಊಷ್ಮಾಣ ಇಂದ್ರಿಯಾಣ್ಯಾಹುರಂತಸ್ಥಾ ಬಲಮಾತ್ಮನಃ ॥ ೪೬ ॥

ಬ್ರಹ್ಮದೇವರ ಚೈತನ್ಯದಿಂದ ಸ್ಪರ್ಶಾಕ್ಷರಗಳೂ, ದೇಹದಿಂದ ಸ್ವರಾಕ್ಷರಗಳೂ, ಶ್ರೋತ್ರಾದಿ ಇಂದ್ರಿಯಗಳಿಂದ ಊಷ್ಮಾಕ್ಷರಗಳೂ, ಬಲದಿಂದ ಅಂತಸ್ಥಾಕ್ಷರಗಳೂ ವ್ಯಕ್ತವಾದುವು.

ಕಕಾರದಿಂದ ಮಕಾರವರೆಗಿನ ವರ್ಗೀಯಾಕ್ಷರಗಳು ಸ್ಪರ್ಶವೆನಿಸುತ್ತವೆ. ಅಕಾರಾದಿಗಳು ಸ್ವರಾಕ್ಷರಗಳು. ಶ ಷ ಸ ಹ ಗಳು ಊಷ್ಮಾಕ್ಷರಗಳು. ಯರಲವಗಳು ಅಂತಸ್ಥಾಕ್ಷರಗಳು.

ಇಲ್ಲಿ ಶಬ್ದಬ್ರಹ್ಮನ ಚೈತನ್ಯವೇ ಸ್ಪರ್ಶ. ದೇಹವೇ ಸ್ವರ ಎಂದು ಮುಂತಾಗಿ ವಲ್ಲಭವ್ಯಾಖ್ಯಾನ ಹೇಳಿದೆ. ವಸ್ತುತಃ ಚೈತನ್ಯದಿಂದ ಸ್ಪರ್ಶ ಹುಟ್ಟಿತೆಂದು ಚೈತನ್ಯವೇ ಸ್ಪರ್ಶ ಎಂಬ ಔಪಚಾರಿಕಪ್ರಯೋಗವಿದೆ ಎಂದು ತಿಳಿಯಬೇಕು. ಶಬ್ದಸಮೂಹವಾದ ಶಬ್ದಬ್ರಹ್ಮ ಪರಬ್ರಹ್ಮನನ್ನು ತಿಳಿಸುವಂಥದ್ದೆಂದು ವಲ್ಲಭವ್ಯಾಖ್ಯಾನವೇ ಹೇಳಿದೆ. ಹೀಗಿರುವಾಗ ಜಡವಾದ ಶಬ್ದಬ್ರಹ್ಮಕ್ಕೆ ಚೈತನ್ಯ ಎಲ್ಲಿಯದು, ದೇಹೇಂದ್ರಿಯ ಗಳೆಲ್ಲಿಯವೆಂದು ವಿಚಾರ ಮಾಡಬೇಕು. ಅದರಿಂದ ಮುಂದೆ ಹೇಳುವಂತೆ ಶಬ್ದಬ್ರಹ್ಮ ಚತುರ್ಮುಖನೆ. ಅವನ ಚೈತನ್ಯ ಶರೀರ ಇಂದ್ರಿಯ ಬಲಗಳಿಂದ ಸ್ಪರ್ಶಾದಿ ಅಕ್ಷರಗಳು ಜನಿಸಿದುವೆಂದೇ ಹೇಳಬೇಕು.

ಸ್ಪರ್ಶಾಸ್ತಸ್ಯಾಭವನ್ ಜೀವಾತ್ ಸ್ವರಾ ದೇಹಾತ್ ಪ್ರಜಜ್ಞಿರೇ ।
ಊಷ್ಮಾಣ ಇಂದ್ರಿಯೇಭ್ಯಶ್ಚ ಅಂತಸ್ಥಾ ಬಲತೋ ವಿಭೋಃ ॥
ಇತಿ ಚ ॥

ಯಸ್ಮಾದ್ ಯಜ್ಜಾಯತೇ ಚಾಂಗಾತ್ ತತ್ತದಂಗಾಭಿಧಂ ಭವೇತ್ ॥
ಇತಿ ಚ ॥

ಸ್ಪರ್ಶಗಳು ಬ್ರಹ್ಮನ ಚೈತನ್ಯದಿಂದ, ಸ್ವರಗಳು ದೇಹದಿಂದ ಊಷ್ಮಗಳು ಇಂದ್ರಿಯ ಗಳಿಂದ ಅಂತಸ್ಥಗಳು ಬಲದಿಂದ ಜನಿಸಿದವು ಎಂದೂ ಉಕ್ತವಾಗಿದೆ. ಯಾವ ಅಂಗದಿಂದ ಯಾವುದು ಹುಟ್ಟಿತೋ ಅದು ಆ ಅಂಗದ ಹೆಸರಿನಿಂದ ಕರೆಸಿ ಕೊಳ್ಳುತ್ತದೆ ಎಂದೂ ಹೇಳಿದೆ.

* * *

ಸಪ್ತಸ್ವರಗಳನ್ನೂ ಬ್ರಹ್ಮದೇವರು ಸೃಷ್ಟಿಸಿದರು. ಹೀಗೆ ಎಲ್ಲವನ್ನೂ ಸೃಷ್ಟಿ ಮಾಡುವ ಸಾಮರ್ಥ್ಯ ಅವರಲ್ಲಿದೆ ಏಕೆಂದರೆ ಅವರು ಶಬ್ದಬ್ರಹ್ಮ ಎನಿಸಿದವರು ಮತ್ತು ಮಹದಾದಿಗಳಲ್ಲಿಯೂ ಬ್ರಹ್ಮಾಂಡದಲ್ಲೂ ವ್ಯಾಪ್ತರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸ್ವರಾಃ ಸಪ್ತ ವಿಹಾರೇಣ ಭವಂತಿ ಸ್ಮ ಪ್ರಜಾಪತೇಃ ।
ಶಬ್ದಬ್ರಹ್ಮಾತ್ಮನಸ್ತಾತ ವ್ಯಕ್ತಾವ್ಯಕ್ತಾತ್ಮನಃ ಪ್ರಭೋಃ ॥ ೪೭ ॥

ಷಡ್ಜಾದಿ ಸಪ್ತಸ್ವರಗಳು ಬ್ರಹ್ಮದೇವರ ಶರೀರಸಂಚಾರಲೀಲೆಯಿಂದ ಜನಿಸಿದುವು. ಅವರು ಸರ್ವಶಬ್ದವಾಚ್ಯರು. ಮಹದಾದಿಗಳಲ್ಲಿಯೂ ಬ್ರಹ್ಮಾಂಡದಲ್ಲಿಯೂ ಎಲ್ಲ ಕಡೆ ವ್ಯಾಪ್ತರು.

ಇಲ್ಲಿ ಶಬ್ದಬ್ರಹ್ಮವೆಂದರೆ ಶಬ್ದವೇ ಬ್ರಹ್ಮನ ಶರೀರ. ಶಬ್ದವು ವ್ಯಕ್ತ ಅವ್ಯಕ್ತ ಎಂದು ಎರಡು ವಿಧ. ಅವ್ಯಕ್ತಶಬ್ದವೆಂದರೆ ಪ್ರಣವ. ವ್ಯಕ್ತಶಬ್ದವೆಂದರೆ ವೇದ. ''ಪ್ರಣವವಾಚ್ಯನಾದ ಪರಬ್ರಹ್ಮ ನಾನೇ, ವೇದಪ್ರತಿಪಾದ್ಯರಾದ ಇಂದ್ರಾದಿ ದೇವತೆಗಳೂ ನಾನೇ'' ಎಂದು ಬ್ರಹ್ಮ ಉಪಾಸನೆ ಮಾಡುತ್ತಾನೆ ಎಂದು ಶ್ರೀಧರ ವ್ಯಾಖ್ಯಾನ. ಶಬ್ದಬ್ರಹ್ಮವೆಂದರೆ ವೇದ, ಅದು ಬ್ರಹ್ಮನ ಶರೀರ. ಅದರಿಂದ ಅವನಿಗೆ ಪರಬ್ರಹ್ಮನು ನಿರ್ಗುಣೋಪಾಸನೆಯಲ್ಲಿ ಬ್ರಹ್ಮನಾಗಿ ಕಾಣುತ್ತಾನೆ, ಸಗುಣೋಪಾಸನೆಯಲ್ಲಿ ಭಗವಂತನಾಗಿ ತೋರುತ್ತಾನೆ. ಅದರಿಂದ ಕನ್ಯಾನುಗಮನರೂಪ ದೋಷವಿಲ್ಲ ಎಂದು ವಿಶ್ವನಾಥವ್ಯಾಖ್ಯಾನ. ಅವನಿಂದ ಶಬ್ದರೂಪವಾದ ಬ್ರಹ್ಮ ಶ್ರುತಿಸ್ಮೃತಿರೂಪದಿಂದ ವಿಸ್ತಾರಗೊಳ್ಳುತ್ತದೆ ಎಂದು ವೀರರಾಘವವ್ಯಾಖ್ಯಾನ. ಬ್ರಹ್ಮಕಲ್ಪದಲ್ಲಿ ಶಬ್ದಬ್ರಹ್ಮಶರೀರನಾದ, ಪದ್ಮಕಲ್ಪದಲ್ಲಿ ಚತುರ್ಮುಖನಾದ. ಅದರಿಂದ ಹಿಂದೆ ಅವ್ಯಕ್ತನಾಗಿದ್ದವನು ಈಗ ವ್ಯಕ್ತನಾಗಿ ನಾನಾಶಕ್ತಿಯುಕ್ತನಾಗಿದ್ದಾನೆ. ಅದರಿಂದ ಅವನಿಗೆ ಪರಮಾತ್ಮನೂ ಪರಮಾತ್ಮಪ್ರತಿಪಾದಕವಾದ ವೇದವೂ ತೋರುತ್ತದೆ. ಅದರಿಂದ ಪ್ರಪಂಚಸೃಷ್ಟಿಸಾಮರ್ಥ್ಯ ಎಂದು ಶುಕದೇವವ್ಯಾಖ್ಯಾನ. ಶಬ್ದಬ್ರಹ್ಮದಿಂದಲೆ ಪರಬ್ರಹ್ಮ ಪ್ರಕಾಶವಾಗಬೇಕು. ಆ ಶಬ್ದಬ್ರಹ್ಮ ಕೆಲವೆಡೆ ಅವ್ಯಕ್ತ ಕೆಲವೆಡೆ ವ್ಯಕ್ತವಿರುತ್ತದೆ. ಅದರಿಂದಲೆ ಪರಬ್ರಹ್ಮ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ ಎಂದು ವಲ್ಲಭವ್ಯಾಖ್ಯಾನ.

ವಸ್ತುತಃ ಶಬ್ದಬ್ರಹ್ಮ ಚತುರ್ಮುಖನೆ. ಬ್ರಹ್ಮಾಂಡವೇ ಅವನಿಗೆ ಶರೀರದಂತಿರುವಾಗ ಶಬ್ದವೂ ಅವನಿಗೆ ಶರೀರವೆಂದರೆ ತಪ್ಪಾಗುವುದಿಲ್ಲ ಆದರೂ ಅವನಿಗೆ ಶಬ್ದಬ್ರಹ್ಮ ಎಂಬ ಹೆಸರು ಬರಲು ಅದು ಕಾರಣವಲ್ಲ. ಅವನು ವ್ಯಕ್ತಾವ್ಯಕ್ತನೆನಿಸಲೂ ಬೇರೆ ವ್ಯಾಖ್ಯಾನಕಾರರು ಹೇಳಿದ್ದು ಸರಿಯಾದ ಕಾರಣವಲ್ಲ.

ಶಬ್ದಬ್ರಹ್ಮಾತ್ಮಕೋ ಬ್ರಹ್ಮಾ ಸರ್ವಶಬ್ದಾಭಿಧೋ ಯತಃ ।
ಋತೇ ನಾರಾಯಣಾದೀನಿ ನಾಮ್ನಾಂ ಸ ವಿಷಯೋ ಯತಃ ॥

ವ್ಯಕ್ತಂ ಬ್ರಹ್ಮಾಂಡಮುದ್ದಿಷ್ಟಮವ್ಯಕ್ತಂ ಮಹದಾದಿ ಚ ।
ತದ್ವ್ಯಾಪಕತ್ವಾದ್ ಬ್ರಹ್ಮಾ ತು ವ್ಯಕ್ತಾವ್ಯಕ್ತಾತ್ಮಕಃ ಸ್ಮೃತಃ ॥
ಇತಿ ಚ ॥

ನಾರಾಯಣ ಮುಂತಾದ ನಾಮಗಳು ಹೊರತಾಗಿ ಬೇರೆ ಎಲ್ಲ ಶಬ್ದಗಳೂ ಚತುರ್ಮುಖನ ಹೆಸರುಗಳಾದ್ದರಿಂದ ಅವನು ಶಬ್ದಬ್ರಹ್ಮ ಎನಿಸಿದ್ದಾನೆ. ಬ್ರಹ್ಮಾಂಡವು ವ್ಯಕ್ತ. ಮಹದಾದಿಗಳು ಅವ್ಯಕ್ತ. ಈ ಎರಡರಲ್ಲಿಯೂ ಚತುರ್ಮುಖನು ವ್ಯಾಪಿಸಿರುವುದರಿಂದ ಅವನು ವ್ಯಕ್ತಾವ್ಯಕ್ತನೆನಿಸಿದ್ದಾನೆ ಎಂದೂ ಹೇಳಿದೆ.

* * *

ಮರೀಚಿ ಮುಂತಾದ ಮಹರ್ಷಿಗಳಿಂದಲೂ ನಡೆದ ಸೃಷ್ಟಿಕಾರ್ಯ ಏನೂ ಸಾಲದೆಂದು ಬ್ರಹ್ಮದೇವರು ಆಲೋಚಿಸಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಋಷೀಣಾಂ ಭೂರಿವೀರ್ಯಾಣಾಮಪಿ ಸರ್ಗಮವಿಸ್ತೃತಮ್ ।
ಜ್ಞಾತ್ವಾತದ್ಧೃದಯೇ ಭೂಯಶ್ಚಿಂತಯಾಮಾಸ ಕೌರವ ॥ ೪೯ ॥

ಮಹಾಸಾಮರ್ಥ್ಯ ಉಳ್ಳ ಮರೀಚಿ ಮುಂತಾದ ಋಷಿಗಳೂ ಮಾಡಿದ ಸೃಷ್ಟಿ ಸಾಲದೆಂದು ತಿಳಿದು ಅದನ್ನು ಬೆಳಸಲು ಉಪಾಯವನ್ನು ಚತುರ್ಮುಖನು ಆಲೋಚಿಸಿದನು.

ಚತುರ್ಮುಖನ ಈ ಆಲೋಚನೆಯ ಬಗ್ಗೆ ಮರೀಚಿ ಮುಂತಾದವರ ಸೃಷ್ಟಿಯ ಅನಂತರ ಅಲ್ಲಿಯೇ ಹೇಳಬೇಕಾಗಿತ್ತು ನಡುವೆ ವೇದಾದಿಗಳ ಸೃಷ್ಟಿಯನ್ನು ಹೇಳಿ ಹಿಂದಿನ ಆಲೋಚನೆಯ ಬಗ್ಗೆ ಈಗ ಹೇಳುವುದೇಕೆ? ಅದು ಅಪ್ರಸ್ತುತ ವಾಗುವುದಿಲ್ಲವೆ? ಎಂಬ ಪ್ರಶ್ನೆ ಬರುತ್ತದೆ. ಇದರ ಆಲೋಚನೆಯನ್ನು ಬೇರೆ ವ್ಯಾಖ್ಯಾನಕಾರರು ಮಾಡಿಲ್ಲ. ಉತ್ತರ ಹೀಗೆ–

'ಋಷೀಣಾಂ ಭೂರಿವೀರ್ಯಾಣಾಂ' ಇತಿ ಸಿಂಹಾವಲೋಕನಮ್ ।

ಯತ್ರ ಪಶ್ಚಾತ್ತನಃ ಶ್ರೇಷ್ಠಸ್ತತ್ರ ಸಿಂಹಾವಲೋಕನಮ್ ॥
ಇತಿ ಬ್ರಹ್ಮತರ್ಕೇ ॥

'ಋಷೀಣಾಂ ಭೂರಿವೀರ್ಯಾಣಾಂ' ಎಂದು ಹಿಂದೆ ನಡೆದ ವೃತ್ತಾಂತವನ್ನು ಈಗ ಹೇಳುವುದು ಸಿಂಹಾವಲೋಕನವೆನಿಸುತ್ತದೆ. 'ಮುಂದೆ ಹೇಳುವ ವಿಷಯ ಹೆಚ್ಚು ಪ್ರಾಮುಖ್ಯತೆ ಉಳ್ಳದ್ದಾದರೆ ಅದಕ್ಕೆ ಹಿಂದೆ ಹೇಳಿದ ವಿಷಯವನ್ನು ತಿರುಗಿ ಹೇಳುವುದು ಸಿಂಹಾವಲೋಕನವೆನಿಸುತ್ತದೆ' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಮುಂದೆ ಹೇಳುವ ಸ್ವಾಯಂಭುವಮನುವಿನ ಸೃಷ್ಟಿ ಹೆಚ್ಚಿನ ಪ್ರಾಮುಖ್ಯತೆ ಉಳ್ಳದ್ದಾದ್ದರಿಂದ ಅದಕ್ಕೆ ಹಿಂದೆ ಹೇಳಿದ ಮರೀಚಿ ಮುಂತಾದ ಋಷಿಗಳ ಸೃಷ್ಟಿಯನ್ನು ತಿರುಗಿ ಹೇಳಿದ್ದಾರೆ. ಇದೊಂದು ರೀತಿಯ ಸಂಗತಿ. ಅದರಿಂದ ಅಸಂಗತಿ ಇಲ್ಲ. ಇದು ಸಿಂಹಾವಲೋಕನವೆನಿಸುತ್ತದೆ.

* * *

ಹಿಂದೆ ಮಾಡಿದಂತೆ ಮನಸ್ಸಿನಿಂದ ಮತ್ತು ಶರೀರದ ಅವಯವಗಳಿಂದ ಸೃಷ್ಟಿ ಮಾಡುವ ವಿಧಾನ ತೃಪ್ತಿಕರವಲ್ಲ. ಸ್ತ್ರೀಪುರುಷರ ಮೇಲನದಿಂದ ಸೃಷ್ಟಿ ಮಾಡುವುದೇ ಸರಿಯಾದ ವಿಧಾನವೆಂದು ತಿಳಿದು ಬ್ರಹ್ಮದೇವರು ತನ್ನ ಶರೀರವನ್ನೆ ಸ್ತ್ರೀ ಪುರುಷರೂಪವಾಗಿ ಎರಡಾಗಿ ಮಾಡಿಕೊಂಡರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಏವಂ ಯುಕ್ತಿಮತಸ್ತಸ್ಯ ದೈವಂ ಚಾಪೇಕ್ಷತಸ್ತದಾ ।
ಕಸ್ಯ ರೂಪಮಭೂದ್ ದ್ವೇಧಾ ಯತ್ ಕಾಯಮಭಿಚಕ್ಷತೇ ॥ ೫೧ ॥

ಹೀಗೆ ಆಲೋಚಿಸಿ ಪರಮಾತ್ಮನ ಅನುಗ್ರಹವನ್ನು ಅಪೇಕ್ಷಿಸುತ್ತಿದ್ದ ಬ್ರಹ್ಮದೇವರ ಶರೀರ ಸ್ತ್ರೀಪುರುಷ ರೂಪವಾಗಿ ಎರಡಾಗಿ ವಿಭಾಗ ಹೊಂದಿತು, ಅಂದರೆ ಅರ್ಧನಾರೀನರರೂಪದಿಂದಿದ್ದ ಬ್ರಹ್ಮಶರೀರ ಈಗ ಸರಸ್ವತೀ ಮತ್ತು ಬ್ರಹ್ಮ ಎಂದು ಎರಡಾಗಿ ವಿಭಾಗ ಹೊಂದಿತು, 'ಕ' ಎನಿಸುವ ಬ್ರಹ್ಮನು ಹೊಂದಿದ್ದರಿಂದ ಆ ಎರಡು ಶರೀರಗಳು 'ಕಾಯ'ವೆನಿಸಿದುವು.

ಇಲ್ಲಿ ವೀರರಾಘವ ವ್ಯಾಖ್ಯಾನ ಪ್ರಕಾರ ಬ್ರಹ್ಮನ ಒಂದು ಶರೀರ ಎರಡು ಭಾಗವಾಗಿಲ್ಲ. ಬೇರೆ ಒಂದು ಸ್ತ್ರೀ ಶರೀರವನ್ನು ತನಗಾಗಿ ಸೃಷ್ಟಿಸಿದರು. ಅದರಿಂದ ತನಗೆ ಈಗ ಎರಡು ಶರೀರಗಳು. ಹಿಂದೆ ದೇವ ಅಸುರ ಮುಂತಾದವರನ್ನು ಸೃಷ್ಟಿ ಮಾಡುವಾಗ ಬ್ರಹ್ಮದೇವರು ಒಂದೊಂದು ರೂಪ ಗ್ರಹಣ ಮಾಡಿ ಅದರಿಂದ ಸೃಷ್ಟಿಯಾದ ಬಳಿಕ ಆ ರೂಪ ತ್ಯಾಗ ಮಾಡಿದರೆಂದು ಹೇಳಿದ್ದರೂ ಅದು ವಸ್ತುತಃ ರೂಪಗ್ರಹಣ ತ್ಯಾಗವಾಗಿರಲಿಲ್ಲ. ಕೇವಲ ಮನಸ್ಸಿನಲ್ಲಿ ಹಾಗೆ ಭಾವಗಳನ್ನು ಗ್ರಹಣ ಮಾಡಿ ತ್ಯಾಗ ಮಾಡಿದ್ದರಷ್ಟೆ. ಈಗ ಹಾಗಲ್ಲ. ಶರೀರವನ್ನು ಗ್ರಹಣ ಮಾಡಿದರು. ಈಗ ಸ್ವೀಕರಿಸಿದ ಎರಡು ರೂಪಗಳು 'ಕಾಯ' ಎಂದರೆ ಶರೀರಗಳೇ ಆಗಿದ್ದುವು

ಹೊರತು ಬರಿ ಭಾವಗಳಲ್ಲ ಎಂದರ್ಥ. ಹೀಗೆ ವೀರರಾಘವವ್ಯಾಖ್ಯಾನ ಹೇಳಿದೆ. ಆದರೆ 'ಕಸ್ಯ ರೂಪಂ ಕಾಯಂ ಅಭಿಚಕ್ಷತೇ' ಎಂದು 'ಕಾಯ'ಶಬ್ದದ ನಿರ್ವಚನ ಮಾಡುತ್ತಿರುವುದು ಸ್ಪಷ್ಟವಿದೆ. ರೂಪವು ಕೇವಲ ಭಾವವಾಗಿರಲಿಲ್ಲ, ಕಾಯವೇ ಆಗಿತ್ತು ಎಂದು ಹೇಳುವ ಅಭಿಪ್ರಾಯ ಕಾಣುವುದಿಲ್ಲ.

ವಲ್ಲಭವ್ಯಾಖ್ಯಾನದಲ್ಲಿ 'ಕಾ ಇಯಂ ಕೋಽಯಂ' ಯಾರಿವಳು? ಯಾರೀತ? ಎಂದು ಜನರು ಹೇಳಿದರು. 'ಕಾ ಇಯಂ' ಎಂಬಲ್ಲಿ ವಿಶೇಷ್ಯವಾದ 'ಇಯಂ' ಎಂಬುದನ್ನೂ 'ಕೋಽಯಂ' ಎಂಬಲ್ಲಿ ವಿಶೇಷಣವಾದ 'ಕೋ' ಎಂಬುದನ್ನೂ ಲೋಪ ಮಾಡಿ 'ಕಾಯಂ' ಎಂದರು. ಏಕೆಂದರೆ ಸ್ತ್ರೀಯು ಯಾವಾಗಲೂ ವಿಶೇಷಣವಾಗಿರುತ್ತಾಳೆ. ಅದಕ್ಕೆ ವಿಶೇಷ್ಯ ಲೋಪ. ಪುರುಷನು ವಿಶೇಷ್ಯನಾಗಿರುತ್ತಾನೆ ಅದಕ್ಕೆ ವಿಶೇಷಣಲೋಪ. ಈಗ ಉಳಿದ ವಿಶೇಷಣ ವಿಶೇಷ್ಯಗಳನ್ನು ಸೇರಿಸಿದರೆ ಒಂದು ವಿಶಿಷ್ಟವಾದ ಸ್ತ್ರೀಪುರುಷರ ಜೋಡಿಯಾಗುತ್ತದೆ, ಎಂದಿದ್ದಾರೆ. ಆದರೆ ಇದೂ ಕೂಡ 'ಕಸ್ಯ ರೂಪಂ ಕಾಯಂ ಅಭಿಚಕ್ಷತೇ' ಎಂಬ ಭಾಗವತ ವಾಕ್ಯಸ್ವಾರಸ್ಯಕ್ಕೆ ಅನುಗುಣವಲ್ಲ. ಅಲ್ಲಿ 'ಕಸ್ಯ' ಎಂಬುದು ಕಿಂಶಬ್ದದ ರೂಪವಲ್ಲ. 'ಕಾಯಂ' ಎಂಬಲ್ಲಿ 'ಕಾ' ಎಂಬುದು ಕಿಂಶಬ್ದದರೂಪವೆಂದೂ 'ಯಂ' ಎಂಬುದು 'ಅಯಂ' ಎಂದು ಇದಂಶಬ್ದರೂಪವೆಂದೂ ಹೇಳಿದರೆ ಅದು ಮಕಾರಾಂತ ಶಬ್ದವಾದೀತು, ಅಕಾರಾಂತ ಕಾಯಶಬ್ದವಲ್ಲ ಎಂದಾದೀತು. ಅದರಿಂದ ಹೀಗೆ ಹೇಳಬೇಕು–

ಕೇನ ಪ್ರಾಪ್ತತ್ವಾತ್ ಕಾಯಃ ॥

'ಕ' ಎಂದರೆ ಬ್ರಹ್ಮದೇವರು. ಅವರಿಂದ ಸ್ವೀಕೃತವಾಗಿರುವ ಕಾರಣ ಎರಡೂ ಶರೀರಗಳು 'ಕಾಯ' ಎನಿಸಿದುವು.

ಅಯ ಪಯ ಗತೌ ಧಾತು. 'ಕೇನ ಬ್ರಹ್ಮಣಾ ಅಯ್ಯತೇ ಪ್ರಾಪ್ಯತೇ' ಎಂದು ವಿಗ್ರಹದಿಂದ ಬ್ರಹ್ಮದೇವರು ಸ್ವೀಕರಿಸಿರುವ ಎರಡೂ ರೂಪಗಳು ಕ+ಅಯ= ಕಾಯ ಎನಿಸಿದುವು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ತ್ರಯೋದಶಾಧ್ಯಾಯಃ

—೦—

ಅಧ್ಯಾಯ–೧೩

ಅಧ್ಯಾಯಸಾರಾಂಶ

ಬ್ರಹ್ಮನಾಜ್ಞೆಯಂತೆ ಸ್ವಾಯಂಭುವ ಮನು ಸೃಷ್ಟಿಯನ್ನು ಮುಂದುವರಿಸಲು ಒಪ್ಪಿದ. ಆದರೆ ಅಷ್ಟರಲ್ಲಿ ಭೂಮಿ ಸಮುದ್ರದಾಳಕ್ಕೆ ಮುಳುಗಿತ್ತು. ಅದಕ್ಕೆ ಬ್ರಹ್ಮನ ಮೂಗಿನಿಂದ ಶ್ರೀಹರಿಯ ವರಾಹಾವತಾರವಾಯಿತು. ವರಾಹ ನೀರಲ್ಲಿ ಮುಳುಗಿ ಭೂಮಿಯನ್ನೆತ್ತಿ ತಂದ. ಆಗ ಅಡ್ಡಿ ಮಾಡಲು ಬಂದ ಆದಿ ಹಿರಣ್ಯಾಕ್ಷನನ್ನು ದಾಡೆಯಿಂದ ತಿವಿದು ಕೊಂದ. ಮುಂದೆ ದೈತ್ಯಹಿರಣ್ಯಾಕ್ಷನನ್ನೂ ಈ ವರಾಹ ಹೊಡೆದು ಕೊಲ್ಲುತ್ತಾನೆ. ಯಜ್ಞೋಪಯೋಗಿಯಾದ ಎಲ್ಲ ಪದಾರ್ಥಗಳನ್ನು ತನ್ನ ಅಂಗಗಳಿಂದ ನಿರ್ಮಿಸಿದ ಈ ಯಜ್ಞವರಾಹನನ್ನು ದೇವತೆಗಳು ಸ್ತುತಿಸುತ್ತಾರೆ.

* * *

ಮೈತ್ರೇಯರು ವಿದುರನಿಗೆ ಹೇಳುತ್ತಾರೆ– 'ಪತ್ನಿಯೊಂದಿಗೆ ಜನಿಸಿದ ಸ್ವಾಯಂಭುವ ಮನು ಬ್ರಹ್ಮದೇವರಿಗೆ ಕೈ ಮುಗಿದು ಕೇಳುತ್ತಾನೆ, 'ಪೂಜ್ಯರೆ, ನಮ್ಮಿಂದಾಗಬಹುದಾದ ಕರ್ಮಗಳಲ್ಲಿ ಯಾವುದು ನಿಮ್ಮ ಆರಾಧನೆ ಎನಿಸೀತು, ನಮಗೆ ಆಜ್ಞೆ ಮಾಡಿರಿ' ಎಂದು.

ತ್ವಮೇಕಃ ಸರ್ವಭೂತಾನಾಂ ಜನ್ಮಕೃದ್ ವೃತ್ತಿದಃ ಪಿತಾ ।
ಅಥಾಪಿ ನಃ ಪ್ರಜಾನಾಂ ತೇ ಶುಶ್ರೂಷಾ ಕೇನ ವಾ ಭವೇತ್ ॥ ೭ ॥

ತದ್ ವಿಧೇಹಿ ನಮಸ್ತುಭ್ಯಂ ಕರ್ಮಸ್ವಿಜ್ಯಾತ್ಮಶಕ್ತಿಷು ।
ಯತ್ ಕೃತ್ವೇಹ ಯಶೋ ವಿಷ್ವಗಮುತ್ರ ಚ ಭವೇದ್ ಗತಿಃ ॥ ೮ ॥

ನೀನೊಬ್ಬನೆ ಎಲ್ಲರಿಗೂ ಜನ್ಮಕೊಡುವ, ಜೀವನವನ್ನು ಕಲ್ಪಿಸುವ ತಂದೆಯಾಗಿರುವೆ. ನಿನಗೆ ಯಾರಿಂದಲೂ ಏನಾಗಬೇಕಾಗಿಲ್ಲ. ಆದರೂ, ಪೂಜ್ಯನೇ, ನಿನಗಿದೋ ನಮಸ್ಕಾರ, ನಮ್ಮಿಂದಾಗಬಹುದಾದ ಕರ್ಮಗಳಲ್ಲಿ ಯಾವುದರಿಂದ ನಿನ್ನ ಸೇವೆ

ಮಾಡಿದಂತಾದೀತು, ಅದನ್ನು ನಿನ್ನ ಮಕ್ಕಳಾದ ನಮಗೆ ಆಜ್ಞೆಮಾಡು. ಯಾವ ಕರ್ಮ ಮಾಡಿದರೆ ಈ ಲೋಕದಲ್ಲಿ ಎಲ್ಲಡೆ ಕೀರ್ತಿಯೂ ಪರಲೋಕದಲ್ಲಿ ಉತ್ತಮಗತಿಯೂ ಉಂಟಾದೀತು ಹೇಳು.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಕರ್ಮಸ್ವೀಡ್ಯಾತ್ಮಶಕ್ತಿಷು' ಎಂದು ಅಪಪಾಠವಿಟ್ಟುಕೊಂಡು 'ಈಡ್ಯ! ಸ್ತೋತ್ರಾರ್ಹನೇ!' ಎಂದು ಸಂಬೋಧನವಿಟ್ಟುಕೊಂಡಿದ್ದಾರೆ. ಆಗ ಆ ಸಂಬೋಧನೆ ವ್ಯರ್ಥ. ಮತ್ತು 'ಸ್ತೋತ್ರಕರ್ಮವೇ ನಿನ್ನ ಸೇವೆ' ಎಂದು ಮನು ತಾನೇ ಹೇಳಿದಂತಾದೀತು. ವಸ್ತುತಃ 'ಕರ್ಮಸ್ವಿಜ್ಯಾತ್ಮಶಕ್ತಿಷು' ಎಂದೇ ಸರಿಯಾದ ಪಾಠ. ಈ ಪಾಠದಲ್ಲಿ 'ಕರ್ಮಸು ಇಜ್ಯಾ ಆತ್ಮಶಕ್ತಿಷು' ಎಂದು ಪದವಿಭಾಗ ಮಾಡಿದರೆ 'ಶೂಶ್ರೂಷಾ ಕೇನ ವಾ ಭವೇತ್', 'ಇಜ್ಯಾ ಕೇನ ವಾ ಭವೇತ್' ಎನ್ನುವುದು ಪುನರುಕ್ತವಾದೀತು. 'ಇಜ್ಯ' ಎಂದು ಸಂಬೋಧನೆ. 'ಹೇ ಇಜ್ಯ ಪೂಜ್ಯನೇ, ನಿನ್ನ ಪೂಜೆ, ಶುಶ್ರೂಷೆ ಯಾವ ಕರ್ಮದಿಂದಾದೀತು' ಎಂದು ಪ್ರಶ್ನೆ ಸಂಗತವಾಗುತ್ತದೆ. ಅದರಿಂದ ಶ್ರೀಮದಾಚಾರ್ಯರು ಶ್ಲೋಕಪಾಠ, ಪದವಿಭಾಗಗಳೆರಡನ್ನೂ ಈ ಎರಡು ಅಕ್ಷರಗಳಿಂದ ತಿಳಿಸುತ್ತಾರೆ–

ಇಜ್ಯ ।

'ಕರ್ಮಸು ಇಜ್ಯ' ಎಂದು ಪದವಿಭಾಗ.

ವಿಜಯಧ್ವಜೀಯದಲ್ಲಿ 'ಇತೋಽಪಿ ಭಗವಚ್ಛುಶ್ರೂಷಾ ಕರ್ತವ್ಯೇತ್ಯಾಹ ಕರ್ಮಸ್ವಿತಿ' 'ಬ್ರಹ್ಮನ ಶುಶ್ರೂಷೆ ಏಕೆ' ಮಾಡಬೇಕೆನ್ನಲು ಕಾರಣವನ್ನು ಹೇಳುತ್ತಾನೆ ಮನು' ಎಂದು ಅವತಾರಿಕೆ ಇರುವುದರಿಂದ 'ಆತ್ಮಶಕ್ತಿಷು ಕರ್ಮಸು ಇಜ್ಯ ಪೂಜ್ಯ' 'ನಮ್ಮೆಲ್ಲ ಕರ್ಮಗಳಲ್ಲಿಯೂ ನೀನು ಪೂಜ್ಯನೆಂದೇ ಕಾರಣವನ್ನು ಹೇಳಲಾಗಿದೆ. 'ಇಜ್ಯಾ ಪೂಜಾ' ಎಂಬುದು ಅಲ್ಲಿ ಸರಿಯಾದ ಪಾಠವಲ್ಲ. ಅನಂತತೀರ್ಥೀಯದಲ್ಲಿ ಸ್ಪಷ್ಟವಾಗಿಯೇ 'ಇಜ್ಯ ಯಜನೀಯ ಇತಿ ಸಂಬೋಧನಮ್' ಎಂದಿದೆ.

ಯಾದುಪತ್ಯದಲ್ಲಿ 'ಇಜ್ಯಾ' ಎಂದೇ ಪದವಿಭಾಗ ಮಾಡಿ 'ಪೂಜಾರೂಪವಾದ ಕರ್ಮಗಳಲ್ಲಿ ಯಾವ ಕರ್ಮದಿಂದ ನಿನ್ನ ಪೂಜೆಯಾದೀತು?' ಎಂದು ವ್ಯಾಖ್ಯಾನಿಸಿಲಾಗಿದೆ. ಪೂಜಾರೂಪಕರ್ಮಗಳೆಲ್ಲವುಗಳಿಂದಲೂ ಪೂಜೆಯಾಗಲೇ ಬೇಕಷ್ಟೆ? ಪ್ರಶ್ನೆ ಏನು? ಎಂದು ಆಕ್ಷೇಪಕ್ಕೆ ಅವಕಾಶವಿದೆ. ಆದರೆ ಪೂಜಾರೂಪ ಕರ್ಮಗಳಲ್ಲಿ ಯಾವ ಕರ್ಮದಿಂದ ಹೆಚ್ಚಿನ ಪೂಜೆಯಾದೀತೆಂದು ಪ್ರಶ್ನೆಯ ಅಭಿಪ್ರಾಯವೆಂದು ಪರಿಹಾರವನ್ನು ಸತ್ಯಾಭಿನವತೀರ್ಥೀಯದಲ್ಲಿ ಹೇಳಿದ್ದಾರೆ ಮುಂದೆ,

ಪರಂ ಶುಶ್ರೂಷಣಂ ಮಹ್ಯಂ ಸ್ಯಾತ್ ಪ್ರಜಾರಕ್ಷಯಾ ನೃಪ ।

ಪ್ರಜಾಪಾಲನೆಯಿಂದಲೇ ನನಗೆ 'ಪರಂ' ಹೆಚ್ಚಿನ ಪೂಜೆ ಮಾಡಿದಂತಾಗುವುದೆಂದು ಬ್ರಹ್ಮದೇವರು ಹೇಳುವುದರಿಂದ ಈ ಪರಿಹಾರ ಸಂಗತವೇ ಆಗಿದೆ.

* * *

ಸ್ವಾಯಂಭುವ ಮನು ಬ್ರಹ್ಮದೇವರಲ್ಲಿ ನಾನು ನಿಮಗೆ ಯಾವ ರೀತಿಯಿಂದ ಸೇವೆ ಮಾಡಬೇಕು, ಅಪ್ಪಣೆ ಕೊಡಿರೆಂದು ಕೇಳಿದಾಗ ಪ್ರಜೆಗಳನ್ನು ಸೃಷ್ಟಿ ಮಾಡಿ ಪಾಲನ ಮಾಡು ಎಂದರು ಬ್ರಹ್ಮದೇವರು. ಅಷ್ಟರಲ್ಲಿ ಭೂಮಿ ಪ್ರಳಯಜಲದಲ್ಲಿ ಮುಳುಗಿಹೊಗಿತ್ತು. ಪ್ರಜಾಸೃಷ್ಟಿ ಹೇಗೆ ಎಂಬುದು ಸಮಸ್ಯೆಯಾಯಿತು. ಆಗ ಶ್ರೀಹರಿ ಬ್ರಹ್ಮನ ಮೂಗಿನಿಂದ ವರಾಹನಾಗಿ ಅವತರಿಸಿ ನೀರನ್ನು ಹೊಕ್ಕು ಭೂಮಿಯನ್ನು ಎತ್ತಿ ತಂದ. ಆಗ ನಡುವೆ ಆದಿಹಿರಣ್ಯಾಕ್ಷ ಅಡ್ಡಿ ಮಾಡಿದ. ವರಾಹಮೂರ್ತಿ ಅವನನ್ನು ಕೋರೆದಾಡೆಯಿಂದ ಸೀಳಿ ವಧಿಸಿದ.

ಸ್ವದಂಷ್ಟ್ರಯೋದ್ಧೃತ್ಯ ಮಹೀಂ ವಿಲಗ್ನಾಂ
ಸ ಉತ್ಥಿತಃ ಸಂರುರುಹೇ ರಸಾಯಾಃ ।
ತತ್ರಾಪಿ ದೈತ್ಯಂ ಗದಯಾಽಽಪತಂತಂ
ಸುನಾಭಸಂದೀಪಿತತೀವ್ರಮನ್ಯುಃ ॥ ೩೩ ॥

ಜಘಾನ ರುಂಧಾನಮಸಹ್ಯವಿಕ್ರಮಃ
ಸ ಲೀಲಯೇಭಂ ಮೃಗರಾಡಿವಾಂಭಸಿ ।
ತದ್ರಕ್ತಪಂಕಾಂಕಿತತುಂಡಗಂಡೋ
ಯಥಾ ಗಜೇಂದ್ರೋ ಜಗತೀಂ ವಿಭಿಂದನ್ ॥ ೩೪ ॥

ರಸಾತಲದಲ್ಲಿ ತಳ ಊರಿದ್ದ ಭೂಮಿಯನ್ನು ವರಾಹಮೂರ್ತಿ ದಾಡೆಯಿಂದೆತ್ತಿ ಮೇಲೆ ತರುತ್ತಿದ್ದಾಗ ಹಿರಣ್ಯಾಕ್ಷ ಗದಾಪಾಣಿಯಾಗಿ ಬಂದು ಇದಿರಿಸಿದ. ಬೇಗನೆ ವಧ ಮಾಡು ವಿಲಂಬವೇಕೆ ಎಂದು ಸುದರ್ಶನ ಚಕ್ರವು ಮಾಡಿದ ಪ್ರಾರ್ಥನೆಯಿಂದ ವರಾಹನ ಕೋಪ ವ್ಯಕ್ತವಾಯಿತು. ಆ ಕೋಪದಿಂದ ಸುದರ್ಶನ ಚಕ್ರದಂತೆ ಉರಿಯುತ್ತ ಕೋರೆದಾಡೆಯಿಂದ ವರಾಹನು ಅವನನ್ನು ಸೀಳಿ ಸಿಂಹ ಆನೆಯನ್ನು ಹೇಗೋ ಹಾಗೇ ಅನಾಯಾಸವಾಗಿ ಕೊಂದ. ಅವನ ರಕ್ತದಿಂದ ವರಾಹನ ದಾಡೆ ಕೆಂಪಾಯಿತು. ಕೆಂಪುಮಣ್ಣಿನಲ್ಲಿ ಮಣ್ಣುಸೀಳುವ ಆಟವಾಡಿ ಬಂದ ಗಜರಾಜನಂತೆ ಆತ ವಿರಾಜಿಸಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಮುಂದಿನ ಅಧ್ಯಾಯದಲ್ಲಿ ಹೇಳುವ ಹಿರಣ್ಯಾಕ್ಷವಧ ಕಥೆಯು ಇಲ್ಲಿ ಹೇಳಿದ ಕಥೆಯ ವಿಸ್ತಾರರೂಪವೇ ಹೊರತು ಬೇರೆ

ಕಥೆಯಲ್ಲ. ಸ್ವಾಯಂಭುವಮನ್ವಂತರದಲ್ಲಿ ಬ್ರಹ್ಮನ ಮೂಗಿನ ಹೊಳ್ಳೆಯಿಂದ ಆವಿರ್ಭವಿಸಿದ ಆದಿಶ್ವೇತವರಾಹ ಭೂಮಿಯನ್ನು ಎತ್ತಿ ಸಮುದ್ರದ ಮೇಲೆ ನಿಲ್ಲಿಸಿ ಹೊರಟುಹೋದ. ಆಗ ಅವನನ್ನು ತಡೆಯಲು ಯಾವ ಹಿರಣ್ಯಾಕ್ಷನೂ ಬಂದಿರಲಿಲ್ಲ. ಅವನು ಹುಟ್ಟಿಯೇ ಇರಲಿಲ್ಲ. ಮುಂದೆ ಚಾಕ್ಷುಷಮನ್ವಂತರದಲ್ಲಿ ಹುಟ್ಟಿ ಆಗ ಇನ್ನೊಮ್ಮೆ ಭೂಮಿಯನ್ನು ಎತ್ತಿ ತರುತ್ತಿದ್ದ ಕೃಷ್ಣವರಾಹನನ್ನು ಇದಿರಿಸಿ ಹತನಾಗುತ್ತಾನೆ. ಇಲ್ಲಿ 'ತತ್ರಾಪಿ ದೈತ್ಯಂ ಗದಯಾಽಽಪತಂತಂ' ಎಂದು ಹೇಳಿದ್ದು ಚಾಕ್ಷುಷ ಮನ್ವಂತರಪ್ರಳಯಕಾಲದ ಪ್ರಮೇಯ, ಸ್ವಾಯಂಭುವಮನ್ವಂತರದ ಕಥೆಯೊಂದಿಗೆ ಬೆರೆಸಿ ಹೇಳಿದ್ದು. ಇದರ ವಿವರವನ್ನು ಭಾಗವತಾಮೃತಕಾರಿಕೆಯಲ್ಲಿ ನೋಡಿರಿ ಎಂದು ವಿಶ್ವನಾಥ ಚಕ್ರವರ್ತಿವ್ಯಾಖ್ಯಾನ ಹೇಳುತ್ತದೆ.

ಆದರೆ ತಾತ್ಪರ್ಯದಲ್ಲಿ ತೋರಿಸಿರುವ ಬ್ರಹ್ಮಾಂಡಪುರಾಣದ ವಚನಪ್ರಕಾರ ಹಿರಣ್ಯಾಕ್ಷರಿಬ್ಬರಿದ್ದಾರೆ ಒಬ್ಬನು ಆದಿಹಿರಣ್ಯಾಕ್ಷ, ಅವನು ಬ್ರಹ್ಮಪುತ್ರನಾದ ಕೇವಲ ಅಸುರಸ್ವರೂಪನಾದ ಮೊದಲನೆ ಹಿರಣ್ಯಾಕ್ಷ. ಸ್ವಾಯಂಭುವಮನ್ವಂತರದಲ್ಲಿ ಭಾರದಿಂದಾಗಿ ಸ್ವತಃ ಸಮುದ್ರದಲ್ಲಿ ಮುಳುಗಿದ್ದ ಭೂಮಿಯನ್ನು ಶ್ವೇತವರಾಹ ಮೇಲೆತ್ತಿ ತರುತ್ತಿದ್ದಾಗ ಅವನನ್ನು ಇದಿರಿಸಿ ಕೋರೆ ದಾಡೆಯಿಂದ ಹತನಾಗುತ್ತಾನೆ. ಇನ್ನೊಬ್ಬ ವೈಕುಂಠದ ದ್ವಾರಪಾಲಕನಾದ ವಿಜಯನಿಂದ ಆವಿಷ್ಟನಾಗಿ ಚಾಕ್ಷುಷಮನ್ವಂತರದಲ್ಲಿ ದಿತಿಪುತ್ರನಾಗಿ ಹುಟ್ಟಿದ ಹಿರಣ್ಯಾಕ್ಷ. ಇವನು ಭೂಮಿಯನ್ನು ತಾನೇ ಸಮುದ್ರದಲ್ಲಿ ಮುಳುಗಿಸಿದ್ದ. ಇವನನ್ನು ಕೃಷ್ಣವರಾಹ ಕಿವಿಗಳ ಬುಡದಲ್ಲಿ ಕೈಯಿಂದ ಹೊಡೆದು ಕೊಂದಿದ್ದಾನೆ.

ಭಾಗವತದಲ್ಲಿ ಮೊದಲಿಗೆ ಆದಿಹಿರಣ್ಯಾಕ್ಷನ ಕಥೆಯನ್ನು ಹೇಳಿ ಬಳಿಕ ದಿತಿಪುತ್ರಹಿರಣ್ಯಾಕ್ಷನ ಕಥೆಯನ್ನು ಬೇರೆಯಾಗಿ ಹೇಳಿದೆ. ಆದರೂ ವಿದುರ ವರಾಹದಾಡೆಯಿಂದ ಹತನಾದ ಆದಿಹಿರಣ್ಯಾಕ್ಷನ ಕಥೆಯನ್ನು ಕೇಳಿದ ಮೇಲೂ ಮೈತ್ರೇಯರೆ, ಆದಿಹಿರಣ್ಯಾಕ್ಷನನ್ನೂ ಈ ವರಾಹನೇ ಕೊಂದನೆಂದು ಕೇಳಿದ್ದೇನೆ, ಅದನ್ನು ವಿವರವಾಗಿ ಹೇಳಿರೆಂದು ಮುಂದಿನ ಅಧ್ಯಾಯದಲ್ಲಿ ಕೇಳುತ್ತಾನೆ. ಇದು ಅಸಂಗತವಾಗಿ ಕಾಣುತ್ತದೆ. ಈಗ ಹೇಳಿದ್ದು ಯಾವ ಹಿರಣ್ಯಾಕ್ಷನ ಕಥೆ? ದಿತಿಪುತ್ರನ ಕಥೆಯೆ? ಹಾಗಿದ್ದರೆ ವರಾಹ ದಾಡೆಯಿಂದ ವಧಿಸಿದ್ದು ಕೂಡಲಾರದು. ಆದಿಹಿರಣ್ಯಾಕ್ಷನ ಕಥೆ ಎಂದಿಟ್ಟುಕೊಂಡರೆ ತಿರುಗಿ ಅದೇ ಕಥೆಯನ್ನು ವಿದುರ ಕೇಳಲು ಬಯಸಿದನೆ? ವಿಸ್ತಾರವಾಗಿ ಅದನ್ನೇ ಕೇಳ ಬಯಸಿದ್ದರೆ, ವರಾಹ ಕೈಯಿಂದ ಹೊಡೆದು ಕೊಲ್ಲುವುದು ಕೂಡಲಾರದು. ಎರಡು ಬೇರೆಬೇರೆ ಕಥೆಗಳಿದ್ದರೂ ಬೇರೆ ಬೇರೆಯಾಗಿಯೇ ಹೇಳಿದ್ದರೂ ಮೇಲು ನೋಟಕ್ಕೆ ಒಂದೆಂಬಂತೆ ಕಾಣುತ್ತಿದೆ. ಏಕೆ ಸ್ಪಷ್ಟವಾಗಿ ಹೇಳಿಲ್ಲ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ–

ಬ್ರಹ್ಮಜಸ್ತು ಹಿರಣ್ಯಾಖ್ಯಃ ಪ್ರಥಮಂ ದಂಷ್ಟ್ರಯಾ ಹತಃ ।
ಸ ಏವ ಪಾರ್ಷದಾವಿಷ್ಟೋ ದ್ವಿತೀಯಂ ಕರ್ಣತಾಡನಾತ್ ॥

ಪೂರ್ವಂ ಲಯೋದಕೇ ಮಗ್ನಾಂ ದ್ವಿತೀಯಂ ತೇನ ಮಜ್ಜಿತಾಮ್ ।
ಭುವಮುದ್ಧರತೈವಾಸೌ ಹರಿಣಾ ಕ್ರೋಡಮೂರ್ತಿನಾ ॥

ಇತಿ ಬ್ರಹ್ಮಾಂಡೇ ।

ವ್ಯತ್ಯಾಸೇನಾಪಿ ಚೋಚ್ಯಂತೇ ಅವಿವೇಕೇನ ಕುತ್ರಚಿತ್ ।
ದುಷ್ಟಾನಾಂ ಮೋಹನಾರ್ಥಾಯ ತತ್ರ ತತ್ರ ಕಥಾಃ ಕ್ವಚಿತ್ ॥

ಇತಿ ಸ್ಕಾಂದೇ ॥

ಅವಿವೇಕೇನೇತ್ಯಸ್ಯ ವಿವಿಚ್ಯ ನೋಚ್ಯತೇ ಇತ್ಯರ್ಥಃ । ನತು ಕರ್ತುರವಿವೇಕಃ ।

ಸರ್ವಜ್ಞಸ್ಯ ಕುತೋಽಜ್ಞಾನಂ ವ್ಯಾಸಸ್ಯೋದಾರಕರ್ಮಣಃ ।

ಇತ್ಯುಕ್ತತ್ವಾತ್

'ದುಷ್ಟಾನಾಂ ಮೋಹನಾರ್ಥಾಯ' ಇತಿ ಚ ॥

ಬ್ರಹ್ಮನಿಂದ ಜನಿಸಿದ ಆದಿಹಿರಣ್ಯಾಕ್ಷ ಮೊದಲಿಗೆ ವರಾಹ ದಾಡೆಯಿಂದ ಹತನಾದ. ಬಳಿಕ ವೈಕುಂಠದ್ವಾರಪಾಲಕನಾದ ವಿಜಯನಿಂದ ಆವಿಷ್ಟನಾದ ದಿತಿಪುತ್ರ ಹಿರಣ್ಯಾಕ್ಷ ಕಿವಿಯ ಬುಡದಲ್ಲಿ ಹಸ್ತಪ್ರಹಾರದಿಂದ ಹತನಾದ. ಮೊದಲಿಗೆ ಪ್ರಲಯೋದಕದಲ್ಲಿ ಮುಳುಗಿದ್ದ ಭೂಮಿಯನ್ನು ವರಾಹಮೂರ್ತಿ ಎತ್ತುತ್ತಿದ್ದ. ಬಳಿಕ ಹಿರಣ್ಯಾಕ್ಷನೇ ಮುಳುಗಿಸಿದ್ದ ಭೂಮಿಯನ್ನು ಎತ್ತುತ್ತಿದ್ದ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಪುರಾಣಕಥೆಗಳಲ್ಲಿ ಕೆಲವೆಡೆ ಕಾಲವ್ಯತ್ಯಾಸ ಪುರುಷವ್ಯತ್ಯಾಸಗಳಿಂದಲೂ ಹೇಳುವುದುಂಟು (ಶ್ರೀಕೃಷ್ಣ ಹಸ್ತಿನಾವತಿಯಿಂದ ದ್ವಾರಕೆಗೆ ಹೋದ ಬಳಿಕ ಇತ್ತ ಭೀಮನು ಮಯನಿರ್ಮಿತ ಸಭಾಭವನದಲ್ಲಿ ದುರ್ಯೋಧನ ನೀರಲ್ಲಿ ಬಿದ್ದುದಕ್ಕೆ ನಕ್ಕಿದ್ದು. ಇದು ಕಾಲವ್ಯತ್ಯಾಸ. ವಸ್ತುತಃ ಶ್ರೀಕೃಷ್ಣ ಆಗ ಆ ಸಭಾಭವನದಲ್ಲಿಯೇ ಇದ್ದ. ರಾಜಸೂಯದ ದಿಗ್ವಿಜಯಕಾಲದಲ್ಲಿ ಜರಾಸಂಧವಧೆಯಾಗಿದ್ದರೂ ದಿಗ್ವಿಜಯಾನಂತರ ಆಯಿತೆಂದು ಭಾಗವತ ಹೇಳುವುದು ಕಾಲವ್ಯತ್ಯಾಸವೆ. ಶ್ರೀಕೃಷ್ಣ ದ್ರೌಪದಿಗೆ 'ದುರ್ಯೋಧನಾದಿಗಳು ಅರ್ಜುನನಿಂದ ಹತರಾಗುವುದನ್ನು ನೀನು ನೋಡುವಿ' ಎಂದುದು ಪುರುಷವ್ಯತ್ಯಾಸ. ದುರ್ಯೋಧನಾದಿಗಳು ಹತರಾಗುವುದು ಭೀಮನಿಂದ.) ಕೆಲವೆಡೆ ಕಥಾ ಭೇದವಿದ್ದರೂ ಇಲ್ಲ ಎಂಬಂತೆ ವರ್ಣಿಸುವುದುಂಟು. ಪ್ರಕೃತ

ಹಿರಣ್ಯಾಕ್ಷವಧಗಳೇ ಉದಾಹರಣೆ. ಇದು ದುಷ್ಟರಿಗೆ ಕಥೆಗಳಲ್ಲಿ ಗೊಂದಲ ಉಂಟಾಗಲಿ ಎಂಬ ಉದ್ದೇಶದಿಂದ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಸ್ಕಾಂದ ಪುರಾಣದಲ್ಲಿ ಮೇಲು ನೋಟಕ್ಕೆ 'ಅವಿವೇಕದಿಂದ' ಅಂದರೆ ಎರಡು ಬೇರೆ ಬೇರೆ ಕಥೆಗಳಲ್ಲಿ ವಾಸ್ತವವಾಗಿರುವ ವ್ಯತ್ಯಾಸವನ್ನು ತಿಳಿಯದೇ ಬಾದರಾಯಣರು ಪುರಾಣಗಳಲ್ಲಿ ಅವನ್ನು ಒಂದಾಗಿ ಕಾಣುವಂತೆ ವರ್ಣಿಸುತ್ತಾರೆ ಎಂದಂತೆ ಕಾಣುತ್ತದೆ. ಅದು ಸರಿಯಲ್ಲ. ಅದೇ ಸ್ಕಾಂದ ಪುರಾಣದಲ್ಲಿ ಮುಂದೆ 'ಬಾದರಾಯಣರಿಗೆ ಅಜ್ಞಾನವೆಲ್ಲಿ? ಅವರು ಸರ್ವಜ್ಞರು ಪ್ರಪಂಚ ಸೃಷ್ಟಿಲಯಾದಿ ಮಹಾಕಾರ್ಯಗಳನ್ನು ಮಾಡುವವರು' ಎಂದು ಹೇಳಿದೆ.

ಮತ್ತು ಇಲ್ಲಿಯೇ ಸ್ಕಾಂದಪುರಾಣದಲ್ಲಿ 'ಅವಿವೇಕೇನ ಕುತ್ರಚಿತ್' ಎಂದು ಹೇಳಿ 'ದುಷ್ಟಾನಾಂ ಮೋಹನಾರ್ಥಾಯ' ದುಷ್ಟರಿಗೆ ಕಥೆಗಳಲ್ಲಿ ಗೊಂದಲ ಉಂಟಾಗಲೆಂಬ ಉದ್ದೇಶದಿಂದ' ಎಂದೇ ಹೇಳಿರುವುದರಿಂದ ಅಜ್ಞಾನದಿಂದಲ್ಲ ಎನ್ನುವುದು ಸ್ಪಷ್ಟವೇ ಇದೆ.

(ಅದರಿಂದಲೇ ಬೇರೆ ವ್ಯಾಖ್ಯಾನಕಾರರೆಲ್ಲರೂ ಗೊಂದಲದಲ್ಲಿ ಬಿದ್ದು ಒಬ್ಬನೇ ಹಿರಣ್ಯಾಕ್ಷ ಚಾಕ್ಷುಷಮನ್ವಂತರದಲ್ಲಿಯೇ ಕೋರೆದಾಡೆಯಿಂದಲೂ ಮಡಿದ, ಮುಷ್ಟಿಪ್ರಹಾರದಿಂದಲೂ ಮಡಿದ ಎಂದು ಹೇಳುತ್ತಿದ್ದಾರೆ.)

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತ ತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಚತುರ್ದಶೋಽಧ್ಯಾಯಃ

—o—

ಅಧ್ಯಾಯ–೧೫

ಅಧ್ಯಾಯಸಾರಾಂಶ

ದೈತ್ಯ ಹಿರಣ್ಯಾಕ್ಷ ಹಿರಣ್ಯಕಶಿಪುಗಳ ಜನ್ಮ ವೃತ್ತಾಂತ. ಒಂದು ಸಂಜೆ ಕಶ್ಯಪರು ಅಗ್ನಿಹೋತ್ರ ಮಾಡಿ ಹರಿಧ್ಯಾನ ಮಗ್ನರಾಗಿ ಕುಳಿತಿದ್ದರು. ದಿತಿ ಆಗ ಪತಿಯ ಸಂಗ ಬಯಸಿದಳು. ನಿಷಿದ್ಧವಾದ ಸಂಧ್ಯಾಕಾಲ ಕಳೆಯಲಿ ಇದೀಗ ರುದ್ರನ ಸಂಚಾರಕಾಲ ಎಂದು ಎಷ್ಟು ಹೇಳಿದರೂ ಕೇಳದೆ ಆಕೆ ಕಾಮಾಕ್ರಾಂತಳಾಗಿ ಪತಿಯಿಂದ ಗರ್ಭಧರಿಸಿದಳು. 'ಇದರ ಫಲವಾಗಿ ಇಬ್ಬರು ದುಷ್ಟಪುತ್ರರು ಜನಿಸಿ ಹರಿಯಿಂದ ಹತರಾಗುವರು, ಆದರೆ ಮೊಮ್ಮಗನೊಬ್ಬ ಮಹಾವಿಷ್ಣುಭಕ್ತನಾಗುವ'ನೆಂದು ಕಶ್ಯಪರು ಹೇಳಿ ಅನುಗ್ರಹಿಸಿದರು. ಆ ಇಬ್ಬರು ದುಷ್ಟ ಪುತ್ರರು ದೈತ್ಯ ಹಿರಣ್ಯಾಕ್ಷ ಹಿರಣ್ಯಕಶಿಪುಗಳು., ಆದಿಹಿರಣ್ಯಾಕ್ಷಹಿರಣ್ಯಕಶಿಪುಗಳ ಆವೇಶದೊಂದಿಗೆ ಹುಟ್ಟಿದ ವೈಕುಂಠದ್ವಾರಪಾಲಕರಾದ ಜಯವಿಜಯರು. ಮೊಮ್ಮಗನೆ ಭಕ್ತ ಪ್ರಹ್ಲಾದ.

* * *

ಮೈತ್ರೇಯರು ವಿದುರನಿಗೆ ಹಿರಣ್ಯಾಕ್ಷಹಿರಣ್ಯಕಶಿಪುಗಳ ಜನ್ಮವೃತ್ತಾಂತವನ್ನು ಹೇಳುತ್ತ 'ಒಮ್ಮೆ ಸಂಧ್ಯಾಕಾಲದಲ್ಲಿ ದಿತಿ ಕಶ್ಯಪರನ್ನು ರತಿಕ್ರೀಡೆಗೆ ಒತ್ತಾಯಿಸುತ್ತಾಳೆ. ಆಗ ಕಶ್ಯಪರು 'ಬೇಡ, ಸಂಧ್ಯಾಕಾಲವಿದು ರುದ್ರನ ಸಂಚಾರಸಮಯ. ಒಂದು ಮುಹೂರ್ತ ಕಳೆಯಲಿ' ಎನ್ನುತ್ತಾರೆ. ದಿತಿ ಕಾಮಪರವಶಳಾಗಿ ಕಶ್ಯಪರನ್ನು ಬಲಾತ್ಕರಿಸಿ ಗರ್ಭಧರಿಸಿದಳು ಅದರ ಪರಿಣಾಮವಾಗಿ ದುಷ್ಟರಾದ ಹಿರಣ್ಯಾಕ್ಷಹಿರಣ್ಯಕಶಿಪುಗಳು ಜನಿಸಿದರು' ಎನ್ನುತ್ತಾರೆ. ಈ ಸಂದರ್ಭದಲ್ಲಿ ಐದು ಶ್ಲೋಕಗಳಲ್ಲಿ ರುದ್ರನ ಮಹಿಮೆಗಳನ್ನು ಹೇಳುತ್ತಾರೆ. ಐದನೇ ಶ್ಲೋಕ–

ಬ್ರಹ್ಮಾದಯೋ ಯತ್ಕೃತಸೇತುಪಾಲಾ
ಯತ್ಕಾರಣಂ ವಿಶ್ವಮಿದಂ ಹಿ ಮಾಯಯಾ ।
ಆಜ್ಞಾಕರೀ ತಸ್ಯ ಪಿಶಾಚಚರ್ಯಾ
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥ ೨೮ ॥

ಬ್ರಹ್ಮಾದಿಗಳು ಯಾರು ಹಾಕಿಕೊಟ್ಟ ಧರ್ಮಾಚರಣನಿಯಮಗಳನ್ನು ಪಾಲಿಸುತ್ತಿರುವರೋ, ಯಾರು ಸ್ವೇಚ್ಛೆಯಿಂದಲೆ ಪ್ರಪಂಚವನ್ನು ಸೃಷ್ಟಿಮಾಡುತ್ತಿರುವನೋ ಆ ವಿಷ್ಣುವಿನ ಆಜ್ಞಾಪಾಲನೆ ಶಿವನು ಮಾಡುವ ಪಿಶಾಚ ಚರ್ಯೆಯಾಗಿದೆ. ಲೋಕದಲ್ಲಿ ಭೃತ್ಯರು ಪಾಪ ಮಾಡಿದಾಗ ಸ್ವಾಮಿಯು ಅವನಿಗೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಬೇಕು ಎಂಬುದನ್ನು ಈ ರೀತಿ ಶ್ರೀಹರಿ ತೋರುತ್ತಿದ್ದಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಶಿವನು ಹಾಕಿಕೊಟ್ಟ ಧರ್ಮನಿಯಮಗಳನ್ನು ಬ್ರಹ್ಮಾದಿದೇವತೆಗಳು ಪಾಲಿಸುತ್ತಾರೆ ಎಂದು ವ್ಯಾಖ್ಯಾನಿಸಿದ್ದಾರೆ. ಪ್ರಪಂಚ ಸೃಷ್ಟಿ ಮಾಡಿದ್ದು ರುದ್ರನೇ ಎಂದೂ ಹೇಳಿದ್ದಾರೆ. 'ವಿಶ್ವಮಿದಂ ಚ ಮಾಯಾ' ಎಂದು ಅಪಪಾಠವಿಟ್ಟುಕೊಂಡು 'ಯಸ್ಯ' ಎಂದು ಅಧ್ಯಾಹಾರ ಮಾಡಿ 'ಬ್ರಹ್ಮಾದಿಗಳಿಗೂ ಮೋಹಕವಾದ ಮಾಯೆ ಯಾರಿಗೆ ಆಜ್ಞಾನುವರ್ತಿಯಾಗಿದೆಯೋ ಅಂಥ ರುದ್ರನು ಪಿಶಾಚಚರ್ಯೆ ಮಾಡುವುದು ಕೇವಲ ವಿಡಂಬನ. ಮುಮುಕ್ಷುಗಳು ಎಲ್ಲರೂ ಪಿಶಾಚಚರ್ಯೆ ಮಾಡಬೇಕೆಂದು ತಿಳಿಸುವುದು ಅದರ ಉದ್ದೇಶ' ಎಂದು ವ್ಯಾಖ್ಯಾನಿಸಿದ್ದಾರೆ.

ಶಿವನು ಹಾಕಿಕೊಟ್ಟ ಧರ್ಮನಿಯಮವನ್ನು ಬ್ರಹ್ಮಾದಿಗಳು ಪಾಲಿಸುವರೆಂದರೆ ಅದು ಹೇಗೆ ಸಾಧ್ಯ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಇದಕ್ಕೆ ವೀರರಾಘವ ವ್ಯಾಖ್ಯಾನದಲ್ಲಿ ಕೊಟ್ಟ ಸಮಾಧಾನಗಳು– ೧) ಇದು ಕೇವಲ ಪ್ರಶಂಸೆ. ೨) ಅತದ್ಗುಣ ಸಂವಿಜ್ಞಾನ ಬಹುವ್ರೀಹಿಯಿಂದ ಬ್ರಹ್ಮ ಹೊರತು ಉಳಿದವರೇ ಇಲ್ಲಿ ಬ್ರಹ್ಮಾದಿಗಳು. ೩) ಪುಲಸ್ತ್ಯಮುಂತಾದವರು ಇಲ್ಲಿ ಬ್ರಹ್ಮಾದಿಗಳು. ಅವರಿಗೂ ಬ್ರಹ್ಮ ಎಂಬ ಹೆಸರಿದೆ. ೪) ರುದ್ರಶರೀರಿಯಾದ ವಿಷ್ಣುವನ್ನೇ ಇಲ್ಲಿ ರುದ್ರನೆಂದು ವ್ಯವಹರಿಸಲಾಗಿದೆ.

ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಹರಿಹರರ ಅಭೇದದೃಷ್ಟಿಯಿಂದ ಹೀಗೆ ಹೇಳಿದೆ ಎಂದಿದೆ. ಶುಕದೇವವ್ಯಾಖ್ಯಾನದಲ್ಲಿ ರುದ್ರಾಣಾಂ ಶಂಕರಶ್ಚಾಸ್ಮಿ ಎಂದು ಹೇಳಿದ ವಿಭೂತಿರೂಪವಿವಕ್ಷೆಯಿಂದ ಅಭೇದವನ್ನು ಹೇಳಿದೆ ಎಂದಿದೆ. ಗಿರಿಧರ ವ್ಯಾಖ್ಯಾನದಲ್ಲಿ ರುದ್ರ ಬ್ರಹ್ಮನಿಂದ ಹುಟ್ಟಿದವನಾದರೂ 'ಈಶ್ವರ'ನಾಗಿದ್ದಾನೆ. ಚತುರ್ಥಸ್ಕಂಧದಲ್ಲಿ ಬ್ರಹ್ಮ ಅವನನ್ನು ಸ್ತೋತ್ರಮಾಡುತ್ತಾನೆ, ಜಾನೇ ತ್ವಾಮೀಶ ವಿಶ್ವಸ್ಯ' ಎಂದು ಮುಂತಾಗಿ ಎಂದಿದೆ.

ಈ ಎಲ್ಲ ಸಮಾಧಾನಗಳೂ ಅಸಂಮಂಜಸ ಮತ್ತು ಕ್ಲಿಷ್ಟಕಲ್ಪನೆಗಳಾಗಿವೆ. ಶ್ರೀಹರಿ ಹಾಕಿಕೊಟ್ಟ ಧರ್ಮನಿಯಮಗಳನ್ನು ಬ್ರಹ್ಮಾದಿಗಳು ಪಾಲಿಸುತ್ತಾರೆ. 'ಶ್ರುತಿಸ್ಮೃತೀ ಹರೇರಾಜ್ಞಾ' ಎಂಬುದು ಪ್ರಸಿದ್ಧವೇ ಇದೆ.

'ಪ್ರಪಂಚಸೃಷ್ಟಿ ಮಾಡಿದವನು ರುದ್ರ' ಎಂದರೆ ಪ್ರಪಂಚ ಲಯಮಾಡುವವನು ರುದ್ರನಾದ್ದರಿಂದ ಹಾಗೆ ಹೇಳಿದೆ ಎಂದು ವೀರರಾಘವವ್ಯಾಖ್ಯಾನ! 'ಮಾಯೆ ರುದ್ರನಿಗೆ ಅನುವರ್ತಿ' ಎಂದರೆ ಮಾಯೆ ಅಹಂಕಾರತತ್ವದ ಕಾರ್ಯವಾದ್ದರಿಂದ ಶಿವ ಅದಕ್ಕೆ ಅಧಿಷ್ಠಾತೃ ಎಂದು ವೀರರಾಘವವ್ಯಾಖ್ಯಾನ. ವಿಷ್ಣುಮಾಯೆಗೂ ಶಿವನೇ ಅಧಿಷ್ಠಾತೃ ಎನ್ನಲಾದೀತೆ?

'ಪಿಶಾಚಚರ್ಯೆ ಶಿವನು ಮಾಡುವ ವಿಡಂಬನೆ' ಎನ್ನುವುದು ವರಾಹಪುರಾಣಕ್ಕೆ ವಿರುದ್ಧವಾಗುವುದು. ತ್ರಿಪುರಸಂಹಾರಕಾಲದಲ್ಲಿ ಗರ್ಭಿಣಿಯರಾದ ತ್ರಿಪುರಸ್ತ್ರೀಯರ ವಧವೂ ಆಯಿತು. ಜ್ಞಾನಿಗಳಿಗೆ ಇಂಥ ಕರ್ಮಗಳ ಲೇಪವಿಲ್ಲ ಆದರೂ ಭೃತ್ಯನು ಪಾಪ ಮಾಡಿದಾಗ ಸ್ವಾಮಿ ಅದಕ್ಕೆ ವ್ರತಾನುಷ್ಠಾನವನ್ನು ವಿಧಿಸಬೇಕೆಂದು ಲೋಕರೂಢಿಯನ್ನು ಅನುಸರಿಸಿ ಹರಿ ಆಜ್ಞೆ ಮಾಡಿದ್ದಾನೆ. ಅದರಂತೆ ಶಿವ ಪಿಶಾಚಚರ್ಯೆಮಾಡಿ ತೋರಬೇಕು. ತೋರಿದ್ದಾನೆ ಹೊರತು, ಅದು ಶಿವನ ವಿಡಂಬನೆವಲ್ಲ. ಮುಮುಕ್ಷುಗಳು ಹಾಗೆ ಮಾಡಬಾರದು ಅದು ಅಮಂಗಲಕರ. ಅದರಿಂದ 'ಮಾಯಾ ಆಜ್ಞಾಕರೀ । ಪಿಶಾಚಚರ್ಯಾ ವಿಡಂಬನಮ್' ಎಂದು ಅನ್ವಯ ಮಾಡುವುದು ವರಾಹಪುರಾಣಕ್ಕೆ ವಿರುದ್ಧ. ಮತ್ತು 'ಚರಿತಂ' ಎಂಬ ಶಬ್ದ ವ್ಯರ್ಥ. 'ಪಿಶಾಚಚರ್ಯಾರೂಪವಾದ ಚರಿತವು ವಿಡಂಬನ' ಎಂದು ಅನ್ವಯಿಸುತ್ತಾರೆ. 'ಪಿಶಾಚಚರ್ಯಾ ಅಹೋ! ವಿಭೂಮ್ನಶ್ಚರಿತಂ ವಿಡಂಬನಂ' ಎಂದು ವಿಶ್ವನಾಥ ಗಿರಿಧರ ವ್ಯಾಖ್ಯಾನಗಳು. ಈ ವ್ಯಾಖ್ಯಾನದಲ್ಲಿಯೂ ಅನುಪಪತ್ತಿ ಇದೆ. 'ವಿಭೂಮ್ನಃ' ವಿಶೇಷವಾಗಿ ಪೂರ್ಣನೆನಿಸಿದವನು ಹರಿಯೆ ಹೊರತು ಹರನಲ್ಲ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಪಿಶಾಚಚರ್ಯಾಮಚರದ್ ರುದ್ರೋ ವಿಷ್ಣ್ವಾಜ್ಞಯೈವ ತು ।
ಗರ್ಭಿಣೀವಧನೋದಾರ್ಥಂ ಅಹೋ ವಿಷ್ಣುರ್ವಿಡಂಬಕೃತ್ ॥
ಇತಿ ವಾರಾಹೇ ॥

ಗರ್ಭಿಣೀಸ್ತ್ರೀಹತ್ಯಾ ಪಾಪ ನಿವಾರಣೆಗಾಗಿ ಹರಿಯ ಆಜ್ಞೆಯಿಂದಲೇ ಶಿವನು ಪಿಶಾಚಚರ್ಯೆ ಎಂಬ ವ್ರತವನ್ನಾಚರಿಸಿದನು. ಪರಿಪೂರ್ಣನಾದ ಶ್ರೀಹರಿಯೂ ಹೀಗೆ ಲೋಕರೂಢಿಯನ್ನು ಅನುಸರಿಸಿ ಪಾಪರಹಿತನಾದ ಶಿವನಿಗೂ ವ್ರತಾಚರಣವನ್ನು ವಿಧಿಸಿದ್ದು ಆಶ್ಚರ್ಯಕರವೆಂದು ವರಾಹಪುರಾಣ (೧೩೬ನೇಅಧ್ಯಾಯ)ದಲ್ಲಿ ಉಕ್ತವಾಗಿದೆ.

ಬ್ರಹ್ಮಾದಿದೇವತೆಗಳು ಕೂಡ ಶ್ರೀಹರಿ ಹಾಕಿಕೊಟ್ಟ ಧರ್ಮನಿಯಮಗಳನ್ನು ಪಾಲಿಸುತ್ತಾರೆ ಎಂಬುದಕ್ಕೆ ಜ್ವಲಂತ ನಿದರ್ಶನ ರುದ್ರನೂ ಹರಿಯಾಜ್ಞೆಯಂತೆ

ಪಿಶಾಚಚರ್ಯಾ ವ್ರತವನ್ನಾಚರಿಸುತ್ತಿರುವುದೆಂದು ಹೇಳಲು ಬರುವುದರಿಂದ ಈ ವ್ಯಾಖ್ಯಾನವೇ ಸುಸಂಗತವೆನ್ನಬೇಕು.

* * *

ಕಶ್ಯಪರು ದಿತಿಗೆ ಹೇಳುತ್ತಾರೆ 'ನಿನ್ನ ಈ ಪಾಪಕರ್ಮದ ಫಲವಾಗಿ ನಿನ್ನ ಹೊಟ್ಟೆಯಲ್ಲಿ ಇಬ್ಬರು ದುಷ್ಟಪುತ್ರರು ಹುಟ್ಟುತ್ತಾರೆ. ಶ್ರೀಹರಿ ಅವತಾರ ಮಾಡಿ ಇಬ್ಬರನ್ನೂ ವಧಿಸುತ್ತಾನೆ' ಎಂದು. ತನ್ನ ಪುತ್ರರಿಬ್ಬರೂ ದುಷ್ಟರೇ ಆಗುವರೆಂದು ದಿತಿಗೆ ದುಃಖವಾದರೂ ಅವರನ್ನು ಹರಿಯೇ ವಧಿಸುತ್ತಾನೆ ಎಂದು ತಿಳಿದಾಗ ಸಮಾಧಾನವಾಯಿತು. ಬ್ರಾಹ್ಮಣಶಾಪದಿಂದ ಅವರು ಹತರಾಗುತ್ತಿದ್ದರೆ ನರಕ ನಿಶ್ಚಿತ. ಪರಮಾತ್ಮನಿಂದಲೇ ಹತರಾದರೆ ಸದ್ಗತಿ ಎಂದು. ಅಂತೂ ದಿತಿ ತಾನು ಮಾಡಿದ್ದು ಪಾಪಕರ್ಮವೆಂದು ಪಶ್ಚಾತ್ತಾಪಪಟ್ಟಳು. ಅದನ್ನು ನೋಡಿ ಕಶ್ಯಪರು ದಯೆಯಿಂದ ಹೇಳಿದರು. 'ಮಕ್ಕಳು ದುಷ್ಟರಾದರೂ ಮೊಮ್ಮಗನೊಬ್ಬ ಒಳ್ಳೆಯ ಭಗವದ್ಭಕ್ತನಾಗುತ್ತಾನೆ' ಎಂದು. ದಿತಿ ಈಗ ಬಹಳ ಸಂತೋಷಪಟ್ಟಳು.

ಮೈತ್ರೇಯ ಉವಾಚ

ಶ್ರುತ್ವಾ ಭಾಗವತಂ ಪೌತ್ರಮಮೋದತ ದಿತಿರ್ಭೃಶಮ್ ।
ಪುತ್ರಯೋಶ್ಚ ವಧಂ ಕೃಷ್ಣಾದ್ ವಿದಿತ್ವಾऽಸೀನ್ಮಹಾಮನಾಃ ॥ ೫೦ ॥

ಮೈತ್ರೇಯರು ಹೇಳಿದರು
ಭಗವದ್ಭಕ್ತನಾದ ಮೊಮ್ಮಗ ಜನಿಸುತ್ತಾನೆ ಎಂದೂ ಮಕ್ಕಳು ಇಬ್ಬರೂ ಹರಿಯಿಂದಲೆ ಹತರಾಗುವರೆಂದೂ ಕೇಳಿದಾಗ ದಿತಿ ಉತ್ಸಾಹಗೊಂಡು ಬಲು ಸಂತುಷ್ಟಳಾದಳು.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಪರಮಾತ್ಮನಿಂದ ಹತರಾದವರೆಲ್ಲರಿಗೂ ಸದ್ಗತಿ ನಿಶ್ಚಿತ' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ 'ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ವಿವಿಕ್ಷುರತ್ಯಗಾತ್ ಸೂನೋಃ ಪ್ರಹ್ಲಾದಸ್ಯಾನುಭಾವತಃ' 'ಭಗವಂತನನ್ನು ನಿಂದಿಸಿದ್ದರಿಂದ ಹಿರಣ್ಯಕಶಿಪು ಅಂಧಂತಮಸ್ಸಿನಲ್ಲಿ ಬೀಳುತ್ತಿದ್ದ. ಪ್ರಹ್ಲಾದನಿಂದಾಗಿ ಅದು ತಪ್ಪಿತು, ಎಂಬುದನ್ನು ಇವರು ಹೇಗೆ ಕೂಡಿಸುತ್ತಾರೆ? ಹಿರಣ್ಯಕಶಿಪು ಸಾಕ್ಷಾತ್ ನರಸಿಂಹನಿಂದಲೆ ಹತನಾಗಿದ್ದಾನೆ. ಅದರಿಂದಲೇ ಸದ್ಗತಿಯಾಗಬೇಕಿತ್ತು. ಶ್ರೀಮದಾಚಾರ್ಯರು ಹೇಳುತ್ತಾರೆ–

ವಿಷ್ಣುಹಸ್ತವಧಾಲ್ಲೋಕೋ ಭಕ್ತಸ್ಯಾನ್ಯಸ್ಯ ನ ಕ್ವಚಿತ್ ।
ತಥಾಪ್ಯಸುರಮೋಹಾಯ ನ ವಿವಿಕ್ತಂ ಕ್ವಚಿತ್ ಕ್ವಚಿತ್ ॥

ಇತಿ ಸ್ಕಾಂದೇ ॥

ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ । ಇತಿ ಚ ।

ಸ್ವತಃ ಸದ್ಗತಿಯೋಗ್ಯಸ್ಯ ಪುತ್ರಾದೇರ್ಹೇತುತಾ ಭವೇತ್ ।
ಯೋಗ್ಯತಾಽನಾದಿಭಕ್ತಿಃ ಸ್ಯಾದಯೋಗ್ಯಸ್ಯ ಕುತೋ ಗತಿಃ ॥
ಇತಿ ಬ್ರಹ್ಮತರ್ಕೇ ॥

'ಪರಮಾತ್ಮನ ಕೈಯಿಂದ ವಧವಾದರೆ ಭಕ್ತನಿಗೆ ಮಾತ್ರ ಸದ್ಗತಿಯಾಗುತ್ತದೆ ಹೊರತು ಅನ್ಯರಿಗೆ ಎಲ್ಲಿಯೂ ಹಾಗಾಗುವುದಿಲ್ಲ. ಆದರೂ ಅಸುರಮೋಹನಕ್ಕಾಗಿ ಈ ರೀತಿ ವಿವೇಚನೆ ಇಲ್ಲದೆ ಸಾಮಾನ್ಯವಾಗಿ ಅಲ್ಲಲ್ಲಿ ಹೇಳುವುದುಂಟು' ಎಂದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿದ. ಅದರಿಂದಲೆ ಪರಮಾತ್ಮನಿಂದ ಹತನಾದರೂ 'ಹಿರಣ್ಯಕಶಿಪು ತಮಸ್ಸನ್ನೇ ಹೊಂದಬೇಕಿತ್ತು. ಪ್ರಹ್ಲಾದನ ಪ್ರಭಾವದಿಂದಾಗಿ ಅದು ತಪ್ಪಿತ'ೆಂದು ಹೇಳಿದೆ. ದುಷ್ಟನಾದ ಹಿರಣ್ಯಕಶಿಪುವಿಗೆ ಪುತ್ರನಿಂದ ಸದ್ಗತಿಯಾದ್ದರಿಂದ ಎಲ್ಲರಿಗೂ ಪುತ್ರನಿಂದ ಸದ್ಗತಿ ಎಂದೂ ತಿಳಿಯಬಾರದು. 'ಸ್ವಾಭಾವಿಕವಾಗಿ ಸದ್ಗತಿ ಹೊಂದಲು ಯೋಗ್ಯನಾದ ವ್ಯಕ್ತಿಗೆ ಮಾತ್ರ ಸದ್ಗತಿಪ್ರಾಪ್ತಿಯಲ್ಲಿ ಮಕ್ಕಳು ಮುಂತಾದವರು ಕಾರಣರಾಗುತ್ತಾರೆ. ಅನಾದಿಯಾಗಿ ಸ್ವರೂಪದಲ್ಲಿರುವ ಭಗವದ್ಭಕ್ತಿಯೇ ಸದ್ಗತಿ ಹೊಂದಲು ಯೋಗ್ಯತೆ ಎನಿಸುತ್ತದೆ. ಅದಿಲ್ಲದವನಿಗೆ ಸದ್ಗತಿ ಹೇಗೆ ಸಿಕ್ಕೀತು?' ಎಂದು ಬ್ರಹ್ಮತರ್ಕ ಹೇಳಿದೆ.

ಅದರಿಂದ ಭಾಗವತಕ್ಕೆ ಹೀಗೆ ಅರ್ಥ– 'ದಿತಿ ದೇವಿ ತನ್ನ ಮಕ್ಕಳಲ್ಲಿ ಜೀವದ್ವಯಾವೇಶ ಎಂದು ತಿಳಿದವಳು. ಅವರಲ್ಲಿ ಅನಾದಿಭಕ್ತರಾದ ಜಯವಿಜಯರು ಸದ್ಗತಿಯೋಗ್ಯರು, ಅನಾದಿದ್ವೇಷಿಗಳಾದ ಹಿರಣ್ಯಾಕ್ಷ, ಹಿರಣ್ಯಕಶಿಪುಗಳು ಸದ್ಗತಿಗೆ ಅಯೋಗ್ಯರು. ಹೀಗಾಗಿ ಪ್ರಹ್ಲಾದ ಮೊಮ್ಮಗನಾಗಿ ಜನಿಸುವುದರಿಂದ ಮತ್ತು ಹರಿಯಿಂದಲೇ ಮಕ್ಕಳು ಹತರಾಗುವುದರಿಂದ ಯೋಗ್ಯಜೀವರಾದ ಜಯವಿಜಯರಿಗೆ ಸದ್ಗತಿಯಾಗುವುದು ನಿಶ್ಚಿತವೆಂದು ಅವಳು ಸಂತೋಷಭರಿತಳಾದಳು' ಎಂದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ಪಂಚದಶೋಽಧ್ಯಾಯಃ

—o—

ಅಧ್ಯಾಯ–೧೬

ಅಧ್ಯಾಯಸಾರಾಂಶ

ದಿತಿ ತನ್ನ ಮಕ್ಕಳನ್ನು ಹರಿ ಕೊಲ್ಲುವನೆಂದು ಭಯದಿಂದ ನೂರುವರ್ಷಕಾಲ ಅವರನ್ನು ಗರ್ಭದಲ್ಲಿಯೇ ಹೊತ್ತಳು. ಆಗ ಎಲ್ಲೆಡೆ ಉತ್ಪಾತಗಳು ಕಂಡು ಬಂದುವು. ದೇವತೆಗಳು ಹೆದರಿ ಬ್ರಹ್ಮನ ಬಳಿ ಬಂದಾಗ ಬ್ರಹ್ಮ ಅವರಿಗೆ ಜಯವಿಜಯರ ವೃತ್ತಾಂತವನ್ನು ವರ್ಣಿಸಿದ. ಒಮ್ಮೆ ಸನಕಾದಿ ಮುನಿಗಳು ಪರಮಾತ್ಮನ ದರ್ಶನಕ್ಕಾಗಿ ವೈಕುಂಠಕ್ಕೆ ಹೋದರು. ಅಲ್ಲಿ ಏಳನೆ ದ್ವಾರದಲ್ಲಿ ಜಯವಿಜಯರು ತಡೆದರು. 'ನಿಮ್ಮ ಭಗವಂತನಿಗೆ ಭಕ್ತರಾದ ನಮ್ಮಿಂದ ಭಯವಿಲ್ಲ. ನಮ್ಮೊಳಗಿರುವ ಭಗವಂತ ನಿಮ್ಮ ಭಗವಂತನಿಗಿಂತ ಬೇರೆ ಅಲ್ಲ. ಏಕೆ ತಡೆಯುವಿರಿ? ನಮ್ಮ ಭಗವಂತ ನಿಮ್ಮ ಭಗವಂತ ಎಂದು ಭೇದವೆಣಿಸುವುದು ಅಸುರಸ್ವಭಾವ. ಭೇದವೆಣಿಸಿರುವುದರಿಂದ ನೀವು ಮೂರು ಬಾರಿ ಅಸುರಸ್ವಭಾವದವರಾಗಿ ಭೂಮಿಯಲ್ಲಿ ಹುಟ್ಟಿರೆಂದು ಮುನಿಗಳು ಶಪಿಸಿದರು. ಆಗ ಭಗವಂತ ತಾನೇ ಹೊರಗೆ ಬಂದ. ಮುನಿಗಳು ದರ್ಶನಮಾಡಿ ಆನಂದ ತುಂದಿಲರಾದರು. 'ನಿಮ್ಮವರಿಗೆ ನಾವು ಶಪಿಸಿದ ತಪ್ಪಿಗೆ ನಮಗೆ ನರಕವಾದರೆ ಆಗಲಿ, ಆದರೆ ಅಲ್ಲಿಯೂ ನಿನ್ನ ಭಕ್ತಿ ಮಾತ್ರ ನಮ್ಮಲ್ಲಿ ಬತ್ತದೇ ಇರಲಿ' ಎಂದು ಬೇಡಿಕೊಂಡರು.

* * *

ಮೈತ್ರೇಯರು ವಿದುರನಿಗೆ ಹೇಳುತ್ತಾರೆ 'ಪರಮಾತ್ಮ ತನ್ನ ಮಕ್ಕಳನ್ನು ವಧಿಸುತ್ತಾನೆ ಎಂದಾಲೋಚಿಸಿ ದಿತಿದೇವಿ ತನ್ನ ಮಕ್ಕಳನ್ನು ನೂರುವರ್ಷಕಾಲ ಗರ್ಭದಲ್ಲಿಯೇ ಧರಿಸಿದಳು. ಆಗ ಆ ಗರ್ಭದ ಪ್ರಭಾವದಿಂದ ಲೋಕವೆ ಅಂಧಕಾರಮಯವಾಯಿತು. ದೇವತೆಗಳು ಕಳವಳಗೊಂಡು ಬ್ರಹ್ಮನಲ್ಲಿ ದೂರಿದಾಗ ಬ್ರಹ್ಮ ಸನಕಾದಿಗಳಿಂದ ಜಯವಿಜಯರಿಗೆ ಶಾಪ ಬಂದ ವೃತ್ತಾಂತವನ್ನು ಹೇಳತೊಡಗಿದರು ಸನಕಾದಿಗಳು ವೈಕುಂಠಕ್ಕೆ ಹೋದರು ಎಂದು–

ವಸಂತಿ ಯತ್ರ ಪುರುಷಾಃ ಸರ್ವೇ ವೈಕುಂಠಮೂರ್ತಯಃ ।
ಯೇ ನಿತ್ಯಮನಿಮಿತ್ತೇನ ಧರ್ಮೇಣಾರಾಧಯನ್ ಹರಿಮ್ ॥ ೧೪ ॥

ಪರಮಾತ್ಮನ ಆರಾಧನೆ ಎಂಬ ಭಾವನೆಯಿಂದ ಕರ್ಮಮಾಡಿ ಅವನನ್ನು ಆರಾಧಿಸಿ ಅವನ ಸಾರೂಪ್ಯವನ್ನು ಹೊಂದಿದ ಮುಕ್ತರು ಯಾವ ಲೋಕದಲ್ಲಿ ವಾಸಮಾಡುವರೋ ಅಂಥ ವೈಕುಂಠಲೋಕಕ್ಕೆ ಒಮ್ಮೆ ಸನಕಾದಿಗಳು ಭೆಟ್ಟಿಕೊಟ್ಟರು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಯೇಽನಿಮಿತ್ತ ನಿಮಿತ್ತೇನ' ಎಂದು ಅಪಪಾಠವಿಟ್ಟು ಕೊಂಡು ನಿಮಿತ್ತವು ನಿಮಿತ್ತವಾಗಿಲ್ಲದ, ಅಂದರೆ ನಿಷ್ಕಾಮವಾದ ಕರ್ಮದಿಂದ, ಅಥವಾ ಅನಿಮಿತ್ತನಾದ ಅಂದರೆ ಕಾರಣರಹಿತನಾದ ಪರಮಾತ್ಮನೆ ನಿಮಿತ್ತ, ಅಂದರೆ ಫಲವಾಗಿಉಳ್ಳ ಕರ್ಮದಿಂದ ಆರಾಧನೆ ಮಾಡಿದವರು ಎಂದು ವ್ಯಾಖ್ಯಾನಮಾಡಿದ್ದಾರೆ. ಈ ಪಾಠದಲ್ಲಿ ಒಂದು ನಿಮಿತ್ತಶಬ್ದ ಸಾಕಾಗಿತ್ತು. ಇನ್ನೊಂದು ವ್ಯರ್ಥ. 'ನಿತ್ಯಮನಿಮಿತ್ತೇನ' ಎಂಬ ಪಾಠದಲ್ಲಿ ನಿತ್ಯವೂ ನಿಷ್ಕಾಮಕರ್ಮದಿಂದ ಆರಾಧನೆ ಮಾಡುವವರು ಎಂದು ವಿಶೇಷಾರ್ಥ ಸಿಗುತ್ತದೆ.

ಅನಿಮಿತ್ತೇನ ವಿಷ್ಣ್ವರ್ಪಣೇನ ।

ಅನಿಮಿತ್ತೇನ ಎಂದರೆ ವಿಷ್ಣುವಿಗೆ ಅರ್ಪಣಉಳ್ಳ ಕರ್ಮದಿಂದ ಎಂದರ್ಥ.

'ಅನಿಮಿತ್ತೇನ' ಎಂಬಲ್ಲಿ 'ಅ' ಎಂದರೆ ವಿಷ್ಣು. ಅವನೇ ನಿಮಿತ್ತ ಅಂದರೆ, ಅವನೆ ಕರ್ಮಮಾಡಿಸುವವನು ಮತ್ತು ಅವನೇ ಉದ್ದೇಶ. ಅವನ ಪ್ರೀತಿಗಾಗಿಯೆ ಇದೆ, ಅದೇ ಫಲ. ಅಂಥ ಕರ್ಮ ಎಂದರ್ಥ.

* * *

ವೈಕುಂಠದಲ್ಲಿ ದಿವ್ಯವಾದ 'ನೈಶ್ರೇಯಸ' ಎಂಬ ಉದ್ಯಾನವಿದೆ. ಅದರ ವರ್ಣನೆ–

ವೈಮಾನಿಕಾಃ ಸಲಲನಾಶ್ಚರಿತಾನಿ ಯತ್ರ
ಗಾಯಂತಿ ಲೋಕಶಮಲಕ್ಷಪಣಾನಿ ಭರ್ತುಃ ।
ಅಂತರ್ಜಲೇ ತು ವಿಲಸನ್ಮಧುಮಾಧವೀನಾಂ
ಗಂಧೇನ ಖಂಡಿತಧಿಯೋಽಪ್ಯನಿಲಂ ಕ್ಷಿಪಂತಃ ॥ ೧೭ ॥

ನೀರಿನಲ್ಲಿ ರಾರಾಜಿಸುವ ಮಕರಂದಯುಕ್ತ ಮಾಧವೀಕುಸುಮಗಳ ಸುಗಂಧವನ್ನು ಮಂದಮಾರುತ ಹೊತ್ತು ತಂದಾಗ ಸ್ವಲ್ಪ ಚಿತ್ತಕ್ಷೋಭ ಉಂಟಾದರೂ ಆ ಮಂದಮಾರುತದಲ್ಲಿ ಆಸಕ್ತಿ ತೋರದೆ ಲೋಕದ ಎಲ್ಲ ಪಾಪ ಕಳೆವ ಭಗವಂತನ ಚರಿತ್ರೆಗಳನ್ನೇ ಹಾಡುತ್ತಾರೆ, ಸ್ತ್ರೀಯರೊಂದಿಗೆ ವಿಮಾನಗಳಲ್ಲಿ ಸಂಚರಿಸುವ ವೈಕುಂಠಲೋಕದ ಪ್ರಜೆಗಳು.

ಇಲ್ಲಿ 'ಖಂಡಿತಧಿಯಃ' ಎಂದರೆ ಹೂವಿನ ಪರಿಮಳಯುಕ್ತವಾದ ವಾಯುವನ್ನು ಸೇವಿಸಿದಾಗ ಆನಂದದಿಂದ ಕ್ಷಣಕಾಲ ಚಿತ್ತಕ್ಷೋಭದಿಂದ ಹೃದಯದಲ್ಲಿ ಭಗವಂತನ

ವಿಸ್ಮರಣೆಯಾಗುತ್ತದೆ. ಆದರೂ ಒಡನೆ ಎಚ್ಚೆತ್ತುಕೊಂಡು ವೈಕುಂಠಲೋಕದ ಪ್ರಜೆಗಳು ಭಗವನ್ನಾಮಸಂಕೀರ್ತನೆಗೇ ತೊಡಗುತ್ತಾರೆ, ಪರಿಮಳಯುಕ್ತವಾದ ವಾಯುವಿನಲ್ಲಿ ಆಸಕ್ತರಾಗುವುದಿಲ್ಲ ಎಂದರ್ಥ ಬೇರೆ ವ್ಯಾಖ್ಯಾನಕಾರರಿಗೂ ಸಮ್ಮತವೆ. ಜೀವಗೋಸ್ವಾಮಿವ್ಯಾಖ್ಯಾನದಲ್ಲಿ ಮಾತ್ರ ಹೂವಿನ ಪರಿಮಳವೂ ಭಗವಂತನ ವಿಭೂತಿರೂಪವಾಗಿದ್ದು ಭಗವಂತನ ಸ್ಮರಣೆಯನ್ನೇ ತರುತ್ತದೆ. ಅದರಿಂದಾಗುವ ಆನಂದದಿಂದ 'ಖಂಡಿತಧಿಯಃ' 'ಬುದ್ಧಿಯಲ್ಲಿ ಮೋಹ ಕವಿಯುತ್ತದೆ' ಆದರೂ ಆ ಗಂಧಕ್ಕಿಂತಲೂ ಭಗವಂತನ ಗುಣವೇ ಹೆಚ್ಚು ಪ್ರಿಯವೆಂದುಕೊಂಡು ಗಂಧವನ್ನು ತರುವ ಗಾಳಿಯನ್ನು ಆದರಿಸುವುದಿಲ್ಲ ಎಂದು ವಿವರಣೆ ನೀಡಲಾಗಿದೆ. ಆದರೆ 'ಖಂಡಿತಧಿಯಃ' ಎನ್ನುವುದಕ್ಕೆ ಈ ವ್ಯಾಖ್ಯಾನ ಸರಿಯಲ್ಲ. ಆನಂದಮಯವಾದ ಪರಮಾತ್ಮಾನುಭವವನ್ನು ಬುದ್ಧಿಮೋಹ ಎನ್ನಲಾಗದು. ಮೋಹವೆಂದರೆ ಭ್ರಾಂತಿ. ಪರಮಾತ್ಮಾನುಭವ ಭ್ರಾಂತಿಯಲ್ಲ.

ಆದರೂ ಸುಗಂಧಸೇವನೆಯಿಂದಾಗುವ ಚಿತ್ತಕ್ಷೋಭವೂ ಭ್ರಮವೇ. ಅದು ಮುಕ್ತರಿಗೆ ಎಂದೂ ಇಲ್ಲ. ಸುಗಂಧಸೇವನೆಯಿಂದ ಕ್ಷಣಕಾಲ ಪರಮಾತ್ಮನ ವಿಸ್ಮರಣೆಯೂ ಅವರಿಗೆ ಉಂಟಾಗಲಾರದು. ಆದಂತೆ ವರ್ಣನೆ ಭಾಗವತದಲ್ಲಿ ಇದೆ. ಈ ವಿರೋಧಕ್ಕೆ ಪರಿಹಾರವನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಹೇಳುವುದಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

ಮುಕ್ತಾಶ್ಚೈವಾಧಿಕಾರಸ್ಥಾ ದ್ವೇಧಾ ವೈಕುಂಠಲೋಕಗಾಃ ।
ಅಮುಕ್ತಾನಾಂ ಭ್ರಮಃ ಕ್ವಾಪಿ ನ ಮುಕ್ತಾನಾಂ ಕ್ವಚಿದ್ ಭವೇತ್ ॥
ಇತಿ ಭವಿಷ್ಯತ್ಪುರಾಣೇ ॥

ನ ರಜ ಆದಧುರಿತಿ ಚ ।

ವೈಕುಂಠಲೋಕದ ಪ್ರಜೆಗಳು ಎರಡು ಬಗೆಯವರಾಗಿದ್ದಾರೆ. ಮುಕ್ತರು ಮತ್ತು ಅಮುಕ್ತಸ್ಥಾನದಲ್ಲಿರುವ ಅಧಿಕಾರಸ್ಥರು. ಅವರಲ್ಲಿ ಅಮುಕ್ತಸ್ಥಾನದಲ್ಲಿರುವವರಿಗೆ ಕೆಲವು ವೇಳೆ ಚಿತ್ತಕ್ಷೋಭ ಉಂಟಾಗುತ್ತದೆ ಹೊರತು ಮುಕ್ತರಿಗೆ ಎಂದೂ ಉಂಟಾಗುವುದಿಲ್ಲ. ಎಂದು ಭವಿಷ್ಯತ್ಪುರಾಣದಲ್ಲಿ ಹೇಳಿದೆ.

ಯೇಷಾಂ ಬೃಹತ್ಕಟಿತಟಾಃ ಸ್ಮಿತಶೋಭಿಮುಖ್ಯಃ ।
ಕೃಷ್ಣಾತ್ಮನಾಂ ನ ರಜ ಆದಧುರುತ್ಸ್ಮಯಾದ್ಯೈಃ ॥

ಎಂದು ಇಲ್ಲಿಯೇ ಇಪ್ಪತ್ತನೇ ಶ್ಲೋಕದಲ್ಲಿ ಮುಕ್ತರಿಗೆ ವಿಷಯಸಂಬಂಧವಾದರೂ ಚಿತ್ತಕ್ಷೋಭವಿಲ್ಲವೆಂದು ಹೇಳಿದೆ.

ಅದರಿಂದ ಪ್ರಕೃತಶ್ಲೋಕದಲ್ಲಿ 'ಗಂಧೇನ ಖಂಡಿತಧಿಯಃ' ಎಂದುದು 'ಅಮುಕ್ತಸ್ಥಾನದಲ್ಲಿರುವವರಿಗೆ ವಿಷಯಸಂಬಂಧದಿಂದ ಕೆಲವೊಮ್ಮೆ ಚಿತ್ತಕ್ಷೋಭವಾಗುವುದುಂಟು' ಎಂಬ ಅಭಿಪ್ರಾಯದಿಂದ. ಮುಕ್ತರಿಗೂ ಹಾಗೆ ಚಿತ್ತಕ್ಷೋಭವಾಗುವುದೆಂದು ತಿಳಿಯಬಾರದು. ಅದರಿಂದಲೆ ಸನಕಾದಿಗಳ ವಿಷಯದಲ್ಲಿ ಭ್ರಮೆಗೊಳಗಾದ ಜಯವಿಜಯರು ಅಮುಕ್ತರೆಂದು ಹೇಳಿದಂತಾಯಿತು.

* * *

ವೈಕುಂಠದಲ್ಲಿ ಪ್ರಜೆಗಳು ಹರಿಯ ಗುಣಗಾನ ಮಾಡುತ್ತಿದ್ದರೆ ದುಂಬಿಗಳು ಶ್ರುತಿ ಸೇರಿಸುವುವು, ಪಾರಿವಾಳ ಕೋಗಿಲೆ ಗಿಳಿ ಮಂತಾದವುಗಳು ಹಾಡುಗಾರಿಕೆಯಲ್ಲಿ ಜೊತೆ ಗಾರರಾಗಿ ಸೇರಿ ಕೊಳ್ಳುವುವು.

ಪಾರಾವತಾನ್ಯಭೃತಸಾರಸಚಕ್ರವಾಕ
ನತ್ಯೂಹ ಹಂಸಶುಕತಿತ್ತಿರಿಬರ್ಹಿಣಾದ್ಯೈಃ ।
ಕೋಲಾಹಲೇ ವಿರಚಿತೇ ಚಿರಮಾತ್ರಯೋಚ್ಚೈ-
ರ್ಭೃಂಗಾಧಿಪೇ ಹರಿಕಥಾಮನು ಗಾಯಮಾನೇ ॥ ೧೮ ॥

ಪಾರಿವಾಳ ಕೋಗಿಲೆ ಸಾರಸ ಚಕ್ರವಾಕ ಹಂಸ ಗಿಳಿ ತಿತ್ತಿರಿ ನವಿಲುಗಳು ಹಾಡು ಗಾರಿಕೆ ಪ್ರಾರಂಭಿಸಿದಾಗ ಜೊತೆಗೆ ದುಂಬಿಯೂ ಶ್ರುತಿ ಸೇರಿಸಿದಾಗ ಇದೇ ತಕ್ಕ ಸಮಯವೆಂದು ಜನರೂ ಹರಿಯ ಗುಣಗಳನ್ನು ಗಾನಮಾಡುತ್ತಾರೆ.

ಇಲ್ಲಿ ವಿಶ್ವನಾಥ ವ್ಯಾಖ್ಯಾನದಲ್ಲಿ ದುಂಬಿ ಹರಿಕಥೆ ಮಾಡುತ್ತಿಲ್ಲ. ಹರಿಕಥೆಯಂತಹ ಧ್ವನಿಯನ್ನು ಮಾಡುತ್ತಿದೆ. ಘುಣಾಕ್ಷರನ್ಯಾಯದಿಂದ ಅಕಸ್ಮಾತ್ ಹರಿ ಹರಿ ಎಂದು ರೆಕ್ಕೆಗಳಿಂದ ಉಚ್ಚರಿಸಿದಂತಾಗುತ್ತದೆ ಎಂದು ಹೇಳಿದೆ. ಏಕೆಂದರೆ 'ಹರಿಕಥಾಮಿವ ಗಾಯಮಾನೇ' ಎಂದು ಎಲ್ಲ ಬೇರೆ ವ್ಯಾಖ್ಯಾನಕಾರರೂ ಅಪಪಾಠವಿಟ್ಟುಕೊಂಡಿದ್ದಾರೆ. ವಸ್ತುತಃ ಪಕ್ಷಿಗಳೂ ಹರಿಕಥೆಯನ್ನೇ ಗಾನ ಮಾಡುತ್ತವೆ. ಶೇಷಗರುಡರು ಹಾವು ಪಕ್ಷಿಗಳಾದರೂ ಹರಿಕಥಾಪ್ರವಚನ ಮಾಡುವಂತೆ.

ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಗರುಡನಂತೆ ದುಂಬಿಯೂ ಸ್ವಾಭಾವಿಕವಾಗಿ ಹರಿಕಥಾಗಾನವನ್ನೇ ಮಾಡುತ್ತದೆ. ಆದರೂ 'ಹರಿಕಥಾಮಿವ' ಎಂಬುದು ಜನರು ಮಾಡುವ ಗಾನಕ್ಕೆ ಸದೃಶ ಎಂಬ ಅಭಿಪ್ರಾಯದಿಂದ, ವೀಣೆ ಮುಂತಾದವುಗಳಂತೆ' ಎಂದಿದೆ. ವೈಕುಂಠದಲ್ಲಿ ಪ್ರಾಣಿಪಶುಪಕ್ಷಿಗಳು ಮರಗಿಡ ಬಳ್ಳಿಗಳು ಇವೆಲ್ಲವೂ ಹೀನ ಜನ್ಮಗಳಲ್ಲವೆ? ಭಗವದ್ಭಕ್ತರಿಗೆ ಇಂಥ ಪಾಡು ಬರಬಹುದೆ? ಎಂದು ಪ್ರಶ್ನೆ

ಮಾಡಿಕೊಂಡು ವಂಶೀಧರವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ– 'ಪಕ್ಷಿವೃಕ್ಷಾದಿಗಳು ವೈಕುಂಠದಲ್ಲಿ ಶೋಭೆಗಾಗಿ ಭಗವಂತನ ಇಚ್ಛೆಯಿಂದ ಉಂಟಾಗಿವೆ ಹೊರತು ಕರ್ಮಾಧೀನವಾಗಿ ಅಲ್ಲ.

ವೈಕುಂಠಃ ಕಲ್ಪಿತೋ ಯೇನ ಲೋಕೋ ಲೋಕನಮಸ್ಕೃತಃ ।
ರಮಯಾ ಪ್ರಾರ್ಥ್ಯಮಾನೇನ ದೇವ್ಯಾ ತತ್ಪ್ರಿಯಕಾಮ್ಯಯಾ ॥

ಎಂದು ಅಷ್ಟಮಸ್ಕಂಧದಲ್ಲಿ ವೈಕುಂಠಲೋಕವೇ ವೈಕುಂಠನಾಮಕ ಹರಿಯಿಂದಾದುದೆಂದು ಹೇಳಿದೆ'

ವೈಕುಂಠ ವೈಕುಂಠನಿಂದ ನಿರ್ಮಿತವಾಗಿದೆ ಎನ್ನುವುದು ಸರಿಯೆ. ಏಕೆಂದರೆ ಅಮುಕ್ತಸ್ಥಾನಕ್ಕೆ ಸೃಷ್ಟಿಲಯಗಳಿವೆ. ಅಲ್ಲಿಗೆ ಈಗ ಸನಕಾದಿಗಳು ಬರುತ್ತಿದ್ದಾರೆ. ಜಯವಿಜಯರು ಅಮುಕ್ತರು ಅಧಿಕಾರಸ್ಥರು ಅಲ್ಲಿಯೆ ದ್ವಾರಪಾಲಕರಾಗಿದ್ದಾರೆ. ಆದರೆ ಪಶುಪಕ್ಷಿ ಮುಂತಾದವು ಕೇವಲ ಶೋಭೆಗಾಗಿ ಭಗವಂತ ನಿರ್ಮಿಸಿದ್ದಲ್ಲ. ಅವುಗಳು ಕೂಡ ಕರ್ಮಾಧೀನ ಶರೀರ ಉಳ್ಳ ಚರಮಶರೀರಿಗಳು. ಪ್ರಾರಬ್ಧ ಅನುಭವಿಸುತ್ತಿದ್ದಾರೆ. ಈ ಅಂಶ ಬೇರೆ ಯಾವ ವ್ಯಾಖ್ಯಾನದಲ್ಲಿಯೂ ಸಿಗುವುದಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

'ಈ ಶ್ಲೋಕದಲ್ಲಿ ವರ್ಣಿತರಾಗಿರುವ ಪಕ್ಷಿ ಕೀಟ ಮುಂತಾದ ಪ್ರಾಣಿಗಳೂ ಮುಂದಿನ ಶ್ಲೋಕದಲ್ಲಿ ಹೇಳುವ ಮಂದಾರ ತುಲಸಿ ಮುಂತಾದ ಸ್ಥಾವರಗಳೂ ಜ್ಞಾನಸಾಧನೆಯನ್ನು ಪೂರ್ತಿಗೊಳಿಸಿ ಚರಮಶರೀರಿಗಳಾಗಿ ವೈಕುಂಠದ ಅಮುಕ್ತಸ್ಥಾನಕ್ಕೆ ಬಂದವರು. ಮುಂದೆ ಮುಕ್ತಸ್ಥಾನದಲ್ಲಿ ಅವರಿಗೆ ವ್ಯಕ್ತವಾಗುವ ಸ್ವರೂಪ ಶರೀರಗಳೂ ಹಾಗೇ ಇರುತ್ತವೆ' ಎಂದು.

ತಿರಶ್ಚೀನಾಃ ಸ್ಥಾವರಾಶ್ಚ ಸರ್ವೇ ಜ್ಞಾನಾದ್ ವಿಕುಂಠಗಾಃ ।
ಅಮುಕ್ತಾ ಮುಕ್ತಿಮಾಯಾಂತಿ ನಿಯಮಾತ್ ಕರ್ಮಣಃ ಕ್ಷಯೇ ॥
ಇತಿ ಚ ॥

ಪಾರಿವಾಳ ಮುಂತಾದ ತಿರ್ಯಕ್ ಜಂತುಗಳೂ ಮಂದಾರ ತುಳಸಿ ಮುಂತಾದ ಸ್ಥಾವರಗಳೂ ಅಪರೋಕ್ಷಜ್ಞಾನ ಹೊಂದಿದವುಗಳಾದ್ದರಿಂದ ವೈಕುಂಠದ ಅಮುಕ್ತಸ್ಥಾನದಲ್ಲಿ ಪ್ರವೇಶ ಪಡೆದಿರುವ ಅಮುಕ್ತಜೀವರೇ ಆಗಿದ್ದಾರೆ. ಅವರ ಪ್ರಾರಬ್ಧಕರ್ಮ ಕ್ಷಯ ಹೊಂದಿದಾಗ ಅವರು ನಿಶ್ಚಿತವಾಗಿ ಮುಕ್ತಿ ಹೊಂದುತ್ತಾರೆ ಎಂದೂ ಹೇಳಿದೆ(ಅದರಿಂದ ಹರಿಕಥಾಸಾಮರ್ಥ್ಯ ಅವರಿಗೆ ಅಸಂಭಾವಿತವೇನಲ್ಲ.)

* * *

ವೈಕುಂಠದಲ್ಲಿ ಮಂದಾರ ಮುಂತಾದ ಹೂಗಿಡಗಳೂ ತುಳಸಿಯೂ ಪರಮಾತ್ಮನನ್ನು ಸೇವೆ ಮಾಡುತ್ತಿವೆ. ಆ ಸೇವೆಯಲ್ಲಿ ನಾ ಮುಂದು ತಾ ಮುಂದೆನ್ನುವ ಸ್ಪರ್ಧಾ ಮನೋಭಾವವೂ ಇದೆ–

ಮಂದಾರಕುಂದಕುರಬೋತ್ಪಲಚಂಪಕೋರ್ಣ–
ಪುನ್ನಾಗನಾಗಬಕುಲಾಂಬುಜಪಾರಿಜಾತಾಃ ।
ಗಂಧೇಽರ್ಚಿತೇ ತುಳಸಿಕಾಭರಣೇನ ತಸ್ಯಾ
ಯಸ್ಮಿಂಸ್ತಪಃ ಸುಮನಸೋ ಬಹು ಮಾನಯಂತಿ ॥ ೧೯ ॥

ವೈಕುಂಠದಲ್ಲಿ ಭಕ್ತರು ಭಗವಂತನ ಪಾದಕಮಲಗಳನ್ನು ಮಂದಾರ ಮಲ್ಲಿಗೆ ಕುರವಕ ನೈದಿಲೆ ಸಂಪಿಗೆ ಕರವೀರ ಪುನ್ನಾಗ ನಾಗಕೇಸರ ವಕುಳ ಕಮಲ ಪಾರಿಜಾತ ಮುಂತಾದ ಪುಷ್ಪಗಳಿಂದಲೂ ತುಳಸಿಯಿಂದಲೂ ಪೂಜಿಸಿದಾಗ ಶ್ರೀಹರಿ ತಾನೇ ತುಳಸಿಮಾಲೆಯನ್ನು ಎತ್ತಿಕೊಂಡು ತನ್ನನ್ನು ಅಲಂಕರಿಸಿಕೊಳ್ಳುತ್ತಾನೆ. ಅದನ್ನು ಕಂಡ ಮಂದಾರ ಮುಂತಾದ ಹೂಗಳು ಶ್ರೀಹರಿಗೆ ಪ್ರಿಯವಾಗಬಲ್ಲ ಸುಗಂಧ ಸಂಪಾದನೆಗಾಗಿ ತುಳಸಿ ಮಾಡಿದ ತಪಸ್ಸು ದೊಡ್ಡದೆಂದು ಗೌರವಿಸುತ್ತವೆ.

ಇಲ್ಲಿ 'ತುಲಸಿಕಾಭರಣೇನ ಶ್ರೀಹರಿಣಾ ತುಲಸ್ಯಾ ಗಂಧೇಽರ್ಚಿತೇ' 'ತುಲಸಿಯನ್ನು ಆಭರಣ ಮಾಡಿಕೊಂಡು ಅದರ ಗಂಧವನ್ನು ಶ್ರೀಹರಿ ಅರ್ಚಿಸಿದಾಗ' ಎಂದು ಬೇರೆ ವ್ಯಾಖ್ಯಾನಕಾರರು ಅರ್ಥ ಹೇಳುತ್ತಾರೆ. ಶ್ರೀಹರಿ ಗಂಧವನ್ನು ಅರ್ಚಿಸುವುದೆಂದರೆ ಶ್ರೇಷ್ಠವೆಂದು ಆದರಿಸುವುದೆಂದು ಅವರು ಹೇಳಿದ ತಾತ್ಪರ್ಯ. 'ಗಂಧೇಽರ್ಚಿತೇ' ಎಂದು ಎರಡು ಶಬ್ದ ಜೊತೆಗಿರುವುದರಿಂದ ಅವರು ಹೀಗೆ ಶ್ರಮಪಡಬೇಕಾಯಿತು. ವಸ್ತುತಃ 'ಶ್ರೀಹರಿ ಭಕ್ತರಿಂದ ತುಲಸೀಮಾಲೆಯಿಂದ ಅರ್ಚಿತನಾದಾಗ ಅವನು ತುಲಸಿಮಾಲೆಯನ್ನು ಆಭರಣಮಾಡಿಕೊಳ್ಳುವುದರಿಂದ ಅದಕ್ಕೆ ಕಾರಣವಾದ ಶ್ರೇಷ್ಠವಾದ ಗಂಧಕ್ಕಾಗಿ ತುಲಸಿಯು ಮಾಡಿದ ತಪಸ್ಸನ್ನು ಮಂದಾರಾದಿ ಪುಷ್ಪಗಳು ಪ್ರಶಂಸಿಸುತ್ತವೆ' ಎಂಬುದು ಶ್ಲೋಕದ ಅರ್ಥ. 'ಗಂಧೇ ಅರ್ಚಿತೇ' ಎಂದು ಅನ್ವಯವಲ್ಲ. 'ಗಂಧೇ ತಪಃ' ಗಂಧಕ್ಕಾಗಿ ಮಾಡಿದ ತಪಸ್ಸು ಎಂದನ್ವಯ. ಅದನ್ನು ಶ್ರೀಮದಾಚಾರ್ಯರು ಹೇಳುತ್ತಾರೆ–

ಭಕ್ತೈರರ್ಚಿತೇ ಸತಿ ಭಗವತಾ ತುಳಸಿಕಾಭರಣೇ ಕೃತೇ ತಸ್ಯಾ ಗಂಧಾರ್ಥಂ ತಪೋ ಬಹು ಮಾನಯಂತಿ ॥

ಭಗವಂತ ಭಕ್ತರಿಂದ ಅರ್ಚಿತನಾದಾಗ, ಅವನು ತುಲಸಿಯನ್ನು ಆಭರಣ ಮಾಡಿಕೊಂಡಾಗ, ತುಲಸಿಯು ಗಂಧಕ್ಕಾಗಿ ಮಾಡಿದ್ದ ತಪಸ್ಸನ್ನು ಮಂದಾರಾದಿ ಪುಷ್ಪಗಳು ಬಹು ಪ್ರಶಂಸಿಸುತ್ತವೆ.

* * *

ಅನ್ಯವಾರ್ತೆಗಳನ್ನು ಬಿಟ್ಟು ಹರಿಕಥಾಶ್ರವಣದಲ್ಲಿ ಆಸಕ್ತರಾಗುವವರಿಗೆ ಮಾತ್ರ ವೈಕುಂಠ ಲೋಕದಲ್ಲಿ ಪ್ರವೇಶ ಲಭ್ಯ ಎನ್ನುತ್ತಾರೆ ದೇವತೆಗಳಿಗೆ ಬ್ರಹ್ಮದೇವರು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಯನ್ನ ವ್ರಜಂತ್ಯಘಭಿದೋऽರಚನಾನುವಾದಾಃ
ಶೃಣ್ವಂತಿ ಯೇऽನ್ಯವಿಷಯಾಃ ಕುಕಥಾ ಮತಿಘ್ನೀಃ ।
ಯಾಸ್ತು ಶ್ರುತಾ ಹತಭಗೈರ್ನೃಭಿರಾತ್ತವೀರ್ಯಾ–
ಸ್ತಾಸ್ತಾನ್ ಕ್ಷಿಪಂತ್ಯಶರಣೇಷು ತಮಸ್ಸು ಹಂತ ॥ ೨೩ ॥

ಪಾಪಪರಿಹಾರಕನಾದ ಶ್ರೀಹರಿಯ ಚರಿತ್ರೆಗಳನ್ನು ಕೀರ್ತನ ಮಾಡದವರು ಈ ವೈಕುಂಠಲೋಕವನ್ನು ಹೊಂದಲಾರರು. ಬುದ್ಧಿಯನ್ನು ಹಾಳುಮಾಡುವ ಕೆಟ್ಟ ಅನ್ಯವಾರ್ತೆಗಳನ್ನೇ ಆದರದಿಂದ ಕೇಳಿದರೆ ಅವು ಕೇಳುವವನ ಎಲ್ಲ ಪುಣ್ಯಗಳನ್ನು ಅಪಹರಿಸಿ ಭಾಗ್ಯಹೀನನಾದ ಅವನನ್ನು ಯಾರೂ ರಕ್ಷಕರಿಲ್ಲದಂಥ ತಮಸ್ಸಿನಲ್ಲಿ ತಳ್ಳುತ್ತವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ರಚನಾನುವಾದಾತ್' ಎಂದು ಪಾಠವಿಟ್ಟುಕೊಂಡು 'ಹರಿಕಥೆಗಿಂತ ಬೇರೆ ವಿಷಯವನ್ನು ಹೇಳುವ ಮಾತುಗಳು' 'ಅಘಭಿದೋ ರಚನಾನುವಾದಾದನ್ಯವಿಷಯಾಃ' ಎಂದು ಅನ್ವಯಮಾಡಿದ್ದಾರೆ. 'ಅರಚನಾನು ವಾದಾಃ' ಎಂದು ಆಚಾರ್ಯರ ಪಾಠ. ಅದರ ಪ್ರಕಾರ ಶ್ಲೋಕಹೆಚ್ಚು ಅರ್ಥಗರ್ಭಿತವಾಗುತ್ತದೆ. ವೈಕುಂಠಲೋಕಪ್ರಾಪ್ತಿಗೆ ಅಯೋಗ್ಯರು ಎರಡು ಬಗೆ. ಅನ್ಯವಿಷಯವನ್ನೇ ಶ್ರವಣಮಾಡುವವರು ತಮೋಯೋಗ್ಯರು. ಹರಿಕಥೆಯನ್ನು ಶ್ರವಣಮಾಡದವರು ನಿತ್ಯಸಂಸಾರಿಗಳು,ನಿತ್ಯಸಂಸಾರಿಗಳನ್ನು 'ಅರಚನಾನುವಾದ' ರೆನ್ನಲಾಗಿದೆ. ತಮೋಯೋಗ್ಯರನ್ನು 'ಅನ್ಯವಿಷಯಾಃ ಕುಕಥಾಃ ಶೃಣ್ವಂತಿ' ಎನ್ನಲಾಗಿದೆ. 'ರಚನಾನುವಾದಾದನ್ಯವಿಷಯಾಃ' ಎಂದಿಟ್ಟುಕೊಂಡರೆ ಕೇವಲ ತಮೋಯೋಗ್ಯರನ್ನು ಹೇಳಿದಂತಾಗುವುದು. ಅದರಿಂದ ಸರಿಯಾದ ಪಾಠ, ಆ ಪಾಠದಲ್ಲಿ ಪದವಿಭಾಗ ಇವೆರಡನ್ನೂ ಒಂದು ಶಬ್ದದಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಅರಚನಾನುವಾದಾಃ ।

'ಅಘಭಿದೋರಚನಾನುವಾದಾಃ' ಎಂದು ಪಾಠ. 'ಅರಚನಾನುವಾದಾಃ' ಎಂದು ಪದವಿಭಾಗ.

* * *

ವೈಕುಂಠಲೋಕಪ್ರಾಪ್ತಿಗೆ ಧರ್ಮಜ್ಞಾನಾದಿ ಸಂಪಾದನ ಮಾಡುವುದು ಅತ್ಯವಶ್ಯ. ಅದನ್ನು ಮಾಡದ ಮಾನವಜನ್ಮವೆ ವ್ಯರ್ಥ ಎಂದು ಬ್ರಹ್ಮದೇವರು ದೇವತೆಗಳಿಗೆ ಹೇಳುತ್ತಾರೆ–

ಯೇಽಭ್ಯರ್ಥಿತಾಮಪಿ ಚ ನೋ ನೃಗತಿಂ ಪ್ರಪನ್ನಾ
ಜ್ಞಾನಂ ಚ ತತ್ವವಿಷಯಂ ಸಹಧರ್ಮ ಯತ್ರ ।
ನಾರಾಧನಂ ಭಗವತೋ ವಿತರಂತ್ಯಮುಷ್ಯ
ಸಂಮೋಹಿತಾ ವಿತತಯಾ ನನು ಮಾಯಯಾ ತೇ ॥ ೨೪ ॥

ಧರ್ಮ ತತ್ವಜ್ಞಾನಗಳಿಗೆ ಸಾಧನವಾಗಿದ್ದು ಸಜ್ಜನರಿಗೆ ಅಪೇಕ್ಷಿತವಾಗಿರುವ ಮಾನವಜನ್ಮವನ್ನು ಹೊಂದಿಯೂ ಎಲ್ಲೆಡೆ ವ್ಯಾಪ್ತವಾದ ಭಗವಂತನ ಬಂಧಕಶಕ್ತಿರೂಪ ಮಾಯೆಯಿಂದ ಮೋಹಿತನಾಗಿ ಭಗವಂತನನ್ನು ಆರಾಧನೆ ಮಾಡದವರು ಅಂದರೆ ಧರ್ಮ ತತ್ವಜ್ಞಾನಸಂಪಾದನ ಮಾಡದವರು ಮಾನವಜನ್ಮವನ್ನು ಹೊಂದಲೇ ಇಲ್ಲವೆನ್ನಬೇಕು. ಏಕೆಂದರೆ ಅಂಥ ಮಾನವ ಜನ್ಮದಿಂದೇನು?

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನೋ ನೃಗತಿಂ' ಎಂಬಲ್ಲಿ 'ನೋ' ಎಂದರೆ 'ನಃ' ನಮಗೆ ಬ್ರಹ್ಮಾದಿದೇವತೆಗಳಿಗೆ ನರಜನ್ಮ ಅಪೇಕ್ಷಿತವಾಗಿದೆ ಎಂದು ಅರ್ಥ ಹೇಳಿದ್ದಾರೆ. ನರರಿಗೆ ಜ್ಞಾನದಾನ ಮಾಡುವುದಕ್ಕಾಗಲಿ ನರನಾಗಿ ಹರಿ ಅವತರಿಸಿದಾಗ ಅವನ ಸೇವೆ ಮಾಡುವುದಕ್ಕಾಗಲಿ ನರಜನ್ಮವನ್ನು ದೇವತೆಗಳು ಬಯಸಬಹುದು. ಹೊರತು ಮನುಷ್ಯರಂತೆ ಅಪರೋಕ್ಷಸಾಧನೆಗಾಗಿ ಅಲ್ಲ. ಅವರು ಅಪರೋಕ್ಷಜ್ಞಾನಿಗಳೇ. ನರಜನ್ಮಬಯಸಿದರೂ ಸ್ವೇಚ್ಛೆಯಿಂದ ಅದನ್ನು ಪಡೆಯಬಲ್ಲರು. ಅದು ದುರ್ಲಭವಲ್ಲ.

ವಂಶೀಧರವ್ಯಾಖ್ಯಾನದಲ್ಲಿ 'ವೈಕುಂಠಕ್ಕೆ ಹೋಗಲು ಮನುಷ್ಯಜಾತಿಗೇ ಅಧಿಕಾರ ಹೊರತು ದೇವಾದಿಜಾತಿಗೆ ಅಲ್ಲ. ಮನುಷ್ಯನೂ ಕೇವಲ ಧರ್ಮ ತತ್ವಜ್ಞಾನ ಸಂಪಾದಿಸಿ ಫಲವಿಲ್ಲ, ಭಕ್ತಿಯಿಂದ ಭಗವದಾರಾಧನೆ ಮಾಡಬೇಕು.'ಎಂದಿದೆ. ಇದು ಅಸಂಗತ. ಮನುಷ್ಯಜಾತಿಗೆ ಸ್ವರ್ಗಕ್ಕೇ ಹೋಗಲು ಅಧಿಕಾರವಿಲ್ಲ, ವೈಕುಂಠಕ್ಕೆ ಹೇಗೆ? ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ 'ಬ್ರಹ್ಮಾದಿಗಳು ಬ್ರಹ್ಮಾದಿಪದವಿಯನ್ನು ಹೊಂದಿದ್ದು ಮನುಷ್ಯರಾಗಿ ಹುಟ್ಟಿ ಸಾಧನಮಾಡಿದ್ದರಿಂದ. ಅದರಿಂದ ಅವರಿಗೂ ಮನುಷ್ಯಜನ್ಮ ಅಪೇಕ್ಷಿತ' ಎಂದಿದೆ. ಇದೂ ಸರಿಯಲ್ಲ. ದೇವತೆಗಳು ತಮ್ಮ ಲೋಕದಲ್ಲಿಯೇ ಸದಾ ಶ್ರವಣಮನನಾದಿಗಳನ್ನು ಮಾಡುತ್ತ ಜ್ಞಾನಸಾಮರ್ಥ್ಯ ದಿಂದಲೇ ಪದವಿಗಳನ್ನು ಪಡೆಯುತ್ತಾರೆ. ಅದರಿಂದ ಅವರು ತಮಗೆ ನರಜನ್ಮ ಬರಲೆಂದು ಅಪೇಕ್ಷೆಪಡುವುದಿಲ್ಲ.

ಮನುಷ್ಯೋತ್ತಮವರ್ಗದವರು ತೃಣಾದಿ ಯೋಗ್ಯಜೀವರು ಅಪರೋಕ್ಷಸಾಧನೆ ಮಾಡಲು ಅವರಿಗೆ ನರಜನ್ಮ ಬರಲೆಂದು ದೇವತೆಗಳು ಅಪೇಕ್ಷಿಸಬಹುದು. ಇಂಥಹ ಮಾನವರಿಗೆ ಅಪೇಕ್ಷಿತವಾದ ನರಜನ್ಮ ಹೊಂದಿಯೂ ಒಬ್ಬನು ತತ್ವಜ್ಞಾನ, ಭಗವದ್ಭಕ್ತಿ ಸಂಪಾದಿಸದಿದ್ದರೆ ಅವನು ಮಾನವನೇ ಅಲ್ಲ ಎಂದು ಶ್ಲೋಕದಲ್ಲಿ ಹೇಳಿದಂತಾಗುತ್ತದೆ. 'ನೋ ನೃಗತಿಂ ಪ್ರಪನ್ನಾಃ' ನರಜನ್ಮ ಹೊಂದಿಯೂ ಹೊಂದಲಿಲ್ಲ ಏಕೆಂದರೆ ಅದು ವ್ಯರ್ಥವಾಯಿತು, ಹೀಗಾಗಿ ಅವನು ಮಾನವನೇ ಅಲ್ಲ ಎಂದು ಯಾದುಪತ್ಯವ್ಯಾಖ್ಯಾನ. ನರಜನ್ಮ ಹೊಂದಿದರೂ ಯೋಗ್ಯನರಜನ್ಮ ಹೊಂದಿದಂತಾಗಲಿಲ್ಲ, ಏಕೆಂದರೆ ಅವರು ಧರ್ಮತತ್ವಜ್ಞಾನಗಳನ್ನು 'ನೋ ಪ್ರಪನ್ನಾಃ' ಹೊಂದಲಿಲ್ಲ. ಹೀಗೇಕೆ ಮಾಡುತ್ತಾರೆ ಎಂದರೆ ಅವರು ಮಾನವರೇ ಅಲ್ಲ, ಸ್ವಭಾವತಃ ಅಸುರರು ಎಂದು ವಿಜಯಧ್ವಜೀಯ ವ್ಯಾಖ್ಯಾನ. ದೇವತೆಗಳಿಗೆ ತಮಗೆ ನರಜನ್ಮ ಬರಲೆಂಬ ಅಪೇಕ್ಷೆ ಇಲ್ಲ ಎಂದು ಯಾದುಪತ್ಯ ಹೇಳಿದರೆ ಅಜ್ಞಾನಿಗಳಿಗೆ ಜ್ಞಾನಸಾಧನೆಗಾಗಿ ನರಜನ್ಮಬರಲೆಂದು ದೇವತೆಗಳಿಗೆ ಅಪೇಕ್ಷೆ ಇದೆ ಎಂದು ವಿಜಯಧ್ವಜೀಯ ಹೇಳುತ್ತಿದೆ. ತಾತ್ಪರ್ಯ ಒಂದೇ–

ಯೇ ನೃಗತಿಂ ಜ್ಞಾನಾದಿಯೋಗ್ಯಾಂ ನ ಪ್ರಪನ್ನಾಃ ತೇ ಮೋಹಾದ್ ಭಗವದಾರಾಧನಂ ನ ಕುರ್ವಂತಿ । ಧರ್ಮಜ್ಞಾನವರ್ಜಿತಾ ಮಾನುಷಾ ಏವ ನ ಭವಂತೀತ್ಯರ್ಥಃ ।

ಯಾರು ಜ್ಞಾನಾದಿಯೋಗ್ಯವಾದ ನರಜನ್ಮವನ್ನು ಹೊಂದಲಿಲ್ಲವೋ, ಅಂದರೆ ನರಜನ್ಮ ಹೊಂದಿಯೂ ಅದನ್ನು ಜ್ಞಾನಾದಿ ಸಾಧನವಾಗಿ ಮಾಡಿಕೊಳ್ಳಲಿಲ್ಲವೋ, ಅವರು ಮೋಹದಿಂದ ಭಗವದಾರಾಧನೆಯನ್ನು ಮಾಡುವುದಿಲ್ಲ. ಧರ್ಮಜ್ಞಾನರಹಿತರಾದ ಅವರು ಮನುಷ್ಯರೇ ಆಗುವುದಿಲ್ಲ. ಅವರಿಗೆ ಮಾನವ ಜನ್ಮ ವ್ಯರ್ಥ. ಅವರು ಸ್ವಭಾವತಃ ಅಸುರರು.

* * *

ಇಂಥಹ ವೈಕುಂಠದಲ್ಲಿ ಆರು ದ್ವಾರಗಳನ್ನು ಯಾರ ತಡೆಯೂ ಇಲ್ಲದೆ ದಾಟಿ ಏಳನೇ ದ್ವಾರಕ್ಕೆ ಬಂದಿದ್ದಾರೆ, ಸನಕಾದಿ ಮುನಿಗಳು. ಅಲ್ಲಿ ಜಯವಿಜಯರು ದ್ವಾರಪಾಲಕರು ತಡೆದಿದ್ದಾರೆ–

ಮತ್ತದ್ವಿರೇಫವನಮಾಲಿಕಯಾ ನಿವೀತೌ
ವಿನ್ಯಸ್ತಯಾಽಸಿತಚತುಷ್ಟಯಬಾಹುಮಧ್ಯೇ ।
ವಕ್ತ್ರಭ್ರುವಾ ಕುಟಿಲಯಾ ಸ್ಫುಟನಿರ್ಗತೇನ
ರಕ್ತೇಕ್ಷಣೇನ ಚ ಮನಾಗ್ ರಭಸಂ ದಧಾನೌ ॥ ೨೮ ॥

ನೀಲವರ್ಣದ ಚತುರ್ಭುಜಗಳ ಮಧ್ಯದಲ್ಲಿ, ಮದಿಸಿದ ದುಂಬಿಗಳಿಂದ ಯುಕ್ತವಾದ ವನಮಾಲೆಯಿಂದ ವಕ್ಷಃಸ್ಥಲದಲ್ಲಿ ಅಲಂಕೃತರು, ಹುಬ್ಬು ಗಂಟಿಕ್ಕಿ ಕೆಂಗಣ್ಣಿಂದ ನೋಡುವ ಮುಖದಿಂದ ಸ್ವಲ್ಪ ಕೋಪಾವೇಶವನ್ನು ತೋರುವವರು ಇಂಥ ಜಯವಿಜಯರನ್ನು ಸನಕಾದಿಮುನಿಗಳು ಕಂಡರು.

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ವಕ್ತ್ರಂ ಭ್ರುವಾ' ಎಂದು ಪಾಠ. ಗಂಟಿಕ್ಕಿದ ಹುಬ್ಬಿನಿಂದ ಯುಕ್ತವಾದ ಮುಖವನ್ನು ಧರಿಸಿದವರೆಂದು ಅರ್ಥ. ಆದರೆ ಇದು ಅಪಪಾಠ. 'ವಕ್ತ್ರಭ್ರುವಾ' ಎಂದೇ ಪಾಠ. ಮುಖದಲ್ಲಿರುವ ಗಂಟಿಕ್ಕಿದ ಹುಬ್ಬಿನೊಂದಿಗೆ ಹೊರಟ ಕೆಂಗಣ್ಣ ನೋಟದಿಂದಲೂ ಕೋಪವನ್ನು ಧರಿಸಿದ ವರೆಂದರ್ಥ.

ವಕ್ತ್ರಸ್ಥಯಾ ಭ್ರುವಾ ಸಹ ನಿರ್ಗತೇನ ।

ಮುಖದಲ್ಲಿರುವ ಹುಬ್ಬಿನೊಂದಿಗೆ ಹೊರಟ ಕೆಂಗಣ್ಣನೋಟದಿಂದ ಎಂದರ್ಥ.

* * *

ಜಯವಿಜಯರು ನೋಡುತ್ತಿದ್ದಂತೆಯೇ ಅವರನ್ನು ಲೆಕ್ಕಿಸದೆ ಒಳಗೆ ಪ್ರವೇಶಿಸತೊಡಗಿದ ಸನಕಾದಿಗಳನ್ನು ಅವರು ಬೆತ್ತದಿಂದ ತಡೆದರು.

ತಾನ್ ವೀಕ್ಷ್ಯ ವಾತರಶನಾಂಶ್ಚತುರಃ ಕುಮಾರಾನ್
ವೃದ್ಧಾನ್ ದಶಾರ್ಧವಯಸೋ ವಿದಿತಾತ್ಮತತ್ತ್ವಾನ್ ।
ವೇತ್ರೇಣ ಚಾಸ್ಖಲಯತಾಮತದರ್ಹಣಾಂಸ್ತೌ
ತೇಜೋ ವಿಹಸ್ಯ ಭಗವತ್ಪ್ರತಿಕೂಲಶೀಲೌ ॥ ೩೦ ॥

ಸನಕಾದಿಗಳು ನಾಲ್ವರೂ ಐದು ವರ್ಷವಯಸ್ಸಿನ ಬಾಲಕರಂತಿದ್ದರೂ ವಯಸ್ಸಿನಲ್ಲಿ ಹಿರಿಯರು, ಪರಮಾತ್ಮತತ್ವಜ್ಞಾನಿಗಳು, ದಿಗಂಬರರು, ಅವರನ್ನು ನೋಡಿ ಅವರ ತೇಜಸ್ಸನ್ನೂ ಲೆಕ್ಕಿಸದೆ ಭಗವಂತನಿಗೆ ವಿರೋಧಮಾಡುವ ಸ್ವಭಾವದ ಆ ಜಯವಿಜಯರು ಬೆತ್ತದಿಂದ ತಡೆದರು. ಆ ರೀತಿಯ ವ್ಯವಹಾರಕ್ಕೆ ಸನಕಾದಿಗಳು ಅರ್ಹರಲ್ಲ.

ಜಯವಿಜಯರು ಸನಕಾದಿಗಳಂತೆಯೇ ಕರ್ಮಜದೇವತಾಕಕ್ಷೆಯಲ್ಲಿ ಬರುವವರು. ಆದರೂ ಅವರು ಕ್ಷತ್ರಿಯರು, ಸನಕಾದಿಗಳು ಬ್ರಾಹ್ಮಣರು. ಅದರಿಂದ ಜಯವಿಜಯರು ಅವರನ್ನು ಗೌರವಿಸಬೇಕಾಗಿತ್ತು ನಯವಾಗಿ 'ಪ್ರವೇಶಿಸಬೇಡಿರೆ'ಂದು ಕೇಳಿಕೊಳ್ಳಬೇಕಾಗಿತ್ತು ಮತ್ತು ಭಗವಂತ ಬ್ರಾಹ್ಮಣಪ್ರಿಯ. ಅವರನ್ನು ಗೌರವಿಸುವವ. ಜಯವಿಜಯರೂ ಹಾಗೇ ಮಾಡಬೇಕಾಗಿತ್ತು. ಆದರೆ ಅದಕ್ಕೆ

ವ್ಯತಿರಿಕ್ತವಾಗಿ ಸನಕಾದಿಗಳನ್ನು ಬೆತ್ತದಿಂದ ತಡೆದು ಅಗೌರವ ತೋರಿದ್ದಾರೆ. ಇದರಿಂದ ಭಗವಂತನಿಗೇ ವಿರೋಧ ಮಾಡಿದಂತಾಯಿತು. ಹೀಗೆ ಭಗವಂತನಿಗೆ ವಿರೋಧಮಾಡುವುದು ಅವರ ಸ್ವಭಾವವಾಗಿತ್ತೆಂದು 'ಪ್ರತಿಕೂಲಶೀಲೌ' ಎಂಬ ಶಬ್ದ ಹೇಳುತ್ತದೆ. ಇಂಥವರೂ ವೈಕಂಠದಲ್ಲಿರುವರೇ? ಮತ್ತು ತನ್ನ ಬಳಿ ಇಂಥ ದ್ವಾರಪಾಲಕರನ್ನು ಭಗವಂತ ನೇಮಕ ಮಾಡುವನೆ? ವಸ್ತುತಃ ಭಕ್ತರು. ಆದ್ದರಿಂದ ನೇಮಿಸಿದ್ದಾನೆ ಎಂದರೆ ಭಕ್ತರಿಗೆ ಭಗವಂತನನ್ನು ವಿರೋಧಿಸುವ ಸ್ವಭಾವ ಇರುವುದುಂಟೆ? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಸಮಾಧಾನವಿಲ್ಲ.

೧'ಸ್ವಾಮಿ ಸೇವಕಧರ್ಮವೇ ಜಯವಿಜಯರಲ್ಲಿ ಇರಲಿಲ್ಲ' ಎಂದು ವಲ್ಲಭವ್ಯಾಖ್ಯಾನ ಹೇಳುತ್ತಿದೆ! ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಈ ಪ್ರಶ್ನೆಗೆ ಹೀಗೆ ಸಮಾಧಾನ– ಜಯವಿಜಯರು ಭಗವಂತನಿಗೆ ವಿರೋಧಮಾಡುವ ಅಭಿಪ್ರಾಯದಿಂದ ವರ್ತಿಸಲಿಲ್ಲ. ಭಗವಂತ ದೊಡ್ಡವನು. ಬ್ರಾಹ್ಮಣರು ಅವನನ್ನು ಅತಿಕ್ರಮಿಸಿದರೆ ಸಹಿಸುತ್ತಾನೆ. ಅವನ ಸೇವಕರು ಮಾತ್ರ ಸಹಿಸುವುದಿಲ್ಲ. ಈಗ ಅಸಹನೆಯಿಂದಲೆ ಅವರು ಹೀಗೆ ವರ್ತಿಸಿದ್ದಾರೆ. ಅಪರಾಧವೆಸಗಿದ ಚಿತ್ರಕೇತುವಿಗೆ ಶಿವ ಶಾಪ ಕೊಡಲಿಲ್ಲ, ಪಾರ್ವತಿ ಶಾಪ ಕೊಟ್ಟಳು, ಇದು ಉದಾಹರಣೆ' ಎಂದು. ಆದರೆ ಚಿತ್ರಕೇತು ಅಪರಾಧಿ. ಸನಕಾದಿಗಳು ಹಾಗಲ್ಲ, 'ಅತದರ್ಹಣಾನ್' ಎಂದು ಭಾಗವತ ಹೇಳುತ್ತಿದೆ. ಶುಕದೇವವ್ಯಾಖ್ಯಾನದಲ್ಲಿ 'ಪ್ರತಿಕೂಲಶೀಲ' ಹೇಗೆ ಎನ್ನುವುದಕ್ಕೆ ಸಮಾದಾನ ಹೇಳಿಲ್ಲ, ಪ್ರತಿಕೂಲವರ್ತನೆ ಏಕೆಂದರೆ 'ಅದೂ ಒಂದು ರೀತಿಯ ಉಪಾಸನೆ, ಅಸುರರಿಗೆ 'ಭಗವಂತನನ್ನು ಹೀಗೆ ಉಪಾಸನೆ ಮಾಡಬೇಕೆಂ'ದು ಜಯವಿಜಯರು ತೋರಿಸಿದ್ದಾರೆ.' ಎಂದಿದೆ. ಇದು ದ್ವೇಷದಿಂದ ಮೋಕ್ಷಸಾಧನೆ ಎನ್ನುವ ಒಂದು ವಾದ.ಅದರಿಂದ ಹೀಗೆ ಸಮಾಧಾನ ಹೇಳಬೇಕು–

---

೧. ಸ್ವಾಮಿಸೇವಕಧರ್ಮೋಽಪಿ ತಯೋರ್ನ ಸಿದ್ಧ ಇತ್ಯುಕ್ತಂ । ಗರ್ವಸ್ತು ಭಗವತ್ಪ್ರತಿಕೂಲೋ ಧರ್ಮಃ । ದೈತ್ಯಧರ್ಮತ್ವಾತ್ । ಅತ ಏವ ಪ್ರತಿಕೂಲಪದಂ ॥ ಶೀಲಮಿತಿ ತದ್ಧರ್ಮಸ್ಯ ದುರ್ಲಂಘ್ಯತಾ ಸೂಚಿತಾ । –ವಲ್ಲಭಃ

ಭಗವತ್ಪ್ರತಿಕೂಲಶೀಲಾವಿತ್ಯಸ್ಯಾಯಂ ಭಾವಃ । ಭಗವಾಂಸ್ತಾವದಾತ್ಮನಾ ಸರ್ವತಃ ಪರಮೇಶ್ವರ ಇತಿ ನಿಜಸ್ಯ ಪಾರಮೈಶ್ವರ್ಯಸ್ಯ ಬ್ರಾಹ್ಮಣಾದಿಭಿರತಿಕ್ರಮಣಂ ಸಹತೇ । ತದೀಯಸೇವಕಾಸ್ತಸ್ಯ ಸುತರಾಂ ತು ತನ್ನಿಯೋಗಪ್ರಾಪ್ತಪಾಲನಾಧಿಕಾರಸ್ಯ ತದಂಶಸ್ಯ ಕೇನಾಪ್ಯತಿಕ್ರಮಂ ಸೋಢುಂ ನ ಶಕ್ನುವಂತೀತಿ ಭಗವತೋ ವಿಪರೀತ ಸ್ವಭಾವೌ ತಾವಿದಂ ನ ಸಹೇತೇ ಇತಿ । ದೃಷ್ಟಾಂತಸ್ತು ಚಿತ್ರಕೇತುಶಿವಶಿವಾವೃತ್ತಾಂತ ಏವ ಜ್ಞೇಯಃ । –ಜೀವಗೋಸ್ವಾಮೀ

ಭಗವತ್ಪ್ರತಿಕೂಲಶೀಲೌ । ಬಹ್ವಸುರಾನುಗ್ರಹಾರ್ಥಮಸುರಭಾವೇನ ಭಗವಂತಮಾರಾಧಯಿತುಂ ಪ್ರವೃತ್ತಾವಿತಿ ಫಲಿತೋಽರ್ಥಃ । –ಶುಕದೇವಃ

ಜಯಸ್ಯ ವಿಜಯಸ್ಯಾಪಿ ಕದಾಚಿದ್ ಬ್ರಹ್ಮಶಾಪತಃ ।
ಕೃಷ್ಣಾವತಾರಪರ್ಯಂತಂ ಪ್ರಾತಿಕೂಲ್ಯಂ ಚ ಜಾಯತೇ ॥
ಇತಿ ನಾರದೀಯೇ ।

ಜಯನಿಗೂ ವಿಜಯನಿಗೂ ಕೆಲವುಕಾಲ ಅಂದರೆ ಕೃಷ್ಣಾವತಾರಪರ್ಯಂತ ಬ್ರಹ್ಮಶಾಪದಿಂದ ಭಗವಂತನ ಇಚ್ಛೆಗೆ ವಿರುದ್ಧವಾಗಿ ವರ್ತಿಸುವ ಬುದ್ಧಿ ಉಂಟಾಗುತ್ತದೆ ಹೊರತು ಅವರ ಸ್ವಭಾವವಲ್ಲ, ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ.

ಸ್ವಾಭಾವಿಕವಾಗಿ ಜಯವಿಜಯರಲ್ಲಿ ಭಗವಂತನಿಗೆ ವಿರೋಧವಾಗಿ ವರ್ತಿಸುವ ಬುದ್ಧಿ ಇಲ್ಲ, ಬ್ರಹ್ಮಶಾಪ ವಶದಿಂದ ಬಂದಿದೆ. ಅದನ್ನು ಸ್ವಭಾವ ಎಂದುದು, ಬಹುಕಾಲ ಅಂದರೆ ವರಾಹಾವತಾರದಿಂದ ಕೃಷ್ಣಾವತಾರಪರ್ಯಂತವೂ ಇರುವುದರಿಂದ ಸ್ವಭಾವತುಲ್ಯ ಎಂಬ ಅಭಿಪ್ರಾಯದಿಂದ.

---

* * *

ಜಯವಿಜಯರು ತಡೆದಾಗ ಸನಕಾದಿಗಳು ಕೋಪಗೊಂಡು ಅವರನ್ನು ಆಕ್ಷೇಪಿಸುತ್ತಾರೆ.

ಕೋ ವಾ ಇಹೇತ್ಯ ಭಗವತ್ಪರಿಚರ್ಯಯೋಚ್ಚೈ–
ಸ್ತದ್ಧರ್ಮಿಣಾಮಪಿ ಸತಾಂ ವಿಷಮಸ್ವಭಾವಃ ।
ತಸ್ಮಿನ್ ಪ್ರಶಾಂತಪುರುಷೇ ಗತವಿಗ್ರಹೇ ವಾಂ
ಕೋ ವಾ ಽಽತ್ಮವತ್ ಕುಹಕಯೋಃ ಪರಿಶಂಕನೀಯಃ ॥ ೩೨ ॥

ಭಗವಂತನನ್ನೂ ಭಗವದ್ಭಕ್ತರನ್ನೂ ಬಹಳ ಸೇವೆಮಾಡಿ ಈ ವೈಕುಂಠಕ್ಕೆ ಬಂದಿರುವ ನಿಮ್ಮಲ್ಲಿ ಈ ಮಿಥ್ಯಾಜ್ಞಾನ, ಭಗವಂತ ಬ್ರಾಹ್ಮಣಪ್ರಿಯನಾಗಿರುವಾಗ ನೀವು ಅದಕ್ಕೆ ವ್ಯತಿರಿಕ್ತವಾಗಿ ನಡೆಯುವುದು ನಮ್ಮನ್ನು ತಡೆಯುವುದು, ನಿಮಗೆ ಇದೆಲ್ಲ ತರವಲ್ಲ. ನೀವು ಭಗವಂತನಿಗೆ ವಿರೋಧವಾಗಿ ವರ್ತಿಸುತ್ತ ಅದೇ ರೀತಿಯ ವರ್ತನೆಯನ್ನು ನಮ್ಮಲ್ಲಿ ಶಂಕಿಸಲು ಏನು ನಿದರ್ಶನ ಕಂಡಿರಿ? ಭಕ್ತರ ಅಪರಾಧವನ್ನು ಸಹಿಸುವವನು ಎಲ್ಲರ ಅಂತರ್ಯಾಮಿ ಭಗವಂತ. ಭಕ್ತರಿಗೆ ಎಂದೂ ಕೇಡು ಬಗೆಯದವನು. ಅವನ ವಿಷಯದಲ್ಲಿ ಭಕ್ತರಾದ ನಾವು ವಿರೋಧವಾಗಿ ವರ್ತಿಸುವ ಸಂಭವ ಉಂಟೆ?

[1]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕೋ ವಾತ್ಮವತ್ ಕುಹಕಯೋಃ ಪರಿಶಂಕನೀಯಃ' ಎಂದರೆ 'ತಾವು ಕಪಟಿಗಳಾದ್ದರಿಂದ ಇನ್ನೊಬ್ಬರಲ್ಲಿಯೂ ಕಪಟವನ್ನು ಏನು ಶಂಕಿಸುತ್ತೀರಿ?' ಎಂದು ವ್ಯಾಖ್ಯಾನಿಸಿದ್ದಾರೆ. 'ತಸ್ಮಿನ್ ಪ್ರಶಾಂತಪುರುಷೇ ಗತವಿಗ್ರಹೇ' ಎಂದರೆ 'ಪ್ರಶಾಂತರಾದ ಪ್ರಜೆಗಳುಳ್ಳ ಕಲಹವಿಲ್ಲದ ಈ ಲೋಕದಲ್ಲಿ' ಎಂದಿದ್ದಾರೆ. 'ತಸ್ಮಿನ್' ಎಂಬ ಶಬ್ದಕ್ಕೆ ಇದು ಸರಿಯಾದ ವ್ಯಾಖ್ಯಾನವಲ್ಲ. ವಲ್ಲಭವ್ಯಾಖ್ಯಾನದಲ್ಲಿ ಪ್ರಶಾಂತರಾದ ಭಕ್ತಪುರುಷರುಳ್ಳ ಭಗವಂತ 'ಪ್ರಶಾಂತಪುರುಷ' ಅವನಿಗಾಗಿ ಎಂದರ್ಥ. ಇದು ಕ್ಲಿಷ್ಟವಾಗಿದೆ ಮತ್ತು ಜಯವಿಜಯರು ಕಪಟಿಗಳೆಂದೂ ನೀವು ಕಪಟವಾದ ಭಗವದಾರಾಧನೆ ಮಾಡಿ ಹೇಗೋ ಈ ದ್ವಾರಪಾಲಕರ ಅಧಿಕಾರ ಪಡೆದಿದ್ದೀರಿ. ಅದರಿಂದ ನಮ್ಮನ್ನೂ ಕಪಟಗಳೆಂದು ಶಂಕಿಸುತ್ತಿರುವಿರಿ ಎಂದೂ ಸನಕಾದಿಗಳು ಆಕ್ಷೇಪಿಸುತ್ತಾರೆ! ಇದು ಜ್ಞಾನಿಗಳಾದ ಮುನಿಗಳು ಆಡುವ ಮಾತಲ್ಲ.

'ಕುಹಕಯೋಃ' ಎಂಬ ಶಬ್ದಕ್ಕೆ ಕಪಟಿಗಳೆಂದರ್ಥವಲ್ಲ. ಅಜ್ಞಾನಿಗಳು. ಮಿಥ್ಯಾಜ್ಞಾನಿಗಳು. ತತ್ಕಾಲದಲ್ಲಿ ಅಸುರಾವೇಶದಿಂದ ಸನಕಾದಿಗಳನ್ನು ಸಾಮಾನ್ಯ ವ್ಯಕ್ತಿಗಳೆಂದು ಭಾವಿಸಿ ಅಗೌರವದಿಂದ ಕಂಡವರು. ಆ ಮೂಲಕ ಭಗವಂತನಿಗೆ ವಿರೋಧ ಮಾಡಿದವರು. ಅದರಿಂದ, ತಾವು ಭಗವಂತನಿಗೆ ವಿರೋಧಮಾಡುತ್ತಲೇ, ಅದೇ ರೀತಿಯ ಭಗವದ್ವಿರೋಧಪ್ರವೃತ್ತಿಯನ್ನು ಸನಕಾದಿಗಳಲ್ಲಿ ಶಂಕಿಸುತ್ತಿದ್ದಾರೆ ಎಂದೇ ಸನಕಾದಿಗಳ ಆಕ್ಷೇಪ. ತಸ್ಮಿನ್ ಪ್ರಶಾಂತಪುರುಷೇ ಎಂದರೆ ಪ್ರಶಾಂತನಾದ ಪುರುಷ ಭಗವಂತ. ಅವನ ವಿಷಯದಲ್ಲಿ ತಾವು ವಿರೋಧ ಮಾಡುತ್ತಿದ್ದಾರೆ, ಮತ್ತು ಸನಕಾದಿಗಳಲ್ಲಿ ಶಂಕಿಸುತ್ತಿದ್ದಾರೆ, ಜಯವಿಜಯರು ಎಂದರ್ಥ.

ಯುವಯೋರ್ಯಥಾ ವಿರುದ್ಧಸ್ವಭಾವತ್ವಂ ತದ್ವದ್ ಭಗವದ್ವಿಷಯ ಇಹ ಶಂಕನೀಯಃ ಕಃ? ತಸ್ಮಾನ್ನಿಷೇಧೋ ವ್ಯರ್ಥ ಇತ್ಯರ್ಥಃ ॥

---

೧. ತೇಷಾಂ ಮತೇ ಸರ್ವಂ ಕರ್ಮಜನ್ಯಮೇವ, ತತ್ರಾಪಿ ಭೋಗರೂಪಂ । ಭಕ್ತಿಮಾರ್ಗಸ್ಯಾಜ್ಞಾತತ್ವಾತ್ । ಅತೋ ನಿರಂತರಭಗವತ್ಸೇವಯಾತ್ರಾಗತ್ಯ ಸ್ಥಿತಿರ್ಭವತೀತಿ ಮನ್ಯಂತೇ । ಪ್ರಶಾಂತಪುರುಷ ಇತಿ । ಪ್ರಕರ್ಷೇಣ ಶಾಂತಾಃ ಪುರುಷಾ ಯಸ್ಯ । ತಸ್ಯ ಹಿ ಸರ್ವೇ ಪುರುಷಾಃ ಶಾಂತಾ ಏವ । ಕುಹಕಯೋರ್ವಂಚಕಯೋಃ ಕೋ ವಾ ಆತ್ಮವತ್ ಪರಿಶಂಕನೀಯ ಇತಿ । ದುಷ್ಟ ಏವ ಹಿ ಅನ್ಯತ್ರ ದೋಷಂ ಮನ್ಯತೇ । ಅತೋ ಯುವಯೋರ್ದೋಷೋಽಸ್ತೀತ್ಯವಸೀಯತೇ । ಪರಿಚರ್ಯಾಯಾ ಏವ ವೈಕುಂಠಾಗಮನಹೇತುತ್ವಂ ಮನ್ಯಂತೇ । ನ ತು ನಿಷ್ಕಪಟಪರಿಚರ್ಯಾಯಾಃ । ಅತಃ ಕಪಟೇನ ಪರಿಚರ್ಯಾಂ ಕೃತ್ವಾ ವೈಕುಂಠೇ ಸಮಾಗತ್ಯಾಧಿಕಾರಂ ಪ್ರಾಪ್ಯ ಸ್ವಭಾವಾದಧಿಕಾರಾಚ್ಚ, ಯಥಾ ವಯಂ ತಥಾನ್ಯೋಽತ್ರಾಗಮಿಷ್ಯತೀತಿ । —ವಲ್ಲಭಃ

ನಿಮಲ್ಲಿ ಹೇಗೆ ಭಗವಂತನ ವಿಷಯದಲ್ಲಿ ವಿರುದ್ಧಸ್ವಭಾವ ವಿದೆಯೋ ಹಾಗೇ ನಮ್ಮಲ್ಲಿ ಶಂಕಿಸಲು ಅರ್ಹವಾದ ವಿರುದ್ಧಸ್ವಭಾವವೇನಿದೆ? ಆದರಿಂದ ನಮ್ಮನ್ನು ತಡೆಯುವುದು ವ್ಯರ್ಥ ಎಂದರ್ಥ.

* * *

ಜಯವಿಜಯರು 'ಕುಹಕ'ರು ಮಿಥ್ಯಾಜ್ಞಾನಿಗಳು ಎಂದು ಸನಕಾದಿಗಳು ಅವರನ್ನು ಆಕ್ಷೇಪಿಸಿದರು, ಏಕೆ ಮಿಥ್ಯಾಜ್ಞಾನಿಗಳು?

ನ ಹ್ಯಂತರಂ ಭಗವತೀಹ ಸಮಸ್ತಕುಕ್ಷಾ–
ವಾತ್ಮಾನಮಾತ್ಮನಿ ನಭೋ ನಭಸೀವ ಧೀರಾಃ ।
ಪಶ್ಯಂತಿ ಯತ್ರ ಯುವಯೋಃ ಸುರಲಿಂಗಿನೋಃ ಕಿಂ
ವ್ಯುತ್ಪಾದಿತಂ ಹ್ಯುದರಭೇದಿ ಭಯಂ ಯತೋಽಸ್ಯ ॥ ೩೩ ॥

ಸರ್ವಾಂತರ್ಯಾಮಿಯಾದ ಭಗವಂತನ ರೂಪಗಳಲ್ಲಿ ಭೇದವಿಲ್ಲ, ಆದರಿಂದ ಅವನಿಗೆ ಭಯವಿಲ್ಲ, ಭೇದವಿಲ್ಲ ಏಕೆಂದರೆ ಜ್ಞಾನಿಗಳು ಘಟದೊಳಗಿನ ಆಕಾಶವು ಹೊರಗಿನ ಆಕಾಶಕ್ಕಿಂತ ಹೇಗೆ ಬೇರೆಯಲ್ಲವೋ ಹಾಗೆ ತಮ್ಮೊಳಗಿನ ಭಗವದ್ರೂಪ ಹೊರಗಿನ ಭಗವದ್ರೂಪದಿಂದ ಬೇರೆಯಲ್ಲವೆಂದು ಕಾಣುತ್ತಿದ್ದಾರೆ. ನೀವು ಮಾತ್ರ ದೇವತಾಲಕ್ಷಣಸಂಪನ್ನರಾಗಿದ್ದರೂ ಕೂಡ ಭಗವದ್ರೂಪಗಳಲ್ಲಿ ಭೇದವಿದೆ ಎಂದೂ ಆದರಿಂದ ಭಯಕ್ಕೆ ಅವಕಾಶವಿದೆ ಎಂದೂ ಏಕೆ ಆಲೋಚಿಸುವಿರಿ? ಇದು ಮಹಾ ಪಾಪ ತಾನೆ?

ಸರ್ವಶಕ್ತನಾದ ಭಗವಂತನಿಗೆ ಭಯ ಉಂಟುಮಾಡಲು ನಾವು ಯಾರು? ನಮ್ಮೊಳಗೆ ಅಂತರ್ಯಾಮಿಯಾಗಿರುವ ಆತನಿಗೆ ನಾವೇನು ಅಪಾಯ ಮಾಡಬಲ್ಲೆವು? ಅವನ ರೂಪಗಳಲ್ಲಿ ಭೇದವಿರುತ್ತಿದ್ದರೆ ಆಗ ನಮ್ಮೊಳಗಿನ ರೂಪ ಇಲ್ಲಿ ವೈಕುಂಠದಲ್ಲಿರುವ ರೂಪಕ್ಕೆ ಅಪಾಯ ತರಬಹುದೆಂದು ನಮ್ಮನ್ನು ನೀವು ತಡೆಯುವುದು ಯುಕ್ತವಾಗುತ್ತಿತ್ತು. ಆದರೆ ಭೇದವಿಲ್ಲ, ಅಜ್ಞಮಾನವರು ಅಸುರರು ಭೇದವಿದೆ ಎಂದು ಭಾವಿಸಬಹುದು. ಅಪಾಯ ಮಾಡಲು ಯತ್ನಿಸಬಹುದು. ಆದರೆ ಜ್ಞಾನಿಗಳಾದ ನಾವು ಹಾಗೆ ಭಾವಿಸುವುದಿಲ್ಲ. ಆದರಿಂದ ವೈಕುಂಠಮೂರ್ತಿಗೆ ನಮ್ಮಿಂದ ಅಪಾಯ ಉಂಟಾಗಲು ಅವಕಾಶವೇ ಇಲ್ಲ. ನೀವು ಜ್ಞಾನಿಗಳಾದ ದೇವತೆಗಳ ಲಕ್ಷಣಗಳಿಂದ ಒಪ್ಪುತ್ತಿರುವವರು. ಆದರೂ ಅಸುರಾವೇಶದಿಂದ ಭಗವದ್ರೂಪಗಳಲ್ಲಿ ಭೇದ ಉಂಟೆಂದೂ ನಮ್ಮಿಂದ ವೈಕುಂಠದರಸನಿಗೆ ಅಪಾಯವಾದೀತೆಂದೂ ಭ್ರಮಿಸಿ ನಮ್ಮನ್ನು ತಡೆಯುತ್ತಿರುವಿರಿ. ಅಜ್ಞಾನಿಗಳಾದ ಅಸುರರು ಭೇದಭ್ರಮಪ್ರಯುಕ್ತವಾಗಿ ಭಗವಂತನಿಗೆ ಅಪಾಯ ಉಂಟು

ಮಾಡಲೆಂದು ಒಳಗೆ ನುಗ್ಗುವ ಸಂದರ್ಭಬಂದಾಗ ನೀವು ಅವರನ್ನು ತಡೆಯಬೇಕು. ಹೊರತು ಲೋಕಪ್ರಸಿದ್ಧ ಜ್ಞಾನಿಗಳಾಗಿದ್ದು ಭಗವಂತನ ದರ್ಶನಾಕಾಂಕ್ಷಿಗಳಾಗಿ ಬಂದಿರುವ ನಮ್ಮನ್ನೇಕೆ ತಡೆಯುತ್ತಿರುವಿರಿ? ಇದು ಮಹಾಪಾಪವಲ್ಲವೆ?

[1]ಇಲ್ಲಿ ವೀರರಾಘವ ವ್ಯಾಖ್ಯಾನಪ್ರಕಾರ 'ನ ಹ್ಯಂತರಂ ಭಗವತಿ' ಎಂದರೆ ಭಗವಂತನಲ್ಲಿ ಇವನು ಪ್ರವೇಶಯೋಗ್ಯ ಇವನು ಪ್ರವೇಶಯೋಗ್ಯನಲ್ಲ ಎಂಬ ವೈಷಮ್ಯಬುದ್ಧಿ ಇಲ್ಲ. ಅದರಿಂದ ನಾವು ಪ್ರವೇಶಿಸುವುದು ಭಗವಂತನಿಗೆ ಅನಪೇಕ್ಷಿತವಲ್ಲ ಎಂದರ್ಥ. ಏಕೆ ವೈಷಮ್ಯವಿಲ್ಲವೆಂದರೆ ಯೋಗಿಗಳು ತಮ್ಮನ್ನು ಭಗವಂತನಿಂದ ಬೇರೆ ಸ್ವತಂತ್ರವಾಗಿ ಕಾಣದೆ ಅವನ ಶರೀರವೆಂದೇ ತಿಳಿಯುತ್ತಾರೆ. ಅದರಿಂದ ಭಗವಂತನಿಗೆ ಎಲ್ಲರೂ ಶರೀರರೂಪರಾದ್ದರಿಂದ ಸಮಾನರು. ಅದರಿಂದ ಯಾರಿಂದಲೂ ಅವನಿಗೆ ಅಪಾಯವಿಲ್ಲ. ಉದರಭೇದಿಭಯವೆಂದರೆ ಉತ್ ಅಪಿ ಸ್ವಲ್ಪವಾದರೂ ಅರ ಭೇದಪ್ರಯುಕ್ತವಾದ ಭಯ ಅಥವಾ ಜನರಿಗೆ ರೋಗಾದಿಗಳಿಂದ ಬರುವಂತೆ ಉದರಶೂಲೆಯಿಂದ ಭಯ ಭಗವಂತನಿಗಿಲ್ಲ. ಈ ವ್ಯಾಖ್ಯಾನಪ್ರಕಾರ ದ್ವಾರಪಾಲಕರಿಗೆ ಕೆಲಸವೇ ಇಲ್ಲ. ಎಲ್ಲರೂ ಪ್ರವೇಶಯೋಗ್ಯರೇ ತಾನೆ? ಉದರಶೂಲೆಯ ಪ್ರಸ್ತಾವವಂತೂ ಇಲ್ಲಿ ಅಸಂಗತ.

ಶ್ರೀಧರವ್ಯಾಖ್ಯಾನಪ್ರಕಾರ ಜೀವನು ಪರಮಾತ್ಮನಲ್ಲಿ ಘಟಾಕಾಶವು ಮಹಾಕಾಶದಲ್ಲಿ ಹೇಗೋ ಹಾಗೇ ಅಂತರ್ಗತ, ಅಂದರೆ ಅಭಿನ್ನನಾಗಿರುತ್ತಾನೆ. ರಾಜರಿಗೆ ಶತ್ರುಗಳಿಂದ ಅಪಾಯ ದೇಹಭೇದಪ್ರಯುಕ್ತ ಬರುವಂತೆ ಶ್ರೀಹರಿಗೂ ಅಂಥ ಅಪಾಯ ಯಾರಿಂದಲಾದರೂ ಬಂದೀತೆಂದು ಏಕೆ ನೀವು ಭಾವಿಸುವಿರಿ? ಎಂದು ಮುನಿಗಳ ಪ್ರಶ್ನೆ. ಅಭೇದವಿದ್ದರೂ ರಾಜರಿಗೆ ಶತ್ರುಗಳಿಂದ ಅಪಾಯ ಬರುತ್ತದೆ

---

೧. ಸಮಸ್ತಂ ವಿಶ್ವಂ ಕುಕ್ಷೌ ಯಸ್ಯ ತಸ್ಮಿನ್ ಭಗವತ್ಯಂತರಮಯಮಂತಃ-ಪ್ರವೇಶಯೋಗ್ಯೋ ನಾಯಮಿತ್ಯೇತದಂತರಂ ವೈಷಮ್ಯಂ ನ ಹ್ಯಸ್ತೀತ್ಯರ್ಥಃ। ಯತ್ರ ಯಸ್ಮಿನ್ನಾತ್ಮನಿ ಪರಮಾತ್ಮನಿ ಆತ್ಮಾನಂ ಜೀವಾತ್ಮಾನಂ ನಭಸಿ ಮಹಾಕಾಶೇ ನಭಃ ಘಟಾದ್ಯಾಕಾಶಮಿವ ಧೀರಾ ಯೋಗಿನಃ ಪಶ್ಯಂತಿ ಅಪೃಥಕ್ಸಿದ್ಧತ್ವೇನಾನುಸಂದಧತ ಇತ್ಯರ್ಥಃ। ಯಥಾನ್ಯಸ್ಯ ರೋಗಾದೇರುದರಭೇದಯುಕ್ತಂ ಭಯಂ ಭವತಿ ತಥಾಽಸ್ಯ ಹರೇಸ್ತಾದೃಗ್ಭಯಂ ಯೇನ ಕಾರಣೇನ ಸುರವೇಷಧಾರಿಣೋರ್ಯುವಯೋಃ ವಿಶೇಷೇಣೋತ್ಪಾದಿತಂ ತತ್ಕಿಂ, ನ ಕಿಂಚಿದಿತ್ಯರ್ಥಃ। –ವೀರರಾಘವಃ

ಅಸ್ಮಿನ್ ಭಗವತಿ ವಿದ್ವಾಂಸೋ ಬ್ರಹ್ಮನಿಷ್ಠಾಃ ಆತ್ಮಾನಂ ತ್ವಂಪದಾರ್ಥಂ ಅಂತರ್ಭೂತಂ ಜಹದಜಹಲ್ಲಕ್ಷಣಯಾ ಸಾಮಾನಾಧಿಕರಣ್ಯೇನಾಭಿನ್ನಂ। ಉದರಭೇದಯುಕ್ತಂ ಉದರೋಪಲಕ್ಷಿತದೇಹೈಯೋರ್ಭೇದಃ ಪೃಥಕ್‌ಪೃಥಕ್ ತತ್ಪೂರಣಾತ್ಮಕಃ ತದ್ಯುಕ್ತಂ। –ರಾಧಾರಮಣಃ

ಎಂದ ಮೇಲೆ ಶ್ರೀಹರಿಗೂ ಅಸುರರಿಂದ ಏಕೆ ಅಪಾಯ ಬರಲಾರದು? ಎಂಬ ಪ್ರಶ್ನೆಗೆ ಇಲ್ಲಿ ಸಮಾಧಾನವಿಲ್ಲ. ಉದರಭೇದಿಭಯವೆಂದರೆ [1]ವಿಶ್ವನಾಥ ವ್ಯಾಖ್ಯಾನಪ್ರಕಾರ ಶತ್ರು ಯಾರಾದರೂ ಕಪಟದಿಂದ ಬಂದು ಪ್ರಭುವಿನ ಉದರವನ್ನು ಭೇದಿಸಬಹುದೆಂದು ಭಯ. ಜೀವೇಶಭೇದವನ್ನಂಗೀಕರಿಸುವ ವಿಶ್ವನಾಥನ ಪ್ರಕಾರ ಈಶನಿಗೆ ಶತ್ರು ಭಯವೇಕಿಲ್ಲ ಎಂದರೆ ಸನಕಾದಿಗಳು ಅದ್ವೈತಿಗಳು, ಭೇದವನ್ನೇ ತಿಳಿಯುವುದಿಲ್ಲ! [2]ಶುಕದೇವವ್ಯಾಖ್ಯಾನಪ್ರಕಾರ ಜೀವರು ಪರಮಾತ್ಮನ ಅಂಶರಾದ ಪ್ರಯುಕ್ತ ಅಭೇದವಿರುವುದರಿಂದ ತನಗೆ ತನ್ನಿಂದ ಅಪಾಯ ಶಕ್ಯವಿಲ್ಲ. ಈ ವ್ಯಾಖ್ಯಾನದಲ್ಲಿಯೂ ದ್ವಾರಪಾಲಕರಿಗೆ ಕೆಲಸವೇನು ಎಂಬ ಪ್ರಶ್ನೆಗೆ ಸಮಾಧಾನವಿಲ್ಲ.

[3]ವಲ್ಲಭವ್ಯಾಖ್ಯಾನದಲ್ಲಿ ಜ್ಞಾನಿಗಳು ಭಗವದ್ರೂಪರಾಗಿಬಿಡುತ್ತಾರೆ, ಅಂದರೆ ಸ್ವಾಭಾವಿಕವಾಗಿರುವ ಅಭೇದವು ಜ್ಞಾನದಿಂದ ವ್ಯಕ್ತವಾಗುತ್ತದೆ. ಆಗ ಜ್ಞಾನಿಗಳಿಗೂ ಭಗವಂತನಿಗೂ ಅಂತರ, ಅಂದರೆ ಉಚ್ಚತ್ವನೀಚತ್ವ ಮಾಡಬಾರದು ಎಂದು ಸನಕಾದಿಗಳು ಆಕ್ಷೇಪಿಸುತ್ತಿದ್ದಾರೆ. ಆದರೆ ಅಭೇದ ವ್ಯಕ್ತವಾಗಿದ್ದರೂ ಭೇದಪ್ರಯುಕ್ತ ಶತ್ರುಗಳಂತೆ ವ್ಯವಹಾರ ಇಲ್ಲವೆನ್ನಲಾಗದು. ಜ್ಞಾನಿಗಳಾದ ಮುನಿಗಳೇ ಮುಂದೆ ಜಯವಿಜಯರಿಗೆ ಶಾಪ ನೀಡುತ್ತಾರೆ ತಾನೆ? ಅದ್ವೈತಪರವ್ಯಾಖ್ಯಾನಗಳಲ್ಲಿ ಎಲ್ಲಿಯೂ ಈ ಪ್ರಶ್ನೆ ಇದ್ದೇ ಇದೆ. ದ್ವೈತಪರವ್ಯಾಖ್ಯಾನದಲ್ಲಿ ಅಂತರ್ಯಾಮಿ ಮತ್ತು ಬಾಹ್ಯ

---

೧. ಉದರಭೇದಿ ಭಯಂ । ಶತ್ರುಃ ಕಶ್ಚಿತ್ ಕಪಟೇನಾಗತ್ಯ ಪ್ರಭೋರಸ್ಯೋದರಂ ಭೇತ್ಸ್ಯತೀತಿ ಭಯಂ । ಅತ್ರ ಯದ್ಯಪಿ ಸಾರ್ವಜ್ಞಾದಿಸ್ವರೂಪಭೂತಾನಂತಕಲ್ಯಾಣ ಗುಣಾದೀಶ್ವರಚೈತನ್ಯಾದ್ಯಲ್ಪಜ್ಞತ್ವಾಧೀನತ್ವಾದಿಸ್ವಭಾವಂ ಜೀವಚೈತನ್ಯ ಮೀಶಿತವ್ಯಂ ಸೂರ್ಯಾತ್ ತದಾತಪ ಇವ ಜಾತ್ಯೈವ ಭಿದ್ಯತೇ । ತಥಾಪ್ಯತ್ರ ವಕ್ತೄಣಾಂ ಸನಕಾದೀನಾಂ ಜ್ಞಾನಿತ್ವಾತ್ ಜ್ಞಾನಿನಾಂ ಚ ಪದ್ಧತೌ ಅದ್ವೈತ ಜ್ಞಾನಲಭ್ಯನಿರ್ವಾಣಸಿದ್ಧ್ಯರ್ಥಂ ಚಿತ್ಸಾಮಾನ್ಯಗ್ರಹಣಸ್ಯೈವ ವಿಧೇಯ ಮಾನತ್ವಾತ್ ಚಿದ್ವಿಶೇಷಭೂತಾನಾಮೀಶ್ವರಜೀವಯೋರ್ಗುಣಾನಾಂ ಮಾಯಾಯಾಶ್ಚ ಗ್ರಹಣಸ್ಯ ನಿಷಿದ್ಧತ್ವಾತ್ ಈಶ್ವರಜೀವಯೋರ್ಮಹಾಕಾಶಘಟಾಕಾಶ ದೃಷ್ಟಾಂತೋ ನಾನುಪಪನ್ನೋ ಜ್ಞೇಯಃ । —ವಿಶ್ವನಾಥಃ

೨. ಅತ್ಯಂತಭಿನ್ನಸ್ಯ ನಭಸೋ ಭಾಸ್ಕರಾದ್ ಭಯಂ ಭವತಿ । ಭಗವತಸ್ತು ಸರ್ವಾತ್ಮನೋಽತ್ಯಂತಭಿನ್ನವಸ್ತ್ವಭಾವಾತ್ ನಿರ್ಭಯೇ ತಸ್ಮಿನ್ ಭಯಂ ಕಲ್ಪಿತಂ ತದಯುಕ್ತಮಿತ್ಯಾಹುಃ । – ಶುಕದೇವಃ

೩. ಭಗವತಿ ನಾಸ್ತ್ಯಂತರಂ । ತೇನ ಯೇ ಜ್ಞಾನಾದಿಮಂತಸ್ತೇ ಭಗವದ್ರೂಪಾ ಇತಿ ತೇಷು ಭಗವತಿ ಚಾಂತರಕರಣಂ ಸ್ವಾಮಿದ್ರೋಹಃ । —ವಲ್ಲಭಃ

ಭಗವದ್ರೂಪಗಳಿಗೆ ಐಕ್ಯವಿರುವುದರಿಂದ ಮುನಿಗಳು ವೈಕುಂಠಮೂರ್ತಿಗೆ ಅಪಾಯ ಮಾಡಲು ಪ್ರವೃತ್ತಿ ಮಾಡಲಾರರು. ಆದರೆ ಜಯವಿಜಯರಲ್ಲಿರುವ ಅಂತರ್ಯಾಮಿಗೆ ಇದು ಅಭಿಮತವೆಂಬ ಭಾವನೆಯಿಂದ ಮುನಿಗಳು ಅವರಿಗೆ ಶಾಪ ನೀಡಬಹುದು. ಅದರಿಂದ ಹೀಗೆ ವ್ಯಾಖ್ಯಾನಿಸಬೇಕು–

ಸಮಸ್ತಕುಕ್ಷೌ ಸ್ಥಿತೇ ಭಗವತಿ ನ ಹಿ ಭೇದಃ । ಅಸ್ಮಿನ್ ಲೋಕೇ ಅಂತಸ್ಥ ಭಗವದ್ರೂಪಂ ಬಹಿಸ್ಥೈಕ್ಯೇನ ಪಶ್ಯಂತಿ ನಭೋ ನಭಸೀವ । ತತ್ರ ಪ್ರತ್ಯುದರಭೇದನಿಮಿತ್ತಂ ಭಯಂ ಯುವಾಭ್ಯಾಂ ವ್ಯುತ್ಪಾದಿತಂ ಕಿಂ । ಸರ್ವಾಂತರ್ಯಾಮಿತ್ವೇನಾಭಯಸ್ಯ ಭಯಮಸ್ತೀತಿ ಭಾವಃ ಕೃತಃ । ಅನ್ಯಥಾ ಕಿಮಿತಿ ನಿವಾರಣಂ ।

ಸರ್ವೋದರಗತಂ ಬ್ರಹ್ಮ ಯೇ ಭೇದೇನ ವಿಚಕ್ಷತೇ ।
ಸರ್ವತ್ರಾಪಿ ಭಯಂ ತೇಷಾಂ ಮೃತಾನಾಂ ತಮ ಏವ ಚ ॥

ಇತಿ ತತ್ವವಿವೇಕೇ ।

ಎಲ್ಲರ ಶರೀರದಲ್ಲಿ ಅಂತರ್ಯಾಮಿಯಾಗಿರುವ ಭಗವಂತನ ರೂಪಗಳಲ್ಲಿ ಭೇದವಿಲ್ಲವೆನ್ನುವುದು ಜ್ಞಾನಿಗಳ ಅನುಭವರೂಪ ಪ್ರಮಾಣಸಿದ್ಧ. ಅದರಿಂದ ಅವನಿಗೆ ಯಾವುದರಿಂದಲೂ ಭಯವಿಲ್ಲ. ಈ ಲೋಕದಲ್ಲಿ ಜನರು ಅಂತರ್ಯಾಮಿಯಾಗಿರುವ ಭಗವದ್ರೂಪವನ್ನು ಹೊರಗೆ ಇರುವ ರೂಪದೊಂದಿಗೆ ಅಭೇದದಿಂದಲೇ ಜ್ಞಾನಿಗಳು ಕಾಣುತ್ತಾರೆ, ಘಟದೊಳಗಿನ ಆಕಾಶವನ್ನು ಹೊರಗಿನ ಆಕಾಶದೊಂದಿಗೆ ಹೇಗೋ ಹಾಗೆ. ಎಲ್ಲರ ಅಂತರ್ಯಾಮಿಯಾದ ಭಗವಂತನಲ್ಲಿ ಭೇದವನ್ನು ಕಂಡು ನಾವು ವೈಕುಂಠಮೂರ್ತಿಗೆ ಅಪಾಯ ಉಂಟುಮಾಡಬಹುದೆಂದು ನೀವು ಶಂಕಿಸಿದ್ದು ಸರಿಯಲ್ಲ. ಸರ್ವಾಂತರ್ಯಾಮಿಯಾಗಿದ್ದು ಭಯರಹಿತನಾಗಿರುವ ಅವನಿಗೆ ನಾವು ಭಯ ಉಂಟು ಮಾಡಲು ಪ್ರವೃತ್ತಿ ಮಾಡಲಾರೆವು. ಆದರೂ ಹಾಗೆ ಪ್ರವೃತ್ತಿ ಮಾಡಬಹುದೆಂದು ನೀವು ಆಲೋಚನೆ ಮಾಡಿರುವಿರಿ. ಭಗವದ್ರೂಪಗಳಲ್ಲಿ ಭೇದವನ್ನು ಚಿಂತಿಸಿರುವಿರಿ ಇಲ್ಲದಿದ್ದರೆ ನಮ್ಮನ್ನೇಕೆ ತಡೆಯಬೇಕಿತ್ತು? (ನಾವು ಭಗವದ್ರೂಪಗಳಿಗೆ ಭೇದ ಚಿಂತನಮಾಡುವ ಅಸುರಸ್ವಭಾವದವರಲ್ಲ, ಜ್ಞಾನಿಗಳೆಂದು ಲೋಕಕ್ಕೆ ಗೊತ್ತು.)

ಎಲ್ಲರ ಶರೀರಗಳಲ್ಲಿ ಅಂತರ್ಯಾಮಿಯಾಗಿರುವ ಒಬ್ಬನೇ ಪರಮಾತ್ಮನನ್ನು ಬೇರೆ ಬೇರೆ ಶರೀರದಲ್ಲಿ ಬೇರೆ ಬೇರೆಯೇ ಇರುವವನೆಂದು ಯಾರು ಭಾವಿಸುವರೋ ಅವರಿಗೆ ಇಹದಲ್ಲೂ ಎಲ್ಲ ಕಡೆ ಭಯ, ಸತ್ತಮೇಲೂ ಅಂಧರಿತಮಸ್ಸು ತಪ್ಪಿದ್ದಲ್ಲ ಎಂದು ತತ್ವವಿವೇಕದಲ್ಲಿ ಹೇಳಿದೆ.

* * *

ಭಗವಂತನ ರೂಪಗಳಿಗೆ ಭೇದವನ್ನೆಣಿಸುವ ಅನರ್ಥಕರವಾದ ಮಿಥ್ಯಾಜ್ಞಾನವನ್ನು ಅಸುರಾವೇಶದಿಂದ ನೀವು ಪ್ರದರ್ಶಿಸಿರುವುದರಿಂದ ನೀವು ಪಾಪಶರೀರಗಳಿಂದ ಮೂರು ಬಾರಿ ಜನಿಸಿರಿ ಎಂದು ಸನಕಾದಿಮುನಿಗಳು ಜಯವಿಜಯರಿಗೆ ಶಾಪ ನೀಡುತ್ತಾರೆ–

ತದ್ ವಾ ಅಮುಷ್ಯ ಪರಮಸ್ಯ ವಿಕುಂಠ ಭರ್ತುಃ
ಕರ್ತುಂ ನ ಯುಕ್ತಮಿತಿ ಧೀಮಹಿ ಮಂದಧೀಭ್ಯಾಮ್ ।
ಲೋಕಾನಿತೋ ವ್ರಜತಮಂತರಭಾವ ದೃಷ್ಟ್ಯಾ
ಪಾಪೀಯಸಸ್ತ್ರಯ ಇಮೇ ರಿಪವೋऽಸ್ಯ ಯತ್ರ ॥ ೩೪ ॥

ಮಂದಬುದ್ಧಿಗಳಾದ ನೀವು ವೈಕುಂಠನಾಥನಿಗೆ ಅಂತರ್ಯಾಮಿರೂಪದಿಂದ ಭೇದಚಿಂತನೆ ಮಾಡಿದ್ದು ಯುಕ್ತವಲ್ಲವೆಂದು ನಾವು ಚಿಂತೆಗೊಳಗಾಗಿದ್ದೇವೆ. ಭಗವದ್ರೂಪಗಳಲ್ಲಿ ವೈಷಮ್ಯವಿದೆ ಎಂದು ತಿಳಿದು ಮಹಾಪಾಪ ಮಾಡಿದ್ದರಿಂದ ನೀವು ಈ ಲೋಕದಿಂದ ಪಾಪಶರೀರಗಳನ್ನು ಹೊಕ್ಕು ಜನಿಸಿರಿ. ಮೂರು ಶರೀರಗಳಲ್ಲಿ ಭಗವಂತನಿಗೆ ಮೂವರು ಶತ್ರುಗಳಾಗಿರಿ.

[1]ಇಲ್ಲಿ 'ತ್ರಯ ಇಮೇ ರಿಪವಃ' ಮೂರು ಶತ್ರುಗಳು ಯಾರು? ಶ್ರೀಧರ ವ್ಯಾಖ್ಯಾನಪ್ರಕಾರ ಕಾಮ ಕ್ರೋಧ ಲೋಭಗಳು. ಹೀಗೇ ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೇಳಿದ್ದಾರೆ. ಆದರೆ ಕಾಮ ಕ್ರೋಧ ಲೋಭಗಳೆಂಬ ಮೂವರು ಶತ್ರುಗಳಿಲ್ಲದ ಲೋಕ ಒಂದು ಉಂಟೆ? ಈ ವೈಕುಂಠಲೋಕದಲ್ಲಿಯೇ ಜಯ ವಿಜಯರು ಕ್ರೋಧಾವಿಷ್ಟರಾಗಿ ಸನಕಾದಿಗಳನ್ನು ಅಪಮಾನಿಸಿದ್ದಾರೆ. ಅದರಿಂದ ಕಾಮಕ್ರೋಧಲೋಭಗಳುಳ್ಳ ಲೋಕಗಳಲ್ಲಿ ಹುಟ್ಟಿರಿ ಎಂದು ಶಪಿಸುವುದಕ್ಕೆ

---

೧. ಯೇಷು ಲೋಕೇಷ್ವಸ್ಯ ಪಾಪೀಯಸೋऽಂತರಭಾವದ್ರಷ್ಟುರಿಮೇ 'ಕಾಮಃ ಕ್ರೋಧಸ್ತಥಾ ಲೋಭಃ' ಇತಿ ಗೀತೋಕ್ತಾಸ್ತ್ರಯೋ ರಿಪವೋ ಭವಂತಿ । ಇತೋ ವೈಕುಂಠಾತ್ ಪಾಪೀಯಸೋ ಲೋಕಾನಿತಿ ವಾ । –ಶ್ರೀಧರಃ

ಯೇಷು ಲೋಕೇಷು ಅಸ್ಯ ಜೀವಸ್ಯ ಕಾಮಃ ಕ್ರೋಧಸ್ತಥಾ ಲೋಭ ಇತಿ ತ್ರಯೋ ರಿಪವಸ್ತಾನ್ ವ್ರಜತಂ । ಕಾಮಾದಯೋ ಯದ್ಯಪಿ ಸುರೇಷ್ವಪಿ ಸಂತಿ । ತಥಾಪಿ ತೇಷು ಕಾಮಾದೀನಾಂ ಪ್ರಾಶಸ್ತ್ಯಾಭಾವಾತ್ ಅಸುರೌ ಭವತ ಇತ್ಯರ್ಥಃ । – ಶುಕದೇವಃ

ಪಾಪೀಯಸೋ ಲೋಕಾನ್ ಜನಸಮೂಹಾನ್ ವ್ರಜತಂ ತೇಷು ಜಾಯೇತಾಂ ಯತ್ರ ವ್ರಜನೇ ಇಮೇ ಅಸ್ಮಿನ್ನಿರ್ದಿಷ್ಟಾ ಲೋಕಾ ದೈತ್ಯರಾಕ್ಷಸರಾಜನ್ಯ ಜನಸಮೂಹಾಸ್ತ್ರಯೋऽಸ್ಯ ಭಗವತೋऽಪಿ ರಿಪವಃ । –ಜೀವಗೋಸ್ವಾಮೀ

ಏನರ್ಥ? ಈ ಪ್ರಶ್ನೆಯನ್ನು ಶುಕದೇವವ್ಯಾಖ್ಯಾನದಲ್ಲಿ ಎತ್ತಿಕೊಂಡು ಹೀಗೆ ಹೇಳಿದೆ. 'ಕಾಮಾದಿಗಳು ದೇವತೆಗಳಲ್ಲಿಯೂ ಇವೆ. ಆದರೂ ಬಹಳ ಕಡಿಮೆ. ಹೆಚ್ಚಾಗಿಲ್ಲ. ಹೆಚ್ಚಾಗಿರುವ ಅಸುರ ರಾಕ್ಷಸ ಮಾನವಲೋಕಗಳಲ್ಲಿ ಹುಟ್ಟಿರಿ ಎಂದು ಶಾಪದ ಅಭಿಪ್ರಾಯ' ಎಂದು. ಆದರೂ 'ರಿಪವೋಽಸ್ಯ' ಎಂಬಲ್ಲಿ 'ಇವನಿಗೆ ಶತ್ರುಗಳು' ಎಂದಿದೆ. ಇವನಿಗೆ ಎಂದರೆ ಇದೇ ಶ್ಲೋಕದಲ್ಲಿ ಹೇಳಿದ 'ವಿಕುಂಠಭರ್ತುಃ' ವೈಕುಂಠನಾಥನಾದ ಪರಮಾತ್ಮನಿಗೆ ಶತ್ರುಗಳು ಎಂದು ಹೇಳಿದಂತಾಗುತ್ತದೆ. ಕಾಮಕ್ರೋಧಾದಿಗಳು ಜೀವನಿಗೆ ಶತ್ರುಗಳು, ಪರಮಾತ್ಮನಿಗಲ್ಲ. ಅದರಿಂದ 'ಅಸ್ಯ' ಎಂದರೆ 'ಜೀವಸ್ಯ' ಎಂದು ವ್ಯಾಖ್ಯಾನ ಮಾಡುತ್ತಾರೆ. ಅದರೆ 'ಅಸ್ಯ' ಈ ಜೀವನಿಗೆ ಎನ್ನಲು ಜೀವ ಪ್ರಕೃತನಾಗಿಲ್ಲ.

ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಈ ತೊಡಕುಗಳು ಬಾರದಂತೆ 'ಪಾಪಿಜನಸಮೂಹಗಳಲ್ಲಿ ದೈತ್ಯ-ರಾಕ್ಷಸ-ಕ್ಷತ್ರಿಯರೆಂದು ಮೂರು ಸಮೂಹಗಳು ಭಗವಂತನ ಶತ್ರುಗಳು' ಎಂದು ವ್ಯಾಖ್ಯಾನಿಸಲಾಗಿದೆ. ಹೀಗೆ ಹೇಳಿದರೂ ಯಾವ ಲೋಕಗಳಲ್ಲಿ ದೈತ್ಯ ರಾಕ್ಷಸ ಕ್ಷತ್ರಿಯ ಸಮೂಹಗಳು ಭಗವಂತನಿಗೆ ವಿರೋಧಿಗಳಾಗಿರುವವೋ ಆ ಲೋಕಗಳಲ್ಲಿ ಹುಟ್ಟಿರಿ ಎಂದರೆ ದೈತ್ಯರಲ್ಲಿ ಪ್ರಹ್ಲಾದನಂತೆ, ರಾಕ್ಷಸರಲ್ಲಿ ವಿಭೀಷಣನಂತೆ, ಕ್ಷತ್ರಿಯರಲ್ಲಿ ಪಾಂಡವರಂತೆ ಭಗವದ್ಭಕ್ತರಾಗಿ ಜಯವಿಜಯರು ಹುಟ್ಟಬಹುದು. ಭಗವಂತನ ಶತ್ರುಗಳಾಗಿ ಹುಟ್ಟಬೇಕೆಂದು ಶಾಪವಿಲ್ಲ ಎಂಬ ಅನುಪಪತ್ತಿ ಇದ್ದೇ ಇದೆ. ಯಾವ ಅನುಪಪತ್ತಿಗೂ ಅವಕಾಶ ಬಾರದಂತೆ ಶ್ರೀಮದಾಚಾರ್ಯರು ಹೇಳುತ್ತಾರೆ–

ತ್ರಯೋ ರಿಪವೋ ದೇಹತ್ರಯೇ ।

ಮೂರು ಶರೀರಗಳಲ್ಲಿ ಮೂವರು ಶತ್ರುಗಳಾಗುವಿರಿ.

ನೀವಿಬ್ಬರೂ ಮೂರು ಶರೀರಗಳಲ್ಲಿ ಜನ್ಮವೆತ್ತಿ ಆ ಮೂರು ಜನ್ಮಗಳಲ್ಲಿಯೂ ಭಗವಂತನಿಗೆ ಶತ್ರುಗಳಾಗಿರಿ. ಮೂರು ಶರೀರನಿಮಿತ್ತಕವಾಗಿ ಮೂವರು ಶತ್ರುಗಳು. ಹಿರಣ್ಯಕಶಿಪು ರಾವಣ ಶಿಶುಪಾಲ ಎಂದೂ, ಹಿರಣ್ಯಾಕ್ಷ ಕುಂಭಕರ್ಣ ದಂತವಕ್ರ ಎಂದೂ ಇಬ್ಬರೂ ಮೂರು ಮೂರು ಶತ್ರುಗಳಾಗಬೇಕು ಎಂದು ಶಾಪ.

* * *

ಸನಕಾದಿಮುನಿಗಳು ಶಾಪನೀಡಿದಾಗ ಜಯವಿಜಯರು ಭಯದಿಂದ ಮುನಿಗಳ ಕಾಲುಗಳಿಗೆರಗಿ ಕೇಳಿಕೊಂಡರು. 'ನಿಮ್ಮ ಶಾಪ ಅಮೋಘವೆಂದು ಬಲ್ಲೆವು. ಆದರೂ ಆ ಶಾಪದಂತೆ ನಾವು ಮೂರು ಜನ್ಮವೆತ್ತುವಾಗಲೂ ಶ್ರೀಹರಿಯ ವಿಸ್ಮರಣೆ ನಮಗಾಗದಂತೆ ಅನುಗ್ರಹಿಸಬೇಕು' ಎಂದು.

ಭೂಯಾನಘಾದ್ಧಿ ಭಗವದ್ಭಿರಕಾರಿ ದಂಡೋ
ಯೋ ನೌ ಹರೇತ ಸುರಹೇಲನಮಪ್ಯಶೇಷಮ್ ।
ಮಾ ವೋಽನುತಾಪಕಲಯಾ ಭಗವತ್‌ಸ್ಮೃತಿಘ್ನೋ
ಮೋಹೋ ಭವೇದಿಹ ತು ನೌ ವ್ರಜತೋರಧೋಽಧಃ ॥ ೩೬ ॥

ಪೂಜ್ಯರು ನಮಗೆ ಅಪರಾಧಕ್ಕಿಂತ ಹೆಚ್ಚಿನ ದಂಡವನ್ನು ವಿಧಿಸಿದ್ದೀರಿ. ನಿಮಗೆ ಮಾತ್ರವಲ್ಲ, ಹೀಗೇ ದೇವತೆಗಳಿಗೂ ನಾವು ಅವಮಾನಮಾಡಿದ್ದೇವೆ. ಅದೂ ಈ ಘೋರಶಿಕ್ಷೆಯಿಂದ ಪರಿಹಾರವಾಗಲೆಂದು ಹರಸಿರಿ. ಮತ್ತು ನಾವು ಪಶ್ಚಾತ್ತಾಪಗೊಂಡಿರುವುದರಿಂದ ಅದರ ಅಲ್ಪ ಪುಣ್ಯದಿಂದಲಾದರೂ ನಮಗೆ ನಿಮ್ಮ ಅನುಗ್ರಹದಿಂದ ಮೂರು ಹೀನಜನ್ಮಗಳ ಕಾಲದಲ್ಲಿಯೂ ಭಗವಂತನ ಸ್ಮರಣೆಯನ್ನು ದೂರಮಾಡುವ ಮೋಹ ಕವಿಯದಿರಲಿ.

[೧]ಇಲ್ಲಿ 'ಸ್ಮೃತಿಘ್ನೋ ಮೋಹೋ ಮಾ ಭವೇತ್' ಭಗವಂತನ ಸ್ಮರಣೆಯನ್ನು ನಾಶಮಾಡುವಂಥ ಮೋಹ ನಮಗೆ ಬಾರದಿರಲಿ' ಎಂದು ಸ್ಪಷ್ಟ ಹೇಳಿದ್ದರೂ ಶ್ರೀಧರವ್ಯಾಖ್ಯಾನದಲ್ಲಿ 'ಮೋಹವು ಕೂಡ ಸ್ಮೃತಿಯನ್ನೇ ಮತ್ತೆ ಮತ್ತೆ ಉಂಟುಮಾಡಲಿ' ಎಂದು ವಿವರಣೆ ನೀಡಿದೆ. ಮೋಹವೆಂದರೆ ವಿಸ್ಮರಣೆ. ಅದು ಸ್ಮರಣೆ ಉಂಟುಮಾಡುವುದು ವ್ಯಾಹತವಾಗಿದೆ. ಅದಕ್ಕೆ ವಿಶ್ವನಾಥವ್ಯಾಖ್ಯಾನ ಹೇಳುತ್ತದೆ– 'ಮೋಹವು ಭಗವಂತನನ್ನು ಸೇವಿಸಬೇಕೆನ್ನುವ ಬುದ್ಧಿಗೆ ವಿರೋಧಿಯೆ. ಆದರೂ ಅಂಥ ಮೋಹವೂ ಸ್ಮರಣೆಯನ್ನೇ ಉಂಟುಮಾಡಲಿ, ವಿಸ್ಮೃತಿಯನ್ನಲ್ಲ' ಎಂದು. ಇದರ ಅಭಿಪ್ರಾಯ ಶುಕದೇವ ವ್ಯಾಖ್ಯಾನದಲ್ಲಿ ಸ್ಪಷ್ಟವಾಗುತ್ತದೆ, 'ಮೋಹ ಬಂದರೂ ವೈರದಿಂದಲಾದರೂ ಭಗವಂತನ ಸ್ಮರಣೆಯೆ ಬರುತ್ತಿರಲಿ' ಎಂದು. ವೈರದಿಂದ ಸ್ಮರಣೆ ಮಾಡಿದರೂ ಅದು ಮೋಕ್ಷಕಾರಣವಾಗುತ್ತದೆ ಎಂಬ

---

೧. ಭಗವತ್‌ಸ್ಮೃತಿಪ್ರತಿಘಾತಕೋ ಮೋಹೋ ಮಾ ಭವೇತ್ । ಕಿಂತು ಮೋಹೋಽಪಿ ಸ್ಮೃತಿಮೇವ ಪ್ರವಹತಾದಿತಿ ಪ್ರಾರ್ಥನಾ । –ಶ್ರೀಧರಃ

ಮೋಹಸ್ತು ಭಗವತಿ ಸೇವ್ಯತ್ವಬುದ್ಧಿಪರಿಪಂಥೀ ಭವತ್ಯೇವ । ಯುಷ್ಮದಭಿಶಾಪಾನ್ಯಥಾನುಪಪತ್ತೇಃ । ತದಪಿ ಮೋಹಃ ಸೋಽಪಿ ಸ್ಮೃತಿಮೇವ ಪ್ರವಹತಾತ್ । ನ ತು ವಿಸ್ಮೃತಿಮಿತಿ ಪ್ರಾರ್ಥನಾ । –ವಿಶ್ವನಾಥಃ

ಮೂಢಯೋರಪ್ಯಾವಯೋರ್ವೈರಾದಿನಿಮಿತ್ತಮಪಿ ಭಗವತ್ಸ್ಮರಣ್ಯಮೇವ ಭವೇದಿತಿ ಪ್ರಾರ್ಥನಾ । –ಶುಕದೇವಃ

ತೌ ತು ಸ್ವಸ್ಯ ತದ್ರಿಪುಷ್ವೇವ ಜನ್ಮ ಬುಧ್ವಾ ರಿಪುತ್ವಂ ಚ ಬುಧ್ವಾ ತದನುಸ್ಮರಣಮಾತ್ರಂ ಪ್ರಾರ್ಥಯೇತೇ । –ಜೀವಗೋಸ್ವಾಮೀ

ಗ್ರಹಿಕೆಯಿಂದ ಹೀಗೆ ಹೇಳಿದ್ದಾರೆ. ಜೀವಗೋಸ್ವಾಮಿವ್ಯಾಖ್ಯಾನವೂ ಹೀಗೇ ಹೇಳುತ್ತದೆ. 'ಮೂರು ಬಾರಿಯೂ ಶತ್ರುಗಳಾಗಿ ಹುಟ್ಟುವ ಶಾಪವಿರುವುದರಿಂದ ಭಕ್ತಿಯನ್ನು ಬೇಡುವುದಾಗದು. ಭಕ್ತಿ ಇಲ್ಲದಿದ್ದರೂ ಸರಿಯೆ, ಸ್ಮರಣಮಾತ್ರವನ್ನಾದರೂ ಅನುಗ್ರಹಿಸಿರಿ' ಎಂದು. ಭಕ್ತಿ ಇಲ್ಲದ ಸ್ಮರಣೆಯಿಂದೇನು? ವೈರಪೂರ್ವಕ ಸ್ಮರಣೆಯಿಂದ ಅನರ್ಥವೆ! ಹೀಗಾಗಿ ಭಕ್ತಿಪೂರ್ವಕಸ್ಮರಣೆಗೆ ಘಾತಕವಾದ ಮೋಹ ಉಂಟಾಗಬಾರದೆಂದು ಪ್ರಾರ್ಥನೆ ಇಟ್ಟುಕೊಳ್ಳಬೇಕು. ಆಗ ಶತ್ರುಗಳಾಗಿ ಜನಿಸಿದವರಿಗೆ ಭಕ್ತಿಪೂರ್ವಕಸ್ಮರಣೆ ಸಾಧ್ಯವೆ? ಎನ್ನುವ ಪ್ರಶ್ನೆ ಬರುತ್ತದೆ. ಆದರೆ ಈ ಪ್ರಶ್ನೆಗೆ ಸಮಾಧಾನ ಬೇರೆ ವ್ಯಾಖ್ಯಾನಕಾರರಿಗೆ ಹೇಳಲು ಶಕ್ಯವಿಲ್ಲ.

ನಮ್ಮ ಮತದಲ್ಲಿ ಜಯವಿಜಯರು ಅಂಶದಿಂದ ಅವತರಿಸುವುದರಿಂದ ಮೂಲರೂಪದಲ್ಲಿ ವಿಶೇಷಬಲದಿಂದ ಭಕ್ತಿಪೂರ್ವಕ ಸ್ಮರಣೆ ಕೂಡುತ್ತದೆ. ಬೇರೆ ವ್ಯಾಖ್ಯಾನಕಾರರಿಗೆ ಅಂಶಾಂಶಿಗಳಿಗೆ ವಿಶೇಷವಿಲ್ಲದಿರುವುದರಿಂದ ಅಂಶಗಳಿಗೆ ಮೋಹವಿರುವಾಗ ಅಂಶಿಗಳಾದ ಜಯವಿಜಯರಿಗೆ ಮೋಹವೇ ಇರುತ್ತದೆ. ವಸ್ತುತಃ ಜಯವಿಜಯರು ಮೂಲರೂಪದಿಂದಲೇ ಭೂಮಿಯಲ್ಲಿ ಹುಟ್ಟಿದ್ದಾರೆ, ಎನ್ನುತ್ತಾರೆ. ಆಗ ವೈಕುಂಠದಲ್ಲಿ ಬೇರೆಯೆ ಜಯವಿಜಯರು. ಅವರು ಶಾಪಗ್ರಸ್ತರಲ್ಲ. ಶಾಪಗ್ರಸ್ತರಿಗೆ ಮೋಹ ತಪ್ಪಿದ್ದಲ್ಲ.

'ಹರೇತ ಸುರಹೇಲನಮಪ್ಯಶೇಷಂ' ಎಂಬಲ್ಲಿ 'ಅಶೇಷಮಪಿ ಸುರಹೇಲನಂ' ದೇವತೆಗಳಾದ ಸನಕಾದಿಗಳಲ್ಲಿ ಮಾಡಿದ ಅಪಚಾರವೆಲ್ಲವನ್ನೂ ನಿಮ್ಮ ಈ ಶಾಪ ಪರಿಹರಿಸಬಲ್ಲುದು, ಎಂದು ಅರ್ಥವಾಗುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ವ್ಯಾಖ್ಯಾನಮಾಡಿದ್ದಾರೆ. ಆದರೆ 'ಭೂಯಾನಘಾದ್ಧಿ' 'ಅಪರಾಧಕ್ಕಿಂತ ಹೆಚ್ಚಿನ ಶಿಕ್ಷೆ' ಇದು ಭಾಗವತದ ಮೂಲಪಾಠ. ಬೇರೆ ವ್ಯಾಖ್ಯಾನಕಾರರು 'ಭೂಯಾದಘೋನಿ''ಅಪರಾಧಿಗೆ ನೀವು ವಿಧಿಸಿದ ಶಿಕ್ಷೆ ಸರಿಯಾಗಿದೆ, ಅದು ನಮಗಿರಲಿ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ, ಅವರಿಗೆ 'ಈ ಶಿಕ್ಷೆ ಅಶೇಷ ಸುರಹೇಲನ ಪರಿಹಾರಕವಾದ್ದರಿಂದ ಸ್ವೀಕಾರಾರ್ಹ' ಎಂದು ಶ್ಲೋಕಾಭಿಪ್ರಾಯ ಕೂಡುತ್ತದೆ. ನಮ್ಮ ಪಾಠದಲ್ಲಿ ಅಪರಾಧಕ್ಕಿಂತ ಹೆಚ್ಚಿನದಾದ ಘೋರಶಿಕ್ಷೆ ಈ ಅಪರಾಧವನ್ನು ಮಾತ್ರವಲ್ಲದೆ ಬೇರೆ ಲಕ್ಷ್ಮೀಬ್ರಹ್ಮಾದಿಗಳಿಗೆ ಜಯವಿಜಯರು ಗೈದಿರುವ ಅಪರಾಧವನ್ನೂ ಪರಿಹರಿಸಬಲ್ಲುದೆಂದು ಶ್ಲೋಕಾಭಿಪ್ರಾಯವಿದೆ. ಅದರಿಂದ 'ಅಶೇಷಂ ಸುರಹೇಲನಮಪಿ' ಎಂದು ಅಪಿಶಬ್ದಾನ್ವಯ ಹೇಳಬೇಕು. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಸುರಹೇಲನಸ್ಯಾಪಿ ದಂಡೋ ಭವತಿ । ಅತ್ರ ಸ್ಥಿತಯೋಃ ಪುನಃ
ಪೂರ್ವವನ್ಮೋಹೋ ನ ಸ್ಯಾದಂಶಿನೋಃ ॥

ಪ್ರಕೃತ ಅಪರಾಧಕ್ಕಿಂತ ಹೆಚ್ಚಿನದಾದ ಶಿಕ್ಷೆ ಇದಾದ್ದರಿಂದ ಬೇರೆ ದೇವತಾ ತಿರಸ್ಕಾರರೂಪ ಅಪರಾಧಕ್ಕೂ ಇದು ದಂಡವೆನಿಸಲಿ ಎಂದು 'ಹರೇತ ಸುರಹೇಲನಮಪ್ಯಶೇಷಂ' ಎನ್ನುವುದರ ತಾತ್ಪರ್ಯವಾಗಿದೆ. 'ಮೋಹೋ ಮಾ ಭವೇತ್' ಎಂದರೆ ಅಂಶಗಳು ಮೂರು ಜನ್ಮಗಳನ್ನು ಹೊಂದುವಾಗ ಇತ್ತ ವೈಕುಂಠದಲ್ಲಿರುವ ಅಂಶಿಗಳಿಗೆ ಹಿಂದಿನಂತೆ ಭಗವಂತನಲ್ಲಿ, ಭಗವದ್ಭಕ್ತರ ವಿಷಯದಲ್ಲಿ ಇಂಥಹ ಮೋಹ ಮುಂದೆ ಬಾರದಂತೆ ಅನುಗ್ರಹಿಸಿರಿ ಎಂದರ್ಥ.

'ಶತ್ರುಗಳಾಗಿ ಹುಟ್ಟಿರೆಂದೇ ಶಾಪವಿರುವುದರಿಂದ ಹುಟ್ಟುವ ನಮ್ಮ ಅಂಶಗಳಿಗೆ ಭಕ್ತಿ ಇರಲು ಶಕ್ಯವಿಲ್ಲ, ಮೋಹವೇ ಇರುತ್ತದೆ. ಇರಲಿ, ಇಲ್ಲಿ ವೈಕುಂಠದಲ್ಲಿ ಎಂದಿನಂತೆ ದ್ವಾರಪಾಲಕರಾಗಿ ಸೇವೆ ಮಾಡುವ ನಮ್ಮ ಮೂಲರೂಪಗಳಿಗೆ ಹಿಂದಿನಂತೆ ಭಗವಂತನಲ್ಲೂ ಭಗವದ್ಭಕ್ತರಲ್ಲೂ ಅಪಚಾರಮಾಡಿಸುವಂಥ ಮೋಹ ಬೇಡ, ಅದು ಬ್ರಹ್ಮಶಾಪದಿಂದಾಗಿ ಮುಂದೆಯೂ ಇರುವುದಾದರೆ ಮಹಾ ಅನರ್ಥ ಉಂಟಾದೀತು. ಆ ಮೋಹ ಕೇವಲ ಅಂಶಗಳಿಗೇ ಇರಲಿ' ಎಂದು ಪ್ರಾರ್ಥನೆ ಮಾಡುತ್ತಿದ್ದಾರೆ ಜಯವಿಜಯರು.

* * *

ಜಯವಿಜಯರು ಸನಕಾದಿಮುನಿಗಳಲ್ಲಿ ಅಪಚಾರಗೈದು ಶಾಪಕ್ಕೆ ತುತ್ತಾಗಿದ್ದಾರೆ ಎಂದು ತಿಳಿದು ಶ್ರೀಹರಿ ಲಕ್ಷ್ಮೀಸಮೇತನಾಗಿ ಹೊರಗೆ ಬಂದಿದ್ದಾನೆ. ಸನಕಾದಿಗಳು ಕಣ್ತುಂಬ ಅವನನ್ನು ಕಂಡು ಆನಂದತುಂದಿಲರಾಗುತ್ತಿದ್ದಾರೆ–

ತಂ ತ್ವಾಗತಂ ಪ್ರತಿಹೃತೌಪಯಿಕಂ ಸ್ವಪುಂಭಿ–
ಸ್ತೇಽಚಕ್ಷತಾಕ್ಷವಿಷಯಂ ಸ್ವಸಮಾಧಿಗಮ್ಯಮ್ ।
ಹಂಸಶ್ರಿಯೋರ್ವ್ಯಜನಯೋಃ ಶಿವವಾಯುಲೋಲ–
ಶುಭ್ರಾತಪತ್ರ ಶಶಿಕೇಸರ ಶೀಕರಾಂಬುಮ್ ॥ ೩೮ ॥

ಲಕ್ಷ್ಮೀಸಮೇತನಾಗಿ ದಯಮಾಡಿಸಿದ ಶ್ರೀಹರಿಯನ್ನು ಸನಕಾದಿಗಳು ಕಣ್ಣಾರೆ ಕಂಡರು. ಅವರಿಗೆ ಸಮಾಧಿಯೋಗದಲ್ಲಿ ಮೈದೋರುವವನು ಈಗ ಕಣ್ಣಮುಂದೆ ಬಂದು ನಿಂತಿದ್ದಾನೆ. ಪರಿವಾರದವರು ಅವನಿಗೆ ಛತ್ರಚಾಮರಾದಿಗಳನ್ನು ಹಿಡಿದಿದ್ದಾರೆ. ಇಕ್ಕೆಲಗಳಲ್ಲಿ ಬೀಸುವ ರಾಜಹಂಸಗಳ ರೆಕ್ಕೆಗಳಂತಿರುವ ಬೀಸಣಿಗೆಗಳ ತಂಗಾಳಿಗೆ ಬೆಳ್ಗೊಡೆಯ ರೂಪದ ಚಂದ್ರನ ಮುತ್ತುಗಳ ಮಾಲೆಯ ರೂಪದ ಕಿರಣಗಳು ಕಂಪಿಸುತ್ತಿವೆ. ಮುತ್ತುಗಳ ರೂಪದಲ್ಲಿ ಅಮೃತಬಿಂದುಗಳು ತೊಟ್ಟಿಕ್ಕುತ್ತಿವೆ.

ಇಲ್ಲಿ ಕೇಸರವೆಂದರೆ ಮುತ್ತಿನ ಮಾಲೆ ಎಂದು ಶ್ರೀಧರಾದಿವ್ಯಾಖ್ಯಾನ. ಹಾಗಾದರೆ 'ಶಶಿಕೇಸರ' ಎಂದರೇನು? ಚಂದ್ರಕಿರಣಗಳಂಥಹ ಮುತ್ತಿನ ಮಾಲೆಗಳು ಎಂದು ವಲ್ಲಭವ್ಯಾಖ್ಯಾನ. ಅಲಂಕಾರಶಾಸ್ತ್ರಪ್ರಕಾರ ಉಪಮೇಯವಾದ ಮುತ್ತಿನ ಮಾಲೆಯನ್ನು

ಉಪಮಾನವಾದ ಪದ್ಮಕೇಸರವನ್ನು ಹೇಳುವ ಕೇಸರಶಬ್ದದಿಂದ ನಿಗರಣಮಾಡಿ ಹೇಳಿದ್ದರಿಂದ ಅತಿಶಯೋಕ್ತಿ ಅಲಂಕಾರ ಎಂದು [1]ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ. ಕೇಸರಶಬ್ದದಿಂದ ನೇರವಾಗಿ ಮುತ್ತಿನಮಾಲೆ ಎಂಬ ಅರ್ಥಸಿಗುವುದು ಕಷ್ಟವಾದ್ದರಿಂದ ಈ ವ್ಯಾಖ್ಯಾನ ಸೂಕ್ತವೆನ್ನಬಹುದು. ಆದರೆ ವಸ್ತುತಃ ಬೆಳ್ಗೊಡೆಯನ್ನು ಚಂದ್ರನಿಗೂ ಅದರ ಮುತ್ತಿನ ಮಾಲೆಯನ್ನು ಪದ್ಮಕೇಸರಗಳಿಗೂ ಹೋಲಿಸುವುದಷ್ಟೇ ಭಾಗವತದ ಆಂತರ್ಯವಲ್ಲ. ಏಕೆಂದರೆ ಮುಂದಿನ ಶ್ಲೋಕದಲ್ಲಿ ಗ್ರೀವಾಮಣಿಯಾದ ಕೌಸ್ತುಭವನ್ನು 'ಆತ್ಮಧಿಷ್ಣ್ಯ' ಎಂದು ಕರೆದಿದೆ. ತಾತ್ಪರ್ಯದಲ್ಲಿ 'ಕೌಸ್ತುಭೋ ಬ್ರಹ್ಮಣೋ ರೂಪಂ' ಚತುರ್ಮುಖನೇ ಕೌಸ್ತುಭಮಣಿಯ ರೂಪದಿಂದ ಹರಿಯ ಕಂಠವನ್ನು ಅಲಂಕರಿಸಿದ್ದಾನೆ ಎನ್ನಲಾಗಿದೆ. ಅದರಿಂದ ಈ ಶ್ಲೋಕದಲ್ಲಿ ಬೆಳ್ಗೊಡೆಯ ರೂಪದಿಂದ ನಿಂತು ಅಮೃತಮಯ ಕಿರಣಗಳಿಂದ ಚಂದ್ರನೇ ಹರಿಸೇವೆ ಮಾಡುತ್ತಿದ್ದಾನೆ. ಅದರಿಂದ ಕೇಸರವೆಂದರೆ ಪದ್ಮಕೇಸರಸದೃಶವಾದ ಮುತ್ತಿನ ಮಾಲೆಯಲ್ಲ. ಚಂದ್ರಕಿರಣಸದೃಶವಾದ ಮುತ್ತಿನ ಮಾಲೆಯೂ ಅಲ್ಲ. ಮುತ್ತಿನ ಮಾಲೆಯ ರೂಪದ ಚಂದ್ರಕಿರಣವೆನ್ನಬೇಕು. ಅದರಿಂದ ತಾತ್ಪರ್ಯದಲ್ಲಿ 'ಕೇಸರವೆಂದರೆ ರಶ್ಮಿ' ಎನ್ನುತ್ತಾರೆ ಹೊರತು ಅತಿಶಯೋಕ್ತ್ಯಲಂಕಾರ ಎನ್ನುವುದಿಲ್ಲ.

ಕೇಸರಾ ರಶ್ಮಯಃ ।

ಕೇಸರಗಳೆಂದರೆ ರಶ್ಮಿಗಳು

* * *

---

೧ ಅತ್ರ ಮುಕ್ತಾಹಾರವಿಲಂಬಾನಾಮುಪಮೇಯಾನಾಮುಪಮಾನೀಭೂತ ಕೇಸರೈರ್ನಿಗೀರ್ಣತ್ವೇನ ವರ್ಣನಮೇವಾತಿ ಶಯೋಕ್ತ್ಯಲಂಕಾರಃ । ತೇನ ಶಶಿತ್ವೇನ ರೂಪಿತಸ್ಯಾಪಿ ಛತ್ರಸ್ಯಾಧೋಮುಖಸಹಸ್ರಪತ್ರಪದ್ಮತ್ವರೂಪಕಾಲಂಕಾರೋ ವ್ಯಂಜಿತ ಇತ್ಯಲಂಕಾರ ವ್ಯಂಗ್ಯಾಲಂಕಾರತ್ವೇನ ಮಹತ್ತಮಕಾವ್ಯತ್ವಂ । –ರಾಧಾರಮಣದಾಸಃ

ಶುಭ್ರಂ ಯದಾತಪತ್ರಂ ತದೇವ ಶಶಿಸಾದೃಶ್ಯಾತ್ ಶಶೀ । ತಸ್ಯ ಕೇಸರಾ ಮುಕ್ತಾಹಾರ ವಿಲಂಬಾಃ –ಶ್ರೀಧರಃ

ಕೇಸರಾ ಮುಕ್ತಾದಾಮವಿಲಂಬಾಃ –ವೀರರಾಘವಃ

ಕೇಸರಾ ಮುಕ್ತಾಮಯಪ್ರಲಂಬಾಃ –ಜೀವಗೋಸ್ವಾಮೀ

ಕೇಸರಾ ಮುಕ್ತಾಹಾರವಿಲಂಬಾಃ –ವಿಶ್ವನಾಥಃ ಶುಕದೇವಃ

ಯದಾತಪತ್ರಂ ಛತ್ರಂ ಸ ಏವ ಶಶೀ ಅಮೃತಸ್ರಾವೀ ಚಂದ್ರಃ । ತಸ್ಯ ಕೇಸರಾ ಅಮೃತಬಿಂದುಯುಕ್ತಕಿರಣಾ ಇವ ಪರಿತೋ ಬದ್ಧಾ ಮುಕ್ತಾಮಾಲಾಃ –ವಲ್ಲಭಃ.

ಶ್ರೀಹರಿಯ ಎದೆಯಲ್ಲಿ ಶ್ರೀವತ್ಸವನ್ನೂ, ಕೊರಳಿನಲ್ಲಿ ಆಭರಣವಾಗಿ ಮೆರೆಯುವ ಕೌಸ್ತುಭವನ್ನೂ ಸನಕಾದಿಗಳು ದರ್ಶನ ಮಾಡಿದರು–

ಕೃತ್ಸ್ನಪ್ರಸಾದಸುಮುಖಂ ಸ್ಪೃಹಣೀಯಧಾಮ
ಸ್ನೇಹಾವಲೋಕಕಲಯಾ ಹೃದಿ ಸಂಸ್ಪೃಶಂತಮ್ ।
ಶ್ಯಾಮೇ ಪೃಥಾವುರಸಿ ಶೋಭಿತಯಾ ಶ್ರಿಯಾ ಸ್ವ–
ಗ್ರೀವಾಮಣಿಂ ಸುಭಗಯಂತಮಿವಾತ್ಮಧಿಷ್ಣ್ಯಮ್ ॥ ೩೯ ॥

ಪೂರ್ಣಾನಂದದಿಂದ ಅರಳಿದ ಮುಖ ಉಳ್ಳವನು, ಮನೋಹರಕಾಂತಿ ಉಳ್ಳವನು, ಪ್ರೇಮಪೂರ್ಣಕಟಾಕ್ಷದಿಂದ ನೋಡುವವರ ಎದೆಯನ್ನು ಮುಟ್ಟಿ ಸ್ಪರ್ಶಸುಖ ನೀಡುವವನು, ನೀಲವಾದ ವಿಶಾಲವಕ್ಷಃಸ್ಥಲದಲ್ಲಿ ಶೋಭಿಸುವ ಶ್ರೀವತ್ಸ ಉಳ್ಳವನು, ಚತುರ್ಮುಖನ ಪ್ರತಿಮಾರೂಪವಾಗಿದ್ದು ಕಂಠಾಭ್ರಣವಾಗಿರುವ ಕೌಸ್ತುಭ ಮಣಿಯನ್ನು ತನ್ನೆದೆಯ ಕಾಂತಿಯಿಂದ ಬೆಳಗಿಸುವವನು. ಇಂಥ ಹರಿಯನ್ನು ಕಂಡು ಸನಕಾದಿಗಳು ವಂದಿಸಿದರು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸ್ವಶ್ಚೂಡಾಮಣಿಂ ಸುಭಗಯಂತ ಮಿವಾತ್ಮಧಿಷ್ಣ್ಯಮ್' ಎಂದು ಅಪಪಾಠವಿಟ್ಟುಕೊಂಡು 'ಸ್ವರ್ಗಲೋಕಕ್ಕೂ ಶಿರೋಭೂಷಣವಾಗಿರುವ ತನ್ನ ಮನೆಯಾದ ವೈಕುಂಠಲೋಕವನ್ನು ತನ್ನೆದೆಯಲ್ಲಿ ಬೆಳಗುವ ಲಕ್ಷ್ಮಿಯಿಂದ ಬೆಳಗಿಸುವವನು ಎಂದು ವ್ಯಾಖ್ಯಾನಿಸಿದ್ದಾರೆ. ಶ್ರೀವತ್ಸ ಕೌಸ್ತುಭಗಳೆರಡು ಪರಮಾತ್ಮನ ಮುಖ್ಯಲಕ್ಷಣಗಳು 'ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ' ಎಂದು ಭಾಗವತ ಮುಂದೆ ಹೇಳುತ್ತದೆ. ಇಲ್ಲಿ 'ಆತ್ಮಧಿಷ್ಣ್ಯಂ' ಎಂಬ ಶಬ್ದದಿಂದ ಕೌಸ್ತುಭವನ್ನು ಹೇಳಲು ಬರುವಾಗ ಅದನ್ನು ಬಿಡುವುದು ಉಚಿತವಾಗುವುದಿಲ್ಲ. 'ವಿದ್ಯುತ್ ಕ್ಷಿಪನ್' ಎಂಬ ಶ್ಲೋಕದಲ್ಲಿ ಮುಂದೆ 'ಕಂಧರಗತೇನ ಚ ಕೌಸ್ತುಭೇನ' ಎಂದು ಕೌಸ್ತುಭವನ್ನೂ ಹೇಳುತ್ತಾರೆ ನಿಜ. ಆದರೆ ಕೌಸ್ತುಭವು ಚತುರ್ಮುಖಬ್ರಹ್ಮನ ಪ್ರತೀಕವೆಂದು ಸ್ವಯಂ ಚತುರ್ಮುಖಬ್ರಹ್ಮದೇವರೇ ಇಲ್ಲಿ 'ಆತ್ಮಧಿಷ್ಣ್ಯಂ' ಎಂದು ಆತ್ಮಶಬ್ದದಿಂದ ವರ್ಣಿಸುತ್ತಿದ್ದಾರೆ. 'ಕೌಸ್ತುಭೋ ಬ್ರಹ್ಮಣೋ ರೂಪಂ' ಎಂದು ಪ್ರಮಾಣವೂ ಇದೆ. ಆದರಿಂದ 'ಸ್ವಶ್ಚೂಡಾಮಣಿಂ' ಎಂಬ ಪಾಠಕ್ಕಿಂತ 'ಸ್ವಗ್ರೀವಾಮಣಿಂ' ಎಂಬ ಪಾಠ ಹೆಚ್ಚು ಪ್ರಶಸ್ತವಾಗಿದೆ.

'ವಿದ್ಯುತ್ ಕ್ಷಿಪನ್' ಎಂಬ ಶ್ಲೋಕದಲ್ಲಿ 'ಮಣಿಮತ್ಕಿರೀಟಂ' 'ಮಣಿಖಚಿತವಾದ ಕಿರೀಟ ಉಳ್ಳವನು ಶ್ರೀಹರಿ' ಎಂದೂ ಹೇಳಿದೆ. ಕಿರೀಟದ ಮಣಿ ಎಂದರೆ ಚೂಡಾಮಣಿ ಮುಖ್ಯಪ್ರಾಣನ ಪ್ರತೀಕ. ಅವನೇ ಮಣಿರೂಪದಿಂದ ಹರಿಯ ಶಿರವನ್ನು ಅಲಂಕರಿಸಿದ್ದಾನೆ. ಇದು ಬೇರೆ ವ್ಯಾಖ್ಯಾನಕಾರರ ಗಮನಕ್ಕೇ ಬಂದಿಲ್ಲ.

ಕೌಸ್ತುಭವು ಚತುರ್ಮುಖನ ಪ್ರತೀಕವೆಂಬುದೂ ತಿಳಿದಿಲ್ಲ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಕೌಸ್ತುಭೋ ಬ್ರಹ್ಮಣೋ ರೂಪಂ ಪ್ರಾಣಶ್ಚೂಡಾಮಣಿಸ್ತಥಾ ।
ಇತಿ ಚ ।

ಕೌಸ್ತುಭವು ಬ್ರಹ್ಮನ ಪ್ರತೀಕ. ಚೂಡಾಮಣಿಯೂ ಮುಖ್ಯಪ್ರಾಣ ಪ್ರತೀಕ ವೆಂದೂ ಉಕ್ತವಾಗಿದೆ.

* * *

ಭಕ್ತರು ಸದಾ ಧ್ಯಾನಿಸುವ ಭಗವಂತನ ಸುಂದರಾಕೃತಿಯನ್ನು ಸನಕಾದಿಗಳು ಕಣ್ಣಾರೆ ಕಂಡು ನಮಿಸಿದರು–

ಅತ್ರೋಪಸೃಷ್ಟಮಿತಿ ಚೋತ್ಸ್ಮಿತಮಿಂದಿರಾಯಾಃ
ಸ್ವಾನಾಂ ಧಿಯಾ ವಿರಚಿತಂ ಬಹುಸೌಭಗಾಢ್ಯಮ್ ।
ಮಹ್ಯಂ ಭವಸ್ಯ ಭವತಾಂ ಭಜನೀಯಮಂಗಂ
ನೇಮುರ್ನಿರೀಕ್ಷ್ಯ ನವಿತೃಪ್ತದೃಶೋ ಮುದಾ ಕೈಃ ॥ ೪೨ ॥

ಹಿಂದಿನಶ್ಲೋಕದಲ್ಲಿ 'ಹಾರೇಣ ಕಂಧರಗತೇನ ಚ ಕೌಸ್ತುಭೇನ' 'ಭಗವಂತನ ಕಂಠವನ್ನು ಅಲಂಕರಿಸಿದ ಹಾರಕೌಸ್ತುಭಗಳು' ಎಂದಿಷ್ಟು ಹೇಳಿದೆ. ಅದನ್ನು ಮುಂದುವರಿಸಿ ಈ ಶ್ಲೋಕದಲ್ಲಿ ಹೇಳುತ್ತಾರೆ–

'ಹಾರಕೌಸ್ತುಭಗಳು ನಾನಿರುವ ಈ ಎದೆಯಲ್ಲಿ ಕುಳಿತಿವೆ ಎಂದು ಇಂದಿರೆಗೆ ಆಶ್ಚರ್ಯ, ಈ ಹಾರಕೌಸ್ತುಭಗಳೇನು ಪುಣ್ಯಮಾಡಿವೆ! ಎಂದು. ಬ್ರಹ್ಮದೇವರು ಹಾರಕೌಸ್ತುಭರೂಪದಿಂದ ಭಗವಂತನ ಎದೆಯನ್ನು ಅಲಂಕರಿಸುವಂಥ ಪುಣ್ಯಮಾಡಿದ್ದಾರೆ ಎಂದು ಇಂದಿರೆಗೆ ಸಂತೋಷ. ಭಗವಂತನ ಶರೀರವೆ ಅಂಥದ್ದು. ಅದು ಭಕ್ತರು ಸದಾ ಮನಸಿನಿಂದ ಧ್ಯಾನಿಸುವಂಥದ್ದು. ಬಹಳ ಸೌಭಾಗ್ಯ ಸಂಪನ್ನವಾದುದು. ನನಗೂ ಶಿವನಿಗೂ ನಿಮಗೂ ಎಲ್ಲರಿಗೂ ಸೇವ್ಯವಾದುದು. ಅಂಥ ಭಗವದ್ರೂಪವನ್ನು ಸನಕಾದಿಗಳು ಕಣ್ಣು ತುಂಬ ನೋಡಿಯೂ ಆ ಕಣ್ಣುಗಳಲ್ಲಿ ತೃಪ್ತಿ ಕಾಣದಾದರು. ಆನಂದದಿಂದ ಶಿರಬಾಗಿ ನಮಿಸಿದರು.'

[೧]ಇಲ್ಲಿ 'ಸ್ವಾನಾಂ ಧಿಯಾ ವಿರಚಿತಂ' ಎಂಬುದಕ್ಕೆ ವಲ್ಲಭಾಚಾರ್ಯ ಗಿರಿಧರ ವ್ಯಾಖ್ಯಾನಗಳಲ್ಲಿ ಭಕ್ತರು ತಮ್ಮ ಬುದ್ಧಿಯಿಂದ ಭಗವಂತನ ಆಕಾರವನ್ನು

೧. ಸ್ವಾನಾಂ ಭಕ್ತಾನಾಂ ನಿಶ್ಚಯಾತ್ಮಿಕಯಾ ಬುದ್ಧ್ಯಾ ಚ ಯದ್ ವಿಶೇಷೇಣ ರಚಿತಂ ಧ್ಯಾನಾದಿನಾ ಪರಿಕಲ್ಪಿತಂ । –ವಲ್ಲಭಃ

ಕಲ್ಪಿಸಿಕೊಳ್ಳುತ್ತಾರೆ. ಅವರು ಯಾವ ಆಕಾರ ಕಲ್ಪಿಸಿಕೊಳ್ಳುತ್ತಾರೋ ಆ ಆಕಾರವನ್ನು ಭಗವಂತ ಸ್ವೀಕರಿಸಿ ಮೈದೋರುತ್ತಾನೆ' ಎಂದು ಹೇಳಿದೆ. ಇದು ಸರಿಯಲ್ಲ. ಭಕ್ತರು ಮೊದಲು ಇಲ್ಲದಿದ್ದ ಭಗವಂತನ ಆಕಾರವನ್ನು ಧ್ಯಾನದಲ್ಲಿ ಕಲ್ಪಿಸಿಕೊಳ್ಳುವುದಿಲ್ಲ. ಹಾಗೆ ಕಲ್ಪಿಸಿ ಧ್ಯಾನಿಸಿದರೆ ಅದು ಮಿಥ್ಯೋಪಾಸನೆಯಾಗುತ್ತದೆ. ಅದರಿಂದ 'ಧಿಯಾ ವಿರಚಿತಂ' ಎಂದರೆ ವಾಸ್ತವದಲ್ಲಿರುವ ರೂಪವನ್ನೇ ಭಕ್ತರು ಧ್ಯಾನಿಸುತ್ತಾರೆ ಎಂದರ್ಥ. ಹಾಗೆ ಧ್ಯಾನಿಸುವುದನ್ನು 'ರಚನೆ' ಎಂದು ವ್ಯವಹರಿಸುವುದುಂಟು. ಇಲ್ಲದಿದ್ದ ವಸ್ತುವನ್ನು ಹೊಸದಾಗಿ ನಿರ್ಮಿಸುವುದನ್ನೂ ರಚನೆ ಎನ್ನುತ್ತಾರೆ. 'ಇರುವ ವಸ್ತುವನ್ನು ರಚನ ಮಾಡುತ್ತಾರೆ' ಎಂದರೆ ಧ್ಯಾನಮಾಡುತ್ತಾರೆ ಎಂದೇ ಅರ್ಥಗ್ರಹಿಸಬೇಕು ಎಂದು ಶಬ್ದನಿರ್ಣಯದಲ್ಲಿ ಹೇಳಿದೆ–

> ಅವಿದ್ಯಮಾನಕರಣಂ ವಿದ್ಯಮಾನಸ್ಮೃತಿಸ್ತಥಾ ।
> ಉಭಯಂ ರಚನಂ ಪ್ರೋಕ್ತಂ ಪೂರ್ವಸಿದ್ಧೇಷು ತು ಸ್ಮೃತಿಃ ॥
> ಇತಿ ಶಬ್ದನಿರ್ಣಯೇ ॥

ಇಲ್ಲದಿರುವ ವಸ್ತುವಿನ ನಿರ್ಮಾಣ, ಇರುವ ವಸ್ತುವಿನ ಧ್ಯಾನ ಇವೆರಡನ್ನೂ ರಚನೆ ಎನ್ನುತ್ತಾರೆ. ಮೊದಲಿಂದಲೂ ಇರುವ ವಸ್ತುವಿನ ವಿಷಯದಲ್ಲಿ ರಚನೆ ಎನ್ನುವುದು ಧ್ಯಾನವೇ ಆಗಿದೆ ಎಂದು ಶಬ್ದನಿರ್ಣಯಗ್ರಂಥದಲ್ಲಿ ಉಕ್ತವಾಗಿದೆ.

* * *

ಭಗವಂತನ ಪಾದಕಮಲಗಳ ಮತ್ತು ತುಳಸಿಯ ಸುವಾಸನೆಯನ್ನು ಹೊತ್ತು ಬೀಸುವ ತಂಗಾಳಿ ಮುನಿಗಳಿಗೆ ಮೈಮನಗಳನ್ನು ಮರೆಸಿತ್ತೆಂದು ಬ್ರಹ್ಮದೇವರು ದೇವತೆಗಳಿಗೆ ಹೇಳುತ್ತಾರೆ–

> ತಸ್ಯಾರವಿಂದನಯನಸ್ಯ ಪದಾರವಿಂದ–
> ಕಿಂಜಲ್ಕಮಿಶ್ರತುಲಸೀಮಕರಂದವಾಯುಃ ।
> ಅಂತರ್ಗತಃ ಸ್ವವಿವರೇಣ ಚಕಾರ ತೇಷಾಂ
> ಸಂಕ್ಷೋಭಮಕ್ಷರಜುಷಾಮಪಿ ಚಿತ್ತತನ್ವೋಃ ॥ ೪೩ ॥

ಅರವಿಂದನಯನನಾದ ಭಗವಂತನ ಪಾದಾರವಿಂದಕೇಸರ ಹಾಗೂ ಅದರ ಜೊತೆಗಿರುವ ತುಲಸಿಯ ಮಕರಂದವನ್ನು ಹೊತ್ತು ಬೀಸಿದ ತಂಗಾಳಿ ಮುನಿಗಳ

ಸ್ವಭಕ್ತೈರ್ಧ್ಯಾನಾರ್ಥಂ ಯಥಾಭೂತಂ ತರ್ಕಿತಂ ತಥಾರೂಪೇಣೈವಾವಿರ್ಭೂತಮಿತ್ಯರ್ಥಃ – ಗಿರಿಧರಃ

ಭೃತ್ಯೈಃ ಸ್ವಮನಸ್ಯೇವಂ ವಿತರ್ಕಿತಂ –ಶ್ರೀಧರಃ ವೀರರಾಘವಃ ಶುಕದೇವಃ

ಮೂಗಿನಿಂದ ಹೊಕ್ಕು ಅವರ ಮೈಮನಗಳಿಗೆ ಕ್ಷೋಭೆ ಉಂಟುಮಾಡಿತು. ಅವರು ಇಂಥ ಭಗವಂತನನ್ನು ಧ್ಯಾನದೃಷ್ಟಿಯಿಂದ ಕಂಡು ಅನುಭವಿಸಿದವರೇ. ಆದರೂ ಅವನು ನಿತ್ಯನೂತನನಾದ್ದರಿಂದ ಅಭೂತಪೂರ್ವ ಅನುಭವ ತರುತ್ತಾನೆ.

[೧]ಇಲ್ಲಿ 'ಅಕ್ಷರಜುಷಾಮಪಿ' ಎಂದರೆ ನಿರ್ವಿಶೇಷ ಬ್ರಹ್ಮಸ್ವರೂಪಾನಂದವನ್ನು ಅನುಭವಿಸುವವರಿಗೂ ಸವಿಶೇಷಬ್ರಹ್ಮನಾದ ಪರಮಾತ್ಮನ ಅನುಭವ ಮೈಮರೆಸುತ್ತದೆ. ಅದಕ್ಕಿಂತಲೂ ಇದು ಶ್ರೇಷ್ಠ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ವೀರರಾಘವವ್ಯಾಖ್ಯಾನದಲ್ಲಿ ಆತ್ಮಾನಂದಾನುಭವಕ್ಕಿಂತ ಭಗವದಾನಂದಾನುಭವ ಹೆಚ್ಚಿನದು ಎನ್ನಲಾಗಿದೆ. ಅದ್ವೈತೋಪಾಸಕರಾದ ಸನಕಾದಿಗಳಿಗೆ ದೇಹೇಂದ್ರಿಯಾದಿಭ್ರಾಂತಿ ಇಲ್ಲ. ಭಕ್ತಿರಸವಂತೂ ಇಲ್ಲವೇ ಇಲ್ಲ. ಆದರೂ ಭಗವಂತನ ಇಚ್ಛೆಯಿಂದ ಜ್ಞಾನಿಗಳಾದ ಅವರು ಈಗ ಭಕ್ತರಾದರು. ಪರಮಾತ್ಮನ ಪಾದಕಮಲದ ಸುಗಂಧವನ್ನು ಹೊತ್ತ ವಾಯು ಅವರ ಸ್ಥೂಲಶರೀರವನ್ನು ಹೊಕ್ಕು ಒಳಗೆ ಬೇರೆಯೆ ಸೂಕ್ಷ್ಮಶರೀರವನ್ನು ನಿರ್ಮಿಸಿತು. ಸ್ಥೂಲಶರೀರವನ್ನು ಅಂಶತಃ ತ್ಯಾಗಮಾಡಿದ್ದರಿಂದ ಮೈಮರೆತಂತಾಯಿತು ಎಂದು ಮುಂತಾಗಿ ವಲ್ಲಭಾಚಾರ್ಯವ್ಯಾಖ್ಯಾನ ಹೇಳುತ್ತದೆ. ಇದೆಲ್ಲ ಅಪ್ರಾಮಾಣಿಕ.

---

೧. ಸ್ವರೂಪಾನಂದಾದಪಿ ತೇಷಾಂ ಭಜನಾನಂದಾಧಿಕ್ಯಮಾಹ —ಶ್ರೀಧರಃ

ಪೂರ್ವಂ ಹಿ ತೇಷಾಂ ಚಿತ್ತೇ ಬ್ರಹ್ಮರಾಜ್ಯಮಾಸೀತ್ । ಇದಾನೀಂ ತು ತದ್ರಾಜ್ಯಮಪನೇತುಂ ತತ್ರ ಸ್ವವಿವರದ್ವಾರಾ ವಾಯುಃ ಪ್ರವಿಶ್ಯ ಹರ್ಷಾಶ್ರುಪುಲಕಾದಿಸೈನ್ಯೈಃ ಸಮ್ಯಕ್ ಕ್ಷೋಭಂ ಚಕಾರ —ರಾಧಾರಮಣಃದಾಸಃ

ಅಕ್ಷರಜುಷಾಮಪ್ಯಾತ್ಮಾನುಸಂಧಾನೇನಾವಿಕೃತಮನಸಾಮಪಿ ತೇಷಾಂ ಮುನೀನಾಂ ಚಿತ್ತತನ್ವೋಃ ಸಂಕ್ಷೋಭಂ ಚಕಾರ । ಚಿತ್ತಸಂಕ್ಷೋಭ ಆನಂದಪಾರವಶ್ಯಂ । ತನುಕ್ಷೋಭೋ ರೋಮಾಂಚಃ । —ವೀರರಾಘವಃ

ಆತ್ಮರೂಪಬ್ರಹ್ಮೋಪಾಸಕಾಸ್ತೇ । ದೇಹೇಂದ್ರಿಯಾಂತಃಕರಣಧರ್ಮಾಧ್ಯಾಸರಹಿತಾಃ । ಅತಸ್ತೇಷಾಂ ನ ಕ್ವಾಪಿ ಕ್ಷೋಭಃ । ಭಕ್ತಿರಸಸ್ತು ನಾಸ್ತ್ಯೇವ । ತಥಾಪಿ ಭಗವತ್ಸಾನ್ನಿಧ್ಯಾತ್ ಭಗವದೀಯಾ ಧರ್ಮಾ ಯಥಾ ಮಹಾದೋಷಂ ದೂರೀಕುರ್ವಂತಿ ತಥಾತಿಶಯಮಪ್ಯಾದಧತೇ । ಸ ಹಿ ಪ್ರಸಿದ್ಧಃ ಸರ್ವಾನೇವ ಸ್ವಾಪೇಕ್ಷಿತಾನ್ ಭಕ್ತಾನ್ ಕರೋತಿ । ಅನೇನೇಚ್ಛಯೈವ ತೇ ಭಕ್ತಾಃ ಕೃತಾಃ । ಪಾದಯೋಃ ಸ್ಪರ್ಶಸ್ತೇಷು ವೃತಃ । ತತ್ಸ್ಪರ್ಶೇ ತೇಷಾಂ ವಯಮಾತ್ಮವಿದ ಏವೇತ್ಯಾಗ್ರಹೋ ನಿವೃತ್ತಃ । ವಾಯುಘ್ರಾಣಮಾರ್ಗೇಣಾಂತಃ ಪ್ರವಿಷ್ಟಃ ಸ್ಥೂಲಶರೀರನಿರಪೇಕ್ಷಮೇವ ಮಧ್ಯೇ ಶರೀರಮುತ್ಪಾದಯತಿ । ತದಾ ಚಿತ್ತದೇಹಯೋಃ ಪೂರ್ವಯೋರಂಶತೋ ಗ್ರಹಣತ್ಯಾಗಕರಣಾತ್ ಸಂಕ್ಷೋಭೋ ಯುಕ್ತ ಏವ । —ವಲ್ಲಭಃ

ಅಕ್ಷರಜುಷಾಮಪಿ ತದ್ರೂಪಸೇವಾಭ್ಯಾಸಿನಾಮಪಿ ।

ಭಗವಂತನ ಆ ರೂಪವನ್ನು ಸೇವಿಸಿ ಸೇವಿಸಿ ಅಭ್ಯಾಸವಾಗಿದ್ದರೂ ಇನ್ನೂ ಅದು ಹೊಸತೆಂಬಂತೆ ಕಂಡು ಮೈ ಮನ ಮರೆಸಿತು ಎಂದು 'ಅಕ್ಷರಜುಷಾಮಪಿ' ಎಂಬುದರ ಅಭಿಪ್ರಾಯ.

* * *

ಶ್ರೀಹರಿ, ನಿನ್ನ ಕಥಾಮೃತದ ಸವಿಯನ್ನು ಉಂಡು ಬಲ್ಲವರು ಮೋಕ್ಷಸುಖವನ್ನೂ ಆದರಿಸುವುದಿಲ್ಲ, ಇನ್ನು ಸ್ವರ್ಗಾದಿ ಸುಖದ ಪಾಡೇನು? ಎನ್ನುತ್ತಾರೆ ಸನಕಾದಿಗಳು–

ನಾತ್ಯಂತಿಕಂ ವಿಗಣಯಂತ್ಯಪಿ ತೇ ಪ್ರಸಾದಂ
ಕಿಂ ಚಾನ್ಯದರ್ಪಿತಭಯಂ ಭ್ರುವ ಉನ್ನಯೈಸ್ತೇ ।
ಯೇಽಂಗ ತ್ವದಂಘ್ರಿಶರಣಾ ಭವತಃ ಕಥಾಯಾಃ
ಕೀರ್ತನ್ಯತೀರ್ಥಯಶಸಃ ಕುಶಲಾ ರಸಜ್ಞಾಃ ॥ ೪೮ ॥

ಕೀರ್ತನಯೋಗ್ಯವಾದ ಪವಿತ್ರಕೀರ್ತಿಯುಳ್ಳ, ನಿನ್ನ ಕಥಾಮೃತದ ಸವಿಯನ್ನು ಉಂಡು ಬಲ್ಲವರು ನಿನ್ನ ಪಾದಗಳನ್ನೇ ಮೊರೆ ಹೊಕ್ಕಿರುವ ಬುದ್ಧಿಶಾಲಿಗಳು ಮೋಕ್ಷಸುಖವನ್ನೂ ಆದರಿಸಲಾರರು. ಇನ್ನು ನಿನ್ನ ಭ್ರೂಭಂಗಮಾತ್ರದಿಂದ ನಶಿಸುವ ಸ್ವರ್ಗಾದಿ ಕ್ಷುದ್ರಸುಖದ ಪಾಡೇನು?

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಮೋಕ್ಷಸುಖಕ್ಕಿಂತ ಭಕ್ತಿಸುಖವೇ ಹೆಚ್ಚಿನದು ಎನ್ನುತ್ತಾರೆ ಸನಕಾದಿಗಳು. ಅಭೇದಜ್ಞಾನಿಗಳಿಗಿಂತ ಭೇದಜ್ಞಾನಿಗಳಿಗೆ ಹೆಚ್ಚಿನ ಸುಖವಿರುವುದರಿಂದ ಭಕ್ತಿಸುಖಕ್ಕೆ ನಾಶಕವಾದ ಅದ್ವೈತಮೋಕ್ಷವನ್ನು ಭಕ್ತರು ಭಗವಂತನ ಪ್ರಸಾದ, ವರವೆಂದೇ ಪರಿಗಣಿಸುವುದಿಲ್ಲ. ಒಂದು ಶಾಪವೆಂದೇ ಬಗೆಯುತ್ತಾರೆ ಎನ್ನುತ್ತದೆ ರಾಧಾರಮಣದಾಸ ವ್ಯಾಖ್ಯಾನ. ಶ್ರೀಮದಾಚಾರ್ಯರು ಹೇಳುತ್ತಾರೆ–

೧. ಸ್ವಯಮಪಿ ಭಕ್ತಿಂ ಪ್ರಾರ್ಥಯಿತುಂ ಭಕ್ತಾನಾಂ ಸುಖಾತಿಶಯಮಾಹುಃ । ಆತ್ಯಂತಿಕಂ ಮೋಕ್ಷಾಖ್ಯಮಪಿ ತವ ಪ್ರಸಾದಂ ತೇ ನ ಗಣಯಂತಿ ನಾದ್ರಿಯಂತೇ ।
–ಶ್ರೀಧರಃ

ಭಕ್ತಿಂ ಸ್ವಸ್ವಾಮಿಸಂಬಂಧರೂಪಭೇದಾತ್ಮಿಕಾಂ । ಸುಖಾತಿಶಯಂ ಅಭೇದಜ್ಞಾನಿಭ್ಯಃ ಸುಖಾಧಿಕ್ಯಂ । ತೇ ಪ್ರಸಾದಂ ತ್ವತ್ಪ್ರಸಾದತ್ವೇನ ನಾದ್ರಿಯಂತೇ ಕಿಂತು ಭಕ್ತಿಸುಖಲೋಪಕತ್ವಾತ್ ನಿಗ್ರಹತ್ವೇನೈವ ಮನ್ಯಂತೇ ಇತ್ಯರ್ಥಃ ।
–ರಾಧಾರಮಣದಾಸಃ

ಭಕ್ತಿಜ್ಞಾನಪರೀಪಾಕಾತ್ ಕಿಂಚಿತ್ ಪೂರ್ವಂ ಚ ಮುಚ್ಯತೇ ।
ದರ್ಶನೇನ ಹರೇಸ್ತತ್ರ ನಾನಂದಃ ಪೂರ್ಣತಾಂ ವ್ರಜೇತ್ ॥
ಇತಿ ಬ್ರಹ್ಮತರ್ಕೇ ।

ಅತೋऽನಪೇಕ್ಷಾಣಾಮಾನಂದೋದ್ರೇಕೋ ಮೋಕ್ಷೇಚ್ಛುಭ್ಯಃ । ತೇಷಾಂ ಪರಿಪಾಕತಃ ಪೂರ್ವಂ ಬ್ರಹ್ಮದೃಷ್ಟ್ಯಾ ಮುಕ್ತಿಪ್ರಾಪ್ತೇಃ ।

ಮುಮುಕ್ಷೋಃ ಕೇವಲೋ ಭಕ್ತೋ ಮುಕ್ತಾವಪಿ ಸುಖೀ ಭವೇತ್ ॥
ಇತಿ ಚ ।

'ಭಕ್ತಿಜ್ಞಾನಪರಿಪಾಕಕ್ಕಿಂತ ಪೂರ್ವದಲ್ಲಿಯೂ ಭಗವಂತನ ಸಾಕ್ಷಾತ್ಕಾರದಿಂದ ಮುಕ್ತಿಯಾಗಿ ಸ್ವಲ್ಪ ಮಟ್ಟಿಗೆ ಸ್ವರೂಪಾನಂದಾಭಿವ್ಯಕ್ತಿಯಾಗುತ್ತದೆ. ಆದರೆ ಅದು ಯೋಗ್ಯತಾನುಸಾರ ಪೂರ್ಣವಾಗಿರುವುದಿಲ್ಲ. ಆದರಿಂದ ಸಾಕ್ಷಾತ್ಕಾರವಾದ ಮೇಲೂ ಭಗವತ್ಕಥಾಶ್ರವಣಾದಿಗಳು ಬೇಕು' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಅಪರೋಕ್ಷಜ್ಞಾನದಿಂದ ಮೋಕ್ಷವನ್ನು ಬಯಸುವ ಜ್ಞಾನಿಗಳಿಗೆ ಸ್ವಲ್ಪವೇ ಸ್ವರೂಪಾನಂದ ಅಭಿವ್ಯಕ್ತಿ ಇರುವುದರಿಂದ ಮೋಕ್ಷವನ್ನು ಬಯಸದೆ ಶ್ರವಣಾದಿಗಳನ್ನು ಮಾಡುವ ಭಕ್ತರಿಗೆ ಹೆಚ್ಚಿನ ಆನಂದ ಈಗಲೇ ಲಭ್ಯವಿದೆ. ಅದರಿಂದ "ಮೋಕ್ಷವನ್ನು ಬಯಸದ ಉತ್ತಮಾಧಿಕಾರಿಗಳಿಗೆ ಮೋಕ್ಷಕ್ಕಿಂತ ಪೂರ್ವದಲ್ಲಿಯೂ ಅಧಮಾಧಿಕಾರಿಗಳಿಗಿಂತ ಹೆಚ್ಚಿನ ಸ್ವರೂಪಾನಂದ ಪ್ರಾಪ್ತವಾಗುವುದರಿಂದ ಅಧಮಾಧಿಕಾರಿಗಳ ಮೋಕ್ಷಸುಖವನ್ನೂ ಅವರು ಆದರಿಸುವುದಿಲ್ಲ" ಎಂದಿದೆ.

* * *

ನಿನ್ನವರಾದ ಜಯವಿಜಯರಿಗೆ ಶಾಪವಿತ್ತು ನಾವು ಅಪರಾಧಿಗಳಾಗಿದ್ದೇವೆ. ಅದಕ್ಕೆ ನಮಗೆ ನರಕವಾಗಲಿ. ಆದರೆ ಅಲ್ಲಿಯೂ ನಮಗೆ ನಿನ್ನ ಶ್ರವಣಕೀರ್ತನ ಸ್ಮರಣ ಭಾಗ್ಯವಿರಲಿ. ಎನ್ನುತ್ತಾರೆ ಸನಕಾದಿಗಳು–

ಕಾಮಂ ಭವೇಮ ವ್ರಜಿನೈರ್ನಿರಯೇಷು ನಷ್ಟಾ–
ಶ್ಚೇತೋऽಲಿವದ್ ಯದಿ ನು ತೇ ಪದಯೋ ರಮೇತ ।
ವಾಚಶ್ಚ ನಸ್ತುಲಸಿವದ್ ಯದಿ ತೇऽಂಘ್ರಿಶೋಭಾಃ
ಪೂರ್ಯೇತ ತೇ ಗುಣಗಣೈರ್ಯದಿ ಕರ್ಣರಂಧ್ರಃ ॥ ೪೯ ॥

ನಾವು ನಮ್ಮ ಪಾಪಫಲ ಅನುಭವಿಸಲು ಅವಶ್ಯ ನರಕಗಳಲ್ಲಿ ಬೇಯಲು ಸಿದ್ಧರಿದ್ದೇವೆ. ಆದರೆ, ನಮ್ಮ ಮನಸ್ಸು ಮಾತ್ರ ದುಂಬಿಯಂತೆ ನಿನ್ನ ಪಾದಕಮಲದಲ್ಲಿಯೇ

ಆಸಕ್ತವಾಗಿರಬೇಕು. ಮಾತುಗಳೂ ತುಲಸಿಯಿಂತೆ ನಿನ್ನ ಪಾದಗಳನ್ನೇ ಅಲಂಕರಿಸಬೇಕು. ಕರ್ಣರಂಧ್ರವೂ ನಿನ್ನ ಗುಣಸಮೂಹಗಳಿಂದ ತುಂಬಬೇಕು.

ಇಲ್ಲಿಯೂ ಕೂಡ ಅದ್ವೈತಮೋಕ್ಷ ಭಕ್ತಿವಿರೋಧಿಯಾದ್ದರಿಂದ ಅದು ಶ್ರೇಯಸ್ಸೇ ಅಲ್ಲ. ಭಕ್ತಿ ಇರುವುದಾದರೆ ನರಕ ಶ್ರೇಯಸ್ಸೇ ಎಂದು ಬೇರೆ ವ್ಯಾಖ್ಯಾನಕಾರರು ಅಭಿಪ್ರಾಯ ಹೇಳುತ್ತಾರೆ. ಅದ್ವೈತಮೋಕ್ಷ ಒಂದು ವಾಸ್ತವದಲ್ಲಿ ಇರುವುದಾದರೆ ಈ ಮಾತು. ವಸ್ತುತಃ ಅದೇ ಅಪ್ರಾಮಾಣಿಕ. ಮತ್ತು ದೇವತೆಗಳಿಗೆಂದೂ ನರಕವಿಲ್ಲ. ಅದರಿಂದ ಶ್ಲೋಕಾಭಿಪ್ರಾಯ–

ಯಾವತ್ ಪರಮಭಕ್ತೈಸ್ತು ಭುಜ್ಯತೇ ದುಃಖಮುಲ್ಬಣಮ್ ।
ತಾವನ್ಮುಕ್ತೌ ಸುಖೋದ್ರೇಕಸ್ತತ್ರ ಚೇದ್ ಭಕ್ತಿವರ್ಧನಮ್ ॥
ಇತಿ ಚ ॥

ಜ್ಞಾನಿಗಳು ಪರಮಭಕ್ತರಾಗಿದ್ದು ಎಷ್ಟೆಷ್ಟು ತೀವ್ರದುಃಖವನ್ನು ಅನುಭವಿಸುವರೋ ಅಷ್ಟಷ್ಟು ಮೋಕ್ಷದಲ್ಲಿ ಸುಖ ಹೆಚ್ಚುತ್ತದೆ. ಇದು ದುಃಖಾನುಭವಕಾಲದಲ್ಲಿ ಭಕ್ತಿ ಹೆಚ್ಚುತ್ತ ಇದ್ದರೆ ಮಾತ್ರ. ಎಂದೂ ಉಕ್ತವಾಗಿದೆ. (ಅದರಿಂದ ಇಲ್ಲಿ ನರಕವೆಂದರೆ ನರಕಲೋಕವಲ್ಲ. 'ದುಃಖಮುಲ್ಬಣಂ' ಎಂದು ಹೇಳಿದ ತೀವ್ರದುಃಖ ವಿವಕ್ಷಿತ)

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಷೋಡಶೋऽಧ್ಯಾಯಃ ॥

—o—

ಅಧ್ಯಾಯ–೧೭

ಅಧ್ಯಾಯಸಾರಾಂಶ

'ನೀವು ಬ್ರಾಹ್ಮಣರು, ನನಗೆ ಸದಾ ಪೂಜ್ಯರು, ನಿಮ್ಮ ಪಾದಾನುಗ್ರಹದಿಂದಲೇ ನಾನು ಪಾಪರಹಿತನಾಗಿದ್ದೇನೆ, ಮತ್ತು ನಾನು ವಿರಕ್ತನಾದರೂ ಲಕ್ಷ್ಮಿ ನನ್ನನ್ನು ಬಿಟ್ಟಿರಲಾರಳು. ಅದರಿಂದ ಯಜ್ಞಕ್ಕಿಂತಲೂ ನನಗೆ ಬ್ರಾಹ್ಮಣಾರಾಧನೆ ಹೆಚ್ಚು ಪ್ರೀತಿಕರ. ನಿಮಗೆ ವಿರೋಧವಾಗಿ ವರ್ತಿಸಿದರೆ ನನ್ನ ಬಾಹುವನ್ನೇ ನಾನು ಕಡಿದು ಕೊಳ್ಳುವೆನೆಂದು' ಮುಂತಾಗಿ ಶ್ರೀಹರಿ ಸನಕಾದಿಗಳ ಮುಂದೆ ಬ್ರಾಹ್ಮಣಜಾತಿಯನ್ನು ಅತಿಯಾಗಿ ಪ್ರಶಂಸೆ ಮಾಡಿ ನೀವು ಜಯವಿಜಯರಿಗೆ ಶಾಪ ನೀಡಿದ್ದು ನನಗೆ ಸಂಮತವೆ, ಎಂದ. ಮುನಿಗಳು ಸಮಾಧಾನಗೊಂಡರು. ನಮಿಸಿ ಕೊಂಡಾಡುತ್ತ ಹೊರಟು ಹೋದರು. ಇತ್ತ ಶ್ರೀಹರಿ ಜಯವಿಜಯರಿಗೆ 'ನೀವು ಹೀಗೆ ಲಕ್ಷ್ಮಿಯನ್ನೂ ಬಾಗಿಲಲ್ಲಿ ತಡೆದಿದ್ದಿರಿ ಅದರಿಂದ ಈ ಮುನಿಶಾಪವನ್ನು ಅನುಭವಿಸಿ ಬೇಗನೆ ಹಿಂತಿರುಗಿ ಬರುವಿರಿ. ನಾನೇ ನಿಮ್ಮನ್ನು ಮೂರು ಜನ್ಮಗಳಲ್ಲಿಯೂ ವಧಿಸುತ್ತೇನೆ, ಎಂದು ಹೇಳಿ ಕಳಿಹಿಸಿದ. ಅವರು ಒಡನೆ ಕಾಂತಿಹೀನರಾಗಿ ಬಿದ್ದು ದಿತಿಯ ಗರ್ಭವನ್ನು ಪ್ರವೇಶಿಸಿದರು.

* * *

ಭಕ್ತಪರಾಧೀನನಾದ ಭಗವಂತ ನಾನು ಬ್ರಾಹ್ಮಣಸೇವೆಯಿಂದಲೇ ಕೀರ್ತಿ ವಂತನಾಗಿದ್ದೇನೆ, ಲಕ್ಷ್ಮೀರಮಣನೆನಿಸಿದ್ದೇನೆ ಬ್ರಾಹ್ಮಣನೇ ನನಗೆ ಪರದೇವತೆ ಎಂದು ಮೋಹಕವಾದ ಮಾತುಗಳನ್ನಾಡುತ್ತಾನೆ, ಸನಕಾದಿ ಮುನಿಗಳಿಗೆ–

ತದ್ ವಃ ಪ್ರಸಾದಯಾಮ್ಯದ್ಯ ಬ್ರಹ್ಮ ದೈವಂ ಪರಂ ಹಿ ಮೇ ।
ತದ್ಧ್ಯೇವಾತ್ಮಕೃತಂ ಮನ್ಯೇ ಯತ್ ಸ್ವಪುಂಭಿರಸತ್ಕೃತಾಃ ॥ ೪ ॥

ಯಸ್ಯಾಮೃತಾಮಲಯಶಃಶ್ರವಣಾವಗಾಹಃ
ಸದ್ಯಃ ಪುನಾತಿ ಜಗದಾ ಶ್ವಪಚಂ ವಿಕುಂಠಃ ।

ಸೋಽಹಂ ಭವದ್ಭ್ಯ ಉಪಲಬ್ಧಸುತೀರ್ಥಕೀರ್ತಿ–
ಶ್ಛಿಂದ್ಯಾಂ ಸ್ವಬಾಹುಮಪಿ ವಃ ಪ್ರತಿಕೂಲವೃತ್ತಿಮ್ ॥ ೬ ॥

ಯತ್ ಸೇವಯಾ ಚರಣಪದ್ಮಪವಿತ್ರರೇಣೋಃ
ಸದ್ಯಃಕ್ಷತಾಖಿಲಮಲಂ ಪ್ರತಿಲಬ್ಧಶೀಲಮ್ ।
ನ ಶ್ರೀರ್ವಿರಕ್ತಮಪಿ ಮಾಂ ವಿಜಹಾತಿ ಯಸ್ಯಾಃ
ಪ್ರೇಕ್ಷಾಲವಾರ್ಥಮಿತರನ್ನಿಯಮೋಽರ್ಹತೇ ಮತ್ ॥ ೭ ॥

ಬ್ರಾಹ್ಮಣನೆಂದರೆ ನನಗೆ ಪರ ದೇವತೆ. ಅದರಿಂದ ನನ್ನ ಅನುಚರರು ನಿಮಗೆ ಮಾಡಿದ ಅಪಚಾರಕ್ಕೆ ನಾನು ಹೊಣೆ, ನಾನೇ ಮಾಡಿದಂತಾಗಿದೆ. ಅದಕ್ಕೆ ನಿಮ್ಮಿಂದ ಕ್ಷಮೆಯನ್ನು ಬೇಡುತ್ತೇನೆ. ನಾನು ವಿಕುಂಠನೆನಿಸಿರುವುದು ಮುಕ್ತಿದಾಯಕವಾದ ನನ್ನ ಪವಿತ್ರಕೀರ್ತಿಸುಧೆಯಲ್ಲಿ ಸ್ನಾನ ಮಾಡುವ ಚಂಡಾಲಪರ್ಯಂತ ಸಮಸ್ತ ಜಗತ್ತೂ ಪವಿತ್ರವಾಗುವುದರಿಂದ. ಈ ಪವಿತ್ರಕೀರ್ತಿ ನನಗೆ ಬಂದಿರುವುದು ನಿಮ್ಮ ಸೇವೆಯ ಫಲವಾಗಿ, ಬ್ರಾಹ್ಮಣರ ಚರಣಕಮಲದ ಪವಿತ್ರಧೂಳಿನ ಸೇವೆಯಿಂದಲೆ ನನ್ನ ಎಲ್ಲ ಪಾಪಗಳು ಪರಿಹಾರವಾಗಿವೆ. ಐಶ್ವರ್ಯಾದಿಗುಣಗಳು ಪ್ರಾಪ್ತವಾಗಿವೆ. ಮತ್ತು ಯಾರ ಒಂದು ಸಣ್ಣ ಕುಡಿನೋಟಕ್ಕಾಗಿ ಬೇರೆ ಎಲ್ಲರೂ ಬಗೆ ಬಗೆಯಾದ ವ್ರತನಿಯಮಾದಿಗಳನ್ನು ಮಾಡುತ್ತಿರುವರೋ ಅಂತಹ ಲಕ್ಷ್ಮಿಯು, ನಾನು ಉದಾಸೀನ ಮಾಡಿದರೂ ನನ್ನನ್ನು ಎಂದೂ ಬಿಟ್ಟು ಅಗಲುವುದಿಲ್ಲ. ಅದರಿಂದ ನಿಮಗೆ ವಿರೋಧವಾಗಿ ವರ್ತಿಸಿದರೆ ಅದು ನನ್ನ ಭುಜವೇ ಆಗಿದ್ದರೂ ಸರಿಯೆ, ಅದನ್ನು ಕತ್ತರಿಸಿಹಾಕುತ್ತೇನೆ.

ಇಲ್ಲಿ ಎಲ್ಲ ಕಡೆ ಶ್ರೀಹರಿ ಮಾಡಿದ ಬ್ರಾಹ್ಮಣಪ್ರಶಂಸೆ ಅತಿಯಾಯಿತು. ವಿಪರೀತವಾಗಿ ಬ್ರಾಹ್ಮಣರಲ್ಲಿ ಅಸಂಭಾವಿತವಾದ ಮಹಿಮೆಗಳನ್ನು ಹೇಳುತ್ತಿದ್ದಾನೆ ಎಂದು ಸನಕಾದಿಗಳೇ ಮುಂದೆ ಹೇಳುತ್ತಾರೆ. ಬೇರೆ ವ್ಯಾಖ್ಯಾನಕಾರರು 'ಬ್ರಾಹ್ಮಣರನ್ನು ಪೂಜಿಸಬೇಕೆಂದು ಲೋಕಕ್ಕೆ ಧರ್ಮಶಿಕ್ಷಣ ನೀಡುವುದಕ್ಕಾಗಿ ಶ್ರೀಹರಿ ಹೀಗೆ ನುಡಿಯುತ್ತಿದ್ದಾನೆ' ಎಂದಿದ್ದಾರೆ. ಆದರೆ ಹೀಗೆ ಅತ್ಯಂತ ಅಯುಕ್ತವಾದ ರೀತಿಯಲ್ಲಿ ಸ್ತೋತ್ರಮಾಡುವುದೂ ಲೋಕಶಿಕ್ಷಣಕ್ಕಾಗಿ ಎನ್ನಬಹುದೆ? ಯಥಾರ್ಥಸ್ತುತಿಯ ಶಿಕ್ಷಣವನ್ನೇ ಕೊಡಬೇಕಲ್ಲದೆ ಇಲ್ಲದಿದ್ದ ಗುಣಗಳನ್ನು ಆರೋಪಿಸಿ ಸ್ತುತಿಸುವ ಅನ್ಯಥೋಪಾಸನೆಯ ಶಿಕ್ಷಣ ಕೊಡಬಹುದೆ? ಶ್ರೀಮದಾಚಾರ್ಯರು ಹೇಳುತ್ತಾರೆ– 'ಬ್ರಾಹ್ಮಣರಿಗೆ ಪೂಜ್ಯತ್ವ ಉಂಟೆಂದು ತೋರಿಸುವುದರ ಜೊತೆಗೆ ಅಜ್ಞರಿಗೆ ಮೋಹ ಉಂಟುಮಾಡುವ ಉದ್ದೇಶವೂ ಇಲ್ಲಿ ಇದೆಯೆಂದು.

ಸರ್ವೋತ್ತಮೋಽಪಿ ಭಗವಾನ್ ವಿಪ್ರಾದೇಃ ಪೂಜನಾಯ ತು ।
ಗುಣಲಬ್ಧಿಂ ತತೋ ಬ್ರೂತೇ ನಿತ್ಯಪೂರ್ಣಗುಣೋಽಪಿ ಸನ್ ॥

ಬ್ರೂಯುಶ್ಚಾನ್ಯೇ ಕ್ವಚಿತ್ ತತ್ತು ತದುಕ್ತೇರನುಸಾರತಃ ।
ಉಪಾದತ್ತೇ ವರಾಂಶ್ಚಾಪಿ ಲೋಕಾನಾಂ ಮೋಹನಾಯ ಚ ॥

ಇತಿ ಕೌರ್ಮೇ ॥

ವಿಪ್ರಾಣಾಂ ಚರಣಪದ್ಮಪವಿತ್ರರೇಣೋಃ ಸೇವಯಾ ಪ್ರತಿಲಬ್ಧಶೀಲಂ ಶ್ರೀರ್ನ ಜಹಾತಿ ಇತಿ ಯತ್ ಅತಶ್ಛಿಂದ್ಯಾಂ ।

ಅನುಕ್ತಾಶ್ಚ ಗುಣಾ ವಿಷ್ಣೋರುಕ್ತಾ ದೋಷಾ ನ ತಸ್ಯ ತು ।
ಅಜ್ಞಾನಾದ್ ದೋಷವಿಜ್ಞಾನಂ ಗುಣಜ್ಞಾನಂ ಯಥಾರ್ಥತಃ ॥

ಇತಿ ಪೈಂಗಿಶ್ರುತಿಃ ।

ವಿಪ್ರಾಣಾಂ ಚಾಪಿ ಭಕ್ತಾನಾಮನ್ಯೇಷಾಂ ಚ ಜನಾರ್ದನಃ ।
ಬ್ರಹ್ಮಣಃ ಶಂಕರಾದ್ವಾಪಿ ದೇವತಾಭ್ಯಸ್ತಥೈವ ಚ ॥

ಆತ್ಮನಶ್ಚ ಶ್ರಿಯಶ್ಚೈವ ಸಕಾಶಾತ್ ಪ್ರಿಯತಾಮಪಿ ।
ಪೂಜ್ಯತಾಮತ್ಯಯುಕ್ತಂ ಚ ವದೇತ್ ಕ್ವಾಪಿ ವಿಮೋಹಯನ್ ॥

ಇತಿ ಸ್ಕಾಂದೇ ॥

ಪರಮಾತ್ಮ ಸರ್ವೋತ್ತಮನಾದರೂ ಬ್ರಾಹ್ಮಣರಿಗೂ ದೇವತೆಗಳಿಗೂ ಪೂಜ್ಯತ್ವ ಉಂಟೆಂದು ಲೋಕಕ್ಕೆ ತಿಳಿಸುವ ಉದ್ದೇಶದಿಂದ 'ಬ್ರಹ್ಮ ದೈವಂ ಪರಂ ಹಿ ಮೇ' ಎನ್ನುತ್ತ 'ಪ್ರತಿಲಬ್ಧಶೀಲಂ' ಬ್ರಾಹ್ಮಣ ಪಾದರಜಸ್ಸಿನ ಸೇವನೆಯಿಂದ ಐಶ್ವರ್ಯಾದಿ ಗುಣಲಾಭ ತನಗಾಯಿತೆಂದು ಹೇಳುತ್ತಾನೆ. ಸ್ವತಃ ನಿತ್ಯಪೂರ್ಣಗುಣನೇ ಆಗಿದ್ದಾನೆ. ಅದರಿಂದ ಬ್ರಹ್ಮನು ದೇವತೆಗಳಿಗೆ, ಮೈತ್ರೇಯರು ವಿದುರನಿಗೆ, ಶುಕರು ಪರೀಕ್ಷಿತನಿಗೆ, ಸೂತನು ಶೌನಕಾದಿಗಳಿಗೆ ಹೀಗೇ ಬೇರೆಯವರೂ ಕೆಲವೆಡೆ ಹೇಳುವುದು ಶ್ರೀಹರಿ ಹೇಳಿದ್ದನ್ನು ಅನುಸರಿಸಿ ಅನುವಾದರೂಪದಿಂದ ಹೇಳುವುದೇ ಹೊರತು ವಾಸ್ತವವೆಂದಲ್ಲ. ಅಜ್ಞರಿಗೆ ಮೋಹ ಉಂಟುಮಾಡುವ ಉದ್ದೇಶದಿಂದಲೂ ಶ್ರೀಹರಿಯೂ ಬೇರೆಯವರೂ ಹೀಗೆ ಅಯುಕ್ತವಾದುದನ್ನು ಹೇಳುತ್ತಾರೆ. ಹರಿಯು ಬ್ರಾಹ್ಮಣರಿಂದ ವರಗಳನ್ನು ಕೆಲವೆಡೆ ಸ್ವೀಕರಿಸುವುದೂ ಹೀಗೇ ಬ್ರಾಹ್ಮಣರಿಗೆ ಪೂಜ್ಯತ್ವವನ್ನು ತೋರಿಸುವುದಕ್ಕೆ ಮತ್ತು ಅಜ್ಞರಿಗೆ ಮೋಹ ಉಂಟುಮಾಡುವುದಕ್ಕೆ ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

ಯತ್ಸೇವಯಾ ಎಂಬ ಶ್ಲೋಕದಲ್ಲಿ 'ಯತ್' ಯಾವ ಕಾರಣದಿಂದ ಎಂದು ಬೇರೆಯೇ ಪದ. 'ಬ್ರಾಹ್ಮಣರ' ಎಂದು ಅಧ್ಯಾಹಾರ. ಬ್ರಾಹ್ಮಣರ ಪಾದಧೂಳಿಯ ಸೇವನೆಯಿಂದಲೇ ನಾನು ಐಶ್ವರ್ಯಾದಿಗುಣಸಂಪನ್ನನಾದ್ದರಿಂದ ಲಕ್ಷ್ಮಿ ನನ್ನನ್ನು ಬಿಟ್ಟು ಅಗಲುವುದಿಲ್ಲ. ಅದರಿಂದಲೇ ಬ್ರಾಹ್ಮಣವಿರೋಧಿವರ್ತನೆ ಮಾಡಿದರೆ ನನ್ನ ಬಾಹುವನ್ನೂ ಕತ್ತರಿಸಿ ಹಾಕುವೆನೆಂದು ಹಿಂದಿನ ಶ್ಲೋಕದೊಂದಿಗೆ ಅನ್ವಯ. ಅದರಿಂದ 'ಯತ್'ಶಬ್ದ ಸಾರ್ಥಕ.

ವಿಷ್ಣುವಿಗೆ ಶಾಸ್ತ್ರಗಳಲ್ಲಿ ಹೇಳಿದ ಗುಣಗಳೊಂದಿಗೆ ಹೇಳದಿದ್ದ ಗುಣಗಳನ್ನೂ ಅಂಗೀಕರಿಸಬೇಕು. ಹೊರತು ದೋಷಗಳನ್ನು ಅಲ್ಲಲ್ಲಿ ಹೇಳಿದ್ದರೂ ಅವುಗಳನ್ನು ಸ್ವೀಕರಿಸಬಾರದು. ಆಪಾತತಃ ಹೇಳಿದ್ದೆಂದು ಅದಕ್ಕೆ ಬೇರೆಯೆ ಅರ್ಥ ಸ್ವೀಕರಿಸಬೇಕು. ದೋಷ ಉಂಟೆಂದು ಶಾಸ್ತ್ರಗಳಲ್ಲಿ ಕಂಡು ಬಂದರೆ ಅದು ಕೇವಲ ಅಜ್ಞಾನದಿಂದ. ಗುಣವು ಕಂಡು ಬಂದರೆ ಅದು ಯಥಾರ್ಥವೇ ಎಂದು ಪೈಂಗಿಶ್ರುತಿ ಹೇಳಿದೆ.

ವಿಷ್ಣುವಿಗೆ ದೋಷವನ್ನು ಹೇಳಿದಂತೆ ಕಾಣುವ ವಚನಗಳ ಅಭಿಪ್ರಾಯವನ್ನು ಸ್ಕಂದಪುರಾಣ ಹೀಗೆ ಹೇಳಿದೆ– 'ಬ್ರಾಹ್ಮಣರೂ ಇತರಭಕ್ತರೂ ತನಗೆ ಚತುರ್ಮುಖಬ್ರಹ್ಮರುದ್ರ ಇಂದ್ರಾದಿ ದೇವತೆಗಳು ಮತ್ತು ಲಕ್ಷ್ಮೀದೇವಿಯರಿಗಿಂತಲೂ ಪ್ರಿಯರು ಪೂಜ್ಯರು ಎಂದು ಹೇಳುತ್ತಾನೆ, ಕೆಲವೆಡೆ ತನ್ನ ಬಗ್ಗೆ ಅತ್ಯಂತ ಅಯುಕ್ತವಾದುದನ್ನೂ 'ಬ್ರಾಹ್ಮಣಸೇವೆಯಿಂದ ತನ್ನ ಪಾಪ ಪರಿಹಾರವಾಯಿತು, ಲಕ್ಷ್ಮೀಪತಿತ್ವ ಲಭಿಸಿತು' ಎಂದು ಮುಂತಾಗಿಯೂ ಶ್ರೀಹರಿ ಹೇಳುವುದುಂಟು ಇದೆಲ್ಲವೂ ಅಜ್ಞಜನರ ಮೋಹಕ್ಕಾಗಿ' ಎಂದು.

* * *

ಶ್ರೀಹರಿ ಸನಕಾದಿಗಳನ್ನು ಚೆನ್ನಾಗಿ ಪ್ರಶಂಸೆಮಾಡಿ ಜಯವಿಜಯರು ತಮ್ಮ ಅಪರಾಧಕ್ಕೆ ಶಿಕ್ಷೆ ಅನುಭವಿಸಿ ಬೇಗನೆ ಹಿಂತಿರುಗಿ ಬರಲೆಂದು ಹೇಳಿದಾಗ ಅದನ್ನು ಕೇಳಿ ಸನಕಾದಿಗಳ ಕೋಪ ಶಾಂತವಾಯಿತು.

ಬ್ರಹ್ಮೋವಾಚ–

ಅಥ ತಸ್ಯೋಶತೀಂ ದೇವೀಮೃಷಿಕುಲ್ಯಾಂ ಸರಸ್ವತೀಮ್ ।
ಆಸ್ವಾದ್ಯ ಮನ್ಯುದಷ್ಟಾನಾಂ ತೇಷಾಮಾತ್ಮಾಽಪ್ಯತೃಪ್ಯತ ॥ ೧೩ ॥

ಬ್ರಹ್ಮದೇವರು ಹೇಳಿದರು, 'ಭಗವಂತನ ಮಾತು ಮಧುರವಾಗಿತ್ತು. ಬ್ರಾಹ್ಮಣ ಕುಲ ಪ್ರಶಂಸಾಪರವಾಗಿದ್ದು ಅರ್ಥಗರ್ಭಿತವಾಗಿತ್ತು. ಅಭೀಷ್ಟದಾಯಕವಾದ

ಆ ಮಾತಿನ ಸವಿಯನ್ನು ಆಸ್ವಾದಿಸಿದಾಗ ಕೋಪಾವಿಷ್ಟರಾದ ಅವರ ಮನಸ್ಸು ಶಾಂತವಾಯಿತು.

ಬ್ರಾಹ್ಮಣರೆಂದರೆ ನನಗೆ ಆರಾಧ್ಯದೈವ ಎಂದು ಮುಂತಾಗಿ ಶ್ರೀಹರಿ ಹೇಳಿದ್ದರೂ ಅವನಿಗೆ ಹಾಗೆ ಹೇಳುವ ಅಭಿಪ್ರಾಯವಿಲ್ಲ. ಲೋಕದಲ್ಲಿ ಯಾರೂ ಬ್ರಾಹ್ಮಣಾವಮಾನ ಮಾಡಕೂಡದೆಂದು ಹೇಳುವುದು ಅವನ ಉದ್ದೇಶವೆಂದು ಅವರು ಸರಿಯಾಗಿಯೆ ಅಭಿಪ್ರಾಯ ಗ್ರಹಿಸಿದ್ದರಿಂದ ಅವರ ಕೋಪ ಶಾಂತವಾಯಿತು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನಾಸ್ವಾದ್ಯ' ಎಂದು ಅಪಪಾಠವಿಟ್ಟುಕೊಂಡರು. ಸನಕಾದಿಗಳು ಜ್ಞಾನಿಗಳು, ಅಂದರೆ ಅದ್ವೈತಜ್ಞಾನಿಗಳು ಹೊರತು ಭಕ್ತರಲ್ಲ, ಭಕ್ತರಾದ ಜಯವಿಜಯರಿಗೆ ಶಾಪವಿತ್ತು ಭಕ್ತಾಪರಾಧ ಮಾಡಿದ್ದರಿಂದ ಭಗವಂತನ ಮಾತು ಕೇಳಿ ಅದರ ಸವಿಯನ್ನು ಅನುಭವಿಸಲು ಶಕ್ತರಾಗದೇ ಹೋದರು. ತೃಪ್ತರಾಗಲಿಲ್ಲ, ಎಂದು ವಿಶ್ವನಾಥವ್ಯಾಖ್ಯಾನ. ಇನ್ನೂ ಕೋಪಾವಿಷ್ಟರಾಗಿಯೇ ಇದ್ದುದರಿಂದ

---

೧. ಮನ್ಯುನಾ ಸರ್ಪತುಲ್ಯೇನ ದಷ್ಟಾನಾಂ ಕ್ರೋಧವಿಷವ್ಯಾಪ್ತಾನಾಂ ಮನೋ ರಸಾನುಭವಾಭಾವಾತ್ ಪ್ರಿಯಭಾಷಣಮಪಿ ನ ಸಹತೇ । ತೇಷಾಂ ತು ಆತ್ಮಾಪಿ ಬುದ್ಧಿರಪಿ ಮನೋಽಪಿ ನಾತೃಪ್ಯತ್ । ಅತ್ರ ತೇಷಾಂ ಮಹಾನುತಾಪತ್ವೇಽಪಿ ಯನ್ಮನ್ಯುಸರ್ಪವಿಷಾನಪಗಮಸ್ತದ್ಭಕ್ತಾಪರಾಧಸ್ಯ ದುರ್ವಾರತ್ವಮೇವ ಜ್ಞಾಪಯತಿ । ಸತ್ಯಪಿ ತಾದೃಶೇ ಭಕ್ತಾಪರಾಧೇ ಯೋ ಭಗವಚ್ಚರಣತುಲಸೀಗಂಧಾದಿ ಮಾಧುರ್ಯಾನುಭವಃ ಸ ಖಲು ಬ್ರಾಹ್ಮಣಾತಿಕ್ರಮಾನಂತರಮನುತಪ್ತ ಯೋರ್ಜಯವಿಜಯಯೋರ್ಯಾ ತೇಷು ಕೃಪಾ ತದನುಗಾಮಿನ್ಯಾ ಭಗವತ್ಕೃಪಾಯಾಃ ಪ್ರಭಾವಮೇವ ಜ್ಞಾಪಯತಿ । ಯದ್ಯೇಷಾಂ ಭಕ್ತಾಪರಾಧೋ ನಾಭವಿಷ್ಯತ್ ತದಾ ಭಕ್ತಭಗವತೋಃ ಕೃಪಾಪಾತ್ರೀಭೂತಾನಾಮೇಷಾಂ ಶುದ್ಧದಾಸ್ಯಪ್ರೇಮೈವಾಜನಿಷ್ಯತ । ತಸ್ಮಾದಪರಾಧಸದ್ಭಾವಾತ್ ಶ್ರಾಂತಭಕ್ತತ್ವ ಮೇವೈಷಾಮಭೂತ್ । —ವಿಶ್ವನಾಥಃ

ದೇವೀಂ ಮುನೀನಾಂ ಬುದ್ಧ್ಯಾ ವಿವಿಧವಿತರ್ಕಾದಿಮಯ್ಯಾ ಸಹ ಕ್ರೀಡಂತೀಂ । ಋಷಿಕುಲಾಯ ಹಿತಾಂ । —ವಿಶ್ವನಾಥಃ

ದೇವೀಂ ದ್ಯೋತಮಾನಾಮಲೌಕಿಕೀಂ । ಋಷಯೋ ಮಂತ್ರಾಸ್ತದ್ರೂಪಾಂ ಋಷಿಕುಲಯೋಗ್ಯಾಮಿತಿ ವಾ —ಗಿರಿಧರಃ

ಭಗವಾನ್ ಕಿಮಸ್ಮದ್‌ವಂಚನಾಯೈವಂ ವದತ್ಯಾಹೋಸ್ವಿತ್ ಧರ್ಮಸಂಸ್ಥಾಪನಾಯ ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನ ಇತಿ ಸ್ವಗೀತಾನುಸಾರೇಣ ವದತೀತಿ ತಾತ್ಪರ್ಯಮಜಾನಂತಃ । —ವೀರರಾಘವಃ

ಭಗವಂತನ ಮಾತಿನ ಸವಿ ಅವರಿಗೆ ತೃಪ್ತಿ ನೀಡಲಿಲ್ಲ ಎಂದು ವೀರರಾಘವ ವ್ಯಾಖ್ಯಾನ. ಕೋಪಾವಿಷ್ಟರಾಗಿದ್ದರೂ ಭಗವಂತನ ಮಾತಿನ ಸವಿ ಉಂಡರು. ಎಷ್ಟು ಉಂಡರೂ ಸಾಕೆನಿಸಲಿಲ್ಲ, ಕೋಪ ಮಾತ್ರ ಶಾಂತವಾಯಿತು ಎಂದು ವಲ್ಲಭವ್ಯಾಖ್ಯಾನ.

ವಸ್ತುತಃ 'ಋಷಿಕುಲ್ಯಾಂ' ಎಂಬ ವಿಶೇಷಣಕ್ಕೂ 'ದೇವೀಂ' ಎಂಬ ವಿಶೇಷಣಕ್ಕೂ ಸರಿಯಾಗಿ ವ್ಯಾಖ್ಯಾನಮಾಡದಿದ್ದುದರಿಂದ ಶ್ಲೋಕದ ಅಭಿಪ್ರಾಯವನ್ನು ತಪ್ಪಾಗಿ ತಿಳಿದ್ದಾರೆ. 'ದೇವೀಂ' ಎಂದರೆ ದ್ಯೋತಮಾನವಾದ, ಪ್ರಭಾವಶಾಲಿಯಾದ, ಅಮಾನುಷವಾದ, ಸನಕಾದಿಗಳಿಗೆ ಸುಲಭವಾಗಿ ಅರ್ಥವಾಗದ ಮಾತೆಂದು ಮುಂತಾಗಿಯೂ 'ಋಷಿಕುಲ್ಯಾಂ' ಎಂದರೆ ಮಂತ್ರರೂಪವಾದ, ಮಂತ್ರತುಲ್ಯವಾದ, ಋಷಿಕುಲಕ್ಕೆ ಹಿತವಾದ ಋಷಿಕುಲಕ್ಕೆ ಯೋಗ್ಯವಾದ ಮಾತೆಂದೂ ವ್ಯಾಖ್ಯಾನಿಸಿದ್ದಾರೆ.

ದೇವೀ ಎಂದರೆ ದ್ಯೋತಮಾನ, ಅಂದರೆ ಅರ್ಥಗರ್ಭಿತ. ಋಷಿಕುಲ್ಯಾ ಎಂದರೆ ಋಷಿಕುಲಪ್ರಶಂಸೆಯ ಅಭಿಪ್ರಾಯದಿಂದ ಹೊರಟಿದೆ. ಅದರಿಂದಲೇ ಅರ್ಥಗರ್ಭಿತವಾಗಿದೆ ಎಂದರ್ಥ. ಸನಕಾದಿಗಳು ಅದನ್ನು ತಿಳಿದಿದ್ದರಿಂದ ಭಗವಂತನ ಮಾತಿನ ಸವಿ ಉಂಡರು, ತೃಪ್ತರಾದರು ಎಂಬುದೇ ಶ್ಲೋಕದ ಅಭಿಪ್ರಾಯ.

ದೇವೀಂ ದ್ಯೋತಮಾನಾಂ । ಋಷಿಕುಲ್ಯಾಂ ಋಷಿಕುಲಸ್ತುತಿಪರಾಂ ।

'ದೇವೀಂ' ಎಂದರೆ ಅರ್ಥವತ್ತಾದ ಮಧುರಶಬ್ದಗಳಿಂದ ಶೋಭಿಸುವಂಥ ಮಾತನ್ನು ಎಂದರ್ಥ. ಅದು ಏಕೆ ಅರ್ಥವತ್ತಾಗಿದೆ ಎಂದರೆ 'ಋಷಿಕುಲ್ಯಾಂ' ಜ್ಞಾನಿಗಳಿಗೆ ಋಷಿಕುಲಪ್ರಶಂಸಾಪರವಾಗಿದೆ, ಅಜ್ಞರಿಗೆ ಭ್ರಾಂತಿ ಉಂಟುಮಾಡುವ ಉದ್ದೇಶದಿಂದಲೂ ಕೂಡಿದೆ ಎಂದರ್ಥ.

* * *

ಸರ್ವಶಕ್ತನಾದ ಭಗವಂತ ತನ್ನ ಶಕ್ತಿ ಬ್ರಾಹ್ಮಣರ ಅನುಗ್ರಹದಿಂದ ಬಂದಿದ್ದೆಂದು ಮುಂತಾಗಿ ಪ್ರಶಂಸೆ ಮಾಡಿದಾಗ ಸನಕಾದಿ ಮುನಿಗಳು ಮೈರೋಮಾಂಚಗೊಂಡು ಕೈಮುಗಿದು ಹೇಳಿದರು–

ತೇ ಯೋಗಮಾಯಯಾಽಽರಬ್ಧಪಾರಮೇಷ್ಠ್ಯಮಹೋದಯಮ್ ।
ಪ್ರೋಚುಃ ಪ್ರಾಂಜಲಯೋ ವಿಪ್ರಾಃ ಪ್ರಹೃಷ್ಟಾಃ ಕಂಪಿತತ್ವಚಃ ॥ ೧೫ ॥

ಒಂದು ಹುಬ್ಬಿನ ಕುಣಿತದಿಂದಲೆ ಬ್ರಹ್ಮಪದವಿಯಲ್ಲಿ ಒಬ್ಬನನ್ನು ಕೂಡಿಸಿ, ಬ್ರಹ್ಮಾಂಡಸೃಷ್ಟಿ ಮಾಡಿ ಅದರ ಆಧಿಪತ್ಯವನ್ನು ಅವನಿಗೆ ನೀಡಬಲ್ಲ ಸರ್ವಶಕ್ತನೂ ಹೀಗೆ ಬ್ರಾಹ್ಮಣರನ್ನು ಪ್ರಶಂಸೆ ಮಾಡಿದಾಗ ಸನಕಾದಿಮುನಿಗಳು ಮೈರೋಮಾಂಚಗೊಂಡು ಕೈ ಮುಗಿದು ಆನಂದದಿಂದ ಹೇಳತೊಡಗಿದರು.

[1]ಇಲ್ಲಿ 'ಯೋಗಮಾಯಯಾರಬ್ಧಪಾರಮೇಷ್ಠ್ಯಮಹೋದಯಂ' ಎಂಬುದಕ್ಕೆ ತನ್ನ ಸ್ವರೂಪಶಕ್ತಿಯಿಂದ ತನ್ನ ಪರಮೈಶ್ವರ್ಯದ ಉತ್ಕೃಷ್ಟತೆಯನ್ನು ಆವಿರ್ಭಾವಗೊಳಿಸುವವನು ಇನ್ನೊಬ್ಬರ ಅಧೀನನಲ್ಲ ಎಂದು ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳು. ಜೀವಗೋಸ್ವಾಮಿ ವ್ಯಾಖ್ಯಾನವೂ ಯೋಗಮಾಯೆ ಎಂದರೆ ಸ್ವರೂಪಶಕ್ತಿ ಎನ್ನುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ ಯೋಗಮಾಯೆ ಎಂದರೆ ಪ್ರಕೃತಿ. ಅದರಿಂದ ನಿರ್ಮಿಸಿದ ಜಗತ್ತಿನ ಒಡೆತನವನ್ನು ಬ್ರಹ್ಮಾದಿಗಳಿಗೆ ನೀಡುವವನು ಎಂದು ಅವರ ವ್ಯಾಖ್ಯಾನ. ಯೋಗಮಾಯೆ ಎಂದರೆ ತನ್ನ ಅಧೀನವಾದ ಅಚಿಂತ್ಯಶಕ್ತಿ. ಅದರಿಂದ ಪರಮೈಶ್ವರ್ಯದ ಉತ್ಕೃಷ್ಟತೆಯನ್ನು ನಿರ್ಮಿಸಿಕೊಳ್ಳುವವನು, ಅಂದರೆ ಪ್ರಕಟಮಾಡಿಕೊಳ್ಳುವವನು ಎಂದು ಗಿರಿಧರವ್ಯಾಖ್ಯಾನ. ಭಗವಂತನಿಗೆ ಯೋಗ್ಯವಾದ ಅಪ್ರಾಕೃತವಾದ, ಚತುರ್ಮುಖನಿಂದ ನಿರ್ಮಿತವಾಗದಿದ್ದ ಪದಾರ್ಥವನ್ನು ಯೋಗಮಾಯೆಯಿಂದ ನಿರ್ಮಿಸಿಕೊಳ್ಳುತ್ತಾನೆ ಭಗವಂತ. ಆ ಪದಾರ್ಥ ಬ್ರಹ್ಮನಿಗಿಂತಲೂ ಉತ್ಕೃಷ್ಟವಾದ ಸಂಪತ್ತು ಎಂದು ವಲ್ಲಭವ್ಯಾಖ್ಯಾನ. ಯೋಗಮಾಯೆ ಎಂದರೆ ತನ್ನಿಚ್ಛೆಯಿಂದ ಮಾಡಿದ ಕೃಪೆ. ಅದರಿಂದ ವೈಕುಂಠಲೋಕದ ಸಂಪತ್ತನ್ನು ಪ್ರಕಟಗೊಳಿಸಿದ ಎಂದು ಶುಕದೇವ ವ್ಯಾಖ್ಯಾನ. ಎಲ್ಲರೂ ತಮಗೆ ತೋಚಿದ ಅರ್ಥ ಹೇಳುತ್ತಿದ್ದಾರೆ. ಪ್ರಮಾಣ ಹೇಳುತ್ತಿಲ್ಲ. ಪ್ರಮಾಣವೂ ಅದಕ್ಕೆ ಇಲ್ಲ. ಯೋಗಮಾಯೆ ಎಂದರೆ ಸ್ವರೂಪಶಕ್ತಿ ಎಂದರೆ ತಪ್ಪಿಲ್ಲ. ಆದರೆ ಪಾರಮೇಷ್ಠ್ಯಮಹೋದಯ ಶಬ್ದಾರ್ಥ ಹೇಳುವಲ್ಲಿ ಎಲ್ಲರೂ ತಪ್ಪಿದ್ದಾರೆ. ಸ್ವತಃ ಭಾಗವತವೇ ಹಿಂದೆ 'ಪಾತಾಳಮೇತಸ್ಯ ಹಿ ಪಾದಮೂಲಂ' ಎಂದು ಮುಂತಾಗಿ ವಿರಾಡ್ರೂಪವನ್ನು ವರ್ಣಿಸುವಾಗ 'ತದ್ ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯಂ' ಎಂದು ಹೇಳಿದೆ. ಒಂದು ಹುಬ್ಬಿನ ಕುಣಿತದಿಂದಲೆ ಬ್ರಹ್ಮನಿಗೆ ಅವನ ಪದವಿ ಮತ್ತು ಬ್ರಹ್ಮಾಂಡಾಧಿಪತ್ಯವನ್ನು ನೀಡುತ್ತಾನೆ ಎಂದು ಅದರ ಅರ್ಥ.

---

೧. ಆರಬ್ಧ, ಆವಿಷ್ಕೃತಃ ಪಾರಮೇಷ್ಠ್ಯಸ್ಯ ಪರಮೈಶ್ವರ್ಯಸ್ಯ ಮಹೋದಯಃ ಪರಮೋತ್ಕರ್ಷೋ ಯೇನ ತಂ । ಅಧಿರಾಜತ್ವಮಾವಿಷ್ಕೃತ್ಯ ರಾಜಶಿಕ್ಷಾರ್ಥಂ ಬ್ರಾಹ್ಮಣಾನ್ ಮಾನಯತೀತ್ಯರ್ಥಃ । —ಶ್ರೀಧರಃ

ಪಾರಮೇಷ್ಠ್ಯಂ ಸರ್ವೋತ್ಕೃಷ್ಟಮಾಧಿಪತ್ಯಂ । —ವೀರರಾಘವಃ

ಆರಬ್ಧ ಆವಿಷ್ಕೃತಃ ಪಾರಮೇಷ್ಠ್ಯಸ್ಯ ವೈಕುಂಠಸ್ಯ ಮಹೋದಯೋ ಯೇನ । —ಶುಕದೇವಃ

ಯೋಗಮಾಯಾ ಹಿ ಭಗವದ್‌ವೈಭವಯೋಗ್ಯಾನ್ ಪದಾರ್ಥಾನ್ ಸೃಜತಿ । ನ ತೇ ಪ್ರಾಕೃತಾ ನಾಪಿ ಬ್ರಹ್ಮಸೃಷ್ಟಾಃ । ಅತಃ ಪರಮೇಷ್ಠ್ಯಪೇಕ್ಷಯಾಪಿ ಮಹೋದಯರೂಪಾಃ । —ವಲ್ಲಭಃ

ಅದನ್ನೇ ಇಲ್ಲಿ ಪರಮೇಷ್ಠಿ ಶಬ್ದದಿಂದ ಹೇಳಿದೆ ಎನ್ನಲು ಬರುವಾಗ ವ್ಯರ್ಥವಾಗಿ ಪ್ರಯಾಸಪಡಬೇಕಾಗಿಲ್ಲ.

'ತದ್ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯಂ' ಇತ್ಯುಕ್ತಮ್ ।

ಹಿಂದೆ ಭಾಗವತದಲ್ಲಿಯೆ ಪರಮೇಷ್ಠಿಧಿಷ್ಣ್ಯ ಶಬ್ದದಿಂದ ಬ್ರಹ್ಮಪದವಿಯ ಐಶ್ವರ್ಯವನ್ನು ಹರಿಯ ಹುಬ್ಬಿನ ಕುಣಿತವೇ ನಿರ್ಮಿಸುತ್ತದೆ ಎಂದು ಹೇಳಿದೆ. ಅದನ್ನೇ ಸನಕಾದಿಮುನಿಗಳು ನೆನೆದು ರೋಮಾಂಚಿತರಾಗಿದ್ದಾರೆ ಎಂದು ಇಲ್ಲಿ ಪಾರಮೇಷ್ಠ್ಯ ಮಹೋದಯಶಬ್ದದಿಂದ ಭಾಗವತ ಹೇಳುತ್ತಿದೆ.

ಇಲ್ಲಿ ಯೋಗಮಾಯೆ ಎಂದರೆ ಹುಬ್ಬಿನ ಕುಣಿತದಿಂದಲೇ ಎಲ್ಲ ಕಾರ್ಯ ಮಾಡಬಲ್ಲ ಸ್ವರೂಪಸಾಮರ್ಥ್ಯ ಎನ್ನಬಹುದು. ಅಥವಾ ಹುಬ್ಬಿನ ಕುಣಿತದ ಮೂಲಕ ಕಾರ್ಯಮಾಡುವ ಸ್ವರೂಪೇಚ್ಛೆ ಎಂದೂ ಹೇಳಬಹುದು.

* * *

ಬ್ರಾಹ್ಮಣನೆಂದರೆ ನನಗೆ ಆರಾಧ್ಯದೈವ ಎಂದು ಶ್ರೀಹರಿ ಹೇಳಿದರೆ, ಅಲ್ಲ, ನೀನೆ ಬ್ರಾಹ್ಮಣರಿಗೆ ಕುಲದೇವತೆ ಏಕೆಂದರೆ ನಾವು ಆಚರಿಸುವ ಧರ್ಮಕ್ಕೆ ರಕ್ಷಕ ನೀನು, ಆ ಧರ್ಮದೇವತೆಗೂ ತಿಳಿಯಲಾಗದ ಗೋಪ್ಯ ತತ್ವ ನೀನು ಎನ್ನುತ್ತಾರೆ ಸನಕಾದಿಮುನಿಗಳು–

ತ್ವತ್ತಃ ಸನಾತನೋ ಧರ್ಮೋ ರಕ್ಷ್ಯತೇ ತನುಭಿಸ್ತವ ।
ಧರ್ಮಸ್ಯ ಪರಮೋ ಗುಹ್ಯೋ ನಿರ್ವಿಕಾರೋ ಭವಾನ್ ಮತಃ
॥ ೧೮ ॥

ನಾವು ಬ್ರಾಹ್ಮಣರು ಆಚರಿಸುವ ಸನಾತದಧರ್ಮವನ್ನು 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ' ಎಂಬಂತೆ ಧರ್ಮಗ್ಲಾನಿ ಬಂದೊದಗಿದಾಗಲೆಲ್ಲ ಅವತಾರ ಮಾಡಿ ರಕ್ಷಿಸುವವನು. ನೀನು ಆ ಧರ್ಮದ ಅಭಿಮಾನಿಯಾದ ಯಮಧರ್ಮ ರಾಜನಿಗೂ ವಾಯುದೇವನಿಗೂ ಪೂರ್ತಿಯಾಗಿ ತಿಳಿಯಲಾಗದ ಗೋಪ್ಯವಾದ ಪರತತ್ವ ನೀನು. ನಿರ್ವಿಕಾರ ನೀನು. ಹೀಗೆ ನಾವು ವೇದದಿಂದ ತಿಳಿಯುತ್ತೇವೆ. ಇಂಥ ನೀನು ಬ್ರಾಹ್ಮಣರ ಕುಲದೈವ ಹೊರತು ನಾವು ನಿನಗೆ ದೈವವೆಂದು ನೀನು ಹೇಳುವುದು ಕೇವಲ ಪ್ರಶಂಸೆ.

ಇಲ್ಲಿ 'ಧರ್ಮಸ್ಯ ಗುಹ್ಯಃ' ಎಂದರೆ ಧರ್ಮಾಚರಣೆಯ ಫಲರೂಪ ಎಂದು ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ. [೧]ವಲ್ಲಭವ್ಯಾಖ್ಯಾನದಲ್ಲಿ ಮಾತ್ರ

೧. ಧರ್ಮಸ್ಯಾತ್ಯಂತಂ ಗೋಪ್ಯಸ್ತ್ವಮೇವ । ಧರ್ಮೋ ಹ್ಯನ್ಯಗತೋ ಧರ್ಮಿಣಂ ಗೋಪಾಯತಿ ಯಥಾ ಜಲಗತಮೌಷ್ಣ್ಯಂ ವಹ್ನಿಂ ಗೋಪಾಯತಿ । ತಥಾ ಜೀವೇಷ್ವಾಗತೋ ಧರ್ಮೋ ಬ್ರಹ್ಮ ಗೋಪಾಯತಿ । ಸ ಹಿ ತಸ್ಯೈವ, ಕ್ರಿಯಾಶಕ್ತಿರೂಪತ್ವಾತ್ । –ವಲ್ಲಭಃ

ಭಗವಂತನ ಕ್ರಿಯಾಶಕ್ತಿರೂಪವಾದ ಧರ್ಮವು ಭಗವಂತನನ್ನು ಕಾಪಾಡುತ್ತದೆ! ಎಂದು ಹೇಳಿದೆ. ಗುಹ್ಯಶಬ್ದಕ್ಕೆ ರಹಸ್ಯ, ಪೂರ್ತಿ ತಿಳಿಯಲಾಗದ ತತ್ವ ಎಂದು ವ್ಯಾಖ್ಯಾನಿಸುವುದೇ ಸ್ವರಸ. ಆಗ ಧರ್ಮವೆಂದರೆ ಧರ್ಮಾಭಿಮಾನಿದೇವತೆ ಎಂದಿಟ್ಟುಕೊಳ್ಳಬೇಕು. ಅವನಿಗೂ ತಿಳಿಯಲಾಗದ್ದೆಂದರೆ ಇನ್ನು ಉಳಿದವರ, ಈ ಬ್ರಾಹ್ಮಣರ ಪಾಡೇನು? ಅದರಿಂದ ಬ್ರಾಹ್ಮಣರು ಪರಮಾತ್ಮನಿಗೆ ಆರಾಧ್ಯರೆನ್ನುವುದು ಸರಿಯಲ್ಲ.

ಧರ್ಮಸ್ಯಾಪಿ ದುರ್ಜ್ಞೇಯಃ ।

ಧರ್ಮಾಭಿಮಾನಿ ದೇವತೆಗೂ ಪೂರ್ತಿತಿಳಿಯಲಾಗದಂಥ ರಹಸ್ಯ ವಸ್ತು.

ಗುಹ ಸಂವರಣೇ ಧಾತು ನಿಷ್ಪನ್ನವಾದ ಗುಹ್ಯಶಬ್ದಕ್ಕೆ ಆಚ್ಛಾದಿತವಾದ, ಕಾಣದ ವಸ್ತು ಎನ್ನುವುದೇ ಮುಖ್ಯವಾದ ಅರ್ಥ. ಅದನ್ನೇ ಹೇಳಲು ಬರುವಾಗ ಅದನ್ನು ಬಿಟ್ಟು ಬೇರೆ ಅರ್ಥಗ್ರಹಿಸುವುದು ಸರಿಯಲ್ಲ.

* * *

ಬ್ರಾಹ್ಮಣರ ಪಾದಕಮಲ ಸೇವೆಯಿಂದ ತನಗೆ ಲಕ್ಷ್ಮೀ ಪ್ರಾಪ್ತಿ ಎಂದು ಭಗವಂತ ಹೇಳಿದ್ದು ಬರೀ ಪ್ರಶಂಸೆ. ಬ್ರಾಹ್ಮಣರು ಜ್ಞಾನ ಭಕ್ತಿ ಮುಕ್ತಿಗಳಿಗಾಗಿ ಯಾವ ಲಕ್ಷ್ಮಿಯನ್ನು ಆರಾಧಿಸುವರೋ ಆ ಲಕ್ಷ್ಮಿ ಭಗವಂತನ ಎದೆಯಲ್ಲಿದ್ದೂ, ಸಾಲ ದೆಂದು ಅವನ ಪಾದಕಮಲ ಸೇವೆಗೆ ಬರುತ್ತಾಳೆ ಎನ್ನುತ್ತಾರೆ ಸನಕಾದಿಮುನಿಗಳು.

ಯಂ ವೈ ವಿಭೂತಿರುಪಯಾತ್ಯನುವೇಲಮನ್ಯೈ-
ರರ್ಥಾರ್ಥಿಭಿಃ ಸ್ವಶಿರಸಾ ಧೃತಪಾದರೇಣುಃ ।
ಧನ್ಯಾರ್ಪಿತಾಂಘ್ರಿತುಲಸೀನವದಾಮಧಾಮ್ನೋ
ಲೋಕಂ ಮಧುವ್ರತಪತೇರಿವ ಕಾಮಯಾನಾ ॥ ೨೦ ॥

ಧನ್ಯರಾದ ಭಕ್ತರು ನಿನ್ನ ಪಾದಕಮಲಗಳಲ್ಲಿ ತುಲಸೀಮಾಲೆಗಳನ್ನು ಸಮರ್ಪಿಸುತ್ತಾರೆ. ಸಾರಗ್ರಾಹಿಗಳಲ್ಲಿ ಉತ್ತಮನಾದ ನೀನು ನಿನಗೆ ಅತಿಪ್ರಿಯಳಾದ ತುಲಸಿಗೆ ನಿನ್ನ ಪಾದಕಮಲಗಳಲ್ಲಿ ಆಶ್ರಯ ನೀಡುವೆ. ಅದರಿಂದ ಪಾದಕಮಲವೂ ಎದೆಯಂತೆಯೆ ಉತ್ತಮವಾದ ಸ್ಥಾನವೆ ಎಂದು ತೀರ್ಮಾನಿಸಿ ತುಲಸಿಯೊಡನೆ ಸ್ಪರ್ಧೆಯಿಂದಲೋ ಎಂಬಂತೆ ಎದೆಯಲ್ಲಿ ವಾಸಿಸುವ ಲಕ್ಷ್ಮಿ ಪಾದಕಮಲವನ್ನು ಆಶ್ರಯಿಸಲು ಬರುತ್ತಾಳೆ, ಹೊರತು ನೀನು ಬ್ರಾಹ್ಮಣರ ಪಾದಕಮಲವನ್ನು ಸೇವಿಸಿದುದರ ಫಲವಾಗಿ ಅಲ್ಲ. ವಸ್ತುತಃ ಬ್ರಾಹ್ಮಣರು ಜ್ಞಾನಭಕ್ತ್ಯಾದಿ ದೈವೀಸಂಪತ್ತಿನ ಅಪೇಕ್ಷೆಯಿಂದ ಲಕ್ಷ್ಮಿಯ ಪಾದಧೂಳಿಯನ್ನು ಶಿರದಲ್ಲಿ ಧರಿಸುತ್ತಾರೆ.

[1]ಇಲ್ಲಿ ಬೇರೆ ವ್ಯಾಖ್ಯಾನಕಾರರು ಮಧುವ್ರತಪತಿ ಎಂದರೆ ದುಂಬಿ ಎಂದೇ ಅರ್ಥಗ್ರಹಿಸಿದ್ದಾರೆ. ತುಲಸಿಯ ಮಾಲೆಗೆ ದುಂಬಿ ಆಕೃಷ್ಟವಾಗುವುದರಿಂದ ಹರಿಪಾದದಲ್ಲಿ ಅರ್ಪಿತವಾದ ತುಲಸೀ ಮಾಲೆಯಲ್ಲಿ ದುಂಬಿ ಕುಳಿತಿದೆ. ಅಂಥ ಹರಿಯ ಪಾದಕಮಲವನ್ನು ಬಯಸುವವಳಂತೆ ಲಕ್ಷ್ಮಿ ಆಗಾಗ ಬಂದು ಸೇವಿಸುತ್ತಾಳೆ ಎಂದು ವೀರರಾಘವವ್ಯಾಖ್ಯಾನ. ಲಕ್ಷ್ಮಿಗೆ ಹರಿಪಾದಕಮಲದ ಬಯಕೆ ಇಲ್ಲವೆಂದು ಅಭಿಪ್ರಾಯವೆ? ಬಯಸುವವಳಂತೆ ಎಂದೇಕೆ ಇವಶಬ್ದವಿದೆ?

ಜೀವಗೋಸ್ವಾಮಿವ್ಯಾಖ್ಯಾನದಲ್ಲಿ ಈ ಲಕ್ಷ್ಮಿ ಹರಿಯ ಪ್ರೇಯಸಿಯಾದ ಪರಮಭಾಗವತ ಶಿರೋಮಣಿಯಾದ ವೈಕುಂಠಲಕ್ಷ್ಮಿಯಲ್ಲ. ಏಕೆಂದರೆ ಅವಳಿಗೆ ಬ್ರಹ್ಮಾಂಡಕ್ಕೆ ಅಧಿಷ್ಠಾತ್ರಿಯಾಗಿ ಮೆರೆಯುವ ಬಯಕೆಯೇ ಹೊರತು ಪರಮಾತ್ಮನ ಪಾದಕಮಲದಲ್ಲಿ ಕಾಮನೆ ಇಲ್ಲ. ಇರುವಂತೆ ತೋರಿಕೊಳ್ಳುತ್ತಾಳೆ 'ಇವ ಕಾಮಯಾನಾ' ಅವಳಿಗೆ ಅಧಿಕಾರಲಾಲಸೆ ಎಷ್ಟೆಂದರೆ ಪರಮಾತ್ಮನ ಪಾದಕಮಲದಲ್ಲಿ ವೈಕುಂಠದ ದುಂಬಿ ಎಂಬ ಒಂದು ಕೀಟವೂ ಕುಳಿತುಕೊಳ್ಳಕೂಡದು, ಅದು ತನ್ನ ಸ್ಥಾನ ಎಂದು ಅಸಹನೆ. ಹೀಗಾಗಿ ವೈಕುಂಠಲಕ್ಷ್ಮಿಗಿಂತ ಅತ್ಯಂತಕಡಿಮೆಯವಳು.

ರಾಧಾರಮಣದಾಸವ್ಯಾಖ್ಯಾನದಲ್ಲಿ ಲಕ್ಷ್ಮಿಯರಿಗೆ ಭೇದ ಅಭೇದ ಎಂದುಎರಡೂ ಪಕ್ಷ ಅಂಗೀಕೃತವಾಗಿದೆ. ಭೇದಪಕ್ಷದಲ್ಲಿ ಜೀವಗೋಸ್ವಾಮಿವ್ಯಾಖ್ಯಾನ ಅಂಗೀಕೃತವಾಗಿದೆ. ಹರಿಪಾದದಲ್ಲಿರುವ ತುಲಸಿಯಲ್ಲಿ ದುಂಬಿ ಕುಳಿತುದರಿಂದ ಹರಿಪಾದವು ವಿಶೇಷ ಲಾವಣ್ಯದಿಂದಯುಕ್ತವಾಗಿದೆ ಎಂದು ಎದೆಯನ್ನೂ ಬಿಟ್ಟು ಕೆಳಗೆ ಬರುತ್ತಾಳೆ ಎಂದು ಶ್ರೀಧರವ್ಯಾಖ್ಯಾನವಿರುವುದರಿಂದ ಅಭೇದಪಕ್ಷವೂ ಅಂಗೀಕೃತವಾಗಿದೆ.

---

೧. ಲಕ್ಷ್ಮೀಃ ಧನ್ಯೈರ್ಭಾಗವತ್ಯೈ ರಚಿತಂ ನೂತನತುಲಸೀಮಾಲಾಯಾಃ ಸ್ಥಾನಂ ಯಸ್ಯ ತಸ್ಯ ಮಧುವ್ರತಪತೇಃ ಭೃಂಗರಾಜಸ್ಯ ಲೋಕಂ ಸ್ಥಾನಂ ಶ್ರೀಪಾದಪದ್ಮಂ ಪ್ರಕಾಮಯಮಾನೇವ ಯಂ ತ್ವಾಮನುವೇಲಂ ತತ್ತದುಚಿತಾವಸರೇಷು ಉಪಯಾತಿ ಸೇವತೇ । —ವೀರರಾಘವಃ

ಅತ್ರ ಪೂರ್ವವತ್ ಜಗದಧಿಕಾರಿಣ್ಯೇವ ಲಕ್ಷ್ಮೀಃ । ನತು ಸಾಕ್ಷಾತ್ ಪ್ರೇಯಸೀ ವೈಕುಂಠಲಕ್ಷ್ಮೀಃ । ಅಸ್ಯಾಃ ಪರಮಭಾಗವತಶಿರೋಮಣಿತ್ವಾತ್ । ಉಪಯಾತಿ ಆರಾಧಯತಿ । ಲೋಕಂ ವಿಷಯಂ । ವೈಕುಂಠಕೀಟವಿಶೇಷಸ್ಯಾಪಿ ವಿಷಯಂ ಕಾಮಯಮಾನೇತಿ ತಸ್ಯಾ ವೈಕುಂಠಲಕ್ಷ್ಮೀತೋಽತಿನ್ಯೂನತ್ವಂ ದರ್ಶಿತಂ । ಇವೇತಿ ಸ್ವವಿಷಯೇ ಜಗತಿ ವೈರಾಗ್ಯಾಭಾವೋಽಪಿ ದರ್ಶಿತಃ । —ಜೀವಗೋಸ್ವಾಮೀ

[1]ವಲ್ಲಭವ್ಯಾಖ್ಯಾನದಲ್ಲಿ ಲಕ್ಷ್ಮಿ ಭಕ್ತಿರಸದಲ್ಲಿ ಪ್ರವೇಶಿಸಿದ್ದಾಳೆ. ಭಕ್ತಿರಸದಲ್ಲಿ ಕಾಮರಸಕ್ಕೆ ಪ್ರವೇಶವಿಲ್ಲ. ಅದರಿಂದ ಕಾಮಯಾನೇವ ಎಂದಿದೆ. ಮುಂದಿನ ಶ್ಲೋಕದಲ್ಲಿ 'ನಾತ್ಯಾದ್ರಿಯತ್' ಎಂದುದರ ಅಭಿಪ್ರಾಯ ಹರಿಯು ಲಕ್ಷ್ಮಿಯನ್ನು ಬಹಳ ಆದರಿಸಿದರೆ ಅವಳು ತಿರುಗಿ ಸ್ವಭಾವಾನುಗುಣವಾಗಿ ಕಾಮಿಸಬಹುದೆಂದೇ ಬಗೆದು ಬಹಳ ಆದರಿಸಲಿಲ್ಲ ಎಂದು.

ಈ ಎಲ್ಲ ವ್ಯಾಖ್ಯಾನಗಳು 'ಮಧುವ್ರತಪತಿ' ಶಬ್ದಕ್ಕೆ ದುಂಬಿ ಎಂದು ಅರ್ಥವಿಟ್ಟುಕೊಂಡು ಕಷ್ಟ ಪಟ್ಟಿವೆ. [2]ಹರಿಪಾದದಲ್ಲಿರುವ ತುಲಸಿಯಿಂದ ದುಂಬಿ ಆಕೃಷ್ಟವಾದರೆ ಹರಿಪಾದದಲ್ಲಿ ಲಾವಣ್ಯವಿದೆ ಎಂದು ಲಕ್ಷ್ಮಿ ಊಹಿಸುವುದು ಅಸಂಗತವೇ ಸರಿ.

ಅದರಿಂದ ಮಧುವ್ರತ ಎಂದರೆ ಸಾರಗ್ರಾಹಿ. ಸಾರಗ್ರಾಹಿಗಳಲ್ಲೆಲ್ಲ ಶ್ರೇಷ್ಠನಾದ ಹರಿ ಮಧುವ್ರತಪತಿ, ತುಲಸಿಗೆ ಮೆಚ್ಚಿ ತನ್ನ ಪಾದಕಮಲದಲ್ಲಿ ಆಸರೆ ನೀಡಬೇಕಾದರೆ ಆ ಪಾದಕಮಲ ಬಹಳಶ್ರೇಷ್ಠವೆಂದು ಹರಿಯ ಅಭಿಪ್ರಾಯವನ್ನು ತಾನು ಊಹಿಸಿ ತಾನು ಎದೆಯಲ್ಲಿದ್ದರೂ ತನಗೆ ಆ ಪಾದಕಮಲವೂ ಬೇಕೆಂದು ಸ್ಪರ್ಧೆಯಿಂದಲೋ ಎಂಬಂತೆ ಎದೆಯಲ್ಲಿರುವ ಲಕ್ಷ್ಮಿ ಪಾದಗಳ ಬಳಿ ಕೆಳಗೆ ಇಳಿಯುತ್ತಾಳೆ. ಈ ಸ್ಪರ್ಧೆ ವಾಸ್ತವವಲ್ಲ, ಉತ್ಪ್ರೇಕ್ಷೆ ವಸ್ತುತಃ ಪಾದಸೇವೆಯಲ್ಲಿ ಅವಳಿಗೆ ಔತ್ಸುಕ್ಯವಿರುವುದರಿಂದಲೇ ತಾನು ಎದೆಯಲ್ಲಿ ಕುಳಿತವಳೆಂದು ಅಹಂಕಾರ ಪಡದೆ ಪಾದಸೇವೆ ಮಾಡುತ್ತಾಳೆ ಎಂದು ಸೂಚಿಸಲು ಇವಶಬ್ದವಿದೆ. ಪತಿ ಪತ್ನೀಭಾವವಿರುವಲ್ಲಿ ಭಕ್ತಿರಸದಲ್ಲಿ ಕಾಮರಸ ಸಹಜ. ಅದರಲ್ಲಿ ದೋಷವೇನಿಲ್ಲ.

---

೧. ಸಾ ಹಿ ಭೋಗ್ಯಭಾವಮೇವ ತ್ಯಕ್ತವತೀ । ತೇನ ತಸ್ಯಾಃ ಫಲತ್ವಮೇವ ನಾಸ್ತಿ । ಸಾ ಹಿ ರಸಾಂತರೇ ಪ್ರವಿಷ್ಟಾ । ನ ಭಕ್ತಿರಸೇ ಕಾಮರಸಃ ಪ್ರವಿಶತಿ । ಸಾ ಹಿ ತುಲಸೀಮಪಿ ನಿರ್ಗುಣಾಂ ಬಹುಮನ್ಯತೇ । ತತೋಽಪಿ ಹೀನಭಾವಂ ಚ । ಭ್ರಮರಾ ನಾನಾಪುಷ್ಪರಸೇಷ್ವಾಸಕ್ತಾಃ । ತೇಽಪಿ ಯದಿ ಭಕ್ತಿಮಾಹಾತ್ಮ್ಯಾತ್ ತುಲಸೀರಸ ಏವಾಸಕ್ತಾಃ, ತದಾ ಮಯಾಪಿ ತಥೈವ ವಿಧೇಯಮಿತಿ ಭ್ರಮರಲೋಕಮೇವ ಕಾಮಯತೇ । ಏವಮಪಿ ಸತಿ ಲಬ್ಧಪದಾ ಸಾ ಪುನಃ ಸ್ವಭಾವಂ ಪ್ರಾಪ್ಸ್ಯತೀತಿ ಭಕ್ತತ್ವೇಽಪಿ ತಾಂ ನಾತ್ಯಾದ್ರಿಯತ್ । –ವಲ್ಲಭಃ

೨ ಇತ್ಥಂ ನಾಮಾತಿಲಂಪಟತಯಾ ಲಕ್ಷ್ಮೀಸ್ತ್ವಾಂ ಸೇವತೇ । ಕಥಂ । ಏವಂ ಹಿ ಸಾ ಮೇನೇ । ಅಯಂ ಹಿ ಸಾರಗ್ರಾಹೀ ಮಧುವ್ರತಶ್ಚಂಚಲಶ್ಚ । ಸ ಚಾಂಘ್ರಿಗತಾಯಾಂ ತುಲಸ್ಯಾಂ ಸಪರಿವಾರೋ ನಿಶ್ಚಲಃ ಸನ್ ರಮತೇ । ಅತೋಽಂಘ್ರಿಲಾವಣ್ಯಮಧಿಕಂ ಸ್ಯಾತ್ । ತತೋಽಹಂ ವಕ್ಷಸಿ ಸ್ಥಿತಾಪಿ ಯೋಗಿಜನಾದಿಬಹುಸೇವಕ ಸಂಘರ್ಷ ಮಂಗೀಕೃತ್ಯಾಪಿ ತುಲಸ್ಯಾ ಸಹ ಸಾಪತ್ನ್ಯೇನಾಪಿ ಚರಣೌ ಸೇವಿಷ್ಯೇ ಇತಿ । –ಶ್ರೀಧರಃ

ಮಧುವ್ರತಪತೇಃ ಸಾರಗ್ರಾಹಿಣಾಂ ಪತೇಃ । ಅಂಘ್ರಿತುಲಸೀಲೋಕಂ ಸ್ಥಾನಂ ಉರಸಿ ಸ್ಥಿತಾಽಪಿ ಸ್ಪರ್ಧಯೇವ ಕಾಮಯಾನಾ । 'ಲಬ್ಧ್ವಾಪಿ ವಕ್ಷಸಿ ಪದಂ' ಇತಿ ಚ ।

ಮಧುವ್ರತಪತೇಃ ಎಂಬಲ್ಲಿ ಮಧುವ್ರತ ಎಂದರೆ ರೂಢಿಯ ಅರ್ಥವಾದ ದುಂಬಿ ವಿವಕ್ಷಿತವಲ್ಲ. ಸಾರಗ್ರಾಹಿ ಎಂಬ ಯೋಗಾರ್ಥ ಗ್ರಹಿಸಬೇಕು. ಸಾರಗ್ರಾಹಿಗಳಿಗೆ ಪತಿ, ಅವರಲ್ಲೆಲ್ಲ ಉತ್ತಮ ಶ್ರೀಹರಿ ಎಂದರ್ಥ. ಪಾದಗಳಲ್ಲಿರುವ ತುಲಸಿಯ ಲೋಕವನ್ನು ಅಂದರೆ ಸ್ಥಾನವನ್ನು ಎದೆಯಲ್ಲಿರುವ ಲಕ್ಷ್ಮಿಯೂ ಸ್ಪರ್ಧೆಯಿಂದಲೋ ಎಂಬಂತೆ ಬಯಸುತ್ತಾಳೆ. ಹೀಗೆಯೇ ಬೇರೆ ಕಡೆಯೂ ಹೇಳಿದ್ದುಂಟು. 'ಲಬ್ಧ್ವಾಪಿ ವಕ್ಷಸಿ ಪದಂ ಕಿಲ ಭೃತ್ಯಜುಷ್ಟಂ' ಎಂದು.

'ಪತ್ಯುಃ' ಎನ್ನಬೇಕಾಗಿತ್ತು. ಪತೇಃ ಎಂದಿದ್ದಾರೆ ಇದು ತಮ್ಮ ಗ್ರಂಥ ವೇದತುಲ್ಯವೆಂದು ತಿಳಿಸುವುದಕ್ಕಾಗಿ ವೈದಿಕಪ್ರಯೋಗವೆಂದು ತಿಳಿಯಬೇಕು.

* * *

'ನ ಶ್ರೀರ್ವಿರಕ್ತಮಪಿ ಮಾಂ ವಿ ಜಹಾತಿ' 'ನಾನು ವಿರಕ್ತನಾದರೂ ಲಕ್ಷ್ಮಿ ನನ್ನನ್ನು ಅಗಲುವುದಿಲ್ಲ' ಎಂದು ಶ್ರೀಹರಿ ಹೇಳುವುದರ ಅಭಿಪ್ರಾಯವನ್ನು ಸನಕಾದಿ ಮುನಿಗಳು ಗ್ರಹಿಸಿದ ರೀತಿ ಇದು–

ಯಸ್ಯಾಂ ವಿವಿಕ್ತಚರಿತೈರನುವರ್ತಮಾನಾಂ
ನಾತ್ಯಾದ್ರಿಯಃ ಪರಮಭಾಗವತಪ್ರಸಂಗಃ ।
ಸ ತ್ವಂ ದ್ವಿಜಾನುಪಥ ಪುಣ್ಯರಜಃ ಪುನೀತಿಃ
ಶ್ರೀವತ್ಸಲಕ್ಷ್ಮ ಕಿಮಗಾ ಭಗಭಾಜನತ್ವಮ್ ॥ ೨೦ ॥

ಶ್ರೀಹರಿ, ಎಲ್ಲರಿಗಿಂತ ಹೆಚ್ಚು ಸೇವೆ ಮಾಡುವ ಲಕ್ಷ್ಮಿಯನ್ನೂ ನೀನು ಎಲ್ಲರಿಗಿಂತ ಹೆಚ್ಚಿನ ಭಕ್ತಳೆಂದು ಆದರಿಸುವೆ ಹೊರತು ಕಾಮಭಾವನೆಯಿಂದ ಆದರಿಸುವುದಿಲ್ಲ. ಅಂಥ ನೀನು ಬ್ರಾಹ್ಮಣರ ಪಾದಧೂಳಿನ ಸೇವೆಯಿಂದ ಪವಿತ್ರನಾದೆಯ? ಶ್ರೀವತ್ಸಚಿಹ್ನೆಯನ್ನು ಪಡೆದೆಯ? ಸಮಸ್ತೈಶ್ವರ್ಯ ಭಾಜನನಾದೆಯ?

ಪರಮಾತ್ಮನು ಭಕ್ತರಲ್ಲಿಯೇ ಆದರ ಉಳ್ಳವನು. ಆದರಿಂದ ಲಕ್ಷ್ಮಿಯಲ್ಲಿ ಅವನಿಗೆ ಹೆಚ್ಚು ಆಸಕ್ತಿ ಇಲ್ಲ ಎಂದು [೧]ಶ್ರೀಧರವ್ಯಾಖ್ಯಾನ. ಭಕ್ತರ ಸಂಗದಲ್ಲಿಯೇ ಯಾವಾಗಲೂ

---

೧. ಅತ್ಯೌತ್ಸುಕ್ಯೇನಾನುವರ್ತಮಾನಾಮಪಿ ತಾಂ ತ್ವಂ ನಾತೀವಾದ್ರಿಯಸೇ ಯತಃ ಪರಮಭಾಗವತೇಷ್ವೇವ ಪ್ರಕೃಷ್ಟಸಂಗವಾನ್ । –ಶ್ರೀಧರಃ

ಇರುವುದರಿಂದ ಲಕ್ಷ್ಮಿಯನ್ನು ಆದರಿಸಲು ಅವನಿಗೆ ಅವಕಾಶವಾಗುವುದಿಲ್ಲ ಎಂದು [೧]ವೀರರಾಘವ ವ್ಯಾಖ್ಯಾನ. ಬ್ರಹ್ಮಾಂಡಾಧಿಷ್ಠಾತ್ರಿಯಾದ ಲಕ್ಷ್ಮಿಗೆ ತನ್ನ ಲೋಕವನ್ನು ಕೊಡದೆ ಅವಳನ್ನು ಬ್ರಹ್ಮಾಂಡದಲ್ಲಿಯೆ ಪುನಃ ಇರಿಸುವುದರಿಂದ ಹರಿ ಅವಳನ್ನು ಹೆಚ್ಚು ಆದರಿಸುವುದಿಲ್ಲ ಎನ್ನುತ್ತದೆ ಜೀವಗೋಸ್ವಾಮಿ ವ್ಯಾಖ್ಯಾನ. ಭಕ್ತರು ನಿನ್ನನ್ನು ಲಕ್ಷ್ಮಿಯೊಂದಿಗೆ ಭಜಿಸುವುದಿಲ್ಲ. ಆದರಿಂದ ನೀನು ಲಕ್ಷ್ಮಿಯೊಂದಿಗೆ ರಮಿಸುವುದಿಲ್ಲ ಎಂದು ವಲ್ಲಭವ್ಯಾಖ್ಯಾನ.

ಇವೆಲ್ಲವೂ ಪ್ರಮಾಣವಿರುದ್ಧ. ಪರಮಾತ್ಮನಿಗೆ ಲಕ್ಷ್ಮಿಯಲ್ಲಿ ಇರುವಷ್ಟು ಆಸಕ್ತಿ ಇನ್ನಾರಲ್ಲೂ ಇಲ್ಲ. ಭಕ್ತರೂ ಕೂಡ ಲಕ್ಷ್ಮಿಯನ್ನು ಬಿಟ್ಟು ಹರಿಯನ್ನು ಭಜಿಸುವುದಿಲ್ಲ. ಭಜಿಸಿದರೆ ಅನರ್ಥವೇ ಆಗುತ್ತದೆ. ಆದರಿಂದ ಶ್ರೀಮದಾಚಾರ್ಯರು ತತ್ವನಿರ್ಣಯ ವಚನವನ್ನು ತೋರಿಸಿ ಎಲ್ಲರಿಗಿಂತ ಲಕ್ಷ್ಮಿಯ ಭಕ್ತಿಯೇ ಹೆಚ್ಚಿನದು. ಆದರಿಂದ ಎಲ್ಲರಿಗಿಂತಲೂ ಅವಳಲ್ಲಿ ಹೆಚ್ಚಿನ ಪ್ರೀತಿ. ಅದು ತನ್ನ ಸುಖಕ್ಕಾಗಿ ಅಲ್ಲ. ಅವಳ ಸ್ವರೂಪ ಸುಖಾಭಿವ್ಯಕ್ತಿಗಾಗಿ ಎಂದು ಹೇಳುತ್ತಾರೆ–

~~ಪರಮಭಾಗವತತ್ವೇನ ತಸ್ಯಾಮತ್ಯಾದರಃ । ನ ತು ಕಾಮಾತ್ ।~~

ಹರಿಭಕ್ತಿರ್ಹರೇಃ ಪ್ರೀತಿರ್ಜ್ಞಾನಾನಂದಾದಯೋ ಗುಣಾಃ ।
ಅಧಿಕಾರೇ ಚ ಮುಕ್ತೌ ಚ ಬ್ರಹ್ಮವಾಯ್ವೋಶ್ಚ ತತ್‌ಸ್ತ್ರಿಯೋಃ ॥

ಶೇಷವೀಂದ್ರಹರಾಣಾಂ ಚ ತತ್‌ಸ್ತ್ರೀಣಾಂ ವಾಸವಾದಿನಾಮ್ ।
ಯಥಾಕ್ರಮಂ ತು ವಿಜ್ಞೇಯಾ ಭೂಮೌ ಕಾರಣತೋಽನ್ಯಥಾ ॥

ದೇಹಸ್ಯ ಲಕ್ಷಣಂ ಚೈವ ಭೂಮಾವಪ್ಯನ್ಯಥಾ ಭವೇತ್ ।
ಬ್ರಹ್ಮಾದಿಷು ಕ್ರಮೇಣೈವ ನಿತ್ಯಂ ಸ್ಯಾದ್ ದೇಹಲಕ್ಷಣಮ್ ॥

ಶ್ರಿಯೋಽಧಿಕಾ ಗುಣಾಃ ಸರ್ವೇ ಸರ್ವೇಭ್ಯೋ ನಿಯಮೇನ ತು ।
ಉತ್ಕ್ರಾಂತೌ ಚಾಪ್ಯನುತ್ಕ್ರಾಂತೌ ತತೋ ವಿಷ್ಣೋರ್ನ ಸಂಶಯಃ ॥

ಇತಿ ತತ್ವನಿರ್ಣಯೇ ॥

---

೧. ಪರಮಭಾಗವತಪ್ರಸಂಗೇನಾವಸರಮಲಭಮಾನೋ ನಾತೀವಾದೃತವಾನ್ ।
– ವೀರರಾಘವಃ

ಪೂತಚರಿತ್ರೈಃ ಪರಿಚರಂತೀಮಪಿ ನಾತ್ಯಾದ್ರಿಯತ್ ತಲ್ಲೋಕಸ್ಯಾದಾನಾತ್ । ಜಗತಿ ಮುಹುಃ ಸ್ಥಾಪನಾಚ್ಚ । –ಜೀವಗೋಸ್ವಾಮೀ ।

ತೇ ಹಿ ಪರಮಾ ಅಸಾಧಾರಣಾಃ ಲಕ್ಷ್ಮೀಸಹಿತಂ ನೋಪಾಸತೇ । ಅಂಶೇನ ಸೇವಾಯಾ ವ್ಯಭಿಚಾರಾತ್ । ಅತಸ್ತದನುರೋಧೇನಾಪಿ ನ ಲಕ್ಷ್ಮ್ಯಾ ಸಹ ರಮಣಂ । –ವಲ್ಲಭಃ

ಲಕ್ಷ್ಮಿ ತನ್ನಲ್ಲಿ ಪರಮಭಕ್ತಳೆನ್ನುವ ಕಾರಣದಿಂದಲೆ ಅವಳಲ್ಲಿ ಭಗವಂತನಿಗೆ ಬಹಳ ಆದರ ಹೊರತು ಕಾಮಭಾವನೆಯಿಂದಲ್ಲ. 'ಹರಿಭಕ್ತಿ ಹರಿಪ್ರೀತಿ ಜ್ಞಾನ ಆನಂದ ಮುಂತಾದ ಸದ್ಗುಣಗಳು ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ಬ್ರಹ್ಮವಾಯು ಅವರ ಪತ್ನಿಯರು ಶೇಷ ಗರುಡ ರುದ್ರ ಅವರ ಪತ್ನಿಯರು ಇಂದ್ರ ಮೊದಲಾದವರಲ್ಲಿ ತಾರತಮ್ಯಾನುಗುಣವಾಗಿಯೇ ಇರುತ್ತವೆ ಎಂದು ತಿಳಿಯಬೇಕು. ಅವರು ಭೂಮಿಯಲ್ಲಿ ಅವತರಿಸಿದಾಗ ಮಾತ್ರ ಮಾನುಷಾನ್ನ ಭೋಗಾದಿ ಕಾರಣಗಳಿಂದ ಈ ಗುಣಗಳು ವ್ಯತ್ಯಾಸವಾಗಬಹುದು. ಮತ್ತು ದೇಹದ ಲಕ್ಷಣವೂ ಕೂಡ ಬ್ರಹ್ಮಾದಿಗಳಲ್ಲಿ ಅವರು ಭೂಮಿಯಲ್ಲಿ ಅವತರಿಸಿದಾಗ ತಾರತಮ್ಯಕ್ರಮದಿಂದ ಹೆಚ್ಚು ಹೆಚ್ಚಾಗಿ ವ್ಯತ್ಯಾಸ ಹೊಂದಬಹುದು. ಆದರೆ ಲಕ್ಷ್ಮಿಗೆ ದೇಹಲಕ್ಷಣವೂ ಭಕ್ತ್ಯಾದಿಗುಣವೂ ಎಲ್ಲರಿಗಿಂತ ಹೆಚ್ಚಾಗಿದ್ದು ಒಂದೇ ರೀತಿ ಇರುತ್ತದೆ. ಅದರಿಂದ ಅವಳು ಎಲ್ಲರಿಗಿಂತ ಹೆಚ್ಚಿನ ಭಕ್ತಳು. ಅವಳಿಗಿಂತ ವಿಷ್ಣುವಿಗೆ ಶಾಸ್ತ್ರದಲ್ಲಿ ಹೇಳಿದ ಹೇಳದಿದ್ದ ಎಲ್ಲ ಗುಣಗಳೂ ಹೆಚ್ಚು. ಇದರಲ್ಲಿ ಸಂಶಯವಿಲ್ಲ' ಎಂದು ತತ್ವನಿರ್ಣಯವೆಂಬ ಗ್ರಂಥದಲ್ಲಿ ಉಕ್ತವಾಗಿದೆ.

ಅದರಿಂದ ಭಾಗವತದಲ್ಲಿ 'ಪರಮಭಾಗವತಪ್ರಸಂಗಃ' ಎಂದರೆ ಬೇರೆ ಪರಮ ಭಗವದ್ಭಕ್ತರಲ್ಲಿ ಭಗವಂತನಿಗೆ ಆಸಕ್ತಿ ಎಂದರ್ಥವಲ್ಲ. ಲಕ್ಷ್ಮಿಯಲ್ಲಿಯೇ ಅವಳು ಪರಮಭಗವದ್ಭಕ್ತಳೆಂದು ಆಸಕ್ತಿ ತೋರುತ್ತಾನೆ ಎಂದರ್ಥ. ಅದರಿಂದ 'ನಾತ್ಯಾದ್ರಿಯತ್' ಎಂದರೆ ಕಾಮಾಸಕ್ತಿಯಿಂದ ಲಕ್ಷ್ಮಿಯನ್ನು ಹರಿ ಆದರಿಸುವುದಿಲ್ಲ ಸ್ವರಮಣನಾದ್ದರಿಂದ ಎಂದು ವ್ಯಾಖ್ಯಾನಿಸಬೇಕು.

* * *

ಶ್ರೀಹರಿ ಬ್ರಾಹ್ಮಣರ ಪ್ರಶಂಸೆಯನ್ನೇಕೆ ಮಾಡಬೇಕು ಎಂದರೆ ಬ್ರಾಹ್ಮಣರು ದೇವತಾರಾಧನರೂಪವಾದ ಧರ್ಮವನ್ನು ಲೋಕದಲ್ಲಿ ನಡೆಸಲೆಂದೇ ಈ ಚರಾಚರಪ್ರಪಂಚವನ್ನು ಶ್ರೀಹರಿ ಕಾಪಾಡುತ್ತಾನೆ. ಬ್ರಾಹ್ಮಣರಲ್ಲಿ ಸತ್ವಗುಣವನ್ನು ವೃದ್ಧಿಗೊಳಿಸಿ ಆ ಮೂಲಕ ಲೋಕದಲ್ಲಿ ರಜಸ್ಸು ತಮಸ್ಸುಗಳನ್ನು ನಿಯಂತ್ರಿಸುತ್ತಾನೆ ಎಂದು ಸನಕಾದಿಮುನಿಗಳು ಹೇಳುತ್ತಾರೆ

ಧರ್ಮಸ್ಯ ತೇ ಭಗವತಸ್ತ್ರಿಯುಗ ತ್ರಿಭಿಃ ಸ್ವೈಃ
ಪದ್ಭಿಶ್ಚರಾಚರಮಿದಂ ದ್ವಿಜದೇವತಾರ್ಥಮ್ ।
ನೂನಂ ಭೃತಂ ತದಭಿಘಾತಿ ರಜಸ್ತಮಶ್ಚ
ಸತ್ವೇನ ನೋ ವರದಯಾ ತನುವಾ ನಿರಸ್ಯ ॥ ೨೨ ॥

ಶ್ರೀಹರಿ, ಲೋಕಧಾರಕನಾದ ನಿನ್ನ ಅನಂತಾಸನ ವೈಕುಂಠ ಕ್ಷೀರಸಾಗರ ವಾಸಿಯಾದ ಮೂರು ರೂಪಗಳಿಂದ ನೀನು ಬ್ರಾಹ್ಮಣರು ದೇವತಾಕಾರ್ಯರೂಪ ಧರ್ಮ ನಡೆಸುವುದಕ್ಕಾಗಿ ಈ ಚರಾಚರವಿಶ್ವವನ್ನು ಕಾಪಾಡುತ್ತಿರುವಿ. ಆ ಧರ್ಮಕ್ಕೆ ನಾಶಕವಾದ ರಜಸ್ಸು ತಮಸ್ಸುಗಳನ್ನು ಕಪಿಲರೂಪದಿಂದ ಬ್ರಾಹ್ಮಣರಾದ ನಮ್ಮಲ್ಲಿ ಸತ್ವಗುಣವನ್ನು ಅಭಿವೃದ್ಧಿಪಡಿಸುವ ಮೂಲಕ ನಾಶ ಗೊಳಿಸುವಿ.

[೧]ಇಲ್ಲಿ ತಪಸ್ಸು ಶೌಚ ದಯಾ ಸತ್ಯ ಎಂಬ ನಾಲ್ಕುಪಾದಗಳುಳ್ಳ ಧರ್ಮವನ್ನು ಧರ್ಮಪದದಿಂದ ಇಟ್ಟುಕೊಂಡು, ಅದರ ತಪಸ್ಸು ಶೌಚ ದಯಾ ಈ ಮೂರು ಪಾದಗಳಿಂದ ಹರಿ ಚರಾಚರಪ್ರಪಂಚವನ್ನು ಕಾಪಾಡುತ್ತಾನೆ. ನಾಲ್ಕನೆಯ ಪಾದವಾದ ಸತ್ಯ ಕಲಿಯುಗದಲ್ಲಿಯೂ ಇರುವುದರಿಂದ ಅದರ ರಕ್ಷಣೆಯನ್ನು ಹೇಳಿ ಪ್ರಯೋಜನವಿಲ್ಲದಿರುವುದರಿಂದ ಅದನ್ನು ಬಿಟ್ಟು ಮೂರುಪಾದಗಳಿಂದ ಪ್ರಪಂಚರಕ್ಷಣೆಯನ್ನು ಹೇಳುತ್ತಿದ್ದಾರೆ. ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಮೂರು ಪಾದಗಳು ಕಲಿಯುಗದಲ್ಲಿಲ್ಲ. ಅವುಗಳಿಂದ ಲೋಕರಕ್ಷಣೆ ಹೇಳಬೇಕು. ಕಲಿಯುಗದಲ್ಲೂ ಇರುವ ಸತ್ಯವೆಂಬ ಪಾದದಿಂದ ಲೋಕರಕ್ಷಣೆ ಹೇಳಿ ಪ್ರಯೋಜನವಿಲ್ಲ! ಕಾರಣ ತಿಳಿಯದು.

ವಲ್ಲಭವ್ಯಾಖ್ಯಾನದಲ್ಲಿ ಕಲಿಯುಗದಲ್ಲಿ ಧರ್ಮವೇ ಇಲ್ಲ ಏಕೆಂದರೆ ಜ್ಞಾನವೈರಾಗ್ಯಗಳು, ಯಶಸ್ಸುಶ್ರೀಗಳು, ಐಶ್ವರ್ಯವೀರ್ಯಗಳೆಂಬ ಮೂರು ಪಾದಗಳಿಂದ ಕ್ರಮವಾಗಿ ಮೂರುಯುಗಗಳಲ್ಲಿ ಧರ್ಮರಕ್ಷಣೆ ಮಾಡುತ್ತಾನೆ. ಕಲಿಯುದಲ್ಲಿ ಧರ್ಮರಕ್ಷಣೆಗೆ ಭಗವಂತನಲ್ಲಿ ಬೇರೆ ಗುಣವಿಲ್ಲ. ಭಗವಾನ್ ಎಂದರೆ ಆರು ಗುಣಉಳ್ಳವನು ತಾನೆ? ಎಂದು ಹೇಳಿದೆ. ಭಗವಂತನಲ್ಲಿ ಬೇರೆ ಗುಣವಿಲ್ಲ, ಕಲಿಯುಗದಲ್ಲಿ ಧರ್ಮವೇ ಇಲ್ಲವೆನ್ನುವುದು ಅರ್ಥವಿಲ್ಲದ ಮಾತು.

---

೧. ಸತ್ಯಸ್ಯ ಧರ್ಮವಿಪ್ಲವೇಽಪಿ ಕಲಾವನುವರ್ತಮಾನತ್ವಾತ್ ತ್ರಿಭಿರಿತ್ಯುಕ್ತಂ ।
—ಶ್ರೀಧರಃ

ಕಲಾವನುವರ್ತಮಾನತ್ವಾತ್ ಅನುಗತತ್ವಾತ್ । ಸತ್ಯಸ್ಯ ಪ್ರತಿಯುಗೇ ನಾಶಾಭಾವಾತ್ ತೇನ ಪಾಲನಮನುಪಯುಕ್ತಮಿತಿ ತತ್ಕಥನೇ ನ ಕಿಂಚಿತ್ ಪ್ರಯೋಜನಮ್ । ಅತಸ್ತ್ರಿಭಿರಿತ್ಯುಕ್ತಂ । —ರಾಧಾರಮಣದಾಸಃ

ಯುಗತ್ರಯ ಏವ ಭಗವದಾವಿರ್ಭಾವೋ, ನ ಕಲೌ । ಅತ ಏವ ಕಲೌ ಧರ್ಮೋಽಪಿ ನಾಸ್ತಿ ರಕ್ಷಕಾಭಾವಾತ್ । ಯುಗತ್ರಯ ಏವ ಭಗವದಾವಿರ್ಭಾವೇ ತತ್ರೈವ ರಕ್ಷಾಯಾಂ ಚ ಹೇತುಮಾಹ ತ್ರಿಭಿಃ ಸ್ವೈಃ ಪದ್ಭಿರಿತಿ । ಷಡ್ಗುಣೇಷು ದ್ವಾಭ್ಯಾಂ ದ್ವಾಭ್ಯಾಂ ಏಕೈಕಸ್ಮಿನ್ ಯುಗೇ ಧರ್ಮರಕ್ಷಾ । ಜ್ಞಾನವೈರಾಗ್ಯಾಭ್ಯಾಂ ಸತ್ಯೇ । ಯಶಃಶ್ರೀಭ್ಯಾಂ ತ್ರೇತಾಯಾಂ । ಐಶ್ವರ್ಯವೀರ್ಯಾಭ್ಯಾಂ ದ್ವಾಪರೇ ಇತಿ ಕಲೌ ನ ಕೋಽಪ್ಯವಶಿಷ್ಯತೇ ಧರ್ಮೋ ಧರ್ಮರಕ್ಷಕಃ । —ವಲ್ಲಭಃ

[1]ಶುಕದೇವ ವ್ಯಾಖ್ಯಾನದಲ್ಲಿ 'ಸತ್ತ್ವೇನ' ಎಂದರೆ ಸತ್ಯ ಎಂಬ ಪಾದದಿಂದ ಯುಕ್ತವಾದ ಮೂರುಪಾದಗಳಿಂದ, ಅಂದರೆ ನಾಲ್ಕು ಪಾದಗಳಿಂದಲೂ ಲೋಕರಕ್ಷಣೆ ಮಾಡುತ್ತಾನೆ ಎಂದು ಹೇಳಿದೆ. ಉಳಿದ ವ್ಯಾಖ್ಯಾನಗಳಲ್ಲಿ 'ಸತ್ತ್ವೇನ' ಎಂದರೆ ಶುದ್ಧಸತ್ತ್ವಮಯವಾದ ಶರೀರದಿಂದ ಭಗವಂತ ಹುಟ್ಟಿ ರಜಸ್ಸು ತಮಸ್ಸುಗಳನ್ನು ನಾಶಪಡಿಸುವುದು ಅವುಗಳಿಗೆ ವಿರೋಧಿಯಾದ ಸತ್ವಗುಣವನ್ನು ಅಭಿವೃದ್ಧಿಗೊಳಿಸುವ ಮೂಲಕವೇ. ಶುಕದೇವ ವ್ಯಾಖ್ಯಾನದಲ್ಲಿ ಇದನ್ನು ಹೇಳದಿರುವುದು ನ್ಯೂನತೆ. 'ಸತ್ಯೇನ' ಎನ್ನದೆ 'ಸತ್ತ್ವೇನ' ಎನ್ನಲು ವಿಶೇಷಕಾರಣವೂ ಇಲ್ಲ. ನಾಲ್ಕುಪಾದಗಳಿಂದ ಎನ್ನದೆ ಸತ್ಯದಿಂದ ಯುಕ್ತವಾದ ಮೂರುಪಾದಗಳೆನ್ನುವುದೂ ಸ್ವರಸವಾಗುವುದಿಲ್ಲ. ಸ್ವರಸ ಸುಂದರ ವ್ಯಾಖ್ಯಾನ ಹೀಗೆ–

> ಧಾರಣಾದ್ ಭಗವಾನ್ ಧರ್ಮೋ
> ಯಮನಾದ್ ಯಮ ಉಚ್ಯತೇ । ಇತಿ ಶಬ್ದನಿರ್ಣಯೇ
> ಅನಂತಾಸನ ವೈಕುಂಠ ಕ್ಷೀರಸಾಗರಗೈಸ್ತ್ರಿಭಿಃ ।
> ರಕ್ಷಾಂ ಕರೋತಿ ಭಗವಾನ್ ಕಪಿಲಃ ಸತ್ತ್ವವರ್ಧನಾತ್ ।
> ಅಸತ್ತ್ವೋಽಪಿ ರಜಶ್ಚೈವ ತಮಶ್ಚಾಪಿ ನಿರಸ್ಯ ತು ।
> ಇತಿ ಮೂರ್ತಿಭೇದೇ ।
>
> ಕಪಿಲೋ ವರದಶ್ಚೈವ ವಿಕಲಶ್ಚೇತಿ ಕಥ್ಯತೇ ॥ ಇತಿ ಚ ।

ಅತಃ ಸತ್ತ್ವಸ್ಯ ಕರಣತ್ವಮಾತ್ರಂ । ಕಪಿಲೋ ವರದಾ ತನುಃ ।

'ಲೋಕದ ಧಾರಣಪೋಷಣಗಳನ್ನು ಮಾಡುವುದರಿಂದ ಧರ್ಮನೆಂದೂ ದುಷ್ಟರನ್ನು ನಿಯಂತ್ರಿಸುವುದರಿಂದ ಯಮನೆಂದೂ ಕರೆಸಿ ಕೊಳ್ಳುವವನು ಪರಮಾತ್ಮ, ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.' ಅನಂತಾಸನ ವೈಕುಂಠ ಕ್ಷೀರಸಾಗರಗಳಲ್ಲಿರುವ ಮೂರು ರೂಪಗಳಿಂದ ಶ್ರೀಹರಿ ಪ್ರಪಂಚದ ರಕ್ಷಣೆ ಮಾಡುತ್ತಾನೆ. ಭಗವಾನ್ ಕಪಿಲನು ಸತ್ವಗುಣಮಯಶರೀರ ರಹಿತನಾದರೂ ಬ್ರಾಹ್ಮಣರಲ್ಲಿ ಸತ್ವಗುಣವನ್ನು ಬೆಳೆಸಿ ರಾಜಸ ತಾಮಸ ಜನರನ್ನು ಆ ಮೂಲಕ ನಿಯಂತ್ರಣ ಮಾಡಿ ಜಗತ್ತನ್ನು ರಕ್ಷಿಸುತ್ತಾನೆ' ಎಂದು

---

೧. ಧರ್ಮಸ್ಯ ಧರ್ಮರೂಪಸ್ಯ ತೇ ತ್ರಿಭಿಃ ಸತ್ತ್ವೇನ ಸತ್ತ್ವಗುಣಜನ್ಯೇನ ಸತ್ಯೇನ ಸಹಿತೈಶ್ಚತುರ್ಭಿರಿತ್ಯರ್ಥಃ । ಸ್ವೈಃ ಸ್ವಾಸಾಧಾರಣೈಃ ತಪಃಶೌಚದಯಾಸತ್ಯೈಃ ಇದಂ ನೂನಂ ನಿಶ್ಚಿತಂ ಭೃತಂ ಪಾಲಿತಂ । –ಶುಕದೇವಃ

ಸತ್ತ್ವೇನ ಶುದ್ಧಸತ್ತ್ವಮಯೇನ ತನ್ವಾ ಮೂರ್ತ್ಯಾ । ಅವತಾರೈರಿತ್ಯರ್ಥಃ । ಸ್ವೇಚ್ಛೋಪಾತ್ತಾಪ್ರಾಕೃತದಿವ್ಯಮಂಗಲ ಶುದ್ಧಸತ್ತ್ವಮಯಮೂರ್ತ್ಯಾ । –ವೀರರಾಘವಃ

ಮೂರ್ತಿಭೇದ ಎಂಬ ಗ್ರಂಥದಲ್ಲಿ ಉಕ್ತವಾಗಿದೆ. 'ವರದ, ವಿಕಲ ಎಂದು ಕಪಿಲನಿಗೆ ಹೆಸರುಗಳಿ'ಂದೂ ಹೇಳಿದೆ. ಹೀಗೆ ವರದನೆಂಬ ಹೆಸರು ಕಪಿಲನಿಗಿದೆ ಎಂದೂ, ಸತ್ವವನ್ನು ಬೆಳೆಸುವ ಮೂಲಕ ಪರಮಾತ್ಮ ರಜಸ್ಸು ತಮಸ್ಸುಗಳನ್ನು ನಿಯಂತ್ರಿಸುವನೆಂದೂ ಹೇಳಿರುವುದರಿಂದ 'ಸತ್ವೇನ ನೋ ವರದಯಾ ತನುವಾ' ಎಂಬಲ್ಲಿ ಸತ್ವೇನ ಎಂದು ಸತ್ವಗುಣಕ್ಕೆ ರಜಸ್ತಮೋ ನಾಶ ಕಾರ್ಯದಲ್ಲಿ ಕರಣತ್ವಮಾತ್ರ ವಿವಕ್ಷಿತ ಹೊರತು 'ಸತ್ವೇನ ತನುವಾ' ಸತ್ವಾತ್ಮಕ ಶರೀರದಿಂದ ಎಂದಲ್ಲ. ವರದಾ ತನು ಎಂದರೆ ಕಪಿಲರೂಪವು ರಜಸ್ತಮೋನಾಶಕಾರ್ಯದಲ್ಲಿ ಕರ್ತೃ ಎಂದೂ ವಿವಕ್ಷಿತವಾಗಿದೆ.

* * *

ಶ್ರೀಹರಿ, ನೀನು ಬ್ರಾಹ್ಮಣಪ್ರಶಂಸೆ ಮಾಡದಿದ್ದರೆ ನಿನ್ನನ್ನೆ ಅನುಸರಿಸುವ ಲೋಕವು ಬ್ರಾಹ್ಮಣರನ್ನು ಕಡೆಗಣಿಸಿ ಧರ್ಮಮಾರ್ಗದಿಂದ ಭ್ರಷ್ಟವಾದೀತು. ಅದರಿಂದ ಪ್ರಶಂಸೆ ಮಾಡುವುದು ಯುಕ್ತವೇ.

ನ ತ್ವಂ ದ್ವಿಜೋತ್ತಮಕುಲಂ ಯದಿ ಹಾತ್ಮಗೋಪಂ
ಗೋಪ್ತಾ ವೃಷ ಸ್ವರ್ಹಣೇನ ಸುಸೂನೃತೇನ ।
ತರ್ಹ್ಯೇವ ನಂಕ್ಷ್ಯತಿ ಶಿವಸ್ತವ ದೇವ ಪಂಥಾ
ಲೋಕೋಽಗ್ರಹೀಷ್ಯದೃಷಭಸ್ಯ ಹಿ ಯತ್ ಪ್ರಮಾಣಮ್ ॥ ೨೩ ॥

ಶ್ರೀಹರಿ, ನಿನ್ನ ರಕ್ಷಣೆಯಲ್ಲಿಯೇ ಇರುವ ಬ್ರಾಹ್ಮಣಕುಲವನ್ನು ಪ್ರಶಂಸೆಯ ಮಾತುಗಳಿಂದ ಸತ್ಕಾರಗಳಿಂದ ನೀನು ರಕ್ಷಿಸದೇ ಹೋದರೆ ಆಗಲೇ ನಿನ್ನ ಅನುಗ್ರಹ ಸಂಪಾದಿಸುವ ಮಂಗಳಕರವಾದ ಶುದ್ಧಧರ್ಮಮಾರ್ಗ ಕೆಟ್ಟುಹೋಗುವುದು. ಏಕೆಂದರೆ ಜನರು ಧರ್ಮಪ್ರವರ್ತಕರ ಮಾತನ್ನೇ ಆದರಿಸುತ್ತಾರೆ. ಅವರ ಆಚಾರವನ್ನೇ ಶಿಷ್ಟಾಚಾರವೆಂದು ಪರಿಗ್ರಹಿಸುತ್ತಾರೆ.

[೧]ಇಲ್ಲಿ ವಲ್ಲಭವ್ಯಾಖ್ಯಾನದಲ್ಲಿ 'ಆತ್ಮಗೋಪಂ' ಎಂದರೆ ಧರ್ಮರೂಪನಾದ ಪರಮಾತ್ಮನನ್ನು ರಕ್ಷಿಸುವ ಬ್ರಾಹ್ಮಣಸಮೂಹ. ನಿನ್ನನ್ನು ಧರ್ಮಜ್ಞಾನಗಳ ಮೂಲಕ

೧. ಕುಲಮಾತ್ಮಗೋಪಂ, ಆತ್ಮಾನಂ ಸ್ವಾತ್ಮಾನಂ ವಾ ಭವಂತಂ ಗೋಪಾಯತೀತಿ । ಆತ್ಮಾ ಸ್ಥಿತಶ್ಚೇತ್ ಸ್ವಮಾರ್ಗೇ ಗಚ್ಛೇತ್ । ಅತ ಆತ್ಮಾ ಪ್ರಥಮತೋ ರಕ್ಷಣೀಯಃ । ತದನಂತರಂ ಸ್ವಮಾರ್ಗರಕ್ಷಾ । ಸ್ವಾತ್ಮಾನಂ ಪ್ರತಿ ಯೇ ಸಮಾಯಾಂತಿ ಯೇನ ಮಾರ್ಗೇಣ ಸ ಸ್ವಮಾರ್ಗಃ । ತತ್ರಾಪಿ ಭಕ್ತಾನಾಮಾಗಮನಪ್ರತಿಬಂಧಕನಿವೃತ್ತಿರೇವ ರಕ್ಷಾ । ತೇ ಚೇದ್ ಭವದ್ರಕ್ಷಕಾ ಭವೇಯುಃ ಧರ್ಮಜ್ಞಾನಯುಕ್ತಾಃ ಭಕ್ತಿಮಾರ್ಗಪ್ರವರ್ತಕಾಃ ತದಾ ತೇ ರಕ್ಷಣೀಯಾ ಇತ್ಯರ್ಥಃ – ವಲ್ಲಭಃ

ರಕ್ಷಿಸುವ ಬ್ರಾಹ್ಮಣರನ್ನು ನೀನು ರಕ್ಷಿಸಬೇಕು ಎಂದಿದೆ. ಆದರೆ ಪರಮಾತ್ಮ ಧರ್ಮರೂಪನಲ್ಲ, ಧರ್ಮರಕ್ಷಕ. ಸರ್ವಶಕ್ತ, ಅವನನ್ನು ಬ್ರಾಹ್ಮಣರು ರಕ್ಷಿಸುವ ಮಾತು ಅರ್ಥರಹಿತ. ಬ್ರಾಹ್ಮಣರು ಧರ್ಮರಕ್ಷಕರೆನ್ನುವ ಮಾತೂ ಅರ್ಥವಿಲ್ಲದ್ದು ಅದನ್ನು ಔಪಚಾರಿಕ ಮಾತೆನ್ನುವುದಾದರೆ ಆ ವಿಶೇಷಣ ವ್ಯರ್ಥ. ಅವನ ರಕ್ಷಣೆಯಲ್ಲಿಯೆ ಇರುವ ಬ್ರಾಹ್ಮಣಕುಲವನ್ನು ಅವನೇ ರಕ್ಷಿಸಬೇಕೆನ್ನುವುದೇ ವಿಶೇಷಣಕ್ಕೆ ಸಾರ್ಥಕ್ಯ ತರುವಂಥದ್ದು. ಉಳಿದ ವ್ಯಾಖ್ಯಾನಕಾರರು ಆತ್ಮನಿಂದ ಅಂದರೆ ನಿನ್ನಿಂದ ಗೋಪನೀಯ, ರಕ್ಷಿಸಲ್ಪಡಬೇಕಾದ್ದು ಎಂದು ತೃತೀಯಾ ತತ್ಪುರುಷ ಸಮಾಸ ತೋರಿಸಿದ್ದಾರೆ. 'ನಿನ್ನಿಂದ ನಾವು ರಕ್ಷಿಸಲ್ಪಡಬೇಕಾದವರು' ಎಂದು ಹೇಳಿದಂತಾಯಿತು. ಏಕೆ ಎಂದರೆ ನೀನೇ ನಮಗೆ ರಕ್ಷಕ ಎಂದು ತಾನೇ ಉತ್ತರಿಸಬೇಕು? ಅದರಿಂದ 'ಆತ್ಮೈವ ಗೋಪ್ತೋ ಯಸ್ಯ' ನೀನೇ ಯಾರಿಗೆ ರಕ್ಷಕನಾಗಿರುವಿಯೋ ಅವರು ಎಂದು ಬಹುವ್ರೀಹಿ ಸಮಾಸ ಮಾಡಿದರೆ ಹೆಚ್ಚು ಸ್ವಾರಸ್ಯವಿದೆ.

ಆತ್ಮೈವ ಗೋಪ್ತೋ ಯಸ್ಯ ತದಾತ್ಮಗೋಪಮ್ ।

ನೀನೇ ಯಾರಿಗೆ ರಕ್ಷಕನಾಗಿರುವೆಯೋ ಆ ಬ್ರಾಹ್ಮಣರ ಸಮೂಹ ಎಂದು 'ಆತ್ಮಗೋಪಂ' ಶಬ್ದದಲ್ಲಿ ಬಹುವ್ರೀಹಿ ಸಮಾಸವಿಟ್ಟುಕೊಳ್ಳಬೇಕು.

* * *

ಲೋಕದಲ್ಲಿ ಧರ್ಮಮಾರ್ಗ ಹಾಳಾದರೆ ಪರಮಾತ್ಮನಿಗೇನೂ ನಷ್ಟವಿಲ್ಲ. ಆದರೂ ಧರ್ಮಮಾರ್ಗ ಹಾಳಾಗಬಾರದು, ಲೋಕ ನಶಿಸಬಾರದೆಂದು ಅವನ ಸಂಕಲ್ಪ. ಅದಕ್ಕೆ ವಿರೋಧ ಬರುವುದರಿಂದ ಪರಮಾತ್ಮ ಧರ್ಮ ಹಾಳಾಗುವುದನ್ನು ಉಪೇಕ್ಷಿಸಬಾರದು ಎನ್ನುತ್ತಾರೆ ಸನಕಾದಿಮುನಿಗಳು–

ತತ್ ತೇಽನಭೀಷ್ಟಮಿವ ಸತ್ವನಿಧೇರ್ವಿಧಿತ್ಸೋಃ
ಕ್ಷೇಮಂ ಜನಾಯ ನಿಜಶಕ್ತಿಭಿರುದ್ಧೃತಾರೇಃ ।
ನೈತಾವತಾ ತ್ರ್ಯಧಿಪತೇಸ್ತವ ವಿಶ್ವಭರ್ತು–
ಸ್ತೇಜಃಕ್ಷತಿಸ್ತ್ವವನತಸ್ಯ ಸ ತೇ ವಿನೋದಃ ॥ ೨೪ ॥

ಬಲಜ್ಞಾನ ಪೂರ್ಣನಾದ ನೀನು ಲೋಕ ಕಲ್ಯಾಣವಾಗಲೆಂದು ಬಯಸಿ ನಿನ್ನ ಶಕ್ತಿಪೂರ್ಣವಾದ ರೂಪಗಳಿಂದ ಧರ್ಮವಿರೋಧಿಗಳನ್ನು ಅಣಗಿಸುವವನು. ಅದರಿಂದ ಧರ್ಮಮಾರ್ಗ ಹಾಳಾಗುವುದು ನಿನಗೆ ಇಷ್ಟವಿಲ್ಲ. ಅದರ ಸುಸ್ಥಿತಿಗಾಗಿ ನೀನು ಬ್ರಾಹ್ಮಣರಿಗೆ ಸತ್ಕಾರ ಮಾಡಿದರೆ ಅದು ನಿನಗೆ ಅಗೌರವ ತರುವುದೂ ಇಲ್ಲ. ಏಕೆಂದರೆ ನಿನಗೆ ಅದೊಂದು ಲೀಲೆ ಎನಿಸುತ್ತದೆ.

[೧]ಇಲ್ಲಿ 'ತತ್ ತೇ ಅನಭೀಷ್ಟಮಿವ' ಧರ್ಮಮಾರ್ಗ ಹಾಳಾಗುವುದು ಅನಿಷ್ಟದಂತೆಯೇ ಹೊರತು ಅನಿಷ್ಟವಲ್ಲ, ಇಷ್ಟವೇ ಎಂದು ವಿರುದ್ಧಾರ್ಥಪ್ರತೀತಿಗೆ ಅವಕಾಶವಿದೆ. ಧರ್ಮಮಾರ್ಗ ಹಾಳಾಗುವುದು ಪರಮಾತ್ಮನಿಗೆ ಇಷ್ಟವಾಗಲಾರದು. ವಲ್ಲಭವ್ಯಾಖ್ಯಾನದಲ್ಲಿ ಅದೂ ಪರಮಾತ್ಮನಿಗೆ ಇಷ್ಟ ಎನ್ನಲಾಗಿದೆ. ಏಕೆಂದರೆ ಅವನು ಕಾಲರೂಪ. ಕಾಲ ಸರ್ವನಾಶಕ ಎನ್ನುತ್ತಾರೆ. ವಸ್ತುತಃ ನಾಶಕಾಲ ಬಂದಾಗ ನಾಶ ಕಾಲರೂಪನಿಗೆ ಇಷ್ಟವಾಗಲಿ. ಈಗಲೇ ನಾಶವಾಗುವುದು ಹೇಗೆ ಇಷ್ಟವಾದೀತು? ಶ್ರೀಧರವ್ಯಾಖ್ಯಾನದಲ್ಲಿ 'ಅನಭೀಷ್ಟಮಿವ' ಎಂದು ಇವಶಬ್ದ ಲೋಕೋಕ್ತಿ ಎಂದರೆ ಅಜ್ಞಜನರ ದೃಷ್ಟಿಯಿಂದ ಹೇಳಿದ್ದು. ಅಜ್ಞರಿಗೆ ಧರ್ಮಹಾಳಾಗುವುದು ಅನಿಷ್ಟವೇನಲ್ಲ. ಜ್ಞಾನಿಗಳಿಗೆ ಅದು ಅನಿಷ್ಟವೇ ಎನ್ನುವುದು ವಿವಕ್ಷಿತ ಎಂದಿದೆ. ಹೀಗೆ ರಾಧಾರಮಣ, ವಿಶ್ವನಾಥವ್ಯಾಖ್ಯಾನಗಳೂ ಹೇಳಿವೆ. ವೀರರಾಘವ ಶುಕದೇವ ವ್ಯಾಖ್ಯಾನಗಳಲ್ಲಿ ಇವಶಬ್ದಕ್ಕೆ ಏವಕಾರಾರ್ಥ. ಅನಭೀಷ್ಟವೇ ಎಂದರ್ಥ ಎಂದಿದೆ. ವಸ್ತುತಃ ಧರ್ಮ ನಶಿಸುವುದು ಅಸುರಪ್ರಾಬಲ್ಯ ಹೆಚ್ಚುವುದು ಪರಮಾತ್ಮನಿಗೆ ಇಷ್ಟವಲ್ಲ. ಆದರೂ ಅನಭೀಷ್ಟಮಿವ ಎಂದು ಇವಶಬ್ದ ಇಟ್ಟಿರುವುದು ಅಸುರರ ಪ್ರಾಬಲ್ಯ ಹೆಚ್ಚಿದರೆ ಪರಮಾತ್ಮನಿಗೆ ಏನೂ ಅಪಾಯವಿಲ್ಲ, ಸಜ್ಜನರಿಗೆ ಮಾತ್ರ ಅಪಾಯ ಎಂಬ ಅಭಿಪ್ರಾಯದಿಂದ.

ಅಸುರಾ ಅಪ್ರಿಯಾಶ್ಚಾಪಿ ನಿತ್ಯಾನಂದಾನ್ನ ಲೋಕವತ್ ।
ನಿಷೇಧ್ಯಬುದ್ಧಿವಿಷಯಮಪ್ರಿಯಂ ಹಿ ಹರೇರ್ಮತಮ್ ॥

ಇತಿ ಚ ॥

ತಸ್ಮಾದನಭೀಷ್ಟಮಿವ ।

'ಅಸುರರು ಪರಮಾತ್ಮನಿಗೆ ಅಪ್ರಿಯರಾದರೂ, ಲೋಕದಲ್ಲಿ ತಮಗೆ ಅಪಾಯಕಾರಿಗಳು ತಮಗೆ ಹೇಗೆ ಅಪ್ರಿಯರೆನಿಸುವರೋ ಹಾಗೆ ಪರಮಾತ್ಮನಿಗೆ ಅಲ್ಲ. ಏಕೆಂದರೆ ಅವನ

---

೧. ಪೂರ್ವಶ್ಲೋಕೇ ವೇದಮಾರ್ಗನಾಶ ಉಕ್ತಃ । ಅತಸ್ತದ್ ವೇದನಾಶನಂ ತೇಽನಭೀಷ್ಟಮಿವ । ಸರ್ವಥಾಽಭೀಷ್ಟಾಭಾವೋಽನಭೀಷ್ಟಂ । ಅಲ್ಪಾಭೀಷ್ಟಾಬಾವಸ್ತ್ವನಭೀಷ್ಟಮಿವ । ಪ್ರಥಮಪಕ್ಷೇ ರಕ್ಷಾ ಏವಾರ್ಥಃ । ದ್ವಿತೀಯೇ ನಾಶಃ । ಕಾಲತ್ವಾತ್ ಸರ್ವಕರ್ತೃತ್ವಾಚ್ಚ । —ವಲ್ಲಭಃ

ಕಾಲತ್ವಾತ್ ರಕ್ಷಾನಭೀಷ್ಟಾ । ಸರ್ವಕರ್ತೃತ್ವಾತ್ ನಾಶೋಽನಭೀಷ್ಟ ಇತ್ಯರ್ಥಃ —ಪುರುಷೋತ್ತಮಃ

ಇವೇತಿ ಲೋಕೋಕ್ತಿಃ । —ಶ್ರೀಧರಃ

ಇವಶಬ್ದ ಏವಾರ್ಥೇ । —ಶುಕದೇವಃ

ಆನಂದ ನಿತ್ಯ. ಹಾಗಾದರೆ ಅಸುರರು ಅಪ್ರಿಯರೇಕೆ ಎಂದರೆ ಇಲ್ಲಿ 'ಅಪ್ರಿಯ' ಶಬ್ದಕ್ಕೆ 'ಇದು ಬೇಡ' ಎನಿಸಿದ್ದೆಂದು ಮಾತ್ರ ಅರ್ಥ. ಸಜ್ಜನರಿಗೆ ಅಪಾಯಕಾರಿಗಳಾಗಿ ಅಸುರರು ಬೆಳೆಯುವುದು ಬೇಡ ಎಂದು ಪರಮಾತ್ಮ ಇಚ್ಛಿಸುತ್ತಾನೆ' ಎಂದೂ ಹೇಳಿದೆ. ಅದರಿಂದ ಧರ್ಮಮಾರ್ಗನಾಶ ಹರಿಗೆ ಅಪ್ರಿಯದಂತೆ ಎನ್ನಲಾಗಿದೆ.

* * *

ಜಯವಿಜಯರು ಪರಮಾತ್ಮನ ಪ್ರೀತಿಯ ದ್ವಾರಪಾಲಕರು. ಅವರಿಗೆ ಶಾಪಕೊಟ್ಟು ನಾವು ಪರಮಾತ್ಮನಲ್ಲಿ ಅಪರಾಧಿಗಳಾದೆವೆ? ಎಂದು ಆತಂಕಗೊಂಡ ಸನಕಾದಿಗಳನ್ನು ಸಂತೈಸಿ ಶಾಪವನ್ನು ಜಯವಿಜಯರು ಅನುಭವಿಸಿ ಬೇಗನೆ ಹಿಂತಿರುಗಲಿ ಎನ್ನುತ್ತಾನೆ ಶ್ರೀಹರಿ.

ಶ್ರೀಭಗವಾನುವಾಚ–

ಏತೌ ಸುರೇತರಗತಿಂ ಪ್ರತಿಪದ್ಯ ಸದ್ಯಃ
ಸಂರಂಭಸಂಭೃತಸಮಾಧ್ಯನುಬದ್ಧಯೋಗೌ ।
ಭೂಯಃ ಸಕಾಶಮುಪಯಾಸ್ಯತ ಆಶು ಯೋ ವಃ
ಶಾಪೋ ಮಯ್ಯೈವ ವಿಹಿತಸ್ತದವೈತ ವಿಪ್ರಾಃ ॥ ೨೬ ॥

ಶ್ರೀಭಗವಂತ ನುಡಿದ–

ಈ ಜಯವಿಜಯರು ಅಸುರರಾಗಿ ಹುಟ್ಟಿ ಹೊರ ಮನಸ್ಸಿನಲ್ಲಿ ತೀವ್ರ ದ್ವೇಷವಿಟ್ಟುಕೊಂಡರೂ ಒಳ ಮನಸ್ಸಿನಲ್ಲಿ ಏಕಾಗ್ರತೆಯಿಂದ ನನ್ನನ್ನೇ ಧ್ಯಾನಿಸುತ್ತ ನನ್ನ ಬಳಿಗೇ ಬರುತ್ತಾರೆ. ಏಕೆಂದರೆ ಅಪರಾಧಿಗಳಾದ ಅವರಿಗೆ ನೀವು ಶಾಪ ಕೊಟ್ಟಿದ್ದು ನನ್ನ ಪ್ರೇರಣೆಯಿಂದಲೇ. ಇದನ್ನು ತಿಳಿದುಕೊಳ್ಳಿ. ಆತಂಕ ಪಡಬೇಡಿ.

ಇಲ್ಲಿ 'ಸಂರಂಭ'ದಿಂದ ಅಂದರೆ ಮಹಾಕ್ರೋಧದಿಂದ ಏಕಾಗ್ರಚಿತ್ತತೆ ಸಂಪಾದಿಸಿ ಭಗವಂತನ ಬಳಿಗೆ ಜಯವಿಜಯರು ಬರುತ್ತಾರೆ ಎಂದಿದೆ. ಆದರೆ ಭಗವಂತನಲ್ಲಿ ಕ್ರೋಧ ಮಾಡಿದರೆ 'ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ' ಎಂದು ಭಗವದ್ಗೀತೆಯಲ್ಲಿ ಕೃಷ್ಣನೇ ಹೇಳಿದಂತೆ ಜಯವಿಜಯರಿಗೆ ಭಗವಂತನ ಪ್ರಾಪ್ತಿಯೆ ಇಲ್ಲವಾದೀತು. ಈ ಪ್ರಶ್ನೆಗೆ ಶ್ರೀಧರ, ವೀರರಾಘವ, ಶುಕದೇವ ವಲ್ಲಭ ವ್ಯಾಖ್ಯಾನಕಾರರೆಲ್ಲರೂ ಭಗವಂತನಲ್ಲಿ ಏಕಾಗ್ರಚಿತ್ತತೆ ಬೇಕು. ಅದು ಕ್ರೋಧದಿಂದ ಬಂದರೂ ಸರಿಯೆ, ಸಕಲಪಾಪ ಪರಿಹಾರವಾಗಿ ಭಗವತ್ಪ್ರಾಪ್ತಿ ಅವಶ್ಯ ಆಗುತ್ತದೆ ಎನ್ನುತ್ತಾರೆ. ಇದು ಗೀತಾವಚನಕ್ಕೆ ವಿರುದ್ಧವಾದುದು. ಅದಕ್ಕೆ ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ಮೊದಲಿಗೆ ಕ್ರೋಧದಿಂದ ಏಕಾಗ್ರಚಿತ್ತತೆ, ಬಳಿಕ ಭಕ್ತಿಯೋಗ. ಅದರಿಂದ ಭಗವತ್ಪ್ರಾಪ್ತಿ ಎಂದಿದೆ. ಆದಗೆ ಹಿರಣ್ಯಕಶಿಪು ಮುಂತಾದವರು

ಸಾಯುವವರೆಗೂ ದ್ವೇಷವನ್ನೇ ಮಾಡಿದ್ದಾರೆ ಹೊರತು ಪಶ್ಚಾತ್ತಾಪದಿಂದ ಎಂದೂ ಭಕ್ತಿ ಮಾಡಿದ್ದಿಲ್ಲ.

[1]ಶ್ರೀಧರ ಜೀವಗೋಸ್ವಾಮಿ, ಶುಕದೇವ, ವಿಶ್ವನಾಥವ್ಯಾಖ್ಯಾನಗಳಲ್ಲಿ 'ಜಯವಿಜಯರಿಗೆ ಪರಮಾತ್ಮನಲ್ಲಿ ಎಂದೂ ಕ್ರೋಧವಿರಲಿಲ್ಲ. ಪರಮಾತ್ಮನಿಗೆ ಯುದ್ಧರಸದ ಆನಂದ ನೀಡುವ ಅಭಿಲಾಷೆಯಿಂದ ಅವರು ಪ್ರಾರ್ಥಿಸಿದಾಗ, ಅದು ತನಗೆ ಬೇಕಾಗಿದ್ದರಿಂದ ಒಪ್ಪಿ, ಶುದ್ಧಸತ್ವರಾದ ಅವರಿಂದ ಸನಕಾದಿಗಳಲ್ಲಿ ಅಪರಾಧ ಮಾಡಿಸಿದ್ದು, ಆತ್ಮಾರಾಮರಾದ ಸನಕಾದಿಗಳಿಗೆ ಕೋಪ ಬರಿಸಿ ಶಾಪಕೊಡಿಸಿದ್ದು ಹರಿಯೇ, ಅದರಿಂದ ಜಯವಿಜಯರು ಕ್ರೋಧದ್ವೇಷಗಳಿಗೊಳಗಾದರೂ ಅದು ತೋರಿಕೆಗೆ ಮಾತ್ರ ಅದರಿಂದ ಅದು ಭಗವತ್ಪ್ರಾಪ್ತಿಗೆ ಪ್ರತಿಬಂಧಕವಲ್ಲ. ಅದು ಪರಮಾತ್ಮನ ಇಚ್ಛೆಯಿಂದಲೇ ಆದುದು' ಎಂದಿದೆ. ಆದರೆ ಇದು ಸರಿಯಲ್ಲ. ಅಸುರಾವೇಶದಿಂದ ಆಗಾಗ ಲಕ್ಷ್ಮೀಬ್ರಹ್ಮಾದಿಗಳಲ್ಲಿಯೂ ಜಯವಿಜಯರು ಅಪರಾಧ ಮಾಡಿ ಬ್ರಹ್ಮಶಾಪಕ್ಕೀಡಾಗಿದ್ದಾರೆ. ಲಕ್ಷ್ಮಿಯ ಶಾಪವೂ ಇದೆ. ಬ್ರಾಹ್ಮಣಶಾಪ ಎಲ್ಲಕ್ಕಿಂತ ಮಿಗಿಲಾದುದೆಂದು ಲೋಕಕ್ಕೆ ತೋರಿಸಲೆಂದೇ ಹರಿ ಕಾದಿದ್ದ.

---

೧. ಇದಮತ್ರ ತತ್ವಂ । ಯದ್ಯಪಿ ಸನಕಾದೀನಾಂ ಕ್ರೋಧೋ ನ ಸಂಭವತಿ । ನ ಚ ಭಗವತ್ಪಾರ್ಷದಯೋರ್ಬ್ರಾಹ್ಮಣಪ್ರಾತಿಕೂಲ್ಯಂ । ನ ಚ ಭಗವತಃ ಸ್ವಭಕ್ತೋಪೇಕ್ಷಾ । ನ ಚ ವೈಕುಂಠಗತಾನಾಂ ಪುನರ್ಜನ್ಮ । ತಥಾಪಿ ಭಗವತಃ ಸಿಸೃಕ್ಷಾದಿವತ್ ಕದಾಚಿದ್ ಯುಯುತ್ಸಾಸಮಜನಿ । ತದಾಽನ್ಯೇಷಾಮಲ್ಪಬಲತ್ವಾತ್ ಸ್ವಪಾರ್ಷದಾನಾಂ ತುಲ್ಯಬಲತ್ವೇಽಪಿ ಪ್ರಾತಿಪಕ್ಷ್ಯಾನುಪಪತ್ತೇರೇತಾವೇವ ಬ್ರಾಹ್ಮಣನಿವಾರಣೇ ಪ್ರವರ್ತ್ಯ ತೇಷು ಚ ಕ್ರೋಧಮುದ್ದೀಪ್ಯ ತಚ್ಛಾಪ ವ್ಯಾಜೇನ ಪ್ರತಿಪಕ್ಷೌ ವಿಧಾಯ ಯುದ್ಧಕೌತುಕಂ ಸಂಪಾದನೀಯಮಿತಿ ಭಗವತೈವ ವ್ಯವಸಿತಂ । ಅತಃ ಸರ್ವಂ ಸಂಗಚ್ಛತೇ । —ಶ್ರೀಧರಃ

ಪೂರ್ವಂ ಸಂರಂಭೇಣ ಸಮಾಧಿಃ । ಪಶ್ಚಾದ್ ಯೋಗೋ ಭಕ್ತಿಯೋಗಃ ಯಃ ಸ್ವಾಭಾವಿಕಃ । —ಜೀವಗೋಸ್ವಾಮೀ

ಜಯವಿಜಯಯೋರೇವ ಪ್ರೇಮವಿಜೃಂಭಿತಾ ಕಾಚಿದಿಚ್ಛಾ । ಸಾ ಚ ಭೋಃ ಪ್ರಭುವರ, ಅನ್ಯತ್ರಾಲ್ಪಬಲತ್ವಾತ್ ಅಸ್ಮಾಸು ಪ್ರಾತಿಕೂಲ್ಯಾಭಾವಾತ್ ಯದಿ ತತ್ರ ಭವತೋ ಯುಯುತ್ಸಾಸುಖಂ ನ ಸಂಪದ್ಯತೇ ತದಾ ಆವಾಮೇವ ಕೇನಾಪಿ ಪ್ರಕಾರೇಣ ಪ್ರತಿಕೂಲೀಕೃತ್ಯ ತದ್ಯುದ್ಧಸುಖಮನುಭೂಯತಾಂ ಇತ್ಯಾವ ಯೋಸ್ತ್ವತ್ಸರ್ವಸುಖಪರಿಪೂರ್ಣತಾಯಾಮಣುಮಾತ್ರಮಪಿ ನ್ಯೂನತ್ವಮ ಸಹಮಾನಯೋಃ ಕಿಂಕರಯೋಃ ಪ್ರಾರ್ಥನಾಹತಃ ಸ್ವಭಕ್ತವಾತ್ಸಲ್ಯಗುಣಮಪಿ ಲಘೂಕೃತ್ಯ ನಿಷ್ಪಾದ್ಯತಾಂ ಇತಿ । —ವಿಶ್ವನಾಥಃ ।

ಅದರಿಂದ ಹಿರಣ್ಯಾಕ್ಷ ಹಿರಣ್ಯಕಶಿಪುಗಳಲ್ಲಿರುವ ಕ್ರೋಧಭಾವ ಹರಿಗೆ ಪ್ರಿಯವಲ್ಲ. ಆದರೂ ಜಯವಿಜಯರು ಭಗವಂತನ ಬಳಿಗೇ ಬರುತ್ತಾರೆ ಹೇಗೆ? ಈ ಸಮಸ್ಯೆಗೆ ಜೀವದ್ವಯಾವೇಶವನ್ನು ಒಪ್ಪುವುದೇ ಸರಿಯಾದ ಪರಿಹಾರ. ಆವಿಷ್ಟನಾದ ಅಸುರ ದ್ವೇಷ ಮಾಡಿ ನರಕ ಹೊಂದುತ್ತಾನೆ. ಅದೇ ಕಾಲದಲ್ಲಿ ಅಂತರಂಗದಲ್ಲಿ ಭಕ್ತಿ ಮಾಡಿ ಜಯವಿಜಯರು ಭಗವಂತನನ್ನು ಹೊಂದುತ್ತಾರೆ. ಹೊರಗೆ ಅಸುರರ ದ್ವೇಷ. ಒಳಗೆ ಜಯವಿಜಯರ ಭಕ್ತಿ. ಹಾಗೇ ಜಯವಿಜಯರಲ್ಲಿಯೂ ಅವರ ಹೊರಗಿನ ಜಡಮನಸ್ಸಿನಲ್ಲಿ ಅಸುರಸಂಪರ್ಕದಿಂದ ದ್ವೇಷ. ಒಳಗಿನ ಜೀವಸ್ವರೂಪಭೂತವಾದ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಭಕ್ತಿ. ಇಂಥ ಪ್ರಸಂಗಗಳಲ್ಲಿ ಹರಿಯು ಹೊರಗಿನ ದ್ವೇಷವನ್ನು ಕಡೆಗಣಿಸಿ ಒಳಗಿನ ಭಕ್ತಿಯನ್ನೇ ಪುರಸ್ಕರಿಸುತ್ತಾನೆ.

ಅಂತರ್ಭಕ್ತಾ ಬಹಿಃಕ್ರುದ್ಧಾ ಹಿರಣ್ಯಾದ್ಯಾ ಹರಿಂ ಪ್ರತಿ ।
ಸರ್ವಕ್ರುದ್ಧಾಃ ಶಂಬರಾದ್ಯಾ ಅಂತಃ ಕ್ರೋಧವಶಾಸ್ತಥಾ ॥

ಇತಿ ಚ ॥

ಹಿರಣ್ಯಕಶಿಪು, ಬಲಿಚಕ್ರವರ್ತಿ ಮುಂತಾದವರು ಭಗವಂತನಲ್ಲಿ ಒಳಗಿನ ಸ್ವರೂಪ ಮನಸ್ಸಿನಲ್ಲಿ ಭಕ್ತರು, ಹೊರಗಿನ ಜಡಮನಸ್ಸಿನಲ್ಲಿ ಕ್ರೋಧದಿಂದ ತುಂಬಿದವರು. ಶಂಬರಾಸುರ ಮುಂತಾದವರು ಸ್ವರೂಪಮನಸ್ಸು ಜಡಮನಸ್ಸುಗಳೆರಡರಲ್ಲಿಯೂ ಕ್ರೋಧದಿಂದ ತುಂಬಿದವರು. ಕ್ರೋಧವಶದೈತ್ಯರು ಸ್ವರೂಪಮನಸ್ಸಿನಲ್ಲಿ ಕ್ರೋಧದಿಂದ ತುಂಬಿದವರು, ಹೊರಗಿನ ಜಡಮನಸ್ಸಿನಲ್ಲಿ ಭಕ್ತರು. ಎಂದೂ ಹೇಳಿದೆ.

* * *

ಬಳಿಕ ಸನಕಾದಿ ಮುನಿಗಳು ಶ್ರೀಹರಿಯನ್ನು ನಮಸ್ಕರಿಸಿ ಅವನಿಂದ ಅನುಜ್ಞೆ ಪಡೆದು ವೈಕುಂಠದಿಂದ ಹಿಂದಿರುಗಿ ಬರುತ್ತ ಶ್ರೀಹರಿಯ ಅನುಪಮ ಸೌಂದರ್ಯವನ್ನೇ ಪ್ರಶಂಸೆ ಮಾಡುತ್ತಾರೆ.

ಭಗವಂತಂ ಪರಿಕ್ರಮ್ಯ ಪ್ರಣಿಪತ್ಯಾನುಮಾನ್ಯ ಚ ।
ಪ್ರತಿಜಗ್ಮುಃ ಪ್ರಮುದಿತಾಃ ಶಂಸಂತೋ ವೈಷ್ಣವೀಂ ಶ್ರಿಯಮ್ ॥ ೨೮ ॥

ಮುನಿಗಳು ಭಗವಂತನಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಅವನ ಅಪ್ಪಣೆ ಪಡೆದು ಪರಮಾನಂದಭರಿತರಾಗಿ ಅವನ ಸ್ವರೂಪಸೌಂದರ್ಯವನ್ನೇ ಹೊಗಳುತ್ತ ಹಿಂತಿರುಗಿದರು.

[1]ಇಲ್ಲಿ 'ವೈಷ್ಣವೀಂ ಶ್ರಿಯಂ' ಎಂದರೆ ವಿಷ್ಣುವಿನ ಸಂಪತ್ತನ್ನು ಸನಕಾದಿಗಳು ಹೊಗಳುತ್ತ ವೈಕುಂಠದಿಂದ ಹಿಂತಿರುಗಿದರು ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಾರೆ. ವಿಷ್ಣುವಿನ ಸಂಪತ್ತೆಂದರೆ ಹಿಂದೆ ವೈಕುಂಠ ಲೋಕದಲ್ಲಿ ವರ್ಣಿತವಾದ ಸಂಪತ್ತೆಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಭಗವಂತನಿಗಿಂತಲೂ ಅವನ ಲೋಕದ ಸಂಪತ್ತೇ ಹೆಚ್ಚಿನದೆಂದು ಮುನಿಗಳು ಹೊಗಳುತ್ತಾರೆಯೆ? ಅದನ್ನು ಬ್ರಹ್ಮಾನಂದಕ್ಕಿಂತ ಹೆಚ್ಚಿನದೆಂದು ಅವರು ಹೊಗಳುತ್ತಾರೆ ಎಂದು ರಾಧಾರಮಣವ್ಯಾಖ್ಯಾನ. ಏಕೆ ಎಂದು ಹೇಳಿಲ್ಲ. ಶಾಂತಿ ಪ್ರಸನ್ನತೆಗಳು ವಿಷ್ಣುವಿನ ಸಂಪತ್ತು ಎಂದು ವಲ್ಲಭ ವ್ಯಾಖ್ಯಾನ ಹೇಳುತ್ತದೆ. ಅದಕ್ಕೆ ಪ್ರಮಾಣ ಏನೆಂದು ಹೇಳಿಲ್ಲ. ಸೌಂದರ್ಯವೆಂದು ಅರ್ಥವಿಟ್ಟುಕೊಳ್ಳಬೇಕು. ಲಕ್ಷ್ಮಿಗಿಂತಲೂ ಅನಂತ ಪಾಲು ಮಿಗಿಲಾದ ಭಗವಂತನ ಸೌಂದರ್ಯವನ್ನು ಮುನಿಗಳು ಹೊಗಳುತ್ತ ಹೋದರು ಎಂದು ಹೇಳಿದಂತಾಗುತ್ತದೆ.

ಸ್ವರೂಪಶ್ರೀಸ್ತಥಾ ಭಾರ್ಯಾ ದ್ವೇಧಾ ಶ್ರೀಸ್ತು ಹರೇರ್ಮತಾ ।
ಇತಿ ಚ ॥

ಹರಿಯ ಶ್ರೀ ಎಂದರೆ ಅವನ ಸ್ವರೂಪಸೌಂದರ್ಯ ಮತ್ತು ಅವನ ಪತ್ನಿಯಾದ ಲಕ್ಷ್ಮಿ ಎಂದು ಎರಡು ವಿಧ.(ತುಶಬ್ದದಿಂದ) ಅವನ ಸ್ವರೂಪಸೌಂದರ್ಯ ಲಕ್ಷ್ಮಿಯ ಸೌಂದರ್ಯಕ್ಕಿಂತ ಅಧಿಕ ಎಂದೂ ಹೇಳಿದೆ.

* * *

ನಿಮಗೆ ಅಪರಾಧಕ್ಕಿಂತ ಹೆಚ್ಚಿನ ದಂಡನೆಯಾಯಿತೆಂದು ತಿಳಿಯಬೇಡಿ. ನೀವು ಇದೇ ರೀತಿ ಲಕ್ಷ್ಮಿಯನ್ನೂ ಬಾಗಿಲಲ್ಲಿ ತಡೆದಿರುವಿರಿ. ಆದರೂ ಶಾಪವನ್ನು ಅನುಭವಿಸಿ ಬೇಗನೇ ಹಿಂತಿರುಗಿ ಬನ್ನಿರಿ ಎಂದು ಶ್ರೀಹರಿ ಜಯವಿಜಯರಿಗೆ ಆಜ್ಞೆ ಮಾಡುತ್ತಾನೆ–

ಮಯಿ ಸಂರಂಭಯೋಗೇನ ನಿಸ್ತೀರ್ಯ ಬ್ರಹ್ಮಹೇಲನಮ್ ।
ಪ್ರತ್ಯೇಷ್ಯತಂ ನಿಕಾಶಂ ಮೇ ಕಾಲೇನಾಲ್ಪೀಯಸಾ ಪುನಃ ॥ ೩೧ ॥

ನನ್ನಲ್ಲಿ ದ್ವೇಷಸಹಿತವಾದ ಭಕ್ತಿಯೋಗದಿಂದ ಬ್ರಾಹ್ಮಣಾಪರಾಧ ದೋಷವನ್ನು ಪರಿಹರಿಸಿಕೊಂಡು ಬೇಗನೆ ಹಿಂತಿರುಗಿ ಬನ್ನಿ.

೧. ವೈಷ್ಣವೀಂ ಶ್ರಿಯಂ ವೈಕುಂಠೇ ವರ್ಣಿತಾಂ । –ಶ್ರೀಧರಃ

ಶಂಸಂತಃ ಪ್ರಶಂಸಂತ ಇತಿ ತತ್ಸಂಪತ್ತೇರ್ಬ್ರಹ್ಮಾನಂದತೋಽಪಿ ವೈಶಿಷ್ಟ್ಯಂ ವ್ಯಂಜಿತಂ । –ರಾಧಾರಮಣಃ

ವೈಷ್ಣವೀಂ ಶ್ರಿಯಮಿತಿ ಶಾಂತಿಪ್ರಸಾದಲಕ್ಷಣಾಂ । –ವಲ್ಲಭಃ

[1]ಇಲ್ಲಿ ದ್ವೇಷಿಗಳಿಗೆ ಭಕ್ತಿಯಿಂದ ಪಾಪ ಪರಿಹಾರ ಹೇಗೆ ಸಾಧ್ಯ ಎಂಬ ಪ್ರಶ್ನೆ ಬರುತ್ತದೆ. ಬೇರೆ ವ್ಯಾಖ್ಯಾನಕಾರರು ಇದು ಸಾಧ್ಯ ಎನ್ನುತ್ತಾರೆ. ವೀರರಾಘವ ವ್ಯಾಖ್ಯಾನದಲ್ಲಿ ದ್ವೇಷದಿಂದಲೂ ನಿರಂತರ ಧ್ಯಾನಮಾಡಿದರೆ ಪಾಪ ಪರಿಹಾರವಾಗುತ್ತದೆ ಎಂದಿದೆ.

ವಿಶ್ವನಾಥ ಜೀವಗೋಸ್ವಾಮಿ ರಾಧಾರಮಣ ಮುಂತಾದ ವ್ಯಾಖ್ಯಾನಪ್ರಕಾರ ದ್ವೇಷ ಹಿಂದೆ ಹೇಳಿದಂತೆ ತೋರಿಕೆಗೆ ಮಾತ್ರ. ದುಃಖಫಲಭೋಗವೂ ನಟನೆ. ಹಾಗಾದರೆ ಲಕ್ಷ್ಮೀಶಾಪವೃಂತಾಂತಕ್ಕೆ ಏನು ಗತಿ ಎಂದರೆ ಅದನ್ನು ಹೇಳುವ ಶ್ಲೋಕವಿಲ್ಲ ಮೂಲಕೋಶಗಳಲ್ಲಿ ಕಂಡು ಬಂದರೂ 'ವಿಗೀತ' ವಿವಾದಗ್ರಸ್ತವಾಗಿದೆ ಅಸಾಂಪ್ರದಾಯಿಕವಾಗಿದೆ. ಪ್ರಕ್ಷಿಪ್ತವೆಂದಿಟ್ಟುಕೊಳ್ಳಬೇಕು. ಗುರ್ಜರದೇಶದಲ್ಲಿ ಮಾತ್ರ ಅದು ಶ್ರೀಧರೀಟೀಕಾಸಮೇತ ಉಪಲಬ್ಧವಿದೆ ಎನ್ನುತ್ತಾರೆ. ಶ್ರೀಧರ ವೀರರಾಘವ ಹೊರತು ಬೇರೆ ಯಾರೂ ಆ ಶ್ಲೋಕಕ್ಕೆ ವ್ಯಾಖ್ಯಾನವನ್ನೇ ಮಾಡುವುದಿಲ್ಲ. ಆದರೆ ಆ ಶ್ಲೋಕವನ್ನು ಕೈ ಬಿಟ್ಟರೂ 'ಬ್ರಹ್ಮಶಾಪದಿಂದ ಜಯವಿಜಯರು ಕೃಷ್ಣಾವತಾರ ಪರ್ಯಂತ ಭಗವಂತನಲ್ಲಿ ಅಪರಾಧ ಮಾಡುತ್ತಾರೆ' ಎನ್ನುವ ನಾರದಪುರಾಣ ವಚನ ವಿರೋಧವಿದ್ದೇ ಇದೆ. ಅದರಿಂದ ಭಾಗವತಕ್ಕೆ ಹೀಗೆ ಅಭಿಪ್ರಾಯ ಹೇಳಬೇಕು–

ಅಂತರ್ಭಕ್ತಾ ಬಹಿರ್ವೈರಾ ಹಿರಣ್ಯಾದ್ಯಾ ಹರೇರ್ಮತಾಃ ।
ತತ್ರ ಭಕ್ತ್ಯಾಽಭವನ್ ಪೂತಾ ದ್ವೇಷ ಆವೇಶಕಾನ್ ಗತಃ ॥

---

೧. ಮಯಿ ಸಂರಂಭಃ ಕ್ರೋಧಃ । ತಸ್ಯ ಯೋಗೋಽನವರತಸಂಬಂಧಃ । ತೇನ ಬ್ರಹ್ಮವಿದಪರಾಧಜನ್ಯಂ ಫಲಂ ನಿಸ್ತೀರ್ಯ ನಿರವಶೇಷಮಪೋಹ್ಯ ।
–ವೀರರಾಘವಃ

ತಯೋರ್ವೈರಭಾವಾಭಾಸತ್ವ ಏವ ಶ್ರೀಭಗವತಸ್ತಯೋರನ್ಯೇಷಾಂ ಭಕ್ತಾನಾಮಪಿ ರಸೋದಯಃ ಸ್ಯಾದಿತಿ ಸ್ಥಿತಂ । ತತ ಏವಮರ್ಥಾಪತ್ತಿಲಬ್ಧಂ । ಸರ್ವಭಕ್ತಸುಹೃತ್ ಶ್ರೀಭಗವದಭಿಮತಯುದ್ಧಕೌತುಕಾದಿಸಂಪಾದನಾರ್ಥಂ ವೈರಾಭಾಸಾತ್ಮಕ ಮಾಯಿಕೋಪಾಧಿಂ ಸ್ವಾಭಾವಿಕಾಣಿಮಾದಿಸಿದ್ಧಿಕೇನ ಶುದ್ಧಸತ್ವಾತ್ಮಕಸ್ವವಿಗ್ರಹೇಣ ಪ್ರವಿಶ್ಯ ಸ್ವಸಾನ್ನಿಧ್ಯೇನ ಚೇತನೀಕೃತ್ಯ ಚ ವಿಲೀಯ ಸ್ಥಿತಾಯಾ ಅಪಿ ಭಕ್ತಿವಾಸನಾಯಾಃ ಪ್ರಭಾವೇಣ ತತ್ರಾನಾವಿಷ್ಟಾವೇವ ತಿಷ್ಠತಃ । ಅತೋ ವೈರಭಾವಜಸ್ಮರಣೇನ ವೈರಭಾವೋಽಪಗತ ಇತ್ಯುಭಯಮಪಿ ಬಾಹ್ಯಂ । ಏತದಿತಿ ಪದ್ಯಂ ವಿಗೀತಮಪಿ ಸರ್ವತ್ರ ದೃಶ್ಯತೇ । ಗುರ್ಜರದೇಶೇ ತು ಟೀಕಾ ಚಾಸ್ತಿ। –ಜೀವಗೋಸ್ವಾಮೀ ।

ಅತ್ರೈತತ್ಪುರೇತಿ ಪದ್ಯಂ ಸರ್ವತ್ರ ದೃಷ್ಟಮಪ್ಯಸಾಂಪ್ರಾದಾಯಿಕತ್ವಾನ್ನ ವ್ಯಾಖ್ಯಾತಂ ।
–ವಿಶ್ವನಾಥಃ

ಬ್ರಹ್ಮಜಾ ಅಸುರಾ ಯೇ ತು ವಿಷ್ಣೋಃ ಪಾರ್ಷದೌ ಗತಾಃ ।
ಬಲ್ಯಾದೀಂಶ್ಚ ಹರೇರ್ದ್ವೇಷಂ ತತಃ ಕೃತ್ವಾ ತಮೋ ಗತಾಃ ॥
ಇತಿ ಚ ॥

ತಸ್ಮಾತ್ ಸಂರಂಭೋಽಲ್ಪಫಲಃ ಕಥ್ಯತ ಏವ । ಭಕ್ತಿಯೋಗ ಏವ ಬ್ರಹ್ಮಹೇಲನ ನಿಸ್ತಾರಕಃ ॥

ಹಿರಣ್ಯಾಕ್ಷ ಮೊದಲಾದವರು ಸ್ವರೂಪಮನಸ್ಸಿನಲ್ಲಿ ಹರಿಭಕ್ತಿ ಉಳ್ಳವರೇ. ಜಡ ಮನಸ್ಸಿನಲ್ಲಿ ಮಾತ್ರ ಹರಿಯಲ್ಲಿ ವೈರಭಾವ ತಳೆದರು. (ಹೊರತು ಒಳಗೆ ಭಕ್ತಿಯೇ ತುಂಬಿದೆ, ಹೊರಗೆ ವೈರದ ನಟನೆ ಮಾತ್ರ ಎಂದು ತಿಳಿಯಬಾರದು. ಏಕೆಂದರೆ) ಭಕ್ತಿಯಿಂದಲೇ ಅವರು ಪಾಪ ಪರಿಹಾರ ಮಾಡಿಕೊಂಡರು. ದ್ವೇಷಫಲವು ಆವಿಷ್ಟರಾದ ಅಸುರರನ್ನು ಸೇರಿತು, ಅವರಿಗೆ ಪಾಪಫಲ ಉಣಿಸುವುದಕ್ಕಾಗಿ, ಆವಿಷ್ಟರಾದ ಅಸುರರು ಯಾರೆಂದರೆ, ಅವರು ಬ್ರಹ್ಮನಿಂದ ಉತ್ಪನ್ನರಾದವರು. ಅವರು ವಿಷ್ಣುವಿನ ದ್ವಾರಪಾಲಕರಾದ ಜಯವಿಜಯರನ್ನೂ ಬಲಿಚಕ್ರವರ್ತಿ ಮುಂತಾದವರನ್ನೂ ಪ್ರವೇಶಿಸಿ ಹರಿಯಲ್ಲಿ ದ್ವೇಷಸಾಧನೆ ಮಾಡಿ ತಮಸ್ಸನ್ನು ಹೊಂದಿದರು' ಎಂದೂ ಉಕ್ತವಾಗಿದೆ. ಅದರಿಂದ ಸಜ್ಜೀವರು ಜಡಮನಸ್ಸಿನಲ್ಲಿ ದ್ವೇಷ ಮಾಡಿದರೂ ಸ್ವಲ್ಪಕಾಲ ಮಾತ್ರ ಆ ದ್ವೇಷವು ಜ್ಞಾನಭಕ್ತ್ಯಾದಿಗಳಿಗೆ ಹ್ರಾಸ ಉಂಟುಮಾಡುವುದರಿಂದ ಅದಕ್ಕೆ ಮಹತ್ವ ಕೊಡದೆ 'ದ್ವೇಷವೂ ಬ್ರಾಹ್ಮಣಾಪರಾಧದ ಪಾಪವನ್ನು ಪರಿಹರಿಸುವುದೆಂ'ದು ಮೋಹಕ್ಕಾಗಿ ಹೇಳುತ್ತದೆ ಭಾಗವತ ಹೊರತು ಅದರಲ್ಲಿ ಅದಕ್ಕೆ ತಾತ್ಪರ್ಯವಿಲ್ಲ. ಬ್ರಾಹ್ಮಣಾಪರಾಧಪಾಪ ಪರಿಹಾರ ಮಾಡುವುದು ಭಕ್ತಿಯೋಗವೇ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಸಪ್ತದಶೋಽಧ್ಯಾಯಃ ॥

—o—

ಅಧ್ಯಾಯ–೧೮

ಅಧ್ಯಾಯಸಾರಾಂಶ

ದಿತಿ ಮಕ್ಕಳನ್ನು ಹೆತ್ತಳು. ಅವರು ವಜ್ರಕಾಯರಾಗಿ ಬೆಟ್ಟದ ಗಾತ್ರಕ್ಕೆ ಬೆಳೆದು ನಿಂತರು. ಹಿರಣ್ಯಾಕ್ಷ ಹಿರಣ್ಯಕಶಿಪುಗಳೆಂದು ಕಶ್ಯಪರು ಅವರಿಗೆ ನಾಮಕರಣ ಮಾಡಿದರು. ಹಿರಣ್ಯಕಶಿಪು ಅಣ್ಣ, ತಮ್ಮ ಹಿರಣ್ಯಾಕ್ಷ. ಈತ ಅಣ್ಣನಿಗೆ ಸಹಾಯ ಮಾಡಲು ಗದಾಪಾಣಿಯಾಗಿ ಸ್ವರ್ಗಕ್ಕೆ ಹೋದರೆ, ದೇವತೆಗಳು ಹೆದರಿ ಅಲ್ಲಲ್ಲಿ ತಲೆ ಮರೆಸಿಕೊಂಡಲು. ಹೇಡಿಗಳು, ನಪುಂಸಕರು ದೇವತೆಗಳೆಂದು ಹಿರಣ್ಯಾಕ್ಷ ಸಮುದ್ರರಾಜ ವರುಣನನ್ನು ಯುದ್ಧಕ್ಕೆ ಆಹ್ವಾನಿಸಿದ. ಅವನೂ 'ನಾನು ಶಕ್ತಿಗುಂದಿದ್ದೇನೆ, ನಿನ್ನೊಡನೆ ಹೋರಾಡಲು ವರಾಹರೂಪಿಯಾದ ಶ್ರೀಹರಿಯೇ ಸಮರ್ಥ, ಅವನ ಬಳಿಗೇ ಹೋಗೆಂ'ದು ಹೇಳಿ ಕಳಿಸಿದ.

* * *

ಮೈತ್ರೇಯರು ವಿದುರನಿಗೆ ಹೇಳುತ್ತಾರೆ– 'ಚತುರ್ಮುಖನ ಮುಖದಿಂದ ದೇವತೆಗಳು ದಿತಿಯ ಗರ್ಭವೃತ್ತಾಂತವನ್ನು ಕೇಳಿದರು. ಇತ್ತ ದಿತಿ ತನ್ನ ಮಕ್ಕಳನ್ನು ಹರಿ ವಧಿಸುವನೆಂಬ ಭಯದಿಂದ ಗರ್ಭದಲ್ಲಿಯೇ ನೂರುವರ್ಷಗಳ ಕಾಲ ಧರಿಸಿದಳು. ಬಳಿಕ ಅವಳ ಮಕ್ಕಳ ಜನನ. ಆಗ ಲೋಕದಲ್ಲಿ ಎಲ್ಲೆಡೆ ಉತ್ಪಾತಗಳು ಕಂಡು ಬಂದುವು'

ವವೌ ವಾಯುಃ ಸುದುಸ್ಪರ್ಶಃ ಘಾಟ್‌ಕಾರಾರಾವವಾನ್ ಮುಹುಃ ।
ಉನ್ಮೂಲಯನ್ ನಗಪತೀನ್ ವಾತ್ಯಾನೀಕೋ ರಜೋಧ್ವಜಃ ॥ ೫ ॥

ಘಾಟ್ ಎಂದು ಶಬ್ದ ಮಾಡುತ್ತ ದೊಡ್ಡ ಮರಗಳನ್ನೂ ಬೀಳಿಸುತ್ತ ಧೂಳಿಮಯವಾಗಿ ಮೈ ನೋಯುವಂತೆ ವೇಗವಾಗಿ ಸುಂಟರಗಾಳಿ ಬೀಸಿತು.

ಇಲ್ಲಿ 'ಘಾಟ್‌ಕಾರ' ವೆಂದರೆ 'ಘಾಟ್' ಎಂದು ಅನುಕರಣಶಬ್ದ. ಘಟ್ಕಾರವೆಂದೂ ಪಾಠವಿದೆ. ವಲ್ಲಭವ್ಯಾಖ್ಯಾನದಲ್ಲಿ ಘಟ್ಕಾರವೆಂದು ಪಾಠ. ಉಳಿದ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಪೂತ್ಕಾರ'ಎಂದು ಪಾಠವಿಟ್ಟು ಕೊಂಡಿದ್ದಾರೆ. ಅರ್ಥ ಒಂದೇ. ಅದಕ್ಕೆ ಅಭಿಧಾನ ಎಂಬ ಗ್ರಂಥದ ಆಧಾರವನ್ನು ಶ್ರೀಮದಾಚಾರ್ಯರು

ತೋರಿಸುತ್ತಾರೆ. ಮುಂದಿನ ಒಂಬತ್ತನೇ ಶ್ಲೋಕದಲ್ಲಿ ಬರುವ ಟಂಕಾರಕ್ಕೂ ಹನ್ನೊಂದನೆ ಶ್ಲೋಕದಲ್ಲಿ ಬರುವ ಖಾತ್ಕಾರಕ್ಕೂ ಇದೇ ಪ್ರಮಾಣ ಅನ್ವಯಿಸುತ್ತದೆ. ಬೇರೆ ವ್ಯಾಖ್ಯಾನಕಾರರು ಯಾರೂ ಪ್ರಮಾಣವನ್ನು ಉದಾಹರಿಸಿಲ್ಲ.

ಘಾಟ್ಕಾರಶ್ಚೈವ ಪೂತ್ಕಾರಸ್ತಥಾ ಕಿಲಕಿಲಾದಯಃ ।
ಅನುಕಾರಶಬ್ದಾ ವಿಜ್ಞೇಯಾ ಯೇ ಚಾನ್ಯೇ ತಾದೃಶಾ ಮತಾಃ ॥
ಇತ್ಯಭಿಧಾನಮ್ ॥

ಘಾಟ್ಕಾರ ಪೂತ್ಕಾರ ಹಾಗೂ ಕಿಲಕಿಲ ಮುಂತಾದಶಬ್ದಗಳು ಗಾಳಿ ಬೀಸುವಾಗಿನ ಅನುಕರಣ ಶಬ್ದಗಳಾಗಿವೆ. ಹಾಗೇ ನರಿ ಕತ್ತೆ ಒಂಟೆ ಮುಂತಾದವುಗಳ ಟಂಕಾರ ಖಾತ್ಕಾರ ಮುಂತಾದವುಗಳೂ ಅನುಕರಣಶಬ್ದಗಳೇ ಎಂದು ಅಭಿಧಾನ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

* * *

ನರಿಗಳ ವಿಕಾರವಾದ ಶಬ್ದಗಳೂ ಉತ್ಪಾತಸೂಚಕವಾಗಿ ಕೇಳಿ ಬಂದುವು–

ಅಂತರ್ಗ್ರಾಮೇಷು ಮುಖತೋ ವಮಂತೋ ವಹ್ನಿಮುಲ್ಬಣಮ್ ।
ಸೃಗಾಲಾಶ್ಚಾಪಿ ಟಂಕಾರೈಃ ಪ್ರಣೇದುರಶಿವಾಃ ಶಿವಾಃ ॥ ೯ ॥

ಅಮಂಗಳಸೂಚಕವಾದ ಗಂಡುನರಿಗಳೂ ಹೆಣ್ಣುನರಿಗಳೂ ಬಾಯಿಂದ ಭಯಂಕರವಾದ ಬೆಂಕಿಯನ್ನು ಉಗುಳುತ್ತ ಊರೊಳಗೆ 'ಟಂ' ಎಂದು ಕೆಟ್ಟ ಧ್ವನಿ ಮಾಡಿದುವು. ಇದು ಅವುಗಳ ಸಹಜ ಧ್ವನಿಯಲ್ಲ.

ಇಲ್ಲಿ 'ಟಂಕಾರ ಧ್ವನಿಯನ್ನು ನರಿಗಳು ಮಾಡಿದುವು' ಎಂದಿಷ್ಟೇ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ಅವುಗಳ ಸಹಜಧ್ವನಿಯಲ್ಲ, ಅಸಹಜ, ಅಮಂಗಳಕರ, ನಾಶಸೂಚಕ ಎಂಬ ವಿಶೇಷವನ್ನು ಶ್ರೀಮದಾಚಾರ್ಯರು ಅಗ್ನಿಪುರಾಣದ ಆಧಾರದಿಂದ ಹೇಳುತ್ತಾರೆ–

ಟಂಕಾರೋಽಪ್ಯನುಕಾರಶಬ್ದಃ ।
ನಾಶಸ್ತತ್ರ ಸೃಗಾಲಾನಾಂ ಶಿವಾನಾಂ ಚಾನ್ಯಥಾಸ್ವರೇ ॥
ಇತ್ಯಾಗ್ನೇಯೇ ॥

ಟಂಕಾರವು ನರಿಗಳ ಅನುಕರಣಶಬ್ದವಾಗಿದೆ. ಗಂಡುನರಿಗಳೂ ಹೆಣ್ಣುನರಿಗಳೂ ಟಂಕಾರರೂಪವಾದ ಅಸಹಜಸ್ವರದಿಂದ ಕೂಗಿದರೆ ಅದು ನಾಶ ಸೂಚಕ ಎಂದು ಅಗ್ನಿಪುರಾಣದಲ್ಲಿ ಹೇಳಿದೆ.

* * *

ಕತ್ತೆ ಒಂಟೆಗಳೂ ಖಾತ್ಕಾರಧ್ವನಿ ಮಾಡಿದುವು–

ಖರೋಷ್ಟ್ರಾಃ ಕರ್ಕಶೈಃ ಕ್ಷತ್ತಃ ಖುರೈರ್ಘ್ನಂತೋ ಧರಾತಲಮ್ ।
ಖಾತ್ಕಾರರಭಸಾ ಮತ್ತಾಃ ಪರ್ಯಧಾವನ್ ವರೂಥಶಃ ॥ ೧೧ ॥

ಕತ್ತೆ ಒಂಟೆಗಳು ತೀಕ್ಷ್ಣವಾದ ಗೋರಸುಗಳಿಂದ ನೆಲ ಕೆರೆಯುತ್ತ ಮದೋನ್ಮತ್ತವಾಗಿ ಖಾತ್ಕಾರಧ್ವನಿ ಮಾಡುತ್ತ ವೇಗದಿಂದ ಗುಂಪುಗುಂಪಾಗಿ ಅತ್ತಿತ್ತ ಧಾವಿಸಿದುವು.

ಖಾತ್ಕಾರೋಽಪ್ಯನುಕಾರಶಬ್ದಃ ।

ಖಾತ್ಕಾರವೂ ಕತ್ತೆ ಒಂಟೆ ಮುಂತಾದವುಗಳ ಅನುಕರಣಶಬ್ದವಾಗಿದೆ. 'ಯೇ ಚಾನ್ಯೇ ತಾದೃಶಾ ಮತಾಃ' ಎಂದು ಅಭಿಧಾನಗ್ರಂಥದಲ್ಲಿ ಹಾಗೇ ಹೇಳಿದೆ.

* * *

ಹಿರಣ್ಯಾಕ್ಷನನ್ನು ಕಂಡು, ಗರುಡನಿಗೆ ಹೆದರುವ ಹಾವುಗಳಂತೆ, ದೇವತೆಗಳು ತಗಿ ತಲೆ ಮರೆಸಿಕೊಂಡರು.

ತಂ ವೀಕ್ಷ್ಯ ದುಃಸಹಜವಂ ರಣತ್ಕಾಂಚನನೂಪುರಮ್ ।
ವೈಜಯಂತ್ಯಾ ಸ್ರಜಾ ಜುಷ್ಟಮಂಸನ್ಯಸ್ತಮಹಾಗದಮ್ ॥ ೨೧ ॥

ಮನೋವೀರ್ಯಮದೋತ್ಸಿಕ್ತಮಧೃಷ್ಯಮಕುತೋಭಯಮ್ ।
ಭೀತಾ ನಿಲಿಲ್ಯಿರೇ ದೇವಾಸ್ತಾರ್ಕ್ಷ್ಯತ್ರಸ್ತಾ ಇವಾಹಯಃ ॥ ೨೨ ॥

ಸ ವೈ ತಿರೋಹಿತಾನ್ ದೃಷ್ಟ್ವಾ ಸಹಸಾ ಸ್ವೇನ ದೈತ್ಯರಾಟ್ ।
ಸೇಂದ್ರಾನ್ ದೇವಗಣಾನ್ ಕ್ಲೀಬಾನ್ ಅಪಶ್ಯದ್ ವ್ಯನದದ್ ಭೃಶಮ್ ॥ ೨೩ ॥

ಹಿರಣ್ಯಾಕ್ಷ ದೇವತೆಗಳನ್ನು ಆಕ್ರಮಿಸಲು ವೇಗವಾಗಿ ನುಗ್ಗುತ್ತಾನೆ. ಅವನ ಕಾಲಿನ ಚಿನ್ನದ ಕಡಗ ಧ್ವನಿಗೈಯುತ್ತದೆ. ಕೊರಳಲ್ಲಿ ವೈಜಯಂತೀಮಾಲೆ. ಹೆಗಲ ಮೇಲೆ ದೊಡ್ಡ ಗದೆ. ತಾನೇ ಮಹಾವೀರನೆಂದು ಹೆಮ್ಮೆಯಿಂದ ಉಬ್ಬಿದ್ದಾನೆ. ಅವನಿಗೆ ಯಾರ ಭಯವೂ ಇಲ್ಲ. ಯಾರೂ ಇದಿರಿಸುವವನಿಲ್ಲ. ಅವನನ್ನು ಕಂಡೊಡನೆ ಗರುಡನನ್ನು ಕಂಡ ಹಾವುಗಳಂತೆ ದೇವತೆಗಳು ಅಲ್ಲಲ್ಲಿಯೇ ತಲೆಮರೆಸಿಕೊಂಡರು. ತನ್ನ ಪರಾಕ್ರಮಕ್ಕೆ ಭೀತರಾಗಿ ದೇವತೆಗಳು ಅಡಗಿದ್ದನ್ನು ಕಂಡು ಇಂದ್ರಾದಿ ದೇವತೆಗಳೆಲ್ಲರೂ ನಪುಂಸಕರು, ಪೌರುಷಹೀನರೆಂದು ಬಗೆದು ಹಿರಣ್ಯಾಕ್ಷ ಜೋರಾಗಿ ಗರ್ಜಿಸಿದ.

ಹಿರಣ್ಯಾಕ್ಷ ವಸ್ತುತಃ ವಿಜಯನೆಂಬ ದ್ವಾರಪಾಲಕ. ಅವನಲ್ಲಿ ಆದಿಹಿರಣ್ಯಾಕ್ಷದೈತ್ಯನ ಆವೇಶ. ದ್ವಾರಪಾಲಕರು ಕರ್ಮಜದೇವತೆಗಳು. ತತ್ವಾಭಿಮಾನಿಗಳಾದ ಇಂದ್ರಾದಿದೇವತೆಗಳಿಗಿಂತ ಬಹಳ ಕೆಳಗಿನ ಕಕ್ಷೆಯವರು, ಅವರಿಗಿಂತ ಬಹಳ ದುರ್ಬಲರು. ಈ ದ್ವಾರಪಾಲಕರಿಗಿಂತ ಬಹಳ ದುರ್ಬಲರು ದೈತ್ಯರು. ಆದರೂ ಹಿರಣ್ಯಾಕ್ಷನಿಗೆ ಹೆದರಿ ದೇವತೆಗಳು ಓಡಿ ತಲೆ ಮರೆಸಿಕೊಂಡುದು ಹೇಗೆ ಎಂಬ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಉತ್ತರವಿಲ್ಲ. ಅವರ ಪ್ರಕಾರ ಹಿರಣ್ಯಾಕ್ಷ ಕೇವಲ ವಿಜಯನೆ ಹೊರತು ಅವನಲ್ಲಿ ಇನ್ನೊಬ್ಬ ಅಸುರನ ಆವೇಶವಿಲ್ಲ. ವಿಜಯ ಎಲ್ಲ ದೇವತೆಗಳಿಗಿಂತಲೂ ಬಲಿಷ್ಠ. ಶ್ರೀಹರಿಗೆ ಬಲದಲ್ಲಿ ಸಮಾನ. ಅದರಿಂದಲೆ ಶ್ರೀಹರಿ ಯುದ್ಧರಸಾನುಭವ ಪಡೆಯುವ ಉದ್ದೇಶದಿಂದ ತನಗೆ ಸಮಾನಬಲಉಳ್ಳ ಜಯವಿಜಯರನ್ನೇ ಶಾಪದ ನೆಪದಿಂದ ಭೂಮಿಗೆ ಕಳಿಸಿದ್ದ. ಅದರಿಂದ ''ಸ್ವಾಭಾವಿಕಬಾಹುಬಲದಿಂದಲೆ ಅವರು ಇಂದ್ರಾದಿ ದೇವತೆಗಳನ್ನು ಗೆಲ್ಲುತ್ತಿದ್ದಾರೆ'' ಎಂದು [೧]ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ. ಇದು ತತ್ವನಿರ್ಣಯಗ್ರಂಥಕ್ಕೆ ವಿರುದ್ಧವಾಗಿರುವುದರಿಂದ ಗ್ರಾಹ್ಯವಲ್ಲ. ತತ್ವನಿರ್ಣಯ ಹೀಗೆ ಹೇಳುತ್ತದೆ–

ನ ದೇವಾನಾಂ ಪ್ರಜಾಪಾನಾಂ ವಿಜೇತಾ ವರತೋ ವಿನಾ ।
ಬಲೇನ ವಿದ್ಯಯಾ ವಾಽಪಿ ನ ಸಮಸ್ತತ್ವತೀನ್ ವಿನಾ ।
ವರೋಽಪಿ ತಾದೃಶೋ ಯಾವಚ್ಛರೀರಂ ನಾನ್ಯದೇಹಗಃ ॥
ಇತಿ ತತ್ವನಿರ್ಣಯೇ ।

ದೇವತೆಗಳನ್ನೂ ಪ್ರಜಾಪತಿಗಳನ್ನೂ ಬ್ರಹ್ಮಾದಿಗಳ ವರಬಲದಿಂದಲ್ಲದೆ ಸ್ವಾಭಾವಿಕ ಬಲದಿಂದಾಗಲಿ ವಿದ್ಯೆಯಿಂದಾಗಲಿ ಗೆಲ್ಲುವವನಿಲ್ಲ. ಅವರಿಗೆ ಸಮನೆನಿಸುವವನೂ ಇಲ್ಲ. ಈ ನಿಯಮ ಆ ದೇವತೆಗಳಿಗೂ ಪ್ರಜಾಪತಿಗಳಿಗೂ ನಿಯಾಮಕರಾದ ಸ್ವೋತ್ತಮ ದೇವಾದಿಗಳನ್ನು ಹೊರತು ಪಡಿಸಿದೆ. ವರವೂ ಕೂಡ ಯಾವ ಶರೀರದಲ್ಲಿ ಅವರು ವರ ಪಡೆಯುವರೋ ಆ ಶರೀರದಿಂದಿರುವಷ್ಟು ಕಾಲ ಮಾತ್ರ ಕಾರ್ಯಕಾರಿ ಯಾಗುತ್ತದೆ. ಬೇರೆ ಶರೀರದಲ್ಲಿ ಹುಟ್ಟಿದಾಗ ಆ ವರವಿರುವುದಿಲ್ಲ.' ಎಂದು ತತ್ವನಿರ್ಣಯಗ್ರಂಥದಲ್ಲಿ ಹೇಳಿದೆ.

---

೧. ಬ್ರಹ್ಮಶಾಪೇಽಪಿ ಭಗವದ್ಭಕ್ತಾನಾಂ ಸರ್ವಾಧಿಕ್ಯಮಿತಿ ಬೋಧಯಿತುಂ ತಯೋರಕೃತ್ಯೈರಪಿ ಸುಕೃತ್ಯೈಃ ತ್ರೈಲೋಕ್ಯಾಧಿಪತ್ಯಬಲಪ್ರಭಾವಯೋಗೈಶ್ವರ್ಯಾದೀನಿ, ಕೃತ್ಯೈರಪಿ ಬಹುಭಿರ್ದುಷ್ಕೃತ್ಯೈರ್ನರಕಯಾತನಾಗಂಧಾಭಾವಂ ಚ ವಕ್ತುಮಾಹ ತಾವಿತಿ । ದೋರ್ಭ್ಯಾಂ ಬಾಹುಬಲೇನೈವೇತ್ಯರ್ಥಃ । ಬ್ರಹ್ಮವರೇಣ ಚೇತಿ ಚಕಾರಾತ್ ಬ್ರಹ್ಮವರೋಽಪಿ ತತ್ರ ಸಹಾಯೋಽಭೂದಿತ್ಯರ್ಥಃ । –ವಿಶ್ವನಾಥಃ

ಇಲ್ಲಿ ಒಂದು ಸಮಸ್ಯೆ ಬರುತ್ತದೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ (೩.೫೩) 'ಕುಂಭಕರ್ಣ ಅವನ ಹಿಂದಿನ ಹಿರಣ್ಯಾಕ್ಷ ಜನ್ಮದಲ್ಲಿಯೇ ಪಡೆದಿದ್ದ ಬ್ರಹ್ಮವರಬಲದಿಂದ ಸರ್ವರಿಗೆ ಅಜೇಯನಾಗಿದ್ದ. ಅದರಿಂದ ದೇವತೆಗಳನ್ನು ಪೀಡಿಸಿದ' ಎಂದಿದೆ. ಹಿರಣ್ಯಾಕ್ಷಶರೀರದಲ್ಲಿದ್ದಾಗ ಪಡೆದ ವರ ಕುಂಭಕರ್ಣಶರೀರದಲ್ಲಿರುವಾಗ ಹೇಗೆ ಕಾರ್ಯಕಾರಿಯಾಯಿತು? ಎಂದು. ಇದಕ್ಕೆ ಯಾದುಪತ್ಯದಲ್ಲಿ ಸಮಾಧಾನ ಉಕ್ತವಾಗಿದೆ. ಆ ಜನ್ಮದಲ್ಲಿ ಪಡೆದ ವರ ಆ ಜನ್ಮದಲ್ಲಿಯೆ ಕಾರ್ಯಕಾರಿ ಎನ್ನುವ ನಿಯಮ ದೈತ್ಯರಿಗೆ ಮಾತ್ರ ಅನ್ವಯಿಸುತ್ತದೆ. ಹೊರತು ದೇವತೆಗಳಿಗಲ್ಲ. ಹಿರಣ್ಯಾಕ್ಷಜನ್ಮದಲ್ಲಿ ಬ್ರಹ್ಮನಿಂದ ವರಪಡೆದುದು ವಿಜಯನೇ ಹೊರತು ಹಿರಣ್ಯಾಕ್ಷ ದೈತ್ಯನಲ್ಲ, ಎಂದು.

ಹೀಗೆ ಬ್ರಹ್ಮನ ವರಬಲದಿಂದ ಹಿರಣ್ಯಾಕ್ಷ ದೇವತೆಗಳನ್ನು ಗೆದ್ದನೆ ಹೊರತು ಸ್ವಭಾವಿಕ ಬಾಹುಬಲದಿಂದಲ್ಲ. ಮತ್ತು ಮೂರು ಜನ್ಮಗಳಲ್ಲಿ ನಾನೇ ನಿಮ್ಮನ್ನು ಕೊಲ್ಲುವೆನು ಹೊರತು ಬೇರಾರಿಂದಲೂ ನೀವು ಅವಧ್ಯರೇ ಆಗಿರುತ್ತೀರಿ ಎಂದು ಸಾಕ್ಷಾತ್ ಹರಿಯೆ ಜಯವಿಜಯರಿಗೆ ವರವಿತ್ತಿದ್ದಾನೆ. ಅದರಿಂದ ದೇವತೆಗಳಾರೂ ಅವರನ್ನು ಇದಿರಿಸಲು ಶಕ್ತರಾಗಲಿಲ್ಲ. ವಿಶ್ವನಾಥ ವ್ಯಾಖ್ಯಾನದಲ್ಲಿ ಹೇಳಿದ್ದು ಸರ್ವಥಾ ಗ್ರಾಹ್ಯವಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇಽಷ್ಟಾದಶೋಽಧ್ಯಾಯಃ ॥

—o—

ಅಧ್ಯಾಯ–೧೯

ಅಧ್ಯಾಯಸಾರಾಂಶ

ಶ್ರೀವರಾಹ ಭೂಮಿಯನ್ನೆತ್ತಲು ರಸಾತಳಕ್ಕೆ ಇಳಿದುದನ್ನು ನಾರದರಿಂದ ತಿಳಿದ ಹಿರಣ್ಯಾಕ್ಷ ಅಲ್ಲಿಗೆ ನಡೆದ. ವರಾಹನನ್ನು ಕಂಡು ಯುದ್ಧಕ್ಕೆ ಆಹ್ವಾನಿಸಿದ. ಬಳಿಕ ಘೋರ ಯುದ್ಧ ನಡೆಯಿತು. ಆಗ ಮಧ್ಯಾಹ್ನಕಾಲ. 'ಮುಂದೆ ಸಂಧ್ಯಾಕಾಲ ಬರುತ್ತದೆ. ಅಸುರರಿಗೆ ಆಗ ಬಲ ಹೆಚ್ಚು' ಎಂದು ಆತಂಕ ಗೊಂಡವರಂತೆ ಬ್ರಹ್ಮದೇವರು ಬಂದು 'ಹರಿ, ನೀನು ಆಟವಾಡಿದ್ದು ಸಾಕು, ಇದು ಅಭಿಜಿತ್ ಕಾಲ. ದೇವತೆಗಳಿಗೆ ಜಯಕಾರಕ, ಈಗಲೇ ಅಸುರನನ್ನು ಕೊಲ್ಲು' ಎಂದು ಬೇಡಿಕೊಂಡರು.

* * *

ಹಿರಣ್ಯಾಕ್ಷನೊಡನೆ ಶ್ರೀವರಾಹನು ನಡೆಸಿದ್ದ ಯುದ್ಧ ಬಲು ರೋಚಕವಾಗಿತ್ತು. ಶ್ರೀವರಾಹ ಅಜ್ಞರನ್ನು ಭ್ರಾಂತಿಗೊಳಿಸುವುದಕ್ಕಾಗಿ ಯುದ್ಧದಲ್ಲಿ ಮೈ ಎಲ್ಲ ಗಾಯವಾಗಿ ರಕ್ತ ಸುರಿಯುವಂತೆ ತೋರಿಕೊಂಡ. ಈ ಹುಡುಗಾಟವನ್ನು ಸಾಕು ಮಾಡೆಂದು ಬ್ರಹ್ಮದೇವರು ಬಂದು ವಿಜ್ಞಾಪಿಸುತ್ತಾರೆ–

ತಯೋಃ ಸ್ಪೃಧೋಃ ಸ್ನಿಗ್ಧಗದಾಹತಾಂಗಯೋಃ
ಕ್ಷತಸ್ರವಾಘ್ರಾಣವಿವೃದ್ಧಯುದ್ಧಯೋಃ ।
ವಿಚಿತ್ರಮಾರ್ಗಾಂಶ್ಚರತೋರ್ಜಿಗೀಷಯಾ
ವ್ಯಭಾದಿಲಾಯಾಮಿವ ಶುಷ್ಮಿಣೋರ್ಮೃಧಃ ॥ ೧೯ ॥

ಆಸನ್ನಶೌಂಡೀರಮಪೇತಸಾಧ್ವಸಂ
ಕೃತಪ್ರತೀಕಾರಮಹಾರ್ಯವಿಕ್ರಮಮ್ ।
ವಿಲಕ್ಷ್ಯ ದೈತ್ಯಂ ಭಗವಾನ್ ಸಹಸ್ರಣೀ–
ರ್ಜಗಾದ ನಾರಾಯಣಮಾದಿಸೂಕರಮ್ ॥ ೨೦ ॥

ಶ್ರೀವರಾಹ ಹಿರಣ್ಯಾಕ್ಷರಿಬ್ಬರೂ ಗದೆಗಳ ಏಟುಗಳಿಂದ ಗಾಯಗೊಂಡರು ಇಬ್ಬರ ಮೈಗಳಿಂದಲೂ ರಕ್ತ ಸರಿಯಿತು. ಅದರ ವಾಸನೆಯಿಂದ ಇಬ್ಬರಿಗೂ ಕ್ರೋಧ ಉಕ್ಕೇರಿತು. ಇಬ್ಬರೂ ಬಗೆಬಗೆಯ ವರಸೆಗಳನ್ನು ತೋರಿದರು ಭೂಮಿಗಾಗಿ ಮದಿಸಿದ ಗೂಳಿಗಳಂತೆ ಇಬ್ಬರೂ ಸೆಣಸಾಡಿದರು.

ಹಿರಣ್ಯಾಕ್ಷ ಯುದ್ಧದಲ್ಲಿ ಶೂರ. ಭಯವಿಲ್ಲದವ, ಏಟಿಗೆ ಪ್ರತಿಯಾಗಿ ಏಟನ್ನು ಕೊಡುವವ. ಅವನ ಪರಾಕ್ರಮವನ್ನು ಧ್ವಂಸಮಾಡುವುದು ಅಶಕ್ಯ ಎಂದು ಮನಗಂಡು ಬ್ರಹ್ಮದೇವರು ಆದಿವರಾಹರೂಪಿಯಾದ ನಾರಾಯಣನಲ್ಲಿ ಬಿನ್ನವಿಸಿದರು.

ಇಲ್ಲಿ 'ಸಹಸ್ರಣೀಃ' ಎಂದರೆ ವಲ್ಲಭವ್ಯಾಖ್ಯಾನದಲ್ಲಿ ಬ್ರಹ್ಮದೇವರು ತಮಗೆ ಸದೃಶರಾದ ಸಾವಿರಯೋಧರಿಗೆ ನಾಯಕರಾದ್ದರಿಂದ ಅವರಿಗೆ ಹಿರಣ್ಯಾಕ್ಷ ತಮ್ಮನ್ನು ಕೊಲ್ಲಬಹುದೆಂಬ ಭಯವಿರಲಿಲ್ಲ. ಅದರಿಂದ ಧೈರ್ಯವಾಗಿ ವರಾಹನಿಗೆ ಹೇಳುತ್ತಾರೆ ಅವನನ್ನು ಕೊಲ್ಲು ಎಂದು. ಶ್ರೀಧರ ವಿಶ್ವನಾಥ ಶುಕದೇವ ವ್ಯಾಖ್ಯಾನಗಳಲ್ಲಿ ಸಾವಿರಾರು ಋಷಿಗಳಿಗೆ ಬ್ರಹ್ಮದೇವರು ಮುಖ್ಯಸ್ಥರೆಂದು, ವೀರರಾಘವವ್ಯಾಖ್ಯಾನದಲ್ಲಿ ಸಾವಿರಾರು ದೇವತೆಗಳಿಗೆ ಅಧಿಪತಿಗಳೆಂದು ಹೇಳಿದೆ. ಗಿರಿಧರವ್ಯಾಖ್ಯಾನದಲ್ಲಿ ಸಹಸ್ರ ಎಂದರೆ ಅನಂತ. ಅದರಿಂದ ಸರ್ವನಿಯಾಮಕಬ್ರಹ್ಮದೇವರು ಎಂದು ಹೇಳಿದೆ.

ಈ ವ್ಯಾಖ್ಯಾನಗಳಲ್ಲಿ ಅಸಂಗತಿ ಏನಿಲ್ಲ. ಆದರೆ ತಾತ್ಪರ್ಯದಲ್ಲಿ ವಿಶೇಷಾರ್ಥ ಬೇರೆಯೇ ಇದೆ.

ಶ್ರೀವರಾಹನ ಮೈಯಲ್ಲಿ ಗಾಯವಾಯಿತು ರಕ್ತ ಸುರಿಯಿತು ಎಂದು ಮುಂತಾಗಿ ವರ್ಣನೆ ಭಾಗವತದಲ್ಲಿ ಕಾಣುತ್ತದೆ. ಆದರೆ ಚಿನ್ಮಯಗಾತ್ರನಾದ ಹರಿಗೆ ಛೇದಭೇದಾದಿಗಳು ಸರ್ವಥಾ ಶಕ್ಯವಿಲ್ಲ. ಈ ಸಮಸ್ಯೆಯನ್ನು ಬೇರೆ ವ್ಯಾಖ್ಯಾನಕಾರರು ವಿಚಾರಕ್ಕೆ ಎತ್ತಿಕೊಂಡಿಲ್ಲ. [೧]ರಾಧಾರಮಣವ್ಯಾಖ್ಯಾನದಲ್ಲಿ ಮಾತ್ರ ಹೀಗೆ ಹೇಳಿದೆ, 'ಶ್ರೀವರಾಹನ ಮೈಯಲ್ಲಿ ರಕ್ತ ಅವನದಲ್ಲ. ದೈತ್ಯನ ರಕ್ತ ಅದು. ಆದರೂ ಅದನ್ನು ತನ್ನದೆಂದೇ ಅಭಿಮಾನದಿಂದ ಕಂಡು ಅದರ ವಾಸನೆಯಿಂದ ಹೆಚ್ಚಿನ ಕ್ರೋಧಕ್ಕೊಳಗಾದ' ಎಂದು. ವಸ್ತುತಃ ಈ ಸಮಾಧಾನ ತೃಪ್ತಿಕರವಾಗಿಲ್ಲ. ಶ್ರೀವರಾಹ

೧ ರುಧಿರಂ ಚಾತ್ರ ದೈತ್ಯಸ್ಯೈವ ಭಗವದಂಗೇ ಸಂಲಗ್ನಮಿತಿ ತೇನ ಸಂರಂಭಾವೇಶೇನ ಸ್ವೀಯತ್ವಮೇವ ತತ್ರಾನುಮತಮಿತಿ ತದವಘ್ರಾಣಸ್ಯ ಮನ್ಯುಹೇತುತ್ವಂ ಜ್ಞೇಯಂ —ರಾಧಾರಮಣದಾಸಃ

೨ ಕಾಲಾತ್ಮನೋಽಪಿ ಮಮ ಮುಹೂರ್ತಬಲಮುಪದಿಶತೀತಿ ಪ್ರಹಸ್ಯ । –ಶ್ರೀಧರಃ

ಅಹೋ ಮತ್ಪ್ರೇಮ್ಣಃ ಸರ್ವವಿಸ್ಮಾರಕತಾಸಾಮರ್ಥ್ಯಂ ಯತ್ ಕಾಲಾತ್ಮನೋಽಪಿ ಮಮ ಮುಹೂರ್ತಮುಪದಿಶತಿ । —ವಿಶ್ವನಾಥಃ

ಲೀಲೆಯಿಂದ ತನ್ನ ಮೈಯಿಂದ ಪ್ರಾಕೃತವಾದ ರಕ್ತವನ್ನು ತತ್ಕಾಲದಲ್ಲಿ ನಿರ್ಮಿಸಿ ಸುರಿಸಿದ್ದಾನೆ, ಅದರ ವಾಸನೆಯಿಂದ ಕ್ರೋಧ ಹೆಚ್ಚಿದಂತೆ ನಟಿಸಿದ್ದಾನೆ.

ಬ್ರಹ್ಮದೇವರು 'ಶ್ರೀಹರಿ, ಇವನೊಡನೆ ಆಟ ಸಾಕು. ಬೇಗನೆ ಸಂಹರಿಸು. ಸಂಧ್ಯಾಕಾಲ ಬರುತ್ತಿದೆ. ಸಂಧ್ಯಾಕಾಲದಲ್ಲಿ ದೈತ್ಯರಿಗೆ ಬಲ ಹೆಚ್ಚುತ್ತದೆ' ಎನ್ನುತ್ತಾರೆ. ಇಲ್ಲಿ ಸಂಧ್ಯಾಕಾಲದಲ್ಲಿ ದೈತ್ಯಹಿರಣ್ಯಾಕ್ಷನ ಬಲ ಹೆಚ್ಚುತ್ತದೆ, ಸರ್ವಶಕ್ತನಾದ ಶ್ರೀವರಾಹನ ಬಲ ಕಮ್ಮಿಯಾಗುತ್ತದೆ ಎನ್ನುವುದು ಕೂಡುವುದಿಲ್ಲ. ಬ್ರಹ್ಮದೇವರು ಹರಿಗೆ ಇದು ತಿಳಿದಿಲ್ಲ, ತಾನೊಬ್ಬನೇ ತಿಳಿದಿದ್ದೇನೆ ಎಂದುಕೊಂಡು ಮಾತಿನಿಂದ ಹೇಳುವುದೂ ಸರ್ವಜ್ಞರಾದ ಅವರಿಗೆ ಒಪ್ಪುವುದಿಲ್ಲ. ಇದಕ್ಕೆ ಬೇರೆ ವ್ಯಾಖ್ಯಾನ ಕಾರರು ಮುಂದೆ 'ಅವಧಾರ್ಯ ವಿರಿಂಚಸ್ಯ ನಿರ್ವ್ಯಲೀಕಮೃತಂ ವಚಃ । ಪ್ರಹಸ್ಯ' ಎಂಬಲ್ಲಿಯೆ ಸಮಾಧಾನವಿದೆ ಎನ್ನುತ್ತಾರೆ. 'ಪ್ರಹಸ್ಯ' ಶ್ರೀವರಾಹ ನಕ್ಕನಂತೆ. ಕಾಲಾತ್ಮಕನಾದ ನನಗೆ ಈ ಬ್ರಹ್ಮ ಸಂಧ್ಯಾಕಾಲದ ಮಹಿಮೆಯನ್ನು ಉಪದೇಶಿಸಲು ಬಂದಿದ್ದಾನೆ! ನನ್ನ ಮೇಲಿನ ಪ್ರೀತಿಯಿಂದ ಕುರುಡಾಗಿ ನನ್ನ ಶಕ್ತಿಯನ್ನು ಮರೆತಿದ್ದಾನೆ! ಪ್ರೀತಿಗೆ ಎಲ್ಲವನ್ನೂ ಮರೆಸುವ ಸಾಮರ್ಥ್ಯವಿದೆ' ಎಂದು. ಆದರೆ ಇದು ಸಮಾಧಾನವಲ್ಲ. ಸವಜ್ಞರು ಪ್ರೀತಿಯಿಂದ ಕುರುಡಾಗುವುದು ವ್ಯಾಹತ. ವಸ್ತುತಃ ಇಲ್ಲಿ ಶ್ರೀವರಾಹ ತಾನು ಅಜ್ಞಾನಿಯಂತೆ ನಟಿಸಿದ್ದಾನೆ. ಬ್ರಹ್ಮದೇವರೂ ಅವನ ಸಾಮರ್ಥ್ಯಕ್ಕೆ ಮಿತಿಯನ್ನು ಕಲ್ಪಿಸಿಕೊಂಡಂತೆ ನಟಿಸಿದ್ದಾರೆ. ಎಲ್ಲವೂ ಅಜ್ಞರಿಗೆ ಭ್ರಾಂತಿ ಹುಟ್ಟಿಸುವುದಕ್ಕಾಗಿ ತೋರಿದ ಲೀಲೆಯಷ್ಟೆ.

ಅನೇಕಕಲ್ಪಜನನೇತೃತ್ವಾತ್ ಸಹಸ್ರಣೀಃ ।

ಅಕ್ಷತಃ ಕ್ಷತವದ್ ವಿಷ್ಣುರಸಮಃ ಸಮವತ್ತಥಾ ।
ಅಜಿತೋ ಜಿತವಚ್ಚೈವ ಜ್ಞೋಽಜ್ಞವಚ್ಚ ಪ್ರಕಾಶಯೇತ್ ॥

ಸರ್ವರೂಪೇಷ್ವನಂತೋಽಪಿ ಬ್ರಹ್ಮಾದ್ಯಾಶ್ಚೈವ ತನ್ಮತೇಃ ।
ಅನುಸಾರಿತಯಾ ಬ್ರೂಯುಃ ಕುರ್ಯುಶ್ಚ ನ ಸ ದುಃಖಭಾಕ್ ॥
ಇತಿ ಬ್ರಹ್ಮಾಂಡೇ ॥

ಅನೇಕ ಕಲ್ಪಗಳ ಮುಮುಕ್ಷು ಜನರಿಗೆ ನೇತಾರನಾದ್ದರಿಂದ ಬ್ರಹ್ಮದೇವರು ಸಹಸ್ರಣೀ ಎನಿಸುತ್ತಾರೆ.

ಶ್ರೀಹರಿ ರಣರಂಗದಲ್ಲಿ ಗಾಯಗೊಳ್ಳದಿದ್ದರೂ ಗಾಯಗೊಂಡವನಂತೆ ತೋರಿ ಕೊಳ್ಳುತ್ತಾನೆ. (ಅದರಿಂದ ಹಿರಣ್ಯಾಕ್ಷನೊಡನೆ ಯುದ್ಧ ಮಾಡುವಾಗ ಗಾಯ ಗೊಂಡಂತೆ ತೋರಿಕೊಂಡಿದ್ದಾನೆ. ಶತ್ರುವಿಗೆ ಸಮಾನನಾಗದೆ ಸದಾ ಉತ್ತಮನೇ ಆಗಿದ್ದರೂ

ಸಮಾನನಂತೆ ತೋರಿಕೊಳ್ಳುತ್ತಾನೆ (ಹಿರಣ್ಯಾಕ್ಷನಿಗೆ ಪರಾಕ್ರಮದಲ್ಲಿ ಸಮಾನನಂತೆ ತೋರಿಕೊಂಡನಷ್ಟೆ.) ಯಾರಿಂದಲೂ ಪರಾಜಿತನಾಗದಿದ್ದರೂ ಪರಾಜಿತನಂತೆ ತೋರಿಕೊಳ್ಳುತ್ತಾನೆ (ಜರಾಸಂಧನಿಗೆ ಶ್ರೀಕೃಷ್ಣ ಸೋತಂತೆ ತೋರಿಕೊಳ್ಳುತ್ತಾನೆ.) ಸರ್ವಜ್ಞನಾಗಿದ್ದರೂ ಅಜ್ಞನಂತೆ ತೋರಿಕೊಳ್ಳುತ್ತಾನೆ. (ಅದರಿಂದಲೇ ಬ್ರಹ್ಮದೇವರು ಸಂಧ್ಯಾಕಾಲ ಬರುತ್ತಿದೆ ಎಂದು ಎಚ್ಚರಿಸುತ್ತಾರೆ.) ಎಲ್ಲ ರೂಪಗಳಲ್ಲಿಯೂ ಅವನು ದೇಶ ಕಾಲ ಗುಣಗಳಿಂದ ಪರಿಪೂರ್ಣನೇ ಆಗಿದ್ದಾನೆ. ಅವನು ಅಜ್ಞಮೋಹಕ ನಟನೆಯನ್ನು ಸಂಕಲ್ಪಿಸಿದಾಗ ಅದಕ್ಕನುಸಾರವಾಗಿಯೇ ಬ್ರಹ್ಮಾದಿಗಳೂ ವ್ಯವಹರಿಸುತ್ತಾರೆ. ನಡೆದು ಕೊಳ್ಳುತ್ತಾರೆ. ಅವನೆಂದೂ ದುಃಖಭಾಗಿಯಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಅನೇಕ ಕಲ್ಪಗಳ ಜನರಿಗೆ ನೇತಾರ ಎಂದರೆ ಚತುರ್ಮುಖನಿಗೆ ಒಂದು ಕಲ್ಪ ಮಾತ್ರ ಬ್ರಹ್ಮಪದವಿ ಇರುವುದರಿಂದ ಇಲ್ಲಿ ಕಲ್ಪಶಬ್ದದಿಂದ ಬ್ರಹ್ಮನ ಮಹಾಕಲ್ಪವನ್ನು ಗ್ರಹಿಸಕೂಡದು. ದಿನಕಲ್ಪಗಳನ್ನು ಇಟ್ಟುಕೊಳ್ಳಬೇಕು, ಎಂದು ಯಾದುಪತ್ಯ ಹೇಳುತ್ತದೆ. ಅನೇಕ ದಿನಕಲ್ಪಗಳಲ್ಲಿ ಸಾಧನ ಮಾಡುವ ಎಲ್ಲ ಜನರಿಗೂ ಗುರುವಾಗಿ ಅವರಿಗೆ ಯೋಗ್ಯವಾದ ಗತಿಯನ್ನು ಕೊಡಿಸುವವನು ಚತುರ್ಮುಖಬ್ರಹ್ಮ. ಕೊಡುವವನು ವಿಷ್ಣು.

* * *

ಸಂಧ್ಯಾಕಾಲ ಸಮೀಪಿಸುತ್ತಿದೆ. ದೈತ್ಯರಿಗೆ ಸಂಧ್ಯಾಕಾಲದಲ್ಲಿ ಬಲ ಹೆಚ್ಚು. ಅದರಿಂದ ಈಗಲೇ ಹಿರಣ್ಯಾಕ್ಷನನ್ನು ವಧಿಸು ಎಂದು ಬ್ರಹ್ಮದೇವರು ಶ್ರೀವರಾಹನಲ್ಲಿ ಪ್ರಾರ್ಥಿಸುತ್ತಾರೆ–

ಏಷಾ ಘೋರತಮಾ ಸಂಧ್ಯಾ ಲೋಕಶಂಬಟ್‌ಕರೀ ಪ್ರಭೋ ।
ಉಪಸರ್ಪತಿ ಸರ್ವಾತ್ಮನ್ ಸುರಾಣಾಂ ಜಯಮಾವಹ ॥ ೨೬ ॥

ಸರ್ವಾಂತರ್ಯಾಮಿ ಪರಮಾತ್ಮನೆ, ಸರ್ವಲೋಕನಾಶಕರವಾದ ಮಹಾ ಭಯಂಕರವಾದ ಸಂಧ್ಯಾಕಾಲ ಬರುತ್ತಿದೆ. ಅದು ಬರುವುದರೊಳಗೆ ಹಿರಣ್ಯಾಕ್ಷನನ್ನು ವಧಿಸಿ ದೇವತೆಗಳಿಗೆ ಜಯ ಉಂಟುಮಾಡು.

ಇಲ್ಲಿ ಶಂಬಟ್ ಅಥವಾ ಛಂಬಟ್ ಶಬ್ದವು ವಿನಾಶಾರ್ಥದಲ್ಲಿ ಪ್ರಯುಕ್ತವಾಗಿದೆ ಎಂದು ಎಲ್ಲ ವ್ಯಾಖ್ಯಾನಕಾರರೂ ಒಪ್ಪಿದ್ದಾರೆ. ಆದರೆ ಪ್ರಮಾಣ ಕೊಟ್ಟಿಲ್ಲ. ಛಂಬಟ್ ಎಂದು ಅವ್ಯಯ ವಿನಾಶ ಎಂಬ ಅರ್ಥದಲ್ಲಿ ಇದೆ ಎಂದಿಷ್ಟೇ ಹೇಳುತ್ತಾರೆ. ಚ್ಛಂಬಟ್‌ಕರೀ ಎಂದೂ ಒಂದು ಪಾಠವಿದೆ. ಆ ಪಾಠದಲ್ಲಿ ಮೋಹನಕರವೆಂದು ಅರ್ಥ ಎನ್ನುತ್ತದೆ ವೀರರಾಘವವ್ಯಾಖ್ಯಾನ. ಛಂಬಟ್ಕರೀ ಎಂಬ ಪಾಠದಲ್ಲಿ

ಪ್ರತಿಕೂಲಕರವೆಂದು ಅಲ್ಲಿ ಅರ್ಥ ಉಕ್ತವಾಗಿದೆ. ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ ಮಾತ್ರ ಇದನ್ನು ವೈದಿಕಶಬ್ದ, ರಿಕ್ತಪರ್ಯಾಯವೆನ್ನುತ್ತ 'ತೇನೈಕಾಷ್ಟಕಾನ್ ಛಂಬಟ್ ಕುರ್ವಂತಿ' ಎಂದು ಶ್ರುತಿಯನ್ನು ಉದಾಹರಿಸಲಾಗಿದೆ. ಅದರ ಪ್ರಕಾರ 'ಛಂಬಟ್' ಎಂದರೆ, ರಿಕ್ತ, ಖಾಲಿ ಎಂದರ್ಥ. ಲೋಕವನ್ನು ಖಾಲಿ ಮಾಡುತ್ತದೆ ಸಂಧ್ಯೆ, ಅರ್ಥಾತ್ ನಾಶ ಮಾಡುತ್ತದೆ. ಆದರೆ ಶ್ರೀಮದಾಚಾರ್ಯರು ತೋರಿಸುವ ಅಭಿಧಾನಗ್ರಂಥದಂತೆ ಸ್ಪಷ್ಟವಾಗಿ ಈ ಶ್ರುತಿ ಛಂಬಟ್ ಶಬ್ದಾರ್ಥವನ್ನು ಹೇಳುವುದಿಲ್ಲ. ನಮ್ಮ ಊಹೆಗೆ ಬಿಡುತ್ತದೆ. ಸ್ಪಷ್ಟ ಪ್ರಮಾಣ ಬೇಕೆಂದರೆ ಶ್ರೀಮದಾಚಾರ್ಯರು ಹೇಳುವ ಅಭಿಧಾನವೆ.

'ಆದರಂ ತು ಮುಖಂ ವಿದ್ಯಾಚ್ಛಂಬಟ್ ಕಾರಂ ತು ಭಕ್ಷಣಮ್'
ಇತ್ಯಭಿಧಾನಮ್ ॥

'ಆದರ' ಶಬ್ದಕ್ಕೆ ಮುಖ ಎಂದರ್ಥ. ಛಂಬಟ್ಕಾರವೆಂದರೆ 'ಭಕ್ಷಣ' ಎಂದರ್ಥ ಎಂದು ಅಭಿಧಾನವೆಂಬ ಗ್ರಂಥ ಹೇಳುತ್ತದೆ.

ಇದರಿಂದ ಛಂಬಟ್–ಶಬ್ದಕ್ಕೆ ಖಾಲಿ ಮಾಡುವುದು ಮುಖ್ಯಾರ್ಥವಲ್ಲ, ನಾಶವೂ ಮುಖ್ಯಾರ್ಥವಲ್ಲ. ಭಕ್ಷಣವೇ ಮುಖ್ಯಾರ್ಥ. ಪ್ರಕೃತದಲ್ಲಿ ಸಂಧ್ಯಾಕಾಲ ಎಲ್ಲೆಡೆ ಕತ್ತಲು ಹಬ್ಬಿಸಿ ಏನೂ ಕಾಣದಂತೆ ಮಾಡುವುದರಿಂದ ಎಲ್ಲವನ್ನೂ ಭಕ್ಷಿಸಿದಂತೆಯೆ. ಅದರಿಂದ ಆಸುರೀಶಕ್ತಿವೃದ್ಧಿಯಾಗಿ ಲೋಕನಾಶವಾಗುತ್ತದೆ ಎನ್ನಬೇಕು. ಅನಂತತೀರ್ಥ ವ್ಯಾಖ್ಯಾನದಲ್ಲಿ 'ಲೋಕ ಶಂಬಟ್ಕರೀ ಲೋಕಭಕ್ಷಣೀ । ಭಕ್ಷಣಂ ಚ ತಮಸಾಽಽಚ್ಛಾದನಮೇವ' ಎಂದಿದೆ.

* * *

ಇದೀಗ ಅಭಿಜಿತ್ ಕಾಲ. ಮುಂದೆ ಬರುವ ಸಂಧ್ಯಾಕಾಲ ಅಸುರರಿಗೆ ಜಯಕಾರಕವಾದರೆ ಅಭಿಜಿತ್ಕಾಲ ದೇವತೆಗಳಿಗೆ ಜಯಕಾರಕ. ಅದರಿಂದ ಈಗಲೇ ಹಿರಣ್ಯಾಕ್ಷನನ್ನು ವಧಿಸು ಎಂದು ಬ್ರಹ್ಮದೇವರು ಶ್ರೀವರಾಹನಲ್ಲಿ ಪ್ರಾರ್ಥಿಸುತ್ತಾರೆ.

ಅಧುನೈವಾಭಿಜಿನ್ನಾಮಾ ಯೋಗೋ ಮೌಹೂರ್ತಿಕೋಽಭ್ಯಗಾತ್ ।
ಶಿವಾಯ ನಸ್ತ್ವಂ ಸುಹೃದಾಮಾಶು ನಿಸ್ತರ ದುಸ್ತರಮ್ ॥ ೨೭ ॥

ಇದೀಗಲೇ ಅಭಿಜಿತ್ ಎಂಬ ಮಧ್ಯಾಹ್ನ ಮುಹೂರ್ತಕಾಲ ಬಂದಿದೆ. ನಮ್ಮ ಶುಭಕ್ಕಾಗಿ ಬೇಗನೆ ಶತ್ರುವನ್ನು ವಧಿಸು.

ಇಲ್ಲಿ ಅಭಿಜಿತ್ ಎಂದರೆ ಮಧ್ಯಾಹ್ನವೆಂದು ಶ್ರೀಮದಾಚಾರ್ಯರು ಪ್ರಮಾಣಪುರಃಸರವಾಗಿ ಹೇಳುತ್ತಾರೆ–

ಮಧ್ಯಾಹ್ನಸ್ತ್ವಭಿಜಿತ್ ಪ್ರೋಕ್ತ ಆಷಾಢೋತ್ತರ ಏವ ಚ ।
ಶ್ರವಣಸ್ಯಾಪಿ ಪೂರ್ವಾರ್ಧೋ ವಿಷುವಂ ಚಾಭಿಜಿತ್ ಸ್ಮೃತಃ ॥
ಇತಿ ಚ ॥

'ಮಧ್ಯಾಹ್ನ ಕಾಲವೂ ಉತ್ತರಾಷಾಢಾನಕ್ಷತ್ರದ ಉತ್ತರಾರ್ಧವೂ ಶ್ರವಣನಕ್ಷತ್ರದ ಪೂರ್ವಾರ್ಧವೂ ವಿಷುವ ಕಾಲವೂ ಅಭಿಜಿತ್ ಎನಿಸುತ್ತವೆ.' ಎಂದು ಉಕ್ತವಾಗಿದೆ.

ಇಲ್ಲಿ ಭಾಗವತಶ್ಲೋಕದಲ್ಲಿ ಅಭಿಜಿತ್ ಎಂದರೆ ಸಂಧ್ಯಾಕಾಲಕ್ಕಿಂತ ಮುಂಚಿತವಾಗಿ ಬರುವ ಮಧ್ಯಾಹ್ನಕಾಲವೇ ವಿವಕ್ಷಿತವೆಂದು ಬೇರೆ ಹೇಳಬೇಕಾಗಿಲ್ಲ, ಅದರಿಂದ ಶ್ರೀಮದಾಚಾರ್ಯರು ಹಾಗೆ ಪ್ರತ್ಯೇಕ ಹೇಳಿಲ್ಲ. 'ಮೌಹೂರ್ತಿಕ' ಎಂದರೆ ಮುಹೂರ್ತಕಾಲ , ಅಂದರೆ ಎರಡು ಗಳಿಗೆ ಅಭಿಜಿತ್ ಯೋಗವಿರುತ್ತದೆ. ಆದರೆ ವಿಶ್ವನಾಥವ್ಯಾಖ್ಯಾನದಲ್ಲಿ ಮೂರು ಮುಹೂರ್ತಕಾಲ ಎಂದಿದೆ. ಪ್ರಾತಃ ಸಂಗವಗಳ ಬಳಿಕ ಬರುವ ಮಧ್ಯಾಹ್ನ ಆರುಗಳಿಗೆ ಇರುವುದರಿಂದ ಅದೂ ಸರಿಯಾಗಬಹುದು.

ವಲ್ಲಭವ್ಯಾಖ್ಯಾನ ಪ್ರಕಾರ ಅಭಿಜಿತ್ ಎಂದರೆ ತುಲಾಸಂಕ್ರಮಣಾನಂತರ ಎಂಟನೆ ದಿನ ಮಧ್ಯಾಹ್ನದಲ್ಲಿ ದಿಗಂತದಲ್ಲಿ ಉತ್ತರಾಷಾಢದ ಕೊನೆಯ ಪಾದವಿದ್ದರೆ ಆ ಒಂದು ಮುಹೂರ್ತಕಾಲ ಅಭಿಜಿತ್ ಯೋಗ. ವೇದದಲ್ಲಿ ಈ ಯೋಗ ದೇವತೆಗಳು ಅಸುರರೊಂದಿಗೆ ಹೋರಾಡಿ ಜಯ ಗಳಿಸಿದ ಕಾಲ. 'ಅಭಿಜಯ'ಗಳಿಸಿದ ಕಾಲವಾದ್ದರಿಂದ 'ಅಭಿಜಿತ್'

ಅಭಿಜಿನ್ನಾಮ ನಕ್ಷತ್ರಂ । ಉಪರಿಷ್ಟಾದಾಷಾಢಾನಾಂ । ಅವಸ್ತಾಚ್ಛ್ರೋಣಾಯೈ ದೇವಾ ಸುರಾಃ ಸಂಯತಾ ಆಸನ್ । ತೇ ದೇವಾಸ್ತಸ್ಮಿನ್ ನಕ್ಷತ್ರೇಽಭ್ಯಜಯನ್ । ಯದಭ್ಯಜಯನ್ ತದಭಿಜಿತೋಽಭಿಜಿತ್ತ್ವಂ । ಯಂ ಕಾಮಯೇತಾನಪಜಯ್ಯಂ ಜಯೇದಿತಿ ತಸ್ಮಿನ್ನಕ್ಷತ್ರೇ ಯಾಜಯೇತ್ । ಅನಪಜಯ್ಯಮೇವ ಜಯತಿ । ಪಾಪಪರಾಜಿತಮಿವತ್ವಿತಿ ।'

ಎಂದು ವೇದಭಾಗವನ್ನು ಪುರುಷೋತ್ತಮವ್ಯಾಖ್ಯಾನ ತೋರಿಸಿದೆ. ವಲ್ಲಭವಾಖ್ಯಾನದಲ್ಲಿ ಈ ಅಭಿಜಿತ್ ಒಳ್ಳೆಯ ನಕ್ಷತ್ರವಲ್ಲ ವೇದವೇ 'ಪಾಪಪರಾಜಿತಮಿವ ತು' ಎಂದಿರುವುದರಿಂದ. ಅದು ಈಗಾಗಲೇ ಕಳೆದಿದೆ. ಸಂಧ್ಯಾಕಾಲ ಇನ್ನೂ ಬಂದಿಲ್ಲ ಇದೇ ಸರಿಯಾದ ಸಮಯ, ದೈತ್ಯನನ್ನು ಕೊಲ್ಲು ಎಂದು ವಿವರಣೆಯನ್ನೂ ನೀಡಲಾಗಿದೆ. 'ಮೌಹೂರ್ತಿಕೋ ಹ್ಯಗಾತ್' ಎಂದು ಅವರ ಪಾಠ. ಅಭಿಜಿತ್ ಒಳ್ಳೆಯ ನಕ್ಷತ್ರವೆನ್ನುವ ಪಕ್ಷದಲ್ಲಿ 'ಅಗಾತ್' ಎಂದರೆ ಹೋಯಿತೆಂದು ಅರ್ಥವಲ್ಲ. ಇನ್ನೇನು, ಹೋಗಿಬಿಡುತ್ತದೆ ಎಂದರ್ಥ. ಪೂರ್ತಿಹೋಗುವುದರೊಳಗೆ ದೈತ್ಯನನ್ನು ಕೊಲ್ಲು ಎಂದರ್ಥ. 'ಅಭ್ಯಗಾತ್' ಎಂಬ

ಪಾತದಲ್ಲಿ 'ಅಭಿಜಿತ್' ಒಳ್ಳೆಯಯೋಗವೇ ಅದು ಪ್ರಾಪ್ತವಾಗಿದೆ. ಈಗಲೆ ಕೊಲ್ಲು ಎಂದರ್ಥ. ಆದರೆ ಭಾದ್ರಪದ ಶುದ್ಧಪಂಚಮಿಯಂದು ಅವತರಿಸಿದ ಭೂವರಾಹ ಅಂದೇ ಮಧ್ಯಾಹ್ನದಲ್ಲಿ ಹಿರಣ್ಯಾಕ್ಷನನ್ನು ವಧಿಸಿರಬೇಕು. ತುಲಾಸಂಕ್ರಮಣ ಪರ್ಯಂತ ಏಕೆ ಕಾಯುತ್ತಾನೆ? ಏನು ಪ್ರಮಾಣ?

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಏಕೋನವಿಂಶೋಽಧ್ಯಾಯಃ ||

—o—

ಅಧ್ಯಾಯ–೨೦

ಅಧ್ಯಾಯಸಾರಾಂಶ

ಹಿರಣ್ಯಾಕ್ಷನ ಗದೆಯೇಟಿಗೆ ಹರಿಯ ಕೈಯ ಗದೆ ಕೆಳಗೆ ಬಿದ್ದಿತು. ನಿರಾಯುಧನ ಮೇಲೆ ಕೈಮಾಡೆನೆಂದು ಹಿರಣ್ಯಾಕ್ಷ ಸುಮ್ಮನೆ ನಿಂತ. ಹರಿ ಕೋಪಗೊಂಡು ಸುದರ್ಶನಚಕ್ರವನ್ನು ನೆನೆದ. ಚಕ್ರದಿಂದ ದೈತ್ಯನ ಗದೆಯನ್ನು ತುಂಡರಿಸಿದ. ಆತ ಹರಿಯ ಎದೆಗೆ ಗುದ್ದಿ ಮಾಯೆಯಿಂದ ಕಣ್ಮರೆಯಾಗಿ ನಿಂತು ನಾನಾ ಬಗೆಯ ಮಾಯಾಸೃಷ್ಟಿ ಮಾಡಿದ. ಹರಿಯ ಚಕ್ರ ಅವೆಲ್ಲವನ್ನೂ ನಾಶ ಮಾಡಿತು. ದಿತಿಯ ಎದೆ ನಡುಗಿತು. ಕಶ್ಯಪರ ಮಾತು ನೆನಪಾಗಿ ಸ್ತನಗಳಿಂದ ರಕ್ತ ಸುರಿಯಿತು. ದೈತ್ಯ ಹರಿಯನ್ನು ತನ್ನ ತೋಳುಗಳ ಮಧ್ಯೆ ಬಂಧಿಸಿದ. ಆದರೆ ಹರಿ ತಪ್ಪಿಸಿಕೊಂಡು ಹೊರಗೆ ನಿಂತು ಕೆನ್ನೆಗೆ ಕೈಯಿಂದ ಹೊಡೆದ. ಒಡನೆ ದೈತ್ಯ ಬುಡ ಕಡಿದ ಮರದಂತೆ ದೊಪ್ಪನೆ ಬಿದ್ದು ಅಸು ನೀಗಿದ. ದೇವತೆಗಳು ಹರಿಯನ್ನು ಕೊಂಡಾಡಿದರು.

* * *

ಶ್ರೀವರಾಹ ಹಿರಣ್ಯಾಕ್ಷನೊಂದಿಗೆ ಹೋರಾಡುತ್ತಿದ್ದಾನೆ. ಸಂಧ್ಯಾಕಾಲ ಬರುವುದರೊಳಗೆ ಅವನನ್ನು ವಧಿಸಬೇಕು. ಆದರೆ ಶ್ರೀವರಾಹನ ಕೈಯ ಗದೆ ಕೆಳಗೆ ಬಿದ್ದಿತು. ಆಗ ನಿರಾಯುಧನೊಂದಿಗೆ ಯುದ್ಧ ಸಲ್ಲದೆಂದು ಹಿರಣ್ಯಾಕ್ಷ ತಡೆದು ನಿಂತುದಕ್ಕೆ ಶ್ರೀವರಾಹ ಇದು ಸರಿಯಾದ ಯುದ್ಧಮಾರ್ಗವೆಂದು ಮೆಚ್ಚಿಗೆ ಸೂಚಿಸಿ ಚಕ್ರವನ್ನು ಸ್ಮರಿಸಿದ.

ಗದಾಯಾಮಪವಿದ್ಧಾಯಾಂ ಹಾಹಾಕಾರೇ ವಿನಿರ್ಗತೇ ।
ಮಾನಯಾಮಾಸ ತದ್ಧರ್ಮಂ ಸುನಾಭಂ ಚಾಸ್ಮರದ್ ವಿಭುಃ ॥ ೫ ॥

ಗದೆ ಶ್ರೀವರಾಹನ ಕೈಯಿಂದ ಕೆಳಗೆ ಬಿದ್ದಾಗ ಹಾಹಾಕಾರವೆದ್ದಿತು. ಹಿರಣ್ಯಾಕ್ಷ ನಿರಾಯುಧನ ಮೇಲೆ ಕೈ ಮಾಡದೆ ನಿಂತಿದ್ದಕ್ಕೆ 'ಸರಿ' ಎಂದು ಮೆಚ್ಚಿಗೆ ಸೂಚಿಸಿ ಶ್ರೀವರಾಹ ಸುದರ್ಶನ ಚಕ್ರವನ್ನು ಸ್ಮರಿಸಿದ.

ಇಲ್ಲಿ ಹಿರಣ್ಯಾಕ್ಷ ನಿರಾಯುಧನ ಮೇಲೆ ಕೈ ಮಾಡದಿದ್ದುದು ಧರ್ಮ ಎಂದು ಶ್ರೀವರಾಹನೇ ಮೆಚ್ಚಿದ ಎಂದಿದೆ. ಇದು 'ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತ್ಯೈಃ ಕೃತೋ ಹರೇಃ ।' ಹರಿಯಲ್ಲಿ ಭಕ್ತಿ ಇಲ್ಲದೆ ಧರ್ಮಾಚರಣೆ ಮಾಡಿದರೂ ಅದು ಅಧರ್ಮವೆ ಆಗುತ್ತದೆ ಎಂಬ ನಿಯಮಕ್ಕೆ ವಿರುದ್ಧವಾಗುತ್ತದೆ. ಬೇರೆ ವ್ಯಾಖ್ಯಾನಕಾರರಿಗೆ ಈ ಸಮಸ್ಯೆಯೇ ಇಲ್ಲ. ಅವರ ಪ್ರಕಾರ ಹಿರಣ್ಯಾಕ್ಷ ಭಕ್ತಿಯಿಂದಲೆ ಯುದ್ಧ ಮಾಡುತ್ತಾನೆ 'ಹತೋಽಸಿ' ಎಂದು ಹೇಳುತ್ತ ಕ್ರೂರದೃಷ್ಟಿಯಿಂದ ಸುಟ್ಟುಹಾಕುವಂತೆ ನೋಡುತ್ತ ಗದೆಯಿಂದ ಹಿರಣ್ಯಾಕ್ಷ ಹೊಡೆದರೆ 'ಕ್ಷಾತ್ರಧರ್ಮದಿಂದ ಸೇವೆ ಮಾಡಿದನೆನ್ನುವುದು ವಾಸ್ತವ ಸಂಗತಿ' ಎನ್ನುತ್ತದೆ [೧]ರಾಧಾರಮಣವ್ಯಾಖ್ಯಾನ. ಅಸುರಾವೇಶದಿಂದ ಹಿರಣ್ಯಾಕ್ಷ ದ್ವೇಷ ಮಾಡುತ್ತಿದ್ದಾನೆ ಎನ್ನುವುದರ ಕಲ್ಪನೆಯೆ ಅವರಿಗಿಲ್ಲ. ಅದರಿಂದ ವಲ್ಲಭವ್ಯಾಖ್ಯಾನದಲ್ಲಿ 'ಮಾನಯಾಮಾಸ' ಶ್ರೀವರಾಹನು ಹಿರಣ್ಯಾಕ್ಷನ ಈ ಯುದ್ಧದ ಧರ್ಮವನ್ನು ಧರ್ಮವೆಂದು ಅಂಗೀಕರಿಸಿದ. ಅಂಗೀಕರಿಸದಿರುತ್ತಿದ್ದರೆ ಆ ಧರ್ಮ ಫಲದಾಯಕವಾಗುತ್ತಿರಲಿಲ್ಲ' ಎಂದಿದೆ. ಏನು ಫಲ ಸಿಕ್ಕಿದೆ? ಅದರಿಂದ ಈ ಸಮಸ್ಯೆಗೆ ಶ್ರೀಮದಾಚಾರ್ಯರು ಪರಿಹಾರ ಹೇಳುತ್ತಾರೆ.

ಇಲ್ಲಿ ಇನ್ನೊಂದು ಸಮಸ್ಯೆ. ವರಾಹನ ಕೈಯಿಂದ ಗದೆ ಜಾರಿ ಬಿದ್ದಿತು. ಒಡನೆ ಸುದರ್ಶನಚಕ್ರವನ್ನು ಸ್ಮರಿಸುತ್ತಾನೆ ಏಕೆ? ಇಚ್ಛಾಮಾತ್ರದಿಂದ ದೈತ್ಯನನ್ನು ರಣರಂಗದಲ್ಲಿ ಸ್ತಂಭೀಭೂತನಾಗುವಂತೆ ಮಾಡಬಹುದಿತ್ತು. ಕೈಯಿಂದಲೆ ಹೊಡೆಯಬಹುದಾಗಿತ್ತು. ಕೊನೆಗೂ ಕಿವಿಯ ಕೆಳಭಾಗದಲ್ಲಿ ಕೈಯಿಂದ ಹೊಡೆದೇ ಕೊಲ್ಲುತ್ತಾನೆ. ಸುದರ್ಶನ ಚಕ್ರವನ್ನೇಕೆ ಸ್ಮರಿಸಬೇಕಿತ್ತು? ಇದಕ್ಕೂ ಉತ್ತರ ಹೇಳುತ್ತಾರೆ–

ಧರ್ಮಃ ಸತ್ಯಮಿತಿ ಪ್ರೋಕ್ತೋ ಧರ್ಮಶ್ಚಾಪಿ ಹರೇಃ ಪ್ರಿಯಃ ॥
ಇತಿ ಬ್ರಾಹ್ಮೇ ।

ಯಥೇಚ್ಛಯೈವ ಸರ್ವಂ ತು ಮನಸಾ ದೇಹತೋಽಪಿ ವಾ ।
ಕರ್ತುಂ ಶಕ್ತೋಽಪಿ ಶಸ್ತ್ರಾದ್ಯಾ ಲೀಲೈವಾನಂತಶಕ್ತಿತಃ ॥
ಇತಿ ವಾರಾಹೇ ॥

---

೧. ಸ್ವಗದಯಾಹನತ್ ಕ್ಷಾತ್ರಧರ್ಮೇಣ ಸೇವಿತವಾನಿತಿ ವಾಸ್ತವೋಽರ್ಥಃ ।
–ರಾಧಾರಮಣದಾಸಃ

ತಸ್ಯಾಯುಧರಹಿತವಧಾಭಾವಲಕ್ಷಣಂ ಧರ್ಮಂ ಮಾನಯಾಮಾಸ । ಅನ್ಯಥಾ ಭಗವದನಂಗೀಕೃತೋ ಧರ್ಮಃ ಫಲದಾಯೀ ನ ಭವೇತ್ । –ವಲ್ಲಭಃ

ಇದು 'ಸರಿ' ಶಾಸ್ತ್ರವಿಧಿಗನುಸಾರವಾಗಿದೆ ಎಂದು ಬಲ್ಲವರು ಹೇಳಿದರೆ ಸಾಕು. ಅದು ಲೌಕಿಕವಾಗಿ ಧರ್ಮವೆನಿಸುತ್ತದೆ. ಹರಿಗೆ 'ಪ್ರಿಯ'ವೆನಿಸಿದ್ದು ಕೂಡ, ಅದು ಅಧರ್ಮವಾಗಿದ್ದರೂ ನಿಜವಾಗಿ ಧರ್ಮವೆಂದೇ ಎನಿಸುತ್ತದೆ. ಎಂದು ಬ್ರಾಹ್ಮ ಪುರಾಣದಲ್ಲಿ ಹೇಳಿದೆ. (ಅದರಿಂದ ಶ್ರೀವರಾಹ ಹಿರಣ್ಯಾಕ್ಷನ ಯುದ್ಧಧರ್ಮವನ್ನು 'ಸರಿ' ಎಂದು ಮೆಚ್ಚಿದನೇ ಹೊರತು 'ಪ್ರಿಯ' ಎನ್ನಲಿಲ್ಲ. ಅದರಿಂದ ಅದು ಅವನ ಪ್ರೀತಿಕರವಾದ ಧರ್ಮವಾಗಲಿಲ್ಲ. ಲೌಕಕಧರ್ಮವಾಯಿತು.)

'ತನ್ನಿಚ್ಛೆಯಂತೆಯೆ ಎಲ್ಲವನ್ನೂ ಮನಸ್ಸಿನಿಂದಲೇ ಅಥವಾ ಶರೀರದಿಂದಲೆ ಮಾಡಲು ಶಕ್ತನಾಗಿದ್ದರೂ ಶ್ರೀಹರಿ ಶಸ್ತ್ರವನ್ನು ಹಿಡಿಯುವುದು ಮುಂತಾದುದನ್ನು ಮಾಡುತ್ತಾನೆ. ಅದು ಕೇವಲ ಲೀಲೆಯೆ. ಏಕೆಂದರೆ ಅವನು ಅಪರಿಮಿತ ಶಕ್ತಿ ಉಳ್ಳವನು' ಎಂದು ವರಾಹಪುರಾಣದಲ್ಲಿ ಹೇಳಿದೆ.

* * *

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ವಿಂಶೋಽಧ್ಯಾಯಃ ॥

—o—

ಅಧ್ಯಾಯ–೨೧

ಅಧ್ಯಾಯಸಾರಾಂಶ

ಬ್ರಹ್ಮದೇವರು ಸೃಷ್ಟಿಯನ್ನು ಮುಂದುವರಿಸಿದರು. ರಾತ್ರಿ, ಹಗಲು, ಸಂಧ್ಯೆ, ಬೆಳದಿಂಗಳು ಮುಂತಾದುವನ್ನು ತಮ್ಮ ಬಾಹ್ಯಶರೀರವಾಗಿ ಮಾಡಿಕೊಂಡು ಆ ಶರೀರಗಳಿಂದ ದೇವತೆಗಳು ಅಸುರರು ಮುಂತಾದವರನ್ನು ಹುಟ್ಟಿಸಿ ಅವರಿಗೇ ಆಯಾ ಶರೀರಗಳನ್ನು ಬಿಟ್ಟುಕೊಟ್ಟರು. ಮೊದಲಿಗೆ ರಾತ್ರಿ ಎಂಬ ಶರೀರದಿಂದ ಅವಿದ್ಯೆಯನ್ನೂ ಯಕ್ಷರಾಕ್ಷಸರನ್ನೂ ಹಗಲು ಎಂಬ ಶರೀರದಿಂದ ದೇವತೆಗಳನ್ನೂ, ಸಂಧ್ಯೆ ಎಂಬ ಶರೀರದಿಂದ ಅಸುರರನ್ನೂ ಹುಟ್ಟಿಸಿದರು. ಸಂಧ್ಯೆ ಎಂಬ ಸ್ತ್ರೀಶರೀರವನ್ನು ಕಂಡು ಅಸುರರು ಕಾಮಾಕ್ರಾಂತರಾಗಿ ಬಲಾತ್ಕರಿಸಲು ತೊಡಗಿದಾಗ ಹರಿಯಾಜ್ಞೆಯಂತೆ ಆ ಶರೀರವನ್ನು ಅವರಿಗೇ ಬಿಟ್ಟುಕೊಟ್ಟರು. ಬೆಳದಿಂಗಳಿಂದ ಗಂಧರ್ವಾಪ್ಸರೆಯರನ್ನೂ ಆಕಳಿಕೆಯಿಂದ ಭೂತ ಪಿಶಾಚಾದಿಗಳನ್ನೂ, ಅತೀಂದ್ರಿಯಶರೀರದಿಂದ ಸಾಧ್ಯರನ್ನೂ ಪಿತೃ ಗಣಗಳನ್ನೂ, ಅಂತರ್ಧಾನಶಕ್ತಿಯಿಂದ ಸಿದ್ಧವಿದ್ಯಾಧರರನ್ನೂ ಪ್ರತಿಬಿಂಬದಿಂದ ಕಿನ್ನರ ಕಿಂಪುರುಷರನ್ನೂ, ಕೂದಲು ಇಲ್ಲದ ಸರ್ಪ ಶರೀರದಿಂದ ಹಾವುಗಳನ್ನೂ, ಮಾನವಶರೀರದಿಂದ ಮನುಗಳನ್ನೂ, ಯೋಗದಿಂದ ಋಷಿಗಳನ್ನೂ ಹುಟ್ಟಿಸಿ ಆ ಬೆಳದಿಂಗಳು ಮುಂತಾದವುಗಳ ಮೇಲೆ ಅಭಿಮಾನವನ್ನು ಅವರಿಗೆ ಕೊಟ್ಟರು. ಮಾನವಶರೀರದಿಂದ ಮನುಗಳನ್ನು ಸೃಷ್ಟಿಸಿದ್ದನ್ನು ದೇವತೆಗಳು ಪ್ರಶಂಸಿಸಿದರು.

ವಿದುರನು ಮೈತ್ರೇಯರಲ್ಲಿ 'ಬ್ರಹ್ಮದೇವರು ಮರೀಚಿ ಮುಂತಾದ ಪ್ರಜಾಪತಿಗಳನ್ನು ಹುಟ್ಟಿಸಿದ ಬಳಿಕ ಸೃಷ್ಟಿಯನ್ನು ಮುಂದುವರಿಸಲು ಏನೇನು ಮಾಡಿದರು?' ಎಂದು ಕೇಳಿದಾಗ ಮೈತ್ರೇಯರು ಮೊದಲಿಗೆ ಪರಮಾತ್ಮ ಮಾಡಿದ ಮಹದಾದಿಸೃಷ್ಟಿಯನ್ನು ಪುನಃ ಹೇಳುತ್ತಾರೆ–

ಮೈತ್ರೇಯ ಉವಾಚ–

ದೇವೈನ ದುರ್ವಿತರ್ಕ್ಯೇಣ ಪರೇಣಾನಿಮಿಷೇಣ ಚ ।
ಜಾತಕ್ಷೋಭಾದ್ ಭಗವತೋ ಮಹಾನಾಸೀದ್ ಗುಣತ್ರಯಾತ್
॥ ೧೨ ॥

ರಜಃಪ್ರಧಾನಾನ್ಮಹತಸ್ತ್ರಿಲಿಂಗೋ ದೈವಚೋದಿತಾತ್ ।
ಜಾತಃ ಸಸರ್ಜ ಭೂತಾದಿರ್ವಿಯದಾದೀನಿ ಪಂಚ ಚ ॥ ೧೩ ॥

ಮೈತ್ರೇಯರು ನುಡಿದರು–
ಊಹಿಸಲು ಶಕ್ಯವಾಗದ ಅದೃಷ್ಟ, ಕಾಲ ಮತ್ತು ಪರಮಾತ್ಮ ಪ್ರೇರಣೆಗಳಿಂದ ಕ್ಷೋಭಗೊಂಡ ಗುಣತ್ರಯದಿಂದ ಮಹತ್ತತ್ವವೂ ಅದರ ಅಭಿಮಾನಿಗಳಾದ ಬ್ರಹ್ಮ ವಾಯು ಮತ್ತು ಅವರ ಪತ್ನಿಯರೂ ಜನಿಸಿದರು. ಮಹತ್ತತ್ವ ಮತ್ತು ಅದರ ಅಭಿಮಾನಿಗಳಿಂದ ವೈಕಾರಿಕ ತೈಜಸ ತಾಮಸಗಳೆಂದು ಮೂರು ವಿಧವಾದ ಅಹಂಕಾರತತ್ವವೂ ಅದಕ್ಕೆ ಅಭಿಮಾನಿಗಳಾದ ಗರುಡ ಶೇಷ ರುದ್ರರೂ ಅವರ ಪತ್ನಿಯರೂ ಜನಿಸಿದರು. ತಾಮಸಾಹಂಕಾರದಿಂದ ಪಂಚಭೂತಗಳೂ ತೈಜಸಾ ಹಂಕಾರದಿಂದ ಇಂದ್ರಿಯಗಳೂ ವೈಕಾರಿಕಾಹಂಕಾರದಿಂದ ಮನಸ್ಸು ಮತ್ತು ದೇವಶರೀರಗಳೂ ಜನಿಸಿದುವು.

ಇಲ್ಲಿ ಸೃಷ್ಟಿಯನ್ನು ಮುಂದುವರಿಸಲು ಬ್ರಹ್ಮದೇವರು ಏನು ಮಾಡಿದರೆಂದು ವಿದುರನ ಪ್ರಶ್ನೆಗೆ ಮೈತ್ರೇಯರು ಪರಮಾತ್ಮ ಮಾಡಿದ ಮಹದಾದಿಸೃಷ್ಟಿಯನ್ನು ಹಿಂದೆ ಹೇಳಿದ್ದನ್ನೇ ಏಕೆ ತಿರುಗಿ ಹೇಳುತ್ತಾರೆ? ಇದಕ್ಕೆ ಬೇರೆ ವ್ಯಾಖ್ಯಾನಕಾರರು ಇಷ್ಟೇ ಹೇಳುತ್ತಾರೆ– 'ಬ್ರಹ್ಮನ ಸೃಷ್ಟಿಯನ್ನು ವಿವರವಾಗಿ ಹೇಳುವುದಕ್ಕೆ ಮೊದಲು ಪರಮಾತ್ಮ ಮಾಡಿದ ಸೃಷ್ಟಿಯನ್ನು ನೆನಪಿಸುವುದಕ್ಕಾಗಿ ಸಂಕ್ಷೇಪದಿಂದ ಅನುವಾದ ಮಾಡಿದ್ದಾರೆ.' ಎಂದು. ಶ್ರೀಮದಾಚಾರ್ಯರು ಹೇಳುತ್ತಾರೆ 'ಪುರಾಣಗಳಲ್ಲಿ ಸೃಷ್ಟಿಲಯಗಳನ್ನು ವಿವರವಾಗಿ ಹೇಳುವುದು ದೇವತಾತಾರತಮ್ಯಜ್ಞಾನಕ್ಕಾಗಿ, ತಾರತಮ್ಯವನ್ನು ತಿಳಿಸುವುದರಲ್ಲಿ ಬಹಳ ಆದರವಿರುವುದರಿಂದಲೆ ಸೃಷ್ಟಿಲಯಗಳನ್ನು ಬಹು ಸ್ಥಳಗಳಲ್ಲಿ ಪುನಃ ಪುನಃ ಹೇಳುತ್ತಾರೆ.

ಜಡವಾದ ಮಹದಾದಿತತ್ವಗಳ ಸೃಷ್ಟಿಲಯಗಳನ್ನು ಹೇಳಿದ್ದರಿಂದ ದೇವತಾತಾರತಮ್ಯ ಹೇಗೆ ತಿಳಿದು ಬರುತ್ತದೆ ಎಂದರೆ ಮಹದಾದಿ ಸೃಷ್ಟಿಯನ್ನು ಹೇಳುವಲ್ಲೆಲ್ಲ ಆ ತತ್ವಗಳ ಅಭಿಮಾನಿಗಳ ಸೃಷ್ಟಿಯೂ ವಿವಕ್ಷಿತವಾಗಿದೆ. ಉದಾ: ಮಹತ್ತತ್ವ ಎಂಬ ಶಬ್ದ ಜಡವಾದ ಮಹತ್ತತ್ವವನ್ನು ಮಾತ್ರವಲ್ಲದೆ ಅದರ ಅಭಿಮಾನಿಗಳನ್ನೂ ಹೇಳುತ್ತದೆ. ಅದು ಶಬ್ದ ಸ್ವಭಾವ. ಅದರಿಂದ ತತ್ವಗಳ ಸೃಷ್ಟಿಲಯವರ್ಣನೆ ತತ್ವಾಭಿಮಾನಿಗಳ ಸೃಷ್ಟಿಲಯ ವರ್ಣನೆಯಾಗಿರುತ್ತದೆ. ಮೊದಲು ಹುಟ್ಟಿದವರು ಅನಂತರ ಹುಟ್ಟಿದವರಿಗಿಂತ ಶ್ರೇಷ್ಠ. ಕೊನೆಗೆ ಲಯ ಹೊಂದುವವರು ಮೊದಲು ಲಯಹೊಂದುವವರಿಗಿಂತ ಶ್ರೇಷ್ಠರೆಂದು ತಾರತಮ್ಯ ಸಿದ್ಧವಾಗುವುದು. ಅದರಲ್ಲಿಯೂ ಮಹದಾದಿ ಸೂಕ್ಷ್ಮಸೃಷ್ಟಿಲಯಗಳೇ ತಾರತಮ್ಯನಿರ್ಣಾಯಕ. ಸ್ಥೂಲ

ಸೃಷ್ಟಿಲಯಗಳಲ್ಲ. ಬ್ರಹ್ಮಸೃಷ್ಟಿ ಸ್ಥೂಲಸೃಷ್ಟಿಯಾಗಿರುವುದರಿಂದ ದೇವತಾತಾರತಮ್ಯಕ್ಕೆ ಉಪಯೋಗಿಯಲ್ಲ. ಅದರಿಂದ ಅದನ್ನು ಹೇಳುವುದಕ್ಕೆ ಮೊದಲು ತಾರತಮ್ಯೋಪಯೋಗಿಯಾದ ಸೂಕ್ಷ್ಮಸೃಷ್ಟಿಯನ್ನೇ ತಿರುಗಿ ಸಂಕ್ಷೇಪವಾಗಿ ಅನುವಾದ ಮಾಡುತ್ತಾರೆ'

ಸೃಷ್ಟೌ ಲಯೇ ತಾರತಮ್ಯಂ ದೇವಾನಾಂ ಜ್ಞಾಯತೇ ಸ್ಫುಟಮ್ ।
ತಾರತಮ್ಯಪರಿಜ್ಞಾನೇ ಮಹಾತಾತ್ಪರ್ಯಮಿಷ್ಯತೇ ।
ಅತಸ್ತದ್ ಬಹುಶಸೂಕ್ತಮನ್ಯಚ್ಚೈತತ್ಪ್ರಕಾಶಕಮ್ ॥
ಇತಿ ವಾಮನೇ ॥

ಮಹತೋ ಬ್ರಹ್ಮವಾಯೂ ಚ ತದ್ಭಾರ್ಯೇ ಚಾಭಿಮಾನಿನಃ ।
ಅಹಮಃ ಶೇಷವೀಂದ್ರೌ ಚ ರುದ್ರೇಂದ್ರೌ ಕಾಮತತ್‌ಸ್ತ್ರಿಯಃ ॥

ಮನಸಸ್ತ್ವನಿರುದ್ಧಶ್ಚ ಚಂದ್ರಶ್ಚಾನ್ಯೇ ಯಥೋದಿತಮ್ ।
ಏವಂ ಕ್ರಮೋ ವ್ಯತ್ಯಯಸ್ತು ಸೂಕ್ಷ್ಮಸ್ಥೂಲಾದಿಭೇದತಃ ॥

ಸೃಷ್ಟೌ ಗುಣೇ ಚ ಜ್ಞಾನಾದೌ ಮುಕ್ತಿಸ್ಥೇ ಚಾಪ್ಯಯಂ ಕ್ರಮಃ ।
ನಿಯಮೇನಾನ್ಯಥೋಕ್ತಿಸ್ತು ಮೋಹಾಯಾಸುರಜನ್ಮನಾಮ್ ॥
ಇತಿ ವಾರಾಹೇ ॥

ಸೃಷ್ಟಿಯಲ್ಲಿಯೂ ಲಯದಲ್ಲಿಯೂ ದೇವತೆಗಳ ತಾರತಮ್ಯ ಸ್ಫುಟವಾಗಿ ತಿಳಿಯತ್ತದೆ. ತಾರತಮ್ಯ ಪರಿಜ್ಞಾನದಲ್ಲಿಯೇ ಪುರಾಣಾದಿಗಳಿಗೆ ಮಹಾತಾತ್ಪರ್ಯ ವಿರುತ್ತದೆ. ಅದರಿಂದ ಬಹಳ ಕಡೆ ಅದನ್ನೇ ಹೇಳುತ್ತಾರೆ. ದೇವತೆಗಳ ಸ್ವರೂಪ ಅವರ ಕಥೆಗಳು ಮುಂತಾದ ಬೇರೆ ವಿಷಯಗಳನ್ನು ವರ್ಣಿಸುವುದಕ್ಕೂ ತಾರತಮ್ಯವನ್ನು ಸ್ಪಷ್ಟೀಕರಿಸುವುದರಲ್ಲಿಯೇ ತಾತ್ಪರ್ಯ ಎಂದು ವಾಮನ ಪುರಾಣದಲ್ಲಿ ಹೇಳಿದೆ.

ಮಹತ್ತತ್ವಕ್ಕೆ ಬ್ರಹ್ಮವಾಯು ಮತ್ತು ಅವರ ಪತ್ನಿಯರು ಅಭಿಮಾನಿಗಳು. ಅಹಂಕಾರತತ್ವಕ್ಕೆ ಶೇಷ ಗರುಡ ರುದ್ರ ಇಂದ್ರ ಕಾಮ ಮತ್ತು ಅವರ ಪತ್ನಿಯರು ಅಭಿಮಾನಿಗಳು. ಮನಸ್ಸಿಗೆ ಅನಿರುದ್ಧ ಚಂದ್ರರು ಅಭಿಮಾನಿಗಳು. ಹೀಗೆ ಬೇರೆ ಇಂದ್ರಿಯ ಮುಂತಾದ ತತ್ವಗಳಿಗೂ ಅಭಿಮಾನಿಗಳು ಉಕ್ತರಾಗಿದ್ದಾರೆ. ಈ ಕ್ರಮವೇ ತಾರತಮ್ಯಾನುಗುಣವಾದುದು. ಸೃಷ್ಟಿಯಲ್ಲಿ ಸೂಕ್ಷ್ಮ ಸ್ಥೂಲ ಸ್ಥೂಲತರ ಭೇದದಿಂದ ಈ ಕ್ರಮದಲ್ಲಿಯೂ ವ್ಯತ್ಯಾಸ ಉಂಟು. ಸೂಕ್ಷ್ಮದಲ್ಲಿ ತಾರತಮ್ಯಾನುಗುಣಬಾಗಿಯೆ ಕ್ರಮವಿರುತ್ತದೆ. ಸ್ಥೂಲ

ಸ್ಥೂಲತರಗಳಲ್ಲಿ ಬೇರೆ ಕ್ರಮವಿರುತ್ತದೆ. 'ಸೃಷ್ಟೌ' ಅಂದರೆ ಸಂಸಾರದಲ್ಲಿರುವಾಗಲೂ 'ಮುಕ್ತಿಸ್ಥೇ' ಮುಕ್ತಿಯಲ್ಲಿರುವಾಗಲೂ ಜ್ಞಾನಾದಿಗುಣಗಳಲ್ಲಿ ದೇವತೆಗಳಿಗೆ ಈ ತಾರತಮ್ಯಕ್ರಮವೇ ಇರುತ್ತದೆ. ಅದಿಲ್ಲವೆಂದು ಹೇಳಿದ್ದರೆ ಅದು ಅಸುರಜನ್ಮಹೊಂದಿರುವವರಿಗೆ ಭ್ರಾಂತಿ ಉಂಟಾಗಲೆಂದೇ ಹೇಳಿರುತ್ತದೆ' ಎಂದು ವರಾಹಪುರಾಣದಲ್ಲಿ ಹೇಳಿದೆ.

* * *

ಮಹದಾದಿ ತತ್ವಗಳೆಲ್ಲವೂ ಸೇರಿ ಭಗವಂತನ ಅನುಗ್ರಹದಿಂದ ಬ್ರಹ್ಮಾಂಡಸೃಷ್ಟಿ ಮಾಡಿದುವು. ಒಂದು ಸಾವಿರ ವರ್ಷಕಾಲ ಬ್ರಹ್ಮಾಂಡವು ನಿರಾತ್ಮಕವಾಗಿ ಇದ್ದಿತು. ಅಂದರೆ ಅದರಲ್ಲಿ ಪರಮಾತ್ಮ ವ್ಯಕ್ತನಾಗಿರಲಿಲ್ಲ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ಸೋಽಶಯಿಷ್ಟಾಧಿಸಲಿಲ ಆಂಡಕೋಶೋ ನಿರಾತ್ಮಕಃ ।
ಸಾಗ್ರಂ ವೈ ವರ್ಷಸಾಹಸ್ರಮನ್ವವಾತ್ಸೀತ್ ತಮೀಶ್ವರಃ ॥ ೧೫ ॥

ಜಲಾವರಣದ ನೀರಿನಲ್ಲಿ ಬ್ರಹ್ಮಾಂಡವು ನಿರಾತ್ಮಕವಾಗಿ ದೇವಮಾನದ ಒಂದು ಸಾವಿರ ವರ್ಷ ಕಾಲ ಪೂರ್ತಿ ಹಾಗೇ ಇದ್ದಿತು. ಅದರೊಳಗೆ ಅವ್ಯಕ್ತನಾಗಿ ಭಗವಂತನಿದ್ದ.

ಇಲ್ಲಿ ಬ್ರಹ್ಮಾಂಡವು ನಿರಾತ್ಮಕವಾಗಿತ್ತೆಂದರೆ ಅದರಲ್ಲಿ ಆಗ ಯಾವ ಅಧಿಷ್ಠಾತೃಚೇತನವಿರಲಿಲ್ಲ ಎಂದು ವೀರರಾಘವವ್ಯಾಖ್ಯಾನ ಗಿರಿಧರವ್ಯಾಖ್ಯಾನಗಳು. ಸಮಷ್ಟಿಜೀವ ಎಚ್ಚೆತ್ತಿರಲಿಲ್ಲ ಎಂದು ವಿಶ್ವನಾಥವ್ಯಾಖ್ಯಾನ ರಾಧಾರಮಣ ವ್ಯಾಖ್ಯಾನಗಳು. ಜೀವರು ಎಚ್ಚೆತ್ತಿರಲಿಲ್ಲ ಎಂದು ಜೀವಗೋಸ್ವಾಮಿವ್ಯಾಖ್ಯಾನ. ಪರಮಾತ್ಮ ಅದಕ್ಕೆ ಆಗ ಅಧಿಷ್ಠಾತೃವಾಗಿರಲಿಲ್ಲ ಎಂದು ಶುಕದೇವವ್ಯಾಖ್ಯಾನ ವಲ್ಲಭವ್ಯಾಖ್ಯಾನಗಳು. ಶ್ರೀಮದಾಚಾರ್ಯರು ಹೇಳುತ್ತಾರೆ. ಅಂಡವೆಂದಮೇಲೆ ಅದು ನಿರ್ಜೀವವಾಗಿರಲು ಸಾಧ್ಯವಿಲ್ಲ. ಜೀವಂತವಾಗಿರಬೇಕಾದರೆ ಅದರಲ್ಲಿ ಪರಮಾತ್ಮನಿರಬೇಕು. ಇದ್ದಾನೆ, ಆದರೆ ಅವ್ಯಕ್ತನಾಗಿದ್ದಾನೆ. ಅವ್ಯಕ್ತನಾದ್ದರಿಂದ ಇಲ್ಲ ಎಂದು ವ್ಯವಹಾರಮಾತ್ರ.

ನಿರಾತ್ಮಕಃ । ನ ವ್ಯಕ್ತಸ್ತತ್ರಾತ್ಮಾ ।

ಬ್ರಹ್ಮಾಂಡ ನಿರಾತ್ಮಕವಾಗಿತ್ತೆಂದರೆ ಅದರಲ್ಲಿ ಪರಮಾತ್ಮ ವ್ಯಕ್ತನಾಗಿರಲಿಲ್ಲ ಎಂದಿಷ್ಟೇ ಅರ್ಥ.

* * *

ಬ್ರಹ್ಮಾಂಡದೊಳಗೆ ಬ್ರಹ್ಮದೇವರು ಹದಿನಾಲ್ಕು ಲೋಕಗಳನ್ನು ನಿರ್ಮಿಸಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸೋಽನುವಿಷ್ಟೋ ಭಗವತಾ ಯಃ ಶೇತೇ ಸಲಿಲಾಶಯೇ ।
ಲೋಕಸಂಸ್ಥಾಂ ಯಥಾಪೂರ್ವಂ ನಿರ್ಮಮೇ ಸಂಸ್ಥಯಾ ಸ್ವಯಾ ॥ ೧೭ ॥

ಜಲಶಾಯಿಯಾದ ವಿಷ್ಣುವಿನ ಆವೇಶಪಾತ್ರರಾದ ಬ್ರಹ್ಮದೇವರು ಅವನ ಸಾಮರ್ಥ್ಯದಿಂದಲೇ ಹಿಂದಿನಂತೆ ಹದಿನಾಲ್ಕು ಲೋಕ ಸೃಷ್ಟಿಮಾಡಿದರು.

[೧]ಇಲ್ಲಿ 'ಸ್ವಯಾ ಸಂಸ್ಥಯಾ' ಚತುರ್ಮುಖನು ತನ್ನ ಸಂಸ್ಥೆಯಿಂದ ಲೋಕಸಂಸ್ಥೆಯನ್ನು ನಿರ್ಮಿಸಿದನೆಂದರೆ ಚತುರ್ಮುಖ ತಾನು ವೇದದಿಂದ ವಿಚಾರಮಾಡಿ ನಿರ್ಧರಿಸಿರುವ ದೇವಾದಿಗಳ ನಾಮರೂಪಗಳಿಗೆ ಅನುಗುಣವಾಗಿ ತನ್ನದೇ ಆದ ರೀತಿಯಂದ ವ್ಯವಸ್ಥಿತವಾಗಿ ಲೋಕಗಳನ್ನು ಸೃಷ್ಟಿಮಾಡಿದನೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ವಸ್ತುತಃ ಬ್ರಹ್ಮನಿಗೆ ಮೊದಲಿಗೆ ಸೃಷ್ಟಿಮಾಡುವ ಕ್ರಮದ ಬಗ್ಗೆ ಸರಿಯಾದ ಸ್ಫೂರ್ತಿ ಇಲ್ಲದೆ ಭಗವಂತನನ್ನೇ ಪ್ರಾರ್ಥಿಸಿದ, ಆಗ ಭಗವಂತ ಅವನಿಂದ ತಪಸ್ಸು ಮಾಡಿಸಿ ಜ್ಞಾನ ನೀಡಿ ವೇದಾನುಸಾರವಾಗಿ ಸೃಷ್ಟಿ ಮಾಡೆಂದು ಆಜ್ಞಾಪಿಸಿದನೆಂದು ಹತ್ತನೇ ಅಧ್ಯಾಯದಲ್ಲಿ ಹೇಳಿದೆ. ಅದರಿಂದ ಸ್ವಯಾ ಸಂಸ್ಥಯಾ ಎಂದರೆ ತನ್ನದೇ ಆದ ವ್ಯವಸ್ಥೆ, ತಾನೇ ವೇದವನ್ನು ವಿಚಾರಮಾಡಿ ನಿರ್ಧರಿಸಿದ ಸೃಷ್ಟಿಕ್ರಮ ಎನ್ನುವುದು ಸರಿಯಲ್ಲ. ಅದರಿಂದ ಹೇಳುತ್ತಾರೆ–

ಸಂಸ್ಥಯಾ ಸ್ವಯಾ ಭಗವತಿ ಸ್ಥಿತಸಾಮರ್ಥ್ಯೇನ ।

ಸ್ವಯಾ ಸಂಸ್ಥಯಾ ಎಂದರೆ ಭಗವಂತನಲ್ಲಿ ಆಸರೆ ಹೊಂದಿ ನಿಂತಿರುವ ತನ್ನ ಸಾಮರ್ಥ್ಯದಿಂದ ಎಂದರ್ಥ.

* * *

ಬ್ರಹ್ಮದೇವರು ಯಕ್ಷರಾಕ್ಷಸರನ್ನು ಸೃಷ್ಟಿ ಮಾಡಿ ಯಕ್ಷರಾಕ್ಷಸರೆಂದು ಅವರಿಗೆ ನಾಮಕರಣ ಮಾಡಿದ ಬಗೆಯನ್ನು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

---

೧. ಸ್ವಯಾ ವೇದೇನ ಸ್ವಸ್ಮಿನ್ನನೇಕಧಾ ವಿಚಾರಿತಯಾ । –ರಾಧಾರಮಣದಾಸಃ

ಸ್ವಯಾ ಸಂಸ್ಥಯಾ ಪರಿಪಾಟ್ಯಾ ನಾಮರೂಪಾದಿಕ್ರಮಯಾ । –ವಿಶ್ವನಾಥಃ

ದೇವಸ್ತಾನಾಹ ಸಂವಿಗ್ನೋ ಮಾ ಮಾ ಜಕ್ಷತ ರಕ್ಷತ ।
ಅಹೋ ಮೇ ಯಕ್ಷರಕ್ಷಾಂಸಿ ಪ್ರಜಾ ಯೂಯಂ ಭವಿಷ್ಯಥ ॥ ೨೧ ॥

ತನ್ನಿಂದ ಸೃಷ್ಟರಾದ ಯಕ್ಷರಾಕ್ಷಸರು ತನ್ನನ್ನೇ ತಿನ್ನಲು ಬಂದರು. ಆಗ ಬ್ರಹ್ಮದೇವರು ಹೆದರಿ ಹೇಳುತ್ತಾರೆ 'ನನ್ನನ್ನು ತಿನ್ನಬೇಡಿರಿ, ಉಳಿಸಿರಿ, ನೀವು ನನ್ನ ಮಕ್ಕಳು ತಾನೆ? ನಿಮ್ಮಲ್ಲಿ 'ಜಕ್ಷತ' ತಿನ್ನಿರಿ ಎಂದವರು 'ಯಕ್ಷ'ರೆನಿಸಲಿ. 'ಮಾ ರಕ್ಷತ' ಉಳಿಸಬೇಡಿ ಎಂದವರು 'ರಾಕ್ಷಸ'ರೆನಿಸಲಿ' ಎಂದು.

ಇಲ್ಲಿ ಬ್ರಹ್ಮದೇವರಿಗೆ ತಾವು ಹುಟ್ಟಿಸುವ ಮಕ್ಕಳ ಸ್ವಭಾವ ಹೇಗಿರಬಹುದೆಂಬ ಕಲ್ಪನೆಯೆ ಇರಲಿಲ್ಲ, ಹುಟ್ಟಿಸಿದೊಡನೆ, ಅವರು ತಮನ್ನು ತಿನ್ನಲು ಬಂದಾಗ ಭಯಭೀತರಾದರು ಎಂದು ಹೇಳಿದಂತಿದೆ. ೨೬ನೇ ಶ್ಲೋಕದಲ್ಲಿ[೧]ವಲ್ಲಭವ್ಯಾಖ್ಯಾನ ಸ್ಪಷ್ಟ ಹೇಳುತ್ತದೆ. 'ಶ್ರೀಹರಿ, ನೀನು ನನಗೆ ಸ್ವಾಮಿ, ನಿಯಾಮಕ. ನೀನು ಹೇಳಿದಂತೆ ಸೃಷ್ಟಿ ಮಾಡಿದ್ದೇನೆ. ಇವರು ಈ ಸ್ವಭಾವದಿಂದ ಯುಕ್ತರಾಗಿ ಹುಟ್ಟುವರೆಂದು ನಿನಗೇ ಗೊತ್ತು, ನನಗೆ ಗೊತ್ತಿರಲಿಲ್ಲ.' ಎಂದು. ಇದು ಪೂರ್ವೋತ್ತರ ವಿರುದ್ಧವಾಗಿದೆ. ಹಿಂದೆ ಬ್ರಹ್ಮದೇವರಿಗೆ ಶ್ರೀಹರಿ ಸರಿಯಾದ ಜ್ಞಾನ ಕೊಟ್ಟೇ ಸೃಷ್ಟಿ ಮಾಡಲು ಆಜ್ಞೆ ಮಾಡಿದ್ದ. ಅದರಿಂದ ಬ್ರಹ್ಮದೇವರು ತನ್ನಲ್ಲಿ ಅಜ್ಞಾನ ಪ್ರದರ್ಶನ ಮಾಡುತ್ತಿದ್ದಾರೆ ಹರಿಪ್ರೀತಿಗಾಗಿ ಎಂದೇ ಹೇಳಬೇಕು.

ಜಾನನ್ನಪಿ ಸಮರ್ಥೋಽಪಿ ಕ್ವಚಿದ್ ಬ್ರಹ್ಮಾ ಹರೇಃ ಪ್ರಿಯಮ್ ।
ಜ್ಞಾತ್ವಾ ಕರೋತಿ ಕರ್ಮಾಣಿ ಹ್ಯಜ್ಞವಚ್ಚಾಪ್ಯಶಕ್ತವತ್ ॥ ಇತಿ ಚ ।

ಬ್ರಹ್ಮದೇವರು ತಾನು ಹುಟ್ಟಿಸುವ ಯಕ್ಷರಾಕ್ಷಸ ಮುಂತಾದವರ ಸ್ವಭಾವವನ್ನು ತಿಳಿದಿದ್ದರೂ ಅವರಿಂದ ತನಗೆ ಬರಬಹುದಾದ ಅಪಾಯವನ್ನು ಪರಿಹರಿಸಿಕೊಳ್ಳಲು ಸಮರ್ಥರೇ ಆಗಿದ್ದರೂ ಕೆಲವೊಮ್ಮೆ ಹರಿಗೆ ಪ್ರಿಯವೆಂದು ತಿಳಿದು ಅಜ್ಞಾನಿಯಂತೆ ಅಶಕ್ತನಂತೆ ಕರ್ಮ ಮಾಡುತ್ತಾರೆ' ಎಂದೂ ಹೇಳಿದೆ.

ಅದರಿಂದ ಹರಿ ಸರ್ವಜ್ಞ, ಸರ್ವಶಕ್ತ, ಅವನಿಗೆ ಹೋಲಿಸಿದರೆ ನಾನೇನೂ ಅಲ್ಲ ಎಂದು ವಿನಯದಿಂದ ಹರಿಪ್ರೀತಿಗಾಗಿ ಅಜ್ಞನೆಂದು ಅಶಕ್ತನೆಂದು ತೋರಿಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಅವರು ಹಾಗಿಲ್ಲ.

* * *

೧. ಮಮ ಪ್ರೇರ್ಯತ್ವಂ ತವ ಪ್ರೇರಕತ್ವಂ ಚ ನ ಸಂದಿಗ್ಧಂ । ಅತ ಏವ ತ್ವಯಾಹಂ ಪ್ರೇರಿತಃ । ಏತೇ ಏವಂವಿಧಾ ಉತ್ಪತ್ಸ್ಯಂತೀತಿ ಭವಾನೇವ ಜಾನಾತಿ, ನಾಹಂ । ಅತೋ ದೋಷಸಮಾಧಾನಮಪಿ ತ್ವಯ್ಯೆವ ಕರ್ತವ್ಯಂ । —ವಲ್ಲಭಃ

ಬ್ರಹ್ಮದೇವರು ದೇವತೆಗಳನ್ನು ಸೃಷ್ಟಿ ಮಾಡಿದರು. ವಿದ್ಯೆಯ ಪ್ರಭೆಯಿಂದ ಬೆಳಗುವ ಪ್ರಭೆ ಎಂಬ ಶರೀರದಿಂದ ಅವರನ್ನು ಸೃಷ್ಟಿಮಾಡಿ ಆ ಶರೀರವನ್ನು ಅವರಿಗೇ ಬಿಟ್ಟು ಕೊಟ್ಟರು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ

ದೇವತಾಃ ಪ್ರಭಯಾ ಯಾಯಾ ದಿವ್ಯಾಃ ಪ್ರಮುಖತೋಽಸೃಜತ್ ।
ತೇಽಹಾರ್ಷುರ್ದೇವಯಂತೋ ವಿಸೃಷ್ಟಾಂ ತಾಂ ಪ್ರಭಾಮಹಃ
॥ ೨೨ ॥

ಬ್ರಹ್ಮದೇವರು ಪ್ರಭೆಯೆಂಬ ಶರೀರದಿಂದ ದೇವತೆಗಳನ್ನು ಸೃಷ್ಟಿ ಮಾಡಿದರು. ಆ ದೇವತೆಗಳು ಬ್ರಹ್ಮದೇವರು ತ್ಯಾಗಮಾಡಿದ ಆ ಶರೀರವನ್ನೇ ತಮ್ಮದನ್ನಾಗಿ ಮಾಡಿಕೊಂಡರು. ಅದಕ್ಕೆ ಹಗಲೆಂದು ಹೆಸರಾಯಿತು.

ಇಲ್ಲಿ ಬ್ರಹ್ಮದೇವರು ಪ್ರಭೆ ಎಂಬ ತಮ್ಮ ಶರೀರದಿಂದ ದೇವತೆಗಳನ್ನು ಸೃಷ್ಟಿ ಮಾಡಿ ಬಳಿಕ ಆ ಶರೀರವನ್ನು ತ್ಯಾಗ ಮಾಡುತ್ತಾರೆ ಅದನ್ನು ದೇವತೆಗಳು ಸ್ವೀಕರಿಸುತ್ತಾರೆ ಎಂದಿದೆ. ಆದರೆ ಬ್ರಹ್ಮದೇವರು ಏಕೆ ಶರೀರತ್ಯಾಗ ಮಾಡಬೇಕು? ದೇವತೆಗಳಿಗೆ ಅವರ ಶರೀರಗಳೇ ಇರುವಾಗ ಬ್ರಹ್ಮದೇವರು ಬಿಟ್ಟಶರೀರವನ್ನು ಅವರು ಏಕೆ ಸ್ವೀಕರಿಸಬೇಕು? ಎಂಬ ಪ್ರಶ್ನೆಗಳು ಬರುತ್ತವೆ. ಹಿಂದೆ ೧೯ನೇ ಶ್ಲೋಕದಲ್ಲಿ ಬ್ರಹ್ಮದೇವರು ಅವಿದ್ಯೆ ಎಂಬ ಶರೀರವನ್ನು ತ್ಯಾಗ ಮಾಡಿದರು. ಅದನ್ನು ಯಕ್ಷರಾಕ್ಷಸರು ಸ್ವೀಕರಿಸಿದರು ಎಂದಿದೆ. ಮುಂದೆಯೂ ೫೦ನೇ ಶ್ಲೋಕದ ವರೆಗೆ ಬ್ರಹ್ಮದೇವರು ಯಾವ ಶರೀರದಿಂದ ಯಾರನ್ನು ಸೃಷ್ಟಿಮಾಡುವರೋ ಅವರಿಗೆ ಆ ಶರೀರವನ್ನು ಬಿಟ್ಟುಕೊಡುವುದು ಕಂಡು ಬರುತ್ತದೆ. ದ್ವಿಪರಾರ್ಧ ಆಯುಷ್ಯಉಳ್ಳ ಬ್ರಹ್ಮದೇವರು ನಡುವೆ.ಅನೇಕ ಶರೀರಗಳಿಂದ ಅನೇಕ ಜನ್ಮ ಮರಣಗಳನ್ನು ಪಡೆಯುವರೇ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಬೇರೆ ವ್ಯಾಖ್ಯಾನಗಳಲ್ಲಿ ಸರಿಯಾದ ಸಮಾಧಾನವಿಲ್ಲ. ೨೦ನೇ ಶ್ಲೋಕದ [1]ಶ್ರೀಧರವ್ಯಾಖ್ಯಾನದಲ್ಲಿ ಆಯಾ ಶರೀರ ತ್ಯಾಗವೆಂದರೆ ಮನೋಭಾವದ ತ್ಯಾಗವೆಂದಿದೆ. ಆದರೆ ಬ್ರಹ್ಮದೇವರು ಯಕ್ಷರಾಕ್ಷಸ ಅಸುರ ಮುಂತಾದವರ ದುಷ್ಟಮನೊಭಾವವನ್ನು ಸ್ವೀಕರಿಸಿದರೆ? ಅವರು ಬಿಟ್ಟಾಗಲೇ ಅದನ್ನು ಯಕ್ಷರಾಕ್ಷಸರು ಸ್ವೀಕರಿಸಿದರೆ? ಅದು ಯಕ್ಷರಾಕ್ಷಸರ ಸ್ವಾಭಾವಿಕವಾದ ಮನೋಭಾವ ತಾನೆ? ಈ ಎಲ್ಲ ಪ್ರಶ್ನೆಗಳಿಗೆ ಹೀಗೆ ಸಮಾಧಾನ–

---

೧. ಸರ್ವತ್ರ ತನುತ್ಯಾಗೋ ನಾಮ ತತ್ತನ್ಮನೋಭಾವತ್ಯಾಗೋ ವಿವಕ್ಷಿತಃ । ಗ್ರಹಣಂ ಚ ತತ್ತದ್ಭಾವಾಪತ್ತಿರಿತಿ ದ್ರಷ್ಟವ್ಯಂ । –ಶ್ರೀಧರಃ

ತೇಷು ತೇಷು ಸೃಜ್ಯೇಷು ಯೋ ಮನೋಭಾವ ಆವೇಶಸ್ತಸ್ಯ ತ್ಯಾಗ ಏವ ವಿವಕ್ಷಿತಃ । ತದಾಯುಷೋ ದ್ವಿಪರಾರ್ಧಪರಿಮಿತತ್ವಾತ್ । –ರಾಧಾರಮಣದಾಸಃ

ವ್ಯಸೃಜನ್ಮಲವದ್ ದೇಹಂ ಬಾಹ್ಯಂ ನ ತು ನಿಜಂ ಪುರಾ ।
ಬ್ರಹ್ಮಾ ತಚ್ಚಾಹರಾದಿತ್ವಂ ಪ್ರಾಪ ದೇವಾದಿದೈವತಮ್ ॥

ಇತಿ ಕೌರ್ಮೇ ।

ಬ್ರಹ್ಮದೇವರು ಪ್ರಭಾ ಮುಂತಾದ ಶರೀರವನ್ನು ಅದು ಬಾಹ್ಯಶರೀರವಾದ್ದರಿಂದ ಮಲವನ್ನು ವಿಸರ್ಜಿಸುವಂತೆ ವಿಸರ್ಜಿಸಿದರು. ಹೊರತು ತಮ್ಮ ಶರೀರವನ್ನಲ್ಲ. ಅವರು ಪರಿತ್ಯಜಿಸಿದ ಶರೀರವು ಹಗಲು ರಾತ್ರಿ ಸಂಧ್ಯೆ ಎಂದು ಮುಂತಾಗಿ ಪ್ರಸಿದ್ಧವಾಯಿತು. ಅದಕ್ಕೆ ದೇವತೆಗಳು ಅಸುರರು ಮುಂತಾದವರು ಅಭಿಮಾನಿಗಳಾದರು ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

ಮೊದಲಿಗೆ ಸೃಷ್ಟಿಕರ್ತರಾದ ಬ್ರಹ್ಮದೇವರು ಹಗಲು ರಾತ್ರಿ ಸಂಧ್ಯೆ ಮುಂತಾದುವನ್ನು ಸೃಷ್ಟಿ ಮಾಡಿ ಅದಕ್ಕೆ ಅಭಿಮಾನಿಗಳಾದರು. ಅದರಿಂದ ಅವು ಅವರಿಗೆ ಬಾಹ್ಯಶರೀರವೆನಿಸಿದುವು. ಅವರ ಸ್ವಂತ ಶರೀರ ಆಗಲೂ ಇದ್ದಿತು. ಈ ಬಾಹ್ಯಶರೀರದಿಂದ ಯಕ್ಷರಾಕ್ಷಸ ದೇವ ಅಸುರ ಮುಂತಾದವರನ್ನು ಸೃಜಿಸಿದರು. ಅವರಿಗೆ ತಕ್ಕ ಶರೀರ ನಿರ್ಮಿಸಿ ಕೊಡುವುದೇ ಅವರಿಗೆ ಸೃಷ್ಟಿ. ಬಳಿಕ ಯಾವ ಬಾಹ್ಯಶರೀರದಿಂದ ಯಕ್ಷಾದಿಗಳನ್ನು ಸೃಷ್ಟಿಮಾಡಿದರೋ ಆ ಬಾಹ್ಯಶರೀರವನ್ನು ಪರಿತ್ಯಾಗ ಮಾಡಿ ಆ ಯಕ್ಷಾದಿಗಳಿಗೆ ಕೊಟ್ಟರು. ಅಂದರೆ, ಯಕ್ಷಾದಿಗಳು ತಮ್ಮ ತಮ್ಮ ಶರೀರಗಳಲ್ಲಿ ಇದ್ದೇ ರಾತ್ರಿ ಹಗಲು ಮುಂತಾದುವಕ್ಕೆ ಅಭಿಮಾನಿಗಳಾದರು ಎಂದಿಷ್ಟೇ ಅರ್ಥ. ಇದು ಕೇವಲ ಕಲ್ಪನೆಯಲ್ಲ. ಕೂರ್ಮಪುರಾಣೋಕ್ತವಾಗಿದೆ.

* * *

ಬ್ರಹ್ಮದೇವರು ಸಾಧ್ಯರನ್ನೂ ಪಿತೃಗಳನ್ನೂ ಸೃಷ್ಟಿ ಮಾಡಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಊರ್ಜಸ್ವಂತಂ ಮನ್ಯಮಾನ ಆತ್ಮಾನಂ ಭಗವಾನಜಃ ।
ಸಾಧ್ಯಾನ್ ಗಣಾನ್ ಪಿತೃಗಣಾನ್ ಪರೋಕ್ಷೇಣಾಸೃಜತ್ ಪ್ರಭುಃ ॥೪೨॥

ತಾನು ಸಾರವತ್ತಾದ ಅನ್ನವನ್ನು ಉಣ್ಣುವವನೆಂದ ಭಗವಾನ್ ಬ್ರಹ್ಮದೇವ ಅಭಿಮಾನ ಪಟ್ಟು ಅತೀಂದ್ರಿಯವಾದ ಒಂದು ಬಾಹ್ಯಶರೀರದಿಂದ ಸಾಧ್ಯಗಣ ಮತ್ತು ಪಿತೃಗಣಗಳ ದೇವತೆಗಳನ್ನು ಹುಟ್ಟಿಸಿದ.

ಇಲ್ಲಿ ಊರ್ಜವೆಂದರೆ ಬೇರೆ ವ್ಯಾಖ್ಯಾನಕಾರರು ಬಲವೆಂದು ವ್ಯಾಖ್ಯಾನಿಸಿದ್ದಾರೆ. ಅದು 'ಊರ್ಗ್ವಾ ಅನ್ನಾದ್ಯಂ ದಧಿ' ಎಂಬ ಶ್ರುತಿಗೆ ಅನುಗುಣವಾಗಿಲ್ಲ. ಬ್ರಹ್ಮ ಪುರಾಣದಲ್ಲಿ ಸಾರಾನ್ನ ವನ್ನು ಊರ್ಜ ಎನ್ನುತ್ತಾರೆ ಎಂದಿದೆ.

ಊರ್ಜಂ ಸಾರಾನ್ನಮುದ್ದಿಷ್ಟಂ ತದ್ ದೇವಪಿತೃಭಕ್ಷಣಮ್ ॥
ಇತಿ ಬ್ರಾಹ್ಮೇ ॥

ಊರ್ಜವೆಂದರೆ ಸಾರವತ್ತಾದ ಅನ್ನ. ಅದೇ ದೇವತೆಗಳಿಗೂ ಪಿತೃಗಳಿಗೂ ಭಕ್ಷಣಯೋಗ್ಯ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

* * *

ಕೊನೆಯಲ್ಲಿ ಬ್ರಹ್ಮದೇವರು ಮನುಷ್ಯ ಶರೀರದಿಂದ ಮನುಗಳನ್ನು ಸೃಷ್ಟಿ ಮಾಡಿದರು. ಆ ಮನುಷ್ಯಶರೀರವನ್ನು ಅವರಿಗೆ ಕೊಟ್ಟರು. ದೇವತೆಗಳು ಈ ಮನುಷ್ಯ ಶರೀರ ಸೃಷ್ಟಿಯನ್ನು ಬಹು ಪ್ರಶಂಸಿಸಿದರು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಸ ಆತ್ಮಾನಂ ಮನ್ಯಮಾನಃ ಕೃತಕೃತ್ಯಮಿವಾತ್ಮಭೂಃ ।
ತದಾ ಮನೂನ್ ಸಸರ್ಜಾಂತೇ ಮನಸಾ ಲೋಕಭಾವನಾನ್ ॥ ೪೯ ॥

ತೇಭ್ಯಃ ಸ ವ್ಯಸೃಜದ್ ದೇಹಂ ಪರಃ ಪುರುಷ ಆತ್ಮನಃ ।
ತಾನ್ ದೃಷ್ಟ್ವಾ ಯೇ ಪುರಾ ಸೃಷ್ಟಾಃ ಪ್ರಶಶಂಸುಃ ಪ್ರಜಾಪತಿಮ್ ॥ ೫೦ ॥

ಬ್ರಹ್ಮದೇವರು ಮನುಷ್ಯಶರೀರ ಸ್ವೀಕರಿಸಿ ಮನಸ್ಸಿನಿಂದ ಮನುಗಳನ್ನು ಸೃಷ್ಟಿಮಾಡಿದರು. ತಾನೀಗ ಕೃತಕೃತ್ಯನಾದೆನೆಂದು ಬಗೆದರು. ಆ ಮನುಗಳಿಗೆ ತನ್ನ ಬಾಹ್ಯಮಾನುಷ ದೇಹವನ್ನು ಕೊಟ್ಟರು. ಈ ಮನುಸೃಷ್ಟಿಯನ್ನು ನೋಡಿ ಹಿಂದೆ ಸೃಷ್ಟರಾದ ದೇವತೆಗಳು ಬ್ರಹ್ಮದೇವರನ್ನು ಪ್ರಶಂಸಿಸಿದರು.

ಇಲ್ಲಿ 'ಯೇ ಪುರಾ ಸೃಷ್ಟಾಃ' ಎಂದರೆ ಮನುಸೃಷ್ಟಿಗಿಂತ ಹಿಂದೆ ಸೃಷ್ಟರಾದವರೆಲ್ಲರೂ ಅಂದರೆ ದೇವತೆಗಳು ಮಾತ್ರವಲ್ಲದೆ ಅಸುರರೂ ಬ್ರಹ್ಮದೇವರನ್ನು ಹೊಗಳಿದರೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೆಯೇ ಗ್ರಹಿಸಿದ್ದಾರೆ. ಗಿರಿಧರವ್ಯಾಖ್ಯಾನದಲ್ಲಿ ದೇವತೆಗಳು ಮುಂತಾದವರು ಹೊಗಳಿದರೆಂದಿದೆ. ವಸ್ತುತಃ ದೇವತೆಗಳು, ಎಂದರೆ ಆದಿಯಲ್ಲಿ ಪರಮಾತ್ಮಸೃಷ್ಟಿಯಲ್ಲಿ ಸೃಷ್ಟರಾದ ದೇವತೆಗಳು ಬ್ರಹ್ಮದೇವರನ್ನು ಪ್ರಶಂಸೆಮಾಡಿದರು.

ಯೇ ಪುರಾ ಸೃಷ್ಟಾ ದೇವಾಃ ।
ದೃಷ್ಟ್ವಾ ತು ಪೌರುಷೀಂ ಸೃಷ್ಟಿಂ ದೇವಾಃ ಸುಕೃತಮೂಚಿರೇ ॥
ಇತಿ ಚ ॥

'ಯೇ ಪುರಾ ಸೃಷ್ಟಾಃ' ಎಂದು ಆದಿಸೃಷ್ಟಿಯಲ್ಲಿ ಸೃಷ್ಟರಾದ ತತ್ತ್ವಾಭಿಮಾನಿ ದೇವತೆಗಳನ್ನು ಹೇಳಲಾಗಿದೆ.

ಮನುಷ್ಯಸೃಷ್ಟಿಯನ್ನು ಕಂಡು ದೇವತೆಗಳು ಚತುರ್ಮುಖನನ್ನು ಇದು ಉತ್ತಮಸೃಷ್ಟಿ ಎಂದು ಹೊಗಳಿದರು, ಎಂದೂ ಹೇಳಿದೆ

* * *

ಬ್ರಹ್ಮದೇವರು ಋಷಿಗಳನ್ನು ಸೃಷ್ಟಿಮಾಡಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ತಪಸಾ ವಿದ್ಯಯಾ ಯುಕ್ತೋ ಯೋಗೇನ ಸುಸಮಾಧಿನಾ ।
ಆದಾವೃಷೀನ್ ಹೃಷೀಕೇಶಃ ಸಸರ್ಜಾಭಿಮತಾಃ ಪ್ರಜಾಃ ॥ ೫೨ ॥

ತಪಸ್ಸು ವಿದ್ಯೆಯೋಗ ಸಮಾಧಿಗಳಿಂದ ಯುಕ್ತನಾದ ಬ್ರಹ್ಮಾಂತರ್ಯಾಮಿಯಾದ ಶ್ರೀಹರಿ ಎಲ್ಲರಿಗೂ ಪೂಜ್ಯರಾದ ಋಷಿಗಳನ್ನು ಮೊದಲಿಗೆ ಸೃಷ್ಟಿಮಾಡಿದ್ದಾನೆ.

ಇಲ್ಲಿ ಹೃಷೀಕೇಶ ಎಂದು ಬ್ರಹ್ಮನನ್ನು ಕರೆದುದು, ಹೃಷೀಕೇಶ ಶಬ್ದದ ರೂಢಿಯನ್ನು ಇಟ್ಟುಕೊಂಡು ಅಲ್ಲ. ಯೋಗವನ್ನು ಇಟ್ಟುಕೊಂಡು, ಹೃಷೀಕ ಅಂದರೆ ಇಂದ್ರಿಯಗಳನ್ನು ಈಶ ನಿಗ್ರಹಿಸಿ ಕೊಂಡವನು ಚತುರ್ಮುಖ ಬ್ರಹ್ಮ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಹರಿನಾಮವನ್ನು ಬೇರೆಯವರಲ್ಲಿ ಪ್ರಯೋಗಿಸಿದಾಗ ಅವರ ಅಂತರ್ಯಾಮಿಯಾದ ಹರಿಯೆ ಆ ಶಬ್ದದ ಅರ್ಥ ಎಂದಿಟ್ಟುಕೊಳ್ಳಬೇಕೆಂಬ ನಿಯಮವಿದೆ. ಇದು ಪದ್ಮಪುರಾಣದಲ್ಲಿ ಸ್ಪಷ್ಟವಿದೆ. ಅದರಿಂದ ಈ ಹಿಂದೆ ಬ್ರಹ್ಮದೇವರು ಸೃಷ್ಟಿಮಾಡಿದ್ದೆಂದು ಹೇಳಿದ್ದರೂ ಅಲ್ಲಿ ಎಲ್ಲ ಕಡೆ ಬ್ರಹ್ಮಾಂತರ್ಯಾಮಿಯೇ ಸೃಷ್ಟಿಮಾಡಿದನೆಂದಿಟ್ಟುಕೊಳ್ಳಬೇಕೆಂಬ ಅಭಿಪ್ರಾಯದಿಂದ ಭಾಗವತದಲ್ಲಿ ಇಲ್ಲಿ ಕೊನೆಯಲ್ಲಿ ಹರಿನಾಮವಾದ ಹೃಷೀಕೇಶಶಬ್ದವನ್ನು ಬ್ರಹ್ಮನಿಗೆ ಹೇಳಲಾಗಿದೆ.

ಯತ್ರಾಪಿ ತು ಹರೇರ್ನಾಮ ತದನ್ಯತ್ರ ಪ್ರಯುಜ್ಯತೇ ।
ತದಾಽಽಂತರಹರೇಸ್ತತ್ರ ಗೃಹೀತಿರ್ನಾನ್ಯಥಾ ಭವೇತ್ ॥

ಸ್ವಾತಂತ್ರ್ಯದವರತ್ವಂ ಚ ಪರಸ್ಯಾಪಿ ಪ್ರಯುಜ್ಯತೇ ।
ಸ್ಥಿತಸ್ಯಾಪಿ ಯಥಾ ರಾಜ್ಞಃ ಸ್ವಾನಾಂ ಜಯಪರಾಜಯೌ ॥

ಇತಿ ಪಾದ್ಮೇ ॥

ಅತೋ ಹೃಷೀಕೇಶೋ ಬ್ರಹ್ಮಾಂತರ್ಯಾಮೀ ॥

ಎಲ್ಲಿ ಹರಿನಾಮವನ್ನು ಬೇರೆಯವರಲ್ಲಿ ಪ್ರಯೋಗಿಸುವರೋ ಅಲ್ಲಿ ಅವರೊಳಗಿರುವ ಹರಿಯನ್ನೇ ಆ ಶಬ್ದದಿಂದ ಗ್ರಹಿಸಬೇಕು ಹೊರತು ಅವರನ್ನಲ್ಲ. ಹಾಗಾದರೆ ಬ್ರಹ್ಮನು ಮಾಡಿದ ಸೃಷ್ಟಿ ಹರಿಯದೆನ್ನುವುದು ಹೇಗೆ ಎನ್ನಬಾರದು. ಬ್ರಹ್ಮ ಸೃಷ್ಟಿಮಾಡಿದರೂ ಅದರ ಸ್ವತಂತ್ರಕರ್ತೃತ್ವವಿರುವುದು ಹರಿಯಲ್ಲಿಯೆ. ಹರಿಯಲ್ಲಿ ಕೂಡದಿರುವ ಅವರತ್ವ (ಇನ್ನೊಬ್ಬರಿಗಿಂತ ಕಡಿಮೆಯವನಾಗಿರುವುದು) ಮುಂತಾದುದನ್ನೂ ಸ್ವಾತಂತ್ರ್ಯದಿಂದ ಕೂಡಿಸಲು ಬರುವಾಗ (ಇನ್ನೊಬ್ಬರು ಕಡಿಮೆಯವರೆನಿಸಿದುದು ಹರಿಯ ಇಚ್ಛೆಯಿಂದ, ಅದರಿಂದ ಹರಿಯೆ 'ಅವರ' ಎಂದು ಹೇಳಲು ಬರುವಾಗ) ಹರಿಯಲ್ಲಿ ಕೂಡುವ ಸೃಷ್ಟಿಕರ್ತೃತ್ವಾದಿಗಳನ್ನು ಅವನಲ್ಲಿ ಹೇಳಲು ಸಂಕೋಚವೇಕೆ? ಅದರಿಂದ ಅರಮನೆಯೊಳಗೆ ಕುಳಿತಿರುವ ರಾಜನಿಗೆ ಭಟರು ಸಂಪಾದಿಸಿದ ಜಯ ಅಥವಾ ಪರಾಜಯವನ್ನು ಹೇಳುವಂತೆ ಬ್ರಹ್ಮನ ಸೃಷ್ಟಿಕರ್ತೃತ್ವವನ್ನು ಹರಿಗೆ ಸ್ವಾತಂತ್ರ್ಯದಿಂದ ಹೇಳುವುದು ಅಯುಕ್ತವಲ್ಲ.' ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ಏಕವಿಂಶೋಽಧ್ಯಾಯಃ ॥

—o—

ಅಧ್ಯಾಯ–೨೨

ಅಧ್ಯಾಯಸಾರಾಂಶ

ಸ್ವಾಯಂಭುವ ಮನುವಿನ ಮಕ್ಕಳಾದ ಪ್ರಿಯವ್ರತ ಉತ್ತಾನಪಾದ ದೇವಹೂತಿ ಆಕೂತಿ ಪ್ರಸೂತಿ ಇವರ ಚರಿತ್ರೆಗಳನ್ನು ವಿದುರ ಕೇಳಲು ಬಯಸಿದಾಗ ಮೈತ್ರೇಯರು ಮೊದಲಿಗೆ ದೇವಹೂತಿಯಲ್ಲಿ ಕರ್ದಮ ಪ್ರಜಾಪತಿ ಮಾಡಿದ ಸೃಷ್ಟಿಯನ್ನು ಹೇಳುತ್ತಾರೆ– 'ಸೃಷ್ಟಿಕಾರ್ಯಕ್ಕೆ ಬ್ರಹ್ಮನಿಂದ ಆಜ್ಞೆ ಪಡೆದ ಕರ್ದಮ ಮುನಿ ಸರಸ್ವತೀನದೀ ತೀರದಲ್ಲಿ ಹತ್ತು ಸಾವಿರ ವರ್ಷಕಾಲ ಹರಿಯನ್ನು ಧ್ಯಾನಿಸುತ್ತ ತಪಸ್ಸು ಮಾಡುತ್ತಾನೆ. ಹರಿ ಒಲಿದು ಮೈದೋರಿದಾಗ ಸ್ತೋತ್ರ ಮಾಡುತ್ತಾನೆ. ಸೃಷ್ಟಿಕಾರ್ಯದ ಮೂಲಕ ನಿನ್ನಾರಾಧನೆ ಮಾಡುವೆನೆಂದು ಅರಿಕೆ ಮಾಡಿಕೊಳ್ಳುತ್ತಾನೆ. ಕಾಲ ನಿಯಾಮಕನಾದ ಶುಕ್ಲನಾಮಕ ಹರಿ ಸಂತುಷ್ಟನಾಗಿ ವರ ನೀಡುತ್ತಾನೆ. 'ಸ್ವಾಯಂಭುವ ಮನು ನಿನ್ನಾಶ್ರಮಕ್ಕೆ ಬಂದು ತನ್ನ ಮಗಳಾದ ದೇವಹೂತಿಯನ್ನು ನಿನಗೆ ಕೊಟ್ಟು ಮದುವೆ ಮಾಡುತ್ತಾನೆ. ಅವಳಲ್ಲಿ ನೀನು ಒಂಬತ್ತು ಮಂದಿ ಹೆಣ್ಣುಮಕ್ಕಳನ್ನು ಪಡೆಯುವಿ. ಬಳಿಕ ನಾನು ನಿನ್ನ ಮಗನಾಗಿ ಕಪಿಲರೂಪದಿಂದ ಅವತರಿಸಿ ಸಾಂಖ್ಯಶಾಸ್ತ್ರ ರಚಿಸುತ್ತೇನೆ' ಎಂದು. ಬಳಿಕ ಮುನಿಯ ಬಿಂದುಸರವೆಂಬ ಪುಣ್ಯಾಶ್ರಮಕ್ಕೆ ಮನು ಬರುತ್ತಾನೆ. ಅವನಲ್ಲಿ ರಾಜರಾಜೇಶ್ವರರೂಪದಿಂದ ಆವಿಷ್ಟನಾದ ಶುಕ್ಲಮೂರ್ತಿಯನ್ನು ಮುನಿ ಸ್ತುತಿಸುತ್ತಾನೆ.

* * *

ಸೃಷ್ಟಿಯನ್ನು ಮುಂದುವರಿಸಲು ಬ್ರಹ್ಮನಿಂದ ಆಜ್ಞಪ್ತರಾದ ಕರ್ದಮಮುನಿಗಳು ಸರಸ್ವತೀತೀರದಲ್ಲಿ ಹತ್ತು ಸಾವಿರ ವರ್ಷಕಾಲ ತಪಸ್ಸು ಮಾಡಿದಾಗ ಶ್ರೀಹರಿ ಒಲಿದು ಮೈದೋರಿದ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ತಾವತ್ ಪ್ರಸನ್ನೋ ಭಗವಾನ್ ಪುಷ್ಕರಾಕ್ಷಃ ಕೃತೇ ಯುಗೇ ।
ದರ್ಶಯಾಮಾಸ ತಂ ಕ್ಷತ್ತಃ ಶಾಬ್ದಂ ಬ್ರಹ್ಮ ದಧದ್ ವಪುಃ ॥ ೮ ॥

ಕೃತಯುಗದಲ್ಲಿ ಕರ್ದಮರ ತಪಸ್ಸಿಗೆ ಮೆಚ್ಚಿದ ವೇದವೇತ್ತನಾದ ಭಗವಾನ್ ಹರಿ ಮೈದೋರಿದ.

[೧]ಇಲ್ಲಿ 'ಶಾಬ್ದಂ ಬ್ರಹ್ಮ' ಎಂದರೆ 'ಶಬ್ದೈಕವೇದ್ಯ' ಪರಬ್ರಹ್ಮ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಪ್ರಕೃತದಲ್ಲಿ ಈ ವಿಶೇಷಣಕ್ಕೆ ಅಷ್ಟಾಗಿ ಸಾರ್ಥಕ್ಯ ಕಾಣದು. 'ವೇದಾಂತಕೃದ್ ವೇದವಿದೇವ ಚಾಹಂ' ಎಂಬಂತೆ ವೇದವೇತ್ತನಾಗಿ ವೈದಿಕಸಾಂಖ್ಯಶಾಸ್ತ್ರರಚನೆ ಮಾಡುವ ಸಂಕಲ್ಪದಿಂದ ಕರ್ದಮಪುತ್ರ ಕಪಿಲನಾಗಿ ಅವತರಿಸಲು ಹೊರಟ ರೂಪವಿದೆಂದು ಸೂಚ್ಯವಾಗಿ ತಿಳಿಸಲು 'ವೇದವೇತ್ತ'ನೆಂದು ವಿಶೇಷಣ ನೀಡಿದರೆ ಸಾರ್ಥಕವಾಗುವುದು. ಶ್ರೀಮದಾಚಾರ್ಯರು 'ಶಬ್ದವಿಷಯೋ ಬ್ರಹ್ಮ' ಎನ್ನದೆ 'ಶಬ್ದವಿಷಯಂ ಬ್ರಹ್ಮ' ಎಂದಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. 'ಶಬ್ದವಿಷಯಂ' ಎಂದು ನಪುಂಸಕಲಿಂಗ ಕೂಡಬೇಕಾದರೆ ಬಹುವ್ರೀಹಿ ಸಮಾಸವನ್ನೇ ಮಾಡಬೇಕಾಗುತ್ತದೆ ಆಗ 'ಶಬ್ದವಿಷಯಕ ಜ್ಞಾನಸ್ವರೂಪ' ಅಂದರೆ ವೇದವೇತ್ತ ಎಂಬ ಅರ್ಥ ಲಭಿಸುತ್ತದೆ.

ಶಬ್ದವಿಷಯಂ ಬ್ರಹ್ಮ ।

ಶಾಬ್ದಂ ಬ್ರಹ್ಮ ಎಂದರೆ ವೇದರೂಪವಾದ ಶಬ್ದವೆಲ್ಲವನ್ನೂ ಗೋಚರಿಸುವ ಜ್ಞಾನಸ್ವರೂಪನಾದ ಬ್ರಹ್ಮ ಎಂದರ್ಥ.

* * *

ಭಗವಂತನಿಗೆ ಪ್ರಿಯವಾದ ಕರ್ಮ ಮಾಡದಿದ್ದರೆ ಆಯುಷ್ಯ ವ್ಯರ್ಥವಾಗಿ ಕ್ಷಯಿಸುವುದು. ಕಾಲಚಕ್ರ ಅಂಥವರಿಗೆ ಭಯಂಕರವಾಗುವುದು. ಅದು ಹೇಗೆ ಎನ್ನುವುದನ್ನು ಕರ್ದಮರ ಮಾತಿನಲ್ಲಿ ಮೈತ್ರೇಯರು ವಿದುರನಿಗೆ ವಿವರಿಸುತ್ತಾರೆ–

ನ ತೇಽಜರಾಕ್ಷಭ್ರಮಿರಾಯುರೇಷಾಂ
ತ್ರಯೋದಶಾರಂ ತ್ರಿಶತಂಷಷ್ಟಿಪರ್ವ ।
ಷಣ್ನೇಮ್ಯನಂತಚ್ಛಿದಿ ಯತ್ ತ್ರಿನಾಭಿ
ಕರಾಲಸ್ರೋತೋ ಜಗದಾಚ್ಛಿದ್ಯ ಧಾವತ್ ॥ ೧೮ ॥

---

೧. ಶಬ್ದೈಕವೇದ್ಯಂ ಯದ್ ಬ್ರಹ್ಮ ತನ್ಮಯಂ ವಪುರ್ದಧತ್ । –ಶ್ರೀಧರಃ
ಶಾಬ್ದಂ ಪಂಚೋಪನಿಷನ್ಮಾತ್ರವೇದ್ಯಂ ಬ್ರಹ್ಮ । – ವೀರರಾಘವಃ

ಶಬ್ದಬ್ರಹ್ಮಣಾ ವೇದೇನ ನಿಷ್ಪಾದಿತಂ ಛಂದೋಮಯಂ, ವೇದಪುರುಷೋ ಭಗವಾನ್, ತಾದೃಗ್ ರೂಪಂ ಗೃಹೀತ್ವಾ ಆವಿರ್ಭೂತಃ । –ವಲ್ಲಭಃ

ಮುಪ್ಪಿಲ್ಲದ ಭಗವಂತನೆಂಬ ಅಕ್ಷದಲ್ಲಿ ತಿರುಗುವುದು ಒಂದು ವರ್ಷದ ಕಾಲಚಕ್ರ. ಅದಕ್ಕೆ ಅಧಿಮಾಸದೊಂದಿಗೆ ಒಟ್ಟು ಹದಿಮೂರು ಮಾಸಗಳು ಅರಗಳು. ಮುನ್ನೂರ ಅರವತ್ತು ದಿನಗಳು ಪರ್ವಗಳು. ಆರು ಋತುಗಳು ಪಟ್ಟಿಗಳು. ಮೂರು ಚಾತುರ್ಮಾಸ್ಯಗಳು ನಾಭಿಗಳು. ಪರಮಾಣು ಮೊದಲಾದ ಸೂಕ್ಷ್ಮಕಾಲಗಳೇ ಅನಂತ ಅವಯವಗಳು. ಇಂಥ ಕಾಲಚಕ್ರದ ವೇಗ ಭಯಂಕರ. ಇಡೀ ಜಗತ್ತಿನ ಆಯುಷ್ಯವನ್ನು ಕಳೆಯುತ್ತ ತಿರುಗುವುದು. ನಿನ್ನ ಭಕ್ತರಾದ ಮುಕ್ತಜೀವರಿಗೆ ಈ ಕಾಲಚಕ್ರದ ಭಯವಿಲ್ಲ.

ಅದರಿಂದ ನಾನೂ ಸಂಸಾರದಿಂದ ಮುಕ್ತನಾಗುವ ಉದ್ದೇಶದಿಂದ ಸೃಷ್ಟಿಕಾರ್ಯದ ಮೂಲಕ ನಿನ್ನ ಆರಾಧನೆ ಮಾಡಲು ಬಯಸಿದ್ದೇನೆ ಎಂದು ಕರ್ದಮ ಮುನಿಗಳು ಭಗವಂತನಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದಾರೆ.

ಇಲ್ಲಿ 'ಅನಂತಚ್ಛಿದಿ' ಎಂದರೆ ವಾಸ್ತವದಲ್ಲಿ ಅನಂತ ಛದ ಉಳ್ಳದ್ದೆಂದೇ ಅರ್ಥ. ಹಾಗಾದರೆ 'ಇನಿ'ಪ್ರತ್ಯಯ ಮಾಡಿದರೆ 'ಅನಂತಚ್ಛದಿ' ಎಂದಾಗಬೇಕು ತಾನೆ? ಹಾಗೇ ಬೇರೆ ಎಲ್ಲ ವ್ಯಾಖ್ಯಾನಕಾರರೂ ಪಾಠವಿಟ್ಟು ಕೊಂಡಿದ್ದಾರೆ! 'ಅನಂತಚ್ಛಿದಿ' ಎಂಬ ರೂಪ ಹೇಗೆ? ಎಂದರೆ ಹೇಳುತ್ತಾರೆ–

ಅನಂತಚ್ಛಿದಿ ಅನಂತಾವಯವಂ । ತೃತೀಯೋಽತಿಶಯೇ ಇತಿ ಹಿ ಮಹಾವ್ಯಾಕರಣೇ । ಮಥನಾನ್ಮಿಥಿಲೋ ಜಾತ ಇತ್ಯಾದಿವಚ್ಚ ।

ಅನಂತಚ್ಛಿದಿ ಎಂಬುದಕ್ಕೆ ಅನಂತ ಛದ ಅಂದರೆ ಅವಯವ ಉಳ್ಳದ್ದೆಂದೇ ಅರ್ಥ. ಅತಿಶಯವನ್ನು ಹೇಳುವ ವಿವಕ್ಷೆ ಇದ್ದಾಗ ಶಬ್ದದಲ್ಲಿ ಒಂದು ಅಕ್ಷರದ ಬದಲಿಗೆ ಅದರಿಂದ ಮೂರನೆಯದಾದ ಇನ್ನೊಂದು ಅಕ್ಷರ ಬರಬಹುದು ಎಂದು ಮಹಾವ್ಯಾಕರಣದಲ್ಲಿ ಉಕ್ತವಾಗಿದೆ. ಇದಕ್ಕೆ ಉದಾಹರಣೆ– ಮಥನಮಾಡಿದ್ದರಿಂದ 'ಮಥಿಲ' ಎಂದಾಗಬೇಕಾಗಿತ್ತು, ಆದರೆ ಅಕಾರಸ್ಥಾನದಲ್ಲಿ ಅದಕ್ಕೆ ಮೂರನೆಯದಾದ ಇಕಾರ ಬಂದು 'ಮಿಥಿಲ' ಎಂದಾಗಿದೆ. ಹಾಗೇ 'ಅನಂತಚ್ಛದಿ' ಎಂಬಲ್ಲಿ ಆನಂತ್ಯದಲ್ಲಿ ಅತಿಶಯವಿವಕ್ಷೆ ಇರುವುದರಿಂದ ಅಕಾರಕ್ಕೆ ಮೂರನೆಯದ್ದಾದ ಇಕಾರ ಬಂದು ಅನಂತಚ್ಛಿದಿ ಎಂದಾಗಿದೆ.

'ಅನಂತಚ್ಛದಿ' ಎಂಬ ಪಾಠವೂ ಆಚಾರ್ಯರಿಗೆ ಸಮ್ಮತವಿರಬಹುದು. ಆ ಪಕ್ಷದಲ್ಲಿ ಹೀಗೆ ಹೇಳಬೇಕು. 'ಅನಂತಚ್ಛದಿ' ಎಂಬಲ್ಲಿ 'ಛಿದಿ' ಎಂದರೆ ಛೇದ, ಅವಯವ ಎಂಬ ಅರ್ಥವಿವಕ್ಷಿತವಾದಾಗ 'ಛಿದಿ' ಯೇ 'ಛದಿ'ಯಾಗಿದೆ ಅದು ಈ ವ್ಯಾಕರಣದಿಂದಲೇ. ಅಕಾರಕ್ಕೆ ಇಕಾರದಂತೆ ಇಕಾರಕ್ಕೆ ಅಕಾರವೂ ಮೂರನೇ ಅಕ್ಷರ ತಾನೆ?

* * *

ಹರಿಯಾಜ್ಞೆಯಂತೆ ಕರ್ದಮ ಮುನಿ ತನ್ನಾಶ್ರಮದಲ್ಲಿ ಸ್ವಾಯಂಭುವ ಮನುವಿನಾಗಮನವನ್ನು ನಿರೀಕ್ಷಿಸಿ ಕುಳಿತಿದ್ದಾಗ ಮನು ತನ್ನ ಮಗಳಾದ ದೇವಹೂತಿಯೊಂದಿಗೆ ಆಶ್ರಮಕ್ಕೆ ಭೆಟ್ಟಿ ಕೊಟ್ಟ. ಮುನಿಗೆ ನಮಸ್ಕರಿಸಿ ಅವನ ಆತಿಥ್ಯ ಸ್ವೀಕರಿಸಿದ. ಮುನಿ ಮನುವನ್ನು ಆದರದಿಂದ ಮಾತನಾಡಿಸಿದ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಕರ್ದಮ ಉವಾಚ–

ನೂನಂ ಚಂಕ್ರಮಣಂ ದೇವ ಸತಾಂ ಸಂರಕ್ಷಣಾಯ ತೇ ।
ವಧಾಯ ಚಾಸತಾಂ ಯತ್ ತ್ವಂ ಹರೇಃ ಶಕ್ತಿರ್ಹಿ ಪಾಲನೀ ॥ ೫೦ ॥

ಯೋಽರ್ಕೇಂದ್ವಗ್ನೀಂದ್ರವಾಯೂನಾಂ ಯಮಧರ್ಮಪ್ರಚೇತಸಾಮ್ ।
ರೂಪಾಣಿ ಸ್ಥಾನ ಆಧತ್ಸೇ ತಸ್ಮೈ ಶುಕ್ಲಾತ್ಮನೇ ನಮಃ ॥ ೫೧ ॥

ಕರ್ದಮರು ಹೇಳಿದರು–
ರಾಜನೆ, ನೀನು ಸಂಚರಿಸುತ್ತಿದ್ದರೆ ಸಜ್ಜನರ ರಕ್ಷಣೆಯಾಗುತ್ತದೆ. ದುಷ್ಟರ ಸಂಹಾರವಾಗುತ್ತದೆ. ಏಕೆಂದರೆ ನಿನ್ನಲ್ಲಿ ಶ್ರೀಹರಿಯ ಪಾಲನಶಕ್ತಿ ಸನ್ನಿಹಿತವಾಗಿದೆ. ಸೂರ್ಯ ಚಂದ್ರ ಅಗ್ನಿ ಇಂದ್ರ ವಾಯು ಯಮಧರ್ಮ ವರುಣರ ರೂಪಗಳನ್ನು ನೀನು ಆಯಾ ಸಂದರ್ಭಗಳಲ್ಲಿ ಧರಿಸುವಿ. ನಿನ್ನಲ್ಲಿ ಆವಿಷ್ಟನಾದ ಶುಕ್ಲನಾಮಕ ಶ್ರೀಹರಿಗೆ ನಮಸ್ಕಾರ ಎಂದು ಕರ್ದಮಮುನಿ ಹೇಳುತ್ತಾರೆ.

ಇಲ್ಲಿ ಸ್ವಾಯಂಭುವ ಮನುವನ್ನು ಕರ್ದಮಮುನಿ 'ತ್ವಂ ಹರೇಃ ಶಕ್ತಿಃ' ಸಾಕ್ಷಾದ್ ಭಗವಂತನ ಒಂದು ರೂಪವೆಂದೇ ಪ್ರಶಂಸೆ ಮಾಡಿದಂತೆ ಕಾಣುತ್ತದೆ. ಅದು ಸರಿಯಲ್ಲ. [೧]ಬೇರೆ ವ್ಯಾಖ್ಯಾನಕಾರರೂ ಕೂಡ ಇಲ್ಲಿ ಮನುವಿನಲ್ಲಿ ಇರುವ ವಿಷ್ಣುವನ್ನು ಮುನಿ ನಮಸ್ಕರಿಸುತ್ತಾನೆ ಎಂದಿದ್ದಾರೆ. ಶ್ರೀಧರ ವಲ್ಲಭ ವ್ಯಾಖ್ಯಾನಗಳಲ್ಲಿ ಹಾಗೇ ಇದೆ. ಆದರೆ ವಿಶ್ವನಾಥವ್ಯಾಖ್ಯಾನದಲ್ಲಿ 'ನಿನ್ನ ರೂಪದಿಂದ ಪುನಃ ನನ್ನ ಆಶ್ರಮಕ್ಕೆ ಬಂದ ನನ್ನ ಅಭೀಷ್ಟದಾಯಕನಾದ ಶುಕ್ಲ ಪರಮಾತ್ಮನೆ ನಿನಗೆ ನಮಸ್ಕಾರ!' ಎಂದು

೧. ಮನುಸ್ಥಂ ವಿಷ್ಣುಂ ಪ್ರಣಮತಿ ಯ ಇತಿ । –ಶ್ರೀಧರಃ
ಅಯಂ ಶುಕ್ಲನಾರಾಯಣ ಏವ ಮನೌ ತಿಷ್ಠತೀತಿ ತಸ್ಮೈ ನಮಃ । –ವಲ್ಲಭಃ

ಸ ಏವ ತ್ವಂ ಹರೇಃ ಪಾಲನೀ ಶಕ್ತಿರ್ಭವಸಿ । ತಸ್ಮೈ ಮದಭೀಷ್ಟದೇವಾಯ ತ್ವದ್ರೂಪೇಣ ಪುನರಪಿ ಮಮೋಟಜಮಾಗತಾಯ ಶುಕ್ಲಾಯ ತುಭ್ಯಂ ನಮಃ । –ವಿಶ್ವನಾಥಃ

ತಸ್ಮೈ ತೇ ಶುಕ್ಲಾಯ ವಿಷ್ಣವೇ ನಮಃ । ರಾಜರ್ಷೀಣಾಂ ಮನುರಹಮಿತಿ ಶ್ರೀಮುಖವಚನಾತ್ । –ಶುಕದೇವಃ

ಮುನಿ ನಮಿಸುತ್ತಾನೆ 'ಹರಿಯ ಪಾಲನಶಕ್ತಿ ನೀನೇ ಆಗಿರುವಿ' ಎನ್ನುತ್ತಾನೆ. ಶುಕದೇವವ್ಯಾಖ್ಯಾನದಲ್ಲಿಯೂ 'ರಾಜರ್ಷೀಣಾಂ ಮನುರಹಂ' ಎಂಬ ಗೀತಾವಚನವನ್ನು ತೋರಿಸಿ ಮನುವು ಭಗವಂತನೇ ಎಂದು ಹೇಳಿದೆ.

ವಸ್ತುತಃ ಮನುವಿನಲ್ಲಿ ಭಗವಂತ ಆವಿಷ್ಟನಾಗಿದ್ದಾನೆ ಎಂದು ಮುನಿ ನಮಿಸುತ್ತಾನೆ ಎನ್ನಬೇಕು. ಬೇರೆ ವ್ಯಾಖ್ಯಾನಕಾರರು ಯಾರೂ ಇದನ್ನು ಹೇಳುವುದಿಲ್ಲ. ಶ್ರೀಧರ ವಲ್ಲಭ ವ್ಯಾಖ್ಯಾನಗಳೂ ಆವೇಶವನ್ನು ಹೇಳಿಲ್ಲ. [೧]ವೀರರಾಘವ ವ್ಯಾಖ್ಯಾನದಲ್ಲಿ 'ಪ್ರಾಸಂಗಿಕವಾಗಿ ಸ್ಮರಣೆಗೆ ಬಂದ ಭಗವಂತನನ್ನು ಮುನಿ ನಮಿಸುತ್ತಾನೆ. ಸೂರ್ಯಚಂದ್ರಾದಿಗಳ ರೂಪವನ್ನು ಸ್ವರೂಪವನ್ನು, ಅಂದರೆ, ಸೂರ್ಯ ಚಂದ್ರಾದಿಗಳನ್ನೇ ಧರಿಸಿ ಪೋಷಣ ಮಾಡುವ ಸಾಕ್ಷಾದ್ ಭಗವಂತನಿಗೇ ನಮಸ್ಕಾರ' ಎಂದಿದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ–

ಸ್ವಾಯಂಭುವೋ ಮನುಶ್ಚೈವ ಪೃಥುಶ್ಚೈವಾರ್ಜುನಾವಪಿ ।
ಬ್ರಹ್ಮಶೇಷವಿಪಾ ರುದ್ರ ಇಂದ್ರ ಋಷ್ಯಾದಯಸ್ತಥಾ ।
ವಿಷ್ಣ್ವಾವೇಶಯುತಾಃ ಸರ್ವೇ ನ ತು ವಿಷ್ಣುಸ್ವರೂಪಕಾಃ ॥
ಇತಿ ತತ್ವನಿರ್ಣಯೇ ।

ಸ್ವಾಯಂಭುವ ಮನು, ಪೃಥು, ಪಾಂಡವಾರ್ಜುನ, ಕಾರ್ತವೀರ್ಯಾರ್ಜುನ, ಬ್ರಹ್ಮ, ಶೇಷ, ಗರುಡ, ರುದ್ರ, ಇಂದ್ರ, ಋಷಿಗಳು ಮುಂತಾದವರೆಲ್ಲರೂ ವಿಷ್ಣುವಿನ ಆವೇಶಯುಕ್ತರೇ ಹೊರತು ವಿಷ್ಣುಸ್ವರೂಪರಲ್ಲ ಎಂದು ತತ್ವನಿರ್ಣಯದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ದ್ವಾವಿಂಶೋಽಧ್ಯಾಯಃ

—೦—

೧. ಪ್ರಸಂಗಾತ್ ಸ್ಮೃತಂ ಭಗವಂತಂ ಪ್ರಣಮತಿ ಯ ಇತಿ । ಅರ್ಕಾದೀನಾಂ ರೂಪಾಣಿ । ಶಿಲಾಪುತ್ರಕಸ್ಯೇದಂ ಶರೀರಂ ಇತಿವದಭೇದಸಂಸರ್ಗೇ ಷಷ್ಠೀ । ಆಧತ್ಸೇ ಬಿಭರ್ಷಿ । ತಸ್ಮೈ ಶುಕ್ಲಾಯ ನಿರ್ಮಲಾಯ ತೇ ತುಭ್ಯಂ ಭಗವತೇ ನಮಃ ।
–ವೀರರಾಘವಃ

ಅಧ್ಯಾಯ–೨೩

ಅಧ್ಯಾಯಸಾರಾಂಶ

ಸ್ವಾಯಂಭುವ ಮನು ಹೇಳುತ್ತಾನೆ. 'ಮುನಿಯೆ, ನೀನು ವಿವಾಹವಾಗಲು ಬಯಸಿರಿವಿ ಎಂದು ಕೇಳಿದ್ದೇನೆ. ನನ್ನ ಮಗಳು ದೇವಹೂತಿ ನಾರದರಿಂದ ನಿನ್ನ ಗುಣಗಳನ್ನು ಕೇಳಿದ ಬಳಿಕ ನಿನ್ನನ್ನೇ ವರಿಸಲು ಬಯಸಿದ್ದಾಳೆ. ಅದರಿಂದ ನಿನಗೆ ನಾನು ಕನ್ಯಾದಾನ ಮಾಡುತ್ತೇನೆ, ಸ್ವೀಕರಿಸು.' ಮುನಿ ಹೇಳುತ್ತಾನೆ. 'ರಾಜನೆ, ನಾನೂ ನಿನ್ನ ಮಗಳ ಸೌಂದರ್ಯಾದಿ ಗುಣಗಳ ಬಗ್ಗೆ ಕೇಳಿದ್ದೇನೆ. ಅವಳು ನಿನ್ನ ಅರಮನೆಯ ಮಾಳಿಗೆ ಮೇಲೆ ಚೆಂಡಾಟವಾಡುವಾಗ ಮೇಲೆ ವಿಮಾನದಲ್ಲಿ ಸಂಚರಿಸುತ್ತಿದ್ದ ವಿಶ್ವಾವಸು ಗಂಧರ್ವ ಕಂಡು ಮೈಮರೆತು ವಿಮಾನದಿಂದ ಕೆಳಗೆ ಬಿದ್ದು ಬಿಟ್ಟನಂತೆ. ಸಾಕ್ಷಾತ್ ಲಕ್ಷ್ಮಿಯಂಥ ಚೆಲುವೆಯಾದ ಈ ನಿನ್ನ ಮಗಳನ್ನು ನಾನು ಅವಶ್ಯ ಸ್ವೀಕರಿಸುತ್ತೇನೆ. ಆದರೆ ಅವಳು ಪುತ್ರವತಿಯಾಗುವ ವರೆಗೆ ಮಾತ್ರ ಜೊತೆಗೆ ಬಾಳ್ವೆ ನಡೆಸಿ ಬಳಿಕ ಸನ್ಯಾಸಿಯಾಗುವೆನು.' ಮನು ತನ್ನ ರಾಣಿಯಾದ ಶತರೂಪೆಯೊಡನೆ ವಿಚಾರ ಮಾಡಿ ಕನ್ಯಾದಾನ ಮಾಡಿದ. ಬ್ರಹ್ಮಾವರ್ತದಲ್ಲಿರುವ ತನ್ನ ರಾಜಧಾನಿಯಾದ ಬರ್ಹಿಷ್ಮತೀ ನಗರಕ್ಕೆ ಹಿಂದಿರುಗಿದ. ಯಜ್ಞವರಾಹನ ಮೈಯಿಂದ ಹೊರ ಬಂದ ರೋಮರೂಪದ ಅವತಾರಗಳಿಂದ 'ಬರ್ಹಿ' ಎಂದರೆ ಹಸಿರು ದರ್ಭೆಗಳ ಸೃಷ್ಟಿಯಾದ ಸ್ಥಳವೇ ಬರ್ಹಿಷ್ಮತಿ. ಋಷಿಗಳು ಯಜ್ಞ ಮಾಡಿದ ಸ್ಥಳ. ಅಲ್ಲಿ ಮನು ಧರ್ಮದಿಂದ ರಾಜ್ಯವಾಳುತ್ತ, ಒಂದು ಮನ್ವಂತರಕಾಲ ಪೂರ್ತಿ ದೃಢಕಾಯನಾಗಿದ್ದು ಹರಿಸೇವೆ ಮಾಡಿದ. ಮನುಸ್ಮೃತಿ ಅವನೇ ಮುನಿಗಳಿಗೆ ನೀಡಿದ ವರ್ಣಾಶ್ರಮ ಧರ್ಮೋಪದೇಶವಾಗಿದೆ.

* * *

ಸ್ವಾಯಂಭುವ ಮನು ಕರ್ದಮರಲ್ಲಿ ತನ್ನ ಮಗಳಾದ ದೇವಹೂತಿಯನ್ನು ವಿವಾಹವಾಗಲು ಕೇಳಿಕೊಂಡಾಗ ಕರ್ದಮರು 'ಸಾಕ್ಷಾತ್ ಲಕ್ಷ್ಮಿಯಂತಿರುವ ನಿನ್ನ ಮಗಳನ್ನು ಅವಶ್ಯ ಸ್ವೀಕರಿಸುತ್ತೇನೆ' ಎನ್ನುತ್ತಾರೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಕಾಮಃ ಸ ಭೂಯಾನ್ನರದೇವ ತೇಽಸ್ಯಾಃ
ಪುತ್ರ್ಯಾಃ ಸಮಾಮ್ನಾಯ ವಿಧೌ ಪ್ರತೀತಃ ।
ಕ ಏವ ತೇ ತನಯಾಂ ನಾದ್ರಿಯೇತ
ಸ್ವಯೈವ ಕಾಂತ್ಯಾ ಕ್ಷಿಪತೀಮಿವ ಶ್ರಿಯಮ್ ॥ ೧೬ ॥

ರಾಜನೆ, ನಿನ್ನ ಮಗಳಿಂದ ವೇದೋಕ್ತ ಸಂತಾನರೂಪವಾದ ನನ್ನ ಅಭೀಷ್ಟ ನನಗೆ ಪ್ರಾಪ್ತವಾಗಲಿ. ಸ್ವಾಭಾವಿಕ ಸೌಂದರ್ಯದಿಂದ ಇತರ ಸ್ತ್ರೀಯರನ್ನೆಲ್ಲ ಮೀರಿಸುತ್ತ ಸಾಕ್ಷಾತ್ ಲಕ್ಷ್ಮಿಯಂತಿರುವ ನಿನ್ನ ಮಗಳನ್ನು ಯಾರು ಆದರಿಸಲಾರ?

[೧]ಇಲ್ಲಿ 'ಕ್ಷಿಪತೀಮಿವ ಶ್ರಿಯಂ' ಎಂದರೆ ಲಕ್ಷ್ಮಿಯನ್ನೂ ತಿರಸ್ಕರಿಸುವ ಸೌಂದರ್ಯಉಳ್ಳವಳು ದೇವಹೂತಿ ಎಂದು ಹೇಳಿದಂತೆ ಕಾಣುತ್ತದೆ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ ಹಾಗೇ ವ್ಯಾಖ್ಯಾನ ಮಾಡಿದೆ. ಲಕ್ಷ್ಮಿ ಎಂದರೆ ವಿಷ್ಣುಪತ್ನಿ ಲಕ್ಷ್ಮಿಯಲ್ಲ, ಜಗದಧಿಷ್ಠಾತ್ರಿಯಾದ ಇನ್ನೊಬ್ಬಳು ಲಕ್ಷ್ಮಿ ಎಂದು ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ. ಶ್ರೀ ಎಂದರೆ ಶೋಭೆ. ಸ್ವಾಭಾವಿಕ ಶೋಭೆಯಿಂದ ಆಭರಣದಿಂದುಂಟಾಗುವ ಶೋಭೆಯನ್ನು ತಿರಸ್ಕರಿಸುತ್ತಾಳೆ ಎಂದು ಶ್ರೀಧರ ವಿಶ್ವನಾಥ ಮುಂತಾದ ವ್ಯಾಖ್ಯಾನಗಳು.

ವಸ್ತುತಃ ವಿಷ್ಣುವಿನ ಆವೇಶ ಉಳ್ಳ ಮನುವಿನ ಪತ್ನಿಯಾಗುವವಳು ದೇವಹೂತಿ ವಿಷ್ಣುಪತ್ನಿ ಲಕ್ಷ್ಮಿಯ ಆವೇಶದಿಂದ ಲಕ್ಷ್ಮಿಯಂತೇ ಕಾಣುತ್ತಾಳೆ ಎನ್ನುವುದೇ ಸ್ವರಸವಾದ ವ್ಯಾಖ್ಯಾನ.

ಅದರಿಂದ 'ಅನ್ಯಸ್ತ್ರೀಯರನ್ನು ತಿರಸ್ಕರಿಸುವ ಲಕ್ಷ್ಮಿಯಂತೆ ದೇವಹೂತಿ' ಹೊರತು 'ಲಕ್ಷ್ಮಿಯನ್ನು ತಿರಸ್ಕರಿಸುವಂತಿರುವವಳೆ'ನ್ನಬಾರದು.

ಸ್ವಯಾ ಕಾಂತ್ಯಾಽನ್ಯಾಃ ಕ್ಷಿಪಂತೀ ಶ್ರೀರ್ಯಥಾ ತದ್ವತ್ ಸ್ಥಿತಾಮ್ ॥

ತನ್ನ ಸೌಂದರ್ಯದಿಂದ ಅನ್ಯಸ್ತ್ರೀಯರ ಸೌಂದರ್ಯವನ್ನು ತಿರಸ್ಕರಿಸುವವಳು ಲಕ್ಷ್ಮಿ, ಅಂಥ ಲಕ್ಷ್ಮಿಯಂತಿರುವವಳನ್ನು ಎಂದರ್ಥ.

* * *

---

೧. ಸ್ವಯಾ ಅಸಾಧಾರಣ್ಯಾ ಕಾಂತ್ಯೈವ ಶ್ರಿಯಮಿವ ಲಕ್ಷ್ಮೀಂ ಕ್ಷಿಪಂತೀಂ । ಅಸ್ಯಾ ಅಪಿ ಭಗವಚ್ಛಕ್ತಿತ್ವಾತ್ ತಥಾ ಕಥನಂ ನ ದೋಷಾಯ । —ವಲ್ಲಭಃ
ಶ್ರಿಯಂ ಜಗಲ್ಲಕ್ಷ್ಮೀಂ । —ಜೀವಗೋಸ್ವಾಮೀ
ಸ್ವಯಾಂಗಕಾಂತ್ಯೈವ ಶ್ರಿಯಂ ಭೂಷಣಾದಿಶೋಭಾಂ । — ಶ್ರೀಧರಃ

ಸ್ವಾಯಂಭುವ ಮನು ತನ್ನ ಮಗಳಾದ ದೇವಹೂತಿಯನ್ನು ಕರ್ದಮರಿಗೆ ಕೊಟ್ಟು ವಿವಾಹ ಮಾಡಿ ತನ್ನ ರಾಜಧಾನಿಯಾದ ಬರ್ಹಿಷ್ಮತೀ ನಗರಕ್ಕೆ ಹಿಂದಿರುಗಿದ. ಬರ್ಹಿಷ್ಮತಿಯು ವರಾಹನ ರೋಮಗಳು ಉದುರಿದ ಪವಿತ್ರಪ್ರದೇಶ ಎನ್ನುತ್ತಾರೆ, ಮೈತ್ರೇಯರು ವಿದುರನಿಗೆ–

ಬರ್ಹಿಷ್ಮತೀ ನಾಮ ಪುರೀ ಸರ್ವಸಂಪತ್ಸಮನ್ವಿತಾ ।
ನ್ಯಪತನ್ ಯತ್ರ ರೋಮಾಣಿ ಯಜ್ಞಸ್ಯಾಂಗಂ ವಿಧುನ್ವತಃ ॥ ೨೯ ॥

ಕುಶಕಾಶಾಸ್ತ ಏವಾಸನ್ ಲಸದ್ಧರಿತವರ್ಚಸಃ ।
ಋಷಯೋ ಯೈಃ ಪರಾಭಾವ್ಯ ಯಜ್ಞಘ್ನಾನ್ ಯಜ್ಞಮೀಜಿರೇ ॥ ೩೦ ॥

ಬರ್ಹಿಷ್ಮತೀ ಎಂಬ ಪಟ್ಟಣ ಸರ್ವಸಂಪತ್ತುಗಳಿಂದ ಸಮೃದ್ಧವಾಗಿದೆ. ಅಲ್ಲಿಯೇ ಯಜ್ಞವರಾಹನು ತನ್ನ ಒದ್ದೆ ಮೈಯನ್ನು ಕೊಡವಿದಾಗ ರೋಮಗಳು ಉದುರಿದುವು. ಆ ರೋಮಗಳಿಂದ ಒಳ್ಳೆಯ ಹಸಿರು ಬಣ್ಣದ ಕುಶ ಕಾಶಗಳೆಂಬ ದರ್ಭೆ ಹುಲ್ಲುಗಳು ಪ್ರಾದುರ್ಭವಿಸಿದುವು. ಋಷಿಗಳು ಯಜ್ಞವಿಘ್ನಕಾರಿಗಳಾದ ರಾಕ್ಷಸರನ್ನು ಈ ದರ್ಭೆಗಳಿಂದಲೇ ಪರಾಭವಗೊಳಿಸಿ ಯಜ್ಞಮಾಡಿದರು.

ಇಲ್ಲಿ ಯಜ್ಞವರಾಹನ ಮೈಯಿಂದ ರೋಮಗಳು ಉದುರಿ ಬೀಳುವುದೆಂದರೇನು? ಅವು ದರ್ಭೆಗಳಾಗುವುದಾದರೂ ಹೇಗೆ? ಎಂಬ ಪ್ರಶ್ನೆಗಳು ಬರುತ್ತವೆ. ಪರಮಾತ್ಮನ ಶರೀರ ಸಚ್ಚಿದಾನಂದಮಯ. ಅದು ಅವನಿಗಿಂತ ಬೇರೆ ಅಲ್ಲ. ಅಚ್ಛೇದ್ಯ ಅಭೇದ್ಯ. ಮೈ ಕೊಡವಿದಾಗ ರೋಮಗಳು ಉದುರುವುದು ಹೇಗೆ ಸಾಧ್ಯ? ಬೀಜದಿಂದ ಸಸ್ಯ ಹುಟ್ಟುವಂತೆ ಚಿನ್ಮಯವಾದ ರೋಮಗಳಿಂದ ಜಡವಾದ ದರ್ಭೆ ಹುಟ್ಟಲು ಶಕ್ಯವೆ? ಈ ಪ್ರಶ್ನೆಗಳು ಬೇರೆ ವ್ಯಾಖ್ಯಾನಕಾರರಿಗೆ ಬರಲೇ ಇಲ್ಲ. [೧]ಯಜ್ಞವರಾಹನು ಯಜ್ಞರೂಪನೆಂದಮೇಲೆ ಅವನ ರೋಮಗಳು ದರ್ಭೆಗಳೇ ಆಗಿರಬೇಕಲ್ಲವೆ? ಎನ್ನುತ್ತಾರೆ ವಲ್ಲಭಾಚಾರ್ಯರು. ಹೀಗೆ ಹೇಳಿದರೆ ಸ್ಕಂದಪುರಾಣದ ವಿರೋಧ ಬರುತ್ತದೆ–

ಜ್ಞಾನಾನಂದಸ್ವರೂಪೇಭ್ಯೋ ರೋಮಭ್ಯೋಽಸ್ಯ ಕುಶಾದಯಃ ।
ವಿಧುನ್ವತಃ ಪ್ರಯಾಗೇ ತು ವರಾಹವಪುಷೋಽಭವನ್ ।
ರೋಮಾಣಿ ತಾನಿ ದೇವಸ್ಯ ರೂಪಾಣ್ಯಾಸನ್ ಸಹಸ್ರಶಃ ॥
ಇತಿ ಸ್ಕಾಂದೇ ।

ತ ಏವಾಸನ್ ತೇಭ್ಯ ಏವಾಸನ್ । ಸಪ್ತಸು ಪ್ರಥಮೇತಿ ಸೂತ್ರಾತ್ ।

---

೧. ಸ ಹಿ ಯಜ್ಞಾತ್ಮಾ । ರೋಮಾಣಿ ಚ ಬರ್ಹಿಃ । —ವಲ್ಲಭಃ

ಯಜ್ಞವರಾಹನು ಪ್ರಯಾಗದಲ್ಲಿ ಮೈ ಕೊಡವಿದಾಗ ಅವನ ಮೈಯಿಂದ ಸಾವಿರಾರು ರೋಮಗಳು ಅವನ ಅವತಾರರೂಪಗಳು ಅಭಿವ್ಯಕ್ತವಾದುವು ಮತ್ತು ಜ್ಞಾನಾನಂದಮಯವಾದ ಆ ರೂಪಗಳಿಂದ ಕುಶ ಮುಂತಾದ ದರ್ಭೆಗಳ ಸೃಷ್ಟಿಯಾಯಿತು ಎಂದು ಸ್ಕಂದಪುರಾಣದಲ್ಲಿ ಹೇಳಿದೆ. ಆದರಿಂದ 'ಆ ರೋಮಗಳೇ' ಎಂದರೆ 'ಆ ರೋಮಗಳಿಂದಲೆ' ದರ್ಭೆಗಳು ಉತ್ಪನ್ನವಾದುವು ಎಂದು ಪ್ರಥಮಾವಿಭಕ್ತಿಯನ್ನು ಪಂಚಮ್ಯರ್ಥದಲ್ಲಿ ಇಟ್ಟುಕೊಳ್ಳಬೇಕು. ಮಹಾವ್ಯಾಕರಣ ಸೂತ್ರದಲ್ಲಿ 'ಏಳು ವಿಭಕ್ತಿಗಳ ಅರ್ಥದಲ್ಲಿಯೂ ಪ್ರಥಮಾ ವಿಭಕ್ತಿ ಬರಬಹುದು' ಎಂದಿದೆ.

ಆದರಿಂದ ದೀಪದಿಂದ ದೀಪ ಹೊರಡುವಂತೆ ವರಾಹನ ಮೈಯಿಂದ ರೋಮಗಳೆಂಬ ಅವತಾರ ರೂಪಗಳು ವ್ಯಕ್ತವಾದುವು, ಉದುರಿದಂತೆ ಕಂಡು ಬಂದುವು. ಉದುರಿದ ಪ್ರದೇಶದಲ್ಲಿ ಆ ರೋಮಗಳೆಂಬ ಭಗವದ್ರೂಪಗಳಿಂದ ದರ್ಭೆಗಳ ಸೃಷ್ಟಿಯಾಯಿತು ಹೊರತು ರೋಮಗಳೇ ದರ್ಭೆಗಳಾಗಲಿಲ್ಲ.

---

* * *

ಸ್ವಾಯಂಭುವ ಮನು ತನ್ನ ಜೀವಿತಕಾಲಾವಧಿಯನ್ನು ಪೂರ್ತಿಯಾಗಿ ಭಗವದಾರಾಧನೆಯಲ್ಲಿ ವಿನಿಯೋಗ ಮಾಡಿ ಸಫಲಗೊಳಿಸಿದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಅಯಾತಯಾಮಾಸ್ತಸ್ಯಾಸನ್ ಯಾಮಾಃ ಸ್ವಾಂತರಯಾಪನಾಃ ।
ಶೃಣ್ವತೋ ಧ್ಯಾಯತೋ ವಿಷ್ಣೋಃ ಕುರ್ವತೋ ಬ್ರುವತಃ ಕಥಾಃ ॥ ೩೫ ॥

ಸ್ವಾಯಂಭುವ ಮನು ಸದಾ ಹರಿಕಥಾಶ್ರವಣ ಧ್ಯಾನ ಕೀರ್ತನಗಳಲ್ಲಿ ಆಸಕ್ತನಾಗಿದ್ದುದರಿಂದ ಅವನ ಮನ್ವಂತರದ ಕಾಲದಲ್ಲಿ ಒಂದಿಷ್ಟೂ ಕಾಲ ವ್ಯರ್ಥವಾಗಲಿಲ್ಲ.

[೧]ಇಲ್ಲಿ 'ಅಯಾತಯಾಮ' ಎಂದರೆ ನಿಷ್ಫಲವಲ್ಲದ್ದು, ಸಫಲ ಎಂಬ ಅರ್ಥ ಬೇರೆ ವ್ಯಾಖ್ಯಾನಕಾರರಿಗೂ ಸಂಮತವೇ. ಆದರೆ ಆ ಶಬ್ದದಿಂದ ಆ ಅರ್ಥ ಸಿಗುವ ಬಗೆ ಹೇಗೆ? ಶ್ರೀಧರೀಯ ಮತ್ತು ಗಿರಿಧರ ವ್ಯಾಖ್ಯಾನಗಳಲ್ಲಿ 'ಪಕ್ವಮಾಡಿದ ಅನ್ನ ಒಂದು ಯಾಮ ಕಳೆದರೆ ಹಳಸಿ ಹೊಗುತ್ತದೆ. ಅದರಲ್ಲಿ ಸಾರವಿಲ್ಲದಾಗುತ್ತದೆ ಹಾಗೇ

---

೧. ಯಾತೋ ಯಾಮೋ ಯಸ್ಯ ಪಕ್ವಸ್ಯಾನ್ನಸ್ಯ ತದ್ ಗತಸಾರಂ ಭವತ್ಯತೋಽನ್ಯದಪಿ ಗತಸಾರಂ ಯಾತಯಾಮಮುಚ್ಯತೇ । –ಶ್ರೀಧರಃ

ಕಾಲವೂ ನಿಃಸಾರವಾದರೆ, ವ್ಯರ್ಥವಾಗಿ ಕಳೆದರೆ ಯಾತಯಾಮವೆನಿಸುತ್ತದೆ' ಎಂದು ಹೇಳಿದ್ದಾರೆ. ಆದರೆ ಯಾಮ ಕಳೆದರೆ ಅನ್ನ ಹಳಸುವಂತೆ ಕಾಲ ಹಳಸುವುದಿಲ್ಲ. ಹಳಸಿದಂತೆ ಎಂದು ಅಮುಖ್ಯಾರ್ಥವನ್ನು ತೆಗೆದು ಕೊಳ್ಳಬೇಕಾಗುತ್ತದೆ. ವಸ್ತುತಃ ಯಾಮ ಎಂದರೆ ಸಾರ. 'ಯಾತಯಾಮ' ಎಂದರೆ ನಿಃಸಾರ, ವ್ಯರ್ಥ ಎಂದು ಮುಖ್ಯಾರ್ಥವೇ ಲಭಿಸುವಾಗ ಏಕೆ ಕ್ಲೇಶ? ನಾರದಪುರಾಣದಲ್ಲಿ ಇದು ಸ್ಪಷ್ಟವಿದೆ–

ಗತಸಾರಂ ಯಾತಯಾಮಂ ಯಾಮಃ ಸಾರ ಇಹೋಚ್ಯತೇ ||
ಇತಿ ನಾರದೀಯೇ |

ನಿಷ್ಫಲವು 'ಯಾತಯಾಮ' ಎನಿಸುತ್ತದೆ. ಏಕೆಂದರೆ ಈ ಶಬ್ದದಲ್ಲಿ 'ಯಾಮ' ಎನ್ನುವ ಅಂಶ ಫಲವನ್ನು ಹೇಳುತ್ತದೆ ಎಂದು ನಾರದೀಯ ಪುರಾಣದಲ್ಲಿ ಹೇಳಿದೆ.

* * *

ಮನುಷ್ಯನಾಗಿ ಜನಿಸಿದ ಮೇಲೆ ಸಹಜವಾಗಿ ದೈಹಿಕವಾದ ರೋಗಾದಿ ಬಾಧೆಗಳು ಬೇರೆ ತಾಪತ್ರಯಗಳು ಸಂಭಾವಿತವಿರುವುದರಿಂದ, 'ಜೀವಿತಕಾಲವಿಡೀ ಭಗವದಾರಾಧನೆಯಲ್ಲಿಯೇ ಸ್ವಾಯಂಭುವಮನು ವಿನಿಯೋಗಿಸಿದನೆಂ'ದರೆ ಅದು ಹೇಗೆ ಶಕ್ಯ ಎಂದರೆ ಮೈತ್ರೇಯರು ಹೇಳುತ್ತಾರೆ–

ಶಾರೀರಾ ಮಾನಸಾ ದಿವ್ಯಾಃ ಪರ್ಯಾಸೇ ಯೇ ಚ ಮಾನುಷಾಃ |
ಭೌತಿಕಾಶ್ಚ ಕಥಂ ಕ್ಲೇಶಾ ಬಾಧಂತೇ ಹರಿಸಂಶ್ರಯಮ್ ||೩೭||

ಸ್ವಾಯಂಭುವ ಮನು ಮನುಷ್ಯನಾಗಿ ಹುಟ್ಟಿದ್ದರೂ ಶ್ರೀಹರಿಯನ್ನೇ ಆಶ್ರಯಿಸಿದ್ದರಿಂದ ಯಾವ ಕ್ಲೇಶವೂ ಅವನಿಗೆ ಬರಲಿಲ್ಲ. ಶ್ರೀಹರಿಯ ನ್ನಾಶ್ರಯಿಸಿದವನಿಗೆ ಶಾರೀರಿಕ ಮಾನಸಿಕ ದೈವಿಕ ಮಾನುಷ ಭೌತಿಕವೆಂಬ ಕ್ಲೇಶಗಳು ಹೇಗೆ ಬಾಧಿಸಬಲ್ಲುವು?

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ವೈಯಾಸೇ ಯೇ ಚ ಮಾನುಷಾಃ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. 'ವೈಯಾಸಿ' ಎಂದರೆ ವ್ಯಾಸಪುತ್ರವಿದುರ. 'ಹೇ ವೈಯಾಸೇ' ಎಂದು ಸಂಬೋಧನ. ಇದು ವ್ಯರ್ಥ. ಮನುವಿನ ಚರಿತ್ರೆಯಲ್ಲಿ ವಿಶ್ವಾಸ ಉಂಟಾಗುವುದಕ್ಕಾಗಿ 'ವ್ಯಾಸರು ಕೂಡ ಮನುವಿನ ಈ ಚರಿತ್ರೆಯನ್ನು ಬಹಳ ಹೇಳಿದ್ದಾರೆ' ಎಂದು ಸೂಚಿಸಲು ಈ ಸಂಬೋಧನ ಎಂದು ವಲ್ಲಭವ್ಯಾಖ್ಯಾನ ಹೇಳುತ್ತದೆ. ಆದರೆ ವ್ಯಾಸರು ವಿದುರನಿಗೆ ಮನುವಿನ ಚರಿತ್ರೆಯನ್ನು ಹೇಳಿದ್ದು ಎಲ್ಲಿಯೂ ಕಾಣುವುದಿಲ್ಲ. ಮತ್ತು 'ಪರ್ಯಾಸೇ' ಎಂದರೆ ವಿಪರ್ಯಾಸೇ, ದೇವನು ಮಾನವನಾಗಿ ಹುಟ್ಟುವುದು ವಿಪರ್ಯಾಸ. ಇಂಥ ವಿಪರ್ಯಾಸದಲ್ಲಿಯೂ ಮನುವಿಗೆ ಮನುಷ್ಯಸಹಜವಾದ ಬಾಧೆಗಳು ಪೀಡಿಸಲಿಲ್ಲ, ಇದು ಹರಿಯನ್ನಾಶ್ರಯಿಸಿದುದುರ

ಪ್ರಭಾವ ಎಂದು ವಿಶೇಷಾರ್ಥ ಸಿಗುವುದರಿಂದ 'ಪರ್ಯಾಸೇ' ಎಂಬ ಪಾಠವೇ ಉತ್ತಮ.

ಪರ್ಯಾಸೇ ಮಾನುಷತ್ವೇನಾವಸ್ಥಾನೇಽಪಿ ।

ಪರ್ಯಾಸೇ ಎಂದರೆ ವಿಪರ್ಯಾಸೇ, ಮನು ತನ್ನ ದೇವತ್ವಕ್ಕಿಂತ ವಿಪರೀತವಾಗಿ ಮನುಷ್ಯತ್ವವನ್ನು ಹೊಂದಿದ್ದರೂ ಕೂಡ ಎಂದರ್ಥ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ತ್ರಯೋವಿಂಶೋಽಧ್ಯಾಯಃ ॥

—o—

ಅಧ್ಯಾಯ–೨೪

ಅಧ್ಯಾಯಸಾರಾಂಶ

ಪಾರ್ವತಿ ಶಿವನನ್ನು ಸೇವಿಸುವಂತೆ ದೇವಹೂತಿ ಕರ್ದಮರನ್ನು ಸೇವಿಸಿದಳು. ಬಹುಕಾಲದ ಸೇವೆಯಿಂದ ಕೃಶಳಾದಳು. ಮುನಿ ಸಂತುಷ್ಟನಾಗಿ ಅವಳ ಬಯಕೆ ಏನೆಂದು ಕೇಳಿದ. ಅವಳು ಅಂಗಸಂಗ ಬೇಕೆಂದಳು. ಅದಕ್ಕೆ ಮೊದಲಿಗೆ ತನ್ನ ಬಡಕಲಾದ ಶರೀರ ಪುಷ್ಟವಾಗಲಿ, ಸಾರ್ವಭೌಮನ ಮಗಳಿಗೆ ಯೋಗ್ಯವಾದ ಭವ್ಯ ಅರಮನೆಯೂ ಸಿದ್ಧವಾಗಲಿ ಎಂದಳು. ಒಡನೆ ಅಪರೋಕ್ಷಜ್ಞಾನಿಯಾದ ಮುನಿಯ ಜ್ಞಾನಪ್ರಭಾವದಿಂದ ಎಲೆಮನೆಯಿದ್ದ ಸ್ಥಳದಲ್ಲಿ ಅರಮನೆ ಕಾಣಿಸಿಕೊಂಡಿತು. 'ಈ ಸರೋವರದಲ್ಲಿ ಮುಳುಗಿ ಮಿಂದು ಬಾ' ಎಂದು ಪತಿಯಾಜ್ಞೆ ಕೇಳಿ ದೇವಹೂತಿ ಸರೋವರದಲ್ಲಿ ಮುಳುಗಿದಾಗ ನೀರೊಳಗೆ ಇನ್ನೊಂದು ಮಂದಿರ, ಮಂದಿರದಲ್ಲಿ ನೂರಾರು ಕನ್ಯೆಯರು! ಅವರು ಅವಳನ್ನು ಸ್ನಾನ ವಸ್ತ್ರಾಭರಣ ಅಮೃತಪಾನಗಳಿಂದ ಉಪಚರಿಸುತ್ತಾರೆ. ನಿಲುಗನ್ನಡಿ ಮುಂದೆ ನಿಲ್ಲಿಸುತ್ತಾರೆ. ಆಕೆ ತಾನೀಗ ಮೈಕೈ ತುಂಬಿಕೊಂಡು ನವಯೌವನದ ಚೆಲುವಿನ ಬೊಂಬೆಯಾದುದನ್ನು ಕಂಡಳು. ಪತಿಯೂ ಈಗ ಹದಿನಾರರ ಹರೆಯದ ಸ್ಫುರದ್ರೂಪಿ ತರುಣನಾಗಿದ್ದ. ಇಬ್ಬರೂ ವಿಮಾನವೇರಿ ಎಲ್ಲಡೆ ದೇವೋದ್ಯಾನಗಳಲ್ಲಿ ಸಂಚರಿಸಿದರು. ಇಬ್ಬರೂ ಒಂಬತ್ತು ಒಂಬತ್ತು ರೂಪಗಳನ್ನು ಧರಿಸಿ ನೂರು ವರ್ಷಕಾಲ ವಿಹರಿಸಿದರು. ಒಂಬತ್ತು ಮಂದಿ ಹೆಣ್ಣು ಮಕ್ಕಳನ್ನು ಪಡೆದರು. ಬಳಿಕ ಮುನಿ ಸನ್ಯಾಸಿಯಾಗಲು ಉದ್ಯುಕ್ತನಾದಾಗ ದೇವಹೂತಿ ಕೇಳಿಕೊಂಡಳು, 'ಮಕ್ಕಳಿಗೆ ಮದುವೆ ಮಾಡು ಮತ್ತು ಜ್ಞಾನಿಯಾದ ನಿನ್ನೊಡನೆ ದೀರ್ಘಕಾಲ ಬಾಳಿಯೂ ನಾನು ಜ್ಞಾನ ಸಂಪಾದಿಸಲಿಲ್ಲ. ಜ್ಞಾನೋಪದೇಶ ನೀಡಬಲ್ಲ ಒಬ್ಬ ಮಗನನ್ನೂ ನನಗೆ ನೀಡು.'

* * *

ಕರ್ದಮರು ತಮ್ಮ ಯೋಗಬಲದಿಂದ ಸಕಲಭೋಗಸಾಮಗ್ರಿಗಳಿಂದ ಯುಕ್ತವಾದ ಎಲ್ಲೆಡೆ ಸಂಚರಿಸಬಲ್ಲ ದಿವ್ಯವಿಮಾನರೂಪವಾದ ಅರಮನೆಯನ್ನು ನಿರ್ಮಿಸಿದರು. ಅದರ ಬಾಗಿಲುಗಳಿಗೆ ಹವಳದ ದ್ವಾರಬಂಧ, ವಜ್ರದ ಕವಾಟಗಳು ಇಂದ್ರನೀಲ ಶಿಖರದ ಮೇಲೆ ಬಂಗಾರದ ಕಲಶಗಳೆಂದು ಮೈತ್ರೇಯರು ವಿದುರನಿಗೆ ವರ್ಣಿಸುತ್ತಾರೆ–

ದ್ವಾಃಸು ವಿದ್ರುಮದೇಹಲ್ಯಾ ಭಾತಂ ವಜ್ರಕಪಾಟಿಮತ್ ।
ಶಿಖರೇಷ್ವಿಂದ್ರನೀಲೇಷು ಹೇಮಕುಂಭೈರಧಿಶ್ರಿತಮ್ ॥ ೧೮ ॥

ಬಾಗಿಲುಗಳಲ್ಲಿ ಹವಳದ ದ್ವಾರಬಂಧಗಳಿಂದ ಶೋಭಿಸುತ್ತಿದೆ. ವಜ್ರದ ಕಪಾಟುಗಳಿಂದ ಕೂಡಿದೆ. ಇಂದ್ರನೀಲ ಶಿಖರಗಳಲ್ಲಿ ಬಂಗಾರದ ಕಲಶಗಳಿಂದ ಯುಕ್ತವಾಗಿದೆ, ಅರಮನೆ.

ಇಲ್ಲಿ 'ದೇಹಲೀ'ಶಬ್ದಕ್ಕೆ ಸಾಮಾನ್ಯವಾಗಿ ಬಾಗಿಲಿನ ಹೊಸ್ತಿಲು ಎಂದೇ ಅರ್ಥ ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ಹೊಸ್ತಿಲು ಮಾತ್ರವಲ್ಲದೆ ಪೂರ್ತಿಯಾಗಿ ದ್ವಾರಬಂಧವೇ ಹವಳದಿಂದ ನಿರ್ಮಾಣವಾಗಿದೆ ಎಂಬ ಅಭಿಪ್ರಾಯದಲ್ಲಿ ದೇಹಲೀಶಬ್ದಕ್ಕೆ ಇಲ್ಲಿ ದ್ವಾರಬಂಧ ಎಂದು ಅರ್ಥವಿಟ್ಟುಕೊಳ್ಳಬೇಕು.

ದೇಹಲೀ ದ್ವಾರಬಂಧಃ ।

'ದೇಹಲೀ' ಎಂದರೆ ಇಲ್ಲಿ ದ್ವಾರಬಂಧ ವಿವಕ್ಷಿತವಾಗಿದೆ.

* * *

ಕರ್ದಮರ ವಿಮಾನದಲ್ಲಿ ಕೃತ್ರಿಮ ಹಂಸ ಪಾರಿವಾಳಗಳು ಎಷ್ಟು ಸುಂದರವಾಗಿದ್ದುವು ಎಂದರೆ ಅವುಗಳನ್ನು ಸಜೀವಪಕ್ಷಿಗಳೆಂದು ತಮ್ಮವರೆಂದು ಭ್ರಮಿಸಿ ನಿಜವಾದ ಹಂಸಪಾರಿವಾಳಗಳು ಅವುಗಳ ಮೇಲೆ ಪುನಃಪುನಃ ಹತ್ತಿ ಕುಳಿತು ಕೂಗಿದುವು. ಆದರೂ ಅವುಗಳಿಗೆ ಆ ಭ್ರಮೆ ಹೋಗಲಿಲ್ಲ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಹಂಸಪಾರಾವತವ್ರಾತೈಸ್ತತ್ರತತ್ರ ನಿಕೂಜಿತಮ್ ।
ಕೃತ್ರಿಮಾನ್ ಮನ್ಯಮಾನೈಃ ಸ್ವಾನ್ ಅಧಿರುಹ್ಯಾಧಿರುಹ್ಯ ಚ ॥ ೨೦ ॥

ಕೃತ್ರಿಮ ಹಂಸಪಾರಿವಾಳಗಳನ್ನು ಅವು ನಿಜವಾಗಿ ತಮ್ಮವರೇ ಆದ ಹಂಸಪಾರಿವಾಳಗಳೆಂದು ಭ್ರಮಿಸಿ ನಿಜವಾದ ಹಂಸಪಾರಿವಾಳಗಳು ಅವುಗಳ ಮೇಲೆ ಹತ್ತಿ ಹತ್ತಿ ಕುಳಿತು ಕೂಗಿದುವು.

ಇಲ್ಲಿ ಕೃತ್ರಿಮ ಹಂಸಪಾರಿವಾಳಗಳೇಕೆ? ನಿಜವಾದ ಹಂಸಪಾರಿವಾಳಗಳಿರುವಾಗ? ಎನ್ನುವ ಪ್ರಶ್ನೆ ಬರುತ್ತದೆ. ಇದಕ್ಕೆ ಬೇರೆ ವ್ಯಾಖ್ಯಾನಗಳಲ್ಲಿ ಉತ್ತರವಿಲ್ಲ. ಉತ್ತರ ಹೀಗೆ ಹೇಳಬೇಕು–

ಕೃತ್ರಿಮಾನ್ ಶೋಭಾರ್ಥಂ ಕೃತಾನ್ ।

ಕೃತ್ರಿಮಾನ್ ಎಂದರೆ ಶೋಭೆಗಾಗಿ ನಿರ್ಮಿಸಿದವುಗಳೆಂದರ್ಥ.

ನಿಜವಾದ ಹಂಸಪಾರಿವಾಳಗಳಿಗೇ ಭ್ರಮೆ ಹುಟ್ಟಿಸುವಂಥ ಸುಂದರವಾದ ಹಂಸಪಾರಿವಾಳಗೊಂಬೆಗಳನ್ನು ಶೋಭೆಗಾಗಿ ನಿರ್ಮಿಸಲಾಗಿತ್ತು.

* * *

ಪತಿಯಾಜ್ಞೆಯಂತೆ ದೇವಹೂತಿ ಸರೋವರದಲ್ಲಿ ಸ್ನಾನ ಮಾಡಿ ಹೊಸ ಪೀತಾಂಬರ ಉಟ್ಟು, ಮಾಲ್ಯ ಆಭರಣಗಳಿಂದ ಅಲಂಕರಿಸಿಕೊಂಡು ನಿಲುಗನ್ನಡಿಯಲ್ಲಿ ತನ್ನ ಚೆಲುವನ್ನು ನೋಡಿ ತಾನೇ ಬೆರಗಾದಳಂತೆ.

ಅಥಾದರ್ಶೇ ಸ್ವಮಾತ್ಮಾನಂ ಸ್ರಗ್ವಿಣಂ ವಿರಜಾಂಬರಮ್ ।
ವಿರಜಂ ಕೃತಸ್ವಸ್ತ್ಯಯನಂ ಕನ್ಯಾಭಿರ್ಬಹುಮಾನಿತಮ್ ॥ ೩೦ ॥

ಬಳಿಕ ದೇವಹೂತಿ ನಿರ್ಮಲವಾದ ಪೀತಾಂಬರ ಉಟ್ಟು ಮಾಲ್ಯ ಆಭರಣಗಳಿಂದ ಅಲಂಕರಿಸಿಕೊಂಡು ಸಖಿಯರಿಂದ ಹರಕೆ ಬಹುಮಾನ ಮಾಡಿಸಿ ಕೊಂಡು ನಿಲುಗನ್ನಡಿಯಲ್ಲಿ ತನ್ನ ಚೆಲುವನ್ನು ಕಂಡಳು.

ಇಲ್ಲಿ 'ಆದರ್ಶೇ' ಕನ್ನಡಿಯಲ್ಲಿ ಎಂದಿಷ್ಟು ಮಾತ್ರ ಶ್ಲೋಕದಲ್ಲಿ ಇದೆ. 'ದದರ್ಶ' ತನ್ನನ್ನು ನೊಡಿಕೊಂಡಳೆಂದು ವಾಕ್ಯಪೂರ್ತಿಮಾಡಿಕೊಳ್ಳಬೇಕು. ಅಥವಾ 'ಆದರ್ಶೇ' ಎಂದರೆ 'ಆ' ಚೆನ್ನಾಗಿ 'ದರ್ಶೇ' ನೋಡಿಕೊಂಡಳೆಂದು ಅರ್ಥವಿವಕ್ಷೆಯಲ್ಲಿ ವೈದಿಕಪ್ರಯೋಗ. ಆಗ ಕನ್ನಡಿಯಲ್ಲಿ ಎಂಬ ಅರ್ಥದಲ್ಲಿ ಇನ್ನೊಂದು 'ಆದರ್ಶೇ' ಎಂಬ ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬಹುದು, ಇಲ್ಲವೆ 'ಆದರ್ಶೇ' ಎಂಬುದನ್ನು ಆವೃತ್ತಿ ಮಾಡಿಕೊಳ್ಳಬಹುದು.

ಬೇರೆ ವ್ಯಾಖ್ಯಾನಕಾರರೆಲ್ಲರೂ 'ದದರ್ಶ' ಎಂದು ಅಧ್ಯಾಹಾರ ಮಾಡಿದ್ದಾರೆ. ಆದರೆ ಮುಂದೆ 'ದೃಷ್ಟ್ವಾ ಕೃತಶಿರಃಸ್ನಾನಂ ಸರ್ವಾಭರಣಭೂಷಿತಂ' ಎಂದು ಮುಂತಾಗಿ ಹೇಳಿ,

'ಯದಾ ಸಸ್ಮಾರ ಋಷಭಮೃಷೀಣಾಂ ದಯಿತಂ ಪತಿಂ ।
ತತ್ರ ಚಾಸ್ತೇ ಸಹ ಸ್ತ್ರೀಭಿರ್ಯತ್ರಾಸ್ತೇ ಸ ಪ್ರಜಾಪತಿಃ ॥

ಎಂದು ವಾಕ್ಯಪೂರ್ತಿ ಮಾಡಿರುವುದರಿಂದ ವಾಕ್ಯಪೂರ್ತಿಗಾಗಿ 'ದದರ್ಶ' ಶಬ್ದಾಧ್ಯಾಹಾರವನ್ನಾಗಲಿ 'ಆದರ್ಶೇ' ಎಂಬುದರ ಆವೃತ್ತಿಯಾಗಲಿ ಮಾಡಬೇಕಾಗಿಲ್ಲ ಎಂಬ ಸಮಸ್ಯೆ ಇದಿರಾಗುತ್ತದೆ. ಬೇರೆ ವ್ಯಾಖ್ಯಾನಕಾರರ ಪ್ರಕಾರ 'ದೃಷ್ಟ್ವಾ ಕೃತಶಿರಃಸ್ನಾನಂ' ಎಂಬಲ್ಲಿ 'ಸ್ನಾತಂ ಕೃತಶಿರಃಸ್ನಾನಂ' ಎಂದು ಪಾಠವಿರುವುದರಿಂದ ವಾಕ್ಯಪೂರ್ತಿಗಾಗಿ ಅಧ್ಯಾಹಾರ ಅವರಿಗೆ ಆವಶ್ಯಕ. 'ದೃಷ್ಟ್ವಾ ಕೃತಶಿರಃಸ್ನಾನಂ' ಎಂಬ ನಮ್ಮ ಪಾಠದಲ್ಲಿ ಏಕೆ ಅಧ್ಯಾಹಾರ?

ಅಧ್ಯಾಹಾರ ಬೇಕು. ಅದಿಲ್ಲದಿದ್ದರೆ 'ದೃಷ್ಟ್ವಾ ಯದಾ ಸಸ್ಮಾರ' 'ನೋಡಿ ಯಾವಾಗ ಪತಿಯನ್ನು ನೆನೆದಳೋ-ಆಗ ಪತಿ ಪ್ರತ್ಯಕ್ಷವಾಗಿದ್ದರು' ಎಂದು ಯಚ್ಛಬ್ದದಿಂದ ಅನುವಾದ ಕೂಡಲಾರದು. ಅನುವಾದ ಮಾಡಬೇಕಾದರೆ ಹಿಂದೆ ಅದನ್ನು ಹೇಳಿರಬೇಕು. 'ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡಳು, ನೋಡಿ, ಪತಿಯನ್ನು ಯಾವಾಗ ನೆನೆದಳೋ' ಎಂದು ಹೇಳಿದರೆ ಅದು ಸಂಗತವಾಗುತ್ತದೆ. ಬೇರೆ ವ್ಯಾಖ್ಯಾನಕಾರರು ಕೂಡ 'ಯದಾ ಸಸ್ಮಾರ' ಎಂಬಲ್ಲಿ 'ದೃಷ್ಟ್ವಾ ಯದಾ ಸಸ್ಮಾರ' ಎಂದು 'ದೃಷ್ಟ್ವಾ' ಪದಾಧ್ಯಾಹಾರ ಮಾಡಿದ್ದಾರೆ. ಅದು ಅವರಿಗೆ ಆವಶ್ಯಕ. ನಮಗೆ 'ದೃಷ್ಟ್ವಾ'ಪದವೇ ಇದೆ. ಹೀಗಾಗಿ ಅವರಿಗೆ 'ದದರ್ಶ' 'ದೃಷ್ಟ್ವಾ' ಎಂದು ಎರಡು ಅಧ್ಯಾಹಾರಗಳು. ನಮಗೆ 'ದದರ್ಶ' ಎಂದು ಮಾತ್ರ ಅಧ್ಯಾಹಾರ ಎಂಬ ಅಭಿಪ್ರಾಯದಿಂದ 'ದದರ್ಶ' ಎಂದು ಮಾತ್ರ ಶ್ರೀಮದಾಚಾರ್ಯರು ಹೇಳಿದ್ದಾರೆ–

ಆದರ್ಶೇ ದದರ್ಶ ।

'ಆದರ್ಶೇ' ಕನ್ನಡಿಯಲ್ಲಿ, ಎಂದಾದ ಬಳಿಕ 'ದದರ್ಶ' ಎಂದು ಅಧ್ಯಾಹಾರ. 'ನೋಡಿದಳು' ಎಂದರ್ಥ. ಅಥವಾ 'ಆದರ್ಶೇ' ಎಂದರೆ ವೈದಿಕಪ್ರಯೋಗ ವೆಂದಿಟ್ಟುಕೊಂಡು ನೋಡಿದಳೆಂದರ್ಥ.

* * *

ಅಲಂಕೃತರಾದ ಸುಂದರಾಕಾರದ ಕರ್ದಮ ದೇವಹೂತಿ ದಂಪತಿಗಳು ದಿವ್ಯ ವಿಮಾನವೇರಿದರು. ವಿದ್ಯಾಧರಿಯರಿಂದ ಸೇವಿಸಲ್ಪಡುತ್ತ ಅಮೃತಪಾನ ಮಾಡಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ತಸ್ಮಿನ್ನಲುಪ್ತಮಹಿಮಾ ಪ್ರಿಯಯಾಽನುಷಕ್ತೋ
ವಿದ್ಯಾಧರೀಭಿರುಪಚೀರ್ಣವಪುರ್ವಿಮಾನೇ ।
ಬಭ್ರಾಜ ಉತ್ಕಚಕ ಉದ್ಗುಣಪಾನವೀಚ್ಯ-
ಸ್ತಾರಾಭಿರಾವೃತ ಇವೋಡುಪತಿರ್ನಭಃಸ್ಥಃ ॥ ೩೮ ॥

ಕರ್ದಮರು ಇಂದ್ರಿಯ ನಿಗ್ರಹಾದಿಸಾಮರ್ಥ್ಯದಲ್ಲಿ ಒಂದಿಷ್ಟೂ ಕುಗ್ಗದೆ ಪ್ರಿಯೆಯ ಆಲಿಂಗನ ಮತ್ತು ವಿದ್ಯಾಧರಿಯರ ಸೇವೆ ಕೊಳ್ಳುತ್ತ ಉತ್ತಮವಾದ ಅಮೃತವನ್ನು ಯಥೇಚ್ಛ ಪಾನ ಮಾಡುತ್ತ ತಾರೆಯರಿಂದ ಆವೃತನಾದ ಚಂದ್ರ ಆಕಾಶದಲ್ಲಿ ಬೆಳಗುವಂತೆ ವಿಮಾನದಲ್ಲಿ ಶೋಭಿಸಿದರು.

ಇಲ್ಲಿ 'ಉತ್ಕಚಕ ಉದ್ಗುಣಪಾನವೀಚ್ಯಃ' ಎಂಬಲ್ಲಿ 'ಉತ್ಕಚ ಕುಮುದ್ಗಣ ಪಾನಪೀಚ್ಯಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ವಿಕಸಿತ ಕುಮುದಸಮೂಹ ಉಳ್ಳವರು, ಸ್ತ್ರೀಯರಿಗೆ ಆಕರ್ಷಕವಾದ ರೂಪ ಉಳ್ಳವರು ಕರ್ದಮರು' ಎಂದರ್ಥ. ಕುಮುದ ಸಮೂಹ ಉಳ್ಳವರೆಂದರೇನು? ಕುಮುದ ಮಾಲೆ ಉಳ್ಳವರೆಂದರ್ಥವಲ್ಲ. ಕುಮುದಗಳ ಮಾಲೆಯನ್ನು ಕುಮುದಗಣವೆನ್ನುವುದಿಲ್ಲ. ಅದರಿಂದ ದೇವಹೂತಿಯ ಮತ್ತು ವಿದ್ಯಾಧರಿಯರ ಕಣ್ಣುಗಳು ಕುಮುದಗಳಂತಿದ್ದುವು. ಅವುಗಳಿಂದ ಯುಕ್ತರಾಗಿದ್ದರು, ಕರ್ದಮರು ಎಂದು ಕ್ಲೇಶದಿಂದ ಅರ್ಥೈಸಿದ್ದಾರೆ. ವಲ್ಲಭವ್ಯಾಖ್ಯಾನದಲ್ಲಿ ಉತ್ಕಚ- ಉತ್ತಮಕೇಶ ಉಳ್ಳ, ಕುಮುದ್-ಭೂಮಿಯಲ್ಲಿ ಸುಖದಾಯಕವಾದ ಸ್ತ್ರೀಯರ ಗಣ ಉಳ್ಳವನು ಎಂದಿದೆ. ಇಲ್ಲಿಯೂ 'ಕುಮುದ್'ಎಂದರೆ 'ಭೂಮಿಯಲ್ಲಿ ಸುಖದಾಯಕರಾದ ಸ್ತ್ರೀಯರೆಂ'ದು ಅರ್ಥ ಗ್ರಹಿಸುವುದು ಕಷ್ಟ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ, ಈ ಪಾಠವೇ ತಪ್ಪು ಎಂದು-

ಉದ್ಗುಣಪಾನವೀಚ್ಯಃ । ಉತ್ತಮಾಮೃತವೀಚೀಯುಕ್ತಃ ।

ಉದ್-ಉತ್ತಮವಾದ, ಗುಣ-ಗುಣಉಳ್ಳ, ಪಾನ- ಪೇಯವಾದ ಅಮೃತದ, ವೀಚ್ಯಃ- ತರಂಗ ಉಳ್ಳವರು, ಅಂದರೆ ಯಥೇಚ್ಛವಾಗಿ ಉತ್ತಮವಾದ ಅಮೃತವನ್ನು ಪಾನ ಮಾಡಿದ ಕರ್ದಮರು ಎಂದರ್ಥ.

'ಉತ್ಕಚಕಃ' ಎಂದರೆ ಉತ್ತಮ ಕೇಶ ಉಳ್ಳವರೆಂದೋ ದೋಷರಹಿತರೆಂದೋ ಸುಲಭವಾಗಿ ಅರ್ಥೈಸಬಹುದು.

* * *

ಕರ್ದಮರು ಯೋಗಬಲದಿಂದ ತಾನು ಒಬ್ಬನೇ ಏಕಕಾಲದಲ್ಲಿ ಒಂಬತ್ತು ಶರೀರಗಳನ್ನು ಧರಿಸಿ ದೇವಹೂತಿಗೂ ಅಷ್ಟು ಶರೀರಗಳನ್ನು ಅನುಗ್ರಹಿಸಿ ಅವಳೊಂದಿಗೆ ಬಹುವರ್ಷಕಾಲ ರಮಿಸಿದರು. ದೇವಹೂತಿಗೆ ಆ ಕಾಲ ಕಳೆದುದೇ ತಿಳಿಯಲಿಲ್ಲ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ-

ತಸ್ಮಿನ್ ವಿಮಾನ ಉತ್ಕೃಷ್ಟಾಂ ಶಯ್ಯಾಂ ರತಿಕರೀಂ ಶ್ರಿತಾ ।
ನ ಚಾಬುಧ್ಯತ ತಂ ಕಾಲಂ ಪತ್ಯಾಽಽಪೀಚ್ಯೇನ ಸಂಗತಾ ॥ ೪೫ ॥

ಆ ವಿಮಾನದಲ್ಲಿ ಹದಿನಾರರ ಹರೆಯದ ಪತಿಯೊಂದಿಗೆ ಕೂಡಿ ಉತ್ಕೃಷ್ಟವಾದ ಶಯ್ಯೆಯನ್ನೇರಿದ ದೇವಹೂತಿ ಕಾಲ ಕಳೆದುಹೋದುದನ್ನೇ ತಿಳಿಯಲಿಲ್ಲ.

ಇಲ್ಲಿ 'ಆಪೀಚ್ಯೇನ ಸಂಗತಾ' ಎಂದರೇನು? ಹಿಂದೆ ಪ್ರಥಮಸ್ಕಂಧದ ಕೊನೆಯಲ್ಲಿ ಶುಕಮುನಿಗಳ ವಯಸ್ಸು ಸದಾ ಆಪೀಚ್ಯವಾಗಿತ್ತು, 'ಶ್ಯಾಮಂ ಸದಾಽಽಪೀಚ್ಯವಯೋಽಂಗಲಕ್ಷ್ಮ್ಯಾ ಸ್ತ್ರೀಣಾಂ ಮನೋಜ್ಞಂ' ಎಂದಿದೆ. ಇಲ್ಲಿ ಹಾಗೆ ಕರ್ದಮರ ವಯಸ್ಸು ಆಪೀಚ್ಯವೆನ್ನಬೇಕಾಗಿತ್ತು. ಕರ್ದಮರೇ ಆಪೀಚ್ಯರು ಹೇಗೆ? ಬೇರೆ ವ್ಯಾಖ್ಯಾನಕಾರರು 'ಅಪೀಚ್ಯ'ಶಬ್ದವಿಟ್ಟುಕೊಂಡು ಸುಂದರ ಎಂದು ಅರ್ಥೈಸಿದ್ದಾರೆ ಪ್ರಮಾಣ ಕೊಟ್ಟಿಲ್ಲ. ಶುಕದೇವ ವ್ಯಾಖ್ಯಾನದಲ್ಲಿ 'ನಿರ್ಮಲ' ಎಂದೂ 'ಸುಂದರ' ಎಂದೂ ಎರಡು ಅರ್ಥಗಳು ಉಕ್ತವಾಗಿವೆ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿಯೂ 'ಸ್ತ್ರೀಯರಿಗೆ ಪ್ರಿಯ' ಎಂದೂ 'ಪರಮಸುಂದರ' ಎಂದೂ ಅರ್ಥಗಳಿವೆ. ಇವುಗಳಿಗೆ ಪ್ರಮಾಣದ ಆಧಾರವಿಲ್ಲ. ವಸ್ತುತಃ ಬಾಲ್ಯಯೌವನಗಳ ನಡುವಿನ ವಯಸ್ಸನ್ನು ಹೇಳುವ ಆಪೀಚ್ಯಶಬ್ದವೇ ಹದಿನಾರರ ಹರೆಯದ ನವತರುಣನನ್ನೂ ಹೇಳುತ್ತದೆ ಎಂದು ಅಭಿಧಾನವೆಂಬ ಕೋಶಗ್ರಂಥ ಹೇಳುತ್ತಿದೆ–

ಪ್ರಾಪ್ತಷೋಡಶವರ್ಷಃ ಸನ್ನಾಪೀಚ್ಯ ಇತಿ ಕಥ್ಯತೇ ॥

ಇತ್ಯಭಿಧಾನಮ್ ।

ಹದಿನಾರು ವರ್ಷ ತುಂಬಿದ ವಯಸ್ಸಿನವನು ಆಪೀಚ್ಯ ಎನ್ನಿಸುತ್ತಾನೆ ಎಂದು ಅಭಿಧಾನಕೋಶವು ಹೇಳುತ್ತಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಚತುರ್ವಿಂಶೋಽಧ್ಯಾಯಃ ॥

—o—

ಅಧ್ಯಾಯ–೨೫

ಅಧ್ಯಾಯಸಾರಾಂಶ

'ದೇವಿ, ನಿನ್ನ ಉದರದಲ್ಲಿ ಶ್ರೀಹರಿ ಅವತರಿಸಲಿದ್ದಾನೆ. ನಿನಗೆ ತತ್ತ್ವೋಪದೇಶ ನೀಡಲಿದ್ದಾನೆ. ಅದಕ್ಕೆ ನೀನು ಜಿತೇಂದ್ರಿಯಳಾಗಿ ವ್ರತಾನುಷ್ಠಾನ ಮಾಡುತ್ತ ಹರಿಯನ್ನು ಸೇವಿಸು' ಎಂದು ಕರ್ದಮರು ಸತಿಗೆ ಆಜ್ಞೆ ಮಾಡಿದರು. ದೇವಹೂತಿ ಶ್ರದ್ಧೆಯಿಂದ ಹಾಗೇ ಮಾಡಿದಳು. ಶ್ರೀಹರಿ ಅವಳಲ್ಲಿ ಕಟ್ಟಿಗೆಯಲ್ಲಿ ಬೆಂಕಿಯಂತೆ ಪ್ರಾದುರ್ಭವಿಸಿದ. ಬ್ರಹ್ಮ ಸಂತುಷ್ಟನಾಗಿ ಮಗನ ಬಳಿ ಬಂದು ನುಡಿದ. 'ಕರ್ದಮ, ನೀನು ನನ್ನಾದೇಶವನ್ನು ಚೆನ್ನಾಗಿ ಪಾಲಿಸಿರುವೆ. ಇನ್ನು ನಿನ್ನ ಹೆಣ್ಣು ಮಕ್ಕಳನ್ನು ಮರೀಚಿ ಮುಂತಾದವರಿಗೆ ಕೊಟ್ಟು ಮದುವೆ ಮಾಡು. ಈ ನಿನ್ನ ವರಪುತ್ರ ಸಾಕ್ಷಾತ್ ಶ್ರೀಹರಿಯ ಕಪಿಲಾವತಾರ. ದೇವಹೂತಿ, ಈ ನಿನ್ನ ಮಗ ಕಪಿಲ ನಿನಗೆ ತತ್ತ್ವೋಪದೇಶ ನೀಡುತ್ತಾನೆ. ಸಾಂಖ್ಯಶಾಸ್ತ್ರರಚಿಸುತ್ತಾನೆ,' ಬಳಿಕ ಕರ್ದಮ ತನ್ನ ಮಕ್ಕಳಾದ ಕಲಾ, ಅನಸೂಯಾ, ಶ್ರದ್ಧಾ, ಹವಿರ್ಭೂ, ಗತಿ, ಕ್ರಿಯಾ, ಖ್ಯಾತಿ, ಅರುಂಧತಿ, ಶಾಂತಿಯರನ್ನು ಕ್ರಮವಾಗಿ ಮರೀಚಿ, ಅತ್ರಿ, ಅಂಗಿರಸ್ ಪುಲಸ್ತ್ಯ ಪುಲಹ ಕ್ರತು ಭೃಗು ವಸಿಷ್ಠ ಅಥರ್ವರಿಗೆ ಕೊಟ್ಟು ಮದುವೆ ಮಾಡಿದ. ಬಳಿಕ ಏಕಾಂತದಲ್ಲಿ ಕಪಿಲನನ್ನು ನಮಿಸಿ ಸನ್ನ್ಯಾಸಕ್ಕೆ ಅನುಜ್ಞೆ ಬೇಡಿ ಪಡೆದ. ಯತಿಯಾಗಿ ಸಂಚರಿಸುತ್ತ ಹರಿಯನ್ನು ಭಜಿಸಿ ಮುಕ್ತಿ ಪಡೆದ.

* * *

ಜ್ಞಾನಿಗಳಾದ ನಿಮ್ಮಿಂದ ನಾನು ಇಂದಿನವರೆಗೆ ತತ್ತ್ವಜ್ಞಾನ ಪಡೆಯಲಿಲ್ಲ. ಈಗ ನೀವು ಯತ್ಯಾಶ್ರಮ ಸ್ವೀಕರಿಸಿ ಹೊರಟು ಹೋದರೆ ನನ್ನ ಗತಿ ಏನು? ಅದರಿಂದ ತತ್ತ್ವೋಪದೇಶ ಮಾಡಬಲ್ಲ ಒಬ್ಬ ಮಗನನ್ನಾದರೂ ನನಗೆ ಕರುಣಿಸಬೇಕು ಎಂದು ದೇವಹೂತಿ ಕರ್ದಮರಲ್ಲಿ ಬೇಡಿಕೊಂಡಾಗ ಕರ್ದಮರು ಪರಮಾತ್ಮನ ಮಾತನ್ನು ನೆನಪಿಸಿಕೊಂಡು ಮುಂದೆ ಅವಳಲ್ಲಿ ಕಪಿಲಾವತಾರವಾಗಲಿದೆ ಎನ್ನುತ್ತಾರೆ ಎಂದು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ–

ನಿರ್ವೇದವಾದಿನೀಮೇವಂ ಮನೋರ್ದುಹಿತರಂ ಮುನಿಃ ।
ದಯಾಲುಃ ಶಾಲಿನೀಮಾಹ ಶುಕ್ಲಾಭಿವ್ಯಾಹೃತಂ ಸ್ಮರನ್ ॥೧॥

ಪತ್ನಿಯಾದ ದೇವಹೂತಿ ವೈರಾಗ್ಯದ ಮಾತುಗಳನ್ನಾಡಿದಾಗ ದಯಾಳುಗಳಾದ ಕರ್ದಮರು ಭಗವಂತನಾಡಿದ್ದ ಮಾತುಗಳನ್ನು ನೆನೆದು ಅವಳಿಗೆ ಹೀಗೆ ಹೇಳಿದರು.

[೧]ಇಲ್ಲಿ 'ಶಾಲಿನೀಮಾಹ' ಎಂದರೆ ಶ್ಲಾಘ್ಯಳಾದ ದೇವಹೂತಿಗೆ ಹೇಳಿದರೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. 'ಶಾಡೃ ಶ್ಲಾಘಾಯಾಂ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ಈ ಶಬ್ದ ಎನ್ನುತ್ತಾರೆ. ವಲ್ಲಭಾಚಾರ್ಯವ್ಯಾಖ್ಯಾನದಲ್ಲಿ 'ವಿನಯ ರೂಪ ಶಾಲಿನೀ' ಎಂದು ವ್ಯಾಖ್ಯಾನಿಸಿದ್ದಾರೆ. ವಿನಯ ಹಾಗೂ ರೂಪಸೌಂದರ್ಯಗಳಿಂದ ಶ್ಲಾಘ್ಯಳೆಂದೇ ಅದರ ತಾತ್ಪರ್ಯ. ಆದರೆ ರೂಢಿಯಿಂದ ಶಾಲಿನೀಶಬ್ದ ಪತ್ನೀವಾಚಕ. ರೂಢಿಯ ಅರ್ಥವನ್ನೇ ಗ್ರಹಿಸಬೇಕು. ಅದು ಕೂಡದಿದ್ದಾಗ ಯೋಗಾರ್ಥ ಗ್ರಾಹ್ಯ ತಾನೆ? ವೀರರಾಘವವ್ಯಾಖ್ಯಾನದಲ್ಲಿ 'ಶಾಲಿನೀಂ ಸ್ವಗೃಹಿಣೀಂ' ಎಂದಿದೆ. ಅದು ಸರಿಯೆ. ಆದರೆ ಶಾಲಿನಿಯಾದ ಅಂದರೆ ಶ್ಲಾಘ್ಯಳಾದ ಸ್ವಗೃಹಿಣಿ ಎಂದು ಅದಕ್ಕೆ ಅಭಿಪ್ರಾಯವಿರಬಹುದು. ಸ್ಪಷ್ಟವಿಲ್ಲ. ಶ್ರೀಮದಾಚಾರ್ಯರು ರೂಢಿಯ ವಿಷಯದಲ್ಲಿ ಸ್ಪಷ್ಟ ಪ್ರಮಾಣವಚನವನ್ನು ಹೇಳುತ್ತಾರೆ–

ಮಾಲಿನೀ ಶಾಲಿನೀ ಕಾಲ್ಯಾ ಚಾರ್ಯಾ ಭಾರ್ಯೇತಿ ಚೋಚ್ಯತೇ ॥
ಇತಿ ಚ ।

ಮಾಲಿನೀ, ಶಾಲಿನೀ, ಕಾಲ್ಯಾ, ಚಾರ್ಯಾ, ಭಾರ್ಯಾ ಎಂದು ಪತ್ನಿ ಎಂಬ ಅರ್ಥದಲ್ಲಿ ಶಬ್ದಗಳಿವೆ ಎಂದೂ ಕೋಶದಲ್ಲಿ ಹೇಳಿದೆ.

* * *

'ಶ್ರೀಹರಿಯು ನಿನ್ನ ಗರ್ಭದಲ್ಲಿ ಅವತರಿಸಿ ನಿನಗೆ ತತ್ತ್ವೋಪದೇಶ ಮಾಡುತ್ತಾನೆ, ನೀನು ಅವನನ್ನು ಆರಾಧಿಸು' ಎಂದು ಕರ್ದಮರು ದೇವಹೂತಿಗೆ ಆದೇಶ ನೀಡಿದರು.

---

೧. ಶಾಲಿನೀಮಿತಿ । ಶಾಡೃ ಶ್ಲಾಘಾಯಾಂ ಶಾಡನಂ ಶಾಲಃ ಸೋಽಸ್ಯಾಸ್ತೀತಿ ಶಾಲಿನೀ ತಾಂ । –ರಾಧಾರಮಣದಾಸಃ
ಮನೋರ್ದುಹಿತರಂ ಶಾಲಿನೀಂ ಸ್ವಗೃಹಿಣೀಂ ಪ್ರತಿ । –ವೀರರಾಘವಃ
ಶಾಲಿನೀಂ ಶ್ಲಾಘ್ಯಾಂ । –ವಿಶ್ವನಾಥಃ, ಶುಕದೇವಃ
ಶಾಲಿನೀಂ ವಿನೀತಾಂ ಮನೋಹರಾಂ ವಾ । –ವಲ್ಲಭಃ

ಬಳಿಕ ಶ್ರೀಹರಿ ಕಪಿಲಾವತಾರ ಮಾಡಿದ್ದಾನೆ ಎಂದು ಮೈತ್ರೇಯರು ವಿದುರನಿಗೆ ಉಪದೇಶಿಸಿದರು–

ತಸ್ಯಾಂ ಬಹುತಿಥೇ ಕಾಲೇ ಭಗವಾನ್ ಮಧುಸೂದನಃ ।
ಕಾರ್ದಮಂ ವಿರ್ಯಮಾಪನ್ನೋ ಜಜ್ಞೇಽಗ್ನಿರಿವ ದಾರುಣಿ ॥ ೬ ॥

ಬಹುಕಾಲಾನಂತರ ಭಗವಾನ್ ಮಧುಸೂದನನು ಕರ್ದಮರ ವೀರ್ಯವನ್ನು ಪ್ರವೇಶಿಸಿ ಕಾಷ್ಠದಲ್ಲಿ ಅಗ್ನಿ ಪ್ರಕಟವಾಗುವಂತೆ ದೇವಹೂತಿಯ ಗರ್ಭದಲ್ಲಿ ಅವತರಿಸಿದ.

ಇಲ್ಲಿ 'ಕಾರ್ದಮಂ ವೀರ್ಯಮಾಪನ್ನಃ ಕಾಲೇ ಜಜ್ಞೇ' ಎಂದು ಶ್ರೀಹರಿಯ ಅವತಾರರೂಪ ನಮ್ಮಂತೆ ಶುಕ್ಲಶೋಣಿತ ಮೇಲನದಿಂದಾಗುವ ಪ್ರಾಕೃತಶರೀರ ಉಳ್ಳದ್ದೆಂದು ಹೇಳಿದಂತೆ ಕಾಣುತ್ತದೆ.

ಆದರೆ ಶ್ರೀಹರಿಗೆ ಎಂದೂ ಜಡ ಶರೀರಪ್ರಾಪ್ತಿಯಿಲ್ಲ. ಮತ್ತು ಅರಣಿ ಕಾಷ್ಠದಲ್ಲಿ ಅವ್ಯಕ್ತವಾಗಿರುವ ಬೆಂಕಿ ಘರ್ಷಣದಿಂದ ವ್ಯಕ್ತವಾಗುವಂತೆ ಹರಿ ವ್ಯಕ್ತನಾಗಿದ್ದಾನೆ ಎಂದು ಉದಾಹರಣ ನೀಡಿರುವುದರಿಂದ ಜಡಶರೀರ ಉತ್ಪನ್ನವಾಯಿತೆಂದು ಹೇಳುವುದೂ ಉದಾಹರಣೆಗೆ ಅನುಗುಣವಾಗುವುದಿಲ್ಲ.

[೧]ಈ ದೃಷ್ಟಾಂತದ ಬಲದಿಂದ ಶ್ರೀಹರಿಗೆ ಜಡಶರೀರವಿದ್ದರೂ ಅವನು ನಿರ್ಲೇಪನೆಂದು ತಿಳಿಯುತ್ತದೆ ಎಂದು ವಲ್ಲಭ ಗಿರಿಧರವ್ಯಾಖ್ಯಾನಗಳು ಹೇಳುತ್ತವೆ. ಆದರೆ ಶ್ರೀಹರಿಗೆ ಸ್ವರೂಪಾವತಾರದಲ್ಲಿ ಜಡಶರೀರವೇ ಇಲ್ಲ. ಜಡಶರೀರವನ್ನು ಒಪ್ಪಿ ನಿರ್ಲೇಪತ್ವವನ್ನು ಹೇಳುವುದೂ ಕಷ್ಟ. ನಿರ್ಲೇಪರಾದ ಬ್ರಹ್ಮವಾಯುಗಳಿಗೂ ಅಜ್ಞಾನದುಃಖಭಯಾದಿಗಳು ಕ್ಷಣಾರ್ಧಕಾಲ ಉಂಟು. ಅದರಿಂದ ಪರಮಾತ್ಮನಿಗೂ ಅದನ್ನು ಒಪ್ಪುವ ಪ್ರಸಂಗವಿದೆ.

[೨]ವೀರರಾಘವವ್ಯಾಖ್ಯಾನದಲ್ಲಿ ಪರಶುರಾಮನಂತೆ ಕಪಿಲನೂ ಭಗವಂತನ ಆವೇಶಾವತಾರ ಮಾತ್ರ. ಜಡಶರೀರದಲ್ಲಿ ಒಬ್ಬ ಜೀವನೊಳಗಿದ್ದು ಪರಮಾತ್ಮ ತನ್ನ

---

೧. ತೇನ ಹಿ ಗುರುಣಾ ಭಾವ್ಯಂ । ಅತೋ ಮರ್ಯಾದಾರಕ್ಷಣಾರ್ಥಂ ಪ್ರಥಮಂ ಕರ್ದಮವಿರ್ಯೇ ಪ್ರಾದುರ್ಭೂತಃ ಪಶ್ಚಾದಾವಿರ್ಭವಿಷ್ಯತಿ । ನ ಚೈವಂ ಸತಿ ಪ್ರಾಕೃತತ್ವಂ ಶಂಕನೀಯಮಿತ್ಯಾಹ ಅಗ್ನಿರಿವ ದಾರುಣೀತಿ । –ವಲ್ಲಭಃ
ದಾರುಣಿ ಕಾಷ್ಠೇ ಯಥಾ ಮಹಾಭೂತರೂಪೋಽಗ್ನಿಃ ಪ್ರಥಮತಃ ಸ್ಥಿತೋಽಪಿ ಬಹಿಷ್ಠಃ ಪುನಃ ಪ್ರವಿಶ್ಯಾವಿರ್ಭವತಿ ತಥಾಪಿ ನಿರ್ಲೇಪತ್ವಾನ್ನ ಕಾಷ್ಠದೋಷೇಣ ದುಷ್ಟೋ ಭವತಿ ತಥಾ ತಸ್ಯಾಂ ಸ್ಥಿತೋಽಪಿ ಪುನಃಪ್ರವಿಶ್ಯಾವಿರ್ಬಭೂವ । ನ ತತ್ಸಂಬಂಧೇನ ಪ್ರಾಕೃತತ್ವಂ । ನಿರ್ಲೇಪತ್ವಾದಿತ್ಯರ್ಥಃ । –ಗಿರಿಧರಃ

ಜ್ಞಾನಾದಿಗುಣಗಳನ್ನು ವ್ಯಕ್ತಗೊಳಿಸುವುದರಿಂದ ಆ ಜೀವ ತನ್ನನ್ನೇ ಪರಮಾತ್ಮನೆಂದು ತಿಳಿಯುತ್ತಾನೆ, ಲೋಕವೂ ಹಾಗೇ ತಿಳಿಯುತ್ತದೆ ಎಂದಿದೆ. ಇದೆಲ್ಲವೂ ಅಪ್ರಾಮಾಣಿಕ, ಪ್ರಮಾಣವಿರುದ್ಧ. ಅದಕ್ಕೆ [೧]ಜೀವಗೋಸ್ವಾಮಿ ವಿಶ್ವನಾಥ ಶುಕದೇವ ರಾಧಾರಮಣದಾಸ ವ್ಯಾಖ್ಯಾನಗಳಲ್ಲಿ ಕಾರ್ದಮವೀರ್ಯವೆಂದರೆ ಕರ್ದಮರ ಭಕ್ತಿಪ್ರಭಾವ, ಅದಕ್ಕೆ ವಶನಾಗಿ ಶ್ರೀಹರಿ ಕಾಷ್ಠದಲ್ಲಿ ಅಗ್ನಿಯಂತೆ ದೇವಹೂತಿಯಲ್ಲಿ ಪ್ರಕಟನಾದ ಎಂದಿದೆ. ಇದೂ ಪ್ರಮಾಣವಿರುದ್ಧವೇ. ವರಾಹಪುರಾಣದಲ್ಲಿ ಶ್ರೀಹರಿ ಸ್ವರೂಪಾವತಾರಗಳಲ್ಲಿಯೂ ತಂದೆತಾಯಿಗಳ ಶುಕ್ಲಶೋಣಿತಗಳನ್ನು ಪ್ರವೇಶಿಸುವುದು, ನವಮಾಸ ಕಾಲ ತಾಯಿಯ ಗರ್ಭದಲ್ಲಿದ್ದು ಜನಿಸುವುದು ಸ್ಪಷ್ಟವೇ ಇದೆ. ಅದರಿಂದ ಅವತಾರ ತತ್ವವನ್ನು ಹೀಗೆ ತಿಳಿಯಬೇಕು–

ನಾವತಾರೇಷ್ವಪಿ ಹರೇರ್ದೇಹಃ ಶುಕ್ಲಾದಿಸಂಭವಃ ।
ತಥಾಪಿ ಶುಕ್ಲಸಂಸ್ಥಃ ಸನ್ ಮಾತೃದೇಹಂ ಪ್ರವಿಶ್ಯ ಚ ॥

ವಿಲಾಪ್ಯ ಶುಕ್ಲಂ ತತ್ರೈವ ಕೇವಲಜ್ಞಾನರೂಪಕಃ ।
ಉದೇತಿ ಭಗವಾನ್ ವಿಷ್ಣುಃ ಕಾಲೇ ಲೋಕಂ ವಿಮೋಹಯನ್ ॥
ಇತಿ ಮಹಾವಾರಾಹೇ ।

ಅಗ್ನಿರಿವ ದಾರುಣೀತಿ ವ್ಯಕ್ತಿಸ್ಥಾನಮಾತ್ರತ್ವೇ ದೃಷ್ಟಾಂತಃ ।

ಅವತಾರಗಳಲ್ಲಿಯೂ ಹರಿಗೆ ಶುಕ್ಲಶೋಣಿತ ಜನ್ಯವಾದ ಶರೀರವಿಲ್ಲ. ಕೇವಲಜ್ಞಾನರೂಪನಾದ ಅವನು ಶುಕ್ಲದಲ್ಲಿದ್ದು ಮಾತೃಗರ್ಭವನ್ನು ಪ್ರವೇಶಿಸಿ, ಅಲ್ಲಿಯೇ ಇದ್ದು, ಶುಕ್ಲದಿಂದ ದೇಹನಿರ್ಮಾಣವಾಗದಂತೆ ಅದನ್ನು ನಾಶಪಡಿಸಿ ನವಮಾಸಾನಂತರ ಅಜ್ಞಜನರಿಗೆ ಭ್ರಾಂತಿ ಉಂಟು ಮಾಡುತ್ತ ಚಿನ್ಮಯವಾದ ಶರೀರದಿಂದ ಅಲ್ಲಿಯೇ ಪ್ರಾದುರ್ಭವಿಸುತ್ತಾನೆ ಎಂದು ಮಹಾವಾರಾಹ ಪುರಾಣದಲ್ಲಿ ಹೇಳಿದೆ.

---

೨. ದಾರುಣ್ಯಗ್ನಿರಿವ ಜಜ್ಞೇ ಕಾರ್ದಮವೀರ್ಯಸಂಶ್ಲಿಷ್ಟಜೀವವಿಶೇಷಮಾವಿಷ್ಟಃ ಅವತತಾರೇತ್ಯರ್ಥಃ । ಅಯಮಾವೇಶಾವತಾರೋ ಜಾಮದಗ್ನ್ಯವತ್ । ಆವೇಶಾವತಾರೋ ನಾಮ ಜೀವಾಂತರಾತ್ಮತಯಾವಸ್ಥಿತಸ್ಯೈವ ಭಗವತಃ ಜೀವದ್ವಾರಾ ಜ್ಞಾನಶಕ್ತ್ಯಾದಿಗುಣವಿಶೇಷಾನ್ವಿತಮಾವಿರ್ಭಾವಃ । ತಾವತ್ತೈವ ತಸ್ಮಿನ್ ಜೀವೇ ಸ್ವಸ್ಯಾನ್ಯೇಷಾಂ ಚೇಶ್ವರತ್ವಾಭಿಮಾನಃ । –ವೀರರಾಘವಃ

೧. ವೀರ್ಯಂ ಭಕ್ತಿಪ್ರಭಾವಃ । ತದಾಪನ್ನಸ್ತೇನ ವಶೀಭೂತ ಇತ್ಯರ್ಥಃ ।
–ವಿಶ್ವನಾಥಃ, ಜೀವಗೋಸ್ವಾಮೀ, ಶುಕದೇವಃ, ರಾಧಾರಮಣದಾಸಃ

ಅಗ್ನಿ ಕಾಷ್ಠವಿಲ್ಲದೆ ಇರಲಾರದು. ಶ್ರೀಹರಿಗೆ ತಾಯಿಯ ಗರ್ಭ ಹಾಗೆ ಆವಶ್ಯಕವಲ್ಲ. ಆದರೂ ಅಗ್ನಿ ಕಾಷ್ಠದಲ್ಲಿ ವ್ಯಕ್ತವಾಗುವಂತೆ ಶ್ರೀಹರಿ ತಾಯಿಯ ಗರ್ಭದಲ್ಲಿ ವ್ಯಕ್ತನಾಗುತ್ತಾನೆ ಎಂಬ ಅಂಶದಲ್ಲಿ ಮಾತ್ರ ದೃಷ್ಟಾಂತ ವಿವಕ್ಷಿತವಾಗಿದೆ.

* * *

ಕಪಿಲಾವತಾರವಾದಾಗ ದೇವದುಂದುಭಿಗಳು ಮೊಳಗಿದವು, ಪುಷ್ಪವೃಷ್ಟಿಯಾಯಿತು. ಚತುರ್ಮುಖಬ್ರಹ್ಮದೇವರು ಕರ್ದಮರ ಆಶ್ರಮಕ್ಕೆ ಬಂದರು. ಅವರಿಗೆ ಕಪಿಲನು ಸಾಂಖ್ಯಶಾಸ್ತ್ರದ ಉಪದೇಶಕ್ಕಾಗಿ ಅವತರಿಸಿದ ಭಗವಂತನೆಂಬುದು ತಿಳಿದಿತ್ತು ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ಭಗವಂತಂ ಪರಂ ಬ್ರಹ್ಮ ಸತ್ತ್ವೇನಾಂಶೇನ ಶತ್ರುಹನ್ ।
ತತ್ತ್ವಸಂಖ್ಯಾನವಿಜ್ಞಪ್ತ್ಯೈ ಜಾತಂ ವಿದ್ವಾನಜಃ ಸ್ವರಾಟ್ ॥ ೧೦ ॥

ಶತ್ರುಸಂಹಾರಕನಾದ ವಿದುರನೆ, ಸಾಂಖ್ಯಶಾಸ್ತ್ರವನ್ನು ಉಪದೇಶಿಸುವುದಕ್ಕಾಗಿ ಪರಬ್ರಹ್ಮ ವಿಷ್ಣುವೇ ಮಹಾಗುಣಪೂರ್ಣವಾದ ತನ್ನ ಸ್ವರೂಪಾಂಶದಿಂದ ಭಗವಾನ್ ಕಪಿಲನಾಗಿ ಅವತರಿಸಿದನೆಂದು ತಿಳಿದಿರುವ ಬ್ರಹ್ಮದೇವರು (ಕರ್ದಮ ದೇವಹೂತಿಯರನ್ನು ಕುರಿತು ನುಡಿದರು.)

[೧]ಇಲ್ಲಿ 'ಸತ್ತ್ವೇನಾಂಶೇನ' ಎಂಬುದಕ್ಕೆ ಶುದ್ಧಸತ್ತ್ವಗುಣದಿಂದ, ಒಂದು ಅಂಶದಿಂದ ಮಾತ್ರ ಹೊರತು ಪೂರ್ಣಸ್ವರೂಪದಿಂದಲ್ಲ' ಎಂದು ವಿಶ್ವನಾಥವ್ಯಾಖ್ಯಾನ. ಆದರೆ ಪರಮಾತ್ಮ ಗುಣತ್ರಯರಹಿತ. ಮತ್ತು ಅವನ ಅಂಶಕ್ಕೂ ಪೂರ್ಣಸ್ವರೂಪಕ್ಕೂ ಎಳ್ಳಷ್ಟೂ ಭೇದವಿಲ್ಲ.

'ಋಷಿಕುಲಕ್ಕೆ ಅನುರೂಪವಾದ ಸತ್ತ್ವಸ್ವಭಾವದಿಂದ ಜನಿಸಿದನೆಂ'ದು ಶುಕದೇವವ್ಯಾಖ್ಯಾನ. ಸಾಂಖ್ಯಶಾಸ್ತ್ರವನ್ನು ಉಪದೇಶಿಸುವ ವಿಷಯದಲ್ಲಿ ಈ ವಿಶೇಷಣ ನಿರರ್ಥಕ.

---

೧. ಸತ್ತ್ವೇನ ಶುದ್ಧಸತ್ತ್ವಸ್ವರೂಪೇಣ, ಅಂಶೇನ, ನ ತು ಪೂರ್ಣಸ್ವ ರೂಪೇಣೇತ್ಯರ್ಥಃ । – ವಿಶ್ವನಾಥಃ

ಸತ್ತ್ವೇನ ಋಷಿಕುಲಾನುರೂಪೇಣ ಸತ್ತ್ವಸ್ವಭಾವೇನ ಜಾತಮಾವಿರ್ಭೂತಂ । – ಶುಕದೇವಃ

ಅಂಶೇನ ಸ್ವಾಪೃಥಕ್ಸಿದ್ಧವಿಶೇಷಣೇನ ಸತ್ತ್ವೇನ ನಿತ್ಯಾಸಂಕುಚಿತಜ್ಞಾನಗುಣೇನ – ವೀರರಾಘವಃ

ಸತ್ವವೆಂದರೆ ಜ್ಞಾನ, ತನ್ನಲ್ಲಿರುವ ಜ್ಞಾನವೆಂಬ ಅಂಶದಿಂದ, ಅಂದರೆ ಅಪೃಥಕ್ಸಿದ್ಧವಿಶೇಷಣದಿಂದ ಸಾಂಖ್ಯಶಾಸ್ತ್ರವನ್ನು ಉಪದೇಶಿಸಲು ಅವತರಿಸಿದನೆಂದು ವೀರರಾಘವವ್ಯಾಖ್ಯಾನ. ಆದರೆ 'ಅಪೃಥಕ್ಸಿದ್ಧ ಧರ್ಮಭೂತ ದ್ರವ್ಯರೂಪ ಜ್ಞಾನ'ವೆಂಬುದು ರಾಮಾನುಜಮತದಲ್ಲಿ ಮಾತ್ರ ಒಪ್ಪಿರುವ ಪದಾರ್ಥ. ಅದು ಅಪ್ರಾಮಾಣಿಕ. ಪರಮಾತ್ಮನ ಗುಣಗಳಿಗೆ ಅವನಿಂದ ಭೇದವನ್ನು ಅಂಗೀಕರಿಸಿದರೆ ಅನರ್ಥವೆಂದೂ ಶ್ರುತಿಗಳು ಸಾರುತ್ತಿವೆ. ಅದರಿಂದ ಹೀಗೆ ಹೇಳಬೇಕು–

ಮಹಾಗುಣಾಭಿಪೂರ್ಣತ್ವಂ ಸತ್ವಮಿತ್ಯುಚ್ಯತೇ ಬುಧೈಃ ॥
ಇತಿ ವಾಮನೇ ।

ಮಹಾಗುಣಗಳಿಂದ ಪೂರ್ಣನಾಗಿರುವುದೇ' ಸತ್ವ' ವೆಂದು ಬಲ್ಲವರು ಹೇಳುತ್ತಾರೆ ಎಂದು ವಾಮನ ಪುರಾಣದಲ್ಲಿ ಹೇಳಿದೆ.

ಮಹತ್ತಾದ ಅಂದರೆ ಸ್ವತಃ ಪೂರ್ಣವೇ ಆದ ಗುಣಗಳಿಂದ ಪೂರ್ಣವಾಗಿದೆ. ಭಗವಂತನ ಕಪಿಲ ಎಂಬ ಒಂದು ಅಂಶ. ಅದರಿಂದ ಅದು ಭಿನ್ನಾಂಶವಲ್ಲ, ಸ್ವರೂಪಾಂಶ. ಹೀಗಾಗಿ ವೈದಿಕಸಾಂಖ್ಯಶಾಸ್ತ್ರವನ್ನು ಉಪದೇಶಿಸುವ ಸಾಮರ್ಥ್ಯ ಕಪಿಲನಲ್ಲಿ ಯುಕ್ತವೇ ಆಗಿದೆ.

* * *

ಅವೈದಿಕವಾದ ನಿರೀಶ್ವರಸಾಂಖ್ಯವನ್ನು ಹೇಳಿದ ಕಪಿಲ ಬೇರೆ. ವೈದಿಕಸಾಂಖ್ಯವನ್ನು ಉಪದೇಶಿಸಿದ ಭಗವದವತಾರ ಕಪಿಲ ಬೇರೆ. ದೇವಹೂತಿ, ನಿನ್ನ ಗರ್ಭದಲ್ಲಿ ಅವತರಿಸಿದ ಈ ಕಪಿಲನೇ ವೈದಿಕಸಾಂಖ್ಯಪ್ರವರ್ತಕ ಎಂದು ಬ್ರಹ್ಮದೇವರು ಹೇಳಿದರೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಅಯಂ ಸಿದ್ಧಗಣಾಧೀಶಃ ಸಾಂಖ್ಯಾಚಾರ್ಯೈಃ ಸುಸಮ್ಮತಃ ।
ಲೋಕೇ ಕಪಿಲ ಇತ್ಯಾಖ್ಯಾಂ ಗಂತಾ ತೇ ಕೀರ್ತಿವರ್ಧನಃ ॥ ೧೯ ॥

ದೇವಹೂತಿ, ಈ ನಿನ್ನ ಪುತ್ರನು ಸಿದ್ಧಗಣಗಳಿಗೆ ಒಡೆಯನಾಗುವನು, ಸಾಂಖ್ಯಾಚಾರ್ಯರಿಗೆ ಮಾನನೀಯನೆನಿಸುವನು. 'ಕಪಿಲ' ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಲೋಕದಲ್ಲಿ ನಿನ್ನ ಕೀರ್ತಿಯನ್ನು ಹರಡುವನು.

ಇಲ್ಲಿ 'ಸಾಂಖ್ಯಾಚಾರ್ಯೈಃ ಸುಸಮ್ಮತಃ' ಸಾಂಖ್ಯಶಾಸ್ತ್ರವನ್ನು ಉಪದೇಶಿಸುವ ಆಚಾರ್ಯರುಗಳಿಗೆ ಪರಮಾಪ್ತನೆಂದು ಅಂಗೀಕೃತನಾದ ಕಪಿಲ ಎಂದಿರುವುದರಿಂದ

ಅಂಗೀಕೃತನಾಗದಿರುವ ಇನ್ನೊಬ್ಬ ಕಪಿಲನೂ ಇದ್ದಾನೆ ಎಂದು ಹೇಳಿದಂತಾಗಿದೆ. ಇದನ್ನು ಶ್ರೀಮದಾಚಾರ್ಯರು ಹಿಂದೆ ಭಾಗವತ ತಾತ್ಪರ್ಯದಲ್ಲಿ (೧.೩.೧೦) ಉದಾಹರಿಸಿರುವ ಪದ್ಮಪುರಾಣ ವಚನದ ಆಧಾರದಿಂದಲೇ ಜೀವಗೋಸ್ವಾಮಿ, ರಾಧಾರಮಣದಾಸ, ವಿಶ್ವನಾಥ ವ್ಯಾಖ್ಯಾನಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ ಇಲ್ಲಿ ಶ್ಲೋಕದಲ್ಲಿ 'ಸಾಂಖ್ಯಾಚಾರ್ಯರಿಂದ ಅಂಗೀಕೃತ' ಎಂದಿಷ್ಟೆ ಸಾಮಾನ್ಯವಾಗಿ ಹೇಳಿದೆ. ನಿರೀಶ್ವರಸಾಂಖ್ಯಾಚಾರ್ಯರೂ ಸಾಂಖ್ಯಾಚಾರ್ಯರೇ ತಾನೆ? ಅವರಿಂದ ಇನ್ನೊಬ್ಬ ಕಪಿಲ ಅಂಗೀಕೃತನಾಗಿದ್ದಾನೆ. ಅಂಗೀಕೃತನಾಗದಿರುವ ಕಪಿಲನೆಲ್ಲಿ ಇದ್ದಾನೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಬೇರೆ ವ್ಯಾಖ್ಯಾನಗಳಲ್ಲಿ ಸಮಾಧಾನವಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

ಸಮ್ಯಗ್ ಜ್ಞಾನಂ ತು ಸಾಂಖ್ಯಂ ಸ್ಯಾತ್
ತದರ್ಥೋ ಯೋಗ ಉಚ್ಯತೇ ॥ ಇತಿ ಕಾಪಿಲೇಯೇ ॥

ಯಥಾರ್ಥಜ್ಞಾನಮಾತ್ರವೇ ಸಾಂಖ್ಯ ಎನಿಸುತ್ತದೆ. ಅದಕ್ಕೆ ಸಾಧನವಾದ ಯಮನಿಯಮಾದಿಯೇ ಯೋಗವೆನಿಸುತ್ತದೆ ಎಂದು ಕಾಪಿಲೇಯಗ್ರಂಥದಲ್ಲಿ ಉಕ್ತವಾಗಿದೆ.

ಆದರಿಂದ ಅವೈದಿಕ ಸಾಂಖ್ಯಜ್ಞಾನ ಯಥಾರ್ಥವಲ್ಲ. ಅದು ಸಾಂಖ್ಯವಲ್ಲ. ಅದನ್ನು ಉಪದೇಶಿಸಿದವರು ಸಾಂಖ್ಯಾಚಾರ್ಯರಲ್ಲ. ಅವರಿಂದ ಅಂಗೀಕೃತನಾದ ನಿರೀಶ್ವರಸಾಂಖ್ಯ ಪ್ರವರ್ತಕನಾದ ಕಪಿಲನು 'ಸಾಂಖ್ಯಾಚಾರ್ಯರಿಂದ ಅಂಗೀಕೃತ'ನೆನಿಸಿದವನಲ್ಲ. ವೈದಿಕಸಾಂಖ್ಯಾಚಾರ್ಯರಿಂದ ಅಂಗೀಕೃತನಾದ ಭಗವದವತಾರನಾದ ಕಪಿಲನೇ ಇಲ್ಲಿ 'ಸಾಂಖ್ಯಾಚಾರ್ಯೈಃ ಸುಸಮ್ಮತಃ' ಎಂದು ಭಾಗವತದಲ್ಲಿ ಉಕ್ತನಾಗಿದ್ದಾನೆ.

* * *

ಶ್ರೀಹರಿಯೇ ಕಪಿಲರೂಪದಿಂದ ತನ್ನ ಮಗನಾಗಿ ಅವತರಿಸಿದ್ದಾನೆ ಎಂದು ತಿಳಿದಿರುವ ಕರ್ದಮರು ಒಮ್ಮೆ ಏಕಾಂತದಲ್ಲಿ ಅವನಿಗೆ ನಮಿಸಿ ಶರಣುಹೊಂದಿದರು.

ಸ ಚಾವತೀರ್ಣಂ ತ್ರಿಯುಗಮಾಜ್ಞಾಯ ವಿಬುಧರ್ಷಭಮ್ ।
ವಿವಿಕ್ತ ಉಪಸಂಗಮ್ಯ ಪ್ರಣಮ್ಯ ಸಮಭಾಷತ ॥ ೨೬ ॥

ಮೂರು ಯುಗಗಳಲ್ಲಿ ಮಾತ್ರ ಅವತರಿಸುವ ಶ್ರೀಹರಿಯೇ ಕಪಿಲನಾಗಿ ಅವತರಿಸಿರುವನೆಂದು ತಿಳಿದು ಕರ್ದಮರು ಏಕಾಂತದಲ್ಲಿ ಅವನನ್ನು ಸಮೀಪಿಸಿ ನಮಸ್ಕರಿಸಿ ಹೇಳಿದರು.

[1]ಇಲ್ಲಿ 'ತ್ರಿಯುಗ' ಎಂದರೆ ಎರಡೆರಡು ಗುಣಗಳ ಮೂರು ಜೋಡಿಗಳುಳ್ಳವನು ಅರ್ಥಾತ್ ಆರು ಗುಣಗಳುಳ್ಳವನು, ಜ್ಞಾನ–ಭಕ್ತಿ, ಬಲ–ಐಶ್ವರ್ಯ, ವೀರ್ಯ–ತೇಜಸ್ಸುಗಳೆಂದು. (ಆ ಮೂರು ಜೋಡಿಗಳು ಕ್ರಮವಾಗಿ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರಲ್ಲಿ ಒಂದೊಂದಾಗಿ ವ್ಯಕ್ತವಾಗುತ್ತವೆ. ವಾಸುದೇವನಲ್ಲಿ ಮೂರೂ ಜೊತೆಗೇ ವ್ಯಕ್ತವಾಗುತ್ತವೆ. ಅದರಿಂದ ತ್ರಿಯುಗ ಎಂದರೆ ವಾಸುದೇವ) ಹೀಗೆ ವೀರರಾಘವ, ಶುಕದೇವ ಗಿರಿಧರವ್ಯಾಖ್ಯಾನಗಳು ಹೇಳುತ್ತವೆ. ಆದರೆ ಇದಕ್ಕೆ ಪ್ರಮಾಣವಿಲ್ಲ. ಪದ್ಮಪುರಾಣದಲ್ಲಿ ತ್ರಿಯುಗಶಬ್ದಾರ್ಥ ಸ್ಪಷ್ಟವಾಗಿ ಬೇರೆಯೇ ಕಂಡು ಬರುತ್ತದೆ.

ಯುಗತ್ರಯೇಽವತಾರೇಣ ತ್ರಿಯುಗಶ್ಚೇತಿ ಕಥ್ಯತೇ ॥

ಇತಿ ಪಾದ್ಮೇ ।

ಕೃತ ತ್ರೇತಾ ದ್ವಾಪರ ಈ ಮೂರು ಯುಗಗಳಲ್ಲಿ ಮಾತ್ರ ಅವತರಿಸುವುದರಿಂದ ಶ್ರೀಹರಿ ತ್ರಿಯುಗನೆನಿಸುತ್ತಾನೆ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಅವತಾರಕ್ಕಾಗಿ 'ಮೂರು ಯುಗಗಳುಳ್ಳವನು ತ್ರಿಯುಗ' ಎಂದು ಬಹುವ್ರೀಹಿ ಸಮಾಸ. ಬೇರೆ ವ್ಯಾಖ್ಯಾನಕಾರರು ತ್ರಿಯುಗಶಬ್ದಕ್ಕೆ ಈ ಅರ್ಥವನ್ನೂ ಒಪ್ಪಿದ್ದಾರೆ. 'ಆದರೆ ಅದು ಸ್ವರಸವಲ್ಲ. 'ಅವತಾರಕ್ಕಾಗಿ' ಎಂದು ಸೇರಿಸಿಕೊಳ್ಳಬೇಕಾಗುತ್ತದೆ' ಎಂದು ವಂಶೀಧರವ್ಯಾಖ್ಯಾನ. ಆದರೆ ಪುರಾಣೋಕ್ತವಾದ ಅರ್ಥವೇ ಮುಖ್ಯ, ಸ್ವರಸವೆನ್ನಬೇಕು.

* * *

ಕರ್ದಮರು ಕಪಿಲನನ್ನು ಸ್ತುತಿಸುತ್ತಾರೆ–

ತಾನ್ಯೇವ ತೇಽಭಿರೂಪಾಣಿ ರೂಪಾಣಿ ಭಗವಂಸ್ತವ ।
ಯಾನಿಯಾನೀಹ ರೋಚಂತೇ ಸ್ವಜನಾನಾಮರೂಪಿಣಃ ॥ ೩೧ ॥

---

೧. ತ್ರೀಣಿ ಯುಗಾನಿ ಜ್ಞಾನಶಕ್ತ್ಯಾದಿಗುಣಯುಗ್ಮಾನಿ ಯಸ್ಯ ತಂ । –ವೀರರಾಘವಃ
ತ್ರೀಣಿ ಯುಗಾನಿ ಐಶ್ವರ್ಯಾದಿಲಕ್ಷಣಾನಿ ಯಸ್ಯ ತಂ । –ಶುಕದೇವಃ
ತ್ರೀಣಿ ಯುಗಾನಿ ಜ್ಞಾನಾದಯಃ ಷಡ್ಗುಣಾ ಯಸ್ಯ ತಂ । – ಗಿರಿಧರಃ
ಅನನ್ಯಲಭ್ಯತ್ವಾದಸ್ಯಾರ್ಥಸ್ಯಾತ್ರ ತ್ರಿಯುಗೇತ್ಯುಕ್ತೇಸ್ತ್ರಿಯುಗಾವಿರ್ಭಾವವಾನಿತ್ಯರ್ಥೋ ಯತ್ನಲಭ್ಯೋಽತೋಽಕ್ಷರಾರ್ಥ ಮಾಹ ಯದ್ವೇತಿ । (೩.೧೭.೨೨) –ವಂಶೀಧರಃ

ಭಗವಂತನೆ, ಪ್ರಾಕೃತಶರೀರರಹಿತನಾದ ನಿನಗೆ ಅವತಾರಕ್ಕಾಗಿ ಬ್ರಹ್ಮಾದಿ ಭಕ್ತಜನರಿಗೆ ಯಾರು ಯಾರು ಅಭೀಷ್ಟರೆನಿಸುವರೋ ಅವರೇ ನಿನಗೂ ಅಭೀಷ್ಟರೆನಿಸುತ್ತಾರೆ. ಅವರಲ್ಲಿಯೇ ನೀನು ಅವತರಿಸುವಿ.

೧ಇಲ್ಲಿ ಮೇಲು ನೋಟಕ್ಕೆ 'ರೂಪರಹಿತನಾದ ನೀನು ಭಕ್ತರಿಗೆ ಯಾವಯಾವ ರೂಪಗಳು ರುಚಿಸುತ್ತವೆಯೋ ಆಯಾ ರೂಪಗಳನ್ನೇ ಸ್ವೀಕರಿಸುವಿ' ಎಂದು ಹೇಳಿದಂತೆ ಕಾಣುತ್ತದೆ. ಅದರಿಂದ ಜೀವಗೋಸ್ವಾಮಿ, ವಿಶ್ವನಾಥ, ರಾಧಾ ರಮಣದಾಸ ವ್ಯಾಖ್ಯಾನಗಳಲ್ಲಿ ಅದರ ಅಭಿಪ್ರಾಯವನ್ನು 'ಭಕ್ತರಿಗೆ ರುಚಿಸದಿರುವ ರೂಪಗಳು ನಿನಗೆ ಯೋಗ್ಯರೂಪಗಳಲ್ಲ, ಅವು ಮಾಯಿಕ. ಉದಾ: ರಂತಿದೇವನಿಗೆ ತೋರಿದ ಚಂಡಾಲರೂಪ. ಹಾಗೆಯೇ ವೈರಾಜರೂಪವೂ ಕೆಲವು ಭಕ್ತರಿಗೆ ಕೆಲಕಾಲ ರುಚಿಸಿದರೂ ಕೊನೆಯಲ್ಲಿ ಅದು ರುಚಿಸದಿರುವುದರಿಂದ ಅದೂ ಮಾಯಿಕವೇ' ಎಂದು ವಿವರಿಸಿದ್ದಾರೆ. ಆದರೆ ಭಗವಂತನ ರೂಪಗಳಲ್ಲಿ ಕೆಲವು ಯೋಗ್ಯ ಕೆಲವು ಮಾಯಿಕ ಎಂದು ವಿಭಾಗವೇ ಕೂಡುವುದಿಲ್ಲ. ಅವನಿಗೆ ಜಡರೂಪವೇ ಇಲ್ಲ. ಚಿನ್ಮಯವೇ ಎಲ್ಲವೂ. ಎಲ್ಲವೂ ಭಕ್ತರಿಗೆ ಪ್ರಿಯವೇ ಆಗಿವೆ. ˎಅದರಿಂದ ಭಾಗವತಶ್ಲೋಕಕ್ಕೆ ಹೀಗೆ ಅರ್ಥ.

ಯಾನಿ ಯಾನಿ ಬ್ರಹ್ಮಾದಿರೂಪಾಣಿ ರೋಚಂತೇ ಸ್ವಜನಾನಾಂ ತಾನ್ಯೇವ ತೇ ವ್ಯಕ್ತ್ಯರ್ಥಮಭಿರೂಪಾಣಿ ।

ವ್ಯಕ್ತೋ ಭವೇದ್ಧರಿಸ್ತತ್ರ ಯತ್ ಸ್ಥಾನಂ ರುಚಿತಂ ಸತಾಮ್ ॥

ಇತಿ ಕೌರ್ಮೇ ।

ಯಾವಯಾವ ಬ್ರಹ್ಮಾದಿರೂಪಗಳು ಎಂದರೆ, ಬ್ರಾಹ್ಮಣಾದಿ ಶರೀರಗಳು ನಿನ್ನ ಅವತಾರಕ್ಕೆ ಭಕ್ತಜನರಿಗೆ ರುಚಿಸುತ್ತವೆಯೋ ಆಯಾ ಶರೀರಗಳೇ ನಿನಗೂ ಅವತಾರಕ್ಕೆ ಪ್ರಿಯವೆನಿಸುತ್ತವೆ. ಇದನ್ನು ಕೂರ್ಮಪುರಾಣದಲ್ಲಿ ಹೇಳಿದೆ– 'ಯಾರಲ್ಲಿ ಶ್ರೀಹರಿ ಮಗನಾಗಿ ಅವತರಿಸಬೇಕೆಂದು ಭಕ್ತರು ಇಷ್ಟಪಡುವರೋ ಅವರಲ್ಲಿ ಅವನು ಅವತರಿಸುತ್ತಾನೆ' ಎಂದು.

---

೧. ಯಾನಿಯಾನಿ ತ್ವದೀಯಸ್ವಜನೇಭ್ಯೋ ರೋಚಂತೇ ತಾನಿತಾನ್ಯೇವ ರೂಪಾಣಿ ತವಾಭಿರೂಪಾಣಿ ಯೋಗ್ಯಾನಿ । ನಾನ್ಯಾನೀತ್ಯರ್ಥಃ । ಅನ್ಯಾನಿ ಚ ಯಾದೃಶಂ ರಂತಿದೇವಾಯ ಕುತ್ಸಿತಂ ರೂಪಂ ಪ್ರಪಂಚಿತಂ ತಾದೃಶಾನಿ ಜ್ಞೇಯಾನಿ । ತಾದೃಶಸ್ಯ ಚ ಮಾಯಿಕತ್ವಮೇವ ಹಿ ತತ್ರೋಕ್ತಂ । –ಜೀವಗೋಸ್ವಾಮಿ

ತೇ ತವ ನಿತ್ಯಸಚ್ಚಿದಾನಂದಸ್ಯ ತಾನ್ಯೇವ ರೂಪಾಣ್ಯಭಿರೂಪಾಣಿ ಸಮುಚಿತಾನಿ –ವಿಶ್ವನಾಥಃ

ಅತ್ರಿ ಪರಾಶರ ಮುಂತಾದ ಬ್ರಾಹ್ಮಣರಲ್ಲಿ ದತ್ತ ವ್ಯಾಸ ಮುಂತಾದ ರೂಪಗಳಿಂದ ಹರಿ ಅವತರಿಸಲಿ ಎಂದು ಬ್ರಹ್ಮಾದಿದೇವತೆಗಳು ಇಷ್ಟ ಪಟ್ಟಾಗ ಹರಿ ಹಾಗೇ ಆ ಬ್ರಾಹ್ಮಣರಲ್ಲಿ ಅವತರಿಸುತ್ತಾನೆ. ದಶರಥ ವಸುದೇವ ಮುಂತಾದ ಕ್ಷತ್ರಿಯರಲ್ಲಿ, ರಾಮ ಕೃಷ್ಣಾದಿ ರೂಪಗಳಿಂದ ಅವತರಿಸಲಿ ಎಂದು ಇಷ್ಟಪಟ್ಟರೆ ಆ ಕ್ಷತ್ರಿಯರಲ್ಲಿಯೇ ಆ ರೂಪಗಳಿಂದ ಅವತರಿಸುತ್ತಾನೆ. ಅವನಿಗೂ ಆ ಬ್ರಾಹ್ಮಣರೇ ಆ ಕ್ಷತ್ರಿಯರೇ ತನ್ನ ಅವತಾರಕ್ಕೆ ಇಷ್ಟರಾಗುತ್ತಾರೆ. ಪ್ರಕೃತದಲ್ಲಿ ಕರ್ದಮರು ಹೇಳುತ್ತಾರೆ. ನೀನು ನನ್ನ ಮಗನಾಗಿ ಅವತರಿಸಿದ್ದು ನನ್ನ ತಪಸ್ಸಿನಿಂದಲ್ಲ. ನಿನ್ನ ಭಕ್ತರು ಬ್ರಹ್ಮಾದಿಗಳು ಹಾಗೆ ಬಯಸಿದ್ದರಿಂದ. ಅಂತೂ ನೀನು ನನ್ನ ಮಗನಾಗಿ ಅವತರಿಸಿದಿ. ಅದು ನನ್ನ ಭಾಗ್ಯ ಎಂದು.

ಇದು ಪರಮಾತ್ಮನ ಸ್ವರೂಪಾವತಾರದ ಬಗ್ಗೆ ನೀಡಿರುವ ವಿವರಣೆ. ಆವೇಶಾವತಾರಕ್ಕೂ ಆಚಾರ್ಯರ ಈ ಮಾತು ಅನ್ವಯಿಸಬಹುದು. ಬ್ರಹ್ಮಾದಿರೂಪಗಳೆಂದರೆ ಬ್ರಹ್ಮರುದ್ರಾದಿ ದೇವತೆಗಳು ಋಷಿಗಳು ರಾಜರು ಅವರಲ್ಲಿ ಪರಮಾತ್ಮ ಆವೇಶಗೊಂಡು ಅವತರಿಸುತ್ತಾನೆ ಎಂದೂ ಅರ್ಥಗ್ರಹಿಸಬಹುದು.

* * *

ಕರ್ದಮರು ಕಪಿಲನನ್ನು ಸ್ತುತಿಸುತ್ತಾರೆ–

ಪರಂ ಪ್ರಧಾನಂ ಪುರುಷಂ ಮಹಾಂತಂ
ಕಾಲಂ ಕವಿಂ ತ್ರಿವೃತಂ ಲೋಕಪಾಲಮ್ ।
ಆತ್ಮಾನುಭೂತ್ಯಾಽನುಗತಪ್ರಪಂಚಂ
ಸ್ವಚ್ಛಂದಶಕ್ತಿಂ ಕಪಿಲಂ ಪ್ರಪದ್ಯೇ ॥ ೩೩ ॥

ಪ್ರಕೃತಿಪುರುಷರಿಗಿಂತ ಉತ್ತಮ, ದೇಶಾದಿಗಳಿಂದ ಪರಿಮಿತಿ ಇಲ್ಲದವನು. ಸರ್ವಜ್ಞ, ಮೂರೂ ವೇದಗಳಿಂದ ವೇದ್ಯ. ಲೋಕರಕ್ಷಕ, ಸ್ವರೂಪಜ್ಞಾನದಿಂದ ಸಮಸ್ತ ಪ್ರಪಂಚವನ್ನು ಗ್ರಹಿಸುವವನು. ಸ್ವತಂತ್ರಶಕ್ತಿಸಂಪನ್ನ ಇಂಥ ಕಪಿಲರೂಪಿ ಪರಮಾತ್ಮನನ್ನು ಶರಣು ಹೊಂದುತ್ತೇನೆ.

[೧]ಇಲ್ಲಿ ಪರಮಾತ್ಮ ಮಾಯೆಯಿಂದ ಪ್ರಪಂಚರೂಪನೂ ಆಗುತ್ತಾನೆ, ಚಿಚ್ಛಕ್ತಿಯಿಂದ ನಿಷ್ಪ್ರಪಂಚರೂಪನೂ ಆಗುತ್ತಾನೆ, ಪ್ರಧಾನವೆಂದರೆ ಪ್ರಕೃತಿ, ಮಹಾನ್

೧. ಪ್ರಧಾನಂ ಪ್ರಕೃತಿರೂಪಂ ಪುರುಷಂ ತದಧಿಷ್ಠಾತಾರಂ ಮಹಾಂತಂ ಮಹತ್ತತ್ತ್ವರೂಪಂ ಕಾಲಂ ತೇಷಾಂ ಕ್ಷೋಭಕಂ ತ್ರಿವೃತಮಹಂಕಾರರೂಪಂ ಲೋಕಾತ್ಮಕಂ ತತ್ಪಾಲಾತ್ಮಕಂ ಚ ತದೇವಂ ಮಾಯಯಾ ಪ್ರಧಾನಾದಿ ರೂಪತಾಮುಕ್ತ್ವಾ ಚಿಚ್ಛಕ್ತ್ಯಾ

ಎಂದರೆ ಮಹತ್ತತ್ತ್ವ ತ್ರಿವೃತ್ ಎಂದರೆ ಅಹಂಕಾರತತ್ತ್ವ, ಎಲ್ಲವೂ ಅವನ ರೂಪಗಳೇ ಆತ್ಮಾನುಭೂತಿಯಿಂದ ಅಂದರೆ ಚಿಚ್ಛಕ್ತಿಯಿಂದ ಪ್ರಪಂಚವೆಲ್ಲ ಅವನಲ್ಲಿ ಅನುಗತವಾಗುತ್ತದೆ ಲಯಹೊಂದುತ್ತದೆ ಎಂದು ಮುಂತಾಗಿ ಬೇರೆ ವ್ಯಾಖ್ಯಾನಕಾರರ ಅಪವ್ಯಾಖ್ಯಾನಗಳಿವೆ. ಆದರೆ ಪ್ರಧಾನ ಮಹಾನ್ ತ್ರಿವೃತ್ ಎಂದರೆ ಸಾಂಖ್ಯರು ಹೇಳುವ ಪ್ರಕೃತಿ ಮಹತ್ತತ್ತ್ವ ಅಹಂಕಾರತತ್ತ್ವಗಳನ್ನೇ ಭಗವಂತನ ರೂಪಗಳೆಂದು ಇಟ್ಟುಕೊಳ್ಳಬೇಕಾಗಿಲ್ಲ. ತ್ರಿವೃತ್ ಎಂದರೆ ಮೂರು ವೇದಗಳಿಂದ ವೇದ್ಯನೆಂದು ಕೂರ್ಮಪುರಾಣವೇ ಹೇಳುತ್ತಿದೆ–

ವೇದೈರ್ವೃತತ್ವಾದ್ ಭಗವಾನ್ ತ್ರಿವೃದಿತ್ಯುಚ್ಯತೇ ಬುಧೈಃ ||
ಇತಿ ಚ ||

ಮೂರು ವೇದಗಳೂ ಭಗವಂತನನ್ನು ಮುಖ್ಯವಾಗಿ ಪ್ರತಿಪಾದಿಸುವುದರಿಂದ ಅವನು ತ್ರಿವೃತ್ ಎನಿಸುತ್ತಾನೆ ಎಂದೂ ಹೇಳಿದೆ.

* * *

ಕಪಿಲನು ತಾನು ಕರ್ದಮ ಪುತ್ರನಾಗಿ ಜನಿಸಲು ಕಾರಣವನ್ನು ಕರ್ದಮರಿಗೆ ಹೇಳುತ್ತಾನೆ–

ಶ್ರೀಭಗವಾನುವಾಚ–

ಮಯಾ ಪ್ರೋಕ್ತಂ ಹಿ ಲೋಕಸ್ಯ ಪ್ರಮಾಣಂ ಸತ್ಯಲೌಕಿಕೇ |
ಅಥಾಜನಿ ಮಯಾ ತುಭ್ಯಂ ಯದವೋಚಮೃತಂ ಮುನೇ || ೩೫ ||

ಭಗವಾನ್ ಕಪಿಲ ಹೇಳುತ್ತಾನೆ, ಮುನಿಯೆ, ಅಬಾಧಿತಪ್ರಮೇಯಗಳ ವಿಷಯದಲ್ಲಿ ಲೋಕಕ್ಕೆ ನನ್ನ ಮಾತೇ ಪ್ರಮಾಣ. ಅದರಿಂದ ನಾನು ನಿನ್ನ ಮಗನಾಗಿ ಜನಿಸುವೆನೆಂದು ಹೇಳಿದ ಮಾತನ್ನು ಸತ್ಯವಾಗಿಸಲೆಂದೇ ನಿನ್ನಲ್ಲಿ ಅವತರಿಸಿದ್ದೇನೆ.

ಇಲ್ಲಿ 'ಸತ್ಯಲೌಕಿಕೇ' ಎಂದರೇನು? ವೈದಿಕ ಹಾಗೂ ಲೌಕಿಕವಾದ ಎಲ್ಲ ಕೃತ್ಯಗಳ ವಿಷಯದಲ್ಲಿ ಎಂದು ಶ್ರೀಧರವ್ಯಾಖ್ಯಾನ. ಸತಿ–ಸರ್ವೋತ್ತಮವಾದ, ಅಲೌಕಿಕೇ–ತ್ರಿವರ್ಗಕ್ಕಿಂತ ಭಿನ್ನನಾದ ಪರಮಾತ್ಮನ ಪ್ರಾಪ್ತಿಯ ವಿಷಯದಲ್ಲಿ. ತ್ರಿವರ್ಗ ವಿಷಯದಲ್ಲಿ ಮನ್ವಾದಿಗಳ ಉಪದೇಶವೂ ಲೋಕಕ್ಕೆ ಪ್ರಮಾಣ. ಸರ್ವೋತ್ತಮವಾದ ಪರಮಾತ್ಮಪ್ರಾಪ್ತಿಸಾಧನ ಭಾಗವತಧರ್ಮವಿಷಯದಲ್ಲಿ ಪರಮಾತ್ಮನ ಮಾತೇ

ನಿಷ್ಪ್ರಪಂಚತಾಮಾಹ | ಆತ್ಮಾನುಭೂತ್ಯಾ ಚಿಚ್ಛಕ್ತ್ಯಾನುಗತಃ ಸ್ವಸ್ಮಿನ್ ಲೀನಃ ಪ್ರಪಂಚೋ ಯಸ್ಯ ತಂ | –ಶ್ರೀಧರಃ

ಪ್ರಮಾಣ ಎಂದು ವಿಶ್ವನಾಥ ವ್ಯಾಖ್ಯಾನ. ಸತ್ಯ ಎಂದರೆ ನಿತ್ಯವಾದ ಮೋಕ್ಷ. ಲೌಕಿಕ ಎಂದರೆ ಭೋಗ. ಭೋಗಮೋಕ್ಷಗಳೆರಡರ ವಿಷಯದಲ್ಲಿಯೂ ಅಂದರೆ ಇದು ಮುಕ್ತಿ ಸಾಧನ, ಇದು ಭುಕ್ತಿಸಾಧನ ಎಂದು ನಾನು ಹೇಳುವುದೇ ಲೋಕಕ್ಕೆ ಪ್ರಮಾಣ ಎಂದು ಶುಕದೇವವ್ಯಾಖ್ಯಾನ. ಬ್ರಹ್ಮಸ್ವರೂಪ ಮತ್ತು ಅದರ ಅನುಭವರೂಪ ಫಲಕ್ಕೆ ಸಾಧನ ಇವುಗಳ ವಿಷಯದಲ್ಲಿ ನನ್ನ ಮಾತೇ ಪ್ರಮಾಣ, ಅಥವಾ ಭಗವದುಪಾಸನ ಮತ್ತು ಸ್ವರ್ಗಮೋಕ್ಷಗಳ ವಿಷಯದಲ್ಲಿ ನನ್ನ ಮಾತೇ ಪ್ರಮಾಣ ಎಂದು ವೀರರಾಘವವ್ಯಾಖ್ಯಾನ. ಸತ್ಯ–ಅಲೌಕಿಕ, ಮತ್ತು ಲೌಕಿಕ,ಅಥವಾ ಸತ್ಯರೂಪವಾದ ಲೌಕಿಕದ ವಿಷಯದಲ್ಲಿ, ಅಥವಾ ಸತ್ಯ– ಹೇ ಸತ್ಯರೂಪನೆ, ಲೌಕಿಕವಿಷಯದಲ್ಲಿ ನನ್ನ ಮಾತೇ ಲೋಕಕ್ಕೆ ಪ್ರಮಾಣ ಎಂದು ವಲ್ಲಭವ್ಯಾಖ್ಯಾನ. ಇಲ್ಲಿ ಎಲ್ಲ ವ್ಯಾಖ್ಯಾನಕಾರರೂ ಪ್ರಾಯಃ ಸತ್ಯಬೇರೆ, ಲೌಕಿಕವೇ ಬೇರೆ, ಲೋಕ ಅಂದರೆ ಪ್ರಪಂಚ. ಅದು ಸತ್ಯವಲ್ಲ, ಅಥವಾ ನಿತ್ಯವಲ್ಲ ಎಂದೇ ಗ್ರಹಿಸಿಕೊಂಡಿದ್ದಾರೆ. ಆದರೆ ಅಬಾಧಿತವಾದ ಪ್ರಮೇಯವೆಲ್ಲವೂ ಸತ್ಯವೇ. ಲೌಕಿಕವೂ ಅಬಾಧಿತವೇ.

ಸತ್ಯಲೌಕಿಕೇ ಯಥಾರ್ಥಜ್ಞಾನವಿಷಯೇ ।

ಆಭಾಸೋ ಜ್ಞಾನಮಾಲೋಕೋ ಲೋಕೋ ಭಾಸಶ್ಚ ಕಥ್ಯತೇ ।

ಇತ್ಯಭಿಧಾನಮ್ ।

ಸತ್ಯಲೌಕಿಕೇ ಎಂದರೆ ಅಬಾಧಿತವಾದ ಪ್ರಮೇಯವಿಷಯದಲ್ಲಿ. 'ಆಭಾಸ, ಜ್ಞಾನ, ಆಲೋಕ, ಲೋಕ, ಭಾಸ ಇವೆಲ್ಲವೂ ಸಮಾನಾರ್ಥಕ ಶಬ್ದಗಳೆಂದು ಅಭಿಧಾನವೆಂಬ ಗ್ರಂಥ ಹೇಳುತ್ತಿದೆ.

ಸತ್ಯ ಎಂದರೆ ಯಥಾರ್ಥ. ಅಬಾಧಿತಲೋಕಕ್ಕೆ ಎಂದರೆ ಜ್ಞಾನಕ್ಕೆ ವಿಷಯವಾದುದು ಲೌಕಿಕ ಎನಿಸುತ್ತದೆ. ಯಥಾರ್ಥವಾದ ಜ್ಞಾನಕ್ಕೆ ವಿಷಯ, ಅಬಾಧಿತಪ್ರಮೇಯ, ಅದು ಪರತತ್ವವಿರಬಹುದು, ಅಪರತತ್ವವಾದ ಪ್ರಪಂಚವೂ ಇರಬಹುದು. ಎಲ್ಲಕ್ಕೂ ಭಗವಂತನ ಮಾತು ಅಂದರೆ, ಶ್ರುತಿಸ್ಮೃತಿ ಪುರಾಣರೂಪವಾದ ಎಲ್ಲ ಸಚ್ಛಾಸ್ತ್ರಗ್ರಂಥಗಳೂ ಪ್ರಮಾಣವೆ. 'ನ ವಿಷ್ಣೋರ್ವಚನಂ ಕ್ವಾಪಿ ಮೃಷಾ ಭವತಿ' 'ಭಗವಂತನು ಆಡುವ ಮಾತೆಂದೂ ಸುಳ್ಳಾಗುವುದಿಲ್ಲ ಎಂದು ನಿಯಮ. ಈ ನಿಯಮರಕ್ಷಣೆಗಾಗಿ 'ನಾನು ನಿನ್ನ ಮಗನಾಗಿ ಅವತರಿಸುವೆನೆಂ'ದು ಹೇಳಿದ ನನ್ನ ಮಾತನ್ನು ಉಳಿಸಬೇಕೆಂದೇ ನಿನ್ನಲ್ಲಿ ಅವತರಿಸಿದ್ದೇನೆ ಎನ್ನುತ್ತಿದ್ದಾನೆ ಕಪಿಲ.

* * *

ಕಪಿಲನು ಕರ್ದಮರಿಗೆ ಉಪದೇಶಿಸುತ್ತಾನೆ–

ವಿಶ್ವಮೇತದ್ಧಿ ಶಾಸ್ತ್ರೇಣ ವಿಜ್ಞಾಯಾತ್ಮಾನಮೀಶ್ವರಮ್ ।
ಮುನಿಃ ಶಾಂತಮನೋವಾಕ್ಯಸ್ತರ್ಹಿ ನ ಖ್ಯಾತ್ಯುಪಪ್ಲವಃ ॥ ೪೦ ॥

ಈ ಪ್ರಪಂಚ ಹೀಗೇ, ನಿಃಸಾರವಾಗಿದೆ. ಅದರಿಂದ ಅದನ್ನು ಬಿಟ್ಟು ಶಾಸ್ತ್ರದಿಂದ ಪರಮಾತ್ಮನನ್ನು ಗುಣಪೂರ್ಣ ಸರ್ವಶಕ್ತನೆಂದು ತಿಳಿದು ಅಪರೋಕ್ಷ ಹೊಂದಿ ಬೇರೆ ವಿಷಯಗಳಲ್ಲಿ ಮನಸ್ಸು ಮಾತುಗಳನ್ನು ಬಿಟ್ಟರೆ ದುಃಖಾಜ್ಞಾನಾದಿ ಉಪದ್ರವ ಪ್ರಸಕ್ತಿಯೇ ಇಲ್ಲ.

ಬೇರೆ ವ್ಯಾಖ್ಯಾನಕಾರರು ಈ ಶ್ಲೋಕವನ್ನು ಬಿಟ್ಟಿದ್ದಾರೆ. ಮೇಲು ನೋಟಕ್ಕೆ ಈ ಪ್ರಪಂಚವನ್ನೂ ತನ್ನನ್ನೂ ಪರಮಾತ್ಮನೆಂದೇ ತಿಳಿದು, ಮನಸ್ಸು ಮಾತುಗಳನ್ನು ನಿರ್ವಿಷಯವಾಗಿಸಿದರೆ ದುಃಖಾದಿ ಉಪದ್ರವ ಇಲ್ಲವಾಗುವುದೆಂದು ಹೇಳಿದಂತೆ ಕಾಣುತ್ತದೆ. ವಸ್ತುತಃ ಶ್ಲೋಕದ ಅಭಿಪ್ರಾಯ ಹೀಗೆ–

ವಿಶ್ವಮೇತದ್ ಏತಾದೃಶಂ ಅಸಾರಂ ಯತಃ ಅತಃ ಈಶ್ವರಂ ವಿಜ್ಞಾಯ ನ ಖ್ಯಾತ್ಯುಪಪ್ಲವಃ ದುಃಖಾಜ್ಞಾನಾದ್ಯುಪದ್ರವೋ ನ ।

ಜಗತ್ತು ಎಂದರೆ ಇದು, ಈ ರೀತಿಯದು, ಅಸಾರವಾದುದು. ಅದರಿಂದ ಪರಮಾತ್ಮನನ್ನು ತಿಳಿದರೆ ಉಪಪ್ಲವ, ಅಂದರೆ, ದುಃಖ ಅಜ್ಞಾನ ಮುಂತಾದ ಉಪದ್ರವವಿಲ್ಲವಾಗುವುದು ಎಂದರ್ಥ.

* * *

ಕಪಿಲನ ಅನುಜ್ಞೆ ಪಡೆದು ಕರ್ದಮರು ಯತ್ಯಾಶ್ರಮ ಸ್ವೀಕರಿಸಿ ಅರಣ್ಯದಲ್ಲಿ ಭಗವಂತನ ಧ್ಯಾನ ಮಾಡತೊಡಗಿದರು.

ನಿರಹಂಕೃತಿರ್ನಿರ್ಮಮಶ್ಚ ನಿರ್ದ್ವಂದ್ವಃ ಸಮದೃಕ್ ಸ್ವದೃಕ್ ।
ಪ್ರತ್ಯಗ್ರಃ ಶಾಂತಧೀರ್ಧೀರಃ ಪ್ರಶಾಂತೋರ್ಮಿರಿವೋದಧಿಃ ॥ ೪೫ ॥

ನಾನು ನನ್ನದೆಂಬ ಅಭಿಮಾನ ತೊರೆದು ಶೀತೋಷ್ಣಾದಿ ದ್ವಂದ್ವಗಳನ್ನು ಸಹಿಸಿಕೊಂಡು ಯೋಗ್ಯತಾನುಸಾರ ಎಲ್ಲ ಪ್ರಮೇಯಗಳನ್ನೂ ಅರಿತು ಹರಿಯೇ ಸ್ವತಂತ್ರನೆಂದು ತಿಳಿದು, ಅಂತರ್ಯಾಮಿಯಾದ ಹರಿಯ ಧ್ಯಾನದಿಂದ ಸ್ವರೂಪಸುಖವನ್ನು ವ್ಯಕ್ತಮಾಡಿಕೊಂಡು ನಿಶ್ಚಲ ಬುದ್ಧಿಯಿಂದ ಧ್ಯಾನಾನಂದ ಅನುಭವಿಸುತ್ತ ಶಾಂತವಾದ ಸಾಗರದಂತೆ ಕುಳಿತರು ಕರ್ದಮರು.

ಇಲ್ಲಿ 'ಪ್ರತ್ಯಕ್ ಪ್ರಶಾಂತಧೀಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ಸ್ವದೃಕ್ ಎಂದರೆ ತನ್ನನ್ನು ಪರಮಾತ್ಮನೆಂದು ತಿಳಿಯುವವನು, ಪ್ರತ್ಯಕ್ ಅಂತರ್ಮುಖಿಯಾಗಿದ್ದು ಹೊರಗೆ ನಿಷ್ಕ್ರಿಯನಾಗಿರುವವನು ಎಂದು ಅವರ ವ್ಯಾಖ್ಯಾನ. ಇದು ಪ್ರಮಾಣವಿರುದ್ಧ. ಸ್ವದೃಕ್ ಎಂದರೆ ಹರಿಯೇ ಸ್ವತಂತ್ರನೆಂದು ತಿಳಿದವನೆಂದರ್ಥ.

ಅನನ್ಯಾಧೀನಶಕ್ತಿತ್ವಾದ್ಧರಿಃ ಸ್ವ ಇತಿ ಚೋಚ್ಯತೇ । ಇತಿ ಮಾತ್ಸ್ಯೇ ।

ಪ್ರತ್ಯಗ್ರಃ ಪ್ರತ್ಯಗ್‌ರತಿಃ ।

ಇನ್ನೊಬ್ಬರಿಗೆ ಅಧೀನವಲ್ಲದ ಶಕ್ತಿ ಉಳ್ಳವನಾದ್ದರಿಂದ ಹರಿ 'ಸ್ವ' ಎನಿಸುತ್ತಾನೆ ಎಂದು ಮತ್ಸ್ಯಪುರಾಣದಲ್ಲಿ ಉಕ್ತವಾಗಿದೆ. ಪ್ರತ್ಯಗ್ರ ಎಂದರೆ 'ಪ್ರತ್ಯಗ್' ಒಳಗೆ ಅಂತರ್ಯಾಮಿಯಾದ ಹರಿಯ ಧ್ಯಾನದಿಂದ ತನ್ನಲ್ಲಿ ವ್ಯಕ್ತವಾಗುವ 'ರ'ಸ್ವರೂಪಸುಖಾನುಭವ ಉಳ್ಳವನು ಎಂದರ್ಥ.

* * *

ಕರ್ದಮರು ಅಪರೋಕ್ಷಜ್ಞಾನದಲ್ಲಿ ಕಂಡ ಭಗವದ್ರೂಪಗಳನ್ನು ಮೈತ್ರೇಯರು ವಿದುರನಿಗೆ ಉಪದೇಶಿಸುತ್ತಾರೆ.

ಆತ್ಮಾನಂ ಸರ್ವಭೂತೇಷು ಭಗವಂತಮವಸ್ಥಿತಮ್ ।
ಅಪಶ್ಯತ್ ಸರ್ವಭೂತಾನಿ ಭಗವತ್ಯಪಿ ಚಾತ್ಮನಿ ॥ ೪೬ ॥

ವಾಸುದೇವೇ ಭಗವತಿ ಸರ್ವಜ್ಞೇ ಪ್ರತ್ಯಗಾತ್ಮನಿ ।
ಪರೇಣ ಭಕ್ತಿಭಾವೇನ ಲಬ್ಧಾತ್ಮಾ ಮುಕ್ತಬಂಧನಃ ॥ ೪೭ ॥

ಎಲ್ಲ ಪದಾರ್ಥಗಳೂ ವ್ಯಾಪ್ತನಾದ ಹರಿಯಲ್ಲಿರುವುದನ್ನೂ, ಎಲ್ಲ ಪದಾರ್ಥಗಳಲ್ಲಿ ಸೂಕ್ಷ್ಮರೂಪದಿಂದ ಹರಿ ಇರುವುದನ್ನೂ, ಎಲ್ಲ ಪದಾರ್ಥಗಳಲ್ಲಿ ಸೂಕ್ಷ್ಮರೂಪದಿಂದಿರುವ ಆ ಗುಣಪೂರ್ಣನಾದ ಹರಿಯೇ ವ್ಯಾಪ್ತವಾದ ವಾಸುದೇವ ರೂಪದಲ್ಲಿ ಒಂದಾಗಿ ಇರುವುದನ್ನೂ ಕರ್ದಮರು ಅಪರೋಕ್ಷಜ್ಞಾನದಲ್ಲಿ ಕಂಡರು. ತನ್ನ ಅಂತರ್ಯಾಮಿಯಾಗಿರುವ ಸರ್ವಜ್ಞನಾದ ಆ ಹರಿಯಲ್ಲಿ ಗಾಢ ಭಕ್ತಿಭಾವದಿಂದ ಮನಸ್ಸಿಟ್ಟು ದೇಹಾಭಿಮಾನವನ್ನು ತೊರೆದರು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಆತ್ಮಾನಂ ಸರ್ವಭೂತೇಷು' ಎಂದು ಭಗವಂತನು ಸರ್ವತ್ರ ವ್ಯಾಪಿಸಿರುವುದನ್ನೂ 'ಸರ್ವಭೂತಾನಿ ಚಾತ್ಮನಿ' ಎಂದು

೧. ಧಾರ್ಯೇಷು ಸರ್ವಭೂತೇಷು ಅವಸ್ಥಿತಂ ಭಗವಂತಮಾತ್ಮಾನಂ, ಧಾರಕೇ ಪರಮಾತ್ಮನಿ ಭಗವತಿ ಭೂತಾನಿ ಧಾರ್ಯಾಣಿ ಅಪಶ್ಯತ್ । ಪೂರ್ವೋತ್ತರಾರ್ಧಾಭ್ಯಾಂ ಭಗವತೋ ವ್ಯಾಪ್ತಿರ್ಧಾರಕತ್ವಂ ಚೋಚ್ಯತೇ ।
– ವೀರರಾಘವಃ

ಭಗವಂತನು ಸರ್ವಧಾರಕನಾಗಿರುವುದನ್ನೂ ಗ್ರಹಿಸಬೇಕೆಂದಿದ್ದಾರೆ. ತನ್ನಲ್ಲಿ ಆ ಭಗವಂತನ ಅಭೇದವನ್ನೂ ಗ್ರಹಿಸಬೇಕೆಂದು [1]ವಲ್ಲಭವ್ಯಾಖ್ಯಾನವಿದೆ. ಎಲ್ಲೆಡೆ ಅಂತರ್ಯಾಮಿಯಾಗಿರುವ ಸೂಕ್ಷ್ಮರೂಪ, ಹೊರಗೆ ಧಾರಕವಾಗಿರುವ ವ್ಯಾಪ್ತರೂಪ, ಈ ಎರಡು ರೂಪಗಳಿಗೆ ಅಭೇದ ಇವಿಷ್ಟನ್ನು ಗ್ರಹಿಸಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಎರಡೂ ರೂಪಗಳಿಗೆ ಆತ್ಮ ಎಂದೇ ಹೆಸರು ಏಕೆ, ಎಂದರೆ ಎರಡೂ ಗುಣಪೂರ್ಣವೆ. ಆತ್ಮಶಬ್ದಕ್ಕೆ ಗುಣಪೂರ್ಣ ಎಂದರ್ಥ ಎನ್ನುತ್ತಾರೆ.

ಭೂತಗರ್ಭಶ್ಚ ಭೂತಸ್ಥಃ ಪೂರ್ಣ ಏವಂ ದ್ವಿರೂಪವಾನ್ ।
ಅತ ಆತ್ಮೇತಿ ತಂ ಪ್ರಾಹುಃ ಸದೈವಾಪ್ತಗುಣೋ ಯತಃ ॥

ಇತಿ ಚ ।

ಶ್ರೀಹರಿ ಎಲ್ಲರನ್ನೂ ತನ್ನೊಳಗೆ ಧರಿಸಿದ್ದಾನೆ. ಎಲ್ಲರೊಳಗೂ ಇದ್ದಾನೆ, ಬೇರೆಬೇರೆ ರೂಪಗಳಿಂದ. ಹೀಗೆ ಎರಡು ಬಗೆಯ ರೂಪ ಉಳ್ಳವನು. ಗುಣಪೂರ್ಣನಾಗಿರುವುದರಿಂದ ಆತ್ಮ ಎಂದು ಅವನನ್ನು ಕರೆಯುತ್ತಾರೆ. ಏಕೆಂದರೆ ಸದಾ ಗುಣಪೂರ್ಣನೆಂದೇ ಆತ್ಮಶಬ್ದದ ಅರ್ಥ ಎಂದೂ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಪಂಚವಿಂಶೋಽಧ್ಯಾಯಃ

—೦—

೧. ಜಗತ ಆಧಾರಾಧೇಯಭೂತಂ ಸ್ವಾತ್ಮರೂಪಂ ಭಗವಂತಂ ಸಾಕ್ಷಾತ್ ಕೃತವಾನಿತ್ಯರ್ಥಃ । —ವಲ್ಲಭಃ

ಅಧ್ಯಾಯ–೨೬

ಅಧ್ಯಾಯಸಾರಾಂಶ

ತಂದೆ ಕಾಡಿಗೆ ಹೋದ ಬಳಿಕ ಕಪಿಲ ತಾಯಿಗೆ ಉಪದೇಶ ನೀಡುವ ಉದ್ದೇಶದಿಂದ ಅವಳ ಬಳಿ ಬಿಂದುಸರದಲ್ಲಿ ವಾಸ ಮಾಡಿದ. ಒಂದು ದಿನ ತಾಯಿ ಮಗನನ್ನು ಪ್ರಕೃತಿ, ಪುರುಷರ ತತ್ತ್ವಜ್ಞಾನ ನೀಡೆಂದು ಕೇಳಿ ಕೊಳ್ಳುತ್ತಾಳೆ. ಕಪಿಲ ಉಪದೇಶಿಸುತ್ತಾನೆ. 'ದೇಹದಲ್ಲಿ ನಿಯಾಮಕನಾದ ಪರಮಪುರುಷನ ತತ್ತ್ವಜ್ಞಾನ ವೈರಾಗ್ಯಭಕ್ತಿಗಳಿಂದ ಅವನ ಅಪರೋಕ್ಷ ಸಂಪಾದಿಸಿದಾಗ ಪ್ರಕೃತಿಯ ಬಂಧನ ಸಡಿಲವಾಗುತ್ತದೆ. ಮುಕ್ತಿ ಲಭಿಸುತ್ತದೆ. ಭಕ್ತಿಯೇ ಮುಕ್ತಿಗೆ ಮುಖ್ಯಸಾಧನ. ದುರ್ಜನರ ಸಂಗ ತೊರೆದು ಸಜ್ಜನರ ಬಳಿ ಶ್ರದ್ಧೆಯಿಂದ ಹರಿಕಥೆಗಳನ್ನಾಲಿಸಿದಾಗಲೇ ಭಕ್ತಿ ಲಭಿಸುವುದು. ವಿಧಿನಿಷೇಧಶಾಸ್ತ್ರಗಳನ್ನು ಉಲ್ಲಂಘಿಸದೆ ಫಲಕಾಮನೆ ಇಲ್ಲದೆ ಸ್ವಾಭಾವಿಕವಾಗಿಯೇ ಎಲ್ಲ ಇಂದ್ರಿಯಗಳೂ ಭಗವಂತನ ಆರಾಧನೆಯಲ್ಲಿ ಪ್ರವೃತ್ತಿ ಮಾಡುವುದೇ ಭಕ್ತಿ ಎನಿಸುತ್ತದೆ. ಈ ಭಕ್ತಿ ಮುಕ್ತಿಗಿಂತ ಪೂರ್ವದಲ್ಲಿಯೂ ಭಕ್ತನಿಗೆ ಸ್ವರೂಪಸುಖ ಅಭಿವ್ಯಕ್ತಿ ಮಾಡಿ ಕೊಡಬಲ್ಲುದು. ಅದರಿಂದ ಭಕ್ತರು ಈ ಭಕ್ತಿಯಿಂದಲೇ ತೃಪ್ತರಾಗಿರುತ್ತಾರೆ. ಬಳಿಕ ಮೋಕ್ಷದಲ್ಲಿ ಅವರಿಗೆ ಇನ್ನೂ ಅಧಿಕ ಆನಂದ ವ್ಯಕ್ತವಾಗುತ್ತದೆ. ಛತ್ರಚಾಮರ ಆಸನ ವಾಹನಾದಿ ಸಕಲ ಭೋಗಗಳೂ ಭಕ್ತಿಗೆ ಫಲವಾಗಿ ಲಭಿಸುತ್ತವೆ. ಆದರೂ ಭಕ್ತಿಯ ಫಲವಾಗಿ ಅವುಗಳನ್ನು ಭಕ್ತರು ಬಯಸುವುದಿಲ್ಲ. ಭಗವಂತನ ಆಜ್ಞೆ ಎಂದೇ ಸ್ವೀಕರಿಸುತ್ತಾರೆ. ಇಂಥ ಮುಕ್ತಿ ಬೇರೆ ದೇವತೆಗಳಿಂದ ಸಿಗಲಾರದು. ಅವರೆಲ್ಲರೂ ಭಗವಂತನಿಗೆ ಅಧೀನರು. ಅವನಿಗೇ ಅಂಜಿ ನಡೆಯುವವರು'

* * *

ಮೈತ್ರೇಯರು ವಿದುರನಿಗೆ ದೇವಹೂತಿಯ ವೃತ್ತಾಂತವನ್ನು ತಿಳಿಸುತ್ತಾರೆ. ದೇವಹೂತಿ ಕಪಿಲನನ್ನು ಶರಣು ಹೊಂದಿ ಬೇಡುತ್ತಾಳೆ–

ತಂ ತ್ವಾಗತಾಽಹಂ ಶರಣಂ ಶರಣ್ಯಂ
ಸ್ವಭೃತ್ಯಸಂಸಾರತರೋಃ ಕುಠಾರಮ್ ।
ಜಿಜ್ಞಾಸಯಾ ಪ್ರಕೃತೇಃ ಪೂರುಷಸ್ಯ
ನಮಾಮಿ ಸದ್ಧರ್ಮವಿದಾಂ ವರಿಷ್ಠಮ್ ॥ ೧೧ ॥

ತನ್ನ ಭೃತ್ಯರ ಸಂಸಾರವೃಕ್ಷಕ್ಕೆ ಕೊಡಲಿಯಂತಿರುವ ಸದ್ಧರ್ಮವೇತ್ತರಲ್ಲಿ ಅಗ್ರಗಣ್ಯನಾದ ನಿನ್ನನ್ನು ಶರಣುಹೊಂದಿದ್ದೇನೆ. ಪ್ರಕೃತಿ ಪುರುಷರ ತತ್ವಜ್ಞಾನದ ಬಯಕೆಯಿಂದ ನಮಿಸುತ್ತಿದ್ದೇನೆ.

[೧]ಇಲ್ಲಿ ಪ್ರಕೃತಿ ಪುರುಷರು ಎಂದರೆ ಯಾರು? ಪ್ರಕೃತಿ ಎಂದರೆ ಮಾಯೆ, ಸಂಸಾರ. ಪುರುಷನೆಂದರೆ ಜೀವ, ಜೊತೆಗೆ ಪರಮಾತ್ಮನನ್ನೂ ಇಲ್ಲಿ ಇಟ್ಟುಕೊಳ್ಳಬೇಕು. ಪ್ರಕೃತಿಯನ್ನು ತಿಳಿಯುವುದು ಅದನ್ನು ಪರಿತ್ಯಾಗ ಮಾಡುವುದಕ್ಕಾಗಿ. ಪರಮಾತ್ಮನನ್ನು ತಿಳಿಯುವುದು ಅವನನ್ನು ಹೊಂದುವುದಕ್ಕಾಗಿ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ವಸ್ತುತಃ 'ಪುರುಷನೆಂದರೆ ಜೀವ, ಜೊತೆಗೆ ಉಪಲಕ್ಷಣವಾಗಿ ಪರಮಾತ್ಮನನ್ನೂ ಇಟ್ಟುಕೊಳ್ಳಬೇಕು' ಎನ್ನುವುದು ತಪ್ಪು. ಪುರುಷನೆಂದರೆ ಪರಮಾತ್ಮನೇ ಮುಖ್ಯವಾಚ್ಯ. ಜೊತೆಗೆ ಅಮುಖ್ಯವಾಗಿ ಜೀವನನ್ನೂ ಇಟ್ಟುಕೊಳ್ಳಬೇಕು. ಪ್ರಕೃತಿ ಎಂದರೂ ಲಕ್ಷ್ಮಿ ಮುಖ್ಯ. ಜೊತೆಗೆ ಜಡವನ್ನೂ ಅಮುಖ್ಯವಾಗಿ ಇಟ್ಟುಕೊಳ್ಳಬೇಕು. ಎಂಬುದು ದತ್ತಾತ್ರೇಯ ಯೋಗದಲ್ಲಿ ಸ್ಪಷ್ಟವಿದೆ.

ನಾರಾಯಣೋ ಬ್ರಹ್ಮವಾಯೂ ವೀಂದ್ರಶೇಷೌ ಹರಸ್ತಥಾ ।
ಕಾಮಃ ಶಕ್ರೋ ಗುರುರ್ದಕ್ಷೋ ಮನ್ವಾದ್ಯಾ ಭಾಸ್ಕರಾದಯಃ ।
ಸರ್ವಜೀವಾಶ್ಚ ಕ್ರಮಶಃ ಪುರುಷಾಖ್ಯಾಭಿಶಬ್ದಿತಾಃ ॥

ತತ್ಪತ್ನ್ಯೋ ಬಂಧಶಕ್ತಿಶ್ಚ ಸ್ತ್ರಿಯಃ ಸರ್ವಾಸ್ತಥಾ ಜಡಮ್ ।
ಕ್ರಮಾತ್ ಪ್ರಕೃತಿಶಬ್ದೋಕ್ತಾಸ್ತಜ್ಜ್ಞಾನಾದ್ ವಿಪ್ರಮುಚ್ಯತೇ ॥
ಇತಿ ದತ್ತಾತ್ರೇಯಯೋಗೇ ।

---

೧. ಪ್ರಕೃತೇಃ ಪುರುಷಸ್ಯ ಜೀವಸ್ಯ । ಇದಂ ಪರಮಾತ್ಮನೋಽಪ್ಯುಪಲಕ್ಷಣಂ ।
–ವೀರರಾಘವಃ

ಪ್ರಕೃತೇರ್ಮಾಯಾಯಾಃ ಪುರುಷಸ್ಯ ಪರಮೇಶ್ವರಸ್ಯ ಜಿಜ್ಞಾಸಯೇತಿ । ಪ್ರಕೃತೌ ಜ್ಞಾತಾಯಾಂ ತತ್ತ್ಯಾಗೇನ ಪುರುಷಾನುಗತೇಃ ಸಂಭವಾತ್ ।–ಜೀವಗೋಸ್ವಾಮೀ

ಪ್ರಕೃತಿಪುರುಷವಿವೇಕೋ ಹಿ ಸರ್ವಥಾ ಕರ್ತವ್ಯಃ । ಪುರುಷ ಏವ ಸೇವ್ಯೋ ನ ಪ್ರಕೃತಿರಿತಿ ಜ್ಞಾನಾರ್ಥಂ । –ವಲ್ಲಭಃ

ನಾರಾಯಣ ಬ್ರಹ್ಮವಾಯುಗಳು ಗರುಡಶೇಷರು ರುದ್ರ ಕಾಮ ಇಂದ್ರ ಗುರು ದಕ್ಷ ಮನು ಮೊದಲಾದವರು ಸೂರ್ಯಮೊದಲಾದವರು ಮತ್ತು ಬೇರೆ ಎಲ್ಲ ಜೀವರು ಕ್ರಮವಾಗಿ ಪುರುಷಶಬ್ದದಿಂದ ಕರೆಸುವರು. ಅವರ ಪತ್ನಿಯರು, ಬಂಧಕಶಕ್ತಿ, ಬೇರೆ ಎಲ್ಲ ಸ್ತ್ರೀಯರು ಮತ್ತು ಜಡಪದಾರ್ಥಗಳು ಕ್ರಮವಾಗಿ ಪ್ರಕೃತಿಶಬ್ದದಿಂದ ಕರೆಸಿಕೊಳ್ಳುವವು. ಈ ಪ್ರಕೃತಿಪುರುಷರ ತತ್ವಜ್ಞಾನದಿಂದ ಮೋಕ್ಷ ಲಭಿಸುತ್ತದೆ ಎಂದು ದತ್ತಾತ್ರೇಯ ಯೋಗದಲ್ಲಿ ಹೇಳಿದೆ.

* * *

ತಾಯಿ ದೇವಹೂತಿ 'ಪ್ರಕೃತಿಪುರುಷರ ತತ್ವಜ್ಞಾನವನ್ನು ಉಪದೇಶಿಸೆ'ಂದು ಕೇಳಿಕೊಂಡಾಗ ಕಪಿಲ ಉಪದೇಶಿಸಲು ತೊಡಗುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ.

ಶ್ರೀಭಗವಾನುವಾಚ–

ಯೋಗ ಆಧ್ಯಾತ್ಮಿಕಃ ಪುಂಸಾಂ ಮತೋ ನಿಃಶ್ರೇಯಸಾಯ ಮೇ ।
ಅತ್ಯಂತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥ ೧೩ ॥

ಭಗವಾನ್ ಕಪಿಲನು ಉಪದೇಶಿಸಿದನು– ದೇಹದಲ್ಲಿರುವ ಪರಮಾತ್ಮ ಮುಂತಾದವರ ಜ್ಞಾನಸಂಪಾದನೆಯು ಸಜ್ಜನರಿಗೆ ಮೋಕ್ಷಕಾರಣವಾಗುವುದು ಎಂದು ನಾನು ಅಭಿಪ್ರಾಯಪಡುತ್ತೇನೆ. ಮೋಕ್ಷದಲ್ಲಿ ಸಕಲದುಃಖಗಳ ಆತ್ಯಂತಿಕ ಪರಿಹಾರವಿದೆ. ಮತ್ತು ಪ್ರಾಕೃತಶರೀರದಿಂದ ಅನುಭವಿಸುವ ಸುಖವೂ ಇಲ್ಲವಾಗುತ್ತದೆ.

[೧]ಇಲ್ಲಿ ಆಧ್ಯಾತ್ಮಿಕಯೋಗವೆಂದರೆ ಪ್ರಕೃತಿಯಿಂದ ಬೇರೆಯಾಗಿ ಆತ್ಮನನ್ನು ಯಥಾರ್ಥವಾಗಿ ತಿಳಿಯುವುದು ಎಂದು ವೀರರಾಘವ ಗಿರಿಧರ ವಲ್ಲಭ ವ್ಯಾಖ್ಯಾನಗಳು. ಜೀವಾತ್ಮನಲ್ಲಿರುವ ಮೋಕ್ಷಸಾಧನವಾದ ಜ್ಞಾನ ಭಕ್ತಿ ಮತ್ತು ಯೋಗ ಎಂದು ಮೂರು ಬಗೆಯಾದ ಉಪಾಯ ಎಂದು ವಿಶ್ವನಾಥವ್ಯಾಖ್ಯಾನ. ಪರಮಾತ್ಮಧ್ಯಾನಯೋಗವೆಂದು ಶುಕದೇವವ್ಯಾಖ್ಯಾನ. ಭಗವಂತನ ಸಾಕ್ಷಾತ್ಕಾರಕ್ಕೆ

---

೧. ಯೋಗೋ ಹಿ ಬಹುವಿಧಃ । ಭಗವತ್ಸಾಕ್ಷಾತ್ಕಾರೇ ಯ ಉಪಯುಜ್ಯತೇ ಸ ಆಧಿದೈವಿಕಃ । ಆತ್ಮಸಾಕ್ಷಾತ್ಕಾರೇ ಆಧ್ಯಾತ್ಮಿಕಃ । ಯೇ ಸ್ವರೂಪಂ ಪ್ರಕೃತಿತೋ ಭಿನ್ನಂ ಜ್ಞಾತವಂತಃ ತೇ ಲಬ್ಧವಿಷಯಾ ಆಧ್ಯಾತ್ಮಿಕಯೋಗೇಽಧಿಕಾರಿಣಃ । ಸ ಯೋಗಸ್ತೇಷಾಂ ಫಲಂ ಸಾಧಯತಿ । ಅತಸ್ತೇಷಾಂ ನಿಃಶ್ರೇಯಸಾಯ ಮತಃ । ಯತ್ರ ದುಃಖಸ್ಯ ಸುಖಸ್ಯ ಚಾತ್ಯಂತಮುಪರತಿಃ । ಆತ್ಮಾತಿರಿಕ್ತಸರ್ವನಿವೃತ್ತಿರ್ಯತ್ರೇತ್ಯರ್ಥಃ । –ವಲ್ಲಭಃ

ಬೇಕಾಗುವ ಆಧಿದೈವಿಕಯೋಗಕ್ಕಿಂತ ಬೇರೆ ಆಧ್ಯಾತ್ಮಿಕಯೋಗ. ಇದು ಆತ್ಮಸಾಕ್ಷಾತ್ಕಾರಕ್ಕೆ ಉಪಯುಕ್ತವಾಗಿದೆ ಎಂದು ವಲ್ಲಭವ್ಯಾಖ್ಯಾನ. ಸುಖದುಃಖ ಎಂದೇನು? ಆತ್ಮಾತಿರಿಕ್ತವೆಲ್ಲವೂ ಮೋಕ್ಷದಲ್ಲಿ ಇಲ್ಲವಾಗುತ್ತದೆ ಎಂದೂ ಅಲ್ಲಿ ಹೇಳಿದೆ. ವಸ್ತುತಃ ಭಗವಾನ್ ಕಪಿಲ ಉಪದೇಶಿಸುವ ವೈದಿಕ ಸಾಂಖ್ಯದಲ್ಲಿ ಆಧ್ಯಾತ್ಮಿಕಯೋಗವೇ ಬೇರೆ ಇದೆ. ಸುಖಭೋಗಯುಕ್ತವಾದ ಮೋಕ್ಷವೂ ಇದೆ.

ಪರಮಾತ್ಮಾದಿಕಂ ದೇಹೇ ಯದಧ್ಯಾತ್ಮಂ ತದೀರಿತಮ್ ॥
ಇತಿ ಚ ॥

ಸುಖಂ ಶರೀರಭೋಗ್ಯಂ ತು ದುಃಖಂ ಸರ್ವಂ ತಥೈವ ಚ ।
ಮುಕ್ತೌ ವಿಲಯಮಾಯಾತಿ ನಿತ್ಯಾನಂದಸ್ತು ಭುಜ್ಯತೇ ॥ ಇತಿ ಚ ।

ದೇಹದಲ್ಲಿ ನಿಯಾಮಕರಾಗಿ ನೆಲೆಸಿರುವ ಪರಮಾತ್ಮ ಮುಂತಾದವರ ತತ್ತ್ವಜ್ಞಾನವೆ ಆಧ್ಯಾತ್ಮಿಕಯೋಗವೆನಿಸಿದೆ ಎಂದೂ ಹೇಳಿದೆ. ಪ್ರಾಕೃತಶರೀರದಿಂದ ಅನುಭವಿಸುವ ಸುಖವೂ ಎಲ್ಲ ಬಗೆಯ ದುಃಖವೂ ಮುಕ್ತಿಯಲ್ಲಿ ಇಲ್ಲವಾಗುತ್ತದೆ. ನಿತ್ಯವಾದ ಸ್ವರೂಪಾನಂದ ಮಾತ್ರ ಅನುಭವಕ್ಕೆ ಬರುತ್ತದೆ ಎಂದೂ ಹೇಳಿದೆ.

* * *

ಮನೋನಿಗ್ರಹವು ಪರಮಾತ್ಮಾಪರೋಕ್ಷಕ್ಕೆ ಆವಶ್ಯಕ. ಅದರಿಂದ ವೈರಾಗ್ಯ ಭಕ್ತಿಜ್ಞಾನಪೂರ್ವಕ ಧ್ಯಾನವು ಕೈಗೂಡುತ್ತದೆ. ಭಗವದನುಗ್ರಹದಿಂದ ಪರಮಾಚ್ಛಾದಿಕಾ ಪ್ರಕೃತಿ ದೂರವಾಗುತ್ತದೆ ಮತ್ತು ಅಪರೋಕ್ಷ ಲಭಿಸುತ್ತದೆ ಬಂಧಕಪ್ರಕೃತಿ ಉದಾಸೀನವಾಗುತ್ತದೆ. ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ಅಹಂಮಮಾಭಿಮಾನೋತ್ಥೈಃ ಕಾಮಲೋಭಾದಿಭಿರ್ಮಲೈಃ ।
ವೀತಂ ಯದಾ ಮನಃ ಶುದ್ಧಮದುಃಖಮಸುಖಂ ಸಮಮ್ ॥ ೧೬ ॥

ತದಾ ಪುರುಷ ಆತ್ಮಾನಂ ಕೇವಲಂ ಪ್ರಕೃತೇಃ ಪರಮ್ ।
ನಿರಂತರಂ ಸ್ವಯಂಜ್ಯೋತಿರಣಿಮಾನಮಖಂಡಿತಮ್ ॥ ೧೭ ॥

ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಚಾತ್ಮನಾ ।
ಪರಿಪಶ್ಯತ್ಯುದಾಸೀನಾಂ ಪ್ರಕೃತಿಂ ಚ ಹತೌಜಸಮ್ ॥ ೧೮ ॥

ವಿಷಯಪದಾರ್ಥಗಳಲ್ಲಿ ನಾನು ನನ್ನದೆಂಬ ಅಭಿಮಾನದಿಂದ ಉಂಟಾಗುವ ಕಾಮ ಲೋಭ ಮುಂತಾದ ಮಲಗಳಿಂದ ಮನಸ್ಸು ದೂರವಾದಾಗ ಬಾಹ್ಯಸುಖದಲ್ಲಿ ವೈರಾಗ್ಯ ಬರುತ್ತದೆ. ಸುಖದುಃಖಗಳಲ್ಲಿ ನಿರ್ವಿಕಾರವಾಗುತ್ತದೆ. ಆಗ ಯೋಗಿಯು ಜ್ಞಾನವೈರಾಗ್ಯಭಕ್ತಿಪೂರ್ವಕ ಧ್ಯಾನದಿಂದ ಭಗವಂತನ ಅನುಗ್ರಹ ಪಡೆದು ಅವನನ್ನು ಸಾಕ್ಷಾತ್ಕರಿಸಿಕೊಳ್ಳುವನು. ಆ ಭಗವಂತನು ತನ್ನ ಗುಣದೇಹೇಂದ್ರಿಯಾದಿಗಳಿಂದ ಅಭಿನ್ನ, ಚೇತನ ಅಚೇತನ ಪ್ರಕೃತಿಗಳಿಗಿಂತ ಉತ್ತಮ, ತನ್ನ ಅವತಾರರೂಪಗಳಲ್ಲಿ ಭೇದವಿಲ್ಲದವನು ಸ್ವಪ್ರಕಾಶ ಪರಮಸೂಕ್ಷ್ಮ ಪೂರ್ಣಶಕ್ತಿ ಉಳ್ಳವನು ಬಿಂಬರೂಪಿ. ಇಂಥ ಪರಮಾತ್ಮನನ್ನೂ ನೋಡುತ್ತಾನೆ. ಬಂಧಕಶಕ್ತಿ ಕಳೆದುಕೊಂಡು ಉದಾಸೀನವಾಗುವ ಪ್ರಕೃತಿಯನ್ನೂ ಕಾಣುತ್ತಾನೆ.

೧ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಸಾಧಕನು ಧ್ಯಾನದಲ್ಲಿ ತನ್ನ ಸ್ವರೂಪವನ್ನೂ ಬಲಗುಂದಿದ ಪ್ರಕೃತಿಯನ್ನೂ ಕಾಣುವನೆಂದು ವ್ಯಾಖ್ಯಾನಿಸಿದ್ದಾರೆ. 'ನಿರಂತರ' ಎಂದರೆ ಪರಮಾತ್ಮನಿಗೂ ತನಗೂ ಭೇದವಿಲ್ಲದಿರುವುದನ್ನೂ ಕಾಣುತ್ತಾನೆ ಎಂದು ವಲ್ಲಭವ್ಯಾಖ್ಯಾನ. ಇವೆಲ್ಲವೂ ಪ್ರಮಾಣವಿರುದ್ಧ. ಭೇದವಿಲ್ಲದಿದ್ದರೆ.'ಭಕ್ತಿಯೋಗೇನ ಚಾತ್ಮನಾ' ಎಂದು ಭಕ್ತಿಯನ್ನು ಹೇಳುವುದೂ ವಿರುದ್ಧವಾಗುವುದು.

ಬಾಹ್ಯೇ ಸುಖೇ ತ್ವನಾಸಕ್ತೇರಸುಖಂ ದುಃಖವರ್ಜನಾತ್ ।
ಅದುಃಖಂ ಹರಿಭಕ್ತ್ಯೈವ ನಿತ್ಯಾನಂದಂ ಯದಾ ಮನಃ ।
ತದಾ ತಂ ಪರಮಾತ್ಮಾನಂ ಪಶ್ಯತ್ಯಾತ್ಮಪ್ರಸಾದತಃ ॥

ಇತಿ ಕಾಪಿಲೇಯೇ ।

ಅಭೇದಾತ್ ಸ್ವಾವತಾರೇಷು ನಿರಂತರ ಉದಾಹೃತಃ ।
ಗುಣದೇಹೇಂದ್ರಿಯಾಭೇದಾತ್ ಕೇವಲೋಽಸದೃಶತ್ವತಃ ।
ಅಖಂಡಃ ಪೂರ್ಣಶಕ್ತಿತ್ವಾದ್ ಅಹಮೇಕಃ ಸುರಾ ಮತಃ ॥

ಇತಿ ಚ ।

ಬಂಧಶಕ್ತಿಃ ಪ್ರಕೃತ್ಯಾಖ್ಯಾ ವಿಷ್ಣುಶಕ್ತ್ಯಾ ವಿಯುಜ್ಯತೇ ॥ ಇತಿ ಚ ॥

ಮನಸ್ಸು ಬಾಹ್ಯಸುಖದಲ್ಲಿ ಆಸಕ್ತಿ ತೋರದಿರುವುದರಿಂದ 'ಅಸುಖ'ವೆನಿಸುತ್ತದೆ. ದುಃಖರಹಿತವಾದ್ದರಿಂದ 'ಅದುಃಖ', ಹರಿಭಕ್ತಿಯಿಂದ ಸ್ವರೂಪಭೂತ ನಿತ್ಯ ಆನಂದ ಅಭಿವ್ಯಕ್ತವಾಗುವುದರಿಂದ 'ಯಾವ ಸುಖವೂ ಇಲ್ಲ'ವೆಂದಾಗುವುದಿಲ್ಲ. ಹೀಗೆ ಮನಸ್ಸು

೧. ಭಗವತಾ ಸಹ ನಿರಂತರಂ ಜೀವಬ್ರಹ್ಮವಿಭಾಗಶೂನ್ಯಂ । ಪ್ರಕೃತೇಸ್ತು ನ ಕಿಂಚಿದ್ ಬಲಮಿತ್ಯಾಹ– ಹತೌಜಸಂ ಪ್ರಕೃತಿಂ ಚ ಪಶ್ಯತಿ । ವಾಸನಾಮಾತ್ರೇಣ ಪ್ರಕೃತಿಸ್ತಿಷ್ಠತೀತ್ಯರ್ಥಃ । –ವಲ್ಲಭಃ

'ಅಸುಖ'ವೂ 'ಅದುಃಖ'ವೂ ಆದಾಗ ಪರಮಾತ್ಮನ ಅನುಗ್ರಹದಿಂದ ಅವನನ್ನು ಪ್ರತ್ಯಕ್ಷವಾಗಿ ಜೀವನು ಕಾಣುತ್ತಾನೆ' ಎಂದು ಕಾಪಿಲೇಯಗ್ರಂಥದಲ್ಲಿ ಉಕ್ತವಾಗಿದೆ. 'ದೇವತೆಗಳೇ, ನಾನು ನನ್ನ ಅವತಾರಗಳಲ್ಲಿ ಭೇದರಹಿತನು ಮತ್ತು ನನ್ನ ಗುಣಗಳು ಶರೀರಗಳು ಇಂದ್ರಿಯಗಳು ಇವೆಲ್ಲವುಗಳಿಂದ ನನಗೆ ಅಭೇದವಿರುವುದರಿಂದ 'ನಿರಂತರ' ಎನಿಸಿದ್ದೇನೆ. ನನಗೆ ಸದೃಶನಿನ್ನೊಬ್ಬನಿಲ್ಲದಿರುವುದರಿಂದ 'ಕೇವಲ' ಎನಿಸಿದ್ದೇನೆ. ನಾನೊಬ್ಬನೇ ಪೂರ್ಣಶಕ್ತಿ ಉಳ್ಳವನಾದ್ದರಿಂದ 'ಅಖಂಡ'ನೆನಿಸಿದ್ದೇನೆ' ಎಂದೂ ಉಕ್ತವಾಗಿದೆ. ಪರಮಾಚ್ಛಾದಕಪ್ರಕೃತಿ ಎಂಬ ಬಂಧಕಶಕ್ತಿಯು ವಿಷ್ಣುಶಕ್ತಿಯ ಪ್ರಭಾವದಿಂದ ದೂರವಾಗುತ್ತದೆ ಎಂದೂ ಹೇಳಿದೆ.

* * *

ನನ್ನಲ್ಲಿ ಅನನ್ಯಭಕ್ತಿಯನ್ನು ಮಾಡುವವರೇ ಸಜ್ಜನರು ಎಂದು ಕಪಿಲನು ತಾಯಿ ದೇವಹೂತಿಗೆ ಉಪದೇಶಿಸುತ್ತಾನೆ–

ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವಂತಿ ಯೇ ದೃಢಾಮ್ ।
ಮತ್ಕೃತೇ ತ್ಯಕ್ತಕರ್ಮಾಣಸ್ತ್ಯಕ್ತಸ್ವಜನಬಾಂಧವಾಃ ॥ ೨೨ ॥

ನನ್ನಲ್ಲಿ ಅನನ್ಯಭಾವದಿಂದ ಭಕ್ತಿ ಮಾಡುತ್ತ ನನ್ನ ಅನುಗ್ರಹಕ್ಕಾಗಿ ಕಾಮ್ಯ ನಿಷಿದ್ಧ ಕರ್ಮಗಳನ್ನು ತೊರೆದು ಲೌಕಿಕ ಸ್ವಜನಬಾಂಧವರನ್ನೂ ಪರಿತ್ಯಾಗ ಮಾಡುವವರು ಸಜ್ಜನರು!

ಇಲ್ಲಿ ವೀರರಾಘವ ವಿಶ್ವನಾಥ ವಲ್ಲಭ ವ್ಯಾಖ್ಯಾನಗಳು ವಿಷ್ಣುಭಕ್ತನಿಗೆ ಬೇರೆ ದೇವತೆಗಳಲ್ಲಿ ಭಕ್ತಿ ನಿಷಿದ್ಧವಾಗಿದೆ ಎಂಬುದು ಅನನ್ಯಭಾವ ಶಬ್ದಾರ್ಥವೆಂದು ವರ್ಣಿಸಿವೆ. ಆದರೆ ವೈಷ್ಣವರಲ್ಲಿ ಭಕ್ತಿ ಇಲ್ಲದಿದ್ದರೆ ಕೇವಲ ವಿಷ್ಣುಭಕ್ತಿ ಕಾರ್ಯಕಾರಿಯಾಗುವುದಿಲ್ಲ. ಅದರಿಂದ ವಿಷ್ಣುವಿನಲ್ಲಿ ಯಾವ ರೀತಿಯ ಭಕ್ತಿಯೋ ಆ ರೀತಿಯ ಭಕ್ತಿಯನ್ನು ಬೇರೆ ದೇವತೆಗಳಲ್ಲಿ ಮಾಡದೆ ತಾರತಮ್ಯಾನುಗುಣವಾಗಿಯೇ ಭಕ್ತಿ ಮಾಡುವುದು ಅನನ್ಯಭಕ್ತಿ ಎನಿಸುತ್ತದೆ ಎನ್ನಬೇಕು.

ಯಾದೃಶೀ ಮಯಿ ಭಕ್ತಿಃ ಸ್ಯಾತ್ ತಾದೃಶ್ಯನ್ಯತ್ರ ನೈವ ಚೇತ್ ।
ಅನನ್ಯಭಕ್ತಿರುದ್ರೇಕಾತ್ ಸಾ ಯಯೈವ ತರೇತ್ ಸೃತಿಮ್ ॥

ಇತಿ ಚ ।

ನನ್ನಲ್ಲಿ ಎಷ್ಟು ಗಾಢವಾಗಿ ಭಕ್ತಿಯೋ ಅಷ್ಟು ಗಾಢ ಭಕ್ತಿಯನ್ನು ಬೇರೆ ದೇವತೆಗಳಲ್ಲಿ ಮಾಡದಿದ್ದರೆ ಅದು ಅನನ್ಯಭಕ್ತಿ ಎನಿಸುತ್ತದೆ. ಅದರಿಂದಲೆ ಭಕ್ತನು ಸಂಸಾರವನ್ನು ದಾಟುತ್ತಾನೆ ಎಂದೂ ಹೇಳಿದೆ.

* * *

ಹರಿಯೇ ಸರ್ವೋತ್ತಮನೆಂದು ನಂಬುವ ಭಕ್ತರೇ ಸಜ್ಜನರು ಎಂದು ಕರ್ದಮನು ತಾಯಿ ದೇವಹೂತಿಗೆ ಉಪದೇಶಿಸುತ್ತಾನೆ.

ಮದಾಶ್ರಯಾಃ ಕಥಾ ಹೃಷ್ಟಾಃ ಶೃಣ್ವಂತಿ ಕಥಯಂತಿ ಚ ।
ತಪಂತಿ ವಿವಿಧಾಂಸ್ತಾಪಾನ್ನೈಕಾತ್ಮ್ಯಗತಚೇತಸಃ ॥ ೨೩ ॥

ನನ್ನ ಕಥೆಗಳನ್ನೇ ಆನಂದದಿಂದ ಶ್ರವಣ ಮಾಡುತ್ತ, ಹೇಳುತ್ತ, ನಾನು ಸರ್ವೋತ್ತಮನೆನ್ನುವಲ್ಲಿ ಸ್ಥಿರಚಿತ್ತರಾಗಿದ್ದು ನಾನಾವಿಧ ತಪಸ್ಸುಗಳನ್ನು ಆಚರಿಸುವವರು ಸಜ್ಜನರು.

ಇಲ್ಲಿ 'ಐಕಾತ್ಮ್ಯಗತಚೇತಸಃ' ಜೀವೇಶ್ವರಾಭೇದದಲ್ಲಿ ನಿಷ್ಠೆಉಳ್ಳವರು ಸಜ್ಜನರು' ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಇಲ್ಲಿ ಬೇರೆಯೇ ಪಾಠವಿಟ್ಟುಕೊಂಡಿದ್ದಾರೆ–

'ತಪಂತಿ ವಿವಿಧಾಸ್ತಾಪಾ ನೈತಾನ್ ಮದ್ಗತಚೇತಸಃ '

'ನನ್ನಲ್ಲಿಯೇ ಸ್ಥಿರಮನಸ್ಸುಳ್ಳವರಾದ್ದರಿಂದ ಇವರನ್ನು ವಿವಿಧ ತಾಪತ್ರಯಗಳು ಪೀಡಿಸುವುದಿಲ್ಲ' ಎಂದು. ಆದರೆ ಸಂಸಾರದಲ್ಲಿ ಪ್ರಾರಬ್ಧಕರ್ಮದಿಂದ ತಾಪತ್ರಯಗಳು ಮಹಾವಿಷ್ಣುಭಕ್ತರನ್ನೂ ಕೂಡ ಪೀಡಿಸಬಹುದು. ಮಹಾರುದ್ರನೂ ಬ್ರಹ್ಮಹತ್ಯೆಯಿಂದ ಪೀಡಿತನಾಗುತ್ತಾನೆ. ಅದರಿಂದ ತಾಪತ್ರಯಗಳಿಂದ ಪೀಡಿತರಾಗದಿರುವುದೂ ಒಂದು ಸಜ್ಜನರ ಲಕ್ಷಣ ಎಂದು ಬೇರೆ ವ್ಯಾಖ್ಯಾನಕಾರರು ಹೇಳುವುದು ಯುಕ್ತವಲ್ಲ. ಪಾಠವೂ ಸರಿಯಲ್ಲ. ಅದರಿಂದ ಹೀಗೆ ಹೇಳಬೇಕು–

ಏಕಃ ಪೂರ್ಣೋ ಹರಿರ್ನಾನ್ಯಸ್ತದನ್ಯೇ ತದ್ವಶಾ ಮತಾಃ ।
ಇತಿ ಜ್ಞಾನಂ ಸ್ಥಿರಂ ಯತ್ತದ್ ಐಕಾತ್ಮ್ಯಜ್ಞಾನಮುಚ್ಯತೇ ॥
ಇತಿ ಬ್ರಹ್ಮಾಂಡೇ ।

ಶ್ರೀಹರಿಯೊಬ್ಬನೇ ಗುಣಪೂರ್ಣ. ಇನ್ನಾರೂ ಅಲ್ಲ. ಬೇರೆಯವರೆಲ್ಲರೂ ಅವನಿಗೆ ಅಧೀನರಾಗಿದ್ದಾರೆ. ಅವರಲ್ಲಿ ಸ್ವಾತಂತ್ರ್ಯಗುಣವಿಲ್ಲ. ಹೀಗೆ ಸ್ಥಿರವಾದ ಜ್ಞಾನ ಬಂದರೆ ಅದು ಐಕಾತ್ಮ್ಯಜ್ಞಾನ ವೆನಿಸುತ್ತದೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

'ಐಕಾತ್ಮ್ಯ' ಎಂಬಲ್ಲಿ ಏಕ=ಒಬ್ಬನೇ, ಆತ್ಮ=ಗುಣಪೂರ್ಣ. ಶ್ರೀಹರಿ ಹೀಗೆ 'ಏಕಾತ್ಮ' ಎನಿಸುತ್ತಾನೆ. ಅವನಿಗೆ ಅಧೀನರಾಗಿರುವವರು 'ಐಕಾತ್ಮ್ಯ'ರೆನಿಸುತ್ತಾರೆ. ಲಕ್ಷ್ಮೀಬ್ರಹ್ಮಾದಿಗಳೆಲ್ಲರೂ ಹೀಗೆ ಐಕಾತ್ಮ್ಯರೆನಿಸುವವರೇ ಎಂದು ಸ್ಥಿರವಾಗಿ ನಂಬುವವರು, ಹರಿಸರ್ವೋತ್ತಮತ್ವದಲ್ಲಿ ನಿಷ್ಠೆ ಉಳ್ಳವರು 'ಐಕ್ಯಾತ್ಮ್ಯಗತ ಚೇತಸ'ರೆನಿಸುತ್ತಾರೆ.

* * *

ದೇವಹೂತಿ ಕಪಿಲನಲ್ಲಿ ಯೋಗಲಕ್ಷಣವನ್ನೂ ಭಕ್ತಿಲಕ್ಷಣವನ್ನೂ ಉಪದೇಶಿಸೆಂದು ಕೇಳಿಕೊಂಡಾಗ ತನ್ನ ತಾಯಿ ಎನ್ನುವ ಅಭಿಮಾನದಿಂದ ಕಪಿಲನು ಅವಳಿಗೆ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದನೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಮೈತ್ರೇಯ ಉವಾಚ–

ವಿದಿತ್ವಾಽರ್ಥಂ ಕಪಿಲೋ ಮಾತುರಿತ್ಥಂ
ಜಾತಸ್ನೇಹೋ ಯತ್ರ ತನ್ವಾಽಭಿಜಾತಃ ।
ತತ್ತ್ವಾಮ್ನಾಯಂ ಯತ್ ಪ್ರವದಂತಿ ಸಾಂಖ್ಯಂ
ಪ್ರಾವೋಚದ್ ವೈ ಭಕ್ತಿವಿತಾನಯೋಗಮ್ ॥ ೩೧ ॥

ಮೈತ್ರೇಯರು ಹೇಳಿದರು–
ಕಪಿಲನು ತಾಯಿಯ ಈ ಅಪೇಕ್ಷೆಯನ್ನು ಅರಿತು ತಾಯಿ ಎನ್ನುವ ಅಭಿಮಾನದಿಂದ ಪರಾಪರ ತತ್ತ್ವಗಳನ್ನು ಪ್ರತಿಪಾದಿಸುವ, ಭಕ್ತಿಯೋಗವನ್ನು ವಿಸ್ತಾರವಾಗಿ ತಿಳಿಸುವ ಸಾಂಖ್ಯಶಾಸ್ತ್ರವನ್ನು ಅವಳಿಗೆ ಉಪದೇಶಿಸಿದ.

ಇಲ್ಲಿ ಕಪಿಲನು ದೇವಹೂತಿಯಲ್ಲಿ ದೇಹದಿಂದ ಜನಿಸಿದನೆಂದು ಹೇಳಿದ್ದರಿಂದ ಶ್ರೀಹರಿಗೆ ಅವತಾರಗಳಲ್ಲಿ ಪಾರ್ಥಿವಶರೀರದಿಂದ ಜನನವಿದೆ ಎಂದು ತಿಳಿಯುವ ಸಂಭವವಿದೆ. ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನು ಎತ್ತಿಕೊಳ್ಳಲೇ ಇಲ್ಲ. ಇದಕ್ಕೆ ಸಮಾಧಾನ 'ತನ್ವಾಽಭಿಜಾತಃ' ದೇಹದಿಂದ ಹುಟ್ಟಿದನೆಂದ ಮಾತ್ರಕ್ಕೆ ಪಾರ್ಥಿವ ದೇಹದಿಂದ ಹುಟ್ಟಿದನೆಂದು ಗ್ರಹಿಸಬಾರದು. ಸಚ್ಚಿದಾನಂದಮಯವಾದ ಸ್ವರೂಪದೇಹದಿಂದ ಪಾದುರ್ಭವಿಸಿದನೆಂದು ವ್ಯಾಖ್ಯಾನಿಸಬೇಕು. ಏಕೆಂದರೆ ರಮಾನಾರಾಯಣರಿಗೆ ಎಂದೂ ಪಾರ್ಥಿವ ಶರೀರದಿಂದ ಜನನವಿಲ್ಲ. ಅನ್ಯರಿಗೆ ಎಲ್ಲರಿಗೂ ಇದೆ.

ಶುಕ್ಲೇನ ಜನಿರನ್ಯೇಷಾಂ ಹರೇಃ ಸ್ವತನುವೈವ ತು ।
ನಿತ್ಯೋದಿತ ಜ್ಞಾನತನೋಃ ಕುತಃ ಸ್ಯಾಚ್ಛುಕ್ಲತೋ ಜನಿಃ ॥
ಇತಿ ಗಾರುಡೇ ॥

ರಮಾನಾರಾಯಣರಿಗಿಂತ ಅನ್ಯರಿಗೆ ಶುಕ್ಲಶೋಣಿತಮೇಲನ ಜನ್ಯವಾದ ಶರೀರ ದಿಂದ ಜನನ. ಹೊರತು ರಮಾನಾರಾಯಣರಿಗೆ ಅದು ಇಲ್ಲ. ನಿತ್ಯಸಿದ್ಧವಾದ ಚಿನ್ಮಯಶರೀರ ಉಳ್ಳ ಅವರಿಗೆ ಶುಕ್ಲದಿಂದ ಜನನ ಹೇಗೆ ಶಕ್ಯ ಎಂದು ಗರುಡ ಪುರಾಣ ಹೇಳಿದೆ.

* * *

ಶ್ರೀಕಪಿಲನು ದೇವಹೂತಿಗೆ ಮೊದಲಿಗೆ ಭಕ್ತಿಲಕ್ಷಣವನ್ನು ಉಪದೇಶಿಸುತ್ತಾನೆ–

ಶ್ರೀಭಗವಾನುವಾಚ–

ದೇವಾನಾಂ ಗುಣಲಿಂಗಾನಾಮಾನುಶ್ರವಿಕ ಕರ್ಮಣಾಮ್ ।
ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ॥ ೩೨ ॥

ಅನಿಮಿತ್ತಾ ಭಗವತಿ ಭಕ್ತಿಃ ಸಿದ್ಧೇರ್ಗರೀಯಸೀ ।
ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥಾ ॥ ೩೩ ॥

ಭಗವಾನ್ ಶ್ರೀಕಪಿಲನು ಮಾತೆಗೆ ಭಕ್ತಿಲಕ್ಷಣವನ್ನು ಉಪದೇಶಿಸುತ್ತಾನೆ– 'ಗುಣಕ್ರಿಯೆಗಳಿಂದ ಊಹಿಸಲಾಗುವ ಪ್ರಕಾಶಮಾನವಾದ ಇಂದ್ರಿಯಗಳು, ಗುಣಪೂರ್ಣಪರಮಾತ್ಮನನ್ನೇ ಸದಾ ಚಿಂತಿಸುವ ಸಾಧಕನಲ್ಲಿ, ಶ್ರುತ್ಯುಕ್ತ ವಿಧಿನಿಷೇಧಗಳನ್ನು ಮೀರದೆ ಫಲಕಾಮನೆಯೂ ಇಲ್ಲದೆ ಸ್ವಾಭಾವಿಕವಾಗಿ ಭಗವಂತನ ಆರಾಧನೆಗೆ ಪ್ರವೃತ್ತಿ ಮಾಡುವುದೇ ಭಕ್ತಿ ಎನಿಸುತ್ತದೆ. ಅದು ಮೋಕ್ಷಕ್ಕಿಂತಲೂ ಹಿರಿದು. ಮತ್ತು ಉಂಡ ಅನ್ನವನ್ನು ಜಾಠರಾಗ್ನಿ ಜೀರ್ಣಿಸುವಂತೆ ಈ ಭಕ್ತಿ ಲಿಂಗಶರೀರವನ್ನು ಬೇಗನೆ ನಾಶಗೊಳಿಸುತ್ತದೆ.

[೧]ಇಲ್ಲಿ 'ಆನುಶ್ರವಿಕಕರ್ಮಣಾಂ' ಎಂದರೆ ವೇದೋಕ್ತಕರ್ಮವನ್ನೇ ಮಾಡುವ ಕರ್ಮೇಂದ್ರಿಯಗಳೆಂದು ವೀರರಾಘವ ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ಇಲ್ಲಿ ಕರ್ಮವೆಂದರೆ ಕರ್ಮೇಂದ್ರಿಯ ಕಾರ್ಯವೆಂದರ್ಥವಲ್ಲ, ಎಲ್ಲ ಇಂದ್ರಿಯಗಳ ಕಾರ್ಯ. ಅದು ವೇದೋಕ್ತವಾಗಿರಬೇಕು. ವಿರುದ್ಧವಾಗಬಾರದು. ಅರ್ಥಾತ್ ಯಾವ ಇಂದ್ರಿಯವೂ ವೇದದ ವಿಧಿನಿಷೇಧಗಳನ್ನು ಉಲ್ಲಂಘಿಸಬಾರದೆಂದು ಹೇಳಿದಂತಾಗುವುದು. ಇಂಥ ಇಂದ್ರಿಯಸಮೂಹವು 'ಆನುಶ್ರವಿಕಕರ್ಮ' ಎನಿಸುತ್ತದೆ ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ.

'ಸತ್ತ್ವ ಏವೈಕ ಮನಸೋ ವೃತ್ತಿಃ' ಎಂಬಲ್ಲಿ ಸತ್ತ್ವ ಎಂದರೆ ಶುದ್ಧಸತ್ತ್ವಶರೀರಿಯಾದ ವಿಷ್ಣು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ವೀರರಾಘವ ವ್ಯಾಖ್ಯಾನದಲ್ಲಂತೂ ಶುದ್ಧಸತ್ತ್ವಮಯವಾದ ಭಗವಂತನ ಶರೀರವೆಂದೇ ವ್ಯಾಖ್ಯಾನಿಸಲಾಗಿದೆ. ಜೀವಗೋಸ್ವಾಮಿವ್ಯಾಖ್ಯಾನದಲ್ಲಿಯೂ ಸತ್ತ್ವಗುಣಪ್ರೇರಕನಾದ

---

೧. ಆನುಶ್ರವಿಕಕರ್ಮಣಾಂ ಅನುಸ್ಮೃತ್ಯಾವಿಚ್ಛಿನ್ನಂ ಪಾಠಪರಂಪರಯಾ ಶ್ರೂಯತ ಇತ್ಯನುಶ್ರವೋ ವೇದಃ ತದ್ವಿಹಿತಮಾನುಶ್ರವಿಕಂ ಕರ್ಮ ಯೇಷಾಂ ಶಾಸ್ತ್ರಪ್ರಸಿದ್ಧವ್ಯಾಪಾರಾನುಷ್ಠಾನಪರಾಣಾಂ ಕರ್ಮೇಂದ್ರಿಯಾಣಾಮಿತ್ಯರ್ಥಃ । ಸತ್ತ್ವೇ ಶುದ್ಧಸತ್ತ್ವಮಯೇ ಭಗವದ್ವಿಗ್ರಹೇ । –ವೀರರಾಘವಃ

ವಿಷ್ಣು ಎಂದರ್ಥ. ಶುಕದೇವವ್ಯಾಖ್ಯಾನದಲ್ಲಿ ಸತ್ವ ಎಂದರೆ ಶುದ್ಧ, ಅಪ್ರಾಕೃತ ಶರೀರಿಯಾದ ವಿಷ್ಣು. ಆದರೆ, ಗುಣಪೂರ್ಣನೆಂದೇ ಭಗವಂತನನ್ನು ತಿಳಿಯ ಬೇಕೆಂದು ವಿಧಿ ಇರುವಾಗ, ಸತ್ವ ಎಂದರೆ ಗುಣಪೂರ್ಣ ಎಂದು ಅರ್ಥವೂ ಇರುವಾಗ, ಜಡಶರೀರಉಳ್ಳವನೆಂದಾಗಲಿ ಅಪ್ರಾಕೃತಶರೀರಿ ಎಂದಾಗಲಿ ಸತ್ವಶಬ್ದವನ್ನು ವ್ಯಾಖ್ಯಾನಿಸುವುದು ಯುಕ್ತವಲ್ಲ.

ವಲ್ಲಭವ್ಯಾಖ್ಯಾನದಲ್ಲಿ 'ಸತ್ವಗುಣವನ್ನು ಹೇಳಿದ್ದು ಸಾಂಖ್ಯಮತಾನುಸಾರವಾಗಿ, ಹೊರತು, ಭಾಗವತಮತದಲ್ಲಿ ಹರಿರ್ಹಿ ನಿರ್ಗುಣಃ ಸಾಕ್ಷಾತ್' ಎಂದು ನಿರ್ಗುಣಭಕ್ತಿ ಮಾಡಬೇಕು' ಎಂದೂ 'ಮೊದಲಿಗೆ ಸತ್ವಗುಣಭಕ್ತಿ ಮಾಡಿದರೂ ಜನ್ಮಾಂತರದಲ್ಲಿ ಭಗವದ್ಭಕ್ತಿ ಬರುತ್ತದೆ' ಎಂದೂ ಹೇಳಿದೆ. ಆದರೆ ಪ್ರಾಕೃತಗುಣವುಳ್ಳವನು ಭಗವಂತನೆಂದು ಉಪಾಸನೆ ಮಾಡುವುದು ಅನ್ಯಥೋಪಾಸನೆ, ಅನರ್ಥಕರ.

ಅದರಿಂದ ಸತ್ವವೆಂದರೆ ಸಕಲಗುಣಪೂರ್ಣ ಎಂದೇ ಅರ್ಥ. ಹಾಗೇ ಕಾಪಿಲೇಯಗ್ರಂಥದಲ್ಲಿ ಹೇಳಿದೆ.

ಭಕ್ತಿಯು ಮುಕ್ತಿಗಿಂತ ಮೇಲು ಎಂದು ಭಾಗವತ ಹೇಳಿದ್ದನ್ನು [೧]ಬೇರೆ ವ್ಯಾಖ್ಯಾನಕಾರರು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. 'ಮೋಕ್ಷವೆಂದರೆ ಭಗವಂತನ ಸಾಯುಜ್ಯ, ಅದು ಐಕ್ಯ ಅಥವಾ ಸಾದೃಶ್ಯರೂಪವಾದುದು, ಅದರಿಂದ ಅಲ್ಲಿ ಕೇವಲ ಆತ್ಮಾನಂದ ಲಭ್ಯ. ಭಗವದಾನಂದ ಅನುಭವಕ್ಕೆ ಬರುವುದಿಲ್ಲ. ಭಕ್ತಿಯಲ್ಲಿಯೇ ಅಧಿಕ ಆನಂದವಿದೆ. ಮುಕ್ತಿಯಲ್ಲಿ ಭಕ್ತಿಸುಖವಿಲ್ಲ. ಶ್ರೀಕೃಷ್ಣ ಯಾರಿಗೂ ಸಾರಥಿಯಾಗುವುದಿಲ್ಲ. ಶ್ರೀದಾಮನಿಗೆ ಪರಾಜಿತನಾದಂತೆ ಯಾರಿಗೂ ಪರಾಜಿತನಾಗುವುದಿಲ್ಲ. ಯಶೋದೆಯಿಂದ ಬದ್ಧನಾದಂತೆ ಯಾರಿಂದಲೂ ಬದ್ಧನಾಗುವುದಿಲ್ಲ' ಎಂದು ಮುಂತಾಗಿ ಹೇಳುತ್ತಾರೆ. ವಸ್ತುತಃ ಮುಕ್ತಿ ಎಂದರೆ ಸ್ವರೂಪಾನಂದಾಭಿವ್ಯಕ್ತಿ. ಅದೇ ಪರಮಪುರುಷಾರ್ಥ. ಮುಕ್ತಿಯಲ್ಲಿಯೂ ಭಕ್ತಿಸುಖ ಇದೆ. ಅಲ್ಲಿಯೂ ಅರ್ಜುನನಂತೆ ಸಖ್ಯಭಕ್ತಿ, ಯಶೋದೆಯಂತೆ ವಾತ್ಸಲ್ಯಭಕ್ತಿ ಮಾಡಲು ಪೂರ್ಣ ಅವಕಾಶವಿದ್ದೇ ಇದೆ. ಆದರೆ ಅದು ಫಲರೂಪ. ಸಾಧನರೂಪ ಭಕ್ತಿಯ ಲಕ್ಷಣವನ್ನು ಇಲ್ಲಿ ಹೇಳುತ್ತಿದ್ದಾರೆ. ಅದರಿಂದ ಮುಕ್ತಿಫಲಸಾಧನವಾದ ಭಕ್ತಿ

---

೧ ಅಯಮರ್ಥಃ । ಮುಕ್ತೌ ಭಗವಾನ್ ನ ಕಸ್ಯಚಿತ್ ಸಾರಥಿರ್ಭವತಿ । ನ ಚ 'ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂ ಪರಾಜಿತಃ' ಇತ್ಯೇವಂ ಕೇನಚಿತ್ ಪರಾಜಿತೋ ಭವತಿ । ನ ಚ ದಾಮಭಿಃ ಶ್ರೀಯಶೋದಯೇವ ಕೇನಾಪಿ ಬದ್ಧೋ ಭವತಿ । ಅತೋ ಭಕ್ತಿರ್ಮುಕ್ತೇರ್ಗರೀಯಸೀತಿ ಸಿದ್ಧಾಂತೋಕ್ತಿಃ । ತಥಾಪಿ ಭಕ್ತ್ಯಾಮುಕ್ತಿಃ ಪ್ರಾಸಂಗಿಕೀ ಸ್ಯಾದೇವೇತ್ಯಾಹ । ಯಾ ಭಕ್ತಿಃ ಕೋಶಂ ಲಿಂಗಶರೀರಂ ಜರಯತಿ ಕ್ಷಪಯತಿ ।

—ಶುಕದೇವಃ

ಮುಕ್ತಿಗಿಂತ ಏಕೆ ಹೆಚ್ಚಿನದೆನ್ನುವ ಸಮಸ್ಯೆಗೆ ಶ್ರೀಮದಾಚಾರ್ಯರು ಪ್ರಮಾಣದ ಆಧಾರದೊಂದಿಗೆ ಸಮಾಧಾನ ಹೇಳುತ್ತಾರೆ–

ಆನುಶ್ರವಿಕಕರ್ಮಾಸೌ ಶ್ರುತ್ಯುಕ್ತಂ ಯೋ ನ ಲಂಘಯೇತ್ ।
ಇತಿ ಭವಿಷ್ಯತ್ಪರ್ವಣಿ ॥

ಸದಾ ಸರ್ವಗುಣಾಢ್ಯತ್ವಾತ್ ಸತ್ತ್ವೋ ವಿಷ್ಣುರುದೀರ್ಯತೇ ।
ಇತಿ ಕಾಪಿಲೇಯೇ ।

ಅಪೂರ್ಣಭಕ್ತೇರ್ಮುಕ್ತೌ ತು ನ ಸುಖಂ ಪೂರ್ತಿಮೇಷ್ಯತಿ ।
ಅತಸ್ತಾದೃಶಮುಕ್ತೇಶ್ಚ ಭಕ್ತಿಃ ಪೂರ್ಣಾ ಗರೀಯಸೀ ॥ ಇತಿ ಚ ।

'ಅನುಶ್ರವ' ಎನಿಸುವ ಶ್ರುತಿಯಲ್ಲಿ ಉಕ್ತವಾದ ವಿಧಿನಿಷೇಧಗಳನ್ನು ಉಲ್ಲಂಘಿಸದಿರುವ ಇಂದ್ರಿಯಸಮೂಹವು 'ಆನುಶ್ರವಿಕಕರ್ಮ' ಎನಿಸುತ್ತದೆ ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ. ಸದಾ ಸರ್ವಗುಣಪೂರ್ಣನಾದ್ದರಿಂದ ವಿಷ್ಣು ಸತ್ತ್ವ ಎನಿಸುತ್ತಾನೆ ಎಂದು ಕಾಪಿಲೇಯದಲ್ಲಿ ಹೇಳಿದೆ. 'ನಿಷ್ಕಾಮಭಕ್ತಿಯೇ ಪೂರ್ಣಭಕ್ತಿ ಎನಿಸುತ್ತದೆ. ಕಾಮನೆ ಇದ್ದರೆ ಭಕ್ತಿ ಅಪೂರ್ಣ. ಇಂಥ ಅಪೂರ್ಣಭಕ್ತಿ ಉಳ್ಳವನಿಗೆ ಮುಕ್ತಿಯಲ್ಲಿಯೂ ಪೂರ್ಣಭಕ್ತಿ ಉಳ್ಳ ಉತ್ತಮಾಧಿಕಾರಿಗೆ ಸಿಗುವಷ್ಟು ಪೂರ್ತಿಯಾಗಿ ಸುಖ ಸಿಗುವುದಿಲ್ಲ. ಆದರಿಂದ ಅಂಥ ಮುಕ್ತಿಗಿಂತ ಪೂರ್ಣಭಕ್ತಿಯೇ ಮುಕ್ತಿಯಲ್ಲಿ ಮಾತ್ರವಲ್ಲದೆ ಸಂಸಾರದಲ್ಲಿಯೂ ಸ್ವರೂಪಸುಖ ವ್ಯಕ್ತಿಮಾಡಿಕೊಡುವುದರಿಂದ ಶ್ರೇಷ್ಠ. ಎಂದೂ ಹೇಳಿದೆ.

* * *

ನಿಷ್ಕಾಮ ಭಕ್ತಿ ಮಾಡುವವರು ಭಕ್ತಿಗೆ ಪ್ರತಿಫಲವಾಗಿ ಮೋಕ್ಷವನ್ನು ಕೂಡ ಬಯಸುವುದಿಲ್ಲ. ಅಂಥ ಭಕ್ತಿಯೇ ಶ್ರೇಷ್ಠ ಎಂದು ಕಪಿಲನು ದೇವಹೂತಿಗೆ ಉಪದೇಶಿಸುತ್ತಾನೆ.

ನೈಕಾತ್ಮ್ಯತಾಂ ಮೇ ಸ್ಪೃಹಯಂತಿ ಕೇಚಿ-
ನ್ಮತ್ಪಾದಸೇವಾಭಿರತಾ ಮದೀಹಾಃ ।
ಯೇಽನ್ಯೋನ್ಯತೋ ಭಾಗವತಾಃ ಪ್ರಸಜ್ಯ
ಸಂಭಾಜಯಂತೇ ಮಮ ಪೌರುಷಾಣಿ ॥ ೩೪ ॥

ಕೆಲವು ಏಕಾಂತಭಕ್ತರು ತಮ್ಮ ಭಕ್ತಿಗೆ ಪ್ರತಿಫಲವಾಗಿ ನನ್ನ ಸಾಯುಜ್ಯವನ್ನೂ ಬಯಸುವುದಿಲ್ಲ. ಕೇವಲ ನನ್ನ ಪಾದಸೇವೆಯಲ್ಲೇ ಆಸಕ್ತರಾಗಿದ್ದು ನನ್ನ ಆರಾಧನೆಯನ್ನೇ

ಅವರು ಮಾಡುತ್ತಾರೆ. ಆ ಭಕ್ತರೆಲ್ಲರೂ ಕೂಡಿ ನನ್ನ ಮಹಿಮೆಗಳನ್ನು ಭಕ್ತಿಯಿಂದ ಶ್ರವಣ ಮಾಡುತ್ತಾರೆ.

ಮೋಕ್ಷದಲ್ಲಿ ಭಗವಂತನ ಪಾದಸೇವೆಯ ಆನಂದಕ್ಕೆ ಅವಕಾಶವಿಲ್ಲ, ಭಗವಂತನ ಸೌಂದರ್ಯ, ಸೌರಭ್ಯಾದಿಗಳ ಅನುಭವವಿಲ್ಲ, ಲೀಲಾಮೃತಾಸ್ವಾದನವಿಲ್ಲ, ಕೇವಲ ಸ್ವರೂಪಭೂತ ಬ್ರಹ್ಮಾನಂದವಿದೆ. ಅದು ಭಕ್ತರಿಗೆ ಇಷ್ಟವಾಗುವುದಿಲ್ಲ ಎಂದು [೧]ವಿಶ್ವನಾಥವ್ಯಾಖ್ಯಾನ. ಬೇರೆ ಎಲ್ಲ ವ್ಯಾಖ್ಯಾನಕಾರರ ಅಭಿಪ್ರಾಯವೂ ಇದೇ ಆಗಿದೆ. ಇದು ಪ್ರಮಾಣವಿರುದ್ಧ. ಮುಕ್ತಿಯಲ್ಲಿ ಸಾಕ್ಷಾತ್ ಪರಮಾತ್ಮನ ಪಾದಸೇವಾದಿಗಳು ಲಭ್ಯವಿರುತ್ತವೆ. ಸಂಸಾರದಲ್ಲಿ ಕೇವಲ ವಿಗ್ರಹಾರಾಧನೆ ಮಾಡಬೇಕಾಗುತ್ತದೆ. ಅದರಿಂದ 'ಭಕ್ತರು ಮುಕ್ತಿಯನ್ನು ಬಯಸುವುದಿಲ್ಲ' ಎನ್ನುವುದರ ಅಭಿಪ್ರಾಯ ಹೀಗೆ–

ನೇಚ್ಛಂತಿ ಸಾಯುಜ್ಯಮಪಿ ಫಲತ್ವೇನ ಹರಿರ್ಯದಿ ।
ದದಾತಿ ಭಕ್ತಿಸಂತುಷ್ಟಾ ಆಜ್ಞಾತ್ವೇನೈವ ಗೃಹ್ಣತೇ ।
ತಾದೃಶಾನಾಂ ಸುಖಾಧಿಕ್ಯಂ ಪುನರ್ಮುಕ್ತೌ ಭವಿಷ್ಯತಿ ॥ ಇತಿ ಚ ।

ಭಕ್ತಿಗೆ ಪ್ರತಿಫಲವಾಗಿ, ಶ್ರೀಹರಿ ಸಾಯುಜ್ಯವನ್ನಿತ್ತರೂ ಏಕಾಂತಭಕ್ತರು ಅದನ್ನು ಬಯಸುವುದಿಲ್ಲ. ಆಜ್ಞೆ ಎಂದು ಸ್ವೀಕರಿಸುತ್ತಾರೆ. ಏಕೆಂದರೆ ಅವರು ಭಕ್ತಿಯಿಂದಲೆ ತೃಪ್ತರಾಗಿರುತ್ತಾರೆ. ಭಕ್ತಿಯಿಂದ ಅವರ ಸ್ವರೂಪಾನಂದ ಹೆಚ್ಚಿನ ಮಟ್ಟಿಗೆ ವ್ಯಕ್ತವೇ ಆಗಿರುತ್ತದೆ. ಪುನಃ ಮೋಕ್ಷದಲ್ಲಿ ಪೂರ್ತಿಯಾಗಿ ವ್ಯಕ್ತವಾಗುವದರಿಂದ ಅಧಿಕ ಸುಖ ಉಂಟಾಗುತ್ತದೆ ಎಂದೂ ಹೇಳಿದೆ.

* * *

ನನ್ನ ಭಕ್ತರಿಗೆ ಮೋಕ್ಷದಲ್ಲಿ ಎಲ್ಲ ಬಗೆಯ ಸುಖಭೋಗವಿದೆ. ಅದನ್ನು ನಾಶಗೊಳಿಸಲು ಸರ್ವಸಮರ್ಥವಾದ ಕಾಲವೂ ಸಮರ್ಥವಾಗುವುದಿಲ್ಲ ಎಂದು ಶ್ರೀಕಪಿಲ ಮಾತೆಗೆ ಉಪದೇಶಿಸುತ್ತಾನೆ–

ನ ಕರ್ಹಿಚಿನ್ಮತ್ಪರಾಃ ಶಾಂತರೂಪಾ
ನಂಕ್ಷ್ಯಂತಿ ಮೇ ನೋಽನಿಮಿಷೋ ಲೇಢಿ ಹೇತಿಃ ।

---

೧. ಚರಣಸೇವಾನಂದಾಭಾವಾತ್ ಸೌಂದರ್ಯಸೌರಭ್ಯಾದ್ಯನುಭವಾಭಾವಾತ್ ಲೀಲಾಮೃತಾಸ್ವಾದನಾಭಾವಾಚ್ಚ ಬ್ರಹ್ಮಸುಖಂ ನ ರೋಚಯಂತೀತಿ ಮುಕ್ತಾವಸ್ಪೃಹಾಯಾಂ ಹೇತುತ್ರಯಮುಕ್ತಂ ॥ –ವಿಶ್ವನಾಥಃ

ಯೇಷಾಮಹಂ ಪ್ರಿಯ ಆತ್ಮಾ ಸುತಶ್ಚ
ಸಖಾ ಗುರುಃ ಸುಹೃದೋ ದೈವಮಿಷ್ಟಮ್ ॥ ೩೮ ॥

ನಾನೇ ಅವರಿಗೆ ಪ್ರಿಯನಾದ ಸ್ವಾಮಿ, ಅವರಿಗೆ ಮಗ, ಗೆಳೆಯ, ಗುರು, ಸ್ನೇಹಿತ, ಇಷ್ಟದೈವವೆಲ್ಲವೂ ನಾನೇ ಆಗಿರುತ್ತೇನೆ ಹೀಗೆ ನನ್ನನ್ನು ನಂಬಿದವರು ಸ್ವಯೋಗ್ಯ ಪೂರ್ಣಸುಖರೂಪರು ಮುಕ್ತರು ಎಂದೂ ಮೋಕ್ಷಸುಖಭೋಗದಿಂದ ವಂಚಿತರಾಗುವುದಿಲ್ಲ. ನನ್ನ ಆಯುಧವಾದ ಕಾಲಚಕ್ರವೂ ಕೂಡ ಅವರನ್ನು ಕಬಳಿಸುವುದಿಲ್ಲ, ಜರಾಮರಣಾದಿಗಳನ್ನು ಉಂಟುಮಾಡುವುದಿಲ್ಲ.

[೧]ಇಲ್ಲಿ 'ಭಕ್ತನು ಪ್ರೇಯಸಿಯಾಗಿ ಭಗವಂತ ತನ್ನ ಪ್ರಿಯನೆಂದೂ, ಜ್ಞಾನಿಯಾಗಿ ತನ್ನ ಆತ್ಮವೇ ಎಂದೂ, ತಾಯಿಯಾಗಿ ತನ್ನ ಮಗನೆಂದೂ ಗೆಳೆಯನಾಗಿ ತನ್ನ ಗೆಳೆಯನೆಂದೂ, ದಾಸನಾಗಿ ತನ್ನ ಗುರುವೆಂದೂ ಇಷ್ಟದೈವವೆಂದೂ ಭಗವಂತನನ್ನು ಆರಾಧಿಸಬಹುದು. ಎನ್ನುತ್ತದೆ, ವಿಶ್ವನಾಥವ್ಯಾಖ್ಯಾನ. 'ಆತ್ಮಾ' ಎಂದರೆ ದೇಹ. ಸಾರೂಪ್ಯಮೋಕ್ಷದಲ್ಲಿ ಭಕ್ತನಿಗೆ ಭಗವಂತನೇ ದೇಹ ಎನ್ನುತ್ತದೆ ವಲ್ಲಭವ್ಯಾಖ್ಯಾನ. ವೀರರಾಘವ ವ್ಯಾಖ್ಯಾನಪ್ರಕಾರ ಭಗವಂತನಿಗೆ ಭಕ್ತನು ದೇಹ. ಇದೆಲ್ಲವೂ ಪ್ರಮಾಣವಿರುದ್ಧ. ಆತ್ಮ ಎಂದರೆ ಸ್ವಾಮಿ, ಆಪತ್ತನ್ನು ಕಳೆಯುವವನು. ಮುಕ್ತರು ಭಗವಂತನನ್ನು ಸ್ವಾಮಿ ಎಂದು ಸದಾ ತಿಳಿಯುತ್ತಾರೆ, ಎಂದೂ ಮರೆಯುವುದಿಲ್ಲ. ಸಂಸಾರಿಗಳು ಮರೆಯುತ್ತಾರೆ. ಅದರಿಂದ ಮುಕ್ತರ ಭೋಗಕ್ಕೆ ಚ್ಯುತಿ ಇಲ್ಲ, ಸಂಸಾರಿಗಳ ಭೋಗ ಮಾತ್ರ ನಶ್ವರವಾಗಿರುತ್ತದೆ.

ಆದಾನಾದಿಕರ್ತೃತ್ವಾದಾತ್ಮಾ ।

---

೧. ಯೇಷಾಮಹಂ ಪ್ರಿಯ ಇತಿ ಪ್ರೇಯಸೀಭಾವವತಾಂ, ಆತ್ಮೇತಿ ಶಾಂತಭಕ್ತಾನಾಂ, ಸುತ ಇತಿ ವಾತ್ಸಲ್ಯಭಾವವತಾಂ, ಸಖೇತಿ ಸಖ್ಯವತಾಂ, ಗುರುರಿತಿ ದಾಸ್ಯವಿಶೇಷವತಾಂ, ಇಷ್ಟಂ ದೈವಮಿತಿ ದಾಸ್ಯಭಾವವತಾಂ ಇತಿ ರಾಗಾನುಗಾಯಾಃ ಸ್ವಾಭಾವಿಕ್ಯಾ ಭಕ್ತೇರುದಾಹರಣಂ ಜ್ಞೇಯಂ । —ವಿಶ್ವನಾಥಃ

ತೇಷಾಂ ಮದನ್ಯಃ ಕೋಽಪಿ ನಾಸ್ತಿ ದೇಹಾದಿಃ । ಪ್ರಿಯೋ ಹಿ ವಿಷಯೋ ಭವತಿ । ವೈಕುಂಠಸ್ತು ಮದ್ರೂಪ ಇತಿ ತತ್ರಾಹಮೇವ ವಿಷಯಃ । ಸಾರೂಪ್ಯಸ್ಯ ಚ ಪ್ರಾಪ್ತತ್ವಾತ್ ದೇಹೋಽಪ್ಯಹಮೇವ । —ವಲ್ಲಭಃ

ಯೇಷಾಂ ನಿರತಿಶಯಪ್ರೀತಿವಿಷಯ ಆತ್ಮಾಽಹಂ । —ವೀರರಾಘವಃ

ಭಕ್ತನನ್ನು ತನ್ನ ಭೃತ್ಯನೆಂದು ಸ್ವೀಕರಿಸಿ ಅವನ ಆಪತ್ತನ್ನು ಕಳೆಯುವುದು ಮುಂತಾದುವನ್ನು ಮಾಡುವುದರಿಂದ ಶ್ರೀಹರಿ ಆತ್ಮಾ ಎನಿಸುತ್ತಾನೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ಷಡ್ವಿಂಶೋಽಧ್ಯಾಯಃ

—೦—

ಅಧ್ಯಾಯ–೨೭

ಅಧ್ಯಾಯಸಾರಾಂಶ

ಸ್ವತಂತ್ರನಾದ ಪರಮಪುರುಷ ನಾರಾಯಣನು ಚೇತನಪ್ರಕೃತಿ ಅಚೇತನಪ್ರಕೃತಿಗಳಿಗಿಂತ ಮೇಲೆನಿಸಿದ್ದು ಸಕಲ ಜೀವಾಂತರ್ಯಾಮಿ, ಸರ್ವಜ್ಞ ಸಮಸ್ತಪ್ರಪಂಚಕ್ಕೆ ಒಳಗೂ ಹೊರಗೂ ನಿಯಾಮಕನಾಗಿದ್ದಾನೆ. ಅವನು ಅವತಾರಗಳಲ್ಲಿಯೂ ಹಾಗೇ. ಅವತಾರಗಳಲ್ಲಿ ಹುಟ್ಟಿದಂತೆ ಕಂಡರೆ ಅದು ಭ್ರಾಂತಿ. ಅವನು ತ್ರಿಗುಣರಹಿತ, ಜೀವ ತ್ರಿಗುಣಬದ್ಧ. ಜೀವರಿಗೆ ಅವನು ಲೀಲೆಯಿಂದ ಸ್ಥೂಲದೇಹ ನಿರ್ಮಾಣ ಮಾಡಿಕೊಡುತ್ತಾನೆ. ತನ್ನ ಸ್ವತಂತ್ರಕರ್ತೃತ್ವವನ್ನೂ ಅವರು ತಮ್ಮಲ್ಲಿ ಭ್ರಮಿಸುವಂತೆ ಮಾಡುತ್ತಾನೆ. ತ್ರಿಗುಣಗಳಲ್ಲಿರುವ ಕರ್ತೃತ್ವವನ್ನೂ ಅವರು ತಮ್ಮಲ್ಲಿ ಆರೋಪಿಸಿಕೊಳ್ಳುವಂತೆ ಮಾಡುತ್ತಾನೆ. ಈ ಕರ್ತೃತ್ವಾಭಿಮಾನದ ಫಲವಾಗಿಯೇ ಜೀವರಿಗೆ ಸುಖದುಃಖ ಭೋಗರೂಪವಾದ ಬಂಧ, ಪರಾಧೀನತೆ. ಎರಡೂ ಪರಮಾತ್ಮನ ಇಚ್ಛೆಯಿಂದಲೇ ಇವೆ. ಆದರೆ ಕರ್ತೃತ್ವಾಭಿಮಾನವನ್ನು ಚೇತನ ಅಚೇತನ ಪ್ರಕೃತಿಗಳ ಮೂಲಕವಾಗಿ, ಸುಖದುಃಖಭೋಕ್ತೃತ್ವವನ್ನು ಮಾತ್ರ ತಾನೇ ಸ್ವತಃ ಜೀವರಿಗೆ ಕೊಡುತ್ತಾನೆ. ಪ್ರಕೃತಿಯು ಪ್ರಳಯಕಾಲದಲ್ಲಿ ಅವ್ಯಕ್ತಳು, ಸೃಷ್ಟಿಯ ಪ್ರಾರಂಭದಲ್ಲಿ ವ್ಯಕ್ತಾವ್ಯಕ್ತಳು. ಸೃಷ್ಟಿಕಾಲದಲ್ಲಿ ವ್ಯಕ್ತಳು. ಹರಿಗೆ ಅಧೀನಳು. ಬ್ರಹ್ಮಾದಿಗಳೆಲ್ಲರಿಗೂ ಒಡತಿ. ಮಹದಾದಿ ಇಪ್ಪತ್ತನಾಲ್ಕು ತತ್ವಗಳ ಜನನಿ. ಕಾಲವೆಂಬ ಇಪ್ಪತ್ತೈದನೆಯ ತತ್ವ ಹರಿಯೇ. ಅವನು ಹೊರಗೆ ವ್ಯಾಪ್ತನಾಗಿಯೂ ಜೀವರೊಳಗೆ ಆಧಾರನಾಗಿಯೂ ರುದ್ರನೊಳಗೆ ಜಗತ್–ಸಂಹಾರಕನಾಗಿಯೂ ನೆಲೆಸಿದ್ದಾನೆ. ಅವನ ಪ್ರೇರಣೆಯಿಂದಲೇ ಪ್ರಕೃತಿ ಪ್ರಪಂಚರೂಪವಾಗಿ ಪರಿಣಮಿಸುತ್ತದೆ. ಅಂದರೆ ಸೂಕ್ಷ್ಮವಾಗಿ ಅನಾದಿಕಾಲದಿಂದಿರುವ ಮಹದಾದಿ ತತ್ವಗಳಿಗೆ ಉಪಚಯ ಉಂಟುಮಾಡುತ್ತದೆ. ಬಳಿಕ ಈ ತತ್ವಗಳನ್ನು ಸೇರಿಸಿ ಶ್ರೀಹರಿ ಬ್ರಹ್ಮಾಂಡ ನಿರ್ಮಾಣಮಾಡುತ್ತಾನೆ. ಬ್ರಹ್ಮಾಂಡವ್ಯಾಪಿಯಾದ 'ವಿರಾಟ್' ಎಂಬ

ಶರೀರದಿಂದ ಬ್ರಹ್ಮನನ್ನು ಹುಟ್ಟಿಸುತ್ತಾನೆ. ಅವನ ಶರೀರದಲ್ಲಿ ಎಲ್ಲ ತತ್ತ್ವಾಭಿಮಾನಿಗಳನ್ನೂ ನಿಲ್ಲಿಸುತ್ತಾನೆ. ಅವರೆಲ್ಲರೂ ಒಮ್ಮೆ ಹೊರಗೆ ಹೋಗಿ ಒಬ್ಬೊಬ್ಬರಾಗಿ ಪ್ರವೇಶಿಸುತ್ತಾರೆ. ಬ್ರಹ್ಮಶರೀರ ಏಳುವುದಿಲ್ಲ. ಕೊನೆಗೆ ಒಂದಂಶದಿಂದ ಹೊರಗೆ ಬಂದಿದ್ದ ಬ್ರಹ್ಮನೇ ಹರಿವಾಯುಗಳೊಂದಿಗೆ ಪ್ರವೇಶಿಸಿದಾಗಲೆ ಶರೀರವೇಳುತ್ತದೆ. ಹರಿವಾಯುಗಳ ಮತ್ತು ಬ್ರಹ್ಮನ ಸಾಮರ್ಥ್ಯ ಲೋಕ್ಕೆ ವಿದಿತವಾಗುತ್ತದೆ.

* * *

ಜೀವನು ಅಸ್ವತಂತ್ರನಾದ್ದರಿಂದ ಜನನ ಮರಣ ಉಳ್ಳವನು. ಪರಮಾತ್ಮ ಸ್ವತಂತ್ರನಾದ್ದರಿಂದ ಜನನಮರಣ ವರ್ಜಿತನೆಂದು ಪರಾಪರತತ್ವ ಸ್ವರೂಪವನ್ನು ಕಪಿಲನು ದೇವಹೂತಿಗೆ ಉಪದೇಶಿಸುತ್ತಾನೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ನ ಜಾತೋ ನ ಮ್ರಿಯೇತಾತ್ಮಾ ಸ ಹಿ ದೇಹಾದ್ಯುಪಾಧಿಭಿಃ ।
ನಿಮಿತ್ತೈರಾತ್ತತದ್ಧರ್ಮಾ ಯಥಾ ಸ್ವಪ್ನೇ ತದೀಕ್ಷಿತಾ ॥ ೪ ॥

ದೇಹಾದಿ ಉಪಾಧಿರೂಪವಾದ ನಿಮಿತ್ತಗಳಿಂದ ಅವುಗಳ ಉತ್ಪತ್ತಿನಾಶಗಳನ್ನು ತನ್ನವೆಂದು ಜೀವ ಭ್ರಾಂತಿಯಿಂದ ತಿಳಿಯುತ್ತಾನೆ. ಸ್ವತಃ ಅವನಿಗೆ ಉತ್ಪತ್ತಿನಾಶಗಳಿಲ್ಲ. ಸ್ವಪ್ನದಲ್ಲಿ ತನಗೆ ವಾಸನಾಮಯ ದೇಹಾದಿಗಳು ಬಂದಾಗ ಅವುಗಳ ಉತ್ಪತ್ತಿನಾಶಗಳನ್ನು ಹೇಗೆ ತನ್ನಲ್ಲಿ ಭ್ರಾಂತಿಯಿಂದ ತಿಳಿಯುತ್ತಾನೋ ಹಾಗೆ. ಅಸ್ವತಂತ್ರನಾದ ಜೀವನಿಗೇ ಹೀಗೆ ಉತ್ಪತ್ತಿನಾಶಗಳು ಕೇವಲ ಭ್ರಾಂತಿಯಿಂದಲೆ ತೋರುತ್ತವೆ ಎಂದ ಮೇಲೆ ಸ್ವತಂತ್ರನಾದ ಪರಮಾತ್ಮನಿಗೆ ಅವತಾರಗಳಲ್ಲಿ ಉತ್ಪತ್ತಿನಾಶಗಳು ಕೇವಲ ಭ್ರಾಂತಿಯಲ್ಲಿ ಕಾಣುವುವು ಎಂದು ಬೇರೆ ಹೇಳಬೇಕೇನು? 'ಸ್ವತಂತ್ರನಾದ ಪರಮಾತ್ಮ ಹುಟ್ಟುವುದಿಲ್ಲ, ಸಾಯುವುದಿಲ್ಲ' ಎಂದು ಶ್ರುತಿ ಪ್ರಸಿದ್ಧವೇ ಇದೆ.

ಬೇರೆ ವ್ಯಾಖ್ಯಾನಕಾರರು ಈ ಶ್ಲೋಕವನ್ನು ಕೈ ಬಿಟ್ಟಿದ್ದಾರೆ. ವೀರರಾಘವ ವ್ಯಾಖ್ಯಾನ ಒಂದು ಮಾತ್ರ ಸ್ವೀಕರಿಸಿದೆ. ಆದರೆ ಈ ಶ್ಲೋಕದೊಂದಿಗೆ ಇದರ ಹಿಂದಿನ ಒಂದು ಶ್ಲೋಕವನ್ನೂ ಜೀವಾತ್ಮಸ್ವರೂಪ ನಿರೂಪಣಪರವೆಂದು ಸ್ವೀಕರಿಸಿದೆ.

ವಸ್ತುತಃ ಈ ಶ್ಲೋಕ ಕೈಮುತ್ಯನ್ಯಾಯದಿಂದ ಪರಮಾತ್ಮ ಅನಾದಿ ಎಂದು ಸಮರ್ಥಿಸಲು ಜೀವಾತ್ಮನ ಅನಾದಿತ್ವವನ್ನು ಹೇಳುತ್ತಿದೆ. ಏಕೆಂದರೆ 'ನ ಜಾತೋ ನ ಮ್ರಿಯೇತಾತ್ಮಾ' ಎಂಬುದು ಹಿಂದಿನ ಶ್ಲೋಕದಲ್ಲಿ ಹೇಳಿದ 'ಅನಾದಿರಾತ್ಮಾ' ಎಂಬುದರದೇ ಪುನರುಕ್ತಿ ಎನ್ನುವುದು ಅನುಚಿತವಾಗುವುದು. 'ಸ ಹಿ' ಎಂದು ಹಿಶಬ್ದವೂ ಪ್ರಸಿದ್ಧಿಯನ್ನು ಹೇಳುತ್ತಿದೆ. ಆದರಿಂದ ಇದು ಒಂದು ಪ್ರಸಿದ್ಧ ಶ್ರುತಿವಾಕ್ಯದ

ಅರ್ಥಾನುವಾದವೆನ್ನಬೇಕು. ಆ ಶ್ರುತಿ ಯಾವುದೆಂದರೆ ಶ್ರೀಮದಾಚಾರ್ಯರು ಹೇಳುವ ' ಸ ಪರಮೋ ನ ಜಾತೋ ನ ಮ್ರಿಯೇತ' ಎಂಬ ಶ್ರುತಿ. ಈ ಶ್ರುತಿಯಲ್ಲಿ 'ಪರಮ' ಎಂಬ ಶಬ್ದವಿರುವುದರಿಂದ ಪರಮಾತ್ಮನ ಅನಾದಿತ್ವವನ್ನೇ ಶ್ರುತಿಯೂ ಭಾಗವತಶ್ಲೋಕವೂ ಹೇಳುತ್ತದೆ ಎನ್ನುವುದು ಸ್ಪಷ್ಟ. ಅದರಿಂದ ವೀರರಾಘವ ವ್ಯಾಖ್ಯಾನವು ಹೇಳುವಂತೆ ಈ ಶ್ಲೋಕ ಜೀವಾತ್ಮಪರವಲ್ಲ.

ಸ ಪರಮೋ ನ ಜಾತೋ ನ ಮ್ರಿಯೇತೇತಿ ಪ್ರಸಿದ್ಧಂ ಹಿ । ದೇಹಾದ್ಯುಪಾಧಿ ಭಿರಾತ್ತತದ್ಧರ್ಮೋ ಜೀವೋಽಪಿ ಸ್ವಪ್ನವದ್ ಭ್ರಾಂತ್ಯೈವ ಜಾಯತೇ ಮ್ರಿಯತೇ ಚ, ಭ್ರಾಂತಿತ್ವಾದ್ ದೇಹಾತ್ಮತ್ವಸ್ಯ, ಕಿಮು ಸರ್ವಜ್ಞತ್ವಸ್ವತಂತ್ರತ್ವಾದಿ ವೈಲಕ್ಷಣ್ಯಯುಕ್ತ ಈಶ್ವರಃ'?

'ಆ ಪರಮಾತ್ಮ ಹುಟ್ಟುವುದಿಲ್ಲ ಸಾಯುವುದಿಲ್ಲ' ಎಂದು ಹೇಳುವ ಶ್ರುತಿ ಪ್ರಸಿದ್ಧವೇ ಇದೆ. ದೇಹಾದಿಉಪಾಧಿಗಳಿಂದ ಅವುಗಳ ಉತ್ಪತ್ತಿನಾಶಾದಿ ಧರ್ಮಗಳನ್ನು ತನ್ನವೆಂದು ಸ್ವೀಕರಿಸುವ ಜೀವನು ಕೂಡ ಸ್ವಪ್ನದಂತೆ ಭ್ರಾಂತಿಯಿಂದಲೆ ಹುಟ್ಟು ಸಾವು ಉಳ್ಳವನೆಂದು ಕಾಣುತ್ತಾನೆ, ಚಾರ್ವಾಕರ ದೇಹಾತ್ಮೈಕ್ಯ ಭ್ರಾಂತಿಯಾದ್ದರಿಂದ, ಎಂದ ಮೇಲೆ, ಸರ್ವಜ್ಞತ್ವ ಸ್ವತಂತ್ರತ್ವ ಮುಂತಾದ ವೈಲಕ್ಷಣ್ಯ ಉಳ್ಳ ಪರಮಾತ್ಮನು ಅವತಾರಗಳಲ್ಲಿ ಹುಟ್ಟಿದಂತೆ ಸತ್ತಂತೆ ಕಾಣುವುದು ಭ್ರಾಂತಿಯಿಂದ ಎಂದು ಬೇರೇನು ಹೇಳಬೇಕು?

* * *

ಪರಮಾತ್ಮನು ತ್ರಿಗುಣರಹಿತ, ಪ್ರಕೃತಿಗಿಂತ ಉತ್ತಮ, ಜೀವನು ತ್ರಿಗುಣಬದ್ಧ ಎಂದು ಕಪಿಲನು ದೇವಹೂತಿಗೆ ಉಪದೇಶಿಸುತ್ತಾನೆ–

ಸ ಏವ ಪ್ರಕೃತಿಂ ಸೂಕ್ಷ್ಮಾಂ ದೇವೀಂ ಗುಣಮಯೀಂ ವಿಭುಃ ।
ಯದೃಚ್ಛಯೈವೋಪಗತಾಮಭ್ಯಪದ್ಯತ ಲೀಲಯಾ ॥ ೫ ॥

ಅವ್ಯಕ್ತಳೂ ಪ್ರಕಾಶಮಾನಳೂ ತ್ರಿಗುಣಗಳಿಗೆ ಅಭಿಮಾನಿಯೂ ಆದ ಲಕ್ಷ್ಮೀದೇವಿ ವಿಭುವಾದ ಶ್ರೀಹರಿಗೆ ಅವನಿಚ್ಛೆಯಿಂದಲೇ ಸದಾ ಸಮೀಪದಲ್ಲಿಯೇ ಇರುತ್ತಾಳೆ. ಶ್ರೀಹರಿ ಲೀಲೆಯಿಂದ ಅವಳನ್ನು ಸೃಷ್ಟಿಕಾರ್ಯದಲ್ಲಿ ಸಹಾಯಕಳನ್ನಾಗಿ ಸ್ವೀಕರಿಸಿದ.

ಇಲ್ಲಿ 'ಯದೃಚ್ಛಯೋಪಗತಾಂ' ಎಂದರೆ 'ಲೀಲಯಾ ಉಪಗತಾಂ ಯದೃಚ್ಛಯಾ ಅಭ್ಯಪದ್ಯತ' ಅವಿದ್ಯೆ ಆವರಣಶಕ್ತಿಯಿಂದ ಜೀವನಿಗೆ ವ್ಯಾಮೋಹಕರವಾಗಿದೆ. ಅದರ ಸಹಾಯದಿಂದ ಜೀವನಿಗೆ ವ್ಯಾಮೋಹ ಉಂಟುಮಾಡುವುದೇ ಈಶ್ವರನ

ಅಥವಾ ಬ್ರಹ್ಮನ ಲೀಲೆ, ಶಕ್ತಿ, ಆ ಶಕ್ತಿಯಿಂದಲೆ ಅವಿದ್ಯೆ ಜೀವನ ಬಳಿಗೆ ಬಂದಿದೆ. ಜೀವ ಯದೃಚ್ಛೆಯಿಂದ ಅದನ್ನು ಸ್ವೀಕರಿಸಿದ್ದಾನೆ. 'ಯದೃಚ್ಛೆ' ಎಂದರೆ ಅದು ದುರ್ನಿರೂಪ್ಯ, ಹೇಗೆ ಏಕೆ ಇತ್ಯಾದಿಯಾಗಿ ಹೇಳಲಾಗದು ಎಂದರ್ಥ ಎಂದು ಶ್ರೀಧರ, ರಾಧಾರಮಣದಾಸ ವ್ಯಾಖ್ಯಾನಗಳು[1] ಹೇಳುತ್ತವೆ.

ಇದನ್ನು ವೀರರಾಘವ ವ್ಯಾಖ್ಯಾನ ನಿರಾಕರಿಸುತ್ತದೆ. [2]ನಿರ್ಗುಣ ಬ್ರಹ್ಮನಿಗೆ ಯಾವ ಶಕ್ತಿಯೂ ಇಲ್ಲ. ಅದರಿಂದ ಬ್ರಹ್ಮನ ಲೀಲೆಯಲ್ಲ. ಈಶ್ವರನು ತನ್ನ ಸ್ವರೂಪವೇ ಆದ ಜೀವನನ್ನು ವ್ಯರ್ಥವಾಗಿ ಅನರ್ಥಕರವಾಗಿ ವ್ಯಾಮೋಹಗೊಳಿಸುವ ಲೀಲೆ ಮಾಡಲಾರ. ಅವನಿಗೆ ಭ್ರಾಂತಿ ಇಲ್ಲದಿರುವುದರಿಂದ ತನಗಿಂತ ಬೇರೆಯಾಗಿ ಜೀವನು ಕಾಣಿಸಲಾರ. ಅದರಿಂದ ಇಲ್ಲಿ ಪರಮಾತ್ಮನಿಗೆ ತನ್ನ ಲೀಲಾರೂಪವಾದ ಜಗತ್ಸೃಷ್ಟಿಗಾಗಿ ಮಾಯೆ ಇದೆ. ಅದು ಯದೃಚ್ಛೆಯಿಂದ ಜೀವನಿಗೆ ಅಂಟಿಕೊಳ್ಳುತ್ತದೆ, ಅಂದರೆ ಅದರ ಸಂಬಂಧ ಸ್ವಾಭಾವಿಕವಲ್ಲ ಎಂದರ್ಥ. ಅಥವಾ ಯಾದೃಚ್ಛಿಕ ಸಂಕಲ್ಪದಿಂದ ಆಗುತ್ತದೆ ಎಂದರ್ಥ ಎಂದು ವೀರರಾಘವವ್ಯಾಖ್ಯಾನ ಹೇಳುತ್ತದೆ.

---

೧. ರಜಃಸತ್ತ್ವಾನಭಿಭೂತಂ ತಮ ಆವರಣಶಕ್ತಿಃ । ತಮಃಸತ್ತ್ವಾನಭಿಭೂತಂ ರಜೋ ವಿಕ್ಷೇಪಶಕ್ತಿಃ । ಸ ಏಷ ಜೀವಾತ್ಮಾ ಲೀಲಯಾ ಜೀವಮೋಹನರೂಪಯಾ ವ್ಯಾಮೋಹನಶಕ್ತ್ಯಾ। ಯದೃಚ್ಛಯೇತಿ ತತ್ಸಂಬಂಧಸ್ಯ ದುರ್ನಿರೂಪ್ಯತ್ವಂ ದರ್ಶಯತಿ । ಅಭ್ಯಪದ್ಯತ ತಾದಾತ್ಮ್ಯಾಧ್ಯಾಸೇನ ಪ್ರಾಪ । —ರಾಧಾರಮಣದಾಸಃ

ಆವರಣವಿಕ್ಷೇಪಶಕ್ತಿಭೇದೇನ ಪ್ರಕೃತಿರ್ದ್ವಿವಿಧಾ । ತತ್ರಾವರಣಶಕ್ತ್ಯಾಸ್ಯೈವ ಜೀವೋಪಾಧಿರವಿದ್ಯಾ । ವಿಕ್ಷೇಪಶಕ್ತ್ಯಾಸ್ಯೈವ ಮಾಯಾ ಪಾರಮೇಶ್ವರೀ । ಪುರುಷಶ್ಚ ಜೀವೇಶ್ವರರೂಪೇಣ ದ್ವಿವಿಧಃ । ತತ್ರ ಯಃ ಪ್ರಕೃತ್ಯವಿವೇಕೇನ ಸಂಸರತಿ ಸ ಜೀವಃ । ಯಸ್ತು ಪ್ರಕೃತಿಂ ವಶೀಕೃತ್ಯ ವಿಶ್ವಸೃಷ್ಟ್ಯಾದಿ ಕರೋತಿ ಸ ಈಶ್ವರಃ । ಸ ಏಷ ಜೀವಾತ್ಮಾ ಸೂಕ್ಷ್ಮಾಮವ್ಯಕ್ತಾಂ ದೇವೀಂ ದೇವಸ್ಯ ವಿಷ್ಣೋಃ ಶಕ್ತಿಂ ಲೀಲಯೋಪಗತಾಂ ಯದೃಚ್ಛಯೈವಾಭ್ಯಪದ್ಯತ । —ಶ್ರೀಧರಃ

೨. ಈಶ್ವರಃ ಸರ್ವಜ್ಞಶ್ಚೇತ್ ಸ್ವಾನರ್ಥಜ್ಞಃ ಸ್ವಾನರ್ಥಸಂಸಾರಂ ನ ಪ್ರವರ್ತಯತಿ । ವಿವೇಕನಿಷ್ಪಾದನೇನ ಸ್ವಾನರ್ಥಪರಿಹಾರಾಯ ಜಗತ್ ಸೃಜತಿ ಚೇತ್ತಥಾಪಿ ಲೀಲಾತ್ವಮನುಪಪನ್ನಂ । ನ ಹಿ ವ್ಯಾಧ್ಯುಪಹತಸ್ಯೌಷಧಾನಯನಪ್ರವೃತ್ತಿರ್ಲೀಲಾ ಭವತಿ । ಸ್ವಯಮಭ್ರಾಮ್ಯನ್ ಈಶ್ವರೋ ಲೀಲಯಾ ಪರಾನ್ ವ್ಯಾಮೋಹಯತೀತಿ ಚೇನ್ನ । ತ್ವನ್ಮತೇ ಭ್ರಾಂತ್ಯಾದಿನಾ ಪರದರ್ಶನಾಯೋಗಾತ್ ಪರದರ್ಶನೇ ತೇಷಾಂ ಸ್ವಾನನ್ಯತ್ವಜ್ಞಾನಾಚ್ಚ । ನಿರ್ವಿಶೇಷಸನ್ಮಾತ್ರಸ್ಯ ಬ್ರಹ್ಮಣೋ ನಿರ್ವಿಶೇಷತ್ವಾದೇವ ನ ಲೀಲಾಸಂಭವಃ । ತಸ್ಮಾತ್ ಲೀಲಯಾ ಭಗವಲ್ಲೀಲಾರಸನಿರ್ವೃತ್ತ್ಯರ್ಥಂ ಯದೃಚ್ಛಯಾ ಯಾದೃಚ್ಛಿಕಭಗವತ್ಸಂಕಲ್ಪೇನೋಪಗತಾಂ ಪ್ರಾಪ್ತಾಮಿತ್ಯರ್ಥಃ । —ವೀರರಾಘವಃ

ಇದೂ ಸರಿಯಲ್ಲ. ಭಗವಂತನ 'ಲೀಲಯಾ' ಲೀಲಾರೂಪಪ್ರಯೋಜನಕ್ಕಾಗಿ ಭಗವದಿಚ್ಛೆಯಿಂದಲೆ ಪ್ರಾಪ್ತವಾದ ಪ್ರಕೃತಿಯನ್ನು ಜೀವನು ಕಾಣುತ್ತಾನೆ ಎನ್ನುವುದು ಅಸಂಗತವಾಗುತ್ತದೆ. ಏಕೆಂದರೆ ಪ್ರಕೃತಿ ಭಗವಂತನಿಗೆ ಪ್ರಾಪ್ತವೇ? ಜೀವನಿಗೆ ಪ್ರಾಪ್ತವೆ? ಭಗವಂತ ಸರ್ವವ್ಯಾಪ್ತನಾದ್ದರಿಂದ ಅವನಿಗೆ ಪ್ರಕೃತಿ ಪ್ರಾಪ್ತವಾಗುತ್ತದೆ ಎನ್ನಲಾಗದು. ಸದಾ ಅವನ ಬಳಿಯೇ ಇದೆ ಎನ್ನಬೇಕು. ಮತ್ತು ಭಗವಂತನಿಗೆ ಪ್ರಾಪ್ತವಾದ ಪ್ರಕೃತಿಯನ್ನು ಜೀವನು ಕಾಣಲೂ ಸಾಧ್ಯವಿಲ್ಲ. ಜೀವನಿಗೆ ಪ್ರಾಪ್ತ ಎನ್ನುವುದೂ ಕೂಡುವುದಿಲ್ಲ. ಅನಾದಿಕಾಲದಿಂದಲೂ ಅವನು ಪ್ರಕೃತಿಯಿಂದ ಬದ್ಧನೇ ಆಗಿದ್ದಾನೆ. ಅದರಿಂದ 'ಉಪಗತಾಂ' ಉಪ–ಸಮೀಪದಲ್ಲಿಗತಾಂ–ಅನಾದಿಕಾಲದಿಂದ ಇರುವಂಥ ಬಂಧಕಪ್ರಕೃತಿಯನ್ನೇ ಜೀವನು ಕಾಣುತ್ತಾನೆ ಎನ್ನಬೇಕು. ಆದರೆ ಈ ಶ್ಲೋಕ ಜೀವನ ಬಗ್ಗೆ ಹೇಳಲು ಹೊರಟಿಲ್ಲ. ಪರಮಾತ್ಮನ ಬಗ್ಗೆ ಹೇಳುತ್ತಿದೆ. ಅದರಿಂದ ಪರಮಾತ್ಮನ ಇಚ್ಛೆಯಿಂದ ಪರಮಾತ್ಮನ ಬಳಿಯಲ್ಲಿಯೇ ಸದಾ ಇರುವ ಪ್ರಕೃತಿಯನ್ನು ಪರಮಾತ್ಮನು ಲೀಲೆಯಿಂದ ಸೃಷ್ಟಿಗೆ ಪ್ರೇರಿಸಿದ ಎಂಬುದೇ 'ಉಪಗತಾಂ ಅಭ್ಯಪದ್ಯತ' ಎಂಬುದರ ಅಭಿಪ್ರಾಯ ಎನ್ನಬೇಕು.

ಉಪಗತಾಂ ಸಮೀಪಗತಾಂ ।

'ಉಪಗತಾಂ' ಎಂದರೆ ಸಮೀಪದಲ್ಲಿಯೇ ಸದಾ ಇರುವ' ಎಂದರ್ಥ.

* * *

ಲೀಲೆಯಿಂದಲೇ ಅಂದರೆ, ತನ್ನ ಪ್ರಯೋಜನದ ಉದ್ದೇಶವಿಲ್ಲದೆಯೇ ಭಗವಂತ ಚೇತನ ಅಚೇತನ ಪ್ರಕೃತಿಗಳನ್ನು ಸೃಷ್ಟಿಗೆ ಪ್ರೇರಿಸಿ ಜೀವರಿಗೆ ಸ್ಥೂಲದೇಹ ನಿರ್ಮಾಣ ಮಾಡಿಕೊಟ್ಟನೆಂದು ಕಪಿಲ ದೇವಹೂತಿಗೆ ಉಪದೇಶಿಸುತ್ತಾನೆ.

ಗುಣೈರ್ವಿಚಿತ್ರಾಃ ಸೃಜತೀಂ ಸರೂಪಾಃ ಪ್ರಕೃತಿಂ ಪ್ರಜಾಃ ।
ವಿಲೋಕ್ಯ ಮುಮುಹೇ ಸದ್ಯಃ ಸ ಇಹ ಜ್ಞಾನಗೂಹಯಾ ॥ ೬ ॥

ಸತ್ವಾದಿಗುಣಗಳಿಂದ ಸಾತ್ವಿಕಾದಿ ನಾನಾವಿಧವಸ್ತುಗಳನ್ನು ಪ್ರಕೃತಿ ನಿರ್ಮಿಸಿದ್ದನ್ನು ನೋಡಿ ಶ್ರೀಹರಿ ಜೀವನ ಸ್ವರೂಪಜ್ಞಾನವನ್ನು ಆವರಿಸುವಂಥ ಸ್ಥೂಲದೇಹದಿಂದ, ಅದನ್ನು ಆತ ಹೊಂದಿದೊಡನೆ, ಆತನಿಗೆ ಕರ್ತೃತ್ವಾದ್ಯಭಿಮಾನವನ್ನು ಉಂಟು ಮಾಡಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಮುಮುಹೇ' ಎಂದರೆ ಜೀವನು ಪ್ರಕೃತಿಯನ್ನೇ ಅಂದರೆ ಅದರಿಂದಾದ ಶರೀರಾದಿಗಳನ್ನೇ ತಾನೆಂದು ತಿಳಿದ, ತನ್ನ ಸ್ವರೂಪವನ್ನೇ ಮರೆತ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ದೇಹಾತ್ಮೈಕ್ಯಭ್ರಮ ವಾಸ್ತವದಲ್ಲಿ

ಯಾರಿಗೂ ಇರುವುದಿಲ್ಲ. ನನ್ನ ದೇಹ ಎನ್ನುತ್ತಾರೆ ಹೊರತು ನಾನೇ ದೇಹವೆಂದು ಯಾರೂ ಹೇಳುವುದಿಲ್ಲ. ಮತ್ತು ಹಿಂದಿನ ಶ್ಲೋಕದಂತೆ ಈ ಶ್ಲೋಕವೂ ಪರಮಾತ್ಮಪರ. ಅದರಿಂದ 'ಮುಮುಹೇ' ಎಂದರೆ 'ಮೋಹಯಾಮಾಸ' ಜೀವರಿಗೆ ಪರಮಾತ್ಮನು 'ಈ ದೇಹೇಂದ್ರಿಯಾದಿಗಳೆಲ್ಲ ನನ್ನವು, ನಾನೇ ಸ್ವತಂತ್ರವಾಗಿ ಇವುಗಳ ಮೂಲಕ ಎಲ್ಲ ಕಾರ್ಯಗಳನ್ನೂ ಮಾಡುತ್ತೇನೆ' ಎನ್ನುವ ಮಿಥ್ಯಾಭಿಮಾನವನ್ನು ಉಂಟುಮಾಡುತ್ತಾನೆ ಎಂದರ್ಥ ಹೇಳಬೇಕು.

'ಮೋಹಯಾಮಾಸ' ಎಂದು ಪ್ರೇರಣಾರ್ಥದ ಣಿಚ್ ಪ್ರತ್ಯಯವನ್ನು ಇಲ್ಲಿ ಪ್ರಯೋಗ ಮಾಡದಿರುವುದಕ್ಕೆ ಒಂದು ಉದ್ದೇಶವಿದೆ. ಏನೆಂದರೆ ಜೀವ ಈ ಮಿಥ್ಯಾಭಿಮಾನ ತಾಳುತ್ತಾನೆ. ಏಕೆಂದರೆ ಅವನು ಅಸ್ವತಂತ್ರ. ಮಿಥ್ಯಾಭಿಮಾನ ತಾಳುವದರಲ್ಲಿಯೂ ಅಸ್ವತಂತ್ರ. ಭಗವಂತ ಆ ಅಭಿಮಾನವನ್ನು ಕೊಡುತ್ತಾನೆ. ಅವನು ಮಾತ್ರ ಯಾರಿಗೂ ಅಧೀನನಾಗಿ ಆ ಕಾರ್ಯ ಮಾಡುತ್ತಿಲ್ಲ. ಅವನು ಪರಮಸ್ವತಂತ್ರ. ಮೋಹಗೊಳ್ಳುವವನು ಅಸ್ವತಂತ್ರ ಜೀವನಾದರೂ ಮೋಹಗೊಳಿಸುವವನು ಪರಮಸ್ವತಂತ್ರನೆಂದು ತಿಳಿಸುವುದಕ್ಕಾಗಿ 'ಅವನು ತಾನೇ ಮೋಹಗೊಳ್ಳುವನೆ'ಂದು ಹೇಳಿದೆ. 'ಮೋಹಗೊಳಿಸುವನೆ'ಂದು ಪ್ರೇರಣಾರ್ಥಕ ಣಿಚ್ ಪ್ರತ್ಯಯವನ್ನು ಪ್ರಯೋಗಿಸಿಲ್ಲ.

ಮುಮುಹೇ ಮೋಹಯಾಮಾಸ । 'ತದೇತನ್ಮೇ ವಿಜಾನೀಹಿ' 'ಕೃತ್ವಾ ವಿವಾಹಂ' ಇತ್ಯಾದಿವತ್ ।

ಯತ್ರ ಕಾರಯಿತಾಽತೀವ ಸ್ವತಂತ್ರಸ್ತತ್ರ ಕರ್ತೃತಾ ।
ಪ್ರೋಚ್ಯತೇ ತು ಯಥಾ ಬ್ರಹ್ಮ ತ್ವಷ್ಟಂ ಸಂಸಾರಭಾಗಿತಿ ॥

ಇತಿ ಚ ॥

ಲಯೇ ವಾಽಪ್ಯಥವಾ ಸೃಷ್ಟಾವಂತರಾಲೇಽಪಿ ನ ಕ್ವಚಿತ್ ।
ಪ್ರಕೃತ್ಯಾ ರಹಿತಂ ಬ್ರಹ್ಮ ಕದಾಚಿದವತಿಷ್ಠತೇ ॥

ಇತಿ ಕಾಪಿಲೇಯೇ ॥

'ಮುಮುಹೇ' ಎಂದರೆ ಇಲ್ಲಿ ಮೋಹಗೊಳಿಸಿದನೆಂದರ್ಥ. ಇಂಥ ಪ್ರಯೋಗಗಳಿಗೆ ಉದಾಹರಣೆಗಳು 'ತದೇತನ್ಮೇ ವಿಜಾನೀಹಿ' ಎಂದರೆ ಇದನ್ನು ನನಗೆ ತಿಳಿಸಿ ಕೊಡೆಂದರ್ಥ ಹೊರತು ತಿಳಿ ಎಂದಲ್ಲ. ಕೃತ್ವಾ ವಿವಾಹಂ' ಎಂದರೆ ಪಾಂಡವರು ಅಭಿಮನ್ಯುವಿಗೆ ವಿವಾಹ ಮಾಡಿಸಿ ಎಂದರ್ಥ ಹೊರತು ಮಾಡಿಕೊಂಡು ಎಂದಲ್ಲ. ಇತ್ಯಾದಿ.

ಒಂದು ಕ್ರಿಯೆಯನ್ನು ಮಾಡಿಸುವವನು ಅತ್ಯಂತ ಸ್ವತಂತ್ರನಾಗಿದ್ದರೆ ಆಗ ಅವನು ಮಾಡಿಸುತ್ತಿದ್ದರೂ ಅವನೇ ಮಾಡುತ್ತಾನೆ ಎನ್ನುತ್ತಾರೆ. ಇದಕ್ಕೆ ಉದಾಹರಣೆ– ಭಗವಂತ ಮೋಹಗೊಳಿಸುತ್ತಾನೆ, ಸಂಸಾರಭಾಗಿಯಾಗುತ್ತಾನೆ ಇತ್ಯಾದಿ, ಎಂದೂ ಹೇಳಿದೆ.

('ಯದೃಚ್ಛಯೈವೋಪಗತಾಂ' ಎಂಬಲ್ಲಿ ಪ್ರಕೃತಿ ಅಕಸ್ಮಾತ್ ಎಲ್ಲಿಂದಲೋ ಹೇಗೋ ಭಗವಂತನಿಗೆ ಪ್ರಾಪ್ತಳಾದಳೆಂದು ಅರ್ಥವಲ್ಲ.) ಭಗವಂತನ ಇಚ್ಛೆಯಿಂದ ಪ್ರಕೃತಿ ಸದಾ ಅವನ ಬಳಿಯೇ ಇರುತ್ತಾಳೆ ಎಂದೇ ಅರ್ಥ. ಏಕೆಂದರೆ ಪ್ರಳಯಕಾಲದಲ್ಲಾಗಲಿ ಸೃಷ್ಟಿಕಾಲದಲ್ಲಾಗಲಿ ಸ್ಥಿತಿಕಾಲದಲ್ಲಾಗಲೀ ಎಂದೂ ಅವನು ಪ್ರಕೃತಿರಹಿತನಾಗಿ ಇರುವುದೇ ಇಲ್ಲ ಎಂದು ಕಾಪಿಲೇಯಗ್ರಂಥದಲ್ಲಿ ಇದೆ.

* * *

ಪರಮಾತ್ಮನು ಜೀವರನ್ನು ಮೋಹಗೊಳಿಸುವುದರಿಂದ ಪರಮಾತ್ಮನಲ್ಲಿ ಮಾತ್ರ ಇರುವ ಸ್ವತಂತ್ರಕರ್ತೃತ್ವವನ್ನು ಜೀವರು ತಮ್ಮಲ್ಲಿರುವುದೆಂದು ಭ್ರಮಿಸುತ್ತಾರೆ ಎಂದು ಕಪಿಲ ದೇವಹೂತಿಗೆ ಉಪದೇಶಿಸುತ್ತಾನೆ–

ಏವಂ ಪರಾಭಿಧ್ಯಾನೇನ ಕರ್ತೃತ್ವಂ ಪ್ರಕೃತೇಃ ಪುಮಾನ್ ।
ಕರ್ಮಸು ಕ್ರಿಯಮಾಣೇಷು ಗುಣೈರಾತ್ಮನಿ ಮನ್ಯತೇ ॥ ೭ ॥

ಹೀಗೆ ಪರಮಾತ್ಮನ ಇಚ್ಛೆಯಿಂದ ಜೀವನು ಮೋಹಗೊಳ್ಳುವ ಪ್ರಯುಕ್ತ ಪ್ರಕೃತಿಯ ಗುಣಗಳಿಂದ ಜೀವರು ಕರ್ಮ ಮಾಡುವಾಗ ಅವುಗಳಲ್ಲಿರುವ ಕರ್ತೃತ್ವವನ್ನು ಸ್ವತಂತ್ರವಾಗಿ ತಮ್ಮಲ್ಲಿಯೇ ಇರುವುದೆಂದು ತಿಳಿಯುತ್ತಾರೆ.

ಇಲ್ಲಿ ಪರಾಭಿಧ್ಯಾನವೆಂದರೆ ಪ್ರಕೃತಿ, ಪ್ರಕೃತಿಜನ್ಯವಾದ ಶರೀರಾದಿಗಳನ್ನು ತಾನೇ ಎಂದು ತಿಳಿಯುವುದೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ಸರಿಯಲ್ಲ. ದೇಹಾತ್ಮೈಕ್ಯಭ್ರಮ ಯಾರಿಗೂ ಇಲ್ಲದಿರುವುದರಿಂದ ಪರ ಎಂದರೆ ಪರಮಾತ್ಮ. ಅಭಿಧ್ಯಾನ ಅವನ ಇಚ್ಛೆ. ಪರಮಾತ್ಮನ ಇಚ್ಛೆಯಂತೆ ಜೀವ ಪ್ರಕೃತಿಯ ಕರ್ತೃತ್ವವನ್ನು ತನ್ನಲ್ಲಿ ಆರೋಪಿಸಿಕೊಂಡು ಅಹಂಕಾರಪಡುತ್ತಾನೆ ಎಂದರ್ಥ ಹೇಳಬೇಕು.

[೧]ಶುಕದೇವ ವ್ಯಾಖ್ಯಾನದಲ್ಲಿ ಪ್ರಕೃತಿಯ ಗುಣಗಳಿಂದ ತಾನು ಮಾಡುವ ಕರ್ಮಗಳ ಕರ್ತೃತ್ವವನ್ನು ಹಾಗೇ ಭೋಕ್ತೃತ್ವವನ್ನು 'ಆತ್ಮನಿ' ಎಂದರೆ ದೇಹಇಂದ್ರಿಯಾದಿಗಳಲ್ಲಿ

---

೧. ಕರ್ಮಸು ಆತ್ಮನಾ ಕರ್ತ್ರಾ ಕ್ರಿಯಮಾಣೇಷು, ಪರಾಭಿಧ್ಯಾನೇನ ದೇಹಾದ್ಯಾತ್ಮಾಭಿಮಾನೇನ ಹೇತುನಾ ಆತ್ಮನಿ ದೇಹೇಂದ್ರಿಯಾದಿರೂಪೇ ಕರ್ತೃತ್ವಂ ಭೋಕ್ತೃತ್ವಂ ಚ ಮನ್ಯತೇ । ಚೇತನಧರ್ಮಮಚೇತನೇ ಮನ್ಯತ ಇತ್ಯರ್ಥಃ ।

–ಶುಕದೇವಃ

ಆರೋಪಿಸುತ್ತಾನೆ ಎಂದು ಅನ್ವಯ ಹೇಳಲಾಗಿದೆ. ಪರಾಭಿಧ್ಯಾನ, ಅಂದರೆ ದೇಹಾತ್ಮಾಭಿಮಾನ ಇದಕ್ಕೆ ಕಾರಣ ಎಂದೂ ಹೇಳಲಾಗಿದೆ. ಇದು ಸರಿಯಲ್ಲ, ಭಗವದ್ಗೀತೆಯಲ್ಲಿ (೩. ೨೭)

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥

ಎಂದು ಸ್ಪಷ್ಟವಾಗಿ ಗುಣಕರ್ತೃತ್ವವನ್ನು ಅಜ್ಞಾನದಿಂದ ತನ್ನಲ್ಲಿ ಜೀವ ಆರೋಪಿಸಿಕೊಳ್ಳುವುದು ಉಕ್ತವಾಗಿದೆ. ಭಾಗವತಶ್ಲೋಕ ಅದರ ಛಾಯೆಯಂತಿದೆ.

ಹಾಗಾದರೆ 'ಕರ್ತಾ ಶಾಸ್ತ್ರಾರ್ಥವತ್ತ್ವಾತ್' ಇತ್ಯಾದಿಸೂತ್ರಗಳಲ್ಲಿ ಜೀವಕರ್ತೃತ್ವ ಸಿದ್ಧವೇ ಆಗಿರುವಾಗ ಜಡದಲ್ಲಿ ಕರ್ತೃತ್ವವಿಲ್ಲದಿರುವಾಗ ಜಡವಾದ ಗುಣಗಳಲ್ಲಿರುವ ಕರ್ತೃತ್ವವು ಜೀವನಲ್ಲಿ ಆರೋಪಿತ ಹೇಗೆ? ಎಂದರೆ ಜೀವನಲ್ಲಿಯೂ ಅಸ್ವತಂತ್ರಕರ್ತೃತ್ವವಿದೆ. ಸ್ವತಂತ್ರಕರ್ತೃತ್ವವಿಲ್ಲ. ಅದನ್ನು ಆರೋಪಿಸಿಕೊಳ್ಳುತ್ತಾನೆ. ಮತ್ತು ಜಡದಲ್ಲಿ ವಿಕಾರರೂಪ ಕರ್ತೃತ್ವವಿದೆ. ಜಡವಾದ ತ್ರಿಗುಣಾತ್ಮಕ ಮನಸ್ಸಿನಲ್ಲಿ ಜ್ಞಾನ ಇಚ್ಛಾ ಕೃತಿರೂಪವಾದ ಕರ್ತೃತ್ವ ಉತ್ಪನ್ನವಾಗುತ್ತದೆ. ಮಣ್ಣಿನಲ್ಲಿ ಗಡಿಗೆಯ ಆಕಾರ ಬರುವಂತೆ. ಇದೇ ವಿಕಾರರೂಪಕರ್ತೃತ್ವ. ಅಭಿಮಾನಾತಿರೇಕದಿಂದ ಈ ಕರ್ತೃತ್ವವನ್ನು ಆತ್ಮನು ತನ್ನದೆಂದು ತಿಳಿಯುತ್ತಾನೆ. ಅದರಿಂದ ಭಾಗವತಶ್ಲೋಕಕ್ಕೆ ಹೀಗೆ ಅರ್ಥ–

ಏವಂ ಪರಾಭಿಧ್ಯಾನೇನ ಪರಮಾತ್ಮೇಚ್ಛಯಾ ಪ್ರಕೃತೇಃ ಕರ್ತೃತ್ವಂ ಜೀವ ಆತ್ಮನಿ ಮನ್ಯತೇ ।

ಹೀಗೆ ಪರಾಭಿಧ್ಯಾನದಿಂದ ಅಂದರೆ ಪರಮಾತ್ಮನ ಇಚ್ಛೆಯಿಂದ ಪ್ರಕೃತಿಯಲ್ಲಿರುವ ಅದರ ವಿಕಾರರೂಪವಾದ ಕರ್ತೃತ್ವವನ್ನು ಸ್ವತಂತ್ರವಾಗಿ ತನ್ನದು ಎಂದು ತನ್ನಲ್ಲಿ ಆರೋಪಿಸಿಕೊಳ್ಳುತ್ತಾನೆ.

* * *

ಗುಣಕರ್ತೃತ್ವವನ್ನು ಜೀವನು ತನ್ನಲ್ಲಿ ಆರೋಪಿಸಿಕೊಳ್ಳುವುದರಿಂದಲೇ ಅವನಿಗೆ ಸುಖದುಃಖ ಭೋಗರೂಪ ಬಂಧವಿದೆ. ಮತ್ತು ಪರಾಧೀನತೆಯೂ ಇದೆ. ಎರಡೂ ಪರಮಾತ್ಮನ ಇಚ್ಛೆಯಿಂದಲೇ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ತದಸ್ಯ ಸಂಸೃತಿರ್ಬಂಧಃ ಪಾರತಂತ್ರ್ಯಂ ಚ ತತ್ಕೃತಮ್ ।
ಭವತ್ಯಕರ್ತುರೀಶಸ್ಯ ಸಾಕ್ಷಿಣೋ ನಿರ್ವೃತಾತ್ಮನಃ ॥ ೮ ॥

ಕರ್ತೃತ್ವಾಭಿಮಾನದಿಂದಲೇ ಜೀವನಿಗೆ ಸಂಸಾರಬಂಧ. ಪರಾಧೀನತೆಯೂ ಕೂಡ ಅದರಿಂದಲೇ. ಎರಡೂ ಕೂಡ ಜೀವನ ಪುಣ್ಯಪಾಪಾದಿಗಳನ್ನು ಸಾಕ್ಷಾತ್ ನೋಡುತ್ತಿರುವ, ಆನಂದಪೂರ್ಣನಾದ, ಕ್ಲೇಶವಿಲ್ಲದೆ ಎಲ್ಲ ಕಾರ್ಯ ನಡೆಸುವ ಪರಮಾತ್ಮನಿಂದಲೇ ಜೀವನಿಗೆ ಇವೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಅಕರ್ತೃ, ಈಶ , ಸಾಕ್ಷಿ, ನಿರ್ವೃತಾತ್ಮ' ಈ ನಾಲ್ಕು ವಿಶೇಷಣಗಳನ್ನೂ ಜೀವನಿಗೇ ಅನ್ವಯಿಸಿದ್ದಾರೆ. ಈಶಾಭಿನ್ನನಾದ್ದರಿಂದ 'ಈಶ'ನಾದರೂ ದೇಹಾತ್ಮಾಭಿಮಾನಪ್ರಯುಕ್ತ ಕರ್ಮಬಂಧವಿರುವುದರಿಂದ ಭೋಗದಲ್ಲಿ ಕರ್ಮಾಧೀನನಾಗಿದ್ದಾನೆ ಎಂದೂ ಹೇಳಿದ್ದಾರೆ. ಈಶ ಎಂದರೆ ಮುಕ್ತ್ಯವಸ್ಥೆಯಲ್ಲಿ ಕರ್ಮವಶನಾಗದಿದ್ದವನು ಜೀವ. ಸಂಸಾರದಲ್ಲಿ ಅವನಿಗೆ ಕರ್ಮದಿಂದ ಸ್ವಾಭಾವಿಕವಾದ ಅಪಹತ ಪಾಪ್ಮತ್ವಾದಿ ಗುಣಾಷ್ಟಕವು ತಿರೋಹಿತವಾಗಿರುವುರಿಂದ ಪಾರತಂತ್ರ್ಯ ಎಂದು ವೀರರಾಘವವ್ಯಾಖ್ಯಾನ.

ವಸ್ತುತಃ ಅಕರ್ತೃ ಈಶ ಮುಂತಾದ ವಿಶೇಷಣಗಳು ಮುಖ್ಯವಾಗಿ ಪರಮಾತ್ಮನಿಗೇ ಯೋಗ್ಯ. ಅಂಥ ಪರಮಾತ್ಮನ ಇಚ್ಛೆಯಿಂದ ಜೀವನಿಗೆ ಪಾರತಂತ್ರ್ಯ ಅಸ್ವಾಭಾವಿಕವಾಗಿ ಬಂದಿದೆ. ಎಂದು ಭಾಗವತಶ್ಲೋಕದ ಅಭಿಪ್ರಾಯ. ಜೀವನಿಗೆ ಹರಿಗುರುಗಳ ಅಧೀನವಾಗಿರುವುದೆಂಬ ಪಾರತಂತ್ರ್ಯ ಸ್ವಾಭಾವಿಕವೇ. ಅದು ಮುಕ್ತಿಯಲ್ಲಿಯೂ ಇದೆ. ಅಸ್ವಾಭಾವಿಕ ಪಾರತಂತ್ರ್ಯವೆಂದರೆ, ಸಂಸಾರದಲ್ಲಿ ತನಗಿಂತ ಕಡಿಮೆಯಾದವರಿಗೂ ಜೀವ ಅಧೀನನಾಗಿರುತ್ತಾನೆ. ಅದು ಪರಮಾತ್ಮನ ಇಚ್ಛೆಯಿಂದ ಇದೆ. ಮುಕ್ತಿಯಲ್ಲಿ ಪರಮಾತ್ಮನ ಇಚ್ಛೆಯಿಂದಲೆ ತೊಲಗುತ್ತದೆ.

ಸರ್ವಕರ್ತನಾದ ಪರಮಾತ್ಮನಲ್ಲಿ 'ಅಕರ್ತೃ' ಎಂಬ ವಿಶೇಷಣ ಹೇಗೆ ಮುಖ್ಯವಾಗಿ ಅನ್ವಯಿಸುತ್ತದೆ ಎಂದರೆ ಲೋಕದಲ್ಲಿ ಎಲ್ಲೆಡೆ ಕರ್ತೃತ್ವವೆಂಬುದು ಕ್ಲೇಶಯುಕ್ತವೇ ಆಗಿರುತ್ತದೆ. ಕಾರ್ಯಮಾಡುವಾಗ ಎಲ್ಲರೂ ಕ್ಲೇಶದಿಂದಲೇ ಮಾಡುತ್ತಾರೆ. ಪರಮಾತ್ಮನಲ್ಲಿ ಇಂತಹ ಕರ್ತೃತ್ವವಿಲ್ಲ ಮತ್ತು, ಅವನಿಗೆ ಉತ್ಪತ್ತಿ ಇಲ್ಲದ್ದರಿಂದ ಅವನ ಹುಟ್ಟಿಗೆ ಒಬ್ಬ ಕರ್ತನಿಲ್ಲ.

ವಿಷ್ಣೋಃ ಸುರಾಣಾಂ ಗುರೂಣಾಂ ನಿತ್ಯಾ ಜೀವಸ್ಯ ತಂತ್ರತಾ ।
ಯತ್ತು ತಸ್ಯಾನ್ಯತಂತ್ರತ್ವಂ ತಜ್ಜ್ಞಾನಾದ್ ವಿನಿವರ್ತತೇ ॥ ಇತಿ ಚ ।

ಅಕರ್ತುರೀಶಸ್ಯ ಸಕಾಶಾತ್ ।

೧. ಯದ್ಯಪ್ಯಹಂಕಾರಗತಮೇವ ಕರ್ತೃತ್ವಾದಿಕಂ ಭೋಕ್ತೃತ್ವಂ ಚ । ತಥಾಪಿ ವಿಕಾರಸ್ಯ ಜಡಾವಸಾನತ್ವಾತ್ ಉಪಾಧಿಪ್ರಾಧಾನ್ಯಂ । ಭೋಗಸ್ಯ ಚಿದವಸಾನತ್ವಾದುಪಹಿತಪ್ರಾಧಾನ್ಯಮಿತಿ । —ಶ್ರೀಧರಃ

ಅಕ್ಲಿಷ್ಟತ್ವಾದಕರ್ತಾಸಾವಕಾರ್ಯತ್ವಾದಥಾಪಿ ವಾ ॥ ಇತಿ ಚ ।
ಏಷ ಕರ್ತಾ ನ ಕ್ರಿಯತೇ ಕಾರಣಂ ಚ ಜಗತ್ಪ್ರಭುಃ ॥
ಇತಿ ಭಾರತೇ ।

ವಿಷ್ಣುವಿಗೂ ದೇವತೆಗಳಿಗೂ ಗುರುಗಳಿಗೂ ಜೀವನು ಅಧೀನನಾಗಿರುವುದು ಸ್ವಾಭಾವಿಕ. ನಿತ್ಯ. ಅನ್ಯರ ಅಧೀನನಾಗಿರುವುದು ಮಾತ್ರ ಅಸ್ವಾಭಾವಿಕವಾಗಿದ್ದು ವಿಷ್ಣು ಮುಂತಾದವರ ತತ್ವಜ್ಞಾನದಿಂದ ನಿವೃತ್ತವಾಗುತ್ತದೆ ಎಂದೂ ಹೇಳಿದೆ.

'ಅಕರ್ತುಃ ಈಶಸ್ಯ' ಎಂದು ಮುಂತಾಗಿ ಪರಮಾತ್ಮನಿಗೇ ವಿಶೇಷಣಗಳು. 'ಸಕಾಶಾತ್' ಎಂದು ಅಧ್ಯಾಹಾರಮಾಡಿ ಪರಮಾತ್ಮನ ಇಚ್ಛೆಯಿಂದ ಬಂಧ ಪಾರತಂತ್ರ್ಯಗಳು ಜೀವನಿಗೆ ಇವೆ ಎಂದು ಅನ್ವಯಮಾಡಬೇಕು.

ಪರಮಾತ್ಮ ಅಕರ್ತೃ ಹೇಗೆಂದರೆ ಕ್ಲೇಶವಿಲ್ಲದೆ ಕಾರ್ಯಮಾಡುವುದರಿಂದ ಮತ್ತು ಅವನಿಗೊಬ್ಬ ಕರ್ತನಿಲ್ಲದಿರುವುದರಿಂದ ಎಂದೂ ಹೇಳಿದೆ. ಪರಮಾತ್ಮ ಜಗತ್ತಿಗೇ ಕಾರಣನಾದ್ದರಿಂದ ಅವನಿಗೆ ಕರ್ತನಿಲ್ಲ. ಆದರಿಂದ ಅವನು ಅಕರ್ತೃ ಎನಿಸಿದ್ದಾನೆ ಎಂದು ಭಾರತದಲ್ಲಿ ಹೇಳಿದೆ.

* * *

ಪ್ರಕೃತಿಪುರುಷರಿಬ್ಬರೂ ಜೀವನನ್ನು ಬಂಧಿಸುತ್ತಾರೆ, ಆದರೆ ಪುರುಷನು ಜೀವನಿಗೆ ಕರ್ತೃತ್ವ ಅಭಿಮಾನವನ್ನು ಪ್ರಕೃತಿಯ ಮೂಲಕ ಕೊಡುತ್ತಾನೆ. ಸುಖ ದುಃಖಭೋಕ್ತೃತ್ವವನ್ನು ಮಾತ್ರ ತಾನೇ ಕೊಡುತ್ತಾನೆ. ಅದರಿಂದ ಪ್ರಕೃತಿಗಿಂತ ಪುರುಷ ಶ್ರೇಷ್ಠ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ಕಾರ್ಯಕಾರಣಕರ್ತೃತ್ವೇ ಕಾರಣಂ ಪ್ರಕೃತಿಂ ವಿದುಃ ।
ಭೋಕ್ತೃತ್ವೇ ಸುಖದುಃಖಾನಾಂ ಪುರುಷಃ ಪ್ರಕೃತೇಃ ಪರಃ ॥ ೮ ॥

ಶರೀರೇಂದ್ರಿಯಾದಿಗಳಿಗೆ ಮುಖ್ಯಾಭಿಮಾನಿನಿ ಚಿತ್ಪ್ರಕೃತಿ ಲಕ್ಷ್ಮೀದೇವಿ ಪರಮಾತ್ಮನ ಪ್ರೇರಣೆಯಿಂದ ಜೀವನಿಂದ ಕರ್ಮ ಮಾಡಿಸಿ ದೇಹೇಂದ್ರಿಯ ಸಂಪಾದನ ಮಾಡಿಸುತ್ತಾಳೆ. ಹೀಗೆ ಕಾರ್ಯವಾದ ಶರೀರ ಹಾಗೂ ಕಾರಣವಾದ ಇಂದ್ರಿಯ ಸಂಪಾದನರೂಪ ಕ್ರಿಯಾಕರ್ತೃತ್ವದಲ್ಲಿ ಪ್ರಕೃತಿ ಕಾರಣ. ಆದರೆ ಅದು ಪರಮಾತ್ಮಪ್ರೇರಣೆಯಿಂದ. ಜೀವನಿಗೆ ಸುಖದುಃಖಭೋಗ ಶಕ್ತಿಯನ್ನು ಸ್ವತಃ ಪರಮಾತ್ಮನೇ ಕೊಡುತ್ತಾನೆ. ಅದರಿಂದ ಅವನು ಪ್ರಕೃತಿಗಿಂತ ಉತ್ತಮ.

ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ ಕರ್ತೃತ್ವಭೋಕ್ತೃತ್ವಗಳೆರಡೂ ಇರುವುದು ಅಹಂಕಾರದಲ್ಲಿಯೆ. ಆದರೂ ವಿಕಾರವು ಜಡದಲ್ಲಿಯೇ, ಭೋಗ ಚೈತನ್ಯದಲ್ಲಿಯೇ ಮುಖ್ಯವಾಗಿರುವುದರಿಂದ ಕರ್ತೃತ್ವವು ಉಪಾಧಿಯಾದ ಪ್ರಕೃತಿಯಲ್ಲಿಯೂ ಭೋಕ್ತೃತ್ವವು ಉಪಹಿತನಾದ ಚೇತನನಲ್ಲಿಯೂ ಇದೆ ಎನ್ನಲಾಗಿದೆ. ಇದು ಸರಿಯಲ್ಲ. ಇಲ್ಲಿ ವಿಕಾರರೂಪವಾದ ಕರ್ತೃತ್ವ ವಿವಕ್ಷಿತವಲ್ಲ. ಜೀವನು ಅಜ್ಞಾನದಿಂದ ಬಂಧಕವಾದ ಕರ್ಮ ಮಾಡಿ ಆ ಮೂಲಕ ಶರೀರಇಂದ್ರಿಯಗಳನ್ನು ಸಂಪಾದಿಸುವುದೇ ಕರ್ತೃತ್ವ. ಅಜ್ಞಾನ ಉಂಟುಮಾಡಿ ಕರ್ಮ ಮಾಡಿಸುವುದು ಪ್ರಕೃತಿ. ಅದರಿಂದ ಜೀವನ ಕರ್ತೃತ್ವಕ್ಕೆ ಪ್ರಕೃತಿ ಕಾರಣ. ಶ್ರೀಧರವ್ಯಾಖ್ಯಾನ ಹೇಳುವಂತೆ ಪ್ರಕೃತಿಯೆಂಬ ಉಪಾಧಿಯಿಂದ ಕೂಡಿದ ಚೇತನವೇ ಜೀವವಲ್ಲ. ಜೀವವೆಂದರೆ ಉಪಾಧಿಯಿಂದ ಉಪಹಿತವಾದ ಒಂದು ಬೇರೆ ವಸ್ತುವೆನ್ನುವುದು ಶುದ್ಧಚೇತನವಲ್ಲ ಎನ್ನುವುದು ಅದ್ವೈತವಾಗುತ್ತದೆ. ದ್ವೈತದಲ್ಲಿ ಶುದ್ಧಚೇತನವೇ ಜೀವ. ಅವನು ಪ್ರಕೃತಿಯಿಂದಾದ ಶರೀರೇಂದ್ರಿಯಗಳ ಮೂಲಕ ಕರ್ಮ ಮಾಡುತ್ತಾನೆ. ಅದಕ್ಕೆ ಕಾರಣ ಪ್ರಕೃತಿಯಿಂದ ಉಂಟಾಗಿರುವ ಅಜ್ಞಾನ.

ಶ್ರೀಧರ ವ್ಯಾಖ್ಯಾನ ಪ್ರಕಾರ ಚೇತನ ಅನುಭವಸ್ವರೂಪನಾದ್ದರಿಂದ ಅಹಂಕಾರದ ಭೋಕ್ತೃತ್ವ ಅವನಲ್ಲಿ ಮುಖ್ಯ. ಅದರಿಂದ ಅದಕ್ಕೆ ಅವನು ಕಾರಣ. ಇದೂ ಸರಿಯಲ್ಲ. ಜೀವನಲ್ಲಿ ಭೋಕ್ತೃತ್ವವಿರಲು ಅವನು ಕಾರಣನಲ್ಲ. ಪರಮಾತ್ಮ ಕಾರಣ. ಅವನೆ ಸ್ವತಂತ್ರ. ಅದರಿಂದ 'ಭೋಕ್ತೃತ್ವಕ್ಕೆ ಕಾರಣ ಪುರುಷ' ಎಂದಿದೆ. ಪುರುಷ ಎಂದರೆ ಪರಮಪುರುಷ ಪರಮಾತ್ಮ. ಈ ಭಾಗವತ ಶ್ಲೋಕಕ್ಕೆ ವಿವರಣೆ ಭವಿಷ್ಯತ್ಪರ್ವದಲ್ಲಿ ಮತ್ತು ಭಗವದ್ಗೀತೆಯಲ್ಲಿ ಸಿಗುತ್ತದೆ.

ಬ್ರಹ್ಮಾದಿಭಿಃ ಸರ್ಗಕರೀ ಶ್ರೀರ್ವಿಷ್ಣುಬಲಸಂಶ್ರಯಾತ್ ।
ಸುಖದುಃಖಪ್ರದೋ ವಿಷ್ಣುಃ ಸ್ವಯಮೇವ ಸನಾತನಃ ॥

ಕರ್ತೃತ್ವಂ ಸುಖದುಃಖಾನಾಂ ಅನ್ಯೇಷಾಂ ತು ತದಾಜ್ಞಯಾ ।
ಭೋಕ್ತೃತ್ವಂ ಸುಖದುಃಖಾನಾಂ ಕರೋತ್ಯೇಕೋ ಹರಿಃ ಸ್ವಯಮ್ ।
ಭೋಕ್ತೃತ್ವಮಾತ್ರಹೇತುತ್ವಂ ಜೀವೇ ನಾನ್ಯತ್ರ ಕುತ್ರಚಿತ್ ॥
ಇತಿ ಭವಿಷ್ಯತ್ಪರ್ವಣಿ ।

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ । ಇತಿ ಚ ॥

'ಬ್ರಹ್ಮಾದಿಜೀವರಲ್ಲಿ ಕರ್ತೃತ್ವವನ್ನು ಉಂಟುಮಾಡಿ ಅವರಿಂದ ಸೃಷ್ಟಿ ಮಾಡಿಸುವವಳು ಲಕ್ಷ್ಮಿ, ಅದು ಸ್ವತಂತ್ರವಾಗಿ ಅಲ್ಲ. ವಿಷ್ಣುಬಲವನ್ನಾಶ್ರಯಿಸಿ ಹಾಗೆ ಮಾಡುತ್ತಾಳೆ.

ಅದರಿಂದ ಪುರುಷನಾದ ವಿಷ್ಣು ಪ್ರಕೃತಿಯಾದ ಲಕ್ಷ್ಮಿಗಿಂತ ಉತ್ತಮ. ಜೀವರಿಗೆ ಸುಖದುಃಖಾದಿಸರ್ವದಾಯಕನು ಸ್ವತಂತ್ರವಾಗಿ ಸನಾತನನಾದ ವಿಷ್ಣುವೆ. ಆದರೂ ಬೇರೆ ಲಕ್ಷ್ಮೀಬ್ರಹ್ಮಾದಿಗಳು ಜೀವರಿಗೆ ಸುಖದುಃಖಕರ್ತೃತ್ವವನ್ನು ಉಂಟುಮಾಡುತ್ತಾರೆ. ವಿಷ್ಣುವಿನ ಆಜ್ಞೆಯಿಂದ. ಜೀವರಿಗೆ ಸುಖದುಃಖ ಭೋಕ್ತೃತ್ವವನ್ನು ಅವರು ಕಿಂಚಿತ್ ಮಾಡಿದರೂ ಅಧಿಕವಾಗಿ ವಿಷ್ಣು ಒಬ್ಬನೇ ಸ್ವತಃ ಮಾಡುತ್ತಾನೆ. ಅದರಿಂದ ಅವನು ಪ್ರಕೃತಿಗಿಂತ ಮೇಲೆನಿಸುವುದು ಯುಕ್ತವೆ. ಜೀವರಿಗೆ ತಮ್ಮ ತಮ್ಮ ಭೋಕ್ತೃತ್ವದ ಮಟ್ಟಿಗೆ ಅಸ್ವತಂತ್ರವಾಗಿ ಹೇತುತ್ವವಿದ್ದರೂ ಎಲ್ಲ ಜೀವರ ಭೋಕ್ತೃತ್ವಕ್ಕೆ ಸ್ವತಂತ್ರವಾಗಿ ಹೇತುವೆನಿಸುವವನು ಅವನೇ. ಎಲ್ಲರ ಭೋಕ್ತೃತ್ವಕ್ಕೆ ಹೇತುತ್ವವು ಬೇರೆ ಯಾವ ಜೀವರಲ್ಲಿಯೂ ಇಲ್ಲ (ಅನ್ಯತ್ರ ಕುತ್ರಚಿಜ್ಜೀವೇ ನಾಸ್ತಿ)' ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ.

ಭಗವದ್ಗೀತೆಯಲ್ಲಿಯೂ,

> ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
> ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥ (೧೩.೨೦)

ಎಂದು ಪ್ರಕೃತಿ ಪುರುಷರ ಪ್ರಸ್ತಾವಮಾಡಿ ಅವರಲ್ಲಿರುವ ವಿಶೇಷವನ್ನು ಈ ಶ್ಲೋಕ ಹೇಳುತ್ತದೆ–

> ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
> ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥(೧೩.೨೧)

(ಜೀವನು ಕರ್ಮಯೋಗದ ರಹಸ್ಯವನ್ನರಿಯದೆ ಅಜ್ಞಾನದಿಂದ ಬಂಧಕವಾದ ಕರ್ಮವನ್ನು ಮಾಡಿ ಆ ಮೂಲಕ ಶರೀರಇಂದ್ರಿಯಗಳನ್ನು ಸಂಪಾದಿಸುತ್ತಾನೆ. ಇದಕ್ಕೆ ಕಾರಣಳು ಪ್ರಕೃತಿಯ ಅಭಿಮಾನಿನಿ ದುರ್ಗಾದೇವಿ. ಅಜ್ಞಾನ ಉಂಟುಮಾಡುವ ಮೂಲಕ ಅವಳು ಜೀವನಿಂದ ಬಂಧಕಕರ್ಮ ಮಾಡಿಸುತ್ತಾಳೆ. ಅದರಿಂದ ಕಾರ್ಯಕಾರಣಕರ್ತೃತ್ವಕ್ಕೆ ಹೇತು ಎನಿಸುವವಳು ಈ ಚಿತ್ಪ್ರಕೃತಿ. ಶರೀರಇಂದ್ರಿಯಗಳ ಮೂಲಕ ಜೀವನು ಸುಖದುಃಖಗಳನ್ನು ಭೋಗಿಸುವಂತೆ ಶಕ್ತಿ ಕೊಡುವವನು ಪರಮಪುರುಷ ವಿಷ್ಣು. ಅದರಿಂದ ಸುಖದುಃಖಭೋಕ್ತೃತ್ವಕ್ಕೆ ಹೇತು ಎನಿಸಿರುವವನು ಪರಮಪುರುಷ.)

* * *

ಪ್ರಕೃತಿಪುರುಷರ ಸ್ವರೂಪವನ್ನು ಹೇಳೆಂದು ದೇವಹೂತಿ ಕೇಳಿಕೊಂಡಾಗ ಕಪಿಲ ಮೊದಲಿಗೆ ಪ್ರಕೃತಿಯ ಸ್ವರೂಪವನ್ನು ಹೇಳುತ್ತಾನೆ–

ಶ್ರೀಭಗವಾನುವಾಚ–

ಯತ್ ತತ್ ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಮ್ ।
ಪ್ರಧಾನಂ ಪ್ರಕೃತಿಂ ಪ್ರಾಹುರವಿಶೇಷಂ ವಿಶೇಷವತ್ ॥ ೧೧ ॥

ಶ್ರೀಭಗವಾನ್ ಕಪಿಲನು ಹೇಳಿದನು– ತ್ರಿಗುಣಾತ್ಮಕ, ಅವ್ಯಕ್ತ(ಅವಿನಾಶಿ, ವ್ಯಕ್ತಾವ್ಯಕ್ತಾತ್ಮಕ, ಅಕಾರ್ಯ, ವ್ಯಕ್ತ ಇಂಥ ಪ್ರಧಾನವನ್ನು ಪ್ರಕೃತಿ ಎನ್ನುತ್ತಾರೆ.

[೧]ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ ಅನಿರ್ವಚನೀಯಾವಿದ್ಯಾರೂಪವಾದ ಜೀವಪ್ರಕೃತಿಯನ್ನು, ಅದರಿಂದ ಜೀವ ಹೇಗೆ ಸಂಸಾರ ಬದ್ಧನಾಗುವನೆಂಬುದನ್ನು ಹೇಳಿದ ಬಳಿಕ ಕಪಿಲ ಈಗ ಈಶ್ವರಪ್ರಕೃತಿಯ ಸ್ವರೂಪವನ್ನು ಹೇಳುತ್ತಿದ್ದಾನೆ. 'ನಿತ್ಯಂ' ಎಂಬ ವಿಶೇಷಣದಿಂದ ಬ್ರಹ್ಮಜ್ಞಾನನಾಶ್ಯವಾದ ಅನಿತ್ಯವಾದ ಜೀವಪ್ರಕೃತಿಯನ್ನು ವ್ಯಾವೃತ್ತಿ ಮಾಡುತ್ತಾನೆ. ವಲ್ಲಭವ್ಯಾಖ್ಯಾನ ಇದನ್ನು ನಿರಾಕರಿಸುತ್ತದೆ. ಜೀವಪ್ರಕೃತಿಯೂ ನಿತ್ಯವೇ ಆದ್ದರಿಂದ 'ನಿತ್ಯಂ' ಎಂಬ ವಿಶೇಷಣ ಅದನ್ನು ವ್ಯಾವೃತ್ತಿ ಮಾಡಲಾರದು ಎನ್ನುತ್ತದೆ. ಆದರೆ ಈ ವ್ಯಾಖ್ಯಾನಪ್ರಕಾರ ಹಿಂದೆ ಹೇಳಿದ್ದು ಪ್ರಕೃತಿಪುರುಷರ ಅಂಶಗಳ ಬಗ್ಗೆ. ಈಗ ಮೂಲಭೂತ ಪ್ರಕೃತಿಪುರುಷರ ಬಗ್ಗೆ ಕಪಿಲನು ಹೇಳುತ್ತಿದ್ದಾನೆ. ಅಂಶಪುರುಷ ಮೂಲಪುರುಷರೇ ಜೀವೇಶ್ವರರು. ಅವರಿಗೆ ಅವಸ್ಥಾಭೇದ ಹೊರತು ಸ್ವತಃ ಭೇದ ಇಲ್ಲ. ಅಂಶಪ್ರಕೃತಿ ವ್ಯಾಮೋಹಕ ವಾದ್ದರಿಂದ ಅದರಲ್ಲಿ ಅಭಿಮಾನ ಪಟ್ಟರೆ ಸಂಸಾರಿಜೀವನಾಗುತ್ತಾನೆ. ಮೂಲ

---

೧. ತದೇವಂ ಸಂಸಾರಿಣಂ ಪುರುಷಂ ಪ್ರಕೃತಿಂ ಚ ಜ್ಞಾತ್ವೇದಾನೀಂ ಜಗತ್ಕಾರಣಮೀಶ್ವರಂ ತತ್ಪ್ರಕೃತಿಂ ಚ ಪೃಚ್ಛತಿ ಪ್ರಕೃತೇರಿತಿ ।ತತ್ರ ಪ್ರಕೃತಿಂ ಲಕ್ಷಯತಿ । ಯತ್ ಪ್ರಧಾನಂ ತದೇವ ಪ್ರಕೃತಿಂ ಪ್ರಾಹುಃ ।ಕಿಂ ತತ್ ಪ್ರಧಾನಂ? ಸ್ವತೋಽವಿಶೇಷಂ । ಕಿಂ ಜೀವಪ್ರಕೃತಿಃ ? ನ । ನಿತ್ಯಂ । –ಶ್ರೀಧರಃ

ಯಜ್ಜೀವಪ್ರಕೃತಿವ್ಯುದಾಸಾರ್ಥಮಿತಿ ಕೇಚಿದಾಹುಸ್ತದುತ್ತರಾಧ್ಯಾಯೇನ ವಿರುಧ್ಯತೇ । ನಿತ್ಯತ್ವಾದುಭಯೋರಿತಿ । ಏತದುಕ್ತಂ ಕರ್ತೃತ್ವಂ ಭೋಕ್ತೃತ್ವಂ ಚ ಪ್ರಕೃತಿ ಪುರುಷಾಂಶಯೋರೇವ । ನ ತು ಮೂಲಭೂತಪ್ರಕೃತಿಪುರುಷಯೋಃ । ಅತಸ್ತಯೋರ್ಲಕ್ಷಣಪ್ರಶ್ನಃ । ಪುರುಷಸ್ತ್ವೇಕ ಏವ । ಜೀವೇಶ್ವರಾವಸ್ಥಾಭೇದೇನೈವ ಭಿನ್ನೌ । ನ ತು ಸ್ವತ ಇತಿ । ಯದಾ ಮೋಹಕಪ್ರಕೃತಿಮಭಿಮನ್ಯತೇ ತದಾ ಜೀವಾವಸ್ಥಾಂ ಪ್ರಾಪ್ನೋತಿ । ಯದಾ ತು ಮೂಲಭೂತಾಂ ಪ್ರಕೃತಿಂ ತದಾ ಸ್ವರೂಪಸ್ಥಿತ ಏವ ಜಗತ್ಕಾರಣಂ ಭವತಿ । ಸದಸಚ್ಚ ಯದಾತ್ಮಕಮಿತಿ । ಕಾರ್ಯಂ ಕಾರಣಂ ವಾ, ಮೋಕ್ಷಹೇತುರ್ಬಂಧಹೇತುರ್ವಾ, ಅಲೀಕಂ ಸದ್ವಾ ಸರ್ವಮೇವ ಮೂಲ ಭೂತಪ್ರಕೃತಿಪುರುಷಾತ್ಮಕಂ । ಅತಸ್ತಯೋರ್ಜ್ಞಾನೇ ಸರ್ವಂ ಜ್ಞಾತಂ ಭವತೀತ್ಯಾಶಯಃ । –ವಲ್ಲಭಃ

ಪ್ರಕೃತಿಯಲ್ಲಿ ಅಭಿಮಾನ ಪಟ್ಟಾಗ ಸ್ವರೂಪದಿಂದಲೇ ಇದ್ದು ಜಗತ್ಕಾರಣನಾಗುತ್ತಾನೆ ಎಂದು ವಲ್ಲಭವ್ಯಾಖ್ಯಾನ ಇದೆ. ಆದರೆ ಹಿಂದೆ 'ಪುರುಷಃ ಪ್ರಕೃತೇಃ ಪರಃ' ಎಂದಿದೆ. ಮುಂದೆಯೂ 'ಚೇಷ್ಟಾ ಯತಃ ಸ ಭಗವಾನ್' 'ಅಂತಃ ಪುರುಷರೂಪೇಣ' ಎಂದು ಮುಂತಾಗಿ ಪ್ರಕೃತಿ ಪುರುಷನಿಗೆ ಅಧೀನಳೆಂದು ಸ್ಪಷ್ಟ ಹೇಳಿದೆ. 'ಸಾ ಚ ಶ್ರೀರ್ವಿಷ್ಣುಸಂಶ್ರಯಾ' ಎಂದು ಹರಿವಂಶದಲ್ಲಿಯೂ ಹೇಳಿದೆ. ಇದನ್ನು ಕೇವಲ ಅಭಿಮಾನ ಎನ್ನಲಾಗದು.

ವ್ಯಕ್ತಾವ್ಯಕ್ತಾತ್ಮಕಂ ಯತ್ತದ್ ವಿದ್ಯಾತ್ ಸದಸದಾತ್ಮಕಮ್ ।
ಅಸರ್ಗಾ ಕೇವಲಾವ್ಯಕ್ತಾ ಸಿಸೃಕ್ಷುರುಭಯಾತ್ಮಿಕಾ ॥

ವ್ಯಕ್ತೈವ ಕಾರ್ಯರೂಪಾ ತು ಪ್ರಕೃತಿಸ್ತ್ರಿವಿಧಾ ಮತಾ ।
ಕಾರ್ಯತಃ ಸಾ ಪ್ರಧಾನತ್ವಾತ್ ಪ್ರಧಾನಮಿತಿ ಕೀರ್ತ್ಯತೇ ।
ಅವಿಶೇಷಾ ಹ್ಯಕಾರ್ಯತ್ವಾತ್ ಸಾ ಚ ಶ್ರೀರ್ವಿಷ್ಣುಸಂಶ್ರಯಾ ।
ಇತಿ ಹರಿವಂಶೇಷು ॥

ವಿಶೇಷಃ ಕಾರ್ಯಮುದ್ದಿಷ್ಟಂ ವಿಶೇಷಾದ್ ದೃಶ್ಯತೇ ಯತಃ ॥
ಇತಿ ಪಾದ್ಮೇ ॥

'ಜಡಪ್ರಕೃತಿಯು ವಿಶೇಷವತ್, ಅವ್ಯಕ್ತ, ಸದಸದಾತ್ಮಕ ಎಂದರೆ ವ್ಯಕ್ತ, ಅವ್ಯಕ್ತ, ವ್ಯಕ್ತಾವ್ಯಕ್ತ ಎಂದು ಮೂರು ಅವಸ್ಥೆ ಉಳ್ಳದ್ದೆಂದರ್ಥ. ಪ್ರಳಯಕಾಲದಲ್ಲಿ, ಅಸರ್ಗಾ ಅಂದರೆ ಸೃಷ್ಟಿ ಇಲ್ಲದಿದ್ದಾಗ, ಅದು ಕೇವಲ ಅವ್ಯಕ್ತ ಅವಸ್ಥೆಯಲ್ಲಿರುತ್ತದೆ. ಪ್ರಳಯಕಾಲದ ಕೊನೆಯಲ್ಲಿ ಸಿಸೃಕ್ಷು,ಅಂದರೆ ಸೃಷ್ಟಿಗೆ ಉನ್ಮುಖವಾಗಿರುವಾಗ ವ್ಯಕ್ತ–ಅವ್ಯಕ್ತ ಎರಡೂ ಆಗಿರುವ ಅವಸ್ಥೆಯಲ್ಲಿರುತ್ತದೆ. ಮುಂದೆ ಸೃಷ್ಟಿ ಕಾಲದಲ್ಲಿ ಕಾರ್ಯರೂಪಾ ಎಂದರೆ ಕಾರ್ಯಪ್ರಪಂಚರೂಪದಲ್ಲಿರುವಾಗ ಕೇವಲ ವ್ಯಕ್ತ ಅವಸ್ಥೆಯಲ್ಲಿರುತ್ತದೆ. ಚೇತನಪ್ರಕೃತಿಯೂ ಹೀಗೆ ಪ್ರಳಯಕಾಲ ಸೃಷ್ಟಿಕಾಲ ಮತ್ತು ಅವುಗಳ ಮಧ್ಯಕಾಲಗಳಲ್ಲಿ ಕ್ರಮವಾಗಿ ಅವ್ಯಕ್ತ ವ್ಯಕ್ತ ವ್ಯಕ್ತಾವ್ಯಕ್ತ ಎಂಬ ಅವಸ್ಥೆ ಉಳ್ಳವಳೆಂದು ತಿಳಿಯಬೇಕು. (ಪ್ರಳಯಕಾಲದಲ್ಲಿ ಚೇತನಪ್ರಕೃತಿ, ಅಂದರೆ ಲಕ್ಷ್ಮೀದೇವಿ 'ಅಸರ್ಗಾ' ಸೃಷ್ಟಿ ಇಲ್ಲದವಳೆಂದರೆ ಸೃಷ್ಟಿಯನ್ನು ಮಾಡದೆ ಇರುತ್ತಾಳೆ. ಪ್ರಳಯದ ಕೊನೆಯಲ್ಲಿ ಪರಮಾತ್ಮನ ಆಜ್ಞೆಯಿಂದ ಅವಳಲ್ಲಿ ಸೃಷ್ಟಿಯ ಇಚ್ಛೆ ಬಂದಾಗ ಸಿಸೃಕ್ಷು ಎನಿಸುತ್ತಾಳೆ. ಸೃಷ್ಟಿಕಾಲದಲ್ಲಿ 'ಕಾರ್ಯರೂಪ'ಳು ಕಾರ್ಯವನ್ನು ರೂಪಿಸುವವಳು ಕಾರ್ಯಪ್ರಪಂಚವನ್ನು ನಿರ್ಮಿಸುವವಳು. ಅದನ್ನು ನಿಯಂತ್ರಿಸುವವಳು ಎಂದರ್ಥ.) ಈ ಚೇತನಾಚೇತನವೆಂಬ ಎರಡೂ ಬಗೆಯ ಕಾರಣವಾದ ಪ್ರಕೃತಿಯು ಕಾರ್ಯಕ್ಕಿಂತ ಪ್ರಧಾನವಾದ್ದರಿಂದ ಪ್ರಧಾನವೆಂದು ಹೆಸರು ಮತ್ತು ಈ ಪ್ರಕೃತಿಯು ಅವಿಶೇಷವೂ

ವಿಶೇಷವತ್ತೂ ಆಗುತ್ತದೆ. ವಿಶೇಷವೆಂದರೆ ಕಾರ್ಯ. ಜಡಪ್ರಕೃತಿಯು ಬೇರೆ ಯಾವುದೇ ಉಪಾದಾನದ ಕಾರ್ಯವಾಗಿರುವುದಿಲ್ಲ. ಅದೇ ಎಲ್ಲಕ್ಕೂ ಮೂಲ ಉಪಾದಾನಕಾರಣ. ಲಕ್ಷ್ಮೀದೇವಿಯೂ ಯಾರಿಂದಲೂ ಶರೀರ ಪಡೆದು ಹುಟ್ಟುವುದಿಲ್ಲ. ಅವಳೇ ಎಲ್ಲರಿಗೂ ಶರೀರ ನಿರ್ಮಿಸಿಕೊಡುತ್ತಾಳೆ ಎಂದರ್ಥ. ವಿಶೇಷವಲ್ಲದ್ದು ಅವಿಶೇಷ. ವಿಶೇಷ ಉಳ್ಳದ್ದು ವಿಶೇಷವತ್. ಜಡಪ್ರಕೃತಿ ಕಾರ್ಯರೂಪ ಪರಿಣಾಮ ಉಳ್ಳದ್ದು. ಲಕ್ಷ್ಮೀದೇವಿ ಪರಿಣಾಮ ಉಂಟುಮಾಡುವವಳು. ಅದರಿಂದ ಎರಡೂ ಪ್ರಕೃತಿಗಳು ವಿಶೇಷವತ್ ಎನಿಸುತ್ತವೆ. ಮತ್ತು (ಮುಂದೆ ೧೮ನೇ, ೧೯ನೇ ಶ್ಲೋಕಗಳಲ್ಲಿ ಹೇಳುವಂತೆ) ವಿಷ್ಣುವನ್ನೇ ಆಶ್ರಯಿಸಿರುತ್ತವೆ' ಎಂದು ಹರಿವಂಶದಲ್ಲಿ ಹೇಳಿದೆ. ವಿಶೇಷವಾಗಿ ಗೋಚರವಾಗುವ ಪ್ರಯುಕ್ತ ಕಾರ್ಯವು ವಿಶೇಷವೆನಿಸುತ್ತದೆ. ಎಂದು ಪದ್ಮಪುರಾಣದಲ್ಲಿ ಹೇಳಿದೆ.

ವಲ್ಲಭವ್ಯಾಖ್ಯಾನದಲ್ಲಿ 'ಸದಸಚ್ಚ ಯದಾತ್ಮಕಂ' ಎಂಬುದಕ್ಕೆ ಕಾರ್ಯ–ಕಾರಣ, ಮೋಕ್ಷ ಹೇತು–ಬಂಧಹೇತು, ಶಶವಿಷಾಣದಂತಹ ಅಸತ್ತು–ಘಟಾದಿಗಳಂತಹ ಸತ್ತು ಎಲ್ಲವೂ ಮೂಲಭೂತಪ್ರಕೃತಿ ಮತ್ತು ಮೂಲಭೂತಪುರುಷಸ್ವರೂಪಗಳೇ ಎಂದು ವಿವರಣೆ ಇದೆ. ಆದರೆ ಮೂಲಭೂತಪುರುಷ ಅಂದರೆ ಪರಮಾತ್ಮ ಶಶವಿಷಾಣಾದಿ ಅಸತ್ತಾಗಿರಲು ಶಕ್ಯವಿಲ್ಲ. ಘಟಾದಿಸತ್ತಾದ ಪದಾರ್ಥವಾಗಿರಲೂ ಶಕ್ಯವಿಲ್ಲ. ಮೂಲಭೂತಪ್ರಕೃತಿಯೂ ಕೂಡ ಅಸತ್ತಾಗಿರುವುದು ಶಕ್ಯವಿಲ್ಲ, ಸತ್ತಾದ ಪದಾರ್ಥವಾಗಬಹುದು. ಸತ್ತಾದ ಘಟಾದಿಪದಾರ್ಥಗಳಿಗೆ ಮಾತ್ರ ಉಪಾದಾನವಿರಬಹುದು. ಶಶವಿಷಾಣಾದಿ ಅಸತ್ತಿಗೆ ಉಪಾದಾನವಿಲ್ಲ. ಅದರಿಂದ ಪ್ರಕೃತಿಯು ವ್ಯಕ್ತ ಅವ್ಯಕ್ತ ವ್ಯಕ್ತಾವ್ಯಕ್ತವಾಗಿ ಬೇರೆಬೇರೆ ಕಾಲಗಳಲ್ಲಿ ಇರುತ್ತದೆ ಎಂದು ವ್ಯಾಖ್ಯಾನಿಸುವುದೇ ಯುಕ್ತ.

* * *

ಅಂತಃಕರಣದ ನಾಲ್ಕು ಪ್ರಭೇದಗಳನ್ನು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಮನೋ ಬುದ್ಧಿರಹಂಕಾರಶ್ಚಿತ್ತಮಿತ್ಯಂತರಾತ್ಮನಃ ।
ಚತುರ್ಧಾ ಲಕ್ಷ್ಯತೇ ಭೇದೋ ವೃತ್ತ್ಯಾ ಲಕ್ಷಣರೂಪಯಾ ॥ ೧೪ ॥

ನಾಲ್ಕು ಬಗೆಯ ವೃತ್ತಿಗಳೆಂಬ ಲಕ್ಷಣಗಳಿಂದ, ಮನಸ್ಸು, ಬುದ್ಧಿ ಅಹಂಕಾರ ಚಿತ್ತ ಎಂದು, ಅಂತಃಕರಣದಲ್ಲಿ ನಾಲ್ಕು ಪ್ರಭೇದಗಳು ತಿಳಿದುಬರುತ್ತವೆ.

ಇಲ್ಲಿ ನಾಲ್ಕು ಮನೋವೃತ್ತಿಗಳ ಸ್ವರೂಪದ ಬಗ್ಗೆ ಪ್ರಮಾಣಪುರಃಸರವಾಗಿ ವಿವರಣೆ ಬೇರೆ ವ್ಯಾಖ್ಯಾನಗಳಲ್ಲಿ ಇಲ್ಲ. ಸ್ಕಂದಪುರಾಣದಲ್ಲಿ ವಿವರ ಇದೆ–

ಬುದ್ಧಿರಧ್ಯವಸಾನಾಯ ಸಂಶಯಂ ಕುರುತೇ ಮನಃ ।
ಅಭಿಮಾನೇ ಹ್ಯಹಂಕಾರಶ್ಚಿತ್ತಂ ಸ್ಮರಣಕಾರಣಮ್ ॥
ಇತಿ ಸ್ಕಾಂದೇ ॥

ನಿಶ್ಚಯರೂಪವಾದ ಮನೋವೃತ್ತಿಗೆ ಹೇತುವಾದ ಅಂತಃಕರಣಪ್ರಭೇದವು ಬುದ್ಧಿ ಎನಿಸುತ್ತದೆ. ಸಂಶಯ, ಅಭಿಮಾನ, ಸ್ಮರಣರೂಪ ಮನೋವೃತ್ತಿಗಳಿಗೆ ಕ್ರಮವಾಗಿ ಮನಸ್ಸು, ಅಹಂಕಾರ, ಚಿತ್ತಗಳು ಹೇತುಗಳು ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

* * *

ಪ್ರಕೃತಿಕಾರ್ಯಗಳೆಂದರೆ ಇಷ್ಟೇ ಎನ್ನುತ್ತಾನೆ ಕಪಿಲ.

ಏತಾವಾನೇವ ಸಂಖ್ಯಾತೋ ಬ್ರಹ್ಮಣಃ ಸಗುಣಸ್ಯ ಹಿ ।
ಸನ್ನಿವೇಶೋ ಮಯಾ ಪ್ರೋಕ್ತೋ ಯಃ ಕಾಲಃ ಪಂಚವಿಂಶಕಃ ॥ ೧೬ ॥

ತ್ರಿಗುಣಾಭಿಮಾನಿಯಾದ್ದರಿಂದ ಸಗುಣಬ್ರಹ್ಮವೆನಿಸಿದ ಲಕ್ಷ್ಮೀದೇವಿಯ ಮತ್ತು ತ್ರಿಗುಣಾತ್ಮಕ ಪ್ರಕೃತಿಯ ಕಾರ್ಯವಿಸ್ತಾರವಿಷ್ಟೇ. ಅಂದರೆ ಇಪ್ಪತ್ತನಾಲ್ಕೇ. ಕಾಲನಿಯಾಮಕ ಕಾಲನಾಮಕ ಪರಮಾತ್ಮ ಇಪ್ಪತ್ತೈದನೇಯ ತತ್ವ

ಇಲ್ಲಿ ಸಗುಣಬ್ರಹ್ಮ ಎಂದರೆ ತ್ರಿಗುಣಾತ್ಮಕ ಪ್ರಕೃತಿ ಎಂದೇ ಬೇರೆ ಎಲ್ಲ ವ್ಯಾಖ್ಯಾನಕಾರರ ಅಭಿಪ್ರಾಯ. ಆದರೆ ಹರಿವಂಶದಲ್ಲಿ ಪ್ರಕೃತ್ಯಭಿಮಾನಿನಿಯಾದ ಲಕ್ಷ್ಮೀದೇವಿ ಸಗುಣಬ್ರಹ್ಮ ಎನಿಸುತ್ತಾಳೆ.

ಹರಿಸ್ತು ನಿರ್ಗುಣಂ ಬ್ರಹ್ಮ ಶ್ರೀರ್ಬ್ರಹ್ಮ ಸಗುಣಂ ಸ್ಮೃತಾ ।
ತದಂಗಜಾನಿ ತತ್ವಾನಿ ತಸ್ಮಾತ್ ತದ್ರೂಪಮುಚ್ಯತೇ ॥
ಇತಿ ಹರಿವಂಶೇಷು ।

ಶ್ರೀಹರಿ ತ್ರಿಗುಣವರ್ಜಿತನಾದ್ದರಿಂದ ನಿರ್ಗುಣಬ್ರಹ್ಮನೆನಿಸಿದ್ದಾನೆ. ಲಕ್ಷ್ಮೀದೇವಿ ತ್ರಿಗುಣಗಳಿಗೆ ಅಭಿಮಾನಿನಿಯಾದ್ದರಿಂದ, ಜಡಪ್ರಕೃತಿ ತ್ರಿಗುಣಾತ್ಮಕವಾದ್ದರಿಂದ, ಸಗುಣಬ್ರಹ್ಮ ಎನಿಸುತ್ತಾರೆ. ತತ್ವಗಳು ಜಡಪ್ರಕೃತಿಯ ಅಂಶಗಳಿಂದ ಹುಟ್ಟುವುದರಿಂದ ಅವು ಪ್ರಕೃತಿಯಿಂದ ಅಭಿನ್ನ. 'ಸನ್ನಿವೇಶ' ಎಂದು ವ್ಯವಹಾರ ಎಂದು ಹರಿವಂಶದಲ್ಲಿದೆ.

* * *

ಕಾಲವೂ ಸೇರಿ ಒಟ್ಟು ಇಪ್ಪತ್ತೈದೇ ತತ್ವಗಳೆನ್ನುವುದಾದರೆ ಪುರುಷನನ್ನು ತತ್ವಗಳಲ್ಲಿ ಪರಿಗಣಿಸಿದಂತಾಗಲಿಲ್ಲ ಎಂಬ ಪ್ರಶ್ನೆ ಬಂದರೆ ಕಾಲ ಬೇರೆ ಅಲ್ಲ, ಪುರುಷ ಬೇರೆ ಅಲ್ಲ ಎಂದು ಸಮಾಧಾನವನ್ನೂ ಕಪಿಲ ಹೇಳುತ್ತಾನೆ–

ಪ್ರಭಾವಂ ಪೌರುಷಂ ಪ್ರಾಹುಃ ಕಾಲಮೇಕೇ ಯತೋ ಭಯಮ್ ।
ಅಹಂಕಾರವಿಮೂಢಸ್ಯ ಕರ್ತುಃ ಪ್ರಕೃತಿಮೀಯುಷಃ ॥ ೧೭ ॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಕಾಲವೆಂದರೆ ಹೃದಯದಲ್ಲಿ ನೆಲೆಸಿದ ಪುರುಷನಾಮಕ ಭಗವದ್ರೂಪದ ಸರ್ವವ್ಯಾಪಿರೂಪವೇ ಆಗಿದೆ ಎಂದು ಬಲ್ಲವರು ಹೇಳುತ್ತಾರೆ. ಇನ್ನು ಕೆಲವು ಜ್ಞಾನಿಗಳು ಹೇಳುತ್ತಾರೆ, ಪ್ರಕೃತಿಯಿಂದ ಅಜ್ಞಾನ ಬದ್ಧನಾಗಿ ಅಹಂಕಾರದಿಂದ ಮೂಢನಾಗಿ ತಾನು ಸ್ವತಂತ್ರಕರ್ತನೆಂದು ಅಭಿಮಾನಪಡುವ ಜೀವನಿಗೆ ಸಂಸಾರ ವಿಚ್ಛೇದವಾಗದಿರುವ ಭಯವು ರುದ್ರಾಂತರ್ಗತ ಕಾಲನಾಮಕ ಭಗವದ್ರೂಪದಿಂದಾಗುವುದೆಂದು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಕಾಲ ಬೇರೆ ಪುರುಷನೇ ಬೇರೆ ಎಂದಿದ್ದಾರೆ. ಹಿಂದಿನ ಶ್ಲೋಕದಲ್ಲಿ ಕಾಲವನ್ನು ಇಪ್ಪತ್ತೈದನೆಯ ತತ್ತ್ವವೆಂದು ಹೇಳಿದ್ದು ಅದು ಪ್ರಕೃತಿಯದೇ ಕಾರ್ಯ ಎಂಬ ಅಭಿಪ್ರಾಯದಿಂದ ಎಂದು ಶ್ರೀಧರ ವಿಶ್ವನಾಥವ್ಯಾಖ್ಯಾನಗಳು. ಪ್ರಕೃತಿಗಿಂತ ಬೇರೆಯೆ ಅಚೇತನ ತತ್ತ್ವವೆಂದು ವೀರರಾಘವ ವ್ಯಾಖ್ಯಾನ. ಪುರುಷನ ಎರಡು ರೂಪಗಳು ಕಾಲ ಮತ್ತು ಜೀವ ಎಂದು ಜೀವಗೋಸ್ವಾಮಿವ್ಯಾಖ್ಯಾನ. ವಸ್ತುತಃ ಕಾಲವೆಂದರೆ ಇಲ್ಲಿ ಕಾಲನಿಯಾಮಕ ಭಗವದ್ರೂಪ ವಿವಕ್ಷಿತ. ಆದರೆ ಬೇರೆ ವ್ಯಾಖ್ಯಾನಕಾರರು ಭಾಗವತಶ್ಲೋಕದಲ್ಲಿರುವ 'ಏಕೇ ಪ್ರಾಹುಃ' ಎಂಬ ಮಾತಿನಿಂದ ಭ್ರಾಂತಿಗೊಳಗಾಗಿ, 'ಕಾಲವು ಪರಮಾತ್ಮರೂಪ' ವೆಂಬುದನ್ನು ಮತಾಂತರವೆಂದು ಪರಿಗಣಿಸಿದ್ದಾರೆ. ವಲ್ಲಭವ್ಯಾಖ್ಯಾನದಲ್ಲಿ ಕಾಲವು ಪ್ರಕೃತಿಯ ವಿಕಾರ ಎಂದು ಒಂದು ಮತ. ಪರಮಾತ್ಮನ ಸಾಮರ್ಥ್ಯವೆಂದು ಇನ್ನೊಂದು

---

೧. ಕಾಲೇ ತು ಮತದ್ವಯಮಾಹ ಯಃ ಕಾಲಃ ಸ ಪಂಚವಿಂಶಕಃ । ಅಲ್ಪಾರ್ಥೇ ಕಪ್ರತ್ಯಯಃ । ಪ್ರಕೃತೇರೇವಾವಸ್ಥಾವಿಶೇಷ ಇತ್ಯರ್ಥಃ । ಏಕೇ ತು ಪೌರುಷಂ ಪುರುಷಸ್ಯೇಶ್ವರಸ್ಯ ಪ್ರಭಾವಂ ವಿಕ್ರಮಂ ಕಾಲಮಾಹುಃ । –ಶ್ರೀಧರಃ, ವಿಶ್ವನಾಥಃ

ಅಥ ಕಾಲಸ್ವರೂಪಂ ಲಿಲಕ್ಷಯಿಷುಸ್ತಸ್ಯ ತಾವತ್ ತತ್ತ್ವಾಂತರತ್ವಮಾಹ । ಕಾಲೋ ನ ತತ್ತ್ವಾಂತರಮಿತಿ ಮತಾಂತರಮುಪನ್ಯಸ್ಯತಿ ಪ್ರಭಾವಮಿತಿ । ಪರಮಪುರುಷಸ್ಯ ಸರ್ಗಸಂಹಾರಾದಿಷು ಜಗನ್ನಿಯಮನಸಾಮರ್ಥ್ಯಂ ಕಾಲೋ, ನ ತತ್ತ್ವಾಂತರಮಿತ್ಯರ್ಥಃ । ಏಕ ಇತ್ಯುಕ್ತ್ಯಾ ಮತಾಂತರತ್ವಂ ಗಮ್ಯತೇ । ಸ್ವಮತಮಾಹ ಅಹಂಕಾರೇತಿ । –ವೀರರಾಘವಃ

ಯ ಏವ ಪುರುಷಃ ಕಾಲಃ ಸ ಏವ ಪಂಚವಿಂಶಕೋ ಜೀವಶ್ಚ ತದಂಶಾವೇವ । –ಜೀವಗೋಸ್ವಾಮೀ

ಪ್ರಕೃತೇಃ ಪ್ರಥಮೋ ಭಾವಃ ಕಾಲಃ, ಅನ್ಯಾನಿ ಚತುರ್ವಿಂಶತಿರಿತಿ । ಏವಮೇಕದೇಶಿಮತೇನ ಕಾಲಂ ನಿರೂಪ್ಯ ಪುನರೇಕದೇಶಿಮತೇನ ನಿರೂಪಯತಿ

ಮತ. ಭಗವದ್ರೂಪವೆಂದು ಕಪಿಲನ ಸ್ವಮತ ಎಂದಿದೆ. ವಸ್ತುತಃ ಎರಡೇ ಮತಗಳು. ಎರಡೂ ಜ್ಞಾನಿಗಳ ಮತಗಳೇ, ಕಪಿಲನ ಮತಗಳೇ. ವಿರೋಧವಿಲ್ಲದಿರುವುದರಿಂದ ಎರಡೂ ಸ್ವೀಕಾರಾರ್ಹಗಳೇ.

ಪುರುಷೋ ಹೃದಿಸ್ಥಃ ಪರಮಃ ಕಾಲಃ ಸರ್ವಗತೋ ಹರಿಃ ।
ಅಥವಾ ರುದ್ರದೇಹಸ್ಥೋ ಹರಿಃ ಕಾಲ ಇತೀರಿತಃ ॥

ಇತಿ ಬ್ರಾಹ್ಮೇ ॥

ಪೌರುಷಂ ಪ್ರಭಾವಂ ಪುರುಷಸ್ಯ ಪ್ರಕರ್ಷೇಣ ಭಾವಂ ವ್ಯಾಪ್ತಂ ರೂಪಂ ।
ಏಕೇ ಸಮ್ಯಗ್‌ಜ್ಞಾನಿನಃ ಅಪ್ರಾಕೃತಾಃ ।

ಪುರುಷ ಎಂದರೆ ಹೃದಯದಲ್ಲಿರುವ ಭಗವದ್ರೂಪ. ಕಾಲ ಎಂಬುದು ಸರ್ವತ್ರವ್ಯಾಪ್ತವಾದ ಈ ಪುರುಷನ ರೂಪ. ಅಥವಾ ರುದ್ರದೇಹದಲ್ಲಿರುವ ಹರಿಗೆ ಕಾಲ ಎಂದು ಹೆಸರು ಎಂದು ಬ್ರಹ್ಮಪುರಾಣದಲ್ಲಿದೆ.

ಆದರಿಂದ 'ಪೌರುಷಪ್ರಭಾವ' ಎಂದರೆ ಹೃದಯದಲ್ಲಿ ಪುರುಷನೆನಿಸಿದ ಹರಿಯ ವ್ಯಾಪ್ತರೂಪ, 'ಪ್ರ' ಎಂದರೆ ಚೆನ್ನಾಗಿ ವ್ಯಾಪ್ತವಾಗಿ 'ಭಾವ' ಇರುವ ರೂಪ ಎಂದರ್ಥ. 'ಏಕೇ ಆಹುಃ' ಎಂದರೆ ಕೆಲವರು ಜ್ಞಾನಿಗಳೇ ಹೇಳುತ್ತಾರೆ ಎಂದರ್ಥ. ಹೊರತು, ಅವರು ಅಜ್ಞಾನಿಗಳು ಎಂದು ವಿವಕ್ಷಿತವಲ್ಲ.

* * *

ಪ್ರಕೃತಿಯಿಂದ ಮಹತ್ತತ್ತ್ವಸೃಷ್ಟಿಯಾದ ಬಗೆಯನ್ನು ಕಪಿಲನು ಮಾತೆಗೆ ಹೇಳುತ್ತಾನೆ–

ದೈವಾತ್ ಕ್ಷುಭಿತಧರ್ಮಿಣ್ಯಾಂ ಸ್ವಸ್ಯಾಂ ಯೋನೌ ಪರಃ ಪುಮಾನ್ ।
ಆಧತ್ತ ವೀರ್ಯಂ ಸಾಽಸೂತ ಮಹತ್ತತ್ತ್ವಂ ಹಿರಣ್ಮಯಮ್ ॥ ೨೦ ॥

ತನ್ನ ಪ್ರೇರಣೆಯಿಂದಲೇ ಸೃಷ್ಟಿಗೆ ಬಯಸಿದ ತನ್ನ ಪತ್ನಿಯಾದ ಲಕ್ಷ್ಮಿಯಲ್ಲಿ ನಾರಾಯಣ ವೀರ್ಯಾಧಾನ ಮಾಡಿದ. ದೇವಿ ಹಿರಣ್ಮಯವಾದ ಮಹತ್ತತ್ತ್ವವನ್ನು ಹುಟ್ಟಿಸಿದಳು.

ಪ್ರಭಾವಮಿತಿ । ಪುರುಷಸ್ಯ ಧರ್ಮಃ ಕಶ್ಚಿತ್, ಸಾಮರ್ಥ್ಯವಿಶೇಷೋ ವಾ । ಸ್ವಮತೇ ಕಾಲಂ ಲಕ್ಷಯತಿ ಪ್ರಕೃತೇರಿತಿ । ಸ ಕಾಲೋ ಭಗವಾನೇವ ರೂಪಪಂಚಕಮಧ್ಯೇ ಗಣನಾತ್ । ಏಕ ಏವ ಭಗವಾನ್ ಸರ್ವಪ್ರಾಣಿನಾಮಂತಃ ಪುರುಷರೂಪೇಣ ವರ್ತತೇ । ಬಹಿಃ ಕಾಲರೂಪೇಣ । ಅನ್ಯಥಾ ಭಗವತೋ ವ್ಯಾಪ್ತಿರ್ನ ಸ್ಯಾತ್ । ಬಹಿರ್ಮುಖಾನ್ ಕಾಲರೂಪೇಣ ಭಕ್ಷಯತಿ । ಅಂತರ್ಮುಖಾನ್ ಪುರುಷರೂಪೇಣಾಪ್ಯಾಯಯತೀತಿ । –ವಲ್ಲಭಃ

[೧]ಇಲ್ಲಿ 'ದೈವಾತ್' ಎಂದರೆ ಜೀವರ ಅದೃಷ್ಟದಿಂದ ಎಂದು ಶ್ರೀಧರ ವ್ಯಾಖ್ಯಾನ. ಅದೃಷ್ಟವೂ ಪ್ರಕೃತಿಯಲ್ಲಿ ಲೀನವಾಗಿರುವುದರಿಂದ ಅದೃಷ್ಟವಲ್ಲ, ಕಾಲ ಎಂದು ಜೀವಗೋಸ್ವಾಮಿ ವ್ಯಾಖ್ಯಾನ. ವಿಶ್ವನಾಥ ವಲ್ಲಭ ವ್ಯಾಖ್ಯಾನಗಳೂ ದೈವ ಎಂದರೆ ಕಾಲ ಎಂದೇ ವಿವರಣೆ ನೀಡಿವೆ. ವಸ್ತುತಃ ದೈವವೆಂದರೆ 'ನಾರಾಯಣ' ಎಂಬ ಪ್ರಳಯಜಲಶಾಯಿ ಭಗವದ್ರೂಪ ವಿವಕ್ಷಿತವೆಂದು ಕಾಪಿಲೇಯವಚನದಿಂದ ತಿಳಿದು ಬರುತ್ತದೆ. ವೀರರಾಘವವ್ಯಾಖ್ಯಾನದಲ್ಲಿ 'ದೈವಾತ್' ಎಂದರೆ 'ಸ್ವಸಂಕಲ್ಪಾತ್' ಪರಮಾತ್ಮನ ಸಂಕಲ್ಪದಿಂದ ಎಂದು ವಿವರಣೆ ನೀಡಿರುವುದು, ವಿಶಿಷ್ಟಾದ್ವೈತದಲ್ಲಿ 'ಅದೃಷ್ಟವೆಂದರೆ ಪರಮಾತ್ಮನ ಸಂಕಲ್ಪವೇ ಹೊರತು ಬೇರೆ ಅಲ್ಲ' ಎಂದು ಒಪ್ಪಿರುವುದರಿಂದ ಅದಕ್ಕೆ ಅನುಸಾರವಾಗಿ ಹೊರತು ದೈವವೆಂದರೆ ಇಲ್ಲಿ ನಾರಾಯಣ ಎಂದು ಅವರ ಅಭಿಪ್ರಾಯವಲ್ಲ. ಮಹತ್ತತ್ತ್ವ ಮುಂತಾದವು ಕೇವಲ ಜಡವಲ್ಲ, ಜೊತೆಗೆ ಅವುಗಳ ನಿಯಾಮಕ ಭಗವದ್ರೂಪಗಳೂ, ಅಭಿಮಾನಿದೇವತೆಗಳೂ ವಿವಕ್ಷಿತರಾಗಿದ್ದಾರೆ. ಬೇರೆ ವ್ಯಾಖ್ಯಾನಗಳಲ್ಲಿ ಇದು ಕಾಣುವುದಿಲ್ಲ.

ಪ್ರಕೃತೇಃ ಕ್ಷೋಭಕಂ ರೂಪಂ ದೈವಂ ನಾರಾಯಣಾತ್ಮಕಮ್ ।
ಪ್ರಕೃತೌ ಮಹತಃ ಸ್ರಷ್ಟ್ರ ಪರಮಃ ಪುರುಷೋ ಮತಃ ॥

ತದೇವ ವಾಸುದೇವಾಖ್ಯಂ ಮಹತ್ತತ್ತ್ವನಿಯಾಮಕಮ್ ।
ಸಂಕರ್ಷಣಾಖ್ಯಸ್ತು ಹರಿಃ ಸೂಕ್ಷ್ಮಾಹಂಕಾರಯಾಮಕಃ ॥

ಸ್ಥೂಲಾಹಂಕಾರನಿಯಮೀ ವಿಷ್ಣುಃ ಪ್ರದ್ಯುಮ್ನನಾಮಕಃ ।
ಅನಿರುದ್ಧೋ ಮನಸ್ತತ್ತ್ವನಿಯಂತಾ ಭಗವಾನ್ ಹರಿಃ ॥

ಮಹತ್ತತ್ತ್ವಾದಿಜೀವಾಸ್ತು ಬ್ರಹ್ಮೇಶಾಂಗಜಾಸ್ತಥಾ ।
ಸೂಕ್ಷ್ಮಸ್ಥೂಲವಿಭೇದೇನ ಕಾಮಜಶ್ಚಾನಿರುದ್ಧಕಃ ॥

ಇತಿ ಕಾಪಿಲೇಯೇ ।

ಜಡಪ್ರಕೃತಿಗೆ ಪರಿಣಾಮೋನ್ಮುಖತ್ವವನ್ನೂ ಚೇತನಪ್ರಕೃತಿಗೆ ಸೃಷ್ಟೀಚ್ಛೆಯನ್ನೂ ಉಂಟುಮಾಡುವ ಭಗವದ್ರೂಪ 'ದೈವ' ಅಂದರೆ ನಾರಾಯಣ ಎಂಬ ರೂಪ.

---

೧. ದೈವಾತ್ ಜೀವಾದೃಷ್ಟಾತ್ । —ಶ್ರೀಧರಃ

ದೈವಮತ್ರ ಕಾಲ ಏವ । ಪೂರ್ವಸಂವಾದಾತ್ । ಜೀವಾದೃಷ್ಟಸ್ಯಾಪಿ ಪ್ರಕೃತೌ ಲೀನತ್ವಾತ್ । —ಜೀವಗೋಸ್ವಾಮೀ

ದೈವಾತ್ ಕಾಲಾತ್ । —ವಿಶ್ವನಾಥಃ, ವಲ್ಲಭಃ

ದೈವಾತ್ ಸ್ವಸಂಕಲ್ಪಾತ್ । —ವೀರರಾಘವಃ

ಪ್ರಕೃತಿಯಲ್ಲಿ ಮಹತ್ತತ್ವವನ್ನೂ, ಅದರ ಅಭಿಮಾನಿಯನ್ನೂ ಸೃಷ್ಟಿಸುವ, ಮತ್ತು ನಿಯಂತ್ರಿಸುವ ಭಗವದ್ರೂಪವು ವಾಸುದೇವ ಎಂಬ ಪರಮಪುರುಷ. ಸೂಕ್ಷ್ಮಾಹಂಕಾರಕ್ಕೆ ಸಂಕರ್ಷಣ ಎಂಬ ಭಗವದ್ರೂಪ ನಿಯಾಮಕ. ಸ್ಥೂಲಾಹಂಕಾರಕ್ಕೆ ಪ್ರದ್ಯುಮ್ನನಾಮಕ ವಿಷ್ಣು ನಿಯಾಮಕ. ಮನಸ್ತತ್ವಕ್ಕೆ ಅನಿರುದ್ಧನಾಮಕ ಹರಿ ನಿಯಾಮಕ. ಮಹತ್ತತ್ವಾದಿ ಅಭಿಮಾನಿಜೀವರು ಬ್ರಹ್ಮ, ಶೇಷ, ಕಾಮ, ಕಾಮಪುತ್ರ ಅನಿರುದ್ಧರು. ಅಹಂಕಾರತತ್ವದಲ್ಲಿ ಸೂಕ್ಷ್ಮ ಸ್ಥೂಲ ಎಂಬ ಭೇದವಿರುವುದರಿಂದ ಸೂಕ್ಷ್ಮಾಹಂಕಾರಕ್ಕೆ ಶೇಷನೂ ಸ್ಥೂಲಾಹಂಕಾರಕ್ಕೆ ಕಾಮನೂ ಅಭಿಮಾನಿ ಎಂದು ಕಾಪಿಲೇಯದಲ್ಲಿ ಹೇಳಿದೆ.

* * *

ಜಗತ್‌ಸೃಷ್ಟಿ ಮಾಡುವುದಕ್ಕೆ ಮೊದಲಿಗೆ ಪ್ರಳಯಕಾಲದ ತಮಸ್ಸನ್ನು ಪರಮಾತ್ಮ ದೂರ ಸರಿಸಿದನೆಂದು ಕಪಿಲನು ಮಾತೆಗೆ ಹೇಳುತ್ತಾನೆ.

ವಿಶ್ವಮಾತ್ಮಗತಂ ವ್ಯಂಜನ್ ಕೂಟಸ್ಥೋ ಜಗದಂಕುರಃ ।
ಸ್ವತೇಜಸಾಽಪಿಬತ್ ತೀವ್ರಮಾತ್ಮಪ್ರಸ್ವಾಪನಂ ತಮಃ ॥ ೨೦ ॥

ತನ್ನಲ್ಲಿರುವ ಜಗತ್ತನ್ನು ಸೃಷ್ಟಿಯಿಂದ ವ್ಯಕ್ತ ಮಾಡಲು ಹೊರಟ ಕೂಟಸ್ಥನಾದ ಪರಮಾತ್ಮ ಆ ಜಗತ್ತನ್ನು ಜೀವರಿಗೆ ಗೋಚರವಾಗಿಸುವುದಕ್ಕಾಗಿ ಜೀವಾತ್ಮರಿಗೆ ಏನೂ ಕಾಣದಂತೆ ಮಾಡುವ ದಟ್ಟವಾದ ತಮಸ್ಸನ್ನು ತನ್ನ ಪ್ರಭೆಯಿಂದ ದೂರ ಸರಿಸಿದನು.

[೧]ಇಲ್ಲಿ 'ಜಗದಂಕುರಃ' ಎಂದರೆ ಜಗತ್ತೆಂಬ ವೃಕ್ಷಕ್ಕೆ ಅಂಕುರದಂತಿರುವ ಮಹತ್ತತ್ವವು ತನ್ನನ್ನು ಪ್ರಳಯಕಾಲದಲ್ಲಿ ಪ್ರಕೃತಿಯಲ್ಲಿ ಲೀನಗೊಳಿಸಿದ್ದ ತಮೋಗುಣವನ್ನು ತನ್ನ ತೇಜಸ್ಸಿನಿಂದ ಅಭಿಭವಗೊಳಿಸಿತು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಮಹತ್ತತ್ವವು ಕೂಟಸ್ಥ ನಿರ್ವಿಕಾರವೆನಿಸಲಾರದು. ಅದೇ ಮುಂದೆ ಅಹಂಕಾರಾದಿ ರೂಪದಿಂದ ವಿಕಾರ ಹೊಂದುವ ಜಗದ್ವೃಕ್ಷವಾಗಿ ಬೆಳೆಯಲಿರುವ ಅಂಕುರ. ಅದು ತಾನೇ ತಮೋಗುಣವನ್ನು ಅಭಿಭವ ಮಾಡಲು ಶಕ್ತವೂ ಅಲ್ಲ. ಅದರಿಂದ ಜಗದಂಕುರವೆಂದರೆ ಜಗದ್‌ವೃಕ್ಷದ ಅಂಕುರವನ್ನು ಹುಟ್ಟಿಸುವ ಕೂಟಸ್ಥ

---

೧. ಮಹಾಂಸ್ತೀವ್ರಂ ಪ್ರಲಯಕಾಲೀನಂ ತಮೋಽಪಿಬತ್ । ಕೂಟಸ್ಥೋ ಲಯ ವಿಕ್ಷೇಪಶೂನ್ಯಃ –ಶ್ರೀಧರಃ

ಸ್ವಸ್ಮಿನ್ ಕಾರಣರೂಪೇ ಚಿತ್ತರೂಪತ್ವಾನ್ಮನೋವಲ್ಲಯವಿಕ್ಷೇಪಶೂನ್ಯಃ । –ರಾಧಾರಮಣದಾಸಃ

ನಿತ್ಯನಾದ ಪರಮಾತ್ಮ. ಅವನು ಆತ್ಮರಿಗೆ ಅಂದರೆ ಜೀವಾತ್ಮರಿಗೆ ಏನೂ ಕಾಣದಂತೆ ಮಾಡುವ ತಮಸ್ಸನ್ನು ತನ್ನ ಪ್ರಭೆಯಿಂದ ದೂರ ಮಾಡಿದ ಎಂದೇ ವಿವರಣೆ ನೀಡಬೇಕು. ಜಗತ್ತನ್ನು ತನ್ನ ಮಡಿಲಲ್ಲಿಟ್ಟುಕೊಂಡು ಲಾಲನಪಾಲನ ಮಾಡುವುದರಿಂದಲೂ 'ಜಗತ್ ಅಂಕೇ ರಮಯತಿ' ಎಂಬ ವ್ಯುತ್ಪತ್ತಿಯಂತೆ 'ಜಗದಂಕುರ'ನೆನಿಸುತ್ತಾನೆ ಪರಮಾತ್ಮ.

ಅಂಕೇ ರಮಯತೇ ಯಸ್ಮಾತ್ ಕೇಶವೋ ಜಗದಂಕುರಃ ।
ಮಹಾಂತಂ ಯೋಽಸೃಜಜ್ಜೀವಮೋಹಕಂ ಚ ತಮೋಽಗ್ರಸತ್ ॥
ಇತಿ ಚ ।

ಜಗತ್ತನ್ನು ತನ್ನ ಮಡಿಲಲ್ಲಿಟ್ಟುಕೊಂಡು ಲಾಲಿಸುವುದರಿಂದಲೂ ಜಗತ್ತಿನ ಅಂಕುರದಂತಿರುವ ಮಹತ್ತತ್ತ್ವವನ್ನು ಸೃಷ್ಟಿಸುವುದರಿಂದಲೂ ಜಗದಂಕುರನೆನಿಸಿದ ಕೇಶವನು ಜೀವರಿಗೆ ಜಗತ್ತನ್ನು ಕಾಣದಂತೆ ಮಾಡುವ ತಮಸ್ಸನ್ನು ದೂರ ಸರಿಸಿದ ಎಂದೂ ಹೇಳಿದೆ.

* * *

ಮಹತ್ತತ್ತ್ವ ನಿಯಾಮಕನಾದ ವಾಸುದೇವ ಮಹತ್ತತ್ತ್ವದಿಂದ ಚಿತ್ತವನ್ನು ಸೃಷ್ಟಿಮಾಡಿದನೆಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಯತ್ತತ್ ಸತ್ವಗುಣಂ ಸ್ವಚ್ಛಂ ಶಾಂತಂ ಭಗವತಃ ಪದಮ್ ।
ಯದಾಹುರ್ವಾಸುದೇವಾಖ್ಯಂ ಚಿತ್ತಂ ತನ್ಮಹದಾತ್ಮಕಮ್ ॥ ೨೨ ॥

ಸರ್ವವೇದಪ್ರಸಿದ್ಧ, ಪೂರ್ಣಾನಂದಾದಿಗುಣ ಉಳ್ಳದ್ದು, ಬಿಳಿ ಬಣ್ಣದ್ದು ಪ್ರಸನ್ನ ವಾಗಿದೆ ಇಂತಹ ಭಗವಂತನ ವಾಸುದೇವ ಎಂಬ ರೂಪವು ಮಹತ್ತತ್ತ್ವಾತ್ಮಕವಾದ ಚಿತ್ತವನ್ನು ಸೃಜಿಸಿತು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಪ್ರಾಸಂಗಿಕವಾಗಿ ವಾಸುದೇವಾದಿ ಚತುರ್ವ್ಯೂಹೋಪಾಸನೆ ಉಕ್ತವಾಗಿದೆ. ಸ್ವಚ್ಛ ನಿರ್ಮಲ, ಶಾಂತ– ರಾಗಾದಿ

೧. ಪ್ರಸಂಗಾತ್ ಚತುರ್ವ್ಯೂಹೋಪಾಸನಾಮಾಹ ಯತ್ತದಿತಿ । ಅಯಮರ್ಥಃ । ಅಧಿಭೂತರೂಪೇಣ ತಸ್ಯೈವ ಮಹಾನಿತಿ ಸಂಜ್ಞಾ, ಅಧ್ಯಾತ್ಮರೂಪೇಣ ಚಿತ್ತಮಿತಿ । ಉಪಾಸ್ಯರೂಪೇಣ ವಾಸುದೇವ ಇತಿ । ಅಧಿಷ್ಠಾತಾ ತು ತಸ್ಯ ಕ್ಷೇತ್ರಜ್ಞಃ । ಏವಮಹಂಕಾರೇ ಸಂಕರ್ಷಣ ಉಪಾಸ್ಯಃ । ರುದ್ರೋಽಧಿಷ್ಠಾತಾ । ಮನಸ್ಯನಿರುದ್ಧಃ ಉಪಾಸ್ಯಃ । ಚಂದ್ರೋಽಧಿಷ್ಠಾತಾ । ಬುದ್ಧೌಪ್ರದ್ಯುಮ್ನಉಪಾಸ್ಯಃ । ಬ್ರಹ್ಮಾಧಿಷ್ಠಾತೇತಿ ಜ್ಞಾತವ್ಯಂ । –ಶ್ರೀಧರಃ

ಶೂನ್ಯವಾದ ಚಿತ್ತವೇ ಭಗವತಃ ಪದಂ–ಅಂದರೆ ಉಪಾಸನಾಪೀಠ. ಅದೇ ಮಹದಾತ್ಮಕಂ– ಅಧಿಭೂತದಲ್ಲಿ ಮಹತ್ತತ್ತ್ವ. ಅದರಲ್ಲಿ ವಾಸುದೇವೋಪಾಸನೆ. ಅಧಿಷ್ಠಾತೃ ಕ್ಷೇತ್ರಜ್ಞ . ಹಾಗೇ ಅಹಂಕಾರ ಬುದ್ಧಿ ಮನಸ್ಸುಗಳಲ್ಲಿ ಕ್ರಮವಾಗಿ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರ ಉಪಾಸನೆ. ಅಧಿಷ್ಠಾತೃಗಳು ರುದ್ರ ಬ್ರಹ್ಮ ಚಂದ್ರರು ಎಂದು. ಇದಕ್ಕೆ ಯಾರೂ ಪ್ರಮಾಣದ ಆಧಾರ ಕೊಟ್ಟಿಲ್ಲ. 'ಸತ್ವಗುಣಂ' ಎಂದರೆ ಸತ್ವಗುಣ ಅಧಿಕವಾಗಿ ಉಳ್ಳದ್ದು ಚಿತ್ತ ಎಂದೂ [1]ಶುಕದೇವವ್ಯಾಖ್ಯಾನ. ಇದು ಪ್ರಮಾಣವಿರುದ್ಧ. ಪರಮಾತ್ಮಪ್ರಕರಣದಲ್ಲಿ ಸತ್ವಶಬ್ದ ಬಂದರೆ ಅದಕ್ಕೆ ಮುಖ್ಯವೃತ್ತಿಯಿಂದ ಪೂರ್ಣಾನಂದಾದಿಗುಣಗಳನ್ನೇ ಅರ್ಥವಾಗಿ ಗ್ರಹಿಸಬೇಕೆಂದು ಪ್ರಮಾಣವಚನವಿದೆ. ಅದರಿಂದ ಶ್ಲೋಕದಲ್ಲಿ ಹೀಗೇ ಅನ್ವಯ–

ಯದ್ ವಾಸುದೇವಾಖ್ಯಂ ಭಗವದ್ರೂಪಂ ತತೋ ಮಹದಾತ್ಮಕಂ ಚಿತ್ತಂ ಜಾಯತೇ ।

ಸತ್ವಶಬ್ದೇನ ಚೋಚ್ಯಂತೇ ಪೂರ್ಣಾನಂದಾದಯೋ ಗುಣಾಃ ॥

ಇತಿ ಚ ।

ಮಹತ್ತತ್ವಗತೋ ಯೋಽಸೌ ವಾಸುದೇವಾಭಿಧೋ ಹರಿಃ ।
ಸ ಚಿತ್ತಜನಕಃ ಪ್ರೋಕ್ತಃ ಪ್ರಾಣಿನಾಂ ಚ ಪೃಥಕ್ಪೃಥಕ್ ॥

ಇತಿ ಚ ॥

'ಭಗವತಃ ಪದಂ' ಎಂದರೆ ಭಗವಂತನ ರೂಪವಾದ ವಾಸುದೇವನಿಂದ ಮಹತ್ತತ್ತ್ವಾತ್ಮಕವಾದ, ಅಂದರೆ ಮಹತತ್ತ್ವೋಪಾದಾನಕವಾದ ಚಿತ್ತ ಎಂಬ ಅಂತಃಕರಣಪ್ರಭೇದವು ಹುಟ್ಟುತ್ತದೆ ಎಂದು ಶ್ಲೋಕಾನ್ವಯ.

'ಸತ್ವಗುಣಂ' ಎಂಬಲ್ಲಿ ಸತ್ವ ಎಂದರೆ ಭಗವತ್‌ಪ್ರಕರಣದಲ್ಲಿ ಮುಖ್ಯವೃತ್ತಿಯಿಂದ ಪೂರ್ಣಾನಂದಾದಿಗುಣಗಳನ್ನೇ ಇಟ್ಟುಕೊಳ್ಳಬೇಕು, ಪ್ರಕೃತಿಯ ಸತ್ವಗುಣವನ್ನಲ್ಲ ಎಂದೂ ಹೇಳಿದೆ. ಮಹತ್ತತ್ವದಲ್ಲಿ ನಿಯಾಮಕನಾಗಿರುವ ವಾಸುದೇವನಾಮಕ ಹರಿ ಎಲ್ಲ ಪ್ರಾಣಿಗಳಲ್ಲಿ ಬೇರೆ ಬೇರೆಯಾಗಿ ಚಿತ್ತವನ್ನು ಸೃಜಿಸುವವನು ಎಂದೂ ಹೇಳಿದೆ.

* * *

ಚಿತ್ತದ ಸ್ವಾಭಾವಿಕ ಲಕ್ಷಣಗಳನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಸ್ವಚ್ಛತ್ವಮವಿಕಾರಿತ್ವಂ ಶಾಂತತ್ವಮಿತಿ ಚೇತಸಃ ।
ವೃತ್ತಿಭಿರ್ಲಕ್ಷಣಂ ಪ್ರೋಕ್ತಂ ಯಥಾಽಪಾಂ ಪ್ರಕೃತಿಃ ಪರಾ ॥ ೨೩ ॥

೧. ಸತ್ತ್ವಗುಣಂ ಸತ್ತ್ವಗುಣಬಹುಲಂ ಭಗವತಃ ಪದಮುಪಲಬ್ಧಿಸ್ಥಾನಂ । ವಾಸುದೇವಾಖ್ಯಂ ವಾಸುದೇವೋಪಾಸನಸ್ಥಾನಮಾಹುರಿತ್ಯನ್ವಯಃ । –ಶುಕದೇವಃ

ಚಿತ್ತದ ಲಕ್ಷಣವಿದು– ನಿರ್ಮಲ. ಹೆಚ್ಚು ವಿಕಾರಗಳಿರುವುದಿಲ್ಲ. ಮತ್ತು ನಿಶ್ಚಲವಾಗಿರುತ್ತದೆ. ಇದು ಒಳ್ಳೆಯ ಚಿತ್ತದ ಸ್ವಾಭಾವಿಕವಾದ ಲಕ್ಷಣ. ಸ್ವಚ್ಛತ್ವಾದಿಗಳು ನೀರಿನ ಸ್ವಾಭಾವಿಕ ಲಕ್ಷಣವಾಗಿರುವಂತೆ ಚಿತ್ತದ ಲಕ್ಷಣವೂ ಆಗಿರುತ್ತವೆ.

ಮಳೆಗಾಲದಲ್ಲಿ ನೀರು ರಾಡಿಯಾಗಿರುತ್ತದೆ. ನೊರೆ ಮುಂತಾದ ವಿಕಾರವಿರುತ್ತದೆ. ವೇಗದಿಂದ ಹರಿಯುತ್ತ ಚಂಚಲವಾಗಿರುತ್ತದೆ. ಮಳೆಗಾಲ ಕಳೆದರೆ ನೀರು ತಿಳಿಯಾಗುತ್ತದೆ. ನೊರೆ ಮುಂತಾದವು ಕಡಿಮೆಯಾಗುತ್ತದೆ. ನಿಧಾನವಾಗಿ ಹರಿಯುತ್ತದೆ. ಹೆಚ್ಚು ಚಂಚಲವಾಗಿರುವುದಿಲ್ಲ. ಹಾಗೇ ಸಜ್ಜನರ ಮನಸ್ಸು ಶ್ರವಣಮನನಾದಿಗಳನ್ನು ಮಾಡದಿದ್ದಾಗ ರಾಗಾದಿ ಕಲುಷಿತವಾಗಿರುತ್ತದೆ. ಕಾಮಾದಿ ಉಪದ್ರವಯುಕ್ತವಾಗಿದ್ದು ಚಂಚಲವಾಗಿರುತ್ತದೆ. ಶ್ರವಣಾದಿಗಳನ್ನು ಮಾಡಿದಾಗ ಈ ದೋಷಗಳು ತೊಲಗುತ್ತವೆ. ಸ್ವಾಭಾವಿಕವಾಗಿರುವ ಸ್ವಚ್ಛತ್ವ ಶಾಂತತ್ವ ಅವಿಕಾರಿತ್ವ ಗುಣ ವ್ಯಕ್ತವಾಗುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಹಿಂದಿನ ಶ್ಲೋಕದಲ್ಲಿ ಹೇಳಿದ ಚಿತ್ತಲಕ್ಷಣವಾದ ಸ್ವಚ್ಛತ್ವಶಾಂತತ್ವಗಳನ್ನು ಪುನಃ ಈ ಶ್ಲೋಕದಲ್ಲಿ ಹೇಳಲಾಗಿದೆ. ಪುನರುಕ್ತಿ ಪರಿಹಾರ ಹೇಗೆ? ಹೇಳಿಲ್ಲ. ವಸ್ತುತಃ ಹಿಂದಿನ ಶ್ಲೋಕದಲ್ಲಿ 'ಭಗವತಃ ಪದಂ' ಭಗವಂತನ ಸ್ವರೂಪಕ್ಕೆ ಲಕ್ಷಣ. ಈ ಶ್ಲೋಕದಲ್ಲಿ ಜಡವಾದ ಚಿತ್ತಕ್ಕೆ ಲಕ್ಷಣ. ಶಬ್ದ ಒಂದೇ ಆದರೂ ಸಂದರ್ಭಾನುಸಾರವಾಗಿ ಅರ್ಥ ಬೇರೆ.

ಚಿತ್ತಸ್ಯ ಸ್ವಚ್ಛತ್ವಾದಯಃ ಪೃಥಗ್‌ಗುಣಾ ಉಚ್ಯಂತೇ ಸ್ವಚ್ಛತ್ವಮಿತ್ಯಾದಿ ।

ಸ್ತಿಮಿತೋದಕಚಿತ್ತಾದೇರವಿಕಾರೋಽಲ್ಪ ವಿಕ್ರಿಯಾ ।

ಇತಿ ತತ್ವವಿವೇಕೇ ।

ವೃತ್ತಿಃ ಸ್ವಭಾವೋ ವೃತ್ತಂ ಚ ಸ್ಥಿತಿರಿತ್ಯಭಿಧೀಯತೇ ॥

ಇತಿ ಶಬ್ದನಿರ್ಣಯೇ ।

'ವೃತ್ತಿಭಿರ್ಲಕ್ಷಣಂ ಪ್ರೋಕ್ತಂ' ಇತಿ ಸ್ವಾಭಾವಿಕಂ ಲಕ್ಷಣಮಿತ್ಯರ್ಥಃ ॥

ಹಿಂದೆ ಭಗವಂತನಿಗೆ ಹೇಳಿದ ಸ್ವಚ್ಛತ್ವಾದಿಗಳಿಗಿಂತ ಬೇರೆಯೇ ಆದ ಸ್ವಚ್ಛತ್ವಾದಿಗುಣಗಳು ಚಿತ್ತಕ್ಕೆ ಈ ಶ್ಲೋಕದಲ್ಲಿ 'ಸ್ವಚ್ಛತ್ವಂ' ಎಂದು ಮುಂತಾಗಿ ಉಕ್ತವಾಗುತ್ತಿವೆ.

ಚಿತ್ತಕ್ಕೆ ನಿರ್ವಿಕಾರತ್ವ ಹೇಗೆ ಲಕ್ಷಣವಾಗುವುದು ಎಂದರೆ ನಿಶ್ಚಲವಾದ ನೀರು ಮನಸ್ಸು ಮುಂತಾದವುಗಳಿಗೆ ಹೇಳುವ ನಿರ್ವಿಕಾರತ್ವವೆಂದರೆ ವಿಕಾರ ಅಲ್ಪ ಎಂದು ವಿವಕ್ಷೆ ಇರುತ್ತದೆ ಎಂದು ತತ್ವವಿವೇಕದಲ್ಲಿದೆ. ವೃತ್ತಿಭಿಃ ಎಂದರೆ 'ಸ್ವಭಾವಗಳಿಂದ'

ಸ್ವಾಭಾವಿಕವಾಗಿ ಎಂದರ್ಥ. 'ವೃತ್ತಿ ಸ್ವಭಾವ ವೃತ್ತ ಸ್ಥಿತಿ' ಎಂದು ಸಮಾನಾರ್ಥ ಶಬ್ದಗಳೆಂದು ಶಬ್ದನಿರ್ಣಯದಲ್ಲಿ ಹೇಳಿದೆ.

ಅದರಿಂದ 'ವೃತ್ತಿಭಿರ್ಲಕ್ಷಣಂ ಪ್ರೋಕ್ತಂ' ಎಂದರೆ ಸ್ವಾಭಾವಿಕಲಕ್ಷಣ ಉಕ್ತವಾಗಿದೆ ಎಂದರ್ಥ.

* * *

ಮಹತ್ತತ್ತ್ವದಿಂದ ಅಹಂಕಾರತತ್ತ್ವದ ಉತ್ಪತ್ತಿಯನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಮಹತ್ತತ್ತ್ವಾದ್ ವಿಕುರ್ವಾಣಾದ್ ಭಗವದ್ವೀರ್ಯಸಂಭವಾತ್ ।
ಕ್ರಿಯಾಶಕ್ತಿರಹಂಕಾರಸ್ತ್ರಿವಿಧಃ ಸಮಪದ್ಯತ ॥ ೨೪ ॥

ಭಗವಂತನ ವೀರ್ಯದಿಂದ ಹುಟ್ಟಿದ ಮಹತ್ತತ್ತ್ವವು ಪರಿಣಾಮ ಹೊಂದುವಾಗ ಕ್ರಿಯಾಶಕ್ತಿ ಉಳ್ಳ ತ್ರಿವಿಧ ಅಹಂಕಾರ ಜನಿಸಿತು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಕ್ರಿಯಾಶಕ್ತಿ ಉಳ್ಳ ಅಹಂಕಾರವೆಂದರೆ ಹೀಗೆ ಮೇಲೆ ಕಾಣುವ ಅರ್ಥವನ್ನು ಮಾತ್ರವೇ ಹೇಳಿ ಸುಮ್ಮನಾಗಿದ್ದಾರೆ. ಆದರೆ ಇಲ್ಲಿ ಬರೀ ಜಡತತ್ತ್ವಸೃಷ್ಟಿಯನ್ನು ಹೇಳುತ್ತಿಲ್ಲ. ಜೊತೆಗೆ ಅಭಿಮಾನಿಸೃಷ್ಟಿಯೂ ವಿವಕ್ಷಿತವಾಗಿದೆ. ಆಗ ಮಹತ್ತತ್ತ್ವಾಭಿಮಾನಿಯಲ್ಲಿ ಜ್ಞಾನಶಕ್ತಿ, ಅಹಂಕಾರಾಭಿಮಾನಿಯಲ್ಲಿ ಕ್ರಿಯಾಶಕ್ತಿ ಎಂದು ವ್ಯವಸ್ಥೆಯನ್ನು ಹೇಳಲು ಬರುವುದಿಲ್ಲ. ಮಹತ್ತತ್ತ್ವಾದ್ಯಭಿಮಾನಿಯಲ್ಲಿ ಜ್ಞಾನಶಕ್ತಿಯೊಂದಿಗೆ ಕ್ರಿಯಾಶಕ್ತಿಯೂ ಇದೆ. ಅಹಂಕಾರಾಭಿಮಾನಿಯಲ್ಲಿ ಕ್ರಿಯಾಶಕ್ತಿಯೊಂದಿಗೆ ಜ್ಞಾನಶಕ್ತಿಯೂ ಮನಸ್ತತ್ತ್ವಾಭಿಮಾನಿಗಳಿಗಿಂತ ಅಧಿಕವೇ ಇದೆ. ಅದರಿಂದ ಮಹತ್ತತ್ತ್ವಾಭಿಮಾನಿಯಲ್ಲಿ ಅಹಂಕಾರಾಭಿಮಾನಿಗಿಂತ ಹೆಚ್ಚಾಗಿಯೇ ಕ್ರಿಯಾಶಕ್ತಿ ಇದ್ದರೂ ತನ್ನಲ್ಲಿರುವ ಜ್ಞಾನಶಕ್ತಿಗಿಂತ ಅದು ಕಿಂಚಿತ್ ಕಡಿಮೆಯಾದ್ದರಿಂದ, ಅದನ್ನು ವಿವಕ್ಷೆ ಮಾಡದೆ, ಜ್ಞಾನಶಕ್ತಿಯನ್ನು ಮಾತ್ರ ಹೇಳಿದೆ. ಅಹಂಕಾರಾಭಿಮಾನಿಯಲ್ಲಿಯೂ ಹಾಗೇ ತನ್ನಲ್ಲಿರುವ ಜ್ಞಾನಶಕ್ತಿ ಕ್ರಿಯಾಶಕ್ತಿಗಿಂತ ಸ್ವಲ್ಪ ಕಡಿಮೆ ಎನ್ನುವ ಅಭಿಪ್ರಾಯದಿಂದ ಜ್ಞಾನಶಕ್ತಿಯನ್ನು ಹೇಳದೆ ಕ್ರಿಯಾಶಕ್ತಿಯನ್ನೇ ಹೇಳಿದೆ.

ಜ್ಞಾನಪ್ರಧಾನಸ್ತು ಮಹಾನ್ ಅಹಂಕಾರಃ ಕ್ರಿಯಾಧಿಕಃ ।
ಇತರಾಪೇಕ್ಷಯಾ ಸೋಽಪಿ ಜ್ಞಾನಾಧಿಕ ಇತೀರಿತಃ ॥ ಇತಿ ಚ ।

ಮಹತ್ತತ್ತ್ವಾಭಿಮಾನಿ ಚತುರ್ಮುಖನಲ್ಲಿ ಅಹಂಕಾರಾಭಿಮಾನಿ ರುದ್ರಮುಂತಾದವರಿಗಿಂತ ಅಧಿಕ ಕ್ರಿಯಾಶಕ್ತಿ ಇದ್ದರೂ ಅದಕ್ಕಿಂತ ಅಧಿಕ ಜ್ಞಾನಶಕ್ತಿ

ಇರುವುದರಿಂದ ಜ್ಞಾನಪ್ರಧಾನನೆನಿಸಿ ಜ್ಞಾನಶಕ್ತಿಉಳ್ಳವನೆಂದು ಉಕ್ತನಾಗುತ್ತಾನೆ. ಅಹಂಕಾರಾ ಭಿಮಾನಿಯೂ ಹೀಗೇ ಪಾರ್ವತ್ಯಾದಿ ಇತರರಿಗಿಂತ ಅಧಿಕ ಜ್ಞಾನಶಕ್ತಿ ಉಳ್ಳವನೇ ಆದರೂ ಅದಕ್ಕಿಂತ ಅಧಿಕ ಕ್ರಿಯಾಶಕ್ತಿ ಇರುವುದರಿಂದ 'ಕ್ರಿಯಾಶಕ್ತಿ ಉಳ್ಳವನು' ಎಂದು ಉಕ್ತನಾಗುತ್ತಾನೆ. ಎಂದೂ ಹೇಳಿದೆ.

* * *

ತ್ರಿವಿಧ ಅಹಂಕಾರಗಳ ಕಾರ್ಯಗಳನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ವೈಕಾರಿಕೋಽಧಿದೈವಂ ತು ಬುದ್ಧಿಃ ಪ್ರಾಣಶ್ಚ ತೈಜಸಃ ।
ತಾಮಸಸ್ತ್ವರ್ಥಮಾತ್ರಂ ಚ ಗುಣವ್ಯತಿಕರಸ್ತ್ರಿವೃತ್ ॥ ೨೬ ॥

ವೈಕಾರಿಕಾಹಂಕಾರದಿಂದ ಇಂದ್ರಿಯಾಭಿಮಾನಿ ದೇವತೆಗಳ ಶರೀರೋತ್ಪತ್ತಿಯಾಯಿತು. ತೈಜಸಾಹಂಕಾರದಿಂದ ಬುದ್ಧಿತತ್ತ್ವ ಅದರ ಅಭಿಮಾನಿ ಉಮೆ ಮತ್ತು ಆಹಂಕಾರಿಕ ಪ್ರಾಣರ ಉತ್ಪತ್ತಿಯಾಯಿತು. ತಾಮಸಾಹಂಕಾರದಿಂದ ಶಬ್ದಾದಿರೂಪ ವಿಷಯಪದಾರ್ಥಗಳುಂಟಾದುವು. ಸತ್ತ್ವಾದಿಗುಣಗಳ ವ್ಯತ್ಯಾಸ ಉಳ್ಳದ್ದಾದ್ದರಿಂದ ತ್ರಿವಿಧಾಹಂಕಾರ ಮೂರು ಬಗೆಯ ಕಾರ್ಯಗಳನ್ನು ತನ್ನಲ್ಲಿರುವ ಸತ್ತ್ವಾದಿ ಮೂರು ಗುಣಗಳಿಗನುಸಾರವಾಗಿ ಉತ್ಪಾದಿಸಿತು.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಈ ಶ್ಲೋಕವಿಲ್ಲ. ಹಿಂದಿನ ಶ್ಲೋಕದಲ್ಲಿ ತ್ರಿವಿಧ ಅಹಂಕಾರಗಳ ಮೂರು ಕಾರ್ಯಗಳಲ್ಲಿ ಕೆಲವನ್ನು ಮಾತ್ರ ಹೇಳಿದೆ. ಉಳಿದುವನ್ನು ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕೆಂದು ಅವರ ಅಭಿಪ್ರಾಯ. ಶ್ರೀಮದಾಚಾರ್ಯರ ಪಾಠದಲ್ಲಿ ಪ್ರತ್ಯೇಕವಾಗಿ ಅವುಗಳನ್ನು ಹೇಳುವ ಈ ಶ್ಲೋಕ ಲಭ್ಯವಿದೆ. ಬೇರೆ ವ್ಯಾಖ್ಯಾನಕಾರರು ಹಿಂದಿನ ಶ್ಲೋಕದಲ್ಲಿವೈಕಾರಿಕ ಅಹಂಕಾರದಿಂದ ದೇವತಾಶರೀರೋತ್ಪತ್ತಿಯನ್ನೂ ತಾಮಸಾಹಂಕಾರದಿಂದ ತನ್ಮಾತ್ರೋತ್ಪತ್ತಿಯನ್ನೂ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕೆಂದು ಹೇಳಿ ತೈಜಸಾಹಂಕಾರಕ್ಕೆ ಹೇಳಿದ ಇಂದ್ರಿಯೋತ್ಪತ್ತಿಯೊಂದಿಗೆ ಬುದ್ಧಿಪ್ರಾಣೋತ್ಪತ್ತಿಯನ್ನೂ ಇಟ್ಟುಕೊಳ್ಳುವುದನ್ನು ಮರೆತಿದ್ದಾರೆ. ಮುಂದೆ ೩೩ನೇ ಶ್ಲೋಕದಲ್ಲಿ ಜ್ಞಾನಕರ್ಮೇಂದ್ರಿಯಗಳ ತೈಜಸಾಹಂಕಾರಜನ್ಯತ್ವಕ್ಕೆ ಅದನ್ನೇ ಹೇತುವಾಗಿ ತೋರಿಸಿದ್ದಾರೆ. ಪ್ರಕೃತ ಶ್ಲೋಕದಲ್ಲಿ 'ಅಧಿದೈವಂ' ಎಂದರೆ ಇಂದ್ರಿಯಾಭಿಮಾನಿದೇವತೆಗಳಿಂದ ಅಧಿಷ್ಠಿತವಾದ ಅವರ ಶರೀರ ಎಂದೂ 'ವೈಕಾರಿಕ' ಎಂದರೆ ಪಂಚಮ್ಯರ್ಥದಲ್ಲಿ ಪ್ರಥಮಾ ವಿಭಕ್ತಿ ಇಟ್ಟುಕೊಂಡು ವೈಕಾರಿಕ ಅಹಂಕಾರದಿಂದ ಉತ್ಪನ್ನವಾಯಿತೆಂದೂ ಅರ್ಥ ತಿಳಿಯಬೇಕು. ಇದಕ್ಕೆ ಪ್ರಮಾಣವಿದೆ–

ದೇವತಾಧಿಕೃತಂ ಯತ್ತದಧಿದೈವಮಿತಿ ಸ್ಮೃತಮ್ ॥ ಇತಿ ಚ ।

ವೈಕಾರಿಕೋಽಧಿದೈವಮಿತ್ಯಾದಿ ಪಂಚಮ್ಯರ್ಥೇ ।

ಸಪ್ತಸು ಪ್ರಥಮಾ ತತ್ರ ಸ್ವಾತಂತ್ರ್ಯಂ ಯದ್ ವಿವಕ್ಷಿತಮ್ ।
ಇತಿ ಶಬ್ದನಿರ್ಣಯೇ ।

ಯಾವ ವಸ್ತುವಿನಲ್ಲಿ ದೇವತೆಗೆ ಅಧಿಕಾರವೋ ಆ ವಸ್ತು ಅಧಿದೈವವೆನಿಸುತ್ತದೆ ಎಂದೂ ಹೇಳಿದೆ.

ವೈಕಾರಿಕೋಽಧಿದೈವಂ, ತೈಜಸಃ ಬುದ್ಧಿಃ ಪ್ರಾಣಶ್ಚ , ತಾಮಸಃ ಅರ್ಥಮಾತ್ರಂ' ಎಂದು ವೈಕಾರಿಕಾದಿಶಬ್ದಗಳನ್ನು ಪ್ರಥಮಾವಿಭಕ್ತ್ಯಂತವಾಗಿ ಹೇಳಿದ್ದು ಪಂಚಮೀವಿಭಕ್ತಿಯ ಅರ್ಥದಲ್ಲಿ ಎಂದು ತಿಳಿಯ ಬೇಕು.

ಏಳೂ ವಿಭಕ್ತ್ಯರ್ಥಗಳಲ್ಲಿ ಪ್ರಥಮಾ ವಿಭಕ್ತಿ ಪ್ರಯೋಗವಿದೆ. ಅದು ಎಲ್ಲಿ ಸ್ವಾತಂತ್ರ್ಯವಿವಕ್ಷಿತವಾಗಿದೆಯೋ ಅಲ್ಲಿ ಎಂದು ತಿಳಿಯಬೇಕು ಎಂದು ಶಬ್ದನಿರ್ಣಯದಲ್ಲಿದೆ.

'ಅಧಿದೈವಂ' ಎಂಬಲ್ಲಿ ದೈವವೆಂದರೆ ದೇವ, ದೇವತೆ. ದೇವತೆ ಎಲ್ಲಿ ಅಧಿಕೃತವಾಗಿದೆ, ಅಧಿಷ್ಠಾತೃ ಆಗಿದೆ, ಅಂಥ ಶರೀರ ಅಧಿದೈವ, ದೇವತಾಶರೀರ ಎಂದರ್ಥ. ಈ ವ್ಯುತ್ಪತ್ತಿಯು ಪ್ರಮಾಣಸಿದ್ಧವಾಗಿದೆ. ವೈಕಾರಿಕಃ ತೈಜಸಃ ತಾಮಸಃ ಎಂದು ಮೂರು ಕಡೆಗಳಲ್ಲಿಯೂ ಪಂಚಮ್ಯರ್ಥದಲ್ಲಿ ಪ್ರಥಮಾ ವಿಭಕ್ತಿ. ಇದು 'ಸಪ್ತಸು ಪ್ರಥಮಾ' ಎಂಬ ಮಹಾವ್ಯಾಕರಣ ಸೂತ್ರಾನುಸಾರ ವೈದಿಕ ಮತ್ತು ವೇದತುಲ್ಯ ಪ್ರಯೋಗಗಳಲ್ಲಿ ಸಿದ್ಧವೇ ಆಗಿದೆ. ಆದರೂ ಶಬ್ದನಿರ್ಣಯದಲ್ಲಿ ಈ ವಿಭಕ್ತಿವ್ಯತ್ಯಾಸಕ್ಕೆ ವಿಶೇಷಾರ್ಥ ಉಕ್ತವಾಗಿದೆ. ಪ್ರಕೃತ ಜಡವಾದ ವೈಕಾರಿಕಾಹಂಕಾರವು ದೇವತಾಶರೀರವಾಗಿ ಪರಿಣಾಮ ಹೊಂದುತ್ತದೆ. ಪರಿಣಾಮ ಹೊಂದುವ ಕ್ರಿಯೆಯಲ್ಲಿ ಅದಕ್ಕೆ ಸ್ವಾತಂತ್ರ್ಯ ಔಪಚಾರಿಕವಾಗಿ ಇದೆ. ಅರ್ಥಾತ್ ಅದು ಉಪಾದಾನಕಾರಣವಾಗಿದೆ, ನಿಮಿತ್ತವಲ್ಲ ಎಂದು ತಿಳಿದು ಬರುತ್ತದೆ. ಹಾಗೇ ವೈಕಾರಿಕಾಹಂಕಾರದ ಅಭಿಮಾನಿಚೇತನನಾದ ಮಹಾರುದ್ರನಿಗೆ ದೇವತಾಶರೀರ ಸೃಷ್ಟಿಯಲ್ಲಿ, ತೈಜಸಾಭಿಮಾನಿಯಾದ ಅವನಿಗೇ ಬುದ್ಧ್ಯಾದಿ ಸೃಷ್ಟಿಯಲ್ಲಿ, ತಾಮಸಾಭಿಮಾನಿಯಾದ ಅವನಿಗೇ ತನ್ಮಾತ್ರಾಸೃಷ್ಟಿಯಲ್ಲಿ ಸ್ವಾತಂತ್ರ್ಯವಿದೆ ಎಂದು ಹೇಳುವ ವಿವಕ್ಷೆಯಿಂದ ಪಂಚಮೀವಿಭಕ್ತಿಯನ್ನು ಹೇಳದೆ ಪ್ರಥಮಾವಿಭಕ್ತಿಯನ್ನು ಹೇಳಲಾಗಿದೆ. ಸ್ವೋತ್ತಮರಿಗೆ ತಮ್ಮ ಅಧೀನದಲ್ಲಿರುವವರ ವಿಷಯದಲ್ಲಿ ಸ್ವಾತಂತ್ರ್ಯವು ಪರಮಾತ್ಮನ ಅಧೀನವಾಗಿ ಇದ್ದೇ ಇದೆ.

* * *

ಅಹಂಕಾರತತ್ತ್ವದ ಅಭಿಮಾನಿ ಹಾಗೂ ನಿಯಾಮಕ ಭಗವದ್ರೂಪಗಳನ್ನೂ ತ್ರಿವಿಧ ಅಹಂಕಾರಕ್ಕೆ ಪ್ರತ್ಯೇಕವಾಗಿ ಲಕ್ಷಣಗಳನ್ನೂ ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಸಹಸ್ರಶಿರಸಂ ಸಾಕ್ಷಾದ್ ಯಮನಂತಂ ಪ್ರಚಕ್ಷತೇ ।
ಸಂಕರ್ಷಣಾಖ್ಯಂ ಪುರುಷಂ ಭೂತೇಂದ್ರಿಯಮನೋಮಯಮ್ ॥೨೭॥

ಕರ್ತೃತ್ವಂ ಕರಣತ್ವಂ ಚ ಕಾರ್ಯತ್ವಂ ಚೇತಿ ಲಕ್ಷಣಮ್ ।
ಶಾಂತಘೋರವಿಮೂಢತ್ವಮಿತಿ ವಾ ಸ್ಯಾದಹಂಕೃತೇಃ ॥ ೨೮ ॥

ಸಾವಿರ ತಲೆಗಳುಳ್ಳ ಸಾಕ್ಷಾತ್ ಸಂಕರ್ಷಣನೆಂದು ಯಾವ ಪುರುಷನನ್ನು, ಅಂದರೆ, ಶೇಷನನ್ನೂ ಸಂಕರ್ಷಣರೂಪನಾದ ಶ್ರೀಹರಿಯನ್ನೂ ಹೇಳುವರೋ ಆ ಪುರುಷನನ್ನೇ ಸೂಕ್ಷ್ಮಾಹಂಕಾರಾತ್ಮಕ ಭೂತಇಂದ್ರಿಯಮನಸ್ಸುಗಳಿಗೆ ಕಾರಣ ಅಭಿಮಾನಿ ಹಾಗೂ ನಿಯಾಮಕನೆಂದೂ ಹೇಳುತ್ತಾರೆ. (ಸ್ಥೂಲಾಹಂಕಾರಾತ್ಮಕ ಭೂತಾದಿಗಳಿಗೆ ಕಾಮನನ್ನೂ ಪ್ರದ್ಯುಮ್ನರೂಪಿ ಭಗವಂತನನ್ನೂ ಕಾರಣ, ಅಭಿಮಾನಿ ಹಾಗೂ ನಿಯಾಮಕರೆಂದೂ ಹೇಳುತ್ತಾರೆ.)

ವೈಕಾರಿಕಾಹಂಕಾರವು ಮನೋರೂಪವಾಗಿ ಪರಿಣಮಿಸಿ ಕರ್ತೃತ್ವಾಭಿಮಾನವನ್ನು ಜೀವನಿಗೆ ಹುಟ್ಟಿಸುವುದರಿಂದ ಕರ್ತೃತ್ವವು ಅದಕ್ಕೆ ಲಕ್ಷಣ. ತೈಜಸಾಹಂಕಾರವು ಇಂದ್ರಿಯರೂಪವಾಗಿ ಪರಿಣಮಿಸಿ ಕರ್ಮ ಮತ್ತು ಜ್ಞಾನಗಳಿಗೆ ಕರಣವಾಗುವುದರಿಂದ ಕರಣತ್ವವು ಅದಕ್ಕೆ ಲಕ್ಷಣ. ತಾಮಸಾಹಂಕಾರವು ಶರೀರರೂಪದಿಂದ ಪರಿಣಮಿಸಿ ಕಾರ್ಯವೆನಿನಿಸುವುದರಿಂದ ಕಾರ್ಯತ್ವವು ಅದಕ್ಕೆ ಲಕ್ಷಣ. ಅಥವಾ ವೈಕಾರಿಕಾಹಂಕಾರವು ಶಮವೆಂಬ ಗುಣಯುಕ್ತರಾದ ದೇವತೆಗಳ ಶರೀರವನ್ನು ಹುಟ್ಟಿಸುವುದರಿಂದ ಶಾಂತತ್ವವು ಅದಕ್ಕೆ ಲಕ್ಷಣ. ತೈಜಸಾಹಂಕಾರವು ಘೋರ ಸಂಸಾರ ಕಾರಣವಾದ ಇಂದ್ರಿಯಗಳನ್ನು ಹುಟ್ಟಿಸುವುದರಿಂದ ಘೋರತ್ವವು ಅದಕ್ಕೆ ಲಕ್ಷಣ. ತಾಮಸಾಹಂಕಾರವು ಪಂಚಭೂತಗಳನ್ನು ಹುಟ್ಟಿಸುತ್ತ ವೈಕಾರಿಕತೈಜಸಗಳಂತೆ ಜ್ಞಾನವನ್ನು ಪ್ರಕಟಗೊಳಿಸದಿರುವುದರಿಂದ ಮೂಢತ್ವವು ಅದಕ್ಕೆ ಲಕ್ಷಣ.

ಸ್ಥೂಲಸೂಕ್ಷ್ಮರೂಪದ ಜಡವಾದ ತ್ರಿವಿಧ ಅಹಂಕಾರಗಳಿಗೆ ಮಾತ್ರವಲ್ಲದೆ ಅವುಗಳಿಗೆ ಅಭಿಮಾನಿಗಳಾದ ಕಾಮಶೇಷರಿಗೂ ಇವೇ ಲಕ್ಷಣಗಳು.

ಇಲ್ಲಿ 'ಜಡ ಅಹಂಕಾರದಲ್ಲಿ ಉಪಾಸ್ಯವಾದ ಸಂಕರ್ಷಣಮೂರ್ತಿಯನ್ನು ಮೊದಲನೇ ಶ್ಲೋಕದಲ್ಲಿ ಹೇಳಿ ಎರಡನೇ ಶ್ಲೋಕದಲ್ಲಿಯೂ ಆ ಅಹಂಕಾರಕ್ಕೆ

ಕರ್ತೃತ್ವಾದಿಲಕ್ಷಣಗಳನ್ನೂ ಶಾಂತತ್ವಾದಿಲಕ್ಷಣಗಳನ್ನೂ ಹೇಳಲಾಗಿದೆ. ಶಾಂತತ್ವವೆಂದರೆ ಪ್ರಕಾಶಕತ್ವ, ಘೋರತ್ವವೆಂದರೆ ವಿಕ್ಷಿಪ್ತತೆ ಉಂಟುಮಾಡುವುದು, ಮೂಢತ್ವವೆಂದರೆ ಮೋಹ ಉಂಟುಮಾಡುವುದು, ಸತ್ತ್ವಾದಿ ಗುಣತ್ರಯ ಲಕ್ಷಣವಾಗಿದ್ದು ಅವೇ ವೈಕಾರಿಕಾದಿ ಅಹಂಕಾರತ್ರಯ ಲಕ್ಷಣಗಳೆಂದೂ ವಿವಕ್ಷಿತವಾಗಿವೆ' ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ವ್ಯೂಹೋಪಾಸನೆ ಪ್ರಾಸಂಗಿಕವೆಂದು ಅವರೇ ಹೇಳಿರುವುದರಿಂದ ಅದು ಗ್ರಾಹ್ಯವಲ್ಲ.

ಅಭಿಮಾನಿದೇವತೆಯನ್ನೂ ನಿಯಾಮಕ ಭಗವದ್ರೂಪವನ್ನೂ ಎಲ್ಲ ತತ್ವಗಳಿಗೆ ಪ್ರತ್ಯೇಕವಾಗಿ ಹೇಳುವುದೇ ಆವಶ್ಯಕ. ಸಂಗತ. ಅದರಿಂದ 'ಸಂಕರ್ಷಣಾಖ್ಯಂ' ಎಂದರೆ ಸಂಕರ್ಷಣರೂಪಿ ಭಗವಂತನೊಂದಿಗೆ ಸಂಕರ್ಷಣನಾಮಕನಾದ ಶೇಷನನ್ನೂ ಇಟ್ಟುಕೊಳ್ಳಬೇಕು. ಆ ಶೇಷನಿಗೂ ಅವನಿಂದ ಅಭಿಮನ್ಯಮಾನವಾದ ತ್ರಿವಿಧ ಅಹಂಕಾರಕ್ಕೂ ಕರ್ತೃತ್ವಾದಿ ಮತ್ತು ಶಾಂತತ್ವಾದಿ ಲಕ್ಷಣನಿರೂಪಣೆ ಮಾಡುವುದು ಸಂಗತವೆನಿಸುತ್ತದೆ.

ಕರ್ತೃತ್ವಾದಿಲಕ್ಷಣಗಳಲ್ಲಿ ದೇವತಾದಿರೂಪದಿಂದ ಕರ್ತೃತ್ವವೆಂದು ಶ್ರೀಧರವ್ಯಾಖ್ಯಾನ. ದೇವತಾರೂಪದಿಂದ ಕರ್ತೃತ್ವವೆಂದು ಶುಕದೇವವ್ಯಾಖ್ಯಾನ. ಮನೋರೂಪದಿಂದ ಕರ್ತೃತ್ವವೆಂದು ವೀರರಾಘವ ವಿಶ್ವನಾಥ ವ್ಯಾಖ್ಯಾನಗಳು. ವಸ್ತುತಃ ಮನೋರೂಪದಿಂದ ಕರ್ತೃತ್ವವೇ ಲಕ್ಷಣವೆಂದು ಸ್ಪಷ್ಟವಾಗಿ ತತ್ವವಿವೇಕಗ್ರಂಥದಲ್ಲಿ ಹೇಳಿದೆ. ದೇಹರೂಪೇಣ ಕಾರ್ಯತ್ವವೆಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಿದ್ದರೂ ಮನಸ್ಸು ಇಂದ್ರಿಯಗಳೂ ದೇಹದಂತೆ ಕಾರ್ಯವೇ ಆಗಿರುವಾಗ ದೇಹರೂಪದಿಂದ ಕಾರ್ಯತ್ವವೆನ್ನುವುದು ಹೇಗೆ ಎಂಬ ಪ್ರಶ್ನೆಗೆ ಈ ವ್ಯಾಖ್ಯಾನಕಾರರು ಉತ್ತರಿಸಿಲ್ಲ. ತತ್ವವಿವೇಕ ಗ್ರಂಥದಲ್ಲಿ ಉತ್ತರವಿದೆ.

ಶಾಂತತ್ವಾದಿಲಕ್ಷಣಗಳನ್ನು ಕಾರಣವಾದ ಗುಣತ್ರಯರೂಪದಿಂದ ಎಂದಿರುವುದು ವ್ಯರ್ಥ. ಮಹದಾದಿ ಎಲ್ಲ ತತ್ವಗಳೂ ತ್ರಿಗುಣಾತ್ಮಕವಾಗಿರುವುದರಿಂದ ಅವುಗಳಲ್ಲಿ ಗುಣತ್ರಯರೂಪದಿಂದ ಶಾಂತತ್ವಾದಿಗಳು ಸಿದ್ಧವೇ ಆಗಿವೆ. ಪ್ರತ್ಯೇಕವಾಗಿ ಅಹಂಕಾರದಲ್ಲಿ ಮಾತ್ರ ಆ ಲಕ್ಷಣಗಳನ್ನು ಹೇಳುವುದಕ್ಕೆ ಏನು ಪ್ರಯೋಜನ? ನಾನು ಎನ್ನುವ ಅಭಿಮಾನವು ಅಹಂಕಾರದ ಸ್ವರೂಪಲಕ್ಷಣ. ಕರ್ತೃತ್ವಾದಿ ಮತ್ತು ಶಾಂತತ್ವಾದಿಗಳು ತಟಸ್ಥಲಕ್ಷಣಗಳೆಂದು ರಾಧಾರಮಣದಾಸ ವ್ಯಾಖ್ಯಾನ. ವಸ್ತುತಃ ಅಭಿಮಾನವು ಅಂತಃಕರಣಪ್ರಭೇದವಾದ ಅಹಂಕಾರದ ಲಕ್ಷಣ. ಅಹಂಕಾರತತ್ವದ್ದಲ್ಲ. ಅದರಿಂದ ಭಾಗವತಕ್ಕೆ ಹೀಗೆ ವ್ಯಾಖ್ಯಾನ ಮಾಡುವುದೇ ಸಮಂಜಸ-

ಮನೋರೂಪೇಣ ಕರ್ತೃತ್ವಂ ದೇಹರೂಪೇಣ ಕಾರ್ಯತಾ ।
ಇಂದ್ರಿಯಾತ್ಮತಯಾ ಚೈವ ಕರಣತ್ವಮಹಂಕೃತೇಃ ॥

ಯತೋ ಮನಸ್ಯಹಂಭಾವಸ್ತಸ್ಮಾತ್ ಕರ್ತೃ ಮನಃ ಸ್ಮೃತಮ್ ।
ಸ್ವಭಾವಕರ್ತುರ್ಜೀವಸ್ಯ ತ್ವಾಸನ್ನೋಪಾಧಿ ತದ್ ಯತಃ ॥
ಕರ್ಮಜ್ಞಾನೇ ಕರಣತಾ ಯತಃ ಕರಣಮಿಂದ್ರಿಯಮ್ ।
ಕಾರ್ಯಂ ದೇಹಃ ಸಮುದ್ದಿಷ್ಟ ಉತ್ಪಾದ್ಯತ್ವಾತ್ ಪುನಃ ಪುನಃ ॥
ಇತಿ ತತ್ತ್ವವಿವೇಕೇ ।

ಶಾಂತರೂಪೋ ದೇವಪಿತಾ ಘೋರಃ ಕರಣಸೃಜ್ ಮತಃ ।
ತಾವಜ್ಞಾನಸ್ಯಾಪ್ರಕಾಶಾನ್ಮೂಢೋ ಭೂತಪಿತಾ ಸ್ಮೃತಃ ।
ತ್ರಿರೂಪೋಽಯಮಹಂಕಾರಃ ಶೇಷ ಇತ್ಯೇವ ತಂ ವಿದುಃ ॥
ಇತಿ ನಿರ್ಣಯೇ ॥

ವೈಕಾರಿಕಾಹಂಕಾರವು ಮನೋರೂಪವಾಗಿ ಪರಿಣಾಮ ಹೊಂದುವುದರಿಂದ ಮನೋರೂಪದಿಂದ ಕರ್ತೃತ್ವವು ಅದಕ್ಕೆ ಲಕ್ಷಣ. ತಾಮಸಾಹಂಕಾರವು ಭೌತಿಕದೇಹರೂಪವಾಗಿ ಪರಿಣಮಿಸುವುದರಿಂದ ದೇಹರೂಪದಿಂದ ಕಾರ್ಯತ್ವವು ಅದಕ್ಕೆ ಲಕ್ಷಣ. ತೈಜಸಾಹಂಕಾರವು ಇಂದ್ರಿಯಗಳಾಗಿ ಪರಿಣಮಿಸುವುದರಿಂದ ಇಂದ್ರಿಯರೂಪದಿಂದಲೇ ಕರಣತ್ವವು ಅದಕ್ಕೆ ಲಕ್ಷಣ. ಮನಸ್ಸು ಇದ್ದರೇನೇ ನಾನು ಕರ್ತನೆಂದು ಜೀವನಿಗೆ ಅಭಿಮಾನ ಹುಟ್ಟುತ್ತದೆ. ಆದರಿಂದ ಕರ್ತೃತ್ವಾಭಿಮಾನಕ್ಕೆ ಕಾರಣವಾದ ಮನಸ್ಸಿನ ರೂಪದಿಂದ ಕರ್ತೃತ್ವವು ಲಕ್ಷಣವೆನ್ನುವುದು ಯುಕ್ತವಾಗುತ್ತದೆ. ಜೀವನಿಗೆ ಕರ್ತೃತ್ವವು ಸ್ವಾಭಾವಿಕವೇ. ಅದರ ಅನುಭವವೂ ಸಾಕ್ಷಿರೂಪವಾಗಿದ್ದು ನಿತ್ಯವೇ ಆದರೂ ಜಡಮನಸ್ಸು ಸ್ಥೂಲದೇಹಕ್ಕಿಂತ ಹತ್ತಿರವಾದ ಉಪಾಧಿಯಾಗಿರುವುದರಿಂದ ದೇಹಾದಿಗಳಲ್ಲಿ ನನ್ನದೆಂಬ ಅಭಿಮಾನರೂಪವಾದ ಕರ್ತೃತ್ವಾನುಭವಕ್ಕೆ ಬಾಹ್ಯಉಪಾಧಿರೂಪದಿಂದ ಜಡಮನಸ್ಸಿನ ಉಪಯೋಗವಿದೆ ಎಂದು ಅದಕ್ಕೆ ಕರ್ತೃತ್ವವು ಲಕ್ಷಣ ಎನ್ನಲಾಗಿದೆ. ಕರ್ಮೇಂದ್ರಿಯಗಳಿಂದಾಗುವ ಕರ್ಮ, ಜ್ಞಾನೇಂದ್ರಿಯಗಳಿಂದ ಬರುವ ಜ್ಞಾನ ಇವುಗಳಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ಕರಣಗಳಾಗುವುದರಿಂದ ಕರಣತ್ವವು ತೈಜಸಾಹಂಕಾರಕ್ಕೆ ಲಕ್ಷಣವೆನ್ನುವುದು ಯುಕ್ತ. ಮನಸ್ಸೂ ಇಂದ್ರಿಯಗಳೂ ಕಾರ್ಯವಾಗಿರುವಾಗ ಕೇವಲ ದೇಹರೂಪದಿಂದ ಕಾರ್ಯತ್ವಲಕ್ಷಣವನ್ನು ಹೇಳುವುದು ಹೇಗೆ ಯುಕ್ತವಾಗುವುದು ಎಂದರೆ, ಮನಸೂ ಇಂದ್ರಿಯಗಳೂ ಲಿಂಗಶರೀರದ ಭಾಗಗಳಾಗಿ ಅನಾದಿಕಾಲದಿಂದ ಇದ್ದು ಆಗಾಗ ಉಪಚಯವನ್ನು ಮಾತ್ರ ಹೊಂದುತ್ತವೆ. ದೇಹವು ಮಾತ್ರ ಕರ್ಮವಶದಿಂದ ಆಗಾಗ ಹೊಸದಾಗಿ ಹುಟ್ಟುತ್ತದೆ ಅದರಿಂದ ಕಾರ್ಯವೆಂದು ದೇಹವನ್ನೇ ಪರಿಗ್ರಹಿಸಿ ದೇಹರೂಪದಿಂದ ಕಾರ್ಯತ್ವವು ತಾಮಸಾಹಂಕಾರದ ಲಕ್ಷಣ ಎಂದುದು ಸರಿಯೇ. ಹೀಗೆ ತತ್ತ್ವವಿವೇಕಗ್ರಂಥದಲ್ಲಿ ಹೇಳಿದೆ.

ದೇವತೆಗಳಿಗೆ ಜನಕನಾದ ವೈಕಾರಿಕಾಹಂಕಾರಾಭಿಮಾನಿ ಶೇಷನ ಒಂದು ರೂಪವು ಶಾಂತರಾದ ಅಂದರೆ ಭಗವದ್ಭಕ್ತಿಸಂಪನ್ನರಾದ ದೇವತೆಗಳನ್ನು ಹುಟ್ಟಿಸುವುದರಿಂದ ಶಾಂತತ್ವವು ಅವನಿಗೂ ಅವನ ವೈಕಾರಿಕಾಹಂಕಾರಕ್ಕೂ ಲಕ್ಷಣ. ಇಂದ್ರಿಯಜನಕನಾದ ತೈಜಸಾಹಂಕಾರಾಭಿಮಾನಿ ಶೇಷನ ಇನ್ನೊಂದು ರೂಪ ಘೋರವಾದ ಸಂಸಾರಕ್ಕೆ ಸಾಧನವಾದ ಇಂದ್ರಿಯಗಳನ್ನು ಹುಟ್ಟಿಸುವುದರಿಂದ ಅವನಿಗೂ ತೈಜಸಾಂಹಕಾರಕ್ಕೂ ಘೋರತ್ವವು ಲಕ್ಷಣ. ಪಂಚಭೂತಜನಕವಾದ ತಾಮಸಾಹಂಕಾರಾಭಿಮಾನಿ ಶೇಷನ ಮತ್ತೊಂದು ರೂಪ ವೈಕಾರಿಕತೈಜಸಾಭಿಮಾನಿಗಳಂತೆ ಜ್ಞಾನವನ್ನು ಪ್ರಕಟ ಮಾಡದಿರುವುದರಿಂದ ಅವನಿಗೂ ತಾಮಸಾಹಂಕಾರಕ್ಕೂ ಮೂಢತ್ವವು ಲಕ್ಷಣ. ಹೀಗೆ ವೈಕಾರಿಕ ತೈಜಸ ತಾಮಸರೂಪಗಳಿಂದ ಅಹಂಕಾರಾಭಿಮಾನಿಯಾಗಿ ರುವವನು ಒಬ್ಬನೇ ಶೇಷದೇವನೆಂದು ನಿರ್ಣಯದಲ್ಲಿದೆ.

* * *

ವೈಕಾರಿಕಾಹಂಕಾರದಿಂದ ಮನಸ್ತತ್ತ್ವದ ಉತ್ಪತ್ತಿಯನ್ನು ಹೇಳಿ ತೈಜಸಾಹಂಕಾರದಿಂದ ಬುದ್ಧಿತತ್ವಕ್ಕೆ ಉಪಚಯವನ್ನು ಕಪಿಲನು ಮಾತೆಗೆ ತಿಳಿಸುತ್ತಾನೆ–

ತೈಜಸಾತ್ತು ವಿಕುರ್ವಾಣಾದ್ ಬುದ್ಧಿತತ್ವಮಭೂತ್ ಸತಿ ।
ದ್ರವ್ಯಸ್ಫುರಣವಿಜ್ಞಾನಮಿಂದ್ರಿಯಾಣಾಮನುಗ್ರಹಾತ್ ॥ ೩೦ ॥

ಮಹತ್ತತ್ವದಿಂದ ಮೊದಲಿಗೆ ಬುದ್ಧಿತತ್ವ ಹುಟ್ಟಿರುತ್ತದೆ. ಅದಕ್ಕೆ ತೈಜಸಾಹಂಕಾರದಿಂದ ಉಪಚಯ ಉಂಟಾಗುತ್ತದೆ. ಸತೀಶಿರೋಮಣಿಯಾದ ಮಾತೆಯೆ! ಬುದ್ಧಿತತ್ವದ ಲಕ್ಷಣವು ವಿಜ್ಞಾನ, ವಿಶೇಷಜ್ಞಾನ. ಅಂದರೆ ಮನಸ್ಸು ಇಂದ್ರಿಯಗಳಲ್ಲಿ ಪ್ರವೇಶಿಸಿ ಅನುಗ್ರಹಿಸುವುದರಿಂದ ಸಾಮಾನ್ಯಾಕಾರವಾದ ದ್ರವ್ಯಸ್ಫುರಣ, ದ್ರವ್ಯಜ್ಞಾನ ಉಂಟಾದಾಗ ಬುದ್ಧಿತತ್ವವು ಇಂದ್ರಿಯಗಳಲ್ಲಿ ಪ್ರವೇಶಿಸಿ ವಿಜ್ಞಾನವನ್ನು ಉಂಟುಮಾಡುತ್ತದೆ.

[೧]ಇಲ್ಲಿ ಶ್ರೀಧರವ್ಯಾಖ್ಯಾನವು ನಿರ್ವಿಕಲ್ಪಕಜ್ಞಾನದಲ್ಲಿ ಇಂದ್ರಿಯಗಳಿಗೆ ಮನಸ್ಸಿನ ಅನುಗ್ರಹ, ಸವಿಕಲ್ಪಕದಲ್ಲಿ ಇಂದ್ರಿಯಗಳಿಗೆ ಬುದ್ಧಿಯ ಅನುಗ್ರಹ ಎಂದಿದೆ. ನಿರ್ವಿಕಲ್ಪಕ ಜ್ಞಾನವೇ ಅಪ್ರಾಮಾಣಿಕ. ವಿಶಿಷ್ಟಜ್ಞಾನಕ್ಕೆ ವಿಶೇಷಣಜ್ಞಾನವು ಕಾರಣವೆಂದು ನಿಯಮವಿಟ್ಟುಕೊಂಡು ಸವಿಕಲ್ಪಕಕ್ಕೆ ಮೊದಲು ನಿರ್ವಿಕಲ್ಪಕ ಅವಶ್ಯ

---

೧. ಇಂದ್ರಿಯಾಣಾಮನುಗ್ರಹ ಇತಿ ಸವಿಕಲ್ಪಕಜ್ಞಾನೇ । ಹೃಷೀಕಾಣಾಮಧೀಶ್ವರಮಿತಿ ಯದುಕ್ತಂ ತತ್ತು ನಿರ್ವಿಕಲ್ಪಕಜ್ಞಾನೇ । ದ್ರವ್ಯಸ್ಫುರಣರೂಪಂ ವಿಜ್ಞಾನಮಿತಿ ಚಿತ್ತವ್ಯಾವೃತ್ತ್ಯರ್ಥಮುಕ್ತಂ । ದ್ರವ್ಯಸ್ಫುರಣಸ್ಯೈವ ಪ್ರಪಂಚಃ ಸಂಶಯಾದಿಃ
–ಶ್ರೀಧರಃ

ಬೇಕೆನ್ನುತ್ತಾರೆ. ಆದರೆ ಆ ನಿಯಮವೇ ಇಲ್ಲ. ಅದರಿಂದ ಮನಸ್ಸು ಸಾಮಾನ್ಯಾಕಾರಜ್ಞಾನವನ್ನೂ ಬುದ್ಧಿ ವಿಶೇಷಾಕಾರಜ್ಞಾನವನ್ನೂ ಇಂದ್ರಿಯಗಳ ಮೂಲಕ ಉಂಟುಮಾಡುತ್ತದೆ ಎಂದೇ ಭಾಗವತಕ್ಕೆ ವ್ಯಾಖ್ಯಾನ ಮಾಡಬೇಕು. 'ದ್ರವ್ಯಸ್ಫುರಣವಿಜ್ಞಾನ' ಎಂಬಲ್ಲಿ 'ದ್ರವ್ಯಸ್ಫುರಣಾನಂತರ ಹುಟ್ಟುವ ವಿಜ್ಞಾನ' ಎಂದು ವಿಗ್ರಹ. ಮನಸ್ಸಿನಿಂದ ಸಾಮಾನ್ಯದ್ರವ್ಯಸ್ಫುರಣ. ಅನಂತರ ಬುದ್ಧಿಯಿಂದ ವಿಶೇಷಜ್ಞಾನ. ಈ ವಿಶೇಷಜ್ಞಾನ ಬುದ್ಧಿಯ ಲಕ್ಷಣ ಎನ್ನಬೇಕು. ಬೇರೆ ವ್ಯಾಖ್ಯಾನಕಾರರು ದ್ರವ್ಯಸ್ಫುರಣರೂಪವಾದ ವಿಜ್ಞಾನ ಎಂದು ಸಮಾಸ ಮಾಡಿದ್ದಾರೆ. 'ಸ್ಫುರಣರೂಪ' ಮತ್ತು 'ವಿಜ್ಞಾನ' ಇವೆರಡೂ ಪರಸ್ಪರ ವಿರುದ್ಧ. ಸ್ಫುರಣವೆಂದರೂ ವಿಜ್ಞಾನವೆಂದೇ ವಿವಕ್ಷೆ ಮಾಡುವುದಾದರೆ 'ವಿಜ್ಞಾನ' ಶಬ್ದ ಬೇಡ. ಅದನ್ನಿಟ್ಟುಕೊಂಡರೆ ಸ್ಫುರಣಶಬ್ದ ಬೇಡ. 'ವಿಜ್ಞಾನ' ಎನ್ನುವುದು ಚಿತ್ತ ವ್ಯಾವೃತ್ತಿಗಾಗಿ ಎಂದಿದ್ದಾರೆ. ವ್ಯಾವೃತ್ತಿ ಹೇಗೆ? ಮತ್ತು ದ್ರವ್ಯಸ್ಫುರಣ ಎನ್ನುವುದರ ವಿವರಣೆಯೇ ಮುಂದಿನ ಶ್ಲೋಕದಲ್ಲಿ 'ಸಂಶಯೋಥ ವಿಪರ್ಯಾಸಃ' ಎಂದು ಮುಂತಾಗಿ ಬರುತ್ತದೆ ಎನ್ನುತ್ತಾರೆ. ಹಾಗಾದರೆ 'ದ್ರವ್ಯಸ್ಫುರಣ' ಶಬ್ದವೇ ಬೇಡ. ಅದರಿಂದ ಹೀಗೆ ಹೇಳಬೇಕು–

ದ್ರವ್ಯಸ್ಫುರಣೇ ಯದ್ ವಿಶೇಷಜ್ಞಾನಮ್ ।

ಸಾಮಾನ್ಯಂ ಮನಸಾ ಜ್ಞಾನಂ ವಿಶೇಷಾದ್ ಬುದ್ಧಿಜಂ ಭವೇತ್ ॥

ದ್ರವ್ಯದ ಸಾಮಾನ್ಯಾಕಾರಜ್ಞಾನ ಉಂಟಾದಾಗ ಯಾವ ವಿಶೇಷಾಕಾರ ಜ್ಞಾನ ಉಂಟಾಗುವುದೋ ಅದು ದ್ರವ್ಯಸ್ಫುರಣವಿಜ್ಞಾನ. 'ಸಾಮಾನ್ಯಜ್ಞಾನವು ಮನಸ್ಸಿನಿಂದಲೂ ವಿಶೇಷಾಕಾರದಿಂದ ಜ್ಞಾನವು ಬುದ್ಧಿಯಿಂದಲೂ ಬರುತ್ತದೆ' ಎಂದೂ ಉಕ್ತವಾದೆ.

* * *

ಬುದ್ಧಿತತ್ವಕ್ಕೆ ಇನ್ನೂ ಬೇರೆ ಲಕ್ಷಣಗಳನ್ನು ಕಪಿಲನು ಮಾತೆಗೆ ಹೇಳುತ್ತಾನೆ–

ಸಂಶಯೋಽಥ ವಿಪರ್ಯಾಸೋ ನಿಶ್ಚಯಃ ಸ್ಮೃತಿರೇವ ಚ ।
ಸ್ವಾಪ ಇತ್ಯುಚ್ಯತೇ ಬುದ್ಧೇರ್ಲಕ್ಷಣಂ ವೃತ್ತಿಭಿಃ ಪೃಥಕ್ ॥ ೩೦ ॥

ಸಂಶಯ ವಿಪರ್ಯಾಸ ನಿಶ್ಚಯ ಸ್ಮೃತಿ ಮತ್ತು ನಿದ್ರೆ ಇವು ಬುದ್ಧಿಯ ಪೃಥಗ್ ಲಕ್ಷಣವೆನಿಸುವ ಕಾರ್ಯಗಳು.

ಲಕ್ಷಣಗಳು ಎರಡು ಬಗೆ. ಸ್ವರೂಪಭೂತವಾಗಿದ್ದು ಸದಾ ಇರುವ ಲಕ್ಷಣಗಳು, ಸ್ವರೂಪಲಕ್ಷಣಗಳು. ಭಿನ್ನವಾಗಿದ್ದು ಸದಾ ಇಲ್ಲದಿರುವ ಲಕ್ಷಣಗಳು ಪೃಥಗ್ ಲಕ್ಷಣಗಳು. ಸಂಶಯಾದಿಗಳು ಬುದ್ಧಿತತ್ವದ ಸ್ವರೂಪವಲ್ಲ. ಅದರಿಂದಾಗುವ

ಕಾರ್ಯಗಳು. ಸದಾ ಇರುವುದೂ ಇಲ್ಲ. ಅದರಿಂದ ಅವು ಪೃಥಗ್ ಲಕ್ಷಣಗಳು. ಅವು ಸ್ವರೂಪಭೂತವಲ್ಲದಿದ್ದರೂ ಇತರಪದಾರ್ಥಗಳ ವೈಲಕ್ಷಣ್ಯವನ್ನು ತೋರಿಸಬಲ್ಲುವು. ಅದರಿಂದ ಅವೂ ಲಕ್ಷಣಗಳೇ. ಮನಸ್ಸಿನಿಂದಲೂ ಸಂಶಯ ಬರುವುದರಿಂದ ಸಂಶಯವು ಬುದ್ಧಿಯ ಲಕ್ಷಣ ಹೇಗೆ? ಚಿತ್ತದಿಂದಲೂ ಸ್ಮರಣೆ ಬರುವುದರಿಂದ ಸ್ಮರಣೆ ಬುದ್ಧಿಯ ಲಕ್ಷಣ ಹೇಗೆ? ಎಂಬ ಪ್ರಶ್ನೆಗೆ ಹೀಗೆ ಸಮಾಧಾನ. ಮನಸ್ಸಿನಿಂದ ಬರುವ ಸಂಶಯ ವಿಶೇಷವಿಚಾರ ಮಾಡಿದಾಗ ದೂರವಾಗುತ್ತದೆ. ಬುದ್ಧಿಯಿಂದ ವಿಚಾರ ಮಾಡಿದಾಗಲೂ ಬರುವ ಸಂಶಯ ವಿಚಾರದಿಂದ ದೂರವಾಗದು. ಇಂಥ, ವಿಚಾರದಿಂದ ದೂರವಾಗದ ಸಂಶಯವೇ ಬುದ್ಧಿಯ ಲಕ್ಷಣವೆಂದು ಇಲ್ಲಿ ವಿವಕ್ಷಿತವಾಗಿದೆ. ಚಿತ್ತದಿಂದ ಬರುವ ಸ್ಮರಣೆ ಸ್ಥಿರವಾಗಿರುತ್ತದೆ. ಬುದ್ಧಿಯಿಂದ ಬರುವ ಸ್ಮರಣೆ ಸ್ಥಿರವಲ್ಲ. ಇಂಥ ಅಸ್ಥಿರವಾದ ಸ್ಮರಣೆ ಇಲ್ಲಿ ಬುದ್ಧಿಲಕ್ಷಣವೆಂದು ವಿವಕ್ಷಿತವಾಗಿದೆ. ಬೇರೆ ವ್ಯಾಖ್ಯಾನಕಾರರು ಈ ವಿಷಯದಲ್ಲಿ ಏನೂ ಹೇಳಿಲ್ಲ.

ಅಚಲಃ ಸಂಶಯೋ ಬುದ್ಧೇಶ್ಚಲೋ ಮಾನಸ ಉಚ್ಯತೇ ।
ಚಂಚಲಾ ತು ಸ್ಮೃತಿರ್ಬುದ್ಧೇಶ್ಚಿತ್ತಜ್ಜೈವ ಸ್ಥಿರಾ ಸ್ಮೃತಿಃ ॥ ಇತಿ ಚ ।
ಯೇನ ಯಜ್ಜ್ಞಾಯತೇ ವಸ್ತು ತತ್ತಲ್ಲಕ್ಷಣಮುಚ್ಯತೇ ।
ತತ್ ಸ್ವರೂಪಂ ಪೃಥಕ್ ಚೇತಿ ದ್ವಿವಿಧಂ ಕವಯೋ ವಿದುಃ ॥
ಇತಿ ಕಾಪಿಲೇಯೇ ॥

ವಿಶೇಷವಿಚಾರದಿಂದ ನಿವೃತ್ತಿಯಾಗದ ಸಂಶಯವು ಬುದ್ಧಿಯಿಂದ ಬರುವಂಥದ್ದು' ನಿವೃತ್ತಿಯಾಗುವ ಸಂಶಯವು ಮನಸ್ಸಿನಿಂದ ಬರುವಂಥದ್ದು ಎನ್ನುತ್ತಾರೆ. ಹಾಗೆಯೇ ಚಂಚಲವಾದ ಸ್ಮರಣೆಯು ಬುದ್ಧಿಯಿಂದ ಬರುವಂಥದ್ದು. ಚಿತ್ತದಿಂದ ಬರುವ ಸ್ಮರಣೆಯೇ ಸ್ಥಿರವಾದುದೆಂದೂ ಹೇಳುತ್ತಾರೆ. ಯಾವುದರಿಂದ ಯಾವುದು ಇತರಪದಾರ್ಥಗಳಿಂದ ವಿಲಕ್ಷಣವಾಗಿ ತೋರುವುದೋ ಅದು ಅದರ ಲಕ್ಷಣವೆನಿಸುತ್ತದೆ. ಅದು ಸ್ವರೂಪದಲ್ಲಿ ಸೇರಿರಬಹುದು ಬೇರೆಯೂ ಆಗಿರಬಹುದು ಎಂದು ಬಲ್ಲವರು ಅಂಗೀಕರಿಸಿದ್ದಾರೆ ಎಂದು ಕಾಪಿಲೇಯದಲ್ಲಿ ಹೇಳಿದೆ.

* * *

ಕರ್ಮೇಂದ್ರಿಯ ಜ್ಞಾನೇಂದ್ರಿಯಗಳಿಗೆ ಪ್ರಾಣ ಬುದ್ಧಿಗಳು ಪ್ರೇರಕರು ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ತೈಜಸಾನೀಂದ್ರಿಯಾಣ್ಯೇವ ಕ್ರಿಯಾಜ್ಞಾನವಿಭಾಗಶಃ ।
ಪ್ರಾಣಸ್ಯ ಹಿ ಕ್ರಿಯಾಶಕ್ತಿರ್ಬುದ್ಧೇರ್ವಿಜ್ಞಾನಶಕ್ತಿತಾ ॥ ೩೩ ॥

ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೆಂದು ಎರಡು ಬಗೆಯಾದ ಇಂದ್ರಿಯಗಳು ಮಾತ್ರ ತೈಜಸಾಹಂಕಾರದಿಂದ ಹುಟ್ಟುವುವು. ಅಭಿಮಾನಿದೇವತೆಗಳ ಶರೀರ ವೈಕಾರಿಕಾಹಂಕಾರದಿಂದ ಹುಟ್ಟುವುವು. ಆಹಂಕಾರಿಕ ಪ್ರಾಣನಿಗೆ ಕರ್ಮೇಂದ್ರಿಯ ಪ್ರೇರಕತ್ವವಿದೆ. ಬುದ್ಧ್ಯಭಿಮಾನಿನಿಯಾದ ಉಮೆಗೆ ಜ್ಞಾನೇಂದ್ರಿಯಪ್ರೇರಕತ್ವವಿದೆ.

ಈ ಶ್ಲೋಕದಲ್ಲಿ ಪ್ರಾಣನಿಗೆ ಕರ್ಮೇಂದ್ರಿಯ ಪ್ರೇರಕರೂಪದಿಂದ ಕರ್ಮೇಂದ್ರಿಯಗಳೊಂದಿಗೆ ತೈಜಸಾಹಂಕಾರದಿಂದ ಉತ್ಪತ್ತಿಯನ್ನು ಹೇಳಿದೆ. ಹಿಂದೆ ೨೬ನೇ ಶ್ಲೋಕದಲ್ಲಿಯೂ 'ಬುದ್ಧಿಃ ಪ್ರಾಣಶ್ಚ ತೈಜಸಃ' ಎಂದು ಪ್ರಾಣನಿಗೆ ತೈಜಸಾಹಂಕಾರದಿಂದ ಉತ್ಪತ್ತಿಯನ್ನು ಹೇಳಿದೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಪ್ರಾಣ ಬುದ್ಧಿಗಳು ತೈಜಸರಾದ್ದರಿಂದ ಅವರ ಕ್ರಿಯಾ ಜ್ಞಾನ ಶಕ್ತಿಗಳುಳ್ಳ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೂ ತೈಜಸಾಹಂಕಾರಜನ್ಯವೇ ಹೊರತು ಸಾಂಖ್ಯರು ಹೇಳುವಂತೆ ಜ್ಞಾನೇಂದ್ರಿಯಗಳು ವೈಕಾರಿಕದಿಂದಲೂ ಕರ್ಮೇಂದ್ರಿಯಗಳು ತೈಜಸದಿಂದಲೂ ಹುಟ್ಟಿದವು ಎನ್ನಬಾರದು ಎಂದಿದ್ದಾರೆ. ಆದರೆ ಇವರಿಗೆ 'ಬುದ್ಧಿಃ ಪ್ರಾಣಶ್ಚ ತೈಜಸಃ' ಎಂದು ಬುದ್ಧಿಪ್ರಾಣರಿಗೆ ತೈಜಸತ್ವವನ್ನು ಹೇಳುವ ೨೬ನೇ ಶ್ಲೋಕವೇ ಅವರ ಪಾಠದಲ್ಲಿ ಇಲ್ಲ. ಮತ್ತು ಇಲ್ಲಿ ಪ್ರಾಣಶಬ್ದದಿಂದ ಪ್ರಧಾನವಾಯುವನ್ನು ಇಟ್ಟುಕೊಳ್ಳಲಾಗದು. ಅವನು ಮಹತ್ತತ್ತ್ವಾಭಿಮಾನಿಯಾಗಿ ಮಹತ್ತತ್ತ್ವದೊಂದಿಗೇ ಹುಟ್ಟಿದ್ದಾನೆ. ಆಗ ಕರ್ಮೇಂದ್ರಿಯಗಳಿನ್ನೂ ಹುಟ್ಟಿರಲಿಲ್ಲ. ಅದಕ್ಕೆ ಪುನಃ ರೂಪಾಂತರದಿಂದ ಕರ್ಮೇಂದ್ರಿಯಾಭಿಮಾನಿಯಾಗಿ ಹುಟ್ಟಿದನೆನ್ನಲು ಪ್ರಮಾಣವಿಲ್ಲ. ಹೀಗಾಗಿ ಪ್ರಾಣನೆಂದರೆ ಇಲ್ಲಿ ಆಹಂಕಾರಿಕಪ್ರಾಣ ಈ ರೀತಿಯ ವಿವೇಚನೆ ಬೇರೆ ವ್ಯಾಖ್ಯಾನಕಾರರಲ್ಲಿ ಇಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

ಪ್ರಧಾನವಾಯುಃ ಸೂತ್ರಾತ್ಮಾ ಮಹತಾ ಸಹ ಜಾಯತೇ ।
ತೈಜಸಶ್ಚ ಖಜಃ ಸ್ಪರ್ಶ ಇತ್ಯಾದ್ಯಾಸ್ತತ್ಸುತಾಃ ಸ್ಮೃತಾಃ ।
ತದಾವಿಷ್ಟಾ ಅನ್ಯಜೀವಾಸ್ತದಾಧಾರಾಶ್ಚ ತದ್ಬಲಾಃ ॥ ಇತಿ ಚ ॥

---

೧. ಪ್ರಾಣಸ್ಯ ತೈಜಸತ್ವಾತ್ ತತ್ಕ್ರಿಯಾಶಕ್ತಿಮತಾಮಿಂದ್ರಿಯಾಣಾಂ ತೈಜಸತ್ವಂ । ತಥಾ ಬುದ್ಧೇಸ್ತೈಜಸತ್ವಾತ್ ತದೀಯಜ್ಞಾನಶಕ್ತಿಮತಾಮಪೀಂದ್ರಿಯಾಣಾಂ ತೈಜಸತ್ವಮಿತ್ಯರ್ಥಃ । –ಶ್ರೀಧರಃ

ಯದ್ಯಪಿ ಸಾಂಖ್ಯನಯೇ ಜ್ಞಾನೇಂದ್ರಿಯಾಣಾಂ ವೈಕಾರಿಕತ್ವಮೇವ । ತಥಾಪಿ ಸವಿಕಲ್ಪಕಜ್ಞಾನತ್ವೇನ ರಜಃಪ್ರಚುರತ್ವಾತ್ ತೈಜಸತ್ವಮೇವೇತಿ ಭಗವತೋ ಮತಮಿತ್ಯರ್ಥಃ । –ರಾಧಾರಮಣದಾಸಃ

ಮುಖ್ಯಪ್ರಾಣನು ಹಿಂದೆಯೇ ಮಹತ್ತತ್ವದೊಂದಿಗೆ ಸೂತ್ರರೂಪದಿಂದ ಹುಟ್ಟಿರುತ್ತಾನೆ. ಅದರಿಂದ ತೈಜಸಾಹಂಕಾರದಿಂದ ಪ್ರಾಣೋತ್ಪತ್ತಿಯನ್ನು ಹೇಳುವಾಗ ಪ್ರಾಣನೆಂದು ಅವನನ್ನು ಇಟ್ಟುಕೊಳ್ಳಲಾಗದು. ತೈಜಸಾಹಂಕಾರದಿಂದ ಹುಟ್ಟಿದ ಆಹಂಕಾರಿಕ ಪ್ರಾಣ, ''ಆಕಾಶಾದ್ ವಾಯುಃ'' ಎಂಬಂತೆ ಆಕಾಶದಿಂದ ಹುಟ್ಟಿದ ಭೂತವಾಯುವಿನ ಅಭಿಮಾನಿಯಾದ ಪ್ರವಹವಾಯು, ತ್ವಗಿಂದ್ರಿಯಾಭಿಮಾನಿ ಪ್ರಾಣವಾಯು ಮುಂತಾದವರೆಲ್ಲರೂ ಮುಖ್ಯಪ್ರಾಣನ ಮಕ್ಕಳು, ಅವನಿಂದ ಆವಿಷ್ಟರಾಗಿದ್ದು ಅವನೇ ಆಧಾರ, ಬಲಪ್ರದನಾಗಿ ಉಳ್ಳ ಬೇರೆ ಜೀವರೆಂದೂ ಹೇಳಿದೆ. ಅದರಿಂದ ಆಹಂಕಾರಿಕ ಪ್ರಾಣನನ್ನೇ ಇಲ್ಲಿ ತೈಜಸನೆಂದಿಟ್ಟುಕೊಳ್ಳಬೇಕು.

* * *

ಶಬ್ದದ ಉತ್ಪತ್ತಿಯನ್ನೂ ಲಕ್ಷಣವನ್ನೂ ಕಪಿಲನು ಮಾತೆಗೆ ಹೇಳುತ್ತಾನೆ–

ತಾಮಸಾಚ್ಚ ವಿಕುರ್ವಾಣಾದ್ ಭಗವದ್ವೀರ್ಯಚೋದಿತಾತ್ ।
ಶಬ್ದಮಾತ್ರಮಭೂತ್ ತಸ್ಮಾನ್ನಭಃ ಶ್ರೋತ್ರಂ ತು ಶಬ್ದಗಮ್ ॥ ೩೪ ॥

ಅರ್ಥಾಶ್ರಯತ್ವಂ ಶಬ್ದಸ್ಯ ದ್ರಷ್ಟುರ್ಲಿಂಗತ್ವಮೇವ ಚ ।
ತನ್ಮಾತ್ರತ್ವಂ ಚ ನಭಸೋ ಲಕ್ಷಣಂ ಕವಯೋ ವಿದುಃ ॥ ೩೫ ॥

ಭಗವಂತನ ವೀರ್ಯಪ್ರಭಾವಕ್ಕೊಳಗಾದ ತಾಮಸಾಹಂಕಾರವು ಪರಿಣಾಮ ಹೊಂದಿದಾಗ ಶಬ್ದ ತನ್ಮಾತ್ರೆಯೂ ಅದರಿಂದ ಆಕಾಶವೂ, ಅದರಿಂದ ಶಬ್ದಗ್ರಾಹಕ ವಾದ ಶ್ರೋತ್ರೇಂದ್ರಿಯಕ್ಕೆ ಉಪಚಯವೂ ಉಂಟಾಯಿತು. ಅರ್ಥಪ್ರತಿಪಾದ ಕತ್ವವೂ ಪರಮಾತ್ಮನ ಬಗ್ಗೆ ತಿಳಿಸುವುದೂ ಶಬ್ದ ಮಾತ್ರವೆ ಆಕಾಶದಲ್ಲಿರುವುದೂ ಶಬ್ದದ ಲಕ್ಷಣ ಎಂದು ಬಲ್ಲವರು ಅಂಗೀಕರಿಸುತ್ತಾರೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಅರ್ಥಾಶ್ರಯತ್ವವೆಂದರೆ ಅರ್ಥವಾಚಕತ್ವ ಎಂದು ವ್ಯಾಖ್ಯಾನಿಸಿದ್ದಾರೆ. ವಸ್ತುತಃ ಇಲ್ಲಿ ಆಶ್ರಯ ಎಂದರೆ ವಿಷಯ, ಪ್ರತಿಪಾದ್ಯ.

---

೧. ಅರ್ಥಾಶ್ರಯತ್ವಂ ಅರ್ಥವಾಚಕತ್ವಂ । ದ್ರಷ್ಟುರ್ಲಿಂಗತ್ವಂ ಕುಡ್ಯಾಂತರಿತಸ್ಯ ವಕ್ತುರ್ಜ್ಞಾಪಕತ್ವಂ । ತದುಕ್ತಂ 'ಲಿಂಗಂ ಯದ್ ದ್ರಷ್ಟೃದೃಶ್ಯಯೋಃ' ಇತಿ ।–ಶ್ರೀಧರಃ ದ್ರಷ್ಟುಃ ಸರ್ವಜ್ಞಸ್ಯ ಪರಮಾತ್ಮನಃ ಲಿಂಗತ್ವಂ ಪ್ರಮಾಣಭೂತತ್ವಂ । ಭಗವತಃ ಶಾಸ್ತ್ರಯೋನಿತ್ವಾತ್ । ದ್ರಷ್ಟುಃ ಘಟಪಟಾದ್ಯರ್ಥದ್ರಷ್ಟುಃ ಲಿಂಗ್ಯತೇ ಪ್ರತೀಯತೇ ಇತಿ ದ್ರಷ್ಟೃಲಿಂಗಂ । ಘಟಪಟಾದ್ಯರ್ಥದ್ರಷ್ಟುರ್ಹಿ ತದ್ವಾಚಕಃ ಶಬ್ದಃ ಪ್ರತೀಯತೇ । ಯದ್ಯಪಿ ಶಬ್ದಶ್ರವಣಾದಪ್ಯರ್ಥಃ ಪ್ರತೀಯತೇ । ತದಪಿ ಶಬ್ದಸ್ಯ ಲಕ್ಷಣಮೇವ । ತದೇವ ಹಿ ಅರ್ಥಾಶ್ರಯತ್ವಮಿತ್ಯುಕ್ತಂ । ವಕ್ತುರ್ದೃಷ್ಟೃತ್ವೇನಾನುಮಾಪಕತ್ವಂ ವಾ ।
–ವೀರರಾಘವಃ

ಪ್ರತಿಪಾದ್ಯವನ್ನು ಆಶ್ರಯಿಸಿ ಶಬ್ದವು ಪ್ರವೃತ್ತಿಮಾಡುತ್ತದೆ. ಅದರಿಂದ ಅರ್ಥಪ್ರತಿಪಾದಕತ್ವವೇ ಶಬ್ದದ ಲಕ್ಷಣವೆನ್ನಬೇಕು. ಶಬ್ದ ಅರ್ಥಕ್ಕೆ ವಾಚಕವೇ ಆಗಬೇಕಾಗಿಲ್ಲ. ಲಕ್ಷಣಾದಿಂದಲೂ ಪ್ರತಿಪಾದಿಸಬಹುದು. ವಾಚಕವೇ, ಆಗಬೇಕೆಂದು, ಶಕ್ತಿಯಿಂದಲೇ ಪ್ರತಿಪಾದಕವಾಗಬೇಕೆಂದು ಹೇಳುವುದು ವ್ಯರ್ಥ.

'ದ್ರಷ್ಟುರ್ಲಿಂಗತ್ವಂ' ಎಂದರೆ ಸರ್ವಜ್ಞನಾದ ಪರಮಾತ್ಮನಿಗೆ ಲಿಂಗ ಅಂದರೆ ಪ್ರಮಾಣವೆನಿಸುವುದು ಶಬ್ದದ ಲಕ್ಷಣ. ಅವನು ಶಾಸ್ತ್ರಯೋನಿಯಾದ್ದರಿಂದ ಎಂದು [೧]ವೀರರಾಘವವ್ಯಾಖ್ಯಾನ. ಆದರೆ ಲಿಂಗವೆಂದರೆ ಶಬ್ದಪ್ರಮಾಣವೆಂದು ಅರ್ಥ ಎನ್ನಲು ಪ್ರಮಾಣವನ್ನು ಅದು ಕೊಟ್ಟಿಲ್ಲ. ಲೋಕದಲ್ಲಿ ಲಿಂಗವೆಂದರೆ ಅನುಮಾನ ಪ್ರಮಾಣವೆಂದು ತಿಳಿಯುತ್ತದೆ ಮತ್ತು ಈ ಲಕ್ಷಣ ಶಾಸ್ತ್ರದಲ್ಲಿ ಮಾತ್ರ ಬರುತ್ತದೆ. ಬೇರೆ ಧ್ವನ್ಯಾತ್ಮಕವಾದ ಶಬ್ದದಲ್ಲಿ ಅವ್ಯಾಪ್ತಿ. ವೀರರಾಘವವ್ಯಾಖ್ಯಾನದಲ್ಲಿ ಇನ್ನೂ ಬೇರೆ ಅರ್ಥಗಳನ್ನು ಕೊಡಲಾಗಿದೆ. ಲಿಂಗ ಎಂದರೆ ಜ್ಞಾಪ್ಯ, 'ಸ್ಮರಣಗೋಚರ' ಎಂದು ಒಂದು ಅಪೂರ್ವವಾದ ಅರ್ಥವಿಟ್ಟುಕೊಂಡು ಒಂದು ವಸ್ತುವನ್ನು ಕಾಣುವ ದೃಷ್ಟೃವಿಗೆ ಆ ವಸ್ತುವನ್ನು ಹೇಳುವ ಶಬ್ದ ನೆನಪಿಗೆ ಬರುತ್ತದೆ. ಜ್ಞಾಪ್ಯವಾಗುತ್ತದೆ. ಅದರಿಂದ ದ್ರಷ್ಟೃವಿಗೆ ಲಿಂಗವಾಗುತ್ತದೆ ಶಬ್ದ!

ಇನ್ನೊಂದು ಅರ್ಥ– ಈತನು ಘಟವನ್ನು ನೋಡಿದವನು, ಘಟದ್ರಷ್ಟೃ ಎಂಬುದನ್ನು ಅವನು ಹೇಳುವ 'ಘಟ'ಶಬ್ದ ತಿಳಿಸಿ ಕೊಡುತ್ತದೆ. ನೋಡದೆ ಯಾರೂ ಹೇಳುವುದಿಲ್ಲ ತಾನೆ? ಎಂದು. ಈ ಲಕ್ಷಣಕ್ಕೆ ಅನಾದಿ ಅಪೌರುಷೇಯ ಶಬ್ದದಲ್ಲಿ ಅವ್ಯಾಪ್ತಿ. ಅದು ನೋಡಿ ಹೇಳಿದ ಶಬ್ದವಲ್ಲ.

ಗೋಡೆಯ ಆಚೆ ಮರೆಯಲ್ಲಿ ನಿಂತು ಒಬ್ಬನು ಮಾತನಾಡಿದರೆ ಅವನು ಯಾರೆಂದೂ, ಅವನು ತಾನು ಹೇಳುವ ವಿಷಯವನ್ನು ತಿಳಿದವನೆಂದೂ ಅನುಮಾನ ಮಾಡಬಹುದೆಂಬ ಲಕ್ಷಣ ಅಂಥ ಕೆಲವೇ ಶಬ್ದಗಳಲ್ಲಿ ಬರುವುದರಿಂದ ಹೆಚ್ಚಿನ ಶಬ್ದಗಳಲ್ಲಿ ಅವ್ಯಾಪ್ತಿ ಬರುತ್ತದೆ.

ಈ ಲಕ್ಷಣಗಳೆಲ್ಲವೂ ತೀರ ಕ್ಲಿಷ್ಟ ಕಲ್ಪನೆಗಳಾಗುತ್ತವೆ. ಸರ್ವಜ್ಞ ಪರಮಾತ್ಮನಿಗೆ ಲಿಂಗ, ಅವನ ವಿಷಯದಲ್ಲಿ ಏಕೈಕಪ್ರಮಾಣ, ಶಬ್ದವೆನ್ನುವ ಲಕ್ಷಣವೇ ಎಲ್ಲ ಶಬ್ದಗಳಲ್ಲಿ ಬರುವ ಪ್ರಮಾಣಸಿದ್ಧವಾದ ಲಕ್ಷಣ. ಏಕೆಂದರೆ ಪರಮಾತ್ಮ ಸರ್ವಶಬ್ದವಾಚ್ಯ.

[೧]ರಾಧಾರಮಣದಾಸ ವ್ಯಾಖ್ಯಾನದಲ್ಲಿ ಅರ್ಥವಾಚಕತ್ವವು ವರ್ಣಾತ್ಮಕಶಬ್ದಕ್ಕೇ ಹೊರತು ಭೇರೀಧ್ವನಿ ಮುಂತಾದುವಕ್ಕೆ ಇಲ್ಲ ಎಂದಿದೆ. ಆದರೆ ಐತರೇಯಭಾಷ್ಯ

೧. ಅರ್ಥವಾಚಕತ್ವಂ ತು ವರ್ಣಾತ್ಮಕಸ್ಯೈವ । ನ ತು ಭೇರ್ಯಾದಿಧ್ವನ್ಯಾತ್ಮಕಸ್ಯ । ಶಬ್ದಾದಯೋ ದ್ವಿವಿಧಾಃ ಸೂಕ್ಷ್ಮಾಸ್ತನ್ಮಾತ್ರಾಶಬ್ದವಾಚ್ಯಾಃ । ಭೂತಾನಾಂ

ಕರ್ಮನಿರ್ಣಯಾದಿಗಳಲ್ಲಿ ಹೇಳುವಂತೆ ಎಲ್ಲ ಧ್ವನಿಗಳು ಅಕಾರಾದಿವರ್ಣಗಳನ್ನು ಇಲ್ಲವೇ ನಾದವೆಂಬ ವರ್ಣವನ್ನು ವ್ಯಕ್ತಮಾಡಿ ಆ ಮೂಲಕ ಭಗವಂತನ ಗುಣಗಳಿಗೆ ವಾಚಕವೇ ಆಗುತ್ತವೆ.

ಹಿಂದೆ ದ್ವಿತೀಯಸ್ಕಂಧದಲ್ಲಿ (ಅ.೫.ಶ್ಲೋ.೨೫) 'ಲಿಂಗಂ ಯದ್ ದ್ರಷ್ಟೃದೃಶ್ಯಯೋಃ' ಎಂದು 'ದ್ರಷ್ಟೃದೃಶ್ಯಲಿಂಗತ್ವ' ವನ್ನು ಶಬ್ದ ಲಕ್ಷಣವೆನ್ನಲಾಗಿದೆ. ಅದಕ್ಕೆ ತಾತ್ಪರ್ಯದಲ್ಲಿ ವಿಷ್ಣುಸಂಹಿತಾವಚನದ ಆಧಾರ ಕೊಟ್ಟಿದ್ದಾರೆ. ಪ್ರಕೃತ 'ದ್ರಷ್ಟೃಲಿಂಗತ್ವ' ಲಕ್ಷಣ ಉಕ್ತವಾಗಿದೆ. ಅದಕ್ಕೂ ಬೇರೆ ಪ್ರಮಾಣವನ್ನು ಶ್ರೀಮದಾಚಾರ್ಯರು ಇಲ್ಲಿ ತೋರಿಸುತ್ತಾರೆ.

[೧]ಸ್ಪರ್ಶವು ವಾಯುವಿನ ಅಸಾಧಾರಣಗುಣ, ರೂಪವು ತೇಜಸ್ಸಿನ ಅಸಾಧಾರಣ ಗುಣ ಎಂದು ಮುಂತಾಗಿ ಸ್ಪರ್ಶಾದಿಗಳಿಗೆ ವಾಯು ಮುಂತಾದ ಭೂತಗಳ ಅಸಾಧಾರಣಗುಣತ್ವವನ್ನು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಆಕಾಶಾದಿಗಳಲ್ಲಿ ಕ್ರಮವಾಗಿ ಪೂರ್ವಪೂರ್ವಭೂತಗುಣಗಳು ಉತ್ತರೋತ್ತರ ಭೂತಗಳಲ್ಲಿ ವ್ಯಕ್ತವಾಗಿಯೆ ಅನುಭವಕ್ಕೆ ಬರುತ್ತವೆ. ಅದರಿಂದ ಸ್ಪರ್ಶವು ವಾಯು ಮುಂತಾದ ನಾಲ್ಕೂ ಭೂತಗಳಲ್ಲಿ ಇರುವಾಗ ವಾಯುವಿನ ಅಸಾಧಾರಣ ಗುಣ ಹೇಗೆ? ಎಂಬ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಸಮಾಧಾನವಿಲ್ಲ.

ವಾಯುವಿನಲ್ಲಿ ಸ್ಪರ್ಶ ಸ್ವಾಭಾವಿಕ. ತೇಜಸ್ಸು ಜಲ ಪೃಥಿವಿಗಳಲ್ಲಿ ಪಂಚೀಕರಣಪ್ರಯುಕ್ತ ವಾಯುವಿನ ಅಂಶ ಸೇರಿರುವುದರಿಂದ ಅಲ್ಲಿ ಸ್ಪರ್ಶದ ಅನುಭವವಾಗುತ್ತದೆ ಎಂದು ಹೇಳಬೇಕು.

ಅರ್ಥಾಶ್ರಯತ್ವಂ ಅರ್ಥವಿಷಯತ್ವಮ್ ।

ಶಬ್ದೇನೈವ ಯತೋ ಜ್ಞೇಯೋ ಹರಿರ್ಲಿಂಗಂ ತು ತಸ್ಯ ತತ್ ।
ಸ್ಪರ್ಶಾದ್ಯಭಾವಾತ್ ತನ್ಮಾತ್ರಾ ನಭಸಶ್ಚೇತಿ ಕೀರ್ತ್ಯತೇ ॥

ಸ್ಪರ್ಶಾದಯಶ್ಚ ತನ್ಮಾತ್ರಾ ಇತರೇ ಪೂರ್ವಸಂಸ್ಥಿತೇಃ ।
ತಿಷ್ಠಂತ್ಯೇಕೋ ಗುಣೋ ಭೂತೇ ಪ್ರತ್ಯೇಕಂ ಪಂಚಸು ಸ್ಥಿತಃ ॥

ಕಾರಣರೂಪಾಃ । ಸ್ಥೂಲಾಸ್ತು ಇಂದ್ರಿಯಾಣಾಂ ವಿಷಯರೂಪಾಃ । ತೇಷಾಮೇವಾ ರ್ಥಾಶ್ರಯತ್ವಾದಿಲಕ್ಷಣಾನಿ । —ರಾಧಾರಮಣದಾಸಃ

೧. ನಭಸ್ತನ್ಮಾತ್ರತ್ವಂ ಆಕಾಶಸ್ಯಾಧಾರಣಗುಣತ್ವಂ ಶಬ್ದಸ್ಯ ಲಕ್ಷಣಂ । ನಭಸ್ವತೋ ವಾಯೋಸ್ತನ್ಮಾತ್ರತ್ವಮಸಾಧಾರಣಗುಣತ್ವಂ ಚ ಸ್ಪರ್ಶಲಕ್ಷಣಂ । —ವೀರರಾಘವಃ

ಶಬ್ದೋ ವರ್ಣಾತ್ಮಕೋ ನಿತ್ಯೋ ಧ್ವನಿರಾಕಾಶಸಂಭವಃ ।
ಆಕಾಶ ಏವ ಸೂಕ್ಷ್ಮಸ್ತು ಧ್ವನಿರಿತ್ಯೇವ ಶಬ್ದ್ಯತೇ ।
ಸ ಏವ ವ್ಯಜ್ಯಮಾನಸ್ತು ಭವೇತ್ ಕರ್ಣೈಕಗೋಚರಃ ॥ ಇತಿ ಚ ।

ಅರ್ಥಾಶ್ರಯತ್ವವೆಂದರೆ ಶಬ್ದವು ಅರ್ಥಪ್ರತಿಪಾದಕವಾಗುತ್ತದೆ ಎಂದರ್ಥ. 'ಶಬ್ದದಿಂದಲೇ ಶ್ರೀಹರಿಯನ್ನು ತಿಳಿದುಕೊಳ್ಳಬೇಕು. ಅದರಿಂದ ಶಬ್ದವು 'ದ್ರಷ್ಟೃ'ವಾದ ಪರಮಾತ್ಮನಿಗೆ 'ಲಿಂಗ'ವೆನಿಸುತ್ತದೆ. ಆಕಾಶದಲ್ಲಿ ಸ್ಪರ್ಶಾದಿಗುಣವಿಲ್ಲ, ಶಬ್ದಮಾತ್ರವೇ ಇದೆ ಎನ್ನುವುದೇ ಶಬ್ದದ ಅಸಾಧಾರಣಲಕ್ಷಣ. ಹಾಗಾದರೆ ಮುಂದೆ ಸ್ಪರ್ಶಮುಂತಾದವುಗಳಿಗೆ ಲಕ್ಷಣವನ್ನು ಹೇಳುವಾಗ ವಾಯುವಿನಲ್ಲಿ ಸ್ಪರ್ಶಮಾತ್ರವಿದೆ. ತೇಜಸ್ಸಿನಲ್ಲಿ ರೂಪಮಾತ್ರವಿದೆ ಎಂದು ಮುಂತಾಗಿ ಹೇಳುವುದು ಹೇಗೆ? ಅಲ್ಲಿ ಬೇರೆ ಗುಣಗಳೂ ಇವೆ ತಾನೆ? ಎಂದರೆ, ಸ್ಪರ್ಶಮುಂತಾದವುಗಳು ತನ್ಮಾತ್ರ ಎನಿಸುವುದು ಅವುಗಳು ವಾಯ್ವಾದಿ ಒಂದೊಂದೇ ಪ್ರತ್ಯೇಕ ಭೂತಗಳಲ್ಲಿ ಸ್ವಾಭಾವಿಕವಾಗಿ ಇರುತ್ತವೆ. ಬೇರೆ ಶಬ್ದಾದಿಗಳು ವಾಯ್ವಾದಿಭೂತಗಳಲ್ಲಿ ಪೂರ್ವಭೂತ ಮಿಶ್ರಣಪ್ರಯುಕ್ತವಾಗಿ ಇರುತ್ತವೆ. ಅದರಿಂದ ಸ್ಪರ್ಶಮಾತ್ರ ವಾಯುವಿನಲ್ಲಿ ಇದೆ ಎಂದರೆ ಸ್ವಾಭಾವಿಕವಾಗಿ ಸ್ಪರ್ಶ ಮಾತ್ರವೇ ವಾಯುವಿನಲ್ಲಿ ವಿಶೇಷಗುಣವಾಗಿ ಇದೆ ಎಂದು ಅಭಿಪ್ರಾಯ. ತಾಮಸಾಹಂಕಾರದಿಂದ ಶಬ್ದ ಉಂಟಾಯಿತೆಂದರೆ ಧ್ವನ್ಯಾತ್ಮಕ ಶಬ್ದವು ಸೂಕ್ಷ್ಮರೂಪದಿಂದ ಹುಟ್ಟಿತು ಹೊರತು ವರ್ಣಾತ್ಮಕ ಶಬ್ದವಲ್ಲ. ಅದು ನಿತ್ಯ. ಸೂಕ್ಷ್ಮಧ್ವನಿಯು ತಾಮಸಾಹಂಕಾರದಿಂದ ಹುಟ್ಟಿ ಆಕಾಶವನ್ನು ಉಂಟುಮಾಡುತ್ತದೆ. ಆಕಾಶದಿಂದ ಹುಟ್ಟುವ ಸ್ಥೂಲವಾದ ಶಬ್ದವು ಮಾತ್ರ ಕೇವಲ ಶ್ರೋತ್ರೇಂದ್ರಿಯಗ್ರಾಹ್ಯವೆನಿಸುತ್ತದೆ. ಇದೇ ರೀತಿ ಸ್ಪರ್ಶಾದಿಗಳಲ್ಲಿಯೂ ಸೂಕ್ಷ್ಮವು ವಾಯ್ವಾದಿರೂಪವಾಗಿ ಪರಿಣಮಿಸುತ್ತದೆ. ವಾಯ್ವಾದಿಗಳಿಂದ ಸ್ಥೂಲರೂಪವಾಗಿ ವ್ಯಕ್ತವಾಗುವ ಸ್ಪರ್ಶಾದಿಗಳು ತ್ವಗಿಂದ್ರಿಯಾದಿಗಳಿಗೆ ಗ್ರಾಹ್ಯವೆನಿಸುತ್ತವೆ. ಎಂದೂ ಹೇಳಿದೆ.

* * *

ಆಕಾಶವು ಸ್ಪರ್ಶತನ್ಮಾತ್ರೆಯ ಮೂಲಕ ವಾಯುವನ್ನು ಹುಟ್ಟಿಸುತ್ತದೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ನಭಸಃ ಶಬ್ದತನ್ಮಾತ್ರಾತ್ ಕಾಲಗತ್ಯಾ ವಿಕುರ್ವತಃ ।
ಸ್ಪರ್ಶೋಽಭವತ್ ತತೋ ವಾಯುಸ್ತ್ವಕ್ ಸ್ಪರ್ಶಸ್ಯ ಚ ಸಂಗ್ರಹಃ ॥ ೩೭ ॥

ಶಬ್ದ ಒಂದೇ ಗುಣವಾಗಿ ಉಳ್ಳ ಆಕಾಶವು ಕಾಲಾನುಗುಣವಾಗಿ ಪರಿಣಾಮ ಹೊಂದಿದಾಗ ಅದರಿಂದ ಸ್ಪರ್ಶ ಉಂಟಾಯಿತು. ಅದರಿಂದ ವಾಯು

ಉಂಟಾಯಿತು. ಅದರಿಂದ ಸ್ಪರ್ಶಗ್ರಾಹಕವಾದ ತ್ವಗಿಂದ್ರಿಯಕ್ಕೆ ಉಪಚಯ ಉಂಟಾಯಿತು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಶಬ್ದತನ್ಮಾತ್ರಾತ್' ಎಂದರೆ ಶಬ್ದವೆಂಬ ತನ್ಮಾತ್ರೆಯಿಂದ ಹುಟ್ಟಿರುವ ಆಕಾಶದಿಂದ ಎಂದು ಅರ್ಥ ಮಾಡಿದ್ದಾರೆ. 'ಸ್ಪರ್ಶೋಽಭವತ್' ಎಂದರೆ ಸ್ಪರ್ಶತನ್ಮಾತ್ರೆ ಹುಟ್ಟಿತೆಂದು ಹೇಳಿದ್ದಾರೆ. ವಾಯ್ವಾದಿಗಳಲ್ಲಿ ಶಬ್ದತನ್ಮಾತ್ರೆ ಇದೆ ಎಂದು ತಿಳಿಸುವುದಕ್ಕಾಗಿ 'ಶಬ್ದತನ್ಮಾತ್ರಾತ್' ಎಂದು ಆಕಾಶಕ್ಕೆ ವಿಶೇಷಣವಿದೆ ಎಂದಿದ್ದಾರೆ. ವಾಯ್ವಾದಿಗಳಲ್ಲಿ ಶಬ್ದತನ್ಮಾತ್ರೆಯಲ್ಲ, ಸ್ಥೂಲಶಬ್ದವೇ ಇದೆ. ಅದರಿಂದ 'ಶಬ್ದತನ್ಮಾತ್ರಾತ್' ಎಂದರೆ ಸ್ಥೂಲಶಬ್ದ ಒಂದೇ ಗುಣವಾಗಿ ಉಳ್ಳ ಆಕಾಶದಿಂದ ಎಂದು ಹೇಳುವುದೇ ಯುಕ್ತವಾಗುತ್ತದೆ. ಆಗ ಭಾಗವತವು ಸ್ಥೂಲಶಬ್ದವನ್ನು 'ಶಬ್ದತನ್ಮಾತ್ರೆ' ಎಂದೂ ಸೂಕ್ಷ್ಮಸ್ಪರ್ಶವನ್ನು ಕೇವಲ 'ಸ್ಪರ್ಶ' ಎಂದೂ ಏಕೇ ಹೇಳಿದೆ? ಎಂಬ ಪ್ರಶ್ನೆ ಸಹಜ. ಅದಕ್ಕೆ 'ತನ್ಮಾತ್ರ'ಶಬ್ದವು ಇಲ್ಲಿ 'ಸೂಕ್ಷ್ಮ' ಎಂಬ ಅರ್ಥದಲ್ಲಿ ಅಲ್ಲ. 'ಸ್ವಾಭಾವಿಕವಾಗಿ ಅದೊಂದೇ ಗುಣ' ಎಂಬ ಅರ್ಥದಲ್ಲಿ ಇದೆ ಎಂದು ಸಮಾಧಾನ ಹೇಳಬೇಕು.

ಇಲ್ಲಿ ಎಲ್ಲ ಕಡೆ 'ಶ್ರೋತ್ರಂ ತು ಶಬ್ದಗಂ' 'ತ್ವಕ್‌ಸ್ಪರ್ಶಶ್ಚ ಚ ಸಂಗ್ರಹಃ' ಎಂದು ಹಿಂದೆಯೆ ಉತ್ಪನ್ನವಾಗಿದ್ದ ಇಂದ್ರಿಯಗಳಿಗೆ ವಿಷಯಗಳು ಉತ್ಪನ್ನವಾದಾಗ ಅವುಗಳ ಸಂಬಂಧಮಾತ್ರದ ನಿರೂಪಣೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ವಸ್ತುತಃ ತೈಜಸಾಹಂಕಾರದಿಂದ ಹಿಂದೆ ಹುಟ್ಟಿದ್ದ ಇಂದ್ರಿಯಗಳಿಗೆ ಪುನಃ ಆಕಾಶಾದಿ ಭೂತಗಳಿಂದಲೂ ಉತ್ಪತ್ತಿ ಇದೆ. ಅಂದರೆ, ಈ ಉತ್ಪತ್ತಿ ಕೇವಲ ಉಪಚಯ ರೂಪವಾದುದು.

ನಭಸಃ ಶಬ್ದತನ್ಮಾತ್ರಾತ್ ಶಬ್ದತನ್ಮಾತ್ರಗುಣಾತ್ ।
ಸ್ಪರ್ಶಾದಯೋಽಪಿ ವಾಯ್ವಾದೇಃ ಸೂಕ್ಷ್ಮಾವಸ್ಥಾ ಪ್ರಕೀರ್ತಿತಾ ॥
ಇತಿ ಚ ।

ಸೂಕ್ಷ್ಮೇಂದ್ರಿಯಾಣಿ ಸಂತ್ಯೇವ ಸ್ಯುಃ ಸ್ಥೂಲಾನ್ಯಪ್ಯಹಂಕೃತೇಃ ।
ಭೂತೇಭ್ಯಶ್ಚೋಪಚೀಯಂತೇ ಪುನರ್ಬ್ರಹ್ಮಶರೀರತಃ ॥ ಇತಿ ಚ ।

'ನಭಸಃ ಶಬ್ದತನ್ಮಾತ್ರಾತ್' ಎಂದರೆ ಶಬ್ದ ಒಂದೇ ಆಕಾಶದಲ್ಲಿ ಅದರ ಸ್ವಂತ ಗುಣವಾಗಿದೆ ಎಂದರ್ಥ.

'ಸ್ಪರ್ಶದಿಂದ ವಾಯು ಹುಟ್ಟಿತು' ಎನ್ನುವಾಗ ಸ್ಪರ್ಶವೆಂದರೆ ವಾಯುವಿನ ಸೂಕ್ಷ್ಮಾವಸ್ಥೆ ಅಂದರೆ ಸೂಕ್ಷ್ಮಾವಸ್ಥೆಗೆ ಉಪಚಯ ಮಾಡುವ ಸೂಕ್ಷ್ಮಸ್ಪರ್ಶ ಎಂದಿಟ್ಟುಕೊಳ್ಳಬೇಕು

ಎಂದೂ ಹೇಳಿದೆ. ಅದರಿಂದ ವಾಯುವಿನಿಂದ ಹುಟ್ಟುವ ಸ್ಥೂಲಸ್ಪರ್ಶವು ವಾಯುವನ್ನು ಹೇಗೆ ಹುಟ್ಟಿಸೀತು ಎಂದು ಆಕ್ಷೇಪಕ್ಕೆ ಅವಕಾಶವಿಲ್ಲ.

'ಇಂದ್ರಿಯಗಳು ಸೂಕ್ಷ್ಮರೂಪದಿಂದ ಅನಾದಿಕಾಲದಿಂದಲೂ ಇದ್ದೇ ಇವೆ. ಸೃಷ್ಟಿಕಾಲದಲ್ಲಿ ತೈಜಸಾಹಂಕಾರದಿಂದ ಮತ್ತು ಭೂತಗಳಿಂದ ಉಪಚಯ ಹೊಂದಿ ಸ್ಥೂಲವಾಗುತ್ತವೆ. ಮುಂದೆ ಬ್ರಹ್ಮಾಂಡ ಸೃಷ್ಟಿಯಾದಾಗ ಬ್ರಹ್ಮನ ವಿರಾಡ್ದೇಹದ ಭಾಗವಾದ ಪಂಚಭೂತಗಳಿಂದಲೂ ಪುನಃ ಆ ಇಂದ್ರಿಯಗಳಿಗೆ ಉಪಚಯವಾಗುತ್ತದೆ. ಅದನ್ನೇ ಭಾಗವತ ಇಲ್ಲಿ ಹೇಳುತ್ತಿದೆ' ಎಂದೂ ಹೇಳಿದೆ.

* * *

ವಾಯುಲಕ್ಷಣವನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಚಾಲನಂ ವ್ಯೂಹನಂ ಪ್ರಾಪ್ತಿರ್ನೇತೃತ್ವಂ ದ್ರವ್ಯಶಬ್ದಯೋಃ ।
ಸರ್ವೇಂದ್ರಿಯಾಣಾಮಾತ್ಮತ್ವಂ ವಾಯೋಃ ಕರ್ಮಾಭಿಲಕ್ಷಣಮ್ ॥೩೯॥

ಅಲ್ಲಾಡಿಸುವುದು, ಒಟ್ಟಿಗೆ ಕೂಡಿಸುವುದು, ಎಲ್ಲವನ್ನೂ ಹೊಂದುವುದು, ದ್ರವ್ಯಗಳನ್ನೂ ಶಬ್ದಗಳನ್ನೂ ಆಯಾ ಇಂದ್ರಿಯಗಳಿಗೆ ತಲುಪಿಸುವುದು, ಎಲ್ಲ ಇಂದ್ರಿಯಗಳನ್ನು ನಿಯಂತ್ರಿಸುವುದು ಇವು ವಾಯುವಿನ ಸ್ವರೂಪಲಕ್ಷಣಗಳು.

ಇಲ್ಲಿ ಪ್ರಾಪ್ತಿ ಎಂದರೆ ಒಟ್ಟಿಗೆ ಕೂಡಿಸುವುದು, ವ್ಯೂಹನವೆಂದರೆ ಬೇರ್ಪಡಿಸುವುದು ಎಂದು ವೀರರಾಘವ ವ್ಯಾಖ್ಯಾನ. ವಾಯು ತಾನು ಬೇರೆ ಪದಾರ್ಥಗಳನ್ನು ಸೇರುವುದು ಎಂದು ಶುಕದೇವ ವ್ಯಾಖ್ಯಾನ. ಗಂಧವನ್ನು ಘ್ರಾಣೇಂದ್ರಿಯಕ್ಕೆ ಕೊಂಡೊಯ್ಯುವುದು ಎಂದು ವಲ್ಲಭವ್ಯಾಖ್ಯಾನ. ಇವು ಪ್ರಮಾಣಾನುಸಾರಿ ವ್ಯಾಖ್ಯಾನಗಳಲ್ಲ.

ಸರ್ವೇಂದ್ರಿಯಾಣಾಮಾತ್ಮತ್ವಂ ಎಂದರೆ ಎಲ್ಲ ಇಂದ್ರಿಯಗಳಿಗೆ ಉಪೋದ್ಬಲಕವಾಗಿರುವುದು. ವಾಯು ಇಲ್ಲದಿದ್ದರೆ ಯಾವ ಇಂದ್ರಿಯವೂ ಕೆಲಸ ಮಾಡುವುದಿಲ್ಲ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು 'ಆತ್ಮತ್ವ'ಶಬ್ದದ ಮುಖ್ಯಾರ್ಥವಾಗುವುದಿಲ್ಲ. ಸ್ವಾಮಿತ್ವವೆಂದೇ ಅರ್ಥ ಹೇಳಬೇಕು. ಆಗ ಜಡವಾಯುವನ್ನಿಟ್ಟುಕೊಳ್ಳದೆ ಅಭಿಮಾನಿಯಾದ ಪ್ರವಹವಾಯುವನ್ನೂ ಅವನಲ್ಲಿ ಆವೇಶಗೊಳ್ಳುವ ಪ್ರಧಾನವಾಯುವನ್ನೂ ಇಟ್ಟುಕೊಳ್ಳಬೇಕು. ಆಗ ಬ್ರಹ್ಮವೈವರ್ತಪುರಾಣವಚನಕ್ಕೆ ಭಾಗವತವು ಅನುಸಾರಿಯಾಗುವುದು.

'ಕರ್ಮಾಭಿಲಕ್ಷಣಂ' ಎಂದು ಸರ್ವೇಂದ್ರಿಯ ಸ್ವಾಮಿತ್ವವನ್ನು ಕರ್ಮ ಎಂದುದೂ ಕೂಡಲಾರದು. ಅದರಿಂದ ಕರ್ಮವೆಂದರೆ ವಿಷಯ. ಸ್ವರೂಪವೂ ವಿಷಯ

ವಾಗುವುದರಿಂದ 'ಸ್ವರೂಪಲಕ್ಷಣ' ಎಂದು ಹೇಳಿದಂತಾಗುವುದು. ಇದೂ ಶಬ್ದನಿರ್ಣಯ ವಚನಾನುಸಾರಿ ವ್ಯಾಖ್ಯಾನ.

ಪ್ರಾಪ್ನೋತಿ ವಾಯುಃ ಸರ್ವಂ ತು ಸ್ವತ ಏವ ಹರೇಸ್ತಥಾ ।
ಅತಃ ಪ್ರಾಪ್ತಿರಿತಿ ಪ್ರಾಹುರ್ವಾಯುಂ ಭೂತಪತಿಂ ಪ್ರಭುಮ್ ॥

ಪ್ರಧಾನವಾಯುರನ್ಯೇಷು ನಿತ್ಯಾವಿಷ್ಟೋ ಯತಸ್ತತಃ ।
ತದ್ಗುಣಾಸ್ತೇಷು ಚೋಚ್ಯಂತೇ ನೀಚತಾ ನಾಸ್ಯ ತತ್ಕೃತಾ ॥
ಇತಿ ಬ್ರಹ್ಮವೈವರ್ತೇ ॥

ಸ್ವರೂಪಮಪಿ ಕರ್ಮೇತಿ ವಿಷಯತ್ವಾದುದೀರ್ಯತೇ।
ಇತಿ ಶಬ್ದನಿರ್ಣಯೇ ।

ಭೂತವಾಯ್ವಭಿಮಾನಿ ಪ್ರವಹವಾಯು ಸರ್ವವನ್ನೂ ತನ್ನ ಯೋಗ್ಯತೆಯ ಬಲದಿಂದಲೂ ಹರಿಯ ಅನುಗ್ರಹದಿಂದಲೂ ಪಡೆದಿರುತ್ತಾನೆ. ಅದರಿಂದ ಅವನನ್ನು 'ಪ್ರಾಪ್ತಿ' ಎಂದು ಕರೆಯುತ್ತಾರೆ. ಅದರಿಂದ ಜ್ಞಾನಾನಂದಬಲಾದಿ ಸರ್ವ ಗುಣಪ್ರಾಪ್ತಿಯು ಅವನ ಲಕ್ಷಣ. ವಸ್ತುತಃ ಇದು ಪ್ರಧಾನವಾಯುವಿನ ಲಕ್ಷಣ. ಸರ್ವೇಂದ್ರಿಯಸ್ವಾಮಿತ್ವವೂ ಅವನದೇ ಲಕ್ಷಣ. ಆದರೂ ಅವನು ಪ್ರವಹವಾಯು ಮುಂತಾದ ಬೇರೆ ದೇವತೆಗಳಲ್ಲಿ ಸದಾ ಆವಿಷ್ಟನಾಗಿರುವುದರಿಂದ ಅವರಲ್ಲಿ ಪ್ರಧಾನವಾಯುವಿನ ಮಹಿಮೆಗಳು ಉಕ್ತವಾಗುತ್ತವೆ. ಅವನ ಆವೇಶದಿಂದ ಅವರಿಗೆ ಮಹಿಮೆಯೇ ಹೊರತು ಅವನಿಗೆ ಅದರಿಂದ ಅಲ್ಪತ್ವ ಬರುವುದಿಲ್ಲ ಎಂದು ಬ್ರಹ್ಮವೈವರ್ತ ಪುರಾಣದಲ್ಲಿದೆ. ಕರ್ಮ ಎಂದರೆ ವಿಷಯ. ಸ್ವರೂಪವೂ ವಿಷಯವಾಗುವುದರಿಂದ 'ಕರ್ಮಾಭಿಲಕ್ಷಣಂ' ಎಂದರೆ ಸ್ವರೂಪಲಕ್ಷಣ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

* * *

ರೂಪಲಕ್ಷಣವನ್ನು ಕಪಿಲನು ತಾಯಿಗೆ ಹೇಳುತ್ತಾನೆ–

ದ್ರವ್ಯಾಕೃತಿತ್ವಂ ಗುಣತಾ ವ್ಯಕ್ತಿಸಂಸ್ಥಾತ್ವಮೇವ ಚ ।
ತೇಜಸ್ತ್ವಂ ತೇಜಸಃ ಸಾಧ್ವಿ ರೂಪಮಾತ್ರಸ್ಯ ವೃತ್ತಯಃ ॥ ೪೧ ॥

ದ್ರವ್ಯದಲ್ಲಿ ಪೂರ್ತಿವ್ಯಾಪಿಸಿರುವುದು, ಪ್ರಭಾರೂಪವಾಗಿರುವುದು, ಸ್ವಪ್ರಕಾಶ ವಾಗಿರುವುದು, ಪ್ರಖರವಾಗಿ ಬೆಳಗುವುದು ಇವು ತೇಜೋಗುಣವಾದ ರೂಪದ ಲಕ್ಷಣಗಳು.

[1]ಇಲ್ಲಿ 'ಗುಣತಾ' ಎಂದರೆ ಸದಾ ರೂಪಾದಿಗುಣಗಳು ದ್ರವ್ಯವನ್ನು ಆಶ್ರಯಿಸಿರುತ್ತವೆ. ಹೀಗೆ ದ್ರವ್ಯವನ್ನಾಶ್ರಯಿಸಿರುವುದೇ ಗುಣತ್ವವೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಸ್ಪರ್ಶಾದಿಗಳಲ್ಲಿಯೂ ಇರುವ ಈ ಗುಣತ್ವವನ್ನು ರೂಪಲಕ್ಷಣವೆನ್ನುವುದು ಸರಿಯಲ್ಲ. ಅದಕ್ಕೆ ದ್ರವ್ಯದೊಂದಿಗೇ ಕಾಣುವುದು ಗುಣತ್ವ. ಸ್ಪರ್ಶಾದಿಗಳು ದ್ರವ್ಯವನ್ನು ಬಿಟ್ಟು ತಾವೇ ಸ್ವತಂತ್ರವಾಗಿ ಅನುಭವಕ್ಕೆ ಬರುತ್ತವೆ. ವಾಯು ಪ್ರತ್ಯಕ್ಷವಾಗದಿದ್ದರೂ ಸ್ಪರ್ಶ ಪ್ರತ್ಯಕ್ಷವಾಗುವುದು ಎಂದು ವಿವರಣೆ ನೀಡುತ್ತಾರೆ. ಆದರೆ ವಾಯು ಸ್ಪರ್ಶಾನುಮೇಯ ಎನ್ನುವುದು ಸರ್ವಸಮ್ಮತವಲ್ಲ. ಮತ್ತು ಶುಕ್ಲಭಾಸ್ವರ ರೂಪ, ಅಂದರೆ ಪ್ರಖರವಾದ ಪ್ರಭೆ ಕಾಣುವಾಗ ಪ್ರಭೆ ಮಾತ್ರ ಕಾಣುತ್ತದೆ ದ್ರವ್ಯ ಕಾಣಿಸುವುದಿಲ್ಲ. ತೇಜಸ್ಸಿನ ರೂಪವೇ ಮುಖ್ಯವಾಗಿ ರೂಪ. ಪೃಥಿವಿ ಅಪ್ಪುಗಳಲ್ಲಿ ತೇಜಸ್ಸಿನ ಸಂಬಂಧದಿಂದ ಬಂದ ಗುಣ ಅಮುಖ್ಯ ರೂಪ. ಮುಖ್ಯವಾದ ತೇಜಸ್ಸಿನ ರೂಪದಲ್ಲಿಯೇ ಬಾರದ ಲಕ್ಷಣವನ್ನು ರೂಪಲಕ್ಷಣವೆನ್ನುವುದು ಸರಿಯಾಗದು. ಪ್ರಭೆಯೂ ದ್ರವ್ಯವೇ ಎಂದು ತಾರ್ಕಿಕರು ಹೇಳುವುದು 'ಪ್ರಭಾ ಹಿ ತೇಜಸೋ ರೂಪಂ' ಎನ್ನುವ ವಚನಕ್ಕೆ ವಿರುದ್ಧವಾಗುವುದು.

ವ್ಯಕ್ತಿಸಂಸ್ಥಾತ್ವವೆಂದರೆ ದ್ರವ್ಯದ ಪರಿಮಾಣದಷ್ಟೇ ಪರಿಮಾಣದಿಂದ ಕೂಡಿರುವುದು ಎನ್ನುತ್ತಾರೆ. ರೂಪ ಒಂದು ಗುಣ. ಗುಣಕ್ಕೂ ಪರಿಮಾಣ ಉಂಟೆ? ಇರುವುದಾದರೆ ಸ್ಪರ್ಶಾದಿಗಳಿಗೂ ಹಾಗೇ ದ್ರವ್ಯಪರಿಮಾಣವಿರುವುದರಿಂದ ಅದು ರೂಪದ ಲಕ್ಷಣವಾಗದು. ವಸ್ತುತಃ ದ್ರವ್ಯಾಕೃತಿತ್ವವೆಂದರೂ ಇದೇ. ಅದರಿಂದ ಪುನರುಕ್ತಿ. ಇದು ವಲ್ಲಭವ್ಯಾಖ್ಯಾನದಲ್ಲಿ ಸ್ಪಷ್ಟ ಕಾಣುತ್ತದೆ. ತೇಜಸ್ತ್ವಂ ಎಂದರೆ ಅಸಾಧಾರಣತ್ವ, ತನ್ಮಾತ್ರತ್ವ, ಗುಣತ್ವ ಎಂದು ಮುಂತಾಗಿ ಅರ್ಥಗಳು ಬೇರೆ ವ್ಯಾಖ್ಯಾನಕಾರರಲ್ಲಿ ಕಾಣುತ್ತವೆ. ಪ್ರಮಾಣಸಿದ್ಧವಾದ ಅರ್ಥ ಹೀಗೆ–

ವ್ಯಕ್ತಿಸಂಸ್ಥಾತ್ವಂ ವ್ಯಕ್ತತ್ವೇನ ಸ್ಥಿತಿಃ । ಗುಣತಾ ಪ್ರಕಾಶತ್ವಮ್ ।

---

೧. ಸ್ಪರ್ಶಾದೇರಪಿ ಸ್ವಾತಂತ್ರ್ಯೇಣೈವ ವಾಯ್ವಾದಿದ್ರವ್ಯಪ್ರತ್ಯಕ್ಷಮನಪೇಕ್ಷ್ಯೈವ ಪ್ರತೀತಿಃ ತ್ವಗಾದಿನಾ ಜ್ಞಾನಮಿತ್ಯರ್ಥಃ । ರೂಪಸ್ಯ ತ್ವೇವಂ ಶಬ್ದಾದಿವತ್ ಸ್ವಾತಂತ್ರ್ಯೇಣ ನ ಪ್ರತೀತಿಃ । –ರಾಧಾರಮಣದಾಸಃ

ವ್ಯಕ್ತಿಸಂಸ್ಥಾತ್ವಂ ದ್ರವ್ಯಸ್ಯ ಯಾ ಸಂಸ್ಥಾ ಸನ್ನಿವೇಶಃ ಸೈವ ಸಂಸ್ಥಾ ಯಸ್ಯ । ತತ್– ಪರಿಮಾಣತಯಾ ಪ್ರತೀತಿರಿತ್ಯರ್ಥಃ । –ಶ್ರೀಧರಃ

ದ್ರವ್ಯಸ್ಯ ಘಟಾದೇರ್ಯಾ ಆಕೃತಿಃ ಸೈವ ರೂಪಸ್ಯ । ಪೃಥುಬುಧ್ನೋದರಾಕಾರಂ ರೂಪಮಪಿ । ಆತಾನವಿತಾನಾತ್ಮಕಂ ಚ । ವ್ಯಕ್ತೇಃ ಸಂಸ್ಥೈವ ಸಂಸ್ಥಾ ಯಸ್ಯ । ಯದಿ ವ್ಯಕ್ತಿರ್ವಕ್ರಾ ಭವೇತ್, ರೂಪಮಪಿ ವಕ್ರಂ ಭವೇದಿತಿ । –ವಲ್ಲಭಃ

ಆಲೋಕೋ ಗುಣ ಇತ್ಯೇವ ಪ್ರಕಾಶಶ್ಚೇತಿ ಕಥ್ಯತೇ ।
ಇತ್ಯಭಿಧಾನಮ್ ।
ತೇಜಸ್ತ್ವಮಥ ಚೋಗ್ರತ್ವಂ ಕ್ರೌರ್ಯಮಿತ್ಯಪಿ ಚೋಚ್ಯತೇ ॥
ಇತ್ಯಭಿಧಾನಮ್ ।

ವ್ಯಕ್ತಸಂಸ್ಥಾತ್ವವೆಂದರೆ ಇನ್ನೊಂದು ಬೆಳಕಿನ ಅಪೇಕ್ಷೆ ಇಲ್ಲದೆ ತಾನೇ ವ್ಯಕ್ತವಾಗಿ ಕಣ್ಣಿಗೆ ಗೋಚರಿಸುವುದು ಎಂದರ್ಥ. ಗುಣತಾ ಎಂದರೆ ಪ್ರಭಾರೂಪದಿಂದ ಇರುವುದು.

ಆಲೋಕ, ಗುಣ, ಪ್ರಕಾಶ ಇವು ಸಮಾನಾರ್ಥಕಪದಗಳೆಂದೂ, ತೇಜಸ್ತ್ವ ಉಗ್ರತ್ವ ಕ್ರೌರ್ಯ ಇವೂ ಸಮಾನಾರ್ಥಕ ಪದಗಳೆಂದೂ ಅಭಿಧಾನಗ್ರಂಥ ಹೇಳುತ್ತದೆ. ಅದರಿಂದ ತೇಜಸ್ತ್ವವೆಂದರೆ ಉಗ್ರವಾಗಿ ಪ್ರಖರವಾಗಿ ಬೆಳಗುವುದು ತೇಜಸ್ಸಿನ ರೂಪದ ಲಕ್ಷಣ.

* * *

ಜಲಲಕ್ಷಣವನ್ನು ಕಪಿಲನು ತಾಯಿಗೆ ತಿಳಿಸುತ್ತಾನೆ–

ಕ್ಲೇದನಂ ಪಿಂಡನಂ ತೃಪ್ತಿಃ ಪ್ರಾಣನಾಪ್ಯಾಯನೋಂದನಮ್ ।
ತಾಪಾಪನೋದೋ ಭೂಯಸ್ತ್ವಮಂಭಸೋ ವೃತ್ತಯಸ್ತ್ವಿಮಾಃ ॥ ೪೫ ॥

ಪದಾರ್ಥಗಳನ್ನು ಒದ್ದೆ ಮಾಡುವುದು, ಮಣ್ಣು ಹಿಟ್ಟು ಮುಂತಾದುವನ್ನು ಮುದ್ದೆ ಮಾಡುವುದು, ತೃಪ್ತಿ ನೀಡುವುದು, ಒಳ್ಳೆಯ ಚಟುವಟಿಕೆ ಉಂಟುಮಾಡುವುದು, ಬಾಯಾರಿಕೆ ಕಳೆಯುವುದು, ಹನಿಯ ರೂಪದಿಂದಿರುವುದು, ತಾಪ ಕಳೆಯುವುದು, ಇತರ ಭೂತಗಳಿಗಿಂತ ಹೆಚ್ಚಾಗಿರುವುದು ಇವು ಜಲದ ಸ್ವರೂಪಲಕ್ಷಣಗಳು.

ಇಲ್ಲಿ ಉಂದನವೆಂದರೆ ಧಾನ್ಯದ ಕಾಳುಮುಂತಾದುವನ್ನು ಮೃದುವಾಗಿಸುವುದು ಎಂದೂ, ಭೂಯಸ್ತ್ವವೆಂದರೆ ಭಾವಿಕೆರೆ ಮುಂತಾದವುಗಳಲ್ಲಿ ಸೇದಿದಷ್ಟೂ ನೀರು ಮತ್ತೆ ಬರುವುದು ಎಂದೂ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ 'ಉಂದೀ ಕ್ಲೇದನೇ' ಎಂದು ಧಾತುಪಾಠವಿರುವುದರಿಂದ ಕ್ಲೇದನ ಉಂದನಶಬ್ದಗಳು ಸಮಾನಾರ್ಥಕ ಪದಗಳು. ಆಗ ಕ್ಲೇದನ ಎಂಬುದಕ್ಕೆ ಒದ್ದೆ ಮಾಡುವುದು ಎಂದು ಅರ್ಥ ಹೇಳಿದ ಮೇಲೆ ಪುನರುಕ್ತಿಪರಿಹಾರಕ್ಕಾಗಿ ಮೃದುವಾಗಿಸುವುದೆಂದು ಅರ್ಥ ಹೇಳಿದ್ದಾರೆ. ಅದಕ್ಕೆ ಪ್ರಮಾಣವೇನು? ವಲ್ಲಭವ್ಯಾಖ್ಯಾನದಲ್ಲಿ ಉಂದನವೆಂದರೆ ಪ್ರೇರಣ, ಪ್ರವಾಹವು ವಸ್ತುಗಳನ್ನು ತಳ್ಳುತ್ತದೆ. ದಡವನ್ನು ಬೀಳಿಸುತ್ತದೆ. ಎಂದು. ಇದಕ್ಕೂ ಪ್ರಮಾಣದ ಆಧಾರವಿಲ್ಲ. ಭೂಯಸ್ತ್ವವೆಂದರೆ ಸೇದಿದಷ್ಟೂ ನೀರು ಬರುತ್ತದೆ ಎನ್ನುವುದೂ ಹಾಳುಭಾವಿಗಳ ವಿಷಯದಲ್ಲಿ ಸುಳ್ಳಾಗುತ್ತದೆ.

ವೀರರಾಘವ ವ್ಯಾಖ್ಯಾನದಲ್ಲಿ 'ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್' ಎಂಬ ಬ್ರಹ್ಮಸೂತ್ರದ ಆಧಾರವನ್ನು ತೋರಿಸಿ ಪಾಂಚಭೌತಿಕ ಶರೀರಗಳಲ್ಲಿ ಜಲಾಂಶ ಅಧಿಕವಾಗಿರುವುದೆಂದು ಇನ್ನೊಂದು ಅರ್ಥ ಹೇಳಿದ್ದಾರೆ. ಅದು ಸರಿಯಾದ ಅರ್ಥ. ಹೇಗೆಂದರೆ ಪಾರ್ಥಿವಶರೀರದಲ್ಲಿ ಎಂಟರಲ್ಲಿ ನಾಲ್ಕುಭಾಗ ಪೃಥಿವಿ ಇರುತ್ತದೆ. ಮೂರು ಭಾಗ ಜಲ, ಒಂದು ಭಾಗ ತೇಜಸ್ಸು, ತೈಜಸಶರೀರದಲ್ಲಿ ನಾಲ್ಕುಭಾಗ ತೇಜಸ್ಸು, ಮೂರು ಭಾಗ ಜಲ, ಒಂದು ಭಾಗ ಪೃಥಿವಿ, ಜಲೀಯಶರೀರದಲ್ಲಿ ನಾಲ್ಕುಭಾಗ ಜಲ, ಮೂರು ಭಾಗ ಪೃಥಿವಿ, ಒಂದು ಬಾಗ ತೇಜಸ್ಸು, ಒಟ್ಟು ಹತ್ತು ಭಾಗ ಜಲ, ಎಂಟು ಭಾಗ ಹೃಥಿವಿ, ಆರು ಭಾಗ ತೇಜಸ್ಸು, ಹೀಗೆ ಜಲಭಾಗ ಅಧಿಕ.

ಉಂದನಂ ಬಿಂದುಭಾವಃ ಸ್ಯಾತ್ ಸ್ಯಂದನಂ ಸ್ರವಣಂ ಸ್ಮೃತಮ್ ।
ಇತ್ಯಭಿಧಾನಮ್ ।

ಪೃಥಿವ್ಯಗ್ನ್ಯಪೇಕ್ಷಯಾ ಭೂಯಸ್ತ್ವಂ ದೇಹೇ ॥

ಉಂದನವೆಂದರೆ ಬಿಂದುವಾಗಿರುವುದು, ಸ್ಯಂದನವೆಂದರೆ ಹರಿಯುವುದು ಎಂದು ಅಭಿಧಾನದಲ್ಲಿ ಹೇಳಿದೆ. ಶರೀರದಲ್ಲಿ ಪೃಥಿವಿ ತೇಜಸ್ಸುಗಳಿಗಿಂತ ಜಲ ಅಧಿಕವಾಗಿರುವುದೇ ಭೂಯಸ್ತ್ವ

* * *

ಪೃಥಿವೀಲಕ್ಷಣವನ್ನು ಕಪಿಲನು ಮಾತೆಗೆ ತಿಳಿಸುತ್ತಾನೆ–

ಭಾವನಂ ಬ್ರಹ್ಮಣಃ ಸ್ಥಾನಂ ಧಾರಣಂ ಸದ್ವಿಶೇಷಣಮ್ ।
ಸರ್ವಸತ್ತ್ವಗುಣೋದ್ಭೇದಃ ಪೃಥಿವೀವೃತ್ತಿಲಕ್ಷಣಮ್ ॥ ೪೮ ॥

ಸಸ್ಯಗಳು ಮುಂತಾದವುಗಳ ಉತ್ಪಾದನೆ, ಪ್ರಥಮ ಬ್ರಹ್ಮದರ್ಶನ ಸ್ಥಾನವೆನಿಸುವ ಶರೀರವಾಗುವುದು, ಭಾರವಾದ ವಸ್ತುಗಳನ್ನು ಧರಿಸುವುದು, ಗಂಧಾದಿ ಐದೂ ಗುಣಗಳಿಂದ ವಿಶೇಷವಾಗಿ ವ್ಯಕ್ತವಾಗಿರುವುದು, ಎಲ್ಲ ಪ್ರಾಣಿಗಳಿಗೆ ಸಂಸಾರದಲ್ಲಿ ಜ್ಞಾನಾದಿ ಸಕಲಗುಣಾಭಿವ್ಯಕ್ತಿ ಸ್ಥಾನವೆನಿಸುವ ಶರೀರವಾಗುವುದು ಇವು ಪೃಥಿವಿಯ ಸ್ವರೂಪಲಕ್ಷಣಗಳು.

ಇಲ್ಲಿ ಭಾವನ ಎಂದರೆ ನಿರಾಕಾರಬ್ರಹ್ಮನಿಗೆ ಪ್ರತಿಮಾದಿರೂಪದಿಂದ ಸಾಕಾರತ್ವ ತಂದುಕೊಡುವುದು ಪೃಥಿವಿಯ ಲಕ್ಷಣ ಎಂದು ಶ್ರೀಧರವ್ಯಾಖ್ಯಾನ. ಆದರೆ ಜಲ ತೇಜಸ್ಸುಗಳೂ ಪರಮಾತ್ಮನಿಗೆ ಪ್ರತಿಮೆಗಳಾಗಬಹುದು. ಅದರಿಂದ ಅದು ಪೃಥಿವಿಯ ಲಕ್ಷಣವೆನ್ನುವುದು ಸರಿಯಲ್ಲ. ಮತ್ತು 'ಬ್ರಹ್ಮಣಃ ಭಾವನಂ' ಪರಮಾತ್ಮನ ಪ್ರತಿಮೆ ಎಂದೇಕೆ ಹೇಳಬೇಕು? ಬೇರೆ ದೇವತೆಗಳ ಪ್ರತಿಮೆಯನ್ನೂ ಪೃಥಿವಿಯಿಂದ ಮಾಡಲು ಬರುತ್ತದೆ.

ಘಟಾದಿ ವಸ್ತುಗಳನ್ನು ಉಂಟುಮಾಡುವುದು ಎಂದು ವೀರ ರಾಘವ ಶುಕದೇವ ವಲ್ಲಭ ವ್ಯಾಖ್ಯಾನಗಳು ಹೇಳುವುದು ಸರಿಯಾಗುತ್ತದೆ.

ಸ್ಥಾನಂ ಎಂದರೆ ಇತರಭೂತಗಳನ್ನು ಆಶ್ರಯಿಸದೆ ಇರುವುದು ಪೃಥಿವಿಯ ಲಕ್ಷಣವೆಂದು ಶ್ರೀಧರವ್ಯಾಖ್ಯಾನ ಹೇಳುವುದೂ ಸರಿಯಲ್ಲ. ಈ ಲಕ್ಷಣ ವಾಯು ಆಕಾಶಗಳಿಗೇ ಹೆಚ್ಚು ಅನ್ವಯಿಸುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ 'ಬ್ರಹ್ಮಣಃ ಸ್ಥಾನಂ' ಎಂದರೆ ಬ್ರಾಹ್ಮಣರಿಗೆ ವಾಸಸ್ಥಾನ ಪೃಥಿವಿ ಎಂದಿದೆ. ಇಲ್ಲಿ ಬ್ರಾಹ್ಮಣರಿಗೆ ಎಂದಿರುವುದು ವ್ಯರ್ಥ. ಎಲ್ಲ ಪ್ರಾಣಿಗಳೂ ಪೃಥಿವಿಯಲ್ಲಿ ವಾಸಮಾಡುವುವು. ಜಲದಲ್ಲಿಯೂ ಪ್ರಾಣಿಗಳು ವಾಸಮಾಡುತ್ತವೆ. ಆದರಿಂದ ಇದು ಪೃಥಿವಿಯ ಲಕ್ಷಣ ಎನ್ನಲಾಗದು. ಪರಮಾತ್ಮನ ಉಪಾಸನೆಗೆ ಸ್ಥಾನವೆಂದು ಶುಕದೇವ ವಲ್ಲಭವ್ಯಾಖ್ಯಾನಗಳು ಹೇಳುವುದೂ ಸರಿಯಲ್ಲ. ಜಲತೇಜಸ್ಸುಗಳಲ್ಲಿಯೂ ಪರಮಾತ್ಮನ ಉಪಾಸನೆ ಇದೆ. ಆದರಿಂದ ಪರಮಾತ್ಮನ ಸಾಕ್ಷಾತ್ಕಾರ ಪಾರ್ಥಿವ ಶರೀರದಲ್ಲಿಯೇ ಮೊತ್ತ ಮೊದಲಿಗೆ ಆಗುತ್ತದೆ ಎನ್ನುವುದೇ ಸರಿಯಾದ ಲಕ್ಷಣ. ಕಾಪಿಲೇಯ ಗ್ರಂಥದಲ್ಲಿ ಹೇಳಿರುವುದರಿಂದಲೂ ಈ ಲಕ್ಷಣ ಸಮಂಜಸವಾಗಿದೆ.

'ಸದ್ವಿಶೇಷಣಂ' ಎಂದರೆ ಸತ್ ಆಗಿರುವ ಆಕಾಶಾದಿಗಳಿಗೆ ವಿಶೇಷಣ ವಾಗಿರುವುದು. ಘಟಾಕಾಶ ಘಟಜಲ ಕಾಷ್ಠವಹ್ನಿ ಇತ್ಯಾದಿಗಳಲ್ಲಿ ಆಕಾಶ ಜಲ ವಹ್ನಿಗಳಿಗೆ ಪೃಥಿವಿಯು ವಿಶೇಷಣ, ಅಂದರೆ ವ್ಯಾವರ್ತಕವಾಗುವುದು ಎಂದು ಶ್ರೀಧರವ್ಯಾಖ್ಯಾನ, ಶುಕದೇವವ್ಯಾಖ್ಯಾನಗಳು. ಆದರೆ ಪಾರ್ಥಿವಪದಾರ್ಥಗಳಿಗೂ ಜಲಚರ ಖೇಚರ ಉಗಿಬಂಡಿ ಜಲಪಾತ್ರ ಅಗ್ನಿಕುಂಡ ಎಂದು ಮುಂತಾಗಿ ಬೇರೆ ಭೂತಗಳು ವಿಶೇಷಣವಾಗಬಹುದು. ಬೇರೆ ಭೂತಗಳಲ್ಲಿ ವಿಶೇಷ ಉಂಟುಮಾಡುವುದು, ಮಲಿನಆಕಾಶ, ಧೂಸರ ವಾಯು ಮುಂತಾಗಿ ವ್ಯವಹಾರಕಾರಣವಾಗುವುದು ಪೃಥಿವಿಯ ಲಕ್ಷಣ ಎನ್ನುತ್ತದೆ ವಿಶ್ವನಾಥವ್ಯಾಖ್ಯಾನ. ಆದರೆ ಆಕಾಶವು ಧೂಳಿನಿಂದ ಮಲಿನವಾಗುವಂತೆ ಮೋಡ ಮುಚ್ಚಿದರೂ ಮಲಿನವೆಂದು ವ್ಯವಹಾರವಿದೆ. ಮೋಡವಿಲ್ಲದಿದ್ದರೆ ಶುಭ್ರಆಕಾಶವೆನಿಸುತ್ತದೆ. ಮಣ್ಣಿನ ಗುಣದಿಂದ ಮಣ್ಣಲ್ಲಿ ಹುಟ್ಟಿದ ಕಾರ್ಯದಲ್ಲಿ ವೈಲಕ್ಷಣ್ಯ ಬರುತ್ತದೆ ಎಂದು ವೀರರಾಘವವ್ಯಾಖ್ಯಾನ. ಆದರೆ 'ಸತಾಂ' ಎಂದರೆ ಎಲ್ಲ ಕಾರ್ಯ. ಮಣ್ಣಿನ ಕಾರ್ಯವನ್ನು ಮಾತ್ರ ಇಟ್ಟುಕೊಳ್ಳುವುದು ಸ್ವರಸವಲ್ಲ. ಹಾಗೆ ವ್ಯವಹಾರವಿಲ್ಲ. ಎಲ್ಲ ಕಾರ್ಯಗಳಿಗೆ ಮಣ್ಣು ವೈಲಕ್ಷಣ್ಯ ತರುವುದಿಲ್ಲ.

'ಸರ್ವಸತ್ವಗುಣೋದ್ಭೇದ'ವೆಂದರೆ ಎಲ್ಲ ಪ್ರಾಣಿಗಳ ಪುರುಷತ್ವಸ್ತ್ರೀತ್ವಾದಿ ಶಾರೀರಿಕಗುಣವನ್ನು ಪ್ರಕಟ ಮಾಡುವುದು ಪೃಥಿವೀಲಕ್ಷಣವೆಂದು ಎಲ್ಲ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಶಾರೀರಿಕಗುಣಕ್ಕೆ ಕಾರಣವೆನ್ನುವುದಕ್ಕಿಂತ

ಶರೀರಕ್ಕೆ ಕಾರಣವೆನ್ನುವುದೇ ಹೆಚ್ಚು ಸೂಕ್ತವಾಗುತ್ತದೆ. ವಸ್ತುತಃ ಇದನ್ನೇ 'ಭಾವನಂ' ಎಂದು ಹೇಳಿಯಾಗಿರುವುದರಿಂದ ಎಲ್ಲ ಪ್ರಾಣಿಗಳ ಜ್ಞಾನಾದಿ ಆತ್ಮಗುಣಗಳು ಸಂಸಾರದಲ್ಲಿ ವ್ಯಕ್ತವಾಗುವುದು ಶರೀರದಲ್ಲಿ. ಶರೀರ ಪಾರ್ಥಿವ. ಅದರಿಂದ ಇದು ಪೃಥಿವೀಲಕ್ಷಣ ಎನ್ನುವುದೇ ಸೂಕ್ತ.

ಭಾವನಮುತ್ಪಾದಕತ್ವಮ್ ।

ಬ್ರಹ್ಮಸ್ಥಾನಂ ತು ಪೃಥಿವೀ ಶರೀರೇ ಬ್ರಹ್ಮದರ್ಶನಾತ್ ।

ಇತಿ ಕಾಪಿಲೇಯೇ ।

ಸದ್ವಿಶೇಷಣಂ ವಿಶೇಷೇಣ ವ್ಯಕ್ತತ್ವಮ್ ।

ಅಸದವ್ಯಕ್ತನಾಮ ಸ್ಯಾದ್ ವ್ಯಕ್ತಂ ಸದಿತಿ ಚೋಚ್ಯತೇ ॥

ಇತಿ ಬ್ರಾಹ್ಮೇ ।

ಸರ್ವಸತ್ವಗುಣೋದ್ಭೇದಃ । ಶರೀರೇ ಹಿ ಸರ್ವಪ್ರಾಣಿನಾಂ ಗುಣಾ ವ್ಯಜ್ಯಂತೇ ಸಂಸಾರಾವಸ್ಥಾಯಾಮ್ ।

ಶರೀರಂ ಪಾರ್ಥಿವಂ ಜ್ಞೇಯಂ ಇಂದ್ರಿಯಾಣ್ಯೌದಕಾನಿ ತು ।
ತೈಜಸಃ ಕೋಷ್ಠಗೋ ವಹ್ನಿಃ ಛಿದ್ರಮಾಕಾಶಸಂಭವಮ್ ।
ಪ್ರಾಣಾ ವಾಯುಮಯಾಃ ಸರ್ವೇ ಪ್ರತ್ಯೇಕಂ ಪಂಚಧಾ ಪುನಃ ॥

ಇತಿ ಕಾಪಿಲೇಯೇ ।

'ಭಾವನಂ' ಎಂದರೆ ಸಸ್ಯಗಳು ಮುಂತಾದವುಗಳ ಉತ್ಪತ್ತಿಗೆ ಕಾರಣವಾಗುವುದು ಪೃಥಿವಿಯ ಲಕ್ಷಣ. 'ಬ್ರಹ್ಮಣಃ ಸ್ಥಾನಂ' ಎಂದರೆ ಬ್ರಹ್ಮನ ಸ್ಥಾನ ಪೃಥಿವಿಯೆ. ಏಕೆಂದರೆ ಮೊದಲಿಗೆ ಬ್ರಹ್ಮದರ್ಶನವಾಗುವುದು ಶರೀರದಲ್ಲಿ ಎಂದು ಕಾಪಿಲೇಯದಲ್ಲಿ ಹೇಳಿದೆ.

'ಸದ್ವಿಶೇಷಣಂ' ಎಂದರೆ ವಿಶೇಷವಾಗಿ ವ್ಯಕ್ತವಾಗಿರುವುದು. (ಸತ್ ಎಂದರೆ ವ್ಯಕ್ತ. ಇದು ಭಾವಪ್ರಧಾನ ನಿರ್ದೇಶ. ವಿಶೇಷಣವೆಂದರೆ ವಿಶೇಷ. ವ್ಯಕ್ತತ್ವವಿಶೇಷ, ವಿಶೇಷವಾಗಿ ವ್ಯಕ್ತವಾಗಿರುವುದು ಎಂದು ಅರ್ಥ ಲಭಿಸುತ್ತದೆ. ಜಲದಲ್ಲಿ ಗಂಧ ಕಾಣುವುದಿಲ್ಲ. ತೇಜಸ್ಸಿನಲ್ಲಿ ರಸಗಂಧಗಳು ಎರಡೂ ಕಾಣುವುದಿಲ್ಲ. ಪೃಥಿವಿಯಲ್ಲಿ ರಸಗಂಧಗಳೂ ಸೇರಿದಂತೆ ಐದೂ ಗುಣಗಳು ಕಾಣುವುದರಿಂದ ವಿಶೇಷವಾಗಿ ವ್ಯಕ್ತವಾಗುವುದು ಪೃಥಿವಿಯೇ.) ಅವ್ಯಕ್ತವಾಗಿರುವುದನ್ನು ಅಸತ್ ಎನ್ನುತ್ತಾರೆ. ವ್ಯಕ್ತವನ್ನು ಸತ್ ಎನ್ನುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿರುವುದರಿಂದ ಇಲ್ಲಿ ಸತ್ ಎಂದರೆ ವ್ಯಕ್ತ.

'ಸರ್ವಸತ್ವಗುಣೋದ್ಭೇದಃ' ಎಂದರೆ ಎಲ್ಲ ಪ್ರಾಣಿಗಳ ಜ್ಞಾನಾದಿಗುಣಗಳು ಸಂಸಾರದಲ್ಲಿ ವ್ಯಕ್ತವಾಗುವುದು ಪಾರ್ಥಿವವಾದ ಶರೀರದ ನಡೆನುಡಿ ಮುಖಭಾವ ಮುಂತಾದವುಗಳಿಂದಲೇ. (ಮೋಕ್ಷದಲ್ಲಿ ಪಾರ್ಥಿವಶರೀರವಿಲ್ಲ. ಸ್ವರೂಪ ಶರೀರದಿಂದಲೇ ವ್ಯಕ್ತವಾಗುತ್ತದೆ.)

ಪಾರ್ಥಿವಶರೀರವೂ ಪಾಂಚಭೌತಿಕ ವಾಗಿರುವುದರಿಂದ ಶರೀರದ ಕಾರ್ಯಗಳನ್ನು ಪೃಥಿವಿಯ ಲಕ್ಷಣವೆಂದು ಹೇಗೆ ಹೇಳಲಾದೀತು? ಎಂದರೆ, 'ಶರೀರವು ಪಾರ್ಥಿವವೇ. ಪಾಂಚಭೌತಿಕವಲ್ಲ. ಪಾರ್ಥಿವಶರೀರದಲ್ಲಿ ಇಂದ್ರಿಯಗಳು ಜಲೀಯ. ಜಾಠರಾಗ್ನಿ ತೈಜಸ. ಅನ್ನಾದಿಗಳ ಸಂಚಾರಕ್ಕೆ ಇರುವ ಅವಕಾಶವು ಆಕಾಶ. ಪ್ರಾಣಗಳು ವಾಯುಮಯ. ಇಂದ್ರಿಯಾದಿಗಳನ್ನು ಹೊರತು ಪಡಿಸಿದರೆ ಕೇವಲ ಶರೀರವು ಪಾರ್ಥಿವವೇ. ಈ ಶರೀರಾದಿಗಳು ಪ್ರತಿಯೊಂದೂ ಪಂಚೀಕರಣದಿಂದ ಪಾಂಚಭೌತಿಕವಾಗಿದ್ದರೂ ಶರೀರದಲ್ಲಿ ಪೃಥಿವೀಭಾಗ ಹೆಚ್ಚು. ಇಂದ್ರಿಯಾದಿಗಳಲ್ಲಿ ಮಾತ್ರ ಜಲಾದಿಗಳು ಹೆಚ್ಚು. ಅದರಿಂದ ಶರೀರವು ಪಾರ್ಥಿವವೆನಿಸುತ್ತದೆ' ಎಂದು ಕಾಪಿಲೇಯ ಗ್ರಂಥದಲ್ಲಿ ಹೇಳಿದೆ.

---

* * *

ತತ್ವಗಳಿಂದ ಬ್ರಹ್ಮಾಂಡೋತ್ಪತ್ತಿಯಾದ ಬಗೆಯನ್ನು ಶ್ರೀಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ತತಸ್ತೇನಾನುವಿದ್ಧೇಭ್ಯಸ್ತತ್ವೇಭ್ಯೋಽಂಡಮಚೇತನಮ್ ।
ಉತ್ಥಿತಂ ಪುರುಷೋ ಯಸ್ಮಾದುದತಿಷ್ಠದಸೌ ವಿರಾಟ್ ॥ ೫೪ ॥

ತತ್ವಗಳನ್ನು ಭಗವಂತನು ವೀರ್ಯರೂಪದಿಂದ ಪರಿಣಾಮಗೊಳಿಸಿದಾಗ ಅವುಗಳಿಂದ ಅಚೇತನವಾದ ಬ್ರಹ್ಮಾಂಡ ಉದಿಸಿತು. ಅಂಡದಲ್ಲಿ ವಿರಾಡ್ ಬ್ರಹ್ಮನ ಶರೀರ ಹುಟ್ಟಿದ್ದರಿಂದ ಅಂಡವು ಬ್ರಹ್ಮಾಂಡವೆನಿಸಿತು.

ಇಲ್ಲಿ ವಿರಾಟ್ ಪುರುಷನೆಂದರೆ ಹಿರಣ್ಯಗರ್ಭ ಎಂಬ ಸೂಕ್ಷ್ಮಸಮಷ್ಟಿಜೀವನೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ಪ್ರಮಾಣವಿರುದ್ಧ. ಚತುರ್ಮುಖ ಬ್ರಹ್ಮನೇ ಬ್ರಹ್ಮಾಂಡದಲ್ಲೆಲ್ಲ ವಿಶೇಷವಾಗಿ ಪ್ರಕಾಶಿಸುತ್ತ ವಿರಾಟ್ ಎನಿಸಿ ಬ್ರಹ್ಮಾಂಡವ್ಯಾಪಿಯಾದ ಶರೀರದಿಂದ ಜನಿಸಿದ್ದಾನೆ.

ಅಚೇತನಾದ್ ಯತಸ್ತ್ವಂಡಾದ್ ಬ್ರಹ್ಮಾ ಸಮಜನಿ ಸ್ಫುಟಮ್ ।
ಅತೋ ಬ್ರಹ್ಮಾಂಡಮಿತ್ಯಾಹುರ್ವಿರಾಡ್ ಬ್ರಹ್ಮಾ ಪ್ರಕಾಶನಾತ್ ॥

ಇತಿ ಚ ।

ಅಚೇತನವಾದ ಅಂಡದಿಂದ ಬ್ರಹ್ಮನು ಸ್ಥೂಲಶರೀರದಿಂದ ಹುಟ್ಟಿದ. ಆದರಿಂದ ಆ ಅಂಡವನ್ನು ಬ್ರಹ್ಮಾಂಡ ಎನ್ನುತ್ತಾರೆ. ಬ್ರಹ್ಮನು ವಿಶೇಷವಾಗಿ ಪ್ರಕಾಶಿಸುವುದರಿಂದ ವಿರಾಟ್ ಎನಿಸುತ್ತಾನೆ ಎಂದೂ ಹೇಳಿದೆ.

* * *

ವಿರಾಡ್ ಬ್ರಹ್ಮನ ಶರೀರದಲ್ಲಿ ಹಸ್ತಪಾದಗಳ ಉತ್ಪತ್ತಿಯನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ಹಸ್ತೌ ಚ ನಿರಭಿದ್ಯೇತಾಂ ಬಲಂ ತಾಭ್ಯಾಂ ತತಃ ಸ್ವರಾಟ್ ।
ಪಾದೌ ಚ ನಿರಭಿದ್ಯೇತಾಂ ಗತಿಸ್ತಾಭ್ಯಾಂ ತತೋ ಹರಿಃ ॥ ೬೧ ॥

ವಿರಾಟ್ ಶರೀರದಲ್ಲಿ ಹಸ್ತಗಳೂ ಅವುಗಳಲ್ಲಿ ಪಾಣೀಂದ್ರಿಯವೂ ಅದರ ಅಭಿಮಾನಿ ಮತ್ತು ದೇವೇಂದ್ರನೂ ಹುಟ್ಟಿದರು. ಪಾದಗಳೂ, ಅವುಗಳಲ್ಲಿ ಪಾದೇಂದ್ರಿಯವೂ ಅದರ ಅಭಿಮಾನಿ ಮತ್ತು ಉಪೇಂದ್ರರೂ ಹುಟ್ಟಿದರು.

'ಪಾಣೀಂದ್ರಿಯಾಭಿಮಾನಿ ಮತ್ತು ದೇವೇಂದ್ರ, ಪಾದಾಭಿಮಾನಿ ಮತ್ತು ಉಪೇಂದ್ರ' ಎಂದರೆ ಅಧ್ಯಾತ್ಮದಲ್ಲಿ ಇಂದ್ರಿಯಾಭಿಮಾನಿ ಆ ಇಂದ್ರಿಯ ನಾಮದಿಂದಲೇ ಕರೆಸಿಕೊಳ್ಳುತ್ತಾನೆ. ಅಧಿದೈವದಲ್ಲಿ ಅವನಿಗೇ ಇಂದ್ರ ಉಪೇಂದ್ರ ಎಂದು ನಾಮಗಳು. ಅಧ್ಯಾತ್ಮ ಅಧಿದೈವಗಳೆರಡರಲ್ಲಿಯೂ ವ್ಯಕ್ತರಾಗುತ್ತಾರೆ ಎಂದರ್ಥ. ಇಲ್ಲಿ ಉಪೇಂದ್ರನಾಮಕನಾದ ಹರಿ ಪಾದೇಂದ್ರಿಯಾಭಿಮಾನಿ ಹೇಗೆ? ಇಂದ್ರಿಯಾಭಿಮಾನವೆಂದರೆ ಇಂದ್ರಿಯಗಳ ಮೇಲೆ ಇನ್ನೊಬ್ಬರು ಕೊಟ್ಟಿರುವ ಅಧಿಕಾರ. ಸ್ವತಂತ್ರನಾದ ಹರಿಗೆ ಅಂಥ ಅಭಿಮಾನ ಉಂಟೆ? ಶ್ರೀಧರ ಶುಕದೇವ ವಲ್ಲಭ ವ್ಯಾಖ್ಯಾನಗಳಲ್ಲಿ ಇದರ ವಿಚಾರವಿಲ್ಲ. ಜೀವಗೋಸ್ವಾಮಿ ರಾಧಾರಮಣದಾಸ ವಿಶ್ವನಾಥ ವ್ಯಾಖ್ಯಾನಗಳಲ್ಲಿ 'ಹರಿ' ಎಂದರೆ ಇಲ್ಲಿ ಹರಿಯ ಆವೇಶಾವತಾರನಾದ ಒಬ್ಬ ದೇವ' ಎಂದಿದೆ. ಆ ದೇವ ಯಾರೆಂಬ ಬಗ್ಗೆ ವಿವರವಿಲ್ಲ.

ಯಜ್ಞನಾಮಾ ತು ದೇವೋಽನ್ಯೋ ವಿಜ್ಞೇಯಃ ಪಾದದೇವತಾ ।
ತದಾವಿಷ್ಟೋ ಹರಿರ್ನಿತ್ಯಂ ತಮಾಹುಃ ಪಾದದೈವತಮ್ ।
ತಸ್ಯೇಂದ್ರಿಯಾಭಿಮಾನಿತ್ವಂ ಕುತಃ ಪೂರ್ಣಾಮಲಾತ್ಮನಃ ॥ ಇತಿ ಚ ।

ಯಜ್ಞನಾಮಕ ಭಗವದವತಾರ ದೇವನು ರುಚಿಪ್ರಜಾಪತಿಗೆ ಆಕೂತಿಯಲ್ಲಿ ಅವತರಿಸಿದವನು ಬೇರೆ ಇದ್ದಾನೆ. ಇನ್ನೊಬ್ಬ ಇಂದ್ರಪುತ್ರ ಯಜ್ಞನಾಮಕದೇವನು ಪಾದೇಂದ್ರಿಯಾಭಿಮಾನಿ. ಅವನಲ್ಲಿ ಸದಾ ಭಗವದವತಾರನಾದ ಉಪೇಂದ್ರ ಆವಿಷ್ಟನಾಗಿರುವುದರಿಂದ ಅವನನ್ನೂ ಪಾದದೇವತೆ ಎಂದು ಬಲ್ಲವರು ಹೇಳುತ್ತಾರೆ,

ಹೊರತು ನಿರ್ದೋಷ ಸ್ವತಂತ್ರನಾದ ಆತನಿಗೆ ಇನ್ನೊಬ್ಬರು ಕೊಡುವ ಇಂದ್ರಿಯಾಭಿಮಾನಿತ್ವ ಹೇಗೆ? ಎಂದೂ ಹೇಳಿದೆ.

(ಎಲ್ಲ ಇಂದ್ರಿಯಾಭಿ ಮಾನಿಗಳಲ್ಲೂ ಹರಿಯ ಆವೇಶವಿದ್ದೇ ಇದೆ. ಆದರೆ ವಿಶೇಷವಾಗಿ ಪಾದಾಂಗುಷ್ಠದಲ್ಲಿದ್ದು ದೇಹಧಾರಣೆ ಮಾಡುವುದಕ್ಕಾಗಿ, ಬ್ರಾಹ್ಮಣ ಪಾದಾಂಗುಷ್ಠ ಜಲಪಾನಕ್ಕೆ ಫಲ ನೀಡುವುದಕ್ಕಾಗಿ ಯಜ್ಞನಲ್ಲಿ ಆವೇಶ.)

* * *

ವಿರಾಟ್ ಶರೀರದಲ್ಲಿ ಮನಸ್ಸು ಬುದ್ಧಿ ಅಹಂಕಾರ ಚಿತ್ತಗಳ ಉತ್ಪತ್ತಿಯನ್ನೂ ಕಪಿಲನು ಮಾತೆಗೆ ಹೇಳುತ್ತಾನೆ.

ಮನಸಶ್ಚಂದ್ರಮಾ ಜಾತೋ ಬುದ್ಧಿರ್ಬುದ್ಧೇರ್ಗಿರಾಂಪತಿಃ ।
ಅಹಂಕಾರಸ್ತತೋ ರುದ್ರಶ್ಚಿತ್ತಂ ಚೈತ್ಯಸ್ತತೋಽಭವತ್ ॥ ೬೪ ॥

ವಿರಾಡ್ ಬ್ರಹ್ಮನ ಹೃದಯದಲ್ಲಿ ಮನಸ್ಸು, ಅದರ ಅಭಿಮಾನಿ ಚಂದ್ರ, ಮನಃಪ್ರಭೇದವಾದ ಬುದ್ಧಿ, ಬುದ್ಧಿಯ ಅಭಿಮಾನಿ ಬೃಹಸ್ಪತಿ, ಮನಃಪ್ರಭೇದವಾದ ಅಹಂಕಾರ, ಅಹಂಕಾರಾಭಿಮಾನಿ ರುದ್ರ, ಮನಃಪ್ರಭೇದವಾದ ಚಿತ್ತ, ಚಿತ್ತಾಭಿಮಾನಿ ಬ್ರಹ್ಮ, ಮತ್ತು ಚೈತ್ಯರು ಹುಟ್ಟಿದರು.

ಇಲ್ಲಿ ಚೈತ್ಯ ಎಂದರೆ ಯಾರು? ಕ್ಷೇತ್ರಜ್ಞ, ಅಂದರೆ ಸಮಷ್ಟಿಜೀವನೆನಿಸಿದ ಹಿರಣ್ಯಗರ್ಭನೇ ಎಂದು ಶ್ರೀಧರ, ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ. ಉಳಿದ ವ್ಯಾಖ್ಯಾನಗಳು ಆ ಕ್ಷೇತ್ರಜ್ಞನ ಅಂತರ್ಯಾಮಿಯಾದ ಪ್ರದ್ಯುಮ್ನ 'ಚೈತ್ಯ' ಎಂದಿದೆ. ವಸ್ತುತಃ ಚತುರ್ಮುಖ ಬ್ರಹ್ಮನ ಶರೀರದಲ್ಲಿ ಚಿತ್ತಾಭಿಮಾನಿಯಾಗಿ ಅವನೇ ಇನ್ನೊಂದು ರೂಪದಿಂದ ಹುಟ್ಟಿದ್ದಾನೆ. ಅದರಿಂದ ಅವನೇ ಚೈತ್ಯನೂ ಆಗಿದ್ದಾನೆ. ಜೊತೆಗೆ, ಅವನಲ್ಲಿ ಅಂತರ್ಯಾಮಿಯಾಗಿ ವಿಷ್ಣುವೂ ಒಂದು ರೂಪದಿಂದ ಆವಿರ್ಭವಿಸಿದ್ದಾನೆ. ಅವನೂ ಚೈತ್ಯ.

ಚೈತ್ಯೋಽಪಿ ಭಗವಾನ್ ವಿಷ್ಣುರಂತರ್ಯಾಮೀ ಚತುರ್ಮುಖಾತ್ ।
ಸ್ವೇಚ್ಛಯಾ ವ್ಯಕ್ತಿಮಗಮತ್ ತತೋಽಸೌ ಬ್ರಹ್ಮಜಃ ಸ್ಮೃತಃ ॥
ಇತಿ ಚ ।

ಚೈತ್ಯನೆಂದರೆ ಭಗವಾನ್ ವಿಷ್ಣುವೇ. ಅವನು ಚತುರ್ಮುಖನ ಅಂತರ್ಯಾಮಿಯಾದ ರೂಪದಿಂದ ಚತುರ್ಮುಖನಿಂದಲೆ ಸ್ವೇಚ್ಛೆಯಿಂದ ವ್ಯಕ್ತನಾದ, ಅದರಿಂದ ಅವನು ಬ್ರಹ್ಮನಿಂದ ಹುಟ್ಟಿದವನೆನಿಸಿದ ಎಂದೂ ಹೇಳಿದೆ.

* * *

ಬ್ರಹ್ಮವಾಯುಗಳು ರುದ್ರಾದಿಗಳಿಗಿಂತ ಉತ್ತಮರು, ಶ್ರೀಹರಿ ಸರ್ವೋತ್ತಮನೆಂದು ತೋರಿಸಲು ಇಂದ್ರಿಯಾಭಿಮಾನಿಗಳು ಒಬ್ಬೊಬ್ಬರಾಗಿ ವಿರಾಟ್ ಶರೀರವನ್ನು ಪ್ರವೇಶಿಸುತ್ತಾರೆ. ಆದರೆ ಆಗ ವಿರಾಟ್ ಬ್ರಹ್ಮ ಏಳುವುದಿಲ್ಲ. ವಿಷ್ಣುವೂ ಪಾದದೇವತೆಯಾಗಿ ಪ್ರವೇಶಿಸುತ್ತಾನೆ. ಆಗಲೂ ಬ್ರಹ್ಮ ಏಳುವುದಿಲ್ಲ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ವಿಷ್ಣುರ್ಗತ್ಯೈವ ಚರಣೌ ನೋದತಿಷ್ಠತ್ ತದಾ ವಿರಾಟ್ ।
ನಾಡೀರ್ನದ್ಯೋ ಲೋಹಿತೇನ ನೋದತಿಷ್ಠತ್ ತದಾ ವಿರಾಟ್ ॥ ೭೦ ॥

ವಿಷ್ಣು ಪಾದೇಂದ್ರಿಯದೊಂದಿಗೆ ವಿರಾಟ್ ಬ್ರಹ್ಮನ ಪಾದಗಳನ್ನು ಪ್ರವೇಶಿಸಿದ. ವಿರಾಟ್ ಬ್ರಹ್ಮ ಏಳಲಿಲ್ಲ. ನದೀದೇವತೆಗಳು ರಕ್ತದೊಂದಿಗೆ ನಾಡಿಗಳನ್ನು ಪ್ರವೇಶಿಸಿದರು ವಿರಾಟ್ ಬ್ರಹ್ಮ ಏಳಲಿಲ್ಲ.

ಇಲ್ಲಿ ವಿಷ್ಣು ಪ್ರವೇಶಿಸಿದರೂ ಬ್ರಹ್ಮ ಏಳಲಿಲ್ಲವೆಂದರೆ ವಿಷ್ಣು ಅದಕ್ಕೆ ಶಕ್ತನಲ್ಲ ಎಂದಾಗುವುದು ತಾನೆ? ಈ ಪ್ರಶ್ನೆಯನ್ನು ಬೇರೆ ವ್ಯಾಖ್ಯಾನಕಾರರು ಎತ್ತಿ ಕೊಳ್ಳುವುದಿಲ್ಲ. ವಲ್ಲಭ ಗಿರಿಧರ ವ್ಯಾಖ್ಯಾನಗಳಲ್ಲಿ ಜೀವರ ಶರೀರದಲ್ಲಿ ಚಟುವಟಿಕೆ ಕಾಣಬೇಕಾದರೆ ಜೀವಾತ್ಮನೇ ಪ್ರವೇಶಿಸಬೇಕು ಎನ್ನುವುದನ್ನು ಇಲ್ಲಿ ಇಂದ್ರಿಯಾ ಭಿಮಾನಿ ಪ್ರವೇಶಪ್ರಸಂಗದಿಂದ ತಿಳಿಸುತ್ತಿದ್ದಾರೆ. ವಿಷ್ಣು ಪಾದೇಂದ್ರಿಯದ ಮೂಲಕ ಪ್ರವೇಶಿಸಿದರೂ ಪಾದೇಂದ್ರಿಯದಿಂದ ಎಷ್ಟು ಕಾರ್ಯವಾದೀತೋ ಅಷ್ಟೇ ಕಾರ್ಯ ಮಾಡುತ್ತಾನೆ. ಅದರಿಂದ ಅವನಿಗೆ ಅಶಕ್ತಿ ಎಂದು ತಿಳಿಯಬಾರದು ಎಂದಿದೆ. ವೀರರಾಘವ ವ್ಯಾಖ್ಯಾನದಲ್ಲಿ ಸಮಷ್ಟಿಯಾದ ವಿರಾಟ್‌ಶರೀರದ ಬಗ್ಗೆ ಇಲ್ಲಿ ಹೇಳುತ್ತಿಲ್ಲ, ವ್ಯಷ್ಟಿಜೀವ ಶರೀರದ ಬಗ್ಗೆ ಹೇಳುತ್ತಿದ್ದಾರೆ ಎಂದೇ ಹೇಳಿದ್ದಾರೆ. ಶ್ಲೋಕದಲ್ಲಿ 'ವಿರಾಟ್' ಎಂದರೆ ವಿರಾಟ್ ಎಂಬ ಸಮಷ್ಟಿಜೀವಶರೀರದ ಕಾರ್ಯವಾದ ವ್ಯಷ್ಟಿಜೀವಶರೀರ ಎಂದಿದ್ದಾರೆ. ಇವೆಲ್ಲವೂ ಪ್ರಮಾಣವಿರುದ್ಧ. 'ಬ್ರಹ್ಮದೇಹಂ ವಿಶನ್ ಪ್ರಭುಃ' ಎಂದು ಸ್ಪಷ್ಟಪ್ರಮಾಣವಿದೆ.

ಯಜ್ಞಾಂತಃಸ್ಥಃ ಸ್ವಯಂ ಪಾದೌ ವಿಶನ್ನೋತ್ಥಾಪಯದ್ಧರಿಃ ।
ಶಕ್ತೋಽಪಿ ಬ್ರಹ್ಮವಾಯ್ವೋಸ್ತು ಬಲಜ್ಞಪ್ತ್ಯೈ ಜನಾರ್ದನಃ ।
ತತ್ಸ್ಥ ಉತ್ಥಾಪಯಾಮಾಸ ಬ್ರಹ್ಮದೇಹಂ ವಿಶನ್ ಪ್ರಭುಃ ॥ ಇತಿ ಚ ।

ಇಂದ್ರಪುತ್ರಯಜ್ಞಾಂತರ್ಯಾಮಿಯಾಗಿ ಶ್ರೀಹರಿ ಬ್ರಹ್ಮನ ಪಾದಗಳನ್ನು ಪ್ರವೇಶಿಸಿ ತಾನು ಶಕ್ತನಾಗಿದ್ದರೂ ಯಜ್ಞನ ಅಶಕ್ತಿಯನ್ನು ತೋರಲು ಬ್ರಹ್ಮನನ್ನು ಎಬ್ಬಿಸಲಿಲ್ಲ. ಬ್ರಹ್ಮವಾಯುಗಳ ಶಕ್ತಿಯನ್ನು ತೋರಿಸಲು ಹೀಗೆ ಮಾಡಿದ. ಅವರ ಅಂತರ್ಯಾಮಿಯಾಗಿ ಬ್ರಹ್ಮದೇಹವನ್ನು ಪ್ರವೇಶಮಾಡಿ ಎಬ್ಬಿಸಿದ ಎಂದೂ ಹೇಳಿದೆ.

* * *

ಬೃಹಸ್ಪತಿ ಮತ್ತು ರುದ್ರರು ಹೃದಯವನ್ನು ಪ್ರವೇಶಿಸಿದರೂ ಬ್ರಹ್ಮ ಏಳಲಿಲ್ಲ ಎಂದು ಕಪಿಲನು ಮಾತೆಗೆ ಹೇಳುತ್ತಾನೆ–

ಬುದ್ಧ್ಯಾ ಬ್ರಹ್ಮಾಽಪಿ ಹೃದಯಂ ನೋದತಿಷ್ಠತ್ ತದಾ ವಿರಾಟ್ ।
ರುದ್ರೋಽಭಿಮತ್ಯಾ ಹೃದಯಂ ನೋದತಿಷ್ಠತ್ ತದಾ ವಿರಾಟ್ ॥ ೬೨ ॥

ಬೃಹಸ್ಪತಿಯು ಬುದ್ಧಿಯೊಂದಿಗೆ ವಿರಾಟ್ ಬ್ರಹ್ಮನ ಹೃದಯವನ್ನು ಪ್ರವೇಶಿಸಿದ. ಆಗ ಬ್ರಹ್ಮ ಏಳಲಿಲ್ಲ. ರುದ್ರ ಅಹಂಕಾರದೊಂದಿಗೆ ಹೃದಯವನ್ನು ಪ್ರವೇಶಿಸಿದ ಆಗಲೂ ಬ್ರಹ್ಮ ಏಳಲಿಲ್ಲ.

ಇಲ್ಲಿ 'ಬ್ರಹ್ಮಾ' ಎಂದರೆ ಚತುರ್ಮುಖ ಬ್ರಹ್ಮ ಅಲ್ಲ, ಬೃಹಸ್ಪತಿ. ಬೇರೆ ವ್ಯಾಖ್ಯಾನಕಾರರು ಬುದ್ಧಿಯ ಅಭಿಮಾನಿ ಚತುರ್ಮುಖನೆಂದೇ ಹಿಂದೇ ೬೪ನೇ ಶ್ಲೋಕದಲ್ಲಿ 'ಬುದ್ಧೇರ್ಗಿರಾಂಪತಿಃ' ಎಂಬಲ್ಲಿ ಹೇಳಿದ್ದಾರೆ. ವಸ್ತುತಃ ಚಿತ್ತಾಭಿಮಾನಿ ಬ್ರಹ್ಮ. ಬುದ್ಧ್ಯಭಿಮಾನಿ ಬೃಹಸ್ಪತಿ. ಅವನನ್ನು ಇಲ್ಲಿ 'ಬ್ರಹ್ಮಾ' ಎಂದುದು ಹೇಗೆ ಎಂದರೆ ಅವನಿಗೂ ಬ್ರಹ್ಮ ಎಂಬ ಹೆಸರಿದೆ–

ಬ್ರಹ್ಮಾ ಬೃಹಸ್ಪತಿಃ । 'ಯಸ್ಮಿನ್ ಬ್ರಹ್ಮಾ ರಾಜನಿ ಪೂರ್ವ ಏತಿ' ಇತಿ ಶ್ರುತಿಃ ।

ಬೃಹಸ್ಪತಿಃ ಪುರೋಧಾಶ್ಚ ಬ್ರಹ್ಮಾ ಚ ಬ್ರಹ್ಮಣಸ್ಪತಿಃ ।
ಇತ್ಯಭಿಧಾನಮ್ ।

'ಬುದ್ಧ್ಯಾ ಬ್ರಹ್ಮಾಪಿ ಹೃದಯಂ' ಎಂಬಲ್ಲಿ ಬ್ರಹ್ಮಾ ಎಂದರೆ ಬೃಹಸ್ಪತಿ.

ತಸ್ಮೈ ವಿಶಃ ಸ್ವಯಮೇವಾನಮಂತೇ
ಯಸ್ಮಿನ್ ಬ್ರಹ್ಮಾ ರಾಜನಿ ಪೂರ್ವ ಏತಿ ।

'ದೇವೇಂದ್ರ ಹೊರಟಾಗ ಬೃಹಸ್ಪತಿ ಮೊದಲು ಹೊರಡುತ್ತಾನೆ. ಅಂಥ ದೇವೇಂದ್ರನಿಗೆ ಪ್ರಜೆಗಳು ತಾವಾಗಿ ತಲೆಬಾಗುತ್ತಾರೆ.'

ಎಂದು ಶ್ರುತಿ ಇದೆ. 'ರಾಜನಿಗೆ ಮುಂದೆ ಪುರೋಹಿತನು ನಡೆಯುತ್ತಾನೆ, ಅದರಿಂದ 'ದೇವರಾಜ ದೇವೇಂದ್ರನಿಗೆ ಮುಂದೆ 'ಬ್ರಹ್ಮ' ನಡೆಯುತ್ತಾನೆ' ಎಂದರೆ ಈ 'ಬ್ರಹ್ಮ' ಪುರೋಹಿತನಾದ ಬೃಹಸ್ಪತಿಯೇ ಇರಬೇಕು. ಮತ್ತು ಬೃಹಸ್ಪತಿಗೆ ಬ್ರಹ್ಮ ಎಂಬ ಹೆಸರಿದೆ ಎನ್ನಲು 'ಬೃಹಸ್ಪತಿ, ಪುರೋಧಾಃ, ಬ್ರಹ್ಮ, ಬ್ರಹ್ಮಣಸ್ಪತಿ ಇವು ಸಮಾನಾರ್ಥಕಪದಗಳು ' ಎಂದು ಅಭಿಧಾನಗ್ರಂಥವೂ ಆಧಾರವಾಗಿದೆ.

* * *

ಬ್ರಹ್ಮವಾಯುಗಳೊಂದಿಗೆ ಪರಮಾತ್ಮ ಪ್ರವೇಶಿಸಿದಾಗ ವಿರಾಟ್ ಬ್ರಹ್ಮ ನೀರಿನಿಂದ ಎದ್ದ ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಚಿತ್ತೇನ ಹೃದಯಂ ಚೈತ್ಯಃ ಕ್ಷೇತ್ರಜ್ಞಃ ಪ್ರಾವಿಶದ್ ಯದಾ ।
ವಿರಾಟ್ ತದೈವ ಪುರುಷಃ ಸಲಿಲಾದುದತಿಷ್ಠತ ॥ ೭೩ ॥

ಚಿತ್ತದೊಂದಿಗೆ, ಅದರ ಅಭಿಮಾನಿ ಬ್ರಹ್ಮನೊಂದಿಗೆ ಮತ್ತು ವಾಯುವಿನೊಂದಿಗೆ ಚಿತ್ತನಿಯಾಮಕನಾದ ಪರಮಾತ್ಮ ಕ್ಷೇತ್ರಜ್ಞನು ಹೃದಯವನ್ನು ಪ್ರವೇಶಿಸಿದಾಗಲೆ ಬ್ರಹ್ಮ ನೀರಿನಿಂದ ಎದ್ದ.

ಇಲ್ಲಿ ಬ್ರಹ್ಮಶರೀರದಿಂದ ಎಲ್ಲ ಇಂದ್ರಿಯಾಭಿಮಾನಿಗಳೊಂದಿಗೆ ಬ್ರಹ್ಮನೂ ಪೂರ್ತಿಯಾಗಿ ಹೊರಗೆ ಹೋಗಿದ್ದರೆ ಆ ಇಂದ್ರಿಯಾಭಿಮಾನಿಗಳು ಪ್ರವೇಶಿಸಿದಾಗ 'ನೋದತಿಷ್ಠತ್ ತದಾ ವಿರಾಟ್' 'ಆಗ ವಿರಾಡ್ ಬ್ರಹ್ಮನು ಏಳಲಿಲ್ಲ' ಎನ್ನುವುದು ಕೂಡಲಾರದು. ಅವನು ಶರೀರದಲ್ಲಿ ಸುಪ್ತನಾಗಿ ಇದ್ದರೆ ಮಾತ್ರ 'ಏಳಲಿಲ್ಲ' ಎನ್ನುವುದಕ್ಕೆ ಅರ್ಥವಿದೆ. ಆದರಿಂದ ಒಂದು ಅಂಶದಿಂದ ಮಾತ್ರ ಬ್ರಹ್ಮನು ತನ್ನ ಶರೀರದಿಂದ ಹೊರಗೆ ಬಂದಿದ್ದ. ಈಗ ಆ ಅಂಶದಿಂದ ತನ್ನ ಅಂತರ್ಯಾಮಿಯಾದ ಪರಮಾತ್ಮನೊಂದಿಗೆ ಒಳಗೆ ಪ್ರವೇಶಿಸಿದಾಗ ಸುಪ್ತವಾಗಿದ್ದ ಇನ್ನೊಂದು ಅಂಶದಿಂದ ಬ್ರಹ್ಮನು ಎದ್ದನೆನ್ನಬಹುದು. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ವಿಚಾರಮಾಡಿಲ್ಲ. ಶುಕದೇವ ವಲ್ಲಭ ವ್ಯಾಖ್ಯಾನಗಳ ಪ್ರಕಾರ ಇಲ್ಲಿ 'ಕ್ಷೇತ್ರಜ್ಞ'ನೆಂದರೆ ಸಮಷ್ಟಿಜೀವ. ವಿರಾಟ್ ಎಂದರೆ ಸಮಷ್ಟಿ ಶರೀರ. ಇಂದ್ರಿಯಾಭಿಮಾನಿಗಳ ಪ್ರವೇಶಮಾತ್ರದಿಂದ ಶರೀರ ಏಳುವುದಿಲ್ಲ, ಜೀವ ಪ್ರವೇಶಿಸಬೇಕು ಎನ್ನುತ್ತಾರೆ. ನಿದ್ರಿಸುವ ವ್ಯಷ್ಟಿ ಶರೀರವು ವ್ಯಷ್ಟಿಜೀವನ ಸಹಾಯವಿಲ್ಲದೆ ಇಂದ್ರಿಯಾಭಿಮಾನಿಗಳಿಂದಲೇ ಎಚ್ಚರಗೊಳ್ಳುವುದಿಲ್ಲ ಎಂದು ದೃಷ್ಟಾಂತ. ಇದು ಸರಿಯಲ್ಲ. 'ಅತಃ ಪ್ರಬೋಧೋಽಸ್ಮಾತ್' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದಂತೆ ಪರಮಾತ್ಮನಿಂದಲೇ ಎಚ್ಚರ. ಆದರಿಂದ 'ಕ್ಷೇತ್ರಜ್ಞ'ನೆಂದರೆ ಇಲ್ಲಿ ಜೀವನಲ್ಲ, ಬ್ರಹ್ಮಾಂತರ್ಯಾಮಿ ಎನ್ನಬೇಕು. ಮುಂದಿನ ಶ್ಲೋಕದಲ್ಲಿ 'ಪ್ರಾಣೇಂದ್ರಿಯಮನೋಧಿಯಃ' 'ವಾಯು, ಇಂದ್ರಿಯಗಳು, ಅವುಗಳ ಅಭಿಮಾನಿಗಳಾದ ಬ್ರಹ್ಮಾದಿಗಳು ಚಂದ್ರ, ಬೃಹಸ್ಪತಿ' ಎಂದು ವಾಯುವನ್ನೂ ಹೇಳಿರುವುದರಿಂದ ಈ ಶ್ಲೋಕದಲ್ಲಿ 'ಚಿತ್ತೇನ' ಬ್ರಹ್ಮನೊಂದಿಗೆ ಎಂದಿಷ್ಟೇ ಹೇಳಿದ್ದರೂ 'ಪ್ರಾಣೇನ' ಮುಖ್ಯಪ್ರಾಣನೊಂದಿಗೆ ಎಂದೂ ಸೇರಿಸಿಕೊಳ್ಳಬೇಕು. ಬ್ರಹ್ಮವಾಯು ಹರಿ ಮೂವರೂ ಪ್ರವೇಶಿಸುತ್ತಾರೆ.

ಅಂಶೇನ ಸುಪ್ತೋ ಬ್ರಹ್ಮಾ ತು ಅಂಶೇನ ನಿರಗಾತ್ ತಥಾ ।
ಸ್ವದೇಹಾದ್ ವಾಯುಸಹಿತೋ ವಿಷ್ಣುನಾ ಚ ಜಗತ್ಪ್ರಭುಃ ॥

ತಮುತ್ಥಾಪಯಿತುಂ ದೇವಾಸ್ತಾನೃತೇ ತ್ರೀನ್ ಮಹಾಬಲಾನ್ ।
ನಾಶಕ್ನುವನ್ನೇಕಸಂಸ್ಥಾಸ್ತತಸ್ತೇ ತ್ವವಿಶಂಸ್ತ್ರಯಃ ॥

ಉದತಿಷ್ಠದ್ ಬ್ರಹ್ಮದೇಹಸ್ತದಾ ತೇಷಾಂ ಪ್ರಭಾವತಃ ।
ವಿಶೇಷೇಣ ಹರೇರೇವ ಪ್ರಭಾವೇನ ಶ್ರಿಯಃ ಪತೇಃ ॥

ಚಿತ್ತಾಭಿಮಾನೀ ಬ್ರಹ್ಮೈವ ಕ್ಷೇತ್ರಜ್ಞಸ್ತದ್ಗತೋ ಹರಿಃ ।
ಪ್ರಾಣೋ ವಾಯುರಿತಿ ಪ್ರೋಕ್ತಸ್ತಯೋರೀಶೋ ಹರಿಃ ಸ್ವಯಮ್ ॥
ಇತಿ ಚ ।

'ಒಂದು ಅಂಶದಿಂದ ತನ್ನ ಶರೀರದಲ್ಲಿ ಸುಪ್ತನಾಗಿ ಅಂದರೆ ವ್ಯಾಪಾರರಹಿತನಾಗಿದ್ದೇ ಇನ್ನೊಂದು ಅಂಶದಿಂದ ವಾಯುವಿನೊಂದಿಗೆ ಮತ್ತು ವಿಷ್ಣುವಿನೊಂದಿಗೆ ಬ್ರಹ್ಮನು ಶರೀರದಿಂದ ಹೊರಗೆ ಹೋಗಿದ್ದ. ಅವನನ್ನು ಎಬ್ಬಿಸಲು ಆ ಮೂರು ಮಂದಿ ಮಹಾಬಲಿಷ್ಠರಾದ ದೇವತೆಗಳು ಹೊರತು ಬೇರೆ ದೇವತೆಗಳು ಎಲ್ಲರೂ ಬಂದು ಬ್ರಹ್ಮದೇಹದಲ್ಲಿ ಜೊತೆ ಸೇರಿದರೂ ಶಕ್ತರಾಗಲಿಲ್ಲ. ಆ ಮೂವರು ಪ್ರವೇಶಿಸಿದಾಗ ಬ್ರಹ್ಮದೇಹ ಎದ್ದು ನಿಂತಿತು. ಅದು ಅವರ ಪ್ರಭಾವದಿಂದ. ವಿಶೇಷವಾಗಿ ಲಕ್ಷ್ಮೀಪತಿಯಾದ ಹರಿಯ ಪ್ರಭಾವದಿಂದ. ಈ ಶ್ಲೋಕದಲ್ಲಿ ಹೇಳಿದ ಚಿತ್ತಾಭಿಮಾನಿಯು ಬ್ರಹ್ಮ. ಕ್ಷೇತ್ರಜ್ಞನು ಅವನೊಳಗಿರುವ ಹರಿ. ಮುಂದಿನ ಶ್ಲೋಕದಲ್ಲಿ ಬರುವ ಪ್ರಾಣನೆಂದರೆ ವಾಯು. ಬ್ರಹ್ಮವಾಯುಗಳಿಗಿಬ್ಬರಿಗೂ ನಿಯಾಮಕನು ಸ್ವಯಂ ಶ್ರೀಹರಿಯೆ' ಎಂದೂ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಸಪ್ತವಿಂಶೋಽಧ್ಯಾಯಃ

—o—

ಅಧ್ಯಾಯ–೨೮

ಅಧ್ಯಾಯಸಾರಾಂಶ

ತ್ರಿಗುಣಮಯವಾದ ಶರೀರದಲ್ಲಿ ಜೀವ ಪರಮಾತ್ಮರಿಬ್ಬರೂ ಇರುತ್ತಾರೆ. ಆದರೆ ಪರಮಾತ್ಮನಿಗೆ ಶರೀರಜನ್ಯವಾದ ಸುಖದುಃಖಗಳಿಲ್ಲ. ಜೀವನಿಗೆ ಇವೆ. ಏಕೆಂದರೆ ಅವನಿಗೆ ಸುಖದುಃಖಗಳಲ್ಲಿ ನನ್ನವೆಂಬ ಅಭಿಮಾನವಿದೆ. ಅವುಗಳಿಗೆ ಸ್ವತಂತ್ರಕರ್ತ ನಾನೆಂಬ ಭ್ರಾಂತಿ ಇದೆ. ಈ ವಿಷಯಾಸಕ್ತಿ ಇರುವಷ್ಟು ಕಾಲ ಸಂಸಾರದಿಂದ ಬಿಡುಗಡೆ ಇಲ್ಲ. ವಿಷಯಭೋಗ ಶಾಶ್ವತಸುಖವನ್ನೂ ನೀಡುವುದಿಲ್ಲ. ಒಬ್ಬನಲ್ಲಿ ಶಾಶ್ವತವಾಗಿ ಇರುವುದೂ ಇಲ್ಲ. ಈ ಬಗ್ಗೆ ಅಜ್ಞಾನಭ್ರಾಂತಿಗಳನ್ನು ಗುರೂಪದೇಶದಿಂದ ದೂರ ಮಾಡಿಕೊಳ್ಳಬೇಕು. ದುಷ್ಟಶಾಸ್ತ್ರಗಳನ್ನೂ ಪರಿತ್ಯಜಿಸಬೇಕು. ಯದೃಚ್ಛಾಲಾಭದಿಂದ ಸಂತುಷ್ಟನಾಗಿ ಮಿತ ಭೋಗಿಯಾಗಿ ಏಕಾಂತದಲ್ಲಿ ಪರಮಾತ್ಮನನ್ನು ಚಿಂತಿಸಬೇಕು. ಆಗ ಅವನಿಗೆ ನಿಯತಗುರುಗಳು ತಮ್ಮ ಗುರುಗಳನ್ನು ಅಪರೋಕ್ಷದಲ್ಲಿ ತೋರಿಸುತ್ತಾರೆ. ಆ ಗುರುಗಳು ತಮ್ಮ ಗುರುಗಳನ್ನು. ಹೀಗೆ ಕೊನೆಯಲ್ಲಿ ಶೇಷನು ಬ್ರಹ್ಮನನ್ನೂ, ಬ್ರಹ್ಮ ಪರಮಾತ್ಮನನ್ನೂ ತೋರಿಸುತ್ತಾರೆ. ಹೀಗೆ ಅಪರೋಕ್ಷವಾಗಬೇಕಾದರೆ ಜೀವನಿಗೆ ತನ್ನಲ್ಲಿ ಪರಮಾತ್ಮನಿಂದ ವೈಲಕ್ಷಣ್ಯವೂ ಅವನ ಅಧೀನತ್ವವೂ ಚೆನ್ನಾಗಿ ತಿಳಿದಿರಬೇಕು. ಅವನೇ ಆಶ್ರಯ, ಅವನೇ ಅನುಗ್ರಹ ಮಾಡುವವನೆಂದೂ ತಿಳಿದಿರಬೇಕು. ಪೃಥಿವಿಯಲ್ಲಿ ಗಂಧ, ಜಲದಲ್ಲಿ ರಸ ಹೇಗೋ ಹಾಗೇ ಜೀವನಲ್ಲಿ ಪ್ರಕೃತಿಬಂಧ, ಒಂದನ್ನು ಬಿಟ್ಟು ಇನ್ನೊಂದಿಲ್ಲ, ನಿಜ. ಆದರೂ ಬಹುಜನ್ಮಗಳ ಸಾಧನೆಯಿಂದ ವಿಷಯವೈರಾಗ್ಯ ಸಂಪಾದಿಸಿ ಪರಮಾತ್ಮನ ಧ್ಯಾನ ಮಾಡುತ್ತಿದ್ದರೆ ಅವನ ಅನುಗ್ರಹದಿಂದ ಪ್ರಕೃತಿಬಂಧ ತೊಲಗುವುದು.

* * *

ಸಂಸಾರಭಯದಿಂದ ಪಾರಾಗುವ ಬಗೆಯನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಪ್ರಬುದ್ಧ್ಯ ಸ್ವಪ್ನಸುಪ್ತಿಭ್ಯಾಂ ಸಂಸ್ಮರನ್ನಾತ್ಮವೈಶಸಮ್ ।
ವೈತಥ್ಯಂ ವ್ಯಭಿಚಾರಂ ಚ ನಾಸೌ ಧ್ಯಾಯೇದ್ ಯತೋ ಭಯಮ್ ॥
॥ ೫ ॥

ಭ್ರಾಂತಿ ಅಜ್ಞಾನಗಳಿಂದ ದುರ್ವಿಷಯದಲ್ಲಿ ಆಸಕ್ತಿ ಹೊಂದುವುದು ಆತ್ಮನಾಶಕ್ಕೆ ಕಾರಣವಾಗುವುದೆಂದು ಗುರೂಪದೇಶದಿಂದ ಚೆನ್ನಾಗಿ ತಿಳಿದುಕೊಂಡು ವಿಷಯಭೋಗ ಶಾಶ್ವತಸುಖವನ್ನೂ ನೀಡುವುದಿಲ್ಲ, ಅದು ಒಬ್ಬನಲ್ಲಿ ಶಾಶ್ವತ ಇರುವುದೂ ಇಲ್ಲವೆಂದು ಆಲೋಚಿಸಬೇಕು. ಸಂಸಾರ ಭಯಕ್ಕೆ ಕಾರಣವಾಗಿರುವ ವಿಷಯಪದಾರ್ಥವನ್ನು ನೆನೆಯುತ್ತಿರಬಾರದು.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಈ ಶ್ಲೋಕವಿಲ್ಲ. ಇಲ್ಲಿ ಸ್ವಾಭಾವಿಕವಾಗಿ ಬರುವ ಸ್ವಪ್ನನಿದ್ರೆಗಳನ್ನು ನಿಗ್ರಹಿಸುವುದು ಸಂಸಾರಭಯ ನಿವೃತ್ತಿಗೆ ಸಾಧನವೆಂದು ಹೇಳಿದಂತೆ ಕಾಣುತ್ತದೆ. ಆದರೆ ಇದು ಭಾಗವತದಲ್ಲಿ ಮುಂದೆ ಬರುತ್ತದೆ. ಇಲ್ಲಿ ಬೇರೆ ಅರ್ಥ ಹೇಳಬೇಕು.

ಅಜ್ಞಾನಂ ಸುಪ್ತಿಶಬ್ದೋಕ್ತಂ ಸ್ವಪ್ನಶ್ಚೈವ ವಿಪರ್ಯಯಃ । ಇತಿ ಭಾರತೇ ।

ಈ ಶ್ಲೋಕದಲ್ಲಿ ಸುಪ್ತಿಶಬ್ದದಿಂದ ಅಜ್ಞಾನ ವಿವಕ್ಷಿತವಾಗಿದೆ. ಸ್ವಪ್ನವೆಂದರೂ ಭ್ರಾಂತಿ ವಿವಕ್ಷಿತವಾಗಿದೆ. ಭಾರತದಲ್ಲಿ ಈ ವಿಶೇಷಾರ್ಥ ಉಕ್ತವಾಗಿದೆ.

* * *

ನಿದ್ದೆ ಮುಂತಾದುವನ್ನೂ ನಿಗ್ರಹಿಸಬೇಕು. ಆಗ ಜ್ಞಾನಸಾಧನೆ ಸಾಧ್ಯ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ನಿವೃತ್ತಬುದ್ಧ್ಯವಸ್ಥಾನೋ ದೂರೀಭೂತಾನ್ಯದರ್ಶನಃ ।
ಉಪಲಭ್ಯಾತ್ಮನಾಽಽತ್ಮಾನಂ ಚಕ್ಷುಷೇವಾರ್ಕಮೇಕದೃಕ್ ॥ ೧೧ ॥

ನಿದ್ರೆ, ಸ್ವಪ್ನಗಳನ್ನು ನಿಗ್ರಹಿಸಿ ದುಷ್ಟಶಾಸ್ತ್ರಗಳನ್ನೂ ವಿಷಯಪದಾರ್ಥಗಳನ್ನೂ ದೂರಮಾಡಿಕೊಂಡು ಕಣ್ಣಿನಿಂದ ಸೂರ್ಯನನ್ನು ಕಾಣುವಂತೆ ಶ್ರವಣಾದಿಗಳ ಮೂಲಕ ಮನಸ್ಸಿನಿಂದ ಪರಮಾತ್ಮನನ್ನು ಕಂಡು ಅವನೇ ಸರ್ವೋತ್ತಮನೆಂದು ತಿಳಿಯಬೇಕು.

ಇಲ್ಲಿ 'ನಿವೃತ್ತಬುದ್ಧ್ಯವಸ್ಥಾನಃ' ಎಂದರೆ ಬುದ್ಧಿಯ ಅವಸ್ಥೆಗಳನ್ನು ಅಂದರೆ ಜಾಗರ ಮುಂತಾದ ಎಲ್ಲ ಅವಸ್ಥೆಗಳನ್ನೂ ದಾಟಬೇಕು ಎಂದು ಹೇಳಿದಂತೆ ಕಾಣುತ್ತದೆ.

ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಶುಕದೇವವ್ಯಾಖ್ಯಾನ ಮಾತ್ರ ರಾಗದ್ವೇಷಾ ದಿದ್ವಂದ್ವಗಳನ್ನು ಬಿಡಬೇಕೆಂದಿದೆ. ಈ ಅರ್ಥ ಆ ಶಬ್ದದಿಂದ ಸಿಗುವುದು ಕಷ್ಟ. ಜಾಗರಾದ್ಯವಸ್ಥೆಗಳನ್ನು ದಾಟುವುದೂ ಅಶಕ್ಯ. ಅದು ಮೋಕ್ಷದಲ್ಲಿ ಮಾತ್ರ ಸಾಧ್ಯ. ಜಾಗರಾವಸ್ಥೆಯನ್ನು ದಾಟುವುದೂ ಅನಪೇಕ್ಷಣೀಯ. ಅದರಿಂದ ನಿದ್ರಾದಿಗಳನ್ನು ಆದಷ್ಟು ನಿಗ್ರಹಿಸಿಬೇಕು ಎಂದರ್ಥ. ಇದು ಅನುವ್ಯಾವ್ಯಾನದಲ್ಲಿ ಉಕ್ತವಾಗಿದೆ–

ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್ ।
ಅತ್ಯಶಕ್ಯೇ ತು ನಿದ್ರಾದೌ ಪುನರೇವ ಸಮಭ್ಯಸೇತ್ ॥

'ಶ್ರವಣಾದಿಗಳಿಲ್ಲದೆ ಒಂದು ಕ್ಷಣವೂ ಇರಕೂಡದು. ಅತಿಅಶಕ್ಯವೆನಿಸಿದಾಗ ನಿದ್ರಾದಿಗಳನ್ನು ಸ್ವಲ್ಪ ಮಾಡಿದರೂ ಪುನಃ ಅಭ್ಯಾಸ ಮುಂದುವರಿಸಬೇಕು' ಎಂದು.

ಬುದ್ಧೇರವಾಕ್‌ಸ್ಥಾನಂ ನಿದ್ರಾದಿ ।

ಬುದ್ಧಿ ಸರಿಯಾಗಿ ಕೆಲಸ ಮಾಡದಿರುವ ಸ್ಥಿತಿ ಅಂದರೆ ನಿದ್ರೆ, ಸ್ವಪ್ನಗಳು 'ಬುದ್ಧ್ಯವಸ್ಥಾನ'ಶಬ್ದದಿಂದ ವಿವಕ್ಷಿತವಾಗಿವೆ.

ಜಾಗರಾವಸ್ಥೆಯಲ್ಲಿ ಬುದ್ಧಿ ಸರಿಯಾಗಿ ಕೆಲಸಮಾಡುವುದರಿಂದ ಅದು 'ಬುದ್ಧ್ಯವಸ್ಥಾನ'ವಲ್ಲ. 'ಅವ' ಸ್ಥಾನವೆಂದರೆ 'ಅವಾಕ್'ಸ್ಥಾನ ಎಂದು ವ್ಯಾಖ್ಯಾನ.

* * *

ಜ್ಞಾನಿಯು ಪ್ರಳಯದಲ್ಲಿ ಲಿಂಗಭಂಗ ಹೊಂದಿ ವಾಯುದ್ವಾರಾ ಹರಿಯನ್ನು ಹೊಂದುತ್ತಾನೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ಮುಕ್ತಲಿಂಗಃ ಸದಾಭಾಸಮಸತಿ ಪ್ರತಿಪದ್ಯತೇ ।
ಸತೋ ಬಂಧುಂ ಸಮಂ ಚಕ್ಷುಃ ಸರ್ವಾನುಸ್ಯೂತಮದ್ವಯಮ್ ॥ ೧೨ ॥

ಜ್ಞಾನಿಯು ಮಹಾಪ್ರಳಯದಲ್ಲಿ ಲಿಂಗಭಂಗ ಹೊಂದಿ ಮುಖ್ಯಪ್ರಾಣನಿಗೆ ಬಿಂಬಭೂತನಾದ ಪರಮಾತ್ಮನನ್ನು ಹೊಂದುತ್ತಾನೆ. ಆ ಪರಮಾತ್ಮನು ಮುಖ್ಯಪ್ರಾಣನಿಗೆ ಬಂಧು, ಜನಕ, ಎಲ್ಲ ರೂಪಗಳಲ್ಲಿ ಸಮನಾಗಿರುವವನು, ಸರ್ವಜ್ಞ, ಸರ್ವಾಂತರ್ಯಾಮಿ, ಅದ್ವಿತೀಯ ಸರ್ವೋತ್ತಮ.

'ಸತೋ ಬಂಧುಮಸತಿ ನಿರವಿಂದನ್' ಎಂಬ ಶ್ರುತಿವಾಕ್ಯಾರ್ಥದ ಅನುವಾದ ಇದು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಅಸತಿ' ಎಂದರೆ ಮಿಥ್ಯಾಭೂತವಾದ ಅಹಂಕಾರದಲ್ಲಿ 'ಸದಾಭಾಸಂ' ಸದ್ರೂಪದಿಂದ ಕಾಣುವ ಬ್ರಹ್ಮ ಎಂದು ಶ್ರೀಧರವ್ಯಾಖ್ಯಾನದಲ್ಲಿ, ನಶ್ವರವಾದ ಪ್ರಪಂಚದಲ್ಲಿ ಸದಾ ಯಾವಾಗಲೂ ಅಂತರ್ಯಾಮಿಯಾಗಿ ಭಾಸಮಾನವಾಗುವ ಬ್ರಹ್ಮ ಎಂದು ವಿಶ್ವನಾಥವ್ಯಾಖ್ಯಾನದಲ್ಲಿ, ಕಾರ್ಯವಾದ ಪ್ರಪಂಚದಲ್ಲಿ ಕಾರಣವಾದ ಬ್ರಹ್ಮ ಎಂದು ಶುಕದೇವವ್ಯಾಖ್ಯಾನದಲ್ಲಿ, ದೇಹದಲ್ಲಿ ಭಗವಂತನ ಸಾಕ್ಷಾತ್ಕಾರವೆಂದು ವೀರರಾಘವ ವಲ್ಲಭವ್ಯಾಖ್ಯಾನಗಳಲ್ಲಿ ಹೇಳುತ್ತಾರೆ. ಆದರೆ ಮಿಥ್ಯಾಭೂತವಾದ ಅಹಂಕಾರ ಸದ್ರೂಪಬ್ರಹ್ಮನಿಗೆ ಅಧಿಷ್ಠಾನವಲ್ಲ. ಅದರಿಂದ 'ಅಸತಿ' ಎನ್ನುವುದು ಕೂಡುವುದಿಲ್ಲ. ಮತ್ತು ನಶ್ವರ ಪ್ರಪಂಚದಲ್ಲಿ ಅಂತರ್ಯಾಮಿ ಎಂದರೆ ನಿತ್ಯಪ್ರಪಂಚದಲ್ಲಿ ಅಂತರ್ಯಾಮಿ ಅಲ್ಲವೆ? ಎಂಬ ಪ್ರಶ್ನೆ ಬರುತ್ತದೆ. 'ಕಾರ್ಯಪ್ರಪಂಚದಲ್ಲಿ ಕಾರಣವಾದ ಬ್ರಹ್ಮ' ಎನ್ನುವಲ್ಲಿಯೂ ನಿತ್ಯಪ್ರಪಂಚದಲ್ಲಿ ಬ್ರಹ್ಮನಿಲ್ಲವೆ? ಎಂಬ ಪ್ರಶ್ನೆ ಇದ್ದೇ ಇದೆ. ದೇಹದಲ್ಲಿ ಭಗವಂತನ ಸಾಕ್ಷಾತ್ಕಾರ ಸರಿಯೆ. ಆದರೆ 'ಅಸತಿ ಪ್ರತಿಪದ್ಯತೇ' ಎಂದು ಅನ್ವಯ ಶಕ್ಯವಿರುವಾಗ ಹಿಂದಿನ ಶ್ಲೋಕದಲ್ಲಿ ಬರುವ ಉಪಲಭ್ಯಾತ್ಮಾನಂ ಎಂಬಲ್ಲಿಗೆ 'ಅಸತಿ ಉಪಲಭ್ಯ' ಎಂದು ದೂರಾನ್ವಯ ಕ್ಲೇಶ ಬೇಡ. 'ಅಸತಿ' ಪ್ರಳಯದಲ್ಲಿ ತಾನೆ ಜ್ಞಾನಿಗಳಿಗೆ ಪರಮಾತ್ಮಪ್ರಾಪ್ತಿ?

ಅಸತಿ ಪ್ರಳಯೇ ।

'ಅಸತಿ' ಎಂದರೆ ಮಹಾಪ್ರಳಯ ಕಾಲದಲ್ಲಿ ಎಂದರ್ಥ.

* * *

ಜ್ಞಾನಿಗೆ ಪರಮಾತ್ಮನ ಅಪರೋಕ್ಷವು ತನ್ನಲ್ಲಿ ಸ್ವೋತ್ತಮರು, ಅವರಲ್ಲಿ ಮುಖ್ಯಪ್ರಾಣ, ಅವನಲ್ಲಿ ಪರಮಾತ್ಮ ಈ ಕ್ರಮದಿಂದ ಉಂಟಾಗುತ್ತದೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ಏವಂ ತ್ರಿವೃದಹಂಕಾರೋ ಭೂತೇಂದ್ರಿಯಮನೋಗುಣೈಃ ।
ಸ್ವಾಭಾಸೈರ್ಲಕ್ಷಿತೋಽನೇನ ಸದಾಭಾಸೇನ ಸತ್ಯದೃಕ್ ॥ ೧೪ ॥

ಹೀಗೆ ಉಪಾಸಕನಿಂದ ತ್ರಿವಿಧ ಅಹಂಕಾರಕ್ಕೆ ಅಭಿಮಾನಿಯಾದ ಶೇಷನು ಅವನ ಪ್ರತಿಬಿಂಬರಾದ ಭೂತ ಇಂದ್ರಿಯ ಮನಸ್ಸು ಶಬ್ದಾದಿಗುಣಾಭಿಮಾನಿ ದೇವತೆಗಳಿಂದಲೂ, ಪರಮಾತ್ಮ ಪ್ರತಿಬಿಂಬನಾದ ಮುಖ್ಯಪ್ರಾಣನು ಶೇಷನಿಂದಲೂ, ಸರ್ವಜ್ಞಪರಮಾತ್ಮನು ಮುಖ್ಯಪ್ರಾಣನಿಂದಲೂ ಸಾಕ್ಷಾತ್ಕರಿಸಿಕೊಳ್ಳಲ್ಪಡುತ್ತಾರೆ.

ಅದ್ವೈತ ಮತದಲ್ಲಿ ಬ್ರಹ್ಮ ಮೊದಲಿಗೆ ಅಹಂಕಾರದಲ್ಲಿ ಪ್ರತಿಬಿಂಬಿತನಾಗುತ್ತಾನೆ. ಬಳಿಕ ಅಹಂಕಾರದಲ್ಲಿ ಕಾಣುವ ಬ್ರಹ್ಮನಲ್ಲಿ ದೇಹಾದಿವಿಷಯಪದಾರ್ಥ ಕಾಣುತ್ತದೆ.

ದೇಹಾದಿವಿಷಯದಲ್ಲಿ ಬ್ರಹ್ಮಪ್ರತಿಬಿಂಬವನ್ನು ಕಂಡಾಗ ಅದಕ್ಕೆ ಕಾರಣವಾದ ಅಹಂಕಾರದಲ್ಲಿರುವ ಬ್ರಹ್ಮಪ್ರತಿಬಿಂಬ ಜ್ಞಾತವಾಗುತ್ತದೆ. ಅದರಿಂದ ಶುದ್ಧಬ್ರಹ್ಮ ಊಹೆಯಲ್ಲಿ ಕಾಣುತ್ತದೆ. ಎಂದು [1]ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ ವಿಷಯಪದಾರ್ಥವು ಕನ್ನಡಿಯಂತೆ ಸ್ವಚ್ಛವಲ್ಲ, ಬ್ರಹ್ಮವೂ ರೂಪ ಉಳ್ಳದ್ದಲ್ಲ. ಅದರಿಂದ ಪ್ರತಿಬಿಂಬ ಬೀಳುತ್ತದೆ ಎನ್ನುವುದು ಅಸಂಗತ. ಮತ್ತು ಬ್ರಹ್ಮನಲ್ಲಿ ವಿಷಯ ಆರೋಪಿತವಾದ್ದರಿಂದ ಬ್ರಹ್ಮನಲ್ಲಿ ವಿಷಯ ಕಾಣಬೇಕು ಹೊರತು ವಿಷಯದಲ್ಲಿ ಬ್ರಹ್ಮವಲ್ಲ. ವಸ್ತುತಃ ದೇಹಾದಿಗಳಲ್ಲಿ ಬ್ರಹ್ಮನಾಗಲಿ ಬ್ರಹ್ಮನಲ್ಲಿ ದೇಹಾದಿಗಳಾಗಲಿ ಕಾಣುವುದಿಲ್ಲ. ದೇಹಾದಿಗಳು ಮಾತ್ರ ಕಾಣುತ್ತವೆ. ಅವುಗಳಲ್ಲಿ ಅಹಂಕಾರದ ಅಭೇದವೂ ಕಾಣುವುದಿಲ್ಲ. ಅವು ನನ್ನವು ಎಂಬ ಅಭಿಮಾನಮಾತ್ರವಿರುತ್ತದೆ. ಅದರಿಂದ ಈ ವ್ಯಾಖ್ಯಾನ ಶಾಸ್ತ್ರಕ್ಕಾಗಲಿ ಅನುಭವಕ್ಕಾಗಲಿ ಅನುಸಾರಿಯಾದುದಲ್ಲ.

[2]ವೀರರಾಘವ ವ್ಯಾಖ್ಯಾನದಲ್ಲಿ ಬೆಳಕಿರುವಾಗಲೇ ಸೂರ್ಯಪ್ರತಿಬಿಂಬವೂ ಸೂರ್ಯನೂ ಕಾಣುತ್ತಾನೆ. ಅಂಧಕಾರದಲ್ಲಿ ಅಲ್ಲ. ಅದರಂತೆ ಧರ್ಮಭೂತಜ್ಞಾನದಿಂದಲೆ ದೇಹಾತ್ಮೈಕ್ಯಭ್ರಾಂತಿಯೂ ಆ ಭ್ರಮದ ನಿರಸನವೂ ಆಗುತ್ತದೆ. ಸ್ವಾಭಾಸ ಅಂದರೆ ಸ್ವ–ಸ್ವಧರ್ಮಭೂತ, ಆಭಾಸ-ಭ್ರಾಂತಿಜ್ಞಾನ ಮತ್ತು ಸ್ವ–ಸ್ವಾಭಾವಿಕವಾದ ಆಭಾಸ– ಯಥಾರ್ಥಜ್ಞಾನ ಎಂದರ್ಥ ಎಂದಿದೆ. ಇಲ್ಲಿ ಸ್ವಾಭಾಸೈಃ ಎಂಬುದನ್ನು ಆವೃತ್ತಿಮಾಡಿಕೊಂಡು ಕ್ಲೇಶದಿಂದ ಭ್ರಾಂತಿ, ಯಥಾರ್ಥಜ್ಞಾನ ಎಂದು ಎರಡು ಅರ್ಥಗಳನ್ನೂ ವಿಷಯ ಬಹುತ್ವಪ್ರಯುಕ್ತ

---

೧. ದೇಹೇಂದ್ರಿಯಮನೋಮಯೈಃ ದೇಹೇಂದ್ರಿಯಮನೋಭಿರವಚ್ಛಿನ್ನೈಃ ಸ್ವಾಭಾಸೈರಾತ್ಮಪ್ರತಿಬಂಬೈಃ ತ್ರಿವೃತ್ ತ್ರಿಗುಣೋಽಹಂಕಾರಃ ಸತೋ ಬ್ರಹ್ಮಣ ಆಭಾಸೋ ಯಸ್ಮಿಂಸ್ತೇನ ರೂಪೇಣ ಲಕ್ಷಿತಃ । ಅಹಂಕಾರಸ್ಥಾಭಾಸಂ ವಿನಾ ವಿಷಯಾಭಾಸಾನುತ್ಪತ್ತೇಃ । ಅನೇನ ಚಾಹಂಕಾರೇಣ ಸದಾಭಾಸವತಾ ಸತ್ಯದೃಕ್ ಪರಮಾರ್ಥಜ್ಞಪ್ತಿರೂಪ ಆತ್ಮಾ ಲಕ್ಷಿತ ಇತ್ಯರ್ಥಃ । –ಶ್ರೀಧರಃ

೨. ನ ಹ್ಯಂಧಕಾರೇ ಪ್ರತಿಬಿಂಬಜ್ಞಾನಂ । ಅತೋಽನಾದಿತ್ಯೇ ಆದಿತ್ಯಭ್ರಾಂತಿಃ ಸಾಕ್ಷಾದಾದಿತ್ಯೇ ಆದಿತ್ಯಬುದ್ಧಿಶ್ಚಾದಿತ್ಯಧರ್ಮಭೂತಾಲೋಕೇನೈವ ಏವಮನಾತ್ಮನಿ ದೇಹೇ ಆತ್ಮಭ್ರಾಂತಿಃ ಸಾಕ್ಷಾದಾತ್ಮನ್ಯಾತ್ಮಪ್ರತಿಪತ್ತಿಶ್ಚಾತ್ಮಧರ್ಮಭೂತಜ್ಞಾನೇನೈವ ಭವತಿ । ಸ್ವಾಭಾಸೈಃ ಸ್ವಧರ್ಮಭೂತಜ್ಞಾನೈಃ ಆತ್ಮವ್ಯತಿರಿಕ್ತೋಽಪ್ಯಾತ್ಮತಯಾ ಗೃಹ್ಯತೇ ಸಾ ಭ್ರಾಂತಿಃ । ತಥಾ ತೇನೈವ ಸ್ವಾಭಾಸೇನ ಸ್ವಾಭಾವಿಕಪ್ರಮಾಭೂತಜ್ಞಾನೇನ ಸತ್ಯದೃಕ್ ನಿರ್ವಿಕಾರಜ್ಞಾನಸ್ವರೂಪ ಆತ್ಮಾ ಗೃಹ್ಯತ ಇತ್ಯರ್ಥಃ । ಸ್ವಾಭಾಸೈರಿತಿ ಬಹುವಚನಂ ದೇವೋಽಹಂಮನುಷ್ಯೋಽಹಂ ಕೃಶೋಽಹಮಿತ್ಯಾದಿ ನಾನಾಕಾರ ವಿಷಯತ್ವಾಭಿಪ್ರಾಯಂ । –ವೀರರಾಘವಃ

ಜ್ಞಾನದಲ್ಲಿ ಬಹುತ್ವವನ್ನೂ ಹೇಳುವುದು ಸ್ವರಸವಲ್ಲ. ದೇಹಾತ್ಮೈಕ್ಯಭ್ರಾಂತಿ ಅನುಭವಸಿದ್ಧವೂ ಅಲ್ಲ. ಅದರಿಂದ ಭಾಗವತ ಇಲ್ಲಿ ಹೇಳುವುದು ಜ್ಞಾನಿಗೇ ಅಪರೋಕ್ಷ ಉಂಟಾಗುವ ಕ್ರಮ ಎನ್ನುವುದೇ ಯುಕ್ತ.

ಶೇಷಸ್ಯ ಪ್ರತಿಬಿಂಬಾಸ್ತು ದೇವಾಃ ಶೇಷಸ್ತು ಬ್ರಹ್ಮಣಃ ।
ಸ ಪರಬ್ರಹ್ಮಣಶ್ಚೈವ ತೇ ಸ್ವಬಿಂಬಪ್ರದರ್ಶಕಾಃ ।
ತತಃ ಸ್ವಬಿಂಬದ್ವಾರೇಣ ಪರಮಾತ್ಮಪ್ರದರ್ಶನಮ್ ॥

ಇತಿ ಬ್ರಹ್ಮತರ್ಕೇ ।

ಭೂತಇಂದ್ರಿಯಗಳ ಅಭಿಮಾನಿದೇವತೆಗಳು ಅಹಂಕಾರಾಭಿಮಾನಿ ಶೇಷನ ಪ್ರತಿಬಿಂಬರು, ಶೇಷನು 'ಸತ್' ನಾಮಕ ಚತುರ್ಮುಖಬ್ರಹ್ಮನ ಪ್ರತಿಬಿಂಬ. ಚತುರ್ಮುಖಬ್ರಹ್ಮನು ಸತ್‌ನಾಮಕ ಸತ್ಯದೃಕ್ ಎನಿಸಿದ ಪರಬ್ರಹ್ಮನ ಬ್ರತಿಬಿಂಬ. ಅದರಿಂದ ಅವರು ತಮ್ಮ ಬಿಂಬರೂಪರನ್ನು ತೋರಿಸುತ್ತಾರೆ. ಹೀಗಾಗಿ ಎಲ್ಲ ಜ್ಞಾನಿಗಳಿಗೂ ತಮ್ಮ ಬಿಂಬರೂಪರಾದವರ ಮೂಲಕವೇ ಪರಮಾತ್ಮನ ಸಾಕ್ಷಾತ್ಕಾರ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಇದರ ಅಭಿಪ್ರಾಯ ಹೀಗೆ– ಸಾಧನಕನಿಗೆ ಮೊದಲಿಗೆ ಅವನ ಗುರುಗಳು ತಮ್ಮ ಗುರುಗಳನ್ನು ಅಪರೋಕ್ಷದಲ್ಲಿ ತೋರಿಸುತ್ತಾರೆ. ಆ ಗುರುಗಳು ತಮ್ಮ ಗುರುಗಳನ್ನೂ, ಕೊನೆಯಲ್ಲಿ ಶೇಷನು ಬ್ರಹ್ಮನನ್ನೂ ಬ್ರಹ್ಮನು ಪರಮಾತ್ಮನನ್ನೂ ನೇರವಾಗಿ ಅಪರೋಕ್ಷದಲ್ಲಿ ತೋರಿಸುತ್ತಾರೆ ಹೊರತು ಸಾಧಕನಿಗೆ ತನ್ನ ಪ್ರಯತ್ನಮಾತ್ರದಿಂದಲೇ ಭಗವಂತನ ದರ್ಶನವಾಗುವುದಿಲ್ಲ ಎಂದು.

* * *

ಪರಮಾತ್ಮನ ಅಪರೋಕ್ಷವಾಗಬೇಕಾದರೆ ಜೀವನಿಗೆ ತನ್ನಲ್ಲಿ ಪರಮಾತ್ಮನಿಂದ ವೈಲಕ್ಷಣ್ಯವೂ ಪರಮಾತ್ಮಾಧೀನತ್ವವೂ ಚೆನ್ನಾಗಿ ತಿಳಿದಿರಬೇಕೆಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಭೂತಸೂಕ್ಷ್ಮೇಂದ್ರಿಯಮನೋಬುದ್ಧ್ಯಾದಿಷ್ವಿಹ ನಿದ್ರಯಾ ।
ಲೀನೇಷ್ವಸತಿ ಯಸ್ತತ್ರ ವಿನಿದ್ರೋ ನಿರಹಂಕ್ರಿಯಃ ॥ ೧೫ ॥

ಮನ್ಯಮಾನಸ್ತದಾಽಽತ್ಮಾನಮನಷ್ಟೋ ನಷ್ಟವನ್ಮೃಷಾ ।
ನಷ್ಟೇಽಹಂಕರಣೇ ದ್ರಷ್ಟಾ ನಷ್ಟವಿತ್ತ ಇವಾತುರಃ ॥ ೧೬ ॥

ಏವಂ ಪ್ರತ್ಯವಮೃಶ್ಯಾಸಾವಾತ್ಮಾನಂ ಪ್ರತಿಪದ್ಯತೇ ।
ಸಾಹಂಕಾರಸ್ಯ ದ್ರವ್ಯಸ್ಯ ಯೋಽವಸ್ಥಾನಮನುಗ್ರಹಃ ॥ ೧೭ ॥

ಪ್ರಳಯಕಾಲದಲ್ಲಿ ಭೂತಸೂಕ್ಷ್ಮ ಇಂದ್ರಿಯ ಮನಸ್ಸು ಬುದ್ಧಿ ಮುಂತಾದವುಗಳ ಅಭಿಮಾನಿಗಳಾದ ಸಂಸಾರಿ ಜೀವರೆಲ್ಲರೂ ಪ್ರಳಯಕಾಲದ ನಿದ್ರೆಯಿಂದ ಆವೃತರಾಗಿರುವಾಗ ಪರಮಾತ್ಮನು ಮಾತ್ರ ನಿದ್ರೆಯಿಲ್ಲದೆ ದೇಹಾದಿಗಳಲ್ಲಿ ಅಭಿಮಾನವಿಲ್ಲದೆ ನಿತ್ಯ ಸರ್ವಜ್ಞನಾಗಿಯೇ ಇರುತ್ತಾನೆ. ಜೀವನು ಸ್ವರೂಪನಾಶವಿಲ್ಲದವನಾದರೂ ಪ್ರಳಯಕಾಲದಲ್ಲಿ ಅಹಂಕಾರ ಮಮಕಾರ ಕಾರಣವಾದ ಅಹಂಕಾರವೆಂಬ ಮನಃಪ್ರಭೇದ ನಾಶವಾದಾಗ ಮೃತನಾದವನಂತೆ ಪ್ರಳಯಕಾಲದಲ್ಲಿ ನಾನೇನೂ ತಿಳಿಯಲ್ಲಿಲ್ಲವೆಂದು ಭ್ರಮಿಸುತ್ತಾನೆ. ತಮ್ಮ ಐಶ್ವರ್ಯ ನಷ್ಟವಾದರೆ ತಾವೇ ನಾಶಹೊಂದಿದಂತೆ ಜನರು ವರ್ತಿಸುತ್ತಾರೆ, ಹಾಗೆ ಸತ್ತವನು ತಿರುಗಿ ಹುಟ್ಟಿದಾಗ 'ನಾನು ಹಿಂದೆ ಸತ್ತಾಗ ಏನೂ ತಿಳಿಯಲಿಲ್ಲ' ಎಂದುಕೊಳ್ಳುವಂತೆ ಜೀವನು ಪ್ರಳಯಾನಂತರ ಸ್ಥೂಲದೇಹದಿಂದ ಜನಿಸಿದಾಗ ಇಷ್ಟರವರೆಗೆ ಪ್ರಳಯಕಾಲದಲ್ಲಿ ನಾನು ಏನನ್ನೂ ತಿಳಿಯಲಿಲ್ಲ' ಎಂದು ಕೊಳ್ಳುತ್ತಾನೆ, ಹೀಗೆ ಮರಣದಲ್ಲಿಯೂ ಪ್ರಳಯದಲ್ಲಿಯೂ ತನ್ನನ್ನೂ ಕಾಲ ಮುಂತಾದುವನ್ನೂ ತಿಳಿಯುತ್ತಿದ್ದರೂ ಎಲ್ಲವನ್ನೂ ಮರೆತು ನಾನು ತಿಳಿಯಲಿಲ್ಲ ಎಂದು ಭ್ರಮಿಸುತ್ತಾನೆ. ಪರಮಾತ್ಮನಿಗೂ ಜೀವನಿಗೂ ಇರುವ ಈ ವೈಲಕ್ಷಣ್ಯವನ್ನು ಚೆನ್ನಾಗಿ ತಿಳಿದರೆ ಮಾತ್ರ ಜೀವನಿಗೆ ಪರಮಾತ್ಮನ ದರ್ಶನವಾಗುವುದು. ಮತ್ತು ಜೀವನಿಗೆ ಪರಮಾತ್ಮನು ಆಶ್ರಯನೆಂದೂ ಅನುಗ್ರಹ ಮಾಡುವವನೆಂದೂ ಅವನು ತಿಳಿಯಬೇಕು.

[1]ಇಲ್ಲಿ ಶ್ರೀಧರ ವ್ಯಾಖ್ಯಾನ ಪ್ರಕಾರ 'ಸುಷುಪ್ತಿಯಲ್ಲಿ ಅಹಂಕಾರವಿಷಯವಾದ ಭೂತಾದಿಗಳು ಅಸತ್ತುಲ್ಯವಾದ ಅವ್ಯಾಕೃತದಲ್ಲಿ ಅವಿದ್ಯೆಯಲ್ಲಿ ಲೀನವಾಗುವುದರಿಂದ

---

೧. ಇದಾನೀಂ ಸುಷುಪ್ತಿಸಾಕ್ಷಿತ್ವೇನ ಶುದ್ಧಾತ್ಮಪ್ರತಿಪತ್ತಿಮನುಭವತೋ ದರ್ಶಯತಿ ತ್ರಿಭಿಃ । ಭೂತಾದಿಷ್ವಸತಿ ಅಸತ್ತುಲ್ಯೇಽವ್ಯಾಕೃತೇ ನಿದ್ರಯಾ ಲೀನೇಷು ಸತ್ಸು ಯಸ್ತತ್ರ ತದಾ ವಿನಿದ್ರೋ ನಿರಹಂಕ್ರಿಯಸ್ತಮಾತ್ಮಾನಂ ಪ್ರತಿಪದ್ಯತೇ ಇತಿ ತೃತೀಯೇನಾನ್ವಯಃ । ನನು ಯದಿ ತದಾ ವಿನಿದ್ರೋಽಸಾವಸ್ತಿ ತರ್ಹಿ ಜಾಗ್ರತ್ಸ್ವಪ್ನಯೋರಿವ ಸ್ಫುಟಃ ಕಿಂ ನಾವಭಾಸತೇ? ತತ್ರಾಹ । ಪೂರ್ವಂ ಸ ದ್ರಷ್ಟಾ । ಅತೋ ದ್ರಷ್ಟೃತ್ವೇನ ಸವಿಕಲ್ಪತಯಾ ಸ್ಫುಟಂ ಪ್ರತೀತಃ । ಸುಷುಪ್ತೌ ತು ಭೂತಾದೇರಹಂಕಾರವಿಷಯಸ್ಯ ಲೀನತ್ವಾತ್ ತದ್ವಿಷಯೇಽಹಂಕಾರೇ ನಷ್ಟೇ ಸತಿ ಸ್ವಯಮನಷ್ಟೋಽಪಿ ವ್ಯೃಷ್ಟೈವಾತ್ಮಾನಂ ನಷ್ಟವನ್ಮನ್ಯಮಾನೋ ಯಃ । ನನು ಸುಷುಪ್ತೌ ನ ಕಿಂಚಿದನುಭೂಯತೇ । ಮೈವಂ । ಸುಖಮಹಮಸ್ವಾಪ್ಸಂ ನ ಕಿಂಚಿದವೇದಿಷಂ ಇತಿ ವಿಶೇಷಜ್ಞಾನಂ ವಿನಾ ಕೇವಲಸ್ಯಾತ್ಮನಃ ಪ್ರತಿಸಂಧಾನಾದಿತ್ಯಾಹ ಏನಮಿತಿ । ನನು ಪ್ರತಿಸಂಧಾನೇ ಸಾಹಂಕಾರಸ್ಯ ಪ್ರತೀತೇಃ ಕಥಂ ನಿರಹಂಕ್ರಿಯತ್ವಂ? ತತ್ರಾಹ ಸಾಹಂಕಾರಸ್ಯ ದ್ರವ್ಯಸ್ಯ ಕಾರ್ಯಕಾರಣಸಂಘಾತಸ್ಯಾನುಗ್ರಹಃ ಪ್ರಕಾಶಕಃ ಅವಸ್ಥಾನಂ ಚ । ದ್ರವ್ಯವಿಶೇಷಣತಯಾಽಹಂಕಾರಸ್ಯ ದೃಶ್ಯತ್ವಾಚ್ಚ ತದ್ದ್ರಷ್ಟಾಽತ್ಮಾ ತದ್‌ವ್ಯತಿರಿಕ್ತಃ । ತಮಾತ್ಮಾನಮಿತ್ಯನ್ವಯಃ । —ಶ್ರೀಧರಃ

ಅಹಂಕಾರ ನಾಶವಾಗುವುದು, ಆಗ ತಾನು ನಾಶ ಹೊಂದಿರದಿದ್ದರೂ ತಾನೇ ನಷ್ಟನಾದೆನೆಂದು ಜೀವ ಭ್ರಮಿಸುತ್ತಾನೆ. ಹಣ ಕಳೆದರೆ ತಾನೇ ನಾಶವಾದಂತೆ ಲೋಭಿ ಭಾವಿಸುತ್ತಾನೆ. ಹಾಗೇ ಜೀವನೂ ಭಾವಿಸಿ ಕಳವಳಿಸುತ್ತಾನೆ. ವಾಸ್ತವದಲ್ಲಿ ದ್ರಷ್ಟೃ ಅಂದರೆ ಸಾಕ್ಷಿಯಾದ ಆತ್ಮ ಆಗಲೂ ಇದ್ದೇ ಇರುತ್ತಾನೆ. ಹೀಗೆ ತಿಳಿದರೆ, ಅಹಂಕಾರಯುಕ್ತವಾದ ಶರೀರಾದಿದ್ರವ್ಯಗಳಿಗೆ ಅನುಗ್ರಹ ಅಂದರೆ ಪ್ರಕಾಶ ಉಂಟುಮಾಡುತ್ತ ಆ ಶರೀರಾದಿದ್ರವ್ಯಗಳಿಗೆ ವಿಶೇಷಣವಾಗಿ ಇರುವ ಆತ್ಮನಿಗೆ ದ್ರಷ್ಟೃವಾದ ಆತ್ಮನ ಪ್ರಾಪ್ತಿಯಾಗುವುದು.' ಇಲ್ಲಿ ಸುಷುಪ್ತಿಯಲ್ಲಿ ಅಹಂಕಾರವಿಷಯವಾದ ಭೂತಾದಿಗಳು ಅವಿದ್ಯೆಯಲ್ಲಿ ಲಯ ಹೊಂದುವುದು ಏಕಜೀವ ವಾದದಲ್ಲಿ ಕೂಡ ಬಹುದಾದರೂ ಬಹುಜೀವ ವಾದದಲ್ಲಿ ಕೂಡಲಾರದು. ಭೂತಾದಿಗಳು ಮಾಯಿಕಪದಾರ್ಥಗಳು. ಶುಕ್ತಿರಜತಾದಿಗಳಂತೆ ಆವಿದ್ಯಕವಲ್ಲ. ಅದರಿಂದ ಅವುಗಳಿಗೆ ಲಯವಿಲ್ಲ. ವಿಷಯವಿಲ್ಲದಿದ್ದ ಮಾತ್ರಕ್ಕೆ ಅಹಂಕಾರವೂ ಏಕೆ ಲಯವಾಗಬೇಕು? ಅದರ ಅಭಿಮಾನವೆಂಬ ವ್ಯಾಪಾರ ಇಲ್ಲವಾಗಲಿ. ಅಹಂಕಾರನಾಶವಾದರೆ 'ನಾನು' ಎಂಬುದೇ ಇಲ್ಲವಾದರೆ 'ನಾನು ನಷ್ಟನಾದೆನೆ'ಂದು ಭಾವಿಸುವವನು, ಕಳವಳಿಸುವವನು ಯಾರು ? ಅವನು ಬೇರೆ ಎನ್ನುವುದು ಅಪ್ರಾಮಾಣಿಕ. ಹೀಗೆ ಕಳವಳಿಸುವ ಆತ್ಮನನ್ನು ಹೊಂದುವುದು ಪುರುಷಾರ್ಥವೂ ಆಗಲಾರದು. ಈ ರೀತಿ ಕಳವಳವೂ ಅನುಭವ ವಿರುದ್ಧ. ಸುಖವಾಗಿ ಮಲಗಿದ್ದೇನೆಂದೇ ಅನುಭವ ಎಲ್ಲರಿಗೂ ಇದೆ.

[೧]ವೀರರಾಘವ ವ್ಯಾಖ್ಯಾನದಲ್ಲಿ ಭೂತಾದಿಗಳ ಲಯವೆಂದರೆ ಕಾಣೆಸದಿರುವುದು. ಲೋಭಿ ಹಣ ಕಳೆದುಕೊಂಡು ಕಳವಳಿಸುವಂತೆ ಜೀವನು ಸುಷುಪ್ತಿಯಲ್ಲಿ ಭೂತಾದಿಗಳನ್ನು ಕಾಣದೆ ತಾನೇ ನಷ್ಟನಾದೆನೆಂದು ಕಳವಳಿಸುತ್ತಾನೆ ಎಂದಿದೆ. ಇಲ್ಲಿಯೂ ಅನುಭವವಿರೋಧ ಎಂಬ ದೋಷ ಪರಿಹಾರವಾಗಿಲ್ಲ.

ವಿಶ್ವನಾಥವ್ಯಾಖ್ಯಾನದಲ್ಲಿ 'ಜೀವೋಪಾಧಿಯು ಯೋಗಸಮಾಧಿಯಲ್ಲಿ ಲಯ ಹೊಂದುವುದಕ್ಕೂ ನಿದ್ರೆಯಲ್ಲಿ ಲಯ ಹೊಂದುವುದಕ್ಕೂ ವ್ಯತ್ಯಾಸವಿದೆ. ಸಮಾಧಿಯಲ್ಲಿ ಆತ್ಮನು ಸ್ವರೂಪಾನಂದಮಯ ನಾಗುತ್ತಾನೆ. ನಿದ್ದೆಯಲ್ಲಿ ಅಲ್ಲ. ಹಣ

---

೧. ತಮೋಗುಣಾಭಿಭವಾತ್ ಪರಾಗರ್ಥಾನುಭವಾಭಾವಾಚ್ಚಾಹಮರ್ಥಸ್ಯಾತ್ಮನೋ ವಿವಿಕ್ತ ಬ್ರಾಹ್ಮಣತ್ವಾದಿ ಸ್ಫುಟಪ್ರತಿಭಾಸಾಭಾವೇಽಪ್ಯಾ ಪ್ರಬೋಧಾದಹ ಮಿತ್ಯೇಕಾಕಾರೇಣಾತ್ಮನಃ ಸ್ಫುರಣಾತ್ ಸುಷುಪ್ತಾವಪಿ ನಾಹಮರ್ಥಸ್ಯಾತ್ಮನೋ ವಿಗಮಃ । ಸುಷುಪ್ತೌದೇಹಾದೇರನಾತ್ಮನ್ಯಾತ್ಮಾಭಿಮಾನ ರೂಪಾಹಂಕಾರವಿಷಯಸ್ಯ ಲೀನತ್ವಾತ್ ತದ್ವಿಷಯೇಽಹಂಕರಣೇ ನಷ್ಟೇ ಸತಿ ಸ್ವಯಮನಷ್ಟೋಽಪಿ ಮೃಷೈವಾತ್ಮಾನಂ ನಷ್ಟ ಇವ ಮನ್ಯಮಾನೋ ಯಃ । –ವೀರರಾಘವಃ

ಕಳೆದುಹೋದರೆ ಸುಖವಿಲ್ಲ, ಹಣದ ಆಸಕ್ತಿ ಹೋದರೆ ಸುಖ, ಎಂದಿದೆ. ಇಲ್ಲಿ 'ನಷ್ಟವಿತ್ತ ಇವ ಆತುರಃ' ಎಂದಿದ್ದು ಕೂಡುವುದಿಲ್ಲ. ವಿತ್ತಾಸಕ್ತಿ ನಷ್ಟವಾಗಿರುವವನು ಎಂಬ ಅರ್ಥದಲ್ಲಿ ಆತುರಶಬ್ದ ವ್ಯರ್ಥ. ಮತ್ತು ನಿದ್ದೆಯಲ್ಲಿ ಸ್ವರೂಪಾನಂದವಿಲ್ಲವೆಂದರೆ ಸುಖವಾಗಿ ನಿದ್ದೆ ಮಾಡಿದೆನೆಂದು ಎಲ್ಲರ ಅನುಭವ ಕೂಡಲಾರದು.

[೧]ವಲ್ಲಭವ್ಯಾಖ್ಯಾನದಲ್ಲಿ 'ಆತ್ಮ ಅಹಂಕಾರ ಸಂವಲಿತನಾಗಿರುತ್ತಾನೆ, ನಿದ್ದೆಯಲ್ಲಿ ಅಹಂಕಾರ ನಷ್ಟವಾದಾಗ ಸ್ವಪ್ನದಲ್ಲಿ ತನ್ನ ಶಿರಶ್ಛೇದವನ್ನು ತಾನು ಕಾಣುವಂತೆ ತನ್ನನ್ನೇ ನಷ್ಟನೆಂದು ಕಾಣುತ್ತಾನೆ. ಅಹಂಕಾರ ನಾಶವಾದರೆ ತಾನೇಕೆ ನಾಶವಾಗಬೇಕು ಎಂದರೆ ಹಣ ನಾಶವಾದಾಗ ಲೋಭಿ ತಾನೇ ನಾಶಹೊಂದಿದಂತೆ ಭಾವಿಸುತ್ತಾನೆ. ಹಾಗೇ ಇದು. ಹೀಗೆ ಸುಷುಪ್ತಿಯಲ್ಲಿ 'ನಾನು' ಇಲ್ಲವಾದರೆ ನಾನು ಸುಖವಾಗಿ ಮಲಗಿದ್ದೆ ಎಂದು ಸ್ಮರಣೆ ಹೇಗೆ?' ಎಂದರೆ ಎಚ್ಚೆತ್ತಾಗ 'ಅನುಗ್ರಹ' ಪುನಃ ಅಹಂಕಾರ ಸಂಬಂಧವಾಯಿತು. ಆಗ ಹೇಳುವ ಮಾತು 'ನಾನು ಸುಖವಾಗಿ ಮಲಗಿದ್ದೆ' ಎಂದು. ವಸ್ತುತಃ ಮಲಗಿದ್ದವನು ನಾನು ಅಲ್ಲ.' ಎಂದು ಹೇಳಿದೆ. ಈ ವ್ಯಾಖ್ಯಾನದಲ್ಲಿಯೂ ಅನುಭವವಿರೋಧವಿದೆ. 'ನಾನೇ ಮಲಗಿದ್ದೆ' ಎಂದೇ ಅನುಭವ ಹೊರತು 'ಹಿಂದೆ ಮಲಗಿದ್ದವನು ನಾನಾಗಿರಲಿಲ್ಲ, ಈಗ ನಾನಾದೆ' ಎಂದು ಅನುಭವವಿಲ್ಲ. ಅದರಿಂದ ಭಾಗವತಕ್ಕೆ ಹೀಗೆ ಅರ್ಥ–

ಯೋ ವಿನಿದ್ರಃ ಸ ಸತ್ಯದೃಕ್ । ಯೋಽನಷ್ಟೋ ನಷ್ಟವನ್ನಾಜ್ಞಾಸಿಷಮಿತಿ ಮನ್ಯಮಾನಃ ಸ ಆತುರೋ ದ್ರಷ್ಟಾ ಜೀವಃ । ಸಾಹಂಕಾರದ್ರವ್ಯಂ ಜೀವಃ । ತಸ್ಯಾವಸ್ಥಾನಮನುಗ್ರಾಹಕಶ್ಚ ಪರಮಾತ್ಮಾ ।

> **ನಿತ್ಯದೃಕ್ ಪರಮಾತ್ಮಾಽಸೌ, ಮೃತವದ್ ಯೋ ನ ಕಿಂಚನ ।**
> **ಜಾನಾತಿ ಜೀವಃ ಸ ಜ್ಞೇಯಃ, ಪರಮಾತ್ಮಾ ತದಾಶ್ರಯಃ ॥**
> **ಇತಿ ಹರಿವಂಶೇಷು ।**

ಈ ಶ್ಲೋಕದಲ್ಲಿ 'ಯಸ್ತತ್ರ ವಿನಿದ್ರೋ ನಿರಹಂಕ್ರಿಯಃ' ಎಂಬುದನ್ನು ಹಿಂದಿನ ಶ್ಲೋಕದ 'ಸತ್ಯದೃಕ್' ಎಂಬುದರೊಡನೆ ಅನ್ವಯಿಸಬೇಕು. ಪ್ರಳಯದಲ್ಲಿ ಭೂತಾದಿ

---

೧. ನನ್ವಹಂಕಾರನಾಶೋಽಪಿ ನ ಪ್ರತೀಯತೇ, ಸ್ಮರಣೇ ಸಾಹಂಕಾರಸ್ಯ ಸ್ಮರಣಾತ್ ಸುಖಮಹಮಸ್ವಾಪ್ಸಮಿತಿ । ನಾಹಂಕಾರನಾಶ ಇತಿ ಚೇತ್ ತತ್ರಾಹ ಸಾಹಂಕಾರಸ್ಯೇತಿ । ಅಹಂಕಾರಸಹಿತಸ್ಯಾತ್ಮನೋ ದ್ರವ್ಯಸ್ಯ ಅವಸ್ಥಾನಂ ಪಶ್ಚಾತ್ ಸ್ಮರಣಮನುಗ್ರಹೋ ಭವತಿ । ಪಶ್ಚಾದಹಂಕಾರಃ ಸಂಬದ್ಧಃ । ಯಥಾ ಸೋಽಯಂ ದೇವದತ್ತಃ ಕುಂಡಲೀತಿ ಪೂರ್ವಂ ಕುಂಡಲಾಪ್ರತೀತಾವಪಿ ಪ್ರತೀಯತೇ । –ವಲ್ಲಭಃ

ಅಭಿಮಾನಿ ಜೀವರೆಲ್ಲರೂ ನಿದ್ದೆಯಿಂದ ಆವೃತರಾಗಿದ್ದಾಗ ಎಚ್ಚೆತ್ತಿರುವ ಅಹಂಕಾರಶೂನ್ಯನಾದ ಚೇತನನೇ ಹಿಂದೆ ಹೇಳಿದ ನಿತ್ಯಸರ್ವಜ್ಞನಾದ ಪರಮಾತ್ಮ ಎಂದರ್ಥ. ಸ್ವರೂಪನಾಶರಹಿತನಾಗಿದ್ದು ಮೃತನಂತೆ ತಾನು ಏನೂ ತಿಳಿಯಲಿಲ್ಲವೆಂದು ಭ್ರಮಿಸುವವನು, 'ಆತುರ ದ್ರಷ್ಟ್ರ' ಎನಿಸುವವನು ಜೀವ. ಪರಮಾತ್ಮನನ್ನು 'ನಿರಹಂಕೃತಿಃ' ಎಂದು ಹೇಳಿರುವುದರಿಂದ ಅದಕ್ಕೆ ವ್ಯತಿರಿಕ್ತವಾಗಿ 'ಸಾಹಂಕಾರಸ್ಯ ದ್ರವ್ಯಸ್ಯ' ಎಂದು ಹೇಳಿದ ಸಾಹಂಕಾರದ್ರವ್ಯವು ಜೀವನೇ. ಅವನಿಗೆ ಆಶ್ರಯನೂ ಅನುಗ್ರಾಹಕನೂ ಆಗಿರುವವನು ಪರಮಾತ್ಮ. ಹೀಗೆ ಭಾಗವತಕ್ಕೆ ಅರ್ಥ ಹೇಳಿದರೆ ಹರಿವಂಶವಚನಕ್ಕೆ ಅದು ಅನುಸಾರಿಯಾಗುವುದು. 'ನಿತ್ಯ ಸರ್ವಜ್ಞನು ಪರಮಾತ್ಮ. ಮೃತನಂತೆ ನಾನೇನೂ ತಿಳಿಯಲಿಲ್ಲವೆಂದು ಭ್ರಮಿಸುವವನು ಜೀವ ಎಂದು ತಿಳಿಯಬೇಕು. ಅವನಿಗೆ ಆಶ್ರಯನು ಪರಮಾತ್ಮ' ಎಂದು ಹರಿವಂಶದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಅಷ್ಟಾವಿಂಶೋಽಧ್ಯಾಯಃ ॥

—o—

ಅಧ್ಯಾಯ–೨೯

ಅಧ್ಯಾಯಸಾರಾಂಶ

ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಾ ಧ್ಯಾನ ಸಮಾಧಿಗಳೆಂದು ಯೋಗ ಎಂಟು ಬಗೆ. ಅವುಗಳಲ್ಲಿ ಮೊದಲಿಗೆ ಪ್ರತ್ಯಾಹಾರದ ವರೆಗಿನ ಯೋಗಗಳು ಅಭ್ಯಾಸದಿಂದ ಕೈಗೂಡಿದ ಬಳಿಕ ಧಾರಣಾ ಮಾಡಬೇಕು. ಅಂದರೆ ಪರಮಾತ್ಮನ ಒಂದೊಂದು ಅವಯವವನ್ನು ಪ್ರತ್ಯೇಕವಾಗಿ ಚಿಂತಿಸಬೇಕು. ಬಳಿಕ ಪೂರ್ಣರೂಪ ಚಿಂತನರೂಪವಾದ ಧ್ಯಾನ. ಈ ಧ್ಯಾನವನ್ನೇ ಅಭ್ಯಾಸಬಲದಿಂದ ಅಪ್ರಯತ್ನವಾಗಿ ಮಾಡಿದಾಗ ಅದು ಸಮಾಧಿ ಎನಿಸುತ್ತದೆ. ಪರಮಾತ್ಮನ ಪೂರ್ಣರೂಪ ಚಿಂತನ ಕಷ್ಟವಾದಾಗ ಮೊದಲಿಗೆ ಅವನ ಪಾದ, ಊರು, ನಿತಂಬ, ನಾಭಿ, ಉದರ, ವಕ್ಷಃಸ್ಥಲ, ಕಂಠ, ಬಾಹುಗಳು, ಅವುಗಳಲ್ಲಿ ಚಕ್ರಶಂಖಗದಾಪದ್ಮಗಳು, ವನಮಾಲೆ, ಕೌಸ್ತುಭ ಮಣಿ, ಮುಖಕಮಲ, ಮುಂಗುರುಗಳು, ಕಣ್ಣುಗಳು, ಹುಬ್ಬುಗಳು, ಕೃಪಾವಲೋಕನ, ಮಂದಹಾಸ, ದಂತಪಂಕ್ತಿಗಳನ್ನು ಕ್ರಮವಾಗಿ ಚಿಂತಿಸಬೇಕು. ಬಳಿಕ ಪೂರ್ಣರೂಪ ಚಿಂತನೆ. ಇದನ್ನು ಅಭ್ಯಾಸ ಮಾಡಿದರೆ, ಧ್ಯಾನಾನಂದಾನುಭವದ ಮುಂದೆ ವಿಷಯಸುಖ ಅಲ್ಪವೆನಿಸುತ್ತದೆ, ಅಪ್ರಯತ್ನವಾಗಿ ಮನಸ್ಸು ವಿಷಯಭೋಗವೆಲ್ಲವನ್ನೂ ಬಿಟ್ಟು ಈಚೆ, ಭಗವಂತನ ಕಡೆಗೇ ಹರಿಯುತ್ತದೆ. ಬಾಹ್ಯಜಡಶರೀರವನ್ನು ಬಿಟ್ಟು ಸ್ವರೂಪಭೂತವಾದ ಚಿನ್ಮಯಶರೀರದಲ್ಲಿಯೇ ಅಭಿಮಾನ ಪಡುತ್ತದೆ. ಇದು ಸಮಾಧಿಯ ಅವಸ್ಥೆ. ಹೀಗೆ ಬಾಹ್ಯಶರೀರದ ಅಭಿಮಾನ ಸರಿದಾಗ ಪರಮಾತ್ಮನನ್ನು ಮರೆಮಾಡುವ ಪರಮಾಚ್ಛಾದಕವೂ ಸರಿಯುತ್ತದೆ. ಪರಮಾತ್ಮನ ಪ್ರತ್ಯಕ್ಷವಾಗುತ್ತದೆ. ಆಗ ಆತ ಜೀವನ್ಮುಕ್ತ. ಅವನಿಗೆ ತನ್ನ ಸುಖದುಃಖಗಳಿಗೆ ತಾನೇ ಕರ್ತನೆಂಬ ಭ್ರಾಂತಿ ಇರುವುದಿಲ್ಲ. ಅಪ್ರಾರಬ್ಧಕರ್ಮವೆಲ್ಲ ನಾಶವಾಗುವುದರಿಂದ ತತ್ಪ್ರಯುಕ್ತ ಶರೀರ ಪ್ರಾಪ್ತಿಯೂ ಇರುವುದಿಲ್ಲ. ಪ್ರಾರಬ್ಧವನ್ನು ಉಂಡು ತೀರಿಸಿದ ಬಳಿಕೆ ಪುನರ್ಜನ್ಮವೇ ಇಲ್ಲ.

* * *

ಅಷ್ಟಾಂಗಯೋಗವನ್ನು ಕಪಿಲನು ಮಾತೆಗೆ ಉಪದೇಶಿಸುವೆನೆನ್ನುತ್ತಾನೆ–

ಶ್ರೀಭಗವಾನುವಾಚ–

ಯೋಗಸ್ಯ ಲಕ್ಷಣಂ ವಕ್ಷ್ಯೇ ಸಬೀಜಸ್ಯ ನೃಪಾತ್ಮಜೇ ।
ಮನೋ ಯೇನೈವ ವಿಧಿನಾ ಪ್ರಸನ್ನಂ ಯಾತಿ ಸತ್ಪಥಮ್ ॥ ೧ ॥

ಭಗವಾನ್‌ಶ್ರೀಹರಿ ನುಡಿದ–
ರಾಜಕುಮಾರಿ, ನಾನು ಇನ್ನು ವಿಷ್ಣೂಪಾಸನರೂಪವಾದ ಯೋಗದ ಲಕ್ಷಣವನ್ನು ಹೇಳುತ್ತೇನೆ. ಈ ಯೋಗದ ಅನುಷ್ಠಾನದಿಂದ ಮನಸ್ಸು ಪ್ರಸನ್ನವಾಗಿ ಪರಮಾತ್ಮಪ್ರಾಪ್ತಿಯ ಮಾರ್ಗದಲ್ಲಿ ಮುನ್ನಡೆಯ ಬಲ್ಲುದು.

ಇಲ್ಲಿ ಸಬೀಜಯೋಗವೆಂದರೆ ಬೇರೆ ವ್ಯಾಖ್ಯಾನಕಾರರ ಪ್ರಕಾರ ಸಾಲಂಬನಯೋಗ. 'ಯತೋಯತೋ ನಿಶ್ಚರತಿ' ಎಂದು ಭಗವದ್ಗೀತೆಯಲ್ಲಿ ಹೇಳಿದ್ದು ನಿರಾಲಂಬನ ಯೋಗ. ಇಲ್ಲಿ ಭಾಗವತದಲ್ಲಿ ಹೇಳುವುದು ಸಾಲಂಬನ ಯೋಗ. ಶುಕದೇವ ವೀರರಾಘವ ವ್ಯಾಖ್ಯಾನ ಪ್ರಕಾರ 'ಬೀಜವೆಂದರೆ ಧ್ಯೇಯವಸ್ತು ಅಥವಾ ಯಮನಿಯಮಾದಿ ಯೋಗಸಾಧನಗಳು' ಆದರೆ ಇದು ಸರಿಯಲ್ಲ. ಧ್ಯೇಯವಸ್ತು ಆಲಂಬನ. ಧ್ಯೇಯವಸ್ತುವಿಲ್ಲದ ಧ್ಯಾನಯೋಗ, ನಿರಾಲಂಬನಯೋಗ ಎಂಬುದುಂಟೆ? ಮತ್ತು ಯಮನಿಯಮಾದಿ ಸಾಧನಗಳಿಲ್ಲದ ಯೋಗವಾದರೂ ಉಂಟೆ?

ಸಬೀಜೋ ವೈಷ್ಣವೋ ಯೋಗೋ ನಿರ್ಬೀಜಸ್ತ್ವನ್ಯದೈವತಃ ।
ಬೀಜಂ ವಿಷ್ಣುರ್ಹಿ ಜಗತಃ ಶಾಖಾದ್ಯಾಶ್ಚಾನ್ಯದೇವತಾಃ ॥
ಇತಿ ಕೌರ್ಮೇ ।

ವಿಷ್ಣೂಪಾಸನರೂಪವಾದ ಯೋಗವು ಸಬೀಜವೆನಿಸುತ್ತದೆ. ಅನ್ಯದೇವೋಪಾಸನೆ ನಿರ್ಬೀಜ ಯೋಗವೆನಿಸುತ್ತದೆ. ಏಕೆಂದರೆ ಜಗತ್ತಿಗೆ ವಿಷ್ಣು ಬೀಜದಂತೆ ಅಭಿವ್ಯಕ್ತಿಕಾರಣ. ಅನ್ಯದೇವತೆಗಳು ಜಗದ್ವೃಕ್ಷದ ಶಾಖೆ ಉಪಶಾಖೆಗಳಂತಿರುವವರು ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

* * *

ಧಾರಣಾ ಧ್ಯಾನ ಸಮಾಧಿಗಳೆಂಬ ಯೋಗದ ಅಂಗಗಳನ್ನು ಕಪಿಲನು ಮಾತೆಗೆ ತಿಳಿಸುತ್ತಾನೆ–

ಸ್ವಧಿಷ್ಣ್ಯಾನಾಮೇಕದೇಶೇ ಮನಸಾ ಪ್ರಾಣಧಾರಣಮ್ ।
ವೈಕುಂಠಲೀಲಾಭಿಧ್ಯಾನಂ ಸಮಾಧಾನಂ ತಥಾಽಽತ್ಮನಃ ॥ ೬ ॥

ಪರಮಾತ್ಮನ ಅವಯವಗಳಲ್ಲಿ ಒಂದೊಂದನ್ನು ಪ್ರತ್ಯೇಕವಾಗಿ ಸ್ಮರಿಸುತ್ತ ಅದರಲ್ಲಿ ಮನಸ್ಸನ್ನೂ ಇಂದ್ರಿಯಗಳನ್ನೂ ನೆಲೆಗೊಳಿಸುವುದು ಧಾರಣಾ ಎನಿಸುತ್ತದೆ. ಒಮ್ಮೆಗೇ ಎಲ್ಲ ಅವಯವಗಳಲ್ಲಿ ಹರಿಯ ಗುಣಗಳನ್ನು ಚೆನ್ನಾಗಿ ಪ್ರಯತ್ನಪೂರ್ವಕವಾಗಿ ಚಿಂತಿಸುವುದು ಧ್ಯಾನ. ಅಪ್ರಯತ್ನವಾಗಿ ಮನಸ್ಸನ್ನು ಹರಿಯಲ್ಲಿ ನೆಲೆಗೊಳಿಸುವುದು ಸಮಾಧಿ ಎನಿಸುವುದು.

ಇಲ್ಲಿ ಧ್ಯಾನ ಸಮಾಧಿಗಳಿಗೆ ಪ್ರತ್ಯೇಕವಾಗಿ ನಿಷ್ಕೃಷ್ಟಲಕ್ಷಣಗಳನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಹೇಳಿಲ್ಲ.

ಸಮಾಧಿರಪ್ರಯತ್ನೇನ ಮನಸಃ ಸಂಸ್ಥಿತಿರ್ಭವೇತ್ ॥ ಇತಿ ಚ ।

ಪ್ರಯತ್ನಪೂರ್ವಕವಾದ ಧ್ಯಾನವು ಧ್ಯಾನವೆನಿಸುತ್ತದೆ. ಅಪ್ರಯತ್ನವಾಗಿ ಧ್ಯಾನಿಸುವುದು ಸಮಾಧಿ ಎನಿಸುತ್ತದೆ ಎಂದೂ ಹೇಳಿದೆ.

* * *

ಸರ್ವಾಂಗ ಧ್ಯಾನದಲ್ಲಿ ಸಾಮರ್ಥ್ಯವಿಲ್ಲದಿದ್ದಾಗ ಒಂದೊಂದು ಅಂಗವನ್ನು ಧ್ಯಾನಿಸಬೇಕೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ತಸ್ಮಿಂಲ್ಲಬ್ಧಪದಂ ಚಿತ್ತಂ ಸರ್ವಾವಯವಸಂಸ್ಥಿತಮ್ ।
ವಿಲೋಕ್ಯೈಕತ್ರ ಸಂಯುಜ್ಯಾದಂಗೇ ಭಗವತೋ ಮುನಿಃ ॥ ೨೦ ॥

ಭಗವಂತನ ಎಲ್ಲ ಅವಯವಗಳಲ್ಲಿ ನೆಲೆನಿಂತ ಚಿತ್ತವು ಏಕಕಾಲದಲ್ಲಿ ಎಲ್ಲ ಅವಯವ ಧ್ಯಾನದಲ್ಲಿ ಅಶಕ್ತವಾಗಿದೆ ಎಂದು ತಿಳಿದರೆ ಅದನ್ನು ಒಂದೊಂದು ಅವಯವದಲ್ಲಿ ನೆಲೆಗೊಳಿಸಬೇಕು.

ಇಲ್ಲಿ ಎಲ್ಲ ಅವಯವಗಳಲ್ಲಿ ನೆಲೆನಿಂತ ಚಿತ್ತವನ್ನು ಒಂದು ಅವಯವದಲ್ಲಿ ನೆಲೆಗೊಳಿಸಬೇಕೆಂದು ಭಾಗವತ ಹೇಳುತ್ತಿದೆ. ಏಕೆ? ಸರ್ವಾವಯವಧ್ಯಾನವನ್ನೇ ಏಕೆ ಮಾಡಬಾರದು? ಎಂಬ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರು ಸಮಾಧಾನ ನೀಡುವುದಿಲ್ಲ. ಹಿಂದೆ ಹದಿನೆಂಟನೇ ಶ್ಲೋಕದಲ್ಲಿ 'ಯಾವನ್ನ ಚ್ಯವತೇ ಮನಃ' ಎಲ್ಲ ಅವಯವಗಳನ್ನು ಧ್ಯಾನಿಸ ತೊಡಗಿದ ಮನಸ್ಸು ವಿಚಲಿತವಾಗದ ತನಕ ಧ್ಯಾನವನ್ನು ಮುಂದುವರಿಸಬೇಕು' ಎಂದಿದೆ. ವಿಚಲಿತವಾದರೆ ಏನು ಮಾಡಬೇಕು? ಎಂಬ ಪ್ರಶ್ನೆಗೂ ಉತ್ತರವಿಲ್ಲ. ಧ್ಯಾನಮಾಡುವುದನ್ನೇ ನಿಲ್ಲಿಸಬೇಕೆ? ಇದಕ್ಕೆ ಹೀಗೆ ಉತ್ತರ–

ಸರ್ವಸ್ಮರಣಾಶಕ್ತಾವೇಕಾಂಗೇ । ಯಾವನ್ನ ಚ್ಯವತೇ ಮನ ಇತ್ಯುಕ್ತತ್ವಾತ್ ।

ಸರ್ವಂ ಸ್ಮರ್ತುಮಶಕ್ತಃ ಸನ್ನೇಕಾಂಗೇ ಚಿಂತಯೇದ್ ಬುಧಃ ॥

ಇತಿ ಚ ।

ಸರ್ವಾವಯವ ಚಿಂತನೆಯಲ್ಲಿ ಅಶಕ್ತಿ ಕಂಡು ಬಂದರೆ ಏಕಾವಯವ ಚಿಂತನಮಾಡಬೇಕು ಎನ್ನುವುದು ಶ್ಲೋಕದ ಅಭಿಪ್ರಾಯ. ಏಕೆಂದರೆ ಮನಸ್ಸು ವಿಚಲಿತವಾಗದ ತನಕ ಸರ್ವಾವಯವಧ್ಯಾನ ಮಾಡಬೇಕು ಎಂದು ಹಿಂದೆ (೧೮ನೇ ಶ್ಲೋಕದಲ್ಲಿ) ಹೇಳಿದೆ. ಅರ್ಥಾತ್ ವಿಚಲಿತವಾಗುತ್ತಿದ್ದರೆ ಏಕಾವಯವಧ್ಯಾನ ಮಾಡಬೇಕು ಹೊರತು ಧ್ಯಾನವನ್ನೇ ನಿಲ್ಲಿಸುವುದಲ್ಲ ಎಂದು ಹೇಳಿದಂತಾಗಿದೆ. ಮತ್ತು 'ಎಲ್ಲ ಅವಯವಗಳನ್ನು ಧ್ಯಾನಿಸಲು ಅಶಕ್ತನಾದಾಗ ಸಾಧಕನು ಒಂದು ಅವಯವವನ್ನು ಧ್ಯಾನಿಸಬೇಕು' ಎಂದೂ ಹೇಳಿದೆ.

* * *

ಭಗವಂತನ ಅವಯವ ಚಿಂತನೆಯಲ್ಲಿ ಗದೆ ವನಮಾಲೆ ಮತ್ತು ಕೌಸ್ತುಭಮಣಿಗಳ ಚಿಂತನಕ್ರಮವನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ಕೌಮೋದಕೀಂ ಭಗವತೋ ದಯಿತಾಂ ಸ್ಮರೇತ
ದಿಗ್ಧಾಮರಾತಿಭಟಶೋಣಿತಕರ್ದಮೇನ ।
ಮಾಲಾಂ ಮಧುವ್ರತವರೂಥಗಿರೋಪಘುಷ್ಟಾಂ
ಚೈತ್ತ್ಯಸ್ಯ ತತ್ತ್ವಮಮಲಂ ಮಣಿಮಸ್ಯ ಕಂಠೇ ॥ ೨೭ ॥

ಶತ್ರುಯೋಧರ ನೆತ್ತರಿನಿಂದ ಒದ್ದೆಯಾಗಿರುವ, ಭಗವಂತನಿಗೆ ಪ್ರಿಯವಾಗಿರುವ ಕೌಮೋದಕೀಗದೆಯನ್ನೂ ದುಂಬಿಗಳ ಹಿಂಡುಗಳ ಝೇಂಕಾರದಿಂದ ತುಂಬಿದ ವನಮಾಲೆಯನ್ನೂ, ಅವನ ಕೊರಳಲ್ಲಿ ಶೋಭಿಸುವ, ಚತುರ್ಮುಖನ ಸ್ವರೂಪವಾದ ಕೌಸ್ತುಭಮಣಿಯನ್ನೂ ಧ್ಯಾನಿಸಬೇಕು.

ಇಲ್ಲಿ 'ಮಣಿಮಸ್ಯ ಕಂಠೇ' ಎಂದರೆ ಹಿಂದೆ 'ಕಂಠಂ ಚ ಕೌಸ್ತುಭಮಣೇ ರಧಿಭೂಷಣಾರ್ಥಂ' ಎಂದು ಹೇಳಿದಂತೆ ಕೌಸ್ತುಭಮಣಿ. ಅದು ಭಗವಂತನ ಕೊರಳಿಗೆ ಭೂಷಣವಾಗಿ ಅದರ ಶೋಭೆಯನ್ನು ಹೆಚ್ಚಿಸುವುದಲ್ಲ. ಅದಕ್ಕೇ ಶೋಭೆಯನ್ನು ಹೆಚ್ಚಿಸುವುದು ಕೊರಳು ಎಂದೂ ಹಿಂದೆ ಹೇಳಿದೆ. ಈ ಕೌಸ್ತುಭಮಣಿಯ ಸ್ವರೂಪವೇನು? ಬೇರೆ ವ್ಯಾಖ್ಯಾನಕಾರರ ಪ್ರಕಾರ ಚೈತ್ತ್ಯಸ್ಯ ತತ್ತ್ವಂ–ಸಮಷ್ಟಿಜೀವಸ್ವರೂಪ. ಅಂದರೆ ಅದರ ಅನಂತ ಕಿರಣಗಳೇ ಅನಂತಜೀವರು ಎಂದು ವಿಶ್ವನಾಥವ್ಯಾಖ್ಯಾನ. ಜೀವರ ಮೂಲಸ್ವರೂಪಭೂತನಾದ ಪರಮಾತ್ಮನೆ

ಕೌಸ್ತುಭರೂಪನಾಗಿದ್ದಾನೆ ಎಂದು [1]ಜೀವಗೋಸ್ವಾಮಿ ರಾಧಾರಮಣದಾಸ ವ್ಯಾಖ್ಯಾನಗಳು. ಜೀವರಲ್ಲಿ ನಿಯಾಮಕನಾದ ದೇವತೆ ತಾನೇ ಕೌಸ್ತುಭರೂಪನೆಂದು ವೀರರಾಘವವ್ಯಾಖ್ಯಾನ. ಆದರೆ ಇವರೆಲ್ಲರೂ 'ಚೈತ್ಯ' ಎಂದರೆ ಸಾಮಾನ್ಯವಾಗಿ ಜೀವ ಎಂದಿಷ್ಟೇ ಅರ್ಥವಿಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ವಸ್ತುತಃ ಚಿತ್ತಾಭಿಮಾನಿಯಾಗಿ ಚೈತ್ಯನೆನಿಸಿದವನು ಚತುರ್ಮುಖಬ್ರಹ್ಮ. ಅವನು ಕೌಸ್ತುಭ ಮಣಿಗೆ ಅಭಿಮಾನಿ. ಅದರಿಂದ ಭಗವಂತನ ಕೊರಳು ಕೌಸ್ತುಭಕ್ಕೆ ಹೆಚ್ಚಿನ ಶೋಭೆ ತರುತ್ತದೆ. ಇದು ಭಾಗವತತಂತ್ರದಲ್ಲಿ ಸ್ಪಷ್ಟವಿದೆ–

ಬ್ರಹ್ಮಾ ಚಿತ್ತಾಭಿಮಾನೇನ ಚೈತ್ಯಸ್ತನ್ನಿಯಮಾದ್ಧರಿಃ ।
ಸ ಚ ಬ್ರಹ್ಮಾ ಹರೇಃ ಕಂಠೇ ಕೌಸ್ತುಭತ್ವೇನ ಭಾಸತೇ ॥
ಇತಿ ಭಾಗವತತಂತ್ರೇ ।

ಚಿತ್ತಾಭಿಮಾನಿಯಾದ್ದರಿಂದ ಬ್ರಹ್ಮನು ಚೈತ್ಯನೆನಿಸುತ್ತಾನೆ. ಚಿತ್ತನಿಯಾಮಕನಾದ್ದರಿಂದ ಹರಿಯೂ ಚೈತ್ಯನೆನಿಸಿದ್ದಾನೆ. ಆ ಬ್ರಹ್ಮನು ಹರಿಯ ಕಂಠದಲ್ಲಿ ಕೌಸ್ತುಭಮಣಿಯಾಗಿ ಶೋಭಿಸುತ್ತಾನೆ ಎಂದು ಭಾಗವತತಂತ್ರದಲ್ಲಿ ಹೇಳಿದೆ.

ಹಿಂದಿನ ಅಧ್ಯಾಯದಲ್ಲಿ 'ಚಿತ್ತೇನ ಹೃದಯಂ ಚೈತ್ಯಃ ಕ್ಷೇತ್ರಜ್ಞಃ ಪ್ರಾವಿಶದ್ ಯದಾ'(ಶ್ಲೋ.೭೩) ಎಂಬಲ್ಲಿ 'ಚೈತ್ಯ' ಎಂದರೆ ಚಿತ್ತನಿಯಾಮಕ ಪರಮಾತ್ಮ, 'ಚಿತ್ತ' ಎಂದರೆ ಅದರ ಅಭಿಮಾನಿಬ್ರಹ್ಮ ಎಂದು ವಿವಕ್ಷಿತವಾಗಿದೆ. ಪರಮಾತ್ಮನು 'ಚೈತ್ಯ' ಎನ್ನುವ ವಿಷಯದಲ್ಲಿ ಈ ಭಾಗವತತಂತ್ರವಚನ ಆಧಾರವಾಗಿದೆ.

* * *

---

೧. ಜೀವಸ್ಯ ತತ್ತ್ವಂ ಮಹಾಸಮಷ್ಟಿರೂಪಸ್ಯ ತಸ್ಯಾವಿರ್ಭಾವಾಸ್ಪದಂ । ಮಹಾಪುರುಷಸ್ಯೈವಾವಿರ್ಭಾವವಿಶೇಷ ಇತ್ಯರ್ಥಃ । –ಜೀವಗೋಸ್ವಾಮೀ

ಚೈತ್ತೇ ಭಗವತ್ಯಾವಿರ್ಭವತೀತಿ ಚೈತ್ಯಶಬ್ದೇನ ಸರ್ವತ್ರ ಯದ್ಯಪಿ ಪರಮಾತ್ಮೈವೋಚ್ಯತೇ । ತದಪ್ಯತ್ರ ತಚ್ಛಕ್ತಿತ್ವಾಜ್ಜೀವಾತ್ಮೈವೋಚ್ಯತೇ । ಚೈತ್ಯಸ್ಯ ಜೀವಸ್ಯ ಜೀವಶಕ್ತೇಸ್ತತ್ತ್ವಂ । ತದುಕ್ತಂ ವೈಷ್ಣವೇ 'ಆತ್ಮಾನಮಸ್ಯ ಜಗತೋ ನಿರ್ಲೇಪಮಗುಣಾಮಲಂ । ಬಿಭರ್ತಿ ಕೌಸ್ತುಭಮಣಿಂ ಸ್ವರೂಪಂ ಭಗವಾನ್ ಹರಿಃ' ಇತಿ । ಕೌಸ್ತುಭಸ್ಯೈವಾನಂತಾಃ ಕಿರಣಾ ಜೀವಾ ಇತಿ ಭಾವಃ । –ವಿಶ್ವನಾಥಃ

ಚೈತ್ಯಸ್ಯ ಜೀವಸ್ಯ ತತ್ತ್ವಂ ಸ್ವರೂಪಂ ಜೀವಸ್ವರೂಪಾಧಿಷ್ಠಾತೃದೇವತಾ ರೂಪಮಿತ್ಯರ್ಥಃ – ವೀರರಾಘವಃ

ಭಗವಂತನ ಮುಖಕಮಲವನ್ನು ಧ್ಯಾನಿಸುವ ಬಗೆ ಹೀಗೆಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ—

ಯಚ್ಛ್ರೀನಿಕೇತಮಲಿಭಿಃ ಪರಿಸೇವ್ಯಮಾನಂ
ಭೂತ್ಯಾ ಸ್ವಯಾ ಕುಟಿಲಕುಂತಲವೃಂದಜುಷ್ಟಮ್ ।
ಮೀನದ್ವಯಶ್ರಿಯಮಧಿಕ್ಷಿಪದಬ್ಜನೇತ್ರಂ
ಧ್ಯಾಯೇನ್ಮನೋಮಯಮತಂದ್ರಿತ ಉಲ್ಲಸದ್ಭ್ರು ॥ ೨೯ ॥

ಭಗವಂತನ ಮುಖಕಮಲವು ಅವನ ಸ್ವರೂಪಭೂತ ಶೋಭೆಗೆ ಆಕರವಾಗಿದೆ. ಸುತ್ತಲೂ ದುಂಬಿಗಳು ಸೇವಿಸುತ್ತಿವೆ. ಸ್ವಾಭಾವಿಕ ಶೋಭೆಯಿಂದ ವಕ್ರವಾದ ಮುಂಗುರುಳುಗಳಿಂದ ಶೋಭಿಸುತ್ತಿದೆ. ಎರಡು ಮೀನುಗಳ ಸೊಬಗನ್ನು ಧಿಕ್ಕರಿಸುವ ಕಮಲದಂಥ ಕಣ್ಣುಗಳಿಂದ ಕೂಡಿದೆ. ಸುಂದರವಾದ ಹುಬ್ಬುಗಳಿಂದ ಯುಕ್ತವಾಗಿದೆ. ಮನೋಹರವಾದ ಇಂಥ ಮುಖಕಮಲವನ್ನು ಆಲಸ್ಯ ತೊರೆದು ನಿರಂತರ ಧ್ಯಾನಿಸಬೇಕು.

---

[೧]ಇಲ್ಲಿ 'ಶ್ರೀನಿಕೇತಂ' ಲಕ್ಷ್ಮಿಯ ವಾಸಸ್ಥಾನ ಭಗವಂತನ ಮುಖಕಮಲ ಎಂದಿದೆ. ಆದರೆ ಲಕ್ಷ್ಮಿ ಭಗವಂತನ ಎದೆಯಲ್ಲಿ ವಾಸಿಸುವುದು ಪ್ರಸಿದ್ಧವಾಗಿದೆ. ಇಲ್ಲಿಯೂ ಹಿಂದೆ ೨೬ನೇ ಶ್ಲೋಕದಲ್ಲಿ 'ವಕ್ಷೋಽಧಿವಾಸಮೃಷಭಸ್ಯ ಮಹಾವಿಭೂತೇಃ' ಮಹಾಲಕ್ಷ್ಮಿಯ ವಾಸಸ್ಥಾನವಾದ ಭಗವಂತನ ಎದೆಯನ್ನು ಧ್ಯಾನಿಸಬೇಕೆಂದಿದೆ. ಬೇರೆ ವ್ಯಾಖ್ಯಾನಕಾರರು 'ಶ್ರೀನಿಕೇತಂ ಅಧಿಕ್ಷಿಪತ್' ಲಕ್ಷ್ಮಿಯ ವಾಸಸ್ಥಾನವಾದ ಕಮಲವನ್ನು ನಾಚಿಸುವಂಥ ಭಗವಂತನ ಮುಖಕಮಲವೆಂದು ಅನ್ವಯಿಸಿದ್ದಾರೆ. 'ಮೀನದ್ವಯಶ್ರಿಯಂ ಅಧಿಕ್ಷಿಪತ್' ಎಂದು ಅನ್ವಯವಿಟ್ಟುಕೊಂಡಿಲ್ಲ. 'ಮೀನದ್ವಯಾಶ್ರಯಂ' ಎಂದು ಕೆಲವರ ಪಾಠ. ಮೀನಿನಂಥ ಎರಡು ಕಣ್ಣುಳ್ಳ ಮುಖ ಎಂದರ್ಥ. ಆದರೆ ಈ ಪಾಠದಲ್ಲಿ 'ಅಬ್ಜನೇತ್ರಂ' ಕಮಲದಂಥಕಣ್ಣುಳ್ಳ, 'ಮೀನದ್ವಯ' ಮೀನಿನಂಥ ಎರಡು ಕಣ್ಣುಳ್ಳ ಎಂದು ಎರಡು ಉಪಮಾನಗಳನ್ನು

---

೧. ಮೀನದ್ವಯಾಶ್ರಯಂ ಚ ಶ್ರೀನಿಕೇತಂ ಪದ್ಮಮಧಿಕ್ಷಿಪದ್ ವರ್ತತೇ ತದ್ ಧ್ಯಾಯೇತ್ । ತತ್ರ ಕುಂತಲೈರಲೀನಾಮಧಿಕ್ಷೇಪಃ । ನೇತ್ರದ್ವಯೇನ ಮೀನದ್ವಯಸ್ಯೇತಿ ದ್ರಷ್ಟವ್ಯಂ । ಅಬ್ಜೇ ಇವ ನೇತ್ರೇ ಯಸ್ಮಿನ್ನಿತ್ಯುಪಮಾನಾಂತರಂ ।
—ಶ್ರೀಧರಃ

ಯತ್ ಖಲು ಶ್ರೀಕೇತಸರ್ವೋತ್ಕೃಷ್ಟಾಬ್ಜಾಂತರಮಧಿಕ್ಷಿಪದ್ ವರ್ತತೇ ತದಬ್ಜಾಕಾರಂ ನೇತ್ರಂ ಧ್ಯಾಯೇತ್ । ಅತ್ರ ನೇತ್ರಸ್ಯಾಬ್ಜತ್ವೇ ಶೋಭಾವಿಶೇಷಾಪೋಷಾದೇವಂ ವ್ಯಾಖ್ಯಾಯತೇ ।
—ಜೀವಗೋಸ್ವಾಮೀ

ಹೇಳುವುದು ಮನೋಜ್ಞವಾಗುವುದಿಲ್ಲ. ಮುಖವು ಕಮಲದ ಕಾಂತಿಯನ್ನು ಧಿಕ್ಕರಿಸುತ್ತದೆ. ಕಣ್ಣು ಮಾತ್ರ ಕಮಲದಂತೆಯೇ ಇದೆ ಎಂದರೆ ಕಣ್ಣಿನ ಶೋಭೆ ಕಡಿಮೆ ಎಂದೂ ಹೇಳಿದಂತಾಗುವುದು. ಯಾವ ಮುಖವು ಕಮಲವನ್ನು ಧಿಕ್ಕರಿಸುವುದೋ ಅದೇ ಮುಖದಲ್ಲಿ ಕಮಲದಂಥ ಕಣ್ಣಿಗೆ ಆಸರೆ ಸಿಗುವುದೂ ಉಚಿತವಲ್ಲ. 'ಮೀನದ್ವಯ' ಎಂಬಲ್ಲಿ ದುಂಬಿಗಳಿಂದ ಕೂಡಿದ ಕಮಲದೊಳಗೆ ಎರಡು ಮೀನುಗಳೆಂಬ ಕಲ್ಪನೆಯೂ ಹೃದ್ಯವಾಗಿಲ್ಲ. ಈ ಸಮಸ್ಯೆಯನ್ನು ಜೀವಗೋಸ್ವಾಮಿ ವ್ಯಾಖ್ಯಾನ ಒಪ್ಪಿಕೊಂಡು ಈ ಶ್ಲೋಕದಲ್ಲಿ ಭಗವಂತನ ಮುಖಧ್ಯಾನವಲ್ಲ, ನೇತ್ರಧ್ಯಾನ ವರ್ಣಿತವಾಗಿದೆ ಎಂದಿದೆ. ಅದರಿಂದ 'ಮೀನದ್ವಯಶ್ರಿಯಂ' ಎಂಬ ಪಾಠ ಉತ್ತಮ. ಆಗ 'ಶ್ರೀನಿಕೇತಂ' ಎಂಬುದಕ್ಕೆ ಹೀಗೆ ಅರ್ಥ–

ಸಾಕ್ಷಾತ್ ಶ್ರೀಸ್ತು ಹರೇ ರೂಪಮಿಂದಿರಾ ತು ತದಾಶ್ರಯಾತ್ ।

ಇತಿ ಚ ।

'ಶ್ರೀಶಬ್ದದ ಮುಖ್ಯಾರ್ಥ ಹರಿಯ ಸ್ವರೂಪಭೂತವಾದ ಶೋಭೆಯೇ, ಲಕ್ಷ್ಮಿಯಲ್ಲ. ಆ ಶೋಭೆಯ ಸನ್ನಿಧಾನದಿಂದಲೇ ಲಕ್ಷ್ಮಿಯೂ ಶ್ರೀಎನಿಸಿದ್ದಾಳೆ.' ಎಂದೂ ಭಾಗವತತಂತ್ರದಲ್ಲಿ ಹೇಳಿದೆ.

ಭಗವಂತನ ಎದೆಯು ಶ್ರೀ ಎನಿಸುವ ಲಕ್ಷ್ಮಿಯ ವಾಸಸ್ಥಾನ. ಅದರಿಂದ ಭಗವಂತ ಶ್ರೀನಿವಾಸ ಎನಿಸಿದ್ದಾನೆ, ನಿಜ, ಆದರೆ ಅವನ ಮುಖವೂ ಅವನ ಸ್ವರೂಪಭೂತ ಸೌಂದರ್ಯವೆಂಬ ಶ್ರೀಗೆ ವಾಸಸ್ಥಾನವಾಗಿದೆ. ಅಥವಾ 'ಶ್ರೀನಿಕೇತಂ' ಎಂದರೆ ಶೋಭೆಗೆ ಆಶ್ರಯ. ಶೋಭೆಸ್ವರೂಪಭೂತವೆ. ಅದನ್ನು ಬೇರೆಹೇಳಬೇಕಾಗಿಲ್ಲ. 'ಭೂತ್ಯಾ ಸ್ವಯಾ ಪರಿಸೇವ್ಯಮಾನಂ' ಎಂಬಲ್ಲಿ ಭೂತಿ ಎಂದರೇನು? ಸ್ವರೂಪಶೋಭೆಯನ್ನು 'ಶ್ರೀನಿಕೇತಂ' ಎಂಬಲ್ಲಿ ಹೇಳಿಯಾಗಿದೆ. ಲಕ್ಷ್ಮಿಯನ್ನೂ ಎದೆಯಲ್ಲಿ ಧ್ಯಾನಿಸಬೇಕೆಂದು ಹೇಳಿಯಾಗಿದೆ. ಅದರಿಂದ 'ಹರೇ ರೂಪಂ' ಹರಿಯ ಸ್ತ್ರೀರೂಪವಿಟ್ಟುಕೊಳ್ಳಬೇಕು. ಅದೇ ಮುಖ್ಯವಾಗಿ ಶ್ರೀ, ಭೂತಿ ಎಂದೆಲ್ಲ ಕರೆಸಿಕೊಳ್ಳುತ್ತದೆ. ಸ್ವರಮಣವಾದ್ದರಿಂದ ಅವನು ತನ್ನ ಮುಖವನ್ನು ಸ್ತ್ರೀರೂಪದಿಂದ ಸೇವಿಸುತ್ತಾನೆ. 'ಸ್ವಯಾ' ಎಂಬ ವಿಶೇಷಣ 'ತನ್ನ ಸ್ತ್ರೀರೂಪ' ಎಂದು ತಿಳಿಸುತ್ತದೆ. ಈ ಸ್ತ್ರೀರೂಪ ಲಕ್ಷ್ಮಿಯಲ್ಲಿರುವುದರಿಂದ ಅವಳೂ ಅಮುಖ್ಯವಾಗಿ ಶ್ರೀ ಭೂತಿ ಎಂದೆಲ್ಲ ಕರೆಸಿ ಕೊಳ್ಳುತ್ತಾಳೆ.

* * *

ಭಗವಂತನ ಮಂದಹಾಸದ ಧ್ಯಾನವಾದ ಬಳಿಕ ಅವನ ಚೆಂದುಟಿ ದಂತಪಂಕ್ತಿಗಳನ್ನೂ ಅವುಗಳಿಂದ ಶೋಭಿಸುವ ಅವನ ಸರ್ವಾಂಗಯುಕ್ತವಾದ ಶರೀರವನ್ನೂ ಧ್ಯಾನಿಸಬೇಕೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ಧ್ಯಾನಾಯನಂ ರಹಸಿ ತದ್ ಬಹಲಾಧರೋಷ್ಠ–
ಭಾಸಾಽರುಣಾಯಿತತನುದ್ವಿಜಕುಂದಪಂಕ್ತಿ ।
ಧ್ಯಾಯೇತ್ ಸ್ವದೇಹಕುಹರೇಽವಸಿತಸ್ಯ ವಿಷ್ಣೋ–
ರ್ಭಕ್ತ್ಯಾಽಽರ್ದ್ರಯಾಽರ್ಪಿತಮನಾ ನ ಪೃಥಗ್ ದಿದೃಕ್ಷೇತ್॥೩೨॥

ಭಗವಂತನು ನಗುವಾಗ ಅವನ ಚೆಂದುಟಿಗಳ ಕೆಂಬಣ್ಣದ ಕಾಂತಿ ಕುಂದಪುಷ್ಪದ ಮೊಗ್ಗಿನಂಥ ಹಲ್ಲುಗಳ ಸಾಲುಗಳ ಮೇಲೆ ಬಿದ್ದು ಅವುಗಳನ್ನು ಕೆಂಪಾಗಿಸುವುದು. ಧ್ಯಾನಗೋಚರವಾದ ಭಗವಂತನ ಸಮಗ್ರ ಆಕಾರವನ್ನು ಹೃದಯಗುಹೆಯಲ್ಲಿ ಪ್ರೇಮರಸಪೂರ್ಣವಾದ ಭಕ್ತಿಯಿಂದ ಇರಿಸಿಕೊಂಡು ಏಕಾಂತದಲ್ಲಿ ಧ್ಯಾನಿಸಬೇಕು. ಬೇರೇನನ್ನೂ ಆಲೋಚಿಸಬಾರದು.

[೧]ಇಲ್ಲಿ 'ನ ಪೃಥಗ್ ದಿದೃಕ್ಷೇತ್' ಎಂದರೆ ಹಿಂದೆ 'ನಾಪಶ್ಯಮುಭಯಂ ಮುನೇ' (೧.೬.೨೧) ಎಂದು ಹೇಳಿದಂತೆ ಧ್ಯೇಯನಾದ ಭಗವಂತನ ಧ್ಯಾನಮಾಡುವ ತಾನು ಈ ಇಬ್ಬರನ್ನು ಅಂದರೆ ತನ್ನನ್ನು ಮತ್ತು ಭಗವಂತನನ್ನು ಬೇರೆಯಾಗಿ ಕಾಣುವುದಿಲ್ಲವೆಂದರ್ಥ ಶುಕದೇವ ವ್ಯಾಖ್ಯಾನದಲ್ಲಿ ಹೇಳಿದೆ. ವಲ್ಲಭವ್ಯಾಖ್ಯಾನದಲ್ಲಿ ಅಪೃಥಗ್‌ದರ್ಶನವೆಂದರೆ ಆತ್ಮನಿವೇದನ ಎಂದಿದೆ. ವಸ್ತುತಃ ಸಾಕಾರನಾದ ಭಗವಂತನನ್ನು ಭಕ್ತ ಧ್ಯಾನಿಸುವುದು ದ್ವೈತೋಪಾಸನೆ. ಅದರಲ್ಲಿ ಅದ್ವೈತಕ್ಕೆ ಅವಕಾಶವಿಲ್ಲ.

"ನ ಪೃಥಗ್ ದಿದೃಕ್ಷೇತ್ । ತಮೇವ ದಿದೃಕ್ಷೇದಿತ್ಯರ್ಥಃ ।

'ನ ಪೃಥಗ್ ದಿದೃಕ್ಷೇತ್' ಎಂದರೆ ಭಗವಂತನನ್ನೇ ನೋಡಲು ಬಯಸಬೇಕು, 'ಪೃಥಕ್' ಬೇರೆ ಯಾವುದನ್ನೂ ಅಲ್ಲ ಎಂದರ್ಥ.

* * *

೧. ನ ಪೃಥಗ್ ದಿದೃಕ್ಷೇತ್ ಧ್ಯೇಯಂ ಧ್ಯಾತಾರಂ ಚ ನ ಪಶ್ಯತೀತ್ಯರ್ಥಃ । ಆನಂದಸಂಪ್ಲವೇ ಲೀನತ್ವಾತ್ । ತದುಕ್ತಂ ಪ್ರಥಮೇ 'ಆನಂದಸಂಪ್ಲವೇ ಲೀನೋ ನಾಪಶ್ಯಮುಭಯಂ ಮುನೇ' ಇತಿ – ಶುಕದೇವಃ

ಅಪೃಥಗ್ ದರ್ಶನಂ ಚಾತ್ಮನಿವೇದನಂ । –ವಲ್ಲಭಃ

ಧ್ಯಾನಾನಂತರ ಮಾಡಬಹುದಾದ ಸಮಾಧಿಯ ಬಗೆಯನ್ನೂ ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ಏವಂ ಹರೌ ಭಗವತಿ ಪ್ರತಿಲಬ್ಧಭಾವೋ
ಭಕ್ತ್ಯಾ ದ್ರವದ್ಧೃದಯ ಉತ್ಪುಲಕಪ್ರಮೋದಃ ।
ಔತ್ಕಂಠ್ಯಬಾಷ್ಪಕಲಯಾ ಮುಹುರರ್ದ್ಯಮಾನ–
ಸ್ತಚ್ಚಾಪಿ ಚಿತ್ತಬಡಿಶಂ ಶನಕೈರ್ವಿಯುಂಕ್ತೇ ॥ ೩೩ ॥

ಹೀಗೆ ಹರಿಯಲ್ಲಿ ಮನಸ್ಸಿನ ಏಕಾಗ್ರತೆ ಪಡೆದವನು ಭಕ್ತಿರಸದಿಂದ ಆರ್ದ್ರವಾದ ಚಿತ್ತ, ಮೈಯಲ್ಲಿ ರೋಮಾಂಚ ಹರ್ಷ, ಉತ್ಕಂಠತೆಯಿಂದ ಕಣ್ಣುಗಳಲ್ಲಿ ಆನಂದ ಬಾಷ್ಪ ಇವುಗಳಿಂದ ಕೂಡಿ ತನ್ನ ವಶದಲ್ಲಿಯೇ ಇರುವ ಮನಸ್ಸನ್ನು ನಿಧಾನವಾಗಿ ಅಭ್ಯಾಸಬಲದಿಂದ ಅಪ್ರಯತ್ನವಾಗಿಯೇ ಭಗವಂತನಲ್ಲಿ ನಿಲ್ಲಿಸುತ್ತಾನೆ. ಇದೇ ಸಮಾಧ್ಯವಸ್ಥೆ. ಮೀನನ್ನು ಹಿಡಿಯಲು ಗಾಳವನ್ನು ಉಪಯೋಗಿಸುವಂತೆ ಭಗವಂತನನ್ನು ವಶಪಡಿಸಿಕೊಳ್ಳಲು ಮನಸ್ಸೊಂದೇ ಸಾಧನ.

ಇಲ್ಲಿ 'ಚಿತ್ತಬಡಿಶಂ ವಿಯುಂಕ್ತೇ' ಎಂದರೆ ಮನಸ್ಸನ್ನು ಭಗವಂತನಿಂದ ವಿಯೋಗಗೊಳಿಸುತ್ತಾನೆ ಎಂದು [೧]ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಸಬೀಜಯೋಗವೆಂದರೆ ಇಷ್ಟರವರೆಗೆ ಹೇಳಿದ ಪರಮಾತ್ಮಧ್ಯಾನ. ಇದಾದ ಬಳಿಕ ಈಗ ನಿರ್ಬೀಜಯೋಗ. ಸಬೀಜಯೋಗ ಸುಲಭ, ಅಪ್ರಯತ್ನವಾಗಿ ಮಾಡಲು ಸಾಧ್ಯ. ಇದನ್ನು ಅಭ್ಯಾಸಮಾಡಿ ಭಗವಂತನಲ್ಲಿ ಮನಸಿನ ಏಕಾಗ್ರತೆ ಸಂಪಾದಿಸಿದ ಮೇಲೆ 'ಯತೋಯತೋ ನಿಶ್ಚರತಿ ಮನಃ' ಎಂದು ಭಗವದ್ಗೀತೆಯಲ್ಲಿ ಹೇಳಿದ ನಿರ್ಬೀಜಯೋಗಕ್ಕಾಗಿ ಮನಸ್ಸನ್ನು ಭಗವಂತನಿಂದ ಈಚೆ ತರಬೇಕು. 'ತಸ್ಯಾಪಿ ನಿರೋಧೇ ಸರ್ವನಿರೋಧಾನ್ನಿರ್ಬೀಜಃ ಸಮಾಧಿಃ'(ಪಾತಂಜಲ ಯೋಗಸೂತ್ರ ೧.೫೧) ಸಬೀಜಸಮಾಧಿಯನ್ನು ನಿರೋಧಮಾಡಿದಾಗ ಎಲ್ಲ ಚಿತ್ತವೃತ್ತಿಗಳೂ ತಮ್ಮ ಕಾರಣದಲ್ಲಿ ಲಯಹೊಂದಿ ಸಂಸ್ಕಾರಮಾತ್ರರೂಪವಾದ ವೃತ್ತಿ ಉದಿಸುತ್ತದೆ. ಆತ್ಮಸ್ವರೂಪ ಮಾತ್ರ ಕಾಣುತ್ತದೆ. ಇದೇ ನಿರ್ಬೀಜಸಮಾಧಿ ಎಂದು ಹೇಳುತ್ತಾರೆ.

೧. ನಿರ್ಬೀಜೋ ನಿರಾಲಂಬನಃ । ಸಬೀಜಃ ಸಾಲಂಬನಃ । ತಾವೇವಾ ಸಂಪ್ರಜ್ಞಾತಸಂಪ್ರಜ್ಞಾತೌ ಸ್ತಃ । 'ತಸ್ಯಾಪಿ ನಿರೋಧೇ ಸರ್ವನಿರೋಧಾನ್ನಿರ್ಬೀಜಃ ಸಮಾಧಿಃ' ತಸ್ಯ ಸಂಪ್ರಜ್ಞಾತಸ್ಯ ನಿರೋಧೇ ಪ್ರವಿಲಯೇ ಸತಿ ಸರ್ವಾಸಾಂ ಚಿತ್ತವೃತ್ತೀನಾಂ ಸ್ವಕಾರಣೇ ಪ್ರವಿಲಯಾದ್ ಯಾಯಾ ಸಂಸ್ಕಾರಮಾತ್ರಾ ವೃತ್ತಿರುದೇತಿ ತಸ್ಯಾಂತಸ್ಯಾಂ ನೇತಿನೇತೀತಿ ಪರ್ಯುದಾಸಾನ್ನಿರ್ಬೀಜಃ ಸಮಾಧಿರಾವಿರ್ಭವತಿ । ಯಸ್ಮಿನ್ ಸತಿ ಪುರುಷಃ ಸ್ವರೂಪಮಾತ್ರನಿಷ್ಠೋ ಭವತಿ । –ವಂಶೀಧರಃ

[೧]ವಿಶ್ವನಾಥವ್ಯಾಖ್ಯಾನದಲ್ಲಿ ಇದನ್ನು ಒಪ್ಪಿಕೊಂಡು ಭಾಗವತವು ಇಲ್ಲಿ 'ಚಿತ್ತಬಡಿಶ' ಶಬ್ದ ಪ್ರಯೋಗದಿಂದ ಈ ನಿರ್ಬೀಜಸಮಾಧಿಯನ್ನು ನಿಂದಿಸುತ್ತದೆ ಎಂದಿದೆ. ಪವಿತ್ರ ಗಂಗಾಪ್ರವಾಹದಲ್ಲಿ ಮುಳುಗಿ ಸ್ನಾನಸುಖ ಪಡೆಯುವುದನ್ನು ಬಿಟ್ಟು ಅರಸಿಕನಾಗಿ ಕಠಿಣವಾದ ಕಬ್ಬಿಣದ ಗಾಳದಿಂದ ಮೀನು ಹಿಡಿದು ತೃಪ್ತನಾಗುವ ಬೆಸ್ತನಂತೆ ನಿರ್ಬೀಜಸಮಾಧಿಯೋಗಿ ಭಗವದಾನಂದವನ್ನು ತೊರೆದು ನಿರ್ವಿಶೇಷಬ್ರಹ್ಮ ಧ್ಯಾನಕ್ಕೆ ತೊಡಗುತ್ತಾನೆ. ಗಾಳಕ್ಕೆ ಮೀನು ಸಿಲುಕುವಂತೆ ಭಗವಂತ ಮೊದಲಿಗೆ ಸಬೀಜಸಮಾಧಿಯಲ್ಲಿ ಚಿತ್ತಕ್ಕೆ ವಶನಾದರೂ ಅವನಿಗೆ ನಿರ್ವಿಶೇಷಬ್ರಹ್ಮರೂಪ ಮೋಕ್ಷದಲ್ಲಿ ಕೇವಲ ಆತ್ಮಾನಂದ ನೀಡುತ್ತಾನೆ. ಸಗುಣಮೋಕ್ಷದಲ್ಲಿ ಸಿಗುವ ಭಕ್ತಿರಸದ ಆನಂದ ನೀಡುವುದಿಲ್ಲ. ಅದರಿಂದ 'ವಿಯುಂಕ್ತೇ' ಎಂಬ ಕ್ರಿಯೆಗೆ 'ಮಂದಧೀಃ' ಎಂದು ಕರ್ತೃ ಅಧ್ಯಾಹಾರ. ಬುದ್ಧಿ ಇಲ್ಲದವನು ಕರ್ತೃ. ಅವನು ಮನಸ್ಸನ್ನು ಭಗವಂತನಿಂದ ಈಚೆ ತರುತ್ತಾನೆ. ಹೊರತು, ಬುದ್ಧಿವಂತನು ತರುವುದಿಲ್ಲ, ತರಬಾರದು ಎಂದು ವಿಶ್ವನಾಥವ್ಯಾಖ್ಯಾನ ಹೇಳುತ್ತದೆ.

[೨]ಶುಕದೇವ ವ್ಯಾಖ್ಯಾನದಲ್ಲಿ ಯೋಗಿಯು ಭಗವಂತನಲ್ಲಿ ಏಕಾಗ್ರಚಿತ್ತನಾದಾಗ ವಿಷಯಭೋಗವೆಂಬ ಮೀನನ್ನು ಹಿಡಿಯಲು ಸಾಧನವಾದ ಗಾಳದಂಥ ಚಿತ್ತ

---

೧. ಚಿತ್ತಬಡಿಶಂ ವಿಯುಂಕ್ತೇ ವಿಯೋಜಯತಿ । ಜ್ಞಾನಂ ಚ ಮಯಿ ಸನ್ಯಸೇದಿತಿ ವಿಧಿವತ್ ಭಕ್ತಿಸನ್ಯಾಸೇ ವಿಧ್ಯಭಾವಾತ್ ಪ್ರತ್ಯುತ ಭಕ್ತ್ಯಾರ್ದ್ರಯಾರ್ಪಿತಮನಾ ನ ಪೃಥಗ್ ದಿದೃಕ್ಷೇದಿತಿ ನಿಷೇಧವಿಧೇಃ ಸದ್ಭಾವಾದಯಂ ಮಂದಧೀಃ ಸ್ವೇಚ್ಛಯೈವ ವಿಯೋಜಯತೀತ್ಯರ್ಥಃ । ವಿಯುಂಜ್ಯಾದಿತಿ ವಿಧ್ಯಪ್ರಯೋಗಾತ್ । ಯತೋಽಸ್ಯ ಚಿತ್ತಂ ಬಡಿಶಂ । ಅತಸ್ತಾದೃಶೋಽಪಿ ಸನ್ ತಸ್ಮಾದಪಿ ಮಾಧುರ್ಯ ಮಯಸ್ವರೂಪಾತ್ ವಿಯೋಜಯತೀತಿ । ವಿಷಯರಸೌತ್ಕಂಠ್ಯದೂರೀಕರಣಾರ್ಥಂ ಭಗವನ್ಮಾಧುರ್ಯೇ ನಿಕ್ಷಿಪ್ತಂ ಯಚ್ಚಿತ್ತಂ ತಸ್ಯ ತನ್ಮಾಧುರ್ಯೌತ್ಕಂಠ್ಯಸ್ಯಾಪಿ ನಿವೃತ್ತಯೇ ತಚ್ಚಿತ್ತಂ ತತೋಽಪಿ ನಿವರ್ತಯತೀತ್ಯರ್ಥಃ । ತಸ್ಯ ಯೋಗಿಚಿತ್ತಬಡಿಶಸ್ಯ ಸ್ಪರ್ಶೋ ಭಗವತೋಽಪಿ ಕಷ್ಟಕರ ಏವಾತಸ್ತದ್ವಿಯೋಗೇ ಭಗವಾನೇವ ತಸ್ಮೈ ಹಾರಿತ ತಾದೃಶಚಿತ್ತಬಡಿಶಾಯ ಯೋಗಿಧೀವರಾಯ ಮೋಕ್ಷಮೇಕವಿಂಶತಿಪ್ರಕಾರದುಃಖ ನಿವೃತ್ತಿಪೂರ್ವಕ ಪ್ರತ್ಯಗಾತ್ಮಾನುಭವರೂಪಂ ದದಾತಿ । ನತು ಪರಮಾತ್ಮಾನುಭವರೂಪಂ ಮೋಕ್ಷಂ । ಅರ್ಪಿತಮನಾ ಇತಿ ಭಗವತೇ ಮನಃ ಸಮರ್ಪ್ಯ ತಸ್ಮಿನ್ ಮನಸಿ ಸ್ವತ್ವಾಭಾವಾತ್ ಕಥಂ ತಸ್ಮಾತ್ ತದ್ ವಿಯೋಜಯೇತ್ । ಕಥಂ ವಾ ದತ್ತಾಪಹಾರೀ ಭವೇದಿತಿ । —ವಿಶ್ವನಾಥಃ

೨. ಯಥಾ ಮತ್ಸ್ಯಗ್ರಹಣಸಾಧನಂ ಲೋಹಕಂಟಕಂ ತತ್ತಥಾವಿಧಂ ವಿಷಯಗ್ರಹಣಸಾಧನಂ ಚಿತ್ತಬಡಿಶಂ ಶನಕೈರಯತ್ನತ ಏವ ವಿಷಯೇಭ್ಯೋ ವಿಯುಂಕ್ತೇ ಉಪರತಂ ಭವತಿ । —ಶುಕದೇವಃ

ಅಪ್ರಯತ್ನವಾಗಿ ವಿಷಯಪದಾರ್ಥದಿಂದ ಈಚೆಗೆ ಬರುತ್ತದೆ. ಹರಿಧ್ಯಾನದಲ್ಲಿಯೆ ನಿರತವಾಗುತ್ತದೆ ಎಂದಿದೆ. [1]ವೀರರಾಘವ ವ್ಯಾಖ್ಯಾನದಲ್ಲಿ ಭಗವಂತನ ವಿಗ್ರಹಧ್ಯಾನದಿಂದ ಚಿತ್ತವನ್ನು ಈಚೆಗೆ ತಂದು ತನ್ನ ಆತ್ಮನಲ್ಲಿ ಅದಕ್ಕೆ ಆತ್ಮನಾಗಿರುವ ಪರಮಾತ್ಮನನ್ನು ಧ್ಯಾನಿಸುತ್ತಾನೆ ಎಂದಿದೆ.

ಈ ಎಲ್ಲ ವ್ಯಾಖ್ಯಾನಗಳು ಅಸಂಗತವಾಗಿವೆ. ಭಗವಂತನ ದಿವ್ಯಮಂಗಳ ವಿಗ್ರಹಧ್ಯಾನ ಮಾಡುತ್ತ ಆನಂದದಿಂದ ರೋಮಾಂಚಗೊಂಡು ಮೈಮರೆಯುವ ಭಕ್ತ ಆ ಧ್ಯಾನ ಸಾಕೆಂದು ಬಿಟ್ಟು ಬಿಡುವುದುಂಟೆ? [2]ಉಂಡಾಯಿತೆಂದು ಆ ಧ್ಯಾನಾನಂದದಲ್ಲಿಯೂ ವೈರಾಗ್ಯ ಬರುತ್ತದೆ ಎಂದು ವಲ್ಲಭವ್ಯಾಖ್ಯಾನ ಹೇಳುತ್ತದೆ. ಹಾಗೆ ವೈರಾಗ್ಯ ಬಂದರೆ ಆ ಯೋಗಿ ಅರಸಿಕ, ಮಂದಬುದ್ಧಿ ಎಂದು ವಿಶ್ವನಾಥವ್ಯಾಖ್ಯಾನ ಹೇಳುತ್ತದೆ. ಶುಕದೇವ ವ್ಯಾಖ್ಯಾನದಲ್ಲಿ ಹೇಳಿದಂತೆ ವಿಷಯಪದಾರ್ಥಗಳಿಂದ ಮನಸ್ಸು ಈಚೆಗೆ ಅಪ್ರಯತ್ನವಾಗಿ ಬರುತ್ತದೆ ಎನ್ನುವುದು ಅಸಂಭಾವಿತ. ವಿಷಯವಾಸನೆ ತೊಲಗಬೇಕೆಂದರೆ ಇಲ್ಲಿ ಹೇಳಿದ ಧ್ಯಾನದ ಬಳಿಕ ಸಮಾಧಿಯನ್ನು ಬಹುಕಾಲ ಅನುಷ್ಠಾನ ಮಾಡಿ ಭಗವಂತನ ಅಪರೋಕ್ಷ ಪಡೆಯಬೇಕಾಗುತ್ತದೆ. ಪ್ರಯತ್ನಪೂರ್ವಕ ಧ್ಯಾನದಲ್ಲಿ ತೊಡಗುವ ಹಂತದಲ್ಲಿ ವಿಷಯಾಕರ್ಷಣೆ ಇದ್ದೇ ಇರುತ್ತದೆ. ಅದರಿಂದ 'ವಿಯುಂಕ್ತೇ' ಎಂದರೆ ವಿಶೇಷವಾಗಿ ಅಪ್ರಯತ್ನವಾಗಿ ಮನಸ್ಸನ್ನು ಭಗವಂತನಲ್ಲಿ ನೆಲೆಗೊಳಿಸುತ್ತಾನೆ. ಧ್ಯಾನಾನಂತರದ ಸಮಾಧಿಯ ಅವಸ್ಥೆಗೆ ಬರುತ್ತಾನೆ ಎಂದೇ ಶ್ಲೋಕದ ಅರ್ಥ.

ಚಿತ್ತಬಡಿಶವಿಯೋಗೋ ಧ್ಯಾನಾನಂತರಸಮಾಧಿಃ ।

ಚಿತ್ತವೆಂಬ ಗಾಳದ 'ವಿ–ಯೋಗ' ಎಂದರೆ ವಿಶೇಷವಾಗಿ, ಅಂದರೆ ಅಪ್ರಯತ್ನವಾಗಿ ಮನಸ್ಸನ್ನು ಭಗವಂತನಲ್ಲಿ ನಿಲ್ಲಿಸುವ ಧ್ಯಾನಾನಂತರದ ಸಮಾಧ್ಯವಸ್ಥೆ ಎಂದರ್ಥ.

* * *

---

೧. ಚಿತ್ತಮಪಿ ಧ್ಯೇಯಾತ್ ಭಗವದ್ವಿಗ್ರಹಾತ್ ಶನಕೈರ್ವಿಯುಂಕ್ತೇ ವಿಯುಂಜ್ಯಾತ್ । ಯದ್ವಾ ಚಿತ್ತಸ್ಯ ಬಡಿಶಂ ಚಿತ್ತಾಪಹಾರಿಣಂ ಭಗವದ್ವಿಗ್ರಹಂ ಪ್ರತಿ । ಅಪಾದಾನಸ್ಯೈವ ಕರ್ಮತ್ವವಿವಕ್ಷಯಾ ದ್ವಿತೀಯಾ । ತತಶ್ಚಿತ್ತಂ ವಿಯುಂಕ್ತೇ ಇತ್ಯರ್ಥಃ । –ವೀರರಾಘವಃ

೨. ತಚ್ಚಾಪಿ ಚಿತ್ತಸ್ಯ ಬಡಿಶಂ ವಶೀಕರಣಹೇತುಂ ಭಗವದ್ರೂಪಂ ಮನಃಕಲ್ಪಿತಮಿತಿ ಶನಕೈರ್ವಿಯುಂಕ್ತೇ ತ್ಯಾಜಯತಿ । ಭಗವದ್ರಸಸ್ಯ ಚಾಸ್ವಾದಿತ್ವಾತ್ ಇದಾನೀಂ ತತ್ರ ವಿರಕ್ತಂ । –ವಲ್ಲಭಃ

ಸಮಾಧಿಪರಿಪಾಕದಿಂದ ಭಗವಂತನ ಅಪರೋಕ್ಷವಾಗುತ್ತದೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಮುಕ್ತಾಶ್ರಯಂ ಯರ್ಹಿ ನಿರ್ವಿಷಯಂ ಸ್ವಚಿತ್ತಂ
ನಿರ್ವಾಣಮೃಚ್ಛತಿ ಮನಃ ಸಹಸಾ ಯಥಾಽರ್ಚಿಃ ।
ಆತ್ಮಾನಮತ್ರ ಪುರುಷೋಽವ್ಯವಧಾನಮೇಕಂ
ಅನ್ವೀಕ್ಷತೇ ಪ್ರತಿನಿವೃತ್ತಗುಣಪ್ರವಾಹಃ ॥ ೩೪ ॥

ಮನಸ್ಸು ವಿಷಯಪದಾರ್ಥಗಳಿಂದ ಈಚೆಗೆ ಬಂದು ನಿತ್ಯಮುಕ್ತನಾದ ಪರಮಾತ್ಮನಲ್ಲಿ ನೆಲೆಸಿದಾಗ ಅದು 'ಸ್ವ-ಚಿತ್-ತಂ' ಸ್ವರೂಪಭೂತವಾದ ಚಿನ್ಮಯಶರೀರದಲ್ಲಿಯೇ ನನ್ನ ಶರೀರವೆಂದು ಅಭಿಮಾನ ತಾಳುವುದು. ಆಗ ಬಾಹ್ಯಶರೀರದ ಮೇಲಿನ ಅಭಿಮಾನವು ಎಣ್ಣೆಯಿಲ್ಲದ ದೀಪದಂತೆ ಆರಿಹೋಗುತ್ತದೆ. ಮತ್ತು ಪರಮಾತ್ಮನನ್ನು ಮರೆಮಾಡುವ ಪರಮಾಚ್ಛಾದಕವೆಂಬ ಪರದೆ ಸರಿಯುತ್ತದೆ. ಜೀವನು ಸರ್ವೋತ್ತಮನಾದ ಬಿಂಬರೂಪಿ ಪರಮಾತ್ಮನನ್ನು ಪ್ರತ್ಯಕ್ಷ ಕಾಣುವನು. ಬಳಿಕ ಜ್ಞಾನದಿಂದ ಅಪ್ರಾರಬ್ಧಕರ್ಮ ನಾಶವಾದಾಗ ತನ್ನಿಮಿತ್ತವಾಗಿ ಶರೀರ ಮೇಲಿಂದ ಮೇಲೆ ಬರುವುದು ತಪ್ಪುತ್ತದೆ.

[೧]ಇಲ್ಲಿ 'ಮುಕ್ತಾಶ್ರಯಂ' ಎಂದರೆ ಮನಸ್ಸು ಧ್ಯಾನವಿಷಯವನ್ನು ತೊರೆದ ಬಳಿಕ ಆಶ್ರಯವನ್ನೂ ತೊರೆಯುತ್ತದೆ. ಧ್ಯೇಯರಹಿತವಾದ ಮನಸ್ಸು ವೃತ್ತಿರೂಪದಿಂದ ಧ್ಯಾತೃವಿನಲ್ಲಿರಲಾರದು. ಭಗವದ್ಧ್ಯಾನದ ಆನಂದಾನುಭವವಾಗಿರುವುದರಿಂದ ವಿಷಯದಲ್ಲಿ ವೈರಾಗ್ಯ. ಭಗವಂತನನ್ನೂ ಮರೆತಿರುವುದರಿಂದ ಮನೋವೃತ್ತಿಗಳೆಲ್ಲ ಅಳಿದು ಮನಸ್ಸು ಬ್ರಹ್ಮಾಕಾರವಾಗಿ ಪರಿಣಮಿಸುತ್ತದೆ. ದೀಪ ಎಣ್ಣೆ ಇಲ್ಲದಾಗ ಆರಿ ತೇಜೋಭೂತರೂಪದಿಂದ ಪರಿಣಮಿಸುವಂತೆ. ಹೀಗೆ ಬ್ರಹ್ಮಾಪರೋಕ್ಷವೆಂದು ಶ್ರೀಧರವ್ಯಾಖ್ಯಾನ. [೨]ವೀರರಾಘವವ್ಯಾಖ್ಯಾನದಲ್ಲಿ ಮುಕ್ತಾಶ್ರಯವೆಂದರೆ

---

೧. ಯರ್ಹಿ ಯದ್ಯೈವಂ ನಿರ್ವಿಷಯಂ ಭವತಿ ಅತ ಏವ ಮುಕ್ತಾಶ್ರಯಂ ಚ । ಧ್ಯೇಯಸಂಬಂಧಂ ವಿನಾ ಧ್ಯಾತರ್ಯವಸ್ಥಾನಾಸಂಭವಾತ್ । ನ ಚ ಪೂರ್ವವತ್ ಶಬ್ದಾದಿರ್ವಿಷಯಃ ಸ್ಯಾತ್ । ಯತಸ್ತತ್ರ ವಿರಕ್ತಂ ಪರಮಾನಂದಾನುಭವೇನ । ಅತೋ ವೃತ್ತಿರೂಪತಾಂ ಪರಿತ್ಯಜ್ಯ ಬ್ರಹ್ಮಾಕಾರೇಣ ಪರಿಣಮತ ಇತ್ಯರ್ಥಃ । –ಶ್ರೀಧರಃ

೨. ಮುಕ್ತಾಶ್ರಯಂ ಮುಕ್ತವಿಗ್ರಹಚಿಂತನಂ । ನಿರ್ವಾಣಂ ಬಾಹ್ಯವ್ಯಾಪಾರೋಪರತಿಂ ಋಚ್ಛತಿ । ತದಾತ್ರ ಪರಮಾತ್ಮನ್ಯವ್ಯವಧಾನಂ ಸಾಕ್ಷಾದೇವ ಪ್ರಕಾರತಯಾ । ಪರಮಾತ್ಮಪ್ರಕಾರತಯಾ ಜೀವಸ್ವರೂಪಂ ಚಿಂತಯೇದಿತ್ಯರ್ಥಃ । –ವೀರರಾಘವಃ

ಭಗವದ್ವಿಗ್ರಹಚಿಂತನವನ್ನು ಬಿಡುತ್ತದೆ ಎಂದರ್ಥ. ನಿರ್ವಾಣವೆಂದರೆ ಬಾಹ್ಯವ್ಯಾಪಾರವನ್ನು ಬಿಡುತ್ತದೆ. ಕೇವಲ ಆತ್ಮನಿಗೆ ಆತ್ಮನಾದ ಪರಮಾತ್ಮನ ಧ್ಯಾನ ಮಾಡುತ್ತದೆ ಎಂದರ್ಥ. [1]ವಿಶ್ವನಾಥವ್ಯಾಖ್ಯಾನದಲ್ಲಿ ಭಗವಂತನ ಧ್ಯಾನವನ್ನು ತೊರೆದ ಯೋಗಿಯ ಮನಸ್ಸು ವಿಷಯಪದಾರ್ಥವನ್ನೂ ಒಲ್ಲದೆ ಯಾವ ವಿಷಯವನ್ನೂ ಆಲೋಚಿಸಿದೆ ಎಣ್ಣೆಯಿಲ್ಲದ ದೀಪದಂತೆ ಲಯಹೊಂದುತ್ತದೆ. ಆಗ ಲಿಂಗದೇಹರೂಪ ಆವರಣನಾಶವಾಗಿ ಶುದ್ಧ ಆತ್ಮಸ್ವರೂಪ ಕಾಣುತ್ತದೆ. ಅವನಿಗೆ ಎಂದೂ ಭಕ್ತಿರಸದ ಭಗವದಾನಂದದ ಅನುಭವವಿಲ್ಲದಂತಾಗುತ್ತದೆ.

ಈ ಎಲ್ಲ ವ್ಯಾಖ್ಯಾನಗಳು ಅಸಂಗತ. [2]ಧ್ಯಾನದಲ್ಲಿ ಆನಂದವನ್ನು ಕಂಡುಕೊಳ್ಳುವ ಯೋಗಿ ಆ ಧ್ಯಾನವನ್ನು ಬಿಡುವ ಪ್ರಶ್ನೆಯೆ ಇಲ್ಲ. ಶುಕದೇವವ್ಯಾಖ್ಯಾನ ಹಾಗೇ ಹೇಳುತ್ತದೆ. ಮುಕ್ತಾಶ್ರಯ ಎಂದರೆ ನಿತ್ಯಮುಕ್ತನಾದ ಪರಮ ಪುರುಷನನ್ನು ಧ್ಯಾನಿಸುತ್ತದೆ ಮನಸ್ಸು ಎನ್ನುತ್ತದೆ. ಆದರೆ 'ನಿರ್ವಾಣ' ಎಂದರೆ ಸಮಾಧಿರಸದಲ್ಲಿ ಮುಳುಗಿ ಹೋಗುತ್ತದೆ, ಭಗವಂತನನ್ನೇ ಧ್ಯಾನದಲ್ಲಿ ಕಾಣುತ್ತದೆ ಮನಸ್ಸು ಎನ್ನುತ್ತದೆ. ಇದು ಸರಿಯಲ್ಲ. 'ನಿರ್ವಾಣ' ಎಂಬಲ್ಲಿ ಬಾಣ ಎಂದರೆ ಶರೀರ. ಜಡಶರೀರವಿಲ್ಲ ಅಂದರೆ ಅದರಲ್ಲಿ ಅಭಿಮಾನವಿಲ್ಲ. ಅಭಿಮಾನವನ್ನು ಬಿಡುತ್ತಾನೆ ಎಂದು ಅರ್ಥ ಹೇಳಬೇಕು.

ಮುಕ್ತಾಶ್ರಯಂ ವಿಷ್ಣುವಿಷಯಂ । ಸ್ವಚಿತ್ತಂ ಜೀವಚೈತನ್ಯೇ ವಿತತಂ ।
ನಿರ್ವಾಣಮೃಚ್ಛತಿ ಶರೀರಾಭಿಮಾನಂ ಜಹಾತಿ, ಸ್ವಚಿದಭಿಮಾನೇನ ।

'ಮುಕ್ತಾಶ್ರಯ' ಎಂದರೆ ನಿತ್ಯಮುಕ್ತನಾದ ಪರಮಾತ್ಮನನ್ನು ವಿಷಯೀಕರಿಸುವಂಥದ್ದು. ಸ್ವಚಿತ್ತಂ ಎಂದರೆ ಜೀವನು 'ಸ್ವ' ಸ್ವರೂಪಭೂತವಾದ 'ಚಿತ್' ಚಿನ್ಮಯಶರೀರದಲ್ಲಿಯೇ ಇದು ನನ್ನ ಶರೀರವೆಂಬ ಅಭಿಮಾನದಿಂದ 'ತ' ವಿತತ ವ್ಯಾಪಿಸಿರುವುದು, 'ನಿರ್ವಾಣಂ ಋಚ್ಛತಿ' ಎಂದರೆ ಮನಸ್ಸಿನಲ್ಲಿರುವ ಬಾಹ್ಯಜಡಶರೀರಾಭಿಮಾನ ನಾಶವಾಗುತ್ತದೆ ಎಂದರ್ಥ. ಏಕೆ ನಾಶವಾಗುತ್ತದೆ ಎಂದರೆ 'ಸ್ವಚಿತ್ತಂ' ಎಂದು ಹೇಳಿದಂತೆ ಸ್ವರೂಪಭೂತ ಚಿನ್ಮಯಶರೀರದಲ್ಲಿಯೆ ಅಭಿಮಾನವಿರುವುದರಿಂದ.

* * *

೧. ಯಥಾರ್ಚಿರ್ದೀಪಕಲಿಕಾ ತೈಲವರ್ತಿಭ್ಯಾಂ ವಿಯುಕ್ತಾ ನಿರ್ವಾತೀತ್ಯರ್ಥಃ । ಅಸ್ಯಾಂ ದಶಾಯಾಂ ಪುರುಷೋ ಜೀವಃ ಮನೋಲಯೇ ಸತಿ ಲಿಂಗರೂಪಾವರಣಭಂಗಾತ್ ಅವ್ಯವಧಾನಂ ಶುದ್ಧಮಾತ್ಮಾನಂ ಪ್ರತ್ಯಗಾತ್ಮಾನಂ ಏಕಮನ್ವೀಕ್ಷತೇ । —ವಿಶ್ವನಾಥಃ

೨. ಮುಕ್ತಾಶ್ರಯಂ ಸತ್ ನಿತ್ಯಮುಕ್ತಪರಮಪುರುಷಾಶ್ರಯಂ ಸತ್ ತದ್‌ಧ್ಯಾನನಿಷ್ಠಂ ಸತ್ ನಿರ್ವಾಣಂ ಸಮಾಧಿರಸೇ ಲಯಮೃಚ್ಛತೀತ್ಯರ್ಥಃ । —ಶುಕದೇವಃ

ಜೀವನ್ಮುಕ್ತನು ಹೇಗಿರುತ್ತಾನೆ ಎಂದು ಕಪಿಲನು ಮಾತೆಗೆ ಹೇಳುತ್ತಾನೆ–

ಸೋಽಪ್ಯೇತಯಾ ಚರಮಯಾ ಮನಸೋ ನಿವೃತ್ತ್ಯಾ
ತಸ್ಮಿನ್ ಮಹಿಮ್ನ್ಯವಸಿತಃ ಸುಖದುಃಖಬಾಹ್ಯೇ ।
ಹೇತುತ್ವಮಪ್ಯಸತಿ ಕರ್ತರಿ ದುಃಖಯೋರ್ನ
ಸ್ವಾತ್ಮನ್ ವಿಧತ್ತ ಉಪಲಬ್ಧಪರಾತ್ಮಕಾಷ್ಠಃ ॥ ೩೫ ॥

ಅಪರೋಕ್ಷಜ್ಞಾನಿಯು ಅಂತಿಮವಾಗಿ ಜಡಶರೀರಾಭಿಮಾನವನ್ನು ತೊರೆದು ಲೌಕಿಕ ಸುಖದುಃಖ ಬಾಹ್ಯವಾದ ತನ್ನ ಜ್ಞಾನಾನಂದಮಯ ಸ್ವರೂಪವನ್ನೂ ಕಂಡು ಪರಮಾತ್ಮನ ಸ್ವತಂತ್ರಕರ್ತೃತ್ವಾದಿಗಳನ್ನೂ ಕಂಡ ಮೇಲೆ ತನ್ನ ಸುಖದುಃಖಗಳಿಗೆ ತನ್ನನ್ನು ಕರ್ತನೆಂದು ಭ್ರಮಿಸುವುದಿಲ್ಲ.

[೧]ಇಲ್ಲಿ 'ಅಸತಿ ಕರ್ತರಿ' ಎಂದರೆ ಅವಿದ್ಯಾಜನ್ಯವಾದ ಮಿಥ್ಯಾಭೂತವಾದ ಅಂತಃಕರಣದಲ್ಲಿಯೇ ತನ್ನಲ್ಲಿ ಹಿಂದೆ ಕಂಡಿದ್ದ ಸುಖದುಃಖಹೇತುತ್ವ ಹೊರತು ತನ್ನಲ್ಲಿ ಅದು ವಸ್ತುತಃ ಇಲ್ಲ ಅದರಿಂದ ಬ್ರಹ್ಮೈಕ್ಯಎಂದು ಶ್ರೀಧರ ವಿಶ್ವನಾಥ ವಲ್ಲಭ ವ್ಯಾಖ್ಯಾನಗಳು. ವೀರರಾಘವ ವ್ಯಾಖ್ಯಾನಪ್ರಕಾರ ಅಸತ್ತಾದ ದೇಹನಿಮಿತ್ತವಾಗಿ ತನ್ನಲ್ಲಿ ಕರ್ತೃತ್ವ. ಅಂದರೆ ಕರ್ತೃತ್ವವು ದೇಹಾತ್ಮಾಭಿಮಾನಾದಿ ನಿಮಿತ್ತಕವಾದ್ದರಿಂದ ಮುಂದೆ ದೇಹಾತ್ಮಾಭಿಮಾನಾದಿಗಳನ್ನು ಇಟ್ಟುಕೊಳ್ಳುವುದಿಲ್ಲ ಎಂದರ್ಥ. ಶುಕದೇವ

---

೧. ನನ್ವೇವಮಪಿ ಸುಖದುಃಖಯೋರಾತ್ಮಧರ್ಮತ್ವೇ ಕುತೋ ಬ್ರಹ್ಮೈಕ್ಯಂ? ತತ್ರಾಹ । ದುಃಖಯೋಃ ಸುಖದುಃಖಯೋಃ ಹೇತುತ್ವಂ ಭೋಕ್ತೃತ್ವಂ ಚ·ಯತ್ ಪೂರ್ವಮಾಸೀತ್ ತದಪ್ಯಸತ್ಯವಿದ್ಯಾಕೃತೇ ಕರ್ತರ್ಯಹಂಕಾರೇ ವಿಧತ್ತೇ ತನ್ನಿಷ್ಠಮೇವ ಪಶ್ಯತೀತ್ಯರ್ಥಃ । –ಶ್ರೀಧರಃ

ಸ್ವಾತ್ಮನಿ ಪೂರ್ವಂ ದುಃಖಯೋಃ ಸುಖದುಃಖಯೋರ್ಯದ್ ಹೇತುತ್ವಂ । ಹೇತುರ್ದೇಹಾತ್ಮಾಭಿಮಾನಸ್ವತಂತ್ರಾತ್ಮಾಭಿಮಾನಾದಿಸ್ತಸ್ಯ ಭಾವಸ್ತತ್ವಂ । ತದಪಿ ಕರ್ತರಿ ಗಮನಾದಿಬಾಹ್ಯವ್ಯಾಪಾರಾಶ್ರಯೇಽಸತಿ ದೇಹೇ ನಿಮಿತ್ತಭೂತೇ ವಿಧತ್ತೇ ಕರೋತಿ । ಕರ್ಮಾಯತ್ತ ಪ್ರಕೃತಿಪರಿಣಾಮರೂಪ ದೇಹಸಂಬಂಧಾಯತ್ತಮೇವ ಸುಖದುಃಖಾದಿಹೇತುದೇಹಾತ್ಮಾಭಿಮಾನಾದಿಕಂ ಪಶ್ಯತೀತ್ಯರ್ಥಃ ।
–ವೀರರಾಘವಃ

ಅಸತಿ ದುಷ್ಟೇ ಸಂಸಾರೇ ಯತ್ ಯಸ್ಯ ಕರ್ಮಣಃ ದುಃಖಯೋಃ ಸುಖದುಃಖಯೋರ್ಹೇತುತ್ವಂ ಭವತಿ ತತ್ ಕರ್ಮ ಸ್ವಾತ್ಮನಿ ಕರ್ತರಿ ವಿಧತ್ತೇ ಸ್ವೀಕರೋತಿ । ಅವಶ್ಯಮೇವ ಪ್ರಾರಬ್ಧಕರ್ಮಫಲಂ ಮಯಾ ಭೋಕ್ತವ್ಯಮಿತಿ ಮನ್ಯತ ಇತ್ಯರ್ಥಃ । ಸುಖದುಃಖೇ ರಾಗದ್ವೇಷಾದಿರಹಿತೋ ಭವತೀತ್ಯರ್ಥಃ । –ಶುಕದೇವಃ

ವ್ಯಾಖ್ಯಾನದಲ್ಲಿ ನನ್ನ ಸುಖದುಃಖಹೇತುವಾದ ಕರ್ಮಕ್ಕೆ ನಾನೇ ಕರ್ತ ಎಂದು ಒಪ್ಪಿಕೊಳ್ಳುತ್ತಾನೆ. ಪ್ರಾರಬ್ಧಕರ್ಮಫಲವನ್ನು ನಾನು ಅವಶ್ಯ ಉಣಲೇ ಬೇಕೆಂದುಕೊಂಡು ರಾಗದ್ವೇಷಾದಿ ರಹಿತನಾಗುತ್ತಾನೆ.

ಆದರೆ ಇವರೆಲ್ಲರೂ 'ಸುಖದುಃಖಯೋರ್ನ' ಎಂಬಲ್ಲಿ 'ಸುಖದುಃಖ ಯೋರ್ಯತ್' ಎಂದು ಪಾಠವಿಟ್ಟುಕೊಂಡಿದ್ದಾರೆ. ಅದರಿಂದ ಮೇಲಿನಂತೆ ವ್ಯಾಖ್ಯಾನ ಮಾಡಿದ್ದಾರೆ. ಜಡವಾದ ಅಂತಃಕರಣಕ್ಕೆ ಜ್ಞಾನಪೂರ್ವಕವಾದ ಕರ್ತೃತ್ವ ವಿಲ್ಲದಿರುವುದರಿಂದ ಶ್ರೀಧರಾದಿವ್ಯಾಖ್ಯಾನ ಅಸಂಗತ. ದೇಹಾತ್ಮೈಕ್ಯ ಭ್ರಮವಿಲ್ಲದಿರುವುದರಿಂದ ವೀರರಾಘವ ವ್ಯಾಖ್ಯಾನವೂ ಸರಿಯಲ್ಲ. ಪ್ರತಿಯೊಬ್ಬನೂ ತನ್ನ ಸುಖದುಃಖಗಳಿಗೆ ಹೇತುಭೂತವಾದ ಕರ್ಮಕ್ಕೆ ತಾನೇ ಕರ್ತನೆಂದು ತಿಳಿದು ರಾಗದ್ವೇಷಗಳಿಗೊಳಗಾಗುತ್ತಾನೆ. ಜ್ಞಾನಿಯು ಮಾತ್ರ ತಾನೇ ಕರ್ತನೆಂದು ತಿಳಿಯುವನೇಕೆ? ತಿಳಿದ ಮಾತ್ರಕ್ಕೆ ರಾಗದ್ವೇಷರಹಿತ ಹೇಗಾಗುತ್ತಾನೆ? ತಾನು ಸ್ವತಂತ್ರಕರ್ತನಲ್ಲ ಎಂದು ತಿಳಿದಾಗಲೆ ರಾಗದ್ವೇಷಗಳು ದೂರವಾಗುವುವು ಎನ್ನಬೇಕು ತಾನೆ? ಅದರಿಂದ ಶುಕದೇವ ವ್ಯಾಖ್ಯಾನವೂ ಸರಿಯಲ್ಲ. 'ಅಸತ್ಕರ್ತಾ' ಎಂದರೆ ಅಸ್ವತಂತ್ರಕರ್ತೃ. ಅಸ್ವತಂತ್ರಕರ್ತನು ಇದ್ದೂ ಇಲ್ಲದಂತೆ ಆದರಿಂದ 'ಅಸತ್' ಎನಿಸುತ್ತಾನೆ. ಸ್ವತಂತ್ರನಾದ ಪರಮಾತ್ಮನೆ ಸತ್ಕರ್ತ.

ಬೇರೆ ವ್ಯಾಖ್ಯಾನಕಾರರು 'ದುಃಖಯೋಃ' ಎಂದರೆ 'ಸುಖದುಃಖಗಳಿಗೆ' ಎಂದು ಅರ್ಥ ಹೇಳಿದ್ದಾರೆ ಆದರೆ ಆ ಶಬ್ದದಿಂದ ಆ ಅರ್ಥ ಹೇಗೆ ಸಿಗುತ್ತದೆ ಎನ್ನುವುದನ್ನು ಹೇಳಿಲ್ಲ. ಇಲ್ಲಿ ಭಾಗವತದಲ್ಲಿ 'ದುಃಖಯೋರ್ಹೇತುಃ' ಎಂದಂತೆ ಬೇರೆಡೆ 'ದುಃಖದಃ' ಎಂದೂ ಪರಮಾತ್ಮನನ್ನು ಕರೆದುದುಂಟು.

ಅಸತ್ಕರ್ತಾ ತು ಜೀವಃ ಸ್ಯಾತ್ ಸತ್ಕರ್ತಾ ಪರಮೇಶ್ವರಃ ॥
ಇತಿ ಶಬ್ದನಿರ್ಣಯೇ ।

ದುರ್ದುಃಖಮಿತಿ ವಿಜ್ಞೇಯಂ ಖಂ ಸುಖಂ ಚ ತಯೋರ್ಯತಃ ।
ಪ್ರದಾತಾ ಪರಮೋ ವಿಷ್ಣುಸ್ತಸ್ಮಾದ್ ದುಃಖದನಾಮವಾನ್ ॥
ಇತಿ ಹರಿವಂಶೇಷು ।

ಅಸ್ವತಂತ್ರಕರ್ತನಾದ್ದರಿಂದ ಜೀವ ಅಸತ್ಕರ್ತನೆನಿಸುತ್ತಾನೆ. ಸ್ವತಂತ್ರಕರ್ತ ನಾದ್ದರಿಂದ ಪರಮಾತ್ಮ ಸತ್ಕರ್ತಾ ಎನಿಸುತ್ತಾನೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. 'ದುಃಖ' ಎಂಬಲ್ಲಿ 'ದುಃ'ಎಂದರೆ ದುಃಖ. 'ಖ' ಎಂದರೆ ಸುಖ. ಅದರಿಂದ 'ದುಃಖಯೋಃ' ಎಂದರೆ ದುಃಖ ಮತ್ತು ಸುಖಗಳಿಗೆ ಎಂದು ಅರ್ಥ ಸಿಗುತ್ತದೆ. ದುಃಖಸುಖಗಳನ್ನು ಕೊಡುವವನು ಪರಮಾತ್ಮ ವಿಷ್ಣುವಾಗಿರುವುದರಿಂದ ಬೇರೆಡೆ 'ದುಃಖದಃ' ಎಂದು,

ಇಲ್ಲಿ 'ದುಃಖಯೋರ್ಹೇತುಃ' ಎಂದು ಮುಂತಾಗಿ ಕರೆಸಿ ಕೊಳ್ಳುವವನು ಅವನೇ ಎಂದು ಹರಿವಂಶದಲ್ಲಿ ಹೇಳಿದೆ.

* * *

ಧ್ಯಾನಕಾಲದಲ್ಲಿ ಭಗವಂತನಲ್ಲಿ ಚಿಂತಿಸಬೇಕಾದ ಗುಣಗಳನ್ನು ಕಪಿಲನು ಮಾತೆಗೆ ಹೇಳುತ್ತಾನೆ–

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷೇತಾನನ್ಯಭಾವೇನ ಭೂತೇಷ್ವಪಿ ತದಾತ್ಮತಾಮ್ ॥ ೪೧ ॥

ಜೀವರಲ್ಲಿ ಎಲ್ಲ ಅಂತರ್ಯಾಮಿಯಾಗಿ ಪರಮಾತ್ಮನನ್ನೂ, ಪರಮಾತ್ಮನ ಆಶ್ರಯದಲ್ಲಿ ಎಲ್ಲ ಜೀವರನ್ನೂ ಚಿಂತಿಸಬೇಕು. ಪರಮಾತ್ಮನ ರೂಪಗಳಲ್ಲಿ ಅಭೇದವನ್ನೂ ಎಲ್ಲ ಜೀವರಲ್ಲಿ ಪರಮಾತ್ಮನ ಅಧೀನತ್ವವನ್ನೂ ಚಿಂತಿಸಬೇಕು.

[೧]ಇಲ್ಲಿ ಅನನ್ಯಭಾವವೆಂದರೆ ತತ್ತ್ವಂ ಪದಾರ್ಥಗಳಿಗೆ ಅಭೇದಭಾವನೆ, ಜೀವಪರಮಾತ್ಮರಿಗೆ ಐಕ್ಯಚಿಂತನೆ. 'ತದಾತ್ಮತಾಂ' ಎಂದರೆ ಜರಾಯುಜಾದಿ ನಾಲ್ಕುಬಗೆಯ ಪ್ರಾಣಿಗಳೂ ದೇಹದ ದೃಷ್ಟಿಯಿಂದ ಪಂಚಮಹಾಭೂತಾತ್ಮಕ ವಾಗಿರುವಂತೆ ಸ್ವರೂಪದಿಂದ ಜೀವರು ಪರಮಾತ್ಮರೆ. 'ಭೂತೇಷ್ವಿವ ತದಾತ್ಮತಾಂ' ಎಂದು ಪಾಠ. ಹೀಗೆ ಶ್ರೀಧರವ್ಯಾಖ್ಯಾನ ಹೇಳುತ್ತದೆ. ವಿಶ್ವನಾಥವ್ಯಾಖ್ಯಾನ ಪರಮಾತ್ಮನಿಗೆ ಸರ್ವವಸ್ತುಗಳ ಕಾರಣತ್ವವನ್ನೂ ಸರ್ವವಸ್ತುಗಳ ಲಯಸ್ಥಾನತ್ವವನ್ನೂ

---

೧. ಉಪಾಧಿತೋ ವಿವೇಕಮುಕ್ತ್ವಾ ತಸ್ಯೈಕ್ಯಮಾಹ ಸರ್ವಭೂತೇಷ್ವಿತಿ । ಭೂತೇಷು ಚತುರ್ವಿಧೇಷು ತದಾತ್ಮತಾಂ ಮಹಾಭೂತಾತ್ಮತಾಂ । –ಶ್ರೀಧರಃ

ತಸ್ಯಾತ್ಮನ ಐಕ್ಯಂ ತತ್ತ್ವಂಪದಾರ್ಥಯೋರಭೇದಂ । ಅನನ್ಯಭಾವೇನ ತತ್ತ್ವಂ ಪದಾರ್ಥಯೋರಭೇದಭಾವನಯಾ । –ರಾಧಾರಮಣದಾಸಃ

ಸರ್ವಸ್ಮಾತ್ ಪರಮಾತ್ಮಾನಂ ಪೃಥಗ್‌ಭೂತಂ ವಿಭಾವ್ಯ ತಸ್ಯ ಸರ್ವವಸ್ತೂನಾಂ ಕಾರಣತ್ವಂ ಲಯಸ್ಥಾನತ್ವಂ ಚ ಪಶ್ಯೇದಿತ್ಯಾಹ ಸರ್ವಭೂತೇಷ್ವಿತಿ । ಕಾರಣಸ್ಯೈವ ಕಾರ್ಯಾತ್ಮತ್ವಮಿತ್ಯರ್ಥಃ । ಕಾರ್ಯಾಣಾಮಪಿ ಲಯಸ್ಥಾನತ್ವಾತ್ ಕಾರಣರೂಪತ್ವಮಿತ್ಯಾಹ । –ವಿಶ್ವನಾಥಃ

ಜೀವಾತ್ಮಾನಮನನ್ಯಭಾವೇನ ಸರ್ವತ್ರ ಜ್ಞಾನೈಕಾಕಾರತ್ವಾಣು ಪರಿಮಾಣತ್ವಾದ್ಯೈಕರೂಪ್ಯೇಣೈವೇಕ್ಷೇತ । ಭೂತೇಷ್ವಪಿ ಅಪಿಶಬ್ದಾಜ್ಜೀವೇಷ್ವಪಿ ತದಾತ್ಮತಾಂ ಪರಮಾತ್ಮಾತ್ಮಕತ್ವಮೀಕ್ಷೇತ –ವೀರರಾಘವಃ

ಪರಮೇಶ್ವರಮನನ್ಯಭಾವೇನ ಭಕ್ತ್ಯಾ ಈಕ್ಷೇತ । –ಶುಕದೇವಃ

ತಿಳಿಯಬೇಕು. ಕಾರಣವು ಕಾರ್ಯಾತ್ಮಕ. ಎನ್ನುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ ಜೀವರನ್ನು ಅನನ್ಯಭಾವದಿಂದ, ಅಂದರೆ ಅವರು ಹೇಗೆ ಜ್ಞಾನರೂಪರಾಗಿ ಅಣುಪರಿಮಾಣರಾಗಿ ಇರುವರೋ ಹಾಗೇ ಸರಿಯಾಗಿ ತಿಳಿಯಬೇಕು, ವ್ಯತಿರಿಕ್ತವಾಗಿ ಅಲ್ಲ. 'ತದಾತ್ಮತಾಂ' ಎಂದರೆ ಜಡಗಳಲ್ಲಿ ಹೇಗೋ ಹಾಗೆ ಜೀವರಲ್ಲಿಯೂ ಆತ್ಮರೂಪದಿಂದ ಪರಮಾತ್ಮನಿರುತ್ತಾನೆ ಎಂದು ತಿಳಿಯಬೇಕು ಎಂದಿದೆ. ಶುಕದೇವ ವ್ಯಾಖ್ಯಾನಪ್ರಕಾರ ಅನನ್ಯಭಾವ ಎಂದರೆ ಭಕ್ತಿ. ಆದರೆ ತದಾತ್ಮತಾ ಎಂದರೆ ಬ್ರಹ್ಮನಿಗೂ ಜಗತ್ತಿಗೂ ಭೇದಾಭೇದವಿರುವುದರಿಂದ ಅಭೇದ ವನ್ನಿಟ್ಟುಕೊಳ್ಳಬೇಕು ಎಂದಿದೆ. [೧]ವಲ್ಲಭವ್ಯಾಖ್ಯಾನದಲ್ಲಿಯೂ ಜೀವನು ನಾನೇ ಎಲ್ಲ ಪ್ರಾಣಿಶರೀರಗಳಲ್ಲಿ ಇರುತ್ತೇನೆ ಎಲ್ಲ ಪ್ರಾಣಿಶರೀರಗಳೂ ನನ್ನಲ್ಲೆ ಇವೆ ಎನ್ನಬೇಕು. ಭೇದಭಾವನೆ ಮಾಡಬಾರದು. ಹಾಗೇ ಪಂಚಭೂತಗಳಲ್ಲಿ ತಾನೇ, ತನ್ನಲ್ಲಿಯೆ ಎಲ್ಲ ಭೂತಗಳು ಎನ್ನಬೇಕು ಎಂದು ಹೇಳಿದೆ. ಈ ವ್ಯಾಖ್ಯಾನಗಳೆಲ್ಲವೂ ತಮ್ಮತಮ್ಮ ಮತಾನುಸಾರವಾಗಿ ಹೇಳಿದವುಗಳಾಗಿವೆ. ಭಾಗವತದ ಮತಕ್ಕೆ ಅನುಸಾರಿಯಾಗಿಲ್ಲ.

ಅನನ್ಯಭಾವೇನ ತದ್ರೂಪಾಣಾಮಭೇದೇನ । ತದಾತ್ಮತಾಂ ತಸ್ಯಾದಾನಾದಿ ಕರ್ತೃತ್ವಂ ಚ ಭೂತವಿಷಯೇ ।

ಅನನ್ಯಭಾವೇನ ಎಂದರೆ ಬೇರೆಬೇರೆ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿ ಇರುವ ಭಗವದ್ರೂಪಗಳಿಗೆ ಸ್ಥಾನಭೇದ ಪ್ರಯುಕ್ತವಾಗಿ ಭೇದ ಎಂಬುದಿಲ್ಲ ಎಂದರ್ಥ. ಭೂತೇಷು ತದಾತ್ಮತಾಂ ಎಂದರೆ ಭೂತಗಳ ವಿಷಯದಲ್ಲಿ ಪರಮಾತ್ಮನಿಗೆ ಸ್ವಾಮಿತ್ವವನ್ನು ತಿಳಿಯ ಬೇಕೆಂದರ್ಥ. ಭೂತೇಷು ಎಂಬಲ್ಲಿ 'ಭೂತಗಳ ವಿಷಯದಲ್ಲಿ' ಎಂಬ ಅರ್ಥದಲ್ಲಿ ವಿಷಯಸಪ್ತಮೀ ವಿಭಕ್ತಿ ಇಟ್ಟುಕೊಳ್ಳಬೇಕು.

'ಆದಾನಾದಿ ಕರ್ತೃತ್ವ'ವೆಂದರೆ ತನ್ನ ವಶದಲ್ಲಿಟ್ಟುಕೊಳ್ಳುವುದು, ರಕ್ಷಣೆ ಮಾಡುವುದು ಮುಂತಾದುವು 'ಆದತ್ತೇ ಇತ್ಯಾತ್ಮಾ' ಎಂದು ಆತ್ಮಶಬ್ದ ವ್ಯುತ್ಪತ್ತಿ. ಅರ್ಥಾತ್ ಸ್ವಾಮಿತ್ವ.

* * *

ಪ್ರಕೃತಿಜನ್ಯವಾದ ನಾನಾಪದಾರ್ಥಗಳಲ್ಲಿ ನಾನಾರೂಪಗಳಿಂದ ಪರಮಾತ್ಮನಿದ್ದರೂ ಆ ರೂಪಗಳಿಗೆ ಏಕೆ ಭೇದವಿಲ್ಲ ಎಂದರೆ ಎಲ್ಲ ಕಡೆ ಎಲ್ಲ ರೂಪಗಳೂ ಆ ವಸ್ತುಗಳಿಗೆ ನಿಯಾಮಕವಾಗಿ ಏಕರೂಪವಾಗಿಯೇ ಇರುತ್ತವೆ, ವ್ಯತ್ಯಾಸವಾಗಿರುವುದಿಲ್ಲ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

---

೧. ಯಥಾ ಸ್ವಸ್ಮಿನ್ನಾತ್ಮನ್ಯಯಂ ದೇಹಾದಿಸಂಘಾತಃ ಕೇನಚಿತ್ ಸಂಬಂಧೇನ ವರ್ತತೇ ಏವಮೇವ ಸರ್ವ ಏವ ಸಂಘಾತಾಃ ಸ್ವಸ್ಮಿನ್ನೇವ ವರ್ತಂತೇ ನಾನ್ಯಸ್ಮಿನ್ನಿತ್ಯಪೀಕ್ಷೇತ । ಭೂತೇಷು ಸ್ವಾತ್ಮಾ ದ್ರಷ್ಟವ್ಯಃ, ಭೂತಾನಿ ಚ ಸ್ವಸ್ಮಿನ್ ದ್ರಷ್ಟವ್ಯಾನಿ । —ವಲ್ಲಭಃ

ತಸ್ಮಾದಿಮಾಂ ಸ್ವಾಂ ಪ್ರಕೃತಿಂ ದೇವೀಂ ಸದಸದಾತ್ಮಿಕಾಮ್ ।
ದುರ್ವಿಭಾವ್ಯಾಂ ಪರಾಭಾವ್ಯ ಸ್ವರೂಪೇಣಾವತಿಷ್ಠತೇ ॥ ೪೩ ॥

ಎಲ್ಲ ಕಡೆ ಪರಮಾತ್ಮ ಒಂದೇ ರೀತಿಯಾಗಿ ನಿಯಾಮಕನಾಗಿಯೇ ಇರುವುದರಿಂದ ನಾನಾಕಾರ್ಯರೂಪದಿಂದ ಮೆರೆಯುವ, ಕಾರ್ಯಕಾರಣ ರೂಪವಾದ, ಅವ್ಯಕ್ತಸ್ವರೂಪವಾದ, ತನ್ನ ಅಧೀನವಾದ ಪ್ರಕೃತಿಯನ್ನು ಮೀರಿ ನಿಂತು ಅದಕ್ಕಿಂತ ಸದಾ ಉತ್ತಮನಾಗಿಯೇ ಇರುತ್ತಾನೆ.

[1]ಇಲ್ಲಿ 'ಪ್ರಕೃತಿಂ ಪರಾಭಾವ್ಯ' ಎಂದರೆ ಜೀವನು ವಿಷ್ಣುವಿನ ಅಧೀನವಾದ ಉಪಾಧಿಯಾದ ಪ್ರಕೃತಿಯನ್ನು ವಿಷ್ಣುವಿನ ಅನುಗ್ರಹದಿಂದ ಪರಾಭವಗೊಳಿಸಿ ಅಂದರೆ ಔಪಾಧಿಕವಾದ ಭೇದವನ್ನು ಕಳೆದುಕೊಂಡು ಬ್ರಹ್ಮಸ್ವರೂಪ ಹೊಂದುತ್ತಾನೆ ಎಂದು ಶ್ರೀಧರ ಶುಕದೇವ ರಾಧಾರಮಣದಾಸ ವ್ಯಾಖ್ಯಾನಗಳು ಹೇಳುತ್ತವೆ. ವೀರರಾಘವ ವ್ಯಾಖ್ಯಾನದಲ್ಲಿ ಜೀವನು ಪ್ರಕೃತಿಯನ್ನು ಪರಾಭವಗೊಳಿಸಿ ಅಂದರೆ ಭಕ್ತಿಯೋಗದಿಂದ ದೂರಮಾಡಿಕೊಂಡು ತನ್ನ ನಿಜರೂಪದಿಂದ ಇರುತ್ತಾನೆ ಎಂದಿದೆ. ವಿಶ್ವನಾಥ ವಲ್ಲಭ ವ್ಯಾಖ್ಯಾನಗಳೂ ಹೀಗೇ ಹೇಳುತ್ತವೆ. ಆದರೆ 'ಸರ್ವಭೂತೇಷು ಚಾತ್ಮಾನಂ' ಎಂದು ಹಿಂದೆ ಹೇಳಿದ ಸರ್ವಜಡಜೀವಾಂತರ್ಯಾಮಿತ್ವವೂ 'ಪ್ರಕೃತಿಂ ಪರಾಭಾವ್ಯ' ಎಂದು ಇಲ್ಲಿ ಹೇಳಿದ ವಶೀಕೃತಮಾಯತ್ವವೂ ಅದ್ವೈತಮತಾನುಸಾರ ನೋಡಿದರೂ ಸ್ವರಸವಾಗಿ ಪರಮಾತ್ಮನ ಮಹಿಮೆಯೇ ಹೊರತು ಜೀವನಲ್ಲಿ ಅವು ಕೂಡುವುದಿಲ್ಲ. ಜೀವನು ವಿಷ್ಣುಮಾಯೆಯನ್ನು ವಿಷ್ಣುವಿನ ಅನುಗ್ರಹದಿಂದ ಪರಾಭವಗೊಳಿಸುತ್ತಾನೆ ಎಂದೂ ಶ್ಲೋಕದಲ್ಲಿ ಕಾಣುವುದಿಲ್ಲ. ಅದರಿಂದ ಈ ಎರಡೂ ಶ್ಲೋಕಗಳನ್ನು ಭಗವಂತನ ಪರವಾಗಿ ಅರ್ಥೈಸುವುದೇ ಉಚಿತವೆನಿಸುತ್ತದೆ. ಹಾಗೆ ಮಾಡಿದಾಗ 'ಸರ್ವಭೂತಸ್ಥಮೀಶೇಶಂ' ಎಂದು ಪ್ರಮಾಣವಾಕ್ಯ ಹೇಳುವುದಕ್ಕೂ ಅದು ಅನುಗುಣವಾಗುತ್ತದೆ.

ಪ್ರಕೃತಿಂ ಪರಾಭಾವ್ಯ ತದುತ್ತಮತ್ವೇನೈವ ಸದಾಽವತಿಷ್ಠತೇ ಪರಃ ।

---

೧. ಸ್ವಾಂ ಸ್ವಾಂಶಸ್ಯ ಜೀವಸ್ಯ ಬಂಧಹೇತುಂ ದೈವೀಂ ದೇವಸ್ಯ ವಿಷ್ಣೋಃ ಶಕ್ತಿಂ ಪರಾಭಾವ್ಯ ತತ್ಪ್ರಸಾದೇನ ಜಿತ್ವಾ ಸ್ವರೂಪೇಣ ಬ್ರಹ್ಮತ್ವೇನಾವತಿಷ್ಠತೇ । –ಶ್ರೀಧರಃ

ತಸ್ಮಾದ್ ಭೇದಸ್ಯೌಪಾಧಿಕತ್ವಾತ್ । ಬ್ರಹ್ಮತ್ವೇನಾವತಿಷ್ಠತೇ ಜೀವಸ್ಯ ವಸ್ತುತೋ ಬ್ರಹ್ಮರೂಪತ್ವಾತ್ । –ರಾಧಾರಮಣದಾಸಃ

ದೈವೀಂ ದೇವಸ್ಯ ವಿಷ್ಣೋಃ ಸಂಬಂಧಿನೀಂ ಪ್ರಕೃತಿಂ ಪರಾಭಾವ್ಯ ಉಕ್ತವಿಧ ಭಗವದ್ಭಕ್ತಿಯೋಗೇನ ತಿರೋಭಾವ್ಯ ಸ್ವರೂಪೇಣ ಗುಣಾಷ್ಟಕವಿಶಿಷ್ಟಸ್ವರೂಪೇಣಾವತಿಷ್ಠತೇ ನ ಪುನಃ ಸಂಸರತಿ –ವೀರರಾಘವಃ

ಸರ್ವಭೂತಸ್ಥಮೀಶೇಶಂ ಜೇತಾರಂ ಪ್ರಕೃತೇರಪಿ ।
ಅವಿಶೇಷಂ ಸದೈವೈಕಂ ಚಿಂತಯನ್ ವಿಪ್ರಮುಚ್ಯತೇ ॥ ಇತಿ ಚ ।

ಪರಮಾತ್ಮನು ಚೇತನಪ್ರಕೃತಿ ಅಚೇತನಪ್ರಕೃತಿಗಳೆರಡನ್ನೂ ಪರಾಭವಗೊಳಿಸಿ ಅಂದರೆ ಅವುಗಳಿಂದ ಉತ್ತಮನಾಗಿಯೇ ಸದಾ ಇರುತ್ತಾನೆ.

'ಸರ್ವಜೀವರಲ್ಲಿ ಅಂತರ್ಯಾಮಿಯೂ ಪ್ರಕೃತಿಗಿಂತ ಉತ್ತಮನೂ ತನ್ನ ಯಾವ ರೂಪದಲ್ಲಿಯೂ ವ್ಯತ್ಯಾಸವಿಲ್ಲದವನೂ ಸರ್ವೋತ್ತಮನೂ ಆಗಿದ್ದು, ಜಗದೀಶರಾದ ಬ್ರಹ್ಮಾದಿಗಳಿಗೂ ಸದಾ ಈಶನಾಗಿರುವ ಪರಮಾತ್ಮನನ್ನು ಹಾಗೇ ಧ್ಯಾನಿಸಿದರೆ ಮೋಕ್ಷ ಲಭಿಸುತ್ತದೆ' ಎಂದೂ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಏಕೋನತ್ರಿಂಶೋಽಧ್ಯಾಯಃ

—o—

ಅಧ್ಯಾಯ–೩೦

ಅಧ್ಯಾಯಸಾರಾಂಶ

ಹಿಂಸೆ ಉಪದ್ರವ ದಂಭಾಚಾರ ಮಾತ್ಸರ್ಯ ವಿಷ್ಣುಭಕ್ತದ್ವೇಷಗಳನ್ನು ಮಾಡುತ್ತಲೆ ವಿಷ್ಣುಭಕ್ತಿ ಮಾಡಿದರೆ ಅವನು ತಾಮಸಭಕ್ತ. ವಿಷಯಸುಖದಾಸೆಯಿಂದ ಪ್ರತಿಮಾರ್ಚನೆ ಮಾಡುತ್ತ, ಭಗವದ್ರೂಪಗಳಲ್ಲಿ ಕೆಲವು ಫಲದಾಯಕ, ಕೆಲವು ಹಾಗಲ್ಲವೆಂದು ತಿಳಿದು ಭಕ್ತಿಮಾಡುವವನು ರಾಜಸಭಕ್ತ. ಕೇವಲ ಪಾಪಕ್ಷಯದಾಸೆಯಿಂದ, ಭಗವಂತನಿಗೆ ಅರ್ಪಿತವಾಗಲೆಂಬ ಬುದ್ಧಿಯಿಂದ, ಆವಶ್ಯಕ ವಿಹಿತಕರ್ತವ್ಯವೆಂದು ಕರ್ಮಾಚರಣೆ ಮಾಡುತ್ತ ಭಗವದ್ರೂಪಗಳಲ್ಲಿ ತಾರತಮ್ಯ ಮಾಡದೆ ಭಕ್ತಿ ಮಾಡುವವನು ಸಾತ್ವಿಕ ಭಕ್ತ. ಈ ಮೂರು ಬಗೆಯ ಭಕ್ತಿಗಳೂ ಗುಣತ್ರಯ ಪ್ರಯುಕ್ತವಾಗಿವೆ. ಇನ್ನು ಜೀವಸ್ವಭಾವಮಾತ್ರ ಪ್ರಯುಕ್ತವಾಗಿ ಅನಾದಿಕಾಲದಿಂದ ಭಕ್ತನಾಗಿದ್ದು ಭಗವಂತನ ಗುಣಶ್ರವಣವಾದ ಮಾತ್ರದಿಂದಲೇ ತನ್ಮಯನಾಗುವವನು ನಿರ್ಗುಣಭಕ್ತ. ಭಕ್ತಿಯ ಫಲವಾಗಿ ಮೋಕ್ಷ ಕೊಟ್ಟರೂ ಈತ ಬೇಡವೆನ್ನುತ್ತಾನೆ. ಆದರೆ ಸಾಯುಜ್ಯಮುಕ್ತಿ ಇವನಿಗೆ ನಿಶ್ಚಿತ. ಫಲದಾಸೆ ಇಲ್ಲದೆ ಭಗವದರ್ಪಣಬುದ್ಧಿಯಿಂದ ದೇವಪೂಜೆ, ಸಂಧ್ಯಾವಂದನಾದಿ ನಿತ್ಯಕರ್ಮ, ವ್ರತೋಪವಾಸಾದಿಗಳನ್ನು ನಡೆಸುತ್ತ ಎಲ್ಲ ಪ್ರಾಣಿಗಳಲ್ಲಿ ಭಗವಂತನಿರುವನೆಂದು ತಿಳಿದು ಉಪಕಾರ ಮಾಡುತ್ತ ತನ್ನೊಳಗೂ ಪರರೊಳಗೂ ಇರುವ ಅಂತರ್ಯಾಮಿಯೊಬ್ಬನೇ ಎಂದೂ ಚಿಂತಿಸುತ್ತಿದ್ದರೆ ಭಕ್ತಿ ವೃದ್ಧಿಯಾಗುವುದು. ಅಜ್ಞಾನಿ ಪ್ರತಿಮಾರ್ಚನೆ ಮಾಡದಿದ್ದರೆ ದೋಷವಿದೆ. ಅಪರೋಕ್ಷಜ್ಞಾನಿ ಮಾಡದಿದ್ದರೆ ದೋಷವಿಲ್ಲ, ಮಾಡಿದರೆ ಮೋಕ್ಷದಲ್ಲಿ ಆನಂದಾಭಿವೃದ್ಧಿ ಫಲ. ಚಲಪ್ರತಿಮೆಗಳಾಗಿರುವ ಪ್ರಾಣಿಗಳಲ್ಲಿ ತಾರತಮ್ಯವು ಸ್ವಾಭಾವಿಕವಾಗಿ ಇದ್ದೇ ಇದೆ. ಸ್ಥಾವರಗಳಿಗಿಂತ ಜಂಗಮಪ್ರಾಣಿಗಳು, ಬೇರೆ ಪ್ರಾಣಿಗಳಿಗಿಂತ ಮನುಷ್ಯರು, ಮನುಷ್ಯರಿಗಿಂತ ಋಷಿಗಳು ದೇವತೆಗಳು, ದೇವತೆಗಳಲ್ಲಿಯೂ

ಇಂದ್ರಾದಿದೇವತೆಗಳಿಗಿಂತ ಶೇಷಗರುಡರು ಬ್ರಹ್ಮವಾಯುಗಳು ಹೀಗೆ ತಾರತಮ್ಯವನ್ನು ಅನುಸರಿಸಿಯೆ ಪೂಜೆ ಮಾಡಬೇಕು. ಭಕ್ತಿಯೋಗ ಜ್ಞಾನಯೋಗಗಳು ಒಂದಿದ್ದರೆ ಇನ್ನೊಂದು ಇದ್ದೇ ತೀರುವುದರಿಂದ ಕೆಲವೆಡೆ ಭಕ್ತಿಯೇ ಮೋಕ್ಷಸಾಧನವೆಂದೂ ಕೆಲವೆಡೆ ಜ್ಞಾನವೇ ಮೋಕ್ಷಸಾಧನವೆಂದೂ ಹೇಳುತ್ತಾರೆ, ವಿರೋಧವಿಲ್ಲ. ಕಾಲವೆಂದರೆ ಬ್ರಹ್ಮಾದಿಸಕಲ ಜೀವರನ್ನು ಪ್ರಳಯಕಾಲದಲ್ಲಿ ಸಂಹರಿಸುವ ಭಗವದ್ರೂಪ. ಅವನ ಭಯದಿಂದಲೆ ಪ್ರಪಂಚದ ಎಲ್ಲ ಚಟುವಟಿಕೆಗಳೂ ನಡೆಯುತ್ತವೆ.

* * *

ಕಪಿಲನು ಹೇಳಿದ ಪ್ರಕೃತ್ಯಾದಿ ಲಕ್ಷಣಗಳು ಸಾಂಖ್ಯಶಾಸ್ತ್ರಾನುಸಾರಿಯಾಗಿಯೇ ಇವೆ ಎಂದು ಪ್ರಶಂಸೆ ಮಾಡುತ್ತ ಇನ್ನು ಮುಂದೆ ಭಕ್ತಿಯೋಗ ಮಾರ್ಗವನ್ನೂ ಹೇಳು ಎಂದು ದೇವಹೂತಿ ಕಪಿಲನನ್ನು ಕೇಳಿಕೊಳ್ಳುತ್ತಾಳೆ.

ದೇವಹೂತಿರುವಾಚ–

ಲಕ್ಷಣಂ ಮಹದಾದೀನಾಂ ಪ್ರಕೃತೇಃ ಪುರುಷಸ್ಯ ಚ ।
ಸ್ವರೂಪಂ ಲಕ್ಷ್ಯತೇಽಮೀಷಾಂ ಯೇನ ತತ್ ಪಾರಮಾರ್ಥಿಕಮ್ ॥ ೧ ॥

ಯಥಾ ಸಾಂಖ್ಯೇಷು ಕಥಿತಂ ಯನ್ಮೂಲಂ ತತ್ ಪ್ರಚಕ್ಷತೇ ।
ಭಕ್ತಿಯೋಗಸ್ಯ ಮೇ ಮಾರ್ಗಂ ಬ್ರೂಹಿ ವಿಸ್ತರಶಃ ಪ್ರಭೋ ॥ ೨ ॥

ದೇವಹೂತಿ ಕೇಳಿಕೊಂಡಳು–

ಮಹತ್ತತ್ತ್ವಮುಂತಾದವುಗಳ, ಪ್ರಕೃತಿಯ ಮತ್ತು ಪುರುಷನ ಲಕ್ಷಣವನ್ನು ಸಾಂಖ್ಯಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿಯೇ ನನಗೆ ನೀನು ಹೇಳಿರುವಿ. ಆ ಲಕ್ಷಣದಿಂದ ಮಹತ್ತತ್ತ್ವಾದಿಗಳ ಯಥಾರ್ಥಸ್ವರೂಪ ಸ್ಪಷ್ಟವಾಗಿ ತಿಳಿದು ಬರುತ್ತದೆ. ಲಕ್ಷಣಕ್ಕೆ ಸಾಂಖ್ಯಶಾಸ್ತ್ರವೇ ಮೂಲ ಎನ್ನುತ್ತಾರೆ ಆದ್ದರಿಂದ ಅದಕ್ಕನುಸಾರಿಯಾಗಿಯೇ ನೀನು ಹೇಳಿರುವಿ. ಇನ್ನು ಮುಂದೆ ಅದೇ ರೀತಿ ಭಕ್ತಿಯೋಗದ ಮಾರ್ಗವನ್ನೂ ವಿಸ್ತಾರವಾಗಿ ಹೇಳು.

[೧]ಇಲ್ಲಿ 'ಯನ್ಮೂಲಂ' ಎಂದರೆ 'ಭಕ್ತಿಯೋಗವೇ ಪ್ರಕೃತ್ಯಾದಿಲಕ್ಷಣಕ್ಕೆ ಮೂಲ ಪ್ರಯೋಜನ' ಎಂದು ಶ್ರೀಧರ ಮುಂತಾದವರ ವ್ಯಾಖ್ಯಾನ ಹೇಳುತ್ತದೆ. 'ಯಃ

---

೧. ಯೋ ಭಕ್ತಿಯೋಗೋ ಮೂಲಂ ಪ್ರಯೋಜನಂ ಯಸ್ಯ ತದ್ ಯನ್ಮೂಲಂ ।
–ಶ್ರೀಧರಃ

ಭಕ್ತಿಯೋಗಃ ಮೂಲಂ ಪ್ರಯೋಜನಂ ಯಸ್ಯ' ಎಂದು ವಿಗ್ರಹ. ವೀರರಾಘವ ವ್ಯಾಖ್ಯಾನದಲ್ಲಿಯೂ ಭಕ್ತಿಯೋಗಕ್ಕೆ ಮೂಲವು ಲಕ್ಷಣ. ಇವೆರಡೂ ಸರಿಯಲ್ಲ. 'ನೀನು ಹೇಳಿದ ಲಕ್ಷಣವೆಲ್ಲವೂ ಭಕ್ತಿಯೋಗಕ್ಕೆ ಸಾಧನವಾದ್ದರಿಂದ ಈಗ ಆ ಭಕ್ತಿಯೋಗವನ್ನು ಹೇಳು' ಎನ್ನುವುದು ಉಚಿತವಲ್ಲ. ಭಕ್ತಿಯೋಗಕ್ಕೆ ಮಹಾಫಲವಿರುವುದರಿಂದ ಅದನ್ನು ಹೇಳೆನ್ನಬೇಕು. 'ಸಾಂಖ್ಯಶಾಸ್ತ್ರಾನುಸಾರವೆ ಹೇಳಿರುವಿ. ಏಕೆಂದರೆ ಆ ಶಾಸ್ತ್ರವೆ ಲಕ್ಷಣಗಳಿಗೆ ಮೂಲ ಆಕರ'ವೆಂದು ಪ್ರಶಂಸೆ ಉಚಿತವಾಗುತ್ತದೆ. ಅದರಿಂದ ಸಾಂಖ್ಯರು ಹೇಳುವ ಪ್ರಕೃತ್ಯಾದಿಲಕ್ಷಣಕ್ಕೆ ಸಾಂಖ್ಯಶಾಸ್ತ್ರ ಮೂಲ ಎನ್ನಬೇಕು. ವಲ್ಲಭವ್ಯಾಖ್ಯಾನದಲ್ಲಿ ಲಕ್ಷಣಕ್ಕೆ ಸಾಂಖ್ಯಶಾಸ್ತ್ರಮೂಲಕತ್ವವನ್ನು ಒಪ್ಪಿ ಸಾಂಖ್ಯಶಾಸ್ತ್ರಕ್ಕೆ ಭಗವಂತನು ಮೂಲ ಎಂದು ಇನ್ನೊಂದು ಅರ್ಥವನ್ನು ಹೇಳಿದೆ. ಆದರೆ ಸಾಂಖ್ಯೇಷು ಎಂದು ಸಾಂಖ್ಯಶಾಸ್ತ್ರವು ಬಹುವಚನಶಬ್ದದಿಂದ ಪ್ರಕೃತವಾಗಿದೆ. ಭಗವಂತನಂತೂ ಪ್ರಕೃತನಾಗಿಲ್ಲ. ಅದರಿಂದ ಹೀಗೆ ಹೇಳಬೇಕು–

ಯಥಾ ಸಾಂಖ್ಯೇಷೂಕ್ತಂ ತಥಾ ಕಥಿತಂ, ಯತ್ಸಾಂಖ್ಯಮೂಲಂ ತಲ್ಲಕ್ಷಣಂ ಪ್ರಚಕ್ಷತೇ ।

ಆ ಪ್ರಕೃತ್ಯಾದಿಲಕ್ಷಣವು ಸಾಂಖ್ಯಶಾಸ್ತ್ರಮೂಲಕವೆಂದು ಬಲ್ಲವರು ಹೇಳುವುದರಿಂದ ಸಾಂಖ್ಯಶಾಸ್ತ್ರಗಳಲ್ಲಿ ಹೇಳಿದಂತೆಯೇ ನೀನು ಹೇಳಿರುವಿ ಎಂದು ಶ್ಲೋಕದ ಅರ್ಥ.

* * *

ರಾಜಸ ಮತ್ತು ಸಾತ್ವಿಕ ಭಕ್ತಿಯೋಗಗಳ ಮಾರ್ಗವನ್ನು ಕಪಿಲನು ಮಾತೆಗೆ ಹೀಗೆ ಉಪದೇಶಿಸುತ್ತಾನೆ–

ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ ।
ಅರ್ಚಾದಾವರ್ಚಯೇದ್ ಯೋ ಮಾಂ ಪೃಥಗ್ಭಾವಃ ಸ ರಾಜಸಃ ॥೯॥

ಯನ್ಮೂಲಂ ಯದ್ ಭಕ್ತಿಯೋಗಪ್ರಯೋಜನಂ ಪ್ರಚಕ್ಷತೇ ।
–ರಾಧಾರಮಣದಾಸಃ

ಯನ್ಮೂಲಂ ಯಸ್ಯ ಭಕ್ತಿಯೋಗಸ್ಯ ಮೂಲಂ । –ವೀರರಾಘವಃ

ಯನ್ಮೂಲಂ ಯತ್ಕಾರಣಕಂ ಪ್ರಚಕ್ಷತೇ ಯಂ ವಿನಾ ತೇಷಾಂ ಸ್ವರೂಪಂ ಜ್ಞಾತಮಪ್ಯಜ್ಞಾತಮೇವ ಭವತೀತ್ಯರ್ಥಃ । –ವಿಶ್ವನಾಥಃ

ತತ್ ಪೂರ್ವೋಕ್ತಲಕ್ಷಣಾದಿಕಂ ಯತ್‌ಸಾಂಖ್ಯಮೂಲಮಿತಿ ಪ್ರಚಕ್ಷತೇ । ಯೋ ಭಗವಾನ್ ವಾ ತಸ್ಯ ಸಾಂಖ್ಯಸ್ಯ ಮೂಲಮಿತಿ ಪ್ರಚಕ್ಷತೇ । –ವಲ್ಲಭಃ

ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ ವಾ ತದರ್ಪಣಮ್ ।
ಯಜೇದ್ ಯಷ್ಟವ್ಯಮಿತಿ ವಾಽಪೃಥಗ್ಭಾವಃ ಸ ಸಾತ್ವಿಕಃ ॥ ೧೦ ॥

ವಿಷಯಪದಾರ್ಥಗಳನ್ನೂ ಯಶಸ್ಸನ್ನೂ ಐಶ್ವರ್ಯವನ್ನೂ ಬಯಸಿ ಭಗವದ್ರೂಪಗಳಿಗೆ ಭೇದಭಾವನೆ ಇಟ್ಟುಕೊಂಡು ಪ್ರತಿಮಾದಿಗಳಲ್ಲಿ ನನ್ನನ್ನು ಆರಾಧಿಸುವವನು ರಾಜಸಭಕ್ತ. ಪಾಪ ಕ್ಷಯವನ್ನು ಬಯಸಿ ಪರಮಾತ್ಮನಾದ ನನಗೆ ಅರ್ಪಿತವಾಗಲೆಂಬ ಉದ್ದೇಶದಿಂದ ನನ್ನ ರೂಪಗಳಿಗೆ ಅಭೇದವನ್ನು ತಿಳಿದು ಶಾಸ್ತ್ರವಿಹಿತ ಕರ್ತವ್ಯವೆಂಬ ಭಾವನೆಯಿಂದ ನನ್ನ ಆರಾಧನೆ ಮಾಡುವವನು ಸಾತ್ವಿಕ ಭಕ್ತ.

[೧]ಇಲ್ಲಿ ಪೃಥಗ್ಭಾವ ಅಪೃಥಗ್ಭಾವ ಶಬ್ದಗಳಿಗೆ ಏನರ್ಥ? ಬೇರೆ ಶ್ರೀಧರಾದಿ ವ್ಯಾಖ್ಯಾನಕಾರರು 'ಎರಡೂ ಕಡೆ ಪೃಥಗ್ ಭಾವ ಎಂದೇ ಪದವಿಭಾಗ. ಪೃಥಗ್ ಎಂದರೆ ಬೇರೆ. ಭಗವಂತನಿಂದ ಬೇರೆಯಾದ ವಿಷಯಾದಿಗಳಲ್ಲಿ ಭಾವ ಅಂದರೆ ಆಸೆ. ಪೃಥಗ್ ಎಂದರೆ ಭಕ್ತಿಗಿಂತ ಬೇರೆಯಾದ ಮೋಕ್ಷದಲ್ಲಿ ಬಯಕೆ ಎರಡೂ ಪೃಥಗ್ಭಾವಗಳೇ. ರಾಜಸರಲ್ಲಿ ಮೊದಲನೆಯದು, ಸಾತ್ವಿಕರಲ್ಲಿ ಎರಡನೆಯದು.' ಎನ್ನುತ್ತಾರೆ. ಅದು ಸರಿಯಲ್ಲ ಎನ್ನುತ್ತದೆ ವೀರರಾಘವ ವ್ಯಾಖ್ಯಾನ. ಅದರ ಪ್ರಕಾರ ಮೊದಲನೆ ಶ್ಲೋಕದಲ್ಲಿ ಪೃಥಗ್ಭಾವವೆಂದರೆ ತಾನು ಪರಮಾತ್ಮನಿಗೆ ಶರೀರ ಎಂದು ಭಾವಿಸದೆ ಬೇರೆ ದೇವತೆಗಳಲ್ಲಿ ಭಕ್ತಿ ಮಾಡುವುದು. ಇದು ಸಾತ್ವಿಕರಲ್ಲಿ ಇಲ್ಲ. ಅದರಿಂದ ಎರಡನೆ ಶ್ಲೋಕದಲ್ಲಿ 'ಅಪೃಥಗ್ಭಾವಃ' ಎಂದೇ ಪದವಿಭಾಗ. ಶುಕದೇವ

---

೧. ಪೃಥಕ್ ಮತ್ತೋಽನ್ಯತ್ರ ವಿಷಯಾದಿಷ್ವೇವ ಭಾವಃ ಸ್ಪೃಹಾ ಯಸ್ಯ ನ ತು ಮಯೀತಿ ರಾಜಸತ್ವಹೇತುತಾ ದರ್ಶಿತಾ । ಭಕ್ತೇಃ ಪೃಥಕ್ ಮೋಕ್ಷಮೇವ ಪುರುಷಾರ್ಥತ್ವೇನ ಭಾವಯನ್ ಸ ಸಾತ್ವಿಕ ಉಚ್ಯತೇ । –ಜೀವಗೋಸ್ವಾಮೀ

ಪರಮಾತ್ಮನಃ ಸ್ವಾತ್ಮಶರೀರಕತ್ವಮಜ್ಞಾತ್ವಾ ದೇವತಾಮಾತ್ರಬುದ್ಧಿತ್ವಂ ಪೃಥಗ್-ಭಾವತ್ವಂ । ಅಪೃಥಗ್ ಭಾವಃ ಸ್ವಾತ್ಮನೋ ಬ್ರಹ್ಮಶರೀರತ್ವಂ ಜಾನನ್ । ಅತ್ರ ಪೃಥಗ್ಭಾವ ಇತಿ ಛಿತ್ವಾ ಭೇದದರ್ಶಿತ್ವಂ ತ್ರಿಷ್ವಪಿ ಸಮಾನಮಿತಿ ಕೇಚಿದ್ ಯೋಜಯಂತಿ । ತತ್ರ ಸಾತ್ವಿಕತ್ವಮಸಂಗತಂ । ಸತ್ವಸ್ಯ ಯಥಾವಸ್ಥಿತವಸ್ತುಪ್ರಕಾಶಕತ್ವಸ್ಯ 'ಸತ್ವಾತ್ ಸಂಜಾಯತೇ ಜ್ಞಾನಂ', 'ತತ್ರ ಸತ್ವಂ ನಿರ್ಮಲತ್ವಾತ್ ಪ್ರಕಾಶಕಂ' ಇತಿ ಭಗವತಾ ಗೀತತ್ವೇನ ಪೃಥಗ್ ಭಾವಸ್ಯ ಸತ್ವಕಾರ್ಯತ್ವಾಭಾವಾತ್ । –ವೀರರಾಘವಃ

ಪೃಥಗ್ ಭಾವೋ ಭೇದದರ್ಶೀ । ಸ್ವಸ್ಯ ಭಗವದಂಶತ್ವಮಜಾನನ್ ಕೇವಲಭೇದದರ್ಶೀ –ಶುಕದೇವಃ

ಆತ್ಮಪರಮಾತ್ಮನೋಃ ಸರ್ವತ್ರ ಭೇದದರ್ಶೀ । –ಗಿರಿಧರಃ

ವಲ್ಲಭ ವ್ಯಾಖ್ಯಾನಗಳಲ್ಲಿ ಭಕ್ತನು ಭಗವಂತನ ಅಂಶವಾದ್ದರಿಂದ ಅವರಲ್ಲಿ ಭೇದಾಭೇದವಿದೆ, ಕೇವಲ ಭೇದವನ್ನು ತಿಳಿಯುವುದು ಪೃಥಗ್ಭಾವ. ಇದು ತಾಮಸನಲ್ಲಿ ಮಾತ್ರವಲ್ಲ ರಾಜಸನಲ್ಲಿಯೂ ಇದೆ, ಸಾತ್ವಿಕನಲ್ಲಿಯೂ ಇದೆ ಎಂದು ವಲ್ಲಭವ್ಯಾಖ್ಯಾನ. ಸಾತ್ವಿಕನಲ್ಲಿ ಇಲ್ಲವೆಂದು ಶುಕದೇವವ್ಯಾಖ್ಯಾನ.

ಈ ವ್ಯಾಖ್ಯಾನಗಳಲ್ಲಿ 'ವಿಷಯಾನಭಿಸಂಧಾಯ' ಎಂದು ವಿಷಯಾಭಿಲಾಷೆಯನ್ನು ಹೇಳಿ ಜೊತೆಗೆ ಪೃಥಗ್ಭಾವವೆಂದು ವಿಷಯಾಭಿಲಾಷೆಯನ್ನು ಬೇರೆ ಶಬ್ದದಿಂದಲೂ ಹೇಳುವುದು ಪುನರುಕ್ತಿ. ಮತ್ತು ಪಾಪಪರಿಹಾರ ಭಗವದರ್ಪಣ ಬುದ್ಧಿಯಿಂದ ಶಾಸ್ತ್ರವಿಹಿತ ಕರ್ತವ್ಯದೃಷ್ಟಿಯಿಂದ ಆರಾಧಿಸುವ ಸಾತ್ವಿಕನೂ ಪೃಥಗ್ಭಾವನೆಂದರೆ ಅದು ಸ್ವವ್ಯಾಹತವಾಗುತ್ತದೆ. ಅದರಿಂದ ಎರಡನೇ ಶ್ಲೋಕದಲ್ಲಿ ಅಪೃಥಗ್ಭಾವ ಎಂದೇ ಪದವಿಭಾಗ ಮಾಡಬೇಕು.

ಸಾಧಕನು ತನ್ನಿಂದ ಭಗವಂತ ಬೇರೆ ಎಂದು ಕೇವಲ ಭೇದವನ್ನು ತಿಳಿಯುವುದು ಪೃಥಗ್ಭಾವ ಎಂದು ಶುಕದೇವ ವಲ್ಲಭವ್ಯಾಖ್ಯಾನಗಳಲ್ಲಿ ಹೇಳುವುದು ಮತ್ತು ಪರಮಾತ್ಮನಿಗೆ ತಾನು ಶರೀರವಲ್ಲವೆಂದು ತಿಳಿಯುವುದು ಪೃಥಗ್ಭಾವ ಎಂದು ವೀರರಾಘವವ್ಯಾಖ್ಯಾನ ಹೇಳುವುದು ಅವರ ಮತಕ್ಕೆ ಅನುಸಾರವಾದೀತು, ಭಾಗವತದ ಮತಕ್ಕಲ್ಲ. ಭಾಗವತಮತದಲ್ಲಿ ಜೀವ ಪರಮಾತ್ಮನಿಗಿಂತ ಭಿನ್ನ, ಅವನು ಪರಮಾತ್ಮನಿಗೆ ಅಧೀನ ಹೊರತು ಶರೀರನಲ್ಲ.

ಅದರಿಂದ ಪರಮಾತ್ಮನ ರೂಪಗಳಲ್ಲಿ ಭೇದತಾರತಮ್ಯಗಳನ್ನು ತಿಳಿಯುವುದೇ ಪೃಥಗ್ಭಾವ. ತಿಳಿಯದಿರುವುದೇ ಅಂದರೆ ಅಭೇದವನ್ನು ತಿಳಿಯುವುದೇ ಅಪೃಥಗ್ಭಾವ. ರಾಜಸನು ಪೃಥಗ್‌ಭಾವನಾದ್ದರಿಂದ ಮೊದಲನೇ ಶ್ಲೋಕದಲ್ಲಿ ಪೃಥಗ್‌ಭಾವಃ ಎಂದು ಪದವಿಭಾಗ. ಸಾತ್ವಿಕನು ಅಪೃಥಗ್ಭಾವನಾದ್ದರಿಂದ 'ಅಪೃಥಗ್ಭಾವಃ' ಎಂದೇ ಎರಡನೇ ಶ್ಲೋಕದಲ್ಲಿ ಪದವಿಭಾಗ ಯುಕ್ತ.

ತದ್ರೂಪಾಣಾಂ ಪೃಥಗ್ಭಾವಃ । ಅಪೃಥಗ್ಭಾವಃ ಸ ಸಾತ್ವಿಕಃ ।

ಮೊದಲನೇ ಶ್ಲೋಕದಲ್ಲಿ 'ಪೃಥಗ್ಭಾವಃ' ಎಂದು ಪದವಿಭಾಗ. ಭಗವದ್ರೂಪಗಳಿಗೆ ಭೇದವನ್ನು ತಿಳಿಯುವವನು ಎಂದರ್ಥ. ಎರಡನೆಯ ಶ್ಲೋಕದಲ್ಲಿ 'ಅಪೃಥಗ್ಭಾವಃ' ಎಂದು ಪದವಿಭಾಗ ಎಲ್ಲ ಭಗವದ್ರೂಪಗಳಲ್ಲಿ ಸಮಾನವಾಗಿಯೆ ಭಕ್ತಿ ಮಾಡುವವನು ಸಾತ್ವಿಕಭಕ್ತ ಎಂದರ್ಥ.

* * *

ಭಗವಂತನ ಅಪರೋಕ್ಷವಾಗುವುದಕ್ಕೆ ಮೊದಲು ಸಾಧಕನು ಪ್ರತಿಮಾರ್ಚನೆ ಮಾಡಲೇಬೇಕು ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಅರ್ಚಾದಾವರ್ಚಯೇತ್ ತಾವದೀಶ್ವರಂ ಮಾಂ ಸ್ವಕರ್ಮಕೃತ್ ।
ಯಾವನ್ನ ವೇದ ಸ್ವಹೃದಿ ಸರ್ವಭೂತೇಷ್ವವಸ್ಥಿತಮ್ ॥ ೨೫ ॥

ಎಲ್ಲ ಜೀವರಲ್ಲಿ ನಿಯಾಮಕನಾಗಿರುವ ನನ್ನನ್ನು ತನ್ನ ಹೃದಯದಲ್ಲಿ ಪ್ರತ್ಯಕ್ಷ ಕಾಣುವವರೆಗೂ ಜಿಜ್ಞಾಸುವು ತನಗೆ ವಿಹಿತವಾದ ಕರ್ಮಗಳನ್ನು ಮಾಡುತ್ತ ಪ್ರತಿಮಾದಿಗಳಲ್ಲಿ ನನ್ನನ್ನು ಪೂಜಿಸಲೇಬೇಕು.

[1]ಇಲ್ಲಿ ಅಪರೋಕ್ಷಕ್ಕಿಂತ ಮೊದಲು ಮಾತ್ರ ಕರ್ಮಾಚರಣೆ ಮತ್ತು ಪ್ರತಿಮಾರ್ಚನೆಗಳಲ್ಲಿ ಅಧಿಕಾರ. ಅಪರೋಕ್ಷವಾದ ಬಳಿಕ ಎರಡೂ ಇಲ್ಲ ಎಂದು ಶ್ರೀಧರ ವೀರರಾಘವ ವಲ್ಲಭ ವ್ಯಾಖ್ಯಾನಗಳು ಹೇಳುತ್ತವೆ. ಅಪರೋಕ್ಷಕ್ಕಿಂತ ಮೊದಲು ಕರ್ಮಾಚರಣೆ ಮಾತ್ರ. ಬಳಿಕ ಅಪರೋಕ್ಷವಾದಾಗಲೆ ಪ್ರತಿಮಾರ್ಚನೆಯಲ್ಲಿ ಅಧಿಕಾರವೆಂದು ಶುಕದೇವ ವ್ಯಾಖ್ಯಾನ. ಅಪರೋಕ್ಷವಾದ ಬಳಿಕ ಕರ್ಮದಲ್ಲಿ ಅಧಿಕಾವಿಲ್ಲ, ಕೇವಲ ಪ್ರತಿಮಾರ್ಚನೆ ಮಾಡಬೇಕೆಂದು ವಿಶ್ವನಾಥವ್ಯಾಖ್ಯಾನ. ಇವೆಲ್ಲವೂ ಪ್ರಮಾಣವಿರುದ್ಧವಾಗಿವೆ.

ಅಜ್ಞೋಽರ್ಚಯೇದೇವಾರ್ಚಾಯಾಮನ್ಯಥಾ ದೋಷವಾನ್ ಭವೇತ್ ।
ಜ್ಞಸ್ತ್ವರ್ಚಯನ್ ಸುಗುಣವಾನ್ ಅನ್ಯಥಾ ದೋಷವಾನ್ ನ ತು ॥
ಇತಿ ಕಾಪಿಲೇಯೇ ॥

ಅಪರೋಕ್ಷವಾಗದಿದ್ದವನು ಪ್ರತಿಮಾರ್ಚನೆ ಮಾಡಲೇಬೇಕು. ಇಲ್ಲದಿದ್ದರೆ ದೋಷವಿದೆ. ಅಪರೋಕ್ಷವಾದ ಬಳಿಕ ಪ್ರತಿಮಾರ್ಚನೆ ಮಾಡದಿದ್ದರೆ ದೋಷವಿಲ್ಲ. ಮಾಡಿದರೆ ಮೋಕ್ಷಾನಂದದ ಅಭಿವ್ಯಕ್ತಿಯಲ್ಲಿ ಆಧಿಕ್ಯರೂಪವಾದ ಉತ್ತಮಗುಣವಿದೆ ಎಂದು ಕಾಪಿಲೇಯಗ್ರಂಥದಲ್ಲಿ ಹೇಳಿದೆ.

* * *

---

೧. ಯಥಾ ಸಾಕ್ಷಾದ್ ಭಗವತಿ ಸಮಾಗತೇ ಬುದ್ಧಿರ್ಭವತಿ ಏವಂ ಕೃಮಿಕೀಟಾದಾವಪಿ ಚೇದ್ ಬುದ್ಧಿಃ ತದಾ ಕರ್ಮನಿವೃತ್ತಿರರ್ಚಾನಿವೃತ್ತಿಶ್ಚೇತಿ । —ವಲ್ಲಭಃ

ಯಾವತ್ ಸರ್ವೇಷು ಭೂತೇಷ್ವವಸ್ಥಿತಂ ಮಾಂ ಸ್ವಹೃದಿ ನ ವೇದ ತಾವತ್ ಸ್ವಕರ್ಮಕೃತ್ ಭವೇತ್ । ಮಜ್ಜ್ಞಾನಹೀನಸ್ಯ ಮದರ್ಚನೇ ಶ್ರದ್ಧಾದ್ಯಸಂಭವಾತ್ । ಅನ್ಯದಾ ತು ಅರ್ಚಾದೌ ಮಾಮರ್ಚಯೇತ್ । —ಶುಕದೇವಃ

ಸರ್ವಭೂತಾತ್ಮದರ್ಶಿತ್ವದಶಾಯಾಮುದ್ಭೂತಾಯಾಂ ಸತ್ಯಾಂ ಕರ್ಮಾನಧಿಕಾರಾತ್ ನ ಸ್ವಕರ್ಮಕೃತ್ । ಕಿಂತು ಜ್ಞಾನಮಿಶ್ರಾಂ ಭಕ್ತಿಂ ಕುರ್ವಾಣಃ ಸನ್ನರ್ಚಾಯಾಂ ಮಾಮರ್ಚಯೇದಿತ್ಯರ್ಥಃ —ವಿಶ್ವನಾಥಃ

ಅಂತರ್ಯಾಮಿ ಭಗವದ್ರೂಪಗಳಲ್ಲಿ ಭೇದವನ್ನು ತಿಳಿಯುವುದು ತಮಸ್ಸಿಗೆ ಸಾಧನವಾಗುವುದು ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಆತ್ಮನಶ್ಚ ಪರಸ್ಯಾಪಿ ಯಃ ಕರೋತ್ಯಂತರೋದರಮ್ ।
ತಸ್ಯ ಭಿನ್ನದೃಶೋ ಮೃತ್ಯುರ್ವಿಧತ್ತೇ ಭಯಮುಲ್ಬಣಮ್ ॥ ೨೬ ॥

ತನ್ನ ಅಂತರ್ಯಾಮಿಗೂ ಇನ್ನೊಬ್ಬನ ಅಂತರ್ಯಾಮಿಗೂ ಪರಸ್ಪರ ಭೇದವನ್ನು ತಿಳಿಯುವವನಿಗೆ 'ಮೃತ್ಯು' ಅಂದರೆ ದುರ್ಜನಸಂಹಾರಕನಾದ ನರಸಿಂಹನು ಭಯಂಕರ ತಮಸ್ಸನ್ನು ನೀಡುತ್ತಾನೆ.

[೧]ಇಲ್ಲಿ ಕರ್ಮಾಧೀನವಾದ ಶರೀರವೈಚಿತ್ರ್ಯವನ್ನು ಆತ್ಮರಲ್ಲಿ ಒಪ್ಪಿ ಆತ್ಮರಿಗೆ ಪರಸ್ಪರ ಸಾಮ್ಯವನ್ನು ಅಲ್ಲಗಳೆದರೆ ನರಕ ಸಿಗುತ್ತದೆ ಎಂದು ವೀರರಾಘವ ವ್ಯಾಖ್ಯಾನ. ಆದರೆ, ಕರ್ಮವೈಚಿತ್ರ್ಯವು ಆಕಸ್ಮಿಕವಲ್ಲ, ಅದಕ್ಕೆ ಆತ್ಮವೈಚಿತ್ರ್ಯ ಕಾರಣವೆನ್ನಲೇಬೇಕು. ತನ್ನಂತೆ ಪರರನ್ನು ಬಗೆದು ಭೂತದಯಾನುಷ್ಠಾನ ಮಾಡದಿದ್ದರೆ ಸಂಸಾರ ತಪ್ಪಿದ್ದಲ್ಲ ಎಂದು ವಿಶ್ವನಾಥವ್ಯಾಖ್ಯಾನ. ಆದರೆ ಕರ್ಮವೇ ಮೋಚಕವಲ್ಲ, ಜನಾರ್ದನ ಸೇವೆ ಮೋಚಕ ಎನ್ನಬೇಕು. ಎಲ್ಲರಲ್ಲಿಯೂ ಭಗವಂತನಿದ್ದಾನೆ ಎಂದು ತಿಳಿಯದೆ ಭೇದವೆಣಿಸಿದರೆ ಸಂಸಾರ ಭಯವೆಂದು ಜೀವಗೋಸ್ವಾಮಿ ವ್ಯಾಖ್ಯಾನ. ಆದರೆ ಈ ಅಭಿಪ್ರಾಯ ಶ್ಲೋಕದಲ್ಲಿ ಕಾಣುವುದಿಲ್ಲ. ಅಪರೋಕ್ಷವಾದ ಬಳಿಕ ತನಗೂ ಪರಮಾತ್ಮನಿಗೂ ಭೇದವನ್ನು ತಿಳಿದು ಉಪಾಸನೆ ಮಾಡಿದರೆ ಮರಣಭಯವೆಂದು ವಲ್ಲಭವ್ಯಾಖ್ಯಾನ. ಆದರೆ ಇದು ವಿರುದ್ಧ. ಭೇದೋಪಾಸನೆ ಮಾಡದಿದ್ದರೇ ನಿತ್ಯನರಕ. ಸರಿಯಾದ ವ್ಯಾಖ್ಯಾನ ಇದು–

ಅಂತರೋದರಂ ಭಿನ್ನಂ ಬ್ರಹ್ಮ । ಆತ್ಮಸ್ಥಮನ್ಯಸ್ಥಂ ಚ ಬ್ರಹ್ಮ ಯೋ ಭೇದೇನ ಪಶ್ಯತಿ । ಉದರಂ ಬ್ರಹ್ಮೇತಿ ಶ್ರುತೇಃ ॥

'ಅಂತರಾ' ಎಂದರೆ ಭೇದಯುಕ್ತವಾಗಿ 'ಉದರಂ' ಉತ್ ಅರ, ದೋಷರಹಿತವಾದ ಬ್ರಹ್ಮನನ್ನು ತಿಳಿಯುವುದು. ತನ್ನಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮನನ್ನೂ

---

೧. ಬ್ರಹ್ಮಾತ್ಮಕಾನಾಂ ಜೀವಾನಾಂ ಜ್ಞಾನೈಕಾಕಾರತಯಾ ಸಾಮ್ಯೇ ಸತಿ ಕರ್ಮಾಯತ್ತದೇವಾದಿಶರೀರಕೃತವೈಚಿತ್ರ್ಯಮಾತ್ಮಗತತ್ವೇನ ಯೋಽನುಸಂಧತ್ತೇ ತಸ್ಯ ಭಿನ್ನದೃಶಃ ಮೃತ್ಯುರ್ಯಮಃ ಉಲ್ಬಣಂ ಭಯಂ ವಿಧತ್ತೇ । ಸ ನರಕಪಾತೀತ್ಯರ್ಥಃ ।
–ವೀರರಾಘವಃ

ಆತ್ಮೇತ್ಯೇವೋಪಾಸೀತ । ಯಸ್ತು ಪುನಃ ಈಷದಪಿ ಭೇದಂ ಕರೋತಿ ತಸ್ಯ ಭಿನ್ನದೃಶಃ ಉಲ್ಬಣಂ ಭಯಂ ವಿಧತ್ತೇ । ಅತೋ ಭಕ್ತಿಫಲಂ ದೂರೇ, ಮೃತ್ಯುಸ್ತು ಸೇತ್ಸ್ಯತೀತಿ ಜ್ಞಾನೋತ್ತರಂ ಮೃತ್ಯೋರಭಾವಾತ್ ಏತನ್ನ ಕರ್ತವ್ಯಮಿತಿ ಫಲಿತಂ । –ವಲ್ಲಭಃ

ಇನ್ನೊಬ್ಬರಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮನನ್ನೂ ಬೇರೆ ಬೇರೆ ಎಂದು ಯಾರು ತಿಳಿಯುವನೋ ಅವನಿಗೆ ತಮಸ್ಸಿನ ಭಯವಿದೆ ಎಂದರ್ಥ. ಉದರವೆಂದು ಬ್ರಹ್ಮನ ನಾಮವೆಂದು ಶ್ರುತಿ ಇದೆ.

* * *

ಹರಿಭಕ್ತರನ್ನು ತಾರತಮ್ಯದಿಂದಲೆ ಪೂಜಿಸಬೇಕೆಂಬ ಅಭಿಪ್ರಾಯದಿಂದ ಜೀವತಾರತಮ್ಯವನ್ನು ಕಪಿಲನು ತಾಯಿಗೆ ಹೇಳುತ್ತಾನೆ–

ಜೀವಾಃ ಶ್ರೇಷ್ಠಾ ಹ್ಯಜೀವಾನಾಂ ತತಃ ಪ್ರಾಣಭೃತಃ ಶುಭೇ ।
ತತಃ ಸಚಿತ್ತಾಃ ಪ್ರವರಾಸ್ತತಶ್ಚೇಂದ್ರಿಯವೃತ್ತಯಃ ॥ ೨೮ ॥

ತತ್ರಾಪಿ ಸ್ಪರ್ಶವೇದಿಭ್ಯಃ ಪ್ರವರಾ ರಸವೇದಿನಃ ।
ತೇಭ್ಯೋ ಗಂಧವಿದಃ ಶ್ರೇಷ್ಠಾಸ್ತತಃ ಶಬ್ದವಿದೋ ವರಾಃ ॥ ೨೯ ॥

ರೂಪಭೇದವಿದಸ್ತತ್ರ ತತಶ್ಚೋಭಯತೋದತಃ ।
ತೇಷಾಂ ಬಹುಪದಃ ಶ್ರೇಷ್ಠಾಶ್ಚತುಷ್ಪಾದಸ್ತತೋ ದ್ವಿಪಾತ್ ॥ ೩೦ ॥

ತತೋ ವರ್ಣಾಶ್ಚ ಚತ್ವಾರಸ್ತೇಷಾಂ ಬ್ರಾಹ್ಮಣ ಉತ್ತಮಃ ।
ಬ್ರಾಹ್ಮಣೇಷ್ವಪಿ ವೇದಜ್ಞೋ ಹ್ಯರ್ಥಜ್ಞೋಽಭ್ಯಧಿಕಸ್ತತಃ ॥ ೩೧ ॥

ಅರ್ಥಜ್ಞಾತ್ ಸಂಶಯಚ್ಛೇತ್ತಾ ತತಃ ಶ್ರೇಯಾನ್ ಸ್ವಧರ್ಮಕೃತ್ ।
ಮುಕ್ತಸಂಗಸ್ತತೋ ಭೂಯಾನ್ ನ ದೋಗ್ಧಾ ಧರ್ಮಮಾತ್ಮನಃ ॥ ೩೨ ॥

ತಸ್ಮಾನ್ಮಯ್ಯರ್ಪಿತಾಶೇಷಕ್ರಿಯಾರ್ಥಾತ್ಮರತಿರ್ನರಃ ।
ಮಯ್ಯರ್ಪಿತಾತ್ಮನಃ ಪುಂಸೋ ಮಯಿ ಸಂನ್ಯಸ್ತಕರ್ಮಣಃ ।
ನ ಪಶ್ಯಾಮಿ ಪರಂ ಭೂತಮಕರ್ತುಃ ಸಮದರ್ಶನಾತ್ ॥ ೩೩ ॥

ಮುಕ್ತ್ಯಯೋಗ್ಯ ಜೀವರಿಗಿಂತ ಯೋಗ್ಯಜೀವರು ಅಂದರೆ ಮುಕ್ತರು ಶ್ರೇಷ್ಠರು. ಅವರಲ್ಲಿಯೂ ಸ್ಥಾವರಗಳಿಗಿಂತ ಜಂಗಮಪ್ರಾಣಿಗಳು ಶ್ರೇಷ್ಠ. ಅವುಗಳಲ್ಲಿ ಕೇವಲ ಮನಸ್ಸುಳ್ಳವುಗಳಿಗಿಂತ ಇಂದ್ರಿಯವ್ಯಾಪಾರ ಉಳ್ಳವುಗಳು ಶ್ರೇಷ್ಠ. ಅವುಗಳಲ್ಲಿಯೂ ಸ್ಪರ್ಶಮಾತ್ರವನ್ನು ತಿಳಿಯುವವುಗಳಿಗಿಂತ ರಸವನ್ನು ತಿಳಿಯಬಲ್ಲ ಮೀನು ಮುಂತಾದವು, ಅವುಗಳಿಗಿಂತ ಗಂಧವನ್ನು ತಿಳಿಯುವ ಭ್ರಮರಾದಿಗಳು. ಅವುಗಳಿಗಿಂತ ಶಬ್ದವನ್ನು ತಿಳಿಯುವ ಸರ್ಪಾದಿಗಳು. ಅವುಗಳಿಗಿಂತ ನಾನಾ ರೂಪಗಳನ್ನು ತಿಳಿಯುವ ಕಾಗೆ ಮುಂತಾದುವು, ಅವುಗಳಿಗಿಂತ ಎರಡುಸಾಲು ಹಲ್ಲು ಉಳ್ಳಪ್ರಾಣಿಗಳು,

ಅವುಗಳಲ್ಲಿಯೂ ಕಾಲುಗಳಿಲ್ಲದವುಗಳಿಗಿಂತ ಬಹಳಕಾಲುಗಳುಳ್ಳವುಗಳು, ಅವುಗಳಿಗಿಂತ ನಾಲ್ಕುಕಾಲಿನ ಪ್ರಾಣಿಗಳು. ಅವುಗಳಿಗಿಂತ ಎರಡುಕಾಲಿನ ಮಾನವರು, ನಾಲ್ಕುವರ್ಣದವರು, ಅವರಲ್ಲಿಯೂ ಬ್ರಾಹ್ಮಣರು ಅವರಲ್ಲಿಯೂ ವೇದವನ್ನು ಬಲ್ಲವರು ಅವರಿಗಿಂತ ವೇದಾರ್ಥಬಲ್ಲ ಋಷಿಗಳು, ಅವರಿಗಿಂತ ವೇದಾರ್ಥದಲ್ಲಿ ಸಂಶಯ ಕಳೆಯಬಲ್ಲ ದೇವತೆಗಳು. ಅವರಲ್ಲಿಯೂ ತನ್ನ ವಿಹಿತಧರ್ಮವನ್ನುಪೂರ್ತಿ ಅನುಷ್ಠಾನ ಮಾಡುವ ದೇವೇಂದ್ರ, ಅವನಿಗಿಂತ ಭಗವತ್ಪ್ರೀತಿಯನ್ನು ಹೊರತು ಬೇರೇನನ್ನೂ ಬಯಸದೆ ವಿಷ್ಣುಧರ್ಮವನ್ನಾಚರಿಸುವ ಶೇಷ ಗರುಡರು, ಅವರಿಗಿಂತ ಎಲ್ಲ ಕರ್ಮಫಲವನ್ನು ಭಗವಂತನಿಗೆ ಅರ್ಪಿಸುತ್ತ ಎಲ್ಲರಿಗಿಂತ ಹೆಚ್ಚಿನ ಭಗವದ್ಭಕ್ತಿ ಸಂಪನ್ನನಾಗಿ ಪರಾಂತಕಾಲದವರೆಗೂ ಬದುಕಿ ನಿರ್ದೋಷನಾದ ಪರಬ್ರಹ್ಮನನ್ನು ಕಾಣುವವನು ಪರಮಾತ್ಮನಿಂದಲೆ ಹುಟ್ಟಿದವನು ಚತುರ್ಮುಖಬ್ರಹ್ಮ ಶ್ರೇಷ್ಠ ಅವನಿಗಿಂತ ಶ್ರೇಷ್ಠನಾದ ಇನ್ನೊಬ್ಬ ಜೀವನನ್ನು ನಾ ಕಾಣೆ.

ಈ ತಾರತಮ್ಯಕ್ಕನುಗುಣವಾಗಿಯೆ ಜೀವರನ್ನು ಭಗವಂತನ ಪ್ರತಿಮೆಗಳೆಂದು ಪೂಜಿಸಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜೀವರನ್ನು ಕರ್ಮಾನುಗುಣವಾಗಿ ಆಗಾಗ ಬಂದು ಹೋಗುವ ಶರೀರಪ್ರಯುಕ್ತ ತಾರತಮ್ಯದಿಂದಲೇ ಪೂಜಿಸಬೇಕು ಎಂದಿದ್ದಾರೆ. ಜೀವಸ್ವರೂಪದಲ್ಲಿ ತಾರತಮ್ಯವನ್ನು ಅವರು ಹೇಳಿಲ್ಲ. ಅದನ್ನು ಅವರು ಒಪ್ಪುವುದೂ ಇಲ್ಲ. ೨೬ನೇ ಶ್ಲೋಕದಲ್ಲಿ ಶರೀರವೈಚಿತ್ರ್ಯಪ್ರಯುಕ್ತವಾಗಿ ಆತ್ಮನಲ್ಲಿ ವೈಚಿತ್ರ್ಯವನ್ನು ತಿಳಿಯುವುದು ನರಕಸಾಧನವೆಂದು ಹೇಳಿದ ವೀರರಾಘವ ವ್ಯಾಖ್ಯಾನವೇ ಈ ಶ್ಲೋಕದಲ್ಲಿ ಶರೀರಕೃತವೈಚಿತ್ರ್ಯಕ್ಕೆ ಅನುಸಾರವಾಗಿ ಆತ್ಮನಿಗೆ ದಾನಮಾನಾದಿ ಸತ್ಕಾರ ಮಾಡಬೇಕೆಂದು ಹೇಳಿದೆ. ಆದರೆ ಶರೀರವೈಚಿತ್ರ್ಯವು ಯೋಗ್ಯತೆಗೆ ಅನನುಗುಣವಾಗುವುದರಿಂದ ಸತ್ಕಾರವೂ ಅನನುಗುಣವಾಗಿ ಅವರ್ಥ ಕಾರಣವಾಗುವ ಅಪಾಯವಿದೆ. ಗರುಡ ಶೇಷರಿಗಿಂತ ಹೆಚ್ಚಿನ ಸತ್ಕಾರ ಜಯವಿಜಯರಿಗೆ ಮಾಡುವ ಪ್ರಸಂಗವೂ ಇದೆ. ಜೀವಗೋಸ್ವಾಮಿ ವ್ಯಾಖ್ಯಾನವೂ ಎಲ್ಲರಲ್ಲಿಯೂ ಸಮಾನವಾಗಿ ಭಗವಂತನಿರುವನೆಂಬ ಭಾವನೆಯಿಂದ ಪೂಜೆ ಸಲ್ಲಿಸಬೇಕೆಂದು ಹಿಂದೆ ಹೇಳಿ ಇಲ್ಲಿ ತಾರತಮ್ಯಾನುಸಾರ ಪೂಜೆ ಮಾಡಬೇಕೆಂದಿದೆ.

ಶರೀರದಿಂದ ಮನುಷ್ಯನೇ ಶ್ರೇಷ್ಠ. ಅವನೇಕೆ ಗಿಡಮರ ಪಶುಪಕ್ಷಿಗಳನ್ನು ಪೂಜಿಸಬೇಕು? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಉತ್ತರವಿಲ್ಲ. ವಲ್ಲಭವ್ಯಾಖ್ಯಾವದಲ್ಲಿ ತಾರತಮ್ಯಾನುಸಾರ ಪೂಜೆ ಎಂದಿಲ್ಲ. ಬ್ರಾಹ್ಮಣ ಪೂಜ್ಯ. ಏಕೆಂದರೆ ತಾರತಮ್ಯದಲ್ಲಿ ಅವನು ಶ್ರೇಷ್ಠ ಎಂದಿದೆ. ವಸ್ತುತಃ ಜೀವರ ತಾರತಮ್ಯಾನುಸಾರವಾಗಿ ಅವರಲ್ಲಿ ಭಗವಂತನ ಸನ್ನಿಧಾನ ತಾರತಮ್ಯ ತಿಳಿದು ಪೂಜಿಸಬೇಕು.

ಪ್ರಾಣಭೃತಶ್ಚಲನಯುಕ್ತಾಃ ।

ಪಶುವೃಕ್ಷಾದಿಭೇದೇನ ಜೀವಾ ಏವ ಸ್ವತಃ ಸ್ಥಿತಾಃ ।
ಸಂಸೃತೌ ವ್ಯತ್ಯಯಸ್ತೇಷಾಂ ಮುಕ್ತೌ ತತ್ತತ್‌ಸ್ವರೂಪತಾ ॥

ತತ್ರ ಸ್ಥಾವರಮುಕ್ತೇಭ್ಯೋ ವರಾ ಜಂಗಮಮುಕ್ತಕಾಃ ।
ತೇಭ್ಯೋ ಮಾನುಷಮುಕ್ತಾಶ್ಚ ವಿಪ್ರಮುಕ್ತಾಸ್ತತೋಽಧಿಕಾಃ ॥

ತತ್ತೋಪದೇಶಮಾತ್ರೇಣ ಮುಕ್ತೇಭ್ಯೋ ವೇದವೇದಿನಃ ।
ಅರ್ಥಜ್ಞಾ ಋಷಯಸ್ತೇಭ್ಯೋಽತೋ ದೇವಾಃ ಸಂಶಯಚ್ಛಿದಃ ॥

ಪೂರ್ಣಧರ್ಮಾ ತತಸ್ತ್ವಿಂದ್ರೋ ನಿಃಸಂಗೋ ಗರುಡಸ್ತತಃ ।
ಭಕ್ತಿಪೂರ್ಣೋ ಹರೇರ್ಬ್ರಹ್ಮಾ ತಸ್ಮಾನ್ನಾನ್ಯೋಽಧಿಕಸ್ತತಃ ।
ಮುಕ್ತೌ ವಾ ಸಂಸೃತೌ ವಾಽಪಿ ಸಮ್ಯಗೇಷು ಹಿ ತೇ ಗುಣಾಃ ॥

ಇತಿ ಕಾಪಿಲೇಯೇ ॥

'ಜೀವ'ರಿಗಿಂತ 'ಪ್ರಾಣಭೃತ'ರು ಶ್ರೇಷ್ಠರೆಂದರೆ ಸ್ಥಾವರಗಳಿಗಿಂತ ಜಂಗಮ ಪ್ರಾಣಿಗಳು ಶ್ರೇಷ್ಠ ಎಂದರ್ಥ.

''ಜೀವರಿಗೆ ಕೇವಲ ಬಾಹ್ಯ ಜಡಶರೀರ ಪ್ರಯುಕ್ತವಾಗಿಯೆ ಪಶುವೃಕ್ಷಾದಿ ಆಕಾರವಲ್ಲ. ಜೀವಸ್ವರೂಪದಲ್ಲಿಯೆ ಅವರು ಪಶುವೃಕ್ಷಾದಿರೂಪದಿಂದ ಇದ್ದಾರೆ. ಸಂಸಾರಾವಸ್ಥೆಯಲ್ಲಿ ಪುಣ್ಯಪಾಪಕರ್ಮಗಳ ಪ್ರಯುಕ್ತವಾಗಿ ಸ್ವರೂಪಕ್ಕೆ ಅನನುಗುಣವಾದ ಬಾಹ್ಯಶರೀರ ಬರಬಹುದು. ಆದರೆ ಮೋಕ್ಷದಲ್ಲಿ ಪಶುವೃಕ್ಷಾದಿರೂಪರಾದ ಜೀವರು ಪಶುವೃಕ್ಷಾದಿರೂಪದಿಂದಲೆ ಇರುತ್ತಾರೆ. ಜೀವತಾರತಮ್ಯವು ಜೀವಸ್ವರೂಪ ಭೇದದಿಂದಲೆ ನಿರ್ಧಾರಿತವಾಗುತ್ತದೆ. ಅದು ಹೇಗೆಂದರೆ ಸ್ಥಾವರ ಮುಕ್ತರಿಗಿಂತ ಜಂಗಮ ಮುಕ್ತರು ಶ್ರೇಷ್ಠರು. ಅವರಲ್ಲಿ ಉಳಿದವರಿಗಿಂತ ಮಾನವಮುಕ್ತರು ಶ್ರೇಷ್ಠರು, ಅವರಲ್ಲಿಯೂ ಉಳಿದವರಿಗಿಂತ ಬ್ರಾಹ್ಮಣಮುಕ್ತರು ಶ್ರೇಷ್ಠರು. ಅವರಲ್ಲಿಯೂ ವೇದಾಧ್ಯಯನ ಮಾಡದೆ ಅದರ ಅರ್ಥೋಪದೇಶ ಪಡೆದು ಉಪಾಸನೆ ಮಾಡಿ ಮುಕ್ತರಾಗುವವರಿಗಿಂತ ವೇದಾಧ್ಯಯನ ಮಾಡಿ ಮೋಕ್ಷ ಪಡೆಯುವವರು ಶ್ರೇಷ್ಠರು. ಮಾನವರಿಗಿಂತಲೂ ವಿಶೇಷವಾಗಿ ವೇದಾರ್ಥವನ್ನು ಬಲ್ಲ ಋಷಿಗಳು ಶ್ರೇಷ್ಠರು. ಅವರಿಗಿಂತಲೂ ವೇದಾರ್ಥದ ವಿಷಯದಲ್ಲಿ ಎಲ್ಲ ಸಂಶಯಗಳನ್ನು ಪರಿಹರಿಸಬಲ್ಲ ದೇವತೆಗಳು ಶ್ರೇಷ್ಠರು. ಅವರಲ್ಲಿಯೂ ಉಳಿದವರಿಗಿಂತ ಸ್ವಧರ್ಮವನ್ನು ಪೂರ್ತಿ ಅನುಷ್ಠಾನ ಮಾಡುವ ಇಂದ್ರಶ್ರೇಷ್ಠ. ಅವನಿಗಿಂತ ಫಲದಲ್ಲಿ ಆಸಕ್ತಿ ಮಾಡದೆ ಕರ್ಮ

ಮಾಡುವ ಗರುಡ ಶ್ರೇಷ್ಠ. ಅವನಿಗಿಂತಲೂ ಎಲ್ಲರಿಗಿಂತ ಅಧಿಕ ಹರಿಭಕ್ತಿಪೂರ್ಣನಾದ ಬ್ರಹ್ಮ ಶ್ರೇಷ್ಠ. ಅವನಗಿಂತ ಉತ್ತಮನಾದ ಜೀವ ಮುಕ್ತಿಯಲ್ಲಾಗಲಿ ಸಂಸಾರದಲ್ಲಾಗಲಿ ಇನ್ನೊಬ್ಬನಿಲ್ಲ. 'ಅರ್ಥಜ್ಞ' 'ಸಂಶಯಚ್ಛೇತ್ತ' ಎಂದು ಮುಂತಾದ ಶಬ್ದಗಳಿಂದ ವಿಶೇಷವಾಗಿ ಅರ್ಥಜ್ಞರು ಹಾಗೂ ಸಂಶಯಚ್ಛೇತೃಗಳಾದ ಋಷಿಗಳು ದೇವತೆಗಳು ಮುಂತಾದವರನ್ನಿಟ್ಟುಕೊಳ್ಳಬೇಕು ಎಂದು ಕಾಪಿಲೇಯದಲ್ಲಿ ಹೇಳಿದೆ.

* * *

ತಾರತಮ್ಯಾನುಸಾರ ಜೀವರನ್ನು ಪೂಜಿಸುವುದೇಕೆ ಎಂದರೆ ಕಾರಣವನ್ನು ಕಪಿಲನು ಮಾತೆಗೆ ಹೇಳುತ್ತಾನೆ–

ಮನಸೈತಾನಿ ಭೂತಾನಿ ಪ್ರಣಮೇದ್ ಬಹುಮಾನಯನ್ ।
ಈಶ್ವರೋ ಜೀವಕಲಯಾ ಪ್ರವಿಷ್ಟೋ ಭಗವಾನಿತಿ ॥ ೩೪ ॥

ಪರಮಾತ್ಮನ ಸನ್ನಿಧಾನ ಜೀವರಲ್ಲಿ ಅವರ ತಾರತಮ್ಯಕ್ಕನುಗುಣವಾಗಿದೆ ಎಂದು ತಿಳಿದು ತಾರತಮ್ಯದಿಂದ ಪೂಜಿಸುತ್ತ ಆ ಜೀವರು ಉಪಾಸಕನಿಗಿಂತ ಶ್ರೇಷ್ಠರಾಗಿದ್ದಲ್ಲಿ ಪರಮಾತ್ಮನ ಭಿನ್ನಾಂಶರಾದ ಅವರೊಂದಿಗೆ ಅವರಲ್ಲಿರುವ ಪರಮಾತ್ಮನನ್ನು ಭಕ್ತಿಭಾವದಿಂದ ನಮಿಸಬೇಕು. (ಜೀವರು ಸಮಾನರು ಅಥವಾ ಕಡಿಮೆಯವರಾಗಿದ್ದರೆ ಕೇವಲ ಭಗವಂತನನ್ನು ಮಾತ್ರ ಅವರಲ್ಲಿ ಕಂಡು ನಮಿಸಬೇಕು.)

ಇಲ್ಲಿ ಪರಮಾತ್ಮ 'ಜೀವಕಲಯಾ' ಜೀವ ಎಂಬ ತನ್ನ ಸ್ವರೂಪಾಂಶದಿಂದ ಪ್ರಾಣಿಗಳಲ್ಲಿ ಪ್ರವಿಷ್ಟನಾಗಿದ್ದಾನೆ ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಶುಕದೇವ ವಲ್ಲಭ ವ್ಯಾಖ್ಯಾನಗಳು ಹೇಳುತ್ತವೆ. ಅಂತರ್ಯಾಮಿ ರೂಪದಿಂದಲೂ ಜೀವರೆಂಬ ಸ್ವರೂಪಾಂಶದಿಂದಲೂ ಪರಮಾತ್ಮ ಪ್ರವೇಶಿಸಿದ್ದಾನೆ ಎನ್ನುತ್ತವೆ. ಜೀವನು ಪರಮಾತ್ಮನ ಸ್ವರೂಪಾಂಶನಲ್ಲ. ಭಿನ್ನಾಂಶ. ಅದರಿಂದ ಜೀವನೆಂಬ ಭಿನ್ನಾಂಶದೊಂದಿಗೆ ಅವನೊಳಗಿರುವ ಪರಮಾತ್ಮನನ್ನು ನಮಿಸಬೇಕು.

ಜೀವಕಲಯಾ ಸಹ । ಭೂತಾನಿ ಬಹುಮಾನಯಂಸ್ತದಾಲಯತ್ವೇನೇಶ್ವರಂ ಪ್ರಣಮೇತ್ ।

ಜೀವನೆಂಬ ಭಿನ್ನಾಂಶದೊಂದಿಗೆ ಎಂದರ್ಥ. ಪ್ರಾಣಿಗಳನ್ನು ಪೂಜಿಸುತ್ತ ಜೀವರೆಂಬ ಭಿನ್ನಾಂಶಗಳೊಂದಿಗೆ ಅವರೊಳಗಿರುವ ಭಗವಂತನನ್ನು ನಮಿಸಬೇಕು ಎಂದು ಅನ್ವಯ.

* * *

ಪರಮಾತ್ಮಪ್ರಾಪ್ತಿಗೆ ಜ್ಞಾನಯೋಗ ಭಕ್ತಿಯೋಗಗಳೆರಡೂ ಬೇಕೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಭಕ್ತಿಯೋಗಶ್ಚ ಯೋಗಶ್ಚ ಮಯಾ ಮಾನವ್ಯುದಾಹೃತಃ ।
ಯಯೋರೇಕತರೇಣೈವ ಪುರುಷಃ ಪುರುಷಂ ವ್ರಜೇತ್ ॥ ೩೫ ॥

ಮನುಕುಮಾರಿ, ಭಕ್ತಿಯೋಗವನ್ನೂ ಜ್ಞಾನಯೋಗವನ್ನೂ ನಾನು ನಿನಗೆ ಉಪದೇಶಿಸಿದ್ದೇನೆ. ಇವುಗಳಲ್ಲಿ ಯಾವುದೇ ಒಂದನ್ನು ಅನುಸರಿಸಿದರೂ ಜೊತೆಗೆ ಇನ್ನೊಂದು ಇದ್ದೇ ಇರುವುದರಿಂದ ಜೀವನಿಗೆ ಪರಮಾತ್ಮಪ್ರಾಪ್ತಿ ಆಗೇ ಆಗುತ್ತದೆ.

[೧]ಇಲ್ಲಿ ಜ್ಞಾನಯೋಗ ಭಕ್ತಿಯೋಗಗಳೆರಡೂ ಸ್ವತಂತ್ರವಾಗಿ ಮೋಕ್ಷಸಾಧನಗಳು. ಅದರಿಂದ ಮೋಕ್ಷಕ್ಕೆ ಯಾವುದಾದರೊಂದು ಸಾಕು ಎಂದು ಹೇಳಿದಂತಿದೆ. ಹಾಗೆಯೇ ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಆತ್ಮನನ್ನು ಬ್ರಹ್ಮನ ಶರೀರವೆಂದು ಉಪಾಸನೆ ಮಾಡುವಾಗ ಜ್ಞಾನಯೋಗ ಸ್ವತಂತ್ರವಾಗಿ ಭಗವದಾನಂದವಿಲ್ಲದ ಮೋಕ್ಷಕ್ಕೆ ಕಾರಣವಾಗಬಲ್ಲುದು. ಬ್ರಹ್ಮೋಪಾಸನೆಗೆ ಅಂಗವಾಗಿ ಆತ್ಮೋಪಾಸನ ಮಾಡುವಾಗ ಈ ಜ್ಞಾನಯೋಗ ಭಕ್ತಿಯೋಗಕ್ಕೆ ಅಂಗವಾಗುತ್ತದೆ. ಭಕ್ತಿಯೋಗವು ಭಗವದಾನಂದಉಳ್ಳ ಮೋಕ್ಷಕ್ಕೆ ಕಾರಣವಾಗುತ್ತದೆ ಎಂದು ಅಲ್ಲಿ ಹೇಳಿದೆ. ವಿಶ್ವನಾಥವ್ಯಾಖ್ಯಾನದಲ್ಲಿ ಯೋಗವು ನಿರ್ಗುಣಮೋಕ್ಷಕ್ಕೂ ಭಕ್ತಿಯೋಗವು ಸಗುಣಮೋಕ್ಷಕ್ಕೂ ಕಾರಣ ಎಂದಿದೆ. ಇಲ್ಲಿ ಯೋಗವೆಂದರೆ ಅಷ್ಟಾಂಗಯೋಗ. ಶುಕದೇವವ್ಯಾಖ್ಯಾನದಲ್ಲಿ ಜ್ಞಾನವು ಭಕ್ತಿಗೆ ಅಂಗವಾಗಿದೆ. ಸಾಧನವಾಗಿದೆ.

---

೧. ತ್ರಿವಿಧಂ ಹಿ ಪ್ರತ್ಯಗಾತ್ಮೋಪಾಸನಂ । ಅಬ್ರಹ್ಮಾತ್ಮಕಸ್ವತಂತ್ರಾತ್ಮೋಪಾಸನಂ, ಭಗವದುಪಾಸನಾಂಗತಯಾ ಅಪ್ರಾಧಾನ್ಯೇನೋಪಾಸನಂ, ಬ್ರಹ್ಮಾತ್ಮಕ ಸ್ವಾತ್ಮೋಪಾಸನಂ ಚೇತಿ । ತತ್ರಾದ್ಯಸ್ಯ ನ ಭಗವತ್ಪ್ರಾಪ್ತಿಸಾಧನತ್ವಂ । ಅಪ್ರಾಧಾನ್ಯೇನಾತ್ಮಾನುಚಿಂತನಂ ತು ಭಗವದ್ಭಕ್ತಿನಿರ್ವರ್ತಕಮಿತಿ ಪೂರ್ವಮುಕ್ತಂ । ಪ್ರಾಧಾನ್ಯೇನ ಬ್ರಹ್ಮಾತ್ಮಕಪ್ರಕೃತಿವಿಯುಕ್ತಾತ್ಮಸ್ವರೂಪೋಪಾಸನಂ ತು ಸಾಕ್ಷಾದೇವ ಮುಕ್ತಿಸಾಧನಮಿತ್ಯತ್ರೋಚ್ಯತೇ । –ವೀರರಾಘವಃ

ಭಕ್ತಿಯೋಗೇನ ಚಿದ್ಘನಮದೀಯಶ್ರೀಮೂರ್ತಿಸಾಕ್ಷಾತ್ಕಾರಃ । ಅಷ್ಟಾಂಗಯೋಗೇನ ಚ ಮನ್ನಿರ್ವಿಶೇಷರೂಪಸಾಕ್ಷಾತ್ಕಾರ ಇತ್ಯುಭಯೋರೇವ ಮತ್ಪ್ರಾಪ್ತಿಶಬ್ದೇನ ಶಾಸ್ತ್ರೇಷೂಕ್ತೇಃ । –ವಿಶ್ವನಾಥಃ

ಭಕ್ತ್ಯುತ್ಪಾದಕತಯಾ ಜ್ಞಾನಸ್ಯೈವ ಪ್ರಾಧಾನ್ಯವಿವಕ್ಷಯಾ ಜ್ಞಾನಸ್ಯೈವ ಧ್ರುವಾಸ್ಮೃತಿರೂಪಭಕ್ತ್ಯಾಕಾರತಯಾ ತೇನೈವ ವ್ರಜೇದಿತ್ಯರ್ಥಃ । ಜ್ಞಾನಸ್ಯ ಸಾಧನತ್ವೇನ ಭಕ್ತ್ಯುಪಯೋಗಿತ್ವವಿವಕ್ಷಯಾ ಭಕ್ತ್ಯೈವ ವ್ರಜೇತ್ । –ಶುಕದೇವಃ

ಸಾಧನಪ್ರಾಧಾನ್ಯ ವಿವಕ್ಷೆಯಿಂದ ಜ್ಞಾನಯೋಗವು ಮೋಕ್ಷಸಾಧನ. ಸಾಧ್ಯಪ್ರಾಧಾನ್ಯ ವಿವಕ್ಷೆಯಿಂದ ಭಕ್ತಿಯೋಗ ಮೋಕ್ಷಸಾಧನ ಎಂದಿದೆ.

ವಸ್ತುತಃ ಜ್ಞಾನಯೋಗ ಭಕ್ತಿಯೋಗಗಳಿಗೆ ಫಲಗಳು ಬೇರೆ ಬೇರೆ ಇಲ್ಲ. ಮತ್ತು ಜ್ಞಾನಯೋಗವೇ ಭಕ್ತಿಗೆ ಸಾಧನವೆಂದೂ ನಿಯಮವಿಲ್ಲ. ಭಕ್ತಿ ಜ್ಞಾನಕ್ಕೂ ಜ್ಞಾನ ಭಕ್ತಿಗೂ ಪರ್ವಭೇದದಿಂದ ಪರಸ್ಪರ ಸಾಧನಸಾಧ್ಯಗಳೆನಿಸುತ್ತವೆ. ಎರಡೂ ಜೊತೆಗೇ ಇರುತ್ತವೆ. ಬೇರೆ ಬೇರೆಯಾಗಿ ಸಾಧನವಾಗುವುದಿಲ್ಲ. ಅದರಿಂದ ಯುವುದಾದರೊಂದು ಇದ್ದರೂ ಮೋಕ್ಷ ನಿಶ್ಚಿತ. ಏಕೆಂದರೆ ಇನ್ನೊಂದೂ ಜೊತೆಗೆ ಇದ್ದೇ ಇರುತ್ತದೆ ಎನ್ನಬೇಕು.

ಏಕತರಭಾವೇಽನ್ಯತರಸ್ಯ ನಿಯತತ್ವಾದೇಕತರೇಣೈವ ।

ಒಂದಿದ್ದರೆ ಇನ್ನೊಂದು ಇದ್ದೇ ಇರುವುದರಿಂದಲೂ ಒಂದರಿಂದ ಮೋಕ್ಷ ಸಿಕ್ಕಿಯೇ ಸಿಗುತ್ತದೆ, (ಏವಕಾರ ಅಯೋಗ ವ್ಯವಚ್ಛೇದಾರ್ಥಕ ಹೊರತು ಅನ್ಯಯೋಗ ವ್ಯವಚ್ಛೇದಕವಲ್ಲ.)

* * *

ಕಾಲಸ್ವರೂಪವನ್ನು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಯತ್ ತದ್ ಭಗವತೋ ರೂಪಂ ಬ್ರಹ್ಮಣಃ ಪರಮಾತ್ಮನಃ ।
ಪರಂ ಪ್ರಧಾನಾತ್ ಪುರುಷಾದ್ ದೈವಂ ಕರ್ಮವಿಚೇಷ್ಟಿತಮ್ ॥ ೩೬ ॥

ಗುಣಪೂರ್ಣ ಸರ್ವಾಂತರ್ಯಾಮಿಯಾದ ಸರ್ವದೇವೋತ್ತಮ ಕಾಲರೂಪಿ ಭಗವಂತನ ಸ್ವರೂಪವು ಪ್ರಕೃತಿಗಿಂತಲೂ ಚತುರ್ಮುಖನಿಗಿಂತಲೂ ಉತ್ತಮವಾಗಿದ್ದು ಎಲ್ಲರ ಕರ್ಮಗಳೂ ಅದರ ಪ್ರೇರಣೆಯಿಂದಲೇ ಆಗುವುವು.

ಇಲ್ಲಿ 'ಕರ್ಮವಿಚೇಷ್ಟಿತಂ' ಎಂದರೆ ಕರ್ಮಜನ್ಯವಾದ ಸಂಸಾರ ಬಂಧವು ಕಾಲದಿಂದಾಗುತ್ತದೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಶುಕದೇವವ್ಯಾಖ್ಯಾನದಲ್ಲಿ ಕರ್ಮಜನ್ಯ ವಿವಿಧವ್ಯಾಪಾರಉಳ್ಳ ಸಮಸ್ತಪ್ರಪಂಚ ಪರಮಾತ್ಮನ ರೂಪವೆಂದೂ, ವಲ್ಲಭವ್ಯಾಖ್ಯಾನದಲ್ಲಿ ಕರ್ಮವೂ 'ವಿಚೇಷ್ಟಿತ' ಎಂದರೆ ನಾನಾವ್ಯಾಪಾರ ಮಾಡುವ ಸ್ವಭಾವವೂ ಕಾಲಾಧೀನ ಎಂದೂ ಹೇಳಿದೆ. ಆದರೆ ಸಂಸಾರಕ್ಕೆ ಕರ್ಮ ಕಾರಣ, ಕರ್ಮಕ್ಷಯದಿಂದ ಮೋಕ್ಷ. ಹೊರತು ಕಾಲವು ಸಂಸಾರಕ್ಕೆ ಕಾರಣವಲ್ಲ. ಸಂಸಾರಕಾರಣವಾದ ಕರ್ಮಕ್ಕೆ ಕಾರಣ ಎನ್ನುವ ಅಭಿಪ್ರಾಯವಾದರೆ ಅದು ಸರಿಯೇ. ಹಾಗೇ ವೀರರಾಘವವ್ಯಾಖ್ಯಾನ ಹೇಳಿದೆ. 'ಕಾಲಪ್ರೇರಿತ ಕರ್ಮಜನ್ಯವಾದುದು ಸಂಸಾರ,' ಎಂದು. ಆದರೆ 'ಕರ್ಮವು

ಕಾಲಪ್ರೇರಿತ ಎಂದಿಷ್ಟೇ 'ಕರ್ಮವಿಚೇಷ್ಟಿತಂ' ಎಂಬ ಶಬ್ದದಿಂದ ಹೇಳಿದರೆ ಸಾಕು. ಸಂಸಾರಕಾರಣ ಕರ್ಮ ಎಂದೇನು, ಮೋಕ್ಷಕಾರಣಕರ್ಮವೂ ಕಾಲಪ್ರೇರಿತವೇ ತಾನೆ?

ಸರ್ವಕರ್ಮಾಣಿ ಯಸ್ಯ ವಿಚೇಷ್ಟಾನಿಮಿತ್ತಾನಿ ತತ್ ಕರ್ಮವಿಚೇಷ್ಟಿತಮ್ ।

ಎಲ್ಲ ಕರ್ಮಗಳೂ ಕಾಲದ ಪ್ರೇರಣೆಯಿಂದಲೇ ಆಗುವುದರಿಂದ ಅದು 'ಕರ್ಮವಿಚೇಷ್ಟಿತ'ವೆನಿಸುತ್ತದೆ.

ವಿಚೇಷ್ಟೆ ಎಂದರೆ ಪ್ರೇರಣೆ. ಅದರಿಂದಾಗುವುದು ವಿಚೇಷ್ಟಿತ. ಕರ್ಮಗಳು ಯಾವುದರ ವಿಚೇಷ್ಟಿತಗಳೋ ಅದು, ಕಾಲ, ಎಂದು ಬಹುವ್ರೀಹಿ.

* * *

ಅಲ್ಪಜ್ಞರಾದ ಸಂಸಾರಿಗಳಿಗೆ ಕಾಲದ ಭಯ ತಪ್ಪಿದ್ದಲ್ಲ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ರೂಪಭೇದಾಸ್ಪದಂ ದಿವ್ಯಂ ಕಾಲ ಇತ್ಯಭಿಧೀಯತೇ ।
ಭೂತಾನಾಂ ಮಹದಾದೀನಾಂ ಯತೋ ಭಿನ್ನದೃಶಾಂ ಭಯಮ್ ॥
॥ ೩೭ ॥

ಕಾಲಶಬ್ದದಿಂದ ಕರೆಸುವ ಮುಖ್ಯಪ್ರಾಣಾದಿ ಪ್ರತಿಮೆಗಳಲ್ಲಿ ಸನ್ನಿಹಿತನಾದವನು ಕಾಲರೂಪಿ ಭಗವಂತ. ಮಹತ್ತತ್ತ್ವಾದ್ಯಭಿಮಾನಿಗಳಾದ ಅಲ್ಪಜ್ಞರಾದ ಸಂಸಾರಿಗಳಿಗೆ ಅವನಿಂದಲೇ ಜನನ ಮರಣಾದಿ ಭಯ.

[1]ಇಲ್ಲಿ 'ಭಿನ್ನದೃಶಾಂ' ಎಂದರೆ ಅಜ್ಞಾನಿಗಳು ವಿಪರೀತಜ್ಞಾನಿಗಳೆಂದು, ಆತ್ಮನನ್ನು ಬ್ರಹ್ಮ ಎಂದು ತಿಳಿಯದೆ ದೇಹವೆಂದು ತಿಳಿದವರೆಂದು, ಒಳಗೆ ಪರಮಾತ್ಮನನ್ನು

೧. ಭಿನ್ನದೃಶಾಂ ದೇಹಾತ್ಮಾಭಿಮಾನಿನಾಮಿತ್ಯರ್ಥಃ । –ವೀರರಾಘವಃ

ಭಿನ್ನದೃಶಾಮಜ್ಞಾನಿನಾಂ । –ವಿಶ್ವನಾಥಃ

ಭಯೇ ಭಿನ್ನದರ್ಶನಂ ಹೇತುಃ । ಬಹಿರ್ಮುಖಾನ್ ಕಾಲೋ ಗ್ರಸತೀತಿ । –ವಲ್ಲಭಃ

ಭಿನ್ನದೃಶಾಂ ಭೇದದರ್ಶಿನಾಂ । –ಗಿರಿಧರಃ

ಭಿನ್ನದೃಶಾಮಾತ್ಮನೋ ಬ್ರಹ್ಮಾತ್ಮಕತ್ವಮಜಾನತಾಂ ದೇಹಾದ್ಯಾತ್ಮವಾದಿನಾಂ ಚ । –ಶುಕದೇವಃ

ಮಹದಾದೀನಾಂ ತತ್ತದಭಿಮಾನಿ ಜೀವಾನಾಂ । –ಶ್ರೀಧರಃ

ಕಾಣದೆ ಬಹಿರ್ಮುಖರಾಗಿರುವವರೆಂದು ಬೇರೆ ವ್ಯಾಖ್ಯಾನಕಾರರು ನಾನಾಬಗೆಯಿಂದ ಅರ್ಥೈಸಿದ್ದಾರೆ. ಆದರೆ 'ಮಹದಾದೀನಾಂ ಭೂತಾನಾಂ' 'ಮಹದಾದಿ ತತ್ವಗಳಿಗೆ ಅಭಿಮಾನಿಗಳಾದ ಜೀವರಿಗೆ' ಎಂದು ಶ್ರೀಧರವ್ಯಾಖ್ಯಾನ ಹೇಳುವಂತೆ ಬ್ರಹ್ಮಾದಿಜೀವರು ಇಲ್ಲಿ ವಿವಕ್ಷಿತರಾಗಿದ್ದಾರೆ. ಸರ್ವಜ್ಞರಾದ ಅವರಲ್ಲಿ ಈ ಅಜ್ಞಾನ ವಿಪರೀತಜ್ಞಾನಗಳು ಹೇಗೆ? ಅದಕ್ಕೆ ಅಲ್ಪಜ್ಞಾನಿಗಳೆನ್ನಬೇಕು. ಬೇರೆ ಜೀವರಿಗಿಂತ ಇವರು ಅಧಿಕಜ್ಞಾನಿಗಳಾಗಿದ್ದರೂ ಪರಮಾತ್ಮನಿಗಿಂತ ಅಲ್ಪಜ್ಞಾನಿಗಳೇ. ಪರಮಾತ್ಮರೂಪಿಯಾದ ಕಾಲ ಅವರಿಗೆ ಜನನಾದಿ ಭಯ ಉಂಟುಮಾಡುತ್ತಾನೆ. 'ಭಿನ್ನದೃಶಾಂ' ಎಂಬಶಬ್ದದಿಂದ ಅಲ್ಪಜ್ಞಾನಿಗಳೆಂಬ ಅರ್ಥವು 'ಭಿನ್ನ'ಶಬ್ದಕ್ಕೆ ಅಲ್ಪ ಎಂಬ ಅರ್ಥವು ಇರುವುದರಿಂದ ಕೂಡುತ್ತದೆ.

ಭಿನ್ನದೃಶಾಮೀಶ್ವರಾಪೇಕ್ಷಯಾऽಲ್ಪದೃಶಾಂ ।

ಭಿನ್ನಮಲ್ಪಂ ವಿಜಾನೀಯಾದ್ ಅಭಿನ್ನಂ ಪೂರ್ಣಮಿಷ್ಯತೇ ।

ಇತಿ ಶಬ್ದನಿರ್ಣಯೇ ।

'ಭಿನ್ನದೃಶಾಂ' ಎಂದರೆ ಪರಮಾತ್ಮನಿಗಿಂತ ಅಲ್ಪಜ್ಞಾನಿಗಳು ಎಂದರ್ಥ. ಭಿನ್ನ ಎಂದರೆ ಅಲ್ಪ ಎಂದೂ ಅಭಿನ್ನ ಎಂದರೆ ಪೂರ್ಣ ಎಂದೂ ಶಬ್ದನಿರ್ಣಯದಲ್ಲಿ ಹೇಳಿದೆ.

* * *

ಕಾಲಪುರುಷ ಸರ್ವಭಕ್ಷಕ. ಅವನಿಗೆ ತನ್ನವರು ಪರರೆಂಬ ಭೇದವಿಲ್ಲ ಎಂದು ಕಪಿಲನು ತಾಯಿಗೆ ಹೇಳುತ್ತಾನೆ–

ನ ಚಾಸ್ಯ ಕಶ್ಚಿದ್ ದಯಿತೋ ನ ದ್ವೇಷ್ಯೋ ನ ಚ ಬಾಂಧವಃ ।
ಆವಿಶತ್ಯಪ್ರಮತ್ತೋऽಸೌ ಪ್ರಮತ್ತಂ ಜನಮಂತಕೃತ್ ॥ ೩೯ ॥

ಕಾಲನಾಮಕ ಪರಮಾತ್ಮನಿಗೆ ಯೋಗ್ಯತೆಯನ್ನು ಮೀರಿ ಯಾರೂ ಪ್ರಿಯರಿಲ್ಲ, ಅಪ್ರಿಯರಿಲ್ಲ, ಬಾಂಧವರೂ ಇಲ್ಲ. ಸದಾ ಎಚ್ಚರದಿಂದಿರುವ ಅವನು ವಿಷಯಭೋಗದಲ್ಲಿ ಮೈಮರೆತ ಜನರನ್ನು ಸಂಹಾರಕನಾಗಿ ರೋಗಾದಿರೂಪದಿಂದ ಒಳಗೆ ಪ್ರವೇಶಿಸುತ್ತಾನೆ.

ಹಿಂದಿನ ಶ್ಲೋಕದಲ್ಲಿ 'ಸ ವಿಷ್ಣ್ವಾಖ್ಯೋ ಧಿಯಾ ಜ್ಞೇಯಃ' ಎಂದು ಕಾಲವು ವಿಷ್ಣುವಿನ ಒಂದು ರೂಪವೆಂದಿದೆ. ವಿಷ್ಣುವಿನ ಅವಯವಧ್ಯಾನ ಪ್ರಸಂಗದಲ್ಲಿ ಶತ್ರುಯೋಧರ ರಕ್ತದಿಂದ ಒದ್ದೆಯಾದ ಕೌಮೋದಕೀ ಗದೆ ವಿಷ್ಣುವಿಗೆ ಪ್ರಿಯ ಎಂದಿದೆ.

'ಕೌಮೋದಕೀಂ ಭಗವತೋ ದಯಿತಾಂ ಸ್ಮರೇತ
ದಿಗ್ಧಾಮರಾತಿಭಟ ಶೋಣಿತಕರ್ದಮೇನ'

ಎಂದು. ಈಗ 'ನಚಾಸ್ಯ ಕಶ್ಚಿದ್ ದಯಿತಃ' ಎಂದು ಮುಂತಾಗಿ ವಿಷ್ಣುರೂಪಿಕಾಲಕ್ಕೆ ಪ್ರಿಯರು ಅಪ್ರಿಯರೆಂದು ಯಾರೂ ಇಲ್ಲ ಎನ್ನುವುದು ವಿರುದ್ಧವಲ್ಲವೆ? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರರು ಉತ್ತರಿಸುವುದಿಲ್ಲ.

ಯಥಾ ಯೋಗ್ಯಾಽತಿರೇಕೇಣ ನ ದ್ವೇಷ್ಯಶ್ಚ ಪ್ರಿಯೋ ಹರೇಃ ॥
ಇತಿ ಕಾಪಿಲೇಯೇ ।

ಒಬ್ಬನಲ್ಲಿ ಎಷ್ಟು ಯೋಗ್ಯತೆ ಇದೆಯೋ ಅಷ್ಟು ಪ್ರಿಯನೋ ದ್ವೇಷ್ಯನೋ ಆಗುತ್ತಾನೆ ಹೊರತು ಯೋಗ್ಯತೆಗೆ ವ್ಯತಿರಿಕ್ತವಾಗಿ ಪರಮಾತ್ಮನಿಗೆ ಯಾರೂ ಪ್ರಿಯನೂ ಆಗುವುದಿಲ್ಲ. ದ್ವೇಷ್ಯನೂ ಆಗುವುದಿಲ್ಲ ಎಂದು ಕಾಪಿಲೇಯದಲ್ಲಿ ಹೇಳಿದೆ.

(ಯಥಾ–ಎಷ್ಟು, ಯೋಗ್ಯಾ–ಯೋಗ್ಯತೆ ಇರುವುದೋ, ಅಷ್ಟೇ ಹರಿಗೆ ಪ್ರಿಯನಾಗುತ್ತಾನೆ ಅಥವಾ ದ್ವೇಷ್ಯನಾಗುತ್ತಾನೆ. ಅತಿರೇಕೇಣ–ವ್ಯತಿರಿಕ್ತವಾಗಿ ಯಾರೂ ಹರಿಗೆ ಪ್ರಿಯನಾಗಲೀ ದ್ವೇಷ್ಯನಾಗಲಿ ಆಗುವುದಿಲ್ಲ.)

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ತ್ರಿಂಶೋಽಧ್ಯಾಯಃ

—o—

ಅಧ್ಯಾಯ-೩೧

ಅಧ್ಯಾಯಸಾರಾಂಶ

ಕಾಲನಾಮಕ ಪರಮಾತ್ಮನಿಂದ ಪಾಪಿಜೀವರು ಸಂಸಾರದಲ್ಲಿ ಸುತ್ತುತ್ತಾರೆ. ಅವರು ಕಾಲನ ಮಹಿಮೆಯನ್ನರಿತಿರುವುದಿಲ್ಲ. ಅವರು ಸಂಪಾದಿಸುವ ಭಾಗ್ಯವನ್ನು ಕ್ಷಣದಲ್ಲಿ ಕಾಲ ಅಪಹರಿಸುತ್ತಾನೆ. ಶರೀರ ನಶ್ವರವಾದರೂ ಸಂಪತ್ತು ತಮಗೆ ಶಾಶ್ವತವೆಂದು ಅವರು ಭ್ರಮಿಸುತ್ತಾರೆ. ಕೆಟ್ಟ ಶರೀರ ಬಂದರೂ ಅದರಲ್ಲಿ ವೈರಾಗ್ಯತಾಳುವುದಿಲ್ಲ, ನರಕದಲ್ಲಿ ಬರುವ ಯಾತನಾಶರೀರದಲ್ಲಿಯೂ ಮೋಹ. ತಮಗಾಗಿ ತಮ್ಮ ಹೆಂಡತಿಮಕ್ಕಳಿಗಾಗಿ ಪಾಪಕರ್ಮ ಮಾಡುತ್ತಾರೆ. ಅದರಿಂದಲೂ ಸಂಪತ್ತು ಸಿಗದಿದ್ದರೆ ಪರರ ಸೊತ್ತನ್ನು ಅಪಹರಿಸುತ್ತಾರೆ. ಮುಪ್ಪಿನಲ್ಲಿ ಅದೂ ಸಾಧ್ಯವಾಗದಿದ್ದಾಗ ದುಃಖದಿಂದ ನಿಟ್ಟುಸಿರಿಡುತ್ತಾರೆ. ಇತ್ತ ಹೆಂಡತಿಮಕ್ಕಳು ಈತನನ್ನು ಕೈಲಾಗದವನೆಂದು ಅನಾದರದಿಂದ ಕಾಣುತ್ತಾರೆ. ಅವರು ತನಗೆ ನಾಯಿಗೆ ಹಾಕುವಂತೆ ಅನ್ನ ಹಾಕಿದರೂ ಉಂಡು ಅಶಕ್ತಿಯಿಂದ ಹಾಸಿಗೆ ಹಿಡಿಯುತ್ತಾನೆ. ಕೆಮ್ಮುದಮ್ಮುಗಳಿಂದ ನರಳುತ್ತಾನೆ. ಕುತ್ತಿಗೆಗೆ ಯಮನ ಪಾಶ ಬಿಗಿದಾಗ, ಸುತ್ತಲೂ ಬಂಧುಗಳನ್ನು ಕಾಣುತ್ತಿದ್ದರೂ ಬಾಯಿಂದ ಮಾತು ಹೊರಡುವುದಿಲ್ಲ, ಯಮದೂತರ ದರ್ಶನದಿಂದ ಭಯ. ಮಲಮೂತ್ರ ಸುರಿಯುತ್ತವೆ. ದೇಹಪಾತವಾಗಿ ಯಾತನಾದೇಹದಿಂದ ದೀರ್ಘವಾದ ನರಕಮಾರ್ಗಪ್ರಯಾಣ. ಕೊರಳಿಗೆ ಪಾಶ ಬಿಗಿದು ಸೆಳೆದೊಯ್ಯುತ್ತಾರೆ. ಹಸಿವು ಬಾಯಾರಿಕೆಗಳ ನಡುವೆ ಬಾರುಕೋಲಿನೇಟಿನ ಶಿಕ್ಷೆ. ಆಯಾಸದಿಂದ ಬೀಳುತ್ತ ಏಳುತ್ತ ನರಕಯಾತನೆಗಳನ್ನು ಕಾಣುತ್ತಾನೆ. ಸಂಪತ್ತಿನ ಗಂಟನ್ನು ಭೂಮಿಯಲ್ಲಿ ಬಿಟ್ಟು ಹೋಗುವಂತೆ ದುಃಖಕಾರಣವಾದ ಪಾಪದ ಗಂಟನ್ನು ಪಾಪಿ ಬಿಟ್ಟು ಹೋಗಲಾರ. ಅದರಿಂದ ಭಗವಂತನನ್ನೂ ಅವನ ಭಕ್ತರನ್ನೂ ದ್ವೇಷಿಸುವವನು ನಿತ್ಯನರಕಭಾಗಿಯಾಗುತ್ತಾನೆ. ಬೇರೆ ಪಾಪ

ಮಾಡಿದವರು ನರಕದಲ್ಲಿ ಅದನ್ನು ಉಂಡು ಈ ಲೋಕಕ್ಕೆ ಬರುತ್ತಾರೆ. ಬಳಿಕ ಪುಣ್ಯ ಮಾಡಿದರೆ ಸ್ವರ್ಗಕ್ಕೂ ಪಾಪಮಾಡಿದರೆ ತಿರುಗಿ ನರಕಕ್ಕೂ ಹೋಗುತ್ತಾರೆ.

* * *

ಗೃಹಸ್ಥನಿಗೆ ಸಂಸಾರಪೋಷಣ ಸಾಮರ್ಥ್ಯವಿರುವಷ್ಟು ಕಾಲ ಮಾತ್ರ ಅವನ ಮನೆಯಲ್ಲಿ ಅವನಿಗೆ ಆದರ. ಅದಿಲ್ಲದಾಗ ಏನೂ ಆದರವಿಲ್ಲ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಏವಂ ಸ್ವಭರಣಾಕಲ್ಪಂ ತತ್ಕಲತ್ರಾದಯಸ್ತದಾ ।
ನಾದ್ರಿಯಂತೇ ಯಥಾಪೂರ್ವಂ ಕೀನಾಶ ಇವ ಗೋಜರಮ್ ॥ ೧೩ ॥

ಕುಟುಂಬ ಪೋಷಣೆಯಲ್ಲಿ ಯಜಮಾನ ಅಸಮರ್ಥನಾದಾಗ ಕುಟುಂಬದವರು ಅವನನ್ನು ಹಿಂದಿನಂತೆ ಆದರಿಸುವುದಿಲ್ಲ, ಬೇಸಾಯಗಾರನು ಮುದಿಯಾದ ಎತ್ತನ್ನು ಹೇಗೋ ಹಾಗೆ.

ಇಲ್ಲಿ 'ಕೀನಾಶ' ಎಂದರೆ ಲೋಭಿಯಾದ ಬೇಸಾಯಗಾರ ಎಂದು ಶ್ರೀಧರ ಶುಕದೇವ ವ್ಯಾಖ್ಯಾನಗಳು. ದುಷ್ಟಬೇಸಾಯಗಾರನೆಂದು ವಲ್ಲಭ ಗಿರಿಧರ ವ್ಯಾಖ್ಯಾನಗಳು. ಆದರೆ ಕೀನಾಶ ಶಬ್ದಕ್ಕೆ ಕೋಶದಿಂದ ಸಿಗುವ ಅರ್ಥ 'ಗದ್ದೆ ಉಳುವವನು' ಎಂದಿಷ್ಟೇ.

ಕೀನಾಶಃ ಕರ್ಷಕೋ ಮತಃ ।

ಕೀನಾಶ ಎಂದರೆ ಗದ್ದೆ ಉಳುವವನು.

ಉಳುವವನಿಗೆ ಎತ್ತಿನಲ್ಲಿ ಉಳುವ ಸಾಮರ್ಥ್ಯವಿರುವಷ್ಟು ಕಾಲ ಮಾತ್ರ ಆದರ. ಬಳಿಕ ಕೆಲಸಕ್ಕೆ ಬಾರದ ಮುದಿ ಎತ್ತಿನಲ್ಲಿ ಆದರವಿಲ್ಲವಾಗುವುದು ಸಹಜ. ಅದಕ್ಕೆ ಲೋಭವಾಗಲಿ ದುಷ್ಟತನವಾಗಲಿ ಕಾರಣವಾಗಬೇಕಾಗಿಲ್ಲ.

* * *

ವೃದ್ಧಾಪ್ಯದಲ್ಲಿ ಸಾವು ಸಮೀಪಿಸಿದಾಗ ಮೇಲುಸಿರಿನಿಂದಾಗಿ ಮೇಲೆ ಬರುವ ಕಫದಿಂದ ಮೂಗು ಕಟ್ಟುತ್ತದೆ, ಕೆಮ್ಮು ಉಬ್ಬಸ ಹೆಚ್ಚುತ್ತದೆ. ಗಂಟಲು ಗೊರಗುಟ್ಟುತ್ತದೆ ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ವಾಯುನೋತ್ಕ್ರಮತೋತ್ತಾರ-ಕಫ-ಸಂರುದ್ಧ-ನಾಸಿಕಃ ।
ಕಾಸ ಶ್ವಾಸಕೃತಾಯಾಸಃ ಕಂಠೋ ಘುರುಘುರಾಯತೇ ॥ ೧೬ ॥

ಮೇಲುಸಿರಿನಿಂದಾಗಿ ಮೇಲೆ ಬರುವ ಕಫದಿಂದ ಮೂಗು ಕಟ್ಟುತ್ತದೆ. ಕೆಮ್ಮು ಉಬ್ಬಸಗಳಿಂದ ಆಯಾಸವಾಗುತ್ತದೆ. ಗಂಟಲೂ ಗೊರಗುಟ್ಟುತ್ತದೆ.

ಇಲ್ಲಿ 'ಉತ್ತಾರ' ಎಂದರೆ 'ಉತ್-ತಾರ' ಕಣ್ಣಾಲಿಗಳು ಮೇಲೇಳುತ್ತವೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಏಕೆಂದರೆ ಅವರ ಪಾಠದಲ್ಲಿ 'ಉತ್ತಾರಃ ಕಫಸಂರುದ್ಧನಾಡಿಕಃ' ಎಂದಿದೆ. 'ಉತ್ತಾರಕಫ' ಎಂಬ ಪಾಠದಲ್ಲಿ ಉತ್ತಾರ ಕಫ ಎಂದರೆ 'ಮೇಲೆ ಬರುವ ಕಫ' ಎಂದೇ ಅರ್ಥಹೇಳಬೇಕು. ಈ ಅರ್ಥಕ್ಕೆ ಕೋಶವೂ ಇದೆ.

ಉತ್ತಾರಮುದ್ಗತಂ ವಿದ್ಯಾತ್ ।

ಉತ್ತಾರವೆಂದರೆ ಮೇಲ್ಮುಖವಾಗಿ ಬರುವ ಎಂದರ್ಥ ಎಂದು ಕೋಶವಿದೆ. (ಕೋಶ ಹೇಳುವಂತೆ ರೂಢಿಯೇ ಇರುವಾಗ ಯೋಗದ ಕ್ಲೇಶ ಬೇಕಾಗಿಲ್ಲ.)

* * *

ಪಾಪಿಯು ಮರಣಾನಂತರ ಎರಡು ಅಥವಾ ಮೂರು ಮುಹೂರ್ತದಲ್ಲಿಯೂ ದೂರದ ನರಕಲೋಕವನ್ನು ಹೋಗಿ ಸೇರುವುದುಂಟು ಎಂದು ಕಪಿಲನು ತಾಯಿಗೆ ಹೇಳುತ್ತಾನೆ.

ಯೋಜನಾನಾಂ ಸಹಸ್ರಾಣಿ ನವತಿರ್ನವ ಚಾಧ್ವನಃ ।
ತ್ರಿಭಿರ್ಮುಹೂರ್ತೈರ್ದ್ವಾಭ್ಯಾಂ ವಾ ನೀತಃ ಪ್ರಾಪ್ನೋತಿ ಯಾತನಾಮ್ ॥ ೨೪ ॥

ತೊಂಬತ್ತೊಂಬತ್ತು ಸಾವಿರ ಯೋಜನದ ಮಾರ್ಗವನ್ನೂ ಎರಡು ಅಥವಾ ಮೂರು ಮುಹೂರ್ತಗಳಲ್ಲಿ ದಾಟಿ ನರಕಲೋಕಕ್ಕೆ ಪಾಪಿ ಹೋಗುತ್ತಾನೆ.

ಇಲ್ಲಿ 'ತ್ರಿಭಿರ್ಮುಹೂರ್ತೈರ್ದ್ವಾಭ್ಯಾಂ ವಾ' ಮೂರು ಅಥವಾ ಎರಡು ಮುಹೂರ್ತಕಾಲ ಪ್ರಯಾಣಮಾತ್ರದಿಂದ ನರಕಲೋಕ ಪಾಪಿಗಳಿಗೆ ಲಭ್ಯವಾಗುತ್ತದೆ ಎಂದಿದೆ. ಅಂದರೆ ಪಾಪಿಗಳಿಗೆ ಅಲ್ಲಿಗೆ ಹೋಗಲು ಮೂರು ಮುಹೂರ್ತಗಳೇ ಸಾಕು. ಇನ್ನು ಮಹಾಪಾಪಿಗಳಿಗೆ ಎರಡೇ ಮುಹೂರ್ತಗಳಲ್ಲಿ ನರಕ ಲಭ್ಯವಾಗುತ್ತದೆ. ಆದರೆ ಪಾಪ ತಾರತಮ್ಯಾನುಗುಣವಾಗಿ ಕೆಲವರು ಹತ್ತು ದಿನ, ಹದಿನೈದು ದಿನ, ಅಥವಾ ಒಂದು ತಿಂಗಳ ಕಾಲವನ್ನೂ ತೆಗೆದುಕೊಳ್ಳುವುದುಂಟು ಎಂದು ನಾರದಪುರಾಣದಲ್ಲಿ ಹೇಳಿದೆ. ಭಾಗವತದಲ್ಲಿ ಅದನ್ನೂ ಉಪಲಕ್ಷಣವಾಗಿ ಅಥವಾ ವಾಕಾರದಿಂದ ಇಟ್ಟುಕೊಳ್ಳಬೇಕು. ಬೇರೆ ವ್ಯಾಖ್ಯಾನಕಾರರು ಯಾರೂ ಇದನ್ನು ಹೇಳುತ್ತಿಲ್ಲ.

ತ್ರಿಭಿರ್ಮುಹೂರ್ತೈರ್ದ್ವಾಭ್ಯಾಂ ವಾ ದಿನೈರ್ದಶಭಿರೇವ ವಾ ।
ಪಕ್ಷಾನ್ಮಾಸೇನ ವಾ ಯಾತಿ ಯಮಲೋಕಮಿತೋ ಗತಃ ॥
ಇತಿ ನಾರದೀಯೇ ।

ಮೂರು ಅಥವಾ ಎರಡು ಮುಹೂರ್ತಕಾಲ ಪ್ರಯಾಣದಿಂದಲೂ ಯಮಲೋಕ ಪ್ರಾಪ್ತಿ ಉಂಟು, ಹಾಗೇ ಹತ್ತು ದಿನ ಹದಿನೈದು ದಿನ ಅಥವಾ ಒಂದು ತಿಂಗಳ ಕಾಲದ ಪ್ರಯಾಣದಿಂದಲೂ ಯಮಲೋಕವನ್ನು ಮೃತನಾದ ಪಾಪಿ ಹೊಂದಬಹುದು ಎಂದು ನಾರದಪುರಾಣದಲ್ಲಿ ಹೇಳಿದೆ.

* * *

ಸ್ವರ್ಗನರಕಗಳಿಲ್ಲವೆನ್ನಬಾರದು ಇದ್ದರೂ ಎಲ್ಲಿಯೋ ದೂರದಲ್ಲಿವೆ ಎನ್ನಬಾರದು. ಏನೂ ವಿಲಂಬವಿಲ್ಲದೆ ಸಿಗುವುದರಿಂದ ಪಾಪಿಗಳಿಗೂ ಪುಣ್ಯವಂತರಿಗೂ ನರಕಸ್ವರ್ಗಗಳು ದೂರವೇನಲ್ಲ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಅತ್ರೈವ ನರಕಃ ಸ್ವರ್ಗ ಇತಿ ಮಾತಃ ಪ್ರಚಕ್ಷತೇ ।
ಯಾ ಯಾತನಾ ವೈ ನಾರಕ್ಯಸ್ತಾ ಇಹಾಪ್ಯುಪಲಕ್ಷಿತಾಃ ॥ ೨೯ ॥

ಅಮ್ಮ, ನರಕ ಸ್ವರ್ಗ ಲೋಕಗಳು ಇಲ್ಲಿಗೆ ಸಮೀಪದಲ್ಲಿಮಾತ್ರವಲ್ಲ ಇಲ್ಲಿಯೂ ಇವೆ ಎನ್ನುತ್ತಾರೆ. ಆದರೂ ಇಲ್ಲಿ ಇವೆ ಎನ್ನುವುದರಲ್ಲಿ ಅವಿಶ್ವಾಸ ಬೇಡ. ಇಲ್ಲಿಯೂ ಆ ನರಕದುಃಖ ಸಮಾನವಾದ ಯಾತನೆಗಳು ಸ್ವರ್ಗಸುಖ ಸಮಾನಸುಖಗಳು ಕಂಡಿವೆ ತಾನೆ?

ನರಕ ಸ್ವರ್ಗಲೋಕಗಳು ಅನೇಕಲಕ್ಷಯೋಜನ ದೂರದಲ್ಲೇ ಇದ್ದರೂ ಮಹಾಪಾಪಿಗಳಿಗೆ ನರಕ ಎರಡು ಮೂರು ಮುಹೂರ್ತ ಮಾತ್ರ ಪ್ರಯಾಣದಿಂದ ಲಭ್ಯ. ಹೀಗೆ ಸ್ವರ್ಗವೂ ಮಹಾಪುಣ್ಯಶಾಲಿಗೆ ಬೇಗನೇ ಸಿಗುತ್ತದೆ. ಆದರಿಂದ ಸ್ವರ್ಗನರಕಗಳು ಸಮೀಪದಲ್ಲೇ ಇದ್ದಂತಾಯಿತು. ಇಂಥ ಸ್ವರ್ಗನರಕಗಳಲ್ಲಿ ನಂಬಿಕೆ ಬರಲು ಕಷ್ಟವೇನಿಲ್ಲ. ಇಲ್ಲಿಯೂ ಪುಣ್ಯವಂತರಿಗೆ ರಾಜ್ಯಭೋಗಾದಿ ಸ್ವರ್ಗಸುಖ, ಪಾಪಿಗಳಿಗೆ ರಾಜದಂಡನಾದಿ ನರಕದುಃಖವಿರುವುದು ಕಂಡಿದೆ. ಅದೇ ರೀತಿಯೆ ಸುಖದುಃಖಗಳು ಪರಲೋಕದಲ್ಲಿರುವುದು ಅಸಂಭಾವಿತವಲ್ಲವೆಂದು ಕಪಿಲನು ಹೇಳುತ್ತಿದ್ದಾನೆ.

ಇಲ್ಲಿ 'ಅತ್ರೈವ ನರಕಃ ಸ್ವರ್ಗಃ' ಎಂದರೆ 'ನರಕಸ್ವರ್ಗಗಳೆರಡೂ ಈ ಲೋಕದಲ್ಲಿಯೇ ಇರುತ್ತವೆ ಹೊರತು ಪರಲೋಕವೆಂಬುದಿಲ್ಲ' ಎಂದು ನಾಸ್ತಿಕವಾದವನ್ನು ಹೇಳಿದಂತೇ ಕಾಣುತ್ತದೆ. ಆದರೆ ಹಿಂದೆ ಪಾಪಿಗಳಿಗೆ

ನರಕಪ್ರಯಾಣದ ಅವಧಿ ಮತ್ತು ನರಕಲೋಕದಲ್ಲಿ ಯಾತನೆಗಳು ವರ್ಣಿತವಾದ್ದರಿಂದ ಪರಲೋಕವಿಲ್ಲ ಎನ್ನುವುದು ಈ ಶ್ಲೋಕದ ತಾತ್ಪರ್ಯವಲ್ಲ. ಆದ್ದರಿಂದ 'ಅತ್ರೈವ' ಎಂದರೆ 'ಇಲ್ಲಿಯೇ' ಎಂದರ್ಥವಲ್ಲ. 'ಇಲ್ಲಿಗೆ ಸಮೀಪದಲ್ಲಿ ನರಕ ಸ್ವರ್ಗಲೋಕಗಳಿವೆ' ಎಂದರ್ಥ. ಏವಕಾರಕ್ಕೆ 'ಸಮೀಪ' ಎಂದೂ ಅರ್ಥವಿದೆ.

ಬೇರೆ ವ್ಯಾಖ್ಯಾನಕಾರರು ಅದನ್ನು ಬಿಟ್ಟು 'ಇಲ್ಲಿಯೂ' ಎಂದು ಮಾತ್ರ ಅರ್ಥ ಮಾಡಿದ್ದಾರೆ. ಆದರೆ ಈ ಶ್ಲೋಕದ ಉತ್ತರಾರ್ಧದಲ್ಲಿ 'ಇಹಾಪಿ' ಎಂದು 'ಅಪಿ'ಶಬ್ದದಿಂದ 'ಇಲ್ಲಿಯೂ' ಯಾತನೆಗಳು ಕಂಡಿರುವುದರಂದ ಪರಲೋಕದಲ್ಲಿ ಅವಿಶ್ವಾಸ ಬೇಡ, ಎಂದು ಸ್ಪಷ್ಟ ಹೇಳುತ್ತಿರುವಾಗ ಇಲ್ಲಿ ಏವಕಾರಕ್ಕೆ ಕೇವಲ ಅಪಿಶಬ್ದಾರ್ಥವಲ್ಲ. 'ನರಕದುಃಖವು ಇಲ್ಲಿಯೂ ಕಂಡಿದೆ' ಎನ್ನುವುದು ಉತ್ತರಾರ್ಧದ ಅಭಿಪ್ರಾಯ. 'ನರಕಲೋಕವೆಂಬುದು ಸಮೀಪದಲ್ಲಿ ಬೇರೆ ಇದೆ' ಎನ್ನುವುದು ಪೂರ್ವಾರ್ಧದ ಅಭಿಪ್ರಾಯ.

ಅತ್ರೈವೇತ್ಯೇವಶಬ್ದಃ ಸಾಮೀಪ್ಯಾರ್ಥೇ ।

ಸಾಮೀಪ್ಯೇ ಚ ಪ್ರಧಾನೇ ಚ ಏವಶಬ್ದೋಽವಧಾರಣೇ ।

ಇತಿ ಶಬ್ದನಿರ್ಣಯೇ ।

ಅತ್ರಾಪ್ಯಸ್ತೀತ್ಯರ್ಥಃ ।

ಈ ಶ್ಲೋಕದ ಪೂರ್ವಾರ್ಧದಲ್ಲಿ 'ಅತ್ರೈವ' ಎಂದು ಏವಕಾರ 'ಸಮೀಪದಲ್ಲಿ' ಎಂಬ ಅರ್ಥದಲ್ಲಿದೆ.

ಸಾಮೀಪ್ಯ ಎಂಬ ಅರ್ಥದಲ್ಲಿಯೂ ಪ್ರಧಾನ ಎಂಬ ಅರ್ಥದಲ್ಲಿಯೂ ಅವಧಾರಣಾರ್ಥದಲ್ಲಿಯೂ ಏವ ಶಬ್ದವಿದೆ ಎಂದು ಶಬ್ದನಿರ್ಣಯದಲ್ಲಿದೆ.

'ನರಕಯಾತನೆ ಇಲ್ಲಿಯೂ ಕಂಡಿದ್ದರಿಂದ ಸಮೀಪದ ಆ ನರಕದಲ್ಲಿ ಮಾತ್ರವಲ್ಲ. ಇಲ್ಲಿಯೂ ಇದೆ' ಎನ್ನುವುದು ಶ್ಲೋಕದ ಅಭಿಪ್ರಾಯ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಏಕತ್ರಿಂಶೋಽಧ್ಯಾಯಃ

—o—

ಅಧ್ಯಾಯ–೩೨

ಅಧ್ಯಾಯಸಾರಾಂಶ

ಸಂಸಾರಿಜೀವರು ಪೂರ್ವಕರ್ಮವಶದಿಂದ ತಂದೆಯ ವೀರ್ಯವನ್ನು ಸೇರಿ ಆ ಮೂಲಕ ತಾಯಿಯ ಗರ್ಭವನ್ನು ಸೇರುತ್ತಾರೆ. ಆ ಶುಕ್ರಶೋಣಿತಮಿಶ್ರಣವು ಹತ್ತು ದಿನಗಳ ಬಳಿಕ ಜರಾಯುವಿನಿಂದಾವೃತವಾದ ಮಾಂಸದ ಮುದ್ದೆಯೋ ಮೊಟ್ಟೆಯೋ ಆಗುತ್ತದೆ. ಮುಂದೆ ಕ್ರಮವಾಗಿ ತಲೆ ಕೈ ಕಾಲು ಉಗುರು ಚರ್ಮರೋಮಗಳು ನಾಲ್ಕುತಿಂಗಳುಗಳಲ್ಲಿ ಉಂಟಾಗುವುವು. ಏಳನೇ ತಿಂಗಳಿನಲ್ಲಿ ಪೂರ್ವಜನ್ಮದ ಸ್ಮರಣೆ ಬರುತ್ತದೆ. ಗರ್ಭಚೀಲದೊಳಗೆ ಬಂಧಿತನಾಗಿ ಜೀವ ಕಷ್ಟದಿಂದ ವಾಸಮಾಡುತ್ತಾನೆ.

ಅವನು ಪ್ರಾರಬ್ಧದಿಂದ ಗರ್ಭವನ್ನು ಪ್ರವೇಶಿಸುವ ದೇವತೆಯೋ ಋಷಿಯೋ ಆಗಿದ್ದರೆ ಪರಮಾತ್ಮನ ಅನುಗ್ರಹದಿಂದ ತನ್ನ ಒಳಗೂ ಹೊರಗೂ ಹರಿವಾಯುಗಳನ್ನು ಕಂಡು ಸ್ತುತಿಸುತ್ತಾನೆ. 'ನಿಮ್ಮನ್ನು ಸ್ತುತಿಸುವ ಈ ಬುದ್ಧಿಯನ್ನು ಕೊಟ್ಟಿರುವ ನೀವು ಈ ಗರ್ಭವಾಸದುಃಖ ಮುಂದೆ ಬಾರದಂತೆಯೂ ಅನುಗ್ರಹಿಸಿರೆಂ'ದು ಬೇಡುತ್ತಾನೆ. 'ನಾನು ಗರ್ಭದಿಂದ ಹೊರಬಂದೊಡನೆ ಈ ಜ್ಞಾನ ಮರೆಯಾಗುತ್ತದೆ. ಆದರೂ ಹಿರಿಯರ ಅನುಗ್ರಹದಿಂದ ತಿರುಗಿ ನನಗೆ ಅದು ಲಭ್ಯವಾಗಲಿ, ಈಗ ನಾನು ಆದಷ್ಟು ಬೇಗನೆ ಈ ಗರ್ಭವಾಸದಿಂದ ಮುಕ್ತನಾಗಿ ಹೊರಬರುವಂತಾಗಲಿ ಅಥವಾ ನಾನಿಲ್ಲೇ ಇರುತ್ತೇನೆ, ಹೊರಗೆ ಬರುವುದಾಗಲಿ ಜ್ಞಾನನಾಶವಾಗುವುದಾಗಲಿ ಎರಡೂ ಬೇಡ' ಎಂದು ಬೇಡಿ ಕೈಮುಗಿಯುತ್ತಾನೆ. ಅಷ್ಟರಲ್ಲಿ ಪ್ರಸವವಾಯು ಅವನನ್ನು ಹೊರಗೆ ತಳ್ಳುತ್ತದೆ.

ಮುಂದೆ ಶೈಶವದಲ್ಲಿ ಅಳುತ್ತಾನೆ. ತಾಯಿಯ ಸ್ತನಪಾನ ಮಾಡುತ್ತಾನೆ. ಯೌವನ ಬಂದಾಗ ಶಿಶ್ನೋದರಪರಾಯಣನಾಗಿ ತಿರುಗಿ ದುಷ್ಕರ್ಮ ಆಚರಿಸುತ್ತಾನೆ. ಆಯುಷ್ಯ ತೀರಿದೊಡನೆ ಸತ್ತು ತಿರುಗಿ ಹುಟ್ಟುತ್ತಾನೆ. ಹೀಗೆ ಸಂಸಾರದಲ್ಲಿ ತೊಳಲುವುದಕ್ಕೆ ಮುಖ್ಯಕಾರಣ ದುರ್ಜನರ ದುಷ್ಟಸ್ತ್ರೀಯರ ಸಹವಾಸ. ವಸ್ತುತಃ ಜೀವ ಕೇವಲ ಜ್ಞಾನಸ್ವರೂಪ. ಅವನಿಗೆ ದೇಹ ಪ್ರಾಪ್ತಿವಿಯೋಗಗಳೇ ಜನನ ಮರಣಗಳು. ಸ್ವರೂಪ

ನಿತ್ಯ. ದೇಹಾದಿಗಳಲ್ಲಿ ಅಭಿಮಾನದಿಂದ ಅವನಿಗೆ ಸಂಸಾರ. ಅಭಿಮಾನಕ್ಕೆ ಪರಮಾತ್ಮ ತತ್ತ್ವಜ್ಞಾನದ ಅಭಾವ ಕಾರಣ.

* * *

ವೈರಾಗ್ಯೋತ್ಪತ್ತಿಗಾಗಿ ಗರ್ಭವಾಸ ದುಃಖವನ್ನು ವರ್ಣಿಸುತ್ತ ಗರ್ಭ ವೃದ್ಧಿಯಾಗುವ ಕ್ರಮವನ್ನು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಕಲಿಲಂ ತ್ವೇಕರಾತ್ರೇಣ ಪಂಚರಾತ್ರೇಣ ಬುದ್ಬುದಮ್ ।
ದಶಾಹೇನ ತು ಕರ್ಕಂಧುಃ ಪೇಶ್ಯಂಡಂ ವಾ ತತಃ ಪರಮ್ ॥ ೨ ॥

ಒಂದು ದಿನದಲ್ಲಿ ವೀರ್ಯವು ಶೋಣಿತದೊಂದಿಗೆ ಮಿಶ್ರವಾಗುತ್ತದೆ. ಐದು ದಿನಗಳಲ್ಲಿ ಗೋಲಾಕಾರವಾಗುತ್ತದೆ. ಹತ್ತು ದಿನಗಳಲ್ಲಿ ಬೋರೆ ಹಣ್ಣಿನಂತೆ ಗಟ್ಟಿಯಾಗುತ್ತದೆ ಬಳಿಕ ಜರಾಯುವಿನಿಂದಾವೃತವಾದ ಮಾಂಸದ ಮುದ್ದೆ ಅಥವಾ ಮೊಟ್ಟೆಯಾಗುತ್ತದೆ.

ಇಲ್ಲಿ 'ಮಾಂಸದ ಮುದ್ದೆ ಅಥವಾ ಮೊಟ್ಟೆ' ಎಂದರೆ ಮನುಷ್ಯಸ್ತ್ರೀಯ ಗರ್ಭದಲ್ಲಿ ಮೊಟ್ಟೆಯೂ ಜನಿಸಬಹುದೆ? ಎಂದರೆ ಇಲ್ಲ, ಅದು ಪಕ್ಷಿ ಮುಂತಾದ ಇತರ ಯೋನಿಗಳ ಬಗ್ಗೆ ಹೇಳಿದ್ದು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ಸರಿ. ಆದರೆ ಇತರ ಯೋನಿಗಳ ಬಗ್ಗೆ ಇಲ್ಲಿ ಏಕೆ ಹೇಳಬೇಕು? ಮಾನವನಿಗೆ ವೈರಾಗ್ಯಬರುವುದಕ್ಕಾಗಿ ಅವನ ಗರ್ಭವಾಸ ಗರ್ಭವೃದ್ಧಿಗಳನ್ನು ಹೇಳಬೇಕು ತಾನೆ? ಇದಕ್ಕೆ ಬೇರೆ ವ್ಯಾಖ್ಯಾನಕಾರರು ಉತ್ತರ ಹೇಳುವುದಿಲ್ಲ. ಹೀಗೆ ಹೇಳಬೇಕು. ಕಾಮ್ಯಕರ್ಮಿಯಾದರೆ ಬೇರೆ ಬೇರೆ ಯೋನಿಗಳಲ್ಲಿ ಜೀವನು ಜನಿಸಬೇಕಾಗುತ್ತದೆ. ಅದರಿಂದ ಕಾಮ್ಯಕರ್ಮಗಳನ್ನು ತೊರೆದು ನಿಷ್ಕಾಮಕರ್ಮಗಳಿಂದ ಭಗವಂತನನ್ನು ಆರಾಧಿಸಬೇಕೆಂದು ತಿಳಿಸುವುದಕ್ಕಾಗಿ ಬೇರ ಬೇರೆ ರೀತಿಯ ಗರ್ಭವೃದ್ಧಿಕ್ರಮವನ್ನು ಶಾಸ್ತ್ರಗಳು ಹೇಳುತ್ತವೆ ಎಂದು.

ನಾನಾವಿಧಾ ಗರ್ಭವೃದ್ಧಿಃ ಕರ್ಮಭೇದಾದ್ ಭವಿಷ್ಯತಿ ।
ಅತೋ ನಾನಾವಿಧಂ ಗ್ರಂಥೇ ಗರ್ಭಸಂಸ್ಥಾನಮುಚ್ಯತೇ ॥
ಇತಿ ಷಾಡ್ಗುಣ್ಯೇ ।

ನಾನಾವಿಧ ಕರ್ಮಾನುಸಾರವಾಗಿ ನಾನಾವಿಧ ಗರ್ಭವೃದ್ಧಿಯಾಗುತ್ತದೆ. ಅದರಿಂದ 'ಪೇಶಿ ಅಂಡಂ ವಾ' ಎಂದು ಮುಂತಾಗಿ ನಾನಾ ಬಗೆಯ ಗರ್ಭವೃದ್ಧಿಯು ಶಾಸ್ತ್ರಗಳಲ್ಲಿ ಉಕ್ತವಾಗುತ್ತವೆ ಎಂದು ಷಾಡ್ಗುಣ್ಯದಲ್ಲಿ ಹೇಳಿದೆ.

* * *

ನನಗಿನ್ನು ಎಂದೂ ಗರ್ಭವಾಸ ವಿಲ್ಲದಂತೆ ಮಾಡೆಂದು ಗರ್ಭದಲ್ಲಿ ಜೀವನು ಭಗವಂತನನ್ನು ಬೇಡಿಕೊಳ್ಳುತ್ತಾನೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ.

ನಾಥಮಾನ ಋಷಿರ್ಭೀತಃ ಸಪ್ತವಧ್ರಿಃ ಕೃತಾಂಜಲಿಃ ।
ಸ್ತುವೀತಿ ತಂ ವಿಕ್ಲವಯಾ ವಾಚಾ ಯೇನೋದರೇಽರ್ಪಿತಃ ॥ ೧೨ ॥

ಏಳು ಜ್ಞಾನೇಂದ್ರಿಯಗಳಿಂದಲೂ ಯುಕ್ತನಾಗಿ ಗರ್ಭವಾಸದಿಂದ ಭೀತನಾದ ಜೀವನು ತನಗೆ ಗರ್ಭವಾಸಶಿಕ್ಷೆ ನೀಡಿರುವ ಭಗವಂತನಿಗೆ ಕೈ ಮುಗಿದು ಕರುಣಾಜನಕ ವಾಣಿಯಿಂದ ಬೇಡುತ್ತ ಸ್ತುತಿಸುತ್ತಾನೆ.

ಇಲ್ಲಿ 'ಸಪ್ತ ವಧ್ರಿಃ' ಎಂದರೆ ಸಪ್ತಧಾತುಮಯವಾದ ಬಂಧಕವಾದ ಹಗ್ಗ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ವಧ್ರಿಶಬ್ದಕ್ಕೆ ಬಂಧಕರಜ್ಜು ಹಗ್ಗ ಎಂದು ಅರ್ಥ ಮಾತ್ರ ಪ್ರಸಿದ್ಧ. ಏಳು ಹಗ್ಗವೆಂದರೆ ಸಪ್ತಧಾತುಗಳೇ ಆಗಿರಬೇಕೆಂದು ಊಹಿಸಿ ಹಾಗೆ ವ್ಯಾಖ್ಯಾನಿಸುವುದಕ್ಕಿಂತ ವಧ್ರಿಶಬ್ದಕ್ಕೆ ಇಂದ್ರಿಯಗಳೆಂದು ರೂಢಿಯ ಅರ್ಥವನ್ನು ಹೇಳುವುದೇ ಸೂಕ್ತ. ಅದರಿಂದ ಶಬ್ದನಿರ್ಣಯಗ್ರಂಥದ ಆಧಾರದಿಂದ ಮನಸ್ಸು ಬುದ್ಧಿ ಮತ್ತು ಪಂಚ ಜ್ಞಾನೇಂದ್ರಿಯಗಳು ಏಳು ಇಂದ್ರಿಯಗಳೆಂದು ಅರ್ಥವಿಟ್ಟುಕೊಳ್ಳಬೇಕು.

ವಧ್ರಯಸ್ತ್ವಿಂದ್ರಿಯಾಣ್ಯಾಹುರ್ಹೃಷೀಕಾಣೀತಿ ಚಾಪ್ಯತ ॥
ಇತಿ ಶಬ್ದನಿರ್ಣಯೇ ।

ಇಂದ್ರಿಯಗಳನ್ನು ವಧ್ರಿಗಳೆಂದೂ ಹೃಷೀಕಗಳೆಂದೂ ಕರೆಯುತ್ತಾರೆ ಎಂದು ಶಬ್ದನಿರ್ಣಯದಲ್ಲಿದೆ.

* * *

ಗರ್ಭವಾಸ ಮಾಡುತ್ತಿರುವ ಜೀವನು ಭಗವಂತನನ್ನು ಹೀಗೆ ಬೇಡುತ್ತಾನೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಜ್ಞಾನಂ ಯ ಏತದದಧಾತ್ ಕತಮಃ ಸ ದೇವ-
ಸ್ತ್ರೈಕಾಲಿಕಂ ಸ್ಥಿರಚರೇಷ್ವನುವರ್ತಿತಾಂಶಃ ।
ತಂ ಜೀವಕರ್ಮಪದವೀಮನುವರ್ತಮಾನಾ-
ಸ್ತಾಪತ್ರಯೋಪಶಮನಾಯ ವಯಂ ಭಜೇಮ ॥ ೧೭ ॥

ಸುಖಪರಿಪೂರ್ಣನು ಮತ್ತು ಚರಾಚರಪ್ರಾಣಿಗಳಲ್ಲಿ ನಿಯಾಮಕನಾಗಿ ಅನಂತ ರೂಪಗಳುಳ್ಳವನು, ಶ್ರೀಹರಿ. ಅವನೇ ನಮಗೆ ಈ ತ್ರಿಕಾಲಜ್ಞಾನವನ್ನು ಅನುಗ್ರಹಿ

ಸಿದ್ಧಾನೆ ಎಂದ ಮೇಲೆ ಅವನೇ ನಮ್ಮ ತಾಪತ್ರಯಗಳನ್ನು ಪರಿಹರಿಸಲಿ ಎಂದು ಅನಾದಿಕರ್ಮಬದ್ಧರಾದ ನಾವು ಬೇಡಿಕೊಳ್ಳುತ್ತೇವೆ.

ಇಲ್ಲಿ 'ಕತಮಃ' ಎಂದರೆ 'ಯಾರು?' ಎಂದು ಅರ್ಥ ಮೇಲ್ನೋಟಕ್ಕೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ. ಆದರೆ 'ನಮಗೆ ಈ ತ್ರಿಕಾಲಜ್ಞಾನವನ್ನು ಯಾರು ನೀಡಿದರು? ' ಎಂಬ ಪ್ರಶ್ನೆಗೆ ಇಲ್ಲಿ ಶ್ಲೋಕದಲ್ಲಿ ಉತ್ತರ ಹೇಳಿಲ್ಲ. ಅದಕ್ಕೆ ' ಇದು ಪ್ರಶ್ನೆಯಲ್ಲ, 'ನೀನು ಹೊರತು ಇನ್ನಾರು ನೀಡಬಲ್ಲರು? ಯಾರೂ ನೀಡಲಾರರು' ಎಂದು ಪ್ರತ್ಯೇಕ ಎರಡು ವಾಕ್ಯಗಳನ್ನು ಅಧ್ಯಾಹಾರ ಮಾಡಿ ಇಟ್ಟುಕೊಳ್ಳಬೇಕು' ಎನ್ನುವ ಪಕ್ಷದಲ್ಲಿ ಅದು ಕೇವಲ ಶ್ರಮವೆನಿಸುವುದು. ಅದಕ್ಕೆ 'ಕತಮಃ' ಎಂಬಲ್ಲಿ ಕ ಎಂದರೆ ಸುಖರೂಪನು, ಸುಖಉಳ್ಳವನು 'ತಮಪ್' ಪ್ರತ್ಯಯ ಅಧಿಕ ಪೂರ್ಣ ಎಂಬ ಅರ್ಥದಲ್ಲಿದೆ, ಸ್ವರೂಪಸುಖ ಪರಿಪೂರ್ಣನಾದ್ದರಿಂದ ಸ್ವಪ್ರಯೋಜನದ ಆಸೆ ಇಲ್ಲದೆ ಕೇವಲ ಜೀವರ ಒಳ್ಳೆಯದಕ್ಕಾಗಿ ಜ್ಞಾನ ನೀಡಿದವನು ಹಾಗೇ ಮೋಕ್ಷವನ್ನೂ ನೀಡಿ ತಾಪತ್ರಯ ಪರಿಹಾರ ಮಾಡಲಾರನೆ? ಎನ್ನುವ ಅಭಿಪ್ರಾಯ ಕತಮಶಬ್ದದಲ್ಲಿ ಅಡಗಿದೆ ಎನ್ನಬೇಕು.

ಕತಮಃ ಸುಖತಮಃ ।

'ಕತಮಃ' ಎಂದರೆ ಪರಿಪೂರ್ಣಸುಖಉಳ್ಳವನೆಂದರ್ಥ.

* * *

ಗರ್ಭದಲ್ಲಿರುವ ಜೀವನು ಪರಮಾತ್ಮನು ಅನುಗ್ರಹಿಸಿದ ಜ್ಞಾನದಿಂದ ಪರಮಾತ್ಮನನ್ನು ಪ್ರತ್ಯಕ್ಷ ಕಾಣುತ್ತಾನೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಪಶ್ಯತ್ಯಯಂ ಧಿಷಣಯಾ ನನು ಸಪ್ತವಧ್ರಿಃ
ಶಾರೀರಭೇದಮಶರೀರವದಸ್ಯ ದೇಹೇ ।
ಯದ್ದತ್ತಯಾ ಸ ತಮಹಂ ಪುರುಷಂ ಪುರಾಣಂ
ಪಶ್ಯೇ ಬಹಿರ್ಹೃದಿ ಚ ಚೈತ್ತ್ಯಮಿವ ಪ್ರತೀತಮ್ ॥ ೨೦ ॥

ಏಳು ಜ್ಞಾನೇಂದ್ರಿಯಗಳಿಂದ ಯುಕ್ತನಾದ ಈ ಜೀವನು ಪ್ರಾಕೃತಶರೀರ ರಹಿತನಾದ ಪರಮಾತ್ಮನ ವಶದಲ್ಲಿರುವ ಜೀವಶರೀರದಲ್ಲಿ ಪರಮಾತ್ಮನಿಂದ ಹೇಗೋ ಹಾಗೆ ಜೀವನಿಂದಲೂ ಭೇದವನ್ನು ಸ್ಫುಟವಾಗಿ ಪರಮಾತ್ಮ ನೀಡಿದ ಜ್ಞಾನದಿಂದಲೇ ಕಾಣುತ್ತಾನೇ. ಅಂಥ ಜೀವನಾದ ನಾನು ಆ ಪುರಾಣಪುರುಷನನ್ನು ಹೃದಯ ದಲ್ಲಿಯೂ ಹೊರಗೂ ಎಲ್ಲೆಡೆ ಚಿತ್ತಾಭಿಮಾನಿ ಬ್ರಹ್ಮನಂತೆ ವ್ಯಾಪಿಸಿದವನೆಂದು ಪ್ರತ್ಯಕ್ಷ ಕಾಣುತ್ತೇನೆ.

ಅಪ್ರತೀಕಾಲಂಬನರಾದ ದೇವತೆಗಳೂ ಋಷಿಗಳೂ ಗರ್ಭವಾಸದಲ್ಲಿರುವಾಗ ತಮ್ಮ ಶರೀರದಲ್ಲಿ ತಮ್ಮ ಭೇದವನ್ನು ಸ್ಫುಟವಾಗಿ ಕಾಣುವರು, ಜೊತೆಗೆ ತಮ್ಮಲ್ಲಿ ಪರಮಾತ್ಮನ ಅಧೀನತ್ವವನ್ನೂ ಪರಮಾತ್ಮಭೇದವನ್ನೂ ಕಾಣುವರು. ತಮ್ಮ ಹೃದಯದಲ್ಲಿಯೂ ಹೊರಗೂ ಎಲ್ಲೆಡೆ ಬ್ರಹ್ಮದೇವರನ್ನೂ ಪರಮಾತ್ಮನನ್ನೂ ಕಾಣುವರು. ಇದು ಪರಮಾತ್ಮನು ಅವರಿಗೆ ನೀಡುವ ಜ್ಞಾನದ ಫಲ. ಸಾಮಾನ್ಯಜೀವರಿಗೆ ಇದು ಲಭ್ಯವಿಲ್ಲ. ಸಾಮಾನ್ಯಜೀವರು, ಹಿಂದೆ ಯಾವ ಯಾವ ಯೋನಿಗಳಲ್ಲಿ ತಾವು ಜನ್ಮ ತಳೆದಿದ್ದರೆಂಬುದನ್ನು ಮಾತ್ರ ತಿಳಿಯುತ್ತಾರೆ.

ಇಲ್ಲಿ 'ಶಾರೀರಭೇದಮಶರೀರವದಸ್ಯ ದೇಹೇ' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಶಾರೀರಕೇ ದಮಶರೀರ್ಯಪರಃ ಸ್ವದೇಹೇ' ಎಂದು ಪಾಠ. ನಮ್ಮ ಪಾಠದಲ್ಲಿ 'ಅಸ್ಯ ದೇಹೇ' ಎಂದಿದೆ. ಪರಮಾತ್ಮನು ಅಶರೀರ. ಪ್ರಾಕೃತಶರೀರ ಅವನಿಗಿಲ್ಲ. ಜೀವನ ಶರೀರ ಎನ್ನಲು 'ಸ್ವಸ್ಯ ದೇಹೇ' ಎನ್ನಬೇಕಾಗಿತ್ತು. ಆದರೂ ಎಲ್ಲವೂ ಪರಮಾತ್ಮನದೇ ಎಂದ ಮೇಲೆ ಜೀವನ ಶರೀರವೂ ಅವನದೇ ತಾನೆ? ಜೀವನಿಗೆ ಶರೀರ ಹೇಗೆ ಸುಖದುಃಖಕಾರಣವೋ ಹಾಗೆ ಪರಮಾತ್ಮನಿಗಲ್ಲ ಎಂಬ ವ್ಯತ್ಯಾಸವಿದೆ. ಅದನ್ನು ವಿವಕ್ಷೆ ಮಾಡದೆ, ಜೀವನ ಶರೀರವನ್ನು ಪರಮಾತ್ಮನ ಶರೀರವೆನ್ನಬಹುದು. ಅದರಿಂದ 'ಅಸ್ಯ ದೇಹೇ' ಎಂದರೆ ಪರಮಾತ್ಮನ ಅಧೀನವಾದ ಜೀವಶರೀರದಲ್ಲಿ 'ಅಶರೀರವತ್ ಶಾರೀರಭೇದಂ' ಅಶರೀರನಾದ ಪರಮಾತ್ಮನಿಂದ ಹೇಗೋ ಹಾಗೆ ಶರೀರಿಯಾದ ಜೀವನಿಂದಲೂ ಸ್ಫುಟವಾಗಿ ಭೇದವನ್ನು ಗರ್ಭಸ್ಥ ಜೀವ ಪ್ರತ್ಯಕ್ಷ ಕಾಣುತ್ತಾನೆ. ಹೃದಯದಲ್ಲಿಯೂ ಹೊರಗೂ ಪರಮಾತ್ಮನನ್ನು ಕಾಣುತ್ತಾನೆ. ಇದರಿಂದ ಇಲ್ಲಿ ವರ್ಣಿತನಾದ ಗರ್ಭಸ್ಥ ಜೀವ ವ್ಯಾಪ್ತೋಪಾಸಕನಾದ ಅಪರೋಕ್ಷಜ್ಞಾನಿಯಾದ ದೇವತೆ ಅಥವಾ ಋಷಿ ಎನ್ನುವುದು ಸ್ಪಷ್ಟ. ಹೃದಯದಲ್ಲಿಯೂ ಹೊರಗೂ ಹರಿಯನ್ನು ಕಾಣುವವರು ವ್ಯಾಪ್ತೋಪಾಸಕರು. ಬೇರೆ ಜೀವರಿಗೆ ತಮ್ಮ ಹಿಂದಿನ ನಾನಾಜನ್ಮಗಳ ಬಗ್ಗೆ ಮಾತ್ರ ಸ್ಮರಣೆ ಬರುತ್ತದೆ. ಅದರಿಂದ ಗರ್ಭದಲ್ಲಿ ಪರಮಾತ್ಮಸಾಕ್ಷಾತ್ಕಾರ ಪಡೆಯುವ ಭಕ್ತನಿಗೂ ಸಂಸಾರವೆ? ಎನ್ನುವ ಬೇರೆ ವ್ಯಾಖ್ಯಾನಕಾರರ ಪ್ರಶ್ನೆಗೆ ಪ್ರಾರಬ್ಧಕರ್ಮದಿಂದ ಸಂಸಾರ ಗರ್ಭವಾಸಗಳು ಅವರಿಗೂ ತಪ್ಪಿದ್ದಲ್ಲ. ಪ್ರಾರಬ್ಧ ಕಳೆದ ಮೇಲೆ ಅದಿಲ್ಲ ಎಂದೇ ಉತ್ತರ.

ಇಲ್ಲಿ ಗರ್ಭದಲ್ಲಿ ಭಗವಂತನನ್ನು ಸ್ತೋತ್ರಮಾಡುವವರು ಶುಕಮುನಿಯಂಥ ಭಾಗ್ಯಶಾಲಿಗಳಾದ ಕೆಲವೇ ಜೀವರು ಹೊರತು ಎಲ್ಲರೂ ಅಲ್ಲ ಎಂದು [೧]ರಾಧಾರಮಣದಾಸ ಜೀವಗೋಸ್ವಾಮಿ ವಿಶ್ವನಾಥ ವ್ಯಾಖ್ಯಾನಗಳು ಹೇಳುತ್ತವೆ. ಆ

೧. ಯದ್ಯಪಿ 'ಅಕಾಮಾದಪಿ ಯೇ ವಿಷ್ಣೋಃ ಸಕೃತ್ ಪೂಜಾಂ ಪ್ರಕುರ್ವತೇ ।
ನ ತೇಷಾಂ ಭವಬಂಧಸ್ತು ಕದಾಚಿದಪಿ ಜಾಯತೇ'

ಭಾಗ್ಯಶಾಲಿಗಳು ಯಾರು ಎನ್ನುವುದು ತಾತ್ಪರ್ಯದಲ್ಲಿ ಹೇಳಿದ ಸ್ಕಾಂದಪುರಾಣ ವಚನದಲ್ಲಿ ಸ್ಪಷ್ಟವಿದೆ.

ವೀರರಾಘವ ವ್ಯಾಖ್ಯಾನದಲ್ಲಿ ಗರ್ಭದಲ್ಲಿ ಶರಣಾಗುವ ಜೀವನನ್ನು ಭಗವಂತನೇಕೆ ಕೈ ಬಿಡುತ್ತಾನೆ, ಏಕೆ ಸಂಸಾರದುಃಖ ನೀಡುತ್ತಾನೆ ಎಂದು ಪ್ರಶ್ನೆ ಮಾಡಿಕೊಂಡು ಗುರ್ವನುಗ್ರಹ ಲಕ್ಷ್ಮಿಯ ಅನುಗ್ರಹವಾಗದ ತನಕ ಪರಮಾತ್ಮನೂ ಅವನನ್ನು ಸ್ವೀಕರಿಸುವುದಿಲ್ಲ ಎಂದಿದೆ. ಆದರೆ ಇಲ್ಲಿ 'ಚೈತ್ಯ' ನೆನಿಸಿದ ಜಗದ್ಗುರು ಬ್ರಹ್ಮದೇವನೊಂದಿಗೆ ಹರಿಯನ್ನು ಪ್ರತ್ಯಕ್ಷ ಕಂಡು ಸ್ತುತಿಸುತ್ತಾನೆ ಎನ್ನುತ್ತಿದೆ ಭಾಗವತ. ಲಕ್ಷ್ಮೀ ಬ್ರಹ್ಮಾದಿಗಳ ಅನುಗ್ರಹವಿಲ್ಲದೆ ಇಂಥ ಶರಣಾಗತಿಬುದ್ಧಿಯೂ ಶಕ್ಯವಿಲ್ಲ. ಹೀಗಾಗಿ ಪರಮಾತ್ಮ ತಕ್ಷಣ ಮೋಕ್ಷ ಕೊಡಬೇಕಾಗಿತ್ತು. ಆದರಿಂದ ಪ್ರಾರಬ್ಧ ಕಳೆಯುವ ತನಕ ಹರಿ ಕಾಯುತ್ತ ಸುಮ್ಮನಿರುತ್ತಾನೆ ಎಂದೇ ಹೇಳಬೇಕು.

ಇತ್ಯಾದೀನಿ ಪರಃಸಹಸ್ರವಾಕ್ಯಾನಿ ಭಕ್ತಸಂಸರಣೇ ವ್ಯಾಕುಪ್ಯಂತಿ । ತಥಾಪಿ ವಿಷಯ ಭೇದೇನಾವಿರೋಧೋ ವ್ಯಾಖ್ಯೇಯಃ । ತಥಾಹಿ ನೈರುಕ್ತಮತೇ ಗರ್ಭಸ್ಥಾನಾಂ ತ್ರೈವಿಧ್ಯಂ ಶ್ರೂಯತೇ ಕೇಷಾಂಚಿತ್ ಪೂರ್ವಪೂರ್ವಜನ್ಮಕರ್ಮಸ್ಮೃತಿಮಾತ್ರಂ, ಕೇಷಾಂಚಿತ್ ಸಾಂಖ್ಯಯೋಗಾದ್ಯಭ್ಯಾಸಃ ಕಸ್ಯಚಿದ್ ವಿರಲಸ್ಯ ತು ವಿಷ್ಣುಸ್ಮರಣ ಮಿತಿ । ಅಯಂ ತು ಶುಕಸದೃಶಃ ಕಶ್ಚಿದ್ ಭಾಗ್ಯವಾನೇವ ಸ್ತೌತಿ । ತಸ್ಯ ಚ ಸಂಸಾರೋ ನ ಭವಿಷ್ಯತ್ಯೇವ । ಅತ ಏವ ಜೀವ ಉವಾಚೇ'ತಿ ಅತೀತನಿರ್ದೇಶ ಏಕವಚನಂ ಚ । ಜೀವಕಾಲಸಾಮಾನ್ಯವಿವಕ್ಷಾಯಾಂ ತು 'ಜೀವೋ ವದತೀ'ತ್ಯೇವ ಯುಜ್ಯೇತ । ಏವಂ ಚ ಲಿಜ್‌ಪ್ರತ್ಯಯಶ್ಚಾತ್ರ ಸಂಭಾವನಾಯಾಮೇವ । ಯದಿ ಕಶ್ಚಿತ್ ಪ್ರಾಚೀನಮಹತ್ಸಂಗಭಾಗ್ಯವಶಾತ್ ದೇಹಾತ್ಮದರ್ಶ್ಯಪಿ ಶ್ರೀಭಗವದ್ದರ್ಶೀ ಸ್ಯಾತ್ ತದಾ ತರತ್ಯಪಿ । ಅನ್ಯಥಾ ಸಂಸರತ್ಯೇವೇತ್ಯರ್ಥಃ – ರಾಧಾರಮಣದಾಸಃ

ಜಾತ್ಯೇಕತ್ವೇನ ತದ್ವರ್ಣನಮಿತಿ । ವಸ್ತುತಸ್ತು ಕಶ್ಚಿದೇವ ಜೀವೋ ಭಾಗ್ಯವಾನ್ ಸ್ತೌತಿ । ಸ ಚ ನಿಸ್ತರತ್ಯಪಿ । ನತು ಸರ್ವಸ್ಯಾಪಿ ಭಗವಜ್ಜ್ಞಾನಂ ಭವತಿ । ನೈರುಕ್ತಮತೇ ಚ ತ್ರಿವಿಧಾ ಜೀವಾ ಉಪಲಭ್ಯಂತೇ । ಏಕೇ ಪೂರ್ವಪೂರ್ವಜನ್ಮಮಾತ್ರಂ ಸ್ಮರಂತಿ । ಏಕೇ ಸಾಂಖ್ಯಯೋಗಾದಿಕಮಭ್ಯಸ್ಯಂತಿ । ಏಕೇ ತು ಪರಮಪುರುಷಮಿತಿ । ಭೇದೇಽಪ್ಯೇಕವದ್ ವರ್ಣನಮನ್ಯತ್ರಾಪಿ ದೃಶ್ಯತೇ । ತೃತೀಯೇ ಯಥಾ ಪಾದ್ಮಕಲ್ಪಸೃಷ್ಟಿಕಥನೇಽಪಿ ಸನಕಾದೀನಾಂ ಸೃಷ್ಟಿವರ್ಣನಂ । ಟೀಕಾಯಾಂ ಚ ಬ್ರಹ್ಮಕೃತಸೃಷ್ಟಿ ಕಥನಮಾತ್ರಸಾಮ್ಯೇನೈಕೀಕೃತ್ಯೋಕ್ತಿರಿಯಮಿತಿ ಯೋಜಿತಂ । ಶ್ರೀವರಾಹಾವತಾರವಚ್ಚ । ತದ್ವದತ್ರಾಪೀತಿ ಕಶ್ಚಿದೇವಾನ್ಯೋ ಜೀವಃ ಸ್ತೌತಿ, ಅನ್ಯಃ ಸಂಸರತೀತ್ಯೇವಂ ಮಂತವ್ಯಂ । –ಜೀವಗೋಸ್ವಾಮೀ

ಅಸ್ತುವಾನಸ್ಯ ಜೀವಸ್ಯಾಗ್ರೇ ಸಂಸಾರೋ ವರ್ಣಯಿಷ್ಯತೇ ವರ್ಣಿತಶ್ಚ । ನ ತು ಭಗವಂತಂ ಸ್ತುವಾನಸ್ಯಾಪಿ ।

ಅಶರೀರವತ್ ಪರಮಾತ್ಮವತ್ । ಪರಮಾತ್ಮನ ಏವ ದೇಹೋಽಪಿ । ತದ್ವಶತ್ವಾತ್ ।

ತತ್ವಜ್ಞಾನಂ ತು ದೇವಾನಾಂ ಗರ್ಭಸ್ಥಾನಾಂ ಭವಿಷ್ಯತಿ ।
ಉತ್ತಮಾನಾಂ ಋಷೀಣಾಂ ವಾಪ್ಯನ್ಯೇಷಾಂ ಬಹುಜನ್ಮಗಮ್ ।
ಇತಿ ಸ್ಕಾಂದೇ ।

'ಅಶರೀರವತ್' ಎಂದರೆ ಪ್ರಾಕೃತಶರೀರ ರಹಿತನಾದ ಪರಮಾತ್ಮನಿಂದ ಹೇಗೋ ಹಾಗೆ ಜೀವನಿಂದಲೂ ಜೀವಶರೀರವನ್ನು ಬೇರೆಯಾಗಿ ಸ್ಫುಟವಾಗಿ ಕಾಣುತ್ತಾನೆ ಎಂದರ್ಥ. 'ಅಸ್ಯ ದೇಹೇ' 'ಪರಮಾತ್ಮನ ದೇಹದಲ್ಲಿ' ಎಂದು ಜೀವಶರೀರವನ್ನು ಪರಮಾತ್ಮನ ಶರೀರವೆನ್ನಬಹುದು. ಏಕೆಂದರೆ ಅದು ಪರಮಾತ್ಮನ ಅಧೀನವಾಗಿದೆ.

'ಗರ್ಭದಲ್ಲಿರುವಾಗ ಪರಮಾತ್ಮ ತತ್ವಜ್ಞಾನವು ದೇವತೆಗಳಿಗೂ, ಉತ್ತಮರಾದ ಅಂದರೆ ವ್ಯಾಪ್ತೋಪಾಸಕರಾದ ಋಷಿಗಳಿಗೂ ಬರುತ್ತದೆ. ಹೊರತು ಇತರರಿಗಲ್ಲ. ಇತರರಿಗೆ ಹಿಂದಿನ ಬಹು ಜನ್ಮಗಳ ಸ್ಮರಣೆ ಮಾತ್ರ ಬರುತ್ತದೆ' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

* * *

ಅಕಾಮಾದಪಿ ಯೇ ವಿಷ್ಣೋಃ ಸಕೃತ್ ಪೂಜಾಂ ಪ್ರಕುರ್ವತೇ ।
ನ ತೇಷು ಭವಬಂಧಸ್ತು ಕದಾಚಿದಪಿ ಜಾಯತೇ(–ಬೃಹನ್ನಾರದೀಯೇ)

ಇತ್ಯಾದಿ ಪರಃಸಹಸ್ರವಚನವಿರೋಧಾತ್ । ಅತ ಏವ 'ಶೇತೇ ವಿಣ್ಮೂತ್ರಯೋರ್ಗರ್ತೇ' ಇತ್ಯಾದಿವದ್ದಶಮಾಸ್ಯೋ ಜೀವೋ ಹರಿಂ ಸ್ತೌತೀತಿ ವರ್ತಮಾನ ಪ್ರಯೋಗೋ ನ ಕೃತಃ । ಕಿಂತು ಜೀವ ಉವಾಚೇತಿ ಭೂತಕಾಲಪ್ರಯೋಗ ಏವ । ತೇನ ಚ ಪೂರ್ವಕಾಲಭವಃ ಕಶ್ಚಿದ್ ಭಕ್ತೋ ಜೀವ ಏವಂ ಹರಿಂ ಸ್ತುವಾನ ಆಸೀತ್ । ನ ತು ಸರ್ವ ಇತ್ಯರ್ಥೋ ಜ್ಞಾಪಿತಃ । ಅತ ಏವ ನೈರುಕ್ತಾ ಅಪಿ ಪಠಂತಿ–

'ಅವಾಙ್ಮುಖಃ ಪೀಡ್ಯಮಾನೋ ಜಂತುಶ್ಚೈವ ಸಮನ್ವಿತಃ ।
ಸಾಂಖ್ಯಂ ಯೋಗಂ ಸಮಭ್ಯಸ್ಯೇತ್ ಪುರುಷಂ ಪಂಚವಿಂಶಕಮ್ ॥ ಇತಿ ।

ಕಶ್ಚಿತ್ ಕರ್ಮೀ ಜೀವೋ 'ಮೃತಶ್ಚಾಹಂ ಪುನರ್ಜಾತಃ' ಇತ್ಯಾದಿ ಪೂರ್ವಪೂರ್ವ ಜನ್ಮಮಾತ್ರಂ ಸ್ಮರತಿ । ಕಶ್ಚಿದ್ ಜ್ಞಾನೀ ಸಾಂಖ್ಯಂ । ಕಶ್ಚಿದ್ ಯೋಗೀ ಯೋಗಂ । ಕಶ್ಚಿದ್ ಭಕ್ತಶ್ಚತುರ್ವಿಂಶಪ್ರಧಾನಾತ್ ಪರಂ ಪಂಚವಿಂಶಂ ಪುರುಷಂ ಪರಮೇಶ್ವರಮಭ್ಯಸೇತ್ । –ವಿಶ್ವನಾಥಃ

ನ ತ್ವೇವಂ ಶರಣಾಗತಂ ಕಥಂ ಭಗವಾನ್ ಪರಿತ್ಯಜತೀತಿ ಶಂಕ್ಯಂ । ಸದಾಚಾರ್ಯಾನುಗ್ರಹಾಭಾವಾತ್ ಪುರುಷಕಾರ ಸಾನ್ನಿಧ್ಯಾಭಾವಾಚ್ಚೇತಿ ದ್ರಷ್ಟವ್ಯಂ।–ವೀರರಾಘವಃ

ಮುಮುಕ್ಷುವು ದುರ್ಜನರ ಸಂಗವನ್ನು ಸರ್ವಥಾ ತ್ಯಾಗ ಮಾಡಬೇಕು. ಯಾರು ದುರ್ಜನರೆಂದರೆ ಎನ್ನುವುದನ್ನು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ತೇಷ್ವಶಾಂತೇಷು ಮೂಢೇಷು ಖಂಡಿತಾತ್ಮಾವಸಾಯಿಷು ।
ಸಂಗಂ ನ ಕುರ್ಯಾಚ್ಛೋಚ್ಯೇಷು ಯೋಷಿತ್‌ಕ್ರೀಡಾಮೃಗೇಷು ಚ ॥
॥ ೩೩ ॥

ಯಾರಿಗೆ ಹರಿಭಕ್ತಿ ಇಲ್ಲ, ವಿವೇಕವಿಲ್ಲ, ಅಲ್ಪನಾದ ಜೀವಾತ್ಮನೊಬ್ಬನೇ ಶರೀರ ದಲ್ಲಿರುವವನೆಂದು ನಿಶ್ಚಯವಿದೆ, ಮತ್ತು ಸ್ತ್ರೀಯರ ಆಟದ ಸಾಕುಪ್ರಾಣಿಯಂತೆ ಇರುತ್ತಾರೆ, ಅದರಿಂದ ತಮೋದುಃಖಕ್ಕೆ ಯೋಗ್ಯರಾಗಿರುತ್ತಾರೆ ಇಂಥ ದುಷ್ಟರ ಸಹವಾಸವನ್ನು ಮುಮುಕ್ಷು ಮಾಡಬಾರದು.

ಇಲ್ಲಿ 'ಖಂಡಿತಾತ್ಮಾವಸಾಯಿಷು' ಎಂದರೆ 'ಅಲ್ಪನಾದ ಜೀವನು ಶರೀರದಲ್ಲಿರುವನೆಂದು ತಿಳಿಯುವವನು' ಎಂದು ಅರ್ಥವಿಟ್ಟುಕೊಂಡರೆ ಅದರಲ್ಲಿ ತಪ್ಪೇನೂ ಇಲ್ಲ. ಹಾಗೆ ತಿಳಿದವನು ದುಷ್ಟನೆನಿಸುವುದು ಹೇಗೆ ಎಂಬ ಪ್ರಶ್ನೆ ಸಹಜ. ಬೇರೆ ವ್ಯಾಖ್ಯಾನಕಾರರು 'ಖಂಡಿತಾತ್ಮಸ್ವಸಾಧುಷು' 'ದೇಹಾತ್ಮೈಕ್ಯಬುದ್ಧಿ ಉಳ್ಳ ಅಸಜ್ಜನರು' ಎಂದು ಬೇರೆಯೆ ಪಾಠವಿಟ್ಟುಕೊಂಡಿದ್ದಾರೆ. ದೇಹಾತ್ಮೈಕ್ಯಬುದ್ಧಿ ಯಾರಿಗೂ ವಸ್ತುತಃ ಇರುವುದಿಲ್ಲ, ಹೀಗಾಗಿ ಪಾಠವೂ ತಪ್ಪು, ಅದರ ಅರ್ಥವೂ ತಪ್ಪು. ಹಾಗಿದ್ದರೆ ನಮ್ಮ ಪಾಠದಲ್ಲಿ ಏನರ್ಥ? ಅಲ್ಪನಾದ ಜೀವನೊಬ್ಬನೇ ಶರೀರದಲ್ಲಿದ್ದಾನೆ, ನಿಯಾಮಕನಾಗಿ ಭಗವಂತನಿಲ್ಲ ಎಂದು ಅಥವಾ ಜೀವನಿಗಿಂತ ಹೊರತಾಗಿ ಪರಮಾತ್ಮನೊಬ್ಬ ಬೇರೆ ಇಲ್ಲ ಎಂದು ತಿಳಿಯುವವನೇ ಇಲ್ಲಿ 'ಖಂಡಿತಾತ್ಮಾವಸಾಯಿ' ಎಂದು ವಿವಕ್ಷಿತವಾಗಿದೆ.

ಖಂಡಿತಾತ್ಮಾವಸಾಯಿಷು ಜೀವಮಾತ್ರಜ್ಞಾನಿಷು ।

'ಖಂಡಿತಾತ್ಮಾವಸಾಯಿಷು' ಎಂದರೆ ಶರೀರದಲ್ಲಿ ಅಲ್ಪನಾದ ಜೀವ ಮಾತ್ರನಿದ್ದಾನೆ, ನಿಯಾಮಕನಾಗಿ ಪೂರ್ಣನಾದ ಪರಮಾತ್ಮನಿಲ್ಲ ಎಂದು ತಿಳಿಯವವರು ಎಂದರ್ಥ.

* * *

ಬಂಧಕ ಮಾಯೆಗೊಳಗಾಗದವನು ನಾರಾಯಣನೊಬ್ಬ, ಹೊರತು ಇನ್ನಾರು ಎನ್ನುತ್ತಾನೆ ಕಪಿಲ ತಾಯಿಗೆ–

ತತ್‌ಸೃಷ್ಟಿ-ಸೃಷ್ಟ-ಸೃಷ್ಟೇಷು ಕೋ ನ್ವಖಂಡಿತಧೀಃ ಪುಮಾನ್ ।
ಋಷಿಂ ನಾರಾಯಣಮೃತೇ ಯೋಷಿನ್ಮಯ್ಯೇಹ ಮಾಯಯಾ ॥ ೩೮ ॥

ಬ್ರಹ್ಮನಿಂದ ಹುಟ್ಟಿದ ಮರೀಚಿಯ ಮಕ್ಕಳಾದ ಕಶ್ಯಪರ ಸಂತಾನದಲ್ಲಿ ಸ್ತ್ರೀರೂಪವಾದ ಬಂಧಕಶಕ್ತಿಗೆ ಒಳಗಾಗದವನು ನಾರಾಯಣಋಷಿಯೊಬ್ಬನನ್ನು ಹೊರತು ಪಡಿಸಿ ಇನ್ನಾರು?

ಬದರಿಕಾಶ್ರಮದಲ್ಲಿ ನಾರಾಯಣಋಷಿಯ ತಪಸ್ಸನ್ನು ಭಂಗಮಾಡಲು ಅಸಂಖ್ಯಾತ ಅಪ್ಸರೆಯರೊಂದಿಗೆ ಮನ್ಮಥ ಬಂದು ಸರ್ವಪ್ರಯತ್ನ ಮಾಡಿದರೂ ವಿಫಲನಾದನೆಂಬ ಕಥೆ ಇಲ್ಲಿ ಪ್ರಸ್ತುತವಾಗಿದೆ.

ಇಲ್ಲಿ ಹೇಳಿದ 'ಯೋಷಿನ್ಮಯೀ ಮಾಯೆ' ಮುಂದಿನ ಶ್ಲೋಕದಲ್ಲಿ ಹೇಳುವ 'ಸ್ತ್ರೀಮಯೀ ಮಾಯೆ' ಇನ್ನೂ ಮುಂದೆ ಹೇಳುವ 'ಯೋಷಿನ್ಮಾಯೆ' ಎಲ್ಲವೂ ಮುಂದಿನ ಶ್ಲೋಕದಲ್ಲಿ ಹೇಳಿದಂತೆ 'ಮೇ ಮಾಯಾ' ಭಗವಂತನ ಮಾಯೆ, ಸ್ತ್ರೀಯು ಭಗವಂತನ ಮಾಯೆ ಹೇಗೆ? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರು ಯಾರೂ ವಿವರಣೆ ನೀಡುವುದಿಲ್ಲ. ಚೇತನಪ್ರಕೃತಿ, ಅಚೇತನಪ್ರಕೃತಿ, ಬಂಧಕಮಾಯೆ, ಭಗವಂತನ ಇಚ್ಛೆ, ಮತ್ತು ಶಕ್ತಿಗಳಿಗೆ 'ಮಾಯೆ' ಎಂದು ವ್ಯವಹಾರಗಳು ಈ ಹಿಂದೆ ಭಾಗವತದಲ್ಲಿ ಅನೇಕಕಡೆ ಬಂದಿವೆ. ಆದರೆ 'ಸ್ತ್ರೀ ಮಯೀ ಮಾಯೆ' ಇಲ್ಲಿಯೇ ಬರುತ್ತದೆ. ಅದಕ್ಕೆ ಅರ್ಥ ಹೀಗೆ–

ಮಯಃ ಪ್ರಧಾನ ಉದ್ದಿಷ್ಟೋ ಮಾಯಾ ತದ್ವಶ ಉಚ್ಯತೇ ॥
ಇತಿ ಷಾಡ್ಗುಣ್ಯೇ ।

ಮಯ ಎಂದರೆ ಪ್ರಧಾನ, ಉತ್ತಮ, ಉತ್ತಮನಾದ ಭಗವಂತನ ಅಧೀನವಾದ ಎಲ್ಲ ಪದಾರ್ಥವೂ ಈ ಅರ್ಥದಲ್ಲಿ ಮಾಯೆ ಎನಿಸುತ್ತದೆ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಹೇಳಿದೆ.

ಸರ್ವೋತ್ತಮನಾದ ಪರಮಾತ್ಮನ ಅಧೀನಳು ಸ್ತ್ರೀ, ಆದರಿಂದ ಅವಳು ಅವನ ಮಾಯೆ. ಪರಮಾತ್ಮ ಅವಳನ್ನು ಸಾಧನವಾಗಿ ಮಾಡಿಕೊಂಡು ಪುರುಷನ ಚಿತ್ತವನ್ನು ಕಲಕಿ ಅವನನ್ನು ದುರ್ಮಾರ್ಗದಲ್ಲಿ ಬೀಳಿಸಬಹುದು. ಪುರುಷನನ್ನು ಸಾಧನವಾಗಿ ಮಾಡಿಕೊಂಡು ಸ್ತ್ರೀಯ ಪ್ರಾತಿವ್ರತ್ಯವನ್ನೂ ಕೆಡಿಸಬಹುದು. ಆದರಿಂದ ಪುರುಷನಿಗೆ ಸ್ತ್ರೀ ಮಾಯೆ, ಸ್ತ್ರೀಗೆ ಪುರುಷನು ಮಾಯೆ.

* * *

ದುಷ್ಟಸ್ತ್ರೀಯರ, ದುಷ್ಟಸ್ತ್ರೀಸಂಗ ಮಾಡುವವರ ಸಹವಾಸವನ್ನೇ ಮುಮುಕ್ಷು ಮಾಡಬಾರದೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ಸಂಗಂ ನ ಕುರ್ಯಾತ್ ಪ್ರಮದಾಸು ಜಾತು
ಯೋಗಸ್ಯ ಪಾರಂ ಪರಮಾರುರುಕ್ಷುಃ ।

ಮತ್ಸೇವಯಾ ಪ್ರತಿಲಬ್ಧಾತ್ಮಲಾಭೋ
ವದಂತಿ ಯಾಂ ನಿರಯದ್ವಾರಮಸ್ಯ ॥ ೪೦ ॥

ಜ್ಞಾನಯೋಗದಲ್ಲಿ ಪಾರಂಗತನಾಗಬಯಸುವವನು ಭಗವತ್ಸೇವೆಯಿಂದಲೇ ಪರಮಾನಂದ ಲಾಭವೆಂಬ ಅರಿವನ್ನು ಹೊಂದಿರುವವನು ದುಷ್ಟಸ್ತ್ರೀಯರ ಸಂಗ ವನ್ನೆಂದೂ ಮಾಡಕೂಡದು. ಅದು ಅವನಿಗೆ ನರಕಕ್ಕೆ ದ್ವಾರವೆನ್ನುತ್ತಾರೆ.

ಇಲ್ಲಿ ಸ್ತ್ರೀಸಂಗವನ್ನು ಎಂದೂ ಮಾಡಬಾರದೆಂದು ಹೇಳಿದೆ. ಹಿಂದೆ ೩೭ನೇ ಶ್ಲೋಕದಲ್ಲಿ ‘ಸ್ತ್ರೀಸಂಗವೂ ಸ್ತ್ರೀಸಂಗದಲ್ಲಿರುವವರ ಸಂಗವೂ ಬಂಧಕವಾಗುತ್ತದೆ ಎಂದು ಹೇಳಿದೆ. ಮುಂದೆ ೪೩ನೇ ಶ್ಲೋಕದಲ್ಲಿ ‘ಸ್ತ್ರೀಯರಲ್ಲಿ ಆಸಕ್ತನಾದವನು ಅಂತ್ಯಕಾಲದಲ್ಲಿ ಸ್ತ್ರೀಚಿಂತನೆಯನ್ನೇ ಮಾಡಿ ಮುಂದೆ ಸ್ತ್ರೀಯಾಗಿಯೇ ಜನಿಸುವನು’ ಎನ್ನುತ್ತ ತನ್ನ ಪತ್ನಿಯಲ್ಲಿಯೂ ಆಸಕ್ತಿ ಕೂಡದೆಂದಿದೆ. ೪೪ನೇ ಶ್ಲೋಕದಲ್ಲಿ ಸೇವಕರು ಮಕ್ಕಳು ಮನೆ ಮುಂತಾದವುಗಳಲ್ಲಿಯೂ ಆಸಕ್ತಿ ಕೂಡದು ಎಂದಿದೆ. ಇದು ಸರಿಯಲ್ಲ. ಅರುಂಧತಿಯಂತಹ ಪತಿವ್ರತಾಸ್ತ್ರೀಯೊಂದಿಗಿರುವ ವಸಿಷ್ಠರಂಥ ಸ್ತ್ರೀಸಂಗಿಗಳ ಸಂಗವನ್ನೂ ಮಾಡಬಾರದು, ಅವರಂತೆ ಗೃಹಸ್ಥಜೀವನವನ್ನೂ ನಡೆಸಬಾರದು ಎಂದರೆ ಅದು ಸಮಂಜಸವಾಗುವುದಿಲ್ಲ. ಬೇರೆ ವ್ಯಾಖ್ಯಾನಕಾರರು [೧]‘ತಮ್ಮ ಹೆಂಡಂದಿರಲ್ಲಿಯೂ ಸಂಗ ಮಾಡಬಾರದೆಂ’ದೇ ವ್ಯಾಖ್ಯಾನಿಸಿದ್ದಾರೆ ಆದರೆ ಈ ವಿಷಯದಲ್ಲಿ ಭಾಗವತದ ನಿಜವಾದ ತಾತ್ಪರ್ಯವನ್ನು ವರಾಹಪುರಾಣ ಸ್ಪಷ್ಟ ಹೇಳುತ್ತಿದೆ–

ಸತ್ಪುಂಸು ಚ ತಥಾ ಸ್ತ್ರೀಷು ನ ಸಂಗೋ ದೋಷಮಾವಹೇತ್ ।
ಯಥಾಯೋಗ್ಯಂ ಗುಣಾಯೈವ ದೋಷಕೃದ್ ದುಷ್ಟಜಂತುಷು ॥
ಇತಿ ವಾರಾಹೇ ।

ಸತ್ಪುರುಷರ ಮತ್ತು ಸತ್‌ಸ್ತ್ರೀಯ ಒಡನಾಟವು ಕೇಡುಂಟು ಮಾಡುವುದಿಲ್ಲ. ಅದು ಅವರವರ ಯೋಗ್ಯತಾನುಗುಣವಾಗಿ ಜ್ಞಾನಾದಿ ಸದ್ಗುಣಗಳಿಗೇ ಕಾರಣವಾಗುವುದು. ದುರ್ಜನರಲ್ಲಿ ಮಾಡುವ ಒಡನಾಟವೇ ಕೇಡುಂಟು ಮಾಡುವಂತಹದು ಎಂದು ವರಾಹಪುರಾಣದಲ್ಲಿ ಹೇಳಿದೆ.

* * *

೧. ಪ್ರಮದಾಸು ಸ್ವೀಯಾಸ್ವಪಿ । –ರಾಧಾರಮಣ, ಜೀವಗೋಸ್ವಾಮೀ, ವಿಶ್ವನಾಥಃ

ಸಂಸಾರಿಜೀವನನ್ನು ಕರ್ಮವು ಹೇಗೆ ಬಂಧಿಸುತ್ತದೆ ಎಂಬುದನ್ನು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ದೇಹೇನ ಜೀವಭೂತೇನ ಲೋಕಾಲ್ಲೋಕಮನುವ್ರಜನ್ ।
ಭುಂಜಾನ ಏವ ಕರ್ಮಾಣಿ ಕರೋತ್ಯವಿರತಂ ಪುಮಾನ್ ॥ ೪೪ ॥

ಜೀವನು ತನ್ನ ಪೂರ್ವಕರ್ಮದಿಂದುಂಟಾದ ದೇಹದಿಂದ, ಲೋಕದಿಂದ ಲೋಕಕ್ಕೆ ಸಂಚರಿಸಿ, ಅಲ್ಲಿ ಕರ್ಮಫಲ ಉಂಡು ಅದರ ಶೇಷದಿಂದ ಪುನಃ ಈ ಲೋಕಕ್ಕೆ ಬರುತ್ತಾನೆ ಪುನಃ ಕರ್ಮವನ್ನು ಅವಿರತವಾಗಿ ಮಾಡುತ್ತಾನೆ.

[೧]ಇಲ್ಲಿ 'ಜೀವಭೂತೇನ ದೇಹೇನ' ಎಂದರೆ ಬೇರೆ ವ್ಯಾಖ್ಯಾನಕಾರರು ಲಿಂಗದೇಹದಿಂದ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ, 'ಜೀವ' ಎಂದರೆ ಜೀವೋಪಾಧಿಯಾಗಿ 'ಭೂತೇನ' ಜನಿಸಿರುವ ಎಂದು ವಿವರಣೆ ಶ್ರೀಧರ ವ್ಯಾಖ್ಯಾನದಲ್ಲಿದೆ. ಲಿಂಗದೇಹ ಜೀವೋಪಾಧಿಯಾಗಿ ಅನಾದಿಯಾಗಿದೆ. ಅದು ಜನಿಸುವುದು ಕೂಡಲಾರದು, ಮತ್ತು ಲೋಕಾಂತರಕ್ಕೆ ಜೀವನು ಲಿಂಗಶರೀರದಿಂದ ಹೋಗುವುದೂ ಇಲ್ಲ. ನರಕಕ್ಕೆ ಯಾತನಾಶರೀರದಿಂದಲೂ ಸ್ವರ್ಗಕ್ಕೆ ತೇಜೋಮಯ ಶರೀರದಿಂದಲೂ ಹೋಗುತ್ತಾನೆ. ಭೂಮಿಯಲ್ಲಿ ಕರ್ಮವನ್ನು ಸ್ಥೂಲಶರೀರದಿಂದ ಮಾಡುತ್ತಾನೆ. ಈ ಮೂರೂ ಶರೀರಗಳು ಜೀವನ ಕರ್ಮದಿಂದಲೇ ಹುಟ್ಟುತ್ತವೆ ಜೀವೋಪಾಧಿಗಳಲ್ಲ. ಅದರಿಂದ ಹೀಗೆ ಹೇಳಬೇಕು–

ಜೀವಭೂತೇನ ಜೀವಕರ್ಮಭೂತೇನ ।

'ಜೀವಭೂತವಾದ ದೇಹ'ವೆಂದರೆ ಜೀವನಿಂದ ಅಂದರೆ ಜೀವನ ಕರ್ಮದಿಂದ ಭೂತ-ಉಂಟಾದ ದೇಹವೆಂದರ್ಥ.

'ಜೀವಕರ್ಮಭೂತ' 'ಜೀವಭೂತ' ಎಂದು ಮಧ್ಯಮಪದಲೋಪಿ ಸಮಾಸ ಇಟ್ಟುಕೊಳ್ಳಬೇಕು.

* * *

ಶರೀರದ ಉತ್ಪತ್ತಿನಾಶಗಳನ್ನು ಜೀವನಿಗೆ ಹೇಳುವುದು ಹೇಗೆ ಎಂದರೆ ಇಂದ್ರಿಯಗಳ ಶಕ್ತಿ ಅಶಕ್ತಿಗಳನ್ನು ಗೋಳಕದಲ್ಲಿ ಹೇಳುವಂತೆ ಗೌಣವ್ಯವಹಾರವೆಂದು ಕಪಿಲನು ಮಾತೆಗೆ ಹೇಳುತ್ತಾನೆ–

---

೧. ಜೀವಸ್ಯೋಪಾಧಿತಯಾ ಭೂತೇನ ಜಾತೇನ ಲಿಂಗದೇಹೇನ । –ಶ್ರೀಧರಃ

ಯಥಾಕ್ಷ್ಣೋರ್ದ್ರವ್ಯಾವಯವದರ್ಶನಾಯೋಗ್ಯತಾ ಯದಾ ।
ತದೈವ ಚಕ್ಷುಷೋ ದ್ರಷ್ಟುರ್ದ್ರಷ್ಟೃತ್ವಂ ಯೋಗ್ಯತಾಽನಯೋಃ ॥ ೪೭ ॥

ಯಾವಾಗ ಚಕ್ಷುರಿಂದ್ರಿಯಕ್ಕೆ ದ್ರವ್ಯ, ಅದರ ಅವಯವಗಳ ದರ್ಶನಯೋಗ್ಯತೆ ಇಲ್ಲವಾಗುವುದೋ ಆಗ ಹೊರಗಿನ ಕಣ್ಣುಗಳಿಗೆ ಯೋಗ್ಯತೆ ಇಲ್ಲವೆಂದು ವ್ಯವಹಾರ. ಯಾವಾಗ ಚಕ್ಷುರಿಂದ್ರಿಯ ಸಹಾಯದಿಂದ ಕಾಣುವವನಿಗೆ ಕಾಣುವಶಕ್ತಿ ಇರುವುದೋ ಆಗ ಕಣ್ಣುಗಳಿಗೆ ಯೋಗ್ಯತೆ ಇದೆ ಎಂದು ವ್ಯವಹಾರ, ಇದು ಗೌಣವ್ಯವಹಾರ. ಹಾಗೇ ಶರೀರದ ಉತ್ಪತ್ತಿನಾಶಗಳಿಂದ ಆತ್ಮನಿಗೆ ಉತ್ಪತ್ತಿನಾಶ ವ್ಯವಹಾರ ಗೌಣ.

[೧]ಇಲ್ಲಿ 'ಚಕ್ಷುಷೋ ದ್ರಷ್ಟುರ್ದ್ರಷ್ಟೃತ್ವಂ ಯೋಗ್ಯತಾಽನಯೋಃ' ಎನ್ನುವಲ್ಲಿ 'ಚಕ್ಷುಷೋ ದ್ರಷ್ಟುರ್ದ್ರಷ್ಟೃತ್ವಾಯೋಗ್ಯತಾನಯೋಃ' ಎಂದು ಪಾಠವನ್ನು ಬೇರೆ ವ್ಯಾಖ್ಯಾನಕಾರರು ಇಟ್ಟುಕೊಂಡು 'ಗೋಳಕಗಳಲ್ಲಿ ಕಾಚಾದಿದೋಷದಿಂದ ಪದಾರ್ಥಗಳನ್ನು ಕಾಣುವ ಶಕ್ತಿ ಕುಂದಿದರೆ ಇಂದ್ರಿಯವೂ ಕುರುಡಾಗುವುದು. ಗೋಳಕ ಇಂದ್ರಿಯಗಳೆರಡೂ ಕುರುಡಾದರೆ ಜೀವನೂ ಕುರುಡಾಗುತ್ತಾನೆ.' ಎಂದು ವಿವರಣೆ ನೀಡಿದ್ದಾರೆ. ಆದರೆ ಈ ಕುರುಡುತನದ ದೃಷ್ಟಾಂತದಿಂದ ಮುಂದೆ 'ಸ್ಥೂಲದೇಹ ತನ್ನ ಕಾರ್ಯದಲ್ಲಿ ಅಶಕ್ತವಾದಾಗ ಅದನ್ನಾಶ್ರಯಿಸಿರುವ ಲಿಂಗದೇಹವೂ ಅಶಕ್ತವಾಗುತ್ತದೆ, ಅಂದರೆ ಜೀವ ಮರಣಹೊಂದುತ್ತಾನೆ' ಎಂದು ತೋರಿಸಿದ್ದಾರೆ. ವಸ್ತುತಃ ದೇಹನಾಶದಿಂದ ಜೀವನಿಗೆ ನಾಶ ಸಂಭವಿಸುತ್ತದೆ ಎನ್ನುವುದು ವ್ಯರ್ಥ. ಅದು ಭ್ರಾಂತಿ. ಹಾಗೇ ಅಜ್ಞರು ತಿಳಿದಿದ್ದಾರೆ. ಮತ್ತು 'ಆತ್ಮ ನಿತ್ಯ, ದೇಹ ಮಾತ್ರ ಅನಿತ್ಯ, ದೇಹನಾಶದಿಂದ ಆತ್ಮನಿಗೆ ನಾಶವಿಲ್ಲ. ದೇಹನಾಶವನ್ನೇ ಆತ್ಮನ ನಾಶವೆನ್ನುವುದು ಗೌಣ ವ್ಯವಹಾರವಷ್ಟೆ' ಎಂದು ಉಪದೇಶಿಸುವುದು ತಾನೆ ಶಾಸ್ತ್ರದ ಉದ್ದೇಶ? ಅದನ್ನು ಬಿಟ್ಟು ದೇಹನಾಶವಾದರೆ ಆತ್ಮ ಮರಣ ಹೊಂದುತ್ತಾನೆ ಎಂದು ಸಮರ್ಥಿಸುವುದು, ಬಳಿಕ, ಅದು ಕೇವಲ ಔಪಾಧಿಕವೆಂದು ಸಮಾಧಾನ ಹೇಳುವುದು ಸರಿಯಲ್ಲ. ಅದ್ವೈತದಲ್ಲಿ ಲಿಂಗದೇಹವಿಶಿಷ್ಟನೇ ಜೀವ. ಆ ದೇಹ ನಾಶವಾದರೆ ಜೀವನಾಶ. ಶಾರೀರಿಕ ಚಟುವಟಿಕೆಗೆ ಸಾಮರ್ಥ್ಯವೆ

---

೧. ಸ್ಥೂಲಶರೀರಸ್ಯ ಭಂಗುರತ್ವೇ ಸತಿ ದ್ರವ್ಯೇಕ್ಷಾಯಾಂ ಯದಯೋಗ್ಯತಾ ತದೇವ ಸೂಕ್ಷ್ಮದೇಹಸ್ಯಾಪಿ ದ್ರವ್ಯೋಪಲಬ್ಧಾವಯೋಗ್ಯತಾ । ತದೇವ ಜೀವಸ್ಯ ಮರಣಂ । ನ ಸ್ವತಃ । ಯಥಾಽಕ್ಷ್ಣೋರ್ನೇತ್ರಗೋಲಕಯೋಃ ದ್ರವ್ಯಾವಯವದರ್ಶನೇ ಅಯೋಗ್ಯತಾ ಚ ಕಾಮಲಾದಿದೋಷರೂಪೇಣ ಭಂಗುರತ್ವೇನ ತದೇವ ಚಕ್ಷುಷ ಇಂದ್ರಿಯಸ್ಯಾಯೋಗ್ಯತಾ । ಅನಯೋಃ ಸ್ಥಾನಚಕ್ಷುಷೋರ್ಯದಾ ಅಯೋಗ್ಯತಾ ತದೈವ ದ್ರಷ್ಟುಃ ಪುರುಷಸ್ಯಾಪಿ ದ್ರಷ್ಟೃತ್ವಸ್ಯಾಯೋಗ್ಯತೇತಿ । —ವಿಶ್ವನಾಥಃ

ಇಲ್ಲವಾಗುವುದರಿಂದ ಅವರು ಹಾಗೆ ಹೇಳಬಹುದು. ವಸ್ತುತಃ ಜೀವನು ಜೀವನೆನಿಸುವುದು ಸ್ವತಃ ಹೊರತು ದೇಹಾದಿ ಉಪಾಧಿಪ್ರಯುಕ್ತವಲ್ಲ. ಅದರಿಂದ ದೇಹಾದಿನಾಶದಿಂದ ಅವನಿಗೆ ನಾಶವಿಲ್ಲ. ಇದೆ ಎಂದು ಗೌಣವಾದ ವ್ಯವಹಾರ ಮಾತ್ರ. ಬಟ್ಟೆ ಕೊಳೆಯಾದಾಗ ಕೊಳೆಯ ಕಪ್ಪುಬಣ್ಣವನ್ನು ಬಟ್ಟೆಯಲ್ಲಿ ಇದೆ ಎಂದು ವಿವೇಕಿಯಾದವನು ಯಾರೂ ತಿಳಿಯುವುದಿಲ್ಲ. ಆದರೂ ಬಟ್ಟೆ ಕಪ್ಪೆಂದು ಗೌಣವ್ಯವಹಾರ ಮಾಡುವುದಿದೆ, ಹಾಗೇ ಇದು. ಅದರಿಂದ ಈ ಶ್ಲೋಕದಲ್ಲಿ ಗೋಳಕ ಕೆಟ್ಟರೆ ಇಂದ್ರಿಯವೂ ಕೆಟ್ಟಿತೆನ್ನಬಾರದು. ಗೋಳಕಕ್ಕೆ ಸ್ವತಃ ದರ್ಶನ ಸಾಮರ್ಥ್ಯವೇ ಇಲ್ಲವೆಂದಮೇಲೆ ಕಾಚಾದಿದೋಷಗಳು, ಬೇರೆ ವ್ಯಾಖ್ಯಾನಕಾರರು ಹೇಳುವಂತೆ, ಗೋಳಕದೋಷಗಳಲ್ಲ. ಇಂದ್ರಿಯಗಳಿಗೇ ದೋಷಗಳು ಆ ದೋಷದಿಂದ ಇಂದ್ರಿಯ ಅಶಕ್ತವಾದರೆ ಗೋಳಕ ಅಸಮರ್ಥವೆಂದು ವ್ಯವಹಾರವಿದೆ. ಹಾಗೇ ದೇಹ ಯಾವ ಚಟುವಟಿಕೆಗೂ ಅಯೋಗ್ಯವೆಂದಾದಾಗ ಅದು ನಾಶವಾಯಿತು, ಅದರಿಂದ ಜೀವನೂ ಮರಣಹೊಂದಿದನೆಂದು ವ್ಯವಹಾರಮಾತ್ರ. ಅವನಿಗೆ ಶಾರೀರಿಕ ಚಟುವಟಿಕೆಗಳನ್ನು ನಡೆಸಲು ಸಾಮರ್ಥ್ಯವೇ ಇಲ್ಲವೆಂದಾಗುವುದಿಲ್ಲ.

ಚಕ್ಷುಃಸಕಾಶಾದ್ ದ್ರಷ್ಟುರ್ದ್ರಷ್ಟೃತ್ವಂ ಅಕ್ಷ್ಣೋರ್ಯೋರ್ಗ್ಯತಾ ।

'ಚಕ್ಷುಷಃ ದ್ರಷ್ಟುಃ' ಎಂದರೆ ಚಕ್ಷುಸ್ಸಿನ ಸಹಾಯದಿಂದ ಪದಾರ್ಥಗಳನ್ನು ಕಾಣುವ ಜೀವನ ದ್ರಷ್ಟೃತ್ವವೇ, ಅನಯೋಃ, ಎಂದರೆ ಚಕ್ಷುರಿಂದ್ರಿಯದ ಗೋಳಕಗಳಿಗೆ ವಸ್ತುಗಳ ದರ್ಶನಯೋಗ್ಯತೆ ಎಂದು ವ್ಯವಹಾರ.

* * *

ದೇಹಾದಿಗಳಲ್ಲಿ ಆಸಕ್ತಿ ತೊಲಗಿದರೆ ಸಂಸಾರ ಸ್ವತಃ ದೂರವಾಗುವುದೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಆತ್ಮನಃ ಕೇವಲಂ ಜ್ಞಾನಮರ್ಥೋ ದೇಹಾದ್ಯಸಂಗಿನಃ ।
ಸುಖದುಃಖಾದಯೋ ಭಾವಾ ನ ದೇಹಸ್ಯ ನ ಚಾತ್ಮನಃ ॥ ೪೯ ॥

ಸುಖದುಃಖಾದಿಗಳ ಅನುಭವರೂಪವಾದ ಸಂಸಾರ ದೇಹಾದಿಗಳ ಮೇಲಿನ ಆಸಕ್ತಿಯಿಂದ ಬರುತ್ತದೆ. ಆಸಕ್ತಿಯು ಜೀವೇಶ್ವರರ ಬಗ್ಗೆ ಸರಿಯಾದ ಅರಿವಿಲ್ಲದ್ದರಿಂದ ಬರುತ್ತದೆ. ಅರಿವೇ ಮುಕ್ತಿಸಾಧನ ಸರಿಯಾದ ಅರಿವು ಬಂದಿತೆಂದರೆ ಆಸಕ್ತಿ ಇಲ್ಲವಾಗುತ್ತದೆ. ಆಗ ಆತ್ಮನು ಸುಖರೂಪನಾದ್ದರಿಂದ ಸುಖದುಃಖಗಳು ಅವನಿಗೆ ಉಂಟಾಗುವುದಿಲ್ಲ. ದೇಹವಂತೂ ಜಡವಾದ್ದರಿಂದ

ಅದಕ್ಕೆ ಸುಖದುಃಖಗಳಿಲ್ಲ ಎಂದು ಬೇರೇನು ಹೇಳಬೇಕು? ಹೀಗಾಗಿ ಸುಖ ದುಃಖಾನುಭವರೂಪವಾದ ಸಂಸಾರವೇ ಇಲ್ಲವಾಗುತ್ತದೆ.

ಈ ಶ್ಲೋಕ ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಇಲ್ಲ. ಇಲ್ಲಿ ಶ್ಲೋಕದ ಅಭಿಪ್ರಾಯ ಹೀಗೆ–

ಕೇವಲಂ ಜ್ಞಾನಂ ಪುರುಷಾರ್ಥಃ । ದೇಹಾದಿಷ್ವಸಂಗಿನೋ ಜೀವಸ್ಯ ತನ್ನಿಮಿತ್ತಸುಖದುಃಖಾದಯೋ ನ ಸಂತಿ । ಕಿಮುತ ದೇಹಸ್ಯ? ಅಚೇತನತ್ವಾತ್ ।

ಜೀವಪರಮಾತ್ಮರ ಕೇವಲ ಯಥಾರ್ಥಜ್ಞಾನವೇ ಸುಖದುಃಖಾನುಭವ ರೂಪವಾದ ಸಂಸಾರ ನಿವೃತ್ತಿರೂಪ ಮೋಕ್ಷಕ್ಕೆ ಸಾಧನ. ಜ್ಞಾನ ಬಂದರೆದೇಹಾದಿಗಳಲ್ಲಿ ಆಸಕ್ತಿ ಇಲ್ಲ. ಜೀವನಿಗೆ ಆಸಕ್ತಿ ನಿಮಿತ್ತಕವಾದ ಸುಖದುಃಖಾದ್ಯನುಭವ ಬರುವುದಿಲ್ಲ. ಚೇತನನಾದ ಆತ್ಮನಿಗೆ ಬರುವುದಿಲ್ಲವೆಂದ ಮೇಲೆ ದೇಹಕ್ಕೆ ಬಂದೀತೆ? ಏಕೆಂದರೆ ಅದು ಅಚೇತನ.

* * *

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ದ್ವಾತ್ರಿಂಶೋಽಧ್ಯಾಯಃ

—o—

ಅಧ್ಯಾಯ–೩೩

ಅಧ್ಯಾಯಸಾರಾಂಶ

ಎಷ್ಟು ಸತ್ಕರ್ಮ ಮಾಡಿದರೂ ಭಗವಂತನಲ್ಲಿ ಸ್ವಲ್ಪವಾದರೂ ಭಕ್ತಿ ಇದ್ದರೆ ಮಾತ್ರ ಸ್ವರ್ಗ. ಇಲ್ಲದಿದ್ದರೆ ನರಕ. ಕರ್ಮದಿಂದ ಸಿಗುವ ಸ್ವರ್ಗವೂ ಶಾಶ್ವತವಲ್ಲ. ಆದರಿಂದ ಸ್ವರ್ಗ ಬಯಸದೆಯೆ ಭಕ್ತಿಯಿಂದ ಭಗವತ್ಪ್ರೀತಿಗಾಗಿ ಕರ್ಮ ಮಾಡಬೇಕು. ಆಗ ಶಾಶ್ವತವಾದ ಮೋಕ್ಷಫಲ ಲಭಿಸುವುದು. ಹೀಗೆ ಮುಕ್ತರಾಗುವ ಜೀವರು ಬ್ರಹ್ಮಪ್ರಳಯಕಾಲದಲ್ಲಿ ಶೇಷ ಅಥವಾ ಗರುಡ ಮಾರ್ಗದಿಂದ ಬ್ರಹ್ಮದೇವರನ್ನು ಸೇರುವರು. ಅವರೊಂದಿಗೆ ಬ್ರಹ್ಮದೇವರು ಪರಮಾತ್ಮನ ಉದರವನ್ನು ಸೇರಿ ಇರುತ್ತಾರೆ. ಮುಂದೆ ಸೃಷ್ಟಿಕಾಲದಲ್ಲಿ ಹೊರಗೆ ಶ್ವೇತದ್ವೀಪ ವ್ಯಕ್ತವಾದಾಗ ಅಲ್ಲಿಗೆ ಬಂದು ದಿವ್ಯಭೋಗ ಪಡೆಯುತ್ತಾರೆ. ತಿರುಗಿ ಪ್ರಳಯಕಾಲದಲ್ಲಿ ಭಗವಂತನ ಉದರವನ್ನೇ ಸೇರುತ್ತಾರೆ. ಸ್ವರೂಪಾನಂದ ಭೋಗಿಸುತ್ತಾರೆ. ಕಾಮ್ಯಕರ್ಮಿಗಳು ಪಿತೃಲೋಕ ಸ್ವರ್ಗಲೋಕಗಳನ್ನು ಹೊಂದಿ ಸುಖ ಪಡೆದರೂ ಪುಣ್ಯ ಕ್ಷಯಿಸಿದೊಡನೆ ಭೂಮಿಗೆ ಹಿಂತಿರುಗಲೇ ಬೇಕು. ಅವರು ಹರಿಭಕ್ತಿಶೂನ್ಯರಾಗಿದ್ದು ನಿತ್ಯಸಂಸಾರಿವರ್ಗದವರಾದರೆ ನರಕಕ್ಕೆ ಹೋಗುತ್ತಾರೆ. ಅಸುರಸ್ವಭಾವದವರಾದರೆ ತಮಸ್ಸಿಗೆ ಹೋಗುತ್ತಾರೆ. ಆದರಿಂದ ಭಕ್ತಿ ಆವಶ್ಯಕ. ಭಕ್ತಿ ಎಲ್ಲ ಭಗವದ್ರೂಪಗಳಲ್ಲಿ ಸಮಾನವಾಗಿರಬೇಕು. ಭಗವದ್ರೂಪಗಳಲ್ಲಿ ಭೇದವಿಲ್ಲ. ಏಕೆಂದರೆ ಯಾವ ಭಗವದ್ರೂಪಕ್ಕೂ ಅನ್ಯದೇವತೆಗಳಂತೆ ಜಡಶರೀರವಿಲ್ಲ. ಅದು ಕೇವಲ ಜ್ಞಾನಾನಂದಾದಿರೂಪವೇ ಇರುತ್ತದೆ. ಹೀಗೆ ಜ್ಞಾನದಿಂದ ಯಕ್ತವಾದ ಭಕ್ತಿಯೇ ಮುಕ್ತಿಸಾಧನವಾಗುವುದು. ಮೋಕ್ಷದಲ್ಲಿ ಒಂದೊಂದು ಫಲದ ಉದ್ದೇಶದಿಂದ ಒಂದೊಂದು ರೂಪದ ಉಪಾಸನೆ ವಿಹಿತವಾದರೂ ಆ ರೂಪಗಳು ಅಭಿನ್ನವೇ ಎಂಬುದನ್ನು ಮಾತ್ರ ಮರೆಯಬಾರದು. ನಿಷಿದ್ಧಕರ್ಮ ತೊರೆದು ವಿಹಿತವಾದ ನಿತ್ಯನೈಮಿತ್ತಿಕ ಕರ್ಮ ಮಾಡುತ್ತ ಶ್ರವಣಾದಿಗಳನ್ನು ಮಾಡಿದರೆ ಜ್ಞಾನ ಲಭಿಸುವುದು.

* * *

ಕಾಮ್ಯಕರ್ಮಾಚರಣೆಯಿಂದ ಸ್ವರ್ಗಾದಿ ನಶ್ವರಫಲ ಮಾತ್ರ ಸಿಗುತ್ತದೆ. ಮೋಕ್ಷ ಬೇಕೆಂದರೆ ನಿಷ್ಕಾಮ ಕರ್ಮವನ್ನೇ ಮಾಡಬೇಕೆಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ–

ಸ ಚಾಪಿ ಭಗವದ್ಧರ್ಮಾತ್ ಕಾಮಮೂಢಃ ಪರಾಙ್ಮುಖಃ ।
ಯಜತೇ ಕ್ರತುಭಿರ್ದೇವಾನ್ ಪಿತೄಂಶ್ಚ ಶ್ರದ್ಧಯಾನ್ವಿತಃ ॥ ೨ ॥

ತಚ್ಛ್ರದ್ಧಯಾಽಽಕ್ರಾಂತಮತಿಃ ಪಿತೃದೇವವ್ರತಃ ಪುಮಾನ್ ।
ಗತ್ವಾ ಚಾಂದ್ರಮಸಂ ಲೋಕಂ ಸೋಮಪಾಃ ಪುನರೇಷ್ಯತಿ ॥ ೩ ॥

ವಿಷಯಸುಖದ ಮೋಹಕ್ಕೊಳಗಾದ ರಾಜಸಚೇತನನು ಪೂರ್ತಿ ಭಾಗವತಧರ್ಮ ಮಾಡದೆ ಅನ್ಯದೇವತೆಗಳನ್ನೂ ಪಿತೃಗಳನ್ನೂ ಶ್ರದ್ಧೆಯಿಂದ ಆರಾಧಿಸುತ್ತಾನೆ. ಸ್ವಲ್ಪ ಮಾತ್ರ ವಿಷ್ಣುಭಕ್ತಿ ಇದ್ದು ಫಲದಾಸೆಯಿಂದ ದೇವತೆಗಳಿಗಾಗಿ ಸೋಮಯಾಗ ಮಾಡಿ, ಪಿತೃಗಳಿಗಾಗಿ ಶ್ರಾದ್ಧಾದಿಕರ್ಮಗಳನ್ನೂ ಮಾಡಿ, ಕೊನೆಯಲ್ಲಿ ಆ ಕರ್ಮಗಳನ್ನು ವಿಷ್ಣುವಿಗೆ ಅರ್ಪಿಸುತ್ತಾನೆ. ಬಳಿಕ ದೇವತಾರಾಧನೆಯ ಫಲವಾಗಿ ಚಂದ್ರಲೋಕ ಮುಂತಾದ ಸ್ವರ್ಗಕ್ಕೂ ಪಿತೃಕಾರ್ಯದ ಫಲವಾಗಿ ಪಿತೃಲೋಕಕ್ಕೂ ಹೋಗಿ ಕೆಲಕಾಲ ಸುಖವನ್ನು ಅನುಭವಿಸಿ ಪುಣ್ಯ ತೀರಿದೊಡನೆ ತಿರುಗಿ ಭೂಮಿಗೇ ಬರುತ್ತಾನೆ.

ಇಲ್ಲಿ 'ಭಗವದ್ಧರ್ಮಾತ್ ಪರಾಙ್ಮುಖಃ' ಭಗವಂತನ ಆರಾಧನೆಗೆ ಪರಾಙ್ಮುಖನಾಗಿ ಯಾಗಾದಿಕರ್ಮಗಳಿಂದ 'ಸ್ವರ್ಗಾದಿ ಫಲ ಪಡೆಯುತ್ತಾನೆ ಎಂದು ಹೇಳಿದಂತಿದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಅರ್ಥ ಗ್ರಹಿಸಿದ್ದಾರೆ. ವಲ್ಲಭವ್ಯಾಖ್ಯಾನದಲ್ಲಿ 'ಭಗವಂತನ ಆರಾಧನೆ ಮಾಡಿದರೆ ಅವನು ಕಾಮನೆಗಳನ್ನೇ ದೂರ ಮಾಡುತ್ತಾನೆ ಹೊರತು ಕಾಮ್ಯಫಲವನ್ನು ಕೊಡುವುದಿಲ್ಲವೆಂಬ ಭೀತಿಯಿಂದ ಭಗವಂತನ ಆರಾಧನೆಗೆ ವಿಮುಖನೇ ಆಗುತ್ತಾನೆ' ಎಂದಿದೆ. ಇದು ಸರಿಯಲ್ಲ. 'ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ । ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಮ್ ॥ (ದ್ವಿ.ಸ್ಕಂಧ.೩.೧೦) ಎಂದು ವಿಷ್ಣು ಎಲ್ಲ ಕಾಮ್ಯಫಲವನ್ನೂ ಕೊಡುತ್ತಾನೆ ಎಂದಿದೆ. ಅದರಿಂದ ರಾಜಸಚೇತನರು ತೀವ್ರಭಕ್ತಿಯೋಗವನ್ನು ಒಲ್ಲದೆ ವಿಷ್ಣುವಿನಲ್ಲಿ ಸ್ವಲ್ಪ ಭಕ್ತಿಮಾತ್ರ ಮಾಡಿ, ಹೆಚ್ಚು ಭಕ್ತಿಯಿಂದ ಅನ್ಯದೇವತೆಗಳನ್ನೇ ಆರಾಧಿಸಿ ಕೊನೆಯಲ್ಲಿ ವಿಷ್ಣುವಿಗೆ ಅರ್ಪಿಸುತ್ತಾರೆ. ಇಂಥವರು ನಶ್ವರವಾದ ಸ್ವರ್ಗಾದಿಫಲವನ್ನು ಹೊಂದುತ್ತಾರೆ ಹೊರತು ಮೋಲ್ನೋಟಕ್ಕೆ ಕಾಣುವಂತೆ, ಭಗವಂತನಿಗೆ ಪೂರ್ತಿ ವಿಮುಖರಾದವರ ಯಾಗಾದಿ ಧರ್ಮಾಚರಣೆ ಅಧರ್ಮವೇ ಆಗಿ ನರಕಾದಿ ಫಲವನ್ನೇ ಕೊಡುತ್ತದೆ. ಇದು ವಾಮನ ಪುರಾಣದಲ್ಲಿ ಸ್ಪಷ್ಟ ಹೇಳಿದೆ–

ಈಷದ್ಭಕ್ತೋ ಭಗವತಿ ಸುಕರ್ಮಾ ಸ್ವರ್ಗಮೇಷ್ಯತಿ ।
ಅಭಕ್ತೋ ನಿರಯಂ ಯಾತಿ ಸುಕರ್ಮಾಪಿ ನ ಸಂಶಯಃ ॥

ಇತಿ ವಾಮನೇ ॥

ಭಗವಂತನಲ್ಲಿ ಸ್ವಲ್ಪ ಭಕ್ತಿ ಮಾಡಿ ಸತ್ಕರ್ಮ ಮಾಡುವವನು ಸ್ವರ್ಗವನ್ನು ಪಡೆಯುತ್ತಾನೆ. ಭಗವಂತನಲ್ಲಿ ಏನೂ ಭಕ್ತಿ ಮಾಡದವನು ಸತ್ಕರ್ಮ ಮಾಡಿದರೂ ನರಕಕ್ಕೇ ಹೋಗುತ್ತಾನೆ ಇದರಲ್ಲಿ ಸಂಶಯವಿಲ್ಲ. ಎಂದು ವಾಮನ ಪುರಾಣದಲ್ಲಿ ಹೇಳಿದೆ.

ಅದರಿಂದ ಭಾಗವತದಲ್ಲಿ 'ಭಗವದ್ಧರ್ಮದಿಂದ ಪರಾಙ್ಮುಖ'ನೆಂದರೆ 'ಭಗವಂತನ ಪೂರ್ಣಾನುಗ್ರಹಕ್ಕೆ ಕಾರಣವಾಗಬಲ್ಲ ಶ್ರವಣಾದಿ ನಿಷ್ಕಾಮ ಕರ್ಮದಿಂದ ಪರಾಙ್ಮುಖ' ಎಂದರ್ಥ.

* * *

ಲಯಕಾಲದಲ್ಲಿ ಎಲ್ಲ ಜ್ಞಾನಿಗಳೊಂದಿಗೆ ಹರಿಯ ಉದರವನ್ನು ಪ್ರವೇಶಿಸುವ ಚತುರ್ಮುಖನು ಸೃಷ್ಟಿಕಾಲದಲ್ಲಿ ಹೊರಗೆ ಅಪ್ರಾಕೃತವಾದ ಶ್ವೇತದ್ವೀಪವು ವ್ಯಕ್ತವಾದಾಗ ಅಲ್ಲಿಗೆ ಬಂದು ಅಲ್ಲಿಯೂ ಹಿಂದಿನಂತೆಯೆ ತಾರತಮ್ಯಯುಕ್ತನಾಗಿದ್ದು ದಿವ್ಯಭೋಗವನ್ನು ಉಂಡು ತಿರುಗಿ ಲಯಕಾಲದಲ್ಲಿ ಹರಿಯ ಉದರವನ್ನೇ ಪ್ರವೇಶಿಸುತ್ತಾನೆ, ಉದರದಲ್ಲಿ ಸ್ವರೂಪಸುಖ ಉಣ್ಣುತ್ತಾನೆ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ—

ಆದ್ಯಃ ಸ್ಥಿರಚರಾಣಾಂ ಯೋ ವೇದಗರ್ಭಃ ಸಹರ್ಷಿಭಿಃ ।
ಯೋಗೇಶ್ವರೈಃ ಕುಮಾರಾದ್ಯೈಃ ಸಿದ್ಧೈರ್ಯೋಗಪ್ರವರ್ತಕೈಃ ॥ ೧೧ ॥

ಭೇದದೃಷ್ಟ್ಯಾಽಭಿಮಾನೇನ ನಿಃಸಂಗೇನಾಪಿ ಕರ್ಮಣಾ ।
ಕರ್ತೃತ್ವಾತ್ ಸಗುಣಂ ಬ್ರಹ್ಮ ಪುರುಷಂ ಪುರುಷರ್ಷಭಮ್ ॥ ೧೨ ॥

ಸ ಸಂಗತ್ಯ ಪುನಃ ಕಾಲೇ ಕಾಲೇನೇಶ್ವರಮೂರ್ತಿನಾ ।
ಜಾತೇಽಗುಣವ್ಯತಿಕರೇ ಯಥಾಪೂರ್ವಂ ಪ್ರಜಾಯತೇ ॥ ೧೩ ॥

ಐಶ್ವರ್ಯಂ ಪಾರಮೇಷ್ಠ್ಯಂ ಯತ್ ತೇಽಪಿ ಧರ್ಮವಿನಿರ್ಮಿತಮ್ ।
ನಿಷೇವ್ಯ ಪುನರಾಯಾಂತಿ ಗುಣವ್ಯತಿಕರೇಽಸತಿ ॥ ೧೪ ॥

ಸ್ಥಾವರಜಂಗಮಗಳಿಗೆ ಆದ್ಯನಾದ ಚತುರ್ಮುಖನು (ಸಿದ್ಧೈಃ) ಸಾಧನಪೂರ್ತಿ ಮಾಡಿಕೊಂಡಿರುವ ಯೋಗಪ್ರವರ್ತಕ ಯೋಗೇಶ್ವರರಾದ ಸನತ್ಕುಮಾರ

ಮುಂತಾದ ಮನುಷ್ಯೋತ್ತಮರಿಂದ ತೊಡಗಿ ಸರಸ್ವತೀ ಪರ್ಯಂತ ಎಲ್ಲ (ಋಷಿಭಿಃ) ಜ್ಞಾನಿಗಳಿಂದ ಕೂಡಿಕೊಂಡು (ಭೇದದೃಷ್ಟಿ) ಪಂಚಭೇದಜ್ಞಾನ, (ಅಭಿಮಾನ) ಪೂರ್ಣವಾದ ತತ್ವಜ್ಞಾನ, ಜ್ಞಾನೋತ್ತರ ನಿಷ್ಕಾಮಕರ್ಮ ಇವುಗಳಿಂದ ಪುರುಷೋತ್ತಮ ಪರಬ್ರಹ್ಮನಾದ ನಾರಾಯಣನ ಉದರವನ್ನು ಪ್ರವೇಶಿಸುತ್ತಾನೆ. ನಾರಾಯಣ ಜಗತ್ಕರ್ತನಾದ್ದರಿಂದ ಜ್ಞಾನಾದಿಗುಣಪೂರ್ಣ. ಇಂಥ ಹರಿಯ ಉದರವನ್ನು ಲಯಕಾಲದಲ್ಲಿ ಹೊಕ್ಕು ಪುನಃ ಕಾಲಪರಿವರ್ತನದಿಂದ ಸೃಷ್ಟಿಕಾಲ ಬಂದಾಗ(ಅಗುಣವ್ಯತಿಕರೇ) ಗುಣವಿಕಾರಶೂನ್ಯವಾದ ಅಪ್ರಾಕೃತವಾದ ಶ್ವೇತದ್ವೀಪವು ಭಗವಂತನ ಉದರದಿಂದ ಹೊರಗೆ ಪ್ರಾದುರ್ಭೂತವಾದಾಗ ಅಲ್ಲಿ ಹಿಂದೆ ಸಂಸಾರಾವಸ್ಥೆಯಲ್ಲಿ ಹೇಗೋ ಹಾಗೇ ತಾರತಮ್ಯಯುಕ್ತನಾಗಿ ಪ್ರಾದುರ್ಭೂತನಾಗುತ್ತಾನೆ. ಈ ಶ್ವೇತದ್ವೀಪದಲ್ಲಿ ಎಲ್ಲ ಮುಕ್ತರು ಜ್ಞಾನೋತ್ತರ ಧರ್ಮಾಚರಣೆಯಿಂದ, ಪರಮೇಷ್ಠಿ ಅಂದರೆ ಸರ್ವೋತ್ತಮನಾದ ಶ್ರೀಹರಿಯ ಅನುಗ್ರಹದಿಂದ ಪ್ರಾಪ್ತವಾದ (ಐಶ್ವರ್ಯಂ) ತಮ್ಮಿಂದ ಕೆಳಗಿನವರಾದ ಮುಕ್ತರ ಮೇಲಿನ ಆಧಿಪತ್ಯವನ್ನು ಪಡೆದು ಭೋಗಿಸಿ ಸ್ವರೂಪಾನಂದವನ್ನೂ ಉಂಡು ಪುನಃ (ಗುಣವ್ಯತಿಕರೇ) ಗುಣವೈಷಮ್ಯಕಾರ್ಯವಾದ ಪ್ರಪಂಚವು (ಅಸತಿ) ಲಯಹೊಂದಿದಾಗ ಆ ಲಯಕಾಲದಲ್ಲಿ ಹರಿಯ ಉದರವನ್ನೇ ಪ್ರವೇಶಿಸುತ್ತಾರೆ.

[೧]ಇಲ್ಲಿ 'ಭೇದದೃಷ್ಟ್ಯಾ ಅಭಿಮಾನೇನ' 'ಕರ್ತೃತ್ವಾತ್' 'ಯಥಾಪೂರ್ವಂ ಪ್ರಜಾಯತೇ' ಎಂದು ಮುಂತಾಗಿ ಹೇಳಿದ್ದರಿಂದ ಬ್ರಹ್ಮನಾಗಲಿ, ಸನತ್ಕುಮಾರ ಮುಂತಾದ ಮುನಿಗಳಾಗಲಿ ಮೋಕ್ಷವನ್ನೇ ಪಡೆಯುವುದಿಲ್ಲ. ಅವರು ನಿಷ್ಕಾಮಕರ್ಮ ಮಾಡಿದರೂ ಪಾಲನಕರ್ತನಾದ ಪರಮಾತ್ಮನಂತೆ ಸೃಷ್ಟಿಕರ್ತನಾದ ಬ್ರಹ್ಮನೂ ನಾನು ಸ್ವತಂತ್ರನೆಂಬ ಭೇದದೃಷ್ಟಿ, ಸೃಷ್ಟಿಕರ್ತ ತಾನೆಂಬ ಅಭಿಮಾನ, ದೇಹಾತ್ಮಾಭಿಮಾನಗಳಿಂದಾಗಿ ಲಯಕಾಲದಲ್ಲಿ ಸಗುಣಬ್ರಹ್ಮನಲ್ಲಿ ಲಯಹೊಂದಿದರೂ ಸೃಷ್ಟಿಕಾಲದಲ್ಲಿ ಪುನಃ ಚತುರ್ಮುಖನಾಗಿ ಸನತ್ಕುಮಾರ ಮುಂತಾದ ಮುನಿಗಳಾಗಿ ಹುಟ್ಟುತ್ತಾರೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.

---

೧. ಭಗವದ್ಭಕ್ತಾನಾಂ ನಿರಂತರಮೇವ ತತ್ಪ್ರಾಪ್ತಿಃ । ಭಗವದ್ಭೇದೇನ ಹಿರಣ್ಯಗರ್ಭೋಪಾಸಕಾನಾಂ ತು ಕ್ರಮೇಣೇತ್ಯುಕ್ತಂ । ಭೇದೇನೋಪಾಸನೇ ತು ಬ್ರಹ್ಮಾದಯೋಽಪ್ಯಾವರ್ತಂತೇ ಕಿಮುತಾನ್ಯ ಇತ್ಯಾಹ । ಯೋ ವೇದಗರ್ಭಃ ಸೋಽಪಿ ಗುಣವ್ಯತಿಕರೇ ಜಾತೇ ಯಥಾಪೂರ್ವಂ ಬ್ರಹ್ಮಪದಾಧಿಕೃತಃ ಸನ್ ಪ್ರಜಾಯತೇ ಇತಿ ತೃತೀಯೇನಾನ್ವಯಃ । ನ ಕೇವಲಂ ಸ ಏವೈಕಃ ಕಿಂತು ಋಷಿಭಿಃ ಮರೀಚ್ಯಾದಿಭಿರ್ಯೋಗೇಶ್ವರಾದಿಭಿಶ್ಚ ಸಹ । –ಶ್ರೀಧರಃ

ವೀರರಾಘವವ್ಯಾಖ್ಯಾನದಲ್ಲಿ 'ಬ್ರಹ್ಮನೂ ಅಭಿಮಾನಯುಕ್ತನಾದರೆ ಅವನಿಗೂ ನರಕಾದಿಗಳು ತಪ್ಪಿದ್ದಲ್ಲ ಎನ್ನುತ್ತಿದೆ ಭಾಗವತ.' ಎಂದಿದೆ. 'ಬ್ರಹ್ಮಾದಿಗಳಂತಹ ಜ್ಞಾನಾದಿ ಸಂಪನ್ನರು ಇನ್ನಿಲ್ಲ. ಅಂಥ ಬ್ರಹ್ಮಾದಿಗಳಿಗೇ ಮುಕ್ತಿ ಸಿಗಲಿಲ್ಲವೆಂದರೆ ಅಂಥ ಜ್ಞಾನಾದಿ ಸಂಪತ್ತಿನಿಂದೇನು ಫಲ? ಅದರಿಂದ ಭಗವದ್ಭಕ್ತಿಯನ್ನೇ ಮಾಡಬೇಕು' ಎಂದು ವಲ್ಲಭವ್ಯಾಖ್ಯಾನ ಹೇಳಿದೆ. ಆದರೆ 'ಸನಕಾದಿಮುನಿಗಳಂಥ ಯೋಗೇಶ್ವರರಿಗೆ ದೇಹಾಭಿಮಾನ ಮುಂತಾದುವು ಅಸಂಭಾವಿತವಲ್ಲವೆ?' ಎಂದು ಪ್ರಶ್ನೆ ಮಾಡಿಕೊಂಡು, ವಿಶ್ವನಾಥ ವ್ಯಾಖ್ಯಾನದಲ್ಲಿ, 'ಕೆಲವು ಬ್ರಹ್ಮಾಂಡಗಳಲ್ಲಿರುವ ಬ್ರಹ್ಮಾದಿಗಳು ಮಾತ್ರ ಭಕ್ತರಲ್ಲವಾದ್ದರಿಂದ ಹೀಗೆ ಮುಕ್ತಿಯಿಂದ ವಂಚಿತರಾಗಿದ್ದಾರೆ ಎಲ್ಲ ಬ್ರಹ್ಮಾಂಡಗಳಲ್ಲಿ ಹೀಗಿಲ್ಲ' ಎಂದು ಸಮಾಧಾನ ಹೇಳಿದೆ.

ಇವೆಲ್ಲವೂ ಸರ್ವಥಾ ಅಪವ್ಯಾಖ್ಯಾನಗಳೆನ್ನುವುದು ಗರುಡಪುರಾಣದ ವಚನವನ್ನೂ ಸ್ಕಾಂದಪುರಾಣವಚನನ್ನೂ ನೋಡಿದರೆ ಸ್ಪಷ್ಟವಾಗುವುದು. ಅದ್ವೈತವಾಸನೆಯಿಂದ ಭೇದದೃಷ್ಟಿ ಸಂಸಾರಕ್ಕೆ ಕಾರಣವೆಂದು ತಿಳಿಯಬಾರದು. ಪಂಚಭೇದಜ್ಞಾನ ಮೋಕ್ಷಕ್ಕೆ ಸಾಧನ. 'ಅಭಿಮಾನ'ವೂ 'ಅಭಿ', ಅಭಿತಃ–

ಬ್ರಹ್ಮಾಪಿ ಸಾಭಿಮಾನಶ್ಚೇತ್ ಸೋಽಪಿ ನರಕಾದಿಭಿಃ ಸಂಸರೇದಿತ್ಯಾಹ ।
–ವೀರರಾಘವಃ

ಸರ್ವಸಾಧನಸಂಪತ್ತಿರ್ಯಥಾ ಬ್ರಹ್ಮಾದೀನಾಂ ತಥಾ ನಾನ್ಯಸ್ಯ ಭವಿಷ್ಯತಿ । ತೇಽಪಿ ಚೇನ್ನ ಮುಕ್ತಾಃ ಕಿಂ ಜ್ಞಾನಾದಿಸಾಧನೈರಿತಿ ಪೂರ್ವೋಕ್ತಂ ಭಗವದ್ಭಜನಂ ದೃಢೀಕರ್ತುಂ ಬ್ರಹ್ಮಾದೀನಾಂ ವೃತ್ತಾಂತಮಾಹ ಆದ್ಯ ಇತಿ ಚತುರ್ಭಿಃ । –ವಲ್ಲಭಃ

ಭೇದದೃಷ್ಟ್ಯಾ ಯಥಾ ರುದ್ರಃ ಸಂಹರತಿ, ವಿಷ್ಣುಃ ಪಾಲಯತಿ, ತಥಾಹಮಪಿ ಬ್ರಹ್ಮಾ ಸೃಜಾಮೀತಿ ಭಗವತಃ ಸಕಾಶಾದ್ ಭೇದದೃಷ್ಟ್ಯಾ ಯೋಽಭಿಮಾನಸ್ತೇನ ಯತ್ ಕರ್ತೃತ್ವಂ ಸ್ರಷ್ಟೃತ್ವಂ ತಸ್ಮಾತ್ ಸಗುಣಂ ಕಲ್ಯಾಣಗುಣಮಯಂ ಬ್ರಹ್ಮ ಮಹತ್-ಸ್ರಷ್ಟಾರಂ ಕಾಲೇ ಮಹಾಪ್ರಲಯಕಾಲೇ ಪ್ರವಿಶ್ಯ ಪುನಃ ಕಾಲೇನ ಗುಣವ್ಯತಿಕರೇ ಮಹತ್ತತ್ತ್ವಾದ್ ಜಾತೇ ಸತಿ ಯಥಾಪೂರ್ವಂ ಪ್ರಜಾಯತೇ ಬ್ರಹ್ಮಾ ಭವತೀತ್ಯರ್ಥಃ। ತೇಽಪಿ ತತ್ಸಂಗಿನೋ ಮಹರ್ಷ್ಯಾದಯೋಽಪಿ ಪುನರಾಯಾಂತಿ । ನನು ಯೋಗೇಶ್ವರಾಣಾಂ ಸನತ್ಕುಮಾರಾದೀನಾಂ ಚ ಸಿದ್ಧಾನಾಮನ್ಯೇಷಾಂ ಚ ಯೋಗಪ್ರವರ್ತಕತ್ವೇನ ಸರ್ವಜ್ಞಾನಿಗುರೂಣಾಂ ಚ ಕಥಂ ಭೇದದೃಷ್ಟಿರಭಿಮಾನೋ ವಾ ಸಂಭವೇತ್? ಉಚ್ಯತೇ । ತೇಷಾಂ ಭಗವತ್ಯಪಿ ಮಾಯಾಶಬಲಿತಬ್ರಹ್ಮತ್ವಬುದ್ಧ್ಯಾ ಮಾಯಿಕವಸ್ತ್ವಂತರವದ್ ಭೇದದೃಷ್ಟಿಸ್ತಥಾ ವಯಂ ಬ್ರಹ್ಮಾನುಭವಿನಃ ಸಾಕಾರಂ ರೂಪಂ ನಿಷಿಧ್ಯಾಮ ಇತ್ಯಭಿಮಾನಶ್ಚ । ಏತಚ್ಚ ಕ್ವಾಚಿತ್ಕಬ್ರಹ್ಮಾಂಡವರ್ತಿ ಬ್ರಹ್ಮ ಬ್ರಾಹ್ಮಣ ಯೋಗಿಜ್ಞಾನಿ ಕುಮಾರಾದೀನಾಮಭಕ್ತತ್ವಾದುಕ್ತಂ । –ವಿಶ್ವನಾಥಃ

ಪೂರ್ಣವಾದ, ಮಾನ-ಜ್ಞಾನ ಎಂಬ ಅರ್ಥದಲ್ಲಿ ನಿರ್ದಿಷ್ಟವಾದ ಪರಿಪೂರ್ಣತತ್ವಜ್ಞಾನ. 'ಕರ್ತೃತ್ವ'ವೂ ಇಲ್ಲಿ ಜೀವನು ತನ್ನಲ್ಲಿ ಆರೋಪಿಸಿಕೊಳ್ಳುವ ಸ್ವತಂತ್ರ ಕರ್ತೃತ್ವವಲ್ಲ. 'ಕರ್ತೃತ್ವಾತ್ ಸಗುಣಂ ಬ್ರಹ್ಮ', ಬ್ರಹ್ಮನು ಸರ್ವಜ್ಞತ್ವಾದಿ ಗುಣಪರಿಪೂರ್ಣ, ಏಕೆಂದರೆ ಅವನು ಸರ್ವಕರ್ತ ಎಂದು ಅನ್ವಯ. 'ಗುಣವ್ಯತಿಕರೇ' ಎಂಬಲ್ಲಿ 'ಅಗುಣವ್ಯತಿಕರೇ' ಎಂದು ಪದವಿಭಾಗ. ಗುಣವೈಷಮ್ಯ ಜನ್ಯವಲ್ಲದ ಅಪ್ರಾಕೃತ ಶ್ವೇತದ್ವೀಪವೆಂಬ ಮುಕ್ತಿಧಾಮ ಉಕ್ತವಾಗಿದೆ. ಅದರಿಂದ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ–

'ಅಭಿಮಾನೇನ' ಪರಿಪೂರ್ಣಜ್ಞಾನೇನ । 'ಸಂಗತ್ಯ' ಲಯೇ ಪರಮೇಶ್ವರಂ ಪ್ರವಿಶ್ಯ । 'ಯಥಾಪೂರ್ವಂ ಪ್ರಜಾಯತೇ' ಉಚ್ಚನೀಚಾದಿಭಾವೇನ ಜಾಯತೇ । 'ಅಗುಣವ್ಯತಿಕರೇ' ಬಹಿಃ ಶ್ವೇತದ್ವೀಪೇ । ನಿರ್ಗಚ್ಛತಿ ।

ಗುಣವ್ಯತಿಕರಾಭಾವೇಽಪ್ಯುಚ್ಚನೀಚಾದಿ ಪೂರ್ವವತ್ ।
ವಿಷ್ಣೋಶ್ಚೈವ ವಿಮುಕ್ತಾನಾಂ ನ ಕದಾಚನ ಗಚ್ಛತಿ ॥

ಇತಿ ಗಾರುಡೇ ।

'ಗುಣವ್ಯತಿಕರೇ ಅಸತಿ' ಲಯೇ ಪ್ರಾಪ್ತೇ । ಪುನಃ ಪರಮೇಶ್ವರ ಮಾಯಾಂತಿ ।

ಬ್ರಹ್ಮಾ ದೇವೈಃ ಪರಿವೃತಃ ಪ್ರಲಯೇ ಪರಮೇಶ್ವರಮ್ ।
ಪ್ರವಿಶ್ಯ ಸರ್ಗೇ ತು ಪುನಃ ಶ್ವೇತದ್ವೀಪೇ ಪ್ರಮೋದತೇ ॥

ಜ್ಞಾನಧರ್ಮಫಲಾಂಸ್ತತ್ರ ಬೋಗಾನ್ ಭುಕ್ತ್ವಾ ಲಯೇ ಪುನಃ ।
ನಾರಾಯಣಂ ಸಮಾವಿಶ್ಯ ಜ್ಞಾನವ್ಯಕ್ತಂ ನಿಜಂ ಸುಖಮ್ ॥

ಭುಂಜತೇ ತ್ವೇವಮೇವೈಷಾಂ ಕಾಲೇ ಸಂಸರ್ಗನಿರ್ಗಮೌ ।
ನಿತ್ಯೌ ನಿತ್ಯಸುಖಂ ಚೈವ ಸೃಷ್ಟೌ ಭೋಗಾಸ್ತಥೋತ್ತಮಾಃ ॥

ಯಥಾಪೂರ್ವಂ ಹರೇಃ ಸರ್ವಗುಣೈರ್ನೀಚಾತ್ಮತಾ ಸದಾ ।
ಬ್ರಹ್ಮಣಶ್ಚ ತಥಾನ್ಯೇಷಾಮನ್ಯೇಷಾಂ ಚ ಯಥಾಪದಮ್ ॥

ಇತಿ ಸ್ಕಾಂದೇ ॥

'ಅಭಿಮಾನ' ಎಂದರೆ ಮೋಕ್ಷಸಾಧನವಾದ ಸ್ವಯೋಗ್ಯಪೂರ್ಣತತ್ವಜ್ಞಾನ. 'ಪುರುಷಂ ಸಂಗತ್ಯ' ಎಂದರೆ ಲಯಕಾಲದಲ್ಲಿ ಪರಮಾತ್ಮನ ಉದರವನ್ನು ಪ್ರವೇಶಿಸಿ ಎಂದರ್ಥ. 'ಯಥಾಪೂರ್ವಂ ಪ್ರಜಾಯತೇ' ಎಂದರೆ ಸಂಸಾರಾವಸ್ಥೆಯಲ್ಲಿ

ಬ್ರಹ್ಮನು ಸರಸ್ವತೀ ಮುಂತಾದವರಿಗಿಂತ ಉತ್ತಮ, ಲಕ್ಷ್ಮೀನಾರಾಯಣರಿಗಿಂತ ಕಡಿಮೆಯವನಾಗಿ ಇದ್ದಂತೆ ಮೋಕ್ಷದಲ್ಲಿಯೂ ಅದೇ ತಾರತಮ್ಯದಿಂದ ಯುಕ್ತನಾಗಿ ಸ್ವರೂಪದೇಹದಿಂದ ಅಭಿವ್ಯಕ್ತನಾಗುತ್ತಾನೆ ಎಂದರ್ಥ. ಅಗುಣವ್ಯತಿಕರೇ ಎಂದು ಪದವಿಭಾಗ, ಗುಣವೈಷಮ್ಯಜನ್ಯವಲ್ಲದ ಅಪ್ರಾಕೃತ ಶ್ವೇತದ್ವೀಪವೆಂದರ್ಥ. ಬ್ರಹ್ಮನು ಪರಮಾತ್ಮನ ಉದರದಿಂದ ಹೊರಗೆ ಈ ಶ್ವೇತದ್ವೀಪಕ್ಕೆ ಬರುತ್ತಾನೆ.

ಗರುಡಪುರಾಣದಲ್ಲಿ ಹೀಗೆ ಹೇಳಿದೆ– 'ಗುಣಕಾರ್ಯವಿಲ್ಲದ ಮುಕ್ತಿಯಲ್ಲಿಯೂ ಕೂಡ ತಾರತಮ್ಯವು ವಿಷ್ಣುವಿಗೂ ಮುಕ್ತರಿಗೂ ಹಿಂದಿನಂತೆಯೇ ಇರುತ್ತದೆ. ಎಂದೂ ವ್ಯತ್ಯಾಸವಾಗುವುದಿಲ್ಲ' ಎಂದು.

'ನಿಷೇವ್ಯ ಪುನರಾಯಾಂತಿ ಗುಣವ್ಯತಿಕರೇಽಸತಿ' ಎಂಬಲ್ಲಿ ಗುಣವ್ಯತಿಕರೇ ಅಸತಿ ಎಂದು ಪದವಿಭಾಗ. ಗುಣಕಾರ್ಯವಾದ ಪ್ರಪಂಚ ಲಯಹೊಂದುವಾಗ ಎಂದರ್ಥ. 'ಪುನರಾಯಾಂತಿ' ಎಂದರೆ ಪ್ರಲಯಕಾಲದಲ್ಲಿ ಶ್ವೇತದ್ವೀಪ ನಿವಾಸಿಗಳಾದ ಮುಕ್ತರು ಭಗವಂತನ ಉದರವನ್ನು ಪುನಃ ಪ್ರವೇಶಿಸುತ್ತಾರೆ.

ಸ್ಕಾಂದಪುರಾಣದಲ್ಲಿ ಈ ಎಲ್ಲ ಅರ್ಥವೂ ಉಕ್ತವಾಗಿದೆ. 'ಬ್ರಹ್ಮನು ದೇವತೆಗಳೊಂದಿಗೆ ಲಯಕಾಲದಲ್ಲಿ ಪರಮಾತ್ಮನನ್ನು ಪ್ರವೇಶಿಸಿದ್ದು ಸೃಷ್ಟಿಕಾಲದಲ್ಲಿ ಹೊರಗೆ ಶ್ವೇತದ್ವೀಪದಲ್ಲಿ ದಿವ್ಯಭೋಗ ಹೊಂದುತ್ತಾನೆ. ಜ್ಞಾನೋತ್ತರ ಕರ್ಮಫಲರೂಪವಾದ ಭೋಗಗಳನ್ನು ಭೋಗಿಸುತ್ತಾನೆ. ಬಳಿಕ ಪ್ರಳಯಕಾಲದಲ್ಲಿ ಪುನಃ ಪರಮಾತ್ಮನನ್ನು ಪ್ರವೇಶಿಸಿ ಜ್ಞಾನದಿಂದ ವ್ಯಕ್ತವಾದ ಸ್ವರೂಪಾನಂದ ಅನುಭವಿಸುತ್ತಾನೆ. ಹೀಗೆ ಲಯಕಾಲದಲ್ಲಿ ಮುಕ್ತ ಜೀವರಿಗೆ ಪರಮಾತ್ಮನಲ್ಲಿ ಪ್ರವೇಶ, ಸೃಷ್ಟಿಕಾಲದಲ್ಲಿ ಹೊರಗೆ ಬರುವುದು ಸದಾ ನಡೆಯುತ್ತವೆ. ಪ್ರಳಯಕಾಲದಲ್ಲಿ ಸ್ವರೂಪಾನಂದಾನುಭವ, ಸೃಷ್ಟಿಕಾಲದಲ್ಲಿ ದಿವ್ಯಭೋಗಗಳು. ಸಂಸಾರದಲ್ಲಿ ಹೇಗೆ ಬ್ರಹ್ಮನು ಎಲ್ಲ ಗುಣಗಳಲ್ಲಿಯೂ ಹರಿಗಿಂತ ಕಡಿಮಯೋ, ಇತರರು ಬ್ರಹ್ಮನಿಗಿಂತ ಕಡಿಮೆಯೋ, ಹಾಗೇ ಮುಕ್ತಿಯಲ್ಲಿಯೂ ತಾರತಮ್ಯವಿರುತ್ತದೆ ಎಂದು.

* * *

ಕಾಮ್ಯಕರ್ಮಗಳನ್ನು ತೊರೆದು ಭಗವಂತನನ್ನೇ ಆರಾಧಿಸಬೇಕೆಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಯೇ ತ್ವಿಹಾಸಕ್ತಮನಸಃ ಕರ್ಮಸು ಶ್ರದ್ಧಯಾನ್ವಿತಾಃ ।
ಕುರ್ವಂತ್ಯಪ್ರತಿಷಿದ್ಧಾನಿ ನಿತ್ಯಾನ್ಯಪಿ ಚ ಕೃತ್ಸ್ನಶಃ ॥ ೧೬ ॥

ರಜಸಾ ಕುಂಠಮನಸಃ ಕಾಮಾತ್ಮಾನೋಽಜಿತೇಂದ್ರಿಯಾಃ ।
ಪಿತೄನ್ ಯಜಂತ್ಯನುದಿನಂ ಗೃಹೇಷ್ವಭಿರತಾಶಯಾಃ ॥ ೧೭ ॥

ತ್ರೈವರ್ಗಿಕಾಸ್ತೇ ಪುರುಷಾ ವಿಮುಖಾ ಹರಿಮೇಧಸಃ ।
ಕಥಾಯಾಂ ಕಥನೀಯೋರುವಿಕ್ರಮಸ್ಯ ಮಧುದ್ವಿಷಃ ॥ ೧೮ ॥

ನೂನಂ ದೈವೇನ ವಿಹತಾ ಯೇ ತ್ವಚ್ಯುತಕಥಾಸುಧಾಮ್ ।
ಹಿತ್ವಾ ಶೃಣ್ವಂತ್ಯಸದ್ಗಾಥಾಃ ಪುರೀಷಮಿವ ವಿಡ್ಭುಜಃ ॥ ೧೯ ॥

ದಕ್ಷಿಣೇನ ಪಥಾಽರ್ಯಮ್ಣಃ ಪಿತೃಲೋಕಂ ವ್ರಜಂತಿ ತೇ ।
ಪ್ರಜಾಯಾಂ ತು ಪ್ರಜಾಯಂತೇ ಶ್ಮಶಾನಾಂತಕ್ರಿಯಾಕೃತಃ ॥ ೨೦ ॥

ತತಸ್ತೇ ಕ್ಷೀಣಸುಕೃತಾಃ ಪುನರ್ಲೋಕಮಿಮಂ ಸತಿ ।
ಪತಂತಿ ವಿವಶಾ ದೇವೈಃ ಸದ್ಯೋ ವಿಭ್ರಂಶಿತೋದಯಾಃ ॥ ೨೧ ॥

ಕೆಲವರು ಧರ್ಮ ಅರ್ಥ ಕಾಮ ಈ ಮೂರನ್ನೇ ಪರಮ ಪುರುಷಾರ್ಥವೆಂದು ಬಗೆದು ಅವುಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಅವರಿಗೆ ಕಾಮ್ಯಕರ್ಮಗಳಲ್ಲಿ ಶ್ರದ್ಧೆ. ಶಾಸ್ತ್ರವಿಹಿತವಾದ ಯಾಗಾದಿಕರ್ಮಗಳನ್ನೂ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನೂ ತಪ್ಪದೆ ಮಾಡುತ್ತಾರೆ. ರಜೋಗುಣಪ್ರಭಾವದಿಂದ ಮೋಕ್ಷವಿಷಯದಲ್ಲಿ ಪ್ರವೃತ್ತಿ ಇಲ್ಲ. ವಿಷಯಭೋಗದಲ್ಲಿಯೇ ಆಸಕ್ತಿ. ಇಂದ್ರಿಯನಿಗ್ರಹವಿಲ್ಲ. ಪ್ರತಿದಿನ ದೇವತೆಗಳನ್ನೂ ಪಿತೃಗಳನ್ನೂ ಫಲಕಾಮನೆಯಿಂದ ಅರ್ಚಿಸುತ್ತಾರೆ. ಮನೆ ಮುಂತಾದವುಗಳ ಸಂಪಾದನೆಯಲ್ಲಿಯೆ ನಿರತರಾಗುತ್ತಾರೆ. ಇವರು ನಿತ್ಯಸಂಸಾರಿಗಳಾಗಿದ್ದರೆ ಸೂರ್ಯನಂತೆ ಬೆಳಗುವ ಮಹಾಪರಾಕ್ರಮಿಯಾದ ಮಧುಸೂದನನ ಕಥೆಯಲ್ಲಿ ಆಸಕ್ತಿ ಇಡದೆ ಪರದೈವವಾದ ಹರಿಯ ಕೋಪಕ್ಕೊಳಗಾಗಿ ನರಕಭಾಗಿಗಳಾಗುತ್ತಾರೆ. ಅಸುರಸ್ವಭಾವದವರಾದರೆ ಹರಿಕಥೆಯನ್ನು ತೊರೆದು ಹಂದಿಯು ಮಲವನ್ನು ಹೇಗೋ ಹಾಗೆ ದುಷ್ಟಶಾಸ್ತ್ರಗಳನ್ನು ಸೇವಿಸುತ್ತಾರೆ. ಶ್ರವಣ ಮಾಡುತ್ತಾರೆ. ಹರಿಯ ಕೋಪಕ್ಕೆ ತುತ್ತಾಗಿ ತಮೋಭಾಗಿಗಳಾಗುತ್ತಾರೆ. ಪರಮಾತ್ಮನಲ್ಲಿ ಅಲ್ಪಭಕ್ತಿ ಇದ್ದು ಮೋಕ್ಷಯೋಗ್ಯರಾಗಿದ್ದರೆ ದಕ್ಷಿಣಾಯನ ಮಾರ್ಗದಿಂದ ಪಿತೃಲೋಕವನ್ನೂ, ಸ್ವರ್ಗಲೋಕವನ್ನೂ ಹೊಂದಿ, ಭೋಗದಿಂದ ಪುಣ್ಯ ಕ್ಷಯಿಸಿದೊಡನೆ ದೇವದೂತರು ಅವರ ಭೋಗಸಂಪತ್ತನ್ನು ಕಸಿಯುವುದರಿಂದ ಭೂಮಿಯ ಮೇಲೆ ಬೀಳುತ್ತಾರೆ. ತಮ್ಮ ಸಂತಾನದಲ್ಲಿ ಪುನಃ ಹುಟ್ಟುತ್ತಾರೆ. ಗರ್ಭಾಧಾನಾದಿ ಸ್ಮಶಾನ ವರೆಗಿನ ಎಲ್ಲ ಕರ್ಮ ಮಾಡಿ ಪುನಃ ಪಿತೃಲೋಕ ಪಡೆಯುತ್ತಾರೆ. ಭೋಗದಿಂದ ಪುಣ್ಯ ಕ್ಷಯವಾದಾಗ ಪುನಃ ಭೂಲೋಕದಲ್ಲಿ ತಮ್ಮ ಸಂತಾನದಲ್ಲಿ ಹುಟ್ಟುತ್ತಾರೆ.

ಇಲ್ಲಿ 'ಎಲ್ಲ ಕಾಮ್ಯಕರ್ಮಿಗಳೂ ಒಂದೇ ರೀತಿ, ಅವರಲ್ಲಿ ಭೇದವಿಲ್ಲ. ಎಲ್ಲರೂ ಪುಣ್ಯಕರ್ಮದಿಂದ ಪಿತೃಲೋಕ ಸ್ವರ್ಗಲೋಕಗಳಿಗೆ ಹೋಗುತ್ತಾರೆ. ಪುಣ್ಯತೀರಿದ ಮೇಲೆ ಭೂಮಿಯಲ್ಲಿ ತಿರುಗಿ ಹುಟ್ಟುತ್ತಾರೆ' ಎಂದು ಹೇಳಿದಂತೆ ಕಾಣುತ್ತದೆ. ವಸ್ತುತಃ ಯಾರು ಹರಿಕಥೆಯಲ್ಲಿ ವಿಮುಖರಾಗಿ ಹಂದಿ ಮಲವನ್ನುಣ್ಣುವಂತೆ 'ಅಸದ್ಗಾಥೆ'ಗಳ ದುಷ್ಟಶಾಸ್ತ್ರಗಳ ಶ್ರವಣವನ್ನೇ ಮಾಡುವರೋ ಅಂಥ ಪಾಪಿಗಳಿಗೆ ಎಂದೂ ಸ್ವರ್ಗ ಸಿಗುವುದೇ ಇಲ್ಲ. ಸ್ವಲ್ಪವಾದರೂ ಹರಿಭಕ್ತಿ ಇದ್ದರೇನೇ ಕಾಮ್ಯಕರ್ಮದಿಂದ ಸ್ವರ್ಗ ಸಿಕ್ಕೀತು. ಬೇರೆ ವ್ಯಾಖ್ಯಾನಕಾರರು ಈ ಅಂಶವನ್ನು ಗಮನಿಸುವುದೇ ಇಲ್ಲ.

ಅತ್ಯಲ್ಪಭಕ್ತಾ ವಿಷ್ಣೌ ಚ ಸದಾ ಶ್ರಾದ್ಧಾದಿಕಾರಿಣಃ ।
ಪಿತೃಲೋಕಂ ಸಮಾವಿಶ್ಯ ಸ್ವಸಂತಾನೇ ಪುನಃಪುನಃ ॥

ಕ್ಷಿಪ್ರಮೇವ ಪ್ರಜಾಯಂತೇ ಯೇ ತು ತದ್ಭಕ್ತಿವರ್ಜಿತಾಃ ।
ಅನ್ಯಸಾಮಾನ್ಯವೇತ್ತಾರಸ್ತದನ್ಯೋತ್ತಮವೇದಿನಃ ॥

ತದ್ಭಕ್ತನಿಂದಕಾಶ್ಚೈವ ಯಾಂತ್ಯೇವ ನಿರಯಂ ಧ್ರುವಮ್ ।
ಅಪಿ ಧರ್ಮೈಕನಿಯಮಾ ನಾತ್ರ ಕಾರ್ಯಾ ವಿಚಾರಣಾ ॥

ಇತಿ ಚ ।

ಮುಕ್ತಿಯೋಗ್ಯಾಸ್ತು ದೇವಾದ್ಯಾ ಮಾನುಷಾ ಯಜ್ಞಭೋಗಿನಃ ।
ಮನುಷ್ಯಭೇದಾಃ ಶ್ರಾದ್ಧಾದಿಕೃತೋ ವಿದ್ವೇಷಿಣೋಽಸುರಾಃ ॥

ಇತಿ ಚ ।

ಸ್ವಲ್ಪವಾದರೂ ವಿಷ್ಣುಭಕ್ತಿ ಉಳ್ಳವರು ಸದಾ ಶ್ರಾದ್ಧಾದಿಗಳನ್ನು ಮಾಡುವವರು ಪಿತೃಲೋಕವನ್ನು ಹೊಂದಿ ಪುಣ್ಯ ತೀರಿದೊಡನೆ ಬೇಗನೆ ಭೂಮಿಯಲ್ಲಿ ತಮ್ಮ ಸಂತಾನದಲ್ಲಿ ಹುಟ್ಟುತ್ತಾರೆ. ಇದು ಪುನಃ ಪುನಃ ನಡೆಯುತ್ತದೆ. ಯಾರು ಸ್ವಲ್ಪವೂ ವಿಷ್ಣುಭಕ್ತಿ ಇಲ್ಲದವರೋ, ಅಂದರೆ ವಿಷ್ಣು ಬೇರೆ ದೇವತೆಗಳಿಗೆ ಸಮಾನನೆಂದು ಅಥವಾ ಬೇರೆ ದೇವತೆಗಳೇ ಮೇಲೆಂದು ತಿಳಿಯುವರೋ ವಿಷ್ಣುಭಕ್ತರ ನಿಂದೆಯನ್ನು ಮಾಡುವರೋ ಅವರು ಸದಾ ಧರ್ಮಾಸಕ್ತರಾಗಿದ್ದರೂ ನಿಶ್ಚಯವಾಗಿ ನರಕಭಾಗಿಗಳು. ಇದರಲ್ಲಿ ಸಂದೇಹವಿಲ್ಲ. ಎಂದೂ ಹೇಳಿದೆ.

ಕಾಮ್ಯಕರ್ಮಿಗಳಲ್ಲಿ ಮನುಷ್ಯರಾಗಿ ಹುಟ್ಟಿ ಸ್ವಲ್ಪ ಮಾತ್ರ ವಿಷ್ಣುಭಕ್ತಿಯಿಂದ ಯಾರು ಯಜ್ಞಾದಿಗಳನ್ನು ಮಾಡುವರೋ ಅವರು ಆ ಕರ್ಮಫಲಭಾಗಿಗಳಾಗುತ್ತಾರೆ. ಅವರು ಅತಾತ್ವಿಕದೇವತೆಗಳಿಂದಾರಂಭಿಸಿ ಮನುಷ್ಯೋತ್ತಮರವರೆಗಿನ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಯಾರು ಸ್ವಲ್ಪವೂ ವಿಷ್ಣುಭಕ್ತಿ ಇಲ್ಲದೆ ಶ್ರಾದ್ಧಾದಿಕರ್ಮ

ಮಾತ್ರ ಮಾಡುತ್ತಾರೋ ಅವರು ನರಕಭಾಗಿಗಳಾದ ಮನುಷ್ಯರು. ಯಾರು ವಿಷ್ಣು ದ್ವೇಷಿಗಳಾಗಿ ಶ್ರಾದ್ಧಾದಿಕರ್ಮ ಮಾಡುವರೋ ಅವರು ತಮೋ ಯೋಗ್ಯರು, ಅಸುರರು ಎಂದೂ ಹೇಳಿದೆ.

* * *

ಪರಬ್ರಹ್ಮನು ಜ್ಞಾನಸ್ವರೂಪ. ಹೊರತು, ಪ್ರಾಕೃತ ಜಡಶರೀರ ಅವನಿಗಿಲ್ಲ ಎಂದು ಹೇಗೆ ಹೇಳಲಾದೀತು? ರಾಮಕೃಷ್ಣಾದಿ ಭಗವದ್ರೂಪಗಳಿಗೆ ಜಡಶರೀರ ಕಂಡಿದೆ ಎಂಬ ಪ್ರಶ್ನೆ ಬಂದರೇ ಆ ಶರೀರ ಜಡವೆಂದು ಕಾಣುವುದು ಭ್ರಾಂತಿ ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಜ್ಞಾನಮೇಕಂ ಪರಾಚೀನೈರಿಂದ್ರಿಯೈರ್ಬ್ರಹ್ಮ ನಿರ್ಗುಣಮ್ ।
ಅವಭಾತ್ಯರ್ಥರೂಪೇಣ ಭ್ರಾಂತ್ಯಾ ಶಬ್ದಾದಿಧರ್ಮಿಣಾಮ್ ॥ ೨೮ ॥

ಪರಮಾತ್ಮನಂತೆ ಅವನ ಮತ್ಸ್ಯಾದಿ ಅವತಾರರೂಪವೂ ಕೂಡ ಕೇವಲ ಜ್ಞಾನಸ್ವರೂಪ, ಸರ್ವೋತ್ತಮ ಗುಣಪೂರ್ಣ ಗುಣತ್ರಯರಹಿತ. ಆದರೂ ಶಬ್ದಾದಿ ವಿಷಯಪದಾರ್ಥಗಳನ್ನೇ ಅನುಭವಿಸುವ ಜೀವರಿಗೆ ಬಾಹ್ಯಜಡ ಪದಾರ್ಥಗಳನ್ನೇ ತೋರಿಸುವ ಇಂದ್ರಿಯಗಳಿಂದ ಭಗವದ್ರೂಪವೂ ಭ್ರಾಂತಿಯಿಂದ ಜಡಶರೀರ ಯುಕ್ತವಾಗಿ ಕಾಣುತ್ತದೆ.

[1]ಇಲ್ಲಿ ಮೇಲುನೋಟಕ್ಕೆ ಜ್ಞಾನರೂಪವಾದ ನಿರ್ಗುಣಬ್ರಹ್ಮವೇ ಭ್ರಾಂತಿಯಿಂದ ಪ್ರಪಂಚರೂಪವಾಗಿ ತೋರುತ್ತದೆ. ಹೊರತು ಪ್ರಪಂಚ ಸತ್ಯವಲ್ಲ ಎಂದು ಹೇಳಿದಂತೆ ಕಾಣುತ್ತದೆ. ಶ್ರೀಧರವ್ಯಾಖ್ಯಾನ ಹಾಗೇ ಹೇಳುತ್ತದೆ. ವಸ್ತುತಃ 'ಜ್ಞಾನರೂಪವಾದ ಭಗವದವತಾರ ಶರೀರವನ್ನು ಜಡಶರೀರವೆಂದು ತಿಳಿಯುವುದೇ ತಮಸ್ಸಿಗೆ ಸಾಧನವಾದ್ದರಿಂದ ಅದು ಭ್ರಾಂತಿ' ಎಂದು ಬ್ರಹ್ಮಪುರಾಣ ಹೇಳುತ್ತದೆ. ಅದರಿಂದ ಇಲ್ಲಿ 'ಅರ್ಥರೂಪೇಣ' ಎಂದರೆ ಬಾಹ್ಯಾರ್ಥರೂಪವಾದ ಜಡಶರೀರಯುಕ್ತವಾಗಿ ಎಂದೇ ಅರ್ಥ. ಪ್ರಪಂಚರೂಪವಾಗಿ ಎಂದಲ್ಲ. ಹಾಗೆ ಅರ್ಥಮಾಡಬೇಕಾಗಿಲ್ಲ. ವೀರರಾಘವವ್ಯಾಖ್ಯಾನದಲ್ಲಿ 'ಬ್ರಹ್ಮ' ಎಂದರೆ ಜೀವ ಎಂದರ್ಥ ಇಟ್ಟುಕೊಂಡು

---

೧. ನನು ಕಥಂ ಪ್ರತ್ಯಕ್ಷಾದಿಪ್ರತೀತಃ ಪ್ರಪಂಚೋ ವ್ಯುದಸಿತುಂ ಶಕ್ಯತೇ? ಪ್ರತೀತೇರ್ಭ್ರಾಂತಿತ್ವಾದಿತ್ಯಾಹ ಜ್ಞಾನಮಿತಿ । ಅರ್ಥರೂಪೇಣ ಜ್ಞಾನರೂಪಂ ನಿರ್ಗುಣಂ ಬ್ರಹ್ಮೈವಾವಭಾತಿ । ನ ತ್ವರ್ಥಃ ಪೃಥಗಸ್ತೀತ್ಯರ್ಥಃ । –ಶ್ರೀಧರಃ

ನಿರ್ಗುಣಂ ಸತ್ವಾದಿಗುಣರಹಿತಮೇಕಂ ಜ್ಞಾನರೂಪಂ ಬ್ರಹ್ಮ ಜೀವಃ ಅರ್ಥರೂಪೇಣ ಪಂಚಭೂತಾರಬ್ಧದೇವಾದಿರೂಪೇಣ ಭ್ರಾಂತ್ಯಾವಭಾತಿ । –ವೀರರಾಘವಃ

ಜೀವನು ಭೌತಿಕದೇಹಾದಿ ಶರೀರರೂಪದಿಂದ ಕಾಣುವುದು ಭ್ರಾಂತಿ ಎಂದಿದೆ. ಆದರೆ 'ನಿರ್ಗುಣ'ಶಬ್ದ ಜೀವನಲ್ಲಿ ಕೂಡುವುದಿಲ್ಲ. ಮತ್ತು ದೇಹಾತ್ಮೈಕ್ಯಬುದ್ಧಿ ಯಾರಿಗೂ ತಮ್ಮ ವಿಷಯದಲ್ಲಿಯೇ ಇಲ್ಲ, ಇನ್ನು ಪರರ ವಿಷಯದಲ್ಲಿ ಭ್ರಾಂತಿ ಬರುವುದು ಅಸಂಭಾವಿತ. ಚೇಷ್ಟಾಲಿಂಗದಿಂದ ಪರದೇಹಕ್ಕೆ ಸಾತ್ಮತ್ವವನ್ನು ಅನುಮಾನ ಮಾಡುತ್ತಾರೆ ಹೊರತು ಆತ್ಮರೂಪತ್ವವನ್ನಲ್ಲ.

ಮತ್ಸ್ಯಕೂರ್ಮಾದಿರೂಪಂ ಚ ವಿಷ್ಣೋರ್ಜ್ಞಾನೈಕಮಾತ್ರಕಮ್ ।
ತನ್ಮನ್ಯಂತೇ ಭೌತಿಕಂ ತು ಯೇ ಗಚ್ಛಂತ್ಯಧರಂ ತಮಃ ॥
ಇತಿ ಬ್ರಾಹ್ಮೇ ॥

'ಮತ್ಸ್ಯಕೂರ್ಮಾದಿ ಶರೀರಗಳು ವಿಷ್ಣುವಿನ ಉತ್ತಮ ಜ್ಞಾನಾನಂದಾದಿಮಾತ್ರ ಸ್ವರೂಪವಾದ ರೂಪಗಳು. ಅವುಗಳನ್ನು ಭೌತಿಕವೆಂದು ತಿಳಿಯುವವರು ಕೆಳಗಿನ ತಮೋಲೋಕವನ್ನು ಹೊಂದುವರು' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

* * *

ಭಗವದವತಾರ ಶರೀರವು ಕಣ್ಣಿಗೆ ಕಾಣುವ ಮಾತ್ರದಿಂದ ಬ್ರಹ್ಮಾದಿದೇವತೆಗಳ ಶರೀರದಂತೆ ಅದೂ ಭೌತಿಕಶರೀರವೆಂದು ಭ್ರಾಂತಿ ಪಡಬಾರದು. ಎಂದು ಕಪಿಲನು ತಾಯಿಗೆ ಉಪದೇಶಿಸುತ್ತಾನೆ.

ಯಥಾ ಮಹಾನಹಂಕಾರಸ್ತ್ರಿವೃತ್ ಪಂಚವಿಧಃ ಸ್ವರಾಟ್ ।
ಏಕಾದಶವಿಧಸ್ತಸ್ಯ ವಪುರಂಡಂ ಜಗದ್ ಯತಃ ॥ ೨೯ ॥

ಮಹತ್ತತ್ವಾಭಿಮಾನಿಯಾದ್ದರಿಂದ ಬ್ರಹ್ಮ, ತ್ರಿವಿಧ ಅಹಂಕಾರಾಭಿಮಾನಿ ಯಾದ್ದರಿಂದ ರುದ್ರ, ಪಂಚಭೂತ ಏಕಾದಶೇಂದ್ರಿಯಾಭಿಮಾನಿಯಾದ್ದರಿಂದ ಇಂದ್ರ ಇವರೆಲ್ಲರೂ ಮಹತ್ತತ್ವಾದಿ ಶರೀರಿಗಳು. ಅಂದರೆ ಬ್ರಹ್ಮಾಂಡವೂ ಅದರೊಳಗಿನ ಜಗತ್ತೂ ಅವರಿಗೆ ಶರೀರದಂತೆ ಅಭಿಮನ್ಯಮಾನವಾಗಿದ್ದು ಅವರಿಗಿಂತ ಭಿನ್ನವೇ. ಮಹದಾದಿತತ್ವಗಳೂ ಅವರಿಂದ ಅಭಿಮನ್ಯಮಾನವಾಗಿ ಅವರಿಗಿಂತ ಭಿನ್ನವೇ ಆಗಿವೆ. ಅದೇ ರೀತಿ ಮತ್ಸ್ಯಾದಿಶರೀರಗಳಲ್ಲ. ಅವು ಸ್ವರೂಪಭೂತ ಅಪ್ರಾಕೃತ ಚಿನ್ಮಯಶರೀರಗಳೇ ಹೊರತು ಪ್ರಾಕೃತಶರೀರಗಳಲ್ಲ ಭಿನ್ನವಲ್ಲ. ಆದರೂ ಅವುಗಳನ್ನು ಭಗವಂತನಿಗಿಂತ ಭಿನ್ನವಾದ ಪ್ರಾಕೃತಶರೀರಗಳೆಂದು ಭ್ರಾಂತಿಯಿಂದ ಅಜ್ಞರು ತಿಳಿಯುತ್ತಾರೆ.

ಇಲ್ಲಿ ಮಹಾನ್, ಅಹಂಕಾರ ಎಂದು ಮುಂತಾಗಿ ಜಡಪದಾರ್ಥಗಳನ್ನೇ ಪರಬ್ರಹ್ಮರೂಪವೆಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು

ಹೇಳಿದ್ದಾರೆ. ಜ್ಞಾನರೂಪವಾದ ಪರಬ್ರಹ್ಮ ಅರ್ಥರೂಪವಾಗಿ ಅಂದರೆ ಪ್ರಪಂಚರೂಪವಾಗಿ ಕಾಣುತ್ತದೆ ಎಂದು ಶ್ರೀಧರವ್ಯಾಖ್ಯಾನ. ಆದರೆ 'ಯಥಾ' ಎಂದು ದೃಷ್ಟಾಂತಬೋಧಕವಾದ ಶಬ್ದ ವ್ಯರ್ಥವಾಗುತ್ತದೆ. ಅರ್ಥರೂಪ ಪ್ರಪಂಚರೂಪ ಎಂದಾಗ ಅದಕ್ಕೆ ಮಹಾನ್ ಇತ್ಯಾದಿ ಉದಾಹರಣೆ ಬೇಕಾಗಿಲ್ಲ. 'ಯಥಾ' ಎಂದರೆ ಯಥಾವತ್, ಸತ್ಯ ಎಂದೂ 'ವಪುಃ' ಎಂದರೆ ಸತ್ಯವಾದ ಪ್ರಪಂಚ ಪರಮಾತ್ಮನ ಶರೀರವೆಂದೂ ವೀರರಾಘವವ್ಯಾಖ್ಯಾನ. ಇದೂ ಅಪವ್ಯಾಖ್ಯಾನ. ಸರಿಯಾದ ವ್ಯಾಖ್ಯಾನ ವಾಮನಪುರಾಣದಲ್ಲಿದೆ–

ಏಕಾದಶೇಂದ್ರಿಯಾತ್ಮಾ ಚ ಪಂಚಭೂತಾತ್ಮಕಸ್ತಥಾ ।
ಸರ್ವಾಭಿಮಾನೀ ಭಗವಾನ್ ಸ್ವರಾಡಿಂದ್ರಃ ಪುರಂದರಃ ॥

ಇದಮಂಡಂ ಜಗತ್ ಸರ್ವಂ ಶಕ್ರದೇಹಂ ವಿದುರ್ಬುಧಾಃ ।
ತತ್ಪತಿಸ್ತ್ರಿಗುಣೋ ರುದ್ರಸ್ತಸ್ಯ ಬ್ರಹ್ಮಾ ತತೋ ಹರಿಃ ॥

ಇತಿ ವಾಮನೇ ॥

ಯಥೈತಾನ್ ಪಶ್ಯಂತಿ ತದ್ವದೇವ ಜ್ಞಾನಾತ್ಮಕಂ ಮತ್ಸ್ಯಾದಿರೂಪಂ ಗುಣಮಯಂ ಪಶ್ಯಂತ್ಯಜ್ಞಾಃ ।

'ಸ್ವರಾಟ್' ಎನಿಸಿರುವ ಪುರಂದರನಾಮಕನಾದ ಭಗವಾನ್ ಇಂದ್ರನು ಏಕಾದಶೇಂದ್ರಿಯಾತ್ಮಕ, ಪಂಚಭೂತಾತ್ಮಕ, ಎಂದರೆ ಏಕಾದಶ ಇಂದ್ರಿಯಗಳು ಪಂಚಭೂತಗಳು ಇವೆಲ್ಲಕ್ಕೂ ಅಭಿಮಾನಿ. ಈ ಬ್ರಹ್ಮಾಂಡವು, ಅದರಲ್ಲಿರುವ ಎಲ್ಲ ಜಗತ್ತು ಇಂದ್ರನ ಶರೀರವೆಂದು ಬಲ್ಲವರು ಹೇಳುತ್ತಾರೆ. ಅವನಿಗೆ ಅಧಿಪತಿ ತ್ರಿಗುಣಾತ್ಮಕ ಅಹಂಕಾರಾಭಿಮಾನಿ ರುದ್ರ. ಅವನಿಗೆ ಅಧಿಪತಿ ಮಹತ್ತತ್ತ್ವಾಭಿಮಾನಿ ಬ್ರಹ್ಮ. ಅವನಿಗೂ ಅಧಿಪತಿ ಶ್ರೀಹರಿ. ಇವರೆಲ್ಲರೂ 'ಸ್ವರಾಟ್' ಎನಿಸಿದವರೇ ಎಂದು ವಾಮನಪುರಾಣ ಹೇಳಿದೆ

ಈ ಪುರಾಣವಚನದಲ್ಲಿ ಭಾಗವತದ ಯಥಾಶಬ್ದಕ್ಕೆ ವ್ಯಾಖ್ಯಾನ ಸ್ಪಷ್ಟವಿಲ್ಲ. ಅದು ಹೀಗೆ– ಹೇಗೆ ಈ ಇಂದ್ರಾದಿದೇವತೆಗಳನ್ನು ಜಡಶರೀರಿಗಳೆಂದೂ ಅವರಿಂದ ಅಭಿಮನ್ಯಮಾನವಾದ ಮಹದಾದಿಗಳನ್ನು ಜಡವೆಂದೂ ಕಾಣುತ್ತಾರೋ ಹಾಗೆಯೇ ಕೇವಲ ಜ್ಞಾನಾತ್ಮಕವಾದ ಮತ್ಸ್ಯಾದಿಶರೀರಗಳನ್ನೂ ತ್ರಿಗುಣಜನ್ಯ, ಜಡ ಎಂದು ಅಜ್ಞರು ಭ್ರಾಂತಿಯಿಂದ ತಿಳಿಯುತ್ತಾರೆ ಎಂದು ಹಿಂದಿನ ಶ್ಲೋಕದೊಂದಿಗೆ ಅನ್ವಯಿಸಬೇಕು.

* * *

ಪ್ರಪಂಚಜ್ಞಾನವೂ ಕೂಡ ಪರಮಾತ್ಮಜ್ಞಾನ ಭಕ್ತಿಗಳಿಗೆ ಉಪಯೋಗಿಯಾದರೆ ಮೋಕ್ಷಸಾಧನವೇ ಆಗುವುದು ಎಂದು ಕಪಿಲನು ಮಾತೆಗೆ ಉಪದೇಶಿಸುತ್ತಾನೆ–

ಜ್ಞಾನಂ ಯೋಗಶ್ಚ ಮನ್ನಿಷ್ಠೋ ನೈರ್ಗುಣ್ಯೋ ಭಕ್ತಿಲಕ್ಷಣಃ ।
ದ್ವಯೋರಪ್ಯೇಕ ಏವಾರ್ಥೋ ಭಗವಚ್ಛಬ್ದಲಕ್ಷಣಃ ॥ ೩೨ ॥

ಪರಮಾತ್ಮಜ್ಞಾನಕ್ಕೆ ಉಪಯೋಗಿಯಾದ ಜ್ಞಾನರೂಪಯೋಗವೂ ಭಕ್ತಿರೂಪ ಯೋಗವೂ ತ್ರಿಗುಣಾತ್ಮಕಲಿಂಗ ಭಂಗ ರೂಪವಾದ ಮುಕ್ತಿಗೆ ಸಾಧನವೇ ಆಗಿದೆ. ಎರಡು ಯೋಗಗಳಿಗೂ ಭಗವಾನ್ ಎನಿಸಿರುವ ಹರಿಯೇ ಗಮ್ಯನಾಗಿದ್ದಾನೆ.

[೧]ಇಲ್ಲಿ ಜ್ಞಾನಯೋಗ ಹೆಚ್ಚೆಂದು ಅದ್ವೈತಮತ. ಭಕ್ತಿಯೋಗ ಹೆಚ್ಚೆಂದು ವಿಶಿಷ್ಟಾದ್ವೈತ ಮುಂತಾದ ಮತ. ಏಕೆಂದರೆ ನಿರ್ಗುಣೋಪಾಸನೆ ಜ್ಞಾನಯೋಗ, ಸಗುಣೋಪಾಸನೆ ಭಕ್ತಿಯೋಗವೆಂದು ಅದ್ವೈತಿಗಳು ಹೇಳುತ್ತಾರೆ. ಜೀವಾತ್ಮನು ತನ್ನನ್ನು ಪ್ರಕೃತಿಗಿಂತ ಭಿನ್ನನೆಂದು ಭಗವಂತನ ಶರೀರವೆಂದು ಉಪಾಸನೆ ಮಾಡುವುದು ಜ್ಞಾನಯೋಗ. ಅದರಿಂದ ಆತ್ಮಸ್ವರೂಪಾನಂದ ಮಾತ್ರ ಲಭಿಸುತ್ತದೆ, ಭಗವದುಪಾಸನೆ ಭಕ್ತಿಯೋಗ. ಅದರಿಂದ ಭಗವದಾನಂದ ಲಭಿಸುತ್ತದೆ ಎಂದು ವಿಶಿಷ್ಟಾದ್ವೈತಿಗಳು ಹೇಳುತ್ತಾರೆ. ವಿಶ್ವನಾಥ ಮುಂತಾದ ವ್ಯಾಖ್ಯಾನಕಾರರು ನಿರ್ಗುಣೋಪಾಸನೆ ನಿರ್ಗುಣ ಮೋಕ್ಷದಲ್ಲಿ ಬ್ರಹ್ಮಾನಂದವನ್ನು ಕೊಡುತ್ತದೆ. ಅದಕ್ಕಿಂತ ಹೆಚ್ಚಿನದು ಸಗುಣ ಭಗವದುಪಾಸನೆ, ಭಕ್ತಿರಸದ ಆನಂದ ನೀಡುತ್ತದೆ ಎನ್ನುತ್ತಾರೆ. 'ಹೀಗೆ ಜ್ಞಾನಯೋಗ ಭಕ್ತಿಯೋಗಗಳಿಗೆ ಒಂದೇ ಫಲವೆನ್ನುವುದು ಯಾರಿಗೂ ಸಮ್ಮತವಲ್ಲ' ಎಂದು ಗಿರಿಧರವ್ಯಾಖ್ಯಾನ ಹೇಳಿದೆ. ಆದರೂ ರಾಧಾರಮಣದಾಸ ವ್ಯಾಖ್ಯಾನ ಹೇಳುವಂತೆ 'ನಿರ್ಗುಣಬ್ರಹ್ಮ ವಿಶೇಷ್ಯ. ಸಗುಣನಾದ ಭಗವಂತ ವಿಶಿಷ್ಟ. ವಿಶೇಷ್ಯವು ವಿಶಿಷ್ಟಕ್ಕಿಂತ ಭಿನ್ನ ಅಲ್ಲ. ಅದರಿಂದ ಭಗವಂತನೇ ಎರಡೂ ಯೋಗಗಳಿಗೆ ಪ್ರಾಪ್ಯ' ಎಂದು ಕಷ್ಟದಿಂದ ಭಾಗವತ ಶ್ಲೋಕವನ್ನು ಬೇರೆ ವ್ಯಾಖ್ಯಾನಕಾರರು ಕೂಡಿಸಲು ಯತ್ನಿಸುತ್ತಾರೆ. ಏನೂ ಕ್ಲೇಶವಿಲ್ಲದೆ ಕೂಡಿಸುವ ಬಗೆ ಹೀಗೆ–

---

೧. ಜ್ಞಾನಭಕ್ತಿಮಾರ್ಗಯೋರುತ್ಕರ್ಷಾಪಕರ್ಷ ವಿವಾದದರ್ಶನಾತ್ ತಯೋಃ ಪ್ರಾಪ್ಯಭೇದಮಾಶಂಕ್ಯ ಪರಿಹರತಿ । –ಗಿರಿಧರಃ

ಯದ್ಯಪಿ ನಿರ್ವಿಶೇಷಂ ಬ್ರಹ್ಮೈವ ಜ್ಞಾನೇನ ಪ್ರಾಪ್ಯಂ ತಥಾಪಿ ಭಗವತ ಏವ ಸಮ್ಯಗ್ ಜ್ಞಾನರೂಪತ್ವಾತ್ ವಿಶೇಷ್ಯಮಾತ್ರಂ ತದ್ ವಿಶಿಷ್ಟಾನ್ನ ಭಿನ್ನಮಿತಿ ಭಗವಾನೇವ ಪ್ರಾಪ್ಯ ಇತ್ಯುಕ್ತಂ । –ರಾಧಾರಮಣದಾಸಃ

ಜ್ಞಾನಭಕ್ತೀ ವಿನಾ ನೈವ ಮುಕ್ತಿಃ ಕಸ್ಯಾಪಿ ವಿದ್ಯತೇ ।
ತಯೋರೇಕತರೇಣಾಪಿ ವಿಷ್ಣೋರ್ನೋಭಯಂ ವಿನಾ ॥

ಏವಮಪ್ಯೇತಯೋರೇಕಭಾವೇಽನ್ಯನಿಯತೇರ್ಧ್ರುವಮ್ ।
ಏಕೇನಾಪಿ ಭವೇನ್ಮುಕ್ತಿಸ್ತದರ್ಥಂ ತ್ವನ್ಯಸಾಧನಮ್ ॥

ಇತಿ ಹರಿವಂಶೇಷು ।

ಜ್ಞಾನ ಮತ್ತು ಭಕ್ತಿಗಳೆರಡು ಇಲ್ಲದೆ ವಿಷ್ಣುವಿಷಯಕವಾದ ಜ್ಞಾನ ಒಂದರಿಂದಲೇ ಅಥವಾ ವಿಷ್ಣುಭಕ್ತಿ ಒಂದರಿಂದಲೇ ಮುಕ್ತಿ ಯಾರಿಗೂ ಲಭ್ಯವಿಲ್ಲ. ಜ್ಞಾನ ಭಕ್ತಿ ಇವೆರಡೂ ಇಲ್ಲದೆ ಕರ್ಮಾದಿಗಳಿಂದಲೂ ಮುಕ್ತಿಯಾರಿಗೂ ಲಭ್ಯವಿಲ್ಲ. ಹೀಗಿದ್ದರೂ ಜ್ಞಾನ ಭಕ್ತಿಗಳ ಮಧ್ಯದಲ್ಲಿ ಒಂದಿದ್ದರೂ ಇನ್ನೊಂದು ಇರುವುದು ನಿಯಮವಾಗಿರುವುದರಿಂದ 'ತಮೇವಂ ವಿದ್ವಾನ್ ನಾನ್ಯಃ ಪಂಥಾ' ಎಂದು ಜ್ಞಾನದಿಂದಲೇ ಮುಕ್ತಿಯನ್ನು ಹೇಳಿದ್ದೂ 'ಭಕ್ತ್ಯಾ ತ್ವನನ್ಯಯಾ' ಎಂದು ಭಕ್ತಿಯಿಂದಲೇ ಮುಕ್ತಿ ಎಂದಿದ್ದೂ ಕೂಡುತ್ತದೆ. ಕರ್ಮಾದಿ ಬೇರೆ ಸಾಧನಗಳಿಂದ ಮುಕ್ತಿ ಎಂದಿದ್ದೂ ಅವು ಜ್ಞಾನಭಕ್ತಿಗಳಿಗೆ ಸಾಧನಗಳೆಂಬ ಅಭಿಪ್ರಾಯದಿಂದ ಕೂಡುತ್ತದೆ ಎಂದು ಹರಿವಂಶದಲ್ಲಿದೆ.

ಜ್ಞಾನವೆಂದರೆ ಭಕ್ತಿ ಇಲ್ಲದ ನಿರ್ಗುಣಬ್ರಹ್ಮ ಜ್ಞಾನವಲ್ಲ. ಭಕ್ತಿ ಎಂದರೂ ಜ್ಞಾನವಿಲ್ಲದ ಕೇವಲ ಪ್ರೀತಿಯಲ್ಲ. ಪ್ರೀತಿಪೂರ್ವಕ ಜ್ಞಾನವನ್ನು ಜ್ಞಾನಯೋಗ ವೆಂದೂ, ಜ್ಞಾನಪೂರ್ವಕ ಪ್ರೀತಿಯನ್ನು ಭಕ್ತಿಯೋಗವೆಂದೂ ಕರೆಯಲಾಗಿದೆ. ಅದರಿಂದ ಒಂದು ಇದ್ದಾಗ ಇನ್ನೊಂದು ಇದ್ದೇ ಇದೆ. ಅವೆರಡೂ ಪರಸ್ಪರ ಸಾಧನವೂ ಆಗಿವೆ. ಅಪರೋಕ್ಷಜ್ಞಾನ ಬಂದಾಗಲೇ ಮೋಕ್ಷಕಾರಣವಾದ ಭಕ್ತಿ ಉದಿಸುತ್ತದೆ. ಜ್ಞಾನಕಾರಣವಾದ ಭಕ್ತಿ ಇದ್ದರೇ ಅಪರೋಕ್ಷಜ್ಞಾನ ಲಭಿಸುತ್ತದೆ. ಈ ಜ್ಞಾನಭಕ್ತಿಗಳೆರಡಕ್ಕೂ ಷಡ್ಗುಣಪೂರ್ಣನಾದ ಭಗವಂತನೇ ಗಮ್ಯ, ಧ್ಯೇಯ ವಸ್ತು ಎಂದು ಭಾಗವತ ಹೇಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಅದ್ವೈತದಲ್ಲಿ ಜ್ಞಾನಯೋಗಕ್ಕೆ ನಿರ್ಗುಣಬ್ರಹ್ಮ ಪ್ರಾಪ್ತಿ ಫಲ. ಗುಣಪೂರ್ಣನಾದ ಭಗವಂತ ಗಮ್ಯನಲ್ಲ. ವಿಶಿಷ್ಟಾದ್ವೈತದಲ್ಲಿಯೂ ಆತ್ಮಸಾಕ್ಷಾತ್ಕಾರವೇ ಜ್ಞಾನಯೋಗಕ್ಕೆ ಫಲ. ಭಗವತ್ಪ್ರಾಪ್ತಿಯಲ್ಲ ಎಂದಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ತೃತೀಯಸ್ಕಂಧೇ ತ್ರಯಸ್ತ್ರಿಂಶೋಽಧ್ಯಾಯಃ

—೦—

ಅಧ್ಯಾಯ–೩೩

ಅಧ್ಯಾಯಸಾರಾಂಶ

ಹೀಗೆ ಕಪಿಲನಿಂದ ಎಲ್ಲ ಉಪದೇಶ ಪಡೆದ ಬಳಿಕ ದೇವಹೂತಿ ಅವನನ್ನು ಸ್ತೋತ್ರಮಾಡಿ ನಮಿಸುತ್ತಾಳೆ. 'ಪ್ರಭು, ನಿನ್ನ ಉದರದಲ್ಲಿ ಸಮಸ್ತಪ್ರಪಂಚವೇ ಇರುವಾಗ ಅಂಥ ನಿನ್ನನ್ನು ನಾನು ಉದರದಲ್ಲಿ ಧರಿಸಿದೆನೆಂದರೆ ಅದು ನಿನ್ನ ಅಚಿಂತ್ಯಶಕ್ತಿ. ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ನೀನು ಸ್ವೇಚ್ಛೆಯಿಂದ ಶಿಶುವಾದಂತೆ ನನ್ನ ಉದರದಲ್ಲಿಯೂ ಶಿಶುವಾದೆ. ಹೀಗೆ ನೀನು ಅವತಾರ ತಾಳುವುದು ಜ್ಞಾನಮಾರ್ಗ ತೋರುವುದಕ್ಕಾಗಿ. ನಿನ್ನ ನಾಮ ಸ್ಮರಣೆ ಒಂದಿದ್ದರೆ ಎಲ್ಲ ತಪಸ್ಸಿನ ಪುಣ್ಯವೂ ಲಭ್ಯವಾಗುತ್ತದೆ. ನಿನಗಿದೋ ನನ್ನ ನಮನಗಳು.' ಕಪಿಲ ಮಾತೆಗೆ ಹೇಳುತ್ತಾನೆ. 'ಅಮ್ಮ, ನೀನು ನಾನು ಹೇಳಿದ ಭಕ್ತಿಮಾರ್ಗವನ್ನು ಸೇವಿಸು. ನಿನಗೆ ಬೇಗನೆ ಮುಕ್ತಿ ಲಭಿಸುವುದು.' ಹೀಗೆ ಹೇಳಿ ಮಾತೆಯ ಅನುಮತಿ ಪಡೆದು ಕಪಿಲ ಅಲ್ಲಿಂದ ಹೊರಟುಹೊದ. ದೇವಹೂತಿ ಸ್ನಾನ ಉಪವಾಸಗಳನ್ನು ಮಾಡುತ್ತ ಅಖಂಡವಾಗಿ ಹರಿಧ್ಯಾನಗೈದಳು. ಅಪರೋಕ್ಷ ಪಡೆದಳು. ಯೋಗದಿಂದ ಶರೀರತ್ಯಾಗ ಮಾಡಿ ಹರಿಪದವನ್ನು ಸೇರಿದಳು. ಶರೀರ ಕಪಿಲಾನದಿಯಾಗಿ ಹರಿಯಿತು. ಬಿಂದುಸರ ಆಶ್ರಮ ಸಿದ್ಧಕ್ಷೇತ್ರವೆನಿಸಿತು. ಈಶಾನ್ಯದಿಕ್ಕಿಗೆ ನಡೆದ ಕಪಿಲನಿಗೆ ಸಮುದ್ರರಾಜ ವಾಸಸ್ಥಳವನ್ನು ನೀಡಿದ. ಅಲ್ಲಿ ಕಪಿಲ ಲೋಕಕಲ್ಯಾಣಕ್ಕಾಗಿ ತನ್ನನ್ನೇ ತಾನು ಧ್ಯಾನಿಸುತ್ತಿದ್ದಾನೆ.

* * *

ದೇವಹೂತಿ ಕಪಿಲನಿಂದ ಎಲ್ಲ ಉಪದೇಶಗಳನ್ನು ಪಡೆದ ಬಳಿಕ ಅವನನ್ನು ಸ್ತೋತ್ರಮಾಡುತ್ತಾಳೆ ಎಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ದೇವಹೂತಿರುವಾಚ–

ಅಥಾಪ್ಯಯಾಂತೇ ಸಲಿಲೇ ಶಯಾನಂ
ಭೂತೇಂದ್ರಿಯಾರ್ಥಾತ್ಮಮಯಂ ವಪುಸ್ತೇ ।

ಗುಣಪ್ರವಾಹಂ ಸದಶೇಷಬೀಜಂ
ದಧ್ಯೌ ಸ್ವಯಂ ಯಜ್ಜಠರಾಬ್ಜಜಾತಃ ॥೨॥

ದೇವಹೂತಿ ಸ್ತೋತ್ರ ಮಾಡಿದಳು– 'ಪ್ರಳಯದ ಕೊನೆಯಲ್ಲಿ ನಿನ್ನ ನಾಭಿ ಕಮಲದಿಂದ ಹುಟ್ಟಿದ ಚತುರ್ಮುಖನು ಪಂಚಭೂತ, ಇಂದ್ರಿಯ, ಶಬ್ದಾದಿ ವಿಷಯಗಳು ಮತ್ತು ಮನಸ್ಸು ಇವುಗಳ ಅಭಿಮಾನಿಗಳಿಗಿಂತ ಉತ್ತಮವಾದ, ತ್ರಿಗುಣಪ್ರೇರಕವಾದ, ಸತ್ಯ ಪ್ರಪಂಚದ ಅಭಿವ್ಯಕ್ತಿಗೆ ಕಾರಣವಾದ, ಜಲಶಾಯಿಯಾದ ನಿನ್ನ ರೂಪವನ್ನು ಧ್ಯಾನ ಮಾಡಿದನು.

ಇಲ್ಲಿ ಭೂತೇಂದ್ರಿಯಾರ್ಥಾತ್ಮಮಯ ಎಂದರೆ ಪರಮಾತ್ಮನು ಭೂತ ಇಂದ್ರಿಯ ಮುಂತಾದವುಗಳಿಂದ ವ್ಯಾಪ್ತನೆಂದು ಶ್ರೀಧರವ್ಯಾಖ್ಯಾನ. ಅವುಗಳಿಂದ ತುಂಬಿದವನೆಂದು ವೀರರಾಘವವ್ಯಾಖ್ಯಾನ. ಅವುಗಳ ಸ್ವರೂಪಭೂತನೆಂದು ಶುಕದೇವವ್ಯಾಖ್ಯಾನ. ಅವುಗಳು ಅವನ ಶಕ್ತಿಗಳೆಂದು ಜೀವಗೋಸ್ವಾಮಿವ್ಯಾಖ್ಯಾನ. ಇವೆಲ್ಲವೂ ಅಪ್ರಾಮಾಣಿಕ ಕಲ್ಪನೆಗಳು. ಮಯ ಎಂದರೆ ಪ್ರಧಾನ ಉತ್ತಮ ಅವುಗಳಿಗೆ ಸ್ವಾಮಿ, ಭೂತಾದಿ ಜಡಪದಾರ್ಥಗಳಿಗೂ ಅವುಗಳ ಅಭಿಮಾನಿಗಳಾದ ದೇವತೆಗಳಿಗೂ ಪರಮಾತ್ಮನು ಪ್ರಭು ಎಂದರ್ಥ. ಇದು ವರಾಹಪುರಾಣದಲ್ಲಿ ಸ್ಪಷ್ಟವಿದೆ.

ಭೂತೇಂದ್ರಿಯಾರ್ಥಾತ್ಮಮಯಂ ತೇಭ್ಯಃ ಪ್ರಧಾನಮ್ ।
ತ್ವಂ ಪ್ರಧಾನಮಯೋ ದೇವ ಪ್ರಧಾನಾದಧಿಕೋ ಯತಃ ॥
ಇತಿ ವಾರಾಹೇ ॥

'ಭೂತೇಂದ್ರಿಯಾರ್ಥಾತ್ಮಮಯಂ' ಎಂದರೆ ಅವುಗಳಿಗಿಂತ ಉತ್ತಮ ಎಂದರ್ಥ. ದೇವ, ನೀನು ಪ್ರಕೃತಿ ಮುಂತಾದ ತತ್ವಗಳಿಗಿಂತಲೂ ಅವುಗಳ ಅಭಿಮಾನಿಗಳಿಗಿಂತಲೂ ಉತ್ತಮನಾದ್ದರಿಂದ 'ಪ್ರಧಾನಮಯ' 'ಭೂತೇಂದ್ರಿ ಯಾರ್ಥಾತ್ಮಮಯ' ಎನಿಸಿರುವಿ ಎಂದು ವರಾಹಪುರಾಣದಲ್ಲಿದೆ.

* * *

ಹೇ ಕಪಿಲನೆ, ನೀನು ನನ್ನ ಗರ್ಭದಲ್ಲಿ ಜನಿಸಿಲ್ಲ, ದುಷ್ಟಶಿಕ್ಷಣ ಶಿಷ್ಟಪರಿಪಾಲನೆಯ ಉದ್ದೇಶದಿಂದ ನಿನ್ನ ಚಿನ್ಮಯವಾದ ಸ್ವರೂಪಶರೀರವನ್ನೇ ಶಿಶುರೂಪದಿಂದ ವ್ಯಕ್ತಗೊಳಿಸಿರುವಿ ಎಂದು ದೇವಹೂತಿ ಸ್ತೋತ್ರಮಾಡುತ್ತಾಳೆ–

ತ್ವಂ ದೇಹತಂತ್ರಃ ಪ್ರಶಮಾಯ ಪಾಪ್ಮನಾಂ
ನಿದೇಶಭಾಜಾಂ ಚ ವಿಭೋ ವಿಭೂತಯೇ ।

ಯಥಾವತಾರಾಸ್ತವ ಸೂಕರಾದಯ–
ಸ್ತಥಾಽಯಮಪ್ಯಾತ್ಮಪಥೋಪಲಬ್ಧಯೇ ॥ ೫ ॥

ಪ್ರಭು, ಹೇ ಕಪಿಲ, ನೀನು ದುಷ್ಟರ ವಿನಾಶಕ್ಕೂ ಸೇವಕರ ಏಳಿಗೆಗೂ ನಿನ್ನ ಚಿನ್ಮಯಶರೀರವನ್ನು ವ್ಯಕ್ತಗೊಳಿಸುವಿ ಹೊರತು ಎಲ್ಲರಂತೆ ಜಡಶರೀರದಿಂದ ಹುಟ್ಟುವವನಲ್ಲ. ನಿನ್ನ ವರಾಹಾದಿ ಅವತಾರಗಳಂತೆಯೇ ಈ ಕಪಿಲಾವತಾರವೂ ನೀನು ಸ್ವತಂತ್ರವಾಗಿ ವ್ಯಕ್ತಮಾಡಿಕೊಂಡಿದ್ದು. ಅದು ಪರಮಾತ್ಮತತ್ವಜ್ಞಾನ ಮಾರ್ಗಪ್ರದರ್ಶನಕ್ಕಾಗಿ.

ಇಲ್ಲಿ 'ದೇಹತಂತ್ರಃ' ಎಂದರೆ 'ದೇಹವನ್ನು ಸ್ವೀಕರಿಸುವವನು' ಎಂದು ಶ್ರೀಧರವ್ಯಾಖ್ಯಾನ. 'ಇಲ್ಲಿ ತಂತ್ರ ಎಂದರೆ ಸಾಮಗ್ರಿ. ದೇಹ ಅವನಿಗೆ ಲೀಲಾಸಾಮಗ್ರಿ ಎಂದರ್ಥ.' ಎಂದು ರಾಧಾರಮಣದಾಸ ವ್ಯಾಖ್ಯಾನ ಮುಂತಾದ ಎಲ್ಲ ವ್ಯಾಖ್ಯಾನಗಳೂ ಹೇಳಿವೆ. 'ದೇಹತಂತ್ರ ಎಂದರೆ ದೇಹಾಧೀನ ಎಂದರೂ ತಪ್ಪಿಲ್ಲ ತೋರಿಕೆಗೆ ಹಾಗೇ' ಎಂದು ವಲ್ಲಭವ್ಯಾಖ್ಯಾನ. ಶುಕದೇವವ್ಯಾಖ್ಯಾನದಲ್ಲಿ ಮಾತ್ರ ದೇಹತಂತ್ರ ಎಂದರೆ 'ದೇಹವನ್ನು ಆವಿರ್ಭಾವಗೊಳಿಸಿರುವಿ' ಎಂದು ಹೇಳಿದೆ. 'ತಂತ್ರ'ಶಬ್ದದಿಂದ ಆ ಅರ್ಥ ಹೇಗೆ ಸಿಗುತ್ತದೆ ಎಂದು ಹೇಳಿಲ್ಲ. ಹೀಗೆ ಸಿಗುತ್ತದೆ–

ದೇಹತಂತ್ರಃ ದೇಹಪ್ರಕಾಶಃ ।

ತತಿಃ ಪ್ರಕಾಶೋ ವಿಸ್ತಾರಸ್ತಂತ್ರಂ ಚೇತ್ಯಭಿಧೀಯತೇ ॥
ಇತಿ ತಂತ್ರಮಾಲಾಯಾಂ ॥

'ದೇಹತಂತ್ರಃ' ಎಂದರೆ ಹಿಂದೆ ಅಗೋಚರವಾಗಿ ಇದ್ದ ಸ್ವರೂಪದೇಹವನ್ನೇ ಈಗ ಜನರ ಕಣ್ಣಿಗೆ ಗೋಚರವನ್ನಾಗಿ ಮಾಡಿರುವಿ ಎಂದರ್ಥ. ತತಿ, ಪ್ರಕಟಗೊಳಿಸುವುದು, ವಿಸ್ತಾರಗೊಳಿಸುವುದು, ತಂತ್ರ ಇವೆಲ್ಲವೂ ಸಮಾನಾರ್ಥಕಗಳೆಂದು ತಂತ್ರ ಮಾಲಾಗ್ರಂಥದಲ್ಲಿ ಉಕ್ತವಾಗಿದೆ.

* * *

ದೇವಹೂತಿ ಕಪಿಲನನ್ನು ಧ್ಯಾನದಲ್ಲಿ ಸಾಕ್ಷಾತ್ಕರಿಸಿಕೊಂಡು ಅಸಂಪ್ರಜ್ಞಾತ ಸಮಾಧಿಯಲ್ಲಿ ಲೀನಳಾದಳೆಂದು ಮೈತ್ರೇಯರು ವಿದುರನಿಗೆ ಹೇಳುತ್ತಾರೆ–

ಬ್ರಹ್ಮಣ್ಯವಸ್ಥಿತಮತಿರ್ಭಗವತ್ಯಾತ್ಮಸಂಶ್ರಯೇ ।
ನಿವೃತ್ತಜೀವಭಾವತ್ವಾತ್ ಕ್ಷೀಣಕ್ಲೇಶಾಽಽಪ್ತನಿರ್ವೃತಿಃ ॥ ೨೬ ॥

ನಿತ್ಯಾರೂಢಸಮಾಧಿತ್ವಾತ್ ಪರಾವೃತ್ತಗುಣಭ್ರಮಾ ।
ನ ಸಸ್ಮಾರ ತದಾಽಽತ್ಮಾನಂ ಸ್ವಪ್ನದೃಷ್ಟಮಿವೋತ್ಥಿತಃ ॥ ೨೭ ॥

ದೇವಹೂತಿಯು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ತನಗೆ ಆಶ್ರಯನಾದ ಆ ಭಗವಂತನಲ್ಲಿಯೆ ಸ್ಥಿರಚಿತ್ತಳಾಗಿ ಮೈಮರೆತಳು. ಜೀವಭಾವರೂಪವಾದ ಲಿಂಗಶರೀರ ಮುಂತಾದುವಿದ್ದೂ ಇಲ್ಲದಂತಿದ್ದುದರಿಂದ ಕ್ಲೇಶಗಳೆಲ್ಲ ದೂರವಾಗಿದ್ದುವು, ಸ್ವರೂಪಾನಂದ ವ್ಯಕ್ತವಾಗಿತ್ತು. ಸ್ವಪ್ನದಲ್ಲಿ ತನಗೆ ಪ್ರಾಪ್ತವಾಗಿದ್ದ ಶರೀರವನ್ನು ಎಚ್ಚೆತ್ತಾಗ ನೆನೆಯುವುದಿಲ್ಲ ಹೇಗೋ ಹಾಗೆ ಅವಳು ತನ್ನ ಶರೀರವನ್ನೇ ಮರೆತಳು. ಅಸಂಪ್ರಜ್ಞಾತಸಮಾಧಿಯಲ್ಲಿ ಲೀನಳಾದಳು. ಏಕೆಂದರೆ ಅವಳ ಮನಸ್ಸು ಹರಿಯಲ್ಲಿಯೇ ದೃಢವಾಗಿ ಬೇರೂರಿತ್ತು. ಅದರಿಂದ ಗುಣಜನ್ಯವಾದ ವಿಷಯಪದಾರ್ಥಗಳಲ್ಲಿ ಅವಳಿಗೆ ಭ್ರಮೆ, ಮೋಹವಿರಲಿಲ್ಲ.

ಇಲ್ಲಿ 'ನಿವೃತ್ತಜೀವಭಾವತ್ವಾತ್' ಎಂದರೆ ಲಿಂಗಶರೀರಾಧ್ಯಾಸ ತೊಲಗಿತೆಂದು ಅವಿದ್ಯೆ ತೊಲಗಿತೆಂದು ವಂಶೀಧರವ್ಯಾಖ್ಯಾನ. ಪ್ರಕೃತಿಯ ಸಂಬಂಧ ನಿವೃತ್ತಪ್ರಾಯವಾಯಿತು, ಹೆಚ್ಚಿನಂಶ ತೊಲಗಿತು ಎಂದು ವೀರರಾಘವವ್ಯಾಖ್ಯಾನ. ಜೀವತ್ವ ತೊಲಗಿತು, ಬ್ರಹ್ಮತ್ವವೇ ಬಂದಿತೆಂದು ವಲ್ಲಭವ್ಯಾಖ್ಯಾನ. ಲಿಂಗಶರೀರಾದಿಗಳ ಅಧ್ಯಾಸ ಅಪ್ರಾಮಾಣಿಕ. ಪ್ರಕೃತಿಯ ಸಂಬಂಧ ಹೆಚ್ಚಿನಂಶ ತೊಲಗಿತೆಂದರೆ ಸ್ವಲ್ಪ ಸ್ವಲ್ಪವಾಗಿ ಪ್ರಕೃತಿ ತೊಲಗುವುದೂ ಅಪ್ರಾಮಾಣಿಕ. ಲಿಂಗಶರೀರ ವಿರಜಾಸ್ನಾನದಿಂದ ಬಿಟ್ಟುಹೋಗುವುದೇ ಜೀವಭಾವ ನಿವೃತ್ತಿ. ಅಂದರೆ ಬಾಹ್ಯಜೀವೋಪಾಧಿನಿವೃತ್ತಿ. ಜೀವತ್ವವು ಹೊರಟು ಹೋಗುವುದು ಅಪ್ರಾಮಾಣಿಕವೆ. ಅದರಿಂದ ಹೀಗೆ ಹೇಳಬೇಕು–

> ಜೀವೋಪಾಧಿಪ್ರಭೃತಯ ಆಮುಕ್ತೇಃ ಸರ್ವದೇಹಿನಾಮ್ ।
> ನಿಯಮಾತ್ ಸಂತ್ಯಭಾವಸ್ತು ನಿಷ್ಫಲತ್ವಾದುದೀರ್ಯತೇ ॥
>
> ಇತಿ ವಾರಾಹೇ ॥

ಜೀವೋಪಾಧಿಯಾದ ಲಿಂಗಶರೀರ ಅವಿದ್ಯಾ ಕಾಮಕರ್ಮಾದಿಗಳು ಲಿಂಗ ಭಂಗ ರೂಪ ಮೋಕ್ಷಪರ್ಯಂತವೂ ಇದ್ದೇ ಇರುತ್ತವೆ. ಮೊದಲೆ ನಿವೃತ್ತಿಯಾಯಿತೆಂದು ಹೇಳುವುದರ ಅಭಿಪ್ರಾಯ ಅಭಿಮಾನವನ್ನು ತೊರೆದಾಗ ಅವು ಸುಟ್ಟಬಟ್ಟೆರಾಶಿಯಂತೆ ಇದ್ದೂ ಇಲ್ಲದಂತೆ, ಕಾರ್ಯಕಾರಿಯಲ್ಲ ಎಂದು. ಹೀಗೆ ವರಾಹ ಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ತೃತೀಯಸ್ಕಂಧೇ
ಚತುಸ್ತ್ರಿಂಶೋಽಧ್ಯಾಯಃ ।

॥ ತೃತೀಯಸ್ಕಂಧಃ ಸಂಪೂರ್ಣಃ ॥

* * *

॥ ಶ್ರೀಃ ॥

ಶ್ರೀ ಆನಂದ ತೀರ್ಥ ಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -14

ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ

ತೃತೀಯ ಸ್ಕಂದ

ಭಾಗ - 2

ಶ್ರೀ108 ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ
ಶ್ರೀಪಾದಂಗಳವರ

ಕನ್ನಡ ಸಾರ ಸಹಿತ

ಅನುವಾದಕರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.

ಪ್ರಕಾಶಕರು
ಅಖಿಲ ಭಾರತ ಮಾಧ್ವಮಹಾ ಮಂಡಲ, ಬೆಂಗಳೂರು.
ಪೂರ್ಣಪ್ರಜ್ಞ ವಿದ್ಯಾಪೀಠ
ಬೆಂಗಳೂರು - 560 028

Kannada Sarvamoola Vol 14
SRI MADBHAGAVATHA TATPARYA NIRNAYA (Part II) of Sri Anandatirtha with kannada traslation and notes (for 3rd skanda). Published by Akhila Bharata Madhwa Maha Mandala, Bangalore-560028. Released during the 25th Akhila Bharatha Madhwa Tatvajnana Sammelana held at Dharmaprakash, Chennai from 4th to 6th Feb. 2006

ಪುಟಗಳು : 72+688
ಮೊದಲನೆ ಮುದ್ರಣ 2006
ಪ್ರತಿಗಳು : 2000

ಪ್ರತಿ ಬೆಲೆ : ರೂ. 160.00
ಹಕ್ಕುಗಳು ಕಾದಿರಿಸಲ್ಪಟ್ಟಿವೆ

ಸಂಪಾದಕ ಮಂಡಳಿ

ಅಧ್ಯಕ್ಷರು

ಶ್ರೀ 108 ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು

ಕಾರ್ಯಾಧ್ಯಕ್ಷರು

ಪ್ರೊ || ಕೆ.ಟಿ.ಪಾಂಡುರಂಗಿ ಎಮ್.ಎ, ವೇದಾಂತ ವಿದ್ವಾನ್, ಮೀಮಾಂಸಾಶಿರೋಮಣಿ

ಕಾರ್ಯದರ್ಶಿಗಳು

ಪ್ರೊ || ಡಿ.ಪ್ರಹ್ಲಾದಾಚಾರ್ಯ ಎಮ್.ಎ, ವಿದ್ವಾನ್

ಸದಸ್ಯರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ
ವಿದ್ವಾನ್ ಪಿ.ಕೇಶವ ಬಾಯರಿ
ವಿದ್ವಾನ್ ರಾಮಾಚಾರ್ಯ ಜಿ.ಮಾಳಗಿ ಎಮ್.ಎ.
ವಿದ್ವಾನ್ ಎ. ಹರಿದಾಸ ಭಟ್ಟ ಎಮ್.ಎ

ಗ್ರಂಥಗಳು ದೊರೆಯುವ ಸ್ಥಳ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಕಾರ್ಯಾಲಯ
ಪೂರ್ಣಪ್ರಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞ ನಗರ, ಬೆಂಗಳೂರು -28

ಅಕ್ಷರ ಜೋಡಣೆ : ವಿದ್ವಾನ್.ಕೆ.ಎಸ್.ಬದರೀನಾರಾಯಣಾಚಾರ್

ಮುದ್ರಣ : ಓಂಕಾರ್ ಆಫ್ ಸೆಟ್ ಪ್ರಿಂಟರ್ಸ್, ನ್ಯೂ ತರಗು ಪೇಟೆ, ಬೆಂಗಳೂರು -2

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ. 1986 ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು 19 ವರ್ಷಗಳಲ್ಲಿ ಹದಿಮೂರು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (3 ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (ಒಂದು ಸಂಪುಟದಲ್ಲಿ), ಪುರಾಣದಲ್ಲಿ ಒಂದಾದ 32 ಅಧ್ಯಾಯಗಳನ್ನು ಒಳಗೊಂಡ ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (4 ಸಂಪುಟಗಳಲ್ಲಿ), ಇದರಲ್ಲಿ ಮತ್ತೊಂದಾದ ಶ್ರೀಮದ್ಭಾಗವತ ತಾತ್ಪರ್ಯ ನಿರ್ಣಯ (ಮೊದಲನೆ ಭಾಗ, ಪ್ರಥಮ ಹಾಗೂ ದ್ವಿತೀಯ ಸ್ಕಂಧ 1 ಸಂಪುಟ) ಹಾಗೂ ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ 1ನೇ ಅಧ್ಯಾಯ ಹಾಗೂ ಶ್ರೀಮದನುವ್ಯಾಖ್ಯಾನ ಭಾಗ 1.(ಮೊದಲಿನ ಐದು ಸೂತ್ರಗಳು) ಈ ಎರಡು (ಪ್ರತ್ಯೇಕ ಸಂಪುಟಗಳಲ್ಲಿ) ಪ್ರಕಟನೆಗೊಂಡು ಜಿಜ್ಞಾಸುಗಳ ಕೈ ಸೇರಿತು. ಇದಲ್ಲದೆ ಹಿಂದೆ ಪ್ರಕಟನೆಗೊಂಡಿದ್ದ ಸರ್ವಮೂಲ ಗ್ರಂಥಗಳ ಪುನರ್ಮುದ್ರಣ ಅತ್ಯಗತ್ಯವಾಗಿದ್ದು, ಅದರಲ್ಲಿ ಗೀತಾಪ್ರಸ್ಥಾನ (3ನೇ ಆವೃತ್ತಿ), ಉಪನಿಷತ್ ಪ್ರಸ್ಥಾನ 8 ಸಂಪುಟಗಳಲ್ಲಿ(3ನೇ ಆವೃತ್ತಿ), ಛಾಂದೋಗ್ಯ (ಎರಡನೇ ಆವೃತ್ತಿ), ಬೃಹದಾರಣ್ಯಕ (ಎರಡನೇ ಆವೃತ್ತಿ), ದಶಪ್ರಕರಣ (3 ನೇ ಆವೃತ್ತಿ), ಪ್ರಕಟನೆಗೊಂಡು ಜಿಜ್ಞಾಸುಗಳಿಗೆ ಲಭ್ಯವಾಗಿರುತ್ತದೆ.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಮೂರನೇ ಸ್ಕಂಧ (ಸರ್ವ ಮೂಲ ಕ್ರಮಸಂಖ್ಯೆ 14) ದ ಕನ್ನಡ ಅನುವಾದವನ್ನು ನಾಡಿನ ಹಿರಿಯ ವಿದ್ವಾಂಸರಾದ ಶ್ರೀ ಹಯವದನ ಪರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯ ಕ್ರಮದಲಿಯೂ ಅನುವಾದಿಸಿದ್ದು, ಈ ಗ್ರಂಥವು 2006ನೇ ಫೆಬ್ರವರಿ 4 ರಿಂದ 6ರ ತನಕ ಚೆನ್ನೈ ನಗರದ ಧರ್ಮಪ್ರಕಾಶದಲ್ಲಿ ನಡೆಯುವ 25ನೇ ಅಖಿಲ ಭಾರತ

ಮಾಧ್ವತತ್ತ್ವಜ್ಞಾನ ಸಮ್ಮೇಳನದ ಶುಭಸಮಾರಂಭದಲ್ಲಿ ಬಿಡುಗಡೆಯಾಗಲಿದೆ. ಇವರು ಈ ಹಿಂದೆ ಶ್ರೀ ಮಹಾಭಾರತ ತಾತ್ಪರ್ಯ ನಿರ್ಣಯ ಕನ್ನಡ ಅನುವಾದ 4 ಸಂಪುಟಗಳಲ್ಲಿ ಹಾಗೂ ಇದೇ ಭಾಗವತ ತಾತ್ಪರ್ಯ ನಿರ್ಣಯದ 1 ಹಾಗೂ 2ನೇ ಸ್ಕಂಧಗಳಿಗೆ ಕನ್ನಡ ಅನುವಾದ ಮಾಡಿಕೊಟ್ಟು ಉಪಕರಿಸಿದ್ದಾರೆ. ಇವರಿಗೆ ಅಖಿಲ ಭಾರತ ಮಾಧ್ವ ಮಹಾ ಮಂಡಳದ ಅನಂತ ಧನ್ಯವಾದಗಳು

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಕಡ್ಡಿ ಬದರಿನಾರಾಯಣಾಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿ ಕೊಟ್ಟಿದ್ದಾರೆ. ಇವರಿಗೆ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

ಇನ್ನು ಉಳಿದ ಮೂರು ಗ್ರಂಥಗಳಾದ ಋಗ್ಭಾಷ್ಯ, ನ್ಯಾಯ ವಿವರಣ, ಅಣುಭಾಷ್ಯ ಹಾಗೂ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಭಾಗವತ ತಾತ್ಪರ್ಯ ನಿರ್ಣಯಗಳ ಉಳಿದ ಅಧ್ಯಾಯಗಳನ್ನು ಒಳಗೊಂಡ ಸಂಪುಟಗಳ ಪ್ರಕಟನೆಗೆ ಒಂದು ನೀಲಿ ನಕ್ಷೆ ತಯಾರಿಸಿ ಈ ಗ್ರಂಥಗಳ ಪ್ರಕಟನೆಗೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸಿದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

20.1.2006 ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ

ಅಧ್ಯಕ್ಷರು

ಅಖಿಲ ಭಾರತ ಮಾಧ್ವ ಮಹಾ ಮಂಡಲ,

ಬೆಂಗಳೂರು.

ಅನುಗ್ರಹ ಸಂದೇಶ

ಶ್ರೀಮದ್ಭಾಗವತವು ಯದ್ ವೈಷ್ಣವಾನಾಂ ಧನಮ್ - ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದ ವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀವೇದವ್ಯಾಸರು ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.

ಶ್ರೀಮಧ್ವಾಚಾರ್ಯರು ಭಾಗವತಪುರಾಣದ ಅರ್ಥನಿರ್ಣಯಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕ ಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಈ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರ ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣ ಸಾಹಿತ್ಯ ದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ.

ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ ಉತ್ತಮವಾದ, ವೇದವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಪ್ರಥಮ ಹಾಗೂ ದ್ವಿತೀಯ ಸ್ಕಂಧದ ಕನ್ನಡಾನುವಾದ ವನ್ನು ಮಾಡಿದ್ದಾರೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯನಿರ್ಣಯದ ಸಮಗ್ರ ಕನ್ನಡ ಅನುವಾದವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನಗಳಿಸಿ ರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಪ್ರಕೃತ ಶ್ರೀಯುತರು ಇದರ ತೃತೀಯ ಸ್ಕಂಧದ ಕನ್ನಡಾನುವಾದವನ್ನು (ಸರ್ವ ಮೂಲ 14ನೇ ಸಂಪುಟ) ಮಾಡಿದ್ದು ಬಿಡುಗಡೆಗೆ ಸಿದ್ಧ ವಾಗಿದೆ.ಆದ್ದರಿಂದ ನಿರ್ದುಷ್ಟವಾದ ಈ ಅನುವಾದದ ಉಪಯೋಗ ವನ್ನು ಜಿಜ್ಞಾಸುಗಳು ಪಡೆದುಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗ ಬೇಕೆಂದು ನಾವು ಅಪೇಕ್ಷಿಸುತ್ತೇವೆ.

20.1.2006

ಶ್ರೀ ವಿಶ್ವೇಶ ತೀರ್ಥಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986 ರಲ್ಲಿಶ್ರೀ ಮಧ್ವಾಚಾರ್ಯರ 750 ನೇ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸರ್ವಮೂಲ ಗ್ರಂಥಗಳ ಬಾಷಾಂತರ ಕಾರ್ಯವನ್ನುಶ್ರೀ ವಿಶ್ವೇಶ ತೀರ್ಥರು ಸಂಕಲ್ಪಿಸಿದ್ದಾರೆ. ಅಂದಿನಿಂದ ಇದುವರೆಗೆ ಒಟ್ಟು 12 ಸಂಪುಟಗಳು ಹೊರಬಂದಿವೆ. ಅಲ್ಲದೆ ಮೂರು ಬೃಹತ್ ಸಂಪುಟಗಳ ಪುನರ್ ಮುದ್ರಣ ಕಾರ್ಯವು ನಡೆದಿದೆ. ಅಖಿಲ ಭಾರತ ಮಾಧ್ವಮಹಾ ಮಂಡಲದ 23ನೇ ತತ್ವಜ್ಞಾನ ಸಮ್ಮೇಳನವು ಧಾರವಾಡ ನಗರದಲ್ಲಿ ಜನವರಿ 27 ರಿಂದ 30ರ ತನಕ ನಡೆದ ಸಂದರ್ಭದಲ್ಲಿ 13ನೇ ಸಂಪುಟಶ್ರೀಭಾಗವತ ತಾತ್ಪರ್ಯ ನಿರ್ಣಯ ಭಾಗ 1 (ಮೊದಲನೆಯ ಹಾಗೂ ದ್ವಿತೀಯ ಸ್ಕಂಧಗಳು) ಪ್ರಕಾಶನಗೊಂಡಿತು.

ಕ್ರಿ.ಶ. 1987ರಲ್ಲಿ ಗೀತಾಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ದಶೋಪನಿಷತ್‌ಗಳು, ಬೃಹದಾರಣ್ಯಕ ಮತ್ತು ಛಾಂದೋಗ್ಯೋಪ ನಿಷತ್‌ಗಳು ಹೀಗೆ ಮೂರು ಸಂಪುಟಗಳು ಹೊರಬಂದವು.

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿ ಮೊದಲ ಒಂಬತ್ತು ಅಧ್ಯಾಯದವರೆಗೆ ರಾಮಾಯಣದ ಕಥಾ ಭಾಗವು ಮುಕ್ತಾಯವಾಗಿದೆ. ಹತ್ತನೆ ಅಧ್ಯಾಯದಲ್ಲಿ ಶ್ರೀವೇದವ್ಯಾಸರ ಅವತಾರ ಮತ್ತು ಅವರು ನಡೆಸಿದ ಜ್ಞಾನ ಕಾರ್ಯಗಳ ವಿವರಣೆ ಇದೆ. ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥೆಯು ಆರಂಭವಾಗುತ್ತದೆ. ಹತ್ತೊಂಬತ್ತನೆ ಅಧ್ಯಾಯದಿಂದ ಇಪ್ಪತ್ತೆರೆಡನೆಯ ಅಧ್ಯಾಯಗಳ ವರೆಗಿನ ಭಾಗವನ್ನು ಭಾಷಾಂತರ ಮಾಡಿ ಕ್ರಿ.ಶ. 1999ರಲ್ಲಿ ಕೊಡಲಾಗಿದೆ. 1998ರಲ್ಲಿ ಸಂಕೀರ್ಣ ಗ್ರಂಥಗಳ, ಭಾಗ ಬಿಡುಗಡೆಯಾಯಿತು. ಅದರಲ್ಲಿ ಕೃಷ್ಣಾಮೃತ ಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರ ಸಂಗ್ರಹ, ಯಮಕ ಭಾರತ ಮತ್ತು ಸ್ತೋತ್ರಾದಿಗಳನ್ನು ಒಳಗೊಂಡ (ದ್ವಾದಶ ಸ್ತೋತ್ರ, ನರಸಿಂಹನಖಸ್ತುತಿ, ಜಯಂತೀ ನಿರ್ಣಯ, ಯತಿ ಪ್ರಣವ ಕಲ್ಪ, ಕಂದುಕಸ್ತುತಿ, ಬಿಲ್ವ ಮಂಗಲಃ ಸಾಧುಃ) 10 ಸರ್ವಮೂಲ ಗ್ರಂಥಗಳು ಸೇರಿವೆ. 1999ರ ಜನವರಿಯಲ್ಲಿ ತಾತ್ಪರ್ಯ ನಿರ್ಣಯದ 23 ರಿಂದ 32ರ ಅಧ್ಯಾಯಗಳು ಹತ್ತನೆಯ ಸಂಪುಟವಾಗಿ ಹೊರಬಂದಿದೆ. ಇಲ್ಲಿಗೆ ಮಹಾಭಾರತ ತಾತ್ಪರ್ಯ ನಿರ್ಣಯ ಪೂರ್ಣಗೊಂಡಂತಾಗಿದೆ.

2001ರಲ್ಲಿ ಉಡುಪಿಯಲ್ಲಿ ಸೂತ್ರಪ್ರಸ್ಥಾನದ ಮೊದಲ ಗ್ರಂಥವಾಗಿ ಬ್ರಹ್ಮಸೂತ್ರಭಾಷ್ಯದ ಪ್ರಥಮಾಧ್ಯಾಯ ಕನ್ನಡ ಅನುವಾದ ಬಿಡುಗಡೆಯಾಯಿತು. ಇದರಲ್ಲಿ ಮತತ್ರಯ ಸೂತ್ರಾರ್ಥವನ್ನು ನಿರೂಪಿಸಿ ತಾತ್ಪರ್ಯ ಚಂದ್ರಿಕಾದಲ್ಲಿ ಹೇಳಿದಂತೆ

ತೌಲನಿಕ ಅಧ್ಯಯನವನ್ನು ಮಾಡಲಾಗಿದೆ. ಜೊತೆಗೆಶ್ರೀಮಧ್ವಾಚಾರ್ಯರ ಭಾಷ್ಯವನ್ನು ಕೊಟ್ಟು ಅದರ ಭಾವಾರ್ಥವನ್ನು ಕೊಡಲಾಗಿದೆ. ಅದಕ್ಕೆ ಪೂರಕವಾಗಿ ಅನುವ್ಯಾಖ್ಯಾನದ ಮೊದಲ ಐದು ಅಧಿಕರಣಗಳನ್ನು ಒಳಗೊಂಡ ಭಾಗದ ಅನುವಾದವುಶ್ರೀ ವಿಶ್ವೇಶ ತೀರ್ಥಶ್ರೀಪಾದರು ಬರೆದ ನ್ಯಾಯ ಸುಧಾ ಸಾರ ಗ್ರಂಥದ ಆಂಗ್ಲ ಭಾಷಾನುವಾದದ ಜೊತೆಗೆ ಸರ್ವಮೂಲದ 12ನೇ ಸಂಪುಟವು ಅಖಿಲ ಭಾರತ ಮಾಧ್ವಮಹಾ ಮಂಡಲ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 2003ನೇ ಫೆಬ್ರವರಿಯಲ್ಲಿ ಬಿಡುಗಡೆಯಾಯಿತು.

ಪ್ರಕೃತ ಪುರಾಣಗಳಲ್ಲಿ ಒಂದಾದಶ್ರೀಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗವನ್ನು ಸರ್ವಮೂಲ ಕ್ರಮ ಸಂಖ್ಯೆ 13(ಪ್ರಥಮ ಹಾಗೂ ದ್ವಿತೀಯ ಸ್ಕಂಧ ಕನ್ನಡ ಅನುವಾದ) ನಾಡಿನ ಹಿರಿಯ ವಿದ್ವಾಂಸರಾದ ವಿದ್ವಾನ್ ಹಯವದನ ಪುರಾಣಿಕರು ಅನುವಾದ ಮಾಡಿಕೊಟ್ಟು, ಧಾರವಾಡದಲ್ಲಿ ಕಳೆದ ವರ್ಷ ನಡೆದ ಅಖಿಲ ಭಾರತ ಮಾಧ್ವ ಮಹಾ ಮಂಡಲದ ತತ್ವಜ್ಞಾನ ಸಮ್ಮೇಳನ ಹಾಗೂಶ್ರೀಶ್ರೀ ವಿಶ್ವೇಶ ತೀರ್ಥಶ್ರೀಪಾದರು ನಡೆಸಿದ ತಮ್ಮ 25ನೇಶ್ರೀ ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆಗೊಂಡಿತು.

ಈ ಗ್ರಂಥದ ಮೂರನೇ ಸ್ಕಂಧದ (ಸರ್ವಮೂಲ ಕ್ರಮ ಸಂಖ್ಯೆ 14)ಕನ್ನಡ ಅನುವಾದವನ್ನುಶ್ರೀಪುರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿಯೂ ಅನುವಾದಿಸಿದ್ದು, ಈ ಗ್ರಂಥವು 2006ನೇ ಫೆಬ್ರವರಿ 4 ರಿಂದ 6ರ ತನಕ ಚೆನ್ನೈ ನಗರ ಧರ್ಮಪ್ರಕಾಶದಲ್ಲಿ ನಡೆಯುವ 25ನೇ ಅಖಿಲ ಭಾರತ ಮಾಧ್ವತತ್ವಜ್ಞಾನ ಸಮ್ಮೇಳನದ ಶುಭಸಮಾರಂಭದಲ್ಲಿ ಬಿಡುಗಡೆಯಾಗಲಿದೆ. ಇದರ ಅನುವಾದವನ್ನು ಮಾಡಿರುವ ವಿದ್ವಾನ್ಶ್ರೀ ಕೆ.ಹಯವದನ ಪುರಾಣಿಕರಿಗೆ ಅಭಿನಂದನೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಕಡ್ಡಿ ಬದರೀ ನಾರಾಯಣಾಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದ್ದಾರೆ. ಇವರಿಗೆ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

20.1.2006

ಮಹಾಮಹೋಪಾಧ್ಯಾಯ
ಪ್ರೊ॥ ಕೆ.ಟಿ.ಪಾಂಡುರಂಗಿ
ಕಾರ್ಯಾಧ್ಯಕ್ಷರು
ಸಂಪಾದಕ ಮಂಡಳಿ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ।

Bhāgavata tātparya nirṇaya

Introduction

Bhāgavata tātparya nirṇaya of Śrī Ānandatīrtha (Śrī Madhvāchārya) is a critical exposition of Śrīmad Bhāgavata. Śrīmad Bhāgavata is quite distinct from Mahābhārata and Purāṇas in respect of its style, subject matter and the purpose. Its theme is to describe the different incarnations of the Supreme God Nārāyaṇa, particularly, the incarnation of Śrī Kṛṣṇa.

In the course of this description discourses on philosophy, theology, ethics are introduced. The process of the creation of the universe is described. The entire universe is described as a visible form of the Supreme God. Inculcation of devotion to the Supreme God and detachment from all others is stressed. A noble code of conduct designated as Bhāgavata dharma is advocated all along. In the course of the narration of the main theme a number of episodes of Sages, Kings and major devotees like Dhruva, Prahlada are introduced. The importance of noble life is highlighted by presenting the aggressive deeds of evil persons like Hiraṇyakaśipu, Śiṣupāla etc.

The style of Bhāgavata is not simple like that of Mahābhārata and Purāṇas. It is a scholastic style like later Mahākāvyas. The Bhāgavata tradition is a continuation of Pañcharātra tradition. Hence, a number of technical terms of Pañcharātra theology are introduced in Bhāgavata. The

philosophy presented in Upaniṣads and Brahmasūtra is also incorporated in the course of developing its theme of the concept of Supreme God designated as Bhagavan. While selecting the episodes to demonstrate bhakti and vairāgya information from other purāṇas particularly from Harivamśa and Viṣṇupurāṇa is drawn. The first two skandhas establish a link between Mahābhārata and Bhāgavata. In this way Bhāgavata is a composition of multi dimension in respect of its source, theme, thought and purpose.

This is effectivly stated by Śrī Madhvāchārya in the following verse :

अर्थोऽयं ब्रह्मसूत्राणां भारतार्थविनिर्णयः ।
गायत्रीभाष्यरूपोऽसौ वेदार्थपरिबृंहितः ॥
पुराणानां साररूपः साक्षाद् भगवतोदितः ।
द्वादशस्कन्धसंयुक्तः शतविच्छेदसंयुतः ।
ग्रन्थोऽष्टादशसाहस्रः श्रीमद्भागवताभिधः ॥

The very invocatery verse ''जन्माद्यस्य यत:'' etc., is an exposition of the first four sūtras of Brahmasūtras directly and the entire brahmasūtras by appropriate explanation. The teachings of brahmasūtra, particularly of Sādhanādhāya and Phalādhyāya are incorporated in Bhāgavata verses all along.

There are a few situations wherein Mahābhārata statements are not clear. There are differences in the narration of certain events. These are to be settled on the basis of the remarks in Bhāgavata. Thus Bhāgavata helps to clarify the statements in

Mahābhārata. Śrī Madhvāchārya has written the digests of both these giving a critical exposition. The importance of the Gāyatri hymn is explained in the very first verse of Bhāgavata. It is already stated above that many episodes of sages, kings, and incarnations of God described in other purāṇas are partially or fully incorporated in Bhāgavata and their philosophical, theological and moral implications are developed.

पुराणस्थानपान्थानामभाषात्रयवेदिनाम् ।
भवता सुसखा चक्रे श्रीभागवतनिर्णयः ॥

It is difficult for an average reader to grasp all these aspects by reading the text of Bhāgavata alone. Naturally very learned commentators have written commentaries on Bhāgavata to help such a reader. There were two commentaries composed by Chitsukha and Puṇyāraṇya before Śrī Madhvāchārya. These interpreted Bhāgavata to develop Advaita Philosophy which is against the very spirit of Bhāgavata.

Out of eighteen thousand verses of Bhāgavata sixteen hundred verses are selected for comment in this work. It is a kind of critical digest and critical exposition.

Such verses that are significant from philosophical, theological and ethical point of view are selected for comment. In these verses only select words and select phrases are commented upon. These comments are of three types :

i) The meaning of the selected words is given.

ii) A remark on the point made by the word or the phrase or the verse concerned is made.

iii) A clarification is offered.

The expressions and phrases that are likely to be given advaita interpretation are especially examined and correctly interpreted. In majority of cases an authority is quoted to support the meaning given and to substantiate the point made or the clarification given. Apart from quoting authority for these purposes, the authorities are also quoted giving full details of theological and philosophical issues. In respect of the rare meaning of the words lexicons are quoted. The remarks made on the points are brief but the authorities quoted are long. If one has a curiosity to find out the proportion of the commentator's remark and the authority quoted one can safely say only ten percent are commentators remarks and ninety percent are the authorities quoted. This is a special style of Śrī Madhvāchārya. In all his works he profusely quotes from 380 works in his 37 works. Among these his quotations in Bhāgavata tātparya nirṇaya are largest. Here, he quotes from 224 works.

In this volume, the text of Bhāgavata tātparya nirṇaya of the third skandha is given. We will illustrate the above special features of Bhāgavata tātparya nirṇaya from this portion.

1. Meaning of the technical and rare words.

1) पद्म:–ब्रह्मा (III-1-26)

The word पद्म is used in the sense of Chaturmukha Brahmā.

2) आकृतिम्–पृथिवीम् ।

शरीरमाकृतिर्देहः कुः पृथ्वी च मही तथा'' इत्यभिधानम् । (III-4-28)

The word आकृति means the earth. The statement.

हरिरपि तत्याज आकृतिं त्र्यधीशः

means the god left the earth. It does not mean that the god left his body.

3) आत्मनां विभुर्जीवाधिपः The lord of the Jīvas. (III-6-1)

4) आत्मशक्तिः–प्रकृतिः (III-7-7)

5) अज्ञान – Night; ज्ञान – The day.

''अज्ञानं तु निशा प्रोक्ता दिवा ज्ञानमुदीर्यते'' (III-10-10)

6) अनिमित्तस्य – ब्रह्मार्पणबुद्ध्या कृतस्य ।

''अः इति ब्रह्म'' इति श्रुतेः ॥ (III-11-9)

The word अनिमित्त conveys the meaning that the action performed with the thought of offering it to the God.

7) क्रतुभिः – स्वप्रज्ञाभिः । (III-12-15)

The word क्रतु means thought.

8) साङ्ख्य – right knowledge.

Yoga – The means to acquire the right knowledge.

''सम्यग् ज्ञानं तु साङ्ख्यं स्यात् तदर्थो योग उच्यते'' (III-25-19)

9) त्रिवृत - The God

''वेदैर्वतत्वाद् भगवांस्त्रिवृदित्यच्यते बुधैः'' इति च ॥ (III-25-33)

The god is called त्रिवृत as he is conveyed by the three vedas.

10) पराभिध्यानेन–परमात्मेच्छया । (III-27-7)

The word पराभिध्यान means the will of the Supreme God.

2. The authorities quoted to substantiate the philosophical and theological concepts and doctrines.

1) ''न देहयोगो हि जनिर्विष्णोर्व्यक्तिर्जनिः स्मृता'' इत्याग्नेये । (III-1-44)

The birth of the god is of the nature of his manifestation. But not his taking a body.

2) ''हरिः कर्ताऽप्यकर्तेति फलाभावेन भण्यते'' इति च । (III-1-44)

Though the god is agent for all activities. He is stated as not an agent since the result of the activity does not relate to him.

3) **जीवद्वयसमायोगाद्धिरण्यकमुखाः परे ।**
भक्तिद्वेषयुताश्च स्युर्गतिस्तेषां यथा निजम् ॥

(4) **सर्वथा भक्तितो मुक्तिर्द्वेषात् तम उदीरितम् ।**
नियमस्त्वनयोर्नित्यं मोहायान्यवचो भवेत् ॥ इति ब्रह्मवैवर्ते । (III-2-24)

Hiraṇyakaśipu etc., have two jīvas in them. Hence, they have both the devotion and enimity.

One will attain the liberation only by devotion but not by the enimity.

(5) ''केवलं भगवज्ज्ञानं साङ्ख्यमित्यभिधीयते'' इत्योग्रये (III-3-29)

The exclusive knowledge of the Supreme God is known as Sāṁkhya.

(6) ''भारतान्नाधिकं विष्णोर्महिमावाचकं कचित् ।
भारतान्न विरागाय भारतान्न विमुक्तये'' इति पाद्मे । (III-5-12)

There is no other work than Mahābhārata that describes the glory of the God, that enables to develop the detachment and that leads to liberation.

7) कालमायां शतलिङ्गिनः – तन्निमित्तशरीराः । हिरण्यगर्भस्यैव कालाभिमानि जीवाभिमानीति द्विविधं रूपम् ।
''कालजीवाभिमानेन रूपद्वन्द्वी चतुर्मुखः'' इति पाद्मे । (III-6-16)
हिरण्यगर्भ has two forms (1) कालाभिमानि (2) जीवाभिमानि.

8) ''आद्यो अवतारो विष्णोस्तु पुरुषो नाम कीर्तितः ।
असृजत् स महत्तत्वं स एवाण्डं समाविरात् ।
स ब्रह्मणो हृदिस्थत्वाद् हृदयं चेति कीर्त्यते'' इति च । (III-7-8)

The first incarnation of Viṣṇu is Puruṣa. He created Mahat tatva and entered into brahmāṇḍa. This brahmāṇḍa is called Hṛdaya and it is on the hṛdaya of the God.

9) देशतः कालतः योसाव वस्थातः स्वतोन्यतः ।
अविलुप्तावबोधात्मा संयुज्येता जया कथम् ।। (III-8-5)

The God has cognition at all times, in all places and about all objects. Hence, he cannot be affected by the association of प्रकृति.

10) अलुप्तबोधरूपत्वात् नासौ प्राकृतदेहवान् ।
न च सृष्ट्यादिकं भ्रान्तिः भ्रान्तिवादाहि दानवाः ।
अतो भ्रान्त्यादिसम्बन्धो नास्य क्वचनविद्यते ।

The God has no prakṛta body as he is never without cognition. He has no illusion. Those who talk of illusion are evil persons. (III-8-12)

11) सृष्ट्वाऽग्रे महदादीनि सविकाराण्यनुक्रमात् ।
तेभ्यो विराजमद्धृत्य तमनुप्राविशद् विभुः ।
विराजं–ब्रह्माणम् ।
"ब्रह्माणं प्राविराट् विष्णुः सहस्राक्षः सहस्रपात्" इति ब्राह्मे ।
"अनुप्रविश्य ब्रह्माणं प्राणं दशविधं तथा ।
इन्द्रियाणीन्द्रियार्थांश्च वर्णांश्चैवासृजद् हरिः" इति गारुडे ॥ (III-8-21)

At the commencement of creation God created mahattattva etc. Then he created Virāt i.e. chaturmukha brahma. Then entering into him. He created ten types of prāṇa, senses, the objects and varṇas.

12) यत्तद् दिव्यं हरे रूपं क्षीरसागरमध्यगम् ।
सज्ज्ञानानन्दैकमात्रं च न ततः परमं क्वचित् ।
अनादिनित्यद्रव्यत्वात् तस्मात् जज्ञे चतुर्मुखः ॥ इत्यध्यात्मे । (III-10-2,3)

The form of the Supreme God present at the centre of milk ocean is of the nature of Jñāna and Ānanda. It is eternal and invisable. From this Chaturmukhabrahma arises.

13) "ईशस्या पूर्णताज्ञानं विष्णोरन्यस्य चेशता ।
भेदस्तस्यावतारेषु जीवस्येशत्वमेव च ॥
तथा जीवत्वमीशस्य जडाभेदस्तयोरपि ।
भेदमोह इति प्रोक्तः स सदा न हरौ क्वचित् ।

अन्येषां तत्प्रसादेन शनैर्याति सतामपि ॥'' इति स्कान्दे । (III-10-14)

Considering the god as a finite being and considering some one else than Viṣṇu as Supreme. Considering the incarnations of God as distinct from each other. Considering God himself a Jīva. Considering Jīva and god as not distinct from Jaḍa are termed as भेदमोह i.e. different forms of ignorance.

14) यथेदानीं तथा चाग्रे पश्चादप्येतदीदृशम् ।
सर्गो नवविधस्तस्य प्राकृतो वै कृतश्च यः ।
सृष्टिश्च प्रलयश्चैव संसारो मुक्तिरेव च ।
देवा ऋषिप्रभृतयो लोका भूरादयस्तथा ।
अनाद्यनन्तकालीनाः सर्वदैकप्रकारतः ।
जगत्प्रवाहः सत्योऽयं नैव मिथ्या कथञ्चन् ।
ये त्वेतदन्यथा ब्रूयुः सर्वहन्तार एव ते ॥ (III-11-13)

The creation, sustanance, the distruction, the transmigration, the liberation, the deities, the sages, bhuḥ etc lokas are forever. This is a continuous flow. These were in the past, these are in the present, and these will be in the future. All this is real. Nothing is illusory.

15) ''अन्तर्भक्ता बहिः क्रुद्धा हिरण्याद्या हरिं प्रति ।
सर्वक्रुद्धाः शम्बराद्या अन्तः क्रोधवशास्तथा ॥'' इति च । (III-17-26)

Hiraṇyakaśipu etc show their anger to god only out side but in their heart they are devoted to the God. While śambara etc are angry with the god even at their heart.

16) "सृष्टौ लये तारतम्यं देवानां ज्ञायते स्फुटम् ।
तारतम्यपरिज्ञाने महातात्पर्यमिष्यते ।
अतस्तद्दूहशस्तूक्तमन्यच्चैतत्प्रकाशकम् ॥" इति वामने । (III-21-12)

There is the hierarchy of the deities both at the time of their creation and their absorption. Comprahending this hierarchy is an important doctrine. Therefore it is frequently mentioned in the scripture.

17) "स्वायम्भुवो मनुश्चैव पृथुश्चैवार्जुनावपि ।
ब्रह्मशेषविपा रुद्र इन्द्र ऋष्यादयस्तथा ।
विष्ण्वावेशयुताः सर्वे नतु विष्णुस्वरूपकाः ॥" (III-30-28)

स्वायं भुव मनु, पृथु, अर्जुन, ब्रह्म, शेष, गरुड, रुद्र, इन्द्र and the sages have only आवेश of God. They are not the very nature of God.

17) पशु वृक्षादिभेदेन जीवा एव स्वत स्थिताः ।
संसृसौ व्यत्ययस्तेषां मुक्तौ तत्तत्स्वरूपता
तत्र स्थावरमुक्तेभ्यः वराः जङ्गमभुक्तिगाः
तेभ्यो मानुषमुक्ताश्च विप्रमुक्ताः ततोधिकाः ।

The animals and trees also have Jīvas during transmigration, they go on changing their form. While in the liberated state they are constant. The sentient liberated are superior to those of non-sentient. Among the sentient liberated men are superior to the other sentient beings. The liberated brahmaṇas are superior to the other liberated men.

19) i) आद्यस्तु महतः सर्गो गुणवैषम्यमात्मनः ।
द्वितीयस्त्वहमस्तत्र द्रव्यज्ञानक्रियादयः ॥ (III-11-14)

ii) भूतसर्गस्तृतीयस्तु तन्मात्राद्द्रव्यशक्तिमान् ।
चतुर्थ ऐन्द्रियः सर्गो यस्तु ज्ञानक्रियात्मकः ।
वैकारिको देवसर्गः पञ्चमो यन्मयं मनः ॥ (III-11-15)

iii) षष्ठस्तु तमसः सर्गो यस्त्वबुद्धिकृतः प्रभोः ।
षडिमे प्राकृताः सर्गा वैकृतानपि मे शृणु ॥ (III-11-17)

iv) "अव्यक्ताद्याः प्रकृत्यन्ताः सर्वाः प्रकृतयः स्मृताः ।
तदुपादानकः सर्गः प्राकृतः परिपठ्यते ॥

अण्डं विकृतं ज्ञेयं तज्जो वैकृत उच्यते ।
पञ्चपर्वा त्वविद्या तु भूतेभ्यो हरिणा पुरा ॥
उद्धृत्य ब्रह्मणि क्षिप्ता सा पुनस्तेन निस्सृता ।
तत्स्रष्टृत्वज्ञापनाय तस्मात् सा प्राकृता मता ॥" इति च ।

(III-11-17)

सप्तमो मुख्यसर्गस्तु षड्विधस्तस्थुषां च यः ॥ (III-11-18)
वनस्पत्योषधिलता त्वक्सारा वीरुधो द्रुमाः ॥ (III-11-19)
तिरश्चामष्टमः सर्गः सोऽष्टविंशविधो मतः । (III-11-20)

Eight types of creations are discribed in the above verses.

i) The creation of mahat tattva by the disturbance of the balance of the three guṇas.

ii) The creation of ahaṁkāra tattva.
At this stage substance, cognition, activity are byfurcated.

iii) The creation of elements.

iv) The creation of senses.

v) The creation of the deities.

vi) The creation of tamas. These six are prakṛta creations. The creation of brahmāṇḍa is vikṛta creation. The avidya of five aspects was also created by the god and it was handed over to Chaturmukha Brahmā.

vii) The creation of six types of non-sentient objects is seventh creation.

viii) The creation of birds is eighth creation.

These quotations give an idea of the theme and the purpose of quoting these authorities. These enrich the understanding of the doctrines and the concepts of theology and philosophy. Bhāgavat tātparya nirṇaya gives a deep insight into the theme and detailed events of Bhāgavata. It is hoped that this brief introduction will enkindle interest to go through this valuable work and utilize it for the understanding of Bhāgavata.

Prof. K.T. Pandurangi
Upakulapati
Poornaprajna Vidyapeetha
Bangalore-28

ವಿಷಯಾನುಕ್ರಮಣಿಕೆ

ತೃತೀಯಸ್ಕಂಧ ಭಾಗವತ

೩.೧.೨ 'ಯದ್ವಾ ಅಯಂ' ಎಂದು ಇಲ್ಲಿ ಪಾಠವಲ್ಲ. ಕೃಷ್ಣ ಪ್ರವೇಶಿಸಿದ ಮನೆಯನ್ನು ವಿದುರ ತೊರೊದನೆಂದು ಹೇಳುವುದರಲ್ಲಿ ಔಚಿತ್ಯವಿಲ್ಲ. 'ಯದಾ ತ್ವಯಂ' ಎಂದೇ ಪಾಠ. ಕೃಷ್ಣ ಉಪಪ್ಲಾವ್ಯಕ್ಕೆ ಹೋಗಿದ್ದಾಗ ಇತ್ತ ವಿದುರ ತನ್ನ ಮನೆಯನ್ನು ತೊರೆದು ತೀರ್ಥಯಾತ್ರೆಗೆ ಹೊರಟ ಎಂದರ್ಥ. ಆದರೆ, ಯುದ್ಧಪ್ರಾರಂಭಕ್ಕೆ ಮೊದಲೇ ವಿದುರ ಕಾಡಿಗೆ ಹೋದನೆಂದರೆ ಯುದ್ಧ ಕಾಲದಲ್ಲಿ ಅವನಿರಲಿಲ್ಲ. ಹಾಗಾದರೆ ಯುದ್ಧಕಾಲದಲ್ಲಿ ವಿದುರ ಧೃತರಾಷ್ಟ್ರನನ್ನು ಸಂತೈಸುತ್ತಿದ್ದುದು ಹೇಗೆ? ಧರ್ಮರಾಜನ ಪಟ್ಟಾಭಿಷೇಕವಾದ ಬಳಿಕ ಹೊರಟು ನಿಂತ ಕೃಷ್ಣನನ್ನು ಬೀಳ್ಕೊಂಡವರಲ್ಲಿ ವಿದುರನೂ ಒಬ್ಬ ಹೇಗೆ? ಇದಕ್ಕೆ ಸಮಾಧಾನ– ವಿದುರ ತೀರ್ಥಯಾತ್ರೆಗೆ ಹೆಚ್ಚು ದೂರ ಹೋಗಿರಲಿಲ್ಲ. ಪಾಂಡವರ ಮೇಲಿನ ಪ್ರೀತಿಯಿಂದ ಆಗಾಗ ಹಸ್ತಿನಾವತಿಗೆ ಬರುತ್ತಿದ್ದ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ೧೭೪

೩.೧.೬ 'ಯದಾ ದದಾಹ' ಯಾವಾಗ ಅರಗಿನ ಮನೆಯಲ್ಲಿ ಸುಡಿಸಿದನೋ ಆಗ ವಿದುರ ತೀರ್ಥಯಾತ್ರೆಗೆ ಹೊರಟ ಎಂದರ್ಥವಲ್ಲ. ಸುಡಿಸಿದ್ದರಿಂದ ಬೇಸತ್ತು ವಿದುರ ಹೊರಟನೆನ್ನಬೇಕು. ಅದಕ್ಕೆ ಯದಾ ತದಾ ಶಬ್ದಗಳು ಕಾಲಾರ್ಥದಲ್ಲಿ ಮಾತ್ರವಲ್ಲದೆ ಹೇತ್ವರ್ಥದಲ್ಲಿಯೂ ಇವೆ ಎಂದು ಅಭಿಧಾನಗ್ರಂಥದಲ್ಲಿರು ವುದರಿಂದ ಇಲ್ಲಿ ಹೇತ್ವರ್ಥದಲ್ಲಿಟ್ಟು ಕೊಳ್ಳಬೇಕು. ೧೭೬

೩.೧.೨೦ ವಿದುರ ತೀರ್ಥಯಾತ್ರೆಯಲ್ಲಿ ಬಂಧು ಮಿತ್ರರ ವಿನಾಶವನ್ನು ಕೇಳಿ ನೊಂದನೆಂದರೆ ಯಾರು ಈ ಬಂಧು ಮಿತ್ರರು? ಕೌರವರಲ್ಲ. ಅವರ ನಾಶವನ್ನು ಕೇಳಿ ವಿದುರ ನೊಂದುಕೊಳ್ಳುವವನಲ್ಲ. ಮತ್ತು ಯುದ್ಧಕಾಲದಲ್ಲಿ ಆಗಾಗ ಸ್ವತಃ ಬಂದು ನೋಡಿ ತಿಳಿದಿದ್ದ. ಕೇಳಿ ತಿಳಿಯಬೇಕಾಗಿಲ್ಲ. ಅದರಿಂದ ಯಾದವರ ವಿನಾಶವನ್ನು ಕೇಳಿ ತಿಳಿದನೆನ್ನಬೇಕು. ಅದು ಪ್ರಭಾಸದಲ್ಲಿ. ಆದರೆ ಆಗ ಕೃಷ್ಣನ ಸಹಾಯದಿಂದ ಧರ್ಮರಾಜ ರಾಜ್ಯಭಾರ ಮಾಡುತ್ತಿದ್ದ. ಯಾದವರ ನಾಶ ಆಗ ಆಗಿರಲು ಶಕ್ಯವಿಲ್ಲ. ಅದಕ್ಕೆ ಮುಂದೆ ಆಗಲಿದೆ

ಎಂದು ಶಾಪ ಬಂದ ವೃತ್ತಾಂತವನ್ನು ಕೇಳಿದನೆನ್ನಬೇಕು. ಆದರೆ ಶಾಪವೃತ್ತಾಂತವನ್ನೂ ವಿದುರ ಯಮುನಾತೀರದಲ್ಲಿ ಉದ್ಧವನಿಂದ ಕೇಳಿ ತಿಳಿದನೆಂದಿದೆ. ಈ ಸಮಸ್ಯೆಗೆ ಪರಿಹಾರ ಸ್ಕಾಂದಪುರಾಣದಲ್ಲಿದೆ– ಪ್ರಭಾಸದಲ್ಲಿ ಸಂಕ್ಷೇಪವಾಗಿ ಜನರಿಂದ ಕೇಳಿ ತಿಳಿದ. ಯಮುನಾತೀರದಲ್ಲಿ ವಿವರವಾಗಿ ಉದ್ಧವನಿಂದ ತಿಳಿದ ಎಂದು. ೧೭೮

೩.೧.೨೩ 'ಪ್ರತ್ಯಂಗಮುಖ್ಯ' ಎಂಬ ಪಾಠದಲ್ಲಿ ಪ್ರತಿಯೊಂದು ಅಂಗದಲ್ಲಿರುವುದು ಆಯುಧ, ಆಯುಧಗಳಲ್ಲಿ ಮುಖ್ಯ ಸುದರ್ಶನಚಕ್ರ ಎನ್ನುವುದು ಕ್ಲಿಷ್ಟಕಲ್ಪನೆಯಾಗುತ್ತದೆ. 'ಪ್ರತ್ಯಂಕಮುಖ್ಯ' ಎಂದೇ ಸರಿಯಾದ ಪಾಠ. ಎಲ್ಲ ಮೂವತ್ತೆರಡು ಲಕ್ಷಣಗಳನ್ನು ಚೆನ್ನಾಗಿ ಹೊಂದಿರುವವನು ಬ್ರಹ್ಮ ಪ್ರತ್ಯಂಕ. ಅವನಿಗಿಂತಲೂ ಚೆನ್ನಾಗಿ ಎಲ್ಲ ಲಕ್ಷಣಗಳನ್ನು ಹೊಂದಿದವನು ವಿಷ್ಣು ಪ್ರತ್ಯಂಕ ಮುಖ್ಯ ಎಂದು ಸ್ಪಷ್ಟವಾಗಿ ತಂತ್ರಮಾಲಾಗ್ರಂಥದಲ್ಲಿ ಹೇಳಿದೆ. ೧೮೦

೩.೧.೨೬ 'ನಾಭ್ಯಪಾದ್ಮಾನುವೃತ್ತ್ಯಾ' ಎಂಬ ಪಾಠದಲ್ಲಿ 'ನಾಭಿಯಲ್ಲಿ ಹುಟ್ಟಿದವನು ಮತ್ತು ಪದ್ಮದಲ್ಲಿ ಹುಟ್ಟಿದವನು' ಎಂದರೆ ನಾಭಿಯಲ್ಲಿರುವ ಪದ್ಮದಲ್ಲಿ ಹುಟ್ಟಿದವನು, ಬ್ರಹ್ಮ ಎನ್ನುವುದು ಕ್ಲಿಷ್ಟಕಲ್ಪನೆ. 'ನಾಭ್ಯಪದ್ಮಾನುವೃತ್ತ್ಯಾ' ಎಂದೇ ಪಾಠ. 'ಪದ್ಮ' ಎಂದು ಬ್ರಹ್ಮನಿಗೂ ಹೆಸರಿದೆ ಎಂದು ಬ್ರಹ್ಮಪುರಾಣದಲ್ಲಿದೆ. ನಾಭಿಯಲ್ಲಿ ಹುಟ್ಟಿದವನು ಬ್ರಹ್ಮ ಎಂದರ್ಥ. ೧೮೧

'ಶ್ರೀಕೃಷ್ಣ ಸುಖವಾಗಿರುವನೆ?' ಎಂದು ವಿದುರ ಕೇಳುತ್ತಾನೆ. ನಿತ್ಯಸುಖಿಯಾದ ಭಗವಂತನ ವಿಷಯದಲ್ಲಿ ಹೀಗೆ ಪ್ರಶ್ನೆ ಕೂಡುವುದಿಲ್ಲ. 'ಲೋಕಕ್ಕೆ ಸುಖ ಉಂಟುಮಾಡುತ್ತ ಇರುವನೆ?' ಎಂದು ಪ್ರಶ್ನೆಯ ಅಭಿಪ್ರಾಯವಿಟ್ಟುಕೊಳ್ಳಬೇಕೆಂದು ಪದ್ಮಪುರಾಣ ಹೇಳಿದೆ.

೩.೧.೨೭ 'ವರತರ್ಪಣೇನ ವರಾನ್ ದದಾತಿ' ವರಗಳಿಂದ ತೃಪ್ತಿಪಡಿಸುವ ಮೂಲಕ ವರ ನೀಡುತ್ತಾನೆ ಎಂದರೇನರ್ಥ? ವರ ನೀಡುವ ಮೂಲಕ ತೃಪ್ತಿಪಡಿಸುತ್ತಾನೆ ತಾನೆ? ಸೋದರಿಯರಿಗೆ ಅವರ ಪತಿಗಳನ್ನು ತೃಪ್ತಿಪಡಿಸುವುದರೊಂದಿಗೆ ಅವರಿಗೂ ವರ ನೀಡುತ್ತಾನೆ ಎಂದು ವ್ಯಾಖ್ಯಾನಿಸಬೇಕು. ೧೮೩

೩.೧.೨೯ 'ನೃಪಾಸನಾಧಿಂ' ರಾಜಸಿಂಹಾಸನ ಸಿಗಲಿಲ್ಲವೆಂಬ ಆಧಿ ಅಂದರೆ ಮನೋವ್ಯಥೆಯನ್ನು ಬಿಟ್ಟು ಕೃಷ್ಣ ಉಗ್ರಸೇನನಿಗೆ ಪಟ್ಟಗಟ್ಟಿದನೆಂದರೆ ಕೃಷ್ಣನಿಗೆ ವ್ಯಥೆಯ ಪ್ರಸಕ್ತಿ ಉಂಟೆ? ಇದಕ್ಕೆ ಸಮಾಧಾನ– ಆಧಿ ಎಂದರೆ ಮನಸ್ಸೆಂದು ಅಭಿಧಾನಗ್ರಂಥದಲ್ಲಿದೆ. ಮನೋವ್ಯಥೆ ಬಿಟ್ಟನೆಂದರ್ಥವಲ್ಲ. ಮನಸ್ಸು ಮಾಡಲಿಲ್ಲ ಎಂದರ್ಥ. ೧೮೩

೩.೩.೨೨ ಭಗವಂತನಿಗೆ ವಿಷಯವೈರಾಗ್ಯ ಬಂದಿತೆನ್ನಲಾಗದು. ಅವನಿಗೆ ವಿಷಯಾಸಕ್ತಿ ಎಂದೂ ಇಲ್ಲ. ಸದಾ ಇರುವ ವೈರಾಗ್ಯವನ್ನೇ ಇಳಿವಯಸ್ಸಿನಲ್ಲಿ ಲೋಕಕ್ಕೆ ತೋರಿಕೊಳ್ಳುತ್ತಾನೆ ಎಂದು ಪದ್ಮಪುರಾಣದಲ್ಲಿದೆ. ೨೦೨

೩.೩.೨೩ ಮಾನವನಿಗೇ ವೈರಾಗ್ಯಬರುತ್ತದೆ ಎಂದ ಮೇಲೆ ಭಗವಂತನಿಗಿನ್ನೇನು ಹೇಳಬೇಕು ಎನ್ನಬಾರದು. ಇದು ಶ್ಲೋಕಾಭಿಪ್ರಾಯವಲ್ಲ. ಅನಾಯಾಸವಾಗಿ ಎಲ್ಲ ಭೋಗಪದಾರ್ಥಗಳನ್ನು ದೊರಕಿಸಿ ಕೊಳ್ಳ ಬಲ್ಲ ಭಗವಂತನೆ ಅವನ್ನು ಬಿಟ್ಟನೆಂದಮೇಲೆ ಕಷ್ಟದಿಂದ ಅಲ್ಪಭೋಗವಸ್ತುಗಳನ್ನು ಸಂಪಾದಿಸುವ ಮಾನವ ಅವುಗಳಲ್ಲಿ ವಿಶ್ವಾಸ ಮಾಡಬಹುದೆ? ಎನ್ನಬೇಕು. ಇದೆ ಶ್ಲೋಕದ ಅಭಿಪ್ರಾಯ. ೨೦೩

೩.೩.೨೫ ಯಾದವರ ಪ್ರಭಾಸಯಾತ್ರೆಯ ವಿವರವನ್ನು ಪ್ರತ್ಯಕ್ಷ ಕಂಡಿರುವಂತೆ ವಿದುರ ಈಗ ವರ್ಣಿಸುವುದು ಅಸಂಗತ. ಇದು ಮುಂದೆ ಇಪ್ಪತ್ತಾರು ವರ್ಷಗಳು ಕಳೆದ ಬಳಿಕ ನಡೆಯಲಿರುವ ವಿದ್ಯಮಾನ. ಈ ಸಮಸ್ಯೆಗೆ ಅನೇಕ ಸಮಾಧಾನಗಳಿವೆ. ಮುಂದೆ ಆಗಲಿರುವುದು ನಿಶ್ಚಿತವೆನ್ನುವ ಅಭಿಪ್ರಾಯದಿಂದ ಆಗಿ ಹೋಯಿತೆಂಬಂತೆ ವರ್ಣಿಸುತ್ತಿದ್ದಾನೆ. ಅಥವಾ ಎಲ್ಲ ವಿದ್ಯಮಾನಗಳೂ ಪ್ರತಿಕಲ್ಪದಲ್ಲಿ ನಡೆಯುತ್ತವೆ. ಅದರಿಂದ ಮುಂದೆ ನಡೆಯಲಿರುವುದಕ್ಕೆ ಹಿಂದೆ ನಡೆದುದನ್ನು ದೃಷ್ಟಾಂತರೂಪದಿಂದ ಬಣ್ಣಿಸುತ್ತಿದ್ದಾನೆ. ಅಥವಾ ಮುಂದೆ ಆಗಲಿರುವುದನ್ನು ಆಗಿಹೋಯಿತೆಂದು ವರ್ಣಿಸುವುದು ಅಜ್ಞರಿಗೆ ಪುರಾಣಪ್ರಮೇಯಗಳಲ್ಲಿ ಗೊಂದಲ ಉಂಟು ಮಾಡುವ ಉದ್ದೇಶದಿಂದ ಎಂದು ಸ್ಕಂದಪುರಾಣದಲ್ಲಿದೆ. ೨೦೪

೩.೪.೩ 'ಸ್ವಕುಲಂ ಸಂಜಿಹೀರ್ಷುಣಾ' ತನ್ನ ಕುಲನಾಶವನ್ನು ಮಾಡಬಯಸಿ ಮೊದಲಿಗೆ ಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ ಎಂದು ಇಲ್ಲಿ ಹೇಳಿದೆ. ಮುಂದೆ ಐದನೇ ಅಧ್ಯಾಯದಲ್ಲಿ 'ಸಂಹೃತ್ಯ ಸ್ವಕುಲಂ' ಯಾದವಕುಲ ನಾಶ ಮಾಡಿದ ಬಳಿಕ ಉಪದೇಶಿಸುತ್ತಾನೆ. ಎರಡನ್ನೂ ಹೇಗೆ ಕೂಡಿಸಬೇಕು? ಗರುಡ ಪುರಾಣ ಹೇಳುತ್ತದೆ. ಯದುಕುಲನಾಶಕ್ಕಿಂತ ಇಪ್ಪತ್ತಾರು ವರ್ಷ ಮೊದಲಿಗೊಮ್ಮೆ, ಯದುಕುಲ ನಾಶವಾದ ಬಳಿಕ ಇನ್ನೊಮ್ಮೆ ಹೀಗೆ ಎರಡು ಬಾರಿ ಉಪದೇಶಿಸುತ್ತಾನೆ ಎಂದು. ೨೦೭

೩.೪.೨೮ 'ಆಕೃತಿಂ ತತ್ಯಜೇ' 'ದೇಹಂ ತ್ಯಕ್ಷ್ಯನ್' ಎಂದು ಕೃಷ್ಣನ ದೇಹತ್ಯಾಗವನ್ನು ಭಾಗವತ ಹೇಳುತ್ತದೆ. ಹೇಗೆ? ಎಂದರೆ 'ಆಕೃತಿ' ಎಂದರೂ 'ದೇಹ'

ಎಂದರೂ ಭೂಮಿ ಎಂದರ್ಥ. ಅಭಿಧಾನಗ್ರಂಥ ಹಾಗೇ ಹೇಳುತ್ತದೆ. ಮತ್ತು ಸ್ಕಾಂದಪುರಾಣದಲ್ಲಿ ಹರಿಯ ದೇಹತ್ಯಾಗವೆಂದರೆ ಭೂಲೋಕತ್ಯಾಗವೆ. ಅವನ ದೇಹ ಸ್ವರೂಪಭೂತವೇ ಆದ್ದರಿಂದ ಅದನ್ನು ತ್ಯಾಗಮಾಡಲು ಬರುವುದಿಲ್ಲ. ಕೃಷ್ಣಾವತಾರದ ಕೊನೆಯಲ್ಲಿ ತನಗೆ ಸದೃಶವಾದ ಮೃತ ದೇಹಸೃಷ್ಟಿಮಾಡಿ ತ್ಯಜಿಸಿದಂತೆ ತೋರಿ ಕೊಂಡನೆಂದಿದೆ. ೨೧೦

೩.೪.೩೧ 'ನೋದ್ಧವೋಽಣ್ವಪಿ ಮನ್ನ್ಯೂನಃ' ಕೃಷ್ಣ ಹೇಳುತ್ತಾನೆ. ಉದ್ಧವ ನನಗಿಂತ ಒಂದಿಷ್ಟೂ ಕಡಿಮೆಯವನಲ್ಲ ಎಂದು. ಈ ಮಾತಿನ ಇಂಗಿತವನ್ನು ಬ್ರಹ್ಮತರ್ಕದ ಸಹಾಯದಿಂದ ಹೀಗೆ ತಿಳಿಯ ಬೇಕು– ಅಜ್ಞ ಜನರಿಗೆ ಮೋಹ ಉಂಟುಮಾಡುವುದಕ್ಕಾಗಿ ಹೀಗೆ ಹೇಳಿದ್ದು ಅಥವಾ ಪ್ರಶಂಸೆ, ಅತಿಶಯೋಕ್ತಿ ಅಥವಾ ಹೀಗೆ ಕೆಲವರ ಅಭಿಪ್ರಾಯವೆಂದು ಹೇಳುತ್ತಿದ್ದಾನೆ. ಅಥವಾ ತಾನು ಜಗದ್ಗುರುವಾಗಿರುವಂತೆ ಉದ್ಧವನೂ ತನಗಿಂತ ಕೆಳಗಿನವರಿಗೆ ಗುರುವೆ ಎಂದು. ೨೧೧

೩.೫.೧೧ ವ್ಯಾಸರ ಮುಖದಿಂದ ಭಾರತದಲ್ಲಿ ರಾಜರುಗಳ ಋಷಿಗಳ ಚರಿತ್ರೆಗಳನ್ನು ಬೇಕಾದಷ್ಟು ಕೇಳಿದ್ದೇನೆ. ಸಾಕೆನಿಸಿದೆ. ಎಲ್ಲೋ ಅಲ್ಪಸ್ವಲ್ಪ ಭಗವಂತನ ಚರಿತ್ರೆಯೂ ಅಲ್ಲಿ ಇದೆ. ಅದನ್ನು ಕೇಳಿ ತೃಪ್ತಿಯಾಗಿಲ್ಲ. ಅದನ್ನೇ ನಿಮ್ಮ ಮುಖದಿಂದ ಭಾಗವತದಲ್ಲಿ ಕೇಳಲು ಬಯಸಿದ್ದೇನೆ ಎಂದು ವಿದುರ ಹೇಳುತ್ತಿರುವನೆ? ಇಲ್ಲ 'ತೇಷಾಂ ಋತೇ' ರಾಜರ ಋಷಿಗಳ ಚರಿತ್ರೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ಅವೆಲ್ಲವೂ ಕೃಷ್ಣಕಥಾಮೃತವೆ. ಅವುಗಳನ್ನು ಎಷ್ಟು ಕೇಳಿದರೂ ಸಾಕೆನಿಸುವುದಿಲ್ಲ ಎಂದರ್ಥ. ಋತೇ ಎಂಬುದು ಇಲ್ಲಿ ವಿನಾರ್ಥದ ಅವ್ಯಯವಲ್ಲ. ಋ ಗತೌ ಧಾತು. ಅರಿತಾಗ ಎಂದರ್ಥ. ೨೧೫

೩.೫.೧೨ 'ಮತಿರ್ಗೃಹೀತಾ ನು' ಎಂದು ಪಾಠವಿಟ್ಟುಕೊಂಡರೆ, ಶಾಖಾ ಚಂದ್ರನ್ಯಾಯದಿಂದ ವಿಷಯಸುಖವರ್ಣನೆಯ ಮೂಲಕ ಲೌಕಿಕರ ಮನ ಸೆಳೆದು ಭಗವಂತನ ಚರಿತ್ರೆಯತ್ತ ಒಯ್ಯುವ ಯತ್ನ ಭಾರತದಲ್ಲಿದೆ ಎಂದಾಗುವುದು. ಅದು ಸರಿಯಲ್ಲ. ಲೌಕಿಕರಿಗೆ ಭಗವಂತನ ಬಗ್ಗೆ ಕೇಳುವಾಸೆಯೆ ಇಲ್ಲ. ವಿಷಯಸುಖವರ್ಣನೆಯಲ್ಲಿಯೆ ತೃಪ್ತರಾಗುತ್ತಾರೆ. ಅದರಿಂದ ವಿವೇಕಿಗಳಿಗಾಗಿಯೆ ಭಾರತ ಹೊರಟಿದೆ. ಅವರಿಗೆ ಅಲ್ಲಿ ಪೂರ್ವಾಪರಗಳನ್ನು ಅವಲೋಕಿಸಿದಾಗ ಎಲ್ಲೆಡೆ ಹರಿಕಥಾಮೃತವೆ. ವಿಷಯಸುಖವರ್ಣನೆಯಲ್ಲಿ 'ಮೃತಿರ್ಗೃಹಿತಾ ನ' ಮನಸ್ಸು ಮುಳುಗುವುದಿಲ್ಲ

ಎಂದೇ ಪಾಠ ಸರಿ. ಭಗವನ್ಮಹಿಮೆಯ ವರ್ಣನೆಯಲ್ಲಿ ಭಾರತವನ್ನು ಮೀರಿಸುವ ಗ್ರಂಥ ಇನ್ನೊಂದಿಲ್ಲವೆಂದು ಪದ್ಮಪುರಾಣ ಸ್ಪಷ್ಟ ಹೇಳಿದೆ. ೨೧೭

೩.೬.೧ 'ಆತ್ಮನಾಂ ಆತ್ಮಾ' ಜೀವರ ಸ್ವರೂಪ ಭಗವಂತ ಎಂದು ಅನ್ವಯವಲ್ಲ. ಆತ್ಮಾ ಎಂದರೆ ಅತ್ತಿ, ಪ್ರಳಯಕಾರಿಯಾಗಿದ್ದಾನೆ ಹರಿ. ಅವನು 'ಆತ್ಮನಾಂ ವಿಭುಃ' ಜೀವರಿಗೆ ಅಧಿಪತಿ. ೨೨೧

೩.೬.೨ 'ಆತ್ಮಾನಂ ಅಸಂತಮೇವ ಮೇನೇ' ಎಂದರೆ ಲಯಕಾಲದಲ್ಲಿ ದೃಶ್ಯಪ್ರಪಂಚವೇ ಇಲ್ಲದ್ದರಿಂದ ದ್ರಷ್ಟೃವಾದ ತಾನೇ ಇಲ್ಲದಂತೆ ಎಂದು ಭಗವಂತ ತಿಳಿದ ಎಂದರ್ಥವಲ್ಲ. ಸೃಷ್ಟಿಕಾರ್ಯದಲ್ಲಿ ಅಶಕ್ತನಾದ ಜೀವನಿದ್ದೂ ಇಲ್ಲದಂತೆ ಎಂದು ಭಗವಂತ ತಿಳಿದ. ೨೨೨

'ಸುಪ್ತಶಕ್ತಿಃ' ಎಂದರೆ ಮಾಯಾಶಕ್ತಿ ಸುಪ್ತವಾಗಿತ್ತೆಂದು ಅರ್ಥವಲ್ಲ. 'ಶಕ್ತಿ' ಎಂದರೆ ಭಾರ್ಯೆ. ವಿಷ್ಣುಭಾರ್ಯೆ 'ಸುಪ್ತ'ಳಾಗಿದ್ದಳು. ಭಗವಂತನ ಗಾಢಾಲಿಂಗನವೆ ಅವಳಿಗೆ ಸುಪ್ತಿ, ಜಡಪ್ರಕೃತಿಗೂ ಕಾರ್ಯರೂಪದಿಂದ ಪರಿಣಾಮ ಹೊಂದದಿರುವುದು ಸುಪ್ತಿ.

೩.೬.೬ 'ಅಂಶಗುಣಕಾಲಾತ್ಮಾ' ಎಂಬಲ್ಲಿ ಅಂಶ–ರುದ್ರಾದಿ ಜೀವರು, ಗುಣ–ಸತ್ವಾದಿಗುಣಗಳು, ಕಾಲ–ಸೃಷ್ಟಿಕಾಲ ಇವುಗಳಿಗೆ ಆತ್ಮ– ಅಭಿಮಾನಿಯಾದ ಚತುರ್ಮುಖ ಎಂದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೨೨೪

೩.೬.೧೧ 'ಕಾಲಮಾಯಾಂಶಯೋಗತಃ' ಕಾಲ–ಸೃಷ್ಟಿಕಾಲ, ಮಾಯಾ–ಚೇತನಪ್ರಕೃತಿ, ಅಂಶ–ಚತುರ್ಮುಖ, ಇವರ ಯೋಗತಃ– ಪರಸ್ಪರ ಸಹಯೋಗದಿಂದಾಗಿ ಆಕಾಶವು ಸ್ಪರ್ಶತನ್ಮಾತ್ರೆಯನ್ನು ಹುಟ್ಟಿಸಿತು. ೨೨೬

೩.೬.೧೬ 'ಕಾಲಮಾಯಾಂಶಲಿಂಗಿನಃ' ಕಾಲ–ಕಾಲಾಭಿಮಾನಿಯಾದ ಬ್ರಹ್ಮನ ಒಂದು ರೂಪ. ಮಾಯಾ–ಚೇತನ ಪ್ರಕೃತಿ ಮಹಾಲಕ್ಷ್ಮಿ. ಅಂಶ–ಜೀವಾಭಿಮಾನಿಯಾದ ಬ್ರಹ್ಮನ ಇನ್ನೊಂದು ರೂಪ. ಇವರು ಮೂವರು ಸೇರಿ ತತ್ವಾಭಿಮಾನಿಗಳ ಶರೀರ ನಿರ್ಮಿಸಿಕೊಟ್ಟರು. ಕಾಲಾಭಿಮಾನಿ ಜೀವಾಭಿಮಾನಿ ಎಂದು ಬ್ರಹ್ಮನ ಎರಡು ರೂಪಗಳೆಂದು ಪದ್ಮಪುರಾಣ ಹೇಳಿದೆ. ೨೨೭

೩.೬.೧೮ 'ಅಂಘ್ರಿಚ್ಛಾಯಾಂಶವಿದ್ಯಾಂ' ಈ ಮಾತಿಗೆ ಬ್ರಹ್ಮಪುರಾಣಾನುಸಾರ ಹೀಗೆ ಅರ್ಥ– ಅಂಘ್ರಿ–ಹರಿಯಲ್ಲಿರುವ ಅವನ ಸ್ವರೂಪಭೂತವಾದ ತನ್ನ ಬಗೆಗಿನ ಜ್ಞಾನ. ಅದರ ಛಾಯಾ– ಸಾಕ್ಷಾತ್ ಪ್ರತಿಬಿಂಬ ಭೂತವಾದ

ಲಕ್ಷ್ಮಿಯಲ್ಲಿರುವ ಬ್ರಹ್ಮವಿದ್ಯೆ. ಅದರ ಕೆಲವೇ ಅಂಶಗಳು ಬ್ರಹ್ಮಾದಿದೇವತೆಗಳಲ್ಲಿ ಋಷಿಗಳಲ್ಲಿರುತ್ತವೆ. ಹರಿಯ ಮಹಿಮೆಯನ್ನು ಪೂರ್ತಿ ತಿಳಿದವನು ಹರಿಯೊಬ್ಬನೆ. ಮಹಾಲಕ್ಷ್ಮಿ ತಿಳಿದುದು ಅತ್ಯಲ್ಪ. ಅದಕ್ಕಿಂತಲೂ ಬಹಳ ಅತ್ಯಲ್ಪವಾಗಿ ದೇವತೆಗಳು ತಿಳಿದಿದ್ದಾರೆ ಎಂದರ್ಥ. ೨೨೯

೩.೬.೧೯ 'ದ್ಯುಸರಿದ್ಧರಾಯಾಃ' ದ್ಯುಸರಿತ್– ಗಂಗೆಗೂ, ಧರಾಯಾಃ– ಪೃಥಿವಿಗೂ ಹರಿಯ ಪಾದಕಮಲ ಆಶ್ರಯ. ೨೩೨

೩.೬.೨೫ 'ಪ್ರಕೃತಿಂ ಜಿತ್ವಾ' ಎಂದು ಪ್ರಕೃತಿಜಯವನ್ನೂ 'ಯೋಗಬಲೇನ' ಎಂದು ವಾಯುಜಯವನ್ನೂ ಹೇಳಿದೆ. ಆದರೆ ಪ್ರಕೃತಿ ಎಂದರೆ ಬಂಧಕಪ್ರಕೃತಿಯ ಅಭಿಮಾನಿನಿ ದುರ್ಗೆ. ವಾಯು ಎಂದರೆ ಮುಖ್ಯಪ್ರಾಣ. ಇವರನ್ನು ಜಯಿಸುವುದು ಕೇವಲ ಭಕ್ತಿಯಿಂದ ಮಾತ್ರ ಸಾಧ್ಯವೆಂದು ದತ್ತಾತ್ರೇಯಯೋಗದಲ್ಲಿದೆ. ೨೩೩

೩.೬.೨೬ 'ತ್ರಿಭಿರಾತ್ಮಭಿಃ' ಎಂದರೆ ತ್ರಿಗುಣಗಳಿಂದ ಎಂದರ್ಥವಲ್ಲ. ಕಾಲ ಮಾಯಾ ಅಂಶ ಎಂಬ ಮೂವರು ಆತ್ಮಭಿಃ ಚೇತನರಿಂದ ಎಂದರ್ಥ. ೨೩೪

೩.೬.೩೦ 'ಸತ್ವಮುಖಾಃ' ಎಂದರೆ ಮಹದಾದಿಗಳಲ್ಲ. ಅವುಗಳ ಅಭಿಮಾನಿಗಳು. ೨೩೬

೩.೭.೧ 'ಸ್ವಶಕ್ತೀನಾಂ' ಎಂಬಲ್ಲಿ ಶಕ್ತಿ ಎಂದರೆ ವಿಷ್ಣುವಿನ ವಶದಲ್ಲಿರುವುದರಿಂದ ಶಕ್ತಿ ಎನಿಸಿದ ಮಹದಾದಿಗಳು. ಮುಂದಿನ ಶ್ಲೋಕದಲ್ಲಿ 'ಬಿಭ್ರಚ್ಛಕ್ತಿಂ' ಎಂದು ಹೇಳಿದ ಶಕ್ತಿ ವಿಷ್ಣುವಿನ ಅಧೀನಳಾದ ರಮಾದೇವಿ. ಇದು ಬ್ರಹ್ಮತರ್ಕದಿಂದ ತಿಳಿದು ಬರುತ್ತದೆ.

'ಅಸತೀನಾಂ ಸಮೇತ್ಯ ಸಃ' ಎಂದೇ ಪಾಠ. 'ಸತೀನಾಮಸಮೇತ್ಯ' ಎಂದಲ್ಲ. 'ಸಮೇತ್ಯ ಅಸತೀನಾಂ' ಎಂದು ಅನ್ವಯ. 'ಪ್ರಸುಪ್ತಲೋಕತಂತ್ರಾಣಾಂ' ಎಂದರೆ ಮಹದಾದ್ಯಭಿಮಾನಿಗಳಿಗೆ ಲೋಕಸೃಷ್ಟಿ ಮಾಡುವ ಶಕ್ತಿ ಸುಪ್ತವಾಗಿತ್ತೆಂದರ್ಥ. 'ತಂತ್ರ'ಶಬ್ದಕ್ಕೆ ಸಾಧನಗಳಲ್ಲಿರುವ ಶಕ್ತಿ ಎಂದು ಅರ್ಥ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ೨೩೮

೩.೭.೨ ಪಂಚತನ್ಮಾತ್ರೆಗಳು ಪಂಚಭೂತಗಳು ಮನಸ್ಸು ದಶೇಂದ್ರಿಯಗಳು ಅಹಂಕಾರ ಮಹತ್ತತ್ವ ಎಂದು ಒಟ್ಟು ತತ್ವಗಳು ಇಪ್ಪತ್ತಮೂರು. ತತ್ವಾಭಿಮಾನಿ ಚೇತನರಿಗೂ ತತ್ವಶಬ್ದದಿಂದಲೇ ವ್ಯವಹಾರವಿರುವುದರಿಂದ ಅವರನ್ನು

ಪ್ರತ್ಯೇಕ ಪರಿಗಣಿಸಿಲ್ಲ. ಚೇತನಾಚೇತನ ಪ್ರಕೃತಿ ಇಪ್ಪತ್ತನಾಲ್ಕನೆ ತತ್ವ. ಭಗವಂತ ಇಪ್ಪತ್ತೈದನೆ ತತ್ವ. ಅಭಿಮಾನಿಗಳ ವರ್ಗ ಬೇರೆ ಎನ್ನುವ ವಿವಕ್ಷೆಯಲ್ಲಿ ಅದು ಇಪ್ಪತ್ತೈದನೆಯ ತತ್ವ. ಭಗವಂತ ಇಪ್ಪತ್ತಾರನೆಯ ತತ್ವ. ಪ್ರಕೃತ್ಯಭಿಮಾನಿನಿ ರಮೆಯನ್ನು ಬೇರೆ ಇಟ್ಟುಕೊಂಡರೆ ಅವಳು ಇಪ್ಪತ್ತಾರನೆ ತತ್ವ. ಭಗವಂತ ಇಪ್ಪತ್ತೇಳನೆ ತತ್ವ. ಹೀಗೆ ತತ್ವನಿರ್ಣಯಗ್ರಂಥದಲ್ಲಿ ಹೇಳಿದೆ.ಕಾಲಾಭಿಮಾನಿನಿಯಾದ್ದರಿಂದ ಶಕ್ತಿ ಎನಿಸುವ ದೇವಿ ರಮೆಯೇ ಕಾಲಸಂಜ್ಞಾ ದೇವೀಶಕ್ತಿ. ೨೩೯

೩.೭.೩ 'ಚೇಷ್ಟಾರೂಪೇಣ' ಎಂದರೆ ಸುಪ್ತವಾದ ಜ್ಞಾನೇಚ್ಛಾಪ್ರಯತ್ನರೂಪವಾದ ಜೀವರ ಚೇಷ್ಟೆಯನ್ನು ಉದ್ಬೋಧಗೊಳಿಸುವ ಭಗವದ್ರೂಪದಿಂದ ಎಂದರ್ಥ. ೨೪೨

೩.೭.೪ 'ಮಾತ್ರಾಭಿರಧಿ ಪೂರುಷಂ' ಎಂಬಲ್ಲಿ ಮಾತ್ರೆಗಳೆಂದರೆ ತತ್ವಗಳ ಅಂಶಗಳು. ಅದರಿಂದ ಹಿಂದಿನ ಶ್ಲೋಕದಲ್ಲಿ 'ಭಿನ್ನಂ ಸಂಯೋಜಯಾಮಾಸ' ಎಂದು ಹೇಳಿದ ತತ್ವಸಂಯೋಜನ ವಸ್ತುತಃ ಅವುಗಳ ಅಂಶಗಳ ಸಂಯೋಜನವೆಂದು ತಿಳಿಯುತ್ತದೆ. ೨೪೨

೩.೭.೭ 'ದೈವಕರ್ಮಾತ್ಮಶಕ್ತಿಮಾನ್' ಎಂಬಲ್ಲಿ ದೈವಶಕ್ತಿ ಎಂದರೆ ಬ್ರಹ್ಮನ ವಿರಾಡ್ದೇಹದ ಹೃದಯದಲ್ಲಿ ನಿಯಾಮಕವಾದ ಭಗವದ್ರೂಪ. ಅದು ದೇವತೆಗಳಿಗೂ ಅಂದರೆ ಸಕಲ ಚೇತನ ಅಚೇತನಗಳಿಗೂ ನಿಯಾಮಕವಾದ್ದರಿಂದ ದೈವಶಕ್ತಿ ಎನಿಸಿದೆ. ಕರ್ಮಶಕ್ತಿ ಎಂದರೆ ಭಗವಂತನ ಕ್ರಿಯಾಶಕ್ತಿ. ಆತ್ಮಶಕ್ತಿ ಎಂದರೆ ಅವನ ಭಾರ್ಯೆಯಾದ ಚೇತನಪ್ರಕೃತಿ. ೨೪೩

೩.೭.೮ 'ಪುರುಷೇಣಾತ್ಮಭೂತೇನ' ಎಂದು ಹಿಂದೆ(೩.೬.೪) ಹೇಳಿದ, ಮಹದಾದಿತತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಷ್ಟಿ ಮಾಡಿದ ವಾಸುದೇವ ಮೊದಲನೆಯ ಪುರುಷಾವತಾರ. ಬ್ರಹ್ಮಾಂಡದ ಗರ್ಭೋದಕದಲ್ಲಿ ಮಲಗಿದ ಸಂಕರ್ಷಣಮೂರ್ತಿ ಎರಡನೆ ಪುರುಷಾವತಾರ. 'ಏಷ ಆದ್ಯೋಽವತಾರಃ' ಎಂಬಲ್ಲಿ 'ಏಷಃ' ಎಂದರೆ ಈ ಗರ್ಭೋದಕಶಾಯಿಯೇ ಮೊದಲನೇ ಪುರುಷಾವತಾರ ಎಂದರ್ಥವಲ್ಲ, ಎರಡೂ ರೂಪಗಳಿಗೆ ಭೇದವಿಲ್ಲ ಎಂದಿಷ್ಟೇ ಅರ್ಥ. ೨೪೩

೩.೭.೯ ಅಧ್ಯಾತ್ಮವೆಂದರೆ ಇಂದ್ರಿಯಾಭಿಮಾನಿದೇವತೆಗಳು. ಅಧಿದೈವವೆಂದರೆ ಅವರ ಬೇರೆ ರೂಪಗಳು ಸ್ವರ್ಗಾದಿಲೋಕ ನಿಯಾಮಕಗಳು. ಅಧಿಭೂತವೆಂದರೆ ಅವರ ಇನ್ನೂ ಬೇರೆ ರೂಪಗಳು ಪಂಚಭೂತ ನಿಯಾಮಕಗಳು ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ೨೪೬

೩.೭.೧೬ 'ಪ್ರಾಣಾಂಶೇನ' ಎಂಬಲ್ಲಿ ಹೇಳಿದ 'ಪ್ರಾಣ'ನೆಂದರೆ ತ್ವಗಿಂದ್ರಿಯಾಭಿಮಾನಿ. ಅವನು ಪ್ರಧಾನ ವಾಯುವಿನ ಪುತ್ರನೆಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ. ೨೪೮

೩.೭.೨೪ ಅಹಂ ಸತ್ವ ಆತ್ಮ ಎಂದು ನಾಡಿಗಳ ಹೆಸರುಗಳು. ಅಹಂ ನಾಡಿಯಲ್ಲಿ ಅಹಂಕಾರ. ಸತ್ವನಾಡಿಯಲ್ಲಿ ಚಿತ್ತ. ಆತ್ಮನಾಡಿಯಲ್ಲಿ ಬುದ್ಧಿ. ಇವು ಮೂರೂ ಮನಸ್ಸಿನ ಪ್ರಭೇದಗಳು. ಇವುಗಳಿಗೆ ಕ್ರಮವಾಗಿ ರುದ್ರ ಬ್ರಹ್ಮ ಬೃಹಸ್ಪತಿಗಳು ಅಭಿಮಾನಿಗಳು ಎಂದು ತತ್ವನಿರ್ಣಯದಲ್ಲಿ ಹೇಳಿದೆ. ೨೫೦

೩.೭.೩೦ ಮುಖದಿಂದ ಬ್ರಾಹ್ಮಣ ಹುಟ್ಟಿದನೆಂದರೆ ಯಾವ ಬ್ರಾಹ್ಮಣ? ಎಲ್ಲ ಬ್ರಾಹ್ಮಣರೂ ಒಮ್ಮೆಲೆ ಹುಟ್ಟಿದರೆ? ಮತ್ತು ಪುರುಷಸೂಕ್ತ ಹೇಳುವಂತೆ ಭಗವಂತನ ಮುಖದಿಂದ ಬ್ರಾಹ್ಮಣ ಹುಟ್ಟಿಯಾಗಿದೆ. ಇದಕ್ಕೆ ಸಮಾಧಾನ– ಭಗವಂತನ ಮುಖದಿಂದೊಮ್ಮೆ, ಬ್ರಹ್ಮನ ಮುಖದಿಂದ ಇನ್ನೊಮ್ಮೆ ಬ್ರಾಹ್ಮಣಜಾತಿಯ ಅಭಿಮಾನಿ ಭೃಗುಮುನಿ ಹುಟ್ಟಿದ್ದಾನೆ. ಹೀಗೆ ಕ್ಷತ್ರಿಯಾದಿ ವರ್ಣಾಭಿಮಾನಿಗಳೂ ಹುಟ್ಟಿದ್ದಾರೆ. ಇವರಿಗೆ ವಾಯುದೇವ ರುದ್ರದೇವರಿಂದಲೂ ಪುನಃ ಉತ್ಪತ್ತಿಗಳಿವೆ. ಬೇರೆ ಬೇರೆ ರೂಪಗಳಿಂದ ದೇವತೆಗಳು ಅನೇಕ ಬಾರಿ ಹುಟ್ಟುತ್ತಾರೆ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಹೇಳಿದೆ. ೨೫೧

೩.೭.೩೫ 'ದೈವಕರ್ಮಾತ್ಮರೂಪಿಣಃ' ಎಂಬಲ್ಲಿ ಎಲ್ಲ ದೇವರುಗಳಿಗಿಂತ ಶ್ರೇಷ್ಠ ಸರ್ವೋತ್ತಮನಾದ್ದರಿಂದ ಹರಿ 'ದೈವ' ಎನಿಸುತ್ತಾನೆ. ಮೂಲಕರ್ತನಾದ್ದರಿಂದ ಅವನೇ 'ಕರ್ಮ' ಸರ್ವವ್ಯಾಪ್ತನಾದ್ದರಿಂದ 'ಆತ್ಮ'. ೨೫೩

೩.೭.೩೯ 'ಆತ್ಮವರ್ತ್ಮಾತ್ಮಾ ನ ವೇದ' 'ಭಗವಂತನನ್ನು ಭಗವಂತನೇ ತಿಳಿದಿಲ್ಲ' ಎನ್ನಬಹುದೆ? ಎಂದರೆ, ಇಲ್ಲಿ 'ಆತ್ಮವರ್ತ್ಮ' ಎಂದರೆ ಭಗವಂತನನ್ನು ತಿಳಿದು ಉಪದೇಶಿಸುವ 'ಆತ್ಮ' ಗುಣಪೂರ್ಣನಾದ ಚತುರ್ಮುಖ. ಅವನು ಭಗವಂತನನ್ನು ಪೂರ್ತಿ ತಿಳಿದಿಲ್ಲ ಎಂದರ್ಥ. ಮುಂದಿನ ಶ್ಲೋಕದಲ್ಲಿ 'ಅಹಂ' ಎಂದರೆ ನಾನಲ್ಲ. ಅದು ಮಕಾರಾಂತ ಅವ್ಯಯ. ರುದ್ರ ಎಂದರ್ಥ. ಆತ್ಮ ಅಹಂ ಶಬ್ದಗಳು ಬ್ರಹ್ಮರುದ್ರವಾಚಕಗಳೆಂದು ಬ್ರಹ್ಮಪುರಾಣ ಹೇಳಿದೆ. 'ಮಾಯೆ' ಎಂದರೆ ಗುಣಪೂರ್ಣತ್ವ ಎಂದು ಪದ್ಮಪುರಾಣ ಹೇಳಿದೆ. ೨೫೪

೩.೮.೩ 'ಕ್ರೀಡಾಯಾಮುದ್ಯಮೋಽರ್ಭಸ್ಯ' ಎಂಬ ಪಾಠ ಸರಿಯಲ್ಲ. 'ಕ್ರೀಡಾಯಾಮುದ್ ಯತೋಽರ್ಹಸ್ಯ' ಕ್ರೀಡೆಯಿಂದ ಸಂತೋಷ ಅದಕ್ಕೆ ಯೋಗ್ಯನಾದ ಅಂದರೆ ಅಪೂರ್ಣಸುಖಿಯಾದ ವ್ಯಕ್ತಿಗೆ ಮಾತ್ರ ಸಾಧ್ಯ ಎಂದರ್ಥ. ೨೫೮

೩.೮.೬ ದುಃಖಿಜೀವರ ಶರೀರದಲ್ಲಿರುವುದರಿಂದ ಭಗವಂತನಿಗೆ ದುಃಖವಿದೆ ಎನ್ನಬೇಕೆ? ಶ್ರುತಿವಿರುದ್ಧವಾದ್ದರಿಂದ ಇಲ್ಲ ಎನ್ನಬೇಕೆ? ಎಂಬುದು ವಿದುರನ ಸಂದೇಹ. ೨೫೯

೩.೮.೯ ಮೈತ್ರೇಯರ ಉತ್ತರ– ದುಃಖಿಜೀವರ ಶರೀರದಲ್ಲಿದ್ದರೂ ಭಗವಂತನಿಗೆ ದುಃಖವಿಲ್ಲ. ದುಃಖವಿಲ್ಲದಿರುವುದು ಅವನ ಮಾಯೆ, ಎಂದರೆ ಮಹಿಮೆ. ಶ್ರುತಿ ವಿರೋಧವಿರುವುದರಿಂದ ದುಃಖ ಕೂಡುವುದಿಲ್ಲ ಎನ್ನುವುದೇ ಯುಕ್ತ. ೨೬೦

೩.೮.೧೦ ಭಾಗವತದಲ್ಲಿ ಇಷ್ಟರವರೆಗೆ ವಿದುರನೇನು ಪ್ರಶ್ನೆ ಮಾಡಿದ್ದಾನೆ, ಅದಕ್ಕೆ ಮೈತ್ರೇಯರೇನು ಉತ್ತರ ಕೊಟ್ಟಿದ್ದಾರೆ ಎನ್ನುವುದು ಭಾಲ್ಲವೇಯ ಶ್ರುತಿಯಲ್ಲಿ ಸ್ಪಷ್ಟವಿದೆ. ಭಗವಂತನ ಸಾಕ್ಷಾತ್ಕಾರ ಸಂಸಾರ ಬಂಧನಕ್ಕೆ ವಿರೋಧಿ. ಅದು ಭಗವಂತನಿಗೆ ಸದಾ ಇರುವುದರಿಂದ ಅವನಿಗೆ ಎಂದೂ ಸಂಸಾರ ಬಂಧನವಿಲ್ಲ, ಜೀವರಲ್ಲಿ ಅದು ಇಲ್ಲದಿರುವುದರಿಂದ ಬಂಧವಿದೆ ಎಂದು ಬ್ರಹ್ಮಾಂಡಪುರಾಣದಲ್ಲಿದೆ. 262

೩.೮.೧೩ 'ಇಂದ್ರಿಯೋಪರಾಮ' ಎಂದರೆ ಎಲ್ಲ ಇಂದ್ರಿಯಗಳು ಭಗವಂತನಲ್ಲಿ ಏಕಾಗ್ರತೆಯಿಂದ ನೆಲೆಸುವುದು ಎಂದರ್ಥವಲ್ಲ. ಅದು ಎಂದಿಗೂ ಶಕ್ಯವಿಲ್ಲ. ಜೀವಾತ್ಮನಿಗೆ ಪ್ರಾಕೃತ ಇಂದ್ರಿಯಗಳಿಂದ ಬಿಡುಗಡೆ, ಅಂದರೆ, ಮೋಕ್ಷ ಎಂದರ್ಥ. ೨೬೬

೩.೮.೧೫ 'ಉಭಯತ್ರಾಪಿ ಮನೋ ಮೇ ಸಂಪ್ರಧಾವತಿ' ಎರಡೂ ಕಡೆ ಮನಸ್ಸು ಹೊಯ್ದಾಡುತ್ತದೆ. ಸಂಶಯಗ್ರಸ್ತವಾಗುತ್ತಿದೆ. ಎಂದು ಸ್ವರಸವಾಗಿ ಕಾಣುವ ಅರ್ಥವೇ ಇಲ್ಲಿ ಗ್ರಾಹ್ಯ. ಭಗವಂತನಿಗೆ ಅವತಾರಗಳಲ್ಲಿ ಜಡದೇಹ ಕಾಣುತ್ತದೆ. ಅದಕ್ಕೆ ಇನ್ನೊಬ್ಬರು ಕಾರಣ ಎನ್ನಬೇಕು ಆದರೆ ಅವನು ಮೂಲಕಾರಣನಾದ್ದರಿಂದ ಅವನ ಶರೀರಕ್ಕೆ ಇನ್ನೊಬ್ಬರು ಕಾರಣವಿರಲೂ ಶಕ್ಯವಿಲ್ಲ ಹೀಗೆ ಮನಸ್ಸು ದೋಲಾಯಮಾನವಾಗಿದೆ ಎಂದರ್ಥ. ೨೬೭

೩.೮.೧೮ ಅವತಾರಗಳಲ್ಲಿ ಭಗವಂತನಿಗೆ ಜಡಶರೀರ ಪ್ರತ್ಯಕ್ಷ ಕಾಣುವುದರಿಂದ ಅದು ಇಲ್ಲ ಎಂಬ ವಿಷಯದಲ್ಲಿ ನಾನು ಸಂಶಯಗ್ರಸ್ತನಾಗಿದ್ದೇನೆ. ಆದರೂ 'ಸೇಯಂ ಭಗವತೋ ಮಾಯಾ' ಎಂಬ ನಿಮ್ಮ ಉಪದೇಶದ ಬಲದಿಂದ, 'ಹರಿಗೆ ಜಡಶರೀರವಿಲ್ಲವೆನ್ನುವ ಆಗಮದ ಮುಂದೆ, ಇದೆ ಎನ್ನುವ ಪ್ರತ್ಯಕ್ಷ ದುರ್ಬಲ, ಸಂದೇಹಕಾರಣವಾಗುವುದಿಲ್ಲ' ಎಂದು ನಿರ್ಧರಿಸುತ್ತೇನೆ ಎನ್ನುತ್ತಾನೆ ವಿದುರ. ೨೬೯

೩.೧೦.೧ 'ಅಶುದ್ಧಂ' ಜೀವರಿಗೆ ಪರಮಾತ್ಮ ಏಕೆ ಗೋಚರಿಸುವುದಿಲ್ಲ ಎಂದರೆ ಅವರು 'ಅಶುದ್ಧ'ರು ರಾಗದ್ವೇಷಾದಿ ಮಲಯುಕ್ತರು. 'ಉರುರ್ವಿಭಾಸಿ' ಸ್ಥಾನಭೇದಪ್ರಯುಕ್ತವಾಗಿ ಪರಮಾತ್ಮ ಬೇರೆಬೇರೆಯಾಗಿ ಕಾಣುತ್ತಾನೆ ಹೊರತು ವಸ್ತುತಃ ಬೇರೆಯಲ್ಲ. ೨೮೬

೩.೧೦.೨ 'ನಾತಃ ಪರಂ' ಬ್ರಹ್ಮನಿಗೆ ಜನಕನಾಗಿ ಆಶ್ರಯನಾಗಿ ಅವನ ಕಣ್ಣಿಗೆ ಗೋಚರನಾಗಿ ನಿಂತ ಈ ಹರಿಗಿಂತ ಬೇರೆ ಇನ್ನೊಂದು ಪರವಸ್ತುವೆಂಬುದಿಲ್ಲ. 'ಭೂತೇಂದ್ರಿಯಾತ್ಮಕ' ಎಂದರೆ ಪಂಚಭೂತಗಳಿಗೂ ಇಂದ್ರಿಯಗಳಿಗೂ ಅಧಿಪತಿ. ೨೮೭

೩.೧೦.೫ 'ಚರಣಾಂಬುಜಗೋಶಗಂಧ' ಎಂದರೆ ಜಲಶಾಯಿಯಾದ್ದರಿಂದ ಹರಿಯೆ ಚರಣಾಂಬುಜಕೋಶ. ಅವನ ಗುಣ ಶ್ರವಣಮಾಡಿದಾಗ ಹೃದಯದಲ್ಲಿ ವ್ಯಕ್ತವಾಗುವ ಅವನ ರೂಪವೆ ಅವನ ಗಂಧ ಎನಿಸುತ್ತದೆ ಎಂದು ಬ್ರಹ್ಮತರ್ಕ ಹೇಳಿದೆ. ೨೯೦

೩.೧೦.೯ ಜೀವರಿಗೆ ವಿಷಯಪದಾರ್ಥಗಳೆಲ್ಲ ಮಾಯೆಯಿಂದ ಲಭಿಸುತ್ತದೆ ಎಂದರೆ ಭಗವಂತನ ಇಚ್ಛಾಬಲದಿಂದ ಲಭಿಸುತ್ತದೆ ಎಂದರ್ಥ. 'ಮಾಯೆ' ಎಂದರೆ ಭಗವಂತನ ಇಚ್ಛೆ, ಲಕ್ಷ್ಮಿ, ಜಡಪ್ರಕೃತಿ ಅಥವಾ ಬಂಧಕ ಪ್ರಕೃತಿಗಳೆಂದು ಸಂದರ್ಭಾನುಸಾರ ತಿಳಿಯಬೇಕು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೨೯೩

೩.೧೦.೧೦ 'ಅಧ್ಯಾಹೃತಾರ್ಥಕರಣಾಃ' ಅರ್ಥಗಳಿಂದ ಅಧ್ಯಾಹೃತವಾದ ಕರಣ ಉಳ್ಳವರು, ಅಂದರೆ ವಿಷಯಪದಾರ್ಥಗಳ ಸೆಳೆತಕ್ಕೆ ಇಂದ್ರಿಯಗಳನ್ನು ಬಿಟ್ಟವರು. 'ನಿಶಿ ನಿಶ್ಶಯಾನಾಃ' ಅಜ್ಞಾನದಲ್ಲಿ ಪೂರ್ತಿ ಮುಳುಗಿದವರು. ೨೯೬

೩.೧೦.೧೧ 'ತತ್ತದ್ ವಪುಃ' ಎಂದರೆ ಭಕ್ತರು ಕಲ್ಪಿಸಿಕೊಂಡದ್ದೆ ಭಗವಂತನ ಆಕಾರವಾಗುವುದೆಂದರ್ಥವಲ್ಲ. ಭಕ್ತರು ತಮಗೆ ಯೋಗ್ಯವಾದ ವಾಸ್ತವವಾದ ಯಾವ ಭಗವದ್ರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವರೋ ಆ ರೂಪದ ಸಾರೂಪ್ಯ ಅವರಿಗೆ ಲಭ್ಯವಾಗುವುದೆಂದರ್ಥ. ೨೯೮

೩.೧೦.೧೨ 'ನಾತಿಪ್ರಸೀದಸಿ' ಎಂದರೆ 'ಬೇರೆ ಭಕ್ತರಿಗೆ ಒಲಿವಷ್ಟು ದೇವತೆಗಳಿಗೆ ಹರಿ ಒಲಿಯುವುದಿಲ್ಲ, ಅವರು ಸ್ವಾರ್ಥಿಗಳು ಪದವಿಗಳನ್ನು ಆಶಿಸುವವರು' ಎಂದರ್ಥವಲ್ಲ. ಪದವಿಗಳನ್ನು ಆಶಿಸುವುದು ಅವರಿಗೆ ಕರ್ತವ್ಯಧರ್ಮ. ಆದರಿಂದ 'ದೇವತೆಗಳಿಗೆ ಒಲಿವಷ್ಟು ಕಾಮ್ಯಕರ್ಮಿಗಳಿಗೆ ಒಲಿಯುವುದಿಲ್ಲ' ಎಂದರ್ಥ. ಸತ್ಯಸಂಹಿತೆಯಲ್ಲಿ ಹಾಗೇ ಹೇಳಿದೆ. ೩೦೦

ಮಾಡೆನ್ನುತ್ತಾನೆ. 'ತನ್ಮಯಾ ಚೋದಿತಂ' 'ನೀನು ನನ್ನಲ್ಲಿ ಜ್ಞಾನವನ್ನು ಬೇಡಿದ್ದೂ ನನ್ನ ಪ್ರೇರಣೆಯಿಂದ' ಎನ್ನುತ್ತಾನೆ. ೩೧೨

೩.೧೦.೩೦ ತಪಸ್ಸೆಂದರೆ ಧ್ಯಾನ, ವಿದ್ಯೆ ಎಂದರೆ ನಿಷ್ಠೆ ಎನ್ನುತ್ತದೆ ಕಪಿಲಸಂಹಿತೆ. ೩೧೨

೩.೧೦.೩೧ ಹರಿ ಅಚಿಂತ್ಯಶಕ್ತಿಯಿಂದ ಅಣುವೂ ಹೌದು, ಮಹತ್ತೂ ಹೌದು. ಅದರಿಂದ ಹೃದಯದಲ್ಲಿ ಅಂಗುಷ್ಠಪರಿಮಾಣದಿಂದಿರುವ ಹರಿಯಲ್ಲಿಯೆ ಎಲ್ಲ ಲೋಕಗಳಿದ್ದು ಹೃದಯದಲ್ಲಿಯೇ ಅವು ಕಾಣಬಹುದು. ೩೧೩

೩.೧೦.೩೩ ಜೀವ ದೇಹಾಭಿಮಾನ ತೊರೆದು ಹೃದಯದಲ್ಲಿ ತನ್ನನ್ನು ಬಿಂಬನ ಪದತಲದಲ್ಲಿ ಪ್ರತ್ಯಕ್ಷ ಕಂಡರೆ ಮುಕ್ತಿ ಎಂದು ದತ್ತಾತ್ರೇಯ ಯೋಗದಲ್ಲಿ ಹೇಳಿದೆ. ೩೧೪

೩.೧೦.೩೯ ಶ್ರೀಹರಿ 'ಗುಣಮಯ' ಅಂದರೆ ಅಪ್ರಾಕೃತ ಸ್ವರೂಪಭೂತ ಗುಣಗಳಿಂದ ಪೂರ್ಣ. 'ನಿರ್ಗುಣ' ಅಂದರೆ ತ್ರಿಗುಣರಹಿತ ಎಂದು ವ್ಯೋಮಸಂಹಿತೆ ಹೇಳಿದೆ. 'ಲೋಕಾನಾಂ ವಿಜಯೇಚ್ಛಯಾ' ಲೋಕಾಧಿಪತ್ಯವನ್ನು ಬಯಸಿ ಬ್ರಹ್ಮ ಭಗವಂತನನ್ನು ಸ್ತೋತ್ರ ಮಾಡಿದ್ದು ಕಾಮ್ಯಕರ್ಮವೆನಿಸುವುದಿಲ್ಲ. ಪದವಿಗಳಲ್ಲಿ ನಿಯುಕ್ತರಾಗುವ ದೇವತೆಗಳು ಆ ಪದವಿಗಳನ್ನು ಬಯಸುವುದು ಸ್ವಾರ್ಥವಲ್ಲ, ಹರಿಗೆ ಪ್ರೀತಿಕರವೆ. ೩೧೭

೩.೧೦.೪೧ 'ರಾದ್ಧಂ ನಿಃಶ್ರೇಯಸಂ' ಎಂದು ಪಾಠವಲ್ಲ. 'ರಾಜ್ಯಂ ನಿಃಶ್ರೇಯಸಂ' ಮೋಕ್ಷದಲ್ಲಿಯೂ ಬಯಸಬೇಕಾದುದು ಹರಿಪ್ರೀತಿಯೆ. ಮುಕ್ತನಿಗೂ ತನ್ನ ಹಿಂದಿನ ಕರ್ಮಗಳಿಗೆ ಪ್ರತಿಫಲವಾಗಿ ಹರಿಪ್ರೀತಿಯೇ ಇಷ್ಟವಾಗಿರುತ್ತದೆ ಎಂದು ವಾಮನಪುರಾಣ ಹೇಳಿದೆ. ೩೧೯

೩.೧೦.೪೨ 'ದೇಹಾದಿರ್ಯತ್ಕೃತೇ ಪ್ರಿಯಃ' ಎಂದರೆ ಭಗವಂತನನ್ನು ಪ್ರೀತಿಯಿಂದ ಸೇವಿಸುವುದಕ್ಕಾಗಿ ಭಕ್ತ ಪ್ರಾಕೃತ ದೇಹವಿರಲಿ ಎನ್ನುತ್ತಾನೆ, ಮುಕ್ತಿ ಬೇಡ ಎನ್ನುತ್ತಾನೆ ಎಂದರ್ಥವಲ್ಲ. ದೇಹ ತನಗಾಗಿ ಪ್ರಿಯವೆನಿಸುವಂತೆ ತಾನು ತನಗಾಗಿ ಪ್ರಿಯನೆನಿಸುವುದೂ ತನ್ನಲ್ಲಿ ಹರಿ ಇರುವುದರಿಂದ. ಅದರಿಂದ ತನಗೆ ತನಗಿಂತಲೂ ತನ್ನಲ್ಲಿರುವ ಹರಿ ಪ್ರಿಯನೆನಿಸಬೇಕು ಎಂದು ಬ್ರಹ್ಮವೈವರ್ತಪುರಾಣ ಹೇಳಿದೆ. ೩೨೧

೩.೧೧.೪ 'ಆತ್ಮನ್ಯಾತ್ಮಾನಮಾವೇಶ್ಯ' ಆತ್ಮನಲ್ಲಿ ಆತ್ಮನನ್ನು ಇರಿಸುವುದೆಂದರೆ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವುದು. ೩೨೩

೩.೧೧.೯ ಅನಿಮಿತ್ತ ಧರ್ಮವೆಂದರೆ 'ಅ'ಎಂದು ಭಗವಂತನ ಹೆಸರು. ಭಗವಂತನ ನಿಮಿತ್ತವಾಗಿ ಅವನಿಗೆ ಪ್ರೀತಿಯಾಗಲೆಂದು ಮಾಡಿದ ಪುಣ್ಯಕರ್ಮ. ೩೨೪

೩.೧೧.೧೦ ಬಹುರೂಪನಾದ ಭಗವಂತನ ಕಾಲವೆಂಬ 'ಲಕ್ಷಣ' ಎಂದರೆ ಕಾಲ ಎಂಬ ಒಂದು ರೂಪ. ಲಕ್ಷಣವೆಂದರೆ ರೂಪವೆಂದು ಅಭಿಧಾನಗ್ರಂಥ ಹೇಳುತ್ತಿದೆ. ೩೨೫

೩.೧೧.೧೧ 'ಗುಣವ್ಯತಿಕರಾಕಾರಃ' ಎಂದರೆ ಸೃಷ್ಟಿ ಮಾಡಲು ಆಲೋಚಿಸುವವನು. 'ತದುಪಾದಾನ' ಎಂದರೆ ಸೃಷ್ಟ್ಯಾದಿಗಳನ್ನು ಉದ್ದೇಶಿಸುವವನು. ಆ ಉದ್ದೇಶದಿಂದ ಹರಿಯು ಬ್ರಹ್ಮ ವಿಷ್ಣು ಮಹೇಶ್ವರರೂಪಗಳನ್ನು ಸ್ವೀಕರಿಸುತ್ತಾನೆ. ೩೨೬

೩.೧೧.೧೨ ಬ್ರಹ್ಮಾಂತರ್ಯಾಮಿ ಬ್ರಹ್ಮರೂಪ ಸೃಷ್ಟಿಕರ್ತೃ, ಈಶ್ವರಾಂತರ್ಗತ ಈಶ್ವರರೂಪ ಲಯಕರ್ತೃ. ಈಶ್ವರರೂಪಕ್ಕೆ ಕಾಲ ಎಂದು ಇನ್ನೊಂದು ಹೆಸರು ಎಂದು ಸೌಕರಾಯಣಶ್ರುತಿ ಹೇಳುತ್ತದೆ. ೩೨೮

೩.೧೧.೧೩ ಜಗತ್ತನ್ನು ಮಿಥ್ಯೆ ಎಂದು ತಿಳಿದರೆ ಬಹಳ ಅನರ್ಥವೆಂದು ಸ್ಕಾಂದಪುರಾಣ ಹೇಳಿದೆ. ೩೩೧

೩.೧೧.೧೪ ತಾಮಸಪದಾರ್ಥಕ್ಕೆ ಸತ್ವಗುಣದಿಂದ ನಾಶ. ಸಾತ್ವಿಕ ಪದಾರ್ಥಕ್ಕೆ ತಮೋದಿಂದ ಗುಣ ನಾಶ. ಇದು ಗುಣನಿಮಿತ್ತಕ ಲಯ. 'ಬೆಳಕಿನಿಂದ ಕತ್ತಲು ನಾಶವಾಗುತ್ತದೆ. ಪಿತ್ತದಿಂದ ಕಫಪರಿಹಾರ. ಚೇತನಾಚೇತನಾತ್ಮಕ ಎಲ್ಲ ಪದಾರ್ಥಗಳೂ ನಿರ್ದಿಷ್ಟಕಾಲದಲ್ಲಿ ಮಾತ್ರವಿದ್ದು ಬಳಿಕ ನಾಶ ಹೊಂದುತ್ತದೆ. ಇದು ಕಾಲನಿಮಿತ್ತ ಲಯ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಸೃಷ್ಟಿಕಾಲದಲ್ಲಿ ಸತ್ವರಾಶಿ ಇತರಗುಣಗಳಿಂದ ಮಿಶ್ರವಾಗದೆ ಶುದ್ಧವಾಗಿರುತ್ತದೆ. ರಜೋರಾಶಿ ಮತ್ತು ತಮೋರಾಶಿಗಳಲ್ಲಿ ಮೂರೂ ಗುಣಗಳು ಸೇರಿರುತ್ತವೆ. ಇದು ವೈಷಮ್ಯಾವಸ್ಥೆ. ಲಯಕಾಲದಲ್ಲಿ ಮಹತ್ತತ್ವದ ಹನ್ನೆರಡು ಭಾಗಗಳಲ್ಲಿ ಹತ್ತು ಭಾಗ ಸತ್ವರಾಶಿಗೂ, ಒಂದು ಭಾಗ ರಜೋರಾಶಿಗೂ, ಒಂದು ಭಾಗ ತಮೋರಾಶಿಗೂ ಹೋಗಿ ಸೇರಿದಾಗ ಮೂರು ರಾಶಿಗಳೂ ಮೂರು ಮೂರು ಗುಣಗಳಿಂದ ಮಿಶ್ರಿತವಾಗಿ ಸಮವೆನಿಸುವುದರಿಂದ ಇದು ಸಾಮ್ಯಾವಸ್ಥೆ. ರಜೋರಾಶಿಯ ಮೂರು ಭಾಗ, ತಮೋರಾಶಿಯ ಒಂದು ಭಾಗ ಹೀಗೆ ನಾಲ್ಕು ಭಾಗಗಳಿಂದ ಮಹತ್ತತ್ವಸೃಷ್ಟಿ. ಮಹತ್ತತ್ವದಲ್ಲಿ ಸೇರಿದ ತಮೋಭಾಗದಿಂದ ಅಹಂಕಾರಸೃಷ್ಟಿ. ೩೩೨

೩.೧೧.೧೬ ಅಹಂಕಾರ ತತ್ವದಲ್ಲಿರುವ ತಮೋಂಶವು ಸಾತ್ವಿಕ ರಾಜಸ ತಾಮಸವೆಂದು ಮೂರು ಬಗೆ. ತಾಮಸಾಂಶದಿಂದ ಪಂಚಭೂತಗಳು ಹುಟ್ಟುತ್ತವೆ. ರಾಜಸಾಂಶದಿಂದ ದಶೇಂದ್ರಿಯಗಳು. ಸಾತ್ವಿಕಾಂಶದಿಂದ ಮನಸ್ಸು ಮತ್ತು ದೇವತಾಶರೀರಗಳು. ಇಂದ್ರಾದಿದೇವತೆಗಳು ದೇಹಾಭಿಮಾನಪ್ರಯುಕ್ತ ವಿಕಾರ ಉಳ್ಳವರಾದ್ದರಿಂದ ವೈಕಾರಿಕರು. ಅವರು ಇಂದ್ರಿಯಾಭಿಮಾನಿಗಳಾಗಿ ಜನಿಸಿದಾಗ ಇನ್ನೂ ಹೆಚ್ಚಿನ ವಿಕಾರವಿದ್ದರೂ ಜ್ಞಾನಾದಿ ಗುಣವಿರುವುದರಿಂದ ತೈಜಸರೆನಿಸುತ್ತಾರೆ. ಅವರು ಭೂತಾಭಿಮಾನಿಗಳಾಗಿ ಹುಟ್ಟಿದಾಗ ಜ್ಞಾನಾದಿ ಗುಣವೂ ಕಡಿಮೆಯಾಗುವುದರಿಂದ ತಾಮಸರೆನಿಸುತ್ತಾರೆ. ೩೩೬

೩.೧೧.೧೭ ಪಂಚಭೂತಗಳಲ್ಲಿ ಸಾವಿರ ಭಾಗ ಸತ್ವಗುಣವಿರುತ್ತದೆ. ನೂರು ಭಾಗ ರಜಸ್ಸು. ಒಂದು ಭಾಗ ತಮಸ್ಸು. ಆದರಿಂದ ಆದರ ಅಭಿಮಾನಿಗಳು ತಾಮಸರೆನಿಸಿದರೂ ಸರ್ವಜ್ಞರೇ. ಆ ಒಂದು ಭಾಗ ತಮಸ್ಸಿನಿಂದ ಪಂಚಪರ್ವಅವಿದ್ಯಾಸೃಷ್ಟಿ. ಹೀಗೆ ಮಹತ್ತತ್ವ, ಅಹಂಕಾರತತ್ವ, ಪಂಚ ಭೂತಗಳು, ಇಂದ್ರಿಯಗಳು, ಇಂದ್ರಿಯಾಭಿಮಾನಿಗಳು, ಅವಿದ್ಯೆ ಎಂದು ಆರು ಪ್ರಾಕೃತ ಸೃಷ್ಟಿಗಳು. ಅಂದರೆ ಬ್ರಹ್ಮಾಂಡದ ಹೊರಗೆ ನಡೆದ ಸೃಷ್ಟಿಗಳು. ೩೩೮

೩.೧೧.೧೮ ನವವಿಧಸೃಷ್ಟಿಗಳಲ್ಲಿ ಏಳನೆಯದು ಸ್ಥಾವರಜೀವರ ಸೃಷ್ಟಿ. ಇದು ವೈಕೃತಸೃಷ್ಟಿ. ಬ್ರಹ್ಮಾಂಡದೊಳಗೆ ನಡೆಯುತ್ತದೆ. ಸ್ಥಾವರಜೀವರು ಉತ್‌ಸ್ರೋತಸರು. ಪರೋಪಕಾರ ಪುಣ್ಯ ಮಾಡಿ ಉತ್ತಮ ಗತಿ ಹೊಂದುವವರು. ತ್ರಿರ್ಯಕ್ ಪ್ರಾಣಿಗಳು ಪುಣ್ಯಪಾಪಗಳೆರಡನ್ನೂ ಮಾಡದೆ ಭೂಮಿಯಲ್ಲಿಯೆ ತಿರುಗಿ ಹುಡುಟ್ಟುವುದರಿಂದ ತಿರ್ಯಕ್ ಸ್ರೋತಸರು. ಮಾನವರು ಪ್ರಾಯಃ ಪಾಪಮಾಡಿ ನರಕಕ್ಕೆ ಬೀಳುವುದರಿಂದ ಅರ್ವಾಕ್ ಸ್ರೋತಸರು. ದೇವತೆಗಳು ಪುಣ್ಯವನ್ನೇ ಮಾಡಿ ಅತ್ಯುತ್ತಮಗತಿಯನ್ನೇ ಹೊಂದುವುದರಿಂದ ಊರ್ಧ್ವಸ್ರೋತಸರು. ೩೪೩

೩.೧೧.೨೦ ತಿರ್ಯಕ್ ಪ್ರಾಣಿ ಸೃಷ್ಟಿ ನವವಿಧಸೃಷ್ಟಿಯಲ್ಲಿ ಎಂಟನೆಯದು. ಈ ತಿರ್ಯಕ್ ಪ್ರಾಣಿಗಳಲ್ಲಿ ಯಜ್ಞೋಪಯೋಗಿಗಳು ಇಪ್ಪತ್ತೆಂಟು ಬಗೆ. ೩೪೬

೩.೧೧.೨೫ ಅರ್ವಾಕ್ ಸ್ರೋತಸರ ಸೃಷ್ಟಿ ನವವಿಧಸೃಷ್ಟಿಯಲ್ಲಿ ಕೊನೆಯದು.ಈ ಅರ್ವಾಕ್ ಸ್ರೋತಸರಲ್ಲಿ ರಜೋಗುಣದವರದು ಒಂದು ಬಗೆ, ತಮೋಗುಣದವರದು ಒಂದು ಬಗೆ. ರಜೋಗುಣದಿಂದ ಹುಟ್ಟಿದವರು

ಯಾವಾಗಲೂ ಕಾಮ್ಯಕರ್ಮರತರು. ತಮೋಗುಣದಿಂದ ಹುಟ್ಟಿದವರು ದುಷ್ಕರ್ಮರತರು, ದುಃಖಸಾಧನವನ್ನೇ ಸುಖಸಾಧನವೆಂದು ಭ್ರಮಿಸುವವರು, ಅಸುರರು ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ೩೪೯

೩.೧೧.೨೬ 'ಕು–ಮಾ–ಅ' ಭೂಮಿಯಲ್ಲಿ ಸೃಷ್ಟಿ ಹೊಂದುವ ದೇವತೆಗಳು ಕುಮಾರರು. ಅವರ ಸೃಷ್ಟಿ ಕೌಮಾರಸೃಷ್ಟಿ. ಆದರಿಂದ ಇದು ಪ್ರಾಕೃತ ವೈಕೃತ ಉಭಯಾತ್ಮಕ ಸೃಷ್ಟಿ. ಬ್ರಹ್ಮಾಂಡದ ಹೊರಗೂ ಒಳಗೂ ಸೃಷ್ಟಿ. ಹೊರಗೆ ಹಿಂದೆ ಸೃಷ್ಟರಾದವರೇ ಈಗ ಒಳಗೆ ಸೃಷ್ಟಿ ಹೊಂದುತ್ತಾರೆ. ೩೫೧

೩.೧೧.೨೭ ಕೌಮಾರ ಸೃಷ್ಟಿಯಲ್ಲಿ ಹುಟ್ಟುವ ದೇವತೆಗಳು ಎಂಟು ಬಗೆ. ಎಲ್ಲ ದೇವತೆಗಳು, ನೂರು ಪಿತೃಗಳು, ಮೂವತ್ತು ಅಸುರರು, ನೂರು ಗಂಧರ್ವರೊಂದಿಗೆ ನೂರು ಅಪ್ಸರೆಯರೆಂದು ಇನ್ನೂರು ಮಂದಿ, ಎಪ್ಪತ್ತು ಯಕ್ಷರಾಕ್ಷಸರು, ಮೂವತ್ತು ಚಾರಣರು, ನೂರು ಸಿದ್ಧರು. ಎಪ್ಪತ್ತು ಭೂತಪ್ರೇತಪಿಶಾಚಾದಿಗಳು. ಇವರೆಲ್ಲ ಸಾತ್ವಿಕರೆ. ಉತ್ತಮಗತಿ ಹೊಂದುವ ಊರ್ಧ್ವಸ್ರೋತಸರೆ. ಬೇರೆ ಅಸುರರಾಕ್ಷಸ ಮುಂತಾದವರು ತಾಮಸರು. ೩೫೪

೩.೧೧.೨೮ 'ಗುಣಾಪ್ಲುತಃ ಆತ್ಮೈವಾತ್ಮಾನಮಾತ್ಮನಾ' ಎಂದರೆ ಪರಮಾತ್ಮ ಗುಣಬದ್ಧನಾಗಿ ಪ್ರಪಂಚಕ್ಕೆ ತಾನೇ ಉಪಾದಾನ, ತಾನೆ ಕರ್ತನೆನಿಸುತ್ತಾನೆ ಎಂದರ್ಥವಲ್ಲ. ಗುಣಪ್ರೇರಕನಾಗಿದ್ದು ಪ್ರಪಂಚಕ್ಕೆ ಕೇವಲ ಕರ್ತನಾಗಿದ್ದಾನೆ. ಪ್ರಪಂಚಾಂತರ್ಗತ ಬಹುರೂಪಗಳನ್ನು ತಾನೇ ಸ್ವೀಕರಿಸುವಲ್ಲಿ ಮಾತ್ರ ಕರ್ತೃ ಕರ್ಮ ಕರಣ ಮೂರೂ ತಾನೇ ಆಗುತ್ತಾನೆ ಎಂದು ನಾರದಪುರಾಣ ಅಗ್ನಿಪುರಾಣಗಳಲ್ಲಿ ಹೇಳಿದೆ. ೩೫೭

೩.೧೨.೧ ಪರಮಾಣುವಿಗೆ ಎರಡುಲಕ್ಷಣಗಳು– ಸ್ವರ್ಗವನ್ನು ಹೊಂದಿದ ಮನುಷ್ಯರ ಸೂಕ್ಷ್ಮದೃಷ್ಟಿಗೂ ನಿರಂಶವಾಗಿ ಕಾಣುವ ವಸ್ತು ಪರಮಾಣು ಎಂದು ಒಂದು ಲಕ್ಷಣ. ಕಣಾದಿಮನುಷ್ಯರು ಭ್ರಾಂತಿಯಿಂದ ನಿರಂಶವೆಂದು ಒಪ್ಪಿದ ವಸ್ತು ಪರಮಾಣುವೆಂದು ಇನ್ನೊಂದು ಲಕ್ಷಣ. ಆ ವಸ್ತುವು ವಸ್ತುತಃ ಪರಮಾಣು ವಲ್ಲದಿದ್ದರೂ ಹಾಗೆ ವ್ಯವಹಾರವನ್ನು ಮುನಿಗಳು ಅಂಗೀಕರಿಸಿದ್ದಾರೆ ಎಂದು ತತ್ವವಿವೇಕದಲ್ಲಿ ಹೇಳಿದೆ. ೩೫೯

೩.೧೨.೨ ಬ್ರಹ್ಮಾಂಡದಾಚೆಗೂ ಸರ್ವತ್ರ ವ್ಯಾಪಿಸಿರುವ ಶೂನ್ಯನಾಮಕವಾದ ನಾರಾಯಣನ ಮೂಲರೂಪ ಪರಮಮಹದ್ ದ್ರವ್ಯವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೬೩

೩.೧೨.೪ ಸ್ವರ್ಗದಲ್ಲಿರುವ ಮಾನವನು ನಿರಂಶವಾಗಿ ಕಾಣುವ ಕಾಲಾಂಶವೇ ಪರಮಾಣುಕಾಲ. ಇನ್ನೊಂದು ಕಾಲಕ್ಕೆ ಅಂಶರೂಪವಾಗದ ಅಪರಿಮಿತವಾದ ಕಾಲಪ್ರವಾಹವೇ ಪರಮಮಹತ್ಕಾಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಈ ಪರಮಾಣುಕಾಲ ಪರಮಮಹತ್ಕಾಲಗಳಲ್ಲಿ ನಿಯಾಮಕವಾಗಿರುವ ಭಗವದ್ರೂಪಗಳಿಗೇ ಮುಖ್ಯವಾಗಿ ಪರಮಾಣು ಪರಮಮಹತ್ಕಾಲಗಳೆಂದು ಹೆಸರು ಎಂದು ಬ್ರಹ್ಮವೈವರ್ತಪುರಾಣದಲ್ಲಿ ಹೇಳಿದೆ. ೩೬೮

೩.೧೨.೫ 'ಜಾಲಾರ್ಕರಶ್ಮ್ಯವಗತಃ ಅಗಾತ್' ಎಂದರೆ ಕಿಟಕಿಯ ಬಿಸಿಲು ಕೋಲಲ್ಲಿ ದೃಷ್ಟಿಯೋಗ್ಯತೆಯನ್ನು ಹೊಂದಿ 'ಅಗಾತ್' ಕಣ್ಣಿಗೆ ಕಾಣುತ್ತದೆ ಎಂದರ್ಥ. ಆದರಿಂದ 'ಅವಗತಃ ಅಗಾತ್' ಎಂದರೆ ಪುನರುಕ್ತಿ ಇಲ್ಲ. ೩೭೩

೩.೧೨.೮. ಆರು ಗಳಿಗೆಗಳು ಒಂದು ಪ್ರಹರ. ಯಾಮ ಮಾತ್ರ ಸಂಕ್ರಮಣ ವ್ಯತ್ಯಾಸದಿಂದ ವ್ಯತ್ಯಾಸವಾಗುತ್ತದೆ. ಅದರಲ್ಲಿ ಏಳು ಅಥವಾ ಅದಕ್ಕಿಂತ ಹೆಚ್ಚು ಗಳಿಗೆಗಳಿರುತ್ತದೆ, ಹೊರತು ಪ್ರಹರ ಯಾಮಗಳೆಂದರೆ ಒಂದೇ ಎಂದೊಪ್ಪಿ ಆರು ಅಥವಾ ಏಳು ಗಳಿಗೆಗಳು ಯಾಮ ಎಂದು ಹೇಳಬಾರದು. ೩೭೪

೩.೧೨.೯ ಒಂದು ಪ್ರಸ್ಥ ನೀರು ಹಿಡಿಯುವ ಆರು ಪಲ ಭಾರದ ತಾಮ್ರದ ಪಾತ್ರೆಯಲ್ಲಿ ನಾಲ್ಕು ಮಾಷ ತೂಕದ ನಾಲ್ಕು ಅಂಗುಲ ಉದ್ದದ ಬಂಗಾರದ ಕಡ್ಡಿ ತೂರುವಷ್ಟು ರಂಧ್ರ ಮಾಡಿದರೆ ಗಳಿಗೆ ಬಟ್ಟಲಾಗುವುದೆಂದು ಪದ್ಮಪುರಾಣ ಹೇಳಿದೆ. ೩೭೬

೩.೧೨.೧೦ 'ಅಹನೀ' ಎಂಬಲ್ಲಿ ದ್ವಿವಚನವಿದ್ದರೂ ಪುನಃ 'ಉಭೇ' ಎಂಬ ಶಬ್ದ ಬೇಕು. ಏಕೆಂದರೆ ಅಹಸ್ ಎಂಬ ಶಬ್ದಕ್ಕೆ ಹಗಲೆಂದೂ ರಾತ್ರಿ ಎಂದೂ ಎರಡು ಅರ್ಥಗಳಿವೆ. ಅದರಿಂದ ದ್ವಿವಚನದಿಂದ ಎರಡು ಹಗಲೆಂದೋ ಎರಡು ರಾತ್ರಿ ಎಂದೋ ಅರ್ಥವಾಗಬಹುದು. ಒಂದು ಹಗಲು ಒಂದು ರಾತ್ರಿ ಹೀಗೆ ಎರಡೆಂಬ ಅರ್ಥ ಸಿಗಬೇಕಾದರೆ 'ಉಭೇ' ಎಂಬ ಶಬ್ದ ಬೇಕು. ಎಂದು ಅಭಿಧಾನ ಎಂಬ ಗ್ರಂಥದಲ್ಲಿದೆ. ೩೭೮

೩.೧೨.೧೪ ಸೌರ ಬಾರ್ಹಸ್ಪತ್ಯ ನಾಕ್ಷತ್ರ ಚಾಂದ್ರ ಸಾವನ ಮಾನಗಳಿಂದಾಗುವ ಸಂವತ್ಸರ ಪರಿವತ್ಸರ ಇಡಾವತ್ಸರ ಅನುವತ್ಸರ ವತ್ಸರಗಳಲ್ಲಿ ನಿಯಾಮಕವಾದ ಭಗವದ್ರೂಪಗಳಿಗೇ ಸಂವತ್ಸರ ಮುಂತಾದ ಹೆಸರುಗಳು ಮುಖ್ಯ. ಇದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ೩೭೯

೩.೧೨.೧೫ 'ಭೂತಭೇದಃ' ಭೂತಗಳಲ್ಲಿ ಅಂದರೆ ಪ್ರಾಣಿಗಳಲ್ಲಿ ಮನುಷ್ಯರಲ್ಲಿ, ವಯಸ್ಸಿನಲ್ಲಿ ಹಿರಿಯರು ಕಿರಿಯರೆಂಬ ಭೇದವನ್ನು ವಿವೇಕವನ್ನು

ಮಾಡಿಕೊಡುವವನು ಕಾಲನಾಮಕ ಭಗವಂತನೆಂದು ತಂತ್ರಪ್ರಕಾಶಿಕಾ ಗ್ರಂಥದಲ್ಲಿ ಹೇಳಿದೆ. ೩೮೦

೩.೧೨.೨೩ 'ದಿನಂ ಭುಂಜನ್' ಎಂದು ಲಿಂಗ ವ್ಯತ್ಯಾಸಕ್ಕೆ ಕಾರಣವೇನೆಂದರೆ ಇಲ್ಲಿ ದಿನವೆಂದರೆ ದಿನದಲ್ಲಿರುವ ಭಗವಂತ ವಿವಕ್ಷಿತ. ಆದರಿಂದ ಭುಂಜನ್ ಎಂದು ಪುಲ್ಲಿಂಗ ಪ್ರಯೋಗ. ದಿನದಲ್ಲಿರುವ ಭಗವಂತ ಹದಿನಾಲ್ಕು ಮನ್ವಂತರಕಾಲವನ್ನು ಭೋಗಿಸುವವರೆಗೆ ಮೂಲೋಕಸೃಷ್ಟಿ ಇರುತ್ತದೆ. ೩೮೨

೩.೧೨.೨೪ 'ಸಾಧಿಕಾ ಏಕಸಪ್ತತಿಃ' ಎಪ್ಪತ್ತೊಂದು ಮಹಾಯುಗಗಳೊಂದಿಗೆ ಅಧಿಕವಾಗಿ ಸೇರಿಸಬೇಕಾದ ಕಾಲ ಎಷ್ಟು? ಮನ್ವಂತರ ಪ್ರಳಯ ಕಾಲವೆಷ್ಟು? ಎನ್ನುವುದನ್ನು ಮಹಾವರಾಹ ಪುರಾಣದಲ್ಲಿ ಹೇಳಿದೆ. ಅಧಿಕವಾಗಿ ಸೇರಿಸಬೇಕಾದ ಕಾಲ ಹದಿನೆಂಟುವರೆ ಲಕ್ಷವರ್ಷಗಳು. ಮನ್ವಂತರ ಪ್ರಳಯ ಕಾಲಗಳು ಎಲ್ಲ ಮನ್ವಂತರಗಳಲ್ಲಿ ಒಂದೇ ರೀತಿ ಇಲ್ಲ. ಮೊದಲನೆ ಮನ್ವಂತರ ಲಯಕಾಲ ಎರಡು ಸಾವಿರವರ್ಷಗಳು. ಎರಡನೆ ಮನುಲಯ ಒಂದು ಸಾವಿರದ್ದೈನೂರು ವರ್ಷ. ಮೂರನೇ ಮನುಲಯ ಒಂದು ಸಾವಿರದ ನಾನೂರು ವರ್ಷ. ಮುಂದಿನ ಮೂರು ಮನುಲಯಗಳು ಪ್ರತಿಯೊಂದೂ ಒಂದು ಸಾವಿರದ ಮುನ್ನೂರು ವರ್ಷಗಳು. ಇನ್ನುಳಿದ ಎಂಟು ಮನುಲಯಕಾಲಗಳು ಪ್ರತಿಯೊಂದೂ ಒಂದು ಸಾವಿರದ ನಾನೂರು ವರ್ಷಗಳು. ಒಟ್ಟು ಇಪ್ಪತ್ತು ಸಾವಿರ ವರ್ಷಗಳು. ೩೮೩

೩.೧೨.೨೭ 'ಕಾಲೇನಾನುಗತಃ ಶೇಷ ಆಸ್ತೇ' ಎಂದರೆ ಕಾಲಾಭಿಮಾನಿಯಾದ ಬ್ರಹ್ಮನೊಂದಿಗೆ ಹರಿಯು ಯೋಗನಿದ್ರೆ ಮಾಡುತ್ತಾನೆ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೩೮೬

೩.೧೨.೩೨ 'ಅಸ್ಯ ಪರಮಾಯುಃ' ಎಂದರೆ ಹಿಂದೆ 'ಬ್ರಹ್ಮಣೋ ದಿನಂ' ಎಂದು ಪ್ರಕೃತನಾದ ಬ್ರಹ್ಮನ ಪೂರ್ಣಾಯುಷ್ಯ ಎಂದರ್ಥ. ೩೮೬

೩.೧೨.೩೭ ಬ್ರಹ್ಮನ ಎರಡು ಪರಾರ್ಧದ ಪೂರ್ಣಾಯುಷ್ಯಕಾಲ ಹರಿಗೆ ನಿಮೇಷವೂ ಅಲ್ಲ. ಔಪಚಾರಿಕವಾಗಿ ನಿಮೇಷವೆನಿಸುತ್ತದೆ. ನಿತ್ಯನಾದ್ದರಿಂದ ಆತನಿಗೆ ಆಯುರ್ಮಾನವೆಂಬುದೇ ಇಲ್ಲವೆಂದು ಹರಿವಂಶದಲ್ಲಿದೆ. ೩೮೮

೩.೧೨.೩೮ ಕಾಲವೆಂದರೆ ಇಲ್ಲಿ ಕಾಲಾಭಿಮಾನಿನಿ ದುರ್ಗೆ. ಏಕೆಂದರೆ ಮನುಷ್ಯರಿಗೆ ಕಾಲನು ಯಮ. ಅವನಿಗೆ ಕಾಲ ಮನ್ಮಥ. ಮನ್ಮಥನಿಗೆ ರುದ್ರ, ರುದ್ರನಿಗೆ

ಬ್ರಹ್ಮ, ಬ್ರಹ್ಮನಿಗೆ ದುರ್ಗೆ, ಈ ದುರ್ಗೆಯೂ ಹರಿಯನ್ನು ಆಳಲು ಸಮರ್ಥಳಲ್ಲ ಇದು ಹರಿವಂಶದಲ್ಲಿದೆ. ೩೮೯

೩.೧೨.೪೦ ವಿಕಾರವೆಂದರೆ ಇಂದ್ರಿಯಗಳು ಮನಸ್ಸು ಮತ್ತು ಪಂಚಭೂತಗಳು. ವಿಶೇಷವೆಂದರೆ ಪೃಥಿವಿ. ಬ್ರಹ್ಮಾಂಡಕ್ಕೆ ಪೃಥಿವಿ ಮುಂತಾದ ಎಂಟು ಆವರಣಗಳಿವೆ. ಒಂದು ಕಲ್ಪದಲ್ಲಿ ಒಂದೇ ಬ್ರಹ್ಮಾಂಡ ಸೃಷ್ಟಿ ಮಾಡುತ್ತಾನೆ ಭಗವಂತ. ಅನಂತ ಕೋಟಿ ಬ್ರಹ್ಮಾಂಡಗಳೇನೂ ಸೃಷ್ಟಿಮಾಡುವುದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೯೦

೩.೧೨.೪೧ 'ವಿಷ್ಣೋರ್ಧಾಮ' ಎಂದರೆ ವಿಷ್ಣುಮಂದಿರ. ಬ್ರಹ್ಮಾಂಡರಾಶಿಗಳೆಲ್ಲವೂ ವಿಷ್ಣುಮಂದಿರಗಳು. ೩೯೩

೩.೧೩.೨ ತಮ ಮೋಹ ಮಹಾಮೋಹ ತಾಮಿಸ್ರಅಂಧತಾಮಿಸ್ರಗಳೆಂದರೆ ಅಜ್ಞಾನ ವಿಪರೀತಜ್ಞಾನ ವಿಪರೀತಜ್ಞಾನಾಗ್ರಹ ಕ್ರೋಧ ಮರಣದಂಥ ಸ್ಥಿತಿಗಳೆಂದು ಭಾರತ ಹರಿವಂಶಗಳಲ್ಲಿದೆ. ೩೯೫

೩.೧೩.೪ ರುದ್ರನಿಗಿಂತ ಮೊದಲು ಸನಕಾದಿಮುನಿಗಳ ಸೃಷ್ಟಿಯಾದುದು ತಾರತಮ್ಯಾನುಸಾರಿಯಲ್ಲ. ಇದು ಬ್ರಹ್ಮಸೃಷ್ಟಿ. ಹಿಂದೆ ಪರಮಾತ್ಮ ಮಾಡಿದ ಆದಿಸೃಷ್ಟಿ ತಾರತಮ್ಯಾನುಸಾರಿಯಾಗಿದೆ. ತಾರತಮ್ಯದ ವಿವರ ವಿಷ್ಣುಕೃತ ತತ್ವವಿವೇಕ ತತ್ವನಿರ್ಣಯಗಳಲ್ಲಿದೆ. ೩೯೭

೩.೧೩.೩೩ 'ತನ್ವೀಂ ತತ್ಯಾಜ' ಬ್ರಹ್ಮ ವಾಗ್ದೇವತೆಯನ್ನು ತ್ಯಾಗ ಮಾಡಿದನೆಂದರೆ ಮಾನವ ನಿರ್ಮಿತವಾಙ್ಮಯಕ್ಕೆ ಅಭಿಮಾನಿಯಾದ ಬೇರೆ ವಾಗ್ ದೇವತೆಯನ್ನು ತ್ಯಾಗಮಾಡಿದ ಹೊರತು ತನ್ನ ಪತ್ನಿಯಾದ ಸರಸ್ವತಿಯನ್ನಲ್ಲ. ೪೦೧

೩.೧೩.೩೪ ಅಪೌರುಷೇಯವಾದ ವೇದಗಳನ್ನೂ ಯಜ್ಞಾದಿಗಳನ್ನೂ ಬ್ರಹ್ಮ ಸೃಷ್ಟಿಸಿದನೆಂದರೆ ಅವುಗಳ ಅಭಿಮಾನಿಗಳನ್ನು ಸೃಷ್ಟಿಸಿದನೆಂದರ್ಥ. ೪೦೨

೩.೧೩.೪೨ ಪ್ರಾಜಾಪತ್ಯ ಬ್ರಹ್ಮಚರ್ಯವೆಂದರೆ ಒಬ್ಬಳೆ ಹೆಂಡತಿಯಲ್ಲಿ ಋತುಕಾಲದಲ್ಲಿ ಮಾತ್ರ ಸಂಗಮಾಡುವ ನಿಯಮ. ವಾರ್ತೆ ಎಂದರೆ ಯಾಯಾವರ. ಅಸಂಚಯ ಎಂದರೆ ಮರುದಿನಕ್ಕೆ ಇರಲಿ ಎಂದು ಕೂಡಿಡದಿರುವುದು ಎಂದು ವ್ಯಾಸಸ್ಮೃತಿಯಲ್ಲಿದೆ. ೪೦೫

೩.೧೩.೪೩ ಗಡ್ಡೆಗೆಣಸು ಮಾತ್ರ ತಿನ್ನುವವರು ವೈಖಾನಸರು. ಹಣ್ಣು ಹಂಪಲು ಮಾತ್ರ ತಿನ್ನುವವರು ಉದುಂಬರರು. ಇವೆರಡನ್ನು ಮಾತ್ರ ತಿನ್ನುವವರು

ವಾಲಖಿಲ್ಯರು. ಕರುವಿನ ಬಾಯಿಯ ಹಾಲಿನ ನೊರೆ ಮಾತ್ರ ಉಣ್ಣುವವರು ಫೇನಪರು. ೪೦೬

೩.೧೩.೪೪ ಆನ್ವೀಕ್ಷಿಕಿ ಎಂದರೆ ಬ್ರಹ್ಮತರ್ಕ ಬ್ರಹ್ಮಸೂತ್ರಗಳು. ದಂಡನೀತಿ ಎಂದರೆ ರಾಜಧರ್ಮ. ವೇದಗಳೇ ತ್ರಯೀ. ವಾಣಿಜ್ಯಾದಿಗಳೇ ವಾರ್ತೆ. ಪ್ರಣವವು ಬ್ರಹ್ಮನ ಪೂರ್ವಮುಖದಿಂದಲೂ ವ್ಯಾಹೃತಿಗಳು ಪ್ರದಕ್ಷಿಣಾಕಾರವಾಗಿ ಉಳಿದ ಮುಖಗಳಿಂದಲೂ ವ್ಯಕ್ತವಾದುವೆಂದು ಬ್ರಹ್ಮಪುರಾಣದಲ್ಲಿದೆ. ೪೦೭

೩.೧೩.೪೬ ಸ್ಪರ್ಶಾಕ್ಷರಗಳು ಬ್ರಹ್ಮನ ಚೈತನ್ಯದಿಂದ. ಸ್ವರಾಕ್ಷರಗಳು ದೇಹದಿಂದ, ಊಷ್ಮಾಕ್ಷರಗಳು ಇಂದ್ರಿಯಗಳಿಂದ, ಅಂತಸ್ಥಾಕ್ಷರಗಳು ಬಲದಿಂದ ವ್ಯಕ್ತವಾದುವು. ೪೦೯

೩.೧೩.೪೭ ನಾರಾಯಣಾದಿನಾಮ ಹೊರತು ಬೇರೆಲ್ಲ ಶಬ್ದಗಳಿಂದಲೂ ವಾಚ್ಯನಾಗುವುದರಿಂದ ಚತುರ್ಮುಖ ಬ್ರಹ್ಮ ಶಬ್ದಬ್ರಹ್ಮನೆನಿಸುತ್ತಾನೆ. ವ್ಯಕ್ತವಾದ ಬ್ರಹ್ಮಾಂಡದಲ್ಲಿಯೂ ಅವ್ಯಕ್ತವಾದ ಮಹದಾದಿಗಳಲ್ಲಿಯೂ ವ್ಯಾಪ್ತನಾದ್ದರಿಂದ ಅವನೇ ವ್ಯಕ್ತಾವ್ಯಕ್ತನೆನಿಸುತ್ತಾನೆ. ೪೧೦

೩.೧೩.೪೯ ಹಿಂದೆ ಹೇಳಿದ ಮರೀಚಿ ಮುಂತಾದ ಮುನಿಗಳ ಸೃಷ್ಟಿಯನ್ನು ಇಲ್ಲಿ ಪುನಃ ಹೇಳಿದ್ದು ಮುಂದೆ ಹೇಳಲಿರುವ ಸ್ವಾಯಂಭುವಮನುವಿನ ಸೃಷ್ಟಿಗೆ ಹೆಚ್ಚಿನ ಪ್ರಾಮುಖ್ಯತೆ ಎಂದು ತಿಳಿಸುವ ಉದ್ದೇಶದಿಂದ. ಇದು ಸಿಂಹಾವಲೋಕನವೆನಿಸುತ್ತದೆ. ಸಿಂಹಾವಲೋಕನ ಎಲ್ಲಿ ಮಾಡಬಹುದೆಂದು ಬ್ರಹ್ಮತರ್ಕ ಹೇಳಿದೆ. ೪೧೧

೩.೧೩.೫೧ ಬ್ರಹ್ಮ ತನ್ನ ಶರೀರವನ್ನು ಸರಸ್ವತೀ ಬ್ರಹ್ಮ ಶರೀರಗಳೆಂದು ಎರಡಾಗಿ ವಿಭಾಗಿಸಿದ. ಈಗ ಅವರೆಡೂ 'ಕಾಯ' ಎನಿಸಿದುವು. 'ಕ' ಎಂದರೆ ಬ್ರಹ್ಮ 'ಅಯ' ಪಡೆದವುಗಳು ಎಂದು. ೪೧೨

೩.೧೪.೮. ಕರ್ಮಸ್ವಿಜ್ಯಾತ್ಮಶಕ್ತಿಷು ಎಂದು ಪಾಠ. 'ಇಜ್ಯ' ಎಂದು ಪದವಿಭಾಗ. ಪೂಜ್ಯನೆ! ಎಂದು ಸಂಬೋಧನೆ ೪೧೪

೩.೧೪.೩೪ 'ಸ್ವಾಯಂಭುವಮನ್ವಂತರದಲ್ಲಿ ಲಯೋದಕದಲ್ಲಿ ಮುಳುಗಿದ ಭೂಮಿಯನ್ನು ವರಾಹ ಎತ್ತಿ ತರುತ್ತಿದ್ದಾಗ ಹಿರಣ್ಯಾಕ್ಷ ಅಡ್ಡಿ ಮಾಡಿದ. ಅವನನ್ನು ದಾಡೆಯಿಂದ ಇರಿದು ಕೊಂದ ವರಾಹ. ಮುಂದೆ ಚಾಕ್ಷುಷ ಮನ್ವಂತರದಲ್ಲಿ ದಿತಿಪುತ್ರ ಹಿರಣ್ಯಾಕ್ಷ ಭೂಮಿಯನ್ನು ಸಮುದ್ರದಲ್ಲಿ

ಮುಳುಗಿಸಿದಾಗ ವರಾಹ ಅವನನ್ನು ಕೆನ್ನೆಗೆ ಹೊಡೆದು ಕೊಂದ. ಹೀಗೆ ಎರಡು ಕಥೆಗಳು ಬೇರೆ ಬೇರೆ ಇವೆ ಎಂದು ಬ್ರಹ್ಮಾಂಡಪುರಾಣ ಹೇಳಿದೆ. ಅಜ್ಞರ ಮೋಹನಕ್ಕಾಗಿ ಎರಡು ಕಥೆಗಳನ್ನು ಒಂದು ಮಾಡಿ ಅಥವಾ ವ್ಯತ್ಯಾಸ ಮಾಡಿ ಹೇಳುವುದುಂಟೆಂದು ಸ್ಕಾಂದಪುರಾಣ ಹೇಳಿದೆ. ಅದರಿಂದ ಭಾಗವತದಲ್ಲಿ ವಿದುರ ಆದಿಹಿರಣ್ಯಾಕ್ಷನ ಕಥೆಯನ್ನು ಕೇಳಿ ತಿರುಗಿ ಆದಿಹಿರಣ್ಯಾಕ್ಷನ ಕಥೆ ಹೇಳಿರೆಂದು ಮೈತ್ರೇಯರನ್ನು ಕೇಳಿರುತ್ತಾನೆ ಅವರು ದಿತಿಪುತ್ರ ಹಿರಣ್ಯಾಕ್ಷನ ಕಥೆ ಹೇಳುತ್ತಾರೆ. ಇದು ಅಸಂಗತವಾದರೂ ದೋಷವೇನಿಲ್ಲ. ೪೧೬

೩.೧೫.೨೮ ಗರ್ಭಿಣೀವಧ ಪ್ರಾಯಶ್ಚಿತ್ತರೂಪವಾಗಿ ವಿಷ್ಣುವಿನಾಜ್ಞೆಯಂತೆ ರುದ್ರ ಪಿಶಾಚಚರ್ಯೆ ಮಾಡುತ್ತಿದ್ದಾನೆ. ಭೃತ್ಯ ಪಾಪಮಾಡಿದಾಗ ಪ್ರಭು ಅವನಿಗೆ ಪ್ರಾಯಶ್ಚಿತ್ತ ವಿಧಿಸುವುದು ಲೋಕದಲ್ಲಿ ನಿಯಮ. ಅದನ್ನು ವಿಷ್ಣು ಅನುಕರಿಸಿದ್ದಾನೆ ಎಂದು ವರಾಹ ಪುರಾಣದಲ್ಲಿದೆ. ೪೨೦

೩.೧೫.೫೦ ವಿಷ್ಣುವಿನ ಕೈಯಿಂದ ಮಡಿದರೆ ಸದ್ಗತಿ ಭಕ್ತನಿಗೆ ಮಾತ್ರ ಎಂದು ಸ್ಕಂದಪುರಾಣ ಹೇಳಿದೆ. ಹಿರಣ್ಯಕಶಿಪು ನರಸಿಂಹನಿಂದ ಹತನಾದರೂ ಅಷ್ಟರಿಂದಲೆ ಅವನಿಗೆ ಸದ್ಗತಿಯಾಗಲಿಲ್ಲ. ಪ್ರಹ್ಲಾದನ ಪ್ರಭಾವದಿಂದಾಯಿತು ಹೀಗೆ ಮಕ್ಕಳಿಂದ ಸದ್ಗತಿ ದೊರಕುವುದೂ ಸ್ವಾಭಾವಿಕ ಭಕ್ತರಿಗೆ ಮಾತ್ರ ಎಂದು ಬ್ರಹ್ಮತರ್ಕ ಹೇಳಿದೆ. ೪೨೩

೩.೧೬.೧೪ 'ಯೇ ನಿತ್ಯಮನಿಮಿತ್ತೇನ' ಎಂದು ಪಾಠ. ಅನಿಮಿತ್ತೇನ ಎಂಬಲ್ಲಿ ಅ ಎಂದು ಭಗವಂತನ ಹೆಸರು. ಭಗವಂತನ ನಿಮಿತ್ತವಾಗಿ ಅಂದರೆ ಅವನಿಗೆ ಪ್ರೀತಿಯಾಗಲೆಂದು ಮಾಡಿದ ಪುಣ್ಯಕರ್ಮವೆ 'ಅನಿಮಿತ್ತ' ೪೨೫

೩.೧೬.೧೭ ವೈಕುಂಠದಲ್ಲಿ ಜನರು ಹೂವಿನ ಸುಗಂಧ ಹೊತ್ತ ವಾಯುವನ್ನು ಸೇವಿಸಿದಾಗ ಸುಖದಲ್ಲಿ ಮೈಮರೆತರೂ ಕ್ಷಣದಲ್ಲಿ ಎಚ್ಚೆತ್ತು ತಿರುಗಿ ನಾಮಸಂಕೀರ್ತನೆ ಮಾಡುವರು ಎಂದು ಭಾಗವತ ವರ್ಣಿಸುತ್ತದೆ. ಇದು ವೈಕುಂಠದಲ್ಲಿ ವಾಸಮಾಡುವ ಜೀವನ್ಮುಕ್ತರ ಬಗ್ಗೆ ಹೇಳಿದ್ದು ಹೊರತು ಮುಕ್ತರ ಬಗ್ಗೆ ಅಲ್ಲ. ಮುಕ್ತರಿಗೆ ವಿಷಯಾಕರ್ಷಣೆ ಸರ್ವಥಾ ಇಲ್ಲವೆಂದು ಮುಂದೆ ೨೦ನೇ ಶ್ಲೋಕದಲ್ಲಿ ಸ್ಪಷ್ಟ ಇದೆ. ವೈಕುಂಠದಲ್ಲಿ ಮುಕ್ತರೂ ಅಮುಕ್ತರೂ ಜೊತೆಗೆ ಇರುತ್ತಾರೆ ಎಂದು ಭವಿಷ್ಯತ್ಪುರಾಣದಲ್ಲಿದೆ. ೪೨೬

೩.೧೬.೧೮ ವೈಕುಂಠದಲ್ಲಿ ವೃಕ್ಷಗಳಿವೆ ಪಕ್ಷಿಗಳಿವೆ ಎಂದ ಮಾತ್ರಕ್ಕೆ ಅಜ್ಞರಿಗೂ ವೈಕುಂಠ ಪ್ರಾಪ್ತಿ ಇದೆ ಎಂದು ತಿಳಿಯಬಾರದು. ಈ ವೃಕ್ಷಜೀವರೂ

ಪಕ್ಷಿಜೀವರೂ ಅಪರೋಕ್ಷಜ್ಞಾನಿಗಳೇ. ಪ್ರಾರಬ್ಧ ಕ್ಷಯವಾದಾಗ ಅವರೂ ಮುಕ್ತಿ ಹೊಂದುತ್ತಾರೆ ಎಂದು ಭವಿಷ್ಯತ್ಪುರಾಣದಲ್ಲಿದೆ. ೪೨೮

೩.೧೬.೧೯ ಭಗವಂತ ತುಳಸಿಯ ಗಂಧವನ್ನು ಅರ್ಚಿಸಿದ್ದಲ್ಲ. ಭಕ್ತರು ಭಗವಂತನನ್ನು ಅರ್ಚಿಸಿದರು. ಅವರು ಬೇರೆ ಹೂಗಳಿಂದಲೂ ತುಳಸಿಯಿಂದಲೂ ಅರ್ಚಿಸಿದಾಗ ಹರಿ ತುಳಸಿ ಮಾಲೆಯನ್ನು ಎತ್ತಿಕೊಂಡ. ಹೀಗೆ ಹರಿಪ್ರಿಯವಾದ ಗಂಧವನ್ನು ಸಂಪಾದಿಸಲು ತುಳಸಿ ಎಷ್ಟು ತಪಸ್ಸು ಮಾಡಿದಳೊ! ಎಂದು ಬೇರೆ ಹೂಗಳು ಅಭಿನಂದಿಸಿದುವು. ೪೩೦

೩.೧೬.೨೩ 'ರಚನಾನುವಾದಾತ್' ಎಂದು ಪಾಠವಲ್ಲ. ಆ ಪಾಠದಲ್ಲಿ 'ರಚನಾನುವಾದಾದನ್ಯವಿಷಯಾಃ' ಹರಿಯನ್ನಲ್ಲದೆ ಅನ್ಯರ ಚರಿತ್ರವನ್ನು ಕೇಳುವ ತಾಮಸರು ಮಾತ್ರ ವೈಕುಂಠಪ್ರಾಪ್ತಿಗೆ ಅಯೋಗ್ಯರೆಂದಾಗುವುದು. 'ಅರಚನಾನುವಾದಾಃ' ಎಂದೇ ಪಾಠ. ಹರಿಚರಿತ್ರೆ ಕೇಳದಿರುವ ರಾಜಸರೂ ಕೂಡ ಅಯೋಗ್ಯರು. ೪೩೧

೩.೧೬.೨೪ 'ನೋ ನೃಗತಿಂ ಪ್ರಪನ್ನಾಃ' ಎಂದರೆ ನಃ ನಮಗೆ ದೇವತೆಗಳಿಗೆ ನೃಗತಿ ನರಜನ್ಮ ಅಭ್ಯರ್ಥಿತವಾಗಿದೆ ಇಷ್ಟವಾಗಿದೆ ಎಂದರ್ಥವಲ್ಲ. 'ನೋ' ಎಂಬುದು ನಕಾರ. ನರಜನ್ಮ ಹೊಂದಿಯೂ ಹರಿಯನ್ನು ಭಜಿಸದವರು ನರಜನ್ಮ ಹೊಂದಿದಂತಾಗಲೆ ಇಲ್ಲ. ಅವರು ನರರಲ್ಲ ಅಸುರರೇ ಸರಿ ಎಂದರ್ಥ. ೪೩೨

೩.೧೬.೨೮ 'ವಕ್ತ್ರಂ ಭ್ರುವಾ' (ಜಯವಿಜಯರು ಹುಬ್ಬುಗಂಟಿಕ್ಕಿದ ಮುಖವನ್ನು ಧರಿಸಿದರು) ಎಂಬ ಪಾಠ ಸರಿಯಲ್ಲ. ವಕ್ತ್ರಭ್ರುವಾ (ಮುಖದಲ್ಲಿರುವ ಗಂಟಿಕ್ಕಿದ ಹುಬ್ಬಿನಿಂದಲೂ ಅದರೊಂದಿಗೆ ಹೊರಟ ಕೆಂಗಣ್ಣ ನೋಟದಿಂದಲೂ ಕೋಪವನ್ನು ಧರಿಸಿದರು.) ಎನ್ನುವ ಪಾಠ ಯುಕ್ತ. ೪೩೩

೩.೧೬.೩೦ ಭಕ್ತರಾದ ಜಯವಿಜಯರು ಭಗವತ್ಪ್ರತಿಕೂಲಶೀಲರು, ಭಗವಂತನಿಗೆ ವಿರೋಧ ಮಾಡುವ ಸ್ವಭಾವದವರು ಎನ್ನಬಹುದೆ? ನಾರದಪುರಾಣ ಹೇಳುತ್ತದೆ– ಅದು ಸ್ವಭಾವವಲ್ಲ, ಸ್ವಭಾವದಂತೆ ದೀರ್ಘಕಾಲವಿದ್ದಿತು. ವರಾಹಾವತಾರದಿಂದ ತೊಡಗಿ ಕೃಷ್ಣಾವತಾರಪರ್ಯಂತವೂ ದೀರ್ಘಕಾಲ ವಿರೋಧ ಪ್ರವೃತ್ತಿ ಬ್ರಹ್ಮಶಾಪಪ್ರಯುಕ್ತ ಅವರಲ್ಲಿತ್ತು ಎಂದು. ೪೩೪

೩.೧೬.೩೨ 'ಕುಹಕಯೋಃ' ಎಂಬ ಮಾತಿನಲ್ಲಿ ಜಯವಿಜಯರನ್ನು ಕಪಟಿಗಳೆಂದು ಸನಕಾದಿಗಳು ಆಕ್ಷೇಪಿಸುತ್ತಿಲ್ಲ. ಅಜ್ಞಾನಿಗಳು, ಮಿಥ್ಯಾಜ್ಞಾನಿಗಳು, ಭಕ್ತರನ್ನು

ತಡೆಯುವ ಮೂಲಕ ಭಗವಂತನಿಗೆ ವಿರೋಧಮಾಡುತ್ತಿದ್ದೇವೆ ಎನ್ನುವುದನ್ನು ಅರಿಯದೆ, ಸನಕಾದಿಗಳಿಂದ ಭಗವಂತನಿಗೆ ಅಪಾಯ ಬರಬಹುದೆಂದು ಮಿಥ್ಯಾಜ್ಞಾನ ಹೊಂದಿದ್ದಾರೆ ಎಂದು. ೪೩೬

೩.೧೬.೩೩ 'ಉದರಭೇದಿ ಭಯ' ದೇಹೋಪಾಧಿಬೇಧ ಪ್ರಯುಕ್ತ ಜೀವೇಶ್ವರ ಭೇದ ಭ್ರಮದಿಂದ ಭಯ ಎಂದು ಮುನಿಗಳ ಅಭಿಪ್ರಾಯವಲ್ಲ. ದೇಹ ರೂಪಸ್ಥಾನಭೇದ ಪ್ರಯುಕ್ತ ಅಂತರ್ಯಾಮಿಗಳಲ್ಲಿ ಭೇದ ಭ್ರಮದಿಂದ ಭಯ, ಮುನಿಗಳ ಅಂತರ್ಯಾಮಿಯಿಂದ ವೈಕುಂಠ ಮೂರ್ತಿಗೆ ಅಪಾಯ ಬರಬಹುದು ಎಂದು ಭಯ ಹೀಗೆ ಭಗವಂತನಿಗೆ ಭಗವಂತನಿಂದಲೆ ಅಪಾಯವನ್ನು ಶಂಕಿಸುವವನಿಗೆ ಇಹಪರಗಳೆ ರೆಡರಲ್ಲಿಯೂ ಅಪಾಯ ತಪ್ಪಿದ್ದಲ್ಲ ಎಂದು ತತ್ವವಿವೇಕದಲ್ಲಿದೆ. ೪೩೮

೩.೧೬.೩೪ 'ತ್ರಯ ಇಮೇ ರಿಪವಃ' ಎಂದರೆ ಕಾಮಕ್ರೋಧಲೋಭ ಎಂದು ಮೂವರು ಜೀವಾತ್ಮರ ಶತ್ರುಗಳು ಎಂದರ್ಥವಲ್ಲ. ಹಿರಣ್ಯಕಶಿಪು ರಾವಣ ಶಿಶುಪಾಲರೆಂದೂ ಹಿರಣ್ಯಾಕ್ಷ ಕುಂಭಕರ್ಣ ದಂತವಕ್ರರೆಂದೂ ಮೂವರು ಪರಮಾತ್ಮನ ಶತ್ರುಗಳೆಂದರ್ಥ. ೪೪೨

೩.೧೬.೩೬ 'ಭೂಯಾದಘೋನಿ'(ಅಪರಾಧಕ್ಕೆ ತಕ್ಕ ಶಿಕ್ಷೆ) ಎನ್ನುವ ಪಾಠ ಸರಿಯಲ್ಲ. 'ಭೂಯಾನಘಾದ್ಧಿ' (ಅಪರಾಧಕ್ಕಿಂತ ಹೆಚ್ಚಿನ ಶಿಕ್ಷೆ) ಎಂಬ ಪಾಠವೇ ಯುಕ್ತ. ಹೆಚ್ಚಿನ ಶಿಕ್ಷೆಯಾದ್ದರಿಂದಲೆ ದೇವತೆಗಳಲ್ಲಿ ನಾವು ಗೈದ ಅಪರಾಧಕ್ಕೂ ಇದು ದಂಡನೆ ಎನಿಸಲೆಂದು ಜಯವಿಜಯರು ಹೇಳುತ್ತಿದ್ದಾರೆ. ೪೪೪

'ಮೋಹಃ ಸ್ಮೃತಿಘ್ನೋ ಮಾ ಭವೇತ್' ಭೂಮಿಯಲ್ಲಿ ಜನಿಸಿದಾಗ ನಮಗೆ ಮೋಹ ಬಂದರೂ ಅದು ಭಗವಂತನ ವಿಸ್ಮರಣೆಗೆ ಕಾರಣವಾಗದಿರಲಿ ಎಂದು ಅರ್ಥವಲ್ಲ. ಮೋಹವೆಂದರೆ ವಿಸ್ಮರಣೆಯೆ ತಾನೆ? ಅಂಶದಿಂದ ನಾವು ಭೂಮಿಯಲ್ಲಿ ಜನಿಸಿದಾಗ ಅಂಶಕ್ಕೆ ಮೋಹ ಬರಲಿ, ಇತ್ತ ವೈಕುಂಠದಲ್ಲಿರುವ ನಮ್ಮ ಮೂಲರೂಪಕ್ಕೆ ಹಿಂದಿನಂತೆ ಮೋಹವಿಲ್ಲದಿರಲಿ. ಬ್ರಹ್ಮಶಾಪಪ್ರಯುಕ್ತವಾದ ವಿರೋಧಪ್ರವೃತ್ತಿ ಅಂಶಗಳಿಗೆ ಮಾತ್ರವೆ ಇರಲಿ ಎಂದು ಜಯವಿಜಯರು ಹೇಳುತ್ತಿದ್ದಾರೆ.

೩.೧೬.೩೮ 'ಶಶಿಕೇಸರ' ಎಂದರೆ ಆಲಂಕಾರಿಕವಾಗಿ ಚಂದ್ರಕಿರಣದಂಥ ಮುತ್ತಿನ ಮಾಲೆ ಎನ್ನುವ ಅಭಿಪ್ರಾಯವಿಲ್ಲ. ಮುತ್ತಿನ ಮಾಲೆಯ ಆಕಾರ ತೊಟ್ಟು ಭಗವಂತನನ್ನು ಸೇವಿಸುವ ಚಂದ್ರನ ಕಿರಣಗಳೆಂದರ್ಥ. ೪೪೬

೩.೧೬.೩೯ 'ಸ್ವಶ್ಚೂಡಾಮಣಿಂ' (ಸ್ವರ್ಗಲೋಕಕ್ಕೂ ಚೂಡಾಮಣಿಯಂತಿರುವ ವೈಕುಂಠ 'ಆತ್ಮಧಿಷ್ಣ್ಯ' ತನ್ನ ಮನೆ, ಅಂದರೆ ಹರಿಯ ಲೋಕ'ವೆಂದು ಪಾಠವಲ್ಲ. 'ಸ್ವಗ್ರೀವಾಮಣಿಂ'(ತನ್ನ ಕಂಠಾಭರಣವಾದ 'ಆತ್ಮಧಿಷ್ಣ್ಯ' ಬ್ರಹ್ಮನ ವಾಸಸ್ಥಾನವಾದ ಕೌಸ್ತುಭರತ್ನ) ಎಂದು ಪಾಠ. ಕೌಸ್ತುಭರತ್ನಕ್ಕೆ ಬ್ರಹ್ಮ ಅಭಿಮಾನಿ. 'ವಿದ್ಯುತ್ ಕ್ಷಿಪನ್' ಎಂಬ ಮುಂದಿನ ಶ್ಲೋಕದಲ್ಲಿ 'ಮಣಿಮತ್ಕಿರೀಟಂ' ಎಂಬಲ್ಲಿ ಹೇಳಿದ ಚೂಡಾಮಣಿಯೂ ಸಾಧಾರಣ ಮಣಿಯಲ್ಲ ಅದಕ್ಕೆ ಮುಖ್ಯಪ್ರಾಣ ಅಭಿಮಾನಿ. ೪೪೮

೩.೧೬.೪೨ 'ಸ್ವಾನಾಂ ಧಿಯಾ ವಿರಚಿತಂ' ಭಕ್ತರು ಧ್ಯಾನದಲ್ಲಿ ಭಗವಂತನಲ್ಲಿ ಇಲ್ಲದ ಆಕಾರವನ್ನು ಕಲ್ಪಿಸಿಕೊಳ್ಳುತ್ತಾರೆ' ಎನ್ನಬಾರದು ಇರುವುದನ್ನೇ ಧ್ಯಾನಿಸುತ್ತಾರೆ. ಇರುವುದನ್ನು ಧ್ಯಾನಿಸಿದರೂ ಅದು ರಚನೆ ಎನಿಸುತ್ತಿದೆ ಎಂದು ಶಬ್ದ ನಿರ್ಣಯದಲ್ಲಿದೆ. ೪೪೯

೩.೧೬.೪೩ 'ಅಕ್ಷರಜುಷಾಮಪಿ' ಎಂದರೆ ನಿರ್ಗುಣೋಪಾಸಕರಿಗೂ ಭಗವಂತನ ರೂಪ ಮೈಮರೆಸುತ್ತದೆ ಎಂದರ್ಥವಲ್ಲ. ಸನಕಾದಿಗಳಿಗೆ ಈ ಮುಕ್ತ ನಿಯಾಮಕರೂಪವನ್ನು ಸೇವಿಸಿ ಅಭ್ಯಾಸವಾಗಿದ್ದರೂ ಕೂಡ ಅವರಿಗೆ ಅದು ಪುನಃ ಹೊಸದಾಗಿಯೆ ಕಾಣುತ್ತದೆ ಎಂದರ್ಥ. ೪೫೦

೩.೧೬.೪೮ 'ಭಕ್ತರು ಮುಕ್ತಿಯನ್ನು ಆದರಿಸುವುದಿಲ್ಲ' ಎಂದರೆ ಮುಕ್ತಿಯನ್ನೂ ಬಯಸದ ಏಕಾಂತಭಕ್ತರಿಗೆ ಮೋಕ್ಷಕ್ಕಿಂತ ಪೂರ್ವದಲ್ಲಿಯೇ ಹೆಚ್ಚಿನ ಸ್ವರೂಪಾನಂದಾಭಿವ್ಯಕ್ತಿ ಇರುವುದರಿಂದ ಮುಕ್ತಿಕಾಮನೆ ಉಳ್ಳ ಸಾಧಾರಣ ಭಕ್ತರ ಮೋಕ್ಷಸುಖವನ್ನು ಅವರು ಆದರಿಸುವುದಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೪೫೧

೩.೧೬.೪೯ 'ನಿರಯೇಷು ನಷ್ಟಾಃ' ಶ್ರೀಹರಿಯಲ್ಲಿ ಭಕ್ತಿ ಮುಂದುವರಿಯುತ್ತಿದ್ದಲ್ಲಿ ನರಕ ವಾಸಕ್ಕೂ ನಾವು ಸಿದ್ಧರೆಂದು ಸನಕಾದಿಗಳು ಹೇಳುವುದರ ಅಭಿಪ್ರಾಯ ಹೀಗೆ– ಭಕ್ತರು ಭಕ್ತಿಪೂರ್ವಕವಾಗಿ ದುಃಖ ಅನುಭವಿಸಿದಷ್ಟೂ ಮುಕ್ತಿಯಲ್ಲಿ ಆನಂದಾಭಿವ್ಯಕ್ತಿ ಹೆಚ್ಚುತ್ತದೆ ಎಂದು. ೪೫೩

೩.೧೭.೭ ನಾನು ಲಕ್ಷ್ಮೀಪತಿ ಎನಿಸಿದುದು ಬ್ರಾಹ್ಮಣರ ಅನುಗ್ರಹದಿಂದ. ಲಕ್ಷ್ಮಿಗಿಂತಲೂ ಬ್ರಾಹ್ಮಣರೇ ನನಗೆ ಹೆಚ್ಚು ಪ್ರಿಯರು ಎಂದು ಹರಿ ಹೇಳುವುದು ಲೋಕದಲ್ಲಿ ಬ್ರಾಹ್ಮಣರಿಗೆ ಪೂಜ್ಯಸ್ಥಾನ ಸಿಗಲಿ ಎಂಬ ಉದ್ದೇಶದಿಂದ ಎಂದು ಕೂರ್ಮಪುರಾಣ ಹೇಳುತ್ತದೆ. ಅಜ್ಞಜನ ಮೋಹನವೂ ಇನ್ನೊಂದು ಉದ್ದೇಶವೆಂದು ಸ್ಕಂದಪುರಾಣ ಹೇಳುತ್ತದೆ.

ವಿಷ್ಣುವಿಗೆ ದೋಷಗಳನ್ನು ಹೇಳಿದರೂ ಸ್ವೀಕರಿಸಬಾರದು ಗುಣಗಳನ್ನು ಹೇಳದಿದ್ದರೂ ಸ್ವೀಕರಿಸಬೇಕು ಎಂದು ಪೈಂಗಿಶ್ರುತಿ ಹೇಳಿದೆ. ೪೫೬

೩.೧೭.೧೩ 'ದೇವೀ ಸರಸ್ವತಿ' ಎಂದರೆ ಋಷಿಗಳಿಗೂ ಅರ್ಥವಾಗದ, ಅವರ ಬುದ್ಧಿಶಕ್ತಿಯೊಂದಿಗೆ ಆಟವಾಡುವ ಮಾತು ಎಂದರ್ಥವಲ್ಲ. 'ಋಷಿಕುಲ್ಯಾ' ಎಂದರೂ ಮಂತ್ರತುಲ್ಯ ಎಂದರ್ಥವಲ್ಲ. ಭಗವಂತನಾಡಿದ ಮಾತು ಅರ್ಥಗರ್ಭಿತವಾಗಿತ್ತು, ಬ್ರಾಹ್ಮಣಕುಲವನ್ನು ಪ್ರಶಂಸೆಮಾಡುವ ಅಭಿಪ್ರಾಯದ್ದಾಗಿತ್ತು ಎಂದರ್ಥ. ೪೫೮

೩.೧೭.೧೫ ಪಾರಮೇಷ್ಠ್ಯವೆಂದರೆ ಪರಮೈಶ್ವರ್ಯವಲ್ಲ 'ತದ್ಭೂವಿಜೃಂಭಃ ಪರಮೇಷ್ಠಿಧಿಷ್ಣ್ಯಂ' ಎಂದು ಹಿಂದೆ ಹೇಳಿದ ಬ್ರಹ್ಮಪದವಿಯೇ ಇಲ್ಲಿ ಪಾರಮೇಷ್ಠ್ಯವೆಂದು ಉಕ್ತವಾಗಿದೆ. ೪೬೦

೩.೧೭.೧೮ 'ಧರ್ಮಸ್ಯ ಗುಹ್ಯಃ' ಎಂದರೆ ಧರ್ಮಾಭಿಮಾನಿ ದೇವತೆಗಳಿಗೂ ತಿಳಿಯಲಾಗದ ಪರತತ್ತ್ವ ಎಂದರ್ಥ. ೪೬೨

೩.೧೭.೨೦ 'ಮಧುವ್ರತಪತೇಃ ಲೋಕಂ' ಎಂದರೆ ತುಳಸೀಯುಕ್ತವಾದ ವಿಷ್ಣುಪಾದ ದುಂಬಿಯ ಸ್ಥಾನ ಎಂದರ್ಥವಲ್ಲ. ದುಂಬಿಯ ಸ್ಥಾನ ತುಳಸಿಮಾತ್ರ. ಅದರಿಂದ 'ಮಧುವ್ರತಪತಿ' ಸಾರಗ್ರಾಹಿಗಳಲ್ಲಿ ಶ್ರೇಷ್ಠನಾದ ಹರಿ. ಅವನು ತುಲಸಿಗೆ ಪಾದಗಳಲ್ಲಿ ಆಶ್ರಯ ನೀಡಿದ್ದರಿಂದ ಪಾದಗಳು ಶ್ರೇಷ್ಠವೆಂದು ಎದೆಯಲ್ಲಿರುವ ಲಕ್ಷ್ಮಿಯೂ ಪಾದಸೇವೆಗಾಗಿ ಕೆಳಗೆ ಇಳಿಯುತ್ತಾಳೆ. ಇದು ತುಲಸಿಯೊಂದಿಗೆ ಸ್ಪರ್ಧೆಯಂತೆ ಕಾಣುತ್ತದೆ. ವಸ್ತುತಃ ಲಕ್ಷ್ಮಿಗೆ ಪಾದಸೇವೆಯಲ್ಲಿ ಸ್ವತಃ ಪ್ರೀತಿ ಇದೆ. ೪೬೩

೩.೧೭.೨೧. 'ಪರಮಭಾಗವತಪ್ರಸಂಗಃ' ಎಂದರೆ ಲಕ್ಷ್ಮಿಯನ್ನು ಬಿಟ್ಟು ಬೇರೆ ಏಕಾಂತಭಕ್ತರನ್ನು ಭಗವಂತ ಸೇರುತ್ತಾನೆ ಎಂದರ್ಥವಲ್ಲ. ಏಕಾಂತಭಕ್ತರಲ್ಲೆಲ್ಲ ಲಕ್ಷ್ಮಿ ಶ್ರೇಷ್ಠಳೆಂದು ಅವಳಲ್ಲಿ ಭಗವಂತನಿಗೆ ಆಸಕ್ತಿ ಹೊರತು ಅವಳು ಪತ್ನಿ ಎಂದಲ್ಲ. ಎಂದು ಸನಕಾದಿ ಮುನಿಗಳು ಹೇಳುತ್ತಿದ್ದಾರೆ. ೪೬೬

೩.೧೭.೨೨ ಧರ್ಮ ಎಂದರೆ ಲೋಕಧಾರಕನಾದ ಭಗವಂತ ಎಂದು ಶಬ್ದನಿರ್ಣಯದಲ್ಲಿದೆ. ಅವನ ಮೂರು ಪಾದಗಳೆಂದರೆ ಅನಂತಾಸನ, ವೈಕುಂಠ,ಕ್ಷೀರಸಾಗರಗಳಲ್ಲಿರುವ ಮೂರು ರೂಪಗಳೆಂದು ಮೂರ್ತಿಭೇದ ಎಂಬ ಗ್ರಂಥದಲ್ಲಿ ಹೇಳಿದೆ. 'ವರದಾ ತನುಃ' ಎಂಬುದಕ್ಕೆ ಕಪಿಲ ಮೂರ್ತಿ ಎಂದು ವಿಶೇಷಾರ್ಥವಿದೆ. ಅದರಿಂದ 'ಸತ್ತ್ವೇನ ವರದಯಾ ತನುವಾ' ಎಂದರೆ ಶುದ್ಧಸತ್ತ್ವಾತ್ಮಕವಾದ ವರಪ್ರದವಾದ ಶರೀರ ಎಂದರ್ಥವಲ್ಲ.

ರಜಸ್ತಮೋನಾಶಕಾರ್ಯದಲ್ಲಿ ಕಪಿಲನಿಗೆ ಸತ್ವಗುಣವು ಸಾಧನವಾಗಿದೆ ಎಂದಿಷ್ಟೇ ಅರ್ಥ. ೪೬೮

೩.೧೭.೨೩ 'ಆತ್ಮಗೋಪಂ' ಧರ್ಮರೂಪನಾದ ಭಗವಂತನಿಗೆ ಬ್ರಾಹ್ಮಣರೆ ರಕ್ಷಕರು ಎಂದರ್ಥವಲ್ಲ. ಬ್ರಾಹ್ಮಣರಿಗೆ ಭಗವಂತನೇ ರಕ್ಷಕ ಎಂದರ್ಥ. ೪೭೧

೩.೧೭.೨೪ ಅಸುರರ ಪ್ರಾಬಲ್ಯ ಹೆಚ್ಚುವುದು ಭಗವಂತನಿಗೆ 'ಅನಭೀಷ್ಟಮಿವ' 'ಅನಿಷ್ಟದಂತೆ' ಏಕೆ? ಎಂದರೆ ಅದರಿಂದ ಅವನಿಗೆ ಅಪಾಯವಿಲ್ಲ. ಆದರೂ ಸಜ್ಜನರಿಗೆ ಅಪಾಯವಿರುವುದರಿಂದ ಅವನಿಗೆ ಅದು ಬೇಡವಾಗುತ್ತದೆ, ಅನಿಷ್ಟದಂತಾಗುತ್ತದೆ ಎಂದರ್ಥ. ೪೭೨

೩.೧೭.೨೬ 'ಸಂರಂಭ' ಎಂದರೆ ದ್ವೇಷ. ದ್ವೇಷದಿಂದ ಭಗವತ್ಪ್ರಾಪ್ತಿ ಹೇಗೆ? ಎಂದರೆ ದ್ವೇಷ ಹಿರಣ್ಯಕಶಿಪು ಮುಂತಾದವರಲ್ಲಿ ಅಂದರೆ ಜಯವಿಜಯಾದಿಗಳಲ್ಲಿ ಹೊರಗಿನ ಜಡವಾದ ಅಂತಃಕರಣದಲ್ಲಿ ಮಾತ್ರವಿರುತ್ತದೆ. ಒಳಗೆ ಸ್ವರೂಪಭೂತವಾದ ಅಂತಃಕರಣದಲ್ಲಿ ಭಕ್ತಿಯೇ ಇರುತ್ತದೆ. ಹರಿ ಹೊರಗಿನ ದ್ವೇಷವನ್ನು ಕಡೆಗಣಿಸಿ ಒಳಗಿನ ಭಕ್ತಿಯನ್ನು ಪುರಸ್ಕರಿಸುತ್ತಾನೆ. ಶಂಬರ ಮುಂತಾದ ಅಸುರರಲ್ಲಿ ಒಳಗೂ ಹೊರಗೂ ದ್ವೇಷವೆ. ಕ್ರೋಧವಶರಲ್ಲಿ ಹೊರಗೆ ಭಕ್ತಿ ಇದ್ದರೂ ಒಳಗೆ ದ್ವೇಷವೆ ತುಂಬಿದೆ. ಹರಿ ಈ ಭಕ್ತಿಯನ್ನು ಪುರಸ್ಕರಿಸುವುದಿಲ್ಲ. ೪೭೪

೩.೧೭.೨೮ 'ವೈಷ್ಣವೀ ಶ್ರೀ' ಎಂದರೆ ಇಲ್ಲಿ ಲಕ್ಷ್ಮಿಗಿಂತಲೂ ಅನಂತ ಮಡಿಯಾದ ವಿಷ್ಣುವಿನ ಸ್ವರೂಪಸೌಂದರ್ಯ. ಈ ಸ್ವರೂಪಸೌಂದರ್ಯವೂ ಲಕ್ಷ್ಮೀದೇವಿಯೂ ವೈಷ್ಣವೀಶ್ರೀ ಎನಿಸುತ್ತಾರೆ. ೪೭೬

೩.೧೭.೩೧ ಸಂರಂಭಯೋಗದಿಂದ ಎಂದರೆ ದ್ವೇಷ ಎಂಬ ಸಾಧನದಿಂದ ಬ್ರಾಹ್ಮಣಾಪರಾಧ ದೋಷಪರಿಹಾರವೆಂದರ್ಥವಲ್ಲ. ಜಯವಿಜಯರಲ್ಲಿ ಹೊರಗೆ ದ್ವೇಷವಿದ್ದರೂ ಒಳಗೆ ಭಕ್ತಿ ಇದ್ದುದರಿಂದಲೆ ದೋಷ ಪರಿಹಾರವಾಯಿತು. ಆವರಲ್ಲಿ ಆವಿಷ್ಟರಾದ ಅಸುರರು ಮಾತ್ರ ಒಳಗೂ ಹೊರಗೂ ದ್ವೇಷ ಮಾಡಿ ತಮಸ್ಸನ್ನೆ ಹೊಂದಿದರು. ಜಯವಿಜಯರಿಗೆ ತತ್ಕಾಲದಲ್ಲಿ ಉಂಟಾದ ಭಗವಂತನ ವಿಸ್ಮರಣೆ ಎಂಬ ಅನಿಷ್ಟಫಲ ಅಲ್ಪವೆಂದು ಅದನ್ನು ಹೇಳದೆ ಮೋಹನಕ್ಕಾಗಿ ಬ್ರಾಹ್ಮಣಾಪಚಾರ ದೋಷಪರಿಹಾರವೆಂಬ ಫಲವನ್ನೇ ಭಾಗವತ ಹೇಳುತ್ತಿದೆ. ೪೭೭

೩.೧೮.೫ ಘಾಟ್ಕಾರ ಫೂತ್ಕಾರ ಮುಂತಾದುವು ಬಿರುಗಾಳಿಯ ಅನುಕರಣ ಶಬ್ದಗಳೆಂದು ಅಭಿಧಾನ ಗ್ರಂಥದಲ್ಲಿದೆ. ೪೮೦

೩.೧೮.೯ ಟಂಕಾರವೂ ಅನುಕರಣ ಶಬ್ದವೆ. ಆದರೆ ಅದು ನರಿಗಳ ಸಹಜಧ್ವನಿಯಲ್ಲ, ಅಸಹಜ. ಆದರಿಂದ ನಾಶಸೂಚಕವಾಗಿದೆ ಎಂದು ಅಗ್ನಿಪುರಾಣ ಹೇಳಿದೆ. ೪೮೧

೩.೧೮.೧೧ ಖಾತ್ಕಾರ ಒಂಟೆಕತ್ತೆಗಳ ಅನುಕರಣಶಬ್ದ. ೪೮೨

೩.೧೮.೨೩ 'ಸ ವೈ ತಿರೋಹಿತಾನ್ ದೃಷ್ಟ್ವಾ' ಹಿರಣ್ಯಾಕ್ಷನಿಗೆ ಹೆದರಿ ದೇವತೆಗಳು ತಲೆಮರೆಸಿಕೊಂಡರೆಂದಿದೆ. ಆದರೆ ದೇವತೆಗಳನ್ನೂ ಪ್ರಜಾಪತಿಗಳನ್ನೂ ಬ್ರಹ್ಮಾದಿಗಳ ವರಬಲದಿಂದಲ್ಲದೆ ಸ್ವಶಕ್ತಿಯಿಂದ ಯಾರೂ ಗೆಲ್ಲಲಾರರೆಂದು ತತ್ವನಿರ್ಣಯದಲ್ಲಿ ಹೇಳಿದೆ. ೪೮೨

೩.೧೯.೨೧ 'ಸಹಸ್ರಣೀಃ' ಎಂದರೆ ಅನೇಕ ದಿನಕಲ್ಪಗಳ ಮುಮುಕ್ಷುಗಳನ್ನು ಪರಮಾತ್ಮನ ಬಳಿಗೆ ಒಯ್ಯುವ ಬ್ರಹ್ಮದೇವರು ಎಂದರ್ಥ. 'ವರಾಹನ ಮೈ ಗಾಯವಾಯಿತು. ಬ್ರಹ್ಮ ಆತಂಕಗೊಂಡನೆ'ಂದಿದೆ. ವಸ್ತುತಃ ಹರಿ ಲೋಕಮೋಹನಕ್ಕಾಗಿ ನಟಿಸುತ್ತಿದ್ದಾನೆ. ಅದಕ್ಕನುಗುಣವಾಗಿ ಬ್ರಹ್ಮನೂ ನಡೆಯುತ್ತಾನೆ ಎಂದು ಬ್ರಹ್ಮಾಂಡಪುರಾಣ ಹೇಳಿದೆ. ೪೮೫

೩.೧೯.೨೬ 'ಲೋಕ ಶಂಬಟ್‌ಕರೀ' ಎಂಬಲ್ಲಿ ಶಂಬಟ್‌ಕಾರವೆಂದರೆ ಅಭಿಧಾನ ಗ್ರಂಥ ಹೇಳುವಂತೆ ಭಕ್ಷಣವೆಂದು ಮುಖ್ಯಾರ್ಥ. ಸಂಧ್ಯಾಕಾಲ ಎಲ್ಲೆಡೆ ಕತ್ತಲು ಹಬ್ಬಿಸಿ ಏನೂ ಕಾಣದಂತೆ ಮಾಡುವುದರಿಂದ ಎಲ್ಲವನ್ನೂ ಭಕ್ಷಿಸಿದಂತೆಯೆ ಆಗುತ್ತದೆ. ೪೮೮

೩.೧೯.೨೭ ಮಧ್ಯಾಹ್ನಕಾಲ, ಉತ್ತರಾಷಾಢದ ಉತ್ತರಾರ್ಧ ಶ್ರವಣದ ಪೂರ್ವಾರ್ಧ, ಮತ್ತು ವಿಷುವ ಕಾಲಗಳು 'ಅಭಿಜಿತ್' ಎನಿಸುತ್ತವೆ. ೪೮೯

೩.೨೦.೫ ವರಾಹ ತನ್ನ ಕೈಯ ಗದೆ ಕೆಳಗೆ ಬಿದ್ದಾಗ, ಹಿರಣ್ಯಾಕ್ಷ ಕೈ ಮಾಡದೆ ನಿಂತುದನ್ನು 'ಇದು ಧರ್ಮ' ಎಂದ. ಭಕ್ತಿ ಇಲ್ಲದೆ ಮಾಡಿದ ಧರ್ಮ ಧರ್ಮವಾಗುವುದೆ? ಈ ಪ್ರಶ್ನೆಗೆ ಬ್ರಹ್ಮಪುರಾಣದಲ್ಲಿ ಸಮಾಧಾನವಿದೆ. ಶಾಸ್ತ್ರಾನುಸಾರ ಮಾಡಿದ್ದು ಮತ್ತು ಭಕ್ತಿಯಿಂದ ಮಾಡಿ ಭಗವಂತನಿಗೆ ಪ್ರಿಯವೆನಿಸಿದ್ದು ಎಂದು ಧರ್ಮ ಎರಡು ಬಗೆಯಾಗಿದೆ ಎಂದು. ಪ್ರಕೃತ ಹಿರಣ್ಯಾಕ್ಷ ನಿರಾಯುಧನ ಮೇಲೆ ಕೈ ಮಾಡದಿದ್ದುದು ಶಾಸ್ತ್ರಾನುಸಾರಿ ಯಾದ್ದರಿಂದ ಅದೂ ಒಂದು ಬಗೆಯ ಧರ್ಮವೆ.

ಗದೆ ಕೈಯಿಂದ ಜಾರಿ ಬಿದ್ದರೆ ವರಾಹ ಚಕ್ರವನ್ನೇಕೆ ನೆನೆದ? ಇಚ್ಛಾಮಾತ್ರದಿಂದ ಶತ್ರುವನ್ನು ಕೊಲ್ಲಬಾರದಿತ್ತೆ? ಎಂದರೆ ಅದೊಂದು ಲೀಲೆ ಎಂದು ವರಾಹಪುರಾಣ ಹೇಳಿದೆ. ೪೯೨

೩.೨೨.೮ 'ಶಾಬ್ದಂ ಬ್ರಹ್ಮ' ಎಂದರೆ ವೇದವೇದ್ಯನಾದ ಭಗವಂತನಲ್ಲ, ವೇದವೇತ್ತನಾದ ಭಗವಂತ. ವೈದಿಕ ಸಾಂಖ್ಯಪ್ರವರ್ತನೆಗಾಗಿ ಅವತರಿಸುವ ಕಪಿಲ ವೇದವೇತ್ತನೆನಿಸುರುದೇ ಉಚಿತ. ೫೦೬

೩.೨೨.೧೮ ಅನಂತ ಛದ ಉಳ್ಳ, ಅಂದರೆ ಅವಯವ ಉಳ್ಳಕಾಲ 'ಅನಂತಛದಿ' ಯಾಗಬೇಕು, 'ಅನಂತಛಿದಿ' ಹೇಗಾಯಿತು? ಅಕಾರಕ್ಕೆ ಇಕಾರ ಹೇಗೆ ಬಂದಿತು? ಎಂದರೆ 'ತೃತೀಯೋऽತಿಶಯೇ' ಎಂದು ವ್ಯಾಕರಣ ಹೇಳುವಂತೆ ಅಕಾರಕ್ಕೆ ಮೂರನೆಯದಾದ ಇಕಾರ ಬಂದರೆ ಅದು ಅತಿಶಯದ್ಯೋತಕ ವಾಗುತ್ತದೆ. ಪ್ರಕೃತ ಕಾಲಾವಯವಗಳ ಅನಂತತ್ವದಲ್ಲಿ ಅತಿಶಯ ಸೂಚಿತವಾಗಿದೆ. ೫೦೭

೩.೨೨.೫೦ ಸ್ವಾಯಂಭುವ ಮನುವನ್ನು ಸಾಕ್ಷಾತ್ ಹರಿಯ ಪಾಲನ ಶಕ್ತಿ ಎಂದು ಕರ್ದಮರು ಹೊಗಳುತ್ತಿಲ್ಲ. ಶಕ್ತಿಯ ಆವೇಶವಿದೆ ಎಂದು ಅಭಿಪ್ರಾಯ. ಸ್ವಾಯಂಭುವಮನು ಮುಂತಾದ ರಾಜರಲ್ಲಿಯೂ ದೇವತೆಗಳಲ್ಲಿಯೂ ಋಷಿಗಳಲ್ಲಿಯೂ ಭಗವಂತನ ಆವೇಶವಿದೆ ಎಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ. ೫೦೯

೩.೨೩.೧೬ ದೇವಹೂತಿ ತನ್ನ ಸೌಂದರ್ಯದಿಂದ ಲಕ್ಷ್ಮಿಯನ್ನೂ ತಿರಸ್ಕರಿಸುತ್ತಾಳೆ ಎಂದು ಕರ್ದಮರು ಹೇಳುತ್ತಿಲ್ಲ. ತನ್ನ ಸೌಂದರ್ಯದಿಂದ ಅನ್ಯರನ್ನು ತಿರಸ್ಕರಿಸುವ ಸಾಕ್ಷಾತ್ ಲಕ್ಷ್ಮಿಯಂತೆ ದೇವಹೂತಿ ಇದ್ದಾಳೆ ಎನ್ನುತ್ತಿದ್ದಾರೆ. ೫೧೨

೩.೨೩.೯ ವರಾಹನ ಮೈಯ ರೋಮಗಳು ಉದುರಲಿಲ್ಲ. ಅವನ ಶರೀರ ಅಚ್ಛೇದ್ಯ ಅಭೇದ್ಯ. ರೋಮಗಳೆಂಬ ಅವತಾರರೂಪಗಳು ಅವನ ಮೈಯಿಂದ ಅಭಿವ್ಯಕ್ತವಾಗಿ ಈಚೆ ಬಂದುವು ಎಂದು ಸ್ಕಂದಪುರಾಣ ಹೇಳಿದೆ. ೫೧೩

೩.೨೩.೩೫ ಕಾಲವು ಅಯಾತಯಾಮವಾಗಿತ್ತೆಂದರೆ ವ್ಯರ್ಥವಾಗಿ ಕಳೆಯಲಿಲ್ಲ ಎಂದರ್ಥ. ಯಾಮವೆಂದರೆ ಫಲ. ಯಾತಯಾಮ ಎಂದರೆ ನಿಷ್ಫಲ. ವ್ಯರ್ಥ ಎಂದು ನಾರದ ಪುರಾಣ ಹೇಳಿದೆ. ೫೧೪

೩.೨೩.೩೭ ವೈಯಾಸೇ ಎಂದು ಪಾಠವಲ್ಲ. 'ಪರ್ಯಾಸೇ' ಎಂದರೆ ವಿಪರ್ಯಾಸೇ ಎಂದರ್ಥ. ದೇವನಾದ ಸ್ವಾಯಂಭುವ ಮನು ಮಾನವನಾಗಿ ಜನಿಸು ವುದೆಂದರೆ ಅದು ವಿಪರ್ಯಾಸ. ೫೧೫

೩.೨೪.೧೮ ದೇಹಲೀ ಎಂದರೆ ಇಲ್ಲಿ ಹೊಸ್ತಿಲು ಮಾತ್ರವಲ್ಲ. ಇಡೀ ದ್ವಾರಬಂಧ ವಿವಕ್ಷಿತವಾಗಿದೆ. ೫೧೮

೩.೨೪.೨೦ ಕೃತ್ರಿಮಾನ್ ಎಂದರೆ ಶೋಭೆಗಾಗಿ ಕೃತ್ರಿಮವಾಗಿ ನಿರ್ಮಿಸಿದ ಪಾರಿವಾಳ ಬೊಂಬೆಗಳು. ೫೧೮

೩.೨೪.೩೦ 'ಆದರ್ಶೇ' ಎಂದರೆ 'ಕನ್ನಡಿಯಲ್ಲಿ' ಎಂದು ಅರ್ಥವಿಟ್ಟು ಕೊಳ್ಳುವ ಪಕ್ಷದಲ್ಲಿ ದೇವಹೂತಿ ತನ್ನನ್ನು 'ದದರ್ಶ' ನೋಡಿಕೊಂಡಳೆಂದು ಅಧ್ಯಾಹಾರ ಮಾಡಬೇಕು. 'ನೋಡಿಕೊಂಡಳು' ಎಂದೇ ಅರ್ಥವಿಟ್ಟುಕೊಳ್ಳುವ ಪಕ್ಷದಲ್ಲಿ ಅದನ್ನು ಆರ್ಷಪ್ರಯೋಗವೆಂದು ಗ್ರಹಿಸಬೇಕು. ೫೧೯

೩.೨೪.೩೮ 'ಉದ್ಗುಣಪಾನವೀಚ್ಯಃ' ಎಂದು ಪಾಠ. ಯಥೇಚ್ಛವಾಗಿ ಉತ್ತಮ ಅಮೃತವನ್ನು ಕರ್ದಮರು ಪಾನಮಾಡಿದರೆಂದರ್ಥ. ೫೨೦

೩.೨೪.೪೫ 'ಆಪೀಚ್ಯ' ಎಂದರೆ ಹದಿನಾರರ ವಯಸ್ಸಿನವನು ಎಂದು ಅಭಿಧಾನಗ್ರಂಥ ಹೇಳುತ್ತದೆ. ೫೨೧

೩.೨೫.೧ 'ಶಾಲಿನೀ' ಎಂದರೆ ಇಲ್ಲಿ 'ಶೋಭಿಸುವವಳು' ಎಂದರ್ಥವಲ್ಲ. ಪತ್ನಿ ಎಂಬ ಅರ್ಥ ಕೊಶದಲ್ಲಿದೆ. ೫೨೪

೩.೨೫.೬ ಅವತಾರಗಳಲ್ಲಿಯೂ ಹರಿಗೆ ಶುಕ್ಲಶೋಣಿತ ಮೇಲನ ಜನ್ಯವಾದ ಶರೀರ ಬರುವುದಿಲ್ಲ. ಶುಕ್ಲದಲ್ಲಿದ್ದು ಮಾತೃಗರ್ಭವನ್ನು ಪ್ರವೇಶಿಸುತ್ತಾನೆ. ಆದರೆ ಒಡನೆ ಆ ಶುಕ್ಲವನ್ನು ನಾಶಪಡಿಸಿ ಚಿನ್ಮಯಶರೀರದಿಂದಲೆ ಪ್ರಾದುರ್ಭವಿಸುತ್ತ ಜಡಶರೀರದಿಂದ ಹುಟ್ಟಿದಂತೆ ಅಜ್ಞರಿಗೆ ಭ್ರಾಂತಿ ಉಂಟುಮಾಡುತ್ತಾನೆ ಎಂದು ಮಹಾವರಾಹಪುರಾಣದಲ್ಲಿದೆ. ದೇವಹೂತಿಯ ಗರ್ಭದಲ್ಲಿ ಕಪಿಲ ಪ್ರಾದುರ್ಭವಿಸಿದ್ದಕ್ಕೆ ಕಾಷ್ಠದಲ್ಲಿ ಅಗ್ನಿಯಂತೆ ಎಂದು ಉದಾಹರಣೆ ಕೊಟ್ಟರೂ ಅದು ಅಗ್ನಿಗೆ ಕಾಷ್ಠದಂತೆ ಕಪಿಲನಿಗೆ ತಾಯಿಯ ಗರ್ಭ ಆವಶ್ಯಕವೆಂಬ ಅಭಿಪ್ರಾಯದ್ದಲ್ಲ. ಹರಿಗೆ ಅದು ಅಭಿವ್ಯಕ್ತಿಸ್ಥಾನವಾಗಿತ್ತೆಂದು ಮಾತ್ರ ಅಭಿಪ್ರಾಯ. ೫೨೫

೩.೨೫.೧೦ 'ಸತ್ತ್ವೇನ' ಎಂದರೆ ಕಪಿಲನು ಸತ್ತ್ವಗುಣದಿಂದ ಯುಕ್ತನೆಂದರ್ಥವಲ್ಲ. ಅವನು ಗುಣತ್ರಯರಹಿತ. ವಾಮನ ಪುರಾಣ ಹೇಳುವಂತೆ ಮಹಾಗುಣಪೂರ್ಣತ್ವವೂ ಸತ್ತ್ವವೆನಿಸುತ್ತದೆ. ಕಪಿಲನು ಮಹಾಗುಣ ಪೂರ್ಣನಾದ್ದರಿಂದ ಹರಿಯ ಭಿನ್ನಾಂಶನಲ್ಲ, ಸ್ವರೂಪಾಂಶನೇ ಎಂದು ಹೇಳಿದಂತಾಗುವುದು. ೫೨೭

೩.೨೫.೧೯ ಸಾಂಖ್ಯಾಚಾರ್ಯರೆಂದರೆ ಈಶ್ವರ ಕೃಷ್ಣನ ನಿರೀಶ್ವರ ಸಾಂಖ್ಯ ಶಾಸ್ತ್ರಜ್ಞರಲ್ಲ. ವೈದಿಕಸಾಂಖ್ಯಶಾಸ್ತ್ರ ಬೇರೆ ಇದೆ. ಅದೇ ಯಥಾರ್ಥ.

ಯಥಾರ್ಥಜ್ಞಾನವೇ ಸಾಂಖ್ಯ ಎಂದೂ ಅದಕ್ಕೆ ಸಾಧನವಾದ ಯಮನಿಯಮಾದಿಯೆ ಯೋಗ ಎಂದೂ ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೫೨೮

೩.೨೫.೨೬ ಕೃತತ್ರೇತಾದ್ವಾಪರ ಮೂರು ಯುಗಗಳಲ್ಲಿ ಹರಿ ಅವತರಿಸುವುದರಿಂದ 'ತ್ರಿಯುಗ' ನೆನಿಸುತ್ತಾನೆ ಎಂದು ಪದ್ಮಪುರಾಣ ಹೇಳಿದೆ. ೫೨೯

೩.೨೫.೩೧ ಭಕ್ತರು ಬಯಸಿದಂತೆ ಮಾಯಿಕ ರೂಪವನ್ನು ಭಗವಂತ ಧರಿಸುತ್ತಾನೆ ಎಂದು ಕರ್ದಮರು ಹೇಳುತ್ತಿಲ್ಲ. ಭಗವಂತನ ರೂಪಗಳೆಲ್ಲ ಚಿನ್ಮಯ, ಅನಾದಿ. ಅವುಗಳಲ್ಲಿ ಭಕ್ತರು ಬಯಸಿದಂತೆ ಬ್ರಾಹ್ಮಣಾದಿರೂಪಗಳಿಂದ ಅವನು ಅವತರಿಸುತ್ತಾನೆ ಎಂದು ಕೂರ್ಮಪುರಾಣ ಹೇಳಿದೆ. ೫೩೦

೩.೨೫.೩೩ 'ತ್ರಿವೃತಂ' ಎಂದರೆ ಅಹಂಕಾರ ತತ್ವವೆಂದಿಟ್ಟುಕೊಂಡು ಭಗವಂತ ಅಹಂಕಾರ ತತ್ವವಾಗಿ ಪರಿಣಮಿಸುತ್ತಾನೆ ಎನ್ನಬಾರದು. ಮೂರು ವೇದಗಳಿಂದ ಕೊಂಡಾಡಲ್ಪಡುವವನು 'ತ್ರಿವೃತ್' ೫೩೨

೩.೨೫.೩೫ 'ಸತ್ಯಲೌಕಿಕೇ' ಎಂದರೆ ವೈದಿಕಲೌಕಿಕ ಕಾರ್ಯಗಳೆಂದರ್ಥವಲ್ಲ. ಲೋಕವೆಂದರೆ ಜ್ಞಾನ ಎಂದು ಕೋಶದಲ್ಲಿದೆ. ಲೌಕಿಕವೆಂದರೆ ಜ್ಞಾನಗೋಚರ, ಪ್ರಮೇಯ ಸತ್ಯವಾದ ಅಂದರೆ ಅಬಾಧಿತವಾದ ಪ್ರಮೇಯವು ಸತ್ಯಲೌಕಿಕವೆನಿಸುತ್ತದೆ. ೫೩೩

೩.೨೫.೪೦ ಪ್ರಪಂಚವನ್ನು ಸರ್ವಶಕ್ತಪರಮಾತ್ಮನ ಸ್ವರೂಪವೆಂದು ತಿಳಿಸಲು ಈ ಶ್ಲೋಕ ಆದೇಶಿಸುತ್ತಿಲ್ಲ. 'ವಿಶ್ವಂ ಏತದ್ಧಿ' ಪ್ರಪಂಚವೆಂದರೆ ಹೀಗೇ, ನಿಸ್ಸಾರ ಎಂದು ತಿಳಿದು 'ಆತ್ಮಾನಂ ಈಶ್ವರಂ' ಪರಮಾತ್ಮನನ್ನು ಸರ್ವಶಕ್ತನೆಂದು ತಿಳಿಯಲು ಆದೇಶಿಸುತ್ತಿದೆ. ೫೩೫

೩.೨೫.೪೫ ಸ್ವದೃಕ್ ಎಂದರೆ ತನ್ನನ್ನು ಪರಮಾತ್ಮನೆಂದು ತಿಳಿಯುವವನಲ್ಲ. ಸ್ವ ಎಂದರೆ ಸ್ವತಂತ್ರನಾದ ಪರಮಾತ್ಮ ಎಂದು ಮತ್ಸ್ಯಪುರಾಣ ಹೇಳಿದೆ. ಪರಮಾತ್ಮನೆ ಸ್ವತಂತ್ರ ಎಂದು ತಿಳಿಯುವವನು ಸ್ವದೃಕ್. 'ಪ್ರತ್ಯಗ್ರ' ಎಂಬಲ್ಲಿ ಪ್ರತ್ಯಕ್ ತನ್ನೊಳಗೇ ಧ್ಯಾನದಿಂದ ವ್ಯಕ್ತವಾಗುವ 'ರ'ಸ್ವರೂಪ ಸುಖಾನುಭವವುಳ್ಳವನು ಎಂದರ್ಥ. ೫೩೫

೩.೨೫.೪೬ ಆತ್ಮ ಎಂದರೆ ಗುಣಪೂರ್ಣ. ಎಲ್ಲವನ್ನೂ ಧರಿಸಿರುವ ಭಗವಂತನ ಬಾಹ್ಯರೂಪವೂ ಆತ್ಮ, ಗುಣಪೂರ್ಣ. ಎಲ್ಲರೊಳಗಿರುವ ರೂಪವೂ ಆತ್ಮ, ಗುಣಪೂರ್ಣ. ಎರಡೂ ಅಭಿನ್ನವೆ. ೫೩೬

೩.೨೬.೧೧ ಪ್ರಕೃತಿಪುರುಷರೆಂದರೆ ಮುಖ್ಯವಾಗಿ ಲಕ್ಷ್ಮೀನಾರಾಯಣರು. ಜೀವಜಡಗಳನ್ನೂ ಜೊತೆಗೆ ಇಟ್ಟುಕೊಳ್ಳಬೇಕು. ಇದು ದತ್ತಾತ್ರೇಯ ಯೋಗಶಾಸ್ತ್ರದಲ್ಲಿ ಸ್ಪಷ್ಟವಿದೆ. ೫೩೯

೩.೨೬.೧೩ ವೈದಿಕಸಾಂಖ್ಯಶಾಸ್ತ್ರದಲ್ಲಿ ಆಧ್ಯಾತ್ಮಿಕ ಯೋಗವೆಂದರೆ ದೇಹದಲ್ಲಿ ನಿಯಾಮಕರಾಗಿ ನೆಲೆಸಿರುವ ಪರಮಾತ್ಮ ಮುಂತಾದವರ ತತ್ವಜ್ಞಾನ, ಈ ಶಾಸ್ತ್ರದ ಪ್ರಕಾರ ಮೋಕ್ಷದಲ್ಲಿ ಸುಖದುಃಖ ಎರಡೂ ಇಲ್ಲವೆಂದಾಗುವುದಿಲ್ಲ. ನಿತ್ಯವಾದ ಸ್ವರೂಪಸುಖ ಮೋಕ್ಷದಲ್ಲಿಯೂ ಇದೆ. ೫೪೦

೩.೨೬.೧೬ 'ನಿರಂತರಂ' ಎಂದರೆ ಅಭಿನ್ನ. ಆದರೆ ಜೀವನು ಬ್ರಹ್ಮನಿಂದ ಅಭಿನ್ನ ಎಂದರ್ಥವಲ್ಲ. ಬ್ರಹ್ಮನು ತನ್ನ ಶರೀರಾದಿಗಳಿಂದ ಅಭಿನ್ನ. 'ಆತ್ಮ' ಎಂದರೆ ಪರಮಾತ್ಮ. ಅವನನ್ನು ಅಪರೋಕ್ಷದಲ್ಲಿ ಕಂಡಾಗ ಅವನ ಶಕ್ತಿಯಿಂದ ಜೀವನ ಪರಮಾಚ್ಛಾದಕ ದೂರವಾಗುತ್ತದೆ ಎಂದು ಕಾಪಿಲೇಯ ಗ್ರಂಥದಲ್ಲಿದೆ. ೫೪೧

೩.೨೬.೨೨ ಹರಿಯಲ್ಲಿ ಅನನ್ಯಭಕ್ತಿ ಎಂದರೆ ಅನ್ಯದೇವತೆಗಳಲ್ಲಿ ಭಕ್ತಿಯೆ ಇರಕೂಡದೆಂದರ್ಥವಲ್ಲ. ಹರಿಯಲ್ಲಿರುವಷ್ಟು ಭಕ್ತಿ ಅನ್ಯರಲ್ಲಿರಕೂಡದು. ಭಕ್ತಿಯು ತಾರತಮ್ಯಾನುಗುಣವಾಗಿರಬೇಕು. ೫೪೩

೩.೨೬.೨೩ ಹರಿಯೊಬ್ಬನೇ ಸ್ವತಂತ್ರ ಎನ್ನುವ ಸ್ಥಿರವಾದ ಜ್ಞಾನವೇ ಐಕಾತ್ಮ್ಯಜ್ಞಾನವೆಂದು ಬ್ರಹ್ಮಾಂಡಪುರಾಣದಲ್ಲಿದೆ. ೫೪೪

೩.೨೬.೩೧ 'ತನ್ವಾ ಅಭಿಜಾತಃ' ಶರೀರದಿಂದ ಹುಟ್ಟಿದನೆಂದ ಮಾತ್ರಕ್ಕೆ ಕಪಿಲ ಜಡಶರೀರದಿಂದ ಹುಟ್ಟಿದನೆಂದಾಗುವುದಿಲ್ಲ. ಚಿನ್ಮಯಶರೀರದಿಂದ ವ್ಯಕ್ತನಾದ. ಇದು ಗರುಡಪುರಾಣದಲ್ಲಿ ಸ್ಪಷ್ಟವಿದೆ. ೫೪೫

೩.೨೬.೩೨ 'ಆನುಶ್ರವಿಕ ಕರ್ಮ' ಎಂದರೆ ಶ್ರುತ್ಯುಕ್ತವಾದ ವಿಧಿನಿಷೇಧಗಳನ್ನು ಉಲ್ಲಂಘಿಸದಿರುವ ಇಂದ್ರಿಯಗಳು. ಎಂಬದು ಭವಿಷ್ಯತ್ಪರ್ವದಲ್ಲಿದೆ. 'ಸತ್ವ ಏವೈಕ ಮನಸಃ' ಎಂದರೆ ಗುಣಪೂರ್ಣಪರಮಾತ್ಮನನ್ನೇ ಧ್ಯಾನಿಸುವವನು. 'ಸತ್ವ ಎಂದರೆ ಗುಣಪೂರ್ಣನಾದ ವಿಷ್ಣುವೆ'ಂದು ಕಾಪಿಲೇಯದಲ್ಲಿ ಹೇಳಿದೆ. ಭಕ್ತಿಯು ಮುಕ್ತಿಗಿಂತಲೂ ಹೆಚ್ಚು ಎನ್ನುವುದರ ಅಭಿಪ್ರಾಯ ಹೀಗೆ– ನಿಷ್ಕಾಮ ಭಕ್ತಿಯೇ ಪೂರ್ಣಭಕ್ತಿ. ಅಪೂರ್ಣಭಕ್ತಿ ಉಳ್ಳವನಿಗೆ ಮುಕ್ತಿಯಲ್ಲಿಯೂ ಪೂರ್ತಿಸುಖಾಭಿವ್ಯಕ್ತಿ ಇಲ್ಲ. ಆ ಸುಖಕ್ಕಿಂತ ಅಧಿಕವಾಗಿ ಸಂಸಾರದಲ್ಲಿಯೂ ಸ್ವರೂಪಸುಖಾಭಿವ್ಯಕ್ತಿ ಪೂರ್ಣಭಕ್ತಿ

ಉಳ್ಳವನಿಗೆ ಇರುವುದರಿಂದ ಪೂರ್ಣಭಕ್ತಿ ಮುಕ್ತಿಗಿಂತಲೂ ಮಿಗಿಲು ಎಂದು. ೫೪೬

೩.೨೬.೩೪ ಪರಮಾತ್ಮನ ಪಾದಸೇವಾಕಾಂಕ್ಷಿಗಳಾದ ಭಕ್ತರು ಮುಕ್ತಿಯನ್ನು ಬಯಸುವುದಿಲ್ಲವೆಂದರೆ ಮುಕ್ತಿಯಲ್ಲಿ ಜೀವಪರಮಾತ್ಮರಿಗೆ ಭೇದವಿಲ್ಲದ್ದರಿಂದ ಪಾದಸೇವೆಗೆ ಅವಕಾಶವಿಲ್ಲ ಎಂದಲ್ಲ. ಮುಕ್ತಿಯಲ್ಲಿಯೂ ಭೇದವಿದೆ, ಪಾದಸೇವೆಗೆ ಸರ್ವಥಾ ಅವಕಾಶವಿದೆ. ಆದರೂ ಭಕ್ತಿಗೆ ಫಲವಾಗಿ ಮುಕ್ತಿಯನ್ನು ಭಕ್ತರು ಬಯಸುವುದಿಲ್ಲ. ಪರಮಾತ್ಮನ ಆಜ್ಞೆ ಎಂದು ಮಾತ್ರ ಅದನ್ನು ಸ್ವೀಕರಿಸುತ್ತಾರೆ. ೫೪೮

೩.೨೬.೩೮ ಭಕ್ತನನ್ನು ತನ್ನವನೆಂದು ಸ್ವೀಕರಿಸಿ ಕಾಪಾಡುವುದರಿಂದ ಭಗವಂತ 'ಆತ್ಮ' ಹಾಗೇ ಅವನನ್ನು ಮುಕ್ತರು ಸದಾ ತಿಳಿಯುವುದರಿಂದ ಅವನು ಕಾಪಾಡುತ್ತಾನೆ. ಅವರ ಆನಂದಕ್ಕೆ ಚ್ಯುತಿಯಿಲ್ಲ. ಸಂಸಾರಿಗಳು ಮರೆಯುತ್ತಾರೆ. ಅವರ ಭೋಗ ನಶ್ವರವಾಗಿರುತ್ತದೆ. ೫೫೦

೩.೨೭.೪ ಜೀವನು ಶರೀರದ ಉತ್ಪತ್ತಿನಾಶಗಳನ್ನು ತನ್ನವೆಂದು ತಿಳಿದು ತಾನು ಹುಟ್ಟಿದೆ ಸತ್ತೆನೆನ್ನುವುದು ಭ್ರಾಂತಿ ಎಂದ ಮೇಲೆ ಪರಮಾತ್ಮನು ಅವತಾರಗಳಲ್ಲಿ ಹುಟ್ಟುವಂತೆ ಕಾಣುವುದು ಭ್ರಾಂತಿ ಎಂದು ಬೇರೇನು ಹೇಳಬೇಕು! ಅದರಿಂದ ಪರಮಾತ್ಮ ಅವತಾರರೂಪಗಳಲ್ಲಿಯೂ ಅನಾದಿ ಎಂದು ಈ ಶ್ಲೋಕ ಹೇಳುತ್ತದೆ ಹೊರತು ಜೀವನ ಅನಾದಿನಿತ್ಯತ್ವವನ್ನು ಹೇಳುವ ಉದ್ದೇಶವಿಲ್ಲ. ೫೫೩

೩.೨೭.೫ 'ಉಪಗತಾಮಭ್ಯಪದ್ಯತ' ಎಂದರೆ ಜೀವನು ಅವಿದ್ಯೆಯ ಬಂಧನದಲ್ಲಿ ತನ್ನನ್ನು ಸಿಲುಕಿಸಿಕೊಂಡನೆಂದರ್ಥವಲ್ಲ. ಪರಮಾತ್ಮ ತನ್ನ ಬಳಿಯೆ ಸದಾ ವಶದಲ್ಲಿರುವ ಪ್ರಕೃತಿಯನ್ನು ಸೃಷ್ಟಿಗೆ ಪ್ರೇರಿಸಿದ. ೫೫೪

೩.೨೭.೬ 'ವಿಲೋಕ್ಯ ಮುಮುಹೇ' ಎಂದರೆ ಜೀವನು ದೇಹಾತ್ಮೈಕ್ಯಮೋಹದಲ್ಲಿ ಸಿಲುಕಿದನೆಂದರ್ಥವಲ್ಲ. ಪರಮಾತ್ಮನೆ ಜೀವನನ್ನು ಸ್ವಾತಂತ್ರ್ಯಾಭಿಮಾನದಲ್ಲಿ ಸಿಲುಕಿಸಿದ ಎಂದರ್ಥ. ಸಿಲುಕಿಸಿದನೆನ್ನದೆ 'ಮುಮುಹೇ' ಸಿಲುಕಿದ ಎಂದುದು ಜೀವನನ್ನು ಸಿಲುಕುವಂತೆ ಮಾಡಿವಲ್ಲಿ ಪರಮಾತ್ಮ ಪೂರ್ಣ ಸ್ವತಂತ್ರ ಎಂದು ತಿಳಿಸುವ ಉದ್ದೇಶದಿಂದ. ೫೫೬

೩.೨೭.೭ ಪರಾಭಿಧ್ಯಾನವೆಂದರೆ ದೇಹಾತ್ಮೈಕ್ಯಭ್ರಾಂತಿಯಲ್ಲ. ಪರಮಾತ್ಮನ ಇಚ್ಛೆ. ಪರಮಾತ್ಮನ ಇಚ್ಛೆಯಿಂದಲೆ ಜೀವನು ಪ್ರಕೃತಿಯಲ್ಲಿರುವ ಕರ್ತೃತ್ವವನ್ನು ತನ್ನದೆಂದು ಆರೋಪಿಸಿಕೊಂಡು ಅಹಂಕಾರಪಡುತ್ತಾನೆ. ೫೫೮

೩.೨೭.೮ ಅಕರ್ತೃ, ಈಶ, ಸಾಕ್ಷಿ, ನಿರ್ವೃತಾತ್ಮ ಈ ಎಲ್ಲ ವಿಶೇಷಣಗಳು ಪರಮಾತ್ಮನಿಗೆ ಇವೆ. ಅಂಥ ಪರಮಾತ್ಮನ ಇಚ್ಛೆಯಿಂದ ಪಾರತಂತ್ರ್ಯವು ಜೀವನಿಗೆ ಬಂದಿದೆ ಹೊರತು ಪರಮಾತ್ಮನಿಗಲ್ಲ. ಸ್ವೋತ್ತಮರಿಗೆ ಅಧೀನವಾಗಿರುವುದು ಜೀವನಿಗೆ ಸ್ವಾಭಾವಿಕವೆ. ಮುಕ್ತಿಯಲ್ಲಿಯೂ ಅದು ಇದ್ದೇ ಇದೆ. ಆದರೆ ಸಂಸಾರದಲ್ಲಿ ಅವನು ಅಧಮರಿಗೂ ಅಧೀನನಾಗುತ್ತಾನೆ. ಈ ಪಾರಂತ್ರ್ಯ ಅಸ್ವಾಭಾವಿಕ. ತತ್ವಜ್ಞಾನದಿಂದ ನಿವೃತ್ತಿ ಹೊಂದುವುದು. ೫೫೫

೩.೨೭.೯ ಪ್ರಕೃತಿ ಪುರುಷರೆಂದರೆ ಜಡಜೀವರಲ್ಲ, ಲಕ್ಷ್ಮೀನಾರಾಯಣರು, ಜೀವರಿಗೆ ಸುಖದುಃಖಕರ್ತೃತ್ವವನ್ನು ಲಕ್ಷ್ಮಿ, ಭೋಕ್ತೃತ್ವವನ್ನು ನಾರಾಯಣ ಉಂಟು ಮಾಡುತ್ತಾರೆ. ೫೬೧

೩.೨೭.೧೧ ಪ್ರಕೃತಿ ಎಂದರೆ ಅನಿರ್ವಚನೀಯವಾದ ಮಾಯೆಯಲ್ಲ. ಸತ್ಯವಾದ ಚೇತನ ಪ್ರಕೃತಿ ಮತ್ತು ಅಚೇತನಪ್ರಕೃತಿಗಳನ್ನು ಇಟ್ಟುಕೊಳ್ಳಬೇಕು. ಪ್ರಕೃತಿಯು ಮಹದಾದಿ ಸೃಷ್ಟಿ ಮಾಡದಿದ್ದಾಗ ಅವ್ಯಕ್ತವೆನಿಸುತ್ತದೆ. ಮಾಡಲು ಹೊರಡುವಾಗ ವ್ಯಕ್ತಾವ್ಯಕ್ತ. ಮಾಡಿದಾಗ ವ್ಯಕ್ತ. ಈ ಮೂರು ಅವಸ್ಥೆಗಳನ್ನು ಅವ್ಯಕ್ತಂ ಸದಸದಾತ್ಮಕಂ ವಿಶೇಷವತ್ ಎಂಬ ಶಬ್ದಗಳು ಹೇಳುತ್ತವೆ. ಹುಟ್ಟು ಇಲ್ಲದ್ದರಿಂದ ಪ್ರಕೃತಿ ಅವಿಶೇಷವೆನಿಸುತ್ತದೆ ಎಂದು ಹರಿವಂಶ ಹೇಳಿದೆ. ವಿಶೇಷವೆಂದರೆ ಹುಟ್ಟುವ ವಸ್ತು ಎಂದು ಪದ್ಮಪುರಾಣದಲ್ಲಿದೆ. ೫೬೪

೩.೨೭.೧೫ ನಿಶ್ಚಯ ಸಂಶಯ ಅಭಿಮಾನ ಸ್ಮರಣಗಳನ್ನು ಉಂಟು ಮಾಡುವುದು ಕ್ರಮವಾಗಿ ಬುದ್ಧಿ ಮನಸ್ಸು ಅಹಂಕಾರ ಚಿತ್ತ ಎಂಬ ನಾಲ್ಕು ಬಗೆಯ ಮನಸ್ಸಿನ ಲಕ್ಷಣವೆಂದು ಸ್ಕಂದಪುರಾಣ ಹೇಳಿದೆ. ೫೬೬

೩.೨೭.೧೬ ಸಗುಣ ಬ್ರಹ್ಮ ಎಂದರೆ ತ್ರಿಗುಣಾತ್ಮಕ ಪ್ರಕೃತಿ ಮಾತ್ರವೇ ಅಲ್ಲ, ಲಕ್ಷ್ಮಿಯೂ ತ್ರಿಗುಣಾಭಿಮಾನಿನಿಯಾದ್ದರಿಂದ ಸಗುಣಬ್ರಹ್ಮ ಎನಿಸುತ್ತಾಳೆ. ಹರಿಯು ನಿರ್ಗುಣಬ್ರಹ್ಮ ಎನಿಸುತ್ತಾನೆ ಎಂದು ಹರಿವಂಶದಲ್ಲಿದೆ. ೫೬೭

೩.೨೭.೧೭ 'ಏಕೇ ಪ್ರಾಹುಃ' ಎಂದ ಮಾತ್ರಕ್ಕೆ ಅಜ್ಞರ ಮತವಾಗುವುದಿಲ್ಲ, ಜ್ಞಾನಿಗಳೇ ಕೆಲವರು ಹೃದಯದಲ್ಲಿರುವ ಪುರುಷನಾಮಕನ ಸರ್ವವ್ಯಾಪಿ ರೂಪವನ್ನು ಕಾಲ ಎನ್ನುತ್ತಾರೆ. ಇನ್ನು ಕೆಲವು ಜ್ಞಾನಿಗಳು ರುದ್ರಾಂತರ್ಗತ ಭಗವದ್ರೂಪವನ್ನು ಕಾಲ ಎನ್ನುತ್ತಾರೆ. ಹೀಗೆ ಬ್ರಹ್ಮಪುರಾಣದಲ್ಲಿ ಹೇಳಿದೆ. ೫೬೮

೩.೨೭.೨೦ ಜಡಪ್ರಕೃತಿಗೆ ಪರಿಣಾಮೋನ್ಮುಖತ್ವವನ್ನೂ ಚೇತನಪ್ರಕೃತಿಗೆ ಸೃಷ್ಟಿಮಾಡುವ ಇಚ್ಛೆಯನ್ನೂ ಉಂಟು ಮಾಡುವವನು ನಾರಾಯಣ. ಅವನೇ

ದೈವ ಎನಿಸುತ್ತಾನೆ. ಮಹತ್ತತ್ತ್ವ ಸೂಕ್ಷ್ಮಾಹಂಕಾರ ಸ್ಥೂಲಾಹಂಕಾರ ಮನಸ್ತತ್ತ್ವಗಳನ್ನೂ ಅವುಗಳ ಅಭಿಮಾನಿಗಳಾದ ಬ್ರಹ್ಮ ಶೇಷ ಮನ್ಮಥ ಅನಿರುದ್ಧರನ್ನೂ ಹುಟ್ಟಿಸುವವರು ನಿಯಂತ್ರಿಸುವವರು ಕ್ರಮವಾಗಿ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ಎಂದು ಕಾಪಿಲೇಯ ಗ್ರಂಥದಲ್ಲಿ ಹೇಳಿದೆ. ೫೬೯

೩.೨೬.೨೧ ಜಗದಂಕುರವೆಂದರೆ ಇಲ್ಲಿ ಜಗದ್ವೃಕ್ಷಕ್ಕೆ ಅಂಕುರದಂತಿರುವ ಮಹತ್ತತ್ತ್ವವಲ್ಲ. ಅದು ತಾನೇ ತಮಸ್ಸನ್ನು ದೂರಮಾಡದು. ಅದು ಕೂಟಸ್ಥವೂ ಅಲ್ಲ. ಜಗತ್ತನ್ನು 'ಅಂಕೇ' ಬಳಿಯಲ್ಲಿರಿಸಿಕೊಂಡು ಸದಾ 'ರಮಯತಿ' ಲಾಲಿಸುವುದರಿಂದ ಭಗವಂತನೆ ಇಲ್ಲಿ ಜಗದಂಕುರ. ೫೭೦

೩.೨೬.೨೨ ಮಹದಹಂಕಾರ ಬುದ್ಧಿ ಮನಸ್ಸುಗಳಲ್ಲಿ ವಾಸುದೇವ ಸಂಕರ್ಷಣ ಪ್ರದ್ಯುಮ್ನರ ಉಪಾಸನೆಯನ್ನು ಪ್ರಾಸಂಗಿಕವಾಗಿ ಇಲ್ಲಿ ಹೇಳಿದೆ ಎನ್ನುವುದು ಸರಿಯಲ್ಲ. ಮಹತ್ತತ್ತ್ವದಿಂದ ಚಿತ್ತವೆಂಬ ಒಂದು ಅಂತಃಕರಣದ ಉತ್ಪತ್ತಿಯನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ೫೭೧

೩.೨೬.೨೩ ಹಿಂದಿನ ಶ್ಲೋಕದಲ್ಲಿ ಹೇಳಿದ ಚಿತ್ತಲಕ್ಷಣಗಳನ್ನೇ ಇಲ್ಲಿಯೂ ಹೇಳಿದೆ ಎನ್ನಬಾರದು. ಅಲ್ಲಿ ಹೇಳಿದ್ದು ಭಗವಂತನ ಲಕ್ಷಣ. ಇಲ್ಲಿ ಹೇಳುವುದು ಜಡವಾದ ಚಿತ್ತದ ಲಕ್ಷಣ. ಚಿತ್ತದ ಸ್ವಚ್ಛತೆ ಎಂದರೆ ಅಲ್ಪವಿಕಾರವೆಂದು ತತ್ವವಿವೇಕದಲ್ಲಿದೆ. ೫೭೨

೩.೨೬.೨೪ ಮಹತ್ತತ್ತ್ವಾಭಿಮಾನಿ ಬ್ರಹ್ಮನಲ್ಲಿ ಅಹಂಕಾರಾಭಿಮಾನಿಗಳಿಗಿಂತ ಹೆಚ್ಚೇ ಕ್ರಿಯಾಶಕ್ತಿ ಇದೆ. ಆದರೂ ಅದಕ್ಕಿಂತ ಹೆಚ್ಚು ಜ್ಞಾನಶಕ್ತಿ ಇರುವುದರಿಂದ ಜ್ಞಾನಶಕ್ತಿಯನ್ನೇ ಎತ್ತಿ ಹೇಳಲಾಗಿದೆ. ಹಾಗೇ ಅಹಂಕಾರಾಭಿಮಾನಿಗಳಲ್ಲಿ ಮನೋಭಿಮಾನಿಗಳಿಗಿಂತ ಹೆಚ್ಚೇ ಜ್ಞಾನಶಕ್ತಿ ಇದ್ದರೂ ಅದಕ್ಕಿಂತ ಹೆಚ್ಚು ಕ್ರಿಯಾಶಕ್ತಿ ಇರುವುದರಿಂದ ಕ್ರಿಯಾಶಕ್ತಿಯನ್ನೇ ಹೇಳಲಾಗಿದೆ. ೫೭೩

೩.೨೬.೨೫ 'ವೈಕಾರಿಕೋಽಧಿದೈವಂ' ಎಂದು ಪ್ರಥಮಾವಿಭಕ್ತಿಗೆ ಪಂಚಮ್ಯರ್ಥ ವಿವಕ್ಷಿತ. ವೈಕಾರಿಕಾಂಹಕಾರದಿಂದ ದೇವತಾಶರೀರೋತ್ಪತ್ತಿ ಎಂದು. ಪ್ರಥಮಾಪ್ರಯೋಗ ಮಾಡಿದ್ದು ಅಹಂಕಾರಕ್ಕೆ ದೇವತಾಶರೀರವಾಗಿ ಪರಿಣಮಿಸುವಲ್ಲಿಯೂ ಅಹಂಕಾರಾಭಿಮಾನಿಗೆ ದೇವತಾಶರೀರ ನಿರ್ಮಿಸುವಲ್ಲಿಯೂ ಸ್ವಾತಂತ್ರ್ಯವನ್ನು ತಿಳಿಸುವ ಉದ್ದೇಶದಿಂದ. ಈ ರೀತಿ ಉದ್ದೇಶವಿದ್ದಾಗ ಏಳು ವಿಭಕ್ತಿಗಳ ಅರ್ಥದಲ್ಲಿಯೂ ಪ್ರಥಮಾ ಪ್ರಯೋಗಿಸಬಹುದೆಂದು ಶಬ್ದನಿರ್ಣಯದಲ್ಲಿದೆ. ೫೭೪

೩.೨೭.೨೭ ಅಹಂಕಾರಕ್ಕೆ ಮನೋರೂಪದಿಂದ ಕರ್ತೃತ್ವ, ದೇಹರೂಪದಿಂದ ಕಾರ್ಯತ್ವ, ಇಂದ್ರಿಯರೂಪದಿಂದ ಕರಣತ್ವಗಳು ಲಕ್ಷಣಗಳೆಂದು ತತ್ವವಿವೇಕದಲ್ಲಿ ಹೇಳಿದೆ. ಶಾಂತರಾದ ಭಗವದ್ಭಕ್ತರಾದ ದೇವತೆಗಳನ್ನು ಹುಟ್ಟಿಸುವುದರಿಂದ ಶಾಂತತ್ವವು ವೈಕಾರಿಕದ ಲಕ್ಷಣ. ಘೋರ ಸಂಸಾರ ಕಾರಣವಾದ ಇಂದ್ರಿಯಗಳನ್ನು ಹುಟ್ಟಿಸುವುದರಿಂದ ಘೋರತ್ವವು ತೈಜಸದ ಲಕ್ಷಣ. ಜ್ಞಾನವನ್ನು ಪ್ರಕಟಮಾಡದಿರುವುದರಿಂದ ಮೂಢತ್ವವು ತಾಮಸಾಹಂಕಾರಲಕ್ಷಣ ಎಂದು ನಿರ್ಣಯಗ್ರಂಥದಲ್ಲಿ ಹೇಳಿದೆ. ೫೭೮

೩.೨೭.೩೧ 'ದ್ರವ್ಯಸ್ಫುರಣವಿಜ್ಞಾನಂ' ಎಂಬಲ್ಲಿ ದ್ರವ್ಯಸ್ಫುರಣಾನಂತರ ಹುಟ್ಟುವ ವಿಜ್ಞಾನ ಎಂದು ವಿಗ್ರಹ. ಮೊದಲಿಗೆ ಮನಸ್ಸಿನಿಂದ ದ್ರವ್ಯದ ಸಾಮಾನ್ಯಜ್ಞಾನ. ಬಳಿಕ ಬುದ್ಧಿಯಿಂದ ವಿಶೇಷಜ್ಞಾನ ಎಂದರ್ಥ. ೫೮೧

೩.೨೭.೩೨ ವಿಶೇಷವಿಚಾರದಿಂದಲೂ ನಿವೃತ್ತಿಯಾಗದ ಸಂಶಯ ಬುದ್ಧಿಯ ಕಾರ್ಯ. ವಿಚಾರದಿಂದ ನಿವೃತ್ತಿಯಾಗುವ ಸಂಶಯ ಮನಸ್ಸಿನ ಕಾರ್ಯ. ಬುದ್ಧಿಯಿಂದಾಗುವ ಸ್ಮರಣೆ ಚಂಚಲ. ಚಿತ್ತದಿಂದಾಗುವ ಸ್ಮರಣೆ ಸ್ಥಿರ. ೫೮೨

೩.೨೭.೩೩ ತೈಜಸಾಹಂಕಾರದಿಂದ ಹುಟ್ಟುವ ಪ್ರಾಣ ಮುಖ್ಯಪ್ರಾಣನಲ್ಲ. ಆಹಂಕಾರಿಕ ಪ್ರಾಣ. ಮುಖ್ಯಪ್ರಾಣ ಹಿಂದೆ ಮಹತ್ತತ್ವದೊಂದಿಗೇ ಹುಟ್ಟಿರುತ್ತಾನೆ. ಆಹಂಕಾರಿಕಪ್ರಾಣ ಪ್ರವಹವಾಯು ಪ್ರಾಣವಾಯು ಮುಂತಾದವರು ಮುಖ್ಯಪ್ರಾಣನ ಮಕ್ಕಳು, ಅವನಿಂದ ಆವಿಷ್ಟರು. ೫೮೩

೩.೨೭.೩೪ ಅರ್ಥಾಶ್ರಯತ್ವ, ಅಂದರೆ ಅರ್ಥಪ್ರತಿಪಾದಕತ್ವ ಶಬ್ದದ ಒಂದು ಲಕ್ಷಣ. ದ್ರಷ್ಟೃವಾದ, ಸರ್ವಜ್ಞನಾದ ಪರಮಾತ್ಮನಿಗೆ ಲಿಂಗವಾಗಿರುವುದು, ಅಂದರೆ ಶಬ್ದದಿಂದಲೆ ಪರಮಾತ್ಮನನ್ನು ತಿಳಿಯಬೇಕು ಎನ್ನುವುದು ಶಬ್ದದ ಇನ್ನೊಂದು ಲಕ್ಷಣ. ಆಕಾಶದಲ್ಲಿ ಬೇರೆ ಗುಣವಿಲ್ಲ, ಶಬ್ದ ಒಂದೇ ಇದೆ ಎನ್ನುವುದೂ ಶಬ್ದದ ಲಕ್ಷಣ. ಮುಂದೆ ಭಾಗವತದಲ್ಲಿ ವಾಯುವಿನಲ್ಲಿ ಸ್ಪರ್ಶಮಾತ್ರಗುಣ, ತೇಜಸ್ಸಿನಲ್ಲಿ ರೂಪಮಾತ್ರಗುಣ ಎಂದ ಮುಂತಾಗಿ ಹೇಳುವುದು ಅಲ್ಲಿ ಬೇರೆ ಗುಣಗಳಿದ್ದರೂ ಅವು ಬೇರೆ ಭೂತಗಳ ಮಿಶ್ರಣದಿಂದ ಬಂದವುಗಳು ಎಂಬ ಅಭಿಪ್ರಾಯದಿಂದ. ಸೂಕ್ಷ್ಮಧ್ವನಿ ತಾಮಸಾಹಂಕಾರದಿಂದ ಹುಟ್ಟಿ ಆಕಾಶವನ್ನು ಹುಟ್ಟಿಸುತ್ತದೆ. ಬಳಿಕ ಆಕಾಶದಿಂದ ಹುಟ್ಟುವ ಸ್ಥೂಲವಾದ ಧ್ವನಿ ಶ್ರೋತ್ರಗ್ರಾಹ್ಯವೆನಿಸುತ್ತದೆ. ಇದೇ ರೀತಿ ಸ್ಪರ್ಶಾದಿಗಳು ಸೂಕ್ಷ್ಮರೂಪದಲ್ಲಿ ವಾಯ್ವಾದಿಗಳಾಗಿ ಪರಿಣಮಿಸುತ್ತವೆ. ಸ್ಥೂಲರೂಪದಲ್ಲಿ ವಾಯ್ವಾದಿಗಳಿಂದ ಹುಟ್ಟಿ ಇಂದ್ರಿಯಗೋಚರವೆನಿಸುತ್ತವೆ. ೫೮೪

೩.೨೭.೩೭ ಆಕಾಶವು ಶಬ್ದತನ್ಮಾತ್ರವಾಗಿದೆ ಎಂದರೆ ಶಬ್ದ ಒಂದೇ ಆಕಾಶದಲ್ಲಿ ಸ್ವತಃ ಇರುವ ಗುಣ ಎಂದರ್ಥ. ಇಂದ್ರಿಯಗಳಿಗೆ ಪಂಚಭೂತಗಳಿಂದ ಉತ್ಪತ್ತಿ ಎಂದರೆ ಹಿಂದೆ ತೈಜಸಾಹಂಕಾರದಿಂದ ಹುಟ್ಟಿದ್ದ ಇಂದ್ರಿಯಗಳಿಗೇ ಪುನಃ ಭೂತಗಳಿಂದ ಉಪಚಯ. ವಸ್ತುತಃ ತೈಜಸಾಹಂಕಾರದಿಂದಲೂ ಇಂದ್ರಿಯಗಳಿಗೆ ಉಪಚಯವೆ. ಸೂಕ್ಷ್ಮರೂಪದಿಂದ ಇಂದ್ರಿಯಗಳು ಅನಾದಿ. ಭೂತಗಳಿಂದ ಅವುಗಳಿಗೆ ಬ್ರಹ್ಮಾಂಡದ ಹೊರಗೊಮ್ಮೆ ಒಳಗೆ ಇನ್ನೊಮ್ಮೆ ಹೀಗೆ ಎರಡು ಬಾರಿ ಉಪಚಯವಿದೆ. ೫೮೮

೩.೨೭.೩೯ ಬ್ರಹ್ಮವೈವರ್ತಪುರಾಣ ಹೇಳುವಂತೆ ಭೂತವಾಯ್ವಭಿಮಾನಿ ಪ್ರವಹವಾಯು ಮುಖ್ಯವಾಯುವಿನ ಆವೇಶಬಲದಿಂದ ಜ್ಞಾನಾನಂದ ಬಲಾದಿ ಸ್ವಯೋಗ್ಯ ಸರ್ವಗುಣಗಳನ್ನು ಪಡೆದಿದ್ದಾನೆ. ಇದೇ ವಾಯುವಿನ ಲಕ್ಷಣಗಳಲ್ಲಿ ಒಂದಾದ ಪ್ರಾಪ್ತಿ. ೫೯೦

೩.೨೭.೪೧ ರೂಪಲಕ್ಷಣಗಳಲ್ಲಿ ಒಂದಾದ 'ಗುಣತಾ' ಎಂದರೆ ಪ್ರಕಾಶತ್ವ. ಅಭಿಧಾನ ಗ್ರಂಥವು 'ಗುಣ' ಎಂದರೆ ಪ್ರಕಾಶ ಎನ್ನುತ್ತದೆ. ರೂಪದ ಇನ್ನೊಂದು ಲಕ್ಷಣವಾದ ತೇಜಸ್ತ್ವವೆಂದರೆ ಪ್ರಖರವಾಗಿ ಬೆಳಗುವುದೆಂದರ್ಥ. ೫೯೧

೩.೨೭.೪೩ ಜಲಲಕ್ಷಣವಾದ 'ಉಂದನ' ಎಂದರೆ ಬಿಂದುವಾಗಿರುವುದು. 'ಸ್ಯಂದನ' ಎಂದರೆ ಹರಿಯುವುದು ಎಂದು ಅಭಿಧಾನಗ್ರಂಥ ಹೇಳುತ್ತದೆ. ಜಲಕ್ಕೆ ಇನ್ನೊಂದು ಲಕ್ಷಣ ಭೂಯಸ್ತ್ವ ಎಂದರೆ ಅಧಿಕವಾಗಿರುವುದು. ಪಾರ್ಥಿವಾದಿ ಶರೀರಗಳಲ್ಲಿ ಒಟ್ಟಾರೆ ಪೃಥಿವೀತೇಜಸ್ಸುಗಳಿಗಿಂತ ಜಲಭಾಗವೇ ಅಧಿಕ. ೫೯೩

೩.೨೭.೪೮ ಪೃಥಿವೀಲಕ್ಷಣಗಳಲ್ಲಿ 'ಭಾವನಂ'ಎಂದರೆ ಸಸ್ಯಾದಿಗಳ ಉತ್ಪತ್ತಿಗೆ ಕಾರಣವಾಗುವುದು. 'ಬ್ರಹ್ಮಣಃ ಸ್ಥಾನಂ' ಎಂದರೆ ಪರಮಾತ್ಮ ಸಾಕ್ಷಾತ್ಕಾರ ಮೊದಲಿಗೆ ಶರೀರದಲ್ಲಿಯೆ ಆಗುತ್ತದೆ ಎಂದು. 'ಸದ್ವಿಶೇಷಣಂ' ಎಂದರೆ ವಿಶೇಷವಾಗಿ ವ್ಯಕ್ತವಾಗಿರುವುದು. ರಸಾದಿ ಐದೂ ಗುಣಗಳಿರುವುದರಿಂದ ಪೃಥಿವಿ ಇತರ ಭೂತಗಳಿಗಿಂತ ವಿಶೇಷವಾಗಿ ವ್ಯಕ್ತವಾಗಿರುತ್ತದೆ. 'ಸತ್' ಎಂದರೆ ವ್ಯಕ್ತ ಎಂದು ಬ್ರಹ್ಮಪುರಾಣ ಹೇಳುತ್ತದೆ. 'ಸರ್ವಸತ್ತ್ವ ಗುಣೋದ್ಭೇದಃ' ಎಂದು ಇನ್ನೊಂದು ಪೃಥಿವೀಲಕ್ಷಣ. ಜೀವರಸರ್ವಗುಣ ಸಂಸಾರಾವಸ್ಥೆಯಲ್ಲಿ ಶರೀರದಲ್ಲಿಯೇ ವ್ಯಕ್ತವಾಗುತ್ತದೆ ಎಂದು. ಪಾರ್ಥಿವ ಶರೀರವೂ ಪಾಂಚಭೌತಿಕವೆಂದೇ ವ್ಯವಹಾರವಿದ್ದರೂ ವಸ್ತುತಃ ಇಂದ್ರಿಯ ಜಾಠರಾಗ್ನಿ ಮುಂತಾದವುಗಳಲ್ಲಿರುವ ಜಲಾದಿಗಳನ್ನು ಹೊರತು ಪಡಿಸಿದರೆ ಪಾರ್ಥಿವಶರೀರದಲ್ಲಿ ಪೃಥಿವೀಭಾಗವೇ ಹೆಚ್ಚು. ಅದರಿಂದ ಶರೀರವು ಪಾರ್ಥಿವ. ಅದರ ಲಕ್ಷಣ ಪೃಥಿವಿಯ ಲಕ್ಷಣವಾಗುತ್ತದೆ. ೫೯೪

೩.೨೭.೫೪ ವಿರಾಟ್ ಪುರುಷನೆಂದರೆ ಚತುರ್ಮುಖಬ್ರಹ್ಮ. ಅವನು ಅಂಡದಿಂದ ಸ್ಥೂಲಶರೀರದಿಂದ ಹುಟ್ಟಿದ್ದಾನೆ. ಅದರಿಂದಲೇ ಅಂಡವು ಬ್ರಹ್ಮಾಂಡ ವೆನಿಸಿತು. ಚತುರ್ಮುಖನು ವಿಶೇಷವಾಗಿ ಪ್ರಕಾಶಿಸುವುದರಿಂದ ವಿರಾಟ್ ಎನಿಸಿದ್ದಾನೆ. ೫೯೭

೩.೨೭.೬೧ ಯಜ್ಞನಾಮಕರು ಇಬ್ಬರು. ರುಚಿಯಿಂದ ಆಕೂತಿಯಲ್ಲಿ ಅವತರಿಸಿದ ಭಗವಂತ ಮತ್ತು ಇಂದ್ರಪುತ್ರ ಎಂದು. ಭಗವಂತನಾವೇಶಯುಕ್ತನಾದ ಇಂದ್ರಪುತ್ರ ಯಜ್ಞನು ಪಾದಾಭಿಮಾನಿಯಾದ್ದರಿಂದ ಭಗವಂತನನ್ನೂ ಪಾದಾಭಿಮಾನಿ ಎನ್ನುವುದುಂಟು. ೫೯೮

೩.೨೭.೬೪ ಚೈತ್ತ್ಯನೆಂದರೆ ಚತುರ್ಮುಖಬ್ರಹ್ಮ. ಏಕೆಂದರೆ ಅವನು ತನ್ನ ಶರೀರದಲ್ಲಿ ಚಿತ್ತಾಭಿಮಾನಿಯಾಗಿ ತಾನೇ ಇನ್ನೊಂದು ರೂಪದಿಂದ ಜನಿಸಿದ. ಅವನಲ್ಲಿ ಅಂತರ್ಯಾಮಿಯಾಗಿ ಆವಿರ್ಭವಿಸಿದ್ದರಿಂದ ವಿಷ್ಣುವೂ ಚೈತ್ತ್ಯ ೫೯೯

೩.೨೭.೭೦ ವಿರಾಡ್ ಬ್ರಹ್ಮನ ಶರೀರದಲ್ಲಿ ಇಂದ್ರಿಯದೇವತೆಗಳು ಒಬ್ಬೊಬ್ಬರಾಗಿ ಪ್ರವೇಶಿಸಿ ತಮ್ಮ ಬಲ ಪ್ರದರ್ಶನ ಮಾಡುವಾಗ ಪಾದಾಭಿಮಾನಿ ಎನಿಸಿ ವಿಷ್ಣುವೂ ಪ್ರವೇಶಿಸಿದ್ದಾನೆ. ಆದರೆ ಬ್ರಹ್ಮನ ಶರೀರ ಏಳಲಿಲ್ಲ. ಏಕೆಂದರೆ ಇಂದ್ರಪುತ್ರಯಜ್ಞನಲ್ಲಿ ಅಂತರ್ಯಾಮಿಯಾಗಿ ಬ್ರಹ್ಮನ ಪಾದಗಳನ್ನು ವಿಷ್ಣು ಪ್ರವೇಶಿಸಿದ್ದರಿಂದ ತಾನು ಶಕ್ತನಾದರೂ ಇಂದ್ರಪುತ್ರ ಅಶಕ್ತನಾದ್ದರಿಂದ ಅವನ ಅಶಕ್ತಿ ತೋರುವುದಕ್ಕಾಗಿ ಬ್ರಹ್ಮಶರೀರವನ್ನು ಎಬ್ಬಿಸಲಿಲ್ಲ. ೬೦೦

೩.೨೭.೭೨ ಬುದ್ಧ್ಯಭಿಮಾನಿ ಬ್ರಹ್ಮನೆಂದರೆ ಚತುರ್ಮುಖನಲ್ಲ, ಬೃಹಸ್ಪತಿ. ಅವನಿಗೂ ಶ್ರುತಿಯಲ್ಲಿ ಬ್ರಹ್ಮನೆಂದು ವ್ಯವಹಾರವಿದೆ. ಅಭಿಧಾನಗ್ರಂಥದಲ್ಲಿಯೂ ಅವನಿಗೆ ಬ್ರಹ್ಮನೆಂದು ಹೆಸರಿದೆ. ೬೦೧

೩.೨೭.೭೩ ವಿರಾಡ್ ಬ್ರಹ್ಮ ತನ್ನ ಶರೀರದಿಂದ ಹೊರಗೆ ಹೋಗುವಾಗ ಒಂದು ಅಂಶದಿಂದ ಅಲ್ಲೇ ಸುಪ್ತನಾಗಿದ್ದ. ಇನ್ನೊಂದು ಅಂಶದಿಂದ ಹರಿವಾಯುಗಳೊಂದಿಗೆ ಹೊರಗೆ ಹೋಗಿದ್ದ. ಬಳಿಕ ಈ ಮೂವರು ಹೊರತು ಬೇರೆ ಎಲ್ಲರೂ ಸೇರಿ ಜೊತೆಯಾಗಿ ಪ್ರವೇಶಿಸಿದರೂ ಅವರಿಗೆ ಶರೀರವನ್ನು ಎಬ್ಬಿಸಲಾಗಲಿಲ್ಲ. ಈ ಶ್ಲೋಕದಲ್ಲಿ ಚಿತ್ತಾಭಿಮಾನಿ ಎಂದರೆ ಬ್ರಹ್ಮ. ಕ್ಷೇತ್ರಜ್ಞ ಅವನೊಳಗಿರುವ ವಿಷ್ಣು. ಮುಂದಿನ ಶ್ಲೋಕದಲ್ಲಿ ಪ್ರಾಣನೆಂದರೆ ಮುಖ್ಯವಾಯು. ೬೦೨

೩.೨೮.೫ ಅಜ್ಞಾನವು ಸುಪ್ತಿ, ಭ್ರಾಂತಿಯು ಸ್ವಪ್ನ ಎಂದು ಮಹಾಭಾರತ ಹೇಳಿದೆ. ೬೦೦

೩.೨೮.೧೧ ಬುಧ್ಯವಸ್ಥಾನ ಎಂದರೆ ಬುದ್ಧಿಯ ಜಾಗರಾದಿ ಅವಸ್ಥೆಯಲ್ಲ 'ಅವ – ಸ್ಥಾನ' ಬುದ್ಧಿ ಸರಿಯಾಗಿ ಕೆಲಸ ಮಾಡದ ಸ್ಥಿತಿ. ಅಂದರೆ ಸ್ವಪ್ನ ಸುಷುಪ್ತಿಗಳು. ೬೦೫

೩.೨೮.೧೨ ಇಲ್ಲಿ ಅಸತ್ ಎಂದರೆ ಮಿಥ್ಯೆಯಲ್ಲ, ನಶ್ವರವೂ ಅಲ್ಲ, ಮಹಾಪ್ರಳಯ. 606

೩.೨೮.೧೪ ಪರಮಾತ್ಮನ ಅಪರೋಕ್ಷವಾಗಲು ಮೊದಲಿಗೆ ಹೃದಯದಲ್ಲಿ ತಮಗೆ ಬಿಂಬಭೂತರಾದ ಗುರುಗಳ ದರ್ಶನವಾಗಿ ಶೇಷದೇವನ ದರ್ಶನವಾದ ಬಳಿಕ ಶೇಷನಿಂದ ಬ್ರಹ್ಮನ ದರ್ಶನ, ಕೊನೆಯಲ್ಲಿ ಬಿಂಬರೂಪಿ ಪರಮಾತ್ಮನ ದರ್ಶನವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೬೦೭

೩.೨೮.೧೫ ಪ್ರಳಯದಲ್ಲಿ ಜೀವರೆಲ್ಲರೂ ಸುಪ್ತರಾಗಿರುವಾಗ ಎಚ್ಚೆತ್ತಿರುವವನು ಸರ್ವಜ್ಞ ಹರಿಯೊಬ್ಬನೆ. ಮರಣದಲ್ಲಿ ಮತ್ತು ಪ್ರಳಯದಲ್ಲಿ ಜೀವರು ತಮ್ಮನ್ನೂ ಕಾಲ ಮುಂತಾದುವನ್ನೂ ತಿಳಿಯುತ್ತಾರೆ. ಆದರೂ ಅದೆಲ್ಲವನ್ನೂ ಮರೆತು ನಾನೇನೂ ತಿಳಿಯಲಿಲ್ಲ ಎಂದು ಭ್ರಮಿಸುತ್ತಾರೆ. ಅವರಿಗೆ ಸರ್ವಜ್ಞ ಹರಿಯೇ ಆಶ್ರಯ ಎಂದು ಹರಿವಂಶದಲ್ಲಿ ಹೇಳಿದೆ. ೬೦೯

೩.೨೯.೧ ಜಗದ್ವೃಕ್ಷಕ್ಕೆ ಬೀಜದಂತಿರುವವನು ಮೂಲಕಾರಣ ವಿಷ್ಣು. ಬೇರೆ ದೇವತೆಗಳು ಶಾಖೋಪಶಾಖೆಗಳಂತೆ. ಅದರಿಂದ ಸಬೀಜಯೋಗವೆಂದರೆ ವಿಷ್ಣೂಪಾಸನೆ ಎಂದು ಕೂರ್ಮಪುರಾಣ ಹೇಳಿದೆ. ೬೧೫

೩.೨೯.೬ ಅಭ್ಯಾಸಬಲದಿಂದ ಮನಸ್ಸು ಅಪ್ರಯತ್ನವಾಗಿ ಧ್ಯಾನಾವಸ್ಥೆಗೆ ಏರಿ ಸ್ಥಿರವಾಗಿ ನಿಲ್ಲುವುದೇ ಸಮಾಧಿ. ೬೧೫

೩.೨೯.೨೦ ಭಗವಂತನ ಸರ್ವಾಂಗಗಳನ್ನೂ ಒಮ್ಮೆಲೆ ಧ್ಯಾನಮಾಡುವಲ್ಲಿ ಅಶಕ್ತಿ ಕಂಡು ಬಂದರೆ ಒಂದೊಂದೇ ಅಂಗವನ್ನು ಧ್ಯಾನಿಸಬೇಕು. ೬೧೬

೩.೨೯.೨೭ ಚಿತ್ತಾಭಿಮಾನಿಯಾದ್ದರಿಂದ ಚೈತ್ತ್ಯನೆನಿಸಿದ ಬ್ರಹ್ಮ ಕೌಸ್ತುಭಮಣಿಯಾಗಿ ಹರಿಯ ಕಂಠದಲ್ಲಿ ಶೋಭಿಸುತ್ತಾನೆ ಎಂದು ಭಾಗವತತಂತ್ರದಲ್ಲಿ ಹೇಳಿದೆ. ೬೧೭

೩.೨೯.೨೯ ಭಗವಂತನ ಎದೆ ಶ್ರೀ ಎನಿಸಿದ ಲಕ್ಷ್ಮಿ ಇರುವ ಸ್ಥಾನ. ಅವನ ಮುಖವೂ ಶ್ರೀ ಎನಿಸಿದ ಅವನ ಸ್ವರೂಪಸೌಂದರ್ಯದ ಸ್ಥಾನ. ಅದೂ ಶ್ರೀನಿಕೇತವೆ. ಮುಖ್ಯವಾಗಿ ಶ್ರೀ ಎಂದರೆ ಭಗವಂತನ ಸ್ವರೂಪಸೌಂದರ್ಯವೆ. ಅದರ

ವಿಶೇಷಸನ್ನಿಧಾನದಿಂದ ಲಕ್ಷ್ಮಿಯು ಶ್ರೀಎನಿಸಿದ್ದಾಳೆ. ಅಥವಾ ಭಗವಂತನ ಸ್ತ್ರೀರೂಪ ಮುಖ್ಯವಾಗಿ ಶ್ರೀ ಎನಿಸುತ್ತದೆ. ಅದರ ವಿಶೇಷ ಸನ್ನಿಧಾನದಿಂದ ಲಕ್ಷ್ಮಿಯು ಶ್ರೀಎನಿಸಿದ್ದಾಳೆ. ೬೧೯

೩.೨೯.೩೨ 'ನ ಪೃಥಗ್ ದಿದೃಕ್ಷೇತ್' ಎಂದರೆ ಭಗವಂತನನ್ನು ತನಗಿಂತ ಬೇರೆಯಾಗಿ ಕಾಣಬಾರದೆಂದಲ್ಲ. ಅವನನ್ನು ಹೊರತು ಬೇರೇನನ್ನೂ ಧ್ಯಾನದಲ್ಲಿ ಕಾಣಬಾರದು. ೬೨೦

೩.೨೯.೩೩ 'ಚಿತ್ತಬಡಿಶಂ ವಿಯುಂಕ್ತೇ' ಎಂದರೆ ಚಿತ್ತ ಎಂಬ ಗಾಳದಿಂದ ಮೀನಿನಂತೆ ಭಗವಂತನನ್ನು ವಶಪಡಿಸಿಕೊಂಡು ಧ್ಯಾನಿಸಿ ಕೊನೆಗೆ ಆ ಚಿತ್ತವನ್ನು 'ವಿಯುಂಕ್ತೇ' ಭಗವಂತನಿಂದಲೂ ಈಚೆಗೆ ತರಬೇಕು, ನಿರ್ವಿಷಯ ಗೊಳಿಸಬೇಕೆಂದು ವ್ಯಾಖ್ಯಾನಿಸುವುದು ಸರಿಯಲ್ಲ. 'ವಿಯುಂಕ್ತೇ' ಎಂದರೆ ವಿಶೇಷವಾಗಿ ಚಿತ್ತವನ್ನು ಭಗವಂತನಲ್ಲಿಯೇ ನೆಲೆಗೊಳಿಸ ಬೇಕೆನ್ನುವುದು ಯುಕ್ತ. ೬೨೨

೩.೨೯.೩೪ ಮುಕ್ತಾಶ್ರಯಂ ಎಂದರೆ ನಿತ್ಯಮುಕ್ತನಾದ ಪರಮಾತ್ಮನನ್ನು ವಿಷಯೀಕರಿಸುವ ಮನಸ್ಸು. 'ಸ್ವಚಿತ್ತಂ' ಎಂದರೆ ಸ್ವ– ಸ್ವರೂಪಭೂತವಾದ 'ಚಿತ್' ಚಿನ್ಮಯಶರೀರದಲ್ಲಿಯೇ ಇದು ನನ್ನ ಶರೀರವೆಂಬ ಅಭಿಮಾನದಿಂದ 'ತ' ವ್ಯಾಪಿಸಿದ ಮನಸ್ಸು. ಹೀಗೆ ಸ್ವರೂಪಶರೀರದಲ್ಲಿಯೇ ಅಭಿಮಾನಪಡುವುದರಿಂದ 'ನಿರ್-ವಾಣ' ಬಾಹ್ಯಶರೀರಾಭಿಮಾನವಿಲ್ಲದ ನಿರ್ವಾಣಸ್ಥಿತಿ ಸಾಧ್ಯ. ೬೨೩

೩.೨೯.೩೫ 'ಅಸತಿ ಕರ್ತರಿ' ಎಂದರೆ ಜೀವನಲ್ಲಿ ಕರ್ತೃತ್ವ ಮಿಥ್ಯೆ ಎಂದರ್ಥವಲ್ಲ. ಅಸ್ವತಂತ್ರಕರ್ತನಾದ್ದರಿಂದ ಜೀವನು ಅಸತ್ಕರ್ತ. ಸ್ವತಂತ್ರಕರ್ತನಾದ್ದರಿಂದ ಪರಮಾತ್ಮ ಸತ್ಕರ್ತ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. 'ದುಃಖಯೋಃ' ಎಂಬಲ್ಲಿ 'ದುಃ' ಎಂದರೆ ದುಃಖ. 'ಖ' ಎಂದರೆ ಸುಖ. ದುಃಖ ಸುಖಗಳೆರಡನ್ನೂ ಹರಿ ಕೊಡುತ್ತಾನೆ ಎಂಬ ಅಭಿಪ್ರಾಯದಿಂದ 'ದುಃಖಗಳಿಗೆ ಕರ್ತ' ಎನಿಸುತ್ತಾನೆ ಎಂದು ಹರಿವಂಶ ಹೇಳಿದೆ. ೬೨೭

೩.೨೯.೪೧ ಪರಮಾತ್ಮನನ್ನು ಅನನ್ಯ ಭಾವದಿಂದ ಕಾಣುವುದೆಂದರೆ ಜೀವಬ್ರಹ್ಮೈಕ್ಯಭಾವನೆಯಲ್ಲ. ಪರಮಾತ್ಮನ ರೂಪಗುಣಾದಿಗಳಿಗೇ ಪರಸ್ಪರ ಐಕ್ಯಭಾವನೆ. 'ಭೂತೇಷು ತದಾತ್ಮತಾಂ' ಎಂದರೂ ಭೂತಗಳು ಪರಮಾತ್ಮಸ್ವರೂಪವೆಂದಲ್ಲ. ಭೂತಗಳಿಗೆ ಪರಮಾತ್ಮನು ಆತ್ಮ ಅಂದರೆ ಸ್ವಾಮಿ ಎಂದರ್ಥ. ೬೨೯

೩.೨೯.೪೩ 'ಪ್ರಕೃತಿಂ ಪರಾಭಾವ್ಯ' ಎಂದರೆ ಪರಮಾತ್ಮನ ಅನುಗ್ರಹದಿಂದ ಜೀವನು ಪ್ರಕೃತಿಯನ್ನು ಪರಾಭವಗೊಳಿಸುತ್ತಾನೆ ಎಂದು ಅಭಿಪ್ರಾಯವಲ್ಲ. ಪರಮಾತ್ಮನೇ ಪ್ರಕೃತಿಯನ್ನು ಮೀರಿ ಉತ್ತಮನಾಗಿ ನಿಂತಿದ್ದಾನೆ ಎಂದರ್ಥ. ಹಿಂದಿನ ಶ್ಲೋಕದಲ್ಲಿ 'ಸರ್ವಭೂತೇಷು ಚಾತ್ಮಾನಂ' ಎನ್ನುವುದಕ್ಕೂ ಜೀವನು ಎಲ್ಲ ಜೀವ ಜಡಗಳಲ್ಲಿ ಇರುತ್ತಾನೆ ಎಂದರ್ಥವಲ್ಲ. ಪರಮಾತ್ಮ ಸರ್ವಾಂತರ್ಯಾಮಿಯಾಗಿದ್ದಾನೆ ಎಂದರ್ಥ. ೬೩೧

೩.೩೦.೨ 'ಯನ್ಮೂಲಂ' ಎಂದರೆ 'ಮಹಾದಿಗಳ ಲಕ್ಷಣವು ಭಕ್ತಿಯೋಗಕ್ಕೆ ಮೂಲ ಅಥವಾ ಭಕ್ತಿಯೋಗವು ಲಕ್ಷಣದ ಮೂಲ ಉದ್ದೇಶ, ಆದರಿಂದ ಲಕ್ಷಣ ಹೇಳಿದ ಮೇಲೆ ಈಗ ಭಕ್ತಿಯೋಗವನ್ನು ಹೇಳೆಂದು ದೇವಹೂತಿ ಕಪಿಲನಿಗೆ ಹೇಳುತ್ತಿರುವ'ಂತೆ ಕಾಣಬಹುದು. ವಸ್ತುತಃ 'ಲಕ್ಷಣಕ್ಕೆ ಸಾಂಖ್ಯಶಾಸ್ತ್ರವು ಮೂಲ. ಅದಕ್ಕನುಸಾರವಾಗಿಯೇ ಲಕ್ಷಣವನ್ನು ಹೇಳಿರುವಿ' ಎಂದು ದೇವಹೂತಿ ಕಪಿಲನನ್ನು ಪ್ರಶಂಸಿಸುತ್ತಿದ್ದಾಳೆ. ೬೩೪

೩.೩೦.೧೧ 'ಅಪೃಥಗ್‌ಭಾವಃ' ಎಂದು ಪದವಿಭಾಗ. ಭಗವಂತನ ರೂಪಾದಿಗಳಿಗೆ ಪರಸ್ಪರ ಭೇದವೈಲಕ್ಷಣ್ಯಗಳನ್ನು ತಿಳಿಯುವನು ಪೃಥಗ್ಭಾವನೆನಿಸುತ್ತಾನೆ. ಅವನು ರಾಜಸ. ಹಾಗೆ ತಿಳಿಯದಿರುವವನು 'ಅಪೃಥಗ್ಭಾವ'ನು ಸಾತ್ವಿಕ. ೬೩೬

೩.೩೦.೨೫ ಅಪರೋಕ್ಷ ಬರುವವರೆಗೆ ಮಾತ್ರ ವಿಗ್ರಹಾರಾಧನೆ, ಅನಂತರ ಬೇಡ ಎಂದು ಈ ಶ್ಲೋಕ ಹೇಳುತ್ತಿಲ್ಲ. ಅಪರೋಕ್ಷವಾದ ಬಳಿಕವೇ ವಿಗ್ರಹಾರಾಧನೆ ಮಾಡಬೇಕೆಂದೂ ಹೇಳುತ್ತಿಲ್ಲ. ಅಪರೋಕ್ಷವಾಗುವವರೆಗೆ ವಿಗ್ರಹಾರಾಧನೆ ತಪ್ಪದೆ ಮಾಡಬೇಕು. ಮಾಡದಿದ್ದರೆ ದೋಷವಿದೆ. ಅನಂತರ, ಮಾಡಿದರೆ ಮಹಾಫಲ, ಮಾಡದಿದ್ದರೆ ದೋಷವಿಲ್ಲ ಎಂದು ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೬೩೮

೩.೩೦.೨೬ ತನ್ನ ಮತ್ತು ಪರರ ಅಂತರ್ಯಾಮಿ ಭಗವದ್ರೂಪಗಳಿಗೆ ಪರಸ್ಪರ ಭೇದ ವೈಲಕ್ಷಣ್ಯಗಳನ್ನು ತಿಳಿಯುವವನಿಗೆ ಇಹಪರಗಳೆರಡರಲ್ಲಿಯೂ ಮಹಾ ಅನರ್ಥವೆಂದು ಈ ಶ್ಲೋಕ ಹೇಳುತ್ತಿದೆ. ೬೩೯

೩.೩೦.೨೮ ಜೀವರು ಸ್ವರೂಪದಲ್ಲಿಯೆ ಪಶುವೃಕ್ಷಾದಿರೂಪಗಳಿಂದ ಇದ್ದಾರೆ. ಸಂಸಾರದಲ್ಲಿ ಮಾತ್ರ ಕರ್ಮಕ್ಕನುಗುಣವಾಗಿ ಬೇರೆಬೇರೆ ಬಗೆಯ ಶರೀರಗಳು ಬರುತ್ತವೆ. ಮುಕ್ತಿಯಲ್ಲಿ ಸ್ವರೂಪಶರೀರ ಮಾತ್ರ ಇರುತ್ತದೆ. ಸ್ವರೂಪಾನುಗುಣವಾಗಿ ತಾರತಮ್ಯ ತಿಳಿಯಬೇಕು. ಅದು ಹೀಗೆ–ಸ್ಥಾವರಜೀವರಿಗಿಂತ ಜಂಗಮರು ಮೇಲು. ಅವರಲ್ಲಿ ಮಾನವರು.

೩.೩೧.೨ 'ಪೇಶೀ ಅಂಡಂ ವಾ' ಮಾಂಸದ ಮುದ್ದೆ ಅಥವಾ ಮೊಟ್ಟೆ ಎಂದರೆ ಮನುಷ್ಯಸ್ತ್ರೀಯ ಗರ್ಭದಲ್ಲಿ ಮೊಟ್ಟೆಯೂ ಜನಿಸಬಹುದೆಂದರ್ಥವಲ್ಲ. ಕಾಮ್ಯಕರ್ಮಿಗಳಿಗೆ ಬೇರೆಬೇರೆ ಯೋನಿಗಳಲ್ಲಿ ಜನನಪ್ರಸಂಗವಿದೆ ಎನ್ನಲು ಹಾಗೆ ಹೇಳುವುದುಂಟೆಂದು ಷಾಡ್ಗುಣ್ಯಗ್ರಂಥದಲ್ಲಿ ಹೇಳಿದೆ. ೬೫೫

೩.೩೧.೧೨ 'ಸಪ್ತವಧ್ರಿಃ' ಎಂಬಲ್ಲಿ ವಧ್ರಿ ಎಂದರೆ ಹಗ್ಗವಲ್ಲ. ಇಂದ್ರಿಯಗಳಿಗೆ ವಧ್ರಿ, ಹೃಷೀಕ ಎಂದು ಹೆಸರುಗಳು ಶಬ್ದನಿರ್ಣಯದಲ್ಲಿ ಇವೆ. ಆದರಿಂದ ಪಂಚಜ್ಞಾನೇಂದ್ರಿಯಗಳು ಮನಸ್ಸು ಮತ್ತು ಬುದ್ಧಿ ಎಂದು ಏಳು ಇಂದ್ರಿಯಗಳೇ ಸಪ್ತವಧ್ರಿಗಳು. ೬೫೬

೩.೩೧.೧೮ 'ಕತಮಃ' ಎಂದರೆ ಯಾರು ಎಂದರ್ಥವಲ್ಲ. ಪರಿಪೂರ್ಣಸುಖ ಉಳ್ಳ ಪರಮಾತ್ಮ ಎಂದರ್ಥ. ೬೫೬

೩.೩೧.೨೦ 'ಅಶರೀರವತ್' ಎಂದರೆ ಪ್ರಾಕೃತ ಶರೀರರಹಿತನಾದ ಪರಮಾತ್ಮನಿಂದ ಹೇಗೋ ಹಾಗೆ ಜೀವನಿಂದಲೂ ಜೀವಶರೀರವನ್ನು ಸ್ಫುಟವಾಗಿ ಬೇರೆ ಎಂದು ಕಾಣುತ್ತಾನೆ, ಗರ್ಭವಾಸದಲ್ಲಿರುವ ಉತ್ತಮ ಸಾತ್ವಿಕಚೇತನ. 'ಅಸ್ಯ ದೇಹೇ' ಎಂದು ಜೀವಶರೀರವನ್ನು ಅಶರೀರನಾದ ಪರಮಾತ್ಮನ ಶರೀರ ಎಂದು ಹೇಳಿದ್ದು ಅಯುಕ್ತವೇನಲ್ಲ. ಜೀವಶರೀರವೂ ಪರಮಾತ್ಮನ ಅಧೀನವಾದ್ದರಿಂದ ಪರಮಾತ್ಮನ ಶರೀರವೇ ತಾನೆ? ಈ ರೀತಿಯ ತತ್ವಜ್ಞಾನ ಗರ್ಭದಲ್ಲಿರುವಾಗ ಬರುವುದು ದೇವತೆಗಳಿಗೆ ಮತ್ತು ಋಷಿಗಳಿಗೆ ಮಾತ್ರ. ಇತರರಿಗೆ ಹಿಂದಿನ ಜನ್ಮಗಳ ಸ್ಮರಣೆ ಮಾತ್ರ ಬರುತ್ತದೆ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ೬೫೭

೩.೩೧.೩೫ 'ಖಂಡಿತಾತ್ಮಾವಸಾಯಿಷು' ಎಂದರೆ ಶರೀರದಲ್ಲಿ ಅಲ್ಪನಾದ ಜೀವ ಮಾತ್ರ ಇರುತ್ತಾನೆ, ಬೇರೆ ಪೂರ್ಣನಾದ ಒಬ್ಬ ಪರಮಾತ್ಮ ನಿಯಾಮಕನಾಗಿ ಇಲ್ಲ ಎಂದು ತಿಳಿಯುವವರು. ಅವರ ಸಂಗ ಮಾಡಬಾರದು. ೬೬೧

೩.೩೧.೩೮ 'ಸ್ತ್ರೀಯು ಭಗವಂತನ ಮಾಯೆ' ಎನ್ನುವಲ್ಲಿ ಮಾಯೆ ಎಂದರೆ ಭಗವದಧೀನ ಎಂದಿಷ್ಟೇ ಅರ್ಥ. 'ಮಯ' ಎಂದರೆ ಉತ್ತಮ, ಉತ್ತಮನಾದ ಭಗವಂತ. ಅವನಿಗೆ ಅಧೀನವಾದುದು ಎಲ್ಲವೂ ಮಾಯೆ ಎಂದು ಷಾಡ್ಗುಣ್ಯದಲ್ಲಿ ಹೇಳಿದೆ. ೬೬೧

೩.೩೧.೪೦ ಒಳ್ಳೆಯ ಸ್ತ್ರೀ ಪುರುಷರ ಒಡನಾಟ ಎಂದೂ ಕೆಟ್ಟದಲ್ಲ. ಆದರಿಂದ ಒಳ್ಳೆಯದೇ ಆಗುತ್ತದೆ. ದುಷ್ಟ ಸ್ತ್ರೀಪುರುಷರ ಒಡನಾಟವೇ ದುಷ್ಪರಿಣಾಮ ಉಂಟುಮಾಡುವಂಥದ್ದು ಎಂದು ವರಾಹಪುರಾಣ ಹೇಳಿದೆ. ೬೬೩

೩.೩೨.೪೪ ಜೀವಭೂತೇನ ಎಂದರೆ ಜೀವನ ಕರ್ಮದಿಂದ ಹುಟ್ಟಿದ ಶರೀರದಿಂದ ಜೀವ ಪರಲೋಕಪ್ರಯಾಣ ಮಾಡುತ್ತಾನೆ. ೬೬೪

೩.೩೨.೪೭ 'ಚಕ್ಷುಷಃ ದ್ರಷ್ಟುಃ' ಚಕ್ಷುರಿಂದ್ರಿಯದಿಂದ ಕಾಣುವ ಜೀವನ ದ್ರಷ್ಟೃತ್ವವನ್ನೇ ಚಕ್ಷುರಿಂದ್ರಿಯಗೋಲಕಗಳ ದರ್ಶನಯೋಗ್ಯತೆ ಎಂದು ವ್ಯವಹರಿಸುತ್ತಾರೆ. ಹಾಗೆಯೆ ದೇಹ ನಾಶವಾದಾಗ ಜೀವ ಸತ್ತನೆಂದು ವ್ಯವಹಾರಮಾತ್ರ. ಆಗಲೂ ಅವನಿಗೆ ಶಾರೀರಿಕಕ್ರಿಯೆಗಳನ್ನು ನಡೆಸುವ ಸಾಮರ್ಥ್ಯವಿದೆ. ೬೬೫

೩.೩೨.೪೯ ಜೀವೇಶ್ವರರ ಯಥಾರ್ಥಜ್ಞಾನ ಮೋಕ್ಷಸಾಧನ. ಈ ಜ್ಞಾನ ಬಂದಾಗ ದೇಹಾದಿಗಳಲ್ಲಿ ಆಸಕ್ತಿ ತೊಲಗುವುದು. ಆಸಕ್ತಿನಿಮಿತ್ತಕವಾದ ಸುಖಾದ್ಯನುಭವರೂಪವಾದ ಸಂಸಾರ ಚೇತನನಿಗೆ ಇಲ್ಲವಾಗುವುದು. ಚೇತನನಾದ ಜೀವನಿಗೇ ಅದು ಇಲ್ಲವೆಂದರೆ ಅಚೇತನವಾದ ದೇಹಕ್ಕೆ ಉಂಟೆ? ಹೀಗಾಗಿ ಸಂಸಾರವೇ ಇಲ್ಲ. ೬೬೬

೩.೩೩.೩ ವಿಷ್ಣೂಪಾಸನೆಯಿಂದ ಪೂರ್ತಿ ವಿಮುಖನಾದವನಿಗೆ ಯಾಗದಿಂದ ಸ್ವರ್ಗವಿದೆ ಎನ್ನಬಾರದು. ವಾಮನಪುರಾಣ ಹೇಳುತ್ತದೆ– ಸ್ವಲ್ಪವಾದರೂ ವಿಷ್ಣುಭಕ್ತಿ ಇದ್ದು ಯಾಗ ಮಾಡುವವನಿಗೇ ಸ್ವರ್ಗ ಹೊರತು ಸರ್ವಥಾ ಭಕ್ತಿಶೂನ್ಯನಿಗೆ ಯಾಗದಿಂದಲೂ ನರಕವೇ ಎಂದು. ಅದರಿಂದ 'ಭಗವದ್ಧರ್ಮಾತ್ ಪರಾಙ್ಮುಖಃ' ಎಂದರೆ ಪೂರ್ತಿಯಾಗಿ ವಿಷ್ಣುಧರ್ಮವನ್ನು ಆಚರಿಸದವನು ಎಂದರ್ಥ. ೬೬೯

೩.೩೩.೧೨ 'ಭೇದದೃಷ್ಟ್ಯಾ ಅಭಿಮಾನೇನ ಯಥಾಪೂರ್ವಂ ಪ್ರಜಾಯತೇ' ಎಂಬುದನ್ನು ಸ್ಕಾಂದಪುರಾಣಾನುಸಾರ ಹೀಗೆ ಸರಿಯಾಗಿ ತಿಳಿಯಬೇಕು– ಚತುರ್ಮುಖನು ಬ್ರಹ್ಮಪ್ರಳಯಕಾಲದಲ್ಲಿ ದೇವತೆಗಳೊಂದಿಗೆ ಹರಿಯುದರವನ್ನು ಪ್ರವೇಶಸಿ ಸೃಷ್ಟಿಕಾಲದಲ್ಲಿ ಹೊರಗೆ ಶ್ವೇತದ್ವೀಪ ವ್ಯಕ್ತವಾದಾಗ ಅಲ್ಲಿಗೆ ಬಂದು ದಿವ್ಯಭೋಗಗಳನ್ನು ಅನುಭವಿಸುತ್ತಾನೆ. ಪುನಃ ಬ್ರಹ್ಮಪ್ರಳಯ ಬಂದಾಗ ಹರಿಯ ಉದರವನ್ನೇ ಪ್ರವೇಶಿಸಿ ಅಲ್ಲಿ ಸ್ವರೂಪಾನಂದವನ್ನು ಅನುಭವಿಸುತ್ತಾನೆ. ಹೀಗೆ ಹರಿಯುದರ ಪ್ರವೇಶನಿರ್ಗಮನಗಳು ಸದಾ ನಡೆಯುತ್ತವೆ. ಮುಕ್ತಿಯಲ್ಲಿಯೂ 'ಯಥಾಪೂರ್ವಂ' ಸಂಸಾರದಲ್ಲಿ ಹೇಗೋ ಹಾಗೆಯೆ ಪ್ರಜಾಯತೇ ತಾರತಮ್ಯಯುಕ್ತನಾಗಿಯೆ ಜೀವನು ಸ್ವರೂಪಶರೀರದಲ್ಲಿ ವ್ಯಕ್ತನಾಗುತ್ತಾನೆ. 'ಅಭಿ-ಮಾನೇನ' ಎಂದರೆ ಸ್ವಯೋಗ್ಯಪೂರ್ಣಜ್ಞಾನದಿಂದ ಎಂದರ್ಥ. 'ಅಗುಣವ್ಯತಿಕರ'ವೆಂದರೆ ಗುಣವೈಷಮ್ಯಜನ್ಯವಲ್ಲದ ಅಪ್ರಾಕೃತವಾದ

ಶ್ವೇತದ್ವೀಪ. 'ಗುಣವ್ಯತಿಕರೇ ಅಸತಿ' ಎಂದರೆ ಗುಣಕಾರ್ಯವಾದ ಪ್ರಪಂಚ ಲಯಹೊಂದುವಾಗ. ೬೭೦

೩.೩೩.೧೬ ಸ್ವಲ್ಪವಾದರೂ ವಿಷ್ಣುಭಕ್ತಿ ಇದ್ದು ಶ್ರಾದ್ಧಾದಿಸತ್ಕರ್ಮ ಮಾಡಿದರೆ ಪಿತೃಲೋಕ ಪ್ರಾಪ್ತಿ ಉಂಟು. ಆದರೂ ಆ ಪುಣ್ಯತೀರಿದೊಡನೆ ಭೂಮಿಗೆ ಬಂದು ತಮ್ಮ ಸಂತಾನದಲ್ಲಿ ಜನಿಸಬೇಕಾಗುತ್ತದೆ. ಭಕ್ತಿಶೂನ್ಯನಿಗೆ ನರಕವೇ ಗತಿ. ಭಕ್ತಿಯುಕ್ತರು ಮೋಕ್ಷ ಯೋಗ್ಯರು. ಭಕ್ತಿಶೂನ್ಯರು ನರಕಭಾಗಿಗಳು. ದ್ವೇಷಿಗಳು ತಮೋಯೋಗ್ಯರು. ೬೭೪

೩.೩೩.೨೮ ಬ್ರಹ್ಮ ಪ್ರಪಂಚರೂಪನಾಗಿ ಭ್ರಾಂತಿಯಲ್ಲಿ ಕಾಣುತ್ತಾನೆ ಎಂದರ್ಥವಲ್ಲ. ಮತ್ಸ್ಯಾದಿ ಅವತಾರರೂಪವು ಅಜ್ಞರಿಗೆ ಭ್ರಾಂತಿಯಲ್ಲಿ ಭೌತಿಕ ಶರೀರವಾಗಿ ಕಾಣಿಸುತ್ತದೆ, ಅದನ್ನೆ ನಂಬಿದರೆ ತಮಸ್ಸು ಪ್ರಾಪ್ತವಾಗುತ್ತದೆ ಎಂದು ಬ್ರಹ್ಮಪುರಾಣ ಹೇಳಿದೆ. ೬೭೭

೩.೩೩.೨೯ ಮಹಾನಹಂಕಾರಃ ಎಂದು ಮುಂತಾಗಿ ಜಡಪದಾರ್ಥಗಳನ್ನು ಬ್ರಹ್ಮಸ್ವರೂಪ ಎನ್ನುತ್ತಿಲ್ಲ. ಜಡವಾದ ಮಹದಾದಿಗಳು ಬ್ರಹ್ಮಾದಿದೇವತೆಗಳ ಅಭಿಮಾನಕ್ಕೊಳಪಟ್ಟವುಗಳು. ಆ ದೇವತೆಗಳ ಶರೀರಗಳೂ ಜಡವೇ. ಹಾಗೇ ಭಗವಂತನ ಅವತಾರಶರೀರಗಳೂ ಜಡ ಎಂದು ತಿಳಿಯಬಾರದು. ಆದರೂ ಜಡವೆಂದು ಅಜ್ಞರು ಭ್ರಾಂತಿಯಿಂದ ತಿಳಿಯುತ್ತಾರೆ ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ. ೬೭೮

೩.೩೩.೩೨ ಜ್ಞಾನಯೋಗ ಭಕ್ತಿಯೋಗಗಳಿಗೆ ಎರಡಕ್ಕೂ ಒಂದೇ ಗಮ್ಯ ಹೀಗೆ– ಜ್ಞಾನವೆಂದರೆ ಭಕ್ತಿಶೂನ್ಯವಾದ ನಿರ್ಗುಣಬ್ರಹ್ಮಜ್ಞಾನವಲ್ಲ. ಭಕ್ತಿ ಎಂದರೂ ಜ್ಞಾನಶೂನ್ಯವಾದ ಪ್ರೀತಿಯಲ್ಲ. ಪ್ರೀತಿಪೂರ್ವಕ ಜ್ಞಾನವೇ ಜ್ಞಾನಯೋಗ. ಜ್ಞಾನಪೂರ್ವಕಪ್ರೀತಿಯೇ ಭಕ್ತಿಯೋಗ. ಜ್ಞಾನವಿದ್ದರೆ ಭಕ್ತಿ ಬರುತ್ತದೆ. ಭಕ್ತಿ ಇದ್ದರೆ ಜ್ಞಾನ ಬರುತ್ತದೆ. ಎರಡಕ್ಕೂ ಭಗವಂತನೇ ಗಮ್ಯ. ಆದರಿಂದ ಎರಡರಲ್ಲಿ ಒಂದಿದ್ದರೂ ಇನ್ನೊಂದು ಇದ್ದೇ ಇರುವುದರಿಂದ ಮುಕ್ತಿಲಾಭ ನಿಶ್ಚಿತವೆಂದು ಹರಿವಂಶದಲ್ಲಿ ಹೇಳಿದೆ. ೬೮೦

೩.೩೪.೨ 'ಭೂತೇಂದ್ರಿಯಾರ್ಥಾತ್ಮಮಯಂ' ಎಂದರೆ ಪಂಚಭೂತಗಳು ಇಂದ್ರಿಯಗಳು ಶಬ್ದಾದಿವಿಷಯಗಳು ಮತ್ತು ಮನಸ್ಸುಗಳ ಅಭಿಮಾನಿಗಳಿಗಿಂತ 'ಮಯ' ಉತ್ತಮ ಭಗವಂತ ಎಂದರ್ಥ. ಪ್ರಧಾನಕ್ಕಿಂತ ಉತ್ತಮನಾದ್ದರಿಂದ ಹರಿ 'ಪ್ರಧಾನಮಯ'ನೆಂದು ವರಾಹಪುರಾಣವು ಹೇಳುವುದರಿಂದ ಇಲ್ಲಿಯೂ ಮಯ ಎಂದರೆ ಉತ್ತಮ. ೬೮೩

೩.೩೪.೫ 'ದೇಹತಂತ್ರಃ' ಹಿಂದೆ ಅಗೋಚರವಾಗಿದ್ದ ನಿನ್ನ ಸ್ವರೂಪಶರೀರವನ್ನೇ ನೀನು ಈಗ ಜನರ ಕಣ್ಣಿಗೆ ಪ್ರಕಟಗೊಳಿಸಿರುವಿ ಎಂದು ದೇವಹೂತಿ ಕಪಿಲನನ್ನು ಸ್ತುತಿಸುತ್ತಾಳೆ. 'ತಂತ್ರ' ಎಂದರೆ ಪ್ರಕಟಗೊಳಿಸುವುದೆಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಿದೆ. ೬೮೪

೩.೩೪.೨೬ 'ನಿವೃತ್ತಜೀವಭಾವತ್ವಾತ್' ಎಂಬಲ್ಲಿ ಹೇಳಿದ ಜೀವಭಾವನಿವೃತ್ತಿ ಎಂದರೆ ಹೀಗೆ– ಜೀವೋಪಾಧಿಗಳಾದ ಲಿಂಗಶರೀರ ಅವಿದ್ಯಾ ಕಾಮಕರ್ಮಾದಿಗಳು ಲಿಂಗಭಂಗ ಪರ್ಯಂತ ಇದ್ದೇ ಇರುತ್ತವೆ. ಆದರೂ ಅಪರೋಕ್ಷಪ್ರಭಾವ ದಿಂದ ಅವು ಸುಟ್ಟಬಟ್ಟೆಯಂತೆ ಕಾರ್ಯಕಾರಿಯಾಗದೆ ಇದ್ದೂ ಇಲ್ಲದಂತಾಗುತ್ತವೆ ಎಂದು ವರಾಹ ಪುರಾಣದಲ್ಲಿ ಹೇಳಿದೆ. ೬೮೪

* * *

|| ಶ್ರೀಃ ||

ಶ್ರೀ ಆನಂದ ತೀರ್ಥ ಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -14

ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ

ತೃತೀಯ ಸ್ಕಂದ

ಭಾಗ - 2

ಶ್ರೀ108 ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ
ಶ್ರೀಪಾದಂಗಳವರ

ಕನ್ನಡ ಸಾರ ಸಹಿತ

ಅನುವಾದಕರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.

ಪ್ರಕಾಶಕರು
ಅಖಿಲ ಭಾರತ ಮಾಧ್ವಮಹಾ ಮಂಡಲ, ಬೆಂಗಳೂರು.
ಪೂರ್ಣಪ್ರಜ್ಞ ವಿದ್ಯಾಪೀಠ
ಬೆಂಗಳೂರು - 560 028

Kannada Sarvamoola Vol 14
SRI MADBHAGAVATHA TATPARYA NIRNAYA (Part II) of Sri Anandatirtha with kannada traslation and notes (for 3rd skanda). Published by Akhila Bharata Madhwa Maha Mandala, Bangalore-560028. Released during the 25th Akhila Bharatha Madhwa Tatvajnana Sammelana held at Dharmaprakash, Chennai from 4th to 6th Feb. 2006

ಪುಟಗಳು : 72+688
ಮೊದಲನೆ ಮುದ್ರಣ 2006
ಪ್ರತಿಗಳು : 2000

ಪ್ರತಿ ಬೆಲೆ : ರೂ. 160.00
ಹಕ್ಕುಗಳು ಕಾದಿರಿಸಲ್ಪಟ್ಟಿವೆ

ಸಂಪಾದಕ ಮಂಡಳಿ

ಅಧ್ಯಕ್ಷರು

ಶ್ರೀ 108 ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು

ಕಾರ್ಯಾಧ್ಯಕ್ಷರು

ಪ್ರೊ || ಕೆ.ಟಿ.ಪಾಂಡುರಂಗಿ ಎಮ್.ಎ, ವೇದಾಂತ ವಿದ್ವಾನ್,
ಮೀಮಾಂಸಾಶಿರೋಮಣಿ

ಕಾರ್ಯದರ್ಶಿಗಳು

ಪ್ರೊ || ಡಿ.ಪ್ರಹ್ಲಾದಾಚಾರ್ಯ ಎಮ್.ಎ, ವಿದ್ವಾನ್

ಸದಸ್ಯರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ
ವಿದ್ವಾನ್ ಪಿ.ಕೇಶವ ಬಾಯರಿ
ವಿದ್ವಾನ್ ರಾಮಾಚಾರ್ಯ ಜಿ.ಮಾಳಗಿ ಎಮ್.ಎ.
ವಿದ್ವಾನ್ ಎ. ಹರಿದಾಸ ಭಟ್ಟ ಎಮ್.ಎ

ಗ್ರಂಥಗಳು ದೊರೆಯುವ ಸ್ಥಳ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಕಾರ್ಯಾಲಯ
ಪೂರ್ಣಪ್ರಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞ ನಗರ, ಬೆಂಗಳೂರು -28

ಅಕ್ಷರ ಜೋಡಣೆ : ವಿದ್ವಾನ್.ಕೆ.ಎಸ್.ಬದರೀನಾರಾಯಣಾಚಾರ್

ಮುದ್ರಣ : ಓಂಕಾರ್ ಆಫ್ ಸೆಟ್ ಪ್ರಿಂಟರ್ಸ್, ನ್ಯೂ ತರಗು ಪೇಟೆ, ಬೆಂಗಳೂರು -2

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ. 1986 ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು 19 ವರ್ಷಗಳಲ್ಲಿ ಹದಿಮೂರು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (3 ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (ಒಂದು ಸಂಪುಟದಲ್ಲಿ), ಪುರಾಣದಲ್ಲಿ ಒಂದಾದ 32 ಅಧ್ಯಾಯಗಳನ್ನು ಒಳಗೊಂಡ ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (4 ಸಂಪುಟಗಳಲ್ಲಿ), ಇದರಲ್ಲಿ ಮತ್ತೊಂದಾದ ಶ್ರೀಮದ್ಭಾಗವತ ತಾತ್ಪರ್ಯ ನಿರ್ಣಯ (ಮೊದಲನೆ ಭಾಗ, ಪ್ರಥಮ ಹಾಗೂ ದ್ವಿತೀಯ ಸ್ಕಂಧ 1 ಸಂಪುಟ) ಹಾಗೂ ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ 1ನೇ ಅಧ್ಯಾಯ ಹಾಗೂ ಶ್ರೀಮದನುವ್ಯಾಖ್ಯಾನ ಭಾಗ 1.(ಮೊದಲಿನ ಐದು ಸೂತ್ರಗಳು) ಈ ಎರಡು (ಪ್ರತ್ಯೇಕ ಸಂಪುಟಗಳಲ್ಲಿ) ಪ್ರಕಟನೆಗೊಂಡು ಜಿಜ್ಞಾಸುಗಳ ಕೈ ಸೇರಿತು. ಇದಲ್ಲದೆ ಹಿಂದೆ ಪ್ರಕಟನೆಗೊಂಡಿದ್ದ ಸರ್ವಮೂಲ ಗ್ರಂಥಗಳ ಪುನರ್ಮುದ್ರಣ ಅತ್ಯಗತ್ಯವಾಗಿದ್ದು, ಅದರಲ್ಲಿ ಗೀತಾಪ್ರಸ್ಥಾನ (3ನೇ ಆವೃತ್ತಿ), ಉಪನಿಷತ್ ಪ್ರಸ್ಥಾನ 8 ಸಂಪುಟಗಳಲ್ಲಿ(3ನೇ ಆವೃತ್ತಿ), ಛಾಂದೋಗ್ಯ (ಎರಡನೇ ಆವೃತ್ತಿ), ಬೃಹದಾರಣ್ಯಕ (ಎರಡನೇ ಆವೃತ್ತಿ), ದಶಪ್ರಕರಣ (3 ನೇ ಆವೃತ್ತಿ), ಪ್ರಕಟನೆಗೊಂಡು ಜಿಜ್ಞಾಸುಗಳಿಗೆ ಲಭ್ಯವಾಗಿರುತ್ತದೆ.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಮೂರನೇ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ 14) ದ ಕನ್ನಡ ಅನುವಾದವನ್ನು ನಾಡಿನ ಹಿರಿಯ ವಿದ್ವಾಂಸರಾದ ಶ್ರೀ ಹಯವದನ ಪರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲಿಯೂ ಅನುವಾದಿಸಿದ್ದು, ಈ ಗ್ರಂಥವು 2006ನೇ ಫೆಬ್ರವರಿ 4 ರಿಂದ 6ರ ತನಕ ಚೆನ್ನೈ ನಗರದ ಧರ್ಮಪ್ರಕಾಶದಲ್ಲಿ ನಡೆಯುವ 25ನೇ ಅಖಿಲ ಭಾರತ

ಮಾಧ್ವತತ್ತ್ವಜ್ಞಾನ ಸಮ್ಮೇಳನದ ಶುಭಸಮಾರಂಭದಲ್ಲಿ ಬಿಡುಗಡೆಯಾಗಲಿದೆ. ಇವರು ಈ ಹಿಂದೆ ಶ್ರೀ ಮಹಾಭಾರತ ತಾತ್ಪರ್ಯ ನಿರ್ಣಯ ಕನ್ನಡ ಅನುವಾದ 4 ಸಂಪುಟಗಳಲ್ಲಿ ಹಾಗೂ ಇದೇ ಭಾಗವತ ತಾತ್ಪರ್ಯ ನಿರ್ಣಯದ 1 ಹಾಗೂ 2ನೇ ಸ್ಕಂಧಗಳಿಗೆ ಕನ್ನಡ ಅನುವಾದ ಮಾಡಿಕೊಟ್ಟು ಉಪಕರಿಸಿದ್ದಾರೆ. ಇವರಿಗೆ ಅಖಿಲ ಭಾರತ ಮಾಧ್ವ ಮಹಾ ಮಂಡಳದ ಅನಂತ ಧನ್ಯವಾದಗಳು

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಕಡ್ಡಿ ಬದರಿನಾರಾಯಣಾಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿ ಕೊಟ್ಟಿದ್ದಾರೆ. ಇವರಿಗೆ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

ಇನ್ನು ಉಳಿದ ಮೂರು ಗ್ರಂಥಗಳಾದ ಋಗ್ಭಾಷ್ಯ, ನ್ಯಾಯ ವಿವರಣ, ಅಣುಭಾಷ್ಯ ಹಾಗೂ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಭಾಗವತ ತಾತ್ಪರ್ಯ ನಿರ್ಣಯಗಳ ಉಳಿದ ಅಧ್ಯಾಯಗಳನ್ನು ಒಳಗೊಂಡ ಸಂಪುಟಗಳ ಪ್ರಕಟನೆಗೆ ಒಂದು ನೀಲಿ ನಕ್ಷೆ ತಯಾರಿಸಿ ಈ ಗ್ರಂಥಗಳ ಪ್ರಕಟನೆಗೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸಿದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

20.1.2006 ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ

ಅಧ್ಯಕ್ಷರು

ಅಖಿಲ ಭಾರತ ಮಾಧ್ವ ಮಹಾ ಮಂಡಲ,

ಬೆಂಗಳೂರು.

ಅನುಗ್ರಹ ಸಂದೇಶ

ಶ್ರೀಮದ್ಭಾಗವತವು ಯದ್ ವೈಷ್ಣವಾನಾಂ ಧನಮ್ - ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದ ವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀವೇದವ್ಯಾಸರು ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.

ಶ್ರೀಮಧ್ವಾಚಾರ್ಯರು ಭಾಗವತಪುರಾಣದ ಅರ್ಥನಿರ್ಣಯಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕ ಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಈ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರ ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣ ಸಾಹಿತ್ಯ ದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ.

ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ ಉತ್ತಮವಾದ, ವೇದವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಪ್ರಥಮ ಹಾಗೂ ದ್ವಿತೀಯ ಸ್ಕಂಧದ ಕನ್ನಡಾನುವಾದ ವನ್ನು ಮಾಡಿದ್ದಾರೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯನಿರ್ಣಯದ ಸಮಗ್ರ ಕನ್ನಡ ಅನುವಾದವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನಗಳಿಸಿ ರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಪ್ರಕೃತ ಶ್ರೀಯುತರು ಇದರ ತೃತೀಯ ಸ್ಕಂಧದ ಕನ್ನಡಾನುವಾದವನ್ನು (ಸರ್ವ ಮೂಲ 14ನೇ ಸಂಪುಟ) ಮಾಡಿದ್ದು ಬಿಡುಗಡೆಗೆ ಸಿದ್ಧ ವಾಗಿದೆ.ಆದ್ದರಿಂದ ನಿರ್ದುಷ್ಟವಾದ ಈ ಅನುವಾದದ ಉಪಯೋಗ ವನ್ನು ಜಿಜ್ಞಾಸುಗಳು ಪಡೆದುಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗ ಬೇಕೆಂದು ನಾವು ಅಪೇಕ್ಷಿಸುತ್ತೇವೆ.

20.1.2006

ಶ್ರೀ ವಿಶ್ವೇಶ ತೀರ್ಥಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986 ರಲ್ಲಿಶ್ರೀ ಮಧ್ವಾಚಾರ್ಯರ 750 ನೇ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸರ್ವಮೂಲ ಗ್ರಂಥಗಳ ಬಾಷಾಂತರ ಕಾರ್ಯವನ್ನುಶ್ರೀ ವಿಶ್ವೇಶ ತೀರ್ಥರು ಸಂಕಲ್ಪಿಸಿದ್ದಾರೆ. ಅಂದಿನಿಂದ ಇದುವರೆಗೆ ಒಟ್ಟು 12 ಸಂಪುಟಗಳು ಹೊರಬಂದಿವೆ. ಅಲ್ಲದೆ ಮೂರು ಬೃಹತ್ ಸಂಪುಟಗಳ ಪುನರ್ ಮುದ್ರಣ ಕಾರ್ಯವು ನಡೆದಿದೆ. ಅಖಿಲ ಭಾರತ ಮಾಧ್ವಮಹಾ ಮಂಡಲದ 23ನೇ ತತ್ವಜ್ಞಾನ ಸಮ್ಮೇಳನವು ಧಾರವಾಡ ನಗರದಲ್ಲಿ ಜನವರಿ 27 ರಿಂದ 30ರ ತನಕ ನಡೆದ ಸಂದರ್ಭದಲ್ಲಿ 13ನೇ ಸಂಪುಟಶ್ರೀಭಾಗವತ ತಾತ್ಪರ್ಯ ನಿರ್ಣಯ ಭಾಗ 1 (ಮೊದಲನೆಯ ಹಾಗೂ ದ್ವಿತೀಯ ಸ್ಕಂಧಗಳು) ಪ್ರಕಾಶನಗೊಂಡಿತು.

ಕ್ರಿ.ಶ. 1987ರಲ್ಲಿ ಗೀತಾಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ದಶೋಪನಿಷತ್‌ಗಳು, ಬೃಹದಾರಣ್ಯಕ ಮತ್ತು ಛಾಂದೋಗ್ಯೋಪ ನಿಷತ್‌ಗಳು ಹೀಗೆ ಮೂರು ಸಂಪುಟಗಳು ಹೊರಬಂದವು.

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿ ಮೊದಲ ಒಂಬತ್ತು ಅಧ್ಯಾಯದವರೆಗೆ ರಾಮಾಯಣದ ಕಥಾ ಭಾಗವು ಮುಕ್ತಾಯವಾಗಿದೆ. ಹತ್ತನೆ ಅಧ್ಯಾಯದಲ್ಲಿ ಶ್ರೀವೇದವ್ಯಾಸರ ಅವತಾರ ಮತ್ತು ಅವರು ನಡೆಸಿದ ಜ್ಞಾನ ಕಾರ್ಯಗಳ ವಿವರಣೆ ಇದೆ. ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥೆಯು ಆರಂಭವಾಗುತ್ತದೆ. ಹತ್ತೊಂಬತ್ತನೆ ಅಧ್ಯಾಯದಿಂದ ಇಪ್ಪತ್ತೆರೆಡನೆಯ ಅಧ್ಯಾಯಗಳ ವರೆಗಿನ ಭಾಗವನ್ನು ಭಾಷಾಂತರ ಮಾಡಿ ಕ್ರಿ.ಶ. 1999ರಲ್ಲಿ ಕೊಡಲಾಗಿದೆ. 1998ರಲ್ಲಿ ಸಂಕೀರ್ಣ ಗ್ರಂಥಗಳ, ಭಾಗ ಬಿಡುಗಡೆಯಾಯಿತು. ಅದರಲ್ಲಿ ಕೃಷ್ಣಾಮೃತ ಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರ ಸಂಗ್ರಹ, ಯಮಕ ಭಾರತ ಮತ್ತು ಸ್ತೋತ್ರಾದಿಗಳನ್ನು ಒಳಗೊಂಡ (ದ್ವಾದಶ ಸ್ತೋತ್ರ, ನರಸಿಂಹನಖಸ್ತುತಿ, ಜಯಂತೀ ನಿರ್ಣಯ, ಯತಿ ಪ್ರಣವ ಕಲ್ಪ, ಕಂದುಕಸ್ತುತಿ, ಬಿಲ್ವ ಮಂಗಲಃ ಸಾಧುಃ) 10 ಸರ್ವಮೂಲ ಗ್ರಂಥಗಳು ಸೇರಿವೆ. 1999ರ ಜನವರಿಯಲ್ಲಿ ತಾತ್ಪರ್ಯ ನಿರ್ಣಯದ 23 ರಿಂದ 32ರ ಅಧ್ಯಾಯಗಳು ಹತ್ತನೆಯ ಸಂಪುಟವಾಗಿ ಹೊರಬಂದಿದೆ. ಇಲ್ಲಿಗೆ ಮಹಾಭಾರತ ತಾತ್ಪರ್ಯ ನಿರ್ಣಯ ಪೂರ್ಣಗೊಂಡಂತಾಗಿದೆ.

2001ರಲ್ಲಿ ಉಡುಪಿಯಲ್ಲಿ ಸೂತ್ರಪ್ರಸ್ಥಾನದ ಮೊದಲ ಗ್ರಂಥವಾಗಿ ಬ್ರಹ್ಮಸೂತ್ರಭಾಷ್ಯದ ಪ್ರಥಮಾಧ್ಯಾಯ ಕನ್ನಡ ಅನುವಾದ ಬಿಡುಗಡೆಯಾಯಿತು. ಇದರಲ್ಲಿ ಮತತ್ರಯ ಸೂತ್ರಾರ್ಥವನ್ನು ನಿರೂಪಿಸಿ ತಾತ್ಪರ್ಯ ಚಂದ್ರಿಕಾದಲ್ಲಿ ಹೇಳಿದಂತೆ

ತೌಲನಿಕ ಅಧ್ಯಯನವನ್ನು ಮಾಡಲಾಗಿದೆ. ಜೊತೆಗೆ ಶ್ರೀಮಧ್ವಾಚಾರ್ಯರ ಭಾಷ್ಯವನ್ನು ಕೊಟ್ಟು ಅದರ ಭಾವಾರ್ಥವನ್ನು ಕೊಡಲಾಗಿದೆ. ಅದಕ್ಕೆ ಪೂರಕವಾಗಿ ಅನುವ್ಯಾಖ್ಯಾನದ ಮೊದಲ ಐದು ಅಧಿಕರಣಗಳನ್ನು ಒಳಗೊಂಡ ಭಾಗದ ಅನುವಾದವು ಶ್ರೀ ವಿಶ್ವೇಶ ತೀರ್ಥಶ್ರೀಪಾದರು ಬರೆದ ನ್ಯಾಯ ಸುಧಾ ಸಾರ ಗ್ರಂಥದ ಆಂಗ್ಲ ಭಾಷಾನುವಾದದ ಜೊತೆಗೆ ಸರ್ವಮೂಲದ 12ನೇ ಸಂಪುಟವು ಅಖಿಲ ಭಾರತ ಮಾಧ್ವಮಹಾ ಮಂಡಲ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 2003ನೇ ಫೆಬ್ರವರಿಯಲ್ಲಿ ಬಿಡುಗಡೆಯಾಯಿತು.

ಪ್ರಕೃತ ಪುರಾಣಗಳಲ್ಲಿ ಒಂದಾದ ಶ್ರೀಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗವನ್ನು ಸರ್ವಮೂಲ ಕ್ರಮ ಸಂಖ್ಯೆ 13(ಪ್ರಥಮ ಹಾಗೂ ದ್ವಿತೀಯ ಸ್ಕಂಧ ಕನ್ನಡ ಅನುವಾದ) ನಾಡಿನ ಹಿರಿಯ ವಿದ್ವಾಂಸರಾದ ವಿದ್ವಾನ್ ಹಯವದನ ಪುರಾಣಿಕರು ಅನುವಾದ ಮಾಡಿಕೊಟ್ಟು, ಧಾರವಾಡದಲ್ಲಿ ಕಳೆದ ವರ್ಷ ನಡೆದ ಅಖಿಲ ಭಾರತ ಮಾಧ್ವ ಮಹಾ ಮಂಡಲದ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀಶ್ರೀ ವಿಶ್ವೇಶ ತೀರ್ಥಶ್ರೀಪಾದರು ನಡೆಸಿದ ತಮ್ಮ 25ನೇ ಶ್ರೀ ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆಗೊಂಡಿತು.

ಈ ಗ್ರಂಥದ ಮೂರನೇ ಸ್ಕಂಧದ (ಸರ್ವಮೂಲ ಕ್ರಮ ಸಂಖ್ಯೆ 14)ಕನ್ನಡ ಅನುವಾದವನ್ನು ಶ್ರೀಪುರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿಯೂ ಅನುವಾದಿಸಿದ್ದು, ಈ ಗ್ರಂಥವು 2006ನೇ ಫೆಬ್ರವರಿ 4 ರಿಂದ 6ರ ತನಕ ಚೆನ್ನೈ ನಗರ ಧರ್ಮಪ್ರಕಾಶದಲ್ಲಿ ನಡೆಯುವ 25ನೇ ಅಖಿಲ ಭಾರತ ಮಾಧ್ವತತ್ವಜ್ಞಾನ ಸಮ್ಮೇಳನದ ಶುಭಸಮಾರಂಭದಲ್ಲಿ ಬಿಡುಗಡೆಯಾಗಲಿದೆ. ಇದರ ಅನುವಾದವನ್ನು ಮಾಡಿರುವ ವಿದ್ವಾನ್‌ಶ್ರೀ ಕೆ.ಹಯವದನ ಪುರಾಣಿಕರಿಗೆ ಅಭಿನಂದನೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಕಡ್ಡಿ ಬದರೀ ನಾರಾಯಣಾಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದ್ದಾರೆ. ಇವರಿಗೆ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

20.1.2006

ಮಹಾಮಹೋಪಾಧ್ಯಾಯ
ಪ್ರೊ॥ ಕೆ.ಟಿ.ಪಾಂಡುರಂಗಿ
ಕಾರ್ಯಾಧ್ಯಕ್ಷರು
ಸಂಪಾದಕ ಮಂಡಳಿ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ।

Bhāgavata tātparya nirṇaya

Introduction

Bhāgavata tātparya nirṇaya of Śrī Ānandatīrtha (Śrī Madhvāchārya) is a critical exposition of Śrīmad Bhāgavata. Śrīmad Bhāgavata is quite distinct from Mahābhārata and Purāṇas in respect of its style, subject matter and the purpose. Its theme is to describe the different incarnations of the Supreme God Nārāyaṇa, particularly, the incarnation of Śrī Kṛṣṇa.

In the course of this description discourses on philosophy, theology, ethics are introduced. The process of the creation of the universe is described. The entire universe is described as a visible form of the Supreme God. Inculcation of devotion to the Supreme God and detachment from all others is stressed. A noble code of conduct designated as Bhāgavata dharma is advocated all along. In the course of the narration of the main theme a number of episodes of Sages, Kings and major devotees like Dhruva, Prahlada are introduced. The importance of noble life is highlighted by presenting the aggressive deeds of evil persons like Hiraṇyakaśipu, Śiṣupāla etc.

The style of Bhāgavata is not simple like that of Mahābhārata and Purāṇas. It is a scholastic style like later Mahākāvyas. The Bhāgavata tradition is a continuation of Pañcharātra tradition. Hence, a number of technical terms of Pañcharātra theology are introduced in Bhāgavata. The

philosophy presented in Upaniṣads and Brahmasūtra is also incorporated in the course of developing its theme of the concept of Supreme God designated as Bhagavan. While selecting the episodes to demonstrate bhakti and vairāgya information from other purāṇas particularly from Harivamśa and Viṣṇupurāṇa is drawn. The first two skandhas establish a link between Mahābhārata and Bhāgavata. In this way Bhāgavata is a composition of multi dimension in respect of its source, theme, thought and purpose.

This is effectivly stated by Śrī Madhvāchārya in the following verse :

अर्थोऽयं ब्रह्मसूत्राणां भारतार्थविनिर्णयः ।
गायत्रीभाष्यरूपोऽसौ वेदार्थपरिबृंहितः ॥
पुराणानां साररूपः साक्षाद् भगवतोदितः ।
द्वादशस्कन्धसंयुक्तः शतविच्छेदसंयुतः ।
ग्रन्थोऽष्टादशसाहस्रः श्रीमद्भागवताभिधः ॥

The very invocatery verse "जन्माद्यस्य यत:" etc., is an exposition of the first four sūtras of Brahmasūtras directly and the entire brahmasūtras by appropriate explanation. The teachings of brahmasūtra, particularly of Sādhanādhāya and Phalādhyāya are incorporated in Bhāgavata verses all along.

There are a few situations wherein Mahābhārata statements are not clear. There are differences in the narration of certain events. These are to be settled on the basis of the remarks in Bhāgavata. Thus Bhāgavata helps to clarify the statements in

Mahābhārata. Śrī Madhvāchārya has written the digests of both these giving a critical exposition. The importance of the Gāyatri hymn is explained in the very first verse of Bhāgavata. It is already stated above that many episodes of sages, kings, and incarnations of God described in other purāṇas are partially or fully incorporated in Bhāgavata and their philosophical, theological and moral implications are developed.

पुराणस्थानपान्थानामभाषात्रयवेदिनाम् ।
भवता सुसखा चक्रे श्रीभागवतनिर्णयः ॥

It is difficult for an average reader to grasp all these aspects by reading the text of Bhāgavata alone. Naturally very learned commentators have written commentaries on Bhāgavata to help such a reader. There were two commentaries composed by Chitsukha and Puṇyāraṇya before Śrī Madhvāchārya. These interpreted Bhāgavata to develop Advaita Philosophy which is against the very spirit of Bhāgavata.

Out of eighteen thousand verses of Bhāgavata sixteen hundred verses are selected for comment in this work. It is a kind of critical digest and critical exposition.

Such verses that are significant from philosophical, theological and ethical point of view are selected for comment. In these verses only select words and select phrases are commented upon. These comments are of three types :

i) The meaning of the selected words is given.

ii) A remark on the point made by the word or the phrase or the verse concerned is made.

iii) A clarification is offered.

The expressions and phrases that are likely to be given advaita interpretation are especially examined and correctly interpreted. In majority of cases an authority is quoted to support the meaning given and to substantiate the point made or the clarification given. Apart from quoting authority for these purposes, the authorities are also quoted giving full details of theological and philosophical issues. In respect of the rare meaning of the words lexicons are quoted. The remarks made on the points are brief but the authorities quoted are long. If one has a curiosity to find out the proportion of the commentator's remark and the authority quoted one can safely say only ten percent are commentators remarks and ninety percent are the authorities quoted. This is a special style of Śrī Madhvāchārya. In all his works he profusely quotes from 380 works in his 37 works. Among these his quotations in Bhāgavata tātparya nirṇaya are largest. Here, he quotes from 224 works.

In this volume, the text of Bhāgavata tātparya nirṇaya of the third skandha is given. We will illustrate the above special features of Bhāgavata tātparya nirṇaya from this portion.

1. Meaning of the technical and rare words.

1) पद्म:–ब्रह्मा (III-1-26)

The word पद्म is used in the sense of Chaturmukha Brahmā.

2) आकृतिम्–पृथिवीम् ।

शरीरमाकृतिर्देहः कुः पृथ्वी च मही तथा'' इत्यभिधानम् । (III-4-28)

The word आकृति means the earth. The statement.

हरिरपि तत्याज आकृतिं त्र्यधीशः

means the god left the earth. It does not mean that the god left his body.

3) आत्मनां विभुर्जीवाधिपः The lord of the Jivas. (III-6-1)

4) आत्मशक्तिः–प्रकृतिः (III-7-7)

5) अज्ञान – Night; ज्ञान – The day.

''अज्ञानं तु निशा प्रोक्ता दिवा ज्ञानमुदीर्यते'' (III-10-10)

6) अनिमित्तस्य – ब्रह्मार्पणबुद्ध्या कृतस्य ।

''अः इति ब्रह्म'' इति श्रुतेः ॥ (III-11-9)

The word अनिमित्त conveys the meaning that the action performed with the thought of offering it to the God.

7) क्रतुभिः – स्वप्रज्ञाभिः । (III-12-15)

The word क्रतु means thought.

8) साङ्ख्य – right knowledge.

Yoga – The means to acquire the right knowledge.

''सम्यग् ज्ञानं तु साङ्ख्यं स्यात् तदर्थो योग उच्यते'' (III-25-19)

9) त्रिवृत - The God

''वेदैर्वतत्वाद् भगवांस्त्रिवृदित्यच्यते बुधैः'' इति च ॥ (III-25-33)

The god is called त्रिवृत as he is conveyed by the three vedas.

10) पराभिध्यानेन–परमात्मेच्छया । (III-27-7)

The word पराभिध्यान means the will of the Supreme God.

2. The authorities quoted to substantiate the philosophical and theological concepts and doctrines.

1) ''न देहयोगो हि जनिर्विष्णोर्व्यक्तिर्जनिः स्मृता'' इत्याग्नेये । (III-1-44)

The birth of the god is of the nature of his manifestatíon. But not his taking a body.

2) ''हरिः कर्ताऽप्यकर्तेति फलाभावेन भण्यते'' इति च । (III-1-44)

Though the god is agent for all activities. He is stated as not an agent since the result of the activity does not relate to him.

3) **जीवद्वयसमायोगाद्धिरण्यकमुखाः परे ।**
भक्तिद्वेषयुताश्च स्युर्गतिस्तेषां यथा निजम् ॥

(4) **सर्वथा भक्तितो मुक्तिर्द्वेषात् तम उदीरितम् ।**
नियमस्त्वनयोर्नित्यं मोहायान्यवचो भवेत् ॥ इति ब्रह्मवैवर्ते । (III-2-24)

Hiraṇyakaśipu etc., have two jīvas in them. Hence, they have both the devotion and enimity.

One will attain the liberation only by devotion but not by the enimity.

(5) ''केवलं भगवज्ज्ञानं साङ्ख्यमित्यभिधीयते'' इत्योग्नये (III-3-29)

The exclusive knowledge of the Supreme God is known as Sāṁkhya.

(6) ''भारतान्नाधिकं विष्णोर्महिमावाचकं कचित् ।
भारतान्न विरागाय भारतान्न विमुक्तये'' इति पाद्मे । (III-5-12)

There is no other work than Mahābhārata that describes the glory of the God, that enables to develop the detachment and that leads to liberation.

7) कालमायां शतलिङ्गिनः – तन्निमित्तशरीराः । हिरण्यगर्भस्यैव कालाभिमानि जीवाभिमानीति द्विविधं रूपम् ।
''कालजीवाभिमानेन रूपद्वन्द्वी चतुर्मुखः'' इति पाद्मे । (III-6-16)
हिरण्यगर्भ has two forms (1) कालाभिमानि (2) जीवाभिमानि.

8) ''आद्यो अवतारो विष्णोस्तु पुरुषो नाम कीर्तितः ।
असृजत् स महत्तत्वं स एवाण्डं समाविरात् ।
स ब्रह्मणो हृदिस्थत्वाद् हृदयं चेति कीर्त्यते'' इति च । (III-7-8)

The first incarnation of Viṣṇu is Puruṣa. He created Mahat tatva and entered into brahmāṇḍa. This brahmāṇḍa is called Hṛdaya and it is on the hṛdaya of the God.

9) देशतः कालतः योसाव वस्थातः स्वतोन्यतः ।
अविलुप्तावबोधात्मा संयुज्येता जया कथम् ।। (III-8-5)

The God has cognition at all times, in all places and about all objects. Hence, he cannot be affected by the association of प्रकृति.

10) अलुप्तबोधरूपत्वात् नासौ प्राकृतदेहवान् ।
न च सृष्ट्यादिकं भ्रान्तिः भ्रान्तिवादाहि दानवाः ।
अतो भ्रान्त्यादिसम्बन्धो नास्य क्वचनविद्यते ।

The God has no prakṛta body as he is never without cognition. He has no illusion. Those who talk of illusion are evil persons. (III-8-12)

11) सृष्ट्वाऽग्रे महदादीनि सविकाराण्यनुक्रमात् ।
तेभ्यो विराजमद्धृत्य तमनुप्राविशद् विभुः ।
विराजं–ब्रह्माणम् ।
"ब्रह्माणं प्राविराट् विष्णुः सहस्राक्षः सहस्रपात्" इति ब्राह्मे ।
"अनुप्रविश्य ब्रह्माणं प्राणं दशविधं तथा ।
इन्द्रियाणीन्द्रियार्थाश्च वर्णाश्चैवासृजद् हरिः" इति गारुडे ।। (III-8-21)

At the commencement of creation God created mahattattva etc. Then he created Virāt i.e. chaturmukha brahma. Then entering into him. He created ten types of prāṇa, senses, the objects and varṇas.

12) यत्तद् दिव्यं हरे रूपं क्षीरसागरमध्यगम् ।
सज्ज्ञानानन्दैकमात्रं च न ततः परमं क्वचित् ।
अनादिनित्यद्रव्यत्वात् तस्मात् जज्ञे चतुर्मुखः ।। इत्यध्यात्मे । (III-10-2,3)

The form of the Supreme God present at the centre of milk ocean is of the nature of Jñāna and Ānanda. It is eternal and invisable. From this Chaturmukhabrahma arises.

13) "ईशस्या पूर्णताज्ञानं विष्णोरन्यस्य चेशता ।
भेदस्तस्यावतारेषु जीवस्येशत्वमेव च ।।
तथा जीवत्वमीशस्य जडाभेदस्तयोरपि ।
भेदमोह इति प्रोक्तः स सदा न हरौ क्वचित् ।

अन्येषां तत्प्रसादेन शनैर्याति सतामपि ॥'' इति स्कान्दे । (III-10-14)

Considering the god as a finite being and considering some one else than Viṣṇu as Supreme. Considering the incarnations of God as distinct from each other. Considering God himself a Jīva. Considering Jīva and god as not distinct from Jaḍa are termed as भेदमोह i.e. different forms of ignorance.

14) यथेदानीं तथा चाग्रे पश्चादप्येतदीदृशम् ।
सर्गो नवविधस्तस्य प्राकृतो वै कृतश्च यः ।
सृष्टिश्च प्रलयश्चैव संसारो मुक्तिरेव च ।
देवा ऋषिप्रभृतयो लोका भूरादयस्तथा ।
अनाद्यनन्तकालीनाः सर्वदैकप्रकारतः ।
जगत्प्रवाहः सत्योऽयं नैव मिथ्या कथञ्चन् ।
ये त्वेतदन्यथा ब्रूयुः सर्वहन्तार एव ते ॥ (III-11-13)

The creation, sustanance, the distruction, the transmigration, the liberation, the deities, the sages, bhuḥ etc lokas are forever. This is a continuous flow. These were in the past, these are in the present, and these will be in the future. All this is real. Nothing is illusory.

15) ''अन्तर्भक्ता बहिः क्रुद्धा हिरण्याद्या हरिं प्रति ।
सर्वक्रुद्धाः शम्बराद्या अन्तः क्रोधवशास्तथा ॥'' इति च । (III-17-26)

Hiraṇyakaśipu etc show their anger to god only out side but in their heart they are devoted to the God. While śambara etc are angry with the god even at their heart.

16) "सृष्टौ लये तारतम्यं देवानां ज्ञायते स्फुटम् ।
तारतम्यपरिज्ञाने महातात्पर्यमिष्यते ।
अतस्तद्बहुशस्तूक्तमन्यच्चैतत्प्रकाशकम् ॥" इति वामने । (III-21-12)

There is the hierarchy of the deities both at the time of their creation and their absorption. Comprahending this hierarchy is an important doctrine. Therefore it is frequently mentioned in the scripture.

17) "स्वायम्भुवो मनुश्चैव पृथुश्चैवार्जुनावपि ।
ब्रह्मशेषविपा रुद्र इन्द्र ऋष्यादयस्तथा ।
विष्ण्वावेशयुताः सर्वे नतु विष्णुस्वरूपकाः ॥" (III-30-28)

स्वायं भुव मनु, पृथु, अर्जुन, ब्रह्म, शेष, गरुड, रुद्र, इन्द्र and the sages have only आवेश of God. They are not the very nature of God.

17) पशु वृक्षादिभेदेन जीवा एव स्वत स्थिताः ।
संसृतौ व्यत्ययस्तेषां मुक्तौ तत्तत्स्वरूपता
तत्र स्थावरमुक्तेभ्यः वराः जङ्गमभुक्तिगाः
तेभ्यो मानुषमुक्ताश्च विप्रमुक्ताः ततोधिकाः ।

The animals and trees also have Jīvas during transmigration, they go on changing their form. While in the liberated state they are constant. The sentient liberated are superior to those of non-sentient. Among the sentient liberated men are superior to the other sentient beings. The liberated brahmaṇas are superior to the other liberated men.

19) i) आद्यस्तु महतः सर्गो गुणवैषम्यमात्मनः ।
द्वितीयस्त्वहमस्तत्र द्रव्यज्ञानक्रियादयः ॥ (III-11-14)

ii) भूतसर्गस्तृतीयस्तु तन्मात्राद्रव्यशक्तिमान् ।
चतुर्थ ऐन्द्रियः सर्गो यस्तु ज्ञानक्रियात्मकः ।
वैकारिको देवसर्गः पञ्चमो यन्मयं मनः ॥ (III-11-15)

iii) षष्ठस्तु तमसः सर्गो यस्त्वबुद्धिकृतः प्रभोः ।
षडिमे प्राकृताः सर्गा वैकृतानपि मे शृणु ॥ (III-11-17)

iv) "अव्यक्ताद्याः प्रकृत्यन्ताः सर्वाः प्रकृतयः स्मृताः ।
तदुपादानकः सर्गः प्राकृतः परिपठ्यते ॥

अण्डं विकृतं ज्ञेयं तज्जो वैकृत उच्यते ।
पञ्चपर्वा त्वविद्या तु भूतेभ्यो हरिणा पुरा ॥
उद्धृत्य ब्रह्मणि क्षिप्ता सा पुनस्तेन निस्सृता ।
तत्स्रष्टृत्वज्ञापनाय तस्मात् सा प्राकृता मता ॥" इति च ।

(III-11-17)

सप्तमो मुख्यसर्गस्तु षड्विधस्तस्थुषां च यः ॥ (III-11-18)
वनस्पत्योषधिलता त्वक्सारा वीरुधो द्रुमाः ॥ (III-11-19)
तिरश्चामष्टमः सर्गः सोऽष्टविंशविधो मतः । (III-11-20)

Eight types of creations are discribed in the above verses.

i) The creation of mahat tattva by the disturbance of the balance of the three guṇas.

ii) The creation of ahaṁkāra tattva.
At this stage substance, cognition, activity are byfurcated.

iii) The creation of elements.

iv) The creation of senses.

v) The creation of the deities.

vi) The creation of tamas. These six are prakṛta creations. The creation of brahmāṇḍa is vikṛta creation. The avidya of five aspects was also created by the god and it was handed over to Chaturmukha Brahmā.

vii) The creation of six types of non-sentient objects is seventh creation.

viii) The creation of birds is eighth creation.

These quotations give an idea of the theme and the purpose of quoting these authorities. These enrich the understanding of the doctrines and the concepts of theology and philosophy. Bhāgavat tātparya nirṇaya gives a deep insight into the theme and detailed events of Bhāgavata. It is hoped that this brief introduction will enkindle interest to go through this valuable work and utilize it for the understanding of Bhāgavata.

Prof. K.T. Pandurangi
Upakulapati
Poornaprajna Vidyapeetha
Bangalore-28

ವಿಷಯಾನುಕ್ರಮಣಿಕೆ

ತೃತೀಯಸ್ಕಂಧ ಭಾಗವತ

೩.೧.೨ 'ಯದ್ವಾ ಅಯಂ' ಎಂದು ಇಲ್ಲಿ ಪಾಠವಲ್ಲ. ಕೃಷ್ಣ ಪ್ರವೇಶಿಸಿದ ಮನೆಯನ್ನು ವಿದುರ ತೊರೊದನೆಂದು ಹೇಳುವುದರಲ್ಲಿ ಔಚಿತ್ಯವಿಲ್ಲ. 'ಯದಾ ತ್ವಯಂ' ಎಂದೇ ಪಾಠ. ಕೃಷ್ಣ ಉಪಪ್ಲಾವ್ಯಕ್ಕೆ ಹೋಗಿದ್ದಾಗ ಇತ್ತ ವಿದುರ ತನ್ನ ಮನೆಯನ್ನು ತೊರೆದು ತೀರ್ಥಯಾತ್ರೆಗೆ ಹೊರಟ ಎಂದರ್ಥ. ಆದರೆ, ಯುದ್ಧಪ್ರಾರಂಭಕ್ಕೆ ಮೊದಲೇ ವಿದುರ ಕಾಡಿಗೆ ಹೋದನೆಂದರೆ ಯುದ್ಧ ಕಾಲದಲ್ಲಿ ಅವನಿರಲಿಲ್ಲ. ಹಾಗಾದರೆ ಯುದ್ಧಕಾಲದಲ್ಲಿ ವಿದುರ ಧೃತರಾಷ್ಟ್ರನನ್ನು ಸಂತೈಸುತ್ತಿದ್ದುದು ಹೇಗೆ? ಧರ್ಮರಾಜನ ಪಟ್ಟಾಭಿಷೇಕವಾದ ಬಳಿಕ ಹೊರಟು ನಿಂತ ಕೃಷ್ಣನನ್ನು ಬೀಳ್ಕೊಂಡವರಲ್ಲಿ ವಿದುರನೂ ಒಬ್ಬ ಹೇಗೆ? ಇದಕ್ಕೆ ಸಮಾಧಾನ– ವಿದುರ ತೀರ್ಥಯಾತ್ರೆಗೆ ಹೆಚ್ಚು ದೂರ ಹೋಗಿರಲಿಲ್ಲ. ಪಾಂಡವರ ಮೇಲಿನ ಪ್ರೀತಿಯಿಂದ ಆಗಾಗ ಹಸ್ತಿನಾವತಿಗೆ ಬರುತ್ತಿದ್ದ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ೧೭೪

೩.೧.೬ 'ಯದಾ ದದಾಹ' ಯಾವಾಗ ಅರಗಿನ ಮನೆಯಲ್ಲಿ ಸುಡಿಸಿದನೋ ಆಗ ವಿದುರ ತೀರ್ಥಯಾತ್ರೆಗೆ ಹೊರಟ ಎಂದರ್ಥವಲ್ಲ. ಸುಡಿಸಿದ್ದರಿಂದ ಬೇಸತ್ತು ವಿದುರ ಹೊರಟನೆನ್ನಬೇಕು. ಅದಕ್ಕೆ ಯದಾ ತದಾ ಶಬ್ದಗಳು ಕಾಲಾರ್ಥದಲ್ಲಿ ಮಾತ್ರವಲ್ಲದೆ ಹೇತ್ವರ್ಥದಲ್ಲಿಯೂ ಇವೆ ಎಂದು ಅಭಿಧಾನಗ್ರಂಥದಲ್ಲಿರುವುದರಿಂದ ಇಲ್ಲಿ ಹೇತ್ವರ್ಥದಲ್ಲಿಟ್ಟು ಕೊಳ್ಳಬೇಕು. ೧೭೬

೩.೧.೨೦ ವಿದುರ ತೀರ್ಥಯಾತ್ರೆಯಲ್ಲಿ ಬಂಧು ಮಿತ್ರರ ವಿನಾಶವನ್ನು ಕೇಳಿ ನೊಂದನೆಂದರೆ ಯಾರು ಈ ಬಂಧು ಮಿತ್ರರು? ಕೌರವರಲ್ಲ. ಅವರ ನಾಶವನ್ನು ಕೇಳಿ ವಿದುರ ನೊಂದುಕೊಳ್ಳುವವನಲ್ಲ. ಮತ್ತು ಯುದ್ಧಕಾಲದಲ್ಲಿ ಆಗಾಗ ಸ್ವತಃ ಬಂದು ನೋಡಿ ತಿಳಿದಿದ್ದ. ಕೇಳಿ ತಿಳಿಯಬೇಕಾಗಿಲ್ಲ. ಅದರಿಂದ ಯಾದವರ ವಿನಾಶವನ್ನು ಕೇಳಿ ತಿಳಿದನೆನ್ನಬೇಕು. ಅದು ಪ್ರಭಾಸದಲ್ಲಿ. ಆದರೆ ಆಗ ಕೃಷ್ಣನ ಸಹಾಯದಿಂದ ಧರ್ಮರಾಜ ರಾಜ್ಯಭಾರ ಮಾಡುತ್ತಿದ್ದ. ಯಾದವರ ನಾಶ ಆಗ ಆಗಿರಲು ಶಕ್ಯವಿಲ್ಲ. ಅದಕ್ಕೆ ಮುಂದೆ ಆಗಲಿದೆ

ಎಂದು ಶಾಪ ಬಂದ ವೃತ್ತಾಂತವನ್ನು ಕೇಳಿದನೆನ್ನಬೇಕು. ಆದರೆ ಶಾಪವೃತ್ತಾಂತವನ್ನೂ ವಿದುರ ಯಮುನಾತೀರದಲ್ಲಿ ಉದ್ಧವನಿಂದ ಕೇಳಿ ತಿಳಿದನೆಂದಿದೆ. ಈ ಸಮಸ್ಯೆಗೆ ಪರಿಹಾರ ಸ್ಕಾಂದಪುರಾಣದಲ್ಲಿದೆ– ಪ್ರಭಾಸದಲ್ಲಿ ಸಂಕ್ಷೇಪವಾಗಿ ಜನರಿಂದ ಕೇಳಿ ತಿಳಿದ. ಯಮುನಾತೀರದಲ್ಲಿ ವಿವರವಾಗಿ ಉದ್ಧವನಿಂದ ತಿಳಿದ ಎಂದು. ೧೭೮

೩.೧.೨೩ 'ಪ್ರತ್ಯಂಗಮುಖ್ಯ' ಎಂಬ ಪಾಠದಲ್ಲಿ ಪ್ರತಿಯೊಂದು ಅಂಗದಲ್ಲಿರುವುದು ಆಯುಧ, ಆಯುಧಗಳಲ್ಲಿ ಮುಖ್ಯ ಸುದರ್ಶನಚಕ್ರ ಎನ್ನುವುದು ಕ್ಲಿಷ್ಟಕಲ್ಪನೆಯಾಗುತ್ತದೆ. 'ಪ್ರತ್ಯಂಕಮುಖ್ಯ' ಎಂದೇ ಸರಿಯಾದ ಪಾಠ. ಎಲ್ಲ ಮೂವತ್ತೆರಡು ಲಕ್ಷಣಗಳನ್ನು ಚೆನ್ನಾಗಿ ಹೊಂದಿರುವವನು ಬ್ರಹ್ಮ ಪ್ರತ್ಯಂಕ. ಅವನಿಗಿಂತಲೂ ಚೆನ್ನಾಗಿ ಎಲ್ಲ ಲಕ್ಷಣಗಳನ್ನು ಹೊಂದಿದವನು ವಿಷ್ಣು ಪ್ರತ್ಯಂಕ ಮುಖ್ಯ ಎಂದು ಸ್ಪಷ್ಟವಾಗಿ ತಂತ್ರಮಾಲಾಗ್ರಂಥದಲ್ಲಿ ಹೇಳಿದೆ. ೧೮೦

೩.೧.೨೬ 'ನಾಭ್ಯಪಾದ್ಮಾನುವೃತ್ತ್ಯಾ' ಎಂಬ ಪಾಠದಲ್ಲಿ 'ನಾಭಿಯಲ್ಲಿ ಹುಟ್ಟಿದವನು ಮತ್ತು ಪದ್ಮದಲ್ಲಿ ಹುಟ್ಟಿದವನು' ಎಂದರೆ ನಾಭಿಯಲ್ಲಿರುವ ಪದ್ಮದಲ್ಲಿ ಹುಟ್ಟಿದವನು, ಬ್ರಹ್ಮ ಎನ್ನುವುದು ಕ್ಲಿಷ್ಟಕಲ್ಪನೆ. 'ನಾಭ್ಯಪದ್ಮಾನುವೃತ್ತ್ಯಾ' ಎಂದೇ ಪಾಠ. 'ಪದ್ಮ' ಎಂದು ಬ್ರಹ್ಮನಿಗೂ ಹೆಸರಿದೆ ಎಂದು ಬ್ರಹ್ಮಪುರಾಣದಲ್ಲಿದೆ. ನಾಭಿಯಲ್ಲಿ ಹುಟ್ಟಿದವನು ಬ್ರಹ್ಮ ಎಂದರ್ಥ. ೧೮೧

'ಶ್ರೀಕೃಷ್ಣ ಸುಖವಾಗಿರುವನೆ?' ಎಂದು ವಿದುರ ಕೇಳುತ್ತಾನೆ. ನಿತ್ಯಸುಖಿಯಾದ ಭಗವಂತನ ವಿಷಯದಲ್ಲಿ ಹೀಗೆ ಪ್ರಶ್ನೆ ಕೂಡುವುದಿಲ್ಲ. 'ಲೋಕಕ್ಕೆ ಸುಖ ಉಂಟುಮಾಡುತ್ತ ಇರುವನೆ?' ಎಂದು ಪ್ರಶ್ನೆಯ ಅಭಿಪ್ರಾಯವಿಟ್ಟುಕೊಳ್ಳಬೇಕೆಂದು ಪದ್ಮಪುರಾಣ ಹೇಳಿದೆ.

೩.೧.೨೭ 'ವರತರ್ಪಣೇನ ವರಾನ್ ದದಾತಿ' ವರಗಳಿಂದ ತೃಪ್ತಿಪಡಿಸುವ ಮೂಲಕ ವರ ನೀಡುತ್ತಾನೆ ಎಂದರೇನರ್ಥ? ವರ ನೀಡುವ ಮೂಲಕ ತೃಪ್ತಿಪಡಿಸುತ್ತಾನೆ ತಾನೆ? ಸೋದರಿಯರಿಗೆ ಅವರ ಪತಿಗಳನ್ನು ತೃಪ್ತಿಪಡಿಸುವುದರೊಂದಿಗೆ ಅವರಿಗೂ ವರ ನೀಡುತ್ತಾನೆ ಎಂದು ವ್ಯಾಖ್ಯಾನಿಸಬೇಕು. ೧೮೩

೩.೧.೨೯ 'ನೃಪಾಸನಾಧಿಂ' ರಾಜಸಿಂಹಾಸನ ಸಿಗಲಿಲ್ಲವೆಂಬ ಆಧಿ ಅಂದರೆ ಮನೋವ್ಯಥೆಯನ್ನು ಬಿಟ್ಟು ಕೃಷ್ಣ ಉಗ್ರಸೇನನಿಗೆ ಪಟ್ಟಗಟ್ಟಿದನೆಂದರೆ ಕೃಷ್ಣನಿಗೆ ವ್ಯಥೆಯ ಪ್ರಸಕ್ತಿ ಉಂಟೆ? ಇದಕ್ಕೆ ಸಮಾಧಾನ– ಆಧಿ ಎಂದರೆ ಮನಸ್ಸೆಂದು ಅಭಿಧಾನಗ್ರಂಥದಲ್ಲಿದೆ. ಮನೋವ್ಯಥೆ ಬಿಟ್ಟನೆಂದರ್ಥವಲ್ಲ. ಮನಸ್ಸು ಮಾಡಲಿಲ್ಲ ಎಂದರ್ಥ. ೧೮೩

೩.೩.೨೨ ಭಗವಂತನಿಗೆ ವಿಷಯವೈರಾಗ್ಯ ಬಂದಿತೆನ್ನಲಾಗದು. ಅವನಿಗೆ ವಿಷಯಾಸಕ್ತಿ ಎಂದೂ ಇಲ್ಲ. ಸದಾ ಇರುವ ವೈರಾಗ್ಯವನ್ನೇ ಇಳಿವಯಸ್ಸಿನಲ್ಲಿ ಲೋಕಕ್ಕೆ ತೋರಿಕೊಳ್ಳುತ್ತಾನೆ ಎಂದು ಪದ್ಮಪುರಾಣದಲ್ಲಿದೆ. ೨೦೨

೩.೩.೨೩ ಮಾನವನಿಗೇ ವೈರಾಗ್ಯಬರುತ್ತದೆ ಎಂದ ಮೇಲೆ ಭಗವಂತನಿಗಿನ್ನೇನು ಹೇಳಬೇಕು ಎನ್ನಬಾರದು. ಇದು ಶ್ಲೋಕಾಭಿಪ್ರಾಯವಲ್ಲ. ಅನಾಯಾಸವಾಗಿ ಎಲ್ಲ ಭೋಗಪದಾರ್ಥಗಳನ್ನು ದೊರಕಿಸಿ ಕೊಳ್ಳ ಬಲ್ಲ ಭಗವಂತನೆ ಅವನ್ನು ಬಿಟ್ಟನೆಂದಮೇಲೆ ಕಷ್ಟದಿಂದ ಅಲ್ಪಭೋಗವಸ್ತುಗಳನ್ನು ಸಂಪಾದಿಸುವ ಮಾನವ ಅವುಗಳಲ್ಲಿ ವಿಶ್ವಾಸ ಮಾಡಬಹುದೆ? ಎನ್ನಬೇಕು. ಇದೆ ಶ್ಲೋಕದ ಅಭಿಪ್ರಾಯ. ೨೦೩

೩.೩.೨೪ ಯಾದವರ ಪ್ರಭಾಸಯಾತ್ರೆಯ ವಿವರವನ್ನು ಪ್ರತ್ಯಕ್ಷ ಕಂಡಿರುವಂತೆ ವಿದುರ ಈಗ ವರ್ಣಿಸುವುದು ಅಸಂಗತ. ಇದು ಮುಂದೆ ಇಪ್ಪತ್ತಾರು ವರ್ಷಗಳು ಕಳೆದ ಬಳಿಕ ನಡೆಯಲಿರುವ ವಿದ್ಯಮಾನ. ಈ ಸಮಸ್ಯೆಗೆ ಅನೇಕ ಸಮಾಧಾನಗಳಿವೆ. ಮುಂದೆ ಆಗಲಿರುವುದು ನಿಶ್ಚಿತವೆನ್ನುವ ಅಭಿಪ್ರಾಯದಿಂದ ಆಗಿ ಹೋಯಿತೆಂಬಂತೆ ವರ್ಣಿಸುತ್ತಿದ್ದಾನೆ. ಅಥವಾ ಎಲ್ಲ ವಿದ್ಯಮಾನಗಳೂ ಪ್ರತಿಕಲ್ಪದಲ್ಲಿ ನಡೆಯುತ್ತವೆ. ಅದರಿಂದ ಮುಂದೆ ನಡೆಯಲಿರುವುದಕ್ಕೆ ಹಿಂದೆ ನಡೆದುದನ್ನು ದೃಷ್ಟಾಂತರೂಪದಿಂದ ಬಣ್ಣಿಸುತ್ತಿದ್ದಾನೆ. ಅಥವಾ ಮುಂದೆ ಆಗಲಿರುವುದನ್ನು ಆಗಿಹೋಯಿತೆಂದು ವರ್ಣಿಸುವುದು ಅಜ್ಞರಿಗೆ ಪುರಾಣಪ್ರಮೇಯಗಳಲ್ಲಿ ಗೊಂದಲ ಉಂಟು ಮಾಡುವ ಉದ್ದೇಶದಿಂದ ಎಂದು ಸ್ಕಂದಪುರಾಣದಲ್ಲಿದೆ. ೨೦೪

೩.೪.೩ 'ಸ್ವಕುಲಂ ಸಂಜಿಹೀರ್ಷುಣಾ' ತನ್ನ ಕುಲನಾಶವನ್ನು ಮಾಡಬಯಸಿ ಮೊದಲಿಗೆ ಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ ಎಂದು ಇಲ್ಲಿ ಹೇಳಿದೆ. ಮುಂದೆ ಐದನೇ ಅಧ್ಯಾಯದಲ್ಲಿ 'ಸಂಹೃತ್ಯ ಸ್ವಕುಲಂ' ಯಾದವಕುಲ ನಾಶ ಮಾಡಿದ ಬಳಿಕ ಉಪದೇಶಿಸುತ್ತಾನೆ. ಎರಡನ್ನೂ ಹೇಗೆ ಕೂಡಿಸಬೇಕು? ಗರುಡ ಪುರಾಣ ಹೇಳುತ್ತದೆ. ಯದುಕುಲನಾಶಕ್ಕಿಂತ ಇಪ್ಪತ್ತಾರು ವರ್ಷ ಮೊದಲಿಗೊಮ್ಮೆ, ಯದುಕುಲ ನಾಶವಾದ ಬಳಿಕ ಇನ್ನೊಮ್ಮೆ ಹೀಗೆ ಎರಡು ಬಾರಿ ಉಪದೇಶಿಸುತ್ತಾನೆ ಎಂದು. ೨೦೭

೩.೪.೨೮ 'ಆಕೃತಿಂ ತತ್ಯಜೇ' 'ದೇಹಂ ತ್ಯಕ್ಷ್ಯನ್' ಎಂದು ಕೃಷ್ಣನ ದೇಹತ್ಯಾಗವನ್ನು ಭಾಗವತ ಹೇಳುತ್ತದೆ. ಹೇಗೆ? ಎಂದರೆ 'ಆಕೃತಿ' ಎಂದರೂ 'ದೇಹ'

ಎಂದರೂ ಭೂಮಿ ಎಂದರ್ಥ. ಅಭಿಧಾನಗ್ರಂಥ ಹಾಗೇ ಹೇಳುತ್ತದೆ. ಮತ್ತು ಸ್ಕಾಂದಪುರಾಣದಲ್ಲಿ ಹರಿಯ ದೇಹತ್ಯಾಗವೆಂದರೆ ಭೂಲೋಕತ್ಯಾಗವೆ. ಅವನ ದೇಹ ಸ್ವರೂಪಭೂತವೇ ಆದ್ದರಿಂದ ಅದನ್ನು ತ್ಯಾಗಮಾಡಲು ಬರುವುದಿಲ್ಲ. ಕೃಷ್ಣಾವತಾರದ ಕೊನೆಯಲ್ಲಿ ತನಗೆ ಸದೃಶವಾದ ಮೃತ ದೇಹಸೃಷ್ಟಿಮಾಡಿ ತ್ಯಜಿಸಿದಂತೆ ತೋರಿ ಕೊಂಡನೆಂದಿದೆ. ೨೧೦

೩.೪.೩೧ 'ನೋದ್ಧವೋಽಣ್ವಪಿ ಮನ್ನ್ಯೂನಃ' ಕೃಷ್ಣ ಹೇಳುತ್ತಾನೆ. ಉದ್ಧವ ನನಗಿಂತ ಒಂದಿಷ್ಟೂ ಕಡಿಮೆಯವನಲ್ಲ ಎಂದು. ಈ ಮಾತಿನ ಇಂಗಿತವನ್ನು ಬ್ರಹ್ಮತರ್ಕದ ಸಹಾಯದಿಂದ ಹೀಗೆ ತಿಳಿಯ ಬೇಕು– ಅಜ್ಞ ಜನರಿಗೆ ಮೋಹ ಉಂಟುಮಾಡುವುದಕ್ಕಾಗಿ ಹೀಗೆ ಹೇಳಿದ್ದು ಅಥವಾ ಪ್ರಶಂಸೆ, ಅತಿಶಯೋಕ್ತಿ ಅಥವಾ ಹೀಗೆ ಕೆಲವರ ಅಭಿಪ್ರಾಯವೆಂದು ಹೇಳುತ್ತಿದ್ದಾನೆ. ಅಥವಾ ತಾನು ಜಗದ್ಗುರುವಾಗಿರುವಂತೆ ಉದ್ಧವನೂ ತನಗಿಂತ ಕೆಳಗಿನವರಿಗೆ ಗುರುವೆ ಎಂದು. ೨೧೧

೩.೫.೧೦ ವ್ಯಾಸರ ಮುಖದಿಂದ ಭಾರತದಲ್ಲಿ ರಾಜರುಗಳ ಋಷಿಗಳ ಚರಿತ್ರೆಗಳನ್ನು ಬೇಕಾದಷ್ಟು ಕೇಳಿದ್ದೇನೆ. ಸಾಕೆನಿಸಿದೆ. ಎಲ್ಲೋ ಅಲ್ಪಸ್ವಲ್ಪ ಭಗವಂತನ ಚರಿತ್ರೆಯೂ ಅಲ್ಲಿ ಇದೆ. ಅದನ್ನು ಕೇಳಿ ತೃಪ್ತಿಯಾಗಿಲ್ಲ. ಅದನ್ನೇ ನಿಮ್ಮ ಮುಖದಿಂದ ಭಾಗವತದಲ್ಲಿ ಕೇಳಲು ಬಯಸಿದ್ದೇನೆ ಎಂದು ವಿದುರ ಹೇಳುತ್ತಿರುವನೆ? ಇಲ್ಲ 'ತೇಷಾಂ ಋತೇ' ರಾಜರ ಋಷಿಗಳ ಚರಿತ್ರೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ಅವೆಲ್ಲವೂ ಕೃಷ್ಣಕಥಾಮೃತವೆ. ಅವುಗಳನ್ನು ಎಷ್ಟು ಕೇಳಿದರೂ ಸಾಕೆನಿಸುವುದಿಲ್ಲ ಎಂದರ್ಥ. ಋತೇ ಎಂಬುದು ಇಲ್ಲಿ ವಿನಾರ್ಥದ ಅವ್ಯಯವಲ್ಲ. ಋ ಗತೌ ಧಾತು. ಅರಿತಾಗ ಎಂದರ್ಥ. ೨೧೫

೩.೫.೧೨ 'ಮತಿರ್ಗೃಹೀತಾ ನು' ಎಂದು ಪಾಠವಿಟ್ಟುಕೊಂಡರೆ, ಶಾಖಾ ಚಂದ್ರನ್ಯಾಯದಿಂದ ವಿಷಯಸುಖವರ್ಣನೆಯ ಮೂಲಕ ಲೌಕಿಕರ ಮನ ಸೆಳೆದು ಭಗವಂತನ ಚರಿತ್ರೆಯತ್ತ ಒಯ್ಯುವ ಯತ್ನ ಭಾರತದಲ್ಲಿದೆ ಎಂದಾಗುವುದು. ಅದು ಸರಿಯಲ್ಲ. ಲೌಕಿಕರಿಗೆ ಭಗವಂತನ ಬಗ್ಗೆ ಕೇಳುವಾಸೆಯೆ ಇಲ್ಲ. ವಿಷಯಸುಖವರ್ಣನೆಯಲ್ಲಿಯೆ ತೃಪ್ತರಾಗುತ್ತಾರೆ. ಅದರಿಂದ ವಿವೇಕಿಗಳಿಗಾಗಿಯೆ ಭಾರತ ಹೊರಟಿದೆ. ಅವರಿಗೆ ಅಲ್ಲಿ ಪೂರ್ವಾಪರಗಳನ್ನು ಅವಲೋಕಿಸಿದಾಗ ಎಲ್ಲೆಡೆ ಹರಿಕಥಾಮೃತವೆ. ವಿಷಯಸುಖವರ್ಣನೆಯಲ್ಲಿ 'ಮೃತಿರ್ಗೃಹಿತಾ ನ' ಮನಸ್ಸು ಮುಳುಗುವುದಿಲ್ಲ

ಎಂದೇ ಪಾಠ ಸರಿ. ಭಗವನ್ಮಹಿಮೆಯ ವರ್ಣನೆಯಲ್ಲಿ ಭಾರತವನ್ನು ಮೀರಿಸುವ ಗ್ರಂಥ ಇನ್ನೊಂದಿಲ್ಲವೆಂದು ಪದ್ಮಪುರಾಣ ಸ್ಪಷ್ಟ ಹೇಳಿದೆ. ೨೧೭

೩.೬.೧ 'ಆತ್ಮನಾಂ ಆತ್ಮಾ' ಜೀವರ ಸ್ವರೂಪ ಭಗವಂತ ಎಂದು ಅನ್ವಯವಲ್ಲ. ಆತ್ಮಾ ಎಂದರೆ ಅತ್ತಿ, ಪ್ರಳಯಕಾರಿಯಾಗಿದ್ದಾನೆ ಹರಿ. ಅವನು 'ಆತ್ಮನಾಂ ವಿಭುಃ' ಜೀವರಿಗೆ ಅಧಿಪತಿ. ೨೨೧

೩.೬.೨ 'ಆತ್ಮಾನಂ ಅಸಂತಮೇವ ಮೇನೇ' ಎಂದರೆ ಲಯಕಾಲದಲ್ಲಿ ದೃಶ್ಯಪ್ರಪಂಚವೇ ಇಲ್ಲದ್ದರಿಂದ ದ್ರಷ್ಟೃವಾದ ತಾನೇ ಇಲ್ಲದಂತೆ ಎಂದು ಭಗವಂತ ತಿಳಿದ ಎಂದರ್ಥವಲ್ಲ. ಸೃಷ್ಟಿಕಾರ್ಯದಲ್ಲಿ ಅಶಕ್ತನಾದ ಜೀವನಿದ್ದೂ ಇಲ್ಲದಂತೆ ಎಂದು ಭಗವಂತ ತಿಳಿದ. ೨೨೨

'ಸುಪ್ತಶಕ್ತಿಃ' ಎಂದರೆ ಮಾಯಾಶಕ್ತಿ ಸುಪ್ತವಾಗಿತ್ತೆಂದು ಅರ್ಥವಲ್ಲ. 'ಶಕ್ತಿ' ಎಂದರೆ ಭಾರ್ಯೆ. ವಿಷ್ಣುಭಾರ್ಯೆ 'ಸುಪ್ತ'ಳಾಗಿದ್ದಳು. ಭಗವಂತನ ಗಾಢಾಲಿಂಗನವೆ ಅವಳಿಗೆ ಸುಪ್ತಿ, ಜಡಪ್ರಕೃತಿಗೂ ಕಾರ್ಯರೂಪದಿಂದ ಪರಿಣಾಮ ಹೊಂದದಿರುವುದು ಸುಪ್ತಿ.

೩.೬.೬ 'ಅಂಶಗುಣಕಾಲಾತ್ಮಾ' ಎಂಬಲ್ಲಿ ಅಂಶ–ರುದ್ರಾದಿ ಜೀವರು, ಗುಣ–ಸತ್ವಾದಿಗುಣಗಳು, ಕಾಲ–ಸೃಷ್ಟಿಕಾಲ ಇವುಗಳಿಗೆ ಆತ್ಮ– ಅಭಿಮಾನಿಯಾದ ಚತುರ್ಮುಖ ಎಂದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೨೨೪

೩.೬.೧೧ 'ಕಾಲಮಾಯಾಂಶಯೋಗತಃ' ಕಾಲ–ಸೃಷ್ಟಿಕಾಲ, ಮಾಯಾ–ಚೇತನಪ್ರಕೃತಿ, ಅಂಶ–ಚತುರ್ಮುಖ, ಇವರ ಯೋಗತಃ– ಪರಸ್ಪರ ಸಹಯೋಗದಿಂದಾಗಿ ಆಕಾಶವು ಸ್ಪರ್ಶತನ್ಮಾತ್ರೆಯನ್ನು ಹುಟ್ಟಿಸಿತು. ೨೨೬

೩.೬.೧೬ 'ಕಾಲಮಾಯಾಂಶಲಿಂಗಿನಃ' ಕಾಲ–ಕಾಲಾಭಿಮಾನಿಯಾದ ಬ್ರಹ್ಮನ ಒಂದು ರೂಪ. ಮಾಯಾ–ಚೇತನ ಪ್ರಕೃತಿ ಮಹಾಲಕ್ಷ್ಮಿ. ಅಂಶ–ಜೀವಾಭಿಮಾನಿಯಾದ ಬ್ರಹ್ಮನ ಇನ್ನೊಂದು ರೂಪ. ಇವರು ಮೂವರು ಸೇರಿ ತತ್ವಾಭಿಮಾನಿಗಳ ಶರೀರ ನಿರ್ಮಿಸಿಕೊಟ್ಟರು. ಕಾಲಾಭಿಮಾನಿ ಜೀವಾಭಿಮಾನಿ ಎಂದು ಬ್ರಹ್ಮನ ಎರಡು ರೂಪಗಳೆಂದು ಪದ್ಮಪುರಾಣ ಹೇಳಿದೆ. ೨೨೭

೩.೬.೧೮ 'ಅಂಘ್ರಿಚ್ಛಾಯಾಂಶವಿದ್ಯಾಂ' ಈ ಮಾತಿಗೆ ಬ್ರಹ್ಮಪುರಾಣಾನುಸಾರ ಹೀಗೆ ಅರ್ಥ– ಅಂಘ್ರಿ–ಹರಿಯಲ್ಲಿರುವ ಅವನ ಸ್ವರೂಪಭೂತವಾದ ತನ್ನ ಬಗೆಗಿನ ಜ್ಞಾನ. ಅದರ ಛಾಯಾ– ಸಾಕ್ಷಾತ್ ಪ್ರತಿಬಿಂಬ ಭೂತವಾದ

ಲಕ್ಷ್ಮೀಯಲ್ಲಿರುವ ಬ್ರಹ್ಮವಿದ್ಯೆ. ಅದರ ಕೆಲವೇ ಅಂಶಗಳು ಬ್ರಹ್ಮಾದಿದೇವತೆಗಳಲ್ಲಿ ಋಷಿಗಳಲ್ಲಿರುತ್ತವೆ. ಹರಿಯ ಮಹಿಮೆಯನ್ನು ಪೂರ್ತಿ ತಿಳಿದವನು ಹರಿಯೊಬ್ಬನೆ. ಮಹಾಲಕ್ಷ್ಮಿ ತಿಳಿದುದು ಅತ್ಯಲ್ಪ. ಅದಕ್ಕಿಂತಲೂ ಬಹಳ ಅತ್ಯಲ್ಪವಾಗಿ ದೇವತೆಗಳು ತಿಳಿದಿದ್ದಾರೆ ಎಂದರ್ಥ. ೨೨೯

೩.೬.೧೯ 'ದ್ಯುಸರಿದ್ಧರಾಯಾಃ' ದ್ಯುಸರಿತ್– ಗಂಗೆಗೂ, ಧರಾಯಾಃ– ಪೃಥಿವಿಗೂ ಹರಿಯ ಪಾದಕಮಲ ಆಶ್ರಯ. ೨೩೨

೩.೬.೨೫ 'ಪ್ರಕೃತಿಂ ಜಿತ್ವಾ' ಎಂದು ಪ್ರಕೃತಿಜಯವನ್ನೂ 'ಯೋಗಬಲೇನ' ಎಂದು ವಾಯುಜಯವನ್ನೂ ಹೇಳಿದೆ. ಆದರೆ ಪ್ರಕೃತಿ ಎಂದರೆ ಬಂಧಕಪ್ರಕೃತಿಯ ಅಭಿಮಾನಿನಿ ದುರ್ಗೆ. ವಾಯು ಎಂದರೆ ಮುಖ್ಯಪ್ರಾಣ. ಇವರನ್ನು ಜಯಿಸುವುದು ಕೇವಲ ಭಕ್ತಿಯಿಂದ ಮಾತ್ರ ಸಾಧ್ಯವೆಂದು ದತ್ತಾತ್ರೇಯಯೋಗದಲ್ಲಿದೆ. ೨೩೩

೩.೬.೨೬ 'ತ್ರಿಭಿರಾತ್ಮಭಿಃ' ಎಂದರೆ ತ್ರಿಗುಣಗಳಿಂದ ಎಂದರ್ಥವಲ್ಲ. ಕಾಲ ಮಾಯಾ ಅಂಶ ಎಂಬ ಮೂವರು ಆತ್ಮಭಿಃ ಚೇತನರಿಂದ ಎಂದರ್ಥ. ೨೩೪

೩.೬.೩೦ 'ಸತ್ವಮುಖಾಃ' ಎಂದರೆ ಮಹದಾದಿಗಳಲ್ಲ. ಅವುಗಳ ಅಭಿಮಾನಿಗಳು. ೨೩೬

೩.೭.೧ 'ಸ್ವಶಕ್ತೀನಾಂ' ಎಂಬಲ್ಲಿ ಶಕ್ತಿ ಎಂದರೆ ವಿಷ್ಣುವಿನ ವಶದಲ್ಲಿರುವುದರಿಂದ ಶಕ್ತಿ ಎನಿಸಿದ ಮಹದಾದಿಗಳು. ಮುಂದಿನ ಶ್ಲೋಕದಲ್ಲಿ 'ಬಿಭ್ರಚ್ಛಕ್ತಿಂ' ಎಂದು ಹೇಳಿದ ಶಕ್ತಿ ವಿಷ್ಣುವಿನ ಅಧೀನಳಾದ ರಮಾದೇವಿ. ಇದು ಬ್ರಹ್ಮತರ್ಕದಿಂದ ತಿಳಿದು ಬರುತ್ತದೆ.

'ಅಸತೀನಾಂ ಸಮೇತ್ಯ ಸಃ' ಎಂದೇ ಪಾಠ. 'ಸತೀನಾಮಸಮೇತ್ಯ' ಎಂದಲ್ಲ. 'ಸಮೇತ್ಯ ಅಸತೀನಾಂ' ಎಂದು ಅನ್ವಯ. 'ಪ್ರಸುಪ್ತಲೋಕತಂತ್ರಾಣಾಂ' ಎಂದರೆ ಮಹದಾದ್ಯಭಿಮಾನಿಗಳಿಗೆ ಲೋಕಸೃಷ್ಟಿ ಮಾಡುವ ಶಕ್ತಿ ಸುಪ್ತವಾಗಿತ್ತೆಂದರ್ಥ. 'ತಂತ್ರ'ಶಬ್ದಕ್ಕೆ ಸಾಧನಗಳಲ್ಲಿರುವ ಶಕ್ತಿ ಎಂದು ಅರ್ಥ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ೨೩೮

೩.೭.೨ ಪಂಚತನ್ಮಾತ್ರೆಗಳು ಪಂಚಭೂತಗಳು ಮನಸ್ಸು ದಶೇಂದ್ರಿಯಗಳು ಅಹಂಕಾರ ಮಹತ್ತತ್ವ ಎಂದು ಒಟ್ಟು ತತ್ವಗಳು ಇಪ್ಪತ್ತಮೂರು. ತತ್ವಾಭಿಮಾನಿ ಚೇತನರಿಗೂ ತತ್ವಶಬ್ದದಿಂದಲೇ ವ್ಯವಹಾರವಿರುವುದರಿಂದ ಅವರನ್ನು

ಪ್ರತ್ಯೇಕ ಪರಿಗಣಿಸಿಲ್ಲ. ಚೇತನಾಚೇತನ ಪ್ರಕೃತಿ ಇಪ್ಪತ್ತನಾಲ್ಕನೆ ತತ್ತ್ವ. ಭಗವಂತ ಇಪ್ಪತ್ತೈದನೆ ತತ್ವ. ಅಭಿಮಾನಿಗಳ ವರ್ಗ ಬೇರೆ ಎನ್ನುವ ವಿವಕ್ಷೆಯಲ್ಲಿ ಅದು ಇಪ್ಪತ್ತೈದನೆಯ ತತ್ವ. ಭಗವಂತ ಇಪ್ಪತ್ತಾರನೆಯ ತತ್ವ. ಪ್ರಕೃತ್ಯಭಿಮಾನಿನಿ ರಮೆಯನ್ನು ಬೇರೆ ಇಟ್ಟುಕೊಂಡರೆ ಅವಳು ಇಪ್ಪತ್ತಾರನೆ ತತ್ವ. ಭಗವಂತ ಇಪ್ಪತ್ತೇಳನೆ ತತ್ವ. ಹೀಗೆ ತತ್ವನಿರ್ಣಯಗ್ರಂಥದಲ್ಲಿ ಹೇಳಿದೆ.ಕಾಲಾಭಿಮಾನಿನಿಯಾದ್ದರಿಂದ ಶಕ್ತಿ ಎನಿಸುವ ದೇವಿ ರಮೆಯೇ ಕಾಲಸಂಜ್ಞಾ ದೇವೀಶಕ್ತಿ. ೨೩೯

೩.೭.೩ 'ಚೇಷ್ಟಾರೂಪೇಣ' ಎಂದರೆ ಸುಪ್ತವಾದ ಜ್ಞಾನೇಚ್ಛಾಪ್ರಯತ್ನರೂಪವಾದ ಜೀವರ ಚೇಷ್ಟೆಯನ್ನು ಉದ್ಬೋಧಗೊಳಿಸುವ ಭಗವದ್ರೂಪದಿಂದ ಎಂದರ್ಥ. ೨೪೧

೩.೭.೪ 'ಮಾತ್ರಾಭಿರಧಿ ಪೂರುಷಂ' ಎಂಬಲ್ಲಿ ಮಾತ್ರೆಗಳೆಂದರೆ ತತ್ವಗಳ ಅಂಶಗಳು. ಅದರಿಂದ ಹಿಂದಿನ ಶ್ಲೋಕದಲ್ಲಿ 'ಭಿನ್ನಂ ಸಂಯೋಜಯಾಮಾಸ' ಎಂದು ಹೇಳಿದ ತತ್ವಸಂಯೋಜನ ವಸ್ತುತಃ ಅವುಗಳ ಅಂಶಗಳ ಸಂಯೋಜನವೆಂದು ತಿಳಿಯುತ್ತದೆ. ೨೪೧

೩.೭.೭ 'ದೈವಕರ್ಮಾತ್ಮಶಕ್ತಿಮಾನ್' ಎಂಬಲ್ಲಿ ದೈವಶಕ್ತಿ ಎಂದರೆ ಬ್ರಹ್ಮನ ವಿರಾಡ್ದೇಹದ ಹೃದಯದಲ್ಲಿ ನಿಯಾಮಕವಾದ ಭಗವದ್ರೂಪ. ಅದು ದೇವತೆಗಳಿಗೂ ಅಂದರೆ ಸಕಲ ಚೇತನ ಅಚೇತನಗಳಿಗೂ ನಿಯಾಮಕವಾದ್ದರಿಂದ ದೈವಶಕ್ತಿ ಎನಿಸಿದೆ. ಕರ್ಮಶಕ್ತಿ ಎಂದರೆ ಭಗವಂತನ ಕ್ರಿಯಾಶಕ್ತಿ. ಆತ್ಮಶಕ್ತಿ ಎಂದರೆ ಅವನ ಭಾರ್ಯೆಯಾದ ಚೇತನಪ್ರಕೃತಿ. ೨೪೩

೩.೭.೮ 'ಪುರುಷೇಣಾತ್ಮಭೂತೇನ' ಎಂದು ಹಿಂದೆ(೩.೬.೪) ಹೇಳಿದ, ಮಹದಾದಿತತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಷ್ಟಿ ಮಾಡಿದ ವಾಸುದೇವ ಮೊದಲನೆಯ ಪುರುಷಾವತಾರ. ಬ್ರಹ್ಮಾಂಡದ ಗರ್ಭೋದಕದಲ್ಲಿ ಮಲಗಿದ ಸಂಕರ್ಷಣಮೂರ್ತಿ ಎರಡನೆ ಪುರುಷಾವತಾರ. 'ಏಷ ಆದ್ಯೋಽವತಾರಃ' ಎಂಬಲ್ಲಿ 'ಏಷಃ' ಎಂದರೆ ಈ ಗರ್ಭೋದಕಶಾಯಿಯೇ ಮೊದಲನೇ ಪುರುಷಾವತಾರ ಎಂದರ್ಥವಲ್ಲ, ಎರಡೂ ರೂಪಗಳಿಗೆ ಭೇದವಿಲ್ಲ ಎಂದಿಷ್ಟೇ ಅರ್ಥ. ೨೪೫

೩.೭.೯ ಅಧ್ಯಾತ್ಮವೆಂದರೆ ಇಂದ್ರಿಯಾಭಿಮಾನಿದೇವತೆಗಳು. ಅಧಿದೈವವೆಂದರೆ ಅವರ ಬೇರೆ ರೂಪಗಳು ಸ್ವರ್ಗಾದಿಲೋಕ ನಿಯಾಮಕಗಳು. ಅಧಿಭೂತವೆಂದರೆ ಅವರ ಇನ್ನೂ ಬೇರೆ ರೂಪಗಳು ಪಂಚಭೂತ ನಿಯಾಮಕಗಳು ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ೨೪೬

೩.೭.೧೬ 'ಪ್ರಾಣಾಂಶೇನ' ಎಂಬಲ್ಲಿ ಹೇಳಿದ 'ಪ್ರಾಣ'ನೆಂದರೆ ತ್ವಗಿಂದ್ರಿಯಾಭಿಮಾನಿ. ಅವನು ಪ್ರಧಾನ ವಾಯುವಿನ ಪುತ್ರನೆಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ. ೨೪೮

೩.೭.೨೪ ಅಹಂ ಸತ್ವ ಆತ್ಮ ಎಂದು ನಾಡಿಗಳ ಹೆಸರುಗಳು. ಅಹಂ ನಾಡಿಯಲ್ಲಿ ಅಹಂಕಾರ. ಸತ್ವನಾಡಿಯಲ್ಲಿ ಚಿತ್ತ. ಆತ್ಮನಾಡಿಯಲ್ಲಿ ಬುದ್ಧಿ. ಇವು ಮೂರೂ ಮನಸ್ಸಿನ ಪ್ರಭೇದಗಳು. ಇವುಗಳಿಗೆ ಕ್ರಮವಾಗಿ ರುದ್ರ ಬ್ರಹ್ಮ ಬೃಹಸ್ಪತಿಗಳು ಅಭಿಮಾನಿಗಳು ಎಂದು ತತ್ವನಿರ್ಣಯದಲ್ಲಿ ಹೇಳಿದೆ. ೨೫೦

೩.೭.೩೦ ಮುಖದಿಂದ ಬ್ರಾಹ್ಮಣ ಹುಟ್ಟಿದನೆಂದರೆ ಯಾವ ಬ್ರಾಹ್ಮಣ? ಎಲ್ಲ ಬ್ರಾಹ್ಮಣರೂ ಒಮ್ಮೆಲೆ ಹುಟ್ಟಿದರೆ? ಮತ್ತು ಪುರುಷಸೂಕ್ತ ಹೇಳುವಂತೆ ಭಗವಂತನ ಮುಖದಿಂದ ಬ್ರಾಹ್ಮಣ ಹುಟ್ಟಿಯಾಗಿದೆ. ಇದಕ್ಕೆ ಸಮಾಧಾನ– ಭಗವಂತನ ಮುಖದಿಂದೊಮ್ಮೆ, ಬ್ರಹ್ಮನ ಮುಖದಿಂದ ಇನ್ನೊಮ್ಮೆ ಬ್ರಾಹ್ಮಣಜಾತಿಯ ಅಭಿಮಾನಿ ಭೃಗುಮುನಿ ಹುಟ್ಟಿದ್ದಾನೆ. ಹೀಗೆ ಕ್ಷತ್ರಿಯಾದಿ ವರ್ಣಾಭಿಮಾನಿಗಳೂ ಹುಟ್ಟಿದ್ದಾರೆ. ಇವರಿಗೆ ವಾಯುದೇವ ರುದ್ರದೇವರಿಂದಲೂ ಪುನಃ ಉತ್ಪತ್ತಿಗಳಿವೆ. ಬೇರೆ ಬೇರೆ ರೂಪಗಳಿಂದ ದೇವತೆಗಳು ಅನೇಕ ಬಾರಿ ಹುಟ್ಟುತ್ತಾರೆ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಹೇಳಿದೆ. ೨೫೧

೩.೭.೩೫ 'ದೈವಕರ್ಮಾತ್ಮರೂಪಿಣಃ' ಎಂಬಲ್ಲಿ ಎಲ್ಲ ದೇವರುಗಳಿಗಿಂತ ಶ್ರೇಷ್ಠ ಸರ್ವೋತ್ತಮನಾದ್ದರಿಂದ ಹರಿ 'ದೈವ' ಎನಿಸುತ್ತಾನೆ. ಮೂಲಕರ್ತನಾದ್ದರಿಂದ ಅವನೇ 'ಕರ್ಮ' ಸರ್ವವ್ಯಾಪ್ತನಾದ್ದರಿಂದ 'ಆತ್ಮ'. ೨೫೩

೩.೭.೩೯ 'ಆತ್ಮವರ್ತ್ಮಾತ್ಮಾ ನ ವೇದ' 'ಭಗವಂತನನ್ನು ಭಗವಂತನೇ ತಿಳಿದಿಲ್ಲ' ಎನ್ನಬಹುದೆ? ಎಂದರೆ, ಇಲ್ಲಿ 'ಆತ್ಮವರ್ತ್ಮ' ಎಂದರೆ ಭಗವಂತನನ್ನು ತಿಳಿದು ಉಪದೇಶಿಸುವ 'ಆತ್ಮ' ಗುಣಪೂರ್ಣನಾದ ಚತುರ್ಮುಖ. ಅವನು ಭಗವಂತನನ್ನು ಪೂರ್ತಿ ತಿಳಿದಿಲ್ಲ ಎಂದರ್ಥ. ಮುಂದಿನ ಶ್ಲೋಕದಲ್ಲಿ 'ಅಹಂ' ಎಂದರೆ ನಾನಲ್ಲ. ಅದು ಮಕಾರಾಂತ ಅವ್ಯಯ. ರುದ್ರ ಎಂದರ್ಥ. ಆತ್ಮ ಅಹಂ ಶಬ್ದಗಳು ಬ್ರಹ್ಮರುದ್ರವಾಚಕಗಳೆಂದು ಬ್ರಹ್ಮಪುರಾಣ ಹೇಳಿದೆ. 'ಮಾಯೆ' ಎಂದರೆ ಗುಣಪೂರ್ಣತ್ವ ಎಂದು ಪದ್ಮಪುರಾಣ ಹೇಳಿದೆ. ೨೫೪

೩.೮.೩ 'ಕ್ರೀಡಾಯಾಮುದ್ಯಮೋಽರ್ಭಸ್ಯ' ಎಂಬ ಪಾಠ ಸರಿಯಲ್ಲ. 'ಕ್ರೀಡಾಯಾಮುದ್ ಯತೋಽರ್ಹಸ್ಯ' ಕ್ರೀಡೆಯಿಂದ ಸಂತೋಷ ಅದಕ್ಕೆ ಯೋಗ್ಯನಾದ ಅಂದರೆ ಅಪೂರ್ಣಸುಖಿಯಾದ ವ್ಯಕ್ತಿಗೆ ಮಾತ್ರ ಸಾಧ್ಯ ಎಂದರ್ಥ. ೨೫೮

೩.೮.೬ ದುಃಖಿಜೀವರ ಶರೀರದಲ್ಲಿರುವುದರಿಂದ ಭಗವಂತನಿಗೆ ದುಃಖವಿದೆ ಎನ್ನಬೇಕೆ? ಶ್ರುತಿವಿರುದ್ಧವಾದ್ದರಿಂದ ಇಲ್ಲ ಎನ್ನಬೇಕೆ? ಎಂಬುದು ವಿದುರನ ಸಂದೇಹ. ೨೫೯

೩.೮.೯ ಮೈತ್ರೇಯರ ಉತ್ತರ– ದುಃಖಿಜೀವರ ಶರೀರದಲ್ಲಿದ್ದರೂ ಭಗವಂತನಿಗೆ ದುಃಖವಿಲ್ಲ. ದುಃಖವಿಲ್ಲದಿರುವುದು ಅವನ ಮಾಯೆ, ಎಂದರೆ ಮಹಿಮೆ. ಶ್ರುತಿ ವಿರೋಧವಿರುವುದರಿಂದ ದುಃಖ ಕೂಡುವುದಿಲ್ಲ ಎನ್ನುವುದೇ ಯುಕ್ತ. ೨೬೦

೩.೮.೧೦ ಭಾಗವತದಲ್ಲಿ ಇಷ್ಟರವರೆಗೆ ವಿದುರನೇನು ಪ್ರಶ್ನೆ ಮಾಡಿದ್ದಾನೆ, ಅದಕ್ಕೆ ಮೈತ್ರೇಯರೇನು ಉತ್ತರ ಕೊಟ್ಟಿದ್ದಾರೆ ಎನ್ನುವುದು ಭಾಲ್ಲವೇಯ ಶ್ರುತಿಯಲ್ಲಿ ಸ್ಪಷ್ಟವಿದೆ. ಭಗವಂತನ ಸಾಕ್ಷಾತ್ಕಾರ ಸಂಸಾರ ಬಂಧನಕ್ಕೆ ವಿರೋಧಿ. ಅದು ಭಗವಂತನಿಗೆ ಸದಾ ಇರುವುದರಿಂದ ಅವನಿಗೆ ಎಂದೂ ಸಂಸಾರ ಬಂಧನವಿಲ್ಲ. ಜೀವರಲ್ಲಿ ಅದು ಇಲ್ಲದಿರುವುದರಿಂದ ಬಂಧವಿದೆ ಎಂದು ಬ್ರಹ್ಮಾಂಡಪುರಾಣದಲ್ಲಿದೆ. 262

೩.೮.೧೩ 'ಇಂದ್ರಿಯೋಪರಾಮ' ಎಂದರೆ ಎಲ್ಲ ಇಂದ್ರಿಯಗಳು ಭಗವಂತನಲ್ಲಿ ಏಕಾಗ್ರತೆಯಿಂದ ನೆಲೆಸುವುದು ಎಂದರ್ಥವಲ್ಲ. ಅದು ಎಂದಿಗೂ ಶಕ್ಯವಿಲ್ಲ. ಜೀವಾತ್ಮನಿಗೆ ಪ್ರಾಕೃತ ಇಂದ್ರಿಯಗಳಿಂದ ಬಿಡುಗಡೆ, ಅಂದರೆ, ಮೋಕ್ಷ ಎಂದರ್ಥ. ೨೬೬

೩.೮.೧೫ 'ಉಭಯತ್ರಾಪಿ ಮನೋ ಮೇ ಸಂಪ್ರಧಾವತಿ' ಎರಡೂ ಕಡೆ ಮನಸ್ಸು ಹೊಯ್ದಾಡುತ್ತದೆ. ಸಂಶಯಗ್ರಸ್ತವಾಗುತ್ತಿದೆ. ಎಂದು ಸ್ವರಸವಾಗಿ ಕಾಣುವ ಅರ್ಥವೇ ಇಲ್ಲಿ ಗ್ರಾಹ್ಯ. ಭಗವಂತನಿಗೆ ಅವತಾರಗಳಲ್ಲಿ ಜಡದೇಹ ಕಾಣುತ್ತದೆ. ಅದಕ್ಕೆ ಇನ್ನೊಬ್ಬರು ಕಾರಣ ಎನ್ನಬೇಕು ಆದರೆ ಅವನು ಮೂಲಕಾರಣನಾದ್ದರಿಂದ ಅವನ ಶರೀರಕ್ಕೆ ಇನ್ನೊಬ್ಬರು ಕಾರಣವಿರಲೂ ಶಕ್ಯವಿಲ್ಲ ಹೀಗೆ ಮನಸ್ಸು ದೋಲಾಯಮಾನವಾಗಿದೆ ಎಂದರ್ಥ. ೨೬೭

೩.೮.೧೮ ಅವತಾರಗಳಲ್ಲಿ ಭಗವಂತನಿಗೆ ಜಡಶರೀರ ಪ್ರತ್ಯಕ್ಷ ಕಾಣುವುದರಿಂದ ಅದು ಇಲ್ಲ ಎಂಬ ವಿಷಯದಲ್ಲಿ ನಾನು ಸಂಶಯಗ್ರಸ್ತನಾಗಿದ್ದೇನೆ. ಆದರೂ 'ಸೇಯಂ ಭಗವತೋ ಮಾಯಾ' ಎಂಬ ನಿಮ್ಮ ಉಪದೇಶದ ಬಲದಿಂದ, 'ಹರಿಗೆ ಜಡಶರೀರವಿಲ್ಲವೆನ್ನುವ ಆಗಮದ ಮುಂದೆ, ಇದೆ ಎನ್ನುವ ಪ್ರತ್ಯಕ್ಷ ದುರ್ಬಲ, ಸಂದೇಹಕಾರಣವಾಗುವುದಿಲ್ಲ' ಎಂದು ನಿರ್ಧರಿಸುತ್ತೇನೆ ಎನ್ನುತ್ತಾನೆ ವಿದುರ. ೨೬೯

೩.೧೦.೧ 'ಅಶುದ್ಧಂ' ಜೀವರಿಗೆ ಪರಮಾತ್ಮ ಏಕೆ ಗೋಚರಿಸುವುದಿಲ್ಲ ಎಂದರೆ ಅವರು 'ಅಶುದ್ಧ'ರು ರಾಗದ್ವೇಷಾದಿ ಮಲಯುಕ್ತರು. 'ಉರುರ್ವಿಭಾಸಿ' ಸ್ಥಾನಭೇದಪ್ರಯುಕ್ತವಾಗಿ ಪರಮಾತ್ಮ ಬೇರೆಬೇರೆಯಾಗಿ ಕಾಣುತ್ತಾನೆ ಹೊರತು ವಸ್ತುತಃ ಬೇರೆಯಲ್ಲ. ೨೮೬

೩.೧೦.೨ 'ನಾತಃ ಪರಂ' ಬ್ರಹ್ಮನಿಗೆ ಜನಕನಾಗಿ ಆಶ್ರಯನಾಗಿ ಅವನ ಕಣ್ಣಿಗೆ ಗೋಚರನಾಗಿ ನಿಂತ ಈ ಹರಿಗಿಂತ ಬೇರೆ ಇನ್ನೊಂದು ಪರವಸ್ತುವೆಂಬುದಿಲ್ಲ. 'ಭೂತೇಂದ್ರಿಯಾತ್ಮಕ' ಎಂದರೆ ಪಂಚಭೂತಗಳಿಗೂ ಇಂದ್ರಿಯಗಳಿಗೂ ಅಧಿಪತಿ. ೨೮೭

೩.೧೦.೫ 'ಚರಣಾಂಬುಜಗೋಶಗಂಧ' ಎಂದರೆ ಜಲಶಾಯಿಯಾದ್ದರಿಂದ ಹರಿಯೆ ಚರಣಾಂಬುಜಕೋಶ. ಅವನ ಗುಣ ಶ್ರವಣಮಾಡಿದಾಗ ಹೃದಯದಲ್ಲಿ ವ್ಯಕ್ತವಾಗುವ ಅವನ ರೂಪವೆ ಅವನ ಗಂಧ ಎನಿಸುತ್ತದೆ ಎಂದು ಬ್ರಹ್ಮತರ್ಕ ಹೇಳಿದೆ. ೨೯೦

೩.೧೦.೯ ಜೀವರಿಗೆ ವಿಷಯಪದಾರ್ಥಗಳೆಲ್ಲ ಮಾಯೆಯಿಂದ ಲಭಿಸುತ್ತದೆ ಎಂದರೆ ಭಗವಂತನ ಇಚ್ಛಾಬಲದಿಂದ ಲಭಿಸುತ್ತದೆ ಎಂದರ್ಥ. 'ಮಾಯೆ' ಎಂದರೆ ಭಗವಂತನ ಇಚ್ಛೆ, ಲಕ್ಷ್ಮಿ, ಜಡಪ್ರಕೃತಿ ಅಥವಾ ಬಂಧಕ ಪ್ರಕೃತಿಗಳೆಂದು ಸಂದರ್ಭಾನುಸಾರ ತಿಳಿಯಬೇಕು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೨೯೩

೩.೧೦.೧೦ 'ಅಧ್ಯಾಹೃತಾರ್ಥಕರಣಾಃ' ಅರ್ಥಗಳಿಂದ ಅಧ್ಯಾಹೃತವಾದ ಕರಣ ಉಳ್ಳವರು, ಅಂದರೆ ವಿಷಯಪದಾರ್ಥಗಳ ಸೆಳೆತಕ್ಕೆ ಇಂದ್ರಿಯಗಳನ್ನು ಬಿಟ್ಟವರು. 'ನಿಶಿ ನಿಶ್ಶಯಾನಾಃ' ಅಜ್ಞಾನದಲ್ಲಿ ಪೂರ್ತಿ ಮುಳುಗಿದವರು. ೨೯೬

೩.೧೦.೧೧ 'ತತ್ತದ್ ವಪುಃ' ಎಂದರೆ ಭಕ್ತರು ಕಲ್ಪಿಸಿಕೊಂಡದ್ದೆ ಭಗವಂತನ ಆಕಾರವಾಗುವುದೆಂದರ್ಥವಲ್ಲ. ಭಕ್ತರು ತಮಗೆ ಯೋಗ್ಯವಾದ ವಾಸ್ತವವಾದ ಯಾವ ಭಗವದ್ರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವರೋ ಆ ರೂಪದ ಸಾರೂಪ್ಯ ಅವರಿಗೆ ಲಭ್ಯವಾಗುವುದೆಂದರ್ಥ. ೨೯೮

೩.೧೦.೧೨ 'ನಾತಿಪ್ರಸೀದಸಿ' ಎಂದರೆ 'ಬೇರೆ ಭಕ್ತರಿಗೆ ಒಲಿವಷ್ಟು ದೇವತೆಗಳಿಗೆ ಹರಿ ಒಲಿಯುವುದಿಲ್ಲ, ಅವರು ಸ್ವಾರ್ಥಿಗಳು ಪದವಿಗಳನ್ನು ಆಶಿಸುವವರು' ಎಂದರ್ಥವಲ್ಲ. ಪದವಿಗಳನ್ನು ಆಶಿಸುವುದು ಅವರಿಗೆ ಕರ್ತವ್ಯಧರ್ಮ. ಆದರಿಂದ 'ದೇವತೆಗಳಿಗೆ ಒಲಿವಷ್ಟು ಕಾಮ್ಯಕರ್ಮಿಗಳಿಗೆ ಒಲಿಯುವುದಿಲ್ಲ' ಎಂದರ್ಥ. ಸತ್ಯಸಂಹಿತೆಯಲ್ಲಿ ಹಾಗೇ ಹೇಳಿದೆ. ೩೦೦

ಮಾಡೆನ್ನುತ್ತಾನೆ. 'ತನ್ಮಯಾ ಚೋದಿತಂ' 'ನೀನು ನನ್ನಲ್ಲಿ ಜ್ಞಾನವನ್ನು ಬೇಡಿದ್ದೂ ನನ್ನ ಪ್ರೇರಣೆಯಿಂದ' ಎನ್ನುತ್ತಾನೆ. ೩೧೨

೩.೧೦.೩೦ ತಪಸ್ಸೆಂದರೆ ಧ್ಯಾನ, ವಿದ್ಯೆ ಎಂದರೆ ನಿಷ್ಠೆ ಎನ್ನುತ್ತದೆ ಕಪಿಲಸಂಹಿತೆ. ೩೧೨

೩.೧೦.೩೧ ಹರಿ ಅಚಿಂತ್ಯಶಕ್ತಿಯಿಂದ ಅಣುವೂ ಹೌದು, ಮಹತ್ತೂ ಹೌದು. ಆದರಿಂದ ಹೃದಯದಲ್ಲಿ ಅಂಗುಷ್ಠಪರಿಮಾಣದಿಂದಿರುವ ಹರಿಯಲ್ಲಿಯೆ ಎಲ್ಲ ಲೋಕಗಳಿದ್ದು ಹೃದಯದಲ್ಲಿಯೇ ಅವು ಕಾಣಬಹುದು. ೩೧೩

೩.೧೦.೩೩ ಜೀವ ದೇಹಾಭಿಮಾನ ತೊರೆದು ಹೃದಯದಲ್ಲಿ ತನ್ನನ್ನು ಬಿಂಬನ ಪದತಲದಲ್ಲಿ ಪ್ರತ್ಯಕ್ಷ ಕಂಡರೆ ಮುಕ್ತಿ ಎಂದು ದತ್ತಾತ್ರೇಯ ಯೋಗದಲ್ಲಿ ಹೇಳಿದೆ. ೩೧೪

೩.೧೦.೩೯ ಶ್ರೀಹರಿ 'ಗುಣಮಯ' ಅಂದರೆ ಅಪ್ರಾಕೃತ ಸ್ವರೂಪಭೂತ ಗುಣಗಳಿಂದ ಪೂರ್ಣ. 'ನಿರ್ಗುಣ' ಅಂದರೆ ತ್ರಿಗುಣರಹಿತ ಎಂದು ವ್ಯೋಮಸಂಹಿತೆ ಹೇಳಿದೆ. 'ಲೋಕಾನಾಂ ವಿಜಯೇಚ್ಛಯಾ' ಲೋಕಾಧಿಪತ್ಯವನ್ನು ಬಯಸಿ ಬ್ರಹ್ಮ ಭಗವಂತನನ್ನು ಸ್ತೋತ್ರ ಮಾಡಿದ್ದು ಕಾಮ್ಯಕರ್ಮವೆನಿಸುವುದಿಲ್ಲ. ಪದವಿಗಳಲ್ಲಿ ನಿಯುಕ್ತರಾಗುವ ದೇವತೆಗಳು ಆ ಪದವಿಗಳನ್ನು ಬಯಸುವುದು ಸ್ವಾರ್ಥವಲ್ಲ, ಹರಿಗೆ ಪ್ರೀತಿಕರವೆ. ೩೧೭

೩.೧೦.೪೧ 'ರಾದ್ಧಂ ನಿಃಶ್ರೇಯಸಂ' ಎಂದು ಪಾಠವಲ್ಲ. 'ರಾಜ್ಯಂ ನಿಃಶ್ರೇಯಸಂ' ಮೋಕ್ಷದಲ್ಲಿಯೂ ಬಯಸಬೇಕಾದುದು ಹರಿಪ್ರೀತಿಯೆ. ಮುಕ್ತನಿಗೂ ತನ್ನ ಹಿಂದಿನ ಕರ್ಮಗಳಿಗೆ ಪ್ರತಿಫಲವಾಗಿ ಹರಿಪ್ರೀತಿಯೇ ಇಷ್ಟವಾಗಿರುತ್ತದೆ ಎಂದು ವಾಮನಪುರಾಣ ಹೇಳಿದೆ. ೩೧೯

೩.೧೦.೪೨ 'ದೇಹಾದಿರ್ಯತ್ಕೃತೇ ಪ್ರಿಯಃ' ಎಂದರೆ ಭಗವಂತನನ್ನು ಪ್ರೀತಿಯಿಂದ ಸೇವಿಸುವುದಕ್ಕಾಗಿ ಭಕ್ತ ಪ್ರಾಕೃತ ದೇಹವಿರಲಿ ಎನ್ನುತ್ತಾನೆ, ಮುಕ್ತಿ ಬೇಡ ಎನ್ನುತ್ತಾನೆ ಎಂದರ್ಥವಲ್ಲ. ದೇಹ ತನಗಾಗಿ ಪ್ರಿಯವೆನಿಸುವಂತೆ ತಾನು ತನಗಾಗಿ ಪ್ರಿಯನೆನಿಸುವುದೂ ತನ್ನಲ್ಲಿ ಹರಿ ಇರುವುದರಿಂದ. ಆದರಿಂದ ತನಗೆ ತನಗಿಂತಲೂ ತನ್ನಲ್ಲಿರುವ ಹರಿ ಪ್ರಿಯನೆನಿಸಬೇಕು ಎಂದು ಬ್ರಹ್ಮವೈವರ್ತಪುರಾಣ ಹೇಳಿದೆ. ೩೨೧

೩.೧೧.೪ 'ಆತ್ಮನ್ಯಾತ್ಮಾನಮಾವೇಶ್ಯ' ಆತ್ಮನಲ್ಲಿ ಆತ್ಮನನ್ನು ಇರಿಸುವುದೆಂದರೆ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವುದು. ೩೨೩

೩.೧೧.೯ ಅನಿಮಿತ್ತ ಧರ್ಮವೆಂದರೆ 'ಅ'ಎಂದು ಭಗವಂತನ ಹೆಸರು. ಭಗವಂತನ ನಿಮಿತ್ತವಾಗಿ ಅವನಿಗೆ ಪ್ರೀತಿಯಾಗಲೆಂದು ಮಾಡಿದ ಪುಣ್ಯಕರ್ಮ. ೩೨೪

೩.೧೧.೧೦ ಬಹುರೂಪನಾದ ಭಗವಂತನ ಕಾಲವೆಂಬ 'ಲಕ್ಷಣ' ಎಂದರೆ ಕಾಲ ಎಂಬ ಒಂದು ರೂಪ. ಲಕ್ಷಣವೆಂದರೆ ರೂಪವೆಂದು ಅಭಿಧಾನಗ್ರಂಥ ಹೇಳುತ್ತಿದೆ. ೩೨೫

೩.೧೧.೧೧ 'ಗುಣವ್ಯತಿಕರಾಕಾರಃ' ಎಂದರೆ ಸೃಷ್ಟಿ ಮಾಡಲು ಆಲೋಚಿಸುವವನು. 'ತದುಪಾದಾನ' ಎಂದರೆ ಸೃಷ್ಟ್ಯಾದಿಗಳನ್ನು ಉದ್ದೇಶಿಸುವವನು. ಆ ಉದ್ದೇಶದಿಂದ ಹರಿಯು ಬ್ರಹ್ಮ ವಿಷ್ಣು ಮಹೇಶ್ವರರೂಪಗಳನ್ನು ಸ್ವೀಕರಿಸುತ್ತಾನೆ. ೩೨೬

೩.೧೧.೧೨ ಬ್ರಹ್ಮಾಂತರ್ಯಾಮಿ ಬ್ರಹ್ಮರೂಪ ಸೃಷ್ಟಿಕರ್ತೃ, ಈಶ್ವರಾಂತರ್ಗತ ಈಶ್ವರರೂಪ ಲಯಕರ್ತೃ. ಈಶ್ವರರೂಪಕ್ಕೆ ಕಾಲ ಎಂದು ಇನ್ನೊಂದು ಹೆಸರು ಎಂದು ಸೌಕರಾಯಣಶ್ರುತಿ ಹೇಳುತ್ತದೆ. ೩೨೮

೩.೧೧.೧೩ ಜಗತ್ತನ್ನು ಮಿಥ್ಯೆ ಎಂದು ತಿಳಿದರೆ ಬಹಳ ಅನರ್ಥವೆಂದು ಸ್ಕಾಂದಪುರಾಣ ಹೇಳಿದೆ. ೩೩೧

೩.೧೧.೧೪ ತಾಮಸಪದಾರ್ಥಕ್ಕೆ ಸತ್ವಗುಣದಿಂದ ನಾಶ. ಸಾತ್ವಿಕ ಪದಾರ್ಥಕ್ಕೆ ತಮೋದಿಂದ ಗುಣ ನಾಶ. ಇದು ಗುಣನಿಮಿತ್ತಕ ಲಯ. 'ಬೆಳಕಿನಿಂದ ಕತ್ತಲು ನಾಶವಾಗುತ್ತದೆ. ಪಿತ್ತದಿಂದ ಕಫಪರಿಹಾರ. ಚೇತನಾಚೇತನಾತ್ಮಕ ಎಲ್ಲ ಪದಾರ್ಥಗಳೂ ನಿರ್ದಿಷ್ಟಕಾಲದಲ್ಲಿ ಮಾತ್ರವಿದ್ದು ಬಳಿಕ ನಾಶ ಹೊಂದುತ್ತದೆ. ಇದು ಕಾಲನಿಮಿತ್ತ ಲಯ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಸೃಷ್ಟಿಕಾಲದಲ್ಲಿ ಸತ್ವರಾಶಿ ಇತರಗುಣಗಳಿಂದ ಮಿಶ್ರವಾಗದೆ ಶುದ್ಧವಾಗಿರುತ್ತದೆ. ರಜೋರಾಶಿ ಮತ್ತು ತಮೋರಾಶಿಗಳಲ್ಲಿ ಮೂರೂ ಗುಣಗಳು ಸೇರಿರುತ್ತವೆ. ಇದು ವೈಷಮ್ಯಾವಸ್ಥೆ. ಲಯಕಾಲದಲ್ಲಿ ಮಹತ್ತತ್ವದ ಹನ್ನೆರಡು ಭಾಗಗಳಲ್ಲಿ ಹತ್ತು ಭಾಗ ಸತ್ವರಾಶಿಗೂ, ಒಂದು ಭಾಗ ರಜೋರಾಶಿಗೂ, ಒಂದು ಭಾಗ ತಮೋರಾಶಿಗೂ ಹೋಗಿ ಸೇರಿದಾಗ ಮೂರು ರಾಶಿಗಳೂ ಮೂರು ಮೂರು ಗುಣಗಳಿಂದ ಮಿಶ್ರಿತವಾಗಿ ಸಮವೆನಿಸುವುದರಿಂದ ಇದು ಸಾಮ್ಯಾವಸ್ಥೆ. ರಜೋರಾಶಿಯ ಮೂರು ಭಾಗ, ತಮೋರಾಶಿಯ ಒಂದು ಭಾಗ ಹೀಗೆ ನಾಲ್ಕು ಭಾಗಗಳಿಂದ ಮಹತ್ತತ್ವಸೃಷ್ಟಿ. ಮಹತ್ತತ್ವದಲ್ಲಿ ಸೇರಿದ ತಮೋಭಾಗದಿಂದ ಅಹಂಕಾರಸೃಷ್ಟಿ. ೩೩೨

೩.೧೧.೧೬ ಅಹಂಕಾರ ತತ್ವದಲ್ಲಿರುವ ತಮೋಂಶವು ಸಾತ್ವಿಕ ರಾಜಸ ತಾಮಸವೆಂದು ಮೂರು ಬಗೆ. ತಾಮಸಾಂಶದಿಂದ ಪಂಚಭೂತಗಳು ಹುಟ್ಟುತ್ತವೆ. ರಾಜಸಾಂಶದಿಂದ ದಶೇಂದ್ರಿಯಗಳು. ಸಾತ್ವಿಕಾಂಶದಿಂದ ಮನಸ್ಸು ಮತ್ತು ದೇವತಾಶರೀರಗಳು. ಇಂದ್ರಾದಿದೇವತೆಗಳು ದೇಹಾಭಿಮಾನಪ್ರಯುಕ್ತ ವಿಕಾರ ಉಳ್ಳವರಾದ್ದರಿಂದ ವೈಕಾರಿಕರು. ಅವರು ಇಂದ್ರಿಯಾಭಿಮಾನಿಗಳಾಗಿ ಜನಿಸಿದಾಗ ಇನ್ನೂ ಹೆಚ್ಚಿನ ವಿಕಾರವಿದ್ದರೂ ಜ್ಞಾನಾದಿ ಗುಣವಿರುವುದರಿಂದ ತೈಜಸರೆನಿಸುತ್ತಾರೆ. ಅವರು ಭೂತಾಭಿಮಾನಿಗಳಾಗಿ ಹುಟ್ಟಿದಾಗ ಜ್ಞಾನಾದಿ ಗುಣವೂ ಕಡಿಮೆಯಾಗುವುದರಿಂದ ತಾಮಸರೆನಿಸುತ್ತಾರೆ. ೩೩೬

೩.೧೧.೧೭ ಪಂಚಭೂತಗಳಲ್ಲಿ ಸಾವಿರ ಭಾಗ ಸತ್ವಗುಣವಿರುತ್ತದೆ. ನೂರು ಭಾಗ ರಜಸ್ಸು, ಒಂದು ಭಾಗ ತಮಸ್ಸು. ಆದರಿಂದ ಅದರ ಅಭಿಮಾನಿಗಳು ತಾಮಸರೆನಿಸಿದರೂ ಸರ್ವಜ್ಞರೇ. ಆ ಒಂದು ಭಾಗ ತಮಸ್ಸಿನಿಂದ ಪಂಚಪರ್ವಅವಿದ್ಯಾಸೃಷ್ಟಿ. ಹೀಗೆ ಮಹತ್ತತ್ವ, ಅಹಂಕಾರತತ್ವ, ಪಂಚ ಭೂತಗಳು, ಇಂದ್ರಿಯಗಳು, ಇಂದ್ರಿಯಾಭಿಮಾನಿಗಳು, ಅವಿದ್ಯೆ ಎಂದು ಆರು ಪ್ರಾಕೃತ ಸೃಷ್ಟಿಗಳು. ಅಂದರೆ ಬ್ರಹ್ಮಾಂಡದ ಹೊರಗೆ ನಡೆದ ಸೃಷ್ಟಿಗಳು. ೩೩೮

೩.೧೧.೧೮ ನವವಿಧಸೃಷ್ಟಿಗಳಲ್ಲಿ ಏಳನೆಯದು ಸ್ಥಾವರಜೀವರ ಸೃಷ್ಟಿ. ಇದು ವೈಕೃತಸೃಷ್ಟಿ. ಬ್ರಹ್ಮಾಂಡದೊಳಗೆ ನಡೆಯುತ್ತದೆ. ಸ್ಥಾವರಜೀವರು ಉತ್‌ಸ್ರೋತಸರು. ಪರೋಪಕಾರ ಪುಣ್ಯ ಮಾಡಿ ಉತ್ತಮ ಗತಿ ಹೊಂದುವವರು. ತ್ರಿರ್ಯಕ್ ಪ್ರಾಣಿಗಳು ಪುಣ್ಯಪಾಪಗಳೆರಡನ್ನೂ ಮಾಡದೆ ಭೂಮಿಯಲ್ಲಿಯೆ ತಿರುಗಿ ಹುಡುವುದರಿಂದ ತಿರ್ಯಕ್ ಸ್ರೋತಸರು. ಮಾನವರು ಪ್ರಾಯಃ ಪಾಪಮಾಡಿ ನರಕಕ್ಕೆ ಬೀಳುವುದರಿಂದ ಅರ್ವಾಕ್ ಸ್ರೋತಸರು. ದೇವತೆಗಳು ಪುಣ್ಯವನ್ನೇ ಮಾಡಿ ಅತ್ಯುತ್ತಮಗತಿಯನ್ನೇ ಹೊಂದುವುದರಿಂದ ಊರ್ಧ್ವಸ್ರೋತಸರು. ೩೪೩

೩.೧೧.೨೦ ತಿರ್ಯಕ್ ಪ್ರಾಣಿ ಸೃಷ್ಟಿ ನವವಿಧಸೃಷ್ಟಿಯಲ್ಲಿ ಎಂಟನೆಯದು. ಈ ತಿರ್ಯಕ್ ಪ್ರಾಣಿಗಳಲ್ಲಿ ಯಜ್ಞೋಪಯೋಗಿಗಳು ಇಪ್ಪತ್ತೆಂಟು ಬಗೆ. ೩೪೬

೩.೧೧.೨೫ ಅರ್ವಾಕ್ ಸ್ರೋತಸರ ಸೃಷ್ಟಿ ನವವಿಧಸೃಷ್ಟಿಯಲ್ಲಿ ಕೊನೆಯದು.ಈ ಅರ್ವಾಕ್ ಸ್ರೋತಸರಲ್ಲಿ ರಜೋಗುಣದವರದು ಒಂದು ಬಗೆ, ತಮೋಗುಣದವರದು ಒಂದು ಬಗೆ. ರಜೋಗುಣದಿಂದ ಹುಟ್ಟಿದವರು

ಯಾವಾಗಲೂ ಕಾಮ್ಯಕರ್ಮರತರು. ತಮೋಗುಣದಿಂದ ಹುಟ್ಟಿದವರು ದುಷ್ಕರ್ಮರತರು, ದುಃಖಸಾಧನವನ್ನೇ ಸುಖಸಾಧನವೆಂದು ಭ್ರಮಿಸುವವರು, ಅಸುರರು ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ೩೪೯

೩.೧೧.೨೬ 'ಕು–ಮಾ–ಅ' ಭೂಮಿಯಲ್ಲಿ ಸೃಷ್ಟಿ ಹೊಂದುವ ದೇವತೆಗಳು ಕುಮಾರರು. ಅವರ ಸೃಷ್ಟಿ ಕೌಮಾರಸೃಷ್ಟಿ. ಆದರಿಂದ ಇದು ಪ್ರಾಕೃತ ವೈಕೃತ ಉಭಯಾತ್ಮಕ ಸೃಷ್ಟಿ. ಬ್ರಹ್ಮಾಂಡದ ಹೊರಗೂ ಒಳಗೂ ಸೃಷ್ಟಿ. ಹೊರಗೆ ಹಿಂದೆ ಸೃಷ್ಟರಾದವರೇ ಈಗ ಒಳಗೆ ಸೃಷ್ಟಿ ಹೊಂದುತ್ತಾರೆ. ೩೫೧

೩.೧೧.೨೭ ಕೌಮಾರ ಸೃಷ್ಟಿಯಲ್ಲಿ ಹುಟ್ಟುವ ದೇವತೆಗಳು ಎಂಟು ಬಗೆ. ಎಲ್ಲ ದೇವತೆಗಳು, ನೂರು ಪಿತೃಗಳು, ಮೂವತ್ತು ಅಸುರರು, ನೂರು ಗಂಧರ್ವರೊಂದಿಗೆ ನೂರು ಅಪ್ಸರೆಯರೆಂದು ಇನ್ನೂರು ಮಂದಿ, ಎಪ್ಪತ್ತು ಯಕ್ಷರಾಕ್ಷಸರು, ಮೂವತ್ತು ಚಾರಣರು, ನೂರು ಸಿದ್ಧರು. ಎಪ್ಪತ್ತು ಭೂತಪ್ರೇತಪಿಶಾಚಾದಿಗಳು. ಇವರೆಲ್ಲ ಸಾತ್ವಿಕರೆ. ಉತ್ತಮಗತಿ ಹೊಂದುವ ಊರ್ಧ್ವಸ್ರೋತಸರೆ. ಬೇರೆ ಅಸುರರಾಕ್ಷಸ ಮುಂತಾದವರು ತಾಮಸರು. ೩೫೪

೩.೧೧.೨೯ 'ಗುಣಾಪ್ಲುತಃ ಆತ್ಮೈವಾತ್ಮಾನಮಾತ್ಮನಾ' ಎಂದರೆ ಪರಮಾತ್ಮ ಗುಣಬದ್ಧನಾಗಿ ಪ್ರಪಂಚಕ್ಕೆ ತಾನೇ ಉಪಾದಾನ, ತಾನೆ ಕರ್ತನೆನಿಸುತ್ತಾನೆ ಎಂದರ್ಥವಲ್ಲ. ಗುಣಪ್ರೇರಕನಾಗಿದ್ದು ಪ್ರಪಂಚಕ್ಕೆ ಕೇವಲ ಕರ್ತನಾಗಿದ್ದಾನೆ. ಪ್ರಪಂಚಾಂತರ್ಗತ ಬಹುರೂಪಗಳನ್ನು ತಾನೇ ಸ್ವೀಕರಿಸುವಲ್ಲಿ ಮಾತ್ರ ಕರ್ತೃ ಕರ್ಮ ಕರಣ ಮೂರೂ ತಾನೇ ಆಗುತ್ತಾನೆ ಎಂದು ನಾರದಪುರಾಣ ಅಗ್ನಿಪುರಾಣಗಳಲ್ಲಿ ಹೇಳಿದೆ. ೩೫೭

೩.೧೨.೧ ಪರಮಾಣುವಿಗೆ ಎರಡುಲಕ್ಷಣಗಳು– ಸ್ವರ್ಗವನ್ನು ಹೊಂದಿದ ಮನುಷ್ಯರ ಸೂಕ್ಷ್ಮದೃಷ್ಟಿಗೂ ನಿರಂಶವಾಗಿ ಕಾಣುವ ವಸ್ತು ಪರಮಾಣು ಎಂದು ಒಂದು ಲಕ್ಷಣ. ಕಣಾದಿಮನುಷ್ಯರು ಭ್ರಾಂತಿಯಿಂದ ನಿರಂಶವೆಂದು ಒಪ್ಪಿದ ವಸ್ತು ಪರಮಾಣುವೆಂದು ಇನ್ನೊಂದು ಲಕ್ಷಣ. ಆ ವಸ್ತುವು ವಸ್ತುತಃ ಪರಮಾಣು ವಲ್ಲದಿದ್ದರೂ ಹಾಗೆ ವ್ಯವಹಾರವನ್ನು ಮುನಿಗಳು ಅಂಗೀಕರಿಸಿದ್ದಾರೆ ಎಂದು ತತ್ತ್ವವಿವೇಕದಲ್ಲಿ ಹೇಳಿದೆ. ೩೫೯

೩.೧೨.೨ ಬ್ರಹ್ಮಾಂಡದಾಚೆಗೂ ಸರ್ವತ್ರ ವ್ಯಾಪಿಸಿರುವ ಶೂನ್ಯನಾಮಕವಾದ ನಾರಾಯಣನ ಮೂಲರೂಪ ಪರಮಮಹದ್ ದ್ರವ್ಯವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೬೩

೩.೧೨.೪ ಸ್ವರ್ಗದಲ್ಲಿರುವ ಮಾನವನು ನಿರಂಶವಾಗಿ ಕಾಣುವ ಕಾಲಾಂಶವೇ ಪರಮಾಣುಕಾಲ. ಇನ್ನೊಂದು ಕಾಲಕ್ಕೆ ಅಂಶರೂಪವಾಗದ ಅಪರಿಮಿತವಾದ ಕಾಲಪ್ರವಾಹವೇ ಪರಮಮಹತ್ಕಾಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಈ ಪರಮಾಣುಕಾಲ ಪರಮಮಹತ್ಕಾಲಗಳಲ್ಲಿ ನಿಯಾಮಕವಾಗಿರುವ ಭಗವದ್ರೂಪಗಳಿಗೇ ಮುಖ್ಯವಾಗಿ ಪರಮಾಣು ಪರಮಮಹತ್ಕಾಲಗಳೆಂದು ಹೆಸರು ಎಂದು ಬ್ರಹ್ಮವೈವರ್ತಪುರಾಣದಲ್ಲಿ ಹೇಳಿದೆ. ೩೬೮

೩.೧೨.೫ 'ಜಾಲಾರ್ಕರಶ್ಮ್ಯವಗತಃ ಅಗಾತ್' ಎಂದರೆ ಕಿಟಕಿಯ ಬಿಸಿಲು ಕೋಲಲ್ಲಿ ದೃಷ್ಟಿಯೋಗ್ಯತೆಯನ್ನು ಹೊಂದಿ 'ಅಗಾತ್' ಕಣ್ಣಿಗೆ ಕಾಣುತ್ತದೆ ಎಂದರ್ಥ. ಅದರಿಂದ 'ಅವಗತಃ ಅಗಾತ್' ಎಂದರೆ ಪುನರುಕ್ತಿ ಇಲ್ಲ. ೩೭೩

೩.೧೨.೮. ಆರು ಗಳಿಗೆಗಳು ಒಂದು ಪ್ರಹರ. ಯಾಮ ಮಾತ್ರ ಸಂಕ್ರಮಣ ವ್ಯತ್ಯಾಸದಿಂದ ವ್ಯತ್ಯಾಸವಾಗುತ್ತದೆ. ಅದರಲ್ಲಿ ಏಳು ಅಥವಾ ಅದಕ್ಕಿಂತ ಹೆಚ್ಚು ಗಳಿಗೆಗಳಿರುತ್ತದೆ, ಹೊರತು ಪ್ರಹರ ಯಾಮಗಳೆಂದರೆ ಒಂದೇ ಎಂದೊಪ್ಪಿ ಆರು ಅಥವಾ ಏಳು ಗಳಿಗೆಗಳು ಯಾಮ ಎಂದು ಹೇಳಬಾರದು. ೩೭೪

೩.೧೨.೯ ಒಂದು ಪ್ರಸ್ಥ ನೀರು ಹಿಡಿಯುವ ಆರು ಪಲ ಭಾರದ ತಾಮ್ರದ ಪಾತ್ರೆಯಲ್ಲಿ ನಾಲ್ಕು ಮಾಷ ತೂಕದ ನಾಲ್ಕು ಅಂಗುಲ ಉದ್ದದ ಬಂಗಾರದ ಕಡ್ಡಿ ತೂರುವಷ್ಟು ರಂಧ್ರ ಮಾಡಿದರೆ ಗಳಿಗೆ ಬಟ್ಟಲಾಗುವುದೆಂದು ಪದ್ಮಪುರಾಣ ಹೇಳಿದೆ. ೩೭೬

೩.೧೨.೧೦ 'ಅಹನೀ' ಎಂಬಲ್ಲಿ ದ್ವಿವಚನವಿದ್ದರೂ ಪುನಃ 'ಉಭೇ' ಎಂಬ ಶಬ್ದ ಬೇಕು. ಏಕೆಂದರೆ ಅಹಸ್ ಎಂಬ ಶಬ್ದಕ್ಕೆ ಹಗಲೆಂದೂ ರಾತ್ರಿ ಎಂದೂ ಎರಡು ಅರ್ಥಗಳಿವೆ. ಅದರಿಂದ ದ್ವಿವಚನದಿಂದ ಎರಡು ಹಗಲೆಂದೋ ಎರಡು ರಾತ್ರಿ ಎಂದೋ ಅರ್ಥವಾಗಬಹುದು. ಒಂದು ಹಗಲು ಒಂದು ರಾತ್ರಿ ಹೀಗೆ ಎರಡೆಂಬ ಅರ್ಥ ಸಿಗಬೇಕಾದರೆ 'ಉಭೇ' ಎಂಬ ಶಬ್ದ ಬೇಕು. ಎಂದು ಅಭಿಧಾನ ಎಂಬ ಗ್ರಂಥದಲ್ಲಿದೆ. ೩೭೮

೩.೧೨.೧೪ ಸೌರ ಬಾರ್ಹಸ್ಪತ್ಯ ನಾಕ್ಷತ್ರ ಚಾಂದ್ರ ಸಾವನ ಮಾನಗಳಿಂದಾಗುವ ಸಂವತ್ಸರ ಪರಿವತ್ಸರ ಇಡಾವತ್ಸರ ಅನುವತ್ಸರ ವತ್ಸರಗಳಲ್ಲಿ ನಿಯಾಮಕವಾದ ಭಗವದ್ರೂಪಗಳಿಗೇ ಸಂವತ್ಸರ ಮುಂತಾದ ಹೆಸರುಗಳು ಮುಖ್ಯ. ಇದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ೩೭೯

೩.೧೨.೧೫ 'ಭೂತಭೇದಃ' ಭೂತಗಳಲ್ಲಿ ಅಂದರೆ ಪ್ರಾಣಿಗಳಲ್ಲಿ ಮನುಷ್ಯರಲ್ಲಿ, ವಯಸ್ಸಿನಲ್ಲಿ ಹಿರಿಯರು ಕಿರಿಯರೆಂಬ ಭೇದವನ್ನು ವಿವೇಕವನ್ನು

ಮಾಡಿಕೊಡುವವನು ಕಾಲನಾಮಕ ಭಗವಂತನೆಂದು ತಂತ್ರಪ್ರಕಾಶಿಕಾ ಗ್ರಂಥದಲ್ಲಿ ಹೇಳಿದೆ. ೩೮೦

೩.೧೨.೨೩ 'ದಿನಂ ಭುಂಜನ್' ಎಂದು ಲಿಂಗ ವ್ಯತ್ಯಾಸಕ್ಕೆ ಕಾರಣವೇನೆಂದರೆ ಇಲ್ಲಿ ದಿನವೆಂದರೆ ದಿನದಲ್ಲಿರುವ ಭಗವಂತ ವಿವಕ್ಷಿತ. ಆದರಿಂದ ಭುಂಜನ್ ಎಂದು ಪುಲ್ಲಿಂಗ ಪ್ರಯೋಗ. ದಿನದಲ್ಲಿರುವ ಭಗವಂತ ಹದಿನಾಲ್ಕು ಮನ್ವಂತರಕಾಲವನ್ನು ಭೋಗಿಸುವವರೆಗೆ ಮೂಲೋಕಸೃಷ್ಟಿ ಇರುತ್ತದೆ. ೩೮೧

೩.೧೨.೨೪ 'ಸಾಧಿಕಾ ಏಕಸಪ್ತತಿಃ' ಎಪ್ಪತ್ತೊಂದು ಮಹಾಯುಗಗಳೊಂದಿಗೆ ಅಧಿಕವಾಗಿ ಸೇರಿಸಬೇಕಾದ ಕಾಲ ಎಷ್ಟು? ಮನ್ವಂತರ ಪ್ರಳಯ ಕಾಲವೆಷ್ಟು? ಎನ್ನುವುದನ್ನು ಮಹಾವರಾಹ ಪುರಾಣದಲ್ಲಿ ಹೇಳಿದೆ. ಅಧಿಕವಾಗಿ ಸೇರಿಸಬೇಕಾದ ಕಾಲ ಹದಿನೆಂಟುವರೆ ಲಕ್ಷವರ್ಷಗಳು. ಮನ್ವಂತರ ಪ್ರಳಯ ಕಾಲಗಳು ಎಲ್ಲ ಮನ್ವಂತರಗಳಲ್ಲಿ ಒಂದೇ ರೀತಿ ಇಲ್ಲ. ಮೊದಲನೆ ಮನ್ವಂತರ ಲಯಕಾಲ ಎರಡು ಸಾವಿರವರ್ಷಗಳು. ಎರಡನೆ ಮನುಲಯ ಒಂದು ಸಾವಿರದ್ವೆನೂರು ವರ್ಷ. ಮೂರನೇ ಮನುಲಯ ಒಂದು ಸಾವಿರದ ನಾನೂರು ವರ್ಷ. ಮುಂದಿನ ಮೂರು ಮನುಲಯಗಳು ಪ್ರತಿಯೊಂದೂ ಒಂದು ಸಾವಿರದ ಮುನ್ನೂರು ವರ್ಷಗಳು. ಇನ್ನುಳಿದ ಎಂಟು ಮನುಲಯಕಾಲಗಳು ಪ್ರತಿಯೊಂದೂ ಒಂದು ಸಾವಿರದ ನಾನೂರು ವರ್ಷಗಳು. ಒಟ್ಟು ಇಪ್ಪತ್ತು ಸಾವಿರ ವರ್ಷಗಳು. ೩೮೩

೩.೧೨.೨೭ 'ಕಾಲೇನಾನುಗತಃ ಶೇಷ ಆಸ್ತೇ' ಎಂದರೆ ಕಾಲಾಭಿಮಾನಿಯಾದ ಬ್ರಹ್ಮನೊಂದಿಗೆ ಹರಿಯು ಯೋಗನಿದ್ರೆ ಮಾಡುತ್ತಾನೆ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೩೮೬

೩.೧೨.೩೨ 'ಅಸ್ಯ ಪರಮಾಯುಃ' ಎಂದರೆ ಹಿಂದೆ 'ಬ್ರಹ್ಮಣೋ ದಿನಂ' ಎಂದು ಪ್ರಕೃತನಾದ ಬ್ರಹ್ಮನ ಪೂರ್ಣಾಯುಷ್ಯ ಎಂದರ್ಥ. ೩೮೬

೩.೧೨.೩೭ ಬ್ರಹ್ಮನ ಎರಡು ಪರಾರ್ಧದ ಪೂರ್ಣಾಯುಷ್ಯಕಾಲ ಹರಿಗೆ ನಿಮೇಷವೂ ಅಲ್ಲ. ಔಪಚಾರಿಕವಾಗಿ ನಿಮೇಷವೆನಿಸುತ್ತದೆ. ನಿತ್ಯನಾದ್ದರಿಂದ ಆತನಿಗೆ ಆಯುರ್ಮಾನವೆಂಬುದೇ ಇಲ್ಲವೆಂದು ಹರಿವಂಶದಲ್ಲಿದೆ. ೩೮೮

೩.೧೨.೩೮ ಕಾಲವೆಂದರೆ ಇಲ್ಲಿ ಕಾಲಾಭಿಮಾನಿನಿ ದುರ್ಗೆ. ಏಕೆಂದರೆ ಮನುಷ್ಯರಿಗೆ ಕಾಲನು ಯಮ. ಅವನಿಗೆ ಕಾಲ ಮನ್ಮಥ. ಮನ್ಮಥನಿಗೆ ರುದ್ರ, ರುದ್ರನಿಗೆ

ಬ್ರಹ್ಮ, ಬ್ರಹ್ಮನಿಗೆ ದುರ್ಗೆ, ಈ ದುರ್ಗೆಯೂ ಹರಿಯನ್ನು ಆಳಲು ಸಮರ್ಥಳಲ್ಲ ಇದು ಹರಿವಂಶದಲ್ಲಿದೆ. ೩೮೯

೩.೧೨.೪೦ ವಿಕಾರವೆಂದರೆ ಇಂದ್ರಿಯಗಳು ಮನಸ್ಸು ಮತ್ತು ಪಂಚಭೂತಗಳು. ವಿಶೇಷವೆಂದರೆ ಪೃಥಿವಿ. ಬ್ರಹ್ಮಾಂಡಕ್ಕೆ ಪೃಥಿವಿ ಮುಂತಾದ ಎಂಟು ಆವರಣಗಳಿವೆ. ಒಂದು ಕಲ್ಪದಲ್ಲಿ ಒಂದೇ ಬ್ರಹ್ಮಾಂಡ ಸೃಷ್ಟಿ ಮಾಡುತ್ತಾನೆ ಭಗವಂತ. ಅನಂತ ಕೋಟಿ ಬ್ರಹ್ಮಾಂಡಗಳೇನೂ ಸೃಷ್ಟಿಮಾಡುವುದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೯೦

೩.೧೨.೪೧ 'ವಿಷ್ಣೋರ್ಧಾಮ' ಎಂದರೆ ವಿಷ್ಣುಮಂದಿರ. ಬ್ರಹ್ಮಾಂಡರಾಶಿಗಳೆಲ್ಲವೂ ವಿಷ್ಣುಮಂದಿರಗಳು. ೩೯೩

೩.೧೩.೨ ತಮ ಮೋಹ ಮಹಾಮೋಹ ತಾಮಿಸ್ರ ಅಂಧತಾಮಿಸ್ರಗಳೆಂದರೆ ಅಜ್ಞಾನ ವಿಪರೀತಜ್ಞಾನ ವಿಪರೀತಜ್ಞಾನಾಗ್ರಹ ಕ್ರೋಧ ಮರಣದಂಥ ಸ್ಥಿತಿಗಳೆಂದು ಭಾರತ ಹರಿವಂಶಗಳಲ್ಲಿದೆ. ೩೯೫

೩.೧೩.೪ ರುದ್ರನಿಗಿಂತ ಮೊದಲು ಸನಕಾದಿಮುನಿಗಳ ಸೃಷ್ಟಿಯಾದುದು ತಾರತಮ್ಯಾನುಸಾರಿಯಲ್ಲ. ಇದು ಬ್ರಹ್ಮಸೃಷ್ಟಿ. ಹಿಂದೆ ಪರಮಾತ್ಮ ಮಾಡಿದ ಆದಿಸೃಷ್ಟಿ ತಾರತಮ್ಯಾನುಸಾರಿಯಾಗಿದೆ. ತಾರತಮ್ಯದ ವಿವರ ವಿಷ್ಣುಕೃತ ತತ್ತ್ವವಿವೇಕ ತತ್ತ್ವನಿರ್ಣಯಗಳಲ್ಲಿದೆ. ೩೯೭

೩.೧೩.೩೩ 'ತನ್ವೀಂ ತತ್ಯಾಜ' ಬ್ರಹ್ಮ ವಾಗ್ದೇವತೆಯನ್ನು ತ್ಯಾಗ ಮಾಡಿದನೆಂದರೆ ಮಾನವ ನಿರ್ಮಿತವಾಙ್ಮಯಕ್ಕೆ ಅಭಿಮಾನಿಯಾದ ಬೇರೆ ವಾಗ್ ದೇವತೆಯನ್ನು ತ್ಯಾಗಮಾಡಿದ ಹೊರತು ತನ್ನ ಪತ್ನಿಯಾದ ಸರಸ್ವತಿಯನ್ನಲ್ಲ. ೪೦೧

೩.೧೩.೩೪ ಅಪೌರುಷೇಯವಾದ ವೇದಗಳನ್ನೂ ಯಜ್ಞಾದಿಗಳನ್ನೂ ಬ್ರಹ್ಮ ಸೃಷ್ಟಿಸಿದನೆಂದರೆ ಅವುಗಳ ಅಭಿಮಾನಿಗಳನ್ನು ಸೃಷ್ಟಿಸಿದನೆಂದರ್ಥ. ೪೦೨

೩.೧೩.೪೨ ಪ್ರಾಜಾಪತ್ಯ ಬ್ರಹ್ಮಚರ್ಯವೆಂದರೆ ಒಬ್ಬಳೆ ಹೆಂಡತಿಯಲ್ಲಿ ಋತುಕಾಲದಲ್ಲಿ ಮಾತ್ರ ಸಂಗಮಾಡುವ ನಿಯಮ. ವಾರ್ತೆ ಎಂದರೆ ಯಾಯಾವರ. ಅಸಂಚಯ ಎಂದರೆ ಮರುದಿನಕ್ಕೆ ಇರಲಿ ಎಂದು ಕೂಡಿಡದಿರುವುದು ಎಂದು ವ್ಯಾಸಸ್ಮೃತಿಯಲ್ಲಿದೆ. ೪೦೫

೩.೧೩.೪೩ ಗಡ್ಡೆಗೆಣಸು ಮಾತ್ರ ತಿನ್ನುವವರು ವೈಖಾನಸರು. ಹಣ್ಣು ಹಂಪಲು ಮಾತ್ರ ತಿನ್ನುವವರು ಉದುಂಬರರು. ಇವೆರಡನ್ನು ಮಾತ್ರ ತಿನ್ನುವವರು

ವಾಲಖಿಲ್ಯರು. ಕರುವಿನ ಬಾಯಿಯ ಹಾಲಿನ ನೊರೆ ಮಾತ್ರ ಉಣ್ಣುವವರು ಫೇನಪರು. ೪೦೬

೩.೧೩.೪೪ ಆನ್ವೀಕ್ಷಿಕಿ ಎಂದರೆ ಬ್ರಹ್ಮತರ್ಕ ಬ್ರಹ್ಮಸೂತ್ರಗಳು. ದಂಡನೀತಿ ಎಂದರೆ ರಾಜಧರ್ಮ. ವೇದಗಳೇ ತ್ರಯೀ. ವಾಣಿಜ್ಯಾದಿಗಳೇ ವಾರ್ತೆ. ಪ್ರಣವವು ಬ್ರಹ್ಮನ ಪೂರ್ವಮುಖದಿಂದಲೂ ವ್ಯಾಹೃತಿಗಳು ಪ್ರದಕ್ಷಿಣಾಕಾರವಾಗಿ ಉಳಿದ ಮುಖಗಳಿಂದಲೂ ವ್ಯಕ್ತವಾದುವೆಂದು ಬ್ರಹ್ಮಪುರಾಣದಲ್ಲಿದೆ. ೪೦೭

೩.೧೩.೪೬ ಸ್ಪರ್ಶಾಕ್ಷರಗಳು ಬ್ರಹ್ಮನ ಚೈತನ್ಯದಿಂದ. ಸ್ವರಾಕ್ಷರಗಳು ದೇಹದಿಂದ, ಊಷ್ಮಾಕ್ಷರಗಳು ಇಂದ್ರಿಯಗಳಿಂದ, ಅಂತಸ್ಥಾಕ್ಷರಗಳು ಬಲದಿಂದ ವ್ಯಕ್ತವಾದುವು. ೪೦೯

೩.೧೩.೪೭ ನಾರಾಯಣಾದಿನಾಮ ಹೊರತು ಬೇರೆಲ್ಲ ಶಬ್ದಗಳಿಂದಲೂ ವಾಚ್ಯನಾಗುವುದರಿಂದ ಚತುರ್ಮುಖ ಬ್ರಹ್ಮ ಶಬ್ದಬ್ರಹ್ಮನೆನಿಸುತ್ತಾನೆ. ವ್ಯಕ್ತವಾದ ಬ್ರಹ್ಮಾಂಡದಲ್ಲಿಯೂ ಅವ್ಯಕ್ತವಾದ ಮಹದಾದಿಗಳಲ್ಲಿಯೂ ವ್ಯಾಪ್ತನಾದ್ದರಿಂದ ಅವನೇ ವ್ಯಕ್ತಾವ್ಯಕ್ತನೆನಿಸುತ್ತಾನೆ. ೪೧೦

೩.೧೩.೪೯ ಹಿಂದೆ ಹೇಳಿದ ಮರೀಚಿ ಮುಂತಾದ ಮುನಿಗಳ ಸೃಷ್ಟಿಯನ್ನು ಇಲ್ಲಿ ಪುನಃ ಹೇಳಿದ್ದು ಮುಂದೆ ಹೇಳಲಿರುವ ಸ್ವಾಯಂಭುವಮನುವಿನ ಸೃಷ್ಟಿಗೆ ಹೆಚ್ಚಿನ ಪ್ರಾಮುಖ್ಯತೆ ಎಂದು ತಿಳಿಸುವ ಉದ್ದೇಶದಿಂದ. ಇದು ಸಿಂಹಾವಲೋಕನವೆನಿಸುತ್ತದೆ. ಸಿಂಹಾವಲೋಕನ ಎಲ್ಲಿ ಮಾಡಬಹುದೆಂದು ಬ್ರಹ್ಮತರ್ಕ ಹೇಳಿದೆ. ೪೧೧

೩.೧೩.೫೧ ಬ್ರಹ್ಮ ತನ್ನ ಶರೀರವನ್ನು ಸರಸ್ವತೀ ಬ್ರಹ್ಮ ಶರೀರಗಳೆಂದು ಎರಡಾಗಿ ವಿಭಾಗಿಸಿದ. ಈಗ ಅವರೆಡೂ 'ಕಾಯ' ಎನಿಸಿದುವು. 'ಕ' ಎಂದರೆ ಬ್ರಹ್ಮ 'ಅಯ' ಪಡೆದವುಗಳು ಎಂದು. ೪೧೨

೩.೧೪.೮. ಕರ್ಮಸ್ವಿಜ್ಯಾತ್ಮಶಕ್ತಿಷು ಎಂದು ಪಾಠ. 'ಇಜ್ಯ' ಎಂದು ಪದವಿಭಾಗ. ಪೂಜ್ಯನೆ! ಎಂದು ಸಂಬೋಧನೆ ೪೧೪

೩.೧೪.೩೪ 'ಸ್ವಾಯಂಭುವಮನ್ವಂತರದಲ್ಲಿ ಲಯೋದಕದಲ್ಲಿ ಮುಳುಗಿದ ಭೂಮಿಯನ್ನು ವರಾಹ ಎತ್ತಿ ತರುತ್ತಿದ್ದಾಗ ಹಿರಣ್ಯಾಕ್ಷ ಅಡ್ಡಿ ಮಾಡಿದ. ಅವನನ್ನು ದಾಡೆಯಿಂದ ಇರಿದು ಕೊಂದ ವರಾಹ. ಮುಂದೆ ಚಾಕ್ಷುಷ ಮನ್ವಂತರದಲ್ಲಿ ದಿತಿಪುತ್ರ ಹಿರಣ್ಯಾಕ್ಷ ಭೂಮಿಯನ್ನು ಸಮುದ್ರದಲ್ಲಿ

ಮುಳುಗಿಸಿದಾಗ ವರಾಹ ಅವನನ್ನು ಕೆನ್ನೆಗೆ ಹೊಡೆದು ಕೊಂದ. ಹೀಗೆ ಎರಡು ಕಥೆಗಳು ಬೇರೆ ಬೇರೆ ಇವೆ ಎಂದು ಬ್ರಹ್ಮಾಂಡಪುರಾಣ ಹೇಳಿದೆ. ಅಜ್ಞರ ಮೋಹನಕ್ಕಾಗಿ ಎರಡು ಕಥೆಗಳನ್ನು ಒಂದು ಮಾಡಿ ಅಥವಾ ವ್ಯತ್ಯಾಸ ಮಾಡಿ ಹೇಳುವುದುಂಟೆಂದು ಸ್ಕಾಂದಪುರಾಣ ಹೇಳಿದೆ. ಅದರಿಂದ ಭಾಗವತದಲ್ಲಿ ವಿದುರ ಆದಿಹಿರಣ್ಯಾಕ್ಷನ ಕಥೆಯನ್ನು ಕೇಳಿ ತಿರುಗಿ ಆದಿಹಿರಣ್ಯಾಕ್ಷನ ಕಥೆ ಹೇಳಿರೆಂದು ಮೈತ್ರೇಯರನ್ನು ಕೇಳಿರುತ್ತಾನೆ ಅವರು ದಿತಿಪುತ್ರ ಹಿರಣ್ಯಾಕ್ಷನ ಕಥೆ ಹೇಳುತ್ತಾರೆ. ಇದು ಅಸಂಗತವಾದರೂ ದೋಷವೇನಿಲ್ಲ. ೪೧೬

೩.೧೫.೨೮ ಗರ್ಭಿಣೀವಧ ಪ್ರಾಯಶ್ಚಿತ್ತರೂಪವಾಗಿ ವಿಷ್ಣುವಿನಾಜ್ಞೆಯಂತೆ ರುದ್ರ ಪಿಶಾಚಚರ್ಯೆ ಮಾಡುತ್ತಿದ್ದಾನೆ. ಭೃತ್ಯ ಪಾಪಮಾಡಿದಾಗ ಪ್ರಭು ಅವನಿಗೆ ಪ್ರಾಯಶ್ಚಿತ್ತ ವಿಧಿಸುವುದು ಲೋಕದಲ್ಲಿ ನಿಯಮ. ಅದನ್ನು ವಿಷ್ಣು ಅನುಕರಿಸಿದ್ದಾನೆ ಎಂದು ವರಾಹ ಪುರಾಣದಲ್ಲಿದೆ. ೪೨೦

೩.೧೫.೫೦ ವಿಷ್ಣುವಿನ ಕೈಯಿಂದ ಮಡಿದರೆ ಸದ್ಗತಿ ಭಕ್ತನಿಗೆ ಮಾತ್ರ ಎಂದು ಸ್ಕಂದಪುರಾಣ ಹೇಳಿದೆ. ಹಿರಣ್ಯಕಶಿಪು ನರಸಿಂಹನಿಂದ ಹತನಾದರೂ ಅಷ್ಟರಿಂದಲೆ ಅವನಿಗೆ ಸದ್ಗತಿಯಾಗಲಿಲ್ಲ. ಪ್ರಹ್ಲಾದನ ಪ್ರಭಾವದಿಂದಾಯಿತು ಹೀಗೆ ಮಕ್ಕಳಿಂದ ಸದ್ಗತಿ ದೊರಕುವುದೂ ಸ್ವಾಭಾವಿಕ ಭಕ್ತರಿಗೆ ಮಾತ್ರ ಎಂದು ಬ್ರಹ್ಮತರ್ಕ ಹೇಳಿದೆ. ೪೨೩

೩.೧೬.೧೪ 'ಯೇ ನಿತ್ಯಮನಿಮಿತ್ತೇನ' ಎಂದು ಪಾಠ. ಅನಿಮಿತ್ತೇನ ಎಂಬಲ್ಲಿ ಅ ಎಂದು ಭಗವಂತನ ಹೆಸರು. ಭಗವಂತನ ನಿಮಿತ್ತವಾಗಿ ಅಂದರೆ ಅವನಿಗೆ ಪ್ರೀತಿಯಾಗಲೆಂದು ಮಾಡಿದ ಪುಣ್ಯಕರ್ಮವೆ 'ಅನಿಮಿತ್ತ' ೪೨೫

೩.೧೬.೧೭ ವೈಕುಂಠದಲ್ಲಿ ಜನರು ಹೂವಿನ ಸುಗಂಧ ಹೊತ್ತ ವಾಯುವನ್ನು ಸೇವಿಸಿದಾಗ ಸುಖದಲ್ಲಿ ಮೈಮರೆತರೂ ಕ್ಷಣದಲ್ಲಿ ಎಚ್ಚೆತ್ತು ತಿರುಗಿ ನಾಮಸಂಕೀರ್ತನೆ ಮಾಡುವರು ಎಂದು ಭಾಗವತ ವರ್ಣಿಸುತ್ತದೆ. ಇದು ವೈಕುಂಠದಲ್ಲಿ ವಾಸಮಾಡುವ ಜೀವನ್ಮುಕ್ತರ ಬಗ್ಗೆ ಹೇಳಿದ್ದು ಹೊರತು ಮುಕ್ತರ ಬಗ್ಗೆ ಅಲ್ಲ. ಮುಕ್ತರಿಗೆ ವಿಷಯಾಕರ್ಷಣೆ ಸರ್ವಥಾ ಇಲ್ಲವೆಂದು ಮುಂದೆ ೨೦ನೇ ಶ್ಲೋಕದಲ್ಲಿ ಸ್ಪಷ್ಟ ಇದೆ. ವೈಕುಂಠದಲ್ಲಿ ಮುಕ್ತರೂ ಅಮುಕ್ತರೂ ಜೊತೆಗೆ ಇರುತ್ತಾರೆ ಎಂದು ಭವಿಷ್ಯತ್ಪುರಾಣದಲ್ಲಿದೆ. ೪೨೬

೩.೧೬.೧೮ ವೈಕುಂಠದಲ್ಲಿ ವೃಕ್ಷಗಳಿವೆ ಪಕ್ಷಿಗಳಿವೆ ಎಂದ ಮಾತ್ರಕ್ಕೆ ಅಜ್ಞರಿಗೂ ವೈಕುಂಠ ಪ್ರಾಪ್ತಿ ಇದೆ ಎಂದು ತಿಳಿಯಬಾರದು. ಈ ವೃಕ್ಷಜೀವರೂ

ಪಕ್ಷಿಜೀವರೂ ಅಪರೋಕ್ಷಜ್ಞಾನಿಗಳೇ. ಪ್ರಾರಬ್ಧ ಕ್ಷಯವಾದಾಗ ಅವರೂ ಮುಕ್ತಿ ಹೊಂದುತ್ತಾರೆ ಎಂದು ಭವಿಷ್ಯತ್ಪುರಾಣದಲ್ಲಿದೆ. ೪೨೮

೩.೧೬.೧೯ ಭಗವಂತ ತುಳಸಿಯ ಗಂಧವನ್ನು ಅರ್ಚಿಸಿದ್ದಲ್ಲ. ಭಕ್ತರು ಭಗವಂತನನ್ನು ಅರ್ಚಿಸಿದರು. ಅವರು ಬೇರೆ ಹೂಗಳಿಂದಲೂ ತುಳಸಿಯಿಂದಲೂ ಅರ್ಚಿಸಿದಾಗ ಹರಿ ತುಳಸಿ ಮಾಲೆಯನ್ನು ಎತ್ತಿಕೊಂಡ. ಹೀಗೆ ಹರಿಪ್ರಿಯವಾದ ಗಂಧವನ್ನು ಸಂಪಾದಿಸಲು ತುಳಸಿ ಎಷ್ಟು ತಪಸ್ಸು ಮಾಡಿದಳೊ! ಎಂದು ಬೇರೆ ಹೂಗಳು ಅಭಿನಂದಿಸಿದುವು. ೪೩೦

೩.೧೬.೨೩ 'ರಚನಾನುವಾದಾತ್' ಎಂದು ಪಾಠವಲ್ಲ. ಆ ಪಾಠದಲ್ಲಿ 'ರಚನಾನುವಾದಾದನ್ಯವಿಷಯಾಃ' ಹರಿಯನ್ನಲ್ಲದೆ ಅನ್ಯರ ಚರಿತ್ರವನ್ನು ಕೇಳುವ ತಾಮಸರು ಮಾತ್ರ ವೈಕುಂಠಪ್ರಾಪ್ತಿಗೆ ಅಯೋಗ್ಯರೆಂದಾಗುವುದು. 'ಅರಚನಾನುವಾದಾಃ' ಎಂದೇ ಪಾಠ. ಹರಿಚರಿತ್ರೆ ಕೇಳದಿರುವ ರಾಜಸರೂ ಕೂಡ ಅಯೋಗ್ಯರು. ೪೩೧

೩.೧೬.೨೪ 'ನೋ ನೃಗತಿಂ ಪ್ರಪನ್ನಾಃ' ಎಂದರೆ ನಃ ನಮಗೆ ದೇವತೆಗಳಿಗೆ ನೃಗತಿ ನರಜನ್ಮ ಅಭ್ಯರ್ಥಿತವಾಗಿದೆ ಇಷ್ಟವಾಗಿದೆ ಎಂದರ್ಥವಲ್ಲ. 'ನೋ' ಎಂಬುದು ನಕಾರ. ನರಜನ್ಮ ಹೊಂದಿಯೂ ಹರಿಯನ್ನು ಭಜಿಸದವರು ನರಜನ್ಮ ಹೊಂದಿದಂತಾಗಲೆ ಇಲ್ಲ. ಅವರು ನರರಲ್ಲ ಅಸುರರೇ ಸರಿ ಎಂದರ್ಥ. ೪೩೨

೩.೧೬.೨೮ 'ವಕ್ತ್ರಂ ಭ್ರುವಾ' (ಜಯವಿಜಯರು ಹುಬ್ಬುಗಂಟಿಕ್ಕಿದ ಮುಖವನ್ನು ಧರಿಸಿದರು) ಎಂಬ ಪಾಠ ಸರಿಯಲ್ಲ. ವಕ್ತ್ರಭ್ರುವಾ (ಮುಖದಲ್ಲಿರುವ ಗಂಟಿಕ್ಕಿದ ಹುಬ್ಬಿನಿಂದಲೂ ಅದರೊಂದಿಗೆ ಹೊರಟ ಕೆಂಗಣ್ಣ ನೊಟದಿಂದಲೂ ಕೋಪವನ್ನು ಧರಿಸಿದರು.) ಎನ್ನುವ ಪಾಠ ಯುಕ್ತ. ೪೩೩

೩.೧೬.೩೦ ಭಕ್ತರಾದ ಜಯವಿಜಯರು ಭಗವತ್ಪ್ರತಿಕೂಲಶೀಲರು, ಭಗವಂತನಿಗೆ ವಿರೋಧ ಮಾಡುವ ಸ್ವಭಾವದವರು ಎನ್ನಬಹುದೆ? ನಾರದಪುರಾಣ ಹೇಳುತ್ತದೆ– ಅದು ಸ್ವಭಾವವಲ್ಲ, ಸ್ವಭಾವದಂತೆ ದೀರ್ಘಕಾಲವಿದ್ದಿತು. ವರಾಹಾವತಾರದಿಂದ ತೊಡಗಿ ಕೃಷ್ಣಾವತಾರಪರ್ಯಂತವೂ ದೀರ್ಘಕಾಲ ವಿರೋಧ ಪ್ರವೃತ್ತಿ ಬ್ರಹ್ಮಶಾಪಪ್ರಯುಕ್ತ ಅವರಲ್ಲಿತ್ತು ಎಂದು. ೪೩೪

೩.೧೬.೩೨ 'ಕುಹಕಯೋಃ' ಎಂಬ ಮಾತಿನಲ್ಲಿ ಜಯವಿಜಯರನ್ನು ಕಪಟಿಗಳೆಂದು ಸನಕಾದಿಗಳು ಆಕ್ಷೇಪಿಸುತ್ತಿಲ್ಲ. ಅಜ್ಞಾನಿಗಳು, ಮಿಥ್ಯಾಜ್ಞಾನಿಗಳು, ಭಕ್ತರನ್ನು

ತಡೆಯುವ ಮೂಲಕ ಭಗವಂತನಿಗೆ ವಿರೋಧಮಾಡುತ್ತಿದ್ದೇವೆ ಎನ್ನುವುದನ್ನು ಅರಿಯದೆ, ಸನಕಾದಿಗಳಿಂದ ಭಗವಂತನಿಗೆ ಅಪಾಯ ಬರಬಹುದೆಂದು ಮಿಥ್ಯಾಜ್ಞಾನ ಹೊಂದಿದ್ದಾರೆ ಎಂದು. ೪೩೬

೩.೧೬.೩೩ 'ಉದರಭೇದಿ ಭಯ' ದೇಹೋಪಾಧಿಬೇಧ ಪ್ರಯುಕ್ತ ಜೀವೇಶ್ವರ ಭೇದ ಭ್ರಮದಿಂದ ಭಯ ಎಂದು ಮುನಿಗಳ ಅಭಿಪ್ರಾಯವಲ್ಲ. ದೇಹ ರೂಪಸ್ಥಾನಭೇದ ಪ್ರಯುಕ್ತ ಅಂತರ್ಯಾಮಿಗಳಲ್ಲಿ ಭೇದ ಭ್ರಮದಿಂದ ಭಯ, ಮುನಿಗಳ ಅಂತರ್ಯಾಮಿಯಿಂದ ವೈಕುಂಠ ಮೂರ್ತಿಗೆ ಅಪಾಯ ಬರಬಹುದು ಎಂದು ಭಯ ಹೀಗೆ ಭಗವಂತನಿಗೆ ಭಗವಂತನಿಂದಲೆ ಅಪಾಯವನ್ನು ಶಂಕಿಸುವವನಿಗೆ ಇಹಪರಗಳೆ ರೆಡರಲ್ಲಿಯೂ ಅಪಾಯ ತಪ್ಪಿದ್ದಲ್ಲ ಎಂದು ತತ್ವವಿವೇಕದಲ್ಲಿದೆ. ೪೩೮

೩.೧೬.೩೪ 'ತ್ರಯ ಇಮೇ ರಿಪವಃ' ಎಂದರೆ ಕಾಮಕ್ರೋಧಲೋಭ ಎಂದು ಮೂವರು ಜೀವಾತ್ಮರ ಶತ್ರುಗಳು ಎಂದರ್ಥವಲ್ಲ. ಹಿರಣ್ಯಕಶಿಪು ರಾವಣ ಶಿಶುಪಾಲರೆಂದೂ ಹಿರಣ್ಯಾಕ್ಷ ಕುಂಭಕರ್ಣ ದಂತವಕ್ರರೆಂದೂ ಮೂವರು ಪರಮಾತ್ಮನ ಶತ್ರುಗಳೆಂದರ್ಥ. ೪೪೨

೩.೧೬.೩೬ 'ಭೂಯಾದಘೋನಿ' (ಅಪರಾಧಕ್ಕೆ ತಕ್ಕ ಶಿಕ್ಷೆ) ಎನ್ನುವ ಪಾಠ ಸರಿಯಲ್ಲ. 'ಭೂಯಾನಘಾದ್ಧಿ' (ಅಪರಾಧಕ್ಕಿಂತ ಹೆಚ್ಚಿನ ಶಿಕ್ಷೆ) ಎಂಬ ಪಾಠವೇ ಯುಕ್ತ. ಹೆಚ್ಚಿನ ಶಿಕ್ಷೆಯಾದ್ದರಿಂದಲೆ ದೇವತೆಗಳಲ್ಲಿ ನಾವು ಗೈದ ಅಪರಾಧಕ್ಕೂ ಇದು ದಂಡನೆ ಎನಿಸಲೆಂದು ಜಯವಿಜಯರು ಹೇಳುತ್ತಿದ್ದಾರೆ. ೪೪೪

'ಮೋಹಃ ಸ್ಮೃತಿಘ್ನೋ ಮಾ ಭವೇತ್' ಭೂಮಿಯಲ್ಲಿ ಜನಿಸಿದಾಗ ನಮಗೆ ಮೋಹ ಬಂದರೂ ಅದು ಭಗವಂತನ ವಿಸ್ಮರಣೆಗೆ ಕಾರಣವಾಗದಿರಲಿ ಎಂದು ಅರ್ಥವಲ್ಲ. ಮೋಹವೆಂದರೆ ವಿಸ್ಮರಣೆಯೆ ತಾನೆ? ಅಂಶದಿಂದ ನಾವು ಭೂಮಿಯಲ್ಲಿ ಜನಿಸಿದಾಗ ಅಂಶಕ್ಕೆ ಮೋಹ ಬರಲಿ, ಇತ್ತ ವೈಕುಂಠದಲ್ಲಿರುವ ನಮ್ಮ ಮೂಲರೂಪಕ್ಕೆ ಹಿಂದಿನಂತೆ ಮೋಹವಿಲ್ಲದಿರಲಿ. ಬ್ರಹ್ಮಶಾಪಪ್ರಯುಕ್ತವಾದ ವಿರೋಧಪ್ರವೃತ್ತಿ ಅಂಶಗಳಿಗೆ ಮಾತ್ರವೆ ಇರಲಿ ಎಂದು ಜಯವಿಜಯರು ಹೇಳುತ್ತಿದ್ದಾರೆ.

೩.೧೬.೩೮ 'ಶಶಿಕೇಸರ' ಎಂದರೆ ಆಲಂಕಾರಿಕವಾಗಿ ಚಂದ್ರಕಿರಣದಂಥ ಮುತ್ತಿನ ಮಾಲೆ ಎನ್ನುವ ಅಭಿಪ್ರಾಯವಿಲ್ಲ. ಮುತ್ತಿನ ಮಾಲೆಯ ಆಕಾರ ತೊಟ್ಟು ಭಗವಂತನನ್ನು ಸೇವಿಸುವ ಚಂದ್ರನ ಕಿರಣಗಳೆಂದರ್ಥ. ೪೪೬

೩.೧೬.೩೯ 'ಸ್ವಶ್ಚೂಡಾಮಣಿಂ' (ಸ್ವರ್ಗಲೋಕಕ್ಕೂ ಚೂಡಾಮಣಿಯಂತಿರುವ ವೈಕುಂಠ 'ಆತ್ಮಧಿಷ್ಣ್ಯ' ತನ್ನ ಮನೆ, ಅಂದರೆ ಹರಿಯ ಲೋಕ'ವೆಂದು ಪಾಠವಲ್ಲ. 'ಸ್ವಗ್ರೀವಾಮಣಿಂ'(ತನ್ನ ಕಂಠಾಭರಣವಾದ 'ಆತ್ಮಧಿಷ್ಣ್ಯ' ಬ್ರಹ್ಮನ ವಾಸಸ್ಥಾನವಾದ ಕೌಸ್ತುಭರತ್ನ) ಎಂದು ಪಾಠ. ಕೌಸ್ತುಭರತ್ನಕ್ಕೆ ಬ್ರಹ್ಮ ಅಭಿಮಾನಿ. 'ವಿದ್ಯುತ್ ಕ್ಷಿಪನ್' ಎಂಬ ಮುಂದಿನ ಶ್ಲೋಕದಲ್ಲಿ 'ಮಣಿಮತ್ಕಿರೀಟಂ' ಎಂಬಲ್ಲಿ ಹೇಳಿದ ಚೂಡಾಮಣಿಯೂ ಸಾಧಾರಣ ಮಣಿಯಲ್ಲ ಅದಕ್ಕೆ ಮುಖ್ಯಪ್ರಾಣ ಅಭಿಮಾನಿ. ೪೪೮

೩.೧೬.೪೨ 'ಸ್ವಾನಾಂ ಧಿಯಾ ವಿರಚಿತಂ' ಭಕ್ತರು ಧ್ಯಾನದಲ್ಲಿ ಭಗವಂತನಲ್ಲಿ ಇಲ್ಲದ ಆಕಾರವನ್ನು ಕಲ್ಪಿಸಿಕೊಳ್ಳುತ್ತಾರೆ' ಎನ್ನಬಾರದು ಇರುವುದನ್ನೇ ಧ್ಯಾನಿಸುತ್ತಾರೆ. ಇರುವುದನ್ನು ಧ್ಯಾನಿಸಿದರೂ ಅದು ರಚನೆ ಎನಿಸುತ್ತಿದೆ ಎಂದು ಶಬ್ದ ನಿರ್ಣಯದಲ್ಲಿದೆ. ೪೪೯

೩.೧೬.೪೩ 'ಅಕ್ಷರಜುಷಾಮಪಿ' ಎಂದರೆ ನಿರ್ಗುಣೋಪಾಸಕರಿಗೂ ಭಗವಂತನ ರೂಪ ಮೈಮರೆಸುತ್ತದೆ ಎಂದರ್ಥವಲ್ಲ. ಸನಕಾದಿಗಳಿಗೆ ಈ ಮುಕ್ತ ನಿಯಾಮಕರೂಪವನ್ನು ಸೇವಿಸಿ ಅಭ್ಯಾಸವಾಗಿದ್ದರೂ ಕೂಡ ಅವರಿಗೆ ಅದು ಪುನಃ ಹೊಸದಾಗಿಯೆ ಕಾಣುತ್ತದೆ ಎಂದರ್ಥ. ೪೫೦

೩.೧೬.೪೮ 'ಭಕ್ತರು ಮುಕ್ತಿಯನ್ನು ಆದರಿಸುವುದಿಲ್ಲ' ಎಂದರೆ ಮುಕ್ತಿಯನ್ನೂ ಬಯಸದ ಏಕಾಂತಭಕ್ತರಿಗೆ ಮೋಕ್ಷಕ್ಕಿಂತ ಪೂರ್ವದಲ್ಲಿಯೇ ಹೆಚ್ಚಿನ ಸ್ವರೂಪಾನಂದಾಭಿವ್ಯಕ್ತಿ ಇರುವುದರಿಂದ ಮುಕ್ತಿಕಾಮನೆ ಉಳ್ಳ ಸಾಧಾರಣ ಭಕ್ತರ ಮೋಕ್ಷಸುಖವನ್ನು ಅವರು ಆದರಿಸುವುದಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೪೫೨

೩.೧೬.೪೯ 'ನಿರಯೇಷು ನಷ್ಟಾಃ' ಶ್ರೀಹರಿಯಲ್ಲಿ ಭಕ್ತಿ ಮುಂದುವರಿಯುತ್ತಿದ್ದಲ್ಲಿ ನರಕ ವಾಸಕ್ಕೂ ನಾವು ಸಿದ್ಧರೆಂದು ಸನಕಾದಿಗಳು ಹೇಳುವುದರ ಅಭಿಪ್ರಾಯ ಹೀಗೆ– ಭಕ್ತರು ಭಕ್ತಿಪೂರ್ವಕವಾಗಿ ದುಃಖ ಅನುಭವಿಸಿದಷ್ಟೂ ಮುಕ್ತಿಯಲ್ಲಿ ಆನಂದಾಭಿವ್ಯಕ್ತಿ ಹೆಚ್ಚುತ್ತದೆ ಎಂದು. ೪೫೩

೩.೧೭.೭ ನಾನು ಲಕ್ಷ್ಮೀಪತಿ ಎನಿಸಿದುದು ಬ್ರಾಹ್ಮಣರ ಅನುಗ್ರಹದಿಂದ. ಲಕ್ಷ್ಮಿಗಿಂತಲೂ ಬ್ರಾಹ್ಮಣರೇ ನನಗೆ ಹೆಚ್ಚು ಪ್ರಿಯರು ಎಂದು ಹರಿ ಹೇಳುವುದು ಲೋಕದಲ್ಲಿ ಬ್ರಾಹ್ಮಣರಿಗೆ ಪೂಜ್ಯಸ್ಥಾನ ಸಿಗಲಿ ಎಂಬ ಉದ್ದೇಶದಿಂದ ಎಂದು ಕೂರ್ಮಪುರಾಣ ಹೇಳುತ್ತದೆ. ಅಜ್ಞಜನ ಮೋಹನವೂ ಇನ್ನೊಂದು ಉದ್ದೇಶವೆಂದು ಸ್ಕಂದಪುರಾಣ ಹೇಳುತ್ತದೆ.

ವಿಷ್ಣುವಿಗೆ ದೋಷಗಳನ್ನು ಹೇಳಿದರೂ ಸ್ವೀಕರಿಸಬಾರದು ಗುಣಗಳನ್ನು ಹೇಳದಿದ್ದರೂ ಸ್ವೀಕರಿಸಬೇಕು ಎಂದು ಪೈಂಗಿಶ್ರುತಿ ಹೇಳಿದೆ. ೪೫೬

೩.೧೬.೧೩ 'ದೇವೀ ಸರಸ್ವತಿ' ಎಂದರೆ ಋಷಿಗಳಿಗೂ ಅರ್ಥವಾಗದ, ಅವರ ಬುದ್ಧಿಶಕ್ತಿಯೊಂದಿಗೆ ಆಟವಾಡುವ ಮಾತು ಎಂದರ್ಥವಲ್ಲ. 'ಋಷಿಕುಲ್ಯಾ' ಎಂದರೂ ಮಂತ್ರತುಲ್ಯ ಎಂದರ್ಥವಲ್ಲ. ಭಗವಂತನಾಡಿದ ಮಾತು ಅರ್ಥಗರ್ಭಿತವಾಗಿತ್ತು, ಬ್ರಾಹ್ಮಣಕುಲವನ್ನು ಪ್ರಶಂಸೆಮಾಡುವ ಅಭಿಪ್ರಾಯದ್ದಾಗಿತ್ತು ಎಂದರ್ಥ. ೪೫೮

೩.೧೬.೧೫ ಪಾರಮೇಷ್ಠ್ಯವೆಂದರೆ ಪರಮೈಶ್ವರ್ಯವಲ್ಲ 'ತದ್ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯಂ' ಎಂದು ಹಿಂದೆ ಹೇಳಿದ ಬ್ರಹ್ಮಪದವಿಯೇ ಇಲ್ಲಿ ಪಾರಮೇಷ್ಠ್ಯವೆಂದು ಉಕ್ತವಾಗಿದೆ. ೪೬೦

೩.೧೬.೧೮ 'ಧರ್ಮಸ್ಯ ಗುಹ್ಯಃ' ಎಂದರೆ ಧರ್ಮಾಭಿಮಾನಿ ದೇವತೆಗಳಿಗೂ ತಿಳಿಯಲಾಗದ ಪರತತ್ವ ಎಂದರ್ಥ. ೪೬೨

೩.೧೬.೨೦ 'ಮಧುವ್ರತಪತೇಃ ಲೋಕಂ' ಎಂದರೆ ತುಳಸೀಯುಕ್ತವಾದ ವಿಷ್ಣುಪಾದ ದುಂಬಿಯ ಸ್ಥಾನ ಎಂದರ್ಥವಲ್ಲ. ದುಂಬಿಯ ಸ್ಥಾನ ತುಳಸಿಮಾತ್ರ. ಅದರಿಂದ 'ಮಧುವ್ರತಪತಿ' ಸಾರಗ್ರಾಹಿಗಳಲ್ಲಿ ಶ್ರೇಷ್ಠನಾದ ಹರಿ. ಅವನು ತುಲಸಿಗೆ ಪಾದಗಳಲ್ಲಿ ಆಶ್ರಯ ನೀಡಿದ್ದರಿಂದ ಪಾದಗಳು ಶ್ರೇಷ್ಠವೆಂದು ಎದೆಯಲ್ಲಿರುವ ಲಕ್ಷ್ಮಿಯೂ ಪಾದಸೇವೆಗಾಗಿ ಕೆಳಗೆ ಇಳಿಯುತ್ತಾಳೆ. ಇದು ತುಲಸಿಯೊಂದಿಗೆ ಸ್ಪರ್ಧೆಯಂತೆ ಕಾಣುತ್ತದೆ. ವಸ್ತುತಃ ಲಕ್ಷ್ಮಿಗೆ ಪಾದಸೇವೆಯಲ್ಲಿ ಸ್ವತಃ ಪ್ರೀತಿ ಇದೆ. ೪೬೩

೩.೧೬.೨೧. 'ಪರಮಭಾಗವತಪ್ರಸಂಗಃ' ಎಂದರೆ ಲಕ್ಷ್ಮಿಯನ್ನು ಬಿಟ್ಟು ಬೇರೆ ಏಕಾಂತಭಕ್ತರನ್ನು ಭಗವಂತ ಸೇರುತ್ತಾನೆ ಎಂದರ್ಥವಲ್ಲ. ಏಕಾಂತಭಕ್ತರಲ್ಲೆಲ್ಲ ಲಕ್ಷ್ಮಿ ಶ್ರೇಷ್ಠಳೆಂದು ಅವಳಲ್ಲಿ ಭಗವಂತನಿಗೆ ಆಸಕ್ತಿ ಹೊರತು ಅವಳು ಪತ್ನಿ ಎಂದಲ್ಲ. ಎಂದು ಸನಕಾದಿ ಮುನಿಗಳು ಹೇಳುತ್ತಿದ್ದಾರೆ. ೪೬೬

೩.೧೬.೨೨ ಧರ್ಮ ಎಂದರೆ ಲೋಕಧಾರಕನಾದ ಭಗವಂತ ಎಂದು ಶಬ್ದನಿರ್ಣಯದಲ್ಲಿದೆ. ಅವನ ಮೂರು ಪಾದಗಳೆಂದರೆ ಅನಂತಾಸನ, ವೈಕುಂಠ,ಕ್ಷೀರಸಾಗರಗಳಲ್ಲಿರುವ ಮೂರು ರೂಪಗಳೆಂದು ಮೂರ್ತಿಭೇದ ಎಂಬ ಗ್ರಂಥದಲ್ಲಿ ಹೇಳಿದೆ. 'ವರದಾ ತನುಃ' ಎಂಬುದಕ್ಕೆ ಕಪಿಲ ಮೂರ್ತಿ ಎಂದು ವಿಶೇಷಾರ್ಥವಿದೆ. ಅದರಿಂದ 'ಸತ್ವೇನ ವರದಯಾ ತನುವಾ' ಎಂದರೆ ಶುದ್ಧಸತ್ವಾತ್ಮಕವಾದ ವರಪ್ರದವಾದ ಶರೀರ ಎಂದರ್ಥವಲ್ಲ.

೩.೧೮.೯ ಟಂಕಾರವೂ ಅನುಕರಣ ಶಬ್ದವೆ. ಆದರೆ ಅದು ನರಿಗಳ ಸಹಜಧ್ವನಿಯಲ್ಲ. ಅಸಹಜ. ಆದರಿಂದ ನಾಶಸೂಚಕವಾಗಿದೆ ಎಂದು ಅಗ್ನಿಪುರಾಣ ಹೇಳಿದೆ. ೪೮೧

೩.೧೮.೧೧ ಖಾತ್ಕಾರ ಒಂಟೆಕತ್ತೆಗಳ ಅನುಕರಣಶಬ್ದ. ೪೮೨

೩.೧೮.೨೩ 'ಸ ವೈ ತಿರೋಹಿತಾನ್ ದೃಷ್ಟ್ವಾ' ಹಿರಣ್ಯಾಕ್ಷನಿಗೆ ಹೆದರಿ ದೇವತೆಗಳು ತಲೆಮರೆಸಿಕೊಂಡರೆಂದಿದೆ. ಆದರೆ ದೇವತೆಗಳನ್ನೂ ಪ್ರಜಾಪತಿಗಳನ್ನೂ ಬ್ರಹ್ಮಾದಿಗಳ ವರಬಲದಿಂದಲ್ಲದೆ ಸ್ವಶಕ್ತಿಯಿಂದ ಯಾರೂ ಗೆಲ್ಲಲಾರರೆಂದು ತತ್ವನಿರ್ಣಯದಲ್ಲಿ ಹೇಳಿದೆ. ೪೮೨

೩.೧೯.೨೧ 'ಸಹಸ್ರಣೀಃ' ಎಂದರೆ ಅನೇಕ ದಿನಕಲ್ಪಗಳ ಮುಮುಕ್ಷುಗಳನ್ನು ಪರಮಾತ್ಮನ ಬಳಿಗೆ ಒಯ್ಯುವ ಬ್ರಹ್ಮದೇವರು ಎಂದರ್ಥ. 'ವರಾಹನ ಮೈ ಗಾಯವಾಯಿತು. ಬ್ರಹ್ಮ ಆತಂಕಗೊಂಡನೆ'ಂದಿದೆ. ವಸ್ತುತಃ ಹರಿ ಲೋಕಮೋಹನಕ್ಕಾಗಿ ನಟಿಸುತ್ತಿದ್ದಾನೆ. ಅದಕ್ಕನುಗುಣವಾಗಿ ಬ್ರಹ್ಮನೂ ನಡೆಯುತ್ತಾನೆ ಎಂದು ಬ್ರಹ್ಮಾಂಡಪುರಾಣ ಹೇಳಿದೆ. ೪೮೫

೩.೧೯.೨೬ 'ಲೋಕ ಶಂಬಟ್‌ಕರೀ' ಎಂಬಲ್ಲಿ ಶಂಬಟ್‌ಕಾರವೆಂದರೆ ಅಭಿಧಾನ ಗ್ರಂಥ ಹೇಳುವಂತೆ ಭಕ್ಷಣವೆಂದು ಮುಖ್ಯಾರ್ಥ. ಸಂಧ್ಯಾಕಾಲ ಎಲ್ಲೆಡೆ ಕತ್ತಲು ಹಬ್ಬಿಸಿ ಏನೂ ಕಾಣದಂತೆ ಮಾಡುವುದರಿಂದ ಎಲ್ಲವನ್ನೂ ಭಕ್ಷಿಸಿದಂತೆಯೆ ಆಗುತ್ತದೆ. ೪೮೮

೩.೧೯.೨೭ ಮಧ್ಯಾಹ್ನಕಾಲ, ಉತ್ತರಾಷಾಢದ ಉತ್ತರಾರ್ಧ ಶ್ರವಣದ ಪೂರ್ವಾರ್ಧ, ಮತ್ತು ವಿಷುವ ಕಾಲಗಳು 'ಅಭಿಜಿತ್' ಎನಿಸುತ್ತವೆ. ೪೮೯

೩.೨೦.೫ ವರಾಹ ತನ್ನ ಕೈಯ ಗದೆ ಕೆಳಗೆ ಬಿದ್ದಾಗ, ಹಿರಣ್ಯಾಕ್ಷ ಕೈ ಮಾಡದೆ ನಿಂತುದನ್ನು 'ಇದು ಧರ್ಮ' ಎಂದ. ಭಕ್ತಿ ಇಲ್ಲದೆ ಮಾಡಿದ ಧರ್ಮ ಧರ್ಮವಾಗುವುದೆ? ಈ ಪ್ರಶ್ನೆಗೆ ಬ್ರಹ್ಮಪುರಾಣದಲ್ಲಿ ಸಮಾಧಾನವಿದೆ. ಶಾಸ್ತ್ರಾನುಸಾರ ಮಾಡಿದ್ದು ಮತ್ತು ಭಕ್ತಿಯಿಂದ ಮಾಡಿ ಭಗವಂತನಿಗೆ ಪ್ರಿಯವೆನಿಸಿದ್ದು ಎಂದು ಧರ್ಮ ಎರಡು ಬಗೆಯಾಗಿದೆ ಎಂದು. ಪ್ರಕೃತ ಹಿರಣ್ಯಾಕ್ಷ ನಿರಾಯುಧನ ಮೇಲೆ ಕೈ ಮಾಡದಿದ್ದುದು ಶಾಸ್ತ್ರಾನುಸಾರಿ ಯಾದ್ದರಿಂದ ಅದೂ ಒಂದು ಬಗೆಯ ಧರ್ಮವೆ.

ಗದೆ ಕೈಯಿಂದ ಜಾರಿ ಬಿದ್ದರೆ ವರಾಹ ಚಕ್ರವನ್ನೇಕೆ ನೆನೆದ? ಇಚ್ಛಾಮಾತ್ರದಿಂದ ಶತ್ರುವನ್ನು ಕೊಲ್ಲಬಾರದಿತ್ತೆ? ಎಂದರೆ ಅದೊಂದು ಲೀಲೆ ಎಂದು ವರಾಹಪುರಾಣ ಹೇಳಿದೆ. ೪೯೨

೩.೨೨.೮ 'ಶಾಬ್ದಂ ಬ್ರಹ್ಮ' ಎಂದರೆ ವೇದವೇದ್ಯನಾದ ಭಗವಂತನಲ್ಲ, ವೇದವೇತ್ತನಾದ ಭಗವಂತ. ವೈದಿಕ ಸಾಂಖ್ಯಪ್ರವರ್ತನೆಗಾಗಿ ಅವತರಿಸುವ ಕಪಿಲ ವೇದವೇತ್ತನೆನಿಸುರುದೇ ಉಚಿತ. ೫೦೬

೩.೨೨.೧೮ ಅನಂತ ಭದ ಉಳ್ಳ, ಅಂದರೆ ಅವಯವ ಉಳ್ಳಕಾಲ 'ಅನಂತಭದಿ' ಯಾಗಬೇಕು, 'ಅನಂತಭಿದಿ' ಹೇಗಾಯಿತು? ಅಕಾರಕ್ಕೆ ಇಕಾರ ಹೇಗೆ ಬಂದಿತು? ಎಂದರೆ 'ತೃತೀಯೋಽತಿಶಯೇ' ಎಂದು ವ್ಯಾಕರಣ ಹೇಳುವಂತೆ ಅಕಾರಕ್ಕೆ ಮೂರನೆಯದಾದ ಇಕಾರ ಬಂದರೆ ಅದು ಅತಿಶಯದ್ಯೋತಕ ವಾಗುತ್ತದೆ. ಪ್ರಕೃತ ಕಾಲಾವಯವಗಳ ಅನಂತತ್ವದಲ್ಲಿ ಅತಿಶಯ ಸೂಚಿತವಾಗಿದೆ. ೫೦೭

೩.೨೨.೫೦ ಸ್ವಾಯಂಭುವ ಮನುವನ್ನು ಸಾಕ್ಷಾತ್ ಹರಿಯ ಪಾಲನ ಶಕ್ತಿ ಎಂದು ಕರ್ದಮರು ಹೊಗಳುತ್ತಿಲ್ಲ. ಶಕ್ತಿಯ ಆವೇಶವಿದೆ ಎಂದು ಅಭಿಪ್ರಾಯ. ಸ್ವಾಯಂಭುವಮನು ಮುಂತಾದ ರಾಜರಲ್ಲಿಯೂ ದೇವತೆಗಳಲ್ಲಿಯೂ ಋಷಿಗಳಲ್ಲಿಯೂ ಭಗವಂತನ ಆವೇಶವಿದೆ ಎಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ. ೫೦೯

೩.೨೩.೧೬ ದೇವಹೂತಿ ತನ್ನ ಸೌಂದರ್ಯದಿಂದ ಲಕ್ಷ್ಮಿಯನ್ನೂ ತಿರಸ್ಕರಿಸುತ್ತಾಳೆ ಎಂದು ಕರ್ದಮರು ಹೇಳುತ್ತಿಲ್ಲ. ತನ್ನ ಸೌಂದರ್ಯದಿಂದ ಅನ್ಯರನ್ನು ತಿರಸ್ಕರಿಸುವ ಸಾಕ್ಷಾತ್ ಲಕ್ಷ್ಮಿಯಂತೆ ದೇವಹೂತಿ ಇದ್ದಾಳೆ ಎನ್ನುತ್ತಿದ್ದಾರೆ. ೫೧೨

೩.೨೩.೨೯ ವರಾಹನ ಮೈಯ ರೋಮಗಳು ಉದುರಲಿಲ್ಲ. ಅವನ ಶರೀರ ಅಚ್ಛೇದ್ಯ ಅಭೇದ್ಯ. ರೋಮಗಳೆಂಬ ಅವತಾರರೂಪಗಳು ಅವನ ಮೈಯಿಂದ ಅಭಿವ್ಯಕ್ತವಾಗಿ ಈಚೆ ಬಂದುವು ಎಂದು ಸ್ಕಂದಪುರಾಣ ಹೇಳಿದೆ. ೫೧೩

೩.೨೩.೩೫ ಕಾಲವು ಅಯಾತಯಾಮವಾಗಿತ್ತೆಂದರೆ ವ್ಯರ್ಥವಾಗಿ ಕಳೆಯಲಿಲ್ಲ ಎಂದರ್ಥ. ಯಾಮವೆಂದರೆ ಫಲ. ಯಾತಯಾಮ ಎಂದರೆ ನಿಷ್ಫಲ. ವ್ಯರ್ಥ ಎಂದು ನಾರದ ಪುರಾಣ ಹೇಳಿದೆ. ೫೧೪

೩.೨೩.೩೭ ವೈಯಾಸೇ ಎಂದು ಪಾಠವಲ್ಲ. 'ಪರ್ಯಾಸೇ' ಎಂದರೆ ವಿಪರ್ಯಾಸೇ ಎಂದರ್ಥ. ದೇವನಾದ ಸ್ವಾಯಂಭುವ ಮನು ಮಾನವನಾಗಿ ಜನಿಸು ವುದೆಂದರೆ ಅದು ವಿಪರ್ಯಾಸ. ೫೧೫

೩.೨೪.೧೮ ದೇಹಲೀ ಎಂದರೆ ಇಲ್ಲಿ ಹೊಸ್ತಿಲು ಮಾತ್ರವಲ್ಲ. ಇಡೀ ದ್ವಾರಬಂಧ ವಿವಕ್ಷಿತವಾಗಿದೆ. ೫೧೮

ಯಥಾರ್ಥಜ್ಞಾನವೇ ಸಾಂಖ್ಯ ಎಂದೂ ಅದಕ್ಕೆ ಸಾಧನವಾದ ಯಮನಿಯಮಾದಿಯೆ ಯೋಗ ಎಂದೂ ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೫೨೮

೩.೨೫.೨೬ ಕೃತತ್ರೇತಾದ್ವಾಪರ ಮೂರು ಯುಗಗಳಲ್ಲಿ ಹರಿ ಅವತರಿಸುವುದರಿಂದ 'ತ್ರಿಯುಗ' ನೆನಿಸುತ್ತಾನೆ ಎಂದು ಪದ್ಮಪುರಾಣ ಹೇಳಿದೆ. ೫೨೯

೩.೨೫.೩೧ ಭಕ್ತರು ಬಯಸಿದಂತೆ ಮಾಯಿಕ ರೂಪವನ್ನು ಭಗವಂತ ಧರಿಸುತ್ತಾನೆ ಎಂದು ಕರ್ದಮರು ಹೇಳುತ್ತಿಲ್ಲ. ಭಗವಂತನ ರೂಪಗಳೆಲ್ಲ ಚಿನ್ಮಯ, ಅನಾದಿ. ಅವುಗಳಲ್ಲಿ ಭಕ್ತರು ಬಯಸಿದಂತೆ ಬ್ರಾಹ್ಮಣಾದಿರೂಪಗಳಿಂದ ಅವನು ಅವತರಿಸುತ್ತಾನೆ ಎಂದು ಕೂರ್ಮಪುರಾಣ ಹೇಳಿದೆ. ೫೩೦

೩.೨೫.೩೩ 'ತ್ರಿವೃತಂ' ಎಂದರೆ ಅಹಂಕಾರ ತತ್ವವೆಂದಿಟ್ಟುಕೊಂಡು ಭಗವಂತ ಅಹಂಕಾರ ತತ್ವವಾಗಿ ಪರಿಣಮಿಸುತ್ತಾನೆ ಎನ್ನಬಾರದು. ಮೂರು ವೇದಗಳಿಂದ ಕೊಂಡಾಡಲ್ಪಡುವವನು 'ತ್ರಿವೃತ್' ೫೩೨

೩.೨೫.೩೫ 'ಸತ್ಯಲೌಕಿಕೇ' ಎಂದರೆ ವೈದಿಕಲೌಕಿಕ ಕಾರ್ಯಗಳೆಂದರ್ಥವಲ್ಲ. ಲೋಕವೆಂದರೆ ಜ್ಞಾನ ಎಂದು ಕೋಶದಲ್ಲಿದೆ. ಲೌಕಿಕವೆಂದರೆ ಜ್ಞಾನಗೋಚರ, ಪ್ರಮೇಯ ಸತ್ಯವಾದ ಅಂದರೆ ಅಬಾಧಿತವಾದ ಪ್ರಮೇಯವು ಸತ್ಯಲೌಕಿಕವೆನಿಸುತ್ತದೆ. ೫೩೩

೩.೨೫.೪೦ ಪ್ರಪಂಚವನ್ನು ಸರ್ವಶಕ್ತಪರಮಾತ್ಮನ ಸ್ವರೂಪವೆಂದು ತಿಳಿಸಲು ಈ ಶ್ಲೋಕ ಆದೇಶಿಸುತ್ತಿಲ್ಲ. 'ವಿಶ್ವಂ ಏತದ್ಧಿ' ಪ್ರಪಂಚವೆಂದರೆ ಹೀಗೇ, ನಿಸ್ಸಾರ ಎಂದು ತಿಳಿದು 'ಆತ್ಮಾನಂ ಈಶ್ವರಂ' ಪರಮಾತ್ಮನನ್ನು ಸರ್ವಶಕ್ತನೆಂದು ತಿಳಿಯಲು ಆದೇಶಿಸುತ್ತಿದೆ. ೫೩೫

೩.೨೫.೪೫ ಸ್ವದೃಕ್ ಎಂದರೆ ತನ್ನನ್ನು ಪರಮಾತ್ಮನೆಂದು ತಿಳಿಯುವವನಲ್ಲ. ಸ್ವ ಎಂದರೆ ಸ್ವತಂತ್ರನಾದ ಪರಮಾತ್ಮ ಎಂದು ಮತ್ಸ್ಯಪುರಾಣ ಹೇಳಿದೆ. ಪರಮಾತ್ಮನೆ ಸ್ವತಂತ್ರ ಎಂದು ತಿಳಿಯುವವನು ಸ್ವದೃಕ್. 'ಪ್ರತ್ಯಗ್ರ' ಎಂಬಲ್ಲಿ ಪ್ರತ್ಯಕ್ ತನ್ನೊಳಗೇ ಧ್ಯಾನದಿಂದ ವ್ಯಕ್ತವಾಗುವ 'ರ'ಸ್ವರೂಪ ಸುಖಾನುಭವವುಳ್ಳವನು ಎಂದರ್ಥ. ೫೩೫

೩.೨೫.೪೬ ಆತ್ಮ ಎಂದರೆ ಗುಣಪೂರ್ಣ. ಎಲ್ಲವನ್ನೂ ಧರಿಸಿರುವ ಭಗವಂತನ ಬಾಹ್ಯರೂಪವೂ ಆತ್ಮ, ಗುಣಪೂರ್ಣ. ಎಲ್ಲರೊಳಗಿರುವ ರೂಪವೂ ಆತ್ಮ, ಗುಣಪೂರ್ಣ. ಎರಡೂ ಅಭಿನ್ನವೆ. ೫೩೬

೩.೨೬.೧೧ ಪ್ರಕೃತಿಪುರುಷರೆಂದರೆ ಮುಖ್ಯವಾಗಿ ಲಕ್ಷ್ಮೀನಾರಾಯಣರು. ಜೀವಜಡಗಳನ್ನೂ ಜೊತೆಗೆ ಇಟ್ಟುಕೊಳ್ಳಬೇಕು. ಇದು ದತ್ತಾತ್ರೇಯ ಯೋಗಶಾಸ್ತ್ರದಲ್ಲಿ ಸ್ಪಷ್ಟವಿದೆ. ೫೩೯

೩.೨೬.೧೩ ವೈದಿಕಸಾಂಖ್ಯಶಾಸ್ತ್ರದಲ್ಲಿ ಆಧ್ಯಾತ್ಮಿಕ ಯೋಗವೆಂದರೆ ದೇಹದಲ್ಲಿ ನಿಯಾಮಕರಾಗಿ ನೆಲೆಸಿರುವ ಪರಮಾತ್ಮ ಮುಂತಾದವರ ತತ್ವಜ್ಞಾನ, ಈ ಶಾಸ್ತ್ರದ ಪ್ರಕಾರ ಮೋಕ್ಷದಲ್ಲಿ ಸುಖದುಃಖ ಎರಡೂ ಇಲ್ಲವೆಂದಾಗುವುದಿಲ್ಲ. ನಿತ್ಯವಾದ ಸ್ವರೂಪಸುಖ ಮೋಕ್ಷದಲ್ಲಿಯೂ ಇದೆ. ೫೪೦

೩.೨೬.೧೬ 'ನಿರಂತರಂ' ಎಂದರೆ ಅಭಿನ್ನ. ಆದರೆ ಜೀವನು ಬ್ರಹ್ಮನಿಂದ ಅಭಿನ್ನ ಎಂದರ್ಥವಲ್ಲ. ಬ್ರಹ್ಮನು ತನ್ನ ಶರೀರಾದಿಗಳಿಂದ ಅಭಿನ್ನ. 'ಆತ್ಮ' ಎಂದರೆ ಪರಮಾತ್ಮ. ಅವನನ್ನು ಅಪರೋಕ್ಷದಲ್ಲಿ ಕಂಡಾಗ ಅವನ ಶಕ್ತಿಯಿಂದ ಜೀವನ ಪರಮಾಚ್ಛಾದಕ ದೂರವಾಗುತ್ತದೆ ಎಂದು ಕಾಪಿಲೇಯ ಗ್ರಂಥದಲ್ಲಿದೆ. ೫೪೧

೩.೨೬.೨೨ ಹರಿಯಲ್ಲಿ ಅನನ್ಯಭಕ್ತಿ ಎಂದರೆ ಅನ್ಯದೇವತೆಗಳಲ್ಲಿ ಭಕ್ತಿಯೆ ಇರಕೂಡದೆಂದರ್ಥವಲ್ಲ. ಹರಿಯಲ್ಲಿರುವಷ್ಟು ಭಕ್ತಿ ಅನ್ಯರಲ್ಲಿರಕೂಡದು. ಭಕ್ತಿಯು ತಾರತಮ್ಯಾನುಗುಣವಾಗಿರಬೇಕು. ೫೪೩

೩.೨೬.೨೩ ಹರಿಯೊಬ್ಬನೇ ಸ್ವತಂತ್ರ ಎನ್ನುವ ಸ್ಥಿರವಾದ ಜ್ಞಾನವೇ ಐಕಾತ್ಮ್ಯಜ್ಞಾನವೆಂದು ಬ್ರಹ್ಮಾಂಡಪುರಾಣದಲ್ಲಿದೆ. ೫೪೪

೩.೨೬.೩೧ 'ತನ್ವಾ ಅಭಿಜಾತಃ' ಶರೀರದಿಂದ ಹುಟ್ಟಿದನೆಂದ ಮಾತ್ರಕ್ಕೆ ಕಪಿಲ ಜಡಶರೀರದಿಂದ ಹುಟ್ಟಿದನೆಂದಾಗುವುದಿಲ್ಲ. ಚಿನ್ಮಯಶರೀರದಿಂದ ವ್ಯಕ್ತನಾದ. ಇದು ಗರುಡಪುರಾಣದಲ್ಲಿ ಸ್ಪಷ್ಟವಿದೆ. ೫೪೫

೩.೨೬.೩೨ 'ಆನುಶ್ರವಿಕ ಕರ್ಮ' ಎಂದರೆ ಶ್ರುತ್ಯುಕ್ತವಾದ ವಿಧಿನಿಷೇಧಗಳನ್ನು ಉಲ್ಲಂಘಿಸದಿರುವ ಇಂದ್ರಿಯಗಳು. ಎಂಬದು ಭವಿಷ್ಯತ್ಪರ್ವದಲ್ಲಿದೆ. 'ಸತ್ವ ಏವೈಕ ಮನಸಃ' ಎಂದರೆ ಗುಣಪೂರ್ಣಪರಮಾತ್ಮನನ್ನೇ ಧ್ಯಾನಿಸುವವನು. 'ಸತ್ವ ಎಂದರೆ ಗುಣಪೂರ್ಣನಾದ ವಿಷ್ಣುವೆ'ಂದು ಕಾಪಿಲೇಯದಲ್ಲಿ ಹೇಳಿದೆ. ಭಕ್ತಿಯು ಮುಕ್ತಿಗಿಂತಲೂ ಹೆಚ್ಚು ಎನ್ನುವುದರ ಅಭಿಪ್ರಾಯ ಹೀಗೆ– ನಿಷ್ಕಾಮ ಭಕ್ತಿಯೇ ಪೂರ್ಣಭಕ್ತಿ. ಅಪೂರ್ಣಭಕ್ತಿ ಉಳ್ಳವನಿಗೆ ಮುಕ್ತಿಯಲ್ಲಿಯೂ ಪೂರ್ತಿಸುಖಾಭಿವ್ಯಕ್ತಿ ಇಲ್ಲ. ಆ ಸುಖಕ್ಕಿಂತ ಅಧಿಕವಾಗಿ ಸಂಸಾರದಲ್ಲಿಯೂ ಸ್ವರೂಪಸುಖಾಭಿವ್ಯಕ್ತಿ ಪೂರ್ಣಭಕ್ತಿ

ಉಳ್ಳವನಿಗೆ ಇರುವುದರಿಂದ ಪೂರ್ಣಭಕ್ತಿ ಮುಕ್ತಿಗಿಂತಲೂ ಮಿಗಿಲು ಎಂದು. ೫೪೬

೩.೨೬.೩೪ ಪರಮಾತ್ಮನ ಪಾದಸೇವಾಕಾಂಕ್ಷಿಗಳಾದ ಭಕ್ತರು ಮುಕ್ತಿಯನ್ನು ಬಯಸುವುದಿಲ್ಲವೆಂದರೆ ಮುಕ್ತಿಯಲ್ಲಿ ಜೀವಪರಮಾತ್ಮರಿಗೆ ಭೇದವಿಲ್ಲದ್ದರಿಂದ ಪಾದಸೇವೆಗೆ ಅವಕಾಶವಿಲ್ಲ ಎಂದಲ್ಲ. ಮುಕ್ತಿಯಲ್ಲಿಯೂ ಭೇದವಿದೆ, ಪಾದಸೇವೆಗೆ ಸರ್ವಥಾ ಅವಕಾಶವಿದೆ. ಆದರೂ ಭಕ್ತಿಗೆ ಫಲವಾಗಿ ಮುಕ್ತಿಯನ್ನು ಭಕ್ತರು ಬಯಸುವುದಿಲ್ಲ. ಪರಮಾತ್ಮನ ಆಜ್ಞೆ ಎಂದು ಮಾತ್ರ ಅದನ್ನು ಸ್ವೀಕರಿಸುತ್ತಾರೆ. ೫೪೮

೩.೨೬.೩೮ ಭಕ್ತನನ್ನು ತನ್ನವನೆಂದು ಸ್ವೀಕರಿಸಿ ಕಾಪಾಡುವುದರಿಂದ ಭಗವಂತ 'ಆತ್ಮ' ಹಾಗೇ ಅವನನ್ನು ಮುಕ್ತರು ಸದಾ ತಿಳಿಯುವುದರಿಂದ ಅವನು ಕಾಪಾಡುತ್ತಾನೆ. ಅವರ ಆನಂದಕ್ಕೆ ಚ್ಯುತಿಯಿಲ್ಲ. ಸಂಸಾರಿಗಳು ಮರೆಯುತ್ತಾರೆ. ಅವರ ಭೋಗ ನಶ್ವರವಾಗಿರುತ್ತದೆ. ೫೫೦

೩.೨೭.೪ ಜೀವನು ಶರೀರದ ಉತ್ಪತ್ತಿನಾಶಗಳನ್ನು ತನ್ನವೆಂದು ತಿಳಿದು ತಾನು ಹುಟ್ಟಿದೆ ಸತ್ತೆನೆನ್ನುವುದು ಭ್ರಾಂತಿ. ಎಂದ ಮೇಲೆ ಪರಮಾತ್ಮನು ಅವತಾರಗಳಲ್ಲಿ ಹುಟ್ಟುವಂತೆ ಕಾಣುವುದು ಭ್ರಾಂತಿ ಎಂದು ಬೇರೇನು ಹೇಳಬೇಕು! ಅದರಿಂದ ಪರಮಾತ್ಮ ಅವತಾರರೂಪಗಳಲ್ಲಿಯೂ ಅನಾದಿ ಎಂದು ಈ ಶ್ಲೋಕ ಹೇಳುತ್ತದೆ ಹೊರತು ಜೀವನ ಅನಾದಿನಿತ್ಯತ್ವವನ್ನು ಹೇಳುವ ಉದ್ದೇಶವಿಲ್ಲ. ೫೫೩

೩.೨೭.೫ 'ಉಪಗತಾಮಭ್ಯಪದ್ಯತ' ಎಂದರೆ ಜೀವನು ಅವಿದ್ಯೆಯ ಬಂಧನದಲ್ಲಿ ತನ್ನನ್ನು ಸಿಲುಕಿಸಿಕೊಂಡನೆಂದರ್ಥವಲ್ಲ. ಪರಮಾತ್ಮ ತನ್ನ ಬಳಿಯೆ ಸದಾ ವಶದಲ್ಲಿರುವ ಪ್ರಕೃತಿಯನ್ನು ಸೃಷ್ಟಿಗೆ ಪ್ರೇರಿಸಿದ. ೫೫೪

೩.೨೭.೬ 'ವಿಲೋಕ್ಯ ಮುಮುಹೇ' ಎಂದರೆ ಜೀವನು ದೇಹಾತ್ಮೈಕ್ಯಮೋಹದಲ್ಲಿ ಸಿಲುಕಿದನೆಂದರ್ಥವಲ್ಲ. ಪರಮಾತ್ಮನೆ ಜೀವನನ್ನು ಸ್ವಾತಂತ್ರ್ಯಾಭಿಮಾನದಲ್ಲಿ ಸಿಲುಕಿಸಿದ ಎಂದರ್ಥ. ಸಿಲುಕಿಸಿದನೆನ್ನದೆ 'ಮುಮುಹೇ' ಸಿಲುಕಿದ ಎಂದುದು ಜೀವನನ್ನು ಸಿಲುಕುವಂತೆ ಮಾಡಿವಲ್ಲಿ ಪರಮಾತ್ಮ ಪೂರ್ಣ ಸ್ವತಂತ್ರ ಎಂದು ತಿಳಿಸುವ ಉದ್ದೇಶದಿಂದ. ೫೫೬

೩.೨೭.೭ ಪರಾಭಿಧ್ಯಾನವೆಂದರೆ ದೇಹಾತ್ಮೈಕ್ಯಭ್ರಾಂತಿಯಲ್ಲ. ಪರಮಾತ್ಮನ ಇಚ್ಛೆ. ಪರಮಾತ್ಮನ ಇಚ್ಛೆಯಿಂದಲೆ ಜೀವನು ಪ್ರಕೃತಿಯಲ್ಲಿರುವ ಕರ್ತೃತ್ವವನ್ನು ತನ್ನದೆಂದು ಆರೋಪಿಸಿಕೊಂಡು ಅಹಂಕಾರಪಡುತ್ತಾನೆ. ೫೫೮

೩.೨೭.೮ ಅಕರ್ತೃ, ಈಶ, ಸಾಕ್ಷಿ, ನಿರ್ವೃತಾತ್ಮ ಈ ಎಲ್ಲ ವಿಶೇಷಣಗಳು ಪರಮಾತ್ಮನಿಗೆ ಇವೆ. ಅಂಥ ಪರಮಾತ್ಮನ ಇಚ್ಛೆಯಿಂದ ಪಾರತಂತ್ರ್ಯವು ಜೀವನಿಗೆ ಬಂದಿದೆ ಹೊರತು ಪರಮಾತ್ಮನಿಗಲ್ಲ. ಸ್ವೋತ್ತಮರಿಗೆ ಅಧೀನವಾಗಿರುವುದು ಜೀವನಿಗೆ ಸ್ವಾಭಾವಿಕವೆ. ಮುಕ್ತಿಯಲ್ಲಿಯೂ ಅದು ಇದ್ದೇ ಇದೆ. ಆದರೆ ಸಂಸಾರದಲ್ಲಿ ಅವನು ಅಧಮರಿಗೂ ಅಧೀನನಾಗುತ್ತಾನೆ. ಈ ಪಾರಂತ್ರ್ಯ ಅಸ್ವಾಭಾವಿಕ. ತತ್ವಜ್ಞಾನದಿಂದ ನಿವೃತ್ತಿ ಹೊಂದುವುದು. ೫೫೯

೩.೨೭.೯ ಪ್ರಕೃತಿ ಪುರುಷರೆಂದರೆ ಜಡಜೀವರಲ್ಲ, ಲಕ್ಷ್ಮೀನಾರಾಯಣರು, ಜೀವರಿಗೆ ಸುಖದುಃಖಕರ್ತೃತ್ವವನ್ನು ಲಕ್ಷ್ಮಿ, ಭೋಕ್ತೃತ್ವವನ್ನು ನಾರಾಯಣ ಉಂಟು ಮಾಡುತ್ತಾರೆ. ೫೬೧

೩.೨೭.೧೧ ಪ್ರಕೃತಿ ಎಂದರೆ ಅನಿರ್ವಚನೀಯವಾದ ಮಾಯೆಯಲ್ಲ. ಸತ್ಯವಾದ ಚೇತನ ಪ್ರಕೃತಿ ಮತ್ತು ಅಚೇತನಪ್ರಕೃತಿಗಳನ್ನು ಇಟ್ಟುಕೊಳ್ಳಬೇಕು. ಪ್ರಕೃತಿಯು ಮಹದಾದಿ ಸೃಷ್ಟಿ ಮಾಡದಿದ್ದಾಗ ಅವ್ಯಕ್ತವೆನಿಸುತ್ತದೆ. ಮಾಡಲು ಹೊರಡುವಾಗ ವ್ಯಕ್ತಾವ್ಯಕ್ತ. ಮಾಡಿದಾಗ ವ್ಯಕ್ತ. ಈ ಮೂರು ಅವಸ್ಥೆಗಳನ್ನು ಅವ್ಯಕ್ತಂ ಸದಸದಾತ್ಮಕಂ ವಿಶೇಷವತ್ ಎಂಬ ಶಬ್ದಗಳು ಹೇಳುತ್ತವೆ. ಹುಟ್ಟು ಇಲ್ಲದ್ದರಿಂದ ಪ್ರಕೃತಿ ಅವಿಶೇಷವೆನಿಸುತ್ತದೆ ಎಂದು ಹರಿವಂಶ ಹೇಳಿದೆ. ವಿಶೇಷವೆಂದರೆ ಹುಟ್ಟುವ ವಸ್ತು ಎಂದು ಪದ್ಮಪುರಾಣದಲ್ಲಿದೆ. ೫೬೪

೩.೨೭.೧೫ ನಿಶ್ಚಯ ಸಂಶಯ ಅಭಿಮಾನ ಸ್ಮರಣಗಳನ್ನು ಉಂಟು ಮಾಡುವುದು ಕ್ರಮವಾಗಿ ಬುದ್ಧಿ ಮನಸ್ಸು ಅಹಂಕಾರ ಚಿತ್ತ ಎಂಬ ನಾಲ್ಕು ಬಗೆಯ ಮನಸ್ಸಿನ ಲಕ್ಷಣವೆಂದು ಸ್ಕಂದಪುರಾಣ ಹೇಳಿದೆ. ೫೬೬

೩.೨೭.೧೬ ಸಗುಣ ಬ್ರಹ್ಮ ಎಂದರೆ ತ್ರಿಗುಣಾತ್ಮಕ ಪ್ರಕೃತಿ ಮಾತ್ರವೇ ಅಲ್ಲ. ಲಕ್ಷ್ಮಿಯೂ ತ್ರಿಗುಣಾಭಿಮಾನಿನಿಯಾದ್ದರಿಂದ ಸಗುಣಬ್ರಹ್ಮ ಎನಿಸುತ್ತಾಳೆ. ಹರಿಯು ನಿರ್ಗುಣಬ್ರಹ್ಮ ಎನಿಸುತ್ತಾನೆ ಎಂದು ಹರಿವಂಶದಲ್ಲಿದೆ. ೫೬೭

೩.೨೭.೧೭ 'ಏಕೇ ಪ್ರಾಹುಃ' ಎಂದ ಮಾತ್ರಕ್ಕೆ ಅಜ್ಞರ ಮತವಾಗುವುದಿಲ್ಲ. ಜ್ಞಾನಿಗಳೇ ಕೆಲವರು ಹೃದಯದಲ್ಲಿರುವ ಪುರುಷನಾಮಕನ ಸರ್ವವ್ಯಾಪಿ ರೂಪವನ್ನು ಕಾಲ ಎನ್ನುತ್ತಾರೆ. ಇನ್ನು ಕೆಲವು ಜ್ಞಾನಿಗಳು ರುದ್ರಾಂತರ್ಗತ ಭಗವದ್ರೂಪವನ್ನು ಕಾಲ ಎನ್ನುತ್ತಾರೆ. ಹೀಗೆ ಬ್ರಹ್ಮಪುರಾಣದಲ್ಲಿ ಹೇಳಿದೆ. ೫೬೮

೩.೨೭.೨೦ ಜಡಪ್ರಕೃತಿಗೆ ಪರಿಣಾಮೋನ್ಮುಖತ್ವವನ್ನೂ ಚೇತನಪ್ರಕೃತಿಗೆ ಸೃಷ್ಟಿಮಾಡುವ ಇಚ್ಛೆಯನ್ನೂ ಉಂಟು ಮಾಡುವವನು ನಾರಾಯಣ. ಅವನೇ

ದೈವ ಎನಿಸುತ್ತಾನೆ. ಮಹತ್ತತ್ತ್ವ ಸೂಕ್ಷ್ಮಾಹಂಕಾರ ಸ್ಥೂಲಾಹಂಕಾರ ಮನಸ್ತತ್ತ್ವಗಳನ್ನೂ ಅವುಗಳ ಅಭಿಮಾನಿಗಳಾದ ಬ್ರಹ್ಮ ಶೇಷ ಮನ್ಮಥ ಅನಿರುದ್ಧರನ್ನೂ ಹುಟ್ಟಿಸುವವರು ನಿಯಂತ್ರಿಸುವವರು ಕ್ರಮವಾಗಿ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ಎಂದು ಕಾಪಿಲೇಯ ಗ್ರಂಥದಲ್ಲಿ ಹೇಳಿದೆ. ೫೬೯

೩.೨೭.೨೧ ಜಗದಂಕುರವೆಂದರೆ ಇಲ್ಲಿ ಜಗದ್ವೃಕ್ಷಕ್ಕೆ ಅಂಕುರದಂತಿರುವ ಮಹತ್ತತ್ತ್ವವಲ್ಲ. ಅದು ತಾನೇ ತಮಸ್ಸನ್ನು ದೂರಮಾಡದು. ಅದು ಕೂಟಸ್ಥವೂ ಅಲ್ಲ. ಜಗತ್ತನ್ನು 'ಅಂಕೇ' ಬಳಿಯಲ್ಲಿರಿಸಿಕೊಂಡು ಸದಾ 'ರಮಯತಿ' ಲಾಲಿಸುವುದರಿಂದ ಭಗವಂತನೆ ಇಲ್ಲಿ ಜಗದಂಕುರ. ೫೭೧

೩.೨೭.೨೨ ಮಹದಹಂಕಾರ ಬುದ್ಧಿ ಮನಸ್ಸುಗಳಲ್ಲಿ ವಾಸುದೇವ ಸಂಕರ್ಷಣ ಪ್ರದ್ಯುಮ್ನರ ಉಪಾಸನೆಯನ್ನು ಪ್ರಾಸಂಗಿಕವಾಗಿ ಇಲ್ಲಿ ಹೇಳಿದೆ ಎನ್ನುವುದು ಸರಿಯಲ್ಲ. ಮಹತ್ತತ್ತ್ವದಿಂದ ಚಿತ್ತವೆಂಬ ಒಂದು ಅಂತಃಕರಣದ ಉತ್ಪತ್ತಿಯನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ೫೭೨

೩.೨೭.೨೩ ಹಿಂದಿನ ಶ್ಲೋಕದಲ್ಲಿ ಹೇಳಿದ ಚಿತ್ತಲಕ್ಷಣಗಳನ್ನೇ ಇಲ್ಲಿಯೂ ಹೇಳಿದೆ ಎನ್ನಬಾರದು. ಅಲ್ಲಿ ಹೇಳಿದ್ದು ಭಗವಂತನ ಲಕ್ಷಣ. ಇಲ್ಲಿ ಹೇಳುವುದು ಜಡವಾದ ಚಿತ್ತದ ಲಕ್ಷಣ. ಚಿತ್ತದ ಸ್ವಚ್ಛತೆ ಎಂದರೆ ಅಲ್ಪವಿಕಾರವೆಂದು ತತ್ತ್ವವಿವೇಕದಲ್ಲಿದೆ. ೫೭೩

೩.೨೭.೨೪ ಮಹತ್ತತ್ತ್ವಾಭಿಮಾನಿ ಬ್ರಹ್ಮನಲ್ಲಿ ಅಹಂಕಾರಾಭಿಮಾನಿಗಳಿಗಿಂತ ಹೆಚ್ಚೇ ಕ್ರಿಯಾಶಕ್ತಿ ಇದೆ. ಆದರೂ ಅದಕ್ಕಿಂತ ಹೆಚ್ಚು ಜ್ಞಾನಶಕ್ತಿ ಇರುವುದರಿಂದ ಜ್ಞಾನಶಕ್ತಿಯನ್ನೇ ಎತ್ತಿ ಹೇಳಲಾಗಿದೆ. ಹಾಗೇ ಅಹಂಕಾರಾಭಿಮಾನಿಗಳಲ್ಲಿ ಮನೋಭಿಮಾನಿಗಳಿಗಿಂತ ಹೆಚ್ಚೇ ಜ್ಞಾನಶಕ್ತಿ ಇದ್ದರೂ ಅದಕ್ಕಿಂತ ಹೆಚ್ಚು ಕ್ರಿಯಾಶಕ್ತಿ ಇರುವುದರಿಂದ ಕ್ರಿಯಾಶಕ್ತಿಯನ್ನೇ ಹೇಳಲಾಗಿದೆ. ೫೭೪

೩.೨೭.೨೬ 'ವೈಕಾರಿಕೋಽಧಿದೈವಂ' ಎಂದು ಪ್ರಥಮಾವಿಭಕ್ತಿಗೆ ಪಂಚಮ್ಯರ್ಥ ವಿವಕ್ಷಿತ. ವೈಕಾರಿಕಾಂಹಕಾರದಿಂದ ದೇವತಾಶರೀರೋತ್ಪತ್ತಿ ಎಂದು. ಪ್ರಥಮಾಪ್ರಯೋಗ ಮಾಡಿದ್ದು ಅಹಂಕಾರಕ್ಕೆ ದೇವತಾಶರೀರವಾಗಿ ಪರಿಣಮಿಸುವಲ್ಲಿಯೂ ಅಹಂಕಾರಾಭಿಮಾನಿಗೆ ದೇವತಾಶರೀರ ನಿರ್ಮಿಸುವಲ್ಲಿಯೂ ಸ್ವಾತಂತ್ರ್ಯವನ್ನು ತಿಳಿಸುವ ಉದ್ದೇಶದಿಂದ. ಈ ರೀತಿ ಉದ್ದೇಶವಿದ್ದಾಗ ಏಳು ವಿಭಕ್ತಿಗಳ ಅರ್ಥದಲ್ಲಿಯೂ ಪ್ರಥಮಾ ಪ್ರಯೋಗಿಸಬಹುದೆಂದು ಶಬ್ದನಿರ್ಣಯದಲ್ಲಿದೆ. ೫೭೬

೩.೨೭.೨೭ ಅಹಂಕಾರಕ್ಕೆ ಮನೋರೂಪದಿಂದ ಕರ್ತೃತ್ವ, ದೇಹರೂಪದಿಂದ ಕಾರ್ಯತ್ವ, ಇಂದ್ರಿಯರೂಪದಿಂದ ಕರಣತ್ವಗಳು ಲಕ್ಷಣಗಳೆಂದು ತತ್ತ್ವವಿವೇಕದಲ್ಲಿ ಹೇಳಿದೆ. ಶಾಂತರಾದ ಭಗವದ್ಭಕ್ತರಾದ ದೇವತೆಗಳನ್ನು ಹುಟ್ಟಿಸುವುದರಿಂದ ಶಾಂತತ್ವವು ವೈಕಾರಿಕದ ಲಕ್ಷಣ. ಘೋರ ಸಂಸಾರ ಕಾರಣವಾದ ಇಂದ್ರಿಯಗಳನ್ನು ಹುಟ್ಟಿಸುವುದರಿಂದ ಘೋರತ್ವವು ತೈಜಸದ ಲಕ್ಷಣ. ಜ್ಞಾನವನ್ನು ಪ್ರಕಟಮಾಡದಿರುವುದರಿಂದ ಮೂಢತ್ವವು ತಾಮಸಾಹಂಕಾರಲಕ್ಷಣ ಎಂದು ನಿರ್ಣಯಗ್ರಂಥದಲ್ಲಿ ಹೇಳಿದೆ. ೫೭೮

೩.೨೭.೩೧ 'ದ್ರವ್ಯಸ್ಫುರಣವಿಜ್ಞಾನಂ' ಎಂಬಲ್ಲಿ ದ್ರವ್ಯಸ್ಫುರಣಾನಂತರ ಹುಟ್ಟುವ ವಿಜ್ಞಾನ ಎಂದು ವಿಗ್ರಹ. ಮೊದಲಿಗೆ ಮನಸ್ಸಿನಿಂದ ದ್ರವ್ಯದ ಸಾಮಾನ್ಯಜ್ಞಾನ. ಬಳಿಕ ಬುದ್ಧಿಯಿಂದ ವಿಶೇಷಜ್ಞಾನ ಎಂದರ್ಥ. ೫೮೧

೩.೨೭.೩೨ ವಿಶೇಷವಿಚಾರದಿಂದಲೂ ನಿವೃತ್ತಿಯಾಗದ ಸಂಶಯ ಬುದ್ಧಿಯ ಕಾರ್ಯ. ವಿಚಾರದಿಂದ ನಿವೃತ್ತಿಯಾಗುವ ಸಂಶಯ ಮನಸ್ಸಿನ ಕಾರ್ಯ. ಬುದ್ಧಿಯಿಂದಾಗುವ ಸ್ಮರಣೆ ಚಂಚಲ. ಚಿತ್ತದಿಂದಾಗುವ ಸ್ಮರಣೆ ಸ್ಥಿರ. ೫೮೨

೩.೨೭.೩೩ ತೈಜಸಾಹಂಕಾರದಿಂದ ಹುಟ್ಟುವ ಪ್ರಾಣ ಮುಖ್ಯಪ್ರಾಣನಲ್ಲ. ಆಹಂಕಾರಿಕ ಪ್ರಾಣ. ಮುಖ್ಯಪ್ರಾಣ ಹಿಂದೆ ಮಹತ್ತತ್ತ್ವದೊಂದಿಗೇ ಹುಟ್ಟಿರುತ್ತಾನೆ. ಆಹಂಕಾರಿಕಪ್ರಾಣ ಪ್ರವಹವಾಯು ಪ್ರಾಣವಾಯು ಮುಂತಾದವರು ಮುಖ್ಯಪ್ರಾಣನ ಮಕ್ಕಳು, ಅವನಿಂದ ಆವಿಷ್ಟರು. ೫೮೩

೩.೨೭.೩೪ ಅರ್ಥಾಶ್ರಯತ್ವ, ಅಂದರೆ ಅರ್ಥಪ್ರತಿಪಾದಕತ್ವ ಶಬ್ದದ ಒಂದು ಲಕ್ಷಣ. ದ್ರಷ್ಟೃವಾದ, ಸರ್ವಜ್ಞನಾದ ಪರಮಾತ್ಮನಿಗೆ ಲಿಂಗವಾಗಿರುವುದು, ಅಂದರೆ ಶಬ್ದದಿಂದಲೆ ಪರಮಾತ್ಮನನ್ನು ತಿಳಿಯಬೇಕು ಎನ್ನುವುದು ಶಬ್ದದ ಇನ್ನೊಂದು ಲಕ್ಷಣ. ಆಕಾಶದಲ್ಲಿ ಬೇರೆ ಗುಣವಿಲ್ಲ, ಶಬ್ದ ಒಂದೇ ಇದೆ ಎನ್ನುವುದೂ ಶಬ್ದದ ಲಕ್ಷಣ. ಮುಂದೆ ಭಾಗವತದಲ್ಲಿ ವಾಯುವಿನಲ್ಲಿ ಸ್ಪರ್ಶಮಾತ್ರಗುಣ, ತೇಜಸ್ಸಿನಲ್ಲಿ ರೂಪಮಾತ್ರಗುಣ ಎಂದ ಮುಂತಾಗಿ ಹೇಳುವುದು ಅಲ್ಲಿ ಬೇರೆ ಗುಣಗಳಿದ್ದರೂ ಅವು ಬೇರೆ ಭೂತಗಳ ಮಿಶ್ರಣದಿಂದ ಬಂದವುಗಳು ಎಂಬ ಅಭಿಪ್ರಾಯದಿಂದ. ಸೂಕ್ಷ್ಮಧ್ವನಿ ತಾಮಸಾಹಂಕಾರದಿಂದ ಹುಟ್ಟಿ ಆಕಾಶವನ್ನು ಹುಟ್ಟಿಸುತ್ತದೆ. ಬಳಿಕ ಆಕಾಶದಿಂದ ಹುಟ್ಟುವ ಸ್ಥೂಲವಾದ ಧ್ವನಿ ಶ್ರೋತ್ರಗ್ರಾಹ್ಯವೆನಿಸುತ್ತದೆ. ಇದೇ ರೀತಿ ಸ್ಪರ್ಶಾದಿಗಳು ಸೂಕ್ಷ್ಮರೂಪದಲ್ಲಿ ವಾಯ್ವಾದಿಗಳಾಗಿ ಪರಿಣಮಿಸುತ್ತವೆ. ಸ್ಥೂಲರೂಪದಲ್ಲಿ ವಾಯ್ವಾದಿಗಳಿಂದ ಹುಟ್ಟಿ ಇಂದ್ರಿಯಗೋಚರವೆನಿಸುತ್ತವೆ. ೫೮೪

೩.೨೭.೩೭ ಆಕಾಶವು ಶಬ್ದತನ್ಮಾತ್ರವಾಗಿದೆ ಎಂದರೆ ಶಬ್ದ ಒಂದೇ ಆಕಾಶದಲ್ಲಿ ಸ್ವತಃ ಇರುವ ಗುಣ ಎಂದರ್ಥ. ಇಂದ್ರಿಯಗಳಿಗೆ ಪಂಚಭೂತಗಳಿಂದ ಉತ್ಪತ್ತಿ ಎಂದರೆ ಹಿಂದೆ ತೈಜಸಾಹಂಕಾರದಿಂದ ಹುಟ್ಟಿದ್ದ ಇಂದ್ರಿಯಗಳಿಗೇ ಪುನಃ ಭೂತಗಳಿಂದ ಉಪಚಯ. ವಸ್ತುತಃ ತೈಜಸಾಹಂಕಾರದಿಂದಲೂ ಇಂದ್ರಿಯಗಳಿಗೆ ಉಪಚಯವೆ. ಸೂಕ್ಷ್ಮರೂಪದಿಂದ ಇಂದ್ರಿಯಗಳು ಅನಾದಿ. ಭೂತಗಳಿಂದ ಅವುಗಳಿಗೆ ಬ್ರಹ್ಮಾಂಡದ ಹೊರಗೊಮ್ಮೆ ಒಳಗೆ ಇನ್ನೊಮ್ಮೆ ಹೀಗೆ ಎರಡು ಬಾರಿ ಉಪಚಯವಿದೆ. ೫೮೮

೩.೨೭.೩೯ ಬ್ರಹ್ಮವೈವರ್ತಪುರಾಣ ಹೇಳುವಂತೆ ಭೂತವಾಯ್ವಭಿಮಾನಿ ಪ್ರವಹವಾಯು ಮುಖ್ಯವಾಯುವಿನ ಆವೇಶಬಲದಿಂದ ಜ್ಞಾನಾನಂದ ಬಲಾದಿ ಸ್ವಯೋಗ್ಯ ಸರ್ವಗುಣಗಳನ್ನು ಪಡೆದಿದ್ದಾನೆ. ಇದೇ ವಾಯುವಿನ ಲಕ್ಷಣಗಳಲ್ಲಿ ಒಂದಾದ ಪ್ರಾಪ್ತಿ. ೫೯೦

೩.೨೭.೪೧ ರೂಪಲಕ್ಷಣಗಳಲ್ಲಿ ಒಂದಾದ 'ಗುಣತಾ' ಎಂದರೆ ಪ್ರಕಾಶತ್ವ. ಅಭಿಧಾನ ಗ್ರಂಥವು 'ಗುಣ' ಎಂದರೆ ಪ್ರಕಾಶ ಎನ್ನುತ್ತದೆ. ರೂಪದ ಇನ್ನೊಂದು ಲಕ್ಷಣವಾದ ತೇಜಸ್ತ್ವವೆಂದರೆ ಪ್ರಖರವಾಗಿ ಬೆಳಗುವುದೆಂದರ್ಥ. ೫೯೧

೩.೨೭.೪೫ ಜಲಲಕ್ಷಣವಾದ 'ಉಂದನ' ಎಂದರೆ ಬಿಂದುವಾಗಿರುವುದು. 'ಸ್ಯಂದನ' ಎಂದರೆ ಹರಿಯುವುದು ಎಂದು ಅಭಿಧಾನಗ್ರಂಥ ಹೇಳುತ್ತದೆ. ಜಲಕ್ಕೆ ಇನ್ನೊಂದು ಲಕ್ಷಣ ಭೂಯಸ್ತ್ವ ಎಂದರೆ ಅಧಿಕವಾಗಿರುವುದು. ಪಾರ್ಥಿವಾದಿ ಶರೀರಗಳಲ್ಲಿ ಒಟ್ಟಾರೆ ಪೃಥಿವೀತೇಜಸ್ಸುಗಳಿಗಿಂತ ಜಲಭಾಗವೇ ಅಧಿಕ. ೫೯೩

೩.೨೭.೪೮ ಪೃಥಿವೀಲಕ್ಷಣಗಳಲ್ಲಿ 'ಭಾವನಂ'ಎಂದರೆ ಸಸ್ಯಾದಿಗಳ ಉತ್ಪತ್ತಿಗೆ ಕಾರಣವಾಗುವುದು. 'ಬ್ರಹ್ಮಣಃ ಸ್ಥಾನಂ' ಎಂದರೆ ಪರಮಾತ್ಮ ಸಾಕ್ಷಾತ್ಕಾರ ಮೊದಲಿಗೆ ಶರೀರದಲ್ಲಿಯೆ ಆಗುತ್ತದೆ ಎಂದು. 'ಸದ್ವಿಶೇಷಣಂ' ಎಂದರೆ ವಿಶೇಷವಾಗಿ ವ್ಯಕ್ತವಾಗಿರುವುದು. ರಸಾದಿ ಐದೂ ಗುಣಗಳಿರುವುದರಿಂದ ಪೃಥಿವಿ ಇತರ ಭೂತಗಳಿಗಿಂತ ವಿಶೇಷವಾಗಿ ವ್ಯಕ್ತವಾಗಿರುತ್ತದೆ. 'ಸತ್' ಎಂದರೆ ವ್ಯಕ್ತ ಎಂದು ಬ್ರಹ್ಮಪುರಾಣ ಹೇಳುತ್ತದೆ. 'ಸರ್ವಸತ್ವ ಗುಣೋದ್ಭೇದಃ' ಎಂದು ಇನ್ನೊಂದು ಪೃಥಿವೀಲಕ್ಷಣ. ಜೀವರಸರ್ವಗುಣ ಸಂಸಾರಾವಸ್ಥೆಯಲ್ಲಿ ಶರೀರದಲ್ಲಿಯೇ ವ್ಯಕ್ತವಾಗುತ್ತದೆ ಎಂದು. ಪಾರ್ಥಿವ ಶರೀರವೂ ಪಾಂಚಭೌತಿಕವೆಂದೇ ವ್ಯವಹಾರವಿದ್ದರೂ ವಸ್ತುತಃ ಇಂದ್ರಿಯ ಜಾಠರಾಗ್ನಿ ಮುಂತಾದವುಗಳಲ್ಲಿರುವ ಜಲಾದಿಗಳನ್ನು ಹೊರತು ಪಡಿಸಿದರೆ ಪಾರ್ಥಿವಶರೀರದಲ್ಲಿ ಪೃಥಿವೀಭಾಗವೇ ಹೆಚ್ಚು. ಅದರಿಂದ ಶರೀರವು ಪಾರ್ಥಿವ. ಅದರ ಲಕ್ಷಣ ಪೃಥಿವಿಯ ಲಕ್ಷಣವಾಗುತ್ತದೆ. ೫೯೪

೩.೨೭.೫೪ ವಿರಾಟ್ ಪುರುಷನೆಂದರೆ ಚತುರ್ಮುಖಬ್ರಹ್ಮ. ಅವನು ಅಂಡದಿಂದ ಸ್ಥೂಲಶರೀರದಿಂದ ಹುಟ್ಟಿದ್ದಾನೆ. ಅದರಿಂದಲೇ ಅಂಡವು ಬ್ರಹ್ಮಾಂಡ ವೆನಿಸಿತು. ಚತುರ್ಮುಖನು ವಿಶೇಷವಾಗಿ ಪ್ರಕಾಶಿಸುವುದರಿಂದ ವಿರಾಟ್ ಎನಿಸಿದ್ದಾನೆ. ೫೯೭

೩.೨೭.೬೧ ಯಜ್ಞನಾಮಕರು ಇಬ್ಬರು. ರುಚಿಯಿಂದ ಆಕೂತಿಯಲ್ಲಿ ಅವತರಿಸಿದ ಭಗವಂತ ಮತ್ತು ಇಂದ್ರಪುತ್ರ ಎಂದು. ಭಗವಂತನಾವೇಶಯುಕ್ತನಾದ ಇಂದ್ರಪುತ್ರ ಯಜ್ಞನು ಪಾದಾಭಿಮಾನಿಯಾದ್ದರಿಂದ ಭಗವಂತನನ್ನೂ ಪಾದಾಭಿಮಾನಿ ಎನ್ನುವುದುಂಟು. ೫೯೮

೩.೨೭.೬೪ ಚೈತ್ತ್ಯನೆಂದರೆ ಚತುರ್ಮುಖಬ್ರಹ್ಮ. ಏಕೆಂದರೆ ಅವನು ತನ್ನ ಶರೀರದಲ್ಲಿ ಚಿತ್ತಾಭಿಮಾನಿಯಾಗಿ ತಾನೇ ಇನ್ನೊಂದು ರೂಪದಿಂದ ಜನಿಸಿದ. ಅವನಲ್ಲಿ ಅಂತರ್ಯಾಮಿಯಾಗಿ ಆವಿರ್ಭವಿಸಿದ್ದರಿಂದ ವಿಷ್ಣುವೂ ಚೈತ್ತ್ಯ ೫೯೯

೩.೨೭.೭೦ ವಿರಾಡ್ ಬ್ರಹ್ಮನ ಶರೀರದಲ್ಲಿ ಇಂದ್ರಿಯದೇವತೆಗಳು ಒಬ್ಬೊಬ್ಬರಾಗಿ ಪ್ರವೇಶಿಸಿ ತಮ್ಮ ಬಲ ಪ್ರದರ್ಶನ ಮಾಡುವಾಗ ಪಾದಾಭಿಮಾನಿ ಎನಿಸಿ ವಿಷ್ಣುವೂ ಪ್ರವೇಶಿಸಿದ್ದಾನೆ. ಆದರೆ ಬ್ರಹ್ಮನ ಶರೀರ ಏಳಲಿಲ್ಲ. ಏಕೆಂದರೆ ಇಂದ್ರಪುತ್ರಯಜ್ಞನಲ್ಲಿ ಅಂತರ್ಯಾಮಿಯಾಗಿ ಬ್ರಹ್ಮನ ಪಾದಗಳನ್ನು ವಿಷ್ಣು ಪ್ರವೇಶಿಸಿದ್ದರಿಂದ ತಾನು ಶಕ್ತನಾದರೂ ಇಂದ್ರಪುತ್ರ ಅಶಕ್ತನಾದ್ದರಿಂದ ಅವನ ಅಶಕ್ತಿ ತೋರುವುದಕ್ಕಾಗಿ ಬ್ರಹ್ಮಶರೀರವನ್ನು ಎಬ್ಬಿಸಲಿಲ್ಲ. ೬೦೦

೩.೨೭.೭೨ ಬುದ್ಧ್ಯಭಿಮಾನಿ ಬ್ರಹ್ಮನೆಂದರೆ ಚತುರ್ಮುಖನಲ್ಲ, ಬೃಹಸ್ಪತಿ. ಅವನಿಗೂ ಶ್ರುತಿಯಲ್ಲಿ ಬ್ರಹ್ಮನೆಂದು ವ್ಯವಹಾರವಿದೆ. ಅಭಿಧಾನಗ್ರಂಥದಲ್ಲಿಯೂ ಅವನಿಗೆ ಬ್ರಹ್ಮನೆಂದು ಹೆಸರಿದೆ. ೬೦೧

೩.೨೭.೭೩ ವಿರಾಡ್ ಬ್ರಹ್ಮ ತನ್ನ ಶರೀರದಿಂದ ಹೊರಗೆ ಹೋಗುವಾಗ ಒಂದು ಅಂಶದಿಂದ ಅಲ್ಲೇ ಸುಪ್ತನಾಗಿದ್ದ. ಇನ್ನೊಂದು ಅಂಶದಿಂದ ಹರಿವಾಯುಗಳೊಂದಿಗೆ ಹೊರಗೆ ಹೋಗಿದ್ದ. ಬಳಿಕ ಈ ಮೂವರು ಹೊರತು ಬೇರೆ ಎಲ್ಲರೂ ಸೇರಿ ಜೊತೆಯಾಗಿ ಪ್ರವೇಶಿಸಿದರೂ ಅವರಿಗೆ ಶರೀರವನ್ನು ಎಬ್ಬಿಸಲಾಗಲಿಲ್ಲ. ಈ ಶ್ಲೋಕದಲ್ಲಿ ಚಿತ್ತಾಭಿಮಾನಿ ಎಂದರೆ ಬ್ರಹ್ಮ. ಕ್ಷೇತ್ರಜ್ಞ ಅವನೊಳಗಿರುವ ವಿಷ್ಣು. ಮುಂದಿನ ಶ್ಲೋಕದಲ್ಲಿ ಪ್ರಾಣನೆಂದರೆ ಮುಖ್ಯವಾಯು. ೬೦೨

೩.೨೮.೫ ಅಜ್ಞಾನವು ಸುಪ್ತಿ, ಭ್ರಾಂತಿಯು ಸ್ವಪ್ನ ಎಂದು ಮಹಾಭಾರತ ಹೇಳಿದೆ. ೬೦೦

೩.೨೮.೧೧ ಬುಧ್ಯವಸ್ಥಾನ ಎಂದರೆ ಬುದ್ಧಿಯ ಜಾಗರಾದಿ ಅವಸ್ಥೆಯಲ್ಲ 'ಅವ – ಸ್ಥಾನ' ಬುದ್ಧಿ ಸರಿಯಾಗಿ ಕೆಲಸ ಮಾಡದ ಸ್ಥಿತಿ. ಅಂದರೆ ಸ್ವಪ್ನ ಸುಷುಪ್ತಿಗಳು. ೬೦೫

೩.೨೮.೧೨ ಇಲ್ಲಿ ಅಸತ್ ಎಂದರೆ ಮಿಥ್ಯೆಯಲ್ಲ, ನಶ್ವರವೂ ಅಲ್ಲ, ಮಹಾಪ್ರಳಯ. 606

೩.೨೮.೧೪ ಪರಮಾತ್ಮನ ಅಪರೋಕ್ಷವಾಗಲು ಮೊದಲಿಗೆ ಹೃದಯದಲ್ಲಿ ತಮಗೆ ಬಿಂಬಭೂತರಾದ ಗುರುಗಳ ದರ್ಶನವಾಗಿ ಶೇಷದೇವನ ದರ್ಶನವಾದ ಬಳಿಕ ಶೇಷನಿಂದ ಬ್ರಹ್ಮನ ದರ್ಶನ, ಕೊನೆಯಲ್ಲಿ ಬಿಂಬರೂಪಿ ಪರಮಾತ್ಮನ ದರ್ಶನವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೬೦೭

೩.೨೮.೧೫ ಪ್ರಳಯದಲ್ಲಿ ಜೀವರೆಲ್ಲರೂ ಸುಪ್ತರಾಗಿರುವಾಗ ಎಚ್ಚೆತ್ತಿರುವವನು ಸರ್ವಜ್ಞ ಹರಿಯೊಬ್ಬನೆ. ಮರಣದಲ್ಲಿ ಮತ್ತು ಪ್ರಳಯದಲ್ಲಿ ಜೀವರು ತಮ್ಮನ್ನೂ ಕಾಲ ಮುಂತಾದುವನ್ನೂ ತಿಳಿಯುತ್ತಾರೆ. ಆದರೂ ಅದೆಲ್ಲವನ್ನೂ ಮರೆತು ನಾನೇನೂ ತಿಳಿಯಲಿಲ್ಲ ಎಂದು ಭ್ರಮಿಸುತ್ತಾರೆ. ಅವರಿಗೆ ಸರ್ವಜ್ಞ ಹರಿಯೇ ಆಶ್ರಯ ಎಂದು ಹರಿವಂಶದಲ್ಲಿ ಹೇಳಿದೆ. ೬೦೯

೩.೨೯.೧ ಜಗದ್ವೃಕ್ಷಕ್ಕೆ ಬೀಜದಂತಿರುವವನು ಮೂಲಕಾರಣ ವಿಷ್ಣು. ಬೇರೆ ದೇವತೆಗಳು ಶಾಖೋಪಶಾಖೆಗಳಂತೆ. ಆದರಿಂದ ಸಬೀಜಯೋಗವೆಂದರೆ ವಿಷ್ಣೂಪಾಸನೆ ಎಂದು ಕೂರ್ಮಪುರಾಣ ಹೇಳಿದೆ. ೬೧೫

೩.೨೯.೬ ಅಭ್ಯಾಸಬಲದಿಂದ ಮನಸ್ಸು ಅಪ್ರಯತ್ನವಾಗಿ ಧ್ಯಾನಾವಸ್ಥೆಗೆ ಏರಿ ಸ್ಥಿರವಾಗಿ ನಿಲ್ಲುವುದೇ ಸಮಾಧಿ. ೬೧೫

೩.೨೯.೨೦ ಭಗವಂತನ ಸರ್ವಾಂಗಗಳನ್ನೂ ಒಮ್ಮೆಲೆ ಧ್ಯಾನಮಾಡುವಲ್ಲಿ ಅಶಕ್ತಿ ಕಂಡು ಬಂದರೆ ಒಂದೊಂದೇ ಅಂಗವನ್ನು ಧ್ಯಾನಿಸಬೇಕು. ೬೧೬

೩.೨೯.೨೭ ಚಿತ್ತಾಭಿಮಾನಿಯಾದ್ದರಿಂದ ಚೈತ್ತ್ಯನೆನಿಸಿದ ಬ್ರಹ್ಮ ಕೌಸ್ತುಭಮಣಿಯಾಗಿ ಹರಿಯ ಕಂಠದಲ್ಲಿ ಶೋಭಿಸುತ್ತಾನೆ ಎಂದು ಭಾಗವತತಂತ್ರದಲ್ಲಿ ಹೇಳಿದೆ. ೬೧೭

೩.೨೯.೨೯ ಭಗವಂತನ ಎದೆ ಶ್ರೀ ಎನಿಸಿದ ಲಕ್ಷ್ಮಿ ಇರುವ ಸ್ಥಾನ. ಅವನ ಮುಖವೂ ಶ್ರೀ ಎನಿಸಿದ ಅವನ ಸ್ವರೂಪಸೌಂದರ್ಯದ ಸ್ಥಾನ. ಅದೂ ಶ್ರೀನಿಕೇತವೆ. ಮುಖ್ಯವಾಗಿ ಶ್ರೀ ಎಂದರೆ ಭಗವಂತನ ಸ್ವರೂಪಸೌಂದರ್ಯವೆ. ಅದರ

ವಿಶೇಷಸನ್ನಿಧಾನದಿಂದ ಲಕ್ಷ್ಮಿಯು ಶ್ರೀಎನಿಸಿದ್ದಾಳೆ. ಅಥವಾ ಭಗವಂತನ ಸ್ತ್ರೀರೂಪ ಮುಖ್ಯವಾಗಿ ಶ್ರೀ ಎನಿಸುತ್ತದೆ. ಅದರ ವಿಶೇಷ ಸನ್ನಿಧಾನದಿಂದ ಲಕ್ಷ್ಮಿಯು ಶ್ರೀಎನಿಸಿದ್ದಾಳೆ. ೬೧೯

೩.೨೯.೩೨ 'ನ ಪೃಥಗ್ ದಿದೃಕ್ಷೇತ್' ಎಂದರೆ ಭಗವಂತನನ್ನು ತನಗಿಂತ ಬೇರೆಯಾಗಿ ಕಾಣಬಾರದೆಂದಲ್ಲ. ಅವನನ್ನು ಹೊರತು ಬೇರೇನನ್ನೂ ಧ್ಯಾನದಲ್ಲಿ ಕಾಣಬಾರದು. ೬೨೧

೩.೨೯.೩೩ 'ಚಿತ್ತಬಡಿಶಂ ವಿಯುಂಕ್ತೇ' ಎಂದರೆ ಚಿತ್ತ ಎಂಬ ಗಾಳದಿಂದ ಮೀನಿನಂತೆ ಭಗವಂತನನ್ನು ವಶಪಡಿಸಿಕೊಂಡು ಧ್ಯಾನಿಸಿ ಕೊನೆಗೆ ಆ ಚಿತ್ತವನ್ನು 'ವಿಯುಂಕ್ತೇ' ಭಗವಂತನಿಂದಲೂ ಈಚೆಗೆ ತರಬೇಕು, ನಿರ್ವಿಷಯಗೊಳಿಸಬೇಕೆಂದು ವ್ಯಾಖ್ಯಾನಿಸುವುದು ಸರಿಯಲ್ಲ. 'ವಿಯುಂಕ್ತೇ' ಎಂದರೆ ವಿಶೇಷವಾಗಿ ಚಿತ್ತವನ್ನು ಭಗವಂತನಲ್ಲಿಯೇ ನೆಲೆಗೊಳಿಸ ಬೇಕೆನ್ನುವುದು ಯುಕ್ತ. ೬೨೨

೩.೨೯.೩೪ ಮುಕ್ತಾಶ್ರಯಂ ಎಂದರೆ ನಿತ್ಯಮುಕ್ತನಾದ ಪರಮಾತ್ಮನನ್ನು ವಿಷಯೀಕರಿಸುವ ಮನಸ್ಸು. 'ಸ್ವಚಿತ್ತಂ' ಎಂದರೆ ಸ್ವ– ಸ್ವರೂಪಭೂತವಾದ 'ಚಿತ್' ಚಿನ್ಮಯಶರೀರದಲ್ಲಿಯೇ ಇದು ನನ್ನ ಶರೀರವೆಂಬ ಅಭಿಮಾನದಿಂದ 'ತ' ವ್ಯಾಪಿಸಿದ ಮನಸ್ಸು. ಹೀಗೆ ಸ್ವರೂಪಶರೀರದಲ್ಲಿಯೇ ಅಭಿಮಾನಪಡುವುದರಿಂದ 'ನಿರ್-ವಾಣ' ಬಾಹ್ಯಶರೀರಾಭಿಮಾನವಿಲ್ಲದ ನಿರ್ವಾಣಸ್ಥಿತಿ ಸಾಧ್ಯ. ೬೨೫

೩.೨೯.೩೫ 'ಅಸತಿ ಕರ್ತರಿ' ಎಂದರೆ ಜೀವನಲ್ಲಿ ಕರ್ತೃತ್ವ ಮಿಥ್ಯೆ ಎಂದರ್ಥವಲ್ಲ. ಅಸ್ವತಂತ್ರಕರ್ತನಾದ್ದರಿಂದ ಜೀವನು ಅಸತ್ಕರ್ತ. ಸ್ವತಂತ್ರಕರ್ತನಾದ್ದರಿಂದ ಪರಮಾತ್ಮ ಸತ್ಕರ್ತ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. 'ದುಃಖಯೋಃ' ಎಂಬಲ್ಲಿ 'ದುಃ' ಎಂದರೆ ದುಃಖ. 'ಖ' ಎಂದರೆ ಸುಖ. ದುಃಖ ಸುಖಗಳೆರಡನ್ನೂ ಹರಿ ಕೊಡುತ್ತಾನೆ ಎಂಬ ಅಭಿಪ್ರಾಯದಿಂದ 'ದುಃಖಗಳಿಗೆ ಕರ್ತ' ಎನಿಸುತ್ತಾನೆ ಎಂದು ಹರಿವಂಶ ಹೇಳಿದೆ. ೬೨೭

೩.೨೯.೪೧ ಪರಮಾತ್ಮನನ್ನು ಅನನ್ಯ ಭಾವದಿಂದ ಕಾಣುವುದೆಂದರೆ ಜೀವಬ್ರಹ್ಮೈಕ್ಯಭಾವನೆಯಲ್ಲ. ಪರಮಾತ್ಮನ ರೂಪಗುಣಾದಿಗಳಿಗೇ ಪರಸ್ಪರ ಐಕ್ಯಭಾವನೆ. 'ಭೂತೇಷು ತದಾತ್ಮತಾಂ' ಎಂದರೂ ಭೂತಗಳು ಪರಮಾತ್ಮಸ್ವರೂಪವೆಂದಲ್ಲ. ಭೂತಗಳಿಗೆ ಪರಮಾತ್ಮನು ಆತ್ಮ ಅಂದರೆ ಸ್ವಾಮಿ ಎಂದರ್ಥ. ೬೨೯

೩.೨೯.೪೩ 'ಪ್ರಕೃತಿಂ ಪರಾಭಾವ್ಯ' ಎಂದರೆ ಪರಮಾತ್ಮನ ಅನುಗ್ರಹದಿಂದ ಜೀವನು ಪ್ರಕೃತಿಯನ್ನು ಪರಾಭವಗೊಳಿಸುತ್ತಾನೆ ಎಂದು ಅಭಿಪ್ರಾಯವಲ್ಲ. ಪರಮಾತ್ಮನೇ ಪ್ರಕೃತಿಯನ್ನು ಮೀರಿ ಉತ್ತಮನಾಗಿ ನಿಂತಿದ್ದಾನೆ ಎಂದರ್ಥ. ಹಿಂದಿನ ಶ್ಲೋಕದಲ್ಲಿ 'ಸರ್ವಭೂತೇಷು ಚಾತ್ಮಾನಂ' ಎನ್ನುವುದಕ್ಕೂ ಜೀವನು ಎಲ್ಲ ಜೀವ ಜಡಗಳಲ್ಲಿ ಇರುತ್ತಾನೆ ಎಂದರ್ಥವಲ್ಲ. ಪರಮಾತ್ಮ ಸರ್ವಾಂತರ್ಯಾಮಿಯಾಗಿದ್ದಾನೆ ಎಂದರ್ಥ. ೬೩೦

೩.೩೦.೨ 'ಯನ್ಮೂಲಂ' ಎಂದರೆ 'ಮಹಾದಿಗಳ ಲಕ್ಷಣವು ಭಕ್ತಿಯೋಗಕ್ಕೆ ಮೂಲ ಅಥವಾ ಭಕ್ತಿಯೋಗವು ಲಕ್ಷಣದ ಮೂಲ ಉದ್ದೇಶ, ಆದರಿಂದ ಲಕ್ಷಣ ಹೇಳಿದ ಮೇಲೆ ಈಗ ಭಕ್ತಿಯೋಗವನ್ನು ಹೇಳೆಂದು ದೇವಹೂತಿ ಕಪಿಲನಿಗೆ ಹೇಳುತ್ತಿರುವ'ಂತೆ ಕಾಣಬಹುದು. ವಸ್ತುತಃ 'ಲಕ್ಷಣಕ್ಕೆ ಸಾಂಖ್ಯಶಾಸ್ತ್ರವು ಮೂಲ. ಅದಕ್ಕನುಸಾರವಾಗಿಯೇ ಲಕ್ಷಣವನ್ನು ಹೇಳಿರುವಿ' ಎಂದು ದೇವಹೂತಿ ಕಪಿಲನನ್ನು ಪ್ರಶಂಸಿಸುತ್ತಿದ್ದಾಳೆ. ೬೩೪

೩.೩೦.೧೦ 'ಅಪೃಥಗ್ ಭಾವಃ' ಎಂದು ಪದವಿಭಾಗ. ಭಗವಂತನ ರೂಪಾದಿಗಳಿಗೆ ಪರಸ್ಪರ ಭೇದವೈಲಕ್ಷಣ್ಯಗಳನ್ನು ತಿಳಿಯುವನು ಪೃಥಗ್ಭಾವನೆನಿಸುತ್ತಾನೆ. ಅವನು ರಾಜಸ. ಹಾಗೆ ತಿಳಿಯದಿರುವವನು 'ಅಪೃಥಗ್ಭಾವ'ನು ಸಾತ್ವಿಕ. ೬೩೬

೩.೩೦.೨೫ ಅಪರೋಕ್ಷ ಬರುವವರೆಗೆ ಮಾತ್ರ ವಿಗ್ರಹಾರಾಧನೆ, ಅನಂತರ ಬೇಡ ಎಂದು ಈ ಶ್ಲೋಕ ಹೇಳುತ್ತಿಲ್ಲ. ಅಪರೋಕ್ಷವಾದ ಬಳಿಕವೇ ವಿಗ್ರಹಾರಾಧನೆ ಮಾಡಬೇಕೆಂದೂ ಹೇಳುತ್ತಿಲ್ಲ. ಅಪರೋಕ್ಷವಾಗುವವರೆಗೆ ವಿಗ್ರಹಾರಾಧನೆ ತಪ್ಪದೆ ಮಾಡಬೇಕು. ಮಾಡದಿದ್ದರೆ ದೋಷವಿದೆ. ಅನಂತರ, ಮಾಡಿದರೆ ಮಹಾಫಲ, ಮಾಡದಿದ್ದರೆ ದೋಷವಿಲ್ಲ ಎಂದು ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೬೩೮

೩.೩೦.೨೬ ತನ್ನ ಮತ್ತು ಪರರ ಅಂತರ್ಯಾಮಿ ಭಗವದ್ರೂಪಗಳಿಗೆ ಪರಸ್ಪರ ಭೇದ ವೈಲಕ್ಷಣ್ಯಗಳನ್ನು ತಿಳಿಯುವವನಿಗೆ ಇಹಪರಗಳೆರಡರಲ್ಲಿಯೂ ಮಹಾ ಅನರ್ಥವೆಂದು ಈ ಶ್ಲೋಕ ಹೇಳುತ್ತಿದೆ. ೬೩೯

೩.೩೦.೨೮ ಜೀವರು ಸ್ವರೂಪದಲ್ಲಿಯೆ ಪಶುವೃಕ್ಷಾದಿರೂಪಗಳಿಂದ ಇದ್ದಾರೆ. ಸಂಸಾರದಲ್ಲಿ ಮಾತ್ರ ಕರ್ಮಕ್ಕನುಗುಣವಾಗಿ ಬೇರೆಬೇರೆ ಬಗೆಯ ಶರೀರಗಳು ಬರುತ್ತವೆ. ಮುಕ್ತಿಯಲ್ಲಿ ಸ್ವರೂಪಶರೀರ ಮಾತ್ರ ಇರುತ್ತದೆ. ಸ್ವರೂಪಾನುಗುಣವಾಗಿ ತಾರತಮ್ಯ ತಿಳಿಯಬೇಕು. ಅದು ಹೀಗೆ– ಸ್ಥಾವರಜೀವರಿಗಿಂತ ಜಂಗಮರು ಮೇಲು. ಅವರಲ್ಲಿ ಮಾನವರು.

ಮಾನವರಲ್ಲಿ ಬ್ರಾಹ್ಮಣರು. ಬ್ರಾಹ್ಮಣರಲ್ಲಿ ವೇದಾಧ್ಯಯನ ಮಾಡುವವರು ಹೀಗೆ ಕ್ರಮವಾಗಿ ಶ್ರೇಷ್ಠರು ಮಾನವರಿಗಿಂತ ಋಷಿಗಳು, ಋಷಿಗಳಿಗಿಂತ ದೇವತೆಗಳು. ದೇವತೆಗಳಲ್ಲಿ ಪೂರ್ತಿ ಸ್ವಧರ್ಮಾನುಷ್ಠಾನ ಮಾಡುವ ದೇವೇಂದ್ರ ಶ್ರೇಷ್ಠ. ಅವನಿಗಿಂತ ಪೂರ್ತಿ ಫಲಾಸಕ್ತಿ ತೊರೆದಿರುವ ಗರುಡ ಶೇಷರು. ಅವರಿಗಿಂತ ಪೂರ್ಣಭಕ್ತಿ ಉಳ್ಳ ಬ್ರಹ್ಮ. ಅವನೇ ಜೀವೋತ್ತಮ ಎಂದು ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೬೪೦

೩.೩೦.೩೪ 'ಜೀವಕಲಯಾ' ಎಂದರೆ ಜೀವನು ಬ್ರಹ್ಮನ ಸ್ವರೂಪಾಂಶವೆಂದೂ ಆ ಸ್ವರೂಪಾಂಶದಿಂದ ಎಲ್ಲರ ಶರೀರವನ್ನು ಪ್ರವೇಶಿಸಿದ್ದಾನೆ ಎಂದೂ ಅರ್ಥವಲ್ಲ. ಎಲ್ಲ ಪ್ರಾಣಿಗಳನ್ನೂ ಸಂತೋಷಪಡಿಸುತ್ತ ಪರಮಾತ್ಮನ ಭಿನ್ನಾಂಶರಾದ ಆ ಜೀವರೊಂದಿಗೆ ಅವರೊಳಗಿರುವ ಪರಮಾತ್ಮನನ್ನು ಆರಾಧಿಸಬೇಕೆಂದರ್ಥ. ೬೪೩

೩.೩೦.೩೫ ಭಕ್ತಿಯೋಗ ಜ್ಞಾನಯೋಗಗಳಲ್ಲಿ ಒಂದಿದ್ದರೆ ಇನ್ನೊಂದು ಇದ್ದೇ ಇರುವುದರಿಂದ ಒಂದರಿಂದಲೂ ಮೋಕ್ಷ ನಿಶ್ಚಿತ. ೬೪೪

೩.೩೦.೩೬ ಕರ್ಮವಿಚೇಷ್ಟಿತಂ ಎಂದರೆ ಸಂಸಾರಕಾರಣವಾದ ಕರ್ಮಗಳನ್ನು ಮಾತ್ರವಲ್ಲದೆ ಎಲ್ಲ ಕರ್ಮಗಳನ್ನೂ ಪ್ರೇರಿಸುವವನು ಕಾಲರೂಪಿಯಾದ ಭಗವಂತ. ೬೪೫

೩.೩೦.೩೭ ಪರಮಾತ್ಮನಿಗೆ ಪ್ರಿಯರಿಲ್ಲ, ದ್ವೇಷ್ಯರೂ ಇಲ್ಲ ಎಂದರೆ ಯೋಗ್ಯತಾನುಗುಣವಾಗಿ ಜೀವರು ಅವನಿಗೆ ಪ್ರಿಯರೋ ದ್ವೇಷ್ಯರೋ ಆಗಿರುತ್ತಾರೆ. ಯೋಗ್ಯತೆ ಮೀರಿ ಯಾರೂ ಪ್ರಿಯರಾಗಲಿ ದ್ವೇಷ್ಯರಾಗಲಿ ಆಗುವುದಿಲ್ಲ ಎಂದು ಕಾಪಿಲೇಯಗ್ರಂಥದಲ್ಲಿ ಹೇಳಿದೆ. ೬೪೬

೩.೩೧.೧೩ ಕೀನಾಶ ಎಂದರೆ ಗದ್ದೆ ಉಳುವವನು. ೬೫೦

೩.೩೧.೧೬ 'ಉತ್ತಾರಕಫ' ಎಂದರೆ ಮೇಲ್ಮುಖವಾಗಿ ಬರುವ ಕಫ. ೬೫೦

೩.೩೧.೨೪ ಪಾಪಿಗಳಿಗೆ ನರಕ ಸಿಗಲು ಬೇಕಾಗುವ ಕಾಲ ಮೂರು ಅಥವಾ ಎರಡೇ ಮುಹೂರ್ತ ಎಂದು ಭಾಗವತ ಹೇಳುವುದರ ಜೊತೆಗೆ ನಾರದ ಪುರಾಣ ಹೇಳುವಂತೆ ಹತ್ತು ಹದಿನೈದು ದಿನಗಳು ಒಂದು ತಿಂಗಳು ಕಾಲವನ್ನೂ ಇಟ್ಟುಕೊಳ್ಳಬೇಕು. ೬೫೧

೩.೩೧.೨೮ 'ಅತ್ರೈವ' ಎಂದರೆ ಇಲ್ಲಿಯೆ ಸಮೀಪದಲ್ಲಿ, ಸಾಮೀಪ್ಯ ಪ್ರಧಾನ ಅವಧಾರಣ ಇವು ಮೂರು ಏವಕಾರದ ಅರ್ಥಗಳೆಂದು ಶಬ್ದನಿರ್ಣಯದಲ್ಲಿ ಹೇಳಿದೆ. ೬೫೨

೩.೩೧.೨ 'ಪೇಶೀ ಅಂಡಂ ವಾ' ಮಾಂಸದ ಮುದ್ದೆ ಅಥವಾ ಮೊಟ್ಟೆ ಎಂದರೆ ಮನುಷ್ಯಸ್ತ್ರೀಯ ಗರ್ಭದಲ್ಲಿ ಮೊಟ್ಟೆಯೂ ಜನಿಸಬಹುದೆಂದರ್ಥವಲ್ಲ. ಕಾಮ್ಯಕರ್ಮಿಗಳಿಗೆ ಬೇರೆಬೇರೆ ಯೋನಿಗಳಲ್ಲಿ ಜನನಪ್ರಸಂಗವಿದೆ ಎನ್ನಲು ಹಾಗೆ ಹೇಳುವುದುಂಟೆಂದು ಷಾಡ್ಗುಣ್ಯಗ್ರಂಥದಲ್ಲಿ ಹೇಳಿದೆ. ೬೫೫

೩.೩೧.೧೨ 'ಸಪ್ತವಧ್ರಿಃ' ಎಂಬಲ್ಲಿ ವಧ್ರಿ ಎಂದರೆ ಹಗ್ಗವಲ್ಲ. ಇಂದ್ರಿಯಗಳಿಗೆ ವಧ್ರಿ, ಹೃಷೀಕ ಎಂದು ಹೆಸರುಗಳು ಶಬ್ದನಿರ್ಣಯದಲ್ಲಿ ಇವೆ. ಆದರಿಂದ ಪಂಚಜ್ಞಾನೇಂದ್ರಿಯಗಳು ಮನಸ್ಸು ಮತ್ತು ಬುದ್ಧಿ ಎಂದು ಏಳು ಇಂದ್ರಿಯಗಳೇ ಸಪ್ತವಧ್ರಿಗಳು. ೬೫೬

೩.೩೧.೧೭ 'ಕತಮಃ' ಎಂದರೆ ಯಾರು ಎಂದರ್ಥವಲ್ಲ. ಪರಿಪೂರ್ಣಸುಖ ಉಳ್ಳ ಪರಮಾತ್ಮ ಎಂದರ್ಥ. ೬೫೬

೩.೩೧.೨೦ 'ಅಶರೀರವತ್' ಎಂದರೆ ಪ್ರಾಕೃತ ಶರೀರರಹಿತನಾದ ಪರಮಾತ್ಮನಿಂದ ಹೇಗೋ ಹಾಗೆ ಜೀವನಿಂದಲೂ ಜೀವಶರೀರವನ್ನು ಸ್ಫುಟವಾಗಿ ಬೇರೆ ಎಂದು ಕಾಣುತ್ತಾನೆ, ಗರ್ಭವಾಸದಲ್ಲಿರುವ ಉತ್ತಮ ಸಾತ್ವಿಕಚೇತನ. 'ಅಸ್ಯ ದೇಹೇ' ಎಂದು ಜೀವಶರೀರವನ್ನು ಅಶರೀರನಾದ ಪರಮಾತ್ಮನ ಶರೀರ ಎಂದು ಹೇಳಿದ್ದು ಅಯುಕ್ತವೇನಲ್ಲ. ಜೀವಶರೀರವೂ ಪರಮಾತ್ಮನ ಅಧೀನವಾದ್ದರಿಂದ ಪರಮಾತ್ಮನ ಶರೀರವೇ ತಾನೆ? ಈ ರೀತಿಯ ತತ್ವಜ್ಞಾನ ಗರ್ಭದಲ್ಲಿರುವಾಗ ಬರುವುದು ದೇವತೆಗಳಿಗೆ ಮತ್ತು ಋಷಿಗಳಿಗೆ ಮಾತ್ರ. ಇತರರಿಗೆ ಹಿಂದಿನ ಜನ್ಮಗಳ ಸ್ಮರಣೆ ಮಾತ್ರ ಬರುತ್ತದೆ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ೬೫೭

೩.೩೧.೩೫ 'ಖಂಡಿತಾತ್ಮಾವಸಾಯಿಷು' ಎಂದರೆ ಶರೀರದಲ್ಲಿ ಅಲ್ಪನಾದ ಜೀವ ಮಾತ್ರ ಇರುತ್ತಾನೆ, ಬೇರೆ ಪೂರ್ಣನಾದ ಒಬ್ಬ ಪರಮಾತ್ಮ ನಿಯಾಮಕನಾಗಿ ಇಲ್ಲ ಎಂದು ತಿಳಿಯುವವರು. ಅವರ ಸಂಗ ಮಾಡಬಾರದು. ೬೬೧

೩.೩೧.೩೮ 'ಸ್ತ್ರೀಯು ಭಗವಂತನ ಮಾಯೆ' ಎನ್ನುವಲ್ಲಿ ಮಾಯೆ ಎಂದರೆ ಭಗವದಧೀನ ಎಂದಿಷ್ಟೇ ಅರ್ಥ. 'ಮಯ' ಎಂದರೆ ಉತ್ತಮ, ಉತ್ತಮನಾದ ಭಗವಂತ. ಅವನಿಗೆ ಅಧೀನವಾದುದು ಎಲ್ಲವೂ ಮಾಯೆ ಎಂದು ಷಾಡ್ಗುಣ್ಯದಲ್ಲಿ ಹೇಳಿದೆ. ೬೬೧

೩.೩೧.೪೦ ಒಳ್ಳೆಯ ಸ್ತ್ರೀ ಪುರುಷರ ಒಡನಾಟ ಎಂದೂ ಕೆಟ್ಟದಲ್ಲ. ಅದರಿಂದ ಒಳ್ಳೆಯದೇ ಆಗುತ್ತದೆ. ದುಷ್ಟ ಸ್ತ್ರೀಪುರುಷರ ಒಡನಾಟವೇ ದುಷ್ಪರಿಣಾಮ ಉಂಟುಮಾಡುವಂಥದ್ದು ಎಂದು ವರಾಹಪುರಾಣ ಹೇಳಿದೆ. ೬೬೩

ಶ್ವೇತದ್ವೀಪ. 'ಗುಣವ್ಯತಿಕರೇ ಅಸತಿ' ಎಂದರೆ ಗುಣಕಾರ್ಯವಾದ ಪ್ರಪಂಚ ಲಯಹೊಂದುವಾಗ. ೬೭೦

೩.೩೩.೧೬ ಸ್ವಲ್ಪವಾದರೂ ವಿಷ್ಣುಭಕ್ತಿ ಇದ್ದು ಶ್ರಾದ್ಧಾದಿಸತ್ಕರ್ಮ ಮಾಡಿದರೆ ಪಿತೃಲೋಕ ಪ್ರಾಪ್ತಿ ಉಂಟು. ಆದರೂ ಆ ಪುಣ್ಯತೀರಿದೊಡನೆ ಭೂಮಿಗೆ ಬಂದು ತಮ್ಮ ಸಂತಾನದಲ್ಲಿ ಜನಿಸಬೇಕಾಗುತ್ತದೆ. ಭಕ್ತಿಶೂನ್ಯನಿಗೆ ನರಕವೇ ಗತಿ. ಭಕ್ತಿಯುಕ್ತರು ಮೋಕ್ಷ ಯೋಗ್ಯರು. ಭಕ್ತಿಶೂನ್ಯರು ನರಕಭಾಗಿಗಳು. ದ್ವೇಷಿಗಳು ತಮೋಯೋಗ್ಯರು. ೬೭೪

೩.೩೩.೨೮ ಬ್ರಹ್ಮ ಪ್ರಪಂಚರೂಪನಾಗಿ ಭ್ರಾಂತಿಯಲ್ಲಿ ಕಾಣುತ್ತಾನೆ ಎಂದರ್ಥವಲ್ಲ. ಮತ್ಸ್ಯಾದಿ ಅವತಾರರೂಪವು ಅಜ್ಞರಿಗೆ ಭ್ರಾಂತಿಯಲ್ಲಿ ಭೌತಿಕ ಶರೀರವಾಗಿ ಕಾಣಿಸುತ್ತದೆ, ಅದನ್ನೆ ನಂಬಿದರೆ ತಮಸ್ಸು ಪ್ರಾಪ್ತವಾಗುತ್ತದೆ ಎಂದು ಬ್ರಹ್ಮಪುರಾಣ ಹೇಳಿದೆ. ೬೭೭

೩.೩೩.೨೯ ಮಹಾನಹಂಕಾರಃ ಎಂದು ಮುಂತಾಗಿ ಜಡಪದಾರ್ಥಗಳನ್ನು ಬ್ರಹ್ಮಸ್ವರೂಪ ಎನ್ನುತ್ತಿಲ್ಲ. ಜಡವಾದ ಮಹದಾದಿಗಳು ಬ್ರಹ್ಮಾದಿದೇವತೆಗಳ ಅಭಿಮಾನಕ್ಕೊಳಪಟ್ಟವುಗಳು. ಆ ದೇವತೆಗಳ ಶರೀರಗಳೂ ಜಡವೇ. ಹಾಗೇ ಭಗವಂತನ ಅವತಾರಶರೀರಗಳೂ ಜಡ ಎಂದು ತಿಳಿಯಬಾರದು. ಆದರೂ ಜಡವೆಂದು ಅಜ್ಞರು ಭ್ರಾಂತಿಯಿಂದ ತಿಳಿಯುತ್ತಾರೆ ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ. ೬೭೮

೩.೩೩.೩೨ ಜ್ಞಾನಯೋಗ ಭಕ್ತಿಯೋಗಗಳಿಗೆ ಎರಡಕ್ಕೂ ಒಂದೇ ಗಮ್ಯ ಹೀಗೆ- ಜ್ಞಾನವೆಂದರೆ ಭಕ್ತಿಶೂನ್ಯವಾದ ನಿರ್ಗುಣಬ್ರಹ್ಮಜ್ಞಾನವಲ್ಲ. ಭಕ್ತಿ ಎಂದರೂ ಜ್ಞಾನಶೂನ್ಯವಾದ ಪ್ರೀತಿಯಲ್ಲ. ಪ್ರೀತಿಪೂರ್ವಕ ಜ್ಞಾನವೇ ಜ್ಞಾನಯೋಗ. ಜ್ಞಾನಪೂರ್ವಕಪ್ರೀತಿಯೇ ಭಕ್ತಿಯೋಗ. ಜ್ಞಾನವಿದ್ದರೆ ಭಕ್ತಿ ಬರುತ್ತದೆ. ಭಕ್ತಿ ಇದ್ದರೆ ಜ್ಞಾನ ಬರುತ್ತದೆ. ಎರಡಕ್ಕೂ ಭಗವಂತನೇ ಗಮ್ಯ. ಆದರಿಂದ ಎರಡರಲ್ಲಿ ಒಂದಿದ್ದರೂ ಇನ್ನೊಂದು ಇದ್ದೇ ಇರುವುದರಿಂದ ಮುಕ್ತಿಲಾಭ ನಿಶ್ಚಿತವೆಂದು ಹರಿವಂಶದಲ್ಲಿ ಹೇಳಿದೆ. ೬೮೦

೩.೩೪.೨ 'ಭೂತೇಂದ್ರಿಯಾರ್ಥಾತ್ಮಮಯಂ' ಎಂದರೆ ಪಂಚಭೂತಗಳು ಇಂದ್ರಿಯಗಳು ಶಬ್ದಾದಿವಿಷಯಗಳು ಮತ್ತು ಮನಸ್ಸುಗಳ ಅಭಿಮಾನಿಗಳಿಗಿಂತ 'ಮಯ' ಉತ್ತಮ ಭಗವಂತ ಎಂದರ್ಥ. ಪ್ರಧಾನಕ್ಕಿಂತ ಉತ್ತಮನಾದ್ದರಿಂದ ಹರಿ 'ಪ್ರಧಾನಮಯ'ನೆಂದು ವರಾಹಪುರಾಣವು ಹೇಳುವುದರಿಂದ ಇಲ್ಲಿಯೂ ಮಯ ಎಂದರೆ ಉತ್ತಮ. ೬೮೩

೩.೩೪.೫ 'ದೇಹತಂತ್ರಃ' ಹಿಂದೆ ಅಗೋಚರವಾಗಿದ್ದ ನಿನ್ನ ಸ್ವರೂಪಶರೀರವನ್ನೇ ನೀನು ಈಗ ಜನರ ಕಣ್ಣಿಗೆ ಪ್ರಕಟಗೊಳಿಸಿರುವಿ ಎಂದು ದೇವಹೂತಿ ಕಪಿಲನನ್ನು ಸ್ತುತಿಸುತ್ತಾಳೆ. 'ತಂತ್ರ' ಎಂದರೆ ಪ್ರಕಟಗೊಳಿಸುವುದೆಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಿದೆ. ೬೮೪

೩.೩೪.೨೬ 'ನಿವೃತ್ತಜೀವಭಾವತ್ವಾತ್' ಎಂಬಲ್ಲಿ ಹೇಳಿದ ಜೀವಭಾವನಿವೃತ್ತಿ ಎಂದರೆ ಹೀಗೆ– ಜೀವೋಪಾಧಿಗಳಾದ ಲಿಂಗಶರೀರ ಅವಿದ್ಯಾ ಕಾಮಕರ್ಮಾದಿಗಳು ಲಿಂಗಭಂಗ ಪರ್ಯಂತ ಇದ್ದೇ ಇರುತ್ತವೆ. ಆದರೂ ಅಪರೋಕ್ಷಪ್ರಭಾವ ದಿಂದ ಅವು ಸುಟ್ಟಬಟ್ಟೆಯಂತೆ ಕಾರ್ಯಕಾರಿಯಾಗದೆ ಇದ್ದೂ ಇಲ್ಲದಂತಾಗುತ್ತವೆ ಎಂದು ವರಾಹ ಪುರಾಣದಲ್ಲಿ ಹೇಳಿದೆ. ೬೮೪

* * *